ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 7—7—1944 [ಸಂಚಿಕೆ 27]

ಮಹಾತ್ಮರಿಗೆ ವೈಸರಾಯರ ನಕಾರ!

ಮಹಾತ್ಮಾಗಾಂಧಿಯವರ ಪತ್ರಕ್ಕೆ ವೈಸರಾಯರು ನಕಾರಾತ್ಮಕ ಉತ್ತರ ಕೊಟ್ಟಿರುವುದರಿಂದ ಪುನಃ ತಮ್ಮನ್ನು ಸೆರೆಮನೆಯಲ್ಲಿಡಬೇಕೆಂದು ವೈಸರಾಯರಿಗೆ ತಾವು ಪತ್ರ ಬರೆವುದಾಗಿ ತಮ್ಮ ಮಿತ್ರರಿಗೆ ಮಹಾತ್ಮರು ತಿಳಿಸಿದರೆಂದೂ, ಸ್ವತಂತ್ರ ವ್ಯಕ್ತಿಯಾಗಿ ಬಿಕ್ಕಟ್ಟು ಬಗೆಹರಿಸಲು ತಮಗೆ ಅಸಾಧ್ಯವಾದುದರಿಂದ ಹೊರಗಿರುವುದರಲ್ಲಿ ಅರ್ಥವಿಲ್ಲವೆಂದು ಅವರು ತಿಳುಹಿಸಿದರಾಗಿಯೂ ಹೇಳಲಾಗಿದೆ ಆದರೆ ಮಹಾತ್ಮರ ಮಿತ್ರರು, ಮುಖ್ಯವಾಗಿ ರಾಜಾಜಿಯವರು ಹಾಗೆ ಮಾಡದಂತೆ ಮಹಾತ್ಮರ ಮನವೊಲಿಸುತ್ತಿರುವರೆಂದೂ ತಿಳಿದು ಬಂದಿದೆ

ಮಹಾತ್ಮರ ಪತ್ರಕ್ಕೆ ವೈಸರಾಯರು ನಕಾರ ಉತ್ತರ ಕೊಟ್ಟಬಗ್ಗೆ ದೇಶದಾದ್ಯಂತ ವಿಷಾದ ವ್ಯಕ್ತವಾಗಿದೆ ಉತ್ತರದ ವಿವರಗಳು ರಹಸ್ಯವಾಗಿದ್ದರೂ ವರ್ಕಿಂಗ್ ಕಮಿಟಿ ಸದಸ್ಯರನ್ನು ಕಂಡು ಮಾತನಾಡಲು ತಮಗೆ ಅವಕಾಶಕೊಡಬೇಕು, ಅದು ಸಾಧ್ಯವಿಲ್ಲವಾದರೆ ಅದರ ಅವಶ್ಯಕತೆಯ ಬಗ್ಗೆ ಮಾತಾಡಿ ವೈಸರಾಯರ ಮನವೊಲಿಸಲು ಅವರನ್ನು ಸ್ವತಃ ಕಂಡು ಮಾತನಾಡಲು ಅವಕಾಶ ಕೊಡಬೇಕೆಂದೂ ಮಹಾತ್ಮರು ಕೇಳಿದ್ದು ಅವೆರಡರಲ್ಲಿ ಯಾವುದಕ್ಕೂ ಸಮ್ಮತಿಕೊಡಲು ವೈಸರಾಯರು ನಿರಾಕರಿಸಿದ್ದಾರಾಗಿ ಪುಣೆಯಲ್ಲಿ ವಿಚಾರವಾಹಿನಿಯಿದೆ ಪುಣೆಗೆ ತಾ ೨ರಂದು ಬಂದಿದ್ದ ರಾಜಾಜಿಯವರು ಮಹಾತ್ಮರೊಡನೆ ಎರಡು ತಾಸುಗಳ ತನಕ ವಿಚಾರ ವಿನಿಮಯ ಮಾಡಿದರು.

* * *

ಭಾರತದ ರಾಜಕೀಯ ಪರಿಸ್ಥಿತಿ ಬೇಗನೇ ಪರಿಹಾರವಾಗುವುದೆಂದು ಇತ್ತೀಚಿಯ ಸುದ್ದಿಗಳಿಂದ ಕುತೂಹಲಗೊಂಡ ಡಿಲ್ಲಿಯ ರಾಜಕೀಯ ವಾತಾವರಣದಲ್ಲಿ ವೈಸರಾಯರು ಮಹಾತ್ಮರಿಗೆ ನಕಾರ ಉತ್ತರ ಕೊಟ್ಟಿದ್ದರಿಂದ ವಿಷಾದವುಂಟಾಗಿರುವುದು. ವೈಸರಾಯ್ ಮತ್ತು ಗಾಂಧಿಯವರಲ್ಲಿ ಸಂಧಾನವಾಗುವಂತೆ ಅಲ್ಲಿನ ಪ್ರಭಾವಶಾಲಿಗಳು ವಿಶ್ವಪ್ರಯತ್ನ ಮಾಡುತ್ತಿದ್ದಾರೆಂದೂ ಹೇಳಲಾಗಿರುವುದು ಟಾಟನ್ ಹಾಮರು ಮಹಾತ್ಮರಿಗೆ ಬರೆದ ಪತ್ರದಿಂದ ಹಲವರ ಮನನೊಂದಿರುವುದೆಂದು ಸುದ್ದಿ. ವೈಸರಾಯ್ ಕೌನ್ಸಿಲ್ ಸಭೆ ಜರಗಿ ಅದರಲ್ಲಿ ಮಹಾತ್ಮರ ಪತ್ರ, ವರ್ಕಿಂಗ್ ಕಮಿಟಿ ಸದಸ್ಯರ ಬಿಡುಗಡೆ ಮುಂತಾದ ವಿಚಾರಗಳು ಚರ್ಚೆಗೆ ಬಂದಿವೆ ಆದರೆ ಫಲಿತಾಂಶ ಮುಂದೆ ನೋಡಬೇಕಾಗಿದೆ

ಮಹಾತ್ಮರು ಪುನಃ ಸೆರೆಮನೆ ಸೇರುವರೆ?

— ಪುನೆಯಲ್ಲಿ ಮಹಾತ್ಮರು —

“ಮಹಾತ್ಮರು ವೈಸರಾಯರಿಗೆ ಪತ್ರ ಬರೆದಿರುವುದೂ ಅದಕ್ಕೆ ವೈಸರಾಯರ ನಕಾರದ ವರ್ತನೆಯನ್ನು ಪ್ರತಿಯೋರ್ವನೂ ಖಂಡಿಸದಿರಲಾರನು’ ಎಂದು ಸರ್ ಚಿಮನಲಾಲ ಸೆಟಲ್‌ವಾಡರು ಒಂದು ಪ್ರಕಟಣೆಯಲ್ಲಿ ಹೇಳಿದ್ದಾರೆ “ಈ ಸಂದರ್ಭದಲ್ಲಿ ಮಹಾತ್ಮರು ವರ್ಕಿಂಗ್ ಕಮಿಟಿ ಸದಸ್ಯರನ್ನು ಭೇಟಿಯಾಗಿ ಭಾರತದ ಬಿಕ್ಕಟ್ಟು ಬಗೆಹರಿಸಲು ಹೊಸ ಮಾರ್ಗ ಶೋಧಿಸುವುದು ಅವಶ್ಯವಿದೆ ಇದಕ್ಕೆ ಅವಕಾಶ ಕಲ್ಪಿಸಿಕೊಡುವುದು ಸರಕಾರದ ಕರ್ತವ್ಯವಿದೆ ಸರಕಾರ ಇದಕ್ಕೆ ಅಸ್ಪದ ಕೊಡದೆ ತನ್ನಲ್ಲಿ ಬುದ್ಧಿವಂತಿಕೆಯಿಲ್ಲವೆಂದು ಪ್ರದರ್ಶಿಸಿದೆ ಗಾಂಧೀಜಿ ವರ್ಕಿಂಗ್ ಕಮಿಟಿ ಸದಸ್ಯರನ್ನ ಭೇಟಿಯಾಗಿದ್ದರೆ ಸರಕಾರಕ್ಕೇನೂ ತೊಂದರೆಯಿರಲಿಲ್ಲ, ಒಂದು ಪಕ್ಷ ಅವರ ಭೇಟಿಯಾದ ನಂತರವೂ ಅವರ ಅಭಿಪ್ರಾಯ ಬದಲಾಗಿರದಿದ್ದರೆ ಸರಕಾರ ಬೇಕಾದಂತೆ ಮಾಡಬಹುದಿತ್ತು

* * *

ಮಹಾರಾಷ್ಟ್ರದ ಕೆಲಮಂದಿ ಕಾಂಗ್ರೆಸ್ ಪ್ರತಿನಿಧಿಗಳು ಮಹಾತ್ಮರನ್ನು ತಾ ೨ರಂದು ಭೇಟಿಯಾದಾಗ ಅವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು ಮಹಾತ್ಮರು ತಾವೀಗ ಹೊರಗೆ ಅನಾರೋಗ್ಯದ ಕಾರಣದಿಂದ ಹೊರಗೆ ಇದ್ದ ಬಗ್ಗೆ ಚಿಂತೆ ಪ್ರದರ್ಶಿಸಿದರು ಅನಾರೋಗ್ಯವು ಸತ್ಯಾಗ್ರಹಿಗೆ ಕಳಂಕ ತರುವುದೆಂದರು ತನ್ನ ಬಂಧನದಿಂದ ಕೊನೆಗೊಂಡ ತನ್ನ ಸ್ಥಾನವನ್ನು ಈ ಆಕಸ್ಮಿಕ ಬಿಡುಗಡೆ ತನಗೆ ದೊರಕಿಸಿ ಕೊಡುವುದಿಲ್ಲವೆಂದರು ತಾನು ಹಿಂಸೆ ಮತ್ತು ಅಸತ್ಯವನ್ನು ಎಂದಿಗೂ ಸಮರ್ಥಿಸಲಾರೆನೆಂದರು ಭಾರತಕ್ಕೆ ಸ್ವಾತಂತ್ರ್ಯ ಸಿಗದೆ ಜಾತೀಯ ಸಮಸ್ಯೆ, ಬಡವರ ಹಾಗೂ ಹಳ್ಳಿಗರ ಸಮಸ್ಯೆ ಬಗೆಹರಿಯಲಾರದು’ ಎಂದರು

* * *

ರಾಜಾಜಿ, ಬಿರ್ಲಾ, ಮುನ್ಷಿ ಮತ್ತು ಇತರರು ಮಹಾತ್ಮಾಗಾಂಧೀಯವರೊಡನೆ ಚರ್ಚೆ ನಡೆಸಿದರು ವೈಸರಾಯ್ ಮತ್ತು ಗಾಂಧೀಜಿಯವರೊಡನೆ ನಡೆದ ಪತ್ರ ವ್ಯವಹಾರವೇ ಭಾರತ ರಾಜಕೀಯ ಬಿಕ್ಕಟ್ಟಿನ ಪರಿಹಾರಕ್ಕೆ ಕೊನೆಯ ಮಾತಲ್ಲವೆಂದು ಕಾಂಗ್ರೆಸಿಗರ ಅಭಿಪ್ರಾಯವಾಗಿದೆ ಮಹಾತ್ಮರು ಮಹಾರಾಷ್ಟ್ರ ಕಾಂಗ್ರೆಸಿನವರಿಗೆ ಹೇಳಿದ ಮಾತುಗಳಿಂದ ಅವರಿನ್ನೂ ಸಂಧಾನಕ್ಕೆ ಮಾರ್ಗವಿಟ್ಟಿದ್ದಾರೆಂದು ಅರ್ಥವಾಗುತ್ತದೆಂದು ಊಹಿಸಲಾಗಿದೆ ವೇವೆಲ ಪತ್ರದಿಂದ ಮಹಾತ್ಮರಿಗೆ ಖೇದವುಂಟಾಗಿಲ್ಲವೆಂದೂ ಅವರು ಶಾಂತಚಿತ್ತದಿಂದ ಅದನ್ನು ಸ್ವೀಕರಿಸಿದರೆಂದೂ ಅವರ ಹತ್ತಿರ ಇದ್ದವರ ಅಭಿಪ್ರಾಯ ವ್ಯಕ್ತಮಾಡಿದರು

ಪುನಃ ತಮ್ಮನ್ನು ಸೆರೆಮನೆಯಲ್ಲಿ ಸೇರಿಸುವಂತೆ ವೈಸರಾಯರಿಗೆ ತಿಳಿಸಲು ಗಾಂಧೀಜಿಯವರು ಅಭಿಪ್ರಾಯ ವ್ಯಕ್ತಮಾಡಿದರೆಂದೂ ಹಾಗೆ ಮಾಡದಂತೆ ಶ್ರೀ ರಾಜಾಜಿ ಮಹಾತ್ಮರ ಮನವೊಲಿಸಲು ಪ್ರಯತ್ನ ಮಾಡಿದರೆಂದೂ ಪ್ರಕಟವಾದ ಸುದ್ದಿ ನಿರಾಧಾರವಾದ್ದುದೆಂದು ಮಹಾತ್ಮರ ಕಾರ್ಯದರ್ಶಿ ಶ್ರೀ ಪ್ಯಾರೇಲಾಲರು ಈಗ ಪ್ರಕಟಿಸಿರುವರು

ವೈಟ್ ರಷ್ಯಾದಲ್ಲಿ ರಷ್ಯನರ ಮುಂದೋಟ

ವೈಟ್ ರಷ್ಯಾದಲ್ಲಿ ವೈಟೆಬ್ಸ್ಕ ಪಟ್ಟಣವು ರಷ್ಯನರ ವಶವಾಯಿತು ಎಂಬುದಾಗಿ ಮಾರ್ಷಲ್ ಸ್ಟಾಲಿನ್‌ರವರು ಹೊರಡಿಸಿದ ವಿಶೇಷ ಸಂದೇಶದಲ್ಲಿ ತಿಳಿಸಿದ್ದಾರೆ

ಜ್ಲೋಬಿನ್ ಪಟ್ಟಣವೂ, ರಷ್ಯನರ ವಶವಾಯಿತೆಂದು ಮಾರ್ಷಲ್ ಸ್ಟಾಲಿನರ ಇನ್ನೊಂದು ವಿಶೇಷ ಸಂದೇಶವು ತಿಳಿಸುತ್ತದೆ

ವೈಟೆಬ್ಸ್ಕ ಪಟ್ಟಣವನ್ನು ಹಿಡಿದ ವಿಜಯದ ಉತ್ಸವದ ಆಚರಣಾ ರೂಪವಾಗಿ ಮಾಸ್ಕೋವಿನಲ್ಲಿ ಕುಶಾಲ ತೋಪುಗಳನ್ನು ಹಾರಿಸಲಾಯಿತು

ಎರಡು ದಿನಗಳ ಉಗ್ರ ಕದನದ ತರುವಾಯ ವೈಟೆಬ್ಸ್ಕ ಪಟ್ಟಣವು ರಷ್ಯನರ ವಶವಾಯಿತು

ವೈಟೆಬ್ಸ್ಕ ಪಟ್ಟಣವು ಮೂರು ವರ್ಷಗಳಿಂದ ಜರ್ಮನರ ಕೈಯಲ್ಲಿದ್ದಿತು. ಪೂರ್ವ ರಣಕ್ಷೇತ್ರದಲ್ಲಿ ಜರ್ಮನರು ಅತ್ಯಂತ ಬಲವಾಗಿ ರಕ್ಷಣಾ ಮಾಡಿದ್ದ ದುರ್ಗವಾಗಿದ್ದಿತು.

ಚರಕಸಂಘ ಆದಾಯಕರ ಕೊಡಬೇಕಿಲ್ಲ

ಕಳೆದ ೧೯೨೫ನೇ ಇಸವಿಯಲ್ಲಿ ಹಳ್ಳಿ ಕೈಗಾರಿಕೆ ಹಾಗೂ ನೂಲುವ ಮತ್ತು ನೇಯುವ ಕೈಗಾರಿಕೆಯನ್ನು ಬೆಳೆಸುವ ಉದ್ದೇಶದಿಂದ ಅ. ಭಾ. ಕಾಂಗ್ರೆಸ ಕಮಿಟಿಯವರು ಸ್ಥಾಪಿಸಿದ ಬಡವರಿಗೆ ಸಾಕಷ್ಟು ಸಲಕರಣೆಗಳನ್ನು ಪೂರೈಸಿ ಅರಿವೆಯನ್ನು ನೇಯುವಂತೆ ಮಾಡಲು ಮುಂದಾದ ಹಾಗೂ ಮಹಾತ್ಮಾ ಗಾಂಧಿಯವರನ್ನು ಒಬ್ಬ ಪಥದರ್ಶಿಯನ್ನಾಗಿ ಒಳಗೊಂಡ ಅಖಿಲ ಭಾರತ ಚರಕ ಸಂಘವು ಆದಾಯಕರ ತೆರಬೇಕೆಂದು ಮುಂಬಯಿ ಹಾಯಕೋರ್ಟಿನವರು ಕೊಟ್ಟ ತೀರ್ಮಾನದ ವಿರುದ್ಧ ಪ್ರಿವೀ ಕೌನ್ಸಿಲದಲ್ಲಿ ಮಾಡಿದ ಅಪೀಲಿನಲ್ಲಿ ಪ್ರಿವೀ ಕೌನ್ಸಿಲದ ನ್ಯಾಯನಿರ್ಣಯ ಸಮಿತಿಯವರು ಅ. ಭಾ. ಚರಕ ಸಂಘದ ಬೇಡಿಕೆಯಂತೆ ತೀರ್ಪು ಕೊಟ್ಟರು

ಮಿ। ಜಾನ್ ಕರ್ಟಿನರ ಹೇಳಿಕೆ

ಆಸ್ಟ್ರೇಲಿಯದ ಮುಖ್ಯ ಮಂತ್ರಿ ಮಿ। ಜಾನ್ ಕರ್ಟಿನ್‌ರವರು ಬ್ರಿಟನ್ ಮತ್ತು ಸಂಯುಕ್ತ ಸಂಸ್ಥಾನಗಳಿಗೆ ಭೇಟಿ ಕೊಟ್ಟು ಈಗ ತಮ್ಮ ದೇಶಕ್ಕೆ ವಾಪಾಸು ಬಂದಿದ್ದಾರೆ

ಜನರಲ್ ಮೆಕಾರ್ಥರ್, ಜನರಲ್ ಬ್ಲಾಮಿ ಮತ್ತು ಇತರ ಸರ್ವಿಸ್ ಚೀಫ್‌ಗಳೊಡನೆಯೂ ಮಿ ಕರ್ಟಿನರು ಸಮ್ಮೇಳನ ನಡೆಸಿದರು

ಬ್ರಿಸ್‌ಬೇನ್‌ನಲ್ಲಿ ಅವರು ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ, ತಾವು ನಡೆಸಿದ ಮಾತುಕತೆಗಳನ್ನು ಕುರಿತು ಮಂತ್ರಿಮಂಡಳಕ್ಕೂ ಅನಂತರ ಪಾರ್ಲಿಮೆಂಟಿಗೂ ವರದಿ ಮಾಡುವುದಾಗಿ ಹೇಳಿದರು ಈ ಮಾತುಕತೆಗಳಿಂದ ದೂರಪ್ರಾಚ್ಯ ದೇಶಗಳಲ್ಲಿಯ ಪರಿಸ್ಥಿತಿಯ ಮೇಲೆ ಕೂಡಲೇ ಪರಿಣಾಮವುಂಟುಮಾಡುವುದೇ ಅಲ್ಲದೆ ಅನೇಕ ವರ್ಷಗಳ ಕಾಲ ಅದರ ಪರಿಣಾಮವು ಉಳಿಯುವುದು ಎಂದು ಅವರು ಹೇಳಿದರು

ಪುನಃ ಆಸ್ಟ್ರೇಲಿಯನ್ ಸೈನ್ಯಗಳು ಸಮುದ್ರದಾಚೆ ಹೋಗಿ ಕದನ ನಡೆಸಬೇಕಾಗುವದೆ ಎಂದು ಅವರನ್ನು ಕೇಳಲಾಗಿ, “ಹೌದು, ಇನ್ನೂ ಕೂಡ ಆಸ್ಟ್ರೇಲಿಯನ್ ಸೈನ್ಯಗಳು ಯುಧೇಚ್ಛವಾಗಿ ಕದನ ನಡೆಸಬೇಕಾಗಿದೆ” ಎಂದು ಹೇಳಿದರು.

ಸ್ವದೇಶಾಭಿಮಾನಿ

ತಾರೀಖು 7—7—1944

ಸಮಯೋಚಿತ ಎಚ್ಚರಿಕೆ

ಭಾರತದ ಬೇರೆ ಬೇರೆ ರಾಜಕೀಯ ಪಂಗಡಗಳಿಗೆ ಸೇರಿದ ಇಪ್ಪತ್ತೇಳು ಪ್ರಮುಖ ಮುಖಂಡರು ಒಂದು ಸಂಯುಕ್ತ ಪ್ರಕಟಣೆ ಹೊರಡಿಸಿ, ಭಾರತದ ಆಹಾರ ಪರಿಸ್ಥಿತಿಯ ಕುರಿತು ಬ್ರಿಟಿಷ್ ಪಾರ್ಲಿಮೆಂಟಿಗೆ ಮತ್ತು ಸಾರ್ವಜನಿಕರಿಗೆ ಒಂದು ವಿನಂತಿ ಮಾಡಿದ್ದಾರೆ ಅದರಲ್ಲಿ ಅವರು, ಭಾರತವನ್ನು ಎರಡನೆಯ ಬರಗಾಲದಿಂದ ಬದುಕಿಸಿರೆಂದೂ, ಉಚಿತ ಸಮಯದಲ್ಲಿ ಆಹಾರ ಧಾನ್ಯವನ್ನು ಆಮದುಮಾಡಿರೆಂದೂ ಅದರಲ್ಲಿ ಕೇಳಿಕೊಳ್ಳಲಾಗಿದೆ.

ಈ ವಿನಂತಿಗೆ ಸಪ್ರು, ಜಯಕರ್, ಶಾಸ್ತ್ರಿ, ಸರ್ ಮೋದಿ, ಸರ್ಕಾರ್, ರಾಧಾಕೃಷ್ಣನ್, ಪುರುಷೋತ್ತಮದಾಸ್, ಬಿರ್ಲಾ, ಕೌಸ್‌ಜಿ ಜಹಾಂಗೀರ್, ಸೆಟಲ್ವಾಡ್, ಶ್ರೀರಾಮ್, ಸುಲ್ತಾನ ಬೆನೊಯರ್, ಮುತ್ತಯ್ಯ ಚೆಟ್ಟಿಯಾರ್, ಮಸಾನಿ, ಅರುಂಡೆಲ್, ಭೂಲಾಬಾಯಿ ದೇಸಾಯಿ, ಎನ್. ಎಮ್. ಜೋಶಿ, ಕುಂಜ್ರು, ಕೇಳ್ಕರ್, ಮುನ್ಷಿ, ಡಾ| ಬಿಧನ್ ರೊಯ್ ಮೊದಲಾದವರು ಸಹಿಹಾಕಿದ್ದಾರೆ.

“ಭಾರತದ ನಾಲ್ಕೂರು ಮಿಲಿಯ ಬಾಂಧವರ ಆರೋಗ್ಯ ಮತ್ತು ರಕ್ಷಣೆಯ ದೃಷ್ಟಿಯಿಂದ ಭಾರತಕ್ಕೆ ಬರಲಿರುವ ಮುಂದಿನ ಬರಗಾಲದ ಗಂಡಾಂತರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಮತ್ತು ಸಾರ್ವಜನಿಕರ ಹಾಗೂ ಸಂಯುಕ್ತ ರಾಷ್ಟ್ರಗಳ ಅವಗಾಹನೆಗೆ ತಂದು, ಫುಡ್ ಗ್ರೈನ್ ಕಮಿಟಿಯವರು ಶಿಫಾರಸು ಮಾಡಿದ ಆಹಾರಧಾನ್ಯವನ್ನು ಭಾರತಕ್ಕೆ ಆಮದು ಮಾಡುವಂತೆ ಕೇಳಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ” ಎಂದು ಆ ವಿನಂತಿಯಲ್ಲಿ ಅವರು ತಿಳಿಸಿದ್ದಾರೆ

ಕಳೆದ ವರ್ಷ ಭಾರತ ಬರಗಾಲದಿಂದ ಬೇಕಾದಷ್ಟು ಬವಣೆಗೆ ಗುರಿಯಾಗಿದೆ ಬಂಗಾಲ, ಒರಿಸ್ಸಾ, ಮಲಬಾರ್ ಮೊದಲಾದ ಕಡೆ ಜನರು ಪಟ್ಟಪಾಡು ಹೇಳತೀರದು ತಿರುಗಿ ಈಗ ಅಲ್ಲಲ್ಲಿ ಬರಗಾಲ ಬರುವ ಸೂಚನೆಗಳು ಕೇಳಿ ಬರುತ್ತಿವೆ. ಭಾರತದ ಮುಖಂಡರು, ಎಲ್ಲಾ ರಾಜಕೀಯ ಪಂಗಡಗಳಿಗೂ ಸೇರಿದ ಮುಖಂಡರೂ ಒಕ್ಕೊರಲಿನಿಂದ ಈಗ ಈ ಸಮಯೋಚಿತ ಎಚ್ಚರವಿತ್ತಿದ್ದಾರೆ ಇದರ ಕಡೆಗೆ ಬ್ರಿಟಿಷ್ ಸರಕಾರ ಕಿವಿಗೊಡುವಂತಾಗಲಿ!

ಕಾಗದ ನಿಯಂತ್ರಣ

ಕಾಗದ ನಿಯಂತ್ರಣದ ಹೊಸ ಆಜ್ಞೆಯೊಂದು ಹೊರಟಿದೆ ಇದರಿಂದ ಪತ್ರಿಕೆಗಳಿಗೆ ಬೇಕಾದಷ್ಟು ತೊಂದರೆಯುಂಟಾಗಿರುವುದು. ಎಷ್ಟೋ ಪತ್ರಿಕೆಗಳು ತಮ್ಮ ಅಸ್ತಿತ್ವವನ್ನೇ ಉಳಿಸಿಕೊಳ್ಳುವುದು ಕಷ್ಟವಾಗುವುದು ಮಾತ್ರವಲ್ಲದೆ ಈ ಆಜ್ಞೆಯಿಂದ ಎಷ್ಟೋ ಸುಲಭ ಸಾಹಿತ್ಯ ಗ್ರಂಥಗಳು ತಯಾರಾಗುವದನ್ನು ತಡೆದಂತೆ

ಪತ್ರಿಕೆಗಳು ಯುದ್ಧಾನಂತರ ಕಾಗದ ನಿಯಂತ್ರಣದ ಹಲವು ಆಜ್ಞೆಗಳಿಗೆ ಒಳಗಾಗಿ ಇಂದು ಯಾವ ರೂಪಕ್ಕೆ ಬಂದಿವೆಯೆಂಬುದು ವಾಚಕರೆಲ್ಲರಿಗೂ ಗೊತ್ತೇ ಇದೆ. ವಾಚಕರ ಚಂದಾದಾರರ ಅಭಿರುಚಿಗೆ ತಕ್ಕಂತಹ ವಿಷಯಗಳನ್ನು ಕೊಡುವುದು ಈಗಾಗಲೇ ಸಾಧ್ಯವಿಲ್ಲವಾಗಿದೆ. ಪತ್ರಿಕೆಗಳು ಇಷ್ಟರಲ್ಲೇ ಸಾಕಷ್ಟು ಕೃಶವಾಗಿ ಹೋಗಿವೆ. ಹೀಗಿರುತ್ತಾ ಈ ಹೊಸ ನಿಯಂತ್ರಣದಿಂದ, ಇಂದು ಅವುಗಳ ಅಸ್ತಿತ್ವಕ್ಕೇ ಕೊಡಲಿ ಬಿದ್ದಂತಾಗಿದೆ. ಜನರ ವಾಚನಾಭಿರುಚಿಗೆ ಬೇಕಾದ ಸುಲಲಿತ ಸಾಹಿತ್ಯಗಳನ್ನು ಒದಗಿಸಿಕೊಡಲೂ ಈ ಹೊಸ ನಿಯಂತ್ರಣವು ತಡೆಹಾಕುತ್ತದೆ. ಹೀಗಾದರೆ ಇನ್ನಷ್ಟು ಕಷ್ಟವಾಯಿತು. ವಿಚಾರವಂತರು ಉಪವಾಸವೇ ಬೀಳಬೇಕಾಗಿ ಬಂದಿರುವುದು. ಕೆಲ ತರದ ಪುಸ್ತಕ ಪ್ರಕಟಣೆಗೂ ಸರಕಾರದಿಂದ ಈ ನಿಯಂತ್ರಣದಂತೆ ನಿರ್ಬಂಧ ಹಾಕಿದೆ.

ಹೀಗೆ ಪತ್ರಿಕೆಗಳ ಹಾಗೂ ಇತರ ಪ್ರಕಟಣೆಗಳನ್ನು ನಿರ್ಬಂಧಿಸುವ ಈ ಹೊಸ ಕಾಗದ ನಿಯಂತ್ರಣಾಜ್ಞೆಯಿಂದ ಎಷ್ಟೋ ಮಂದಿ ಸಂಕಷ್ಟಕ್ಕೊಳಗಾಗಿರುವರು ಇದೇ ಉದ್ಯೋಗದಲ್ಲಿರುವವರು ಪ್ರೆಸ್ ಕೆಲಸಗಾರರು ಉದ್ಯೋಗವಿಲ್ಲದವರಾಗುತ್ತಾರೆ. ಸರಕಾರವು ಈ ವಿಷಯವನ್ನು ಗಮನಕ್ಕೆ ತಂದುಕೊಂಡು, ಹೊಸಹೊಸ ನಿಯಂತ್ರಣಗಳಿಂದ ಹೀಗೆ ಕುತ್ತಿಗೆ ಹಿಡಿಯಬಾರದಾಗಿ ನಾವು ಕೇಳಿಕೊಳ್ಳುತ್ತೇವೆ.

ಕೃಷಿ ಅಭಿವೃದ್ಧಿ ಯೋಜನೆಗಳು

ಕೃಷಿ ಇಲಾಖೆ ಅರಣ್ಯಖಾತೆ, ಮೀನು ಕೈಗಾರಿಕೆ ಇವುಗಳ ಯುದ್ಧಾನಂತರ ಅಭಿವೃದ್ಧಿ ಯೋಜನೆಗಳನ್ನು ಆಲೋಚಿಸುವುದಕ್ಕಾಗಿ ಸಿಮ್ಲಾದಲ್ಲಿ ಕಮಿಟಿಯೊಂದು ಕೂಡಿದೆ. ಹಿಂದೂ ದೇಶದಲ್ಲಿ ಕೃಷಿಯ ಅಭಿವೃದ್ಧಿ ಯೋಜನೆಗಳನ್ನು ಹೇಗೆ ಮಾಡಬಹುದೆಂಬ ವಿಚಾರವಾಗಿ ಡಾ| ಬರ್ನ್ಸ್ ಇವರ ಯೋಜನೆಗಳೂ, ಇಂಪೀರಿಯಲ್ ಕೌನ್ಸಿಲ್ ಓಫ್ ಎಗ್ರಿಕಲ್ಚರಲ್ ರಿಸರ್ಚ್ ಇವರು ತಯಾರು ಮಾಡಿದ ಜ್ಞಾಪಕ ಪತ್ರವೂ ಕೂಡಾ ಈ ಕಮಿಟಿಯ ಮುಂದಿಡಲಾಗಿದೆ ಆ ಜ್ಞಾಪಕ ಪತ್ರದಲ್ಲಿ ಪಂಚದಶ ವಾರ್ಷಿಕ ಯೋಜನೆಗಳು ಅಡಕವಾಗಿವೆ. ಈ ಹಂಚಿಕೆಗೆ ಶಾಶ್ವತ ವೆಚ್ಚ ೧,೦೦೦ ಕೋಟಿ ರೂಪಾಯಿಗಳೂ, ಆಗಾಗ ಬೇಕಾದ ವೆಚ್ಚ ೩೦ ಕೋಟಿ ರೂಪಾಯಿಗಳೂ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ ಈ ಜ್ಞಾಪಕ ಪತ್ರದಲ್ಲಿ ವಂಡಿತವಾದ ಒಂದು ಪ್ರಾಮುಖ್ಯ ವಿಚಾರವೆಂದರೆ, ಭಾರತದಲ್ಲಿ ಕೃಷಿಯ ಏಳಿಗೆಯ ಕುರಿತು ಸರಕಾರ ಕೈಕೊಂಡ ಕಾರ್ಯಗಳು ಬಹಳ ಪ್ರಯೋಜನ ಶೂನ್ಯವಾಗಿವೆಯೆಂಬುದಾಗಿದೆ.

ಯಾವುದೇ ಸಂಶೋಧನೆಮಾಡಲಿ, ಅವುಗಳಿಂದ ತನಗೆ ಸರಿಯಾದ ಪ್ರಯೋಜನ ಸಿಗುವುದೆಂದು ಖಂಡಿತವಾಗಿ ತಿಳಿಯದೆ ಯಾವ ಕೃಷಿಕನಾದರೂ ಆ ಸಂಶೋಧನೆಗಳನ್ನು ಕಾರ್ಯರೂಪಕ್ಕೆ ತರಲು ಮುಂದೆ ಬರಲಾರನು ಸರಕಾರವು ತನ್ನ ಸಂಶೋಧನಗಳನ್ನು ಕೃಷಿಕನಿಂದ ಮಾಡಿಸಿ ಅದರ ಪ್ರಯೋಜನ ಪಡೆದುಕೊಳ್ಳುವ ಸರಿಯಾದ ವ್ಯವಸ್ಥೆ ಇನ್ನೂ ಮಾಡಿರುವುದಿಲ್ಲ ರಶ್ಯದಲ್ಲಿ ಕೃಷಿ ಇಷ್ಟು ಮಟ್ಟಿಗೆ ಏಳಿಗೆಗ ಬಂದಿರುವುದು ಅಲ್ಲಿ ಮಾಡಿದ ಸರಕಾರದ ಸಂಶೋಧನೆಗಳು ಸರಕಾರದ ಸರಿಯಾದ ಬೆಂಬಲದಿಂದ ಕೃಷಿಕನು ಅವುಗಳನ್ನು ಪ್ರಯೋಗಕ್ಕೆ ತರುವುದರಿಂದಲೇ ಆಗಿದೆ ಹೀಗಾಗಬೇಕಾದರೆ ಆತನನ್ನು ತೆರಿಗೆಯ ಭಾರದಿಂದಲೂ, ಇತರ ಅದೇ ತರದ ವೆಚ್ಚದಿಂದಲೂ ಬಾಹಿರಗೊಳಿಸಬೇಕು ಹೀಗೆ ಮಾಡಿ, ಸರಕಾರವು ತನ್ನ ಸಂಶೋಧನೆಗಳನ್ನು ಕೃಷಿಕನ ಕೈಯಿಂದ ಕಾರ್ಯರೂಪಕ್ಕೆ ತಂದರೆ ಮಾತ್ರ ಭಾರತ ಭೂಮಿಯು ಪ್ರಪಂಚದ ಅತ್ಯುತ್ತಮ ಕೃಷಿಪ್ರಧಾನ ರಾಷ್ಟ್ರವಾಗುವುದು, ಭಾರತ ದೇಶವು ಕಳೆದ ವರ್ಷಗಳಲ್ಲಿ ಅನುಭವಿಸಿದಂಥಾ ಕ್ಷಾಮಗಳಿಂದ ಪಾರಾಗುವುದು. ಹೀಗಾಗಲು ಸರಕಾರದ ಸಂಶೋಧನೆಗಳ ಕೃಷಿಕನ ಕೃಷಿಗೂ ನೇರಾದ ಸಂಬಂಧ ಏರ್ಪಡಿಸಬೇಕಾಗಿದೆ

ಹೊಸ ಕಾಗದ ನಿಯಂತ್ರಣಾಜ್ಞೆಗೆ ಸಾರ್ವತ್ರಿಕ ವಿರೋಧ

ಜೂನ್ ತಿಂಗಳ ಪೂರ್ವಾರ್ಧದಲ್ಲಿ ಹಿಂದುಸ್ಥಾನ ಸರಕಾರ ಕಾಗದ ನಿಯಂತ್ರಣದ ಬಗ್ಗೆ ಹೊರಡಿಸಿದ ಆಜ್ಞೆಗಳೆರಡು ಪತ್ರಿಕಾಕರ್ತರನ್ನೂ ಮುದ್ರಕ ಪ್ರಕಾಶಕರನ್ನೂ ಬೆಚ್ಚಿಸಿ ಬಿಟ್ಟಿವೆ. ಕಾಗದ ನಿಯಂತ್ರಣ (ಮಿತವ್ಯಯ) ಆಜ್ಞೆ, ೧೯೪೪ ಮತ್ತು ಕಾಗದದ ನಿಯಂತ್ರಣ (ಹಂಚುವಿಕೆ) ಆಜ್ಞೆ ೧೯೪೪—ಈ ಎರಡೂ ಆಜ್ಞೆಗಳಿಗೆ ಹಿಂದುಸ್ತಾನ ಸಂರಕ್ಷಣ ಕಾಯದೆಯನ್ವಯ ಹೊರಡಿಸಲಾದ ಆಜ್ಞೆಗಳಲ್ಲೆಲ್ಲ ತೀಕ್ಷ್ಣತೆ ಮತ್ತು ಅನಿರೀಕ್ಷಿತತೆಯ ವಿಷಯದಲ್ಲಿ ಅಗ್ರ ಪೂಜೆ ಸಲ್ಲಬೇಕು.

ಒಂದೇ ಹೊಡೆತದಿಂದ ಈ ಆಜ್ಞೆ, ಈ ದೇಶದ ಮುದ್ರಣ, ಪ್ರಕಾಶನ ಮತ್ತು ಪತ್ರಿಕಾ ವ್ಯವಸಾಯದ ಬೇರನ್ನು ಕತ್ತರಿಸಿ ಬಿಟ್ಟಿದೆಯೆಂದು ಹೇಳಿದರೆ-ಅಯೋಗ್ಯ ಟೀಕೆಯಾಗಲಾರದೆಂದು ಧೈರ್ಯವಾಗಿ ಹೇಳಬಹುದು. ಏಕೆಂದರೆ ಇದು ನಾಗರಿಕರ ಕಾಗದದ ಬಳಕೆಯನ್ನು ನೂರಕ್ಕೆ ಎಪ್ಪತ್ತರಷ್ಟು ಇಳಿಸಿ ಬಿಡಲು ಹವಣಿಸಿದೆ, ಪತ್ರಿಕಾ ನಿಯಂತ್ರಣ ಆಜ್ಞೆ (ನ್ಯೂಸ್ ಪೇಪರ್ ಕಂಟ್ರೋಲ ಆರ್ಡರ್)ಗೆ ಒಳಗಾಗದ ಎಲ್ಲ ಪತ್ರ ಪತ್ರಿಕೆ ಮಾಸಿಕ, ತ್ರೈಮಾಸಿಕಗಳು ತಮ್ಮ ಪುಟಸಂಖ್ಯೆಯನ್ನು ನೂರಕ್ಕೆ ಎಪ್ಪತ್ತರಷ್ಟು ಕಡಮೆ ಮಾಡಬೇಕಾಗುವದು. ಉದಾಹರಣೆಗಾಗಿ ಒಂದು ಮಾಸ ಪತ್ರಿಕೆ ೧೯೪೩—೪೪ ರಲ್ಲಿ ಸರಾಸರಿ ತಿಂಗಳಿಗೆ ೪೦ ಪುಟಗಳನ್ನು ಕೊಡುತ್ತಿದ್ದರೆ ಅದ ಜೂನ್ ೧೫ರ ನಂತರ ೧೨ ಪುಟಗಳನ್ನು ಕೊಡಬೇಕಾಗುವದು. ಇದು ನ್ಯೂಸ್ ಪ್ರಿಂಟ ಅಥವಾ ಪತ್ರಿಕಾ ಕಾಗದವಲ್ಲದೆ ಇತರ ಕಾಗದವನ್ನು ಬಳಸುತ್ತಿರುವ ಎಲ್ಲ ವಿಧದ ನಿಯತಕಾಲಿಕ ಪತ್ರಿಕೆಗಳಿಗೂ (ದಿನ, ತ್ರೈಸಾಪ್ತಾಹಿಕ, ದ್ವಿಸಾಪ್ತಾಹಿಕ, ಪಾಕ್ಷಿಕ, ಮಾಸಿಕ, ತ್ರೈಮಾಸಿಕ. ವಾರ್ಷಿಕ ಪತ್ರಿಗಳಿಗೂ) ಅನ್ವಯಿಸುತ್ತದೆ ಅದೂ ಅಲ್ಲದೆ ಅವುಗಳಲ್ಲಿನ ಜಾಹಿರಾತುಗಳು ಆಕ್ರಮಿಸಬಹುದಾದ ಸ್ಥಳದ ಮೇಲೆಯೂ ನಿಯಂತ್ರಣ ಹೊರಿಸಲ್ಪಟ್ಟಿದೆ. ಈ ಆಜ್ಞೆಗೆ ಒಳಪಡುವ ಪತ್ರಿಕೆಗಳು ಆಜ್ಞೆ ಆಚರಣೆಗೆ ಬರುವ ಮುಂಚಿನ ನಿರ್ದಿಷ್ಟ ಅವಧಿಯಲ್ಲಿ ಜಾಹಿರಾತಿಗೆ ಕೊಟ್ಟ ಸ್ಥಳದ ೧೦೦ಕ್ಕೆ ೫೦ಕ್ಕಿಂತ ಹೆಚ್ಚು ಸ್ಥಳವನ್ನು ಇನ್ನು ಮುಂದೆ ಜಾಹಿರಾತುಗಳಿಗೆ ಕೊಡಲು ಬರುವಂತಿಲ್ಲ.

ಮುದ್ರಕರಿಗೂ ಈ ಆಜ್ಞೆಯಿಂದ ಒಳ್ಳೇ ಪೆಟ್ಟು ಗಂಟು ಬೀಳುವುದು ಅವರು ೧೯೪೨ರಲ್ಲಿ ಬಳಸುತ್ತಿದ್ದ ಒಟ್ಟು ಕಾಗದದ ೧೦೦ಕ್ಕೆ ೩೦ರಷ್ಟನ್ನು ಮಾತ್ರ ಈ ಆಜ್ಞೆ ಹೊರಟ ನಂತರದ ವರ್ಷ ಬಳಸಬಹುದು. ಅದರಲ್ಲಿಯೂ ಈ ಅಂಶವನ್ನು ಸಮನಾಗಿ ೧೨ ವಿಭಾಗ ಮಾಡಿ ಪ್ರತಿ ತಿಂಗಳ ಈ ೧೨ ರಲ್ಲೊಂದಂಶವನ್ನು ಮಾತ್ರ ಬಳಸಬೇಕಾಗುತ್ತದೆ ಪ್ರಕಾಶಕರ ವಿಷಯದಲ್ಲಿ ಸರಕಾರದಿಂದ ಮಂಜೂರಾದ ಶೈಕ್ಷಣಿಕ ಪುಸ್ತಕಗಳಿಗೆ ೧೯೪೨ರಲ್ಲಿ ಬಳಸಿದ ಒಟ್ಟು ಕಾಗದದಲ್ಲಿ ನೂರಕ್ಕೆ ೫೦ರಷ್ಟನ್ನೂ ಇತರ ಪುಸ್ತಕಗಳಿಗೆ೧೦೦ಕ್ಕೆ೩೦ರಷ್ಟನ್ನೂ ಬಳಸುವಂತಾಗುವುದು ಇಲ್ಲಿಯೂ ಈ ೫೦ ಅಥವಾ ೩೦ ಅಂಶವನ್ನು ಸಮನಾದ ೧೨ ವಿಭಾಗ ಮಾಡಿ ಅದರಲ್ಲೊಂದೊಂದು ಅಂಶವನ್ನು ಪ್ರತಿ ತಿಂಗಳ ಬಳಸುವ ವಿಧಿಯುಂಟು ಆದರೆ 'ಯಂತ್ರಣಾಧಿಕಾರಿಯನ್ನು ತೃಪ್ತಿ ಪಡಿಸಿ, ಅವನ ಲಿಖಿತ ಸಮ್ಮತಿಯೊಡನೆ ಒಟ್ಟು ನಿರ್ದಿಷ್ಟ ವಾರ್ಷಿಕ ಪ್ರಮಾಣ ಮೀರದಂತೆ ಒಂದು ತಿಂಗಳು ಹೆಚ್ಚು ಇನ್ನೊಂದು ತಿಂಗಳು ಕಮಿ ಕಾಗದ ಬಳಸಬಹುದು ಖಾತೆ ಕಿರ್ದಿ ಲೆಕ್ಕ ಪುಸ್ತಕಗಳೇ ಮೊದಲಾದ ಕಾಗದಜನ್ಯ ಸಾಮಗ್ರಿಗಳನ್ನು ತಯಾರಿಸುವವರೂ ೧೯೪೨ರ ಬಳಕೆಯ ೧೦೦ರಲ್ಲಿ ೩೦ರ ಹನ್ನೆರಡರಲ್ಲೊಂದಂಶವನ್ನು ಮಾತ್ರ ಪ್ರತಿ ತಿಂಗಳು ಬಳಸಬೇಕು.

ಕಾಗದ ನಿಯಂತ್ರಣಾಜ್ಞೆ ಹೊರಿಸುವ ಶಾಸನಗಳ ಬಾಹ್ಯ ರೂಪರೇಷೆ

(೫ನೇ ಪುಟಕ್ಕೆ ಮುಂದುವರಿದಿದೆ)

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!



ಕುಟಿಕೂರಾ ಸೋಪು

CUTICURA SOAP

ಸಮರ ಭೂಮಿಯ ಸಂಚಾರ

ಮೂರು ಕಡೆಗಳಿಂದ ಮಿತ್ರಸೈನಿಕರ ಮುತ್ತಿಗೆ!

ಓಡೆನ್ ಕೆಯಿನ್ ಭಾಗದಲ್ಲಿ ಹೋರಾಟ

— ಬ್ರಿಟಿಷ್ ಪೋಲೆಂಡ್ ಒಪ್ಪಂದ —

ಫ್ರಾನ್ಸಿನ ಹೋರಾಟ ಭೀಷಣವಾಗಿಯೇ ಸಾಗಿದೆ; ನಾರ್ಮಂಡಿಯಲ್ಲಿ ಹದಿನೆಂಟು ಮೈಲು ವಿಸ್ತಾರ ರಣದ ಕ್ಷೇತ್ರದಲ್ಲಿ ಬ್ರಿಟಿಷರು ಧಾಳಿ ಮಾಡಿದ್ದಾರೆ. ಕೆಯಿನ ಆಗ್ನೇಯದಲ್ಲಿ ಬಹಳ ಜೋರಿನ ರಣರಂಗ ನಡೆಯುತ್ತಿದೆ. ಈ ಭಾಗದಲ್ಲಿ ಮಿತ್ರರು ಜರ್ಮನರ ವ್ಯೂಹದಲ್ಲಿ ಚಿಕ್ಕ ಬಿರುಕನ್ನು ಒಡೆದರು' ಹೀಗೆಂದು ಜರ್ಮನ್ ಪ್ರಚಾರ ವಾರ್ತೆಯೇ ಹೇಳಿದ್ದಾಗಿ ತಿಳಿಸಲಾಗಿದೆ. ಬ್ರಿಟಿಷ್ ಟೇಂಕ್ ದಳವು ಕೆಯಿನ ಎಲ್ವರ್ ರಸ್ತೆ ದಾಟಿ ಬ್ರೆಟವಿಲ್ಲೆ ಮಿನಾ ನೋರ್ ರೈನವಿಲೆ ಮೊಂಡ್ರಾನವಿಲೆ ಮೊದಲಾದ ನಾಲ್ಕು ಹಳ್ಳಿಗಳನ್ನು ವಶಪಡಿಸಿ ಕೊಂಡಿರುವರೆಂದು ಮಿತ್ರ ಸನ್ನಿಧಿ ಕೇಂದ್ರದಿಂದ ಪ್ರಕಟಿಸಲಾಗಿದೆ. ಕೆಯಿನದ ಉತ್ತರದಲ್ಲಿ ಟೇಂಕ್ ಕಾಳಗವಾಗುತ್ತಿದೆ. ಕೆಯಿನ ನಗರಕ್ಕೆ ಮಿತ್ರ ಸೈನ್ಯ ಮೂರು ಕಡೆಗಳಿಂದಲೂ ಮುತ್ತಿಗೆ ಹಾಕಲು ನುಗ್ಗಿ ಬರುತ್ತಿವೆ.

ಚೆರ್ಬರ್ಗಿನ ಹೋರಾಟ ಇನ್ನೂ ಕೊನೆಗೊಂಡಿಲ್ಲ; ಚೆರ್ಬರ್ಗಿನ ಕೋಪ್‌ಡಿಗ್ರಾಹೆಯಲ್ಲಿ ಸಿಕ್ಕಿ ಬಿದ್ದಿರುವ ಜರ್ಮನ್ ಸೈನ್ಯ ಸಂಗ್ರಹವು ಇನ್ನೂ ಪ್ರತಿಭಟಿಸುತ್ತಿದೆ. ಇತರ ಸಾವಿರಾರು ಮಂದಿ ಜರ್ಮನರು ಅಲ್ಲಲ್ಲಿ ಪ್ರತಿಭಟಿಸುತ್ತಿದ್ದು ಅವರಿಗೆ ಜರ್ಮನರು ಕೂಡೆ ವಿಮಾನದಿಂದ ಆಯುಧ ಸಾಮಾಗ್ರಿ ಒದಗಿಸಿ ಕೊಡುತ್ತಿದ್ದಾರೆಂದು ಹೇಳಲಾಯಿತು ಚೆರ್ಬರ್ಗ್ ಇಷ್ಟರಲ್ಲಿಯೇ ಮಿತ್ರರ ಕೈವಶಬಂದಿದ್ದು ಆಕ್ರಮಿತ ಚೆರ್ಬರ್ಗಿನಲ್ಲಿ ಮಿತ್ರಸೇನೆಗಳು ಹೊಸತಾಗಿ ಬಂದಿಳಿದು ಇನ್ನೂ ಹೆಚ್ಚಾಗಿ ಬರುತ್ತಿರುವವೆಂದೂ ಓರ್ನ ನದೀ ಮುಖದ ಪೂರ್ವದಲ್ಲಿ ಈಗ ಹೊಸದಾಗಿ ಕಠೋರ ಯುದ್ಧ ನಡೆಯುತ್ತಿರುವುದೆಂದೂ ಸುದ್ದಿ.

ಬ್ರಿಟಿಷ್ ಮತ್ತು ಪೋಲೀಷ್ ಸರಕಾರಗಳು ಒಂದು ಒಪ್ಪಂದ ಮಾಡಿಕೊಂಡಿವೆ. ಕಡ ಮತ್ತು ಒತ್ತಿ ಕಾನೂನಿನಂತೆ ಪೋಲೀಷ್ ಸರಕಾರಕ್ಕೆ ಅವಶ್ಯವಿದ್ದ ಸೈನ್ಯ ಸಹಾಯವನ್ನು ಕೊಡಲು ಈ ಒಪ್ಪಂದದಂತೆ ಸಿದ್ಧವಾಗಿರುವುದು.

ಬುಖಾರೆಸ್ಟಿನ ಮೇಲೆ ಧಾಳಿಯಾಯಿತೆಂದು ಜರ್ಮನ್ ಸುದ್ದಿ ಖಾತೆ ಹೇಳಿದೆ ಚೆರ್ಬರ್ಗ್ ಆಕ್ರಮಣದ ಬಗ್ಗೆ ಸಂತೋಷ ತಿಳಿಸಿ ಚರ್ಚಿಲರಿಗೆ ಸ್ಟಾಲಿನರು ಅಭಿವಂದನೆಯ ಸಂದೇಶ ಕಳುಹಿಸಿದ್ದಾರೆ ಫಿನ್ಲೆಂಡಿನ ಆರ್ಥಿಕ ಮಂತ್ರಿಗಳು ಸೋಶಿಯಲ್ ಡೆಮೊಕ್ರೆಟಿಕ್ ಪಕ್ಷದ ಸದಸ್ಯರೂ ಆದ ಟಾನರ್ ರವರು ರಾಜಿನಾಮೆ ಕೊಟ್ಟಿರುವರೆಂದು ಸುದ್ದಿಯಿದೆ ಈ ಪಕ್ಷದ ಇತರ ಸದಸ್ಯರೂ ರಾಜಿನಾಮೆ ಕೊಡುವ ವಾರ್ತೆಯೂ ಇದೆ.

ಹಿಟ್ಲರನ ಗುಪ್ತಾಸ್ತ್ರ

"ಯೂರೋಪ್ ಖಂಡದ ಮೇಲೆ ನಾವು ಆಕ್ರಮಿಸಿದ್ದಾದರೆ ಜರ್ಮನರು ಹಲವು ಹೊಸ ಹೊಸ ಅಸ್ತ್ರಗಳನ್ನು ನಮ್ಮ ಮೇಲೆ ಉಪಯೋಗಿಸಬಹುದು ಅವನ್ನೆಲ್ಲಾ ಎದುರಿಸಲು ನಾವು ಸಿದ್ಧರಿರತಕ್ಕದ್ದು" ಹೀಗೆಂದು ಕಳೆದ ಎಪ್ರಿಲ್‌ನಲ್ಲಿಯೇ ಚರ್ಚಿಲರು ಬ್ರಿಟಿಷರನ್ನು ಎಚ್ಚರಿಸಿದ್ದರು ಮಿತ್ರರು ಫ್ರಾನ್ಸಿಗೆ ದಂಡೆತ್ತಿ ಹೋದ ಮೊದಲನೆಯ ವಾರದಿಂದಲೇ ಈ ಗುಪ್ತಾಸ್ತ್ರಗಳು ಒಂದೊಂದಾಗಿ ಎದುರಿಗೆ ಬಂದಿವೆ. ಹಿಟ್ಲರನು ಅಟ್ಲಾಂಟಿಕ್ ಕೋಟೆಯೊಂದನ್ನು ಕಟ್ಟಿದ್ದಾನೆ, ಇದರೊಳಗೆ ಏನೆಲ್ಲಾ ಇರುವುದೆಂಬುದು ಇದು ತನಕ ಯಾರಿಗೂ ಗೊತ್ತು ಹತ್ತಿಲ್ಲ. ಹಲವು ಗುಪ್ತಾಸ್ತ್ರಗಳು ಅಲ್ಲಿ ಅಡಗಿಸಲ್ಪಟ್ಟವೆಯೆಂದು 'ಸುದ್ದಿಯಿದೆ. ಅದು ಹೇಗಿದ್ದರೂ ಹಿಟ್ಲರನೀಗ ಕೆಲವು ತರದ ಗುಪ್ತಾಸ್ತ್ರಗಳನ್ನು ಹಿಡಿದು ನಿಂತಿರುವನು ಅವುಗಳ ವಿವರ ಹೀಗಿವೆ; (೧) ಒಬ್ಬನೇ ಮನುಷ್ಯನಿರುವ ಜಲಾಂತರ್ಗಾಮಿ. (೨) ತಾವಾಗಿಯೇ ಸಿಡಿವ ಷೆಲ್ಲುಗಳು (೩) ಆಕಾಶ ಬಾಣ (೪) ವೈಮಾನಿಕರಿಲ್ಲದ ವಿಮಾನ.

ಈ ನಾಲ್ಕು ವಿಧದ ಗುಪ್ತಾಸ್ತ್ರಗಳ ವಿಷಯಗಳೀಗ ತಿಳಿದು ಬರುತ್ತದೆ ಇವುಗಳಲ್ಲಿ ಕೊನೆಯದಾದ ವೈಮಾನಿಕರಿಲ್ಲದ ವಿಮಾನದ ವಿಷಯವಿಂದು ಬಹಳ ಪ್ರಚಾರಕ್ಕೆ ಬಂದಿರುವುದು ಫ್ರಾನ್ಸಿನಲ್ಲಿ ಮಿತ್ರರ ದ್ವಿತೀಯ ರಂಗ ಪ್ರಾರಂಭವಾದ ನಂತರ ಹಲವು ವೈಮಾನಿಕರಿಲ್ಲದ ವಿಮಾನಗಳು ದಕ್ಷಿಣ ಇಂಗ್ಲೆಂಡಿನ ಮೇಲೆ ಬಾಂಬುಗಳನ್ನು ಸುರಿಸಿವೆ ಜರ್ಮನರು ಈ ತರದ ಧಾಳಿಯ ವಿಷಯ ಪ್ರಚಾರ ಬಹಳ ಮಾಡುತ್ತಾರೆ ಗೊಬೆಲ್ಲನು ಗರ್ಜಿಸುತ್ತಾನೆ

ಈ ವಿಮಾನಗಳು ಸುಮಾರು ೨೬ ಅಡಿ ಉದ್ದ ಮತ್ತು ೩ ಅಡಿ ಅಗಲವಿರುವುದೆಂದೂ ಇವುಗಳ ರೆಕ್ಕೆಗಳು ೧೬ ಅಡಿ ಉದ್ದವಿರುವವೆಂದೂ ವಿಮಾನದ ಬಾಲದಲ್ಲಿ ಚಚ್ಚೌಕವಾದ ಒಂದು ಪೆಟ್ಟಿಗೆಯಿದ್ದು ಅದರಲ್ಲಿ ರೇಡಿಯೋ ಯಂತ್ರವಿರುತ್ತದೆಂದೂ ಈ ಯಂತ್ರದ ಬದಿಯಲ್ಲಿಯೇ ಸ್ಫೋಟಕ ಬಾಂಬುಗಳು ತುಂಬಿದ್ದ ಮತ್ತೊಂದು ಪೆಟ್ಟಿಗೆಯಿರುವುದೆಂದೂ ಈ ರೇಡಿಯೋ ಯಂತ್ರವನ್ನು ಫ್ರಾನ್ಸ್ ಅಥವಾ ನಾರ್ವೆ ದೇಶದಿಂದ ಕೆಲ ವೈಮಾನಿಕರು ನಡೆಸುವರೆಂದೂ ಬೇಕಾದಾಗ ಬೇಕಾದ ಕಡೆ ಈ ವಿಮಾನಗಳನ್ನಿರುಳಿಸುವ ಶಕ್ತಿ ಆ ವೈಮಾನಿಕರಿಗಿರುವುದೆಂದೂ ಹೇಳಲಾಗುತ್ತದೆ ಇದು ರೇಡಿಯೋದಿಂದಲ್ಲ, ಪೆಟ್ರೋಲಿನಿಂದ ಗಂಟೆಗೆ ೩೫೦ ಮೈಲುಗಳಂತೆ ೧೫೦—೨೦೦ ಮೈಲು ದೂರ ಹೋಗುವ ಶಕ್ತಿಯಿದ್ದು ಇವನ್ನು ರಾಕೆಟ್‌ಗಳ ಸಹಾಯದಿಂದ ಮೇಲಕ್ಕೆ ಹಾರಿಸುತ್ತಾರೆಂದೂ ಇನ್ನು ಕೆಲವರು ಹೇಳುತ್ತಾರೆ.

ಟರ್ಕಿ ಖಂಡಿತ ತಟಸ್ಥ

ಟರ್ಕಿಯು ಮಾಂಟ್ರೇಕ್ಸ್ ಒಪ್ಪಂದಕ್ಕನುಸರಿಸಿರುವ ಬಗ್ಗೆ ಆಂಗ್ಲ ಅಮೆರಿಕನ್ ಸರಕಾರಗಳು ಅದರ ಮೇಲೆ ಜರಿದು ಬಿದ್ದುದರ ವಿಷಯದಲ್ಲಿ ಅಲ್ಲಿನ ಪ್ರಧಾನ ಮಂತ್ರಿ ಎಂ ಸರಜೊಗ್ಲು ಇವರು ಜರ್ಮನ್ ಪಕ್ಷಪಾತಿಯಾದ ಮೆನೆಮೆನ್ಸಿಯೋಗ್ಲುರವರನ್ನು ವಿದೇಶಾಡಳಿತೆಯಿಂದ ತೆಗೆದು' ಹಾಗಿ ತಾನೇ ಆ ಅಧಿಕಾರ ಕೈಗೆ ತೆಗೆದು' ಕೊಂಡುದರಿಂದ ಈಗ ಟರ್ಕಿಯು ಖಂಡಿತ ತಾಟಸ್ಥ ನೀತಿ ಬಿಡುವುದಿಲ್ಲವೆಂಬುದನ್ನು ರುಜು ಪಡಿಸಿದ್ದಾರೆ ಟರ್ಕಿಯು ಯಾವುದೇ ಪಕ್ಷವನ್ನೂ ವಹಿಸಲಾರದು, ಆದರೆ ಸರಜೋಗ್ಲು ಹೇಳಿದ್ದಾರೆ ಇನ್ನು ಮುಂದೆ ಎಲ್ಲಾ ತರದ ಜರ್ಮನ್ ಹಡಗಗಳೂ ಹಾದು ಹೋಗುವಾಗ ಪ್ರತಿಯೊಂದು ಹಡಗವನ್ನೂ ಚನ್ನಾಗಿ ಪರಿಶೀಲಿಸಲಾದಿತು

ಅಲ್ಜೀರ್ಸಿನಲ್ಲಿ

ಜೂನ್ ೧೮ರಂದು ಚತುರ್ಥ ವಾರ್ಷಿಕೋತ್ಸವವನ್ನು ಆಚರಿಸುತ್ತಾ ಜನರಲ್ ಚಾರ್ಲ್ಸ್ ಡಿಗಾಲೆಯವರು ಫ್ರಾನ್ಸಿನ ಬಂಧವಿಮೋಚನೆ ಮಾಡಿರೆಂದು ಫ್ರೆಂಚರಿಗೆ ವಿನಂತಿ ಮಾಡಿ ಕೊಂಡರು ಫ್ರಾನ್ಸಿನ ಗೊಂಬೆ ಮಂತ್ರಿ ಮಂಡಳವಾದ ಫ್ರೆಂಚ್ ಕೌನ್ಸ್‌ಲೇಟಿವ್ ಎಸೆಂಬ್ಲಿಯು ತಮ್ಮ ಮಾತೃ ಭೂಮಿಯ ಮೇಲೆ ಮಿತ್ರರು ಆಕ್ರಮಣ ಮಾಡಿ ಮುಂದೊತ್ತುವ ವಿಚಾರ ವಿಮರ್ಶೆ ಮಾಡಲು ಸೇರಿದರು. ತಮ್ಮ ರಾಷ್ಟ್ರ ರಕ್ಷಕನು, ಏನು ಹೇಳುತ್ತಾನೆಂದು ಕೇಳಲು ಅಂದಿನ ಸಭಾಭವನದಲ್ಲಿ ಪ್ರತಿನಿಧಿಗಳು ಕಿಕ್ಕಿರಿದು ಸೇರಿದ್ದರು. "ಸಮಾಧಿಯ ಮತ್ತು ಬೇನೆಯ ಮೇಲೆಡೆಯಿಂದ ನವ ಫ್ರಾನ್ಸಿನ ನವೋದಯದ ಬೆಳಕು ಕಾಣುತ್ತದೆ" ಎಂಬುದಾಗಿ ಜನರಲ್ ಚಾರ್ಲ್ಸ್ ಡಿಗಾಲೆ ಸಾರಿದರು. "ಆ ಬಂಧವಿಮೋಚನೆಯಾದ ಬಳಿಕ ಫ್ರಾನ್ಸು ಜಗತ್ತಿಗೆ ಇದು ತನಕ ಮಾಡದಷ್ಟು ಮಹೋಪಕಾರ ಮಾಡಲು ಸಮರ್ಥವಾದೀತು" ಎಂದೂ ಅವರು ಭರವಸೆ ಕೊಟ್ಟರು "ಸ್ವಾತಂತ್ರ್ಯ ಸಮಾನತೆ ಮತ್ತು ಬಾಂಧವ್ಯ"ವೆಂಬ ರಾಷ್ಟ್ರ ಗೀತೆ ಹಾಡಿದ ಬಳಿಕ ಅಂದಿನ ಅಧಿವೇಶನ ಕೊನೆಗೊಂಡಿತು. ಫ್ರಾನ್ಸಿನ ಈ ನವೋದಯಕ್ಕೆ ಬ್ರಿಟಿಷ್, ರಶ್ಯ, ಕೆನಡಾದ ರಾಯಭಾರಿಗಳಾದ ಡಫ್ ಕೂಪರ್ ಎಂ. ಅಲೆಗ್ಸಾಂಡರ್ ಬೊಗೊಮೊಲೊವ್ ಮತ್ತು ಜೋರ್ಜ್ ಪಿ. ವೇನೀರ್ ಇವರು ಪ್ರತ್ಯಕ್ಷದರ್ಶಿಗಳಾಗಿದ್ದರು ತನ್ಮಧ್ಯೆ ಆಂಗ್ಲ ಫ್ರೆಂಚ್ ಘರ್ಷಣೆಯ ಹೊಗೆ ನಂದಿಸಲು ಪ್ರಯತ್ನವಾಗಿದೆ ಬ್ರಿಟಿಷ್ ಶಿಷ್ಟ ಮಂಡಳವೊಂದು ಜಡ್ಜ್ ಎಡ್ವೊಕೇಟ್ ಜನರಲರ ಮುಂದಾಳುತನದಿಂದ ಹೋಗಿ ರಾಯಭಾರಿ ಎಂ ವಿರೇ ವಿನೋಟರ ಮುಂದಾಳುತನದ ಫ್ರೆಂಚ್ ಶಿಷ್ಟ ಮಂಡಳದೊಡನೆ ಫ್ರೆಂಚ್ ನಾಗರಿಕರ ವಿಷಯ ಒಪ್ಪಂದದ ವಿಚಾರ ಮಾತು ಕತೆ ನಡೆಸುತ್ತದೆ. ಅಂತೂ ಈ ಕಡೆ ಆಶಾ ಕಿರಣಗಳು ಮೂಡುತ್ತಿವೆ.

ಈ ವಸಂತದಲ್ಲಿ ಪೂರ್ಣ ಜಯ

ಕಳೆದ ವಾರ ಚರ್ಚಿಲರು ಮೆಕ್ಸಿಕನ್ ರಾಯಭಾರಿ ಸಭೆಯಲ್ಲಿ ಮಾತನಾಡುತ್ತಾ 'ಈ ವಸಂತದಲ್ಲಿ ಪೂರ್ಣ ಜಯವೆಂದು ಹೇಳಿದರೆಂಬುದಾಗಿ ವರದಿಯಾಗಿದೆ ರಿಂದ ದ್ವಿತೀಯ ರಂಗದ ವಿಚಾರ ಮಾತನಾಡ ತೊಡಗಿದಂದಿನಿಂದ ಚರ್ಚಿಲರು ಅಷ್ಟೊಂದು ಆಶಾವಾದಿಗಳಾಗಿರಲಿಲ್ಲ ಬ್ರಿಟಿಷರು ಈ ಅಗ್ನಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಸದಾ ಸಿದ್ಧರಿರಬೇಕೆಂಬುದಾಗಿ ಪರಿಸ್ಥಿತಿಯನ್ನು ಗಂಭೀರವಾಗಿ ವಿವರಿಸುತ್ತಿದ್ದರಲ್ಲದೆ ಹಿಂದೆಂದೂ ಯುದ್ಧ ಬೇಗನೇ ಮುಗಿದೀತೆಂದು ಅವರು ಹೇಳಿದವರಲ್ಲ ಹೀಗಿರುವಾಗ ಚರ್ಚಿಲರಿಂದು ನಿರ್ಧಾರವನ್ನು ಹೇಳಿದರೆಂಬುದು ಬರುವ ವಸಂತದಲ್ಲಿ ಯುದ್ಧ ಕೊನೆಗಾಣವುದೆಂದು ಹೇಳಿದರೆಂಬುದು ನಿಜವಾಗಿಯೂ ವಾರ್ತೆಯಾಗಿದೆ

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara. (1906.

Statement of affairs as on 30th April, 1944.

LIABILITIES	Rs As Ps
1 Paid up Capital	13 68,480- 0- 0
2 Reserves	4,12 120-12- 8
3 Deposits	67 30 955- 3- 4
4 Due to Bankers	7,34 366-10- 9
5 Bills for collection	6 70 379- 8- 8
6 Sundries including revenue items	7 58 745- 8- 4
Total	1,06,75,047-11- 9

ASSETS	Rs As.Ps
1 Cash on hand & with bankers in Current & Fixed Deposit A/cs	19 71 808 0- 1
2 Investments on (1) Govt Securities (2) Immovable properties etc	24 26 660 - 9- 9
3 Loans on Jewels & other valuable securities	33,50 167-13-3
4 Loans on personal securities & Bills purchased	20 49 197-13-10
5 Bills for collection as per contra	6 70 379- 8- 8
6 Office premises, furniture etc.	93 705- 0-10
7 Sundries including revenue items	1,13,128-13- 4
Total	1,06,75,047-11- 9

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲಾ ಕಸ್ತೂರಬಾ ಸ್ಮಾರಕ ಸಮಿತಿ

ನಾಡ ಮಹಿಳೆಯರ ಪ್ರಗತಿ ಉದ್ಧಾರಕ್ಕಾಗಿ ಈ ನಿಧಿಯು ಮಹಾತ್ಮರ ೭೫ನೇ ಜನ್ಮೋತ್ಸವ ದಿನ ಅವರಿಗೆ ಅರ್ಪಿಸಲಾಗುವುದು.

ನಮ್ಮ ಜಿಲ್ಲೆ ಹಿಂದುಳಿಯಲಾಗದು

ಸೇವೆ ಸುಧಾರಣೆಗಳಲ್ಲಿ ನಮ್ಮ ಜಿಲ್ಲೆ ಎಂದೂ ಹಿಂದುಳಿದುದಿಲ್ಲ. ಅದರೂ ಅತ್ಯಂತ ಆವಶ್ಯಕತೆಯ ಈ ನಿಧಿ ಸಂಗ್ರಹ ಕಾರ್ಯದಲ್ಲೂ ನಮ್ಮವರು ಮುಂದೆ ಬಂದೇ ಬರುವರೆಂಬ ಹಾರೈಕೆಯಿಂದ ಕಳೆದ ತಾ. ೨ರಂದು ಈ ಕುರಿತು ಒಂದು ಸಭೆಯು ವಕೀಲ್ ಶ್ರೀ। ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಡಿ. ಅಧಿಕಾರಿಗಳ ನಿಧಿಯ ಉದ್ದೇಶವನ್ನು ಸವಿಸ್ತಾರವಾಗಿ ನಿರೂಪಿಸಿದರು.

ಸಮಿತಿ ರಚನೆ

ಈ ಸಭೆಯಲ್ಲಿ ನಿಧಿ ಸಂಗ್ರಹಕ್ಕಾಗಿ ಒಂದು ಜಿಲ್ಲಾ ಸಮಿತಿಯು ರಚಿಸಲ್ಪಟ್ಟಿತು. ಶ್ರೀ ಬಿ. ವೈಕುಂಠ ಬಾಳಿಗರು ಅಧ್ಯಕ್ಷರು. ಶ್ರೀ। ಎಂ. ಬಿ. ಶೆಟ್ಟಿ ಮತ್ತು ಶ್ರೀ। ಬಿ. ಜಿನರಾಜ ಹೆಗ್ಡೆ ಇವರುಗಳು ಉಪಾಧ್ಯಕ್ಷರು. ಶ್ರೀ। ವಿಠಲಜಿ ಪುರುಷೋತ್ತಮ ಸೇಟ್‌ರು ಖಜಾಂಚಿಗಳು. ಶ್ರೀ। ಎಂ. ಡಿ. ಅಧಿಕಾರಿ ಮತ್ತು ಬಿ. ವಿ. ಬಾಳಿಗರು ಕ್ರಮವಾಗಿ ಪ್ರಧಾನ ಮತ್ತು ಜತೆಕಾರ್ಯದರ್ಶಿಗಳು.

ಈ ಕೆಳಗಿನ ಮಹನೀಯರು ಸಮಿತಿಯ ಸದಸ್ಯರು ಶ್ರೀಯುತರುಗಳಾದ ವಿ. ಎಸ್. ಕುಡ್ವ. ಎ. ದಾಮೋದರ ಪೈ, (ಮಂಗಳೂರು), ಎಂ. ಉಮೇಶ ರಾವ್. (ಕಾಸರಗೋಡು), ಪಿ. ಲಕ್ಷ್ಮೀನಾರಾಯಣ ನಾಯ್ಕ್ (ಉಡುಪಿ), ಮೊಳಹಳ್ಳಿ ಶಿವರಾವ್, ಲೀಲಾ ಬಾಯಿ ಏಕಾಂಬರ್ ರಾವ್, ಕೆ. ಕೃಷ್ಣ ರಾವ್, ಕುದ್ರಿ ವಾಸುದೇವ ಶೆಣೈ, ಕುಳಕುಂದ ಶಿವರಾವ್, ಮಂಗಳೂರು ಜಾರಪ್ಪ, ಕೊಂಚಾಡಿ ಕೇಶವ ಶೆಣೈ, ಕೆ. ವೆಂಕಟೇಶ ಪ್ರಭು, ಕಾಡುಮಟ್ಟಿ ಅಣ್ಣಯ್ಯ ಶೆಟ್ಟಿ, ಎಫ್. ಪಿ. ಎಸ್. ಆಲ್ಬುಕರ್ಕ್, ಪಂಡಿತ ಗಜಾನನ ರಾವ್, ಕೆ. ಆರ್. ಆಚಾರ್, ಆರೂರು ಲಕ್ಷ್ಮಿನಾರಾಯಣ ರಾವ್, ಬಿ. ಗುಡ್ಡಪ್ಪ ರೈ, ಕೆ. ಕೃಷ್ಣ ಭಟ್ಟ, ಎಸ್. ಸಿ. ಕನನ್ ನಾಯರ್, ಎಂ. ಎ. ಕೃಷ್ಣ ರಾವ್, ಯಂ. ಎಸ್. ಅಧಿಕಾರಿ (ಕಾರ್ಕಳ), ವೈ. ಸಂಜೀವ ಶೆಣೈ (ಪುತ್ತೂರು), ಕೃಷ್ಣ ರಾವ್, ಹೆಸರುಗಳ ಎದುರು ಅವರಣದಲ್ಲಿ ಕಾಣಿಸಿದ ತಾಲೂಕುಗಳಲ್ಲಿ ಈ ಮಹನೀಯರು ಉಪ ಸಮಿತಿಗಳ ಕನ್ವಿನರ್‌ಗಳಾಗಿ ಚುನಾಯಿತರಾಗಿದ್ದಾರೆ.

ಸಂಗ್ರಹಕ್ಕಾಗಿ ಸಂಚಾರ

ಪ್ರಧಾನ ಕಾರ್ಯದರ್ಶಿ ಶ್ರೀ। ಎಂ. ಡಿ. ಅಧಿಕಾರಿಗಳಿಗೆ ನಿಧಿ ಸಂಗ್ರಹಕ್ಕಾಗಿ ಜಿಲ್ಲೆಯಲ್ಲಿ ಸಂಚರಿಸುವ ಹೊಣೆಯನ್ನು ಒಪ್ಪಿಸಲಾಗಿದೆ. ಅವರ ಕಾರ್ಯಕ್ರಮದ ವಿವರಗಳು ಪ್ರಕಟವಾಗಲಿವೆ. ಜಿಲ್ಲೆಯ ಮಹಾ ಜನರು ಉದಾರ ಸಹಕಾರವನ್ನೀಯುವರಾಗಿ ಹಾರೈಕೆ.

ಇತರ ವಿವರಗಳು

ಸಂಗ್ರಹಿಸಲ್ಪಟ್ಟ ಹಣವು ಖಜಾಂಚಿ ವಿಠಲಜಿಯವರ ಹೆಸರಲ್ಲಿ ಕೆನರಾ ಬೇಂಕಿನಲ್ಲಿಡಲ್ಪಡಬೇಕೆಂದೂ, ಸಾರ್ವಜನಿಕ ವಿನಂತಿ ಪತ್ರ ಹೊರಡಿಸಬೇಕೆಂದೂ ಆರಂಭ ಖರ್ಚಿಗೆ ಪ್ರತ್ಯೇಕ ನಿಧಿ ಕೂಡಿಸ [illegible] ದೇಶದಿಂದ ನಿರ್ಣಯಗಳಾದುವು. ಅಲ್ಲದೆ ... ರೂ ೫೦೦ ಖರ್ಚಿಗಾಗಿ ಸದಸ್ಯರ ಕಡೆಯಿಂದ ಕೂಡಿಸಲ್ಪಟ್ಟಿತು.

ಸ್ಮಾರಕ ನಿಧಿಯ ಆಫೀಸು

ಇದು 'ನವಭಾರತ' ಕಾರ್ಯಾಲಯದಲ್ಲೇ ಇರುವುದೆಂದು ನಿಶ್ಚಯ ಮಾಡಲಾಯಿತು.

ನಮ್ಮ ಜಿಲ್ಲೆಯಿಂದ ಕನಿಷ್ಠ ಪಕ್ಷ ೩೦ ಸಾವಿರ ರೂಗಳು ಸಂಗ್ರಹಿಸಬೇಕೆಂದು ಸಮಿತಿಯವರ ನಿರೀಕ್ಷೆ ಇದೆ. ನಿಧಿಯು ಇದಕ್ಕೂ ಮಿಕ್ಕಲೆಂದು ನಮ್ಮ ಹಾರೈಕೆ.

ಅಕ್ಕಿಯಲ್ಲಿ ವಂಚನೆ

ರೇಶನಿಂಗ್ ಅಕ್ಕಿಯನ್ನು ಹಂಚುವ ಅಂಗಡಿಯೊಂದರಲ್ಲಿ ಮುಡಿ ಬಿಚ್ಚುವಾಗ ೪ ರಾತ್ತಲಿನ ಒಂದು ಕಲ್ಲು ಸೇರಿರುವುದು ಕಂಡು ಬಂತು. ರಿಕ್ವಿಜಿಶನ್ ಮಾಡಿ ಸರಕಾರಕ್ಕೆ ಕೊಡಲ್ಪಟ್ಟ ಮುಡಿಗಳಲ್ಲಿ ಈ ತರದ ವಂಚನೆ ಮಾಡಿದುದು ಆಶ್ಚರ್ಯ. ಹೀಗೆ ಅಕ್ಕಿಯಲ್ಲಿ ಭತ್ತ, ಕಲ್ಲುಗಳೂ ಸೇರಿದ್ದುದು ಸಾರ್ವಜನಿಕರ ಗಮನಕ್ಕೆ ಬಂದಿದೆ. ಅಧಿಕಾರಿಗಳು ಈ ವಿಷಯ ತನಿಖಿ ಮಾಡುವರಾಗಿ ಹಾರೈಸಲಾಗಿದೆ.

ಬಸ್ಸ್ ಆಫೀಸು

ಕಡೆಗಂತೂ ಹಂಪನಕಟ್ಟೆಗೆ ಒಯ್ಯಲ್ಪಟ್ಟಿತು. ಜೇಡಿಗುಡ್ಡೆ, ಕೊಡಿಯಾಲ್ ಬೈಲಿನ ರಸ್ತೆಗಳು ನಿರ್ಜನವಾದಂತೆ ಭಾಸವಾಗುತ್ತದೆ. ಹಂಪನಕಟ್ಟೆಯ ಗದ್ದಲವು ದ್ವಿಗುಣಿತವಾದಂತಾಗಿದೆ. ಆದರೆ ಹಂಪನಕಟ್ಟೆ ಬಸ್ ಸ್ಟೆಂಡಿನಲ್ಲಿ ಪ್ರಯಾಣಿಕರಿಗೆ ಕುಳಿತುಕೊಳ್ಳುವ ಇತ್ಯಾದಿ ಸೌಕರ್ಯಗಳು ಇಲ್ಲದಿರುವುದು ಶೋಚನೀಯಕರ.

ಹಾಲು.

ಹೊಸ ಹೋಟೆಲುಗಳ ಸ್ಥಾಪನೆಯಾಗಿ ನಗರದಲ್ಲಿ ಹಾಲಿನ ಅಭಾವವಾಗ ಬಹುದಾಗಿ ನಿರೀಕ್ಷಿಸಲಾಗಿದೆ. ನಾಗರಿಕರ ಪೂರೈಕೆಗಳ ಕಡೆಗೆ ಗಮನವಿಟ್ಟು ಉಪಹಾರ ಗೃಹಗಳಿಗೆ ಹೋಗುವ ಹಾಲನ್ನು ಒಂದು ನಿರ್ದಿಷ್ಟ ಪರಿಮಾಣಕ್ಕೆ ತಂದಿರಿಸುವುದು ಯೋಗ್ಯವೆಂದು ಅಭಿಪ್ರಾಯ ಪಡಲಾಗಿದೆ.

ಚಿಲ್ಲರೆ.

ಈ ಸಂಬಂಧವಾಗಿ ಕೆನರಾ ಚೇಂಬರ್ ಆಫ್ ಕಾಮರ್ಸ್ ಇವರು ಮನವಿಮಾಡಿಕೊಂಡುದರ ಪರಿಣಾಮವಾಗಿ ಕಲೆಕ್ಟರರು ಯಾವನೂ ತನ್ನ ಸರ್ವಸಾಧಾರಣ ಅವಶ್ಯಕತೆಗಿಂತ ಹೆಚ್ಚಿನ ಚಿಲ್ಲರೆಯನ್ನು ಇಟ್ಟುಕೊಳ್ಳಲಾಗದು, ಈ ಅವಶ್ಯಕತೆಗಿಂತಲೂ ಹೆಚ್ಚು ಇದ್ದಲ್ಲಿ ಅದನ್ನು ತಾಲೂಕು ಟ್ರೆಜರಿಗೆ ಅಥವಾ ಬೇಂಕುಗಳಿಗೆ ಕಳುಹಿಸಬೇಕು, ಮತ್ತೂ ಹೆಚ್ಚು ಇದ್ದಲ್ಲಿ ಅದರ ಪರಿಮಾಣವನ್ನು ಸೂಚಿಸುವ ಬೋರ್ಡೊಂದನ್ನು ತೂಗಿಸಬೇಕು' ಎಂಬ ಈ ಅಭಿಪ್ರಾಯದ ಹುಕುಮನ್ನು ಜ್ಯಾರಿ ಮಾಡಿರುವರಾಗಿ ತಿಳಿದು ಬರುತ್ತದೆ.

ಆಹಾರ ಬರಲಿದೆ

ಜಿ. ಕಲೆಕ್ಟರರ ಅಧ್ಯಕ್ಷತೆಯಲ್ಲಿ ಕಳೆದ ವಾರ ಫುಡ್ ಕೌನ್ಸಿಲ್ ಇದರ ಸಭೆ ಸೇರಿತ್ತು. ಅಧ್ಯಕ್ಷರು ಆಹಾರ ಮತ್ತು ಇತರ ವಸ್ತುಗಳ ಪರಿಸ್ಥಿತಿ ಕುರಿತು ಕೆಲವೊಂದು ಏರ್ಪಾಡುಗಳಾಗುತ್ತಿರುವುದನ್ನು ತಿಳಿಸಿದರು. ಇಷ್ಟರ ತನಕ ಮಂಗಳೂರಿನ ಅವಶ್ಯಕತೆಗಾಗಿ ಅಕ್ಕಿ ಸ್ಟೋರುಗಳಿಗೆ ಕೊಡಲಾಗಿದೆ. ಇದು ರಿಕ್ವಿಜಿಶನ್ ಆಗಬೇಕಾಗಿದ್ದುದಕಿಂತಲೂ ಸ್ವಲ್ಪ ಹೆಚ್ಚು ಕುಂದಾಪುರ, ಉಡುಪಿಗಳಲ್ಲಿ ಸಾಕಷ್ಟು ಇದೆ. ನಗರದ ಆಸುಪಾಸಿನ ಖರ್ಚಿಗಾಗಿ ಕುಂದಾಪುರದಿಂದ ೫೦ ಸಾವಿರ ಮುಡಿ ಬರಲಿದೆ. ನಗರದಲ್ಲಿ ಅಗ್ಗದ ದಾಸ್ತಾನು ೩ ತಿಂಗಳ ಮಟ್ಟಿಗಿನಷ್ಟು. ಮತ್ತೆ ಬರುವ ೩ ತಿಂಗಳ ಪೂರೈಕೆಗಾಗಿ ರಾಜಮಹೇಂದ್ರಿಯಿಂದ ೩೦ ಸಾವಿರ ಗೋಣಿ ರಾಗಿ ತರಿಸುವ ವ್ಯವಸ್ಥೆ ಆಗಲಿದೆ. ಜನರು ಆದಷ್ಟು ಗೋದಿಯನ್ನು ಉಪಯೋಗಿಸಬೇಕು. "ಇದು ಅವರ ಭಾಷಣದಲ್ಲಿ ಹೇಳಿದ ವಿಷಯಗಳ ಸಾರಾಂಶ.

ಕಬ್ಬಿಣ ಸಾಮಾನು

ಕಮರ್ಶಿಯಲ್ ಟೇಕ್ಸ್ ಆಫೀಸರರು ನಗರದ ಕಬ್ಬಿಣ ವ್ಯಾಪಾರಿಗಳು ಸುಮಾರು ೪ ಸಾವಿರ ಹಾರೆಗಳನ್ನು ನಿಯಂತ್ರಿತ ಧಾರಣೆಗೆ ಮಾರಲು ಕೊಟ್ಟಿರುವರಾಗಿ ಫುಡ್‌ಕೌನ್ಸಿಲ್ ಸಭೆಯಲ್ಲಿ ತಿಳಿಸಿದರು. ಸೊಸೈಟಿಗಳ ಮೂಲಕ ಅದನ್ನು ಮಾರಲೇರ್ಪಾಡಾಗುವುದು. ಹಾರೆಗಳನ್ನು ರೈತಾಪಿ ಜನರಿಗೆ ಮಾತ್ರ ಪೂರೈಸುವಂತಾಗಬೇಕೆಂದು ಫುಡ್ ಕೌನ್ಸಿಲರೆ ಸೂಚಿಸಿತು.

ಕಟ್ಟಿಗೆ

ಈಗ ಜ್ಯಾರಿಯಲ್ಲಿರುವ ಇದರ ಯೋಜನೆಯು ತೊಂದರೆದಾಯಕವಾಗಿ ಕಂಡಲ್ಲಿ ಕಟ್ಟಿಗೆ ಮಾರಾಟದ ಏರ್ಪಾಡನ್ನು ಸ್ಟೋರುಗಳಿಗೆ ಕೊಡಿಸಬೇಕೆಂದೂ ಫುಡ್ ಕೌನ್ಸಿಲ್‌ನವರು ಸೂಚಿಸಿದರು. ಮೊಳಹಳ್ಳಿ ಶಿವರಾಯರು ಸ್ಟೋರಿನವರು ಇದಕ್ಕೆ ಸಿದ್ಧರಿರುವರಾಗಿ ತಿಳಿಸಿದರು.

ಭೂಮಾಲಿಕರಿಗೆ

ಪರ್ಮಿಟು ಮೂಲಕ ಅಕ್ಕಿ ಯಾ ಭತ್ತ ದಾಸ್ತಾನು ಇಟ್ಟ ಅಕ್ಕಿಯನ್ನು ರೇಷನ್ ಕಾರ್ಡು ಪ್ರಕಾರ ಮನೆ ಖರ್ಚಿಗೆ, ತಮ್ಮ ಸಾಗುವಳಿ ಮಾಡುವ ಜಮೀನುಗಳಿಗೆ, ಸಾಗುವಳಿ ಕೆಲಸಗಾರರ ಮಜೂರಿ ಬಗ್ಗೆ ಹಂಚಲಿಕ್ಕೆ ಮಾತ್ರ ಉಪಯೋಗಿಸತಕ್ಕದು. ಇದಕ್ಕೆ ಮೀರಿ ಖರ್ಚುಮಾಡಿದಲ್ಲಿ ಹೆಚ್ಚಿಗೆ ರೇಷನ್ ಸಿಗಲಾರದು ಹೀಗೆಂದು ಅಧಿಕಾರಿಗಳು ತಿಳಿಸುತ್ತಾರೆ.

ಆರೋಗ್ಯ

ಇಲಿ ಬೀಳುವಿಕೆಯ ವರದಿಗಳಿವೆಯಾದರೂ ಪ್ಲೇಗಿನವುಗಳು ಅತೀ ಕಡಿಮೆ, ಅಥವಾ ಇಲ್ಲವೇ ಎನ್ನಬಹುದೆಂದು ತಿಳಿದುಬರುತ್ತದೆ. ಕಳೆದ ವಾರಗಳಲ್ಲಿ ಪರೀಕ್ಷೆ ಮಾಡಲ್ಪಟ್ಟವುಗಳಲ್ಲಿ ರೋಗದ ಸೋಂಕಿದ್ದವು ಇರಲಿಲ್ಲವಂತೆ. ಯಾರಿಗೂ ಈ ರೋಗ ತಗಲಿದ ಸುದ್ದಿ ಹಿಂದಿನ ಮೂರು ವಾರಗಳಿಂದ ತಿಳಿದು ಬಂದಿಲ್ಲ. ಇಷ್ಟರ ತನಕ ನಗರದ ೭೦ ಸಾವಿರಕ್ಕೂ ಮಿಕ್ಕಿ ಇಲಿ ಬಿಲಗಳನ್ನು ಶುದ್ಧೀಕರಿಸಲಾಯಿತು. ದಾಕು ಹಾಕಲ್ಪಟ್ಟವರ ಸಂಖ್ಯೆ ೧೯ ಸಾವಿರಕ್ಕೆ ಮಿಕ್ಕಿದೆ.

ಬೈಹುಲ್ಲು

ಜಾನುವಾರುಗಳನ್ನು ಸಾಕುವ ನಾಗರೀಕರು ಬೈಹುಲ್ಲಿನ ವಿಪರೀತ ಬೆಲೆಯಿಂದ ತಮ್ಮ ಉದ್ಯೋಗವನ್ನು ಮುಂದುವರಿಸಲು ನಿರಾಶೆ ಸೂಚಿಸುತ್ತಾರೆ. ಹುಲ್ಲು ಸಾವಿರ ಸೂಡಿಗಳಿಗೆ ರೂ. ೨೦ಕ್ಕೂ ಮೇಲಿರಬಹುದೆಂದು ಊಹೆ. ಹಾಲಿಗೆ ಸಂಬಂಧಪಟ್ಟ ಈ ವಿಷಯದಲ್ಲೂ ಅಧಿಕಾರಿಗಳು ತಮ್ಮ ಗಮನವಿಟ್ಟಿದ್ದಾರೆಂದು ತಿಳಿದುಬರುತ್ತದೆ.

ಕಟ್ಟಿಗೆ ನಿಯಂತ್ರಣ

ಕಲೆಕ್ಟರರು ಇದನ್ನು ಸವಿಸ್ತಾರವಾಗಿ ದ. ಕ. ಜಿಲ್ಲಾ ಗಜೇಟ್‌ನಲ್ಲಿ ಪ್ರಕಟಿಸಿರುವರು. ಅದರಲ್ಲಿ ಜಾತಿವಾರ್ ಕಟ್ಟಿಗೆಗಳ ಧಾರಣೆ ಬಂದರದಿಂದ ಮಾರುವ ಸ್ಥಳವಿರುವ ಅಂತರದ ಮೇಲೆ ಹೊತ್ತ ಬೆಲೆಗಳ ಪಟ್ಟಿ ಕಡಿಮೆ ಲೆಕ್ಕ ಬರೆದಿರುವರು. ವಿಕ್ರಯಿಸುವವರು, ಖರೀದಿಸುವವರ ಹೆಸರು, ವಿಳಾಸಗಳನ್ನು ಬರೆದು ರಶೀದಿ ಕೊಡಬೇಕು. ಧಾರಣೆ ಪಟ್ಟಿಯನ್ನು ಅಂಗಡಿ ಎದುರು ತೂಗಿಸಬೇಕು. ರೆವಿನ್ಯೂ ಇನ್ಸ್‌ಪೆಕ್ಟರರು ಅಥವಾ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಕಟ್ಟಿಗೆ ವ್ಯಾಪಾರಿಗಳ ಲೆಕ್ಕವನ್ನು ಯಾವಾಗಲೂ ತನಿಖಿ ಮಾಡಬಹುದು. ಈ ಪ್ರಕಟನೆ ನಂತರ ಯಾವ ವ್ಯಾಪಾರಿಯೂ ತನ್ನ ವಸ್ತುಗಳ ಮಾರುವಿಕೆ ನಿಲ್ಲಿಸಬಾರದು. ತಪ್ಪಿತಸ್ಥರಿಗೆ ೩ ವರ್ಷದ ಶಿಕ್ಷೆ, ಜುಲ್ಮಾನೆ, ಅಥವಾ ಎರಡನ್ನು ವಿಧಿಸಬಹುದು.

ಮಂಗಳೂರು ನಗರದಲ್ಲಿ ಬಂದರದಿಂದ ೨ ಫರ್ಲಾಂಗು ದೂರದೊಳಗಿನಲ್ಲಿ ಕಟ್ಟಿಗೆ ಮಾರಬೇಕಾದ ಬೆಲೆ:—ಕರಿಮರ, ಚಬುಕು, ಖಂಡಿಗೆ ಒಣಗಿದ್ದು ಆದರೆ ಒಡೆಯದಕ್ಕೆ ಮತ್ತು ಒಣಗಿದ್ದು ಒಡದದಕ್ಕೆ – ರೂ. ೫–೪–೦ ಮತ್ತು ೫–೧೨–೦. ಅದೇ ಕ್ರಮದಲ್ಲಿ ಮಿಶ್ರ ಜಾತಿಯ ಕಟ್ಟಿಗೆ–ರೂ. ೪–೪–೦ ಮತ್ತು ೪–೧೨–೦. ಬಂದರಿನಿಂದ ೨ ಫರ್ಲಂಗ್ ದೂರದ ಮೇಲಿನ ಸ್ಥಳಗಳಲ್ಲಿ ಮಾರುವ ಕಟ್ಟಿಗೆಯ ಬೆಲೆ ಮೇಲೆ ಕಾಣಿಸಿದ ಬೆಲೆಗಳಿಗಿಂತ ಖಂಡಿಯಲ್ಲಿ ನಾಲ್ಕಾಣೆ ಮಾತ್ರ ಹೆಚ್ಚು.

ಕಾರ್ಕಳ

ಪುತ್ತೂರು ಶಹರದಲ್ಲಿ ಕರಿಮರ, ಚಬುಕು, ಮತ್ತು ಮಿಶ್ರ ಕಟ್ಟಿಗೆಯ ಬೆಲೆ ಒಡೆದಕ್ಕೆ ಖಂಡಿಗೆ ರೂ. ೩–೫–೦ ಮತ್ತು ೨–೧೨–೦. ಒಡೆಯದಕ್ಕೆ ೮ ಆಣೆ ಕಡಿಮೆ.

ಉಡುಪಿ

ಉಡುಪಿ ಶಹರಿನಲ್ಲಿ ಇದಕ್ಕಿಂತಲೂ ಸ್ವಲ್ಪ ಬೆಲೆ ಹೆಚ್ಚು. ಒಡೆದ ಮೊದಲಿನ ೧ನೇ ಮತ್ತು ೨ನೇ ತರಗತಿಯವುಗಳಿಗೆ ಖಂಡಿಗೆ ರೂ. ೪–೬–೦ ಮತ್ತು ೩–೧೧–೦ ಒಡೆಯದಕ್ಕೆ ೮ ಆಣೆ ಕಡಿಮೆ.

ನಗರದೊಳಗೆ ಇದ್ದಲಿನ ನಿಯಂತ್ರಿತ ಬೆಲೆ ಮಣ ಒಂದಕ್ಕೆ ಆಣೆ ೧೦. ಮಂಗಳೂರು ಸರಹದ್ದು ಪ್ರದೇಶದಲ್ಲಿ ಮಣಕ್ಕೆ ಆಣೆ ೮.

ಎಕ್ಕಾರು

ಈ ಕಡೆಗಳಲ್ಲಿ ಹುಲಿ ಕಾಟವು ಹೆಚ್ಚಾಗಿರುವುದು ಜನರನ್ನು ಗಾಬರಿಗೊಳಪಡಿಸಿದೆ. ಅಗಲೇ ಈ ಗ್ರಾಮದ ರೈತ ಹುಡುಗಿಯೋರ್ವಳನ್ನೂ, ೩ ವರ್ಷದ ಮಗುವೊಂದನ್ನೂ, ಮತ್ತು ೧೦ ವರ್ಷದ ಕ್ರೈಸ್ತ ಬಾಲಕನೋರ್ವನನ್ನೂ ಹುಲಿಯು ಕೊಂದಿದೆಯೆಂದು ತಿಳಿದುಬರುತ್ತದೆ.

ಹೊಸದುರ್ಗ

ಈಗ ಬಂಧನದಲ್ಲಿರುವ ಕೇರಳ ಪ್ರಾಂ. ಕಾಂ. ಕಮಿಟಿ ಅಧ್ಯಕ್ಷರಾದ ಕೆ. ಟಿ. ಕುಂಞರಾಮನ್ ನಂಬ್ಯಾರ್ ಇವರು ಕಮ್ಯೂನಿಸ್ಟ್ ಪಾರ್ಟಿ ನಿಧಿಗೆ ಒಂದು ಸಾವಿರ ರೂ. ದಾನಮಾಡಿರುವರಾಗಿ ತಿಳಿದುಬರುತ್ತದೆ.

ಹೆಜಮಾಡಿ

ಇಲ್ಲಿಯ ಟಪ್ಪಾಲು ಏರ್ಪಾಡನ್ನು ಸಂಬಂಧಪಟ್ಟ ಡಿಪಾರ್ಟ್‌ಮೆಂಟಿನವರು ಸುವ್ಯವಸ್ಥಿತ ದಾರಿಗೆ ತಂದಿರುವರೆಂದು ವದಂತಿ.

ಇಲ್ಲಿಯ ದಿನಚರಿಯು ಸಂತೆಗೆ ಹೊಸ ಕಟ್ಟಡವು ಒದಗಿಸಲ್ಪಟ್ಟಿರುವುದು ಸ್ತುತ್ಯ.

ಹೊಸ ಕಾಗದ ನಿಯಂತ್ರಣಾಜ್ಞೆಗೆ ಸಾರ್ವತ್ರಿಕ ವಿರೋಧ

(೨ನೇ ಪುಟದಿಂದ)

ಯುದು. ಇದರ ವಿಧಿಗಳು ಅತ್ಯಂತ ಮತ್ತು ಅನಾವಶ್ಯಕ ತೀಕ್ಷ್ಣವಾಗಿವೆಯೆಂದು ಯಾರಾದರೂ ಒಪ್ಪಿಯೇ ತೀರಬೇಕು. ಕಾಗದದ ಉತ್ಪಾದನೆ, ಯುದ್ಧ ಪರಿಸ್ಥಿತಿಯಿಂದ ಕಡಮೆಯಾಗಿದೆ. ಆಯಾತವೂ ಬಿದ್ದು ಹೋಗಿದೆ. ಆದ್ದರಿಂದ ಕಾಗದದ ಮಿತವ್ಯಯಕ್ಕಾಗಿ ಈ ತೀವ್ರ ಶಾಸನವನ್ನು ಕೈಕೊಳ್ಳಲಾಗಿದೆಯೆಂದು ಸರಕಾರದ ವಾದ. ಆದರೆ ಯುದ್ಧಕಾಲದಲ್ಲಿ ಕೂಡ ನಾಗರಿಕರ ಬಳಕೆಯ ಸಾಮಗ್ರಿಗಳ ಮೇಲೆ ನಿಯಂತ್ರಣ ಹೊರಿಸುವದಕ್ಕೂ ಒಂದು ಸೀಮೆಯಿರಬೇಕು. ಆದ್ದರಿಂದಲೇ ಇದರ ವಿರುದ್ಧ ಸಾರ್ವತ್ರಿಕ ನಿಷೇಧ ವ್ಯಕ್ತಗೊಳಿಸಲ್ಪಟ್ಟಿದೆ. ಸರ್ ಚುನೀಲಾಲ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಮುಂಬಾಯಿಯಲ್ಲಿ ಸೇರಿದ ಸಂಪಾದಕ ಮುದ್ರಕ, ಪ್ರಕಾಶಕರ ಸಭೆಯಲ್ಲಿ ಈ ಆಜ್ಞೆಯನ್ನು ಆಚರಣೆಗೆ ತರುವುದನ್ನು ಮೂರು ತಿಂಗಳಾದರೂ ಮುಂದೂಡಬೇಕೆಂದು ಕೇಳಿಕೊಳ್ಳಲಾಗಿದೆಯಲ್ಲದೆ ಆ ಅವಧಿಯಲ್ಲಿ ಸಂಬಂಧಪಟ್ಟ ಹಿತಸಂಬಂಧಗಳೊಡನೆ ವಿಚಾರವಿನಿಮಯ ಮಾಡಿ ಸರಕಾರದವರು ಪರಸ್ಪರ ತಿಳಿವಳಿಕೆಯಿಂದ ಒಂದು ಆಚರಣೀಯ ಕ್ರಮವನ್ನು ಇಳಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ಹಿಂದಿ ಕಾಗದ ಉತ್ಪಾದಕರ ಪತಿಯಿಂದ ಶ್ರೀ. ಬಿ. ಎಂ. ಬಿರ್ಲಾರವರೂ ಈ ಆಜ್ಞೆಯ ಅಯೋಗ್ಯ ಕಠೋರತೆಯನ್ನು ನಿಷೇಧಿಸಿದ್ದಾರೆ.

ಈ ಹೊಸ ಆಜ್ಞೆಯ ಮೊದಲನೆಯ ತಪ್ಪು, ಅದರ ಅನಿರೀಕ್ಷಿತತೆ. ಅದು ಪ್ರಸಿದ್ಧವಾದಂದಿನಿಂದಲೇ ಆಚರಣೆಗೆ ಬರುತ್ತದೆ. ಜೂನ್ ೧೬ಕ್ಕೆ ಅದು ಹೊರಟದ್ದು ಸಂಬಂಧಪಟ್ಟ ಹಿತಸಂಬಂಧಗಳಾದ ಮುದ್ರಕ, ಪ್ರಕಾಶಕ, ಪತ್ರಿಕಾಕರ್ತರಿಗೆ ಅದನ್ನು ಅರ್ಥಮಾಡಿಕೊಂಡು ಅರಗಿಸಿಕೊಳ್ಳುವ ಅವಕಾಶ ಕೂಡ ಕೊಡಲಾಗಿಲ್ಲ. ಆದರಿಂದ ಹಲವರು ಅದನ್ನು ಅಜ್ಞಾನಪೂರ್ವಕ ಮುರಿದಿರಬಹುದು. ಇನ್ನೂ ಮುರಿಯುತ್ತ ಹೋಗಬಹುದು. ಎರಡನೆಯದಾಗಿ ಆಜ್ಞೆ ಹೊರಡಿಸುವಲ್ಲಿ ತಜ್ಞರ ಅಭಿಪ್ರಾಯ ತೆಗೆದುಕೊಳ್ಳಲಾಗಿದೆಯೆಂದು ಹೇಳಲಾಗಿದ್ದರೂ ಹಿಂದುಸ್ಥಾನದ ಪ್ರಮುಖ ಮುದ್ರಣವ್ಯವಸಾಯಿಗಳಾದ ಕ್ಯಾರಿಜ್ ಕಂಪೆನಿಯ ಮ್ಯಾನೇಜರಾದ ಮಿ. ಎಫ್. ಬಾರ್ಟನ್‌ರನ್ನುವಂತೆ "ಯಾವ ವ್ಯಾವಹಾರಿಕ ಮುದ್ರಕನನ್ನೂ ಈ ವಿಷಯದಲ್ಲಿ ವಿಚಾರಿಸಿದಂತಿಲ್ಲ." ನಿಯಂತ್ರಣವೇನೋ ಅವಶ್ಯವಿರಬಹುದು. ಆದರೆ ಸಂಬಂಧಪಟ್ಟ ವ್ಯಾಪಾರಿಗಳೊಡನೆ ತೊಂದರೆಗಳ ವಿಷಯ ವಿಚಾರವಿನಿಮಯ ಮಾಡಲು ಅಭ್ಯಂತರವೇನು? ಆಗ ಆಜ್ಞೆಯ ಪಾಲನೆ ಹೆಚ್ಚು ಸರಳವೂ ಆಗಬಹುದು. ಸರಕಾರದ ಉದ್ದೇಶವೂ ಫಲಿಸಬಹುದು.

ಸಾಮಾನ್ಯವಾಗಿ ಸರಕಾರದ ವಿಧಿವಿಧಾನಗಳಿಗೆ ಬೆಂಬಲವೀಯುತ್ತಿರುವ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆ ಕೂಡ "ಈಗಿರುವ ರೂಪದಲ್ಲಿ ಈ ಆಜ್ಞೆಗಳನ್ನು ಆಚರಿಸಲು ಸಾಧ್ಯವಿದೆಯೆಂದು ವಾದಿಸಿದರೂ ಅವುಗಳಿಂದ ಚಿಂತಾಜನಕ ಪರಿಣಾಮಗಳಾಗುವುದು ನಿಸ್ಸಂಶಯವೆಂದಿದೆ. ಮುದ್ರಣ ವ್ಯವಸಾಯದ ವ್ಯಾಪಾರ ಎಲ್ಲ ತಿಂಗಳೂ ಒಂದೇ ಬಗೆಯಾಗಿರುವುದಿಲ್ಲ. ಪ್ರಾಪ್ತವಾಗಸಿಗುವ ಅಲ್ಪ ಕಾಗದವನ್ನೂ ಸಮನಾಗಿ ಹಂಚಿಹಾಕಿದರೆ ಕೆಲಸವೆಂತು ಸಾಗಬೇಕು? ಈ ಆಜ್ಞೆಯ ಆಚರಣೆಯಲ್ಲಿರುವ ಹಲವು ಅಸಾಧ್ಯತೆಗಳಲ್ಲಿ ಇದೊಂದೇ ನಿದರ್ಶನ.

ಒಮ್ಮಿಂದೊಮ್ಮೆ ಮುದ್ರಣ, ಪ್ರಕಾಶನ, ಪತ್ರಿಕಾ ವ್ಯವಸಾಯಗಳಿಂದ ನೂರಕ್ಕೆ ಎಪ್ಪತ್ತರಷ್ಟು ತ್ಯಾಗವನ್ನು ಬೇಡುವುದು ಕಠೋರವಾದ ಬೇಡಿಕೆಯೇ ಸರಿ. ಆದರೆ ನಿಜವಾಗಿ ನೋಡಿದರೆ ಈ ಆಜ್ಞೆ ಯುದ್ಧ ಪೂರ್ವಕ್ಕಿಂತ ನೂರರಲ್ಲಿ ೯೦ರಷ್ಟು ತ್ಯಾಗವನ್ನು ಬೇಡುತ್ತದೆ. ಏಕೆಂದರೆ ಆಯಾತ ಮತ್ತು ಉತ್ಪಾದನೆ ಕಡಿಮೆಯಾಗಿದ್ದರೂ ಸರಕಾರದ ಬೇಡಿಕೆ ಹೆಚ್ಚುತ್ತ ಹೋಗಿದ್ದರಿಂದ ಯುದ್ಧ ಪೂರ್ವದಲ್ಲಿ ಸಾರ್ವಜನಿಕ ಉಪಯೋಗಕ್ಕೆ ಸಿಗುತ್ತಿದ್ದದರಲ್ಲಿ ನೂರಕ್ಕೆ ೧೮ರಷ್ಟು ಮಾತ್ರ ೧೯೪೩ರಲ್ಲಿ ಲಭ್ಯವಾಗಿತ್ತೆಂದು ಅಂಕೆ ಸಂಖ್ಯೆಗಳಿಂದ ಸಿದ್ಧವಾಗುತ್ತದೆ. ಇದೀಗ ಹೊಸ ಆಜ್ಞೆ ಹೊರಡಿಸಿ ಈ ೧೯೪೩ರಲ್ಲಿ ಸಿಗುತಿದ್ದ ಅಲ್ಪಾಂಶದಲ್ಲಿ ಮತ್ತೆ ನೂರಕ್ಕೆ ಎಪ್ಪತನ್ನು ಕಸಿದುಕೊಂಡಿದೆ.

ಕರ್ನಾಟಕದಂಥ ಮುದ್ರಣ, ಪ್ರಕಾಶನ, ಪತ್ರಿಕಾ ವ್ಯವಸಾಯದಲ್ಲಿ ಹಿಂದುಳಿದ ಪ್ರಾಂತಗಳಿಗಂತೂ ಈ ಆಜ್ಞೆ; ಆ ವ್ಯವಸಾಯಗಳನ್ನು ಕಂಠಗತ ಪ್ರಾಣಗಳಾಗಿ ಮಾಡಬಹುದು. ಮುದ್ರಣ ವ್ಯವಸಾಯದಲ್ಲಿ ನಿರತರಾಗಿದ್ದ ಕೆಲಗಗಾರರು ದೊಡ್ಡ ಪ್ರಮಾಣದಲ್ಲಿ ಕೆಲಸ ಕಳೆದುಕೊಳ್ಳಬಹುದಲ್ಲದೆ ಹಲವು ಮುದ್ರಣಾಲಯಗಳೂ ಪ್ರಕಾಶಕರೂ ಪತ್ರಿಕೆಗಳೂ ವ್ಯಾಪಾರವನ್ನೇ ಮುಚ್ಚಬೇಕಾಗಬಹುದು. ನೋಡ ನೋಡುತ್ತ ಪರಿಸ್ಥಿತಿ ಕೆಡುವದಕ್ಕೆ ಅವಕಾಶವಿತ್ತು, ಈಗ ಒಮ್ಮಿಂದೊಮ್ಮೆ ಇಷ್ಟು ತೀಕ್ಷ್ಣ ಕ್ರಮವನ್ನು ಕೈಕೊಂಡು ಸರಕಾರ ಅದು ಭಾವಿಸಿದ್ದಕ್ಕಿಂತ ದೊಡ್ಡ ತಪ್ಪು ಮಾಡುತ್ತಿದೆ. ಇಂಗ್ಲಂಡಿನಲ್ಲಿ ನಿರ್ಯಾತಕ್ಕೆ ಕಾಗದ ಸಿದ್ಧವಾಗಿದೆಯೆಂದೂ ಹಡಗುಗಳಲ್ಲಿಯೂ ಅವಕಾಶವಿಲ್ಲದೆ ಇಲ್ಲವೆಂದೂ ಆದರೆ ಹಿಂದೀ ಸರಕಾರದಿಂದ ಆಯಾತದ ಪರವಾನಗಿಯೇ ದೊರೆಯದ್ದರಿಂದ ಕಾಗದ ತರಿಸಲು ಸಾಧ್ಯವಾಗಿಲ್ಲವೆಂದೂ ಕೇಳುತ್ತೇವೆ. ಇಂಥ ಪ್ರಸಂಗದಲ್ಲಂತೂ ಈ ಆಜ್ಞೆಯ ಅನ್ಯಾಯ ಇಮ್ಮಡಿಸುತ್ತದೆ. ಆಯಾತದ ವ್ಯವಸ್ಥೆಯನ್ನು ಮಾಡುವುದಲ್ಲದೆ ಸಂಬಂಧಪಟ್ಟ ವ್ಯವಸಾಯದವರೊಡನೆ ವಿಚಾರವಿನಿಮಯ ಮಾಡಿ ಕ್ರಮ ಕೈಕೊಳ್ಳಬೇಕೆಂದೂ ಆ ವರೆಗೆ ಈ ಆಜ್ಞೆಯನ್ನು ತಡೆಹಿಡಿಯಬೇಕೆಂದೂ ಸೂಚಿಸದೆ ಇರಲಾರೆವು.

ಕರ್ಮವೀರ

ಹಿಂದುಸ್ಥಾನ

ಚಾಪ್ರಾದಲ್ಲಿ ಒಬ್ಬ ರೈತನ ಮನೆಗೆ ಬೆಂಕಿ ಹತ್ತಿ ಅವನ ೩೬ ಎತ್ತುಗಳೂ ಜೀವಂತ ಸುಟ್ಟು ಹೋದವು. ಪ್ರತಿಯೊಂದು ಎತ್ತಿನ ಬೆಲೆ ಸುಮಾರು ೩೬೦ ರೂ. ಇದ್ದು ಕೆಲವು ಕಾಳುಗಳೂ ಸುಟ್ಟು ಹೋಗಿರುವವು.

ಮುಂಬಯಿ ಬಂದರದಲ್ಲಿ ಆದ ಸ್ಫೋಟದಿಂದ ಬಿದ್ದು ಹೋದ ಕಟ್ಟಡಗಳ ಭಾಗಗಳನ್ನು ತೆಗೆದು ಸ್ವಚ್ಛವಾಗಿರಿಸಿ ಬಂದರವನ್ನು ಮತ್ತು ಅನೇಕ ರಸ್ತೆಗಳನ್ನು ಜನರ ಉಪಯೋಗಕ್ಕಾಗಿ ಒದಗಿಸಿಕೊಡುವ ಕೆಲಸ ಭರದಿಂದ ಸಾಗಿದೆ.

ಮುಂಬಯಿ ರೂಟಿ ಗಿರಣಿಯವರು ತಮ್ಮ ಲೆಕ್ಕ ಪತ್ರದ ಪುಸ್ತಕಗಳನ್ನು ಒಪ್ಪಿಸುಬೇಕೆಂದು ಹುಕುಂ ವಿಧಿಸಿ ಸದರಿ ಗಿರಣಿ ಕಚೇರಿಗಳ ಝಡ್ತಿ ಮಾಡಿ ಲೆಕ್ಕಪತ್ರಗಳ ಪುಸ್ತಕ ಜಪ್ತಿ ಕಮೀಶನರರು ಒಯ್ದಿರುವರು.

ಮುಂಬಯಿ ಕಸ್ತೂರಬಾ ಸ್ಮಾರಕ ನಿಧಿಗೆ ೨೭ನೇ ತಾರೀಕಿನ ವರೆಗೆ ಒಟ್ಟು ೬೨೩೬೭೫ ರೂ. ಕೂಡಿವೆಂದು ಗೌರವ ಕಾರ್ಯದರ್ಶಿಗಳು ಪ್ರಸಿದ್ಧಿಸುತ್ತಾರೆ.

ಅಹಮದಾಬಾದ ಜವಳಿ ಗಿರಣಿ ಕೆಲಸಗಾರರು ೨೭ನೇ ತಾರೀಖಿನ ವರೆಗೆ ಒಂದು ಲಕ್ಷ ರೂ. ಗಿಂತ ಹೆಚ್ಚು ಹಣವನ್ನು ಕಸ್ತೂರಬಾ ಸ್ಮಾರಕ ನಿಧಿಗೆ ನೀಡಿದ್ದಾರೆ.

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ - ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೇವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆ ಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ, ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD. 1931
HEAD OFFICE Mangalore. | BUNDER MANGALORE. | *BRANCHES* Moodabidri & Padubidri.

ANNOUNCEMENT

Deposits accepted at the following rates from 1-4-1944.
Current Accounts (1% from Jan. to June)
(½% from July to Decr.)
Savings bank Accounts 1½% p. a. on daily balances.
Fixed Deposits 6 months 2% p. a.
12 months 2½% p. a.
24 months 3% p. a.
The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low. ★ 2½% Rebate on annual premiums.
★ "Permanent Disability Benefits free of any cost.
★ Payment of double the insured amount in case of death by accident at a very small cost of Rs. 1-8-0 per 1000.
★ Special rebates on large size policies.
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕುಂಟುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 14—7—1944 [ಸಂಚಿಕೆ 28]

'ಕಸ್ತೂರ್ ಬಾ. ನಿಧಿಯಲ್ಲಿ ರಾಜಕೀಯವಿಲ್ಲ'

ಫಿಲಿಪ್ಸ್ ರಾಯಭಾರದ ರಹಸ್ಯ

ಪಂಚಗಣಿಯಲ್ಲಿ ಮಹಾತ್ಮರು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರನ್ನು ಸರಕಾರವು ಬಿಡುಗಡೆಮಾಡುವುದಿಲ್ಲವೆಂದು ನಿರ್ಧರಿಸಿದೆಯೆಂಬುದಾಗಿ ಹೊಸ ದಿಲ್ಲಿಯ ಸುದ್ದಿ. ಗಾಂಧೀಜಿಯವರು ಮೊದಲು ದೇಶದ ಆಹಾರ ಸಮಸ್ಯೆಯನ್ನೂ ಆ ಮೇಲೆ ಇನ್ನಿತರ ಸಮಸ್ಯೆಗಳನ್ನೂ -ಆಲೋಚಿಸುವರೆಂದೂ ಅವರ ಮನೋಭಿಪ್ರಾಯ ಬಲ್ಲವರು ಹೇಳುತ್ತಾರೆ. ಆದರೆ ಈ ಆಂತರಿಕ ಸಮಸ್ಯೆಗಳು ಸರಿಯಾಗಿ ಪರಿಹರಿಸಬೇಕಾದರೆ ಅವರಿಗೆ ಸಾಕಷ್ಟು ಅಧಿಕಾರವಿರಬೇಕಾಗುದು ಅವಶ್ಯ ಅಂತೂ ರಾಷ್ಟ್ರೀಯ ಸರಕಾರ ಸ್ಥಾಪಿತವಾದರೆ ಗಾಂಧೀಜಿಯವರು ಈ ಪ್ರಯತ್ನ ಮಾಡಬಹುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರು ಹಾಗೂ ಇತರ ಮುಖಂಡರು ಸೆರೆಮನೆಯಲ್ಲಿರುವ ವರೆಗೆ ಗಾಂಧೀಜಿ ಯಾವ ತರದ ವಿಧಾಯಕ ಕಾರ್ಯಕ್ರಮಕ್ಕೆ ಕೈಹಚ್ಚುವುದೂ ಸಾಧ್ಯವಿದ್ದಂತೆ ತೋರುವುದಿಲ್ಲ. ದೇಶದ ಆಹಾರ ಪರಿಸ್ಥಿತಿಯಿಂದಾಗಿ ಗಾಂಧೀಜಿಯವರು ತುಂಬಾ ಚಿಂತೆಗೊಳಗಾಗಿರುವರೆಂದು ಇತ್ತೀಚೆಗೆ ಅವರೊಡನೆ ಮಾತುಕತೆ ನಡೆಸಿದವರೆಲ್ಲರೂ ಹೇಳುತ್ತಾರೆ. ಅವರ ವಿಚಾರವು ಹೀಗಿರುವಾಗ ಪುನಃ ಅವರು ಆಂದೋಲನ ನಡೆಸಲು ಮನಸ್ಸು ಮಾಡಲಾರರು. ಹಾಗೂ ಪುನಃ ಬಂಧನಾಪೇಕ್ಷಿಗಳಾಗಲಿಕ್ಕಿಲ್ಲವೆಂದೂ ಬಲ್ಲವರು ಹೇಳುತ್ತಾರೆ. ಆದರೆ ದೇಶಕ್ಕೆ ಸಹಾಯ ನೀಡುವ ಅವರ ಯತ್ನದಲ್ಲಿ ಆತಂಕವಾದರೆ ಅವರು ಪುನಃ ಸೆರೆಮನೆಗೆ ಹೋಗುವ ಕಾರ್ಯಕ್ರಮ ಕೈಕೊಳ್ಳದಿರಲಾರರೆಂದೂ ಊಹೆ ಇದೆ

ಫಿಲಿಪ್ಸ್ ರಾಯಭಾರದಲ್ಲಿ

ನ್ಯೂಯಾರ್ಕ್ ಡೈಲಿಮಿರರ್ ಪತ್ರಿಕೆಯಲ್ಲಿ ಚರ್ಚಿಲರ ಭಾರತೀಯ ಧೋರಣದ ಗುಟ್ಟನ್ನು ಬಯಲುಗೊಳಿಸುವ ಒಂದು ಲೇಖವು ಪ್ರಕಟವಾಗಿದೆ. ಅದರಲ್ಲಿ, ಭಾರತದ ಪ್ರಶ್ನೆಯ ಕುರಿತು ಚರ್ಚಿಲರಂತೆ ರೂಸ್‌ವೆಲ್ಟರೂ ಏಕೆ ಮೌನದಿಂದಿರುವರೆಂಬ ವಿಚಾರ ವಿವರಿಸಲಾಗಿದೆ. ಹದಿನೆಂಟು ತಿಂಗಳ ಹಿಂದೆ ಮಹಾತ್ಮರು ಸೆರೆಮನೆಯಲ್ಲಿದ್ದಾಗ ಅಧ್ಯಕ್ಷ ರೂಸ್‌ವೆಲ್ಟರು ತಮ್ಮ ಪ್ರತಿನಿಧಿ ಫಿಲಿಪ್ಸರನ್ನು ಭಾರತಕ್ಕೆ ಕಳುಹಿಸಿದ್ದರು. ಅವರು ಇಲ್ಲಿ ಬೇರೆ ಬೇರೆ ಪಕ್ಷಗಳವರನ್ನು ಕಂಡು ಮಾತನಾಡಿದ್ದಾರೆ. ಆದರೆ ಅವರಿಗೆ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸಿನೊಡನೆ ಸಂಪರ್ಕ ಮಾಡಬೇಕೆಂದೂ ಮನಸ್ಸಿತ್ತು. ಹಾಗೆ ತಿಳಿಸಿ ಅವರ ಅಭಿಪ್ರಾಯ ಸಂದೇಶಗಳನ್ನು ಮಹಾತ್ಮರಿಗೆ ಕಳುಹಿಸಲಾಗಿತ್ತು. ಆದರೆ ಬ್ರಿಟಿಷ್ ಸರಕಾರವು 'ಮಹಾತ್ಮರನ್ನು ಕಾಣಲು ಫಿಲಿಪ್ಸರಿಗೆ ಅವಕಾಶಕೊಡಲಿಲ್ಲ. ಕಡ ಒತ್ತಿ ಕ್ವಾನೂನಿನಂತೆ ಅಮೆರಿಕನರು ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಒದಗಿಸಿ ಕೊಡುತ್ತಿದ್ದರೂ, ಭಾರತ ಆಸ್ಟ್ರೇಲಿಯಾಗಳ ರಕ್ಷಣೆಗೆ ಅಮೆರಿಕ ಸೈನ್ಯವಿಟ್ಟಿದ್ದರೂ ಫಿಲಿಪ್ಸರಿಗೆ ಹೀಗೆ ಆತಂಕ ಮಾಡಿದ್ದು ವಿಚಿತ್ರವಾಗಿದೆ. ೧೯೪೩ರಲ್ಲಿ ಫಿಲಿಪ್ಸರು ಚರ್ಚಿಲರೊಡನೆ ವಾಶಿಂಗ್‌ಟನ್ನಿನಲ್ಲಿ ಚರ್ಚೆನಡೆಸಿದಾಗ ಚರ್ಚಿಲರು ಭಾರತದ ಕುರಿತು ಏನೂ ಹೇಳಲಿಲ್ಲ. ಚರ್ಚಿಲರು ಭಾರತದ ಬಗ್ಗೆ ಉದಾರ ಧೋರಣೆ ತೋರಿಸಬೇಕೆಂದು ರೂಸ್‌ವೆಲ್ಟರು ಹೇಳಿದಾಗ ಚರ್ಚಿಲರು ಭಾರತದ ಕುರಿತು ನಿರ್ಲಕ್ಷ ಧೋರಣ ವಹಿಸಿದ್ದರು. ಆದ್ದರಿಂದ ಭಾರತಕ್ಕೆ ಶಿಷ್ಟಮಂಡಳ ಕಳುಹಿಸುವುದು ವ್ಯರ್ಥವೆಂದು ರೂಸ್‌ವೆಲ್ಟರಿಗೆ ಫಿಲಿಪ್ಸರು ತಿಳಿಸಿದರು. ರೂಸ್‌ವೆಲ್ಟರು ಫಿಲಿಪ್ಸರ ಮೂಲಕ ಮಹಾತ್ಮರಿಗೊಂದು ಸಂದೇಶ ಕಳುಹಿಸಿದ್ದರೆಂದೂ ಆದರೆ ಅದು ಅವರಿಗೆ ತಲುಪಲಿಲ್ಲವೆಂದೂ ಊಹೆಯಿದೆ. ಆದರೆ ಸದ್ಯ ಮಹಾತ್ಮರ ಬಿಡುಗಡೆಯಾಗಿರುವುದರಿಂದ ಅಮೆರಿಕವು ಮಹಾತ್ಮರನ್ನು ಕಾಣಲು ಬ್ರಿಟಿಷ್ ಸರಕಾರ ಅಡ್ಡಿಮಾಡಲಾರದೆಂದು ನಂಬಬಹುದಾಗಿದೆ.

ಪಂಚಗಣಿಯಲ್ಲಿ ಮಹಾತ್ಮರು

ಮಹಾತ್ಮರು ಪೂನದಿಂದ ಈಗ ಪಂಚಗಣಿಗೆ ಬಂದಿರುವರು. ಅಲ್ಲಿ ಅವರು ಕೆಲದಿನ ಇರುವರು. ಆ ಮೇಲೆ ವರ್ಧಾಕ್ಕೆ ತೆರಳಬೇಕೆಂದು ಅವರ ಅಭಿಪ್ರಾಯವಿರುವುದಾಗಿ ಪ್ರಕಟವಾಗಿದೆ. ಪಂಚಗಣಿಯ ಜನಸಂಖ್ಯೆ ಕೇವಲ ಆರುಸಾವಿರವಿದ್ದರೂ ಮಹಾತ್ಮರು ಅಲ್ಲಿಗೆ ಹೋದಂದಿನಿಂದ ಆ ಊರಿನ ಕಳೆ ಏರಿದೆ. ಅಲ್ಲಿನ ಜನರು ಉಲ್ಲಾಸಭರಿತರಾಗಿರುವರು. ದಿನನಿತ್ಯ ವಿಶೇಷ ಜನರು ಅಲ್ಲಿಗೆ ಬರುತ್ತಿದ್ದಾರೆ. ಬಂದವರಿಗೆ ಅಲ್ಲಿ ವಸತಿಗೃಹಗಳನ್ನು ಹುಡುಕುವುದೇ ಕಷ್ಟವಾಗಿದೆ. ಪಂಚಗಣಿಯಲ್ಲಿ ಜನಸಂಖ್ಯೆ ಹೆಚ್ಚಾದ್ದರಿಂದ ಇಲ್ಲಿನ ವ್ಯಾಪಾರಿಗಳು ಅದರ ಪ್ರಯೋಜನ ಪಡೆಯುತ್ತಿದ್ದಾರೆ. ಲಾಭ ಹೆಚ್ಚು ಹೊಂದುತ್ತಿದ್ದಾರೆ. ಎಲ್ಲರೂ ಮಹಾತ್ಮರಲ್ಲಿ ಬಕ್ತಿ ವಿಶ್ವಾಸ ತೋರಿಸುತ್ತಾರೆ. ಇತ್ತೀಚೆಗೆ ಮಹಾತ್ಮರ ಪತ್ರವ್ಯವಹಾರ ಹೆಚ್ಚಾಗತೊಡಗಿದೆ. ದಿನನಿತ್ಯ ಲೆಕ್ಕವಿಲ್ಲದಷ್ಟು ಪತ್ರಗಳು ಬರುತ್ತಿಗೆ ಟಪ್ಪಾಲು. ಅಧಿಕಾರಿಗಳು ಗಾಂಧೀಜಿಯವರ ಬಂಗಲೆಯ ಮುಂದೆ ಒಂದು ಟಪಾಲು ಪೆಟ್ಟಿಗೆಯಿಟ್ಟಿದ್ದಾರೆ. ಇಲ್ಲಿಗೆ ಪತ್ರಿಕೋದ್ಯೋಗಿಗಳೂ ಬರುತ್ತಾರೆ. ತಂತಿ ವ್ಯವಹಾರವೂ ಜೋರಾಗಿದೆ. ಈಗಿನ ತಂತೀ ಆಫೀಸಿನವರಿಂದ ಈ ಅಧಿಕ ಕೆಲಸ ಮಾಡಲಾಗಿದೆ. ಹೆಚ್ಚು ನೌಕರರನ್ನು ಒದಗಿಸಿ ಕೊಡಬೇಕೆಂದು ಅವರು ಮೇಲಧಿಕಾರರಿಗೆ ತಿಳಿಸಿದ್ದಾರೆ. ಮೊದಲ ಎರಡು ದಿನ ಸಂಜೆ ಪ್ರಾರ್ಥನೆಗೆ ತುಂಬಾ ಜನರು ಬಂದಿದ್ದರು. ಈಗ ಹವಾಮಾನ ಒದಲಾಗುವುದರಿಂದ ಮಹಾತ್ಮರು ಹೊರಗೆ ಬರದೆ ಅವರ ದರ್ಶನಾಕಾಂಕ್ಷಿಗಳಿಗೆ ತೊಂದರೆಯಾಗಿರುವುದು

ಕಸ್ತೂರ್ ಬಾ ನಿಧಿ ಸ್ಪಷ್ಟೀಕರಣ

ಕಸ್ತೂರ್ ಬಾ ನಿಧಿಯ ಕೇಂದ್ರ ಸಮಿತಿಯ ಸಭೆಯೊಂದು ಮಹಾತ್ಮರ ಅಧ್ಯಕ್ಷತೆಯಲ್ಲಿ ಸೇರಿತು. ಗಾಂಧೀಜಿಯವರು ಆ ನಿಧಿಯ ಉದ್ದೇಶವನ್ನು ವಿವರಿಸುತ್ತಾ ಹೀಗೆಂದರು 'ಕಸ್ತೂರ್ ಬಾ ಹಳ್ಳಿ ಜೀವನದ ಓರ್ವ ಸರಲ ಸ್ತ್ರೀ, ಹಳ್ಳಿಗರ ಸೇವೆಯೇ ಅವಳ ಪ್ರೀತಿಯ ಕೆಲಸ, ಆದುದರಿಂದ ಈ ನಿಧಿಯ ಹಣವು ಹಳ್ಳಿಯ ಸ್ತ್ರೀಯರ, ಶಿಶುಗಳ ಉದ್ಧಾರಕ್ಕಾಗಿ ಉಪಯೋಗಿಸಲ್ಪಡತಕ್ಕದು. ನಗರ ಪಟ್ಟಣಗಳಲ್ಲಿ ದೇಶವಿದೇಶಗಳ ವಿಶ್ವವಿದ್ಯಾನಿಲಯಗಳನ್ನು ಕಲಿಯುವವರ ಉಪಯೋಗಕ್ಕಾಗಿ ಈ ನಿಧಿ ಉಪಯುಕ್ತವಾಗುವುದು. ಅಖಿಲ ಭಾರತ ಚರಕಾ ಸಂಘದಂತೆ ಇದೂ ಒಂದು ಧರ್ಮಸಂಸ್ಥೆ. ರಾಜಕೀಯ ಉದ್ದೇಶಕ್ಕಾಗಿ ಈ ನಿಧಿ ಉಪಯೋಗಿಸಲ್ಪಡಲಾರದು" ಗಾಂಧೀಜಿ ಹೀಗೆ ಸ್ಪಷ್ಟಪಡಿಸಿದರು. ನಿಧಿಯ ಕರಾರು ಪತ್ರಗಳನ್ನು ತಯಾರಿಸಿಲು, ಶ್ರೀಗಳಾದ ಮುನ್ಶಿ ಮಂಗಲದಾಸ, ಪಕ್ವಾಸ್, ಮತ್ತು ಪಾಮ್ಲಾನ್ ಕರರಿಗೆ ಒಪ್ಪಿಸಲಾಗಿದೆ

ಮಹಾತ್ಮರನ್ನು ಪಂಚಗಣಿಯಲ್ಲಿ ಸರ್ ರಾಧಾಕೃಷ್ಣನ್ ಭೇಟಿಯಾದರು. ಅವರು ಇತ್ತೀಚೆಗೆ ಚೀನಕ್ಕೆ ಹೋಗಿದ್ದು, ಚಿಯಾಂಗರಿಂದ ಗಾಂಧೀಜಿಯವರಿಗೊಂದು ಸಂದೇಶವನ್ನು ತಂದಿದ್ದಾರೆಂದೂ ಊಹಿಸಲಾಗಿದೆ

ಮಹಾತ್ಮರ ವಿನಂತಿಗೆ ವೈಸರಾಯರ ನಕಾರ ಸಿಕ್ಕಿದೊಡನೇ ರಾಜಕೀಯ ವಾತಾವರಣದಲ್ಲಿ ನಿರಾಶೆ ಕವಿದಿದೆ. ಆದರೆ ರಾಜಾಜಿ ಇನ್ನೂ ನಿರಾಶರಾಗಿಲ್ಲ. ಗಾಂಧೀಜಿಯಲ್ಲಿಗೆ, ಅತ್ತಿಂದಿತ್ತ ಓಡಾಡುತ್ತಿದ್ದಾರೆ. ನಿರಾಶರಾಗಬೇಡಿರಿ ಎಂದು ಉಪದೇಶ ಮಾಡುತ್ತಾರೆ.

"ಗಾಂಧಿಜಿಯನ್ನು ಭೇಟಿಮಾಡಲು ವೇವಲ್ ನಿರಾಕರಿಸಿದ್ದರಿಂದ, ಇದು ಈ ಮಹಾಯುದ್ಧದ ದೊಡ್ಡದೊಂದು ಅಪಜಯವಾಗಿದೆ. ಗಾಂಧೀಜಿಯನ್ನು ಬ್ರಿಟಿಷರು ಹಿಟ್ಲರ್ ಜಾತಿಗೆ ಸೇರಿಸಿದ್ದಾರೆ, ಇದು ಪ್ರಮಾದ" ಎಂದು ಪೆಸ್ಸರ್ ಬ್ರಾಕ್‌ವೇ ಹೇಳಿದರು. "ಬ್ರಿಟಿಷ್ ಸರಕಾರ ಸತ್ಯವನ್ನಿದುರಿಸಲು ಅಂಜುತ್ತದೆ'ಯೆಂದೂ ಅಭಿಪ್ರಾಯ ಪ್ರಕಟವಾಗಿದೆ

ಸಲ್ಫಾ ಸಂಜೀವಿನಿಗಳು

ಅನೇಕ ವರ್ಷಗಳ ಪರಿಶ್ರಮದ ಫಲಿತಾಂಶವಾಗಿ, ಮೇಲಿನ ಈ ಸಂಜೀವಿನಿಗಳು ಕಂಡುಹಿಡಿಯಲಾಗಿ, ಇಂದಿಗೆ ಇವು ಮಾನವನ ಉಪಯೋಗಕ್ಕೆ ಧಾರಳವಾಗಿ ದೊರಕುತ್ತಿವೆ. ಈ ಸಂಜೀವಿನಿಗಳ ಶೋಧನದಲ್ಲಿ, ಅಮೇರಿಕಾ, ಇಂಗ್ಲಾಂಡು, ಜರ್ಮನಿ, ಇಂಡಿಯಾ ಮೊದಲಾದ ದೇಶದ ವೈದ್ಯಕೀಯ ಜನರೂ, ರಸಾಯನಾ ವಿಜ್ಞಾನಿಗಳೂ ಬಹಳವಾಗಿ ಪರಿಶ್ರಮಿಸಿರುವರು. ಕ್ಷಯ, ಅತಿಸಾರ, ಆನೆಕಾಲು, ನಂಜು, ಕಜ್ಜಿ, ವಿಷಮಜ್ವರ, ಮಲೇರಿಯಾ ಇತ್ಯಾದಿ ರೂಢಿಯಲ್ಲಿರುವ ಕ್ರಿಮಿಗಳೆ ಕಾರಣವಾಗಿರುವ ರೋಗಗಳಿಗೆ ಈ ಸಲ್ಫಾ ಔಷಧಿಗಳು ರಾಮಬಾಣದಂತೆ. ಮೇಹ ಇತ್ಯಾದಿ ರೋಗಗಳು ಮೇಲೆ ಈ ಔಷಧಿಗಳು ಅತ್ಯಂತ ಪರಿಣಾಮಕಾರಿಯಾಗಿ ಕೆಲಸಮಾಡುತ್ತಿವೆ—ಇವುಗಳಿಗೂ ಹೆಚ್ಚಿನ ತರದೆಂದೆನಿಸುವ—'ಪೆನ್ಸಿಲಿನ್' ಎಂಬ ಔಷಧವನ್ನು ಕಂಡುಹಿಡಿದಾಗಿದೆ. ಆದರೆ ಎಲ್ಲರಿಗೂ ಉಪಯೋಗ ಸಿಕ್ಕುವ ತರದಲ್ಲಿ ಇದರ ಸಿದ್ಧತೆಯು ವ್ಯವಸ್ಥೆಗಳು ಆಗಲಿಲ್ಲ.

The Bank of Mangalore Limited, Mangalore.

ESTD: 1931

HEAD OFFICE Mangalore. BUNDER MANGALORE. *BRANCHES* Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.

12 months 2½% p. a.

24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.



ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

- ★ Premiums are low. ★ 2½% Rebate on annual premiums.
- ★ "Permanent Disability Benefits free of any cost.
- ★ Payment of double the insured amount in case of death by accident at a very smallcost of Rs. 1-8-0 per 1000.
- ★ Special rebates on large size policies.
- ★ A special scheme by which lapsed policies can be revived without paying the arrears
- ★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Offce
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ತೀಕಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 14—7—1944 [ಸಂಚಿಕೆ 28]

'ಕಸ್ತೂರ್‌ಬಾ ನಿಧಿಯಲ್ಲಿ ರಾಜಕೀಯವಿಲ್ಲ'

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರನ್ನು ಸರಕಾರವು ಬಿಡುಗಡೆಮಾಡುವುದಿಲ್ಲವೆಂದು ನಿರ್ಧರಿಸಿದೆಯೆಂಬುದಾಗಿ ಹೊಸ ದಿಲ್ಲಿಯ ಸುದ್ದಿ. ಗಾಂಧೀಜಿಯವರು ಮೊದಲು ದೇಶದ ಆಹಾರ ಸಮಸ್ಯೆಯನ್ನೂ ಆ ಮೇಲೆ ಇನ್ನಿತರ ಸಮಸ್ಯೆಗಳನ್ನೂ ಆಲೋಚಿಸುವರೆಂದೂ ಅವರ ಮನೋಭಿಪ್ರಾಯ ಬಲ್ಲವರು ಹೇಳುತ್ತಾರೆ. ಆದರೆ ಈ ಆಂತರಿಕ ಸಮಸ್ಯೆಗಳು ಸರಿಯಾಗಿ ಪರಿಹರಿಸಬೇಕಾದರೆ ಅವರಿಗೆ ಸಾಕಷ್ಟು ಅಧಿಕಾರವಿರಬೇಕಾದುದು ಅವಶ್ಯ. ಅಂತೂ ರಾಷ್ಟ್ರೀಯ ಸರಕಾರ ಸ್ಥಾಪಿತವಾದರೆ ಗಾಂಧೀಜಿಯವರು ಈ ಪ್ರಯತ್ನ ಮಾಡಬಹುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರು ಹಾಗೂ ಇತರ ಮುಖಂಡರು ಸೆರೆಮನೆಯಲ್ಲಿರುವವರೆಗೆ ಗಾಂಧೀಜಿ ಯಾವ ತರೆದ ವಿಧಾಯಕ ಕಾರ್ಯಕ್ರಮಕ್ಕೆ ಕೈಹಚ್ಚುವುದೂ ಸಾಧ್ಯವಿದ್ದಂತೆ ತೋರುವುದಿಲ್ಲ. ದೇಶದ ಆಹಾರ ಪರಿಸ್ಥಿತಿಯಿಂದಾಗಿ ಗಾಂಧೀಜಿಯವರು ತುಂಬಾ ಚಿಂತೆಗೊಳಗಾಗಿರುವರೆಂದು ಇತ್ತೀಚೆಗೆ ಅವರೊಡನೆ ಮಾತುಕತೆ ನಡೆಸಿದವರೆಲ್ಲರೂ ಹೇಳುತ್ತಾರೆ. ಅವರ ವಿಚಾರವು ಹೀಗಿರುವಾಗ ಪುನಃ ಅವರು ಆಂದೋಲನ ನಡೆಸಲು ಮನಸ್ಸು ಮಾಡಲಾರರು ಹಾಗೂ ಪುನಃ ಬಂಧನಾಪೇಕ್ಷಿಗಳಾಗಲಿಕ್ಕಿಲ್ಲವೆಂದೂ ಬಲ್ಲವರು ಹೇಳುತ್ತಾರೆ. ಆದರೆ ದೇಶಕ್ಕೆ ಸಹಾಯ ನೀಡುವ ಅವರ ಯತ್ನದಲ್ಲಿ ಆತಂಕವಾದರೆ ಅವರು ಪುನಃ ಸೆರೆಮನೆಗೆ ಹೋಗುವ ಕಾರ್ಯಕ್ರಮ ಕೈಕೊಳ್ಳದಿರಲಾರರೆಂದೂ ಊಹೆ ಇದೆ.

ಫಿಲಿಪ್ಸ್ ರಾಯಭಾರದಲ್ಲಿ

ನ್ಯೂಯಾರ್ಕ್ ಡೈಲಿಮಿರರ್ ಪತ್ರಿಕೆಯಲ್ಲಿ ಚರ್ಚಿಲರ ಭಾರತೀಯ ಧೋರಣದ ಗುಟ್ಟನ್ನು ಬಯಲುಗೊಳಿಸುವ ಒಂದು ಲೇಖವು ಪ್ರಕಟವಾಗಿದೆ. ಅದರಲ್ಲಿ, ಭಾರತದ ಪ್ರಶ್ನೆಯ ಕುರಿತು ಚರ್ಚಿಲರಂತೆ ರೂಸ್‌ವೆಲ್ಟರೂ ಏಕಮನದಿಂದಿರುವರೆಂಬ ವಿಚಾರ ವಿವರಿಸಲಾಗಿದೆ. ಹದಿನೆಂಟು ತಿಂಗಳ ಹಿಂದೆ ಮಹಾತ್ಮರು ಸೆರೆಮನೆಯಲ್ಲಿದ್ದಾಗ ಅಧ್ಯಕ್ಷ ರೂಸ್‌ವೆಲ್ಟರು ತಮ್ಮ ಪ್ರತಿನಿಧಿ ಫಿಲಿಪ್ಸರನ್ನು ಭಾರತಕ್ಕೆ ಕಳುಹಿಸಿದ್ದರು. ಅವರು ಇಲ್ಲಿ ಬೇರೆ ಬೇರೆ ಪಂಗಡಗಳವರನ್ನು ಕಂಡು ಮಾತನಾಡಿದ್ದಾರೆ. ಆದರೆ ಅವರಿಗೆ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸಿನೊಡನೆ

ಫಿಲಿಪ್ಸ್ ರಾಯಭಾರದ ರಹಸ್ಯ

ಪಂಚಗಣಿಯಲ್ಲಿ ಮಹಾತ್ಮರು

ಸಂಪರ್ಕ ಮಾಡಬೇಕೆಂದೂ ಮನಸ್ಸಿತ್ತು. ಹಾಗೆ ತಿಳಿಸಿ ಅವರ ಅಭಿಪ್ರಾಯ ಸಂದೇಶಗಳನ್ನು ಮಹಾತ್ಮರಿಗೆ ಕಳುಹಿಸಲಾಗಿತ್ತು. ಆದರೆ ಬ್ರಿಟಿಷ್ ಸರಕಾರವು ಮಹಾತ್ಮರನ್ನು ಕಾಣಲು ಫಿಲಿಪ್ಸರಿಗೆ ಅವಕಾಶಕೊಡಲಿಲ್ಲ. ಕಡ ಒತ್ತಿ ಕ್ಕಾನೂನಿನಂತೆ ಅಮೆರಿಕನರು ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಒದಗಿಸಿ ಕೊಡುತ್ತಿದ್ದರೂ, ಭಾರತ ಆಸ್ಟ್ರೇಲಿಯಾಗಳ ರಕ್ಷಣೆಗೆ ಅಮೆರಿಕ ಸೈನ್ಯವಿಟ್ಟಿದ್ದರೂ ಫಿಲಿಪ್ಸರಿಗೆ ಹೀಗೆ ಆತಂಕ ಮಾಡಿದ್ದು ವಿಚಿತ್ರವಾಗಿದೆ. ೧೯೪೩ರಲ್ಲಿ ಫಿಲಿಪ್ಸರು ಚರ್ಚಿಲರೊಡನೆ ವಾಶಿಂಗ್‌ಟನ್ನಿನಲ್ಲಿ ಚರ್ಚೆನಡೆಸಿದಾಗ ಚರ್ಚಿಲರು ಭಾರತದ ಕುರಿತು ಏನೂ ಹೇಳಲಿಲ್ಲ. ಚರ್ಚಿಲರು ಭಾರತದ ಬಗ್ಗೆ ಉದಾರ ಧೋರಣೆ ತೋರಿಸಬೇಕೆಂದು ರೂಸ್‌ವೆಲ್ಟರು ಹೇಳಿದಾಗ ಚರ್ಚಿಲರು ಭಾರತದ ಕುರಿತು ನಿರ್ಲಕ್ಷ್ಯ ಧೋರಣ ವಹಿಸಿದ್ದರು. ಆದ್ದರಿಂದ ಭಾರತಕ್ಕೆ ಶಿಷ್ಟಮಂಡಳ ಕಳುಹಿಸುವುದು ವ್ಯರ್ಥವೆಂದು ರೂಸ್‌ವೆಲ್ಟರಿಗೆ ಫಿಲಿಪ್ಸರು ತಿಳಿಸಿದರು. ರೂಸ್‌ವೆಲ್ಟರು ಫಿಲಿಪ್ಸರ ಮೂಲಕ ಮಹಾತ್ಮರಿಗೊಂದು ಸಂದೇಶ ಕಳುಹಿಸಿದ್ದರೆಂದೂ ಆದರೆ ಅದು ಅವರಿಗೆ ತಲಪಲಿಲ್ಲವೆಂದೂ ಊಹೆಯಿದೆ. ಆದರೆ ಸದ್ಯ ಮಹಾತ್ಮರ ಬಿಡುಗಡೆಯಾಗಿರುವುದರಿಂದ ಅಮೆರಿಕವು ಮಹಾತ್ಮರನ್ನು ಕಾಣಲು ಬ್ರಿಟಿಷ್ ಸರಕಾರ ಅಡ್ಡಿಮಾಡಲಾರದೆಂದು ನಂಬಬಹುದಾಗಿದೆ.

ಪಂಚಗಣಿಯಲ್ಲಿ ಮಹಾತ್ಮರು

ಮಹಾತ್ಮರು ಪೂನದಿಂದ ಈಗ ಪಂಚಗಣಿಗೆ ಬಂದಿರುವರು. ಅಲ್ಲಿ ಅವರು ಕೆಲದಿನ ಇರುವರು. ಆ ಮೇಲೆ ವರ್ಧಾಕ್ಕೆ ತೆರಳಬೇಕೆಂದು ಅವರ ಅಭಿಪ್ರಾಯವಿರುವುದಾಗಿ ಪ್ರಕಟವಾಗಿದೆ. ಪಂಚಗಣಿಯ ಜನಸಂಖ್ಯೆ ಕೇವಲ ಆರುಸಾವಿರವಿದ್ದರೂ ಮಹಾತ್ಮರು ಅಲ್ಲಿಗೆ ಹೋದಂದಿನಿಂದ ಆ ಊರಿನ ಕಳೆ ಏರಿದೆ. ಅಲ್ಲಿನ ಜನರು ಉಲ್ಲಾಸಭರಿತರಾಗಿರುವರು. ದಿನನಿತ್ಯ ವಿಶೇಷ ಜನರು ಅಲ್ಲಿಗೆ ಬರುತ್ತಿದ್ದಾರೆ. ಬಂಧವರಿಗೆ ಅಲ್ಲಿ ವಸತಿಗ್ರಹಗಳನ್ನು ಹುಡುಕುವುದೇ ಕಷ್ಟವಾಗಿದೆ. ಪಂಚಗಣಿಯಲ್ಲಿ ಜನಸಂಖ್ಯೆ ಹೆಚ್ಚಾದ್ದರಿಂದ ಇಲ್ಲಿನ ವ್ಯಾಪಾರಿಗಳು ಅದರ ಪ್ರಯೋಜನ ಪಡೆಯುತ್ತಿದ್ದಾರೆ. ಲಾಭ ಹೆಚ್ಚು ಹೊಂದುತ್ತಿದ್ದಾರೆ. ಎಲ್ಲರೂ ಮಹಾತ್ಮರಲ್ಲಿ ಭಕ್ತಿ ವಿಶ್ವಾಸ ತೋರಿಸುತ್ತಾರೆ. ಇತ್ತೀಚೆಗೆ ಮಹಾತ್ಮರ ಪತ್ರವ್ಯವಹಾರ ಹೆಚ್ಚಾಗತೊಡಗಿದ್ದು ದಿನನಿತ್ಯ ಲೆಕ್ಕವಿಲ್ಲದಷ್ಟು ಪತ್ರಗಳು ಬರುತ್ತಿಗೆ. ಟಪಾಲು ಅಧಿಕಾರಿಗಳು ಗಾಂಧೀಜಿಯವರ ಬಂಗಲೆಯ ಮುಂದೆ ಒಂದು ಟಪಾಲು ಪೆಟ್ಟಿಗೆಯಿಟ್ಟಿದ್ದಾರೆ. ಇಲ್ಲಿಗೆ ಪತ್ರಿಕೋದ್ಯೋಗಿಗಳೂ ಬರುತ್ತಾರೆ. ತಂತಿ ವ್ಯವಹಾರವೂ ಜೋರಾಗಿದೆ. ಈಗಿನ ತಂತೀ ಆಫೀಸಿನವರಿಂದ ಈ ಅಧಿಕ ಕೆಲಸ ಮಾಡಲಾಗದೆ ಹೆಚ್ಚು ನೌಕರರನ್ನು ಒದಗಿಸಿ ಕೊಡಬೇಕೆಂದು ಅವರು ಮೇಲಧಿಕಾರಿಗೆ ತಿಳಿಸಿದ್ದಾರೆ. ಮೊದಲ ಎರಡು ದಿನ ಸಂಜೆ ಪ್ರಾರ್ಥನೆಗೆ ತುಂಬಾ ಜನರು ಬಂದಿದ್ದರು. ಈಗ ಹವಾಮಾನ ಬದಲಾಗಿರುವುದರಿಂದ ಮಹಾತ್ಮರು ಹೊರಗೆ ಬರದೆ ಅವರ ದರ್ಶನಾಕಾಂಕ್ಷಿಗಳಿಗೆ ತೊಂದರೆಯಾಗಿರುವುದು.

ಕಸ್ತೂರ್‌ಬಾ ನಿಧಿ ಸ್ಪಷ್ಟೀಕರಣ

ಕಸ್ತೂರ್‌ಬಾ ನಿಧಿಯ ಕೇಂದ್ರ ಸಮಿತಿಯ ಸಭೆಯೊಂದು ಮಹಾತ್ಮರ ಅಧ್ಯಕ್ಷತೆಯಲ್ಲಿ ಸೇರಿತು. ಗಾಂಧೀಜಿಯವರು ಆ ನಿಧಿಯ ಉದ್ದೇಶವನ್ನು ವಿವರಿಸುತ್ತಾ ಹೀಗೆಂದರು. 'ಕಸ್ತೂರ್‌ಬಾ ಹಳ್ಳಿ ಜೀವನದ ಓರ್ವ ಸರಲ ಸ್ತ್ರೀ, ಹಳ್ಳಿಗರ ಸೇವೆಯೇ ಅವಳ ಪ್ರೀತಿಯ ಕೆಲಸ, ಆದುದರಿಂದ ಈ ನಿಧಿಯ ಹಣವು ಹಳ್ಳಿಯ ಸ್ತ್ರೀಯರ, ಶಿಶುಗಳ ಉದ್ಧಾರಕ್ಕಾಗಿ ಉಪಯೋಗಿಸಲ್ಪಡತಕ್ಕದು. ನಗರ ಪಟ್ಟಣಗಳಲ್ಲಿ ದೇಶವಿದೇಶಗಳ ವಿಶ್ವವಿದ್ಯಾನಿಲಯಗಳನ್ನು ಕಲಿಯುವವರ ಉಪಯೋಗಕ್ಕಾಗಿ ಈ ನಿಧಿ ಉಪಯುಕ್ತವಾಗುವುದು. ಅಖಿಲ ಭಾರತ ಚರಕಾ ಸಂಘದಂತೆ ಇದೂ ಒಂದು ಧರ್ಮ ಸಂಸ್ಥೆ. ರಾಜಕೀಯ ಉದ್ದೇಶಕ್ಕಾಗಿ ಈ ನಿಧಿ ಉಪಯೋಗಿಸಲ್ಪಡಲಾರದು" ಗಾಂಧೀಜಿ ಹೀಗೆ ಸ್ಪಷ್ಟಪಡಿಸಿದರು. ನಿಧಿಯ ಕರಾರು ಪತ್ರಗಳನ್ನು ತಯಾರಿಸಲು, ಶ್ರೀಗಳಾದ ಮುನ್ಷಿ ಮಂಗಲದಾಸ ಪಕ್ವಾಸ್, ಮತ್ತು ಮಮ್ಲಾನ್ ಕರರಿಗೆ ಒಪ್ಪಿಸಲಾಗಿದೆ.

ಮಹಾತ್ಮರನ್ನು ಪಂಚಗಣಿಯಲ್ಲಿ ಸರ್ ರಾಧಾಕೃಷ್ಣನ್ ಭೇಟಿಯಾದರು. ಅವರು ಇತ್ತೀಚೆಗೆ ಚೀನಕ್ಕೆ ಹೋಗಿದ್ದು, ಚಿಯಾಂಗರಿಂದ ಗಾಂಧೀಜಿಯವರಿಗೊಂದು ಸಂದೇಶವನ್ನು ತಂದಿದ್ದಾರೆಂದೂ ಊಹಿಸಲಾಗಿದೆ.

ಮಹಾತ್ಮರ ವಿನಂತಿಗೆ ವೈಸರಾಯರ ನಕಾರ ಸಿಕ್ಕಿದೊಡನೇ ರಾಜಕೀಯ ವಾತಾವರಣದಲ್ಲಿ ನಿರಾಶೆ ಕವಿದಿದೆ. ಆದರೆ ರಾಜಾಜಿ ಇನ್ನೂ ನಿರಾಶರಾಗಿಲ್ಲ. ಗಾಂಧೀಜಿಯಲ್ಲಿಗೆ, ಅತ್ತಿಂದಿತ್ತ ಓಡಾಡುತ್ತಿದ್ದಾರೆ. ನಿರಾಶರಾಗಬೇಡಿರಿ ಎಂದು ಉಪದೇಶ ಮಾಡುತ್ತಾರೆ.

"ಗಾಂಧಿಜಿಯನ್ನು ಭೆಟಿಮಾಡಲು ವೇವಲ್ ನಿರಾಕರಿಸಿದ್ದರಿಂದ, ಇದು ಈ ಮಹಾಯುದ್ಧದ ದೇವದ್ಧದೊಂದು ಅಪಜಯವಾಗಿದೆ. ಗಾಂಧೀಜಿಯನ್ನು ಬ್ರಿಟಿಷರು ಹಿಟ್ಲರ್ ಜಾತಿಗೆ ಸೇರಿಸಿದ್ದಾರೆ, ಇದು ಪ್ರಮಾದ" ಎಂದು ಪೆನ್ನರ್ ಬ್ರಾಕ್‌ವೇ ಹೇಳಿದರು. "ಬ್ರಿಟಿಷ್ ಸರಕಾರ ಸತ್ಯವನ್ನೆದುರಿಸಲು ಅಂಜುತ್ತದೆ'ಯೆಂದೂ ಅಭಿಪ್ರಾಯ ಪ್ರಕಟವಾಗಿದೆ.

ಸಲ್ಫಾ ಸಂಜೀವಿನಿಗಳು

ಅನೇಕ ವರ್ಷಗಳ ಪರಿಶ್ರಮದ ಫಲಿತಾಂಶವಾಗಿ, ಮೇಲಿನ ಈ ಸಂಜೀವಿನಿಗಳು ಕಂಡುಹಿಡಿಯಲಾಗಿ, ಇಂದಿಗೆ ಇವು ಮಾನವನ ಉಪಯೋಗಕ್ಕೆ ದಾರಳವಾಗಿ ದೊರಕುತ್ತಿವೆ. ಈ ಸಂಜೀವಿನಿಗಳ ಶೋಧನದಲ್ಲಿ, ಅಮೇರಿಕಾ, ಇಂಗ್ಲಾಂಡು, ಜರ್ಮನಿ, ಇಂಡಿಯಾ ಮೊದಲಾದ ದೇಶದ ವೈದ್ಯಕೀಯ ಜನರೂ, ರಸಯನಾ ವಿಜ್ಞಾನಿಗಳೂ ಬಹಳವಾಗಿ ಪರಿಶ್ರಮಿಸಿರುವರು. ಕ್ಷಯ, ಅತಿಸಾರ, ಆನೆಕಾಲು, ನಂಜು, ಕಜ್ಜಿ, ವಿಶಮಜ್ವರ, ಮಲೇರಿಯಾ ಇತ್ಯಾದಿ ದೂಡಿಯಲ್ಲಿರುವ ಕ್ರಿಮಿಗಳೆ ಕಾರಣವಾಗಿರುವ ರೋಗಗಳಿಗೆ ಈ ಸಲ್ಫಾ ಔಷಧಿಗಳು ರಾಮಬಾಣದಂತೆ. ಮೇಹ ಇತ್ಯಾದಿ ರೋಗಗಳು ಮೇಲೆ ಈ ಔಷಧಿಗಳು ಅತ್ಯಂತ ಪರಿಣಾಮಕಾರಿಯಾಗಿ ಕೆಲಸಮಾಡುತ್ತಿವೆ—ಇವುಗಳಿಗೂ ಹೆಚ್ಚಿನ ತರದೆಂದೆನಿಸುವ,—'ಪೆನ್ಸಿಲಿನ್' ಎಂಬ ಔಷಧವು, ಕಂಡುಹಿಡಿದಾಗಿದೆ. ಆದರೆ ಎಲ್ಲರಿಗೂ ಉಪಯೋಗ ಸಿಕ್ಕುವ ತರದಲ್ಲಿ, ಇದರ ಸಿದ್ಧತೆಯು ವ್ಯವಸ್ಥೆಗಳು ಆಗಲಿಲ್ಲ.

ವಿಗಾರಿಸಿದ್ದರೂ, ಹಿಟ್ಲರನಿಂದ ಜರ್ಮನ್ ಹಾವಳಿಯಿಂದಲೂ ಆತನ ನಿರ್ಧಾರ ಬ್ರಿಟನಿಗೆ ಗಂಡಾಂತರ ತಪ್ಪಿದ್ದಲ್ಲವೆಂದೂ ಜರ್ಮನಿಗಳ ಯಂತ್ರ ಕೌಶಲ್ಯದಲ್ಲಿರುವ ಕಾರ್ಯಗಳು ನಮಗೆ ವಿದಿತವಾಗಿ ಅವರು ಸರಿಯಾದ ಸಮಯದಲ್ಲಿ ಬುದ್ಧಿವಂತಿಕೆ ಮತ್ತಾರಿಗಿಲ್ಲವೆಂಬುದನ್ನು ತಿಳಿ. ಆದರೆ ಚರ್ಚಿಲರು ಸ್ಪಷ್ಟವಾದ ರೀತಿಯವರು. ಅಂತೆಯೇ ಹಿಟ್ಲರ್ ಹಿಟ್ಲರನು ಸಾಂದ್ವಾನ. ಆದ್ದರಿಂದ ಗೆಳ್ಳಾಗಿದ್ದಾರೆ. ಹಿಟ್ಲರನು ಎಂಥಾ ಖರೀ ಭಾಷಣಗಳು ನಮಗೆ ಯುದ್ಧಗತಿ

ಸ್ವದೇಶಾಭಿಮಾನಿ

ತಾರೀಖು 14—7—1944

ಇಂದು ತಾತ್ಕಾಲಿಕವಾಗಿ ಒದಗಬಹುದಾದ ಯಾವುದೇ ಸೋಲುಗೆಲವುಗಳಿಂದಲೂ ಯುದ್ಧಗತಿಯನ್ನು ನಿರ್ಣಯಿಸಕೂಡದೆಂದೂ, ಜರ್ಮನ್ ರಾಷ್ಟ್ರ ಎಂದೆಂದೂ ಶರಣು ಆಗದೆಂದೂ, ಅಂತ್ಯವಿಜಯವನ್ನು ಜರ್ಮನರು ತಮ್ಮ ಅದ್ಭುತ ಯಂತ್ರ ಕೌಶಲ್ಯದಿಂದ ಗಳಿಸಿಕೊಳ್ಳುವರೆಂದೂ ಹಿಟ್ಲರ್ ಭರವಸೆ ಪಟ್ಟಿದ್ದಾನೆ.

ಕ್ರೂರ ಕಾರ್ಯಕ್ಕೂ ಹಿಂಜರಿಯಲಾರನೆಂದೂ, ಆದ್ದರಿಂದ ಇನ್ನು ಮುಂದಾದರೂ ಈ ಹಾರುವ ವಿಮಾನಗಳಿಂದ ಯನ್ನು ತಿಳಿಸಲು ತುಂಬಾ ಸಹಕಾರಿಯಾಗಿವೆ.

ಇನ್ನು ಮುಂದೇನು?

ಮಹಾತ್ಮಾಗಾಂಧಿಯವರನ್ನು ಬಿಡುಗಡೆ ಮಾಡಿದ್ದರಿಂದ ದೇಶದ ರಾಜಕೀಯದಲ್ಲಿ ಬದಲಾವಣೆಯಾಗಬಹುದೆಂದು ಕೆಲವರು ಕಟ್ಟಿಕೊಂಡಿದ್ದ ಗಾಳಿಗೋಪುರವಿಂದು, ವೇವಲರು ಅವರಿಗಿತ್ತ ನಕಾರಾತ್ಮಕ ಉತ್ತರದಿಂದಾಗಿ ಕುಸಿದು ಬಿದ್ದಿರುವುದು. ಪುನಃ ಎಲ್ಲರ ಕಣ್ಣಿಗೂ ಅಂಧಕಾರವೇ ಕವಿದಿದೆ. ದೇಶದ ರಾಜಕೀಯ ಬಿಕ್ಕಟ್ಟು ಕೊನೆಗೊಳ್ಳುವಂತಿಲ್ಲವೆಂಬ ನಿರಾಶೆಯುಂಟಾಗಿದೆ ವೇವಲರು ಗಾಂಧೀಜಿಯವರಿಗಿತ್ತ ನಕಾರಾತ್ಮಕ ಉತ್ತರವು ತುಂಬಾ ಜನರಿಗೆ ಅಸಮಾಧಾನವನ್ನುಂಟುಮಾಡಿದೆ.

ಗಾಂಧೀ ಸರಕಾರಗಳೊಳಗೆ ನಡೆದ ಪತ್ರವ್ಯವಹಾರವು ಪ್ರಕಟವಾಗಿ, ಅದರಲ್ಲಿ ಸರಕಾರವು ಕಾಂಗ್ರೆಸು ಹಾಗೂ ಗಾಂಧಿಯವರ ಮೇಲೆ ಅನೇಕ ಆರೋಪಗಳನ್ನು ಹೊರಿಸಿದ್ದು, ಅಗಸ್ಟ್ ನಿರ್ಣಯವನ್ನು ಹಿಂತೆಗೆಯಬೇಕೆಂದು ಮೊದಲಾಗಿ ಸೂಚಿಸಿತ್ತು. ಆದರೆ ಗಾಂಧೀಜಿಗೆ ಕಾಂಗ್ರೆಸಿನ ಮುಂದಾಳುತನ ಕೊಟ್ಟದ್ದು ಅಖಿಲ ಭಾರತ ಕಾಂಗ್ರೆಸ್ ಸಮಿತಿ. ಆದ್ದರಿಂದ ಕೊನೆಪಕ್ಷ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಭೇಟಿಯಾಗದೆ ಯಾವುದೇ ಅಭಿಪ್ರಾಯ ಬದಲಾವಣೆ ಮಾಡಲೂ ಗಾಂಧೀಜಿ ಯೋಗ್ಯರಾಗುವುದಿಲ್ಲ. ಹ್ಯಾಗಾಗಿ ಅವರು ಸೆರೆಮನೆಯಲ್ಲಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರ ಭೇಟಿಯಾಗಲು ಹಾಗೂ ಈ ವಿಷಯದಲ್ಲಿ ವೇವಲರ ಮನವೊಲಿಸಲು ಅವರದೇ ಭೇಟಿಯಾಗಲು ಗಾಂಧೀಜಿ ಕೇಳಿದ್ದರು. ಇಂಥಾ ಯೋಗ್ಯ ಸೂಚನೆಯು ವೈಸರಾಯ್ ವೇವಲರಿಂದ ತಿರಸ್ಕೃತವಾಗಿದೆ

ಈ ತಿರಸ್ಕಾರದಿಂದ, ವೇವಲರು ಬಂದು ಮಹತ್ವದ ಸಂದರ್ಭವನ್ನು ಕಳೆಕೊಂಡರು. ಗಾಂಧೀಜಿ ನೀಟಿದ ಸ್ನೇಹಹಸ್ತವನ್ನು ಹಿಂದೂಡಿದರು. ಇದು ದೇಶದ ದೌರ್ಭಾಗ್ಯವೇ ಸರಿ!

ಎರಡು ಭಾಷಣಗಳು

ಉಭಯ ಪಕ್ಷಗಳ—ಜರ್ಮನ್ ಬ್ರಿಟನುಗಳ—ಉಭಯ ಧುರೀಣರು—ಹಿಟ್ಲರ್ ಚರ್ಚಿಲರು ಕಳೆದವಾರದಲ್ಲಿ ಎರಡು ಮಹತ್ವದ ಭಾಷಣಗಳನ್ನಿತ್ತರು; ಈ ಎರಡು ಭಾಷಣಗಳಿಂದ ನಾವು ಜರ್ಮನ್ ಬ್ರಿಟನುಗಳ ಮನೋಗತಿಯನ್ನು, ಅಕ್ಷಮಿತ್ರ ಪಕ್ಷಗಳ ಯುದ್ಧಗತಿಯನ್ನೂ ತಿಳಿದುಕೊಳ್ಳಲು ಸಾಧ್ಯವಾಗಿದೆ.

ಹಿಟ್ಲರನು ಕಳೆದ ಐದನೆಯ ತಾರೀಕಿನೆಂದು ಭಾಷಣವಿತ್ತನು. ಜರ್ಮನಿಯ ಶಸ್ತ್ರಾಸ್ತ್ರ ಕುಶಲರು ಕೂಡಿದ ಸಭೆಯಲ್ಲಿ ಈ ಭಾಷಣವಾಯಿತೆಂದು ವರದಿಯಾಗಿದೆ. ಹಿಟ್ಲರನ ಮಾತಿನಲ್ಲಿ ಯಂತ್ರ ಕೌಶಲ್ಯದ ಯುದ್ಧದಿಂದಲೇ ಇಂದಿನೀ ಮಹಾಯುದ್ಧದ ವಿಜಯವೆಂದು ಹೇಳಿದುದೇ ಮುಖ್ಯ ವಿಷಯ; ಜರ್ಮನರನ್ನು ಯಂತ್ರ ಕೌಶಲ್ಯದಲ್ಲಿ ಕೆಲಮಟ್ಟಿಗೆ ಮಿತ್ರರು ಸರಿಗಟ್ಟುವುದಿದ್ದರೂ, ಕೆಲಮಟ್ಟಿಗೆ

ಹಿಟ್ಲರನು ತನ್ನ ಭಾಷಣದಲ್ಲಿ ಯಂತ್ರ ಕೌಶಲ್ಯದ ಯುದ್ಧಕ್ಕೆ ಇಷ್ಟೊಂದು ಮಹತ್ವ ಕೊಡುವುದನ್ನು ವಿಚಾರಿಸುವಾಗ, ಇಂದು ಆತನ ಹಾರುವ ವಿಮಾನಗಳು, ವೈಮಾನಿಕರಿಲ್ಲದ ವಿಮಾನಗಳು ಬ್ರಿಟನಿನ ಮೇಲೆ ಧಾಳಿಯಿಡುತ್ತಿರುವುದನ್ನು ಗಮನಿಸುವಾಗ್ಯ ಹಿಟ್ಲರ್ ಯಾವುದೇ ತರದಿಂದಲೂ, ನ್ಯಾಯಾನ್ಯಾಯ ಗಮನಿಸದೆ ದಂಸ ಕಾರ್ಯಕ್ಕೆ ಇಳಿದಿರುವನೆಂದು ಅರ್ಥವಾಗುತ್ತದೆ. ಇಂದಿಗೆ ಬ್ರಿಟನಿನ ಮೇಲೆ ಆಗುತ್ತಿರುವ ಈ ಹಾರುವ ವಿಮಾನಗಳ ಹಾವಳಿ ಅಗಣಿತವೆಂಬುದನ್ನೂ ಇದರಿಂದ ಬ್ರಿಟನಿಗೆ ಗಂಡಾಂತರವಿದೆಯೆಂಬುದನ್ನೂ ಚರ್ಚಿಲರು ಕಳೆದ ಆರನೇ ತಾರೀಕಿನಂದು ಕಾಮನ್ಸ್ ಸಭೆಯಲ್ಲಿ ಕೊಟ್ಟ ವಿವರಗಳಿಂದ ನಾವು ತಿಳಿದುಕೊಳ್ಳಬಹುದು.

ಚರ್ಚಿಲರು ತಮ್ಮ ಭಾಷಣದಲ್ಲಿ ಪ್ರಾಮುಖ್ಯವಾಗಿ ಹೇಳಿದ ವಿಷಯವು ಅದೇ ಆಗಿದೆ. ಜರ್ಮನರು ಹಾರುವ ವಿಮಾನಗಳನ್ನು ಈಗ ಬ್ರಿಟನಿನ ಮೇಲೆ ಕಳುಹಿಸಿ ಧಾಳಿ ಮಾಡುತ್ತಿದ್ದಾರೆ, ಇದನ್ನು ಜನರು ದುರ್ಲಕ್ಷಿಸಬಾರದು, ಹಾರುವ ವಿಮಾನಗಳಿಂದ ಬ್ರಿಟನಿಗೆ, ಗಂಡಾಂತರ ಒದಗುವ ಸಂಭವವಿದೆ ಎಂಬೀ ವಿಷಯಗಳನ್ನು ಚರ್ಚಿಲರು ಸ್ಪಷ್ಟಪಡಿಸುತ್ತಾ ಇಂದಿನೀ ಧಾಳಿಯ ಹಾನಿಯಷ್ಟೆಂಬುದರ ಕುರಿತು ಕೆಲವು ವಿವರಗಳನ್ನು ಕೊಟ್ಟಿದ್ದಾರೆ.

ಹಿಟ್ಲರನ ಭಾಷಣವನ್ನು ಕೇಳಿದರೆ ಆತ ಕೆರಳಿದಂತೆ ತೋರುತ್ತದೆ, ಏಕೆಂದರೆ ಯಂತ್ರಕೌಶಲ್ಯದಿಂದಲೇ ಯುದ್ಧ ಗೆಲಬೇಕೆಂಬ ಆತನ ಮಾತಿನಿಂದಲೂ, ಅಮಾನುಷವಾದ ಹಾರುವ ವಿಮಾನಗಳನ್ನು ಕಳುಹಿಸಿ ಆತನಿಂದು ಮಾಡುತ್ತಿರುವ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 66/44.

ವಿ. ಪಿ. ಮೂಸ ಕುಂಞಮ್ಮದೆ ಅಲಿಯ ತೆಂಕು ತ್ರಿಕರಪೂರು ಗ್ರಾಮದಲ್ಲಿರುವವ—ಅರ್ಜಿದಾರ

ಮತ್ತು

1. ವಿ. ಟಿ ಇಬ್ರಾಯಿಸ, 2. ವಿ ಟಿ ಕುಂಞ ಹಸನೆ, 3. ವಿ ಟಿ. ಖದೀಜಾಬಿ, 4. ಹುಸನ ಕುಂಞ, ವಿ. ಪಿ. ಮಹಮ್ಮದೆಹಾಜಿ ಮಕ್ಕಳು ತೆಂಕು ತ್ರಿಕರಪೂರು ಗ್ರಾಮದಲ್ಲಿರುವವರು—

ಎದ್ರುರು.

ಮೃತಪಟ್ಟ ಕಾರ್ನವನ ವಿ. ಪಿ. ಮಹಮ್ಮದ ಹಾಜಿಯು ಮಂಗಳೂರು ಇಂಪೀರಿಯಲ್ ಬ್ಯಾಂಕಿನಲ್ಲಿ L No. 7/219ನೇಗೆ ರೂಪ್ಯಾ 225-0-0ಕ್ಕೆ ಇಟ್ಟ ನಗಗಳನ್ನು ಪಡಕೊಳ್ಳುವರಿ, ತನಗೆ ವಾರ್ಸಿ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಅರ್ಜಿಯು ತಾರೀಕು 17-7-1944ಕ್ಕೆ ಇಟ್ಟದೆಂಬ ಸಂಗ್ತಿಯು ಈ ಮೂಲಕ ತಿಳಿಸೋಣಾಗುತ್ತದೆ.

ಕಾಸರಗೋಡು, 4-7-44. | K. Devadas Shenai, Vakil for Petitioner.

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಶ್ಯದ ರಣರಂಗದಲ್ಲಿ, ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರ್ಕಾರ ದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಕಾಲ ಬದಲಾಗಿದೆ!

1780ರ ಸುಮಾರಿಗೆ ಅಬ್ರಾಹಾಂ ಲೂಯಿಸ್ ಬ್ರೆಗಟ್ ಓವರ್ ಕ್ವಾಲ್ ಹೇ ಸ್ಪ್ರಿಂಗ್ ಕಂಡುಹಿಡಿದ.



ಬಿಜೋ ಮಿನಿಯೇಚರ್ 'ಡಿ' 18 ಕ್ಯಾ ಗಟಿ ಚಿನ್ನ, ಭಾರದ, ಮುಚ್ಚಳ ... . ರೂ. 400



ಬಿಜೋ ಸೆಮಿಥಿನ್ 8‴ರ ಆಕಾರ, 18ಕ್ಯಾ. ಗಟ್ಟಿ ಚಿನ್ನ, ಭಾರದ ಮುಚ್ಚಳ ... ರೂ. 310

ಹೇಯರ್ ಸ್ಪ್ರಿಂಗ್ ತೂಕದಚಕ್ರವನ್ನು ಆಟೋಪಿಸುತ್ತದೆ. ಅದು ನಿರ್ಮಾಣವಾದ ಆ ಉಕ್ಕಿನ ದಪ್ಪ ಮನುಷ್ಯನ ಕೂದಲಿನ ಮೂರರಲ್ಲಿ ಒಂದು ಪಾಲಷ್ಟು ಮಾತ್ರ. ಭಾರತದ ಜನತೆಗಾಗಿ ವೆಸ್ಟ್ ಎಂಡ್ ವಾಚುಗಳನ್ನು ತಯಾರಿಸುವ ಆ ಕುಶಲ ಕೆಲಸಗಾರರಂಥವರೇ ಇಂಥ ಈ ಸೂಕ್ಷ್ಮ ಭಾಗವನ್ನು ನಿರ್ಮಿಸಿ ಜೋಡಿಸುವವರು.

ಆಕ್ರಮಣದ ತಲ್ಲೋಣದಿಂದ ಪ್ರಕಟಣೆಯ ಮಾದರಿಗಳೆಲ್ಲ ದೊರೆಯದಾದರೂ ಸ್ಟಾಕಿನಲ್ಲಿರುವಷ್ಟು ಆರ್ಡರು ಪೂರೈಸಲು ಪ್ರಯತ್ನಗೀವೆ.

WEST END WATCH Co.

Bombay — *Calcutta*

ವೆಸ್ಟ್ ಎಂಡ್ ವಾಚ್ ಕೊ., ಬೊಂಬಾಯಿ ಮತ್ತು ಕಲ್ಕತ್ತೆ.

ನಾರ್ಮಂಡಿಯಲ್ಲಿ ಹೋರಾಟವಾಗುತ್ತಿದೆ; ಅಲ್ಲಿನ ಲಾಹವ್ವಾಯ ನಗರದಲ್ಲಿ ಘೋರ ಸಂಗ್ರಾಮವಾಗುತ್ತಿರುವುದು. ಅಮೆರಿಕನ್ ಸೈನಿಕರು ಎರಡು ಸಲವೂ ನಗರದೊಳಗೆ ಪ್ರವೇಶಿಸಲು ಜರ್ಮನರನ್ನು ಎರಡೂ ಬಾರಿಯೂ ಹಿಂದಕ್ಕಟ್ಟಿದರು. ಇಲ್ಲಿನ ರಸ್ತೆಗಳಲ್ಲಿ ಹಸ್ತಾ ಹಸ್ತಿ ಯುದ್ಧ ನಡೆಯುತ್ತಿರುವುದು. ಅಮೆರಿಕನರು ವೀರೆ ನದಿಯ-ಪ್ರದೇಶದಲ್ಲಿ ಹೊಸ ಧಾಳಿ ಕೈಕೊಂಡು ವೀರೆ ನದಿಯನ್ನು ದಾಟಿ ಎರಡು ಸಾವಿರ ಅಡಿ ಮುಂದಡಿಯಿಟ್ಟಿರುವರು ಜರ್ಮನರ ಪ್ರತಿ ಭಟನೆಯು ಇಲ್ಲಿಯೂ ಬಹಳ ಉಗ್ರವೂ ಕಠೋರವೂ, ಪೀಡಕಾರಕವೂ ಆಗಿರುವುದು.

ಕಾಪ್ರಿಕೆಟ್ ವಿಮಾನ ಗೃಹವು ಜರ್ಮನರ ಸ್ವಾಧೀನವೇ ಇದೆ ಈ ಭಾಗದಲ್ಲಿ ಮಹಾ ಭೀಕರ ಕಾಳಗವಾಗುತ್ತಿರುವುದು, ಉಭಯ ಪಕ್ಷದವರೂ ಧಾಳಿ ಪ್ರತಿ ಧಾಳಿ ನಡೆಸುತ್ತಿದ್ದಾರೆ ಒಬ್ಬರಿಗೂ ಇನ್ನೊಬ್ಬರ ವ್ಯೂಹ ಮುರಿದು ಮುಂದೆ ಹೋಗಲು ಆಗುವುದಿಲ್ಲ ಕೆಯಿನ್ ರಣರಂಗಕ್ಕೆ ಜರ್ಮನರು ಅಸಂಖ್ಯ ಸೈನ್ಯ ಸಾಮಾಗ್ರಿ ಕಳುಹಿಸಿದ್ದಾರೆ.

ಇತ್ತೀಚೆಗೆ ಬಂದ ವರದಿಯಂತೆ ಜರ್ಮನರು ಅತ್ಯುಗ್ರವಾಗಿ ಪ್ರತಿಭಟಿಸಿದ್ದರಿಂದ ಮಿತ್ರ ಸೇನೆಯು ಲಾಹವಾಯಿಯಿಂದ ಹಿಂದೆ ಸರಿದು ನಗರವನ್ನು ಕಾದು ಹೋಗಿವೆಯೆಂದು ತಿಳಿದು ಬರುತ್ತದೆ. ಜರ್ಮನರು ಈ ಪ್ರದೇಶದಲ್ಲಿ ಟೇಂಕ್ ಬಲದ ಸಹಾಯದಿಂದ ನಗರದೊಳಗೆ ಕಾದಾಡಿ ಅಮೆರಿಕನ್ ಸೈನಿಕರನ್ನು ಹಿಂದಕ್ಕಟ್ಟಿದರು ಕಾರೆಂಟೈನಿನ ನೈಋತ್ಯದಲ್ಲಿ ಮಾಡಿದ ಶತ್ರು ಪ್ರತಿ ಭಟನೆಯಿಂದ ಅಮೆರಿಕನ್ ಬಲಗಳು ಶತ್ರುವನ್ನು ಹಿಂದಕ್ಕಟ್ಟಿದವು

ಫೀಲ್ಡ್ ಮಾರ್ಶಲ್ ರಂಡಸ್ಟನರು ನಿವೃತ್ತರಾದುದರಿಂದ ಅವರ ಸ್ಥಾನದಲ್ಲಿ ಮಾರ್ಶಲ್ ವಾನ ಕ್ಲೂಸರನ್ನು ಹಿಟ್ಲರನು ನೇಮಿಸಿರುವನೆಂದು ತಿಳಿದೆ ಚೆರ್ಬರ್ಗ ವ್ಯೂಹದಲ್ಲಿ ಮಿತ್ರ ಸೇನೆಗಳು ಶತ್ರುವಿನ ಭೀಕರ ಪ್ರತಿಭಟನೆಯನ್ನು ಎದುರಿಸಿ ಮುನ್ನುಗಿವೆ ಕರಾವಳಿಯ ಭಾಗದಲ್ಲಿಯೂ ಪ್ರಗತಿಯಾಗಿದೆ. ಕೇನ್ ಭಾಗದಲ್ಲಿ ಶತ್ರು ಪ್ರತಿ ಭಟನೆ ಜೋರಾಗಿದೆ ಉತ್ತರ ಫ್ರಾನ್ಸ್ ಮತ್ತು ಇನ್ನಿತರ ಶತ್ರು ಪ್ರದೇಶಗಳ ಮೇಲೂ ಧಾಳಿಯಾಗಿದೆ ಆಂತರಿಕ ಫ್ರೆಂಚ್ ಸೇನೆಗಳು ಜರ್ಮನರಿಗೆ ಅಲ್ಲಲ್ಲಿ ಪ್ರತಿಭಟನೆಯಿತ್ತು ವಿಶೇಷ ಹಾನಿ ಮಾಡಿದೆ

ಹಿಟ್ಲರ್ ಚರ್ಚಿಲರು

ಈ ವಾರದಲ್ಲಿ ಭಾಷಣ ಮಾಡಿದರು ಸಾಧಾರಣ ಯುದ್ಧ ಪ್ರಾರಂಭವಾದ ಮೊದಲ್ಗೊಂಡೇ ಹೀಗೆ ಉಭಯ ಪಕ್ಷದ ಮುಂದಾಳುಗಳು ಜತೆಜತೆಯಾಗಿ ತಮ್ಮ ಭಾಷಣ ಮಾಡುತ್ತಿದ್ದಾರೆ ಇದರ ಜತೆಗೆ ಒಡನೆಯೇ ಸ್ಟಾಲಿನ್ ರೂಸ್‌ವೆಲ್ಟರೂ ತಮ್ಮ ದನಿ ಗೂಡಿಸುತ್ತಾರೆ ಮುಸಲನಿ ಪದಚ್ಯುತನಾಗಿ ಸದ್ಯ ಆತನ ದನಿ ತುಸು ಅಡಗಿದೆ. ಅಂತೂ ಚರ್ಚಿಲ್ ಹಿಟ್ಲರರು ಈ ವಾರ ಉದ್ದಾಮ ಭಾಷಣಗಳನ್ನಿತ್ತರು. ಹಿಟ್ಲರ್ ತಾ ಜಕ್ಕೆ ಮಾಡಿದ ಭಾಷಣದ ನಂತರ ಮೂರು ದಿನವೇ ಚರ್ಚಿಲರು ಭಾಷಣ ಮಾಡಿರುವರು.

ಹಿಟ್ಲರನು ಸದ್ಯದ ಯುದ್ಧವನ್ನೀಗ ಯಂತ್ರ ಕೌಶಲ್ಯದಿಂದ ಗೆಲ್ಲುವ ಭರವಸೆಯುಳ್ಳವನೆಂದು ಆತನ ಭಾಷಣದಿಂದ

ಸಮರ ಭೂಮಿಯ ಸಂಚಾರ

'ಹಾರುವ ವಿಮಾನಗಳಿಂದ ಗಂಡಾಂತರವಿದೆ'

ಯಂತ್ರ ಕೌಶಲ್ಯದಿಂದ ಗೆಲ್ಲುವೆವು

ಅರಬರ ಯೆಹೂದಿ ದ್ವೇಷ!

ವ್ಯಕ್ತವಾಗುತ್ತದೆ ಈಗಾಗಲೇ ಹಾರುವ ವಿಮಾನಗಳಿಂದ ಹೊಸ ತರದ ಯಂತ್ರ ಕೌಶಲ್ಯದಿಂದ ಹಿಟ್ಲರನು ಬ್ರಿಟನನ್ನು ತುಸು ನಡುಗಿಸಿದ್ದಾನೆ

ಯಂತ್ರ ಕೌಶಲ್ಯದಿಂದ ಜಯ

"ಜಗದ್ವ್ಯಾಪ್ತಿಯುಳ್ಳ ಹೋರಾಟದಲ್ಲಿ ತಾತ್ಕಾಲಿಕ ಸೋಲು ಗೆಲವುಗಳು ನಿರ್ಣಾಯಕಗಳಲ್ಲ, ಜರ್ಮನ್ ಜನಾಂಗದ ಈ ಕೊನೆಯ ಯುದ್ಧದಲ್ಲಿ ವಿಶ್ರಾಂತಿಯಿಲ್ಲದೆ ದುಡಿವುದು ಪ್ರತಿಯೊಬ್ಬ ಜರ್ಮನೆಯನ ಕರ್ತವ್ಯವಿದೆ ಇಂದಿನಂತಹ ಗಂಡಾಂತರದಿಂದ ಪಾರಾಗಬೇಕಾದರೆ ಆತ್ಮ ಶಕ್ತಿ ಮತ್ತು ದೃಢ ಮನಸ್ಸು ಅವಶ್ಯ ನಾವು ಶರಣು ಹೋಗುವುದು ಸಾಧ್ಯವೇ ಇಲ್ಲ ನಾಲ್ಕು ವರ್ಷಗಳಿಂದ ನಾವು ವಿಜಯದ ಮೇಲೆ ವಿಜಯಗಳಿಸಿದ್ದೇವೆ ಈಗ ಅವರು ಸೋಲುವರೆಂಬುದು ಅಸಾಧ್ಯ ಈ ಮಹಾ ಯುದ್ಧದ ಜಯವು ಕೇವಲ ಸೈನಿಕರನ್ನು ಹೊಂದಿ ಕೊಂಡಿಲ್ಲ ಯಾಂತ್ರಿಕ ಕೌಶಲವೇ ಜಯದ ಹಾದಿ ಯುದ್ಧ ಪ್ರಾರಂಭವಾದಂದಿನಿಂದ ಯಂತ್ರ ಕೌಶಲ್ಯ ಮಹತ್ವವಾಗಿದೆ ಕೆಲ ಸಂಶೋಧನೆಗಳನ್ನು ಮಿತ್ರರು ಮಾಡಿದ್ದರೂ ಅದರಲ್ಲಿ ನುರಿತ ಜರ್ಮನರು ಎಂದೆಂದೂ ಹಿಂದೆ ಬೀಳಲಾರರು. ಈ ವ್ಯವಸ್ಥೆಯಿಂದ ಯುದ್ಧಗತಿ ಪೂರ್ಣ ಬದಲಾಗುವುದು ಹೀಗೆಂದು ಹಿಟ್ಲರನು ಆರ್ಭಟಿಸಿದ್ದಾರೆ

ಹಾರುವ ವಿಮಾನಗಳ ಭೀತಿ

"ಹಾರುವ ವಿಮಾನಗಳ ಧಾಳಿಯಿಂದ ಗಂಡಾಂತರವಿಲ್ಲವೆಂದು ದುರ್ಲಕ್ಷಿಸುವುದು ಮಹಾ ಪ್ರಮಾದ ನಮ್ಮ ಸರಕಾರ ಇದನ್ನು ಅಲಕ್ಷಿಸಿಲ್ಲ ಇಷ್ಟರ ವರೆಗಿನ ದುರ್ಘಟನೆಗಳನ್ನು ನೋಡಿದರೆ ಗಂಡಾಂತರ ಬಹಳ ವಿದೆಯೆಂದು ತಿಳಿಯುತ್ತದೆ ಫ್ರಾನ್ಸ್ ಮತ್ತು ಜರ್ಮನಿಯ ಮೇಲೆ ನಾವು ವಿಮಾನ ಧಾಳಿ ಮಾಡದಿದ್ದರೆ ಜರ್ಮನರು ಲಂಡನಿನ ಮೇಲೆ ಆರು ತಿಂಗಳ ಮೊದಲೇ ಹಾರುವ ವಿಮಾನಗಳನ್ನು ಕಳುಹಿಸುತ್ತಿದ್ದರು ಮತ್ತೆ ದೊಡ್ಡ ರೀತಿಯಲ್ಲಿ ಧಾಳಿಯಾಗುತ್ತಿತ್ತು "ಹೀಗೆಂದು ಚರ್ಚಿಲರು ಕಾಮನ್ಸಿನಲ್ಲಿ ಭಾಷಣವಿತ್ತರು. ಕಳೆದ ೧೫ ದಿನಗಳಿಂದ ದಿನ ನಿತ್ಯ ನೂರರಿಂದ ನೂರೈವತ್ತರಂತೆ ಹಾರುವ ವಿಮಾನಗಳು ಲಂಡನಿಗೆ ಬಂದು ಇವುಗಳಲ್ಲಿ ಒಂದೊಂದೂ ಟನ್ ಭಾರವಿರುವುದೆಂದೂ ಗಾಳಿಯ ಒತ್ತಡದಿಂದ ಇದರಿಂದ ಬಹಳ ನಷ್ಟವಿದೆಯೆಂದೂ ಚರ್ಚಿಲರು ಹೇಳಿದರು

"ಇದು ಭೀಕರ ಧಾಳಿ, ಇದು ನಮ್ಮ ಸತ್ವ ಪರೀಕ್ಷೆಯಂತಿದೆ, ನಾವಿದರಿಂದ ಚಿಂತೆಗೂ ಒಳಗಾಗಿರುವೆವು ೨೪ ತಾಸುಗಳೂ ಇದರಿಂದ ಎಡೆ ಬಿಡದೆ ಧಾಳಿಯಾಗುತ್ತಿದೆ ಇದು ಜರ್ಮನರ ಅವಿವೇಕದ ಅಸ್ತ್ರ ಆದ್ದರಿಂದ ಪ್ರತಿಯೊಬ್ಬ ಬ್ರಿಟಿಷನೂ ತನ್ನ ಕರ್ತವ್ಯ ಪಾಲಿಸಬೇಕು" ಎಂಬುದಾಗಿಯೂ ಅವರು ಎಚ್ಚರಿಸಿದರು ಹೀಗೆ ಒಟ್ಟಿಸಿ [illegible] ನೋಡಿದರೆ ಹಿಟ್ಲರನ ಭಾಷಣದಲ್ಲಿ ಇನ್ನೂ ಹೆಚ್ಚಿನ ಯಾಂತ್ರಿಕ ಕೌಶಲ್ಯದ ಯುದ್ಧವಾಗುವುದೆಂಬ ಸೂಚನೆಯೂ, ಚರ್ಚಿಲರ ಭಾಷಣದಲ್ಲಿ ಬ್ರಿಟನರಿನ್ನೂ ಹೆಚ್ಚಿನ ಹಾರುವ ವಿಮಾನಗಳ ಪೀಡೆಗೆ ಗುರಿಯಾಗಬೇಕಾದೀತೆಂದೂ ಅಭಿಪ್ರಾಯ ವ್ಯಕ್ತವಾಗುತ್ತದೆ

ಅರಬರ ಯೆಹೂದಿದ್ವೇಷ

ತಮ್ಮ ವ್ಯವಹಾರದಲ್ಲಿ ಯೆಹೂದಿಗಳು ಕೈ ಹಾಕುವ ವಿಚಾರದಲ್ಲಿ ಕಳೆದ ತಿಂಗಳಲ್ಲಿ ಅರಬರು ಇನ್ನೊಂದು ವಿರೋಧ ಪಯತ್ನ ಪ್ರದರ್ಶಿಸಿದರ ಅರಬ [illegible] ತರು ಅಮೆರಿಕದ ರಾಜ್ಯಭಾರಿಯ [illegible] ಲಕ ಅಮೆರಿಕವು ಯೆಹೂದ್ಯರ ಪಕ್ಷವಣಕ್ಕೆ ತನ್ನ ವಿರೋಧ ತೋರಿಸಬೇಕೆಂದು ಸೂಚಿಸಿದ್ದಾರೆ ಮಧ್ಯ ಪೂರ್ವ ಮುಸ್ಲಿಂ ರಾಜ್ಯಗಳಾದ ಸೀರಿಯಾ ಲೆಬನಾನ್ ಮತ್ತು ಇರಾಕ್‌ಗಳಂತೆ ಪಲೆಸ್ತೀನ್ ಕೂಡಾ ವಿಶಾಲ ಅರಬ್ ರಾಷ್ಟ್ರ ನಿರ್ಮಾಣದ ಕನಸು ಕಟ್ಟುತ್ತಿದೆ ಮುಸ್ಲಿಂ ರಾಷ್ಟ್ರಗಳು ಬಹುಕಾಲದಿಂದ ಒಂದು ಅರಬ್ ಮಹಾ ರಾಷ್ಟ್ರ ನಿರ್ಮಾಣದ ದೂರಾಲೋಚನೆಯಲ್ಲಿದ್ದು ಇದರಿಂದಾಗಿ ಆಂಗ್ಲ ಅಮೆರಿಕನ್ ರಾಷ್ಟ್ರಗಳಿಗೂ ತುಂಬಾ ಕಳವಳವುಂಟಾಗಿದೆ ಈ ವಿಚಾರದಲ್ಲಿ ಈಜಿಪ್ಟ್ ಮತ್ತು ಇರಾಕ್‌ಗಳು ಮುಂದುವರಿದು ಕೆಲಸ ಮಾಡುತ್ತಿದ್ದು ಇತರ ಮುಸ್ಲಿಂ ರಾಷ್ಟ್ರಗಳು ಅವುಗಳ ಬೆಂಬಲಕ್ಕಿವೆ.

ಆದರೆ ಈ ಅರಬ್ ಮಹಾ ರಾಷ್ಟ್ರ ನಿರ್ಮಾಣಕ್ಕೆ ಲೆಬನಾನಿನಲ್ಲಿ ತುಂಬಾ ವಿರೋಧವಿದೆ ಇದರಿಂದ ಅದರ ನೆರೆಯ ಮುಸ್ಲಿಂ ರಾಷ್ಟ್ರವಾದ ಸಿರಿಯಕ್ಕೆ ತುಂಬಾ ಚಿಂತೆಯಾಗಿದೆ ಟ್ರಿಪೋಲಿನ ಹಿತವಾದ ಲೆಬನನಿನ ಅಂಶವು ಸಿರಿಯಕ್ಕೆ ಸೇರಬೇಕೆಂದು ಮುಸ್ಲಿಮರ ಅಭಿಪ್ರಾಯವಿದೆ ಇದರಿಂದ ಮಧ್ಯ ಪೂರ್ವ ವ್ಯವಹಾರವು ಇನ್ನಷ್ಟು ಕೆಡುವ ಹೆದರಿಕೆಯಿದೆ ಆದರೆ ಇದುವರೆಗೂ ರೂಸ್‌ವೆಲ್ಟರು ಈ ವಿಚಾರದ ಸರಿಯಾದ ಕಾರ್ಯಕ್ರಮ ಕೈಕೊಂಡಿಲ್ಲ ಏಕೆಂದರೆ ಇದರಲ್ಲಿ ಬ್ರಿಟಿಷರ ಕೈವಾಡವಿದೆ ಪಾಲಸ್ತೀನಿನ ಭವಿಷ್ಯದ ವಿಚಾರ ಯೆಹೂದ್ಯರ ಮತ್ತು ಅರಬರೊಡನೆ ವಿಚಾರಿಸಿ ಕಾರ್ಯಕ್ರಮ ಕೈಕೊಳ್ಳತಕ್ಕದ್ದಿದೆ [illegible] ಮಾಡಲಾಗಿರುವುದು ಆದರೆ ಇತ್ತೀಚೆಗೆ ಯೆಹೂದ್ಯರ ಪೆಲೆಸ್ತೀನಕ್ಕೆ ಹೆಚ್ಚು ಹೆಚ್ಚಾಗಿ ಬಂದು ಅಲ್ಲಿ ವಸತಿ ಮಾಡಿ ಮುಂದೆ ಬಹು ಸಂಖ್ಯೆ ಮಾಡಿಕೊಳ್ಳುವರೆಂಬ ಹೆದರಿಕೆ ಅರಬರದಾಗಿರುವುದು. ಹೀಗಾಗಿ ಅರಬರ ಅಮೆರಿಕಕ್ಕೆ ಈ ಕುರಿತು [illegible] ದೂರು ಕೊಟ್ಟಿರುವುದು ಎಲ್ಲಿ ಹೋದರೂ ಯೆಹೂದ್ಯರು ದುರ್ಭಾಗ್ಯ ಜನರು ಏಕೆಂದರೆ ಅವರ [illegible] ತಮ್ಮಲ್ಲಿ ಸೇರಿಸಿಕೊಳ್ಳುವುದೇ ಇಲ್ಲ!

ಚಿಯಾಂಗ್ ವೆಲ್ಲೇಸರು

ಅಮೆರಿಕದ ಹೆನ್ರಿ ವೆಲ್ಲೇಸರು, ಚೀನದ ದಳಪತಿ ಚಿಯಾಂಗ್ ಕೈಶೇಕರೊಡನೆ ಸಮ್ಮಿಳಿತ ಅಭಿಪ್ರಾಯವೊಂದನ್ನು ಪ್ರಕಟಿಸಿ ಒಂದು ಒಳ್ಳೆಯ ಕೆಲಸ ಮಾಡಿದರು ಅಮೆರಿಕ ಮತ್ತು ಚೀನ ಇವೆರಡು ರಾಷ್ಟ್ರಗಳ ಸಮಾನ ಧ್ಯೇಯ

(೫ನೇ ಪುಟಕ್ಕೆ ಮುಂದುವರಿದಿದೆ)

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara. (1906.

Statement of affairs as on 30th April, 1944.

LIABILITIES	Rs As Ps	ASSETS	Rs As Ps
1 Paid up Capital	13 68 480- 0 0	1 Cash on hand & with bankers in Current & Fixed Deposit A cs	19 71 808 0 1
2 Reserves	4 12 120-12 8	2 Investments on (1) Govt Securities (2) Immovable properties etc	24 26 660 - 9- 9
3 Deposits	67 30 955- 3 4	3 Loans on Jewels & other valuable securities	33 50 167-13-3
4 Due to Bankers	7 34 366-10- 9	4 Loans on personal securities & Bills purchased	20 49 197-13-10
5 Bills for collection	6 70 379- 8- 8	5 Bills for collection as per contra	6 70 379- 8- 8
6 Sundries including revenue items	7 58 745- 8- 4	6 Office premises furniture etc	93 705- 0-10
		7 Sundries including revenue items	1,13,128-13- 4
Total	1 06 75,047-11- 9	Total	1,06,75 047-11- 9

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ಇಲ್ಲ!

ನಗರದ ಕೆಲವು ರೇಶನ್ ಅಂಗಡಿಗಳಲ್ಲಿ ವಾರದ ಕೆಲವು ದಿನಗಳಲ್ಲಿ ಅಕ್ಕಿ ಮುಗಿದುಹೋಯಿತೆಂಬ ನೆವದಿಂದ ಗಿರಾಕಿಗಳನ್ನು ಹಿಂದಿರುಗಿಸಲಾಗಿದೆಯೆಂದು ಸುದ್ದಿ ಪ್ರಕಟವಾಗಿದೆ. ಆದರೆ ಇಂತಹ ವರ್ತಮಾನಗಳು ನಿರಾಧಾರದವುಗಳಾಗಿರಬೇಕು. ಕಾರಣ ಪ್ರತಿ ರೇಶನ್ ಅಂಗಡಿಗೆ ಅಲ್ಲಿ ರಿಜಿಸ್ಟರ್ ಆದ ಕಾರ್ಡುಗಳ ಆಧಾರದ ಮೇಲೆ ಅಕ್ಕಿ ಪರಿಮಾಣವು ಸರಕಾರದಿಂದ ಪೂರೈಸಲಾಗುವುದು. ಅಂದ ಮೇಲೆ ರಿಜಿಸ್ಟರ್ ಆದ ಕಾರ್ಡಿನ ಗಿರಾಕಿಗಳಿಗೆ ನಿರಾಶೆಯಾಗುವ ಯಾವ ಕಾರಣವೂ ಇಲ್ಲ. ಬೇರೆ ಏನಾದರೂ ಕಾರಣಗಳಿದ್ದರೆ ಅತೃಪ್ತಿಗೊಂಡವರು ರೇಶನ್ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಲ್ಲಿ ತಕ್ಕ ಏರ್ಪಾಡಾಗುವುದೆಂದು ನಿರೀಕ್ಷಿಸಲಾಗಿದೆ.

ರೇಶನ್:—ಸಕ್ಕರೆ ಚಿಮಿಣಿ ಎಣ್ಣೆ ಕಾರ್ಡುಗಳು ಹಂಚಲ್ಪಟ್ಟ ಮೇಲೆ, ಯಾವ ಕಾರಣದಿಂದಲೊ ಅನೇಕರಿಗೆ ಯೋಗ್ಯ ಪರಿಮಾಣವೇ ದೊರಕಲಿಲ್ಲವೆಂಬ ಗಲಭೆ ಎದ್ದಿತ್ತು. ಕೂಡಲೇ ಪುನಃ ತೃಪ್ತಿಕರ ದಾಖಲೆ ತಿಳಿಸಿ ಅರ್ಜಿ ಮಾಡಿಕೊಂಡಲ್ಲಿ ಪರಿಸ್ಥಿತಿಯನ್ನು ಪರಿಶೀಲಿಸಲಾಗುವುದೆಂದು ಅಧಿಕಾರಿಗಳು ಪ್ರಕಟಿಸಿದರ ಮೇಲೆ ಸಾವಿರಾರು ಮನವಿಗಳು, ಮುನಿಸಿಪಾಲಿಟಿಯ ಸ್ಪೆಶಲ್ ಕಮಿಟಿಗೆ ಕಳುಹಿಸಲ್ಪಟ್ಟಿವೆಯಾಗಿಯೂ, ಅವುಗಳು ಕ್ರಮವಾಗಿ ಅವಗಾಹಿಸಲ್ಪಡುವುವೆಂದೂ ತಿಳಿದು ಬರುತ್ತದೆ. ಯಾವುದಾದರೂ ಒಂದು ನಿರ್ದಿಷ್ಟ ಲೆಕ್ಕಾಚಾರದ ಮೇಲೆ ರೇಶನ್ ವಸ್ತುಗಳನ್ನು ಸರಿಯಾಗಿ ಹಂಚುವಂತಾಗುವುದು ಒಳಿತೆಂದು ಅಭಿಪ್ರಾಯಪಡಲಾಗಿದೆ.

ಕಟ್ಟಿಗೆ:—ಹೊರಗಡೆಯಿಂದ ಮಂಗಳೂರಿಗೆ ಕಟ್ಟಿಗೆಯನ್ನು ತರಿಸಲು ಪರ್ಮಿಟು ಪಡೆಯಬೇಕಾಗಿಲ್ಲವೆಂದು ಈಗ ಅಧಿಕೃತವಾಗಿ ತಿಳಿದುಬಂದಿರುತ್ತದೆ. ಹೀಗೆ ತರಿಸಿಕೊಂಡರೆ ಒಂದು ವೇಳೆ ನಗರದ ಡಿಪೋಗಳಲ್ಲಿ ದಿನನಿತ್ಯದ ಗಿರಾಕಿಗಳಿಗೆ ಪೂರೈಸಲು ಹೆಚ್ಚು ತೊಂದರೆ ಆಗಲಿಕ್ಕಿಲ್ಲ. ಆದರೆ ಹೊರಗಡೆಯಿಂದ ಸಾಗಿಸಿಕೊಳ್ಳುವರೆ ಖರ್ಚು ತುಂಬಾ ಬೀಳದಿರದು.

ಕೆಲವು ಕಟ್ಟಿಗೆ ಅಂಗಡಿಗಳಲ್ಲಿ ಆಗಲೇ ಇದ್ದ ಸ್ಟಾಕು ಖರ್ಚಾಗಿ ಹೋಗಿರುವುದಾಗಿ ತಿಳಿದುಬರುತ್ತದೆ. ಸಕಾಲದಲ್ಲಿ ಸರಿಯಾದ ಪೂರೈಕೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡುವರಾಗಿ ಹಾರೈಸಲಾಗಿದೆ.

ಮನವಿ

ಕಳೆದ ತಾ. ೭ರಂದು ಕುಂದಾಪುರದ ಕೆಲ ಪ್ರಮುಖರ ಶಿಷ್ಟಮಂಡಲವೊಂದು ಜಿಲ್ಲಾ ಕಲೆಕ್ಟರ್ ಸಾಹೇಬರನ್ನು ಭೇಟಿಯಾಗಿ ತಮ್ಮ ಊರಲ್ಲಿ ರೇಶನ್ ಜ್ಯಾರಿಯಾದ ಪಟ್ಟಣಗಳಿಗೆ ಕಳಿಸಲು ಶೇಖರಿಸಿ ಇರಿಸಲ್ಪಟ್ಟ ೫೦ ಸಾವಿರ ಮುಡಿ ಅಕ್ಕಿಯನ್ನು ಕೊಂಡೊಯ್ಯಬಾರದೆಂದೂ, ಅಕ್ಕಿ ಕಮ್ಮಿ ಬೆಳೆಯುವ ತಮ್ಮ ಊರ ಪ್ರದೇಶಕ್ಕೇ ಬಹಳ ಪರಿಮಾಣದಲ್ಲಿ ಅಕ್ಕಿಯು ಕಮ್ಮಿ ಬೀಳುವುದೆಂತಲೂ ಒಂದು ಮನವಿಯನ್ನು ನಿವೇದಿಸಿಕೊಂಡರೆಂದು ತಿಳಿದು ಬರುತ್ತದೆ.

[illegible] ಮಹಮ್ಮದೀಯರ ದಾಸ್ತಾನಿ [illegible] ಕರು ಎಲ್ಲಾ ಕಾಲಗಳಲ್ಲಿಯೂ ಒಂದಾ [illegible] ವಿಷಯಗಳಲ್ಲಿ ತಮಗೆ ಸರಿಯಾದ ಹಕ್ಕದೃಷ್ಟಿ ಇರುವುದಾಗಿಯೂ, ಒಂದು ವೇಳೆ ಅಲ್ಲಿ ಅಕ್ಕಿ ಕಮ್ಮಿ ಬಿದ್ದಲ್ಲಿ ಕೂಡಲೇ ರಾಗಿ ಕಳುಹಿಸುವ ಏರ್ಪಾಡು ಮಾಡುವರಾಗಿಯೂ ಸಲಹೆ ಇತ್ತಿರುವರಂತೆ.

ಆರೋಗ್ಯ—ಪ್ಲೇಗ್ ರೋಗ ಸಂಬಂಧದಲ್ಲಿ ಮಂಗಳೂರಿಂದ ಹೊರಹೋಗುವ ವಾಹನಗಳಲ್ಲಿನ ಸಾಮಾನುಗಳನ್ನು 'ಗೇಸ್' ಮಾಡುತ್ತಲಿದ್ದುದನ್ನು ಕಳೆದ ತಾ. ೧೧ರ ನಂತರದಿಂದ ನಿಲ್ಲಿಸಲಾಗಿದೆ. ಇದರಿಂದ ರೋಗದ ಬಾಧೆಯನ್ನು ತಡೆಯಲಾಗಿದೆಯೆಂಬ ಭರವಸೆಯನ್ನು ಮಾಡಿಕೊಳ್ಳಬಹುದು. ಆದರೂ ಇಲಿ ಸಂಬಂಧ ಮುಂಜಾಗ್ರತೆಗಳನ್ನು ಆರೋಗ್ಯಾಧಿಕಾರಿಗಳು ತೆಗೆದುಕೊಳ್ಳುತ್ತಲೇ ಇರುವರು. ಮಳೆಯಿಂದಲೂ ಅನೇಕ ಕೆಸರು ಕೊಚ್ಚೆಯ ಸ್ಥಳಗಳು ಶುದ್ಧವಾಗುತ್ತವೆ.

ಈ ಸಂಬಂಧದಲ್ಲಿ ಮೈದಾನಿನಲ್ಲಿರುವ ತಾತ್ಕಾಲಿಕ ವೆಬ್‌ಸ್ಟರ್ ಮಾರ್ಕೇಟು ಇನ್ನೂ ತನ್ನ ಸ್ಥಳಕ್ಕೆ ಬರಲಿಲ್ಲ. ಬೇಗ ಬರಬಹುದಾಗಿ ಹಾರೈಸಲಾಗಿದೆ.

ಹವಾಮಾನ:—ನಗರದಲ್ಲಿ ಈಗೆರಡು ದಿನಗಳಿಂದ ಬಿಡದೆ ಎಂಬಂತೆ ಮಳೆ ಬರುತ್ತಲಿದೆ. ಚಳಿಯೂ ಅನುಭವಕ್ಕೆ ಬರುತ್ತದೆ. ಗಾಳಿ ಬೀಸಾಟವೂ ಬಿರುಸಾಗಿಯೇ ಇದೆ ಎನ್ನಬಹುದು. ಕೆಲವು ಕಡೆ ಸಣ್ಣಪುಟ್ಟ ಗುಡಿಸಲುಗಳಿಗೆ ಹಾನಿ ತಟ್ಟಿದೆಯಾಗಿ ತಿಳಿದುಬರುತ್ತದೆ.

ರಕ್ಷಣೆ:—ವಿಪರೀತ ಮಳೆಯಿಂದ ಮರೋಳಿಯ ಹತ್ತಿರ ಚರಂಡಿಗಳಲ್ಲಿ ರಭಸದ ನೀರು ಹರಿಯುತ್ತಿರುವಾಗ, ಚರಂಡಿಯ ಮೇಲೆ ಹಾಕಲ್ಪಟ್ಟ ಒಂದು ದಾಟು ಹಲಗೆಯ ಮೇಲಿಂದ ಹಾದುಹೋಗುತ್ತಿದ್ದ ಚಿಕ್ಕ ಬಾಲಕನೊಬ್ಬನು ಜಾರಿ ಕೆಳಗಿನ ಸೆಳೆತಕ್ಕೆ ಸಿಕ್ಕಿ ಒಯ್ಯಾಡುತ್ತಿರುವಾಗ ದಾರಿಹೋಕ ಹೊಲೆಯನೋರ್ವನು ಜೀವದ ಹಂಗು ತೊರೆದು ಆ ಅಪಾಯಕರ ನೀರಿನಲ್ಲಿ ಹಾರಿ ಬಾಲಕನನ್ನು ಹಿಡಿಯಲು ಇರ್ವರೂ ಎಳೆದೊಯ್ಯಲ್ಪಟ್ಟರು. ಕಡೆಗೆ ಸಾಹಸಿಗ ಹೊಲೆಯನು ಬದಿಯ ಕಲ್ಲೊಂದನ್ನು ಆಧರಿಸಿ ಬಾಲಕನನ್ನು ಬದುಕಿಸಿದನೆಂದು ತಿಳಿದುಬರುತ್ತದೆ.

ಕಳ್ಳಸಂತೆ—ತಾ. ೧೧ರಂದು ಇಲ್ಲಿಯ ಪುಣ್ಣಗುಡ್ಡೆ ಬಳಿ ಕಳ್ಳಸಂತೆಯಲ್ಲಿ ಪಡೆದದೆಂಬ ೩ ಮಣ ಸಕ್ಕರೆಯನ್ನು ಹಿಡಿಯಲಾಯಿತೆಂದು ತಿಳಿದುಬರುತ್ತದೆ. ಅಕ್ಕಿ ತುಂಬಲ್ಪಟ್ಟ ಚೀಲದಲ್ಲಿ ಈ ಸಕ್ಕರೆ ಅಡಗಿಸಿ ಕೊಂಡೊಯ್ಯಲ್ಪಡುತಿತ್ತು ಎಂದೂ, ಗುಮಾನಿಯಿಂದ ಹಿಡಿಯಲು ಪ್ರಯತ್ನಪಡುವಾಗ ಸಕ್ಕರೆ ಮಾಲಕನು ತಪ್ಪಿಸಿಕೊಂಡು ಓಡಲು ಪ್ರಯತ್ನಿಸಿ ಒಂದು ಗೋಡೆ ಹಾರಿ ಕೆಳಗೆ ಬಿದ್ದು ಕಾಲಿಗೆ ಪೆಟ್ಟಾಗಿದೆ ಎಂದೂ ತಿಳಿದು ಬರುತ್ತದೆ.

ಹಿಡಿಯಲ್ಪಟ್ಟ ಈ ಸಕ್ಕರೆಯು ಯಾವುದೋ ಅಧಿಕೃತ ಸ್ಟೋರಿನಿಂದ ಪಡೆದುದೆಂದು ಹೇಳಲ್ಪಟ್ಟಿದೆಯಾಗಿ ತಿಳಿದು ಬರುತ್ತದೆ. ಇದು ಎಲ್ಲರನ್ನೂ ಆಶ್ಚರ್ಯಗೊಳಿಸಿದೆ. ಅಧಿಕಾರಿಗಳು ಈ ಕಡೆ ಗಮನ ತೋರುವ ಬಗ್ಗೆ ಅಪೇಕ್ಷಿಸಲಾಗಿದೆ.

ಕೊಲೆ—ಕಳೆದ ತಾ. ೬ರಂದು ನಗರದಲ್ಲಿ ಭೀಕರ ಮರಣದ ಘಟನೆ ನಡೆಯಿತು. ಮೈಸೂರು ಗಡೆಯಿಂದ ವ್ಯಾಪಾರದ ಉದ್ದೇಶದಿಂದ ಶ್ರೀ. ಕೃಷ್ಣಾಜಿರಾವ್ (ಹಿಂದಿನ ಕೃಷ್ಣಾ ಸಿನೇಮಾ ಮಾಲಕರು) ಎಂಬವರು [illegible] ಮುಂದಿಗಳಲ್ಲಿ ಒಂದಿಗೆ [illegible] ಅರ್ಥ ಎಂಬವನು ಚೂರಿಯಿಂದ ತಿವಿಯಲ್ಪಟ್ಟವನಾಗಿ ಆಸ್ಪತ್ರೆಯ ಶುಶ್ರೂಷೆ ಹೊಂದುವ ಮೊದಲೇ ರಕ್ತಸ್ರಾವದಿಂದ ಮರಣ ಹೊಂದಿದನು. ಅವನ ಬಳಿ ರೂ. ೨೦೦೦ ಇತ್ತೆಂದು ವಾಗ್ಮೂಲದಲ್ಲಿ ಹೇಳಿರುವನಾಗಿ ನದಂತೆ. ಇಷ್ಟಲ್ಲದೆ ಜೊತೆಯಲ್ಲಿದ್ದ ಇನ್ನೂ ಮೂರು ಮಂದಿಗಳಿಗೆ ಕಬ್ಬಿಣದ ಸಲಾಕೆಯ ಏಟುಗಳಾಗಿವೆಯೆಂದೂ ಸುದ್ದಿ. ಗಾಯಗೊಂಡವರು ಚಿಕಿತ್ಸೆ ಹೊಂದಿದರು. ಇದು ಮುಂಚಿನ ರಾತ್ರಿಯ ಘಟನೆಯಂತೆ.

ಮರುದಿನ ಪೋಲಿಸ್ ಅಧಿಕಾರಿಗಳು ಘಟನೆ ನಡೆದ ಮನೆಗೆ ತನಿಖೆಗಾಗಿ ಹೋದಾಗ ಯಾರೋ ಒಬ್ಬರು ಮಹಡಿಯಲ್ಲಿ ಬಾಗಿಲು ಹಾಕಿ ಕುಳಿತಿದ್ದರಂತೆ. ಎಷ್ಟು ಕೇಳಿದರೂ ಬಾಗಿಲು ತೆಗೆಯಲು ಒಪ್ಪಲಿಲ್ಲ. ಇನ್ನೂ ಒತ್ತಾಯಪಡಿಸುವಷ್ಟರಲ್ಲಿ ಒಳಗಿದ್ದ ವ್ಯಕ್ತಿಯು ಕಿಟಿಕಿಯಿಂದ ಕೆಳಕ್ಕೆ ಹಾರಿ ಕಾಲು ಸೊಂಟಕ್ಕೆ ಏಟಾಗಿ ಏಳಲಾರದೆ ಬಿದ್ದಿತು. ಪೋಲಿಸರು ವ್ಯಕ್ತಿಯನ್ನು ಗುರುತಿಸಿದಾಗ ಅವರು ಬೇರೆ ಯಾರೂ ಅಲ್ಲದೇ ಶ್ರೀ. ಕೃಷ್ಣಾಜಿರಾಯರೇ ಆಗಿದ್ದರೇದೂ ಅವರನ್ನು ದಸ್ತಗಿರಿ ಮಾಡಲಾಗಿದೆ ಎಂದೂ ಮತ್ತು ಪೋಲಿಸ್ ಕಾವಲಿನಲ್ಲಿ ಅವರು ಚಿಕಿತ್ಸೆ ಹೊಂದುತ್ತಿರುವರೆಂದೂ ತಿಳಿದು ಬರುತ್ತದೆ. ಮೊಕದ್ದಮೆಯ ತನಿಖೆ ನಡೆಯುತ್ತದೆ.

ವರ್ಗಾವರ್ಗಿ ಇಲ್ಲಿನ ಗ್ರೈನ್ ಪರ್ಚೆಜಿಂಗ್ ಡೆಪ್ಯುಟಿ ತಹಶೀಲದಾರರಾಗಿ ಮಿ. ಎಲ್. ಫರ್ನಾಂಡಿಸ್ ಇವರು ಇವರು ನೇಮಕ ಹೊಂದಿರುವರು. ಆ ಹುದ್ದೆಯಲ್ಲಿದ್ದ ಮಿ. ಅಬ್ದುರ್ ರಹಿಮಾನ್ ಸಾಹೇಬ್ ಇವರು ಉಡ್ಪಿಗೆ ಅದೇ ಕೆಲಸಕ್ಕೆ ವರ್ಗಾಯಿಸಲ್ಪಟ್ಟಿರುವರಾಗಿ ತಿಳಿದುಬರುತ್ತದೆ

ಕಟ್ಟಿಗೆ ಕಟ್ಲೆ—ಅಕ್ಕಿ, ಸಕ್ಕರೆ ಕಬ್ಬಿಣ ಸಾಮಾನು ಚಿಲ್ಲರೆ ಮೊದಲಾದುವುಗಳನ್ನು ಕ್ರಮವಾಗಿ ಪರಿಶೋಧಿಸಿದ ಮೇಲೆ ಈಗ ಕಟ್ಟಿಗೆಯ ಮೇಲೂ ಅಧಿಕಾರಿಗಳ ದಾಳಿ ಮಾಡಿ ಸುಮಾರು ಏಳೆಂಟು ಮಂದಿ ವ್ಯಾಪಾರಿಗಳನ್ನು ಕಟ್ಲೆಗೆ ಗುರಿಮಾಡಿರುವರಂತೆ. ಹೆಚ್ಚು ಲಾಭ ಗಳಿಸಲು ನಿಯಂತ್ರಣ ಹುಕುಂಮಿನ ಕಾನೂನುಗಳನ್ನು ಮೀರಿ ನಡೆದುದರ ಪರಿಣಾಮವಿದೆಂದು ತಿಳಿದುಬರುತ್ತದೆ. ಆಗಲೇ ಕೆಲವರನ್ನು ಲಾಕಪ್ಪಿನಲ್ಲಿರಿಸಲಾಗಿದೆಯಂತೆ.

ಬುದ್ಧ ಜನ್ಮದಿನ—ಕಳೆದ ತಾ. ೬ರಂದು ಮಹಾತ್ಮ ಬುದ್ಧನ ಜನ್ಮ ದಿನಾಚರಣೆಯನ್ನು ಬೆಸೆಂಟ್ ಶಾಲೆಯಲ್ಲಿ ಮಾಡಲಾಯಿತು–ಡಾ. ಎಂ. ಕೇಶವ ಪೈ ಇವರ ಅಧ್ಯಕ್ಷತೆಯಲ್ಲಿ. ಆ ಮಹಾ ಪುರುಷನ ಜೀವನದ ಭಾಷಣಗಳಾದುವು.

ಈ ಊರಿನಲ್ಲಿ ಇದೇ ಸಮಯಕ್ಕೆ ಭಗವಾನ್ ಶ್ರೀ ಪರಮಹಂಸ ಶ್ರೀಧರ ಸ್ವಾಮಿಜಿ ಇವರೂ ಕೂಡಾ ನಾಲ್ಕು ತಿಂಗಳ ಮೌನವ್ರತಾಚರಣೆಯನ್ನು ಕೈಕೊಂಡಿರುವರು. ಕಳೆದ ಹುಣ್ಣಿಮೆ ದಿನ ಇದು ಆರಂಭವಾಗಿರುವುದು. ಅವರ ಈ ಅಧ್ಯಾತ್ಮಿಕ ಸಾಧನೆಯಲ್ಲಿ ಶ್ರೀಯವರಿಗೆ ಅವರ ಭಕ್ತವರ್ಗದವರು ಯಾವ ತರದ ಹೆಚ್ಚಿನ ತೊಂದರೆಗಳನ್ನು ಕೊಡದಂತೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

[illegible] ರೇಶನ್ [illegible] ಸ್ಥಳಗಳಲ್ಲಿ ಅಕ್ಕಿಯ ಅಭಾವವನ್ನು ದೂರ ಮಾಡುವ ನಮ್ಮ ಜಿಲ್ಲೆಯ [illegible] ಸಂಪದ ಆಹಾರ ಸಾಮಗ್ರಿ [illegible] ವರು ಕಡಿಮೆ ದರದಲ್ಲಿ ಮಾರುವರೆ [illegible] ರಣ ೨೭೦೦ ಗೋಣಿ ಹೆಸರು, ಕಡಲೆ ಇತ್ಯಾದಿಗಳನ್ನು ಕೊಡಲಿಕ್ಕೆ ಸಿದ್ಧರಿರುವರಾಗಿ ಮಾನ್ಯ ಜಿಲ್ಲಾ ಕಲೆಕ್ಟರರಿಗೆ ಬರೆದಿರುವರು.

ಕಾರ್ಕಳ

ಇಲ್ಲಿಯ ಶ್ರೀ ವೆಂಕಟ್ರಮಣ ಹಾ. ಎ. ಶಾಲೆಯಲ್ಲಿ ೧೩ ವರ್ಷಗಳಿಂದ ಮುಖ್ಯೋಪಾಧ್ಯಾಯರಾಗಿದ್ದು ಈಗ ಮಂಗಳೂರಿನ ಕೆನರಾ ಹ್ಯಾಸ್ಕೂಲಿನಲ್ಲಿ ನೇಮಕ ಹೊಂದಿರುವ ಶ್ರೀ. ಎಂ. ಎಸ್. ಕಾಮತ್ ಇವರನ್ನು ಬೀಳ್ಕೊಡುವ ಸಮಾರಂಭ ಸದ್ರಿ ಶಾಲೆಯಲ್ಲಿ ಜರಗಿತು.

ಈ ಪಟ್ಟಣದಲ್ಲಿ 'ಶ್ರೀಕೃಷ್ಣಾ ಆಯುರ್ವೇದ ಫಾರ್ಮಸಿ' ಎಂಬ ಚಿಕಿತ್ಸಾಲಯವೊಂದು ತೆರೆಯಲ್ಪಟ್ಟಿದೆ. ಡಾ. ಕೆ. ವಿ. ಕೆ. ಉಪಾಧ್ಯಾಯ ಇವರು ಇದರ ಚಾಲಕರು.

ಇಲ್ಲಿಯ ಸಂತೆಕಟ್ಟೆಯ ಬಳಿಯ ಚರಂಡಿಯಲ್ಲಿ ಆಗಲೇ ಹೆತ್ತ ಗಂಡು ಮಗುವೊಂದರ ಶವ ದೊರಕಿರುವುದಂತೆ. ಮಾನ ಉಳಿಸಲು ಮಹಿಳೆಯೋರ್ವಳು ಮಾಡಿದ ವಿಷಾದಮಯ ಕಾರ್ಯವಿದೆಂದು ಊಹಿಸಲಾಗಿದೆ.

ಪುತ್ತೂರು

ಕಳೆದ ವಾರ ಇಲ್ಲಿ ಮೊಕ್ಕಾಂ ಮಾಡಿದ್ದ ಡಿ. ಎಸ್. ಪಿ.ಯವರು ಯುದ್ಧ ಸಹಾಯ ಮಾಡುವ ಅವಶ್ಯಕತೆ ಕುರಿತು ಒಂದು ಸಾರ್ವಜನಿಕ ಭಾಷಣವಿತ್ತರು.

ಈ ಕಡೆಗಳಲ್ಲಿ ಅಕ್ಕಿ ಅಭಾವದ ಭಯವು ತಲೆದೋರಿದಂತೆ ಬಾತ್ಮಿಗಳಿವೆ. ವಾರದಲ್ಲಿ ೪ ದಿನ ಅಕ್ಕಿ ಉಳಿದ ದಿನ ಬತ್ತ ಕೊಡಲಾಗುವುದಂತೆ.

ಹೊಸದುರ್ಗ

ಅಕ್ಕಿ ಬತ್ತ ರಿಕ್ವಿಜಿಶನ್ ಸಂಬಂಧದಲ್ಲಿ ಕೆಲವು ಪ್ರಸಿದ್ಧ ಜಮೀನುದಾರರನ್ನು ಈ ಕಡೆಗಳಲ್ಲಿ ಸೆರೆಹಿಡಿದಿರುವರು. ಸರಕಾರಕ್ಕೆ ಮೋಸಮಾಡಿ ಬತ್ತ ಅಡಗಿಸಿ ಇಟ್ಟಿದ್ದ ಇವರ ಮೇಲಣ ಆಪಾದನೆ. ಈ ಕಡೆಗಳಲ್ಲಿ ಅಕ್ಕಿ ಪೂರೈಕೆಯು ಕಡಿಮೆ ಇರುವುದರಿಂದ ಲಾಭ ಬಡಕತನಕ್ಕೆ ಪ್ರಯತ್ನಗಳಾಗುತ್ತಿರಬಹುದು.

ನಿಲೇಶ್ವರದಲ್ಲಿ ಒಬ್ಬ ಸ್ಟೋರ್ ಕೆಲಸಗಾರನು ಅಕ್ಕಿ ಮುಡಿಯೊಂದನ್ನು ರಹಸ್ಯಕ್ಕೆ ಮಾರಲು ಪ್ರಯತ್ನಪಟ್ಟದ್ದಕ್ಕೆ ಡಿಸ್ಮಿಸ್ ಮಾಡಲ್ಪಟ್ಟಿರುವನಂತೆ.

ಉಡುಪಿ

ನಗರದ ಅನೇಕ ಪ್ರಗತಿಮಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದು ಜನಪ್ರಿಯರಾದ ಶ್ರೀ. ಯು. ರತ್ನಾಕರಭಟ್ ಎಂಬ ತರುಣರು ಲಿವರ್ ರೋಗದಿಂದ ಮರಣಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀ ಕಾಶೀಮಠಾಧೀಶ ಶ್ರೀ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು ಹೊಸದಾಗಿ ಆಶ್ರಮ ಪಡೆದ ತಮ್ಮ ಶಿಷ್ಯ ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರೊಂದಿಗೆ ಇಲ್ಲಿಗೆ ದಯಮಾಡಿಸಿದ್ದು ತಮ್ಮ ಶಿಷ್ಯವರ್ಗದವರಿಂದ ಸನ್ಮಾನಿಸಲ್ಪಟ್ಟು ಮುಲ್ಕಿಗೆ ಹಿಂತಿರುಗಿರುವರು.

ಮುಲ್ಕಿ

ಶ್ರೀ ಕಾಶೀಮಠಾಧೀಶರು ಈ ವರ್ಷ ತಮ್ಮ ಚಾತುರ್ಮಾಸ ಅವಧಿಯನ್ನು ಇಲ್ಲಿ ಕಳೆಯುವರಾಗಿ ತಿಳಿದಿದೆ. ಆಗಲೇ ಅದಕ್ಕೆ ಸಂಬಂಧಪಟ್ಟ ವಿಧಿಗಳು ಯಥಾಸಾಂಗ್ಯವಾಗಿ ನೆರವೇರಿಸಲ್ಪಟ್ಟವು.

ಹಾರುವ ವಿಮಾನಗಳಿಂದ ಗಂಡಾಂತರವಿದೆ
ಯಂತ್ರ ಕೌಶಲ್ಯದಿಂದ ಗೆಲ್ಲುವೆವು

(೩ನೇ ಪುಟದಿಂದ)

ತೆಂದರೆ ಜಪಾನನ್ನು ಮುರಿದಿಕ್ಕುವುದು. "ಪರತಂತ್ರವಾಗಿರುವ ಏಶ್ಯಾದ ರಾಷ್ಟ್ರಗಳು ಒಂದು ನಿಶ್ಚಿತ ಕಾಲಾವಧಿಯಲ್ಲಿ ರಾಜಕೀಯ ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಿ, ಮುಂದೆ ಸ್ವತಂತ್ರ ರಾಜ್ಯಭಾರ ಮಾಡಲು ಅವುಗಳನ್ನು ತಯಾರು ಮಾಡಬೇಕೆಂಬುದು" ವೆಲ್ಲೇಸರ ಸೂಚನೆಯಿದೆ.

ಚಿಯಾಂಗ್ ವೆಲ್ಲೇಸರ ಮಾತುಕತೆಗಳಲ್ಲಿ ಹಿಂದೂದೇಶದ ವಿಚಾರವೂ ಮುಖ್ಯವಾಗಿ ಚರ್ಚಿತವಾದ ವಿಷಯವಾಗಿದೆಯೆಂದು ಊಹಿಸಲಾಗಿದೆ ಚಿಯಾಂಗರು, ಅಮೆರಿಕವು ಹಿಂದೂದೇಶಕ್ಕೆ ಬ್ರಿಟನು ಸ್ವಾತಂತ್ರ್ಯ ಕೊಡುವಂತೆ ಒತ್ತಾಯಮಾಡಬೇಕೆಂದು ಹೇಳಿದರಾಗಿ ತಿಳಿದುಬರುತ್ತದೆ ಅಮೆರಿಕವು ಪ್ರಪಂಚದ ಪರತಂತ್ರ ರಾಷ್ಟ್ರಗಳ ಊರ್ಜಿತಾವಸ್ಥೆಗೆ ಪ್ರಯತ್ನ ಪಡದಿದ್ದರೆ ಅದರಿಂದ ಮುಂಡಕ್ಕೆ ಎಂಥಾ ಗಂಡಾಂತರವಿದೆಯೆಂದು ಯಾರೂ ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೆ ಕೇವಲ ಬರಿಯ ಮಾತಿನ, ಕೇವಲ ಶಬ್ದಾಡಂಬರದ ಯಾವ ಭರವಸೆಯೂ ಇಂದು ಜೀರ್ಣವಿದೀರ್ಣವಾದ ಚೀನಕ್ಕೆ ಏನೂ ಸಹಾಯಮಾಡಲಾರದು ಚೀನಕ್ಕಿಂದು ಬೇಕಾದುದ ಶಸ್ತ್ರ ಮತ್ತು ಸಾಮುಗ್ರಿ ಸಹಾಯ ವೆಲ್ಲೇಸರ ಅಭಿಪ್ರಾಯವು ಚಿಯಾಂಗರ ಅಭಿಪ್ರಾಯದೊಡನೆ ಸಮ್ಮತವಿದ್ದರೆ, ಇದಕ್ಕೆ ಅಮೆರಿಕವು ಒಪ್ಪುವುದಿದ್ದರೆ ಮಾತುಗಳಲ್ಲಿರುವ ಅರ್ಥವನ್ನು ಬೇಗನೇ ಕಾರ್ಯರಂಗಕ್ಕಿಳಿಸುವುದು ಅತ್ಯವಶ್ಯವಿದೆ

ಇತರ ವಾರ್ತೆಗಳು

ಜನರಲ್ ದಿಗೋಲೆಯು ತನ್ನ ಪರಿವಾರ ಸಹಿತ ವಾಶಿಂಗ್‌ಟನ್ನಿಗೆ ಬಂದಿರುವನು ಇವನ ಪರಿವಾರದಲ್ಲಿ ಸೇನಾಪತಿಗಳೂ ಆರ್ಥಿಕ ತಜ್ಞರೂ ಹಲವರಿರುವರು

* * *

ಡಾ। ಗೊಬೆಲ್ಸನು ದಿ ರೀಚ್ ಎಂಬ ಪತ್ರಿಕೆಯಲ್ಲಿ ಯುದ್ಧದ ಕುರಿತು ಒಂದು ಲೇಖನ ಬರೆದು ಜರ್ಮನಿಯು ಇನ್ನೂ ಅಧಿಕ ಬಲ ಉಪಯೋಗಿಸಲು ಸಮರ್ಥವಿದೆಯೆಂದು ತಿಳಿಸಿದ್ದಾನ

* * *

ಅಮೆರಿಕ ಮತ್ತು ಬ್ರಿಟನುಗಳು ಜರ್ಮನಿಗಿಂತ ನಾಲ್ಕುಪಾಲು ಬಲ ಹೆಚ್ಚಿಸುತ್ತಿವೆಯೆಂದು ಅಮೆರಿಕದ ತಾತ್ಕಾಲಿಕ ಯುದ್ಧ ಮಂತ್ರಿ ರಾಬರ್ಟ್ ಪ್ಯಾಟರ್‌ಸನ್ ಹೇಳಿದರು ಫೇಸಿಫಿಕಿನಲ್ಲಿಯೂ ಇದೇ ರೀತಿ ಮಾಡಲಾಗುವುದೆಂದರು

* * *

ಲಾರ್ಡ್ ಲೂಯಿ ಮೌಂಟ್‌ಬೇಟನರು ಇಂಫಾಲ ವ್ಯೂಹವನ್ನು ಸಂದರ್ಶಿಸಿದಾಗ ಅನೇಕ ಭಾರತೀಯ ವೀರರಿಗೆ ಭೇಟಿಯನ್ನಿತ್ತರು ಅಸಾಮ್ ವ್ಯೂಹದಲ್ಲಿ ಮಿತ್ರರಗಳನೇ ಬಲದ ವೇಗವನ್ನು ತಡೆಲಾರದೆ ಜಪಾನರು ಯೂಕ್ರೂಲಿನಿಂದ ನಾಲ್ಕು ಮೈಲು ದೂರವಿರುವ ಸಿರೂಹಿ ಎಂಬ ಹಳ್ಳಿಗೆ ಬೆಂಕಿಕೊಟ್ಟು ಖಾಲಿ ಮಾಡಿ ಹೋದರು. ಮಿತ್ರರ ಮುನ್ನಡೆ ಇಲ್ಲಿ ಮುಂದೆ ಸಾಗುತ್ತಿದೆ.

* * *

ಇಂಗ್ಲೆಂಡಿನ ಮೇಲೆ ಹಾರುವ ವಿಮಾನಗಳು ಒಂದೇ ತರದಲ್ಲಿ ಧಾಳಿಯಿಡುತ್ತಿದ್ದು ಅನೇಕ ಹಾನಿಗಳನ್ನುಂಟುಮಾಡುತ್ತಿವೆ.

* * *

ಭೀಷಣಪುರ ಪ್ರದೇಶದಲ್ಲಿಯೂ ಸಿಂಗಪೊಂಗದ ದಕ್ಷಿಣದಲ್ಲಿಯೂ ಶತ್ರುಗಳು ಹಿಂದೆ ಸರಿದರು. ಶಿಬ್ರಾಚಾರ ರಸ್ತೆಯ ದಕ್ಷಿಣದಲ್ಲಿ ಕೈಕೈ ಕಾಳಗವಾಗುತ್ತಿದೆ. ಜನರಲ್ ಸ್ಟಿಲ್‌ವೆಲ್ಲರ ಚೀನೀ ಹಾಗೂ ಅಮೆರಿಕನ್ ಸೇನೆಗಳು ಮುಂದೊತ್ತುತ್ತಿವೆ. ಲಿಂಗಮಾಂಗವನ್ನು ಆಕ್ರಮಿಸಿದ ಚೀನೀ ದಳ ಕ್ಯಾಂಟನ್ ಉತ್ತರದಲ್ಲಿ ಶತ್ರುವನ್ನು ಹಿಮ್ಮೆಟ್ಟಿಸಿದೆ

* * *

ರಶ್ಯ ರಣರಂಗದಲ್ಲಿ ಕೊವೆಲವನ್ನು ಆಕ್ರಮಿಸಲಾಗಿದೆಯೆಂದು ಸ್ಟಾಲಿನರು ತಿಳಿಸಿದ್ದಾರೆ ಕೆರೆಲಿಯನ್ ವ್ಯೂಹದಲ್ಲಿ ಧಾಳಿ ಮಾಡಿದ ೫ನೇ ಸೇನೆಯು ಸಾಲ್ಮಿಯನ್ನು ಆಕ್ರಮಿಸಿದೆ ವಿಲ್ನಾದ ಕಡೆಗೂ ರಶ್ಯನ್ ಸೇನೆ ಮುಂದೊತ್ತುತ್ತಿದೆ ಬಿಳಿರಶ್ಯದಲ್ಲಿ ಜರ್ಮನ್ ಪ್ರತಿಭಟನೆ ಇದಿರಿಸಲಾಗುತ್ತಿದೆ

* * *

ಸಂಧಾನದ ಬಗ್ಗೆ ಹಿಟ್ಲರನು ಶರತ್ತುಗಳನ್ನು ಕಳುಹಿಸಿದ್ದು ಅವು ನಿರಾಕರಿಸಲ್ಪಟ್ಟ ಎಂದು ಸುದ್ದಿಯಿದೆ ಹಿಟ್ಲರನು ನಿವೃತ್ತನಾಗುವುದೂ, ಹಾರುವ ವಿಮಾನ ಧಾಳಿ ನಿಲ್ಲಿಸುವುದೂ ಆ ಶರತ್ತುಗಳಲ್ಲಿ ಇದೆಯೆಂದು ಹೇಳಲಾಗಿದೆ

ಅಮೇರಿಕಾದಲ್ಲಿ

ಯುದ್ಧದ ದೆಸೆಯಿಂದಾಗಿ ಭೂವ್ಯವಸಾಯದಲ್ಲಿ ಉತ್ತಮತರದ ಅನೇಕ ಮಾರ್ಪಾಡುಗಾಗಿವೆ, ನೂತನ ಸೌಕರ್ಯಗಳು ಬಳಕೆಗೆ ಬಂದಿವೆ,—ಹೀಗೆಂದು ಸಂಯುಕ್ತ ಅಮೇರಿಕಾಸರಕಾರದ ವರದಿಯಾಗಿರುತ್ತದೆ ಈ ಮೊದಲೆ ಆಧುನಿಕ ತರದಲ್ಲಿ ಸಾಗುವಳಿ ಮಾಡುತ್ತಿರುವ ಸಂಯುಕ್ತ ಅಮೇರಿಕಾವು ಈ ನವೀನ ಶೋಧಗಳಿಂದ ಇನ್ನೂ ಮುಂದುವರಿಯುತ್ತಿದೆ

* * *

ಅಮೇರಿಕಾದಲ್ಲಿ ಇಂದು ಪ್ರತಿಯೊಂದು ವ್ಯವಸಾಯದಲ್ಲಿ 'ಸಹಕಾರ' ಸೂತ್ರವು ಬಹಳ ಬಳಕೆಗೆ ಬಂದಿರುವುದು. ಸಂಯುಕ್ತ ಅಮೇರಿಕಾದ ವಿವಿಧ ನಗರನಾಡುಗಳಲ್ಲಿ ಸಾಗುವಳಿ, ಹಾಲಿನ ವ್ಯವಸಾಯ, ಇತ್ಯಾದಿ ಮನುಷ್ಯನಿಗೆ ಆಹಾರ ಇತ್ಯಾದಿಗಳನ್ನು ಒದಗಿಸುವ ಸಹಕಾರ ಸಂಘಗಳು ತಲೆಯೆತ್ತಿ, ರೈತನಿಗೂ, ರೈತನ ಒಡವೆಗಳನ್ನು ಸೇವಿಸುವವನಿಗೂ ತುಂಬಾ ಉಪಕಾರಿಯಾಗಿ ನಡೆಯುತ್ತಿವೆ. ಮಾನವ ಸಮಾಜಕ್ಕೆ ಉಪಯುಕ್ತವೆನಿಸುವ ಪ್ರತಿಯೊಂದು ವ್ಯವಸಾಯ ಉದ್ಯೋಗವು ಸಹಕಾರ ಸೂತ್ರಗಳನ್ನಾದರಿಸಿ ನಡೆಯುತ್ತಿದೆ ಹೆಚ್ಚೇಕೆ ಅಲ್ಲಿನ ಒಂದು ನಾಡಿನಲ್ಲಿ ಸಹಕಾರಿ ಆಸ್ಪತ್ರೆಯೊಂದು ಸ್ಥಾಪನೆಯಾಗಿರುತ್ತದೆ ಸಿರಿಯಾದಿಂದ ಅಲ್ಲಿಗೆ ತೆರಳಿದ ವೈದ್ಯರೊಬ್ಬರ ಸಾಹಸವಿದು. ಚಿಕ್ಕ ಬಂಡವಾಳದೊಡನೆ ಪ್ರಾರಂಭವಾದ ಈ ಸಂಸ್ಥೆಯಲ್ಲಿ ಬಹಳ ಬೆಳೆದಿದ್ದು, ಶಸ್ತ್ರ ಚಿಕಿತ್ಸೆ, Xರೇ ಇತ್ಯಾದಿ ಆಧುನಿಕ ವೈದ್ಯಕೀಯ ಅನುಕೂಲತೆಗಳು ಅಲ್ಲಿ ದೊರಕುತ್ತಿವೆ. ಸಾವಿರಾರು ಮಂದಿಗಳು ಈ ಚಿಕಿತ್ಸಾಲಯದಿಂದ ಗುಣಲಾಭವನ್ನು ಹೊಂದುತ್ತಿರುವರು.

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I A 99/1944
O S 400/1941

ವಾದಿ — ಮಂಜ ನಾಥಯ್ಯ
ಪ್ರತಿವಾದಿರು—ಕೃಷ್ಣಪ್ಪಯ್ಯ ಕೂಡಾ

1 ಕೃಷ್ಣಪ್ಪಯ್ಯ, 3 ರಾಮಯ್ಯ, ವಾಸುದೇವಯ್ಯನ ಮಕ್ಕಳು ದಾರವಾಡ ಜಿಲ್ಲಾ ಹಾನಗಲ್ಲು

4 ಮ್ಯಾನರ್ ಸುಬ್ರಾಯ, 5 ಮ್ಯಾನರ್ ವೆಂಕಟ್ರಮಣ, ರಾಮ ಕೃಷ್ಣ ಭಟ್ಟರ ಮಕ್ಕಳು, ಇವರ ಗಾರ್ಡಿಯನ್ ತಾಯಿ ಲಕ್ಷ್ಮಿ ಅಮ್ಮ ರಾಮಕೃಷ್ಣ ಭಟ್ಟರ ವಿಧವೆ, ಮರವಂತೆ ಗ್ರಾಮ ಕುಂದಾಪುರ ತಾಲೂಕು

ಸದಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ವಾದಿಯು ಸದ್ರಿ ಡಿಕ್ರಿಯ ಮೇಲೆ ಫ್ಯಾನಲ್ ಡಿಕ್ರಿ ಬಗ್ಗೆ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾನೆ ಆ ಕುರಿತು ನಿಮ್ಮದೆನಾದರೂ ಆಕ್ಷೇಪವಿದ್ದ ತಾರೀಕ 31—7—1944ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹಿರು ಮಾಡಿಕೊಳ್ಳುವಲ್ಲಿ ತಪ್ಪಿದರೆ ನಿಮ್ಮ ಗೈರ್ ಹಾಜರಾತಿಯಲ್ಲಿ ಸದ್ರಿ ಅರ್ಜಿಯ ಮುಂದಿನ ಕ್ರಮ ನಡಿಯಲಾಗುವುದು

ಕುಂದಾಪುರ 7—7—44 | **K Raghunath Shenai** ವಾದಿಯ ಕಡೆ ವಕೀಲರು

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R I A. 364/1944
R I A 362/1944.
O S 299/1943.

ವಾದಿ— ವಿಠ್ಲ ಮಂಜುನಾಥ ಕಾಮತ್
ಪ್ರತಿವಾದಿರ —ಮ್ಯಾನರ್ ಮೋಹನ್ ರಾವ್ ಕೂಡಾ

1 ಮ್ಯಾನರ್ ಮೋಹನ್ ರಾವ್, 3 ಮ್ಯಾನರ್ ಗಂಗಾಬಾಯಿ 4 ಮ್ಯಾನರ್ ಬೇಬಿ—ಪಡುಕೋಣೆ ಶಾಲಾ ಮಾಸ್ತರ್ ದತ್ತರಾಯರ ಮಕ್ಕಳು—ಇವರ ಗಾರ್ಡಿಯನ್ ಅಜ್ಜ— K Aaanthayya Retired Port Office clerk. Bhavanthkeri Mangalore town

6 ಒಸೂರು ಕಾವೇರಿ ಹೆಂಗ್ಸು ಸುಬ್ಬ ಮೋಣ್ಯನ ಮಗಳ ವರಾವ ಮೋಣ್ಯನ ಹೆಂಡ್ತಿ ಬಸ್ರೂರು ಗ್ರಾಮ

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ವಾದಿಯ ಸದ್ರಿ ಡಿಕ್ರಿಯ ಮೇಲೆ ಫ್ಯಾನಲ್ ಡಿಕ್ರಿಯ ಬಗ್ಗೆ ಮತ್ತು 6ನೇ ಎದ್ರಿಯನ್ನು ಸಪ್ಲಿಮೆಂಟ 6ನೇ ಪ್ರತಿವಾದಿಯನ್ನಾಗಿ ಸೇರಿಸುವ ಬಗ್ಗೆ ದಾಖಲು ಮಾಡಿದ ಮೇಲಿನ ಅರ್ಜಿಗಳ ತಾರೀಕು 31—7—1944ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದ ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹಿರು ಮಾಡಿಕೊಳ್ಳುವಲ್ಲಿ ತಪ್ಪಿದರೆ ನಿಮ್ಮ ಗೈರ್ ಹಾಜರಾತಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು

ಕುಂದಾಪುರ 7—7—44 | **K Raghunath Shenai** ವಾದಿಯ ಕಡೆ ವಕೀಲರು

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ಇಲ್ಲ!

ನಗರದ ಕೆಲವು ರೇಶನ್ ಅಂಗಡಿಗಳಲ್ಲಿ ಕಳೆದ ಕೆಲವು ದಿನಗಳಲ್ಲಿ ಅಕ್ಕಿ ಮುಗಿಯಿತೆಂಬ ನೆವದಿಂದ ಗಿರಾಕಿಗಳನ್ನು ಹಿಂದಿರುಗಿಸಲಾಗಿದೆಯೆಂದು ಸುದ್ದಿ ಪ್ರಕಟವಾಗಿದೆ. ಆದರೆ ಇಂತಹ ವರ್ತಮಾನಗಳು ನಿರಾಧಾರದವುಗಳಾಗಿರಬೇಕು. ಕಾರಣ ಪ್ರತಿ ರೇಶನ್ ಅಂಗಡಿಗೆ ಅಲ್ಲಿ ರಜಿಸ್ಟರ್ ಆದ ಕಾರ್ಡುಗಳ ಆಧಾರದ ಮೇಲೆ ಅಕ್ಕಿ ಪರಿಮಾಣವು ಸರಕಾರದಿಂದ ಪೂರೈಸಲಾಗುವುದು. ಅಂದ ಮೇಲೆ ರಜಿಸ್ಟರ್ ಆದ ಕಾರ್ಡಿನ ಗಿರಾಕಿಗಳಿಗೆ ನಿರಾಶೆಯಾಗುವ ಯಾವ ಕಾರಣವೂ ಇಲ್ಲ. ಬೇರೆ ಏನಾದರೂ ಕಾರಣಗಳಿದ್ದರೆ ಅತೃಪ್ತಿಗೊಂಡವರು ರೇಶನ್ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಲ್ಲಿ ತಕ್ಕ ಏರ್ಪಾಡಾಗುವುದೆಂದು ನಿರೀಕ್ಷಿಸಲಾಗಿದೆ.

ರೇಶನ್:—ಸಕ್ಕರೆ ಚಿಮಿಣಿ ಎಣ್ಣೆ ಕಾರ್ಡುಗಳು ಹಂಚಲ್ಪಟ್ಟ ಮೇಲೆ, ಯಾವ ಕಾರಣದಿಂದಲೊ ಅನೇಕರಿಗೆ ಯೋಗ್ಯ ಪರಿಮಾಣವೇ ದೊರಕಲಿಲ್ಲವೆಂಬ ಗಲಭೆ ಎದ್ದಿತ್ತು. ಕೂಡಲೇ ಪುನಃ ಕೃಸ್ತಿಕರ ದಾಖಲೆ ತಿಳಿಸಿ ಅರ್ಜಿ ಮಾಡಿಕೊಂಡಲ್ಲಿ ಪರಿಸ್ಥಿತಿಯನ್ನು ಪರಿಶೀಲಿಸಲಾಗುವುದೆಂದು ಅಧಿಕಾರಿಗಳು ಪ್ರಕಟಿಸಿದ ಮೇಲೆ ಸಾವಿರಾರು ಮನವಿಗಳು ಮುನಿಸಿಪಾಲಿಟಿಯ ಸ್ಪೆಶಲ್ ಕಮಿಟಿಗೆ ಕಳುಹಿಸಲ್ಪಟ್ಟವೆಯಾಗಿಯೂ, ಅವುಗಳು ಕ್ರಮವಾಗಿ ಅವಗಾಹಿಸಲ್ಪಡುವುವೆಂದೂ ತಿಳಿದು ಬರುತ್ತದೆ. ಯಾವುದಾದರೂ ಒಂದು ನಿರ್ದಿಷ್ಟ ಲೆಕ್ಕಾಚಾರದ ಮೇಲೆ ರೇಶನಿನ ವಸ್ತುಗಳನ್ನು ಸರಿಯಾಗಿ ಹಂಚುವಂತಾಗುವುದು ಒಳಿತೆಂದು ಅಭಿಪ್ರಾಯಪಡಲಾಗಿದೆ.

ಕಟ್ಟಿಗೆ:—ಹೊರಗಡೆಯಿಂದ ಮಂಗಳೂರಿಗೆ ಕಟ್ಟಿಗೆಯನ್ನು ತರಿಸಲು ಪರ್ಮಿಟು ಪಡೆಯಬೇಕಾಗಿಲ್ಲವೆಂದು ಈಗ ಅಧಿಕೃತವಾಗಿ ತಿಳಿದುಬಂದಿರುತ್ತದೆ. ಹೀಗೆ ತರಿಸಿಕೊಂಡರೆ ಒಂದು ವೇಳೆ ನಗರದ ಡಿಪೊಗಳಲ್ಲಿ ದಿನನಿತ್ಯದ ಗಿರಾಕಿಗಳಿಗೆ ಪೂರೈಸಲು ಹೆಚ್ಚು ತೊಂದರೆ ಆಗಲಿಕ್ಕಿಲ್ಲ. ಆದರೆ ಹೊರಗಡೆಯಿಂದ ಸಾಗಿಸಿಕೊಳ್ಳುವರೆ ಖರ್ಚು ತುಂಬಾ ಬೀಳದಿರದು.

ಕೆಲವು ಕಟ್ಟಿಗೆ ಅಂಗಡಿಗಳಲ್ಲಿ ಆಗಲೇ ಇದ್ದ ಸ್ಟಾಕು ಖರ್ಚಾಗಿ ಹೋಗಿರುವುದಾಗಿ ತಿಳಿದುಬರುತ್ತದೆ. ಸಕಾಲದಲ್ಲಿ ಸರಿಯಾದ ಪೂರೈಕೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡುವರಾಗಿ ಹಾರೈಸಲಾಗಿದೆ.

ಮನವಿ

ಕಳೆದ ತಾ. ೭ರಂದು ಕುಂದಾಪುರದ ಕೆಲ ಪ್ರಮುಖರ ಶಿಷ್ಟಮಂಡಲವೊಂದು ಜಿಲ್ಲಾ ಕಲೆಕ್ಟರ್ ಸಾಹೇಬರನ್ನು ಭೇಟಿಯಾಗಿ ತಮ್ಮ ಊರಲ್ಲಿ ರೇಷನ್ ಜ್ಯಾರಿಯಾದ ಪಟ್ಟಣಗಳಿಗೆ ಕಳಿಸಲು ಶೇಖರಿಸಿ ಇರಿಸಲ್ಪಟ್ಟ ೫೦ ಸಾವಿರ ಮುಡಿ ಅಕ್ಕಿಯನ್ನು ಕೊಂಡೊಯ್ಯಬಾರದೆಂದೂ, ಅಕ್ಕಿ ಕಮ್ಮಿ ಬೆಳೆಯುವ ತಮ್ಮ ಊರ ಪ್ರದೇಶಕ್ಕೇ ಬಹಳ ಪರಿಮಾಣದಲ್ಲಿ ಅಕ್ಕಿಯು ಕಮ್ಮಿ ಬೀಳುವುದೆಂತಲೂ ಒಂದು ಮನವಿಯನ್ನು ನಿವೇದಿಸಿಕೊಂಡರೆಂದು ತಿಳಿದು ಬರುತ್ತದೆ.

[illegible] ಎಲ್ಲಾ ತಾಲೂಕುಗಳಿಗೆ ಬೇಕಾದ ತರದ ವಿಷಯದಲ್ಲಿ ಅವರಿಗೆ ಸಂಪೂರ್ಣ ಹಿತದೃಷ್ಟಿ ಇರುವುದಾಗಿಯೂ, ಒಂದು ವೇಳೆ ಅಲ್ಲಿ ಅಕ್ಕಿ ಕಮ್ಮಿ ಬಿದ್ದಲ್ಲಿ ಕೂಡಲೇ ರಾಗಿ ಕಳುಹಿಸುವ ಏರ್ಪಾಡು ಮಾಡುವರಾಗಿಯೂ ಸಲಹೆ ಇತ್ತಿರುವರಂತೆ.

ಆರೋಗ್ಯ:—ಪ್ಲೇಗ್ ರೋಗ ಸಂಬಂಧದಲ್ಲಿ ಮಂಗಳೂರಿಂದ ಹೊರಹೋಗುವ ವಾಹನಗಳಲ್ಲಿನ ಸಾಮಾನುಗಳನ್ನು 'ಗೇಸ್' ಮಾಡುತ್ತಲಿದ್ದುದನ್ನು ಕಳೆದ ತಾ. ೧೧ರ ನಂತರದಿಂದ ನಿಲ್ಲಿಸಲಾಗಿದೆ. ಇದರಿಂದ ರೋಗದ ಬಾಧೆಯನ್ನು ತಡೆಯಲಾಗಿದೆಯೆಂಬ ಭರವಸೆಯನ್ನು ಮಾಡಿಕೊಳ್ಳಬಹುದು. ಆದರೂ ಇಲಿ ಸಂಬಂಧ ಮುಂಜಾಗ್ರತೆಗಳನ್ನು ಆರೋಗ್ಯಾಧಿಕಾರಿಗಳು ತೆಗೆದುಕೊಳ್ಳುತ್ತಲೇ ಇರುವರು. ಮಳೆಯಿಂದಲೂ ಅನೇಕ ಕೆಸರು ಕೊಚ್ಚೆಯ ಸ್ಥಳಗಳು ಶುದ್ಧವಾಗುತ್ತವೆ.

ಈ ಸಂಬಂಧದಲ್ಲಿ ಮೈದಾನಿನಲ್ಲಿರುವ ತಾತ್ಕಾಲಿಕ ವೆಬ್‌ಸ್ಟರ್ ಮಾರ್ಕೇಟು ಇನ್ನೂ ತನ್ನ ಸ್ಥಳಕ್ಕೆ ಬರಲಿಲ್ಲ. ಬೇಗ ಬರಬಹುದಾಗಿ ಹಾರೈಸಲಾಗಿದೆ.

ಹವಾಮಾನ:—ನಗರದಲ್ಲಿ ಈಗೆರಡು ದಿನಗಳಿಂದ ಬಿಡದೆ ಎಂಬಂತೆ ಮಳೆ ಬರತ್ತಲಿದೆ. ಚಳಿಯೂ ಅನುಭವಕ್ಕೆ ಬರುತ್ತದೆ. ಗಾಳಿ ಬೀಸಾಟವೂ ಬಿರುಸಾಗಿಯೇ ಇದೆ ಎನ್ನಬಹುದು. ಕೆಲವು ಕಡೆ ಸಣ್ಣಪುಟ್ಟ ಗುಡಿಸಲುಗಳಿಗೆ ಹಾನಿ ತಟ್ಟಿದೆಯಾಗಿ ತಿಳಿದುಬರುತ್ತದೆ.

ರಕ್ಷಣೆ:—ವಿಪರೀತ ಮಳೆಯಿಂದ ಮರೋಳಿಯ ಹತ್ತಿರ ಚರಂಡಿಗಳಲ್ಲಿ ರಭಸದ ನೀರು ಹರಿಯುತ್ತಿರುವಾಗ, ಚರಂಡಿಯ ಮೇಲೆ ಹಾಕಲ್ಪಟ್ಟ ಒಂದು ದಾಟು ಹಲಗೆಯ ಮೇಲಿಂದ ಹಾದುಹೋಗುತ್ತಿದ್ದ ಚಿಕ್ಕ ಬಾಲಕನೊಬ್ಬನು ಜಾರಿ ಕೆಳಗಿನ ಸೆಳೆತಕ್ಕೆ ಸಿಕ್ಕಿ ಒಯ್ಯಲ್ಪಡುತ್ತಿರುವಾಗ ದಾರಿಹೋಕ ಹೊಲೆಯನೋರ್ವನು ಜೀವದ ಹಂಗು ತೊರೆದು ಆ ಅಪಾಯಕರ ನೀರಿನಲ್ಲಿ ಹಾರಿ ಬಾಲಕನನ್ನು ಹಿಡಿಯಲು ಇರ್ವರೂ ಎಳೆದೊಯ್ಯಲ್ಪಟ್ಟರು. ಕಡೆಗೆ ಸಾಹಸಿಗ ಹೊಲೆಯನು ಬದಿಯ ಕಲ್ಲೊಂದನ್ನು ಆಧರಿಸಿ ಬಾಲಕನನ್ನು ಬದುಕಿಸಿದನೆಂದು ತಿಳಿದುಬರುತ್ತದೆ.

ಕಳ್ಳಸಂತೆ—ತಾ. ೧೧ರಂದು ಇಲ್ಲಿಯ ಮಣ್ಣಗುಡ್ಡೆ ಬಳಿ ಕಳ್ಳಸಂತೆಯಲ್ಲಿ ಪಡೆದದೆಂಬ ೩ ಮಣ ಸಕ್ಕರೆಯನ್ನು ಹಿಡಿಯಲಾಯಿತೆಂದು ತಿಳಿದುಬರುತ್ತದೆ. ಅಕ್ಕಿ ತುಂಬಲ್ಪಟ್ಟ ಚೀಲದಲ್ಲಿ ಈ ಸಕ್ಕರೆ ಅಡಗಿಸಿ ಕೊಂಡೊಯ್ಯಲ್ಪಡುತಿತ್ತು ಎಂದೂ, ಗುಮಾನಿಯಿಂದ ಹಿಡಿಯಲು ಪ್ರಯತ್ನಪಡುವಾಗ ಸಕ್ಕರೆ ಮಾಲಕನು ತಪ್ಪಿಸಿಕೊಂಡು ಓಡಲು ಪ್ರಯತ್ನಿಸಿ ಒಂದು ಗೋಡೆ ಹಾರಿ ಕೆಳಗೆ ಬಿದ್ದು ಕಾಲಿಗೆ ಪೆಟ್ಟಾಗಿದೆ ಎಂದೂ ತಿಳಿದು ಬರುತ್ತದೆ.

ಹಿಡಿಯಲ್ಪಟ್ಟ ಈ ಸಕ್ಕರೆಯು ಯಾವುದೋ ಅಧಿಕೃತ ಸ್ಟೋರಿನಿಂದ ಪಡೆದುದೆಂದು ಹೇಳಲ್ಪಟ್ಟಿದೆಯಾಗಿ ತಿಳಿದು ಬರುತ್ತದೆ. ಇದು ಎಲ್ಲರನ್ನೂ ಆಶ್ಚರ್ಯಗೊಳಿಸಿದೆ. ಅಧಿಕಾರಿಗಳು ಈ ಕಡೆ ಗಮನತೋರುವ ಬಗ್ಗೆ ಅಪೇಕ್ಷಿಸಲಾಗಿದೆ.

ಕೊಲೆ—ಕಳೆದ ತಾ. ೬ರಂದು ನಗರದಲ್ಲಿ ಭೀಕರ ಮರಣದ ಘಟನೆ ನಡೆಯಿತು. ಮೈಸೂರು ಗಡಿಯಿಂದ ವ್ಯಾಪಾರದ ಉದ್ದೇಶದಿಂದ ಶ್ರೀ. ಕೃಷ್ಣಾಜಿರಾವ್ (ಹಿಂದಿನ ಕೃಷ್ಣಾಸಿನೇಮಾ ಮಾಲಕರು) [illegible] ಹೊಂದಿದ್ದ ಈ ಬಂದಿಗಳಲ್ಲಿ [illegible] ಅರ್ಸ ಎಂಬವನು ಚೂರಿಯಿಂದ ಇರಿಯಲ್ಪಟ್ಟವನಾಗಿ ಆಸ್ಪತ್ರೆಯ ಶುಶ್ರೂಷೆ ಹೊಂದುವ ಮೊದಲೇ ರಕ್ತಸ್ರಾವದಿಂದ ಮರಣ ಹೊಂದಿದನು. ಅವನ ಬಳಿ ರೂ. ೩೮೦೦ ಇತ್ತೆಂದು ವಾಗ್ಮೂಲದಲ್ಲಿ ಹೇಳುವವನಾಗಿದ್ದನಂತೆ. ಇವನೊಡನೆ ಜೊತೆಯಲ್ಲಿದ್ದ ಇನ್ನೂ ಮೂರು ಮಂದಿಗಳಿಗೆ ಕಬ್ಬಿಣದ ಸಲಾಕೆಯ ಏಟುಗಳಾಗಿವೆಯೆಂದೂ ಸುದ್ದಿ. ಗಾಯಗೊಂಡವರು ಚಿಕಿತ್ಸೆ ಹೊಂದಿದರು. ಇದು ಮುಂಚಿನ ರಾತ್ರಿಯ ಘಟನೆಯಂತೆ.

ಮರುದಿನ ಪೋಲಿಸ್ ಅಧಿಕಾರಿಗಳು ಘಟನೆ ನಡೆದ ಮನೆಗೆ ತನಿಖೆಗಾಗಿ ಹೋದಾಗ ಯಾರೋ ಒಬ್ಬರು ಮಹಡಿಯಲ್ಲಿ ಬಾಗಿಲು ಹಾಕಿ ಕುಳಿತಿದ್ದರಂತೆ. ಎಷ್ಟು ಕೇಳಿದರೂ ಬಾಗಿಲು ತೆಗೆಯಲು ಒಪ್ಪಲಿಲ್ಲ. ಇನ್ನೂ ಒತ್ತಾಯಪಡಿಸುವಷ್ಟರಲ್ಲಿ ಒಳಗಿದ್ದ ವ್ಯಕ್ತಿಯು ಕಿಟಕಿಯಿಂದ ಕೆಳಕ್ಕೆ ಹಾರಿ ಕಾಲು ಸೊಂಟಕ್ಕೆ ಏಟಾಗಿ ಏಳಲಾರದೆ ಬಿದ್ದಿತು. ಪೋಲಿಸರು ವ್ಯಕ್ತಿಯನ್ನು ಗುರುತಿಸಿದಾಗ ಅವರು ಬೇರೆ ಯಾರೂ ಅಲ್ಲದೇ ಶ್ರೀ ಕೃಷ್ಣಾಜಿರಾಯರೇ ಆಗಿದ್ದರೆಂದೂ ಅವರನ್ನು ದಸ್ತಗಿರಿ ಮಾಡಲಾಗಿದೆ ಎಂದೂ ಮತ್ತು ಪೋಲಿಸ್ ಕಾವಲಿನಲ್ಲಿ ಅವರು ಚಿಕಿತ್ಸೆ ಹೊಂದುತ್ತಿರುವರೆಂದೂ ತಿಳಿದು ಬರುತ್ತದೆ. ಮೊಕದ್ದಮೆಯ ತನಿಖೆ ನಡೆಯುತ್ತದೆ.

ವರ್ಗಾವರ್ಗಿ—ಇಲ್ಲಿನ ಗ್ರೈನ್ ಪರ್ಚೇಜಿಂಗ್ ಡೆಪ್ಯುಟಿ ತಹಶೀಲದಾರರಾಗಿ ಮಿ. ಎಲ್. ಫೆರ್ನಾಂಡಿಸ್ ಇವರು ಇವರು ನೇಮಕ ಹೊಂದಿರುವರು. ಆ ಹುದ್ದೆಯಲ್ಲಿದ್ದ ಮಿ. ಅಬ್ದುಲ್ ರಹಿಮಾನ್ ಸಾಹೇಬ್ ಇವರು ಉಡ್ಪಿಗೆ ಅದೇ ಕೆಲಸಕ್ಕೆ ವರ್ಗಾಯಿಸಲ್ಪಟ್ಟಿರುವರಾಗಿ ತಿಳಿದುಬರುತ್ತದೆ

ಕಟ್ಟಿಗೆ ಕಟ್ಲೆ—ಅಕ್ಕಿ, ಸಕ್ಕರೆ ಕಬ್ಬಿಣ ಸಾಮಾನು ಚಿಲ್ಲರೆ ಮೊದಲಾದುವುಗಳನ್ನು ಕ್ರಮವಾಗಿ ಪರಿಶೋಧಿಸಿದ ಮೇಲೆ ಈಗ ಕಟ್ಟಿಗೆಯ ಮೇಲೂ ಅಧಿಕಾರಿಗಳ ದಾಳಿ ಮಾಡಿ ಸುಮಾರು ಏಳೆಂಟು ಮಂದಿ ವ್ಯಾಪಾರಿಗಳನ್ನು ಕಟ್ಲೆಗೆ ಗುರಿಮಾಡಿರುವರಂತೆ. ಹೆಚ್ಚು ಲಾಭಗಳಿಸಲು ನಿಯಂತ್ರಣ ಹುಕುಂಮಿನ ಕಾನೂನುಗಳನ್ನು ಮೀರಿ ನಡೆದುದರ ಪರಿಣಾಮವಿದೆಂದು ತಿಳಿದುಬರುತ್ತದೆ. ಆಗಲೇ ಕೆಲವರನ್ನು ಲಾಕಪ್ಪಿನಲ್ಲಿರಿಸಲಾಗಿದೆಯಂತೆ.

ಬುದ್ಧ ಜನ್ಮದಿನ—ಕಳೆದ ತಾ. ೬ರಂದು ಮಹಾತ್ಮ ಬುದ್ಧನ ಜನ್ಮ ದಿನಾಚರಣೆಯನ್ನು ಬೆಸೆಂಟ್ ಶಾಲೆಯಲ್ಲಿ ಮಾಡಲಾಯಿತು—ಡಾ. ಎಂ. ಕೇಶವ ಪೈ ಇವರ ಅಧ್ಯಕ್ಷತೆಯಲ್ಲಿ. ಆ ಮಹಾ ಪುರುಷನ ಜೀವನದ ಭಾಷಣಗಳಾದುವು.

ಈ ಊರಿನಲ್ಲಿ ಇದೇ ಸಮಯಕ್ಕೆ ಭಗವಾನ್ ಶ್ರೀ ಪರಮಹಂಸ ಶ್ರೀಧರ ಸ್ವಾಮಿಜಿ ಇವರೂ ಕೂಡಾ ನಾಲ್ಕು ತಿಂಗಳ ಮೌನವ್ರತಾಚರಣೆಯನ್ನು ಕೈಕೊಂಡಿರುವರು. ಕಳೆದ ಹುಣ್ಣಿಮೆ ದಿನ ಇದು ಆರಂಭವಾಗಿರುವುದು. ಅವರ ಈ ಅಧ್ಯಾತ್ಮಿಕ ಸಾಧನೆಯಲ್ಲಿ ಶ್ರೀಯವರಿಗೆ ಅವರ ಭಕ್ತವರ್ಗದವರು ಯಾವ ತರದ ಹೆಚ್ಚಿನ ತೊಂದರೆಗಳನ್ನು ಕೊಡದಂತೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

[illegible] ಸ್ಥಳಗಳಲ್ಲಿ ಅಕ್ಕಿಯ ಅಭಾವವನ್ನು [illegible] ಸಂಘದ ಆಹಾರ ಸಾಮಗ್ರಿ [illegible] ವರು ಕಡಿಮೆ ದರದಲ್ಲಿ ಮಾರುವರೆ ಸಾಧಾರಣ 2700 ಗೋಣಿ ಹೆಸರು, ಕಡಲೆ ಇತ್ಯಾದಿಗಳನ್ನು ಕೊಡಲಿಕ್ಕೆ ಸಿದ್ಧರಿರುವರಾಗಿ ಮಾನ್ಯ ಜಿಲ್ಲಾ ಕಲೆಕ್ಟರರಿಗೆ [illegible]ದಿರುವರು.

ಕಾರ್ಕಳ

ಇಲ್ಲಿಯ ಶ್ರೀ ವೆಂಕಟ್ರಮಣ ಹಾ. ಎ. ಶಾಲೆಯಲ್ಲಿ ೧೩ ವರ್ಷಗಳಿಂದ ಮುಖ್ಯೋಪಾಧ್ಯಾಯರಾಗಿದ್ದು ಈಗ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ನೇಮಕ ಹೊಂದಿರುವ ಶ್ರೀ. ಎಂ. ಎಸ್. ಕಾಮತ್ ಇವರನ್ನು ಬೀಳ್ಕೊಡುವ ಸಮಾರಂಭ ಸದ್ರಿ ಶಾಲೆಯಲ್ಲಿ ಜರಗಿತು.

ಈ ಪಟ್ಟಣದಲ್ಲಿ 'ಶ್ರೀಕೃಷ್ಣಾ ಆಯುರ್ವೇದ ಫಾರ್ಮಸಿ' ಎಂಬ ಚಿಕಿತ್ಸಾಲಯವೊಂದು ತೆರೆಯಲ್ಪಟ್ಟಿದೆ. ಡಾ. ಕೆ. ವಿ. ಕೆ. ಉಪಾಧ್ಯಾಯ ಇವರು ಇದರ ಚಾಲಕರು.

ಇಲ್ಲಿಯ ಸಂತೆಕಟ್ಟೆಯ ಬಳಿಯ ಚರಂಡಿಯಲ್ಲಿ ಆಗಲೇ ಹೆತ್ತ ಗಂಡು ಮಗುವೊಂದರ ಶವ ದೊರಕಿರುವುದಂತೆ. ಮಾನ ಉಳಿಸಲು ಮಹಿಳೆಯೋರ್ವಳು ಮಾಡಿದ ವಿಷಾದಮಯ ಕಾರ್ಯ[illegible]ದೆಂದು ಊಹಿಸಲಾಗಿದೆ.

ಪುತ್ತೂರು

ಕಳೆದ ವಾರ ಇಲ್ಲಿ ಮೊಕ್ಕಾಂ ಮಾ[illegible]ದ್ದ ಡಿ. ಎಸ್. ಪಿ. ಯವರು ಯುದ್ಧ ಸಹಾಯ ಮಾಡುವ ಅವಶ್ಯಕತೆ ಕುರಿತು ಒಂದು ಸಾರ್ವಜನಿಕ ಭಾಷಣವಿತ್ತರು.

ಈ ಕಡೆಗಳಲ್ಲಿ ಅಕ್ಕಿ ಅಭಾವದ ಭಯವು ತಲೆದೋರಿದಂತೆ ಬಾತ್ಮಿಗಳಿವೆ. ವಾರದಲ್ಲಿ ೪ ದಿನ ಅಕ್ಕಿ ಉಳಿದ ದಿನ ಬ[illegible] ಕೊಡಲಾಗುವುದಂತೆ.

ಹೊಸದುರ್ಗ

ಅಕ್ಕಿ ಬತ್ತ ರಿಕ್ವಿಜಿಶನ್ ಸಂಬಂಧದಲ್ಲಿ ಕೆಲವು ಪ್ರಸಿದ್ಧ ಜಮೀನುದಾರರನ್ನು ಈ ಕಡೆಗಳಲ್ಲಿ ಸೆರೆಹಿಡಿದಿರುವರು. ಸರಕಾರಕ್ಕೆ ಮೋಸಮಾಡಿ ಬತ್ತ ಅಡಗಿಸಿಟ್ಟಿದ್ದ ಇವರ ಮೇಲಣ ಆಪಾದನೆ. ಈ ಕಡೆಗಳಲ್ಲಿ ಅಕ್ಕಿ ಪೂರೈಕೆಯು ಕಡಿಮೆ ಇರುವುದರಿಂದ ಲಾಭಬಡಕತನದ ಪ್ರಯತ್ನಗಳಾಗುತ್ತಿರಬಹುದು.

ನೀಲೇಶ್ವರದಲ್ಲಿ ಒಬ್ಬ ಸ್ಟೋರ್ ಕೆಲಸಗಾರನು ಅಕ್ಕಿ ಮುಡಿಯೊಂದನ್ನು ರು[illegible] ಕ್ಕೆ ಮಾರಲು ಪ್ರಯತ್ನಪಟ್ಟುದ[illegible] ಡಿಸ್ಮಿಸ್ ಮಾಡಲ್ಪಟ್ಟಿರುವನಂತೆ.

ಉಡುಪಿ

ನಗರದ ಅನೇಕ ಪ್ರಗತಿಮಯ ಚಟುವಟಿಕೆಗಳಲ್ಲಿ ಭಾಗವಹಿಸುತಿದ್ದು ಜನಪ್ರಿಯರಾದ ಶ್ರೀ. ಯು. ರತ್ನಾಕರಭ[illegible] ಎಂಬ ತರುಣರು ಲಿವರ್ ರೋಗದಿಂ[illegible] ಮರಣಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀ ಕಾಶೀಮಠಾಧೀಶ ಶ್ರೀ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು ಹೊಸದಾಗಿ ಆಶ್ರಮ ಪಡೆದ ತಮ್ಮ ಶಿಷ್ಯ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರೊಂದಿಗೆ ಇಲ್ಲಿಗೆ ದಯಮಾಡಿಸಿದ್ದು ತಮ್ಮ ಶಿಷ್ಯವರ್ಗದವರಿಂದ ಸನ್ಮಾನಿಸಲ್ಪಟ್ಟು ಮುಲ್ಕಿಗೆ ಹಿಂತಿರುಗಿರುವರು.

ಮುಲ್ಕಿ

ಶ್ರೀ ಕಾಶೀಮಠಾಧೀಶರು ಈ ವರ್ಷ ತಮ್ಮ ಚಾತುರ್ಮಾಸ ಅವಧಿಯನ್ನು ಇಲ್ಲಿ ಕಳೆಯುವರಾಗಿ ತಿಳಿದಿದೆ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ವಿಧಿಗಳು ಯಥಾ ಸಾಂಗ್ಯವಾಗಿ ನೆರವೇರಿಸಲ್ಪಟ್ಟವು.

ಹಾರುವ ವಿಮಾನಗಳಿಂದ ಗಂಡಾಂತರವಿದೆ ಯಂತ್ರ ಕೌಶಲ್ಯದಿಂದ ಗೆಲ್ಲುವೆವು

(ಕಡೇ ಪುಟದಿಂದ)

ಕೆಂದರೆ ಜಪಾನನ್ನು ಮುರಿದಿಕ್ಕುವುದು. "ಪರತಂತ್ರವಾಗಿರುವ ಏಶ್ಯಾದ ರಾಷ್ಟ್ರಗಳು ಒಂದು ನಿಶ್ಚಿತ ಕಾಲಾವಧಿಯಲ್ಲಿ ರಾಜಕೀಯ ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಿ, ಮುಂದೆ ಸ್ವತಂತ್ರ ರಾಜ್ಯಭಾರ ಮಾಡಲು ಅವುಗಳನ್ನು ತಯಾರು ಮಾಡಬೇಕೆಂಬುದು" ವೆಲ್ಲೀಸರ ಸೂಚನೆಯಿದೆ.

ಚಿಯಾಂಗ್ ವೆಲ್ಲೀಸರ ಮಾತುಕತೆಗಳಲ್ಲಿ ಹಿಂದೂದೇಶದ ವಿಚಾರವೂ ಮುಖ್ಯವಾಗಿ ಚರ್ಚಿತವಾದ ವಿಷಯವಾಗಿದೆಯೆಂದು ಊಹಿಸಲಾಗಿದೆ. ಚಿಯಾಂಗರು, ಅಮೇರಿಕವು ಹಿಂದೂದೇಶಕ್ಕೆ ಬ್ರಿಟನು ಸ್ವಾತಂತ್ರ್ಯ ಕೊಡುವಂತೆ ಒತ್ತಾಯ ಮಾಡಬೇಕೆಂದು ಹೇಳಿದರಾಗಿ ತಿಳಿದುಬರುತ್ತದೆ. ಅಮೇರಿಕವು ಪ್ರಪಂಚದ ಪರತಂತ್ರ ರಾಷ್ಟ್ರಗಳ ಊರ್ಜಿತಾವಸ್ಥೆಗೆ ಪ್ರಯತ್ನ ಪಡದಿದ್ದರೆ ಅದರಿಂದ ಮುಂದಕ್ಕೆ ಎಂಥಾ ಗಂಡಾಂತರವಿದೆಯೆಂದು ಯಾರೂ ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೆ ಕೇವಲ ಬರಿಯ ಮಾತಿನ, ಕೇವಲ ಶಬ್ದಾಡಂಬರದ ಯಾವ ಭರವಸೆಯೂ ಇಂದು ಜೀರ್ಣವಿದೀರ್ಣವಾದ ಚೀನಕ್ಕೆ ಏನೂ ಸಹಾಯ ಮಾಡಲಾರದು ಚೀನಕ್ಕಿಂದು ಬೇಕಾದುದ ಶಸ್ತ್ರ ಮತ್ತು ಸಾಮುಗ್ರಿ ಸಹಾಯ. ವೆಲ್ಲೀಸರ ಅಭಿಪ್ರಾಯವು ಚಿಯಾಂಗರ ಅಭಿಪ್ರಾಯದೊಡನೆ ಸಮ್ಮತವಿದ್ದರೆ, ಇದಕ್ಕೆ ಅಮೇರಿಕವು ಒಪ್ಪುವುದಿದ್ದರೆ ಮಾತುಗಳಲ್ಲಿರುವ ಅರ್ಥವನ್ನು ಬೇಗನೇ ಕಾರ್ಯರಂಗಕ್ಕಿಳಿಸುವುದು ಅತ್ಯವಶ್ಯವಿದೆ

ಇತರ ವಾರ್ತೆಗಳು

ಜನರಲ್ ಡಿಗೋಲೆಯು ತನ್ನ ಪರಿವಾರ ಸಹಿತ ವಾಶಿಂಗ್‌ಟನ್ನಿಗೆ ಬಂದಿರುವನು. ಇವನ ಪರಿವಾರದಲ್ಲಿ ಸೇನಾಪತಿಗಳೂ ಆರ್ಥಿಕ ತಜ್ಞರೂ ಹಲವರಿರುವರು.

* * *

ಡಾ। ಗೊಬೆಲ್ಸನು ದಿ ರೀಚ್ ಎಂಬ ಪತ್ರಿಕೆಯಲ್ಲಿ ಯುದ್ಧದ ಕುರಿತು ಒಂದು ಲೇಖನ ಬರೆದು ಜರ್ಮನಿಯು ಇನ್ನೂ ಅಧಿಕ ಬಲ ಉಪಯೋಗಿಸಲು ಸಮರ್ಥವಿದೆಯೆಂದು ತಿಳಿಸಿದ್ದಾನೆ.

* * *

ಅಮೇರಿಕ ಮತ್ತು ಬ್ರಿಟನುಗಳು ಜರ್ಮನಿಗಿಂತ ನಾಲ್ಕುಪಾಲು ಬಲ ಹೆಚ್ಚಿಸುತ್ತಿವೆಯೆಂದು ಅಮೆರಿಕದ ತಾತ್ಕಾಲಿಕ ಯುದ್ಧ ಮಂತ್ರಿ ರಾಬರ್ಟ್ ಪ್ಯಾಟರ್‌ಸನ್ ಹೇಳಿದರು ಪೆಸಿಫಿಕಿನಲ್ಲಿಯೂ ಇದೇ ರೀತಿ ಮಾಡಲಾಗುವುದೆಂದರು

* * *

ಲಾರ್ಡ್ ಲೂಯಿ ಮೌಂಟ್‌ಬೇಟನರು ಇಂಫಾಲ ವ್ಯೂಹವನ್ನು ಸಂದರ್ಶಿಸಿದಾಗ ಅನೇಕ ಭಾರತೀಯ ವೀರರಿಗೆ ಭೇಟಿಯನ್ನಿತ್ತರು. ಅಸಾಮ್ ವ್ಯೂಹದಲ್ಲಿ ಮಿತ್ರರಗಳನೇ ಬಲದ ವೇಗವನ್ನು ತಡೆಲಾರದೆ ಜಪಾನರು ಯೂಕರೂಲಿನಿಂದ ನಾಲ್ಕು ಮೈಲು ದೂರವಿರುವ ಸಿರೂಹಿ ಎಂಬ ಹಳ್ಳಿಗೆ ಬೆಂಕಿಕೊಟ್ಟು ಖಾಲಿ ಮಾಡಿ ಹೋದರು. ಮಿತ್ರರ ಮುನ್ನಡೆ ಇಲ್ಲಿ ಮುಂದೆ ಸಾಗುತ್ತಿದೆ.

* * *

ಇಂಗ್ಲೆಂಡಿನ ಮೇಲೆ ಹಾರುವ ವಿಮಾನಗಳು ಒಂದೇ ತರದಲ್ಲಿ ಧಾಳಿಯಿಡುತ್ತಿದ್ದು ಅನೇಕ ಹಾನಿಗಳನ್ನುಂಟುಮಾಡುತ್ತಿವೆ.

* * *

ಭೀಷಣಪುರ ಪ್ರದೇಶದಲ್ಲಿಯೂ ಹಿಂಗಪೊಂಗದ ದಕ್ಷಿಣದಲ್ಲಿಯೂ ಶತ್ರುಗಳು ಹಿಂದೆಸರಿದರು. ಶಿಲಾಚಾರ ರಸ್ತೆಯ ದಕ್ಷಿಣದಲ್ಲಿ ಕೈಕೈ ಕಾಳಗವಾಗುತ್ತಿದೆ ಜನರಲ್ ಸ್ಟಿಲ್‌ವೆಲ್ಲರ ಚೀನೀ ಹಾಗೂ ಅಮೇರಿಕನ್ ಸೇನೆಗಳು ಮುಂದೊತ್ತುತ್ತಿವೆ. ಲಿಂಗಮಾಂಗವನ್ನು ಆಕ್ರಮಿಸಿದ ಚೀನೀ ದಳ ಕ್ಯಾಂಟನ್ ಉತ್ತರದಲ್ಲಿ ಶತ್ರುವನ್ನು ಹಿಮ್ಮೆಟ್ಟಿಸಿದೆ

* * *

ರಶ್ಯ ರಣರಂಗದಲ್ಲಿ ಕೊವೆಲವನ್ನು ಆಕ್ರಮಿಸಲಾಗಿದೆಯೆಂದು ಸ್ಟಾಲಿನರು ತಿಳಿಸಿದ್ದಾರೆ ಕೆರೆಲಿಯನ್ ವ್ಯೂಹದಲ್ಲಿ ಧಾಳಿ ಮಾಡಿದ ಚೀನೀ ಸೇನೆಯು ಸಾಲ್ಮಿಯನ್ನು ಆಕ್ರಮಿಸಿದೆ ವಿಲ್ನಾದ ಕಡೆಗೂ ರಶ್ಯನ್ ಸೇನೆ ಮುಂದೊತ್ತುತ್ತಿದೆ ಬಿಳಿರಶ್ಯದಲ್ಲಿ ಜರ್ಮನ್ ಪ್ರತಿಭಟನೆ ಇದಿರಿಸಲಾಗುತ್ತಿದೆ

* * *

ಸಂಧಾನದ ಬಗ್ಗೆ, ಹಿಟ್ಲರನು ಶರತಗಳನ್ನು ಕಳುಹಿಸಿದ್ದು ಅವು ನಿರಾಕರಿಸಲ್ಪಟ್ಟ ಎಂದು ಸುದ್ದಿಯಿದೆ ಹಿಟ್ಲರನು ನಿವೃತ್ತನಾಗುವುದೂ, ಹಾರುವ ವಿಮಾನ ಧಾಳಿ ನಿಲ್ಲಿಸುವುದೂ ಆ ಶರತಗಳಲ್ಲಿ ಇದೆಯೆಂದು ಹೇಳಲಾಗಿದೆ

ಅಮೇರಿಕಾದಲ್ಲಿ

ಯುದ್ಧದ ದೆಸೆಯಿಂದಾಗಿ ಭೂವ್ಯವಸಾಯದಲ್ಲಿ ಉತ್ತಮತರದ ಅನೇಕ ಮಾರ್ಪಾಡುಗಳಾಗಿವೆ, ನೂತನ ಸೌಕರ್ಯಗಳು ಬೆಳಕಿಗೆ ಬಂದಿವೆ,—ಹೀಗೆಂದು ಸಂಯುಕ್ತ ಅಮೇರಿಕಾ ಸರಕಾರದ ವರದಿಯಾಗಿರುತ್ತದೆ ಈ ಮೊದಲೆ ಆಧುನಿಕ ತರದಲ್ಲಿ ಸಾಗುವಳಿ ಮಾಡುತ್ತಿರುವ ಸಂಯುಕ್ತ ಅಮೇರಿಕಾವು ಈ ನವೀನ ಶೋಧಗಳಿಂದ ಇನ್ನೂ ಮುಂದುವರಿಯುತ್ತಿದೆ

* * *

ಅಮೇರಿಕಾದಲ್ಲಿ ಇಂದು ಪ್ರತಿಯೊಂದು ವ್ಯವಸಾಯದಲ್ಲಿ 'ಸಹಕಾರ' ಸೂತ್ರವು ಬಹಳ ಬಳಕೆಗೆ ಬಂದಿರುವುದು ಸಂಯುಕ್ತ ಅಮೇರಿಕಾದ ವಿವಿಧ ನಗರ ನಾಡುಗಳಲ್ಲಿ ಸಾಗುವಳಿ, ಹಾಲಿನ ವ್ಯವಸಾಯ, ಇತ್ಯಾದಿ ಮನುಷ್ಯನಿಗೆ ಆಹಾರ ಇತ್ಯಾದಿಗಳನ್ನು ಒದಗಿಸುವ ಸಹಕಾರ ಸಂಘಗಳು ತಲೆಯೆತ್ತಿ, ರೈತನಿಗೂ ರೈತನ ಒಡವೆಗಳನ್ನು ಸೇವಿಸುವವನಿಗೂ ತುಂಬಾ ಉಪಕಾರಿಯಾಗಿ ನಡೆಯುತ್ತಿವೆ. ಮಾನವ ಸಮಾಜಕ್ಕೆ ಉಪಯುಕ್ತವೆನಿಸುವ ಪ್ರತಿಯೊಂದು ವ್ಯವಸಾಯ ಉದ್ಯೋಗವು ಸಹಕಾರ ಸೂತ್ರಗಳನ್ನಾದರಿಸಿ ನಡೆಯುತ್ತಿದೆ ಹೆಚ್ಚೇಕೆ ಅಲ್ಲಿನ ಒಂದು ನಾಡಿನಲ್ಲಿ ಸಹಕಾರಿ ಆಸ್ಪತ್ರೆಯೊಂದು ಸ್ಥಾಪನೆಯಾಗಿರುತ್ತದೆ ಸಿರಿಯಾದಿಂದ ಅಲ್ಲಿಗೆ ತೆರಳಿದ ವೈದ್ಯರೊಬ್ಬರ ಸಾಹಸದಿಂದ, ಚಿಕ್ಕ ಬಂಡವಾಳದೊಡನೆ ಪ್ರಾರಂಭವಾದ ಈ ಸಂಸ್ಥೆಯಲ್ಲಿ ಬಹಳ ಬೆಳೆದಿದ್ದು, ಶಸ್ತ್ರ ಚಿಕಿತ್ಸೆ, X-ರೇ ಇತ್ಯಾದಿ ಆಧುನಿಕ ವೈದ್ಯಕೀಯ ಅನುಕೂಲತೆಗಳು ಅಲ್ಲಿ ದೊರಕುತ್ತಿವೆ. ಸಾವಿರಾರು ಮಂದಿಗಳು ಈ ಚಿಕಿತ್ಸಾಲಯದಿಂದ ಗುಣಲಾಭವನ್ನು ಹೊಂದುತ್ತಿರುವರು.

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A 99/1944.
O. S. 400/1941.

ವಾದಿ – ಮಂಜುನಾಥಯ್ಯ

ಪ್ರತಿವಾದಿರು—ಕೃಷ್ಣಪ್ಪಯ್ಯ ಕೂಡಾ

1 ಕೃಷ್ಣಪ್ಪಯ್ಯ, 3 ರಾಮಯ್ಯ, ವಾಸುದೇವಯ್ಯನ ಮಕ್ಕಳು, ದಾರವಾಡ ಜಿಲ್ಲಾ ಹಾನಗಲ್ಲು.

4 ಮ್ಯಾನರ್ ಸುಬ್ರಾಯ, 5 ಮ್ಯಾನರ್ ವೆಂಕಟ್ರಮಣ, ರಾಮಕೃಷ್ಣ ಭಟ್ಟರ ಮಕ್ಕಳು, ಇವರ ಗಾರ್ಡಿಯನ್ ತಾಯಿ ಲಕ್ಷ್ಮಿ ಅಮ್ಮ ರಾಮಕೃಷ್ಣ ಭಟ್ಟರ ವಿಧವೆ, ಮರವಂತೆ ಗ್ರಾಮ ಕುಂದಾಪುರ ತಾಲೂಕು

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ವಾದಿಯು ಸದ್ರಿ ಡಿಕ್ರಿಯ ಮೇಲೆ ಫ್ಯಾನಲ್ ಡಿಕ್ರಿ ಬಗ್ಗೆ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾನೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ರೆ ತಾರೀಕು 31–7–1944ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹಿರು ಮಾಡಿಕೊಳ್ಳುವಲ್ಲಿ ತಪ್ಪಿದರೆ ನಿಮ್ಮ ಗೈರ್ ಹಾಜರಾತಿಯಲ್ಲಿ ಸದ್ರಿ ಅರ್ಜಿಯ ಮುಂದಿನ ಕ್ರಮ ನಡಿಯಲಾಗುವುದು

ಕುಂದಾಪುರ 7–7–44 — K Raghunath Shenai, ವಾದಿಯ ಕಡೆ ವಕೀಲರು

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 364/1944
R. I. A 362/1944.
O. S 299/1943.

ವಾದಿ– ವಿಠ್ಠಲ ಮಂಜುನಾಥ ಕಾಮತ್

ಪ್ರತಿವಾದಿರು–ಮ್ಯಾನರ್ ಮೋಹನ್ ರಾವ್ ಕೂಡಾ

1 ಮ್ಯಾನರ್ ಮೋಹನ್ ರಾವ್, 3 ಮ್ಯಾನರ್ ಗಂಗಾಬಾಯಿ, 4 ಮ್ಯಾನರ್ ಬೇಬಿ–ಪಡು ಕೋಣೆ ಶಾಲಾ ಮಾಸ್ತರ್ ದತ್ತರಾಯರ ಮಕ್ಕಳು–ಇವರ ಗಾರ್ಡಿಯನ್ ಅಜ್ಜ–K Ananthayya Retired Port Office clerk, Bhavanthkeri Mangalore town.

6 ಬಸ್ರೂರು ಕಾವೇರಿ ಹೆಂಗ್ಸು–ಸುಬ್ಬ ಮೇಣ್ಯನ ಮಗಳು ವ ರಾಮ ಮೇಣ್ಯನ ಹೆಂಡ್ತಿ ಬಸ್ರೂರು ಗ್ರಾಮ

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ವಾದಿಯು ಸದ್ರಿ ಡಿಕ್ರಿಯ ಮೇಲೆ ಫ್ಯಾನಲ್ ಡಿಕ್ರಿಯ ಬಗ್ಗೆ ಮತ್ತು 6ನೇ ಎದ್ರಿಯನ್ನು ಸಪ್ಲಿಮೆಂಟು 6ನೇ ಪ್ರತಿವಾದಿಯನ್ನಾಗಿ ಸೇರಿಸುವ ಬಗ್ಗೆ ದಾಖಲು ಮಾಡಿದ ಮೇಲಿನ ಅರ್ಜಿಗಳು ತಾರೀಕು 31–7–1944ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹಿರು ಮಾಡಿಕೊಳ್ಳುವಲ್ಲಿ ತಪ್ಪಿದರೆ ನಿಮ್ಮ ಗೈರ್ ಹಾಜರಾತಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು

ಕುಂದಾಪುರ 7–7–44 — K Raghunath Shenai, ವಾದಿಯ ಕಡೆ ವಕೀಲರು

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD 1931

HEAD OFFICE Mangalore. SUNDER MANGALORE BRANCHES Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Dec.)

Savings bank Accounts 1½% p. a. on daily balances.

FixedDeposits 6 months 2% p. a.
12 months 2½% p. a.
24 months 3% p. a

The Bank also accepts season and short term deposits and many other lucrative schemes at most favourable rates of interest. For terms etc, apply to Head office or Branches.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋಡಿಮ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ. ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

- ★ Premiums are low. ★ 2½% Rebate on annual premiums.
- ★ "Permanent Disability Benefits free of any cost.
- ★ Payment of double the insured amount in case of death by accident at a very smallcost of Rs 1-8-0 per 1000.
- ★ Special rebates on large size policies
- ★ A special scheme by which lapsed policies can be revived without paying the arrears
- ★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the super vision of the experienced staff A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಧನ್ವಂತ್ರಿ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಾ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 21—7—1944 [ಸಂಚಿಕೆ 29]

'ರಾಷ್ಟ್ರೀಯ ಸರಕಾರ

ಯುದ್ಧ ಯತ್ನಕ್ಕೆ ಸಹಾಯ ನೀಡುವುದು'

'ನಾನು ಸತ್ಯಾಗ್ರಹ ಪ್ರಾರಂಭಿಸುವುದಿಲ್ಲ'

—ಮಹಾತ್ಮರ ಸ್ಪಷ್ಟೀಕರಣ—

ಲಂಡನಿನ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿ ಸ್ಟೂವರ್ಟ್ ಗೆಲ್ಡರರು ಇತ್ತೀಚೆಗೆ ಮಹಾತ್ಮರನ್ನು ಭೇಟಿಯಾದಾಗ, ಮಹಾತ್ಮರು ಗೆಲ್ಡರರೊಡನೆ ಭಾರತದ ರಾಜಕೀಯದ ಕುರಿತು ಹೇಳಿದ ಮಾತುಗಳಲ್ಲಿ ಕೆಲವಂಶವೀಗ ಪ್ರಕಟವಾಗಿದ್ದೆ, ಅದು ಇಂತಿದೆ.

ಈಗ ಸತ್ಯಾಗ್ರಹ ವಿಲ್ಲ

"ಈಗ ಚಳವಳ ಹೂಡಬೇಕೆಂದು ನನ್ನ ಉದ್ದೇಶವಿಲ್ಲ. ನನ್ನ ದೇಶದ ಜನರನ್ನು ೧೯೪೨ರ ಪರಿಸ್ಥಿತಿಗೆ ನಾನು ಪುನಃ ಒಯ್ಯಲಾರೆನು ಎಂದೂ ಇತಿಹಾಸದ ಪುನರಾವೃತ್ತಿಯಾಗಲಾರದು, ಕಾಂಗ್ರೆಸಿನಿಂದ ನಾನು ಅಧಿಕಾರ ಪಡೆದುಕೊಳ್ಳದಿದ್ದರೂ, ಜನತೆಯ ಮೇಲೆ ಇರಬಹುದೆಂದು ಭಾವಿಸಲಾದ ನನ್ನ ಪ್ರಭಾವದಿಂದ ನಾನು ಚಳವಳ ಹೂಡಬಲ್ಲೆನು. ಆದರೆ ನಾನು ಹಾಗೆ ಮಾಡಿದರೆ ಬ್ರಿಟಿಷ್ ಸರಕಾರವನ್ನು ಕಷ್ಟದಲ್ಲಿ ಸಿಲುಕಿಸುವ ಬಗ್ಗೆ ಮಾತ್ರ ಹಾಗೆ ಮಾಡಿದಂತಾಗುವುದು. ಇದು ನನ್ನ ಉದ್ದೇಶವಾಗಲು ಸಾಧ್ಯವಿಲ್ಲ.

"ಪರಿಸ್ಥಿತಿಯನ್ನು ನಾನು ಹೊಸದಾಗಿ ಪರಿಶೀಲಿಸಬೇಕು. ನನ್ನ ಬಿಡುಗಡೆಯ ನಂತರ ದೊರೆತ ನನ್ನ ಅನುಭವದ ವಿಚಾರ ಪ್ರತಿಕ್ರಿಯೆ ಏನೆಂದು ಮುಖ್ಯವಾಗಿ ತಿಳಿಯಬೇಕು. ನಾನು ಆ ದೃಷ್ಟಿಯಿಂದ ಅವರ (ವರ್ಕಿಂಗ್ ಕಮಿಟಿ ಸದಸ್ಯರ) ಭೇಟಿಮಾಡುವುದು ಮಾತ್ರವಲ್ಲದೆ ೧೯೪೨ರಲ್ಲಿ ಸರಕಾರದವರು ಮುರಿದ ಸಂಬಂಧವನ್ನು ಪುನಃ ಸರಿಗೊಳಿಸಲು ಪ್ರಯತ್ನಿಸುವೆನು. ಆಗಲೂ ನಾನು ಮೊದಲು ಮಾತುಕತೆ ಮಾಡಬೇಕೆಂದಿದ್ದೆ. ಅದು ವಿಫಲವಾದರೆ ಮಾತ್ರ ಸತ್ಯಾಗ್ರಹ ಹೂಡುವವನಿದ್ದೆ. ಈಗಲಾದರೂ ವೈಸರಾಯರೊಡನೆ ವಿಚಾರವಿನಿಮಯ ಮಾಡಬೇಕು."

ಯುದ್ಧಾನಂತರದ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡುವ ಭರವಸೆಯಾಗಿ, ಪೂರ್ಣ ನಾಗರಿಕ ಆಡಳಿತದ ಅಧಿಕಾರವುಳ್ಳ ರಾಷ್ಟ್ರೀಯ ಸರಕಾರ ರಚಿಸಲ್ಪಟ್ಟರೆ ಅದರಲ್ಲಿ ಕಾಂಗ್ರೆಸು ಭಾಗವಹಿಸುವಂತೆ ಸಲಹೆ ಮಾಡಲು ಗಾಂಧೀಜಿ ಸಿದ್ಧರಿರುವರೆಂದೂ ಸರಕಾರದವರು ಈ ಸುಸಂಧಿ ಕಳೆದುಕೊಳ್ಳಲಾರದೆಂದೂ ಗೆಲ್ಡರರ ಅಭಿಪ್ರಾಯವಿದೆ. ಮಹಾತ್ಮರನ್ನು ಭೇಟಿಯಾದ ಇವರು ಪುನಃ ವೈಸರಾಯರನ್ನು ಕಂಡು ಮಹಾತ್ಮರೊಡನೆ ನಡೆದ ಕತೆಗಳ ವಿವರ ತಿಳಿಸಿದರೆಂದೂ ವರದಿಯಾಗಿದೆ.

ಮಹಾತ್ಮರು ಬ್ರಿಟಿಷ್ ಪತ್ರಿಕಾ ಸುದ್ದಿಗಾರನಿಗೆ ಹೇಳಿದ ಮಾತುಗಳಲ್ಲಿ ಕೆಳಗಿನ ವಿಷಯಗಳೂ ಅಡಕವಾಗಿವೆಯೆಂದು ತಿಳಿಯುತ್ತದೆ.

"ನಾನು ಯುದ್ಧದ ಪ್ರಯತ್ನಕ್ಕೆ ಸಹಾಯ ಮಾಡುವೆನು. ಆದರೂ ವರ್ಕಿಂಗ್ ಕಮಿಟಿ ಸದಸ್ಯರ ವಿಚಾರ ತಿಳಿಯದೆ ಏನೂ ಮಾಡಲಾರೆ. ಅಗಸ್ಟ್ ನಿರ್ಣಯದಿಂದ ನನಗೆ ಬಂದ ಅಧಿಕಾರವು ನನ್ನ ಬಂಧನದಿಂದ ಕೊನೆಗೊಂಡಿತು. ವೈಸರಾಯರಿಗೆ ವೈಯುಕ್ತಿಕ ಅಭಿಪ್ರಾಯವೇನಿದ್ದರೂ ಅವರಿಗೆ ಪೂರ್ಣ ರಾಜಕೀಯ ಅಧಿಕಾರವೇನೂ ಇಲ್ಲ. ಚರ್ಚಿಲರಿಗೆ ಯಾವುದೇ ವಿಧದ ಜಪ್ಪಾಣವೂ ಬೇಕಾಗಿಲ್ಲ. ನನ್ನನ್ನು 'ಪುಡಿಮಾಡುವ' ಇಚ್ಛೆ ಅವರಿಗಿದೆ. ನನ್ನ ಸುದೈವವೋ ಅವರ ದುರ್ದೈವವೋ ಸತ್ಯಾಗ್ರಹಿಯನ್ನು ಯಾರೂ ಪುಡಿಮಾಡಲಾರರು. ಏಕೆಂದರೆ ಅವನು ತನ್ನ ಶರೀರವನ್ನು ಬಲಿದಾನಕ್ಕೆ ಅರ್ಪಿಸುತ್ತಾನೆ ಮತ್ತು ಅವನ ಆತ್ಮ ಸದಾ ಸ್ವತಂತ್ರವಿರುವುದು.

ರಾಷ್ಟ್ರೀಯ ಸರಕಾರವಾಗಲಿ

"ಇಂದು ಜನರು ಸಂಕಷ್ಟಗಳಿಗೆ ತುತ್ತಾಗಿರುವರು. ಇದನ್ನು ನೋಡಿ ವರ್ಕಿಂಗ್ ಕಮಿಟಿ ಸದಸ್ಯರಾದರೂ ಸುಮ್ಮಗಿರಲಾರರು. ಬ್ರಿಟಿಷರಿಂದ ಭಾರತೀಯರ ಕೈಗೆ ಪೂರ್ಣ ಅಧಿಕಾರ ಬಾರದೆ ಜನತೆಯ ಕಷ್ಟನಿವಾರಣೆಗೆ ಏನೂ ಮಾಡಲೂ ಸಾಧ್ಯವಾಗುವುದಿಲ್ಲ. ಅಂಥಾ 'ಅಧಿಕಾರ ಬಂದಿದ್ದರೆ ಮಾತ್ರ ತೊಂದರೆಯುಂಟಾದೀತು. ನಾಗರಿಕರ ಆಡಳಿತಕ್ಕೊಳಪಟ್ಟ ಕೇಂದ್ರ ರಾಷ್ಟ್ರೀಯ ಸರಕಾರದಿಂದ ಇಂದು ನನಗೆ ತೃಪ್ತಿಯಿದೆ. ಪ್ರಜಾಪ್ರತಿನಿಧಿಗಳಾದ ಕೇಂದ್ರ ಶಾಸನ ಸಭೆಯ ಸದಸ್ಯರಿಂದ ಆರಿಸಲ್ಪಟ್ಟ ಜನರಿಂದ ಇಂಥ ಸರಕಾರ ರಚಿತವಾಗುವುದು. ಹೀಗಾಗುವುದೆಂದರೆ ಯುದ್ಧಕಾಲದಲ್ಲಿ ಭಾರತ ಸ್ವಾತಂತ್ರ್ಯವನ್ನು ಸಾರಿದಂತಾಗುವುದು. ರಾಷ್ಟ್ರೀಯ ಸರಕಾರವು ಸೈನ್ಯ ಖಾತೆಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಬಹುದು. ಆದರೆ ಅಧಿಕಾರ ಮಾತ್ರ ರಾಷ್ಟ್ರೀಯ ಸರಕಾರದ್ದೇ ಆಗುವುದು. ಇಲ್ಲಿ ವೈಸರಾಯರು ಹೊಣೆಗಾರರಾದ ಮಂತ್ರಿಗಳಿಂದ ನಿರ್ದಿಷ್ಟವಾದ ಇಂಗ್ಲೆಂಡಿನಿಂದ ಅರಸನಂತೆ ಉಳಿಯುವರು. ಸ್ವಾಭಾವಿಕವಾಗಿ ಕೇಂದ್ರ ಮತ್ತು ಪ್ರಾಂತಗಳಲ್ಲಿ ಭಾರತದ ಜನರ ಹೊಣೆಯಾದ ಸರಕಾರ ಸ್ಥಾಪಿತವಾಗುವುದು. ಸೈನ್ಯಖಾತೆಯ ಬಗ್ಗೆ ಮಾತ್ರ ವೈಸರಾಯ್ ಮತ್ತು ಸೇನಾಪತಿಗಳದೇ ಸಂಪೂರ್ಣ ಅಧಿಕಾರವಿದ್ದರೂ ರಾಷ್ಟ್ರೀಯ ಸರಕಾರಕ್ಕೆ ಸೈನ್ಯ ಚಟುವಟಿಕೆಗಳ ವಿಷಯ ಸೂಚನೆ ಕೊಡಲು ಅಧಿಕಾರವಿರಬೇಕು. ಮಿತ್ರಸೈನ್ಯಕ್ಕೆ ಭಾರತದಲ್ಲಿ ತಮ್ಮ ಚಟುವಟಿಕೆ ಸಾಗಿಸಲು ಅವಕಾಶವಿದೆ. ಆದರೆ ಈ ಮಿತ್ರ ಸೈನ್ಯದ ಖರ್ಚನ್ನು ರಾಷ್ಟ್ರೀಯ ಸರಕಾರ ಕೊಡಲಾರದು.

"ರಾಷ್ಟ್ರೀಯ ಸರಕಾರ ರಚಿತವಾದರೆ ಕಾಂಗ್ರೆಸು ಅದರಲ್ಲಿ ಭಾಗವಹಿಸಿ ಯುದ್ಧಕ್ಕೆ ಸಹಾಯ ಮಾಡುವುದು. ನಾನು ಅಹಿಂಸೆಯನ್ನು ಅಂಗೀಕರಿಸಿದವನು. ಭಾರತಕ್ಕೆ ಸ್ವಾತಂತ್ರ್ಯದ ಭರವಸೆ ದೊರೆತ ನಂತರ ನಾನು ಕಾಂಗ್ರೆಸಿನ ಸಲಹೆಗಾರನಾಗಿ ಉಳಿಯಲಾರೆ. ಆದರೆ ನಾನು ರಾಷ್ಟ್ರೀಯ ಸರಕಾರಕ್ಕಾಗಲಿ ಕಾಂಗ್ರೆಸಿಗಾಗಲಿ ಅಡ್ಡಿಮಾಡಲಿಕ್ಕಿಲ್ಲ.

"ಅಗಸ್ಟ್ ನಿರ್ಣಯ ರದ್ದಾಗಿಲ್ಲ. ಆ ನಿರ್ಣಯದ ಒಂದಕ್ಷರವನ್ನಾದರೂ ಬದಲಾಯಿಸಲಿಕ್ಕೆ ವರ್ಕಿಂಗ್ ಕಮಿಟಿಗೂ ಎ. ಐ. ಸಿ. ಸಿಗೂ ಅಲ್ಲದೆ ಇನ್ನಾರಿಗೂ ಅಧಿಕಾರವಿಲ್ಲ. ಆದರೆ ಆ ನಿರ್ಣಯದ ಪ್ರಕಾರ ದೊರೆತ ನನ್ನ ಅಧಿಕಾರ ಮಾತ್ರ ನನ್ನ ಬಂಧನದಿಂದ ಲೋಪವಾಗಿದೆ.

ಜಿನ್ನರು ಬ್ರಿಟಿಷರ ಸಾಧನ

"ಜಿನ್ನರಾಗಲಿ, ಅಧಿಕಾರದಲ್ಲಿರುವವರಾಗಲಿ ನನ್ನ ಸೂಚನೆ ಸ್ವೀಕರಿಸದಿರುವುದು ನನ್ನ ದುರ್ದೈವ. ಅವರಲ್ಲಿ ಯಾರಿಗೂ ಈಗ ಭಾರತವು ಸ್ವತಂತ್ರವಾಗಬೇಕಾಗಿಲ್ಲವೆಂದೂ, ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಯುದ್ಧವನ್ನು ಗೆಲ್ಲುವಲ್ಲಿ ಭಾರತಕ್ಕೆ ಪೂರ್ಣ ಪಾಲು ಕೊಡುವ ಮನಸ್ಸಿಲ್ಲವೆಂದೂ ಇದರಿಂದ ಸ್ಪಷ್ಟವಾಗುವುದು. ಭಾರತಕ್ಕೆ ಇಷ್ಟರಲ್ಲೆ ಸಿಗಬೇಕಾಗಿದ್ದ ಸ್ವಾತಂತ್ರ್ಯವನ್ನು ಕೊಡಲು ಬ್ರಿಟಿಷ್ ಸರಕಾರಕ್ಕೆ ಇಚ್ಛೆಯಿಲ್ಲದಿರುವುದರಿಂದ ಬ್ರಿಟಿಷರು ಜಿನ್ನರನ್ನು ಸಾಧನವಾಗಿ ಉಪಯೋಗಿಸುತ್ತಿರುವರಲ್ಲದೆ ಜಿನ್ನರು ಅಡ್ಡಿಮಾಡುತ್ತಾರೆಂದು ನನಗೆ ತೋರುವುದಿಲ್ಲ.

"ಭಾರತದ ಆಕಾಂಕ್ಷೆಗಳನ್ನು ಬದಿಗಿರಿಸಲು ನಡೆದ ಘೋರವಾದ ಒಳಸಂಚನ್ನು ಮುರಿಯಬೇಕು. ಪಾಶವೀ ಶಕ್ತಿಯಿಂದ ಯುದ್ಧ ಗೆಲ್ಲಲೂ ಬಹುದು. ಆದರೆ ಅದು ಕೇವಲ ಶಾರೀರಿಕ ವಿಜಯ. ನಾನು ಧ್ಯೇಯದ ಸಲುವಾಗಿ ಹೋರಾಡುತ್ತೇನೆ. ನಾನು ಸಾಯುವುದಾದರೂ ಅದರ ಸಲುವಾಗಿಯೇ?'

ಹೀಗೆ ಗಾಂಧೀಜಿ ಈ ವಾರದಲ್ಲಿ ತನ್ನ ಹಲವು ವಿಚಾರಗಳನ್ನು ಹೊರಗೆಡಹಿದ್ದಾರೆ. ರಾಷ್ಟ್ರೀಯ ಸರಕಾರ ಸ್ಥಾಪಿತವಾದರೆ, ಯುದ್ಧಕ್ಕೆ ಬೆಂಬಲ ಸಿಗಬಹುದೆಂದಿದ್ದಾರೆ. ಸತ್ಯಾಗ್ರಹ ತಾನು ಪುನಃ ಈಗ ಪ್ರಾರಂಭಿಸುವುದಿಲ್ಲವೆಂದಿದ್ದಾರೆ. ಇತರ ಕೂಲಂಕುಷ ವಿಷಯಗಳನ್ನೂ ಸೂಚಿಸಿದ್ದಾರೆ. ಸರಕಾರವು ಈಗಲಾದರೂ ಮುಂದೆ ಬಂದೀತೆ?

ಮಹಾತ್ಮಾಜಿಯವರ ಸೂಚನೆಗಳ ಕುರಿತು ವಿದೇಶಗಳ ಅಭಿಪ್ರಾಯ

ಮಹಾತ್ಮಾಜಿಯವರ ಸೂಚನೆಗಳು ಬಹಳ ತೃಪ್ತಿಕರಯಿದೆ, ಹಿಂದೂದೇಶದ ಈಗಿನ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸುವಂತಹದಿದೆ, ಬ್ರಿಟಿಷ ಸರಕಾರವು ಈಗ ಮುಂದೆ ಬಂದು, ಗಾಂಧಿಜಿಯು ನೀಡ್ಡಿದ ಈ ಸ್ನೇಹ ಕೈಯನ್ನು ಸ್ವೀಕರಿಸಬಹುದು, ಮೊದಲಾಗಿ ಅಭಿಪ್ರಾಯಗಳು ಅಮೆರಿಕನ್ ಮತ್ತು ಇಂಗ್ಲಾಂಡಿನ ಅನೇಕ ಪತ್ರಿಕೆಗಳಲ್ಲಿ ಪ್ರಸಿದ್ಧಿಸಲ್ಪಟ್ಟಿವೆ.

ಮೆಡಮ್ ಚಿಯಾಂಗ್-ಶೇಕರು

ಚೀನಾ ನಾಯಕರ ಪತ್ನಿಯಾದ ಮೆಡಮ್ ಚಿಯಾಂಗ್ ಕೈಶೇಕರು ಯಾವುದೋ ಒಂದು ಕಾರ್ಯನಿಮಿತ್ತ ಬ್ರೆಜಲಿಗೆ ತೆರಳಿರುವರಾಗಿ ವದಂತಿಯಿದೆ. ಹೊರಡುವ ಮುನ್ನ, ಅವರಿಗೆ ಸ್ವಲ್ಪ ದೇಹಾಲಸ್ಯವಿತ್ತು. ಈ ಕಾರಣದಿಂದ ಸಂಯುಕ್ತ ಅಮೇರಿಕದ ಸಂದರ್ಶನವು ಮೊದಲು ಅವರ ಕಾರ್ಯಕ್ರಮದಲ್ಲಿದ್ದುದನ್ನು ಈಗ ರದ್ದುಮಾಡಲಾಗಿದೆ.

The Bank of Mangalore Limited, Mangalore.

ESTD: 1931

HEAD OFFICE BUNDER MANGALORE. **BRANCHES** Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

FixedDeposits 6 months 2% p. a.
12 months 2½% p. a.
24 months 3% p. a.

The Bank also accepts season and short term deposits and many other lucrative schemes at most favourable rates of interest. For terms etc. apply to Head office or Branches.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

- ★ Premiums are low.
- ★ 2½% Rebate on annual premiums.
- ★ "Permanent Disability Benefits free of any cost.
- ★ Payment of double the insured amount in case of death by accident at a very smallcost of Rs. 1-8-0 per 1000.
- ★ Special rebates on large size policies.
- ★ A special scheme by which lapsed policies can be revived without paying the arrears
- ★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Offce KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ, ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 21—7—1944 [ಸಂಚಿಕೆ 29]

ರಾಷ್ಟ್ರೀಯ ಸರಕಾರ

ಯುದ್ಧ ಯತ್ನಕ್ಕೆ ಸಹಾಯ ನೀಡುವುದು

'ನಾನು ಸತ್ಯಾಗ್ರಹ ಪ್ರಾರಂಭಿಸುವುದಿಲ್ಲ'

—ಮಹಾತ್ಮರ ಸ್ಪಷ್ಟೀಕರಣ—

ಲಂಡನಿನ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿ ಸ್ಟುವರ್ಟ್ ಗಿಲ್ಡರರು ಇತ್ತೀಚೆಗೆ ಮಹಾತ್ಮರನ್ನು ಭೇಟಿಯಾದಾಗ, ಮಹಾತ್ಮರು ಗಿಲ್ಡರರೊಡನೆ ಭಾರತದ ರಾಜಕೀಯದ ಕುರಿತು ಹೇಳಿದ ಮಾತುಗಳಲ್ಲಿ ಕೆಲವಂಶವೀಗ ಪ್ರಕಟವಾಗಿದೆ, ಅದು ಇಂತಿದೆ.

ಈಗ ಸತ್ಯಾಗ್ರಹ ವಿಲ್ಲ

"ಈಗ ಚಳವಳ ಹೂಡಬೇಕೆಂದು ನನ್ನ ಉದ್ದೇಶವಿಲ್ಲ. ನನ್ನ ದೇಶದ ಜನರನ್ನು ೧೯೪೨ರ ಪರಿಸ್ಥಿತಿಗೆ ನಾನು ಪುನಃ ಒಯ್ಯಲಾರೆನು ಎಂದೂ ಇತಿಹಾಸದ ಪುನರಾವೃತ್ತಿಯಾಗಲಾರದು, ಕಾಂಗ್ರೆಸಿನಿಂದ ನಾನು ಅಧಿಕಾರ ಪಡೆದುಕೊಳ್ಳದಿದ್ದರೂ, ಜನತೆಯ ಮೇಲೆ ಇರಬಹುದೆಂದು ಭಾವಿಸಲಾದ ನನ್ನ ಪ್ರಭಾವದಿಂದ ನಾನು ಚಳವಳ ಹೂಡಬಲ್ಲೆನು ಆದರೆ ನಾನು ಹಾಗೆ ಮಾಡಿದರೆ ಬ್ರಿಟಿಷ್ ಸರಕಾರವನ್ನು ಕಷ್ಟದಲ್ಲಿ ಸಿಲುಕಿಸುವ ಬಗ್ಗೆ ಮಾತ್ರ ಹಾಗೆ ಮಾಡಿದಂತಾಗುವುದು. ಇದು ನನ್ನ ಉದ್ದೇಶವಾಗಲು ಸಾಧ್ಯವಿಲ್ಲ

"ಪರಿಸ್ಥಿತಿಯನ್ನು ನಾನು ಹೊಸದಾಗಿ ಪರಿಶೀಲಿಸಬೇಕು ನನ್ನ ಬಿಡುಗಡೆಯ ನಂತರ ದೊರೆತ ನನ್ನ ಅನುಭವದ ವಿಚಾರ ಪ್ರತಿಕ್ರಿಯೆ ಏನೆಂದು ಮುಖ್ಯವಾಗಿ ತಿಳಿಯಬೇಕು ನಾನು ಆ ದೃಷ್ಟಿಯಿಂದ ಅವರ (ವರ್ಕಿಂಗ್ ಕಮಿಟಿ ಸದಸ್ಯರ) ಭೇಟಿಮಾಡುವುದು ಮಾತ್ರವಲ್ಲದೆ ೧೯೪೨ರಲ್ಲಿ ಸರಕಾರದವರು ಮುರಿದ ಸಂಬಂಧವನ್ನು ಪುನಃ ಸರಿಗೊಳಿಸಲು ಪ್ರಯತ್ನಿಸುವೆನು. ಆಗಲೂ ನಾನು ಮೊದಲು ಮಾತುಕತೆ ಮಾಡಬೇಕೆಂದಿದ್ದೆ ಅದು ವಿಫಲವಾದರೆ ಮಾತ್ರ ಸತ್ಯಾಗ್ರಹ ಹೂಡುವವನಿದ್ದೆ, ಈಗಲಾದರೂ ವೈಸರಾಯರೊಡನೆ ವಿಚಾರವಿನಿಮಯ ಮಾಡಬೇಕು."

ಯುದ್ಧಾನಂತರದ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡುವ ಭರವಸೆಯಾಗಿ, ಪೂರ್ಣ ನಾಗರಿಕ ಆಡಳಿತದ ಅಧಿಕಾರವುಳ್ಳ ರಾಷ್ಟ್ರೀಯ ಸರಕಾರ ರಚಿಸಲ್ಪಟ್ಟರೆ ಅದರಲ್ಲಿ ಕಾಂಗ್ರೆಸು ಭಾಗವಹಿಸುವಂತೆ ಸಲಹೆ ಮಾಡಲು ಗಾಂಧೀಜಿ ಸಿದ್ಧರಿರುವರೆಂದೂ ಸರಕಾರದವರು ಈ ಸುಸಂಧಿ ಕಳೆದುಕೊಳ್ಳಲಾರರೆಂದೂ ಗಿಲ್ಡರರ ಅಭಿಪ್ರಾಯವಿದೆ. ಮಹಾತ್ಮರನ್ನು ಭೇಟಿಯಾದ ಇವರು ಪುನಃ ವೈಸರಾಯರನ್ನ ಕಂಡು ಮಹಾತ್ಮರೊಡನೆ ನಡೆದ ಕತೆಗಳ ವಿವರ ತಿಳಿಸಿದರೆಂದೂ ವರದಿಯಾಗಿದೆ.

ಮಹಾತ್ಮರು ಬ್ರಿಟಿಷ್ ಪತ್ರಿಕಾಸುದ್ದಿಗಾರನಿಗೆ ಹೇಳಿದ ಮಾತುಗಳಲ್ಲಿ ಕೆಳಗಿನ ವಿಷಯಗಳೂ ಅಡಕವಾಗಿವೆಯೆಂದು ತಿಳಿಯುತ್ತದೆ

"ನಾನು ಯುದ್ಧದ ಪ್ರಯತ್ನಕ್ಕೆ ಸಹಾಯ ಮಾಡುವೆನು. ಆದರೂ ವರ್ಕಿಂಗ್ ಕಮಿಟಿ ಸದಸ್ಯರ ವಿಚಾರ ತಿಳಿಯದೆ ಏನೂ ಮಾಡಲಾರೆ ಅಗಸ್ಟ್ ನಿರ್ಣಯದಿಂದ ನನಗೆ ಬಂದ ಅಧಿಕಾರವು ನನ್ನ ಬಂಧನದಿಂದ ಕೊನೆಗೊಂಡಿತು. ವೈಸರಾಯರಿಗೆ ವೈಯಕ್ತಿಕ ಅಭಿಪ್ರಾಯವೇನಿದ್ದರೂ ಅವರಿಗೆ ಪೂರ್ಣ ರಾಜಕೀಯ ಅಧಿಕಾರವೇನೂ ಇಲ್ಲ ಚರ್ಚಿಲರಿಗೆ ಯಾವುದೇ ವಿಧದ ಒಪ್ಪಂದವೂ ಬೇಕಾಗಿಲ್ಲ. ನನ್ನನ್ನು 'ಪುಡಿಮಾಡುವ' ಇಚ್ಛೆ ಅವರಿಗಿದೆ ನನ್ನ ಸುದೈವವೋ ಅವರ ದುರ್ದೈವವೋ ಸತ್ಯಾಗ್ರಹಿಯನ್ನು ಯಾರೂ ಪುಡಿಮಾಡಲಾರರು. ಏಕೆಂದರೆ ಅವನು ತನ್ನ ಶರೀರವನ್ನು ಬಲಿದಾನಕ್ಕೆ ಅರ್ಪಿಸುತ್ತಾನೆ ಮತ್ತು ಅವನ ಆತ್ಮ ಸದಾ ಸ್ವತಂತ್ರವಿರುವುದು

ರಾಷ್ಟ್ರೀಯ ಸರಕಾರವಾಗಲಿ

'ಇಂದು ಜನರು ಸಂಕಷ್ಟಗಳಿಗೆ ತುತ್ತಾಗಿರುವರು ಇದನ್ನು ನೋಡಿ ವರ್ಕಿಂಗ್ ಕಮಿಟಿ ಸದಸ್ಯರಾದರೂ ಸುಮ್ಮಗಿರಲಾರರು ಬ್ರಿಟಿಷರಿಂದ ಭಾರತೀಯರ ಕೈಗೆ ಪೂರ್ಣ ಅಧಿಕಾರ ಬಾರದೆ ಜನತೆಯ ಕಷ್ಟನಿವಾರಣೆಗೆ ಏನೂ ಮಾಡಲೂ ಸಾಧ್ಯವಾಗುವುದಿಲ್ಲ ಅಂಥಾ ಅಧಿಕಾರ ಬಂದಿದ್ದರೆ ಮಾತ್ರ ತೊಂದರೆಯುಂಟಾದೀತು ನಾಗರಿಕರ ಆಡಳಿತಕ್ಕೊಳಪಟ್ಟ ಕೇಂದ್ರ ರಾಷ್ಟ್ರೀಯ ಸರಕಾರದಿಂದ ಇಂದು ನನಗೆ ತೃಪ್ತಿಯಿದೆ ಪ್ರಜಾಪ್ರತಿನಿಧಿಗಳಾದ ಕೇಂದ್ರ ಶಾಸನ ಸಭೆಯ ಸದಸ್ಯರಿಂದ ಆರಿಸಲ್ಪಟ್ಟ ಜನರಿಂದ ಇಂಥ ಸರಕಾರ ರಚಿತವಾಗುವುದು ಹೀಗಾಗುವುದೆಂದರೆ ಯುದ್ಧಕಾಲದಲ್ಲಿ ಭಾರತ ಸ್ವಾತಂತ್ರ್ಯವನ್ನು ಸಾರಿದಂತಾಗುವುದು. ರಾಷ್ಟ್ರೀಯ ಸರಕಾರವು ಸೈನ್ಯ ಖಾತೆಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಕೊಡಬಹುದು. ಆದರೆ ಅಧಿಕಾರ ಮಾತ್ರ ರಾಷ್ಟ್ರೀಯ ಸರಕಾರದ್ದೇ ಆಗುವುದು. ಇಲ್ಲಿ ವೈಸರಾಯರು ಹೊಣೆಗಾರರಾದ ಮಂತ್ರಿಗಳಿಂದ ನಿರ್ದಿಷ್ಟರಾದ ಇಂಗ್ಲೆಂಡಿನಿಂದ ಅರಸನಂತೆ ಉಳಿಯುವರು ಸ್ವಾಭಾವಿಕವಾಗಿ ಕೇಂದ್ರ ಮತ್ತು ಪ್ರಾಂತಗಳಲ್ಲಿ ಭಾರತದ ಜನರ ಹೊಣೆಯಾದ ಸರಕಾರ ಸ್ಥಾಪಿತವಾಗುವುದು. ಸೈನ್ಯಖಾತೆಯ ಬಗ್ಗೆ ಮಾತ್ರ ವೈಸರಾಯ್ ಮತ್ತು ಸೇನಾಪತಿಗಳದೇ ಸಂಪೂರ್ಣ ಅಧಿಕಾರವಿದ್ದರೂ ರಾಷ್ಟ್ರೀಯ ಸರಕಾರಕ್ಕೆ ಸೈನ್ಯ ಚಟುವಟಿಕೆಗಳ ವಿಷಯ ಸೂಚನೆ ಕೊಡಲು ಅಧಿಕಾರವಿರಬೇಕು. ಮಿತ್ರಸೈನ್ಯಕ್ಕೆ ಭಾರತದಲ್ಲಿ ತಮ್ಮ ಚಟುವಟಿಕೆ ಸಾಗಿಸಲು ಅವಕಾಶವಿದೆ ಆದರೆ ಈ ಮಿತ್ರ ಸೈನ್ಯದ ಖರ್ಚನ್ನು ರಾಷ್ಟ್ರೀಯ ಸರಕಾರ ಕೊಡಲಾರದು.

"ರಾಷ್ಟ್ರೀಯ ಸರಕಾರ ರಚಿತವಾದರೆ ಕಾಂಗ್ರೆಸು ಅದರಲ್ಲಿ ಭಾಗವಹಿಸಿ ಯುದ್ಧಕ್ಕೆ ಸಹಾಯ ಮಾಡುವುದು ನಾನು ಅಹಿಂಸೆಯನ್ನು ಅಂಗೀಕರಿಸಿದವನು ಭಾರತಕ್ಕೆ ಸ್ವಾತಂತ್ರ್ಯದ ಭರವಸೆ ದೊರೆತ ನಂತರ ನಾನು ಕಾಂಗ್ರೆಸಿನ ಸಲಹೆಗಾರನಾಗಿ ಉಳಿಯಲಾರೆ ಆದರೆ ನಾನು ರಾಷ್ಟ್ರೀಯ ಸರಕಾರಕ್ಕಾಗಲಿ ಕಾಂಗ್ರೆಸಿಗಾಗಲಿ ಅಡ್ಡಿಮಾಡಲಿಕ್ಕಿಲ್ಲ

"ಅಗಸ್ಟ್ ನಿರ್ಣಯ ರದ್ದಾಗಿಲ್ಲ. ಆ ನಿರ್ಣಯದ ಒಂದಕ್ಷರವನ್ನಾದರೂ ಬದಲಾಯಿಸಲಿಕ್ಕೆ ವರ್ಕಿಂಗ್ ಕಮಿಟಿಗೂ ಎ. ಐ. ಸಿ. ಸಿಗೂ ಅಲ್ಲದೆ ಇನ್ನಾರಿಗೂ ಅಧಿಕಾರವಿಲ್ಲ ಆದರೆ ಆ ನಿರ್ಣಯದ ಪ್ರಕಾರ ದೊರೆತ ನನ್ನ ಅಧಿಕಾರ ಮಾತ್ರ ನನ್ನ ಬಂಧನದಿಂದ ಲೋಪವಾಗಿದೆ.

ಜಿನ್ನರು ಬ್ರಿಟಿಷರ ಸಾಧನ

"ಜಿನ್ನರಾಗಲಿ, ಅಧಿಕಾರದಲ್ಲಿರುವವರಾಗಲಿ ನನ್ನ ಸೂಚನೆ ಸ್ವೀಕರಿಸದಿರುವುದು ನನ್ನ ದುರ್ದೈವ. ಅವರಲ್ಲಿ ಯಾರಿಗೂ ಈಗ ಭಾರತವು ಸ್ವತಂತ್ರವಾಗಬೇಕಾಗಿಲ್ಲವೆಂದೂ, ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಯುದ್ಧವನ್ನು ಗೆಲ್ಲುವಲ್ಲಿ ಭಾರತಕ್ಕೆ ಪೂರ್ಣ ಪಾಲುಕೊಡುವ ಮನಸ್ಸಿಲ್ಲವೆಂದೂ ಇದರಿಂದ ಸ್ಪಷ್ಟವಾಗುವುದು ಭಾರತಕ್ಕೆ ಇಷ್ಟರಲ್ಲೆ ಸಿಗಬೇಕಾಗಿದ್ದ ಸ್ವಾತಂತ್ರ್ಯವನ್ನು ಕೊಡಲು ಬ್ರಿಟಿಷ್ ಸರಕಾರಕ್ಕೆ ಇಚ್ಛೆಯಿಲ್ಲದಿರುವುದರಿಂದ ಬ್ರಿಟಿಷರು ಜಿನ್ನರನ್ನು ಸಾಧನವಾಗಿ ಉಪಯೋಗಿಸುತ್ತಿರುವರಲ್ಲದೆ ಜಿನ್ನರು ಅಡ್ಡಿಮಾಡುತ್ತಾರೆಂದು ನನಗೆ ತೋರುವುದಿಲ್ಲ

"ಭಾರತದ ಆಕಾಂಕ್ಷೆಗಳನ್ನು ಬದಿಗಿರಿಸಲು ನಡೆದ ಘೋರವಾದ ಒಳಸಂಚನ್ನು ಮುರಿಯಬೇಕು ಪಾಶವೀ ಶಕ್ತಿಯಿಂದ ಯುದ್ಧ ಗೆಲ್ಲಲೂ ಬಹುದು. ಆದರೆ ಅದು ಕೇವಲ ಶಾರೀರಿಕ ವಿಜಯ. ನಾನು ಧ್ಯೇಯದ ಸಲುವಾಗಿ ಹೋರಾಡುತ್ತೇನೆ. ನಾನು ಸಾಯುವುದಾದರೂ ಅದರ ಸಲುವಾಗಿಯೇ?'

ಹೀಗೆ ಗಾಂಧೀಜಿ ಈ ವಾರದಲ್ಲಿ ತನ್ನ ಹಲವು ವಿಚಾರಗಳನ್ನು ಹೊರಗೆಡಹಿದ್ದಾರೆ ರಾಷ್ಟ್ರೀಯ ಸರಕಾರ ಸ್ಥಾಪಿತವಾದರೆ ಯುದ್ಧಕ್ಕೆ ಬೆಂಬಲ ಸಿಗಬಹುದೆಂದಿದ್ದಾರೆ ಸತ್ಯಾಗ್ರಹ ತಾನು ಪುನಃ ಈಗ ಪ್ರಾರಂಭಿಸುವುದಿಲ್ಲವೆಂದಿದ್ದಾರೆ. ಇತರ ಕೆಲಿಂಕುಷ ವಿಷಯಗಳನ್ನೂ ಸೂಚಿಸಿದ್ದಾರೆ ಸರಕಾರವು ಈಗಲಾದರೂ ಮುಂದೆ ಬಂದಿತೆ?

ಮಹಾತ್ಮಾಜಿಯವರ ಸೂಚನೆಗಳ ಕುರಿತು ವಿದೇಶಗಳ ಅಭಿಪ್ರಾಯ

ಮಹಾತ್ಮಾಜಿಯವರ ಸೂಚನೆಗಳು ಬಹಳ ತೃಪ್ತಿಕರಯಿದೆ, ಹಿಂದೂದೇಶದ ಈಗಿನ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸುವಂತಹುದಿದೆ, ಬ್ರಿಟಿಷ ಸರಕಾರವು ಈಗ ಮುಂದೆ ಬಂದು, ಗಾಂಧಿಜಿಯು ರೀಡ್ಡಿದ ಈ ಸ್ನೇಹ ಕೈಯನ್ನು ಸ್ವೀಕರಿಸಬಹುದು, ಮೊದಲಾಗಿ ಅಭಿಪ್ರಾಯಗಳು ಅಮೇರಿಕನ್ ಮತ್ತು ಇಂಗ್ಲಾಂಡಿನ ಅನೇಕ ಪತ್ರಿಕೆಗಳಲ್ಲಿ ಪ್ರಸಿದ್ಧಿಸಲ್ಪಟ್ಟಿವೆ

ಮೇಡಮ್ ಚಿಯಾಂಗ್ ಕೈಶೇಕರು

ಚೀನಾ ನಾಯಕರ ಪತ್ನಿಯಾದ ಮೇಡಮ್ ಚಿಯಾಂಗ್ ಕೈಶೇಕರು ಯಾವದೋ ಒಂದು ಕಾರ್ಯನಿಮಿತ್ತ ಬ್ರೆಜಲಿಗೆ ತೆರಳಿರುವರಾಗಿ ವದಂತಿಯಿದೆ. ಹೊರಡುವ ಮುನ್ನ ಅವರಿಗೆ ಸ್ವಲ್ಪ ದೇಹಾಲಸ್ಯವಿತ್ತು. ಈ ಕಾರಣದಿಂದ ಸಂಯುಕ್ತ ಅಮೇರಿಕದ ಸಂದರ್ಶನವು ಮೊದಲು ಅವರ ಕಾರ್ಯಕ್ರಮದಲ್ಲಿದ್ದುದನ್ನು ಈಗ ರದ್ದುಮಾಡಲಾಗಿದೆ.

ಸ್ವದೇಶಾಭಿಮಾನಿ

ತಾರೀಖು 31—7—1944

ಮಹಾತ್ಮರ ಸ್ಪಷ್ಟೀಕರಣ

ಭಾರತದ ರಾಜಕೀಯದ ವಿಚಾರದಲ್ಲಿ ಮಹಾತ್ಮರು ಈ ವಾರ ಮಹತ್ವದ ಸ್ಪಷ್ಟೀಕರಣವನ್ನು ಮಾಡಿದ್ದಾರೆ ಲಂಡನ್ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಬಾತ್ಮೀದಾರರಿಗಿತ್ತ ಭೇಟಿಯಲ್ಲಿ ಹಾಗೂ ಇತರ ಪ್ರಕಟಣೆಗಳಲ್ಲಿ ಅವರು ತಮ್ಮ ಇಂದಿನ ಹೃದ್ಗತವನ್ನು ವಿಶದಗೊಳಿಸಿರುವರು. ಹೀಗೆ ಮಾಡಿ ಭಾರತದ ರಾಜಕೀಯ ಸಮಸ್ಯೆ ಬಗೆಹರಿಸುವಲ್ಲಿ ಹಾದಿಯನ್ನು ಸಂಪೂರ್ಣ ಸುಗಮಮಾಡಿದ್ದಾರೆ. ಬ್ರಿಟಿಷ್ ಸರಕಾರಕ್ಕೆ ಈ ಮೂಲಕ ಭಾರತದ ಸೌಹಾರ್ದ ಗಳಿಸಿಕೊಳ್ಳಲು ಇನ್ನೊಂದು 'ಸುವರ್ಣ ಸಂಧಿಯನ್ನು ಒದಗಿಸಿ ಕೊಟ್ಟಿರುವರೆನ್ನಬಹುದು

ಯುದ್ಧಾನಂತರ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯದ ಭರವಸೆ ಕೊಡಬೇಕೆಂದೂ, ಅದರ ಪೂರ್ವಭಾವಿಯಾಗಿ ರಾಷ್ಟ್ರೀಯ ಸರಕಾರ ಸ್ಥಾಪಿತವಾಗಬೇಕೆಂದೂ, ರಾಷ್ಟ್ರೀಯ ಸರಕಾರಕ್ಕೆ ಯುದ್ಧ ಯತ್ನದಲ್ಲಿ ಕೈ ಹಾಕಲು ತಾನು ಸಲಹೆ ಕೊಡುವೆನೆಂದೂ, ಇಂದಿನೀ ಸಂದರ್ಭದಲ್ಲಿ ಪುನಃ ಸತ್ಯಾಗ್ರಹ ಪ್ರಾರಂಭಿಸುವುದು ತನ್ನ ಅಭಿಪ್ರಾಯವಿಲ್ಲವೆಂದೂ ತಿಳಿಸಿದ್ದು ಅತ್ಯಂತ ಮಹತ್ವದ ವಿಚಾರಗಳು, ಭಾರತದ ರಾಜಕೀಯ ಸಮಸ್ಯೆ ಬಿಡಿಸಲು ಇದು ಗಾಂಧೀಜಿಯವರು ಮಾಡಿ ಕೊಟ್ಟ ಅತ್ಯಂತ ವಿವರವಾದ ಸ್ಪಷ್ಟೀಕರಣಗಳು

ಬಿಡುಗಡೆಯಾದ ಕೂಡಲೇ ಮಹಾತ್ಮರು ಎಷ್ಟೊಂದು ಅನಾರೋಗ್ಯದಿಂದಿದ್ದರೂ ಅದನ್ನು ಪರಿಗಣಿಸದೆ, ರಾಷ್ಟ್ರದ ಸಮಸ್ಯೆ ಪರಿಹರಿಸಬೇಕೆಂಬ ಉದಾತ್ತ ಧ್ಯೇಯದಿಂದ, ಪ್ರಕೃತ ಪರಿಸ್ಥಿತಿಯನ್ನು ಕೂಲಂಕಷ ಅಭ್ಯಾಸಮಾಡಿ ಆ ಕುರಿತು ಬೇರೆ ಬೇರೆ ಮುಖಂಡರೊಡನೆ ಪತ್ರವ್ಯವಹಾರ ವಿಚಾರವಿನಿಮಯಗಳನ್ನು ಕೂಡಾ ಗೈದು, ತಮ್ಮ ಆಪ್ತ ವರ್ಗದೊಡನೆ ಸಲಹೆ ಪಡೆದು ಈಗ ಈ ವಿಷಯಗಳನ್ನು ಹೊರಗೆಡಹಿದ್ದಾರೆ ಉಪವಾಸ ಬೀಳುತ್ತಿರುವ ದೇಶಬಾಂಧವರ ಸಂಕಷ್ಟಸಾವಿರಗಳು ಅವರಿಗೆ ತಿಳಿದಿದ್ದು, ಅದರ ನಿವಾರಣೆಗೂ ರಾಷ್ಟ್ರೀಯ ಸರಕಾರವಿಲ್ಲದೆ ಸಾಧ್ಯವಿಲ್ಲವೆಂದು ಅವರು ಮನಗಂಡು ಈಗ ಈ ವಿಚಾರಗಳನ್ನು ಪ್ರಕಟಿಸಿರುವರು

ಗಾಂಧೀಜಿಯವರ ಈ ಹೇಳಿಕೆಯಿಂದಾಗಿ ಕಾಂಗ್ರೆಸಿನ ಗೌರವ ಕಡಿಮೆಯಾಯಿತೆಂದೂ ಹೇಳಬರುವುದಿಲ್ಲ ಕೇಂದ್ರ ಶಾಸನಸಭೆಯಿಂದ ಚುನಾಯಿತರಾದ ಮತ್ತು ಅದಕ್ಕೆ ಹೊಣೆಗಾರರಾದ ಮಂದಿಗಳಿರುವ ರಾಷ್ಟ್ರೀಯ ಸರಕಾರ ಸ್ಥಾಪನೆ ಇಲ್ಲಿ ಮುಖ್ಯ ವಿಚಾರವಾಗಿದೆ. ವೈಸರಾಯರು ಇಲ್ಲಿ ಕೇವಲ ಇಂಗ್ಲೆಂಡಿನ ಅರಸರಂತಿದ್ದು ಮಂತ್ರಿಮಂಡಳವು ಮಾಡಿದ ನಿರ್ಣಯಗಳನ್ನು ಒಪ್ಪಬೇಕಾಗುವುದು. ಇಂಥ ರಾಷ್ಟ್ರೀಯ ಸರಕಾರವು ದೇಶದ ನಾಗರಿಕ ಆಡಳಿತವನ್ನು ನಿರ್ವಹಿಸುವುದಲ್ಲದೆ, ಸೈನಿಕ ಖಾತೆಯನ್ನುಳಿದು ದೇಶದ

ಸಂಪೂರ್ಣ ಭಾರವನ್ನು ಹೊರುವುದು. ಮಹಾತ್ಮರು ಇಂದು ಮಾಡಿದ ಸ್ಪಷ್ಟೀಕರಣವು ಸಂಪೂರ್ಣ ಇಂದಿನ ಸಂದರ್ಭಕ್ಕೆ ಸರಿಯಾಗಿರುವವಲ್ಲದೆ ಅಂಗೀಕಾರಾರ್ಹವೂ ಇರುವವು. ಕಾಂಗ್ರೆಸು ತನ್ನ ಗೌರವವನ್ನು ಏನೇನೂ ಶಿಥಿಲ ಮಾಡಿಕೊಂಡಂತೆ ಇದರಿಂದ ಆಗುವುದಿಲ್ಲ ಮಾತ್ರವಲ್ಲದೆ ಬಿಕ್ಕಟ್ಟು ಬಿಡಿಸಲು ಸರಕಾರ ಮುಂದೆ ಬರಲು ಮಾರ್ಗಮಾಡಿ ಕೊಟ್ಟಂತೆಯೂ ಆಗಿದೆ.

ಯುದ್ಧಾನಂತರ ಭಾರತದ ಸ್ವಾತಂತ್ರ್ಯವು ಸಿಗುವ ಭರವಸೆ ಕೊಡಬೇಕೆಂದು ಮಹಾತ್ಮರು ಒತ್ತಿ ಹೇಳಿದ್ದಾರೆ. ಇದರ ಜತೆಗೆ ಆ ತೆರದ ಬಾಯಿಮಾತಿನ ಭರವಸೆ ಮಾತ್ರ ಸಾಲದೆ ರಾಷ್ಟ್ರೀಯ ಸರಕಾರವಾಗಿ ಅದಕ್ಕೆ ಇಷ್ಟಿಷ್ಟು ಸ್ವಾತಂತ್ರ್ಯವಿರಬೇಕೆಂದೂ ಹೇಳಿದ್ದಾರೆ. ಇದರಿಂದ ಭಾರತ ಬ್ರಿಟನುಗಳೆರಡರ ಹಿತವೂ ಸಾಧಿಸಲಾಗುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕು, ಬ್ರಿಟನಿಗೆ ಯುದ್ಧದಲ್ಲಿ ಗೆಲಬೇಕು ಎಂಬೀ ಎರಡು ವಿಚಾರಗಳಿಗೂ ಇಲ್ಲಿ ಸಂಬಂಧ ಮಾಡಿಕೊಡಲಾಗಿದೆ ಇಷ್ಟು ಸ್ಪಷ್ಟೀಕರಿಸಿದರೂ, ಹೀಗೆ ವಿಶಾಲ ಬುದ್ಧಿ ತೋರಿಸಿದರೂ ಸರಕಾರವು ಸಮ್ಮತಿಸಲಿಲ್ಲವಾದರೆ ಅದು ಕೇವಲ ದುರ್ದೈವವೆನಿಸಬೇಕಾದೀತು. ಒಂದು ಸುವರ್ಣ ಸಂಧಿಯನ್ನು ಕಳಕೊಂಡಂತಾದೀತು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಈ ಯುದ್ಧದಲ್ಲಿ ಹೋರಾಡಲು ಭಾರತಕ್ಕೆ ಭಾಗವಹಿಸುವರೆ ಆಸ್ಪದ ಕೊಡಕೂಡದೆಂದು ಬ್ರಿಟನು ಭಾವಿಸಿದಂತಾದೀತು

ತಾವು ಜಪಾನ್ ಮಿತ್ರರಲ್ಲವೆಂದೂ, ಯುದ್ಧಯತ್ನಕ್ಕೆ ವಿರೋಧ ಮಾಡುವವರಲ್ಲವೆಂದೂ ಮಹಾತ್ಮರು ಈ ಮೂಲಕ ಸ್ಪಷ್ಟಪಡಿಸಿದ್ದಾರೆ ಮಹಾತ್ಮರು ತಮ್ಮೀ ಸ್ಪಷ್ಟೀಕರಣದಿಂದ ಒಂದು ವಿಧವಾಗಿ ಕಾಂಗ್ರೆಸಿನ ಹಾಗೂ ರಾಷ್ಟ್ರದ ಹೃದ್ಗತವನ್ನೇ ತಿಳಿಸಿದ್ದಾರೆ. ಸರಕಾರವು ಈಗಲಾದರೂ ಮುಂದೆ ಬಂದೀತೆ?

ಯಾಂತ್ರಿಕ ಉಪಕರಣ ಬಗ್ಗೆ ಕೆಲವು ಸಲಹೆಗಳನ್ನು ಕೊಡಲು, ಪ್ರವೀಣರ ಮಂಡಳವೊಂದು, ಬ್ರಿಟನಿನಿಂದ ಹಿಂದೂ ದೇಶಕ್ಕೆ ಬರಲಿದೆಯಾಗಿ ತಿಳಿದುಬಂದಿದೆ

ಕಂಟ್ರೋಲ್-ಸೇವನಾ ಸಾಮಗ್ರಿಗಳನ್ನು ಒದಗಿಸುವಿಕೆ

ಸೇವನಾ ಸಾಮಗ್ರಿಗಳ ವ್ಯಾಪಾರದ ಮೇಲೆ ಹಾಕಲಾದ 'ಕಂಟ್ರೋಲ್' ಹೇಗೆ ಪರಿಣಾಮಕಾರಿಯಾಗಿ ನಡೆದಿರುವುದು ಎಂಬುದರ ಕುರಿತು, ಒಂದು ವರದಿಯು ಹೊರಡಿರುತ್ತದೆ. ಅದರ ಅಭಿಪ್ರಾಯವು ಈ ಕೆಳಗಿನಂತಿರುವುದು.

'ಕಂಟ್ರೋಲ್' ಜ್ಯಾರಿಗೆ ಬಂದ ಪರಿಣಾಮವಾಗಿ ಸೇವನಾ ಸಾಮಗ್ರಿಗಳ ಬೆಲೆಯು ನ್ಯಾಯವಾದ ಮಟ್ಟಕ್ಕೆ ಇಳಿದಿದೆ ಮಾತ್ರವಲ್ಲದೆ, ಸೇವನಾ ಸಾಮಗ್ರಿಗಳ ಕೊರತೆಯು ಬಹಳವಾಗಿ ಸುಧಾರಿಸಿಕೊಂಡಿರುವುದು. ಕಂಚಿನ ಪಾತ್ರೆಗಳನ್ನು ತಯಾರಿಸುವರೆ, ೨೬೦೦ ಟನ್ ಕಂಚಿನ ಹಾಳೆಗಳನ್ನು ಒದಗಿಸುವ ಏರ್ಪಾಡುಗಳಾಗಿದೆ, ಕಂಚಿನ ದರವು ರಾತಲು ಒಂದರ ರೂ. ೨ರಿಂದ ೨। ಎಂದು ನಿಯಂತ್ರಿಸಲಾಗಿದೆ. ಈ ಕಂಚಿನ ಪಾತ್ರೆಗಳನ್ನು ತಯಾರಿಸುತ್ತಿರುವ ಹಳ್ಳಿ ಕೈಗಾರಿಕೆಗಳಿಗೆ ಇದರಿಂದ ಹೆಚ್ಚಿನ ಪ್ರಯೋಜನವಾಗುವಂತೆ ನೋಡಲಾಗುವುದು ಕಂಚಿನ ಪಾತ್ರೆಗಳ ಕಂಟ್ರೋಲ್ ಆಜ್ಞೆಯಿಂದ 'ಅದಲು ಬದಲು' ಪಾತ್ರದ ವ್ಯಾಪಾರಕ್ಕೆ ಯಾವತ್ತೂ ತಡೆಗಳು ಹಾಕಲಿಲ್ಲ ಮೇಲಿನ ಕಾರಣಗಳಿಂದ ಕಂಚಿನ ಪಾತ್ರೆಗಳ ಬೆಲೆಯಲ್ಲಿ ಇಳಿತವಾಗಬಹುದೆಂದು ಬಯಸಲಾಗಿದೆ

ಬಟ್ಟೆಯ ಕುರಿತು ಬಟ್ಟೆಯ ಮೇಲೆ ಕಂಟ್ರೋಲ್ ಹಾಕಿದ ಪರಿಣಾಮವಾಗಿ ಅದರ ಬೆಲೆಯಲ್ಲಿ ಈಗ ಸಾಧಾರಣ ಶೇ. ೬೦ರ ಇಳಿತವಾಗಿರುವುದು ಸಿಲ್ಲಿಂಗ್ ದರಗಳನ್ನು ಕ್ರಮೇಣ ಇಳಿಸಲಾಗಿವೆ ಮುಂದಕ್ಕೆ ದರಗಳು, ಇನ್ನೂ ಕಡಿಮೆಯಾಗಬಹುದು ವರ್ಷಕ್ಕೆ ೬೦೦ ಮಿಲಿಯ ಗಜ ವಸ್ತ್ರವು ದೇಶದಿಂದ ರಫ್ತಾಗಬಹುದೆಂದು ನಿರ್ಣಯಿಸಲಾಗಿದೆ ಈಗ ಸಾಧಾರಣ ತರದ ಅರಿವೆಯು ಹೆಚ್ಚಾಗಿ ಸಿದ್ಧವಾಗುತ್ತಿದೆ ಉತ್ತಮ ತರದ ಬಟ್ಟೆಯು ತಯಾರಿಸುವ ಕುರಿತು ವ್ಯವಸ್ಥೆಗಳಾಗುತ್ತಿವೆ ಕೈಮಗ್ಗ ವ್ಯವಸಾಯವನ್ನು ಪ್ರೋತ್ಸಾಹಿಸುವ ತೆ ಕೈಮಗ್ಗಗಳಲ್ಲಿ ಸಿದ್ಧವಾಗುತ್ತಿರುವ ಸಾಮಾನುಗಳ ಮೇಲೆ ಕಂಟ್ರೋಲ್ ತರಲಾಗಲಿಲ್ಲ ಕೈಮಗ್ಗ ವ್ಯವಸಾಯಕ್ಕೆ ಬೇಕಾದ ನೂಲನ್ನು ಒದಗಿಸುವ ಏರ್ಪಾಡು ಮಾಡಲಾಗಿದೆ

ಡ್ರಗ್ (ಔಷಧಿ) ಕಂಟ್ರೋಲ್— ಈ ಕಂಟ್ರೋಲ್ ಅಪೇಕ್ಷಿಸಿದಷ್ಟು ಸಾಂಗವಾಗಿ ನಡೆಯಲಿಲ್ಲವಾದರೂ, ಔಷಧಿಗಳ ವಿರಳತೆಯನ್ನು ಕಡಿಮೆಮಾಡುವ ಯೋಜನೆ ಇತ್ಯಾದಿ ವ್ಯವಸ್ಥೆಗಳಿಂದ ಈ ಕಂಟ್ರೋಲು ಕ್ರಮೇಣ ಪರಿಣಾಮಕಾರಿಯಾಗಿ ನಡೆಯುವಂತಾಗುವುದು. ಔಷಧಿಗಳ ಕಳ್ಳ ಸಂತೆಗಳು, ಈಗ ಬಹಳ ಕಡಿಮೆಯಾಗಿವೆ. ಸದ್ಯವಿರುವ ಕೊರತೆ ಎಂದರೆ—ಔಷಧಿಗಳ ವಿರಳತೆ. ಈ ಸ್ಥಿತಿಯ ಸುಧಾರಣೆಯ ಬಗ್ಗೆ, ಔಷಧಿಗಳನ್ನು ಹಿಂದೂದೇಶದಲ್ಲೆ ತಯಾರಾಗುವಂತೆ ಕಾರಣ ಮದ್ದುಗಳನ್ನು ಧಾರಾಳ ಪರಿಮಾಣದಲ್ಲಿ ತರಿಸುವ ಏರ್ಪಾಡು ಮಾಡಲಾಗಿದೆ.

ಇಲೆಕ್ಟ್ರಿಕ್ ಬಲ್ಬುಗಳ ಕುರಿತು— ಇವುಗಳನ್ನು ನ್ಯಾಯವಾದ ಬೆಲೆಯಲ್ಲಿ ಹಂಚುವ(ರೇಶನ್) ವ್ಯವಸ್ಥೆ ಮಾಡಲಾಗುವುದು.

ಪಾದರಕ್ಷೆಗಳ ಕಂಟ್ರೋಲ್ ಪ್ರಕಾರ, ಅತ್ಯುತ್ಕೃಷ್ಟ ಪಾದರಕ್ಷೆಗಳ ರೂ. ೧/೮ ವರೆಗಿನ ದರವು ನಿಯಂತ್ರಿಸಲಾಗಿದೆ ಈಗಿರುವ ಸ್ಟಾಕುಗಳು, ಪಾದರಕ್ಷೆ ವ್ಯಾಪಾರಿಗಳು, ಸಪ್ಟಂಬರ ತಾ. ೧ರ ರೊಳಗೆ ಖುಲಾಸೆ ಮಾಡತಕ್ಕದ್ದು.

ಕಬ್ಬಿಣ ಮತ್ತು ಉಕ್ಕು:- ದೇಶದಲ್ಲಿ ತಯಾರಾಗುತ್ತಿರುವ ಕಬ್ಬಿಣ ಮತ್ತು ಉಕ್ಕಿನ ಅಧಿಕ ಅಂಶವು ಮಿಲಿಟರಿ ಸೇವನೆಗೆ ಮೀಸಿಡಲಾಗಿದ್ದರೂ ನಾಗರೀಕರ ಉಪಯೋಗದ ಬಗ್ಗೆ ಒಂದಂಶವು ಮಿಂಗಡಿಸಲಾಗಿದೆ ಕಬ್ಬಿಣ ಮತ್ತು ಉಕ್ಕಿನ ಸಾಮಾನುಗಳನ್ನು ಸಾಗುವಳಿದಾರನಿಗೆ ಏನೂ ಕೊರತೆಯಿಲ್ಲದೆ ದೊರಕಿಸುವ ಏರ್ಪಾಡುಗಳಾಗುವವು

ಚಿಮಿಣಿ ಎಣ್ಣೆ:-ಚಿಮಿಣಿ ಎಣ್ಣೆಯು ಹಳ್ಳಿಗಳಿಗೆ ಸರಿಯಾಗಿ ದೊರಕದೆ, ಹಳ್ಳಿಗರು ತೊಂದರೆ ಪಡುತ್ತಿರುವ ವಿಷಯವು ಸರಕಾರದ ಗಮನಕ್ಕೆ ಬಂದಿದ್ದು, ಹಳ್ಳಿಗಳಲ್ಲಿ ಚಿಮಿಣಿ ಎಣ್ಣೆಯು ನ್ಯಾಯವಾದ ದರದಲ್ಲಿ ದೊರಕುವಂತೆ ನಾಗರೀಕ ಸೇವನೆಗಾಗಿ ಹೆಚ್ಚಿನ ಚಿಮಿಣಿ ಎಣ್ಣೆಯು ಕೊಡಲಾಗುವುದು.

ಇಂಡಿಯ ಸರಕಾರದದಿಂದ ಹೊರಡಿಸಲಾದ ಈ ಕಂಟ್ರೋಲ್ ಆಜ್ಞೆಯು ಯಶಸ್ವಿಯಾಗಿ ನಡೆದು, ಲಾಭಕೋರತನವು, ಕಳ್ಳಸಂತೆಗಳು, ಮಾಯವಾಗುವಂತೆ ಮಹಾಜನರ ಸಹಕಾರವು ಕೋರಲಾಗಿದೆ

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara. (1906.

Statement of affairs as on 30th April, 1944.

LIABILITIES	Rs As Ps
1 Paid up Capital	13 68 480- 0- 0
2 Reserves	4 12 120-12 8
3 Deposits	67 30 955- 3- 4
4 Due to Bankers	7 34 366-10- 9
5 Bills for collection	6 70 379 8 8
6 Sundries including revenue items	7 58 745- 8- 4
Total	1,06,75,047-11- 9

ASSETS	Rs As Ps
1 Cash on hand & with bankers in Current & Fixed Deposit A/cs	19 71 808 0 1
2 Investments on (1) Govt Securities (2) Immovable properties etc	24 26 660 - 9- 9
3 Loans on Jewels & other valuable securities	33 50 167-13-3
4 Loans on personal securities & Bills purchased	20 49 197-13-10
5 Bills for collection as per contra	6 70 379- 8- 8
6 Office premises furniture etc	93,705- 0-10
7. Sundries including revenue items	1,13,128-13- 4
Total	1,06,75,047-11- 9

ಏಳು ವರ್ಷಗಳ ಚೀನದ ಮಹಾಬಲಿದಾನ!

—: ವಿಲ್ನಾ ನಗರದ ಪತನ :—

ಚೀನಾ ಸಂಗ್ರಾಮವು ಪ್ರಾರಂಭವಾಗಿ ಇದೇ ಜುಲೈ ಏಳನೆಯ ತಾರೀಕಿಗೆ ಏಳು ವರ್ಷಗಳು ಸಂದವು. ಆದರೆ ಅಮೇರಿಕ ಬ್ರಿಟನುಗಳ ಲೆಕ್ಕದಲ್ಲಿ ಮಾತ್ರ ಚೀನಾಯುದ್ಧ ಆರಂಭವಾಗಿ ಕೇವಲ ಎರಡೇ ವರ್ಷ ಆಯಿತಷ್ಟೆ! ಕಳೆದ ಏಳು ವರ್ಷಗಳಿಂದಲೂ ಚೀನವು ಜಪಾನಿನೆದುರು ಏಕಾಂಗಿಯಾಗಿ ಹೋರಾಟ ಹೂಡಿದೆ. ೧೯೩೭ನೇ ಜುಲೈ ೭ನೆಯ ದಿನದಿಂದಲೂ ಕಠಿಣ ಕದನ ಕೊಟ್ಟಿದೆ. ಆದರೆ ಇತ್ತೀಚೆಗೆ ಚೀನಕ್ಕೆ ಮಿತ್ರರೂ ದೊರಕಿದ್ದಾರೆ; ಸುಮಾರು ಮೂವತ್ತು ಮಂದಿ ಮಿತ್ರರು ಇಂದು ಒದಗಿರುವರು. ಇಂದು ಚೀನಾ ನಾಲ್ಕು ಮಹಾರಾಷ್ಟ್ರಗಳಲ್ಲಿ ಒಂದಾಗಿದೆ. ಅದರ ಮಿತ್ರರು ಮೊದಲನೆಯ ವೀರನೆಂದು ಚೀನವನ್ನು ಹೇಳುವರಾದರೂ, ದುರ್ದೈವಕ್ಕೆ ಚೀನಾ ಈಗಲೂ ಏಕಾಂಗಿಯಾಗಿಯೇ ಹೋರಾಡಬೇಕಾಗಿ ಉಳಿದಿದೆ!

೧೯೪೧ರಲ್ಲಿ ಮಾತ್ರ

ಇದರಲ್ಲಿಯೇ ಚೀನದ ಮಹಾತ್ಮ್ಯೆ ಮತ್ತು ದುರಂತಗಳು ಅಡಕವಾಗಿರುವುದು. ಅಂತರಾಷ್ಟ್ರೀಯ ಆಕ್ರಮಣದ ಪ್ರಥಮ ಆಹುತಿ ಅದು. ಆದರೆ ಆ ಬಾಧೆಯಿಂದ ಅದೇ ಮೊದಲು ರಕ್ಷಿಸಲ್ಪಡಬಹುದು. ಪ್ರಾರಂಭದ ದಿನಗಳಲ್ಲಿ ಚೀನಕ್ಕೆ ಸಹಾನುಭೂತಿ ಸಹ ಇರಲಿಲ್ಲ. ಅಮೇರಿಯಂತಹ ಮನುಷ್ಯರು ನಾಚಿಕೆಯಿಲ್ಲದೆ ಚೀನದ ರಾಷ್ಟ್ರೀಯ ಸೈನ್ಯವನ್ನೆ ದೂರಿ ಜಪಾನು ಆತ್ಮರಕ್ಷಣೆ ಮಾಡಿಕೊಳ್ಳುತ್ತಿದೆಯೆಂದು ಹೇಳಿದ್ದಾರೆ. ಬ್ರಿಟನಿನಷ್ಟು ಬಹಿರಂಗವಾಗಿ ಜಪಾನನ್ನು ಅಮೇರಿಕ ಪ್ರೋತ್ಸಾಹಿಸದಿದ್ದರೂ ಅದು ಕಬ್ಬಿಣ ಎಣ್ಣೆ ಮೊದಲಾದವುಗಳನ್ನು ಜಪಾನಿಗೆ ಕಳುಹಿಸಿ ಕೊಡುತ್ತಾ ಬೇಕಾದಷ್ಟು ಬೆಂಬಲವಿತ್ತಿದೆ. ಆದರೆ ಜಪಾನ್ ಸೈನಿಕರು ಪರ್ಲ್‌ಹಾರ್ಬರ್ ಮತ್ತು ಸಿಂಗಾಪುರಗಳನ್ನು ೧೯೪೧ರಲ್ಲಿ ಮುತ್ತಿದ ಕೂಡಲೇ ಚೀನಾ ಯುದ್ಧವು ಅಂತರಾಷ್ಟ್ರೀಯ ದೃಷ್ಟಿಯಲ್ಲಿ ಹೊಸ ವೇಷವನ್ನೇ ತಳೆಯಿತು! ಆದರೆ ಅದು ಮಾತ್ರ ಮಹಾಮಿತ್ರರಿಂದ ಚೀನಕ್ಕೆ ದೊರೆತ ಲಾಭ. ಜಪಾನಿನ ಆಕ್ರಮಣ ಕಾರ್ಯ ಭಾರತದ ವರೆಗೂ ಮುಂದೆ ವಿಸ್ತರಿಸುತ್ತಾ ಬಂದು ಆ ದಾರಿಯಿಂದ ಚೀನಕ್ಕೆ ಬರುವ ನೆರವೂ ನಿಂತು ಬಿಟ್ಟಿತು; ರಶ್ಯ ಎಡೆಬಿಡದೆ ಚೀನಕ್ಕೆ ಸಹಾಯ ಕಳುಹಿಸುತ್ತಿದ್ದರೂ, ಕಳೆದ ಕೆಲಕಾಲದಿಂದ ರಶ್ಯವೇ ಜೀವನ ಮರಣಗಳ ಹೋರಾಟಕ್ಕಿಳಿದುದರಿಂದಾಗಿ ಅಲ್ಲಿಂದ ಚೀನಕ್ಕೆ ಹೆಚ್ಚಿನ ಸಹಾಯ ಕಳುಹಿಸುವುದೂ ಆಗಲಿಲ್ಲ.

ಚೀನದ ಸುದೈವವಾಗಿ ಜಪಾನಿನ ದುರ್ದೈವವಾಗಿ ೧೯೪೨ ಮತ್ತು ೧೯೪೩ನೇ ವರ್ಷಗಳಲ್ಲಿ ಜಪಾನ್ ಚೀನದಲ್ಲಿ ತನ್ನ ಗಡಿ ವಿಸ್ತರಿಸಲು ಸಮರ್ಥವಾಗಲಿಲ್ಲ. ಜಪಾನ್ ಬ್ರಿಟನು ಅಮೆರಿಕಗಳನ್ನು ಸೋಲಿಸುವುದರಲ್ಲಿ ತುಂಬಾ ಆಸಕ್ತವಾಗಿತ್ತು. ಚೀನದಲ್ಲಿ ಒಂದು ಕೈಗೊಂಬೆ ಸರಕಾರವನ್ನೂ ತಾವು ಮಾಡಿರುವುದರಿಂದ, ಸದ್ಯ ಅಮೆರಿಕ ಬ್ರಿಟನುಗಳೊಡನೆ ಹೋರಾಡಿ ಗದ್ದ ಬಳಿಕ ಚಿಯಾಂಗ್ ಕೈಶೇಕರ ಆಡಳಿತವನ್ನು ಕೊನೆಗಾಣಿಸುವುದು ದೊಡ್ಡ ಕೆಲಸವಲ್ಲವೆಂದು ಜಪಾನ್ ಬಗೆಯಿತು. ಆದರೆ ಕಳೆದ ವರ್ಷ ಜಪಾನರ ಆ ಆಶೆ ಬಯಲಾಯಿತು. ಅಮೆರಿಕವು ಮುಯ್ಯಿಗೆ ಮುಯ್ಯಿ ತೀರಿಸಿತು. ಹಲವು ರಾಷ್ಟ್ರಗಳು ಮುತ್ತಲ್ಪಟ್ಟು ಜಪಾನ್ ಈಗ ತತ್ತರಗೊಂಡಿದೆ. ಟೋಜೋ ತತ್ತರಗೊಂಡಿರುವನು. ಆತನು ಕಟ್ಟಿದ ಸಾಮ್ರಾಜ್ಯ ಆತನ ಕಣ್ಣ ಮುಂದೆಯೇ ಮುಳುಗುತ್ತಿದೆ. ಕೈಗೊಂಬೆ ಸರಕಾರ ಸುಮ್ಮಗೆ ಇದೆ. ಬದಲಾಗಿ ಜನತೇಂದ್ರಿಯ ಜನತೆ ಅಮಿತ ಉತ್ಸಾಹ ವೀರಾವೇಶಗಳಿಂದ ಜಪಾನರನ್ನು ಪ್ರತಿಭಟಿಸಿ ಹೋರಾಡುತ್ತಿದ್ದಾರೆ. ಬರಗಾಲ, ಸಂಕಷ್ಟ ಸಾವಿರಗಳು ಬಂದರೂ ಚೀನೀಯರ ಆತ್ಮಶಕ್ತಿ, ವೀರಾವೇಶ ಒಂದಿಷ್ಟು ಕುಂದದೆ ನಿತ್ಯ ಕಳೆಯೇರುತ್ತಿದೆ.

ಬಾಯಿ ಭರವಸೆ ಸಾಲದು

ಆಂಗ್ಲ ಅಮೆರಿಕಗಳು ಚೀನಕ್ಕೆ ಬಲವಂತವಾದ ಬೆಂಬಲ ಕೊಡಬೇಕೆಂಬ ಉದ್ದೇಶದಿಂದಲೂ ಚೀನದ ವೀರರು ಇನ್ನಷ್ಟು ವೀರಾವೇಶದಿಂದ ಹೋರಾಡುವಂತೆ ಮಾಡಬೇಕೆಂಬ ಉದ್ದೇಶದಿಂದಲೂ ಇತ್ತೀಚೆಗೆ ಚೀನದ ಮುಖ್ಯ ಸೈನ್ಯ ಕೇಂದ್ರದಿಂದ ಪರಿಸ್ಥಿತಿ ಗಂಭೀರವಾಗಿದೆಯೆಂಬ ಎಚ್ಚರಿಕೆಯ ನುಡಿಸಾರಲಾಗಿದೆ. ಜಪಾನು ಹೊನಾನಿನಲ್ಲಿ ಆಕ್ರಮಣ ಸುರು ಮಾಡಿಯೂ ಇರುವುದು. ಯೂನಾನ್ ಪ್ರಾಂತದಲ್ಲಿಯೂ ಚಟುವಟಿಕೆಗೆ ತೊಡಗಿದೆ. ವೀರರಾದ ಚಿಯಾಂಗ್ ಸೈನಿಕರು ಕೆಲವು ಕಡೆಗಳಲ್ಲಿ ತಮ್ಮ ತಾಯ್ನೆಲವನ್ನು ಬಿಟ್ಟುಬಿಡಬೇಕಾಯಿತೆಂಬುದು ದೊಡ್ಡ ಅಪಮಾನವಲ್ಲ. ಟೆಂಕು ಫಿರಂಗಿಗಳೆದುರು ಯಾರ ಹೃದಯವಾದರೂ ಒಂದು ಕ್ಷಣ ದುರ್ಬಲವೆನಿಸುವುದರಲ್ಲಿಯೇನೂ ಆಶ್ಚರ್ಯವಿಲ್ಲ. ಇತ್ತೀಚೆಗೆ ವೆಲ್ಲೇಸರ ಚುಂಕಿಂಗ್ ಪ್ರಯಾಣದಿಂದ ಚೀನದ ಭೀಕರ ಪರಿಸ್ಥಿತಿ ಹೊರಬಿದ್ದಿದೆ. ವೆಲ್ಲೇಸರು ಚಿಯಾಂಗರೊಡನೆ ಬಹು ಹೃತ್ಪೂರ್ವಕ ಮಾತನಾಡಿದ್ದಾರೆ; ಭರವಸೆ ಕೊಟ್ಟಿದ್ದಾರೆ. ಚೀನ ಜಪಾನಿನೆದುರು ನಿಂತು ಕೊನೆತನಕ ಹೋರಾಡುವುದರಲ್ಲಿ ಸಂಶಯವಿಲ್ಲ. ಆದರೆ ಮಿತ್ರರು ಇನ್ನು ಬರೀ ಮಾತಿನ ಭರವಸೆ ಕೊಟ್ಟರೆ ಸಾಲದು.

ಚೀನವಿಂದು ಏಕಾಂಗಿಯಾದರೂ ಕೊಡುತ್ತಿರುವೀ ಹೋರಾಟದಿಂದ ಪ್ರಪಂಚದಲ್ಲಿ ಪ್ರಜಾಪ್ರಭುತ್ವ ಬದುಕಿ ಉಳಿದಿದೆ. ಇಲ್ಲವಾದರೆ ಜಪಾನರು ಚೀನದಂತಹ ಫಲವತ್ತಾದ ಪ್ರದೇಶವನ್ನು ಸ್ವಾಧೀನ ಮಾಡಿಕೊಂಡಿದ್ದರೆ ಅದರಿಂದ ದೊರೆತ ಜನಧನ ಬೆಂಬಲದಿಂದ ಪ್ರಪಂಚದ ಶಾಂತಿ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ತಳಹದಿಯನ್ನೇ ಕಿತ್ತು ಬೀಸಾಡಿ ಬಿಡುತ್ತಿದ್ದರು. ಈ ದೃಷ್ಟಿಯಿಂದ ಚೀನದ ಸ್ವಾತಂತ್ರ್ಯವೀರರು ಕಳೆದ ಏಳು ವರ್ಷಗಳಿಂದ ಮಾಡಿದ ಬಲಿದಾನವು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಉಲ್ಲಿಖಿತವಾಗುವಂಥಾದ್ದಿದೆ.

ಜಪಾನಿನ ಮುಖ್ಯ ಮಂತ್ರಿ ಟೋಜೊನು ಅಧಿಕಾರವನ್ನು ತ್ಯಜಿಸಿರುವನಾಗಿ ವಾರ್ತೆ ಬಂದಿದೆ. ಇತ್ತೀಚೆಗೆ ಜಪಾನಿಗೆ ಅಲ್ಲಲ್ಲಿ ಒದಗಿರುವ ಅಪಜಯಗಳಿಂದ ಆತನಲ್ಲಿ ವಿಶ್ವಾಸವು ತಪ್ಪಿಹೋಗಿರುವುದರಿಂದ ಆತನು ಅಧಿಕಾರ ತ್ಯಜಿಸಲು ಕಾರಣವೆಂದು ಕೆಲವರ ಅಭಿಪ್ರಾಯ.

ಒಂದು ತಿಂಗಳ ದ್ವಿತೀಯ ರಂಗ

ಯೂರೋಪಿನಲ್ಲಿ ದ್ವಿತೀಯ ರಂಗವು ಪ್ರಾರಂಭವಾಗಿ ಒಂದು ತಿಂಗಳು ದಾಟಿ ಹೋಯಿತು. ಮಿತ್ರರು, ಮೊದಲ ಧಾಳಿಗೆ ಎಷ್ಟು ವಿಜಯಿಗಳಾಗಿ, ಯಶಸ್ವಿಗಳಾಗಿ ಮುನ್ನಡೆದರೂ ಈಗ ದ್ವಿತೀಯ ಧಾಳಿ ಕಠಿಣವಾಗುತ್ತಿದೆ. ಚೆರ್ಬರ್ಗ್ ದ್ವೀಪವಿಂದು ಮಿತ್ರರ ಕೈವಶ ಬಂದಿರುವುದೇನೋ ನಿಜ; ಮಿತ್ರರು ೧,೩೧೩ ಚದರ ಮೈಲು ಫ್ರೆಂಚ್ ಪ್ರಾಂತವನ್ನು ಬಂಧಮುಕ್ತ ಮಾಡಿದ್ದು ನಿಜ. ಮೂವತ್ತು ದಿನಗಳಲ್ಲಿ ೫೦,೦೦೦ ಜರ್ಮನ್ ಕೈದಿಗಳನ್ನು ಸೆರೆಹಿಡಿದಿರುವರು. ಮೊಂಟ್‌ಗ್‌ಮೇರಿ ಮತ್ತು ಬ್ರೇಡ್ಲಿ ಇವರಿಬ್ಬರೂ ಅನುಪಮ ಪರಾಕ್ರಮದಿಂದ ಇದಕ್ಕಾಗಿ ಹೋರಾಡಿದ್ದಾರೆ. ಆದರೆ ರೊಮೆಲನ ಟಿಲ್ಲಿಸಿಯಾನ್ ಪ್ರಾಂತದಲ್ಲಿ ಆತ ಬಹಳ ದಂಡನ್ನು ಶೇಖರಿಸಿರುವುದಾಗಿ ವರದಿ ಬಂದಿದೆ. ಇಂದಿನ ಅಲ್ಲಿನ ಹೋರಾಟದ ವಿಷಮತೆಯು, ಪ್ರತಿಯೊಂದು ಸ್ಥಳವೂ ಹಲವು ಸಲ ಕೈ ಬದಲಾಗುವದರಿಂದ ಅರ್ಥವಾಗುತ್ತದೆ. ಉದಾಹರಣೆಗೆ ಲಾಹಾಯೆ ಅನೇಕ ಸಲ ಗೆಲ್ಲಲ್ಪಟ್ಟಿ ಪುನರಾಕ್ರಮಿಸಲ್ಪಡುತ್ತಿದೆ. ಸಿಯಾನ್‌ನಲ್ಲಿ ಬ್ರಿಟಿಷ್ ಕೆನೆಡಿಯನ್ ಸೇನೆ ತುಂಬಾ ಹಾನಿಗೊಳಗಾಗಬೇಕಾಯಿತು.

ಬಿಳೀ ರಶ್ಯದಲ್ಲಿ ರಶ್ಯನರ ಪ್ರಗತಿ ಪ್ರಶಂಸನೀಯವಿದೆ. ವಿಟಿಪೆಸ್ಕ, ಮೊಗಿಲೆವ್ ಜ್ಲೊಬಿನ್, ಬೋಬ್ರ್ಯಸ್ಕ ಮತ್ತು ಕೊನೆಗೆ ಮಿಸಿಸ್ಕೊ ಕೂಡಾ ರಶ್ಯನ್ ಕೈವಶ ಬಂದಿದೆ. ಕೆಲವೇದಿನಗಳಲ್ಲಿ ರಶ್ಯನರಷ್ಟು ಮುಂದೊತ್ತಿದ್ದು ದಿಗಿಲುಗೊಳಿಸುವ ವಿಷಯವಾಗಿದೆ. ವಿಲ್ನಾನಗರವೂ ಈಗ ರಶ್ಯನ್ ವಶ ಬಂದಿರುವುದು.





ಜಿಲ್ಲಾ ಸಮಾಚಾರಗಳು

ಮಂಗಳೂರು

ಸಕ್ಕರೆ ವಿಕ್ರಿ—ಇವುಗಳ ಸರಬರಾಯಿಯು ಈಗ ಪ್ರಾರಂಭವಾಗಿದೆ. ತಿದ್ದುಪಡಿ ಮಾಡಿದ ಕಾರ್ಡುಗಳು ಅರ್ಜಿದಾರರಿಗೆ ಸಿಕ್ಕಿವೆ. ಬಾಡಿಗೆ ಪ್ರಮಾಣದ ಮೇಲೆ ಸಕ್ಕರೆ ಹಂಚಿರುವುದರಿಂದ ಇದರ ವಿಚಾರ ತಪ್ಪು ಒಪ್ಪುಗಳನ್ನು ಅಧಿಕಾರಿಗಳು ಪರಿಶೋಧಿಸುತ್ತಲಿರುವರು. ಬದಲಾವಣೆ ಇಚ್ಛಿಸುವವರು ಈಗಲೂ ಅರ್ಜಿ ಮಾಡಿಕೊಳ್ಳಬಹುದಂತೆ.

ಕಳ್ಳ ಸಂತೆಯಲ್ಲಿ ತೆಗೆದುಕೊಂಡದ್ದೆಂಬ ಸಂಶಯದ ಮೇಲೆ ಕೆಲವು ದಿನಗಳ ಹಿಂದೆ ಮಣ್ಣಗುಡ್ಡೆಯಲ್ಲಿ ನಡೆದ ಘಟನೆಯ ಸಂಬಂಧವಾಗಿ ಅಲ್ಲಿಯ ಸ್ಟೋರಿನೊಬ್ಬರನ್ನು ಅಧಿಕಾರಿಗಳು ಹಿಡಿದು ವಿಚಾರಿಸಿದಾಗ, ಆ ಸ್ಟೋರಿನಲ್ಲಿ ಮಾರಿದ್ದೆಂಬ ಆರೋಪವು ನಿರಾಧಾರವೆಂದು ಕಂಡು ಬಂದು ಹಿಡಿಯಲ್ಪಟ್ಟವರನ್ನು ಬಿಟ್ಟಿರುವರೆಂದು ತಿಳಿದು ಬರುತ್ತದೆ.

ವೈದಿಕ ಸಂಘ—ಸ್ಥಳೀಯ ಗೌ. ಸಾ. ಬ್ರಾ. ವೈದಿಕ ಸಂಘದವರು ಹಿಂದಿನ ತಮ್ಮೊಂದು ಸಭೆಯಲ್ಲಿ ಹೆಚ್ಚಾಗಿ ಮಾಧ್ವರೇ ಆಗಿರುವ ತಮ್ಮ ಬಾಂಧವರಲ್ಲಿ 'ಮಧ್ವಮತ ಪ್ರಚಾರವನ್ನು ಮಾಡಬೇಕೆಂಬ ಉದ್ದೇಶದಿಂದ 'ಮಧ್ವಮತ ಪ್ರಚಾರಿಣೀ ಸಭಾ' ಎಂಬ ಪ್ರತ್ಯೇಕ ಮಂಡಲಿಯೊಂದನ್ನು ಸ್ಥಾಪಿಸಲು ಸಹಾಯ ಮಾಡಿದರು. ಇದರಲ್ಲಿ ವೇ. ಶ್ರೀ. ಕೇಶವ ಭಟ್ ಅಧ್ಯಕ್ಷರು, ಗೋಕರ್ಣ ಮಾಧವ ಭಟ್, ಎಸ್. ಅನಂತ ಭಟ್, ಬಿ. ಜನಾರ್ಧನ ಭಟ್, ಎಚ್. ಮಾಧವ ಭಟ್ ಇವರು ಕಾರ್ಯಕರ್ತೃಗಳು. ಮಧ್ವಮತದ ತತ್ವಗಳನ್ನು ಭಾಷಣ ಲೇಖನಗಳ ಮೂಲಕ ಪ್ರಚಾರಿಸುವುದೇ ಈ ವಿದ್ವತ್ ಸಭೆಯ ಪ್ರಾಮುಖ್ಯ ಗುರಿ.

ನಿಧನ:—ಒಂದು ಸಮಯದಲ್ಲಿ ಪ್ರಮುಖ ವ್ಯಾಪಾರಿಗಳಾಗಿದ್ದ ವಾಘ್ ನರಸಿಂಹ ಶೆಣೈ ಇವರು ಅನಾರೋಗ್ಯದಿಂದ ನಿಧನಪಟ್ಟರು.

ನಗರದಲ್ಲಿ ಜನಪ್ರಿಯರೆಂಬಂತಿದ್ದು, ಹಿಂದೆ ಗೋಕರ್ಣ ಮಠ ಶಾಲೆಯಲ್ಲಿ ಅಧ್ಯಾಪಕರಾಗಿದ್ದ, ಅಡಿಗೆ ಚರ್ಡಪ್ಪ ಶೆಣೈ ಇವರೂ ದೈವಾಧೀನರಾದರು. ಮುಖ್ಯವಾಗಿ ವಿಶಾಲವಾಗಿರುವ ಇವರ ಶಿಷ್ಯವರ್ಗಕ್ಕೆ ಇದು ಸಂತಾಪದ ಸುದ್ದಿ. ಇವರ ಆತ್ಮಕ್ಕೆ ಶಾಂತಿ ಇರಲಿ.

ಮೈದಾನಿನಲ್ಲಿ:—ವೆಬ್‌ಸ್ಟರ್ ಮಾರ್ಕೆಟು ಇನ್ನೂ ಇಲ್ಲಿಂದ ಸ್ಥಳಾಂತರವಾಗಿಲ್ಲ. ಅದಕ್ಕೋಸ್ಕರ ಏರ್ಪಾಡುಗಳು ನಡೆಯುತ್ತವೆ.

ಇದೇ ಮೈದಾನಿನಲ್ಲಿ ಕ್ರಿಕೆಟ್ ಆಡುವ ಸ್ಥಳದಲ್ಲಿ ಮಿಲಿಟರಿಗೆ ಪೂರೈಸಲ್ಪಡುವ ಹಂಚನ್ನು ದಾಸ್ತಾನು ಇರಿಸಿರುವರು. ನಗರದ ಜನರ ಮೆಚ್ಚುಗೆಯ ಕ್ರಿಕೆಟ್ ಆಟವನ್ನು ಆ ಸ್ಥಳದಲ್ಲಿ ಆಡಲು ಸಾಧ್ಯವಿಲ್ಲದಾಗಿದೆ. ಆದರೂ ಪಂದ್ಯಾಟಗಳು ನಡೆಯುವ ಕಾಲದೊಳಗೆ ಹಂಚುಗಳನ್ನು ಬೇರೆಕಡೆ ಒಯ್ಯುವ ಏರ್ಪಾಡು ಮಾಡಬಹುದೆಂದು ನಿರೀಕ್ಷೆ.

ಘಟನೆ:—ಮಣ್ಣಗುಡ್ಡೆಯ ಸರಕಾರಿ ಬಾವಿಯ ಬಳಿ ಒರ್ವ ಮೊಲಿ ಜಾತಿಯ ಮಹಿಳೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಪಟ್ಟಳು. ಕ್ಲಪ್ತ ಕಾಲದಲ್ಲಿ ಸಹಾನುಭೂತಿಯುಳ್ಳ ಮಾರ್ಗಸ್ಥರು ಅವಳನ್ನು ಆ ವಿಪತ್ತಿನಿಂದ ತಪ್ಪಿಸಿ ಅವಳ ಮನೆಗೆ ತಲ್ಪಿಸಿದರು. ಅವಳಿಗೆ ಬುದ್ಧಿ ಭ್ರಮಣೆಯಾಗಿತ್ತೆಂದು ಹೇಳಲಾಗಿದೆ.

ವ್ಯಾಪಾರ:—ಯುದ್ಧ ಪರಿಸ್ಥಿತಿಗನುಗುಣವಾಗಿ ಸರಕಾರವು ನಾಗರೀಕರಿಗೆ ಅವಶ್ಯವೆನಿಸುವ ದಿನನಿತ್ಯದ ಉಪಯೋಗಕ್ಕೆ ಬೇಕಾದ ಆಹಾರ ಮತ್ತು ಇತರ ವಸ್ತುಗಳ ಬೆಲೆ, ಮಾರಾಟಗಳನ್ನು ನಿಯಂತ್ರಿಸುವ ಧೋರಣೆಯನ್ನು ಕೈಕೊಂಡದ್ದು ವ್ಯಾಪಾರೀ ವರ್ಗದಲ್ಲಿ ಅತೃಪ್ತಿಯನ್ನುಂಟುಮಾಡಿದಂತೆ ಕಂಡುಬರುತ್ತದೆ. ವಿಪರೀತ ಬೆಲೆಗೆ ಮಾರಿದ್ದೆಂಬ ಆರೋಪದ ಮೇಲೆ ಈಗಲೇ ಕೆಲವು ಮಂದಿಯನ್ನು ಶಿಕ್ಷೆಗೆ ಗುರಿಮಾಡಲಾಯಿತು. ಒಂದು ದಿನ ತೊಡಕಿನಲ್ಲಿ ಸಿಕ್ಕಬಹುದೆಂಬ ಭಯ, ನಿಯಂತ್ರಣದಿಂದ ತಮಗೆ ತೃಪ್ತಿಕರ ಲಾಭವಿಲ್ಲವೆಂಬ ನಿರುತ್ಸಾಹ, ಸ್ವತಂತ್ರವಾಗಿ ಕೊಂಡು ಮಾರುವುದಕ್ಕಾಗುವುದಿಲ್ಲವೆಂಬ ಅಡಚಣೆ, ವಾಹನಗಳ ಅಭಾವದ ತೊಂದರೆ ಇವೇ ಮುಖ್ಯ ಕಾರಣಗಳಿಂದ ಕೆಲವರು ತಮ್ಮ ವಹಿವಾಟುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಬಹುದೆಂದೂ ಊಹಾಪೋಹಗಳು ಇವೆ. ಕ್ರಮಬದ್ಧವಾಗಿ ಉದ್ಯಮಮಾಡಿ ಯುದ್ಧಕಾಲವನ್ನು ಕಳೆದರೆ ತೊಂದರೆ ಇರಲಾರದು.

ಬಸ್ ವ್ಯವಸ್ಥೆ:—ಇಷ್ಟರ ತನಕ ಚಾಲ್ತಿಯಲ್ಲಿದ್ದ ಏಜೆಂಟ್ ಕ್ರಮವನ್ನು ರದ್ದುಗೊಳಿಸಿ ಅದರ ಬದಲಿಗೆ ಕಂಡಕ್ಟರ್ ಪದ್ಧತಿಯನ್ನು ಜ್ಯಾರಿಯಲ್ಲಿ ತರುವ ವಿಚಾರ ಪರ್ಯಾಲೋಚಿಸಲು ಬಸ್ಸ್ ಚಾಲಕರ ಒಂದು ಸಭೆ ಸೇರಿತ್ತು. ಈ ಹೊಸ ಕ್ರಮವನ್ನು ಸರಕಾರದವರಿಂದ ಸೂಚಿಸಲ್ಪಟ್ಟಿತ್ತು. ಆದರೆ ಇಷ್ಟರ ತನಕ ಏಜೆಂಟರಾಗಿದ್ದು ಸೇವೆ ಮಾಡಿದವರ ಕಡೆಯಿಂದ ಒಂದು ಮನವಿಯು ಮಾನ್ಯ ಕಲೆಕ್ಟರರಲ್ಲಿ ಹೋಗಿರುವುದರಿಂದ ಅದರ ತೀರ್ಮಾನ ಮಾಡುವವರೇಗೆ ಹೊಸ ಯೋಜನೆಯ ವಿಚಾರವು ಮುಂದಿನ ಸಭೆಯಲ್ಲಿ ತೀರ್ಮಾನಕ್ಕೆ ಇಟ್ಟಿರುವುದಾಗಿ ತಿಳಿದುಬರುತ್ತದೆ.

ಪೇಟೆ—ನಿನ್ನೆ ಗ್ರಹಣ ಕಾಲವಾದುದರಿಂದ ನಗರದೊಳಗಿನ ಪ್ರಾಮುಖ್ಯ ವ್ಯಾಪಾರದಂಗಡಿಗಳು ಮುಚ್ಚಿದ್ದವು. ಸಮುದ್ರ ನದಿ ತೆರೆಗಳ ಬಳಿ ಸ್ನಾನಕ್ಕಾಗಿ ಜನರು ತುಂಬಾ ನೆರೆದಿರುವುದು ಕಂಡುಬಂತು.

ಹವಾಮಾನ—ಮಳೆಯು ಅತೀ ಹೆಚ್ಚಲ್ಲದಿದ್ದರೂ ಸಾಧಾರಣ ಭರದಿಂದ ಬಂದಿದೆ. ಕೆಲವು ಕಡೆಗಳಲ್ಲಿ ವಿಷಮ ಜ್ವರದ ಚಿಹ್ನೆಗಳು ಕಂಡುಬಂದಿವೆಯಾಗಿ ವರದಿ.

ಶ್ರೀ ಅಡ್ಯಂತಾಯ—ಕೈಗಾರಿಕೆ ಮತ್ತು ವಾಣಿಜ್ಯ ಖಾತೆಯ ಜತೆ ಡೈರೆಕ್ಟರರಾದ ದಿವಾನ್ ಬಹದ್ದೂರ್ ಎನ್. ಮಹಾಲಿಂಗ ಅಡ್ಯಂತಾಯ ಬಿ. ಎಸ್. ಸಿ. (ಎಡಿನ್‌ಬರ್ಗ್) ಇವರನ್ನು ಕಳೆದ ವಾರ ರಾಮಕೃಷ್ಣ ವಿ. ಭವನದಲ್ಲಿ ಸತ್ಕರಿಸಲಾಯಿತು. ಶ್ರೀಯುತರು ನಗರದಲ್ಲಿ ಕೆಲವು ಸಂಗೀತ ಕಛೇರಿಗಳನ್ನು ಮಾಡಿದರು. ಈ ಕಲೆಯಲ್ಲಿಯೂ ದಿವಾನ್ ಬಹದ್ದೂರರು ಪ್ರವೀಣರಿರುವುದು ಸ್ತುತ್ಯ.

ಹಳ್ಳಿಗೆ ಧಾನ್ಯ—ಬಂದರದ ಧಾನ್ಯ ವ್ಯಾಪಾರಿಗಳು ಕಡ್ಲೆ ಹೆಸರು ತದಗಿಣಿ ಗ್ರಾಮಾಂತರ ಜನರ ಪೂರೈಕೆಗಾಗಿ ೬೫೦೦ ಮುಡಿ ಧಾನ್ಯವನ್ನು ಕಲೆಕ್ಟರರ ವಶಕ್ಕೆ ಇತ್ತಿರುವರು. ಇದಕ್ಕಾಗಿ ಕಲೆಕ್ಟರರು ಆಭಾರಮನ್ನಿಸಿರುವರು. ರೇಶನ್ ಪದ್ಧತಿ ಇಲ್ಲದ ಗ್ರಾಮಗಳಲ್ಲಿ ಇದನ್ನು ಸೇರಿಗೆ ೫,೫॥ ಆಣೆಯಲ್ಲಿ ಹಂಚುವರು.

ಕಲಾ ವಾದಕ—ಉತ್ತರ ಹಿಂದೂಸ್ಥಾನದಲ್ಲಿ ಪ್ರಖ್ಯಾತ ವಾದ್ಯ ನಿಪುಣರಲ್ಲಿ ಅನುಭವ ಪಡೆದು ಬಂದ ಶ್ರೀ ಎಚ್. ತಾರಾನಾಥರಾವ್ ಇವರು ತಮ್ಮ ಅನೋಘ ತಬಲಾ ವಾದನದಿಂದ ನಗರ ಸಂಗೀತ ಪ್ರೇಮಿಗಳನ್ನು ತಣಿಸುತ್ತಿರುವರು. ಹಲವು ಕಡೆ ಇವರ ಕಛೇರಿ ನಡೆಯಿತು.

ರೈಲ್ವೇ—ಮಜೂರ ಪರಿಷತ್ತು ತ್ರಿಚಿಯಲ್ಲಿ ನಡೆಯುತ್ತದೆ. ಈ ಜಿಲ್ಲೆಯಿಂದ ೨೫ ಪ್ರತಿನಿಧಿಗಳು ಆಹ್ವಾನಿತರಾಗಿರುವರು.

ಹಾರೆಗಳು—ನಗರದಲ್ಲಿ ಇದರ ಬೆಲೆ ಒಂದಕ್ಕೆ ರೂ. ೩-೪-೦ ಸಿಗುವ ಸ್ಥಳ—ದ. ಕ. ಸೆಂ. ಕೋ. ಸ್ಟೋರ್ಸ್, ರಖಂ ಆಗಿ ಎಂ. ಎ. ಕೃಷ್ಣನ್ಯಾಕ್, ಎಂ. ಕೃಷ್ಣ ಆರ್. ನ್ಯಾಕ್ (ಎಂಡ್ ಸನ್ಸ್.)

ಹಾರೆ ಬೇಕಾದವರು ಪಟೇಲರ ಮತ್ತು ಕೃಷಿ ಇಲಾಖೆಯ ಡೆಮೊಸ್ಟ್ರೇಟರ ಇವರ ಶಿಫಾರಸು ಪತ್ರಗಳನ್ನು ಪಡೆದು ತಹಶೀಲ್ದಾರರಲ್ಲಿ ಒಪ್ಪಿಸಿ ಪಡೆಯತಕ್ಕದ್ದು. ತಹಶೀಲ್ದಾರರುಗಳು ನೇರಾಗಿ ತಾವೇ ಪರ್ಮಿಟು ಕೊಡಲಧಿಕೃತರಾಗಿರುವರು. ವ್ಯಾಪಾರಿಗಳು ದೇಶಿಯ ಹಾರೆಗಳನ್ನೂ ಮಾರಬಹುದು.

ಬಟಾಟೆ—ಇದರ ಬೆಲೆ ನಿಯಂತ್ರಣಗೊಳಿಸಲ್ಪಟ್ಟಿತು. ಈಗ ಅದರ ಬೆಲೆ ರಾತ್ತಲಿಗೆ ೧ ಆಣೆ ೭ ಪೈ.

ಹುಣಸೇಹಣ್ಣು—ಇದೂ ನಿಯಂತ್ರಣಕ್ಕೆ ಒಳಪಟ್ಟಿತು. ಈಗ ಇದರ ಬೆಲೆ ೧, ೨, ೩ನೇ ತರಗತಿಗಗೆ ರೂ. ೧೪॥, ೧೪, ೧೨॥.

ಸೌದೆ—ಕಟ್ಟಿಗೆಯ ಪರಿಸ್ಥಿತಿ ಕಳೆದ ವಾರಕ್ಕಿಂತ ಇನ್ನು ಮುಂದೆ ಸುಧಾರಿಸುವುದೆಂದು ನಿರೀಕ್ಷೆ. ಕಲೆಕ್ಟರರು ಹೊರಗಿನ ತಾಲೂಕುಗಳಿಂದ ಅದನ್ನು ತರಿಸಲು ಏರ್ಪಡಿಸಿರುವರು. ಸಹಕಾರೀ ಸ್ಟೋರಿನವರು ಅದನ್ನು ದಾಸ್ತಾನು ಇಟ್ಟು, ಸೌದೆ ವ್ಯಾಪಾರಿಗಳಿಗೆ ಅದನ್ನು ಕ್ರಮವಾಗಿಹಂಚಲಾಗುವುದೆಂದು ತಿಳಿಸಲಾಗಿದೆ. ಕೊ. ಬೈಲು ಕೊ. ಬೇಂಕಿನ ವಠಾರದಲ್ಲಿ ಈಗ ಅದನ್ನು ದಾಸ್ತಾನು ಮಾಡುತ್ತಿರುವರು.

ನಗರ ಸಭೆ—ಇನ್ನು ಸದ್ಯದಲ್ಲೇ ಅಕ್ಕಿ ಅಭಾವ ಬರಬಹುದಾದ್ದರಿಂದ ಸರಕಾರವು ನಗರ ಮತ್ತು ಆಸುಪಾಸಿನ ಹಳ್ಳಿಗಳಿಗಾಗಿ ೨ ಲಕ್ಷ ಮುಡಿ ಅಕ್ಕಿ ತರಿಸುವರೆ ಏರ್ಪಡಿಸಬೇಕೆಂದು ಸರಕಾರವನ್ನು ವಿನಂತಿಸಿಕೊಳ್ಳುವ ಅವಸರದ ಠರಾವು ತಾ. ೧೭ರಲ್ಲಿ ಸೇರಿದ ಮುನ್ಸಿಪಲ್ ಸಭೆಯಲ್ಲಿ ಏಕಮತವಾಗಿ ಪಾಸಾಯಿತು.

ಮಾರ್ಕೇಟು—ವೆ. ಮಾರ್ಕೇಟಿನ ಕೆಲವು ವ್ಯಾಪಾರಿಗಳು ಜೀರ್ಣೋದ್ಧಾರಗೊಳಿಸಿದ ಕಟ್ಟಡದಲ್ಲಿ ಏರಿಸಿದ ಬಾಡಿಗೆ ದರವನ್ನು ಕಡಿಮೆ ಮಾಡಬೇಕೆಂದು ಮುನಿಸಿಪಲ್ ಅಧ್ಯಕ್ಷರಲ್ಲಿ ಮನವಿಮಾಡಿಕೊಂಡಿರುವರು. ೩ ತಿಂಗಳ ನಂತರ ಅದನ್ನು ಪರ್ಯಾಲೋಚಿಸಲಾಗುವುದೆಂದು ವಾಗ್ದಾನ ದೊರೆತಿದೆ. ಸದ್ಯಕ್ಕೆ ಬಾಡಿಗೆ ನಿರ್ಧರಿಸಲಾಗಿದೆ.

ನಗರ ಸಭೆ—ಮುನಿಸಿಪಲ್ ಮಾರ್ಕೇಟುಗಳಲ್ಲಿ ಮಾರಲ್ಪಡುವ ವಸ್ತುಗಳ ಬೆಲೆಯನ್ನು ಮುನಿಸಿಪಾಲಿಟಿಯವರೇ ನಿರ್ಧರಿಸಬೇಕೆಂದು ಕಲೆಕ್ಟರರು ತಿಳಿಸಿರುವರೆಂದು ತಿಳಿದು ಬರುತ್ತದೆ. ಕಾಫಿ, ತಿಂಡಿಗಳ ಬೆಲೆ ನಿರ್ಧರಿಸಿದ್ದ ಸಮಿತಿಗೇ ಈ ಕೆಲಸವನ್ನೂ ಒಪ್ಪಿಸಲಾಗುವುದೆಂದೂ ಗೊತ್ತಾಗಿದೆ. ಇದರ ವಿಶೇಷ ಸಭೆ ತಾ. ೨೪ಕ್ಕೆ ನಡೆಯಲಿದೆ. ಈ ಸಲದ ಸಭೆ ಜರುಗಿದಾಗ ಪಕ್ಕದ ಕೋಣೆಯೊಂದರಲ್ಲಿ ಇಲಿ ಬಿದ್ದಿತಾಗಿ ತಿಳಿದು ಬಂತು.

ಪುತ್ತೂರು:—ಇಲ್ಲಿ ಒಬ್ಬರಿಗೆ ಕಂಟ್ರೋಲ್ ಉಲ್ಲಂಘನೆ ಕಟ್ಲೆಯಲ್ಲಿ ೩ ಸಾವಿರ ರೂ. ಜುಲ್ಮಾನೆಯಾಗಿದೆ. ಲೋರಿ ಡ್ರ್ಯಾವರರೊಬ್ಬರಿಗೆ ರೂ. ೩೦೦.

ಇಲ್ಲಿಯ ಕಟ್ಲೇರಿ ಅಂಗಡಿಯವರೊಬ್ಬರು ಒಂದು ಬೆಂಕಿಪೆಟ್ಟಿಗೆಯನ್ನು ೧ ಆಣೆಗೆ ಮಾರಿದರೆಂದು ರೂ. ೨೫ ಜುಲ್ಮಾನೆಗೆ ಒಳಗಾಗಿದ್ದಾರೆ.

ಹೊಸದುರ್ಗ:—ಕಳೆದವಾರ ಮಾನ್ಯ ಕಲೆಕ್ಟರ್ ಸಾಹೇಬರು ಇಲ್ಲಿಗೆ ಆಗಮಿಸಿ ಅಕ್ಕಿ ಪೂರೈಕೆಯ ಏರ್ಪಾಡುಗಳನ್ನು ಪರಿಶೀಲಿಸಿದರು.

ಎದೆನೋವನ್ನು ನಿವಾರಿಸಿರಿ

ನಿಮಗೆ ಬೇಗನೇ ಶೀತವಾಗುವುದೆ? ನೀವು ಆಗಾಗ ಕೆಮ್ಮು ಶ್ವಾಸಕೋಶದ ದೌರ್ಬಲ್ಯಗೊಳಿಸುವ ಶೀತಬಾಧೆಯಿಂದ ನರಳುತ್ತೀರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸನ್ನು ಸೇವಿಸಿ ಗುಣಹೊಂದಿರಿ.

ಪೆಪ್ಸ್ ಬಾಯಲ್ಲಿ ಹಾಕಿದ ಕೂಡಲೇ ಉತ್ತಮ ಸುಗಂಧ ಔಷಧಿ ರಸ ಹೊರಡಿಸುತ್ತದೆ. ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುವುದು. ಹಾಗೆ ಸೇರಿ, ಎದೆನೋವು, ಕಫ, ಗಂಟಲುನೋವು, ಶೀತಬಾಧೆ, ಕೆಮ್ಮು ಮೊದಲಾದುವುಗಳನ್ನು ಗುಣಪಡಿಸುವುದು. ನೇವಸ ಮತ್ತು ಶೀತಜ್ವರಗಳಿಗೂ ಪರಮೌಷಧ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಗಾಂಧೀಜಿ ಒಪ್ಪಿದರೂ ಜಿನ್ನರು ಒಪ್ಪಲಿಲ್ಲ

ರಾಜಾಜಿ ವಿಫಲರಾದರೇಕೆ?

ಗಾಂಧೀಜಿಯವರ ಒಪ್ಪಿಗೆ ಪಡೆದುಕೊಂಡ ರಾಜಾಜಿಯವರು, ಕಾಂಗ್ರೆಸ್–ಲೀಗ್ ಐಕ್ಯ ಸಾಧನೆಗಾಗಿ ಜಿನ್ನರ ಮುಂದೆ ಕೆಳಗಿನ ಈ ಸೂಚನೆಗಳನ್ನಿತ್ತರು.

ಸಂಧಾನ ಶರತಗಳು

"ಭಾರತದಲ್ಲಿ ತಾತ್ಕಾಲಿಕ ಪ್ರಾತಿನಿಧಿಕ ಸರಕಾರ ಸ್ಥಾಪಿಸಲು ಕಾಂಗ್ರೆಸಿನೊಡನೆ ಮುಸ್ಲಿಂ ಲೀಗು ಸಹಕರಿಸಬೇಕಾಗಿದೆ ಮತ್ತು ಭಾರತದ ಸ್ವಾತಂತ್ರ ಕೇಳಿಕೆಯನ್ನು ಸಮರ್ಥಿಸಬೇಕಾಗಿದೆ.

"ಯುದ್ಧಾನಂತರ ಮುಸ್ಲಿಂ ಬಹುಮತವುಳ್ಳ ಪ್ರಾಂತಗಳನ್ನು, ವಾಯುವ್ಯ ಮತ್ತು ಈಶಾನ್ಯ ಪ್ರಾಂತಗಳನ್ನು ಬೇರೆಗೊಳಿಸಿ ವಿಭಜಿಸಲು ಒಂದು ವಿಚಾರಣಾ ಸಮಿತಿ ನೇಮಿಸಬೇಕು.

"ಹೀಗೆ ವಿಭಜಿಸಿದ ಪ್ರಾಂತಗಳ ಜನರೆಲ್ಲರ ಸ್ವಯಂ ನಿರ್ಣಯಾಧಿಕಾರದ ಮೇರೆಗೆ ಮತದಾನವನ್ನೇರ್ಪಡಿಸಿ ಕೊನೆಗೆ ಆ ಪ್ರಾಂತ್ಯಗಳಲ್ಲಿ, ಕೊನೆಗೆ ಆ ಪ್ರಾಂತಗಳನ್ನು ಭಾರತದಿಂದ ಬೇರೆಗೊಳಿಸಿ ಸ್ವತಂತ್ರ ಆಡಳಿತ ಸ್ಥಾಪಿಸಬೇಕು. ಹಾಗೂ ಗಡಿನಾಡಿನವರಿಗೆ ಹಾನಿಮಾಡದ ಅಂತಹ ಪ್ರಾಂತಗಳಲ್ಲಿ ಜನತಾಭಿಪ್ರಾಯದ ಮೇರೆಗಿನ ಸರಕಾರ ಸ್ಥಾಪಿಸಬೇಕು.

"ಸ್ವಯಂ ನಿರ್ಣಯಾಧಿಕಾರ ಮತಪದ್ಧತಿಯು ಪೂರ್ವಭಾವಿಯಾಗಿ ಎಲ್ಲಾ ಪಕ್ಷಗಳೂ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕು.

"ಹೀಗೆ ವಿಭಜಿಸಲ್ಪಟ್ಟ ಪ್ರಾಂತವು ಅನ್ಯೋನ್ಯ ಒಪ್ಪಂದ ಮೂಲಕ ಸಂರಕ್ಷಣೆ, ವ್ಯಾಪಾರ ಮತ್ತು ವ್ಯವಹಾರಗಳನ್ನಿಟ್ಟುಕೊಳ್ಳಬೇಕು.

"ಜನರ ಸ್ಥಳಾಂತರವು ಜನತೆಯ ಇಚ್ಛೆಯನ್ನು ಹೊಂದಿಕೊಂಡಿದೆ.

ಭಾರತದ ಆಡಳಿತದ ಜವಾಬ್ದಾರಿಯನ್ನು ಬ್ರಿಟನು ಭಾರತೀಯರಿಗೊಪ್ಪಿಸಿದರೆ ಈ ಶರತಗಳನ್ನು ಕಾರ್ಯರೂಪಕ್ಕೆ ತರಲಾಗುವುದು.

ಪತ್ರವ್ಯವಹಾರಗಳು

೧೯೪೪ನೇ ಎಪ್ರಿಲ್ ತಿಂಗಳಲ್ಲಿ ಈ ಕುರಿತು ರಾಜಾಜಿ ಮತ್ತು ಜಿನ್ನಾರೊಳಗೆ ಪತ್ರವ್ಯವಹಾರ ನಡೆಯಿತು. ರಾಜಾಜಿಯವರು ೧೯೪೩ನೇ ಮಾರ್ಚ ತಿಂಗಳಲ್ಲಿಯೇ ಸೂಚನೆಗಳನ್ನು ರಚಿಸಿ ಗಾಂಧೀಜಿಯವರೊಡನೆ ಆ ಕುರಿತು ವಿಚಾರವಿನಿಮಯಮಾಡಿ ಅವರ ಪೂರ್ಣ ಸಮ್ಮತಿ ಪಡೆದಿದ್ದರು. ಈ ಸೂಚನೆಗಳು ಎಲ್ಲರಿಗೂ ಸಮರ್ಪಕವಾಗುವವೆಂದು ಗಾಂಧೀಜಿ ಜಿನ್ನರಿಗೆ ತಿಳಿಸಬೇಕೆಂದೂ ರಾಜಾಜಿಯೊಡನೆ ಹೇಳಿದರು. ಆದರೆ ಅವರಂದು ಸೆರೆಮನೆಯಲ್ಲಿದ್ದುದರಿಂದಲೂ, ಜಾತೀಯ ಒಪ್ಪಂದವಾಗದೆ ಭಾರತದ ಬಿಕ್ಕಟ್ಟು ಬಗೆಹರಿಯಲಾರದ ಸಂದರ್ಭವಿದ್ದುದರಿಂದಲೂ ರಾಜಾಜಿಯವರು ಜಿನ್ನರಿಗೆ ಈ ಸೂಚನೆಗಳನ್ನು ಕಳುಹಿಸಿ ಅವರ ಸಮ್ಮತಿ ಕೇಳಿ ಪತ್ರ ಬರೆದರು.

ಈ ಕುರಿತು ಜಿನ್ನಾರೊಡನೆ ರಾಜಾಜಿ ದಿಲ್ಲಿಯಲ್ಲಿ ಮಾತನಾಡಲು, ಅವರು ಇದಕ್ಕೆ ಅಸಮ್ಮತಿ ಸೂಚಿಸಿದರು. ಆದರೆ ವಿಷಯಗಳನ್ನು ಪುನರಾಲೋಚಿಸುವಂತೆ ರಾಜಾಜಿ ಪುನಃ ಜಿನ್ನಾರೊಡನೆ ಕೇಳಿಕೊಂಡು ಪತ್ರ ಬರೆದರು.

ಇಷ್ಟಾದರೂ ಜಿನ್ನರು ಲಿಖಿತ ಉತ್ತರ ಕೊಡಲಿಲ್ಲ. ಪುನಃ ರಾಜಾಜಿ ಅವರಿಗೊಂದು ತಂತಿ ಬಿಟ್ಟು ಪುನಃ ತಾನು ಗಾಂಧೀಜಿಯನ್ನು ಭೇಟಿಮಾಡಿದುದಾಗಿಯೂ, ಆಗಲೂ ಅವರು ಆ ಶರತಗಳಿಗೊಪ್ಪಿರುವರೆಂದೂ, ಜಿನ್ನಾರ ಅಸಮ್ಮತಿ ಖಂಡಿತವಾದರೆ ಅದನ್ನು ಪ್ರಕಟಿಸಬೇಕಾಗಿದೆಯೆಂದೂ, ಆದ್ದರಿಂದ ಪುನರಾಲೋಚಿಸಿ ಉತ್ತರಕೊಡಬೇಕೆಂದೂ ಅದರಲ್ಲಿ ಸೂಚಿಸಿದರು.

ಇಷ್ಟಾಗಲು ಜಿನ್ನಾರಿಂದ ತಂತಿಯೊಂದು ಬಂದಿತು. 'ನಿಮ್ಮ ಸೂಚನೆಯನ್ನು ಸ್ವೀಕರಿಸಲು ಅಥವಾ ನಿರಾಕರಿಸಲು ಅಸಮರ್ಥನು. ಅದನ್ನು ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿ ಮುಂದಿರಿಸಲು ನೀವು ಒಪ್ಪಲಿಲ್ಲ. ಗಾಂಧೀಜಿಯರ ತನ್ನ ಸೂಚನೆಗಳನ್ನು ನೇರಾಗಿ ನನಗೆ ಕಳುಹಿಸಿದರೆ ಅದನ್ನು ಲೀಗ್ ವರ್ಕಿಂಗ್ ಕಮಿಟಿ ಮುಂದೆ ನಾನಿಡುವೆನು" ಹೀಗೆಂದು ಅದರಲ್ಲಿ ಬರೆದಿತ್ತು.

ಏನು ಪ್ರಯೋಜನ?

ಇದಕ್ಕೆ ರಾಜಾಜಿ ಒಂದು ತಂತಿ ಕಳುಹಿಸಿ, ಅದರಲ್ಲಿ, ಒಪ್ಪಂದ ಮಾಡುವ ಕುರಿತು ಗಾಂಧೀಜಿ ಹೊಣೆಗಾರ ವ್ಯಕ್ತಿಯಲ್ಲದಿದ್ದರೂ, ಅವರು ತನ್ನ ವೈಯುಕ್ತಿಕ ಸಮ್ಮತಿಯಿತ್ತುದರಿಂದ ಕಾಂಗ್ರೆಸ್ ಪಕ್ಷದ ಬೆಂಬಲ ಪಡೆಯಲು ಸಾಧ್ಯವಾಗುವುದೆಂದೂ, ನೀವು ಹಾಗೆ ಮಾಡಿದೆ, ನಿಮ್ಮ ಬೆಂಬಲವಿಲ್ಲದ ಸೂಚನೆಯನ್ನು ಲೀಗ್ ವರ್ಕಿಂಗ್ ಕಮಿಟಿ ಮುಂದಿಡುವುದರಲ್ಲಿ ಏನು ಪ್ರಯೋಜನವಿದೆಯೆಂದೂ ತಿಳಿಸಿದರು.

ಇದಕ್ಕೆ ಜಿನ್ನಾರು ಮರುಮಾತನಾಡದೆ, ಹಿಂದಿನ ಅಭಿಪ್ರಾಯಕ್ಕೆ ಅಂಟಿಕೊಂಡರು. ಕೊನೆಗೆ ರಾಜಾಜಿ ಪತ್ರವ್ಯವಹಾರವನ್ನು ಈಗ ಪ್ರಕಟಿಸಿದ್ದಾರೆ.

ದೇಶದಾದ್ಯಂತ ಇದರಿಂದ ಕೋಲಾಹಲವುಂಟಾಗಿದೆ. ರಾಜಾಜಿ ಕಳೆದ ಕೆಲ ಸಮಯಗಳಿಂದ ಕಾಂಗ್ರೆಸ್ ಲೀಗ್ ಐಕ್ಯಕ್ಕೆ ಪ್ರಯತ್ನಪಟ್ಟದ್ದು, ಅದರಲ್ಲಿ ಗಾಂಧೀಜಿ ಒಪ್ಪಿಗೆ ಸಹಿತ ಪಡೆದದ್ದು; ಭಾರತವನ್ನು ಜನಾಭಿಪ್ರಾಯದಂತೆ ಬೇಕಾದರೆ ವಿಭಜಿಸಲೂ ಗಾಂಧೀಜಿ ಒಪ್ಪಿಗೆಯಿತ್ತದ್ದು; ಆದರೂ ಜಿನ್ನಾರು ಇದಕ್ಕೆ ಅಡ್ಡಿ ಬಂದು, ರಾಜಾಜಿಯವರ ಪ್ರಯತ್ನ, ಗಾಂಧೀಜಿಯವರ ಪ್ರಯತ್ನ, ದೇಶದ ಏಳಿಗೆಗಳಿಗೆಲ್ಲಾ ಅಡ್ಡಿ ಬಂದದ್ದು ನಿಜವಾಗಿಯೂ ವಿಷಾದಕರವಾಗಿದೆ.

ಜರ್ಮನಿಯೊಡನೆ ಸಮರವು ದೀರ್ಘಕಾಲದ್ದಾಗುವುದು

ಐರೋಪ್ಯದ ಯುದ್ಧವು ಬೇಗನೆ ಕೊನೆಗೊಂಡರೂ ಜಪಾನನ್ನು ಸದೆಬಡಿಯುವ ಕಾರ್ಯವು ಬೇಗನೆ ಸಾಧಿಸಲು ತಡೆಗಳಾದರೂ, ಜಪಾನನ್ನು ಸದೆಬಡಿಯುವ ಉದ್ದೇಶವು ಬ್ರಿಟಿಷರಿಗೆ ಇರುವುದಾಗಿ, ಪಾರ್ಲಿಮೆಂಟಿನ ಅಧಿವೇಶನದಲ್ಲಿ ಸೂಚಿಸಲಾಯಿತು.

ಜರ್ಮನಿಯ ಮೇಲೆ ಪ್ರಚಂಡ ದಾಳಿ

ಹಲವು ನಗರ ನಾಡುಗಳನ್ನು ಹಾಳುಗೆಡವಿದ ಜರ್ಮನರ ಮಾತೃದೇಶದ ಮೇಲೆ ಪ್ರಚಂಡ ಬಾಂಬಿನ ದಾಳಿಯು ಅನೇಕ ದಿವಸಗಳ ಹಿಂದೆ ಪ್ರಾರಂಭವಾಗಿ, ಈಗ ಅವಿಶ್ರಾಂತವಾಗಿ ಸಾಗುತ್ತಿದೆ. ಯುದ್ಧದ ಅಮಾನುಷಿಕತೆಯು ಜರ್ಮನಿಗೆ ತೋರಿಸುವುದೇ ಈ ದಾಳಿಯ ಉದ್ದೇಶವಾಗಿರುತ್ತದೆ. ಈ ದಾಳಿಯಿಂದ ಜರ್ಮನರ ಯುದ್ಧ ಯತ್ನಗಳಿಗೆ ಮಹತ್ತರದ ಹಾನಿಯಾಗಿರುತ್ತದೆಂದು ತಿಳಿದುಬಂದಿದೆ.

* * *

ಮುಂಬಾಯಿಯಲ್ಲಿ ಮೊನ್ನೆ ನಡೆದ ಸ್ಫೋಟನದಲ್ಲಿ ಹಾನಿ ಹೊಂದಿದವರಿಗೆ ಪರಿಹಾರ ದ್ರವ್ಯ ಕೊಡುವ ವ್ಯವಸ್ಥೆಯು ಮಾಡಲಾಗಿದೆ.

---

38 ವರ್ಷಗಳ ಹಿರಿತನ

1906ನೇ ಇಸವಿ ಜುಲೈ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕು ಇಂದಿಗೆ 38 ವರ್ಷ ವಯಸ್ಸು ಹೊಂದಿದೆ. ನಾವು 38 ವರ್ಷ ವಯಸ್ಸಿನವರೆಂಬುದೇ ನೀವು ನಮ್ಮೊಡನೆ ವಹಿವಾಟ ನಡೆಸಲು ಸಾಕಾದ ಕಾರಣವಾಗಲಾರದು.

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ. ಎರಡು ಮಹಾ ಯುದ್ಧಗಳು–ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು–ಈ ಮೊದಲೂ ಆಗದ ಬ್ಯಾಂಕುಗಳ ಸಂಧಿಗ್ಧಾವಸ್ಥೆ–ಶೇರು ಮಾರ್ಕೆಟುಗಳ ಕಂಗಾಲಾವಸ್ಥೆ–ಇತ್ಯಾದಿ:

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದೆ ಪಾರಾಗಿರುವದಾದರೆ–ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮತ್ತೂ ಬೆಳೆಸಿರುವದಾದರೆ–ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದು.

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುದಲ್ಲಿ ನಮ್ಮ ಶ್ರೇಷ್ಠತನದಿಂದ ನಾವು ಹಿರಿಯರಾಗಿದ್ದೇವೆ.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD. 1921

HEAD OFFICE Mangalore. ***BRANCHES*** BUNDER MANGALORE, Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಗಜ್ಜಿ, ಹುಳುಕಡ್ಡಿ, ಚಿಬ್ಬು, ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ,
ಮಂಗಳೂರಲ್ಲಿ ಶಾಖ ಕಂಪೆನಿಯಲ್ಲಿ
ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low. ★ 2½% Rebate on annual premiums.
★ "Permanent Disability Benefits free of any cost.
★ Payment of double the insured amount in case of death by accident at a very smallcost of Rs. 1-8-0 per 1000.
★ Special rebates on large size policies.
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.
Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ. ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್. ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ ೩೮] ತಾರೀಕು 28—7—1944 [ಸಂಚಿಕೆ 30]

ಬದುಕಿರುವ ವರೆಗೆ

'ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿಯುವೆನು'

'ನನಗೆ ಪರಾಜಯ ಮನೋಭಾವವಿಲ್ಲ'

ಮಹಾತ್ಮರು ಹೇಳುತ್ತಾರೆ

"ಭಾರತವು ಸಂಪೂರ್ಣ ಸ್ವತಂತ್ರವಾಗುವುದು ಖಂಡಿತ. ನನ್ನ ಜೀವನ ಕಾಲದಲ್ಲಿ ಅದು ದೊರಕದಿದ್ದರೂ ನಾನು ಚಿಂತಿಸುವುದಿಲ್ಲ. ಆದರೆ ನಾನು ಬದುಕಿರುವ ವರೆಗೆ ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿಯುವೆನು. ದೇವರ ಇಚ್ಛೆಯಿದ್ದರೆ ಸ್ವಾತಂತ್ರ್ಯ ಲಭಿಸಿಯೇ ಲಭಿಸುವುದು." ಹೀಗೆಂದು ಪಂಚಗಣಿಯಲ್ಲಿರುವ ಮಹಾತ್ಮರು ತಮ್ಮ ಮಿತ್ರರಿಗೊಬ್ಬರಿಗೆ ಬರೆದ ದೀರ್ಘ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಆ ಪತ್ರದ ಇತರ ವಿವರಗಳು ಇಂತಿವೆ.

ಪ್ರಶಂಸೆಗೆ ಮೀರಿದ್ದು

ಈ ಸಲದ ಹೋರಾಟದಲ್ಲಿ ಜನತೆ ತುಂಬಾ ತ್ಯಾಗ ಮತ್ತು ಅಪಾರ ಕಷ್ಟಗಳನ್ನು ಅನುಭವಿಸಿದೆ. ಅವರು ತೋರಿರುವ ಧೈರ್ಯ ಕಷ್ಟ ನಷ್ಟಗಳು ಪ್ರಶಂಸೆಗೆ ಮೀರಿದ್ದು. ಆದರೆ ಅಹಿಂಸೆ ಮತ್ತು ಸತ್ಯಗಳ ತಕ್ಕಡಿಯಲ್ಲಿ ತೂಕ ಮಾಡಿ ನೋಡಿದರೆ ಅವರು ಮಾಡಿದ್ದರಲ್ಲಿ ಕೊರತೆಗಳಿವೆ. ಬೇರೆ ದೇಶಗಳ ವಿಚಾರ ಏನೇ ಇದ್ದರೂ ಭಾರತವು ಸತ್ಯ ಅಹಿಂಸೆಗಳಿಂದಲೇ ಸ್ವಾತಂತ್ರ್ಯ ಪಡೆಯುವುದೆಂಬುದು ಖಂಡಿತ.

'ಕಾಂಗ್ರೆಸು ಹಾಗೂ ಕಾಂಗ್ರೆಸಿಗರ ಮೇಲೆ ಹಾಕಿರುವ ಆರೋಪಗಳು ನಿಷ್ಪಕ್ಷಪಾತೀ ವಿಚಾರ ಮಂಡಳದೆದುರು ತೀರ್ಮಾನವಾಗಲಿ. ಸರಕಾರದ ಕೆಲಸವನ್ನು ಅಳೆಯಲು ಒಂದು ಸಾಧನವಿಲ್ಲದೆ ನಾನು ಜನತೆಯ ಕೃತಿಯನ್ನು ಸತ್ಯ ಅಹಿಂಸೆಗಳ ಪ್ರಮಾಣದಿಂದ ಅಳೆಯಲಾರೆ. ಏಕೆಂದರೆ ಜನತೆಯು ಕಡ್ಡಿಯಷ್ಟು ಹಿಂಸೆಯನ್ನು ಸರಕಾರ ಗುಡ್ಡದಷ್ಟು ಮಾಡಿ ತೋರಿಸಿ, ತಾನು ಮಾಡಿದ ಎಲ್ಲಾ ಹಿಂಸಾತ್ಮಕ ಕೃತಿಯೂ ಆ ಸಂದರ್ಭದಲ್ಲಿ ಅವಶ್ಯವಾಗಿತ್ತೆಂದು ಸಮರ್ಥಿಸಿ, ತಲೆಕೆಟ್ಟು ವರ್ತಿಸಿದಂತೆ ಹಿಂದೆಂದೂ ಕಾಣದಷ್ಟು ಹಿಂಸೆಯನ್ನು ಸರಕಾರ ಮಾಡಿದೆ. ಆದ್ದರಿಂದ ಎರಡು ಕಡೆಗಳ ಕೆಲಸವನ್ನೂ ನಾನು ಸತ್ಯ ಅಹಿಂಸೆಗಳ ಅಳತೆಗೋಲಿನಿಂದ ಅಳೆದು ಅಭಿಪ್ರಾಯ ಕೊಡಬೇಕು. ಆದ್ದರಿಂದಲೇ ಜನತೆಯ ಕೃತಿಯನ್ನು ಸತ್ಯ ಅಹಿಂಸೆಗಳ ಅಳತೆಗೋಲಿನಿಂದ ಅಳೆಯಲಾರೆ.

ನಿಶ್ಚಿಂತನಾಗಿ ಹೇಳುವೆನು

ಭೀಕರ ಬರಗಾಲದ ಪರಿಸ್ಥಿತಿ ಹೆಚ್ಚುತ್ತಾ ಹೋಗುತ್ತಿದೆ. ಇದು ದೇವರ ಕೋಪದಿಂದಲೋ, ಆಡಳಿತದ ಕೊರತೆಯಿಂದಲೋ, ಅಥವಾ ಯುದ್ಧದ ದೆಸೆಯಿಂದ ಸರ್ವತ್ರ ಹರಡಿದ ಅಡಚಣೆಯಿಂದಲೋ ಎಂಬುದಕ್ಕೆ ನಾನು ಉತ್ತರ ಕೊಡಲು ಬಯಸುವುದಿಲ್ಲ. ನನಗೆ ದೇವರು ಕೊಟ್ಟ ಬುದ್ಧಿ ಶಕ್ತಿಯ ಉಪಯೋಗ ಮಾಡಿಕೊಂಡು ಬಿಕ್ಕಟ್ಟು ಪರಿಹರಿಸಲು ನಾನು ಯತ್ನಿಸದಿದ್ದರೆ ನಾನು ನನ್ನ ತತ್ವಕ್ಕೆ ಯೋಗ್ಯನಾದ ಮನುಷ್ಯನೆನಿಸಲಾರೆ. ಅದನ್ನು ಬಗೆಹರಿಸುವುದು ಕಷ್ಟದ ವಿಷಯವೇನೂ ಅಲ್ಲ. ಈಗಲೇ ಭಾರತದ ಸ್ವಾತಂತ್ರ್ಯವನ್ನು ಜಾಹೀರ್ ಮಾಡಿ ಯುದ್ಧಕಾಲದಲ್ಲಿ ಅಗತ್ಯವುಳ್ಳ ನಿರ್ಬಂಧ ಪಾಲಿಸುವುದೇ ಭಾರತದ ಬಿಕ್ಕಟ್ಟು ಬಗೆಹರಿಸಲು ಮುಖ್ಯ ಸಾಧನ. ಈ ವಿನಂತಿಯನ್ನು ಸರಕಾರ ಒಪ್ಪಿದರೆ ಅದನ್ನು ಸ್ವೀಕರಿಸಲು ಕಾಂಗ್ರೆಸಿಗ ಸಲಹೆ ಈಯದಿದ್ದರೆ ನಾನು ಮಹಾಪರಾಧಿಯೆನಿಸುವೆನು. ವಿರೋಧ ಟೀಕೆಗಳಿಗೆ ಅಥವಾ ಅಶಾಂತರಾದ ಕಾಂಗ್ರೆಸಿನವರ ಸಿಟ್ಟಿಗೆ ಒಂದುವೇಳೆ ವರ್ಕಿಂಗ್ ಕಮಿಟಿ ಸದಸ್ಯರ ಅಸಂತೋಷಕ್ಕೂ ಅಂಜಿ ನನ್ನ ಅಭಿಪ್ರಾಯಗಳನ್ನು ನಾನು ಸ್ಪಷ್ಟಪಡಿಸದಿದ್ದರೆ ನನ್ನ ಮನಸ್ಸಿಗೆ ಸಮಾಧಾನವಾಗಲಾರದು. ಜಾಗತಿಕ ಪರಿಸ್ಥಿತಿಗೆ ಅನುಕೂಲವಾದ ಹಾದಿಯೆಂದು ನಾನು ವಿಶ್ವಾಸಪೂರ್ವಕ ನಂಬಿರುವುದನ್ನು ಯಾವ ನಿಷ್ಠುರ ಟೀಕೆಗೂ ಅಂಜದೆ ನಿರ್ಭೀತನಾಗಿ ಸ್ಪಷ್ಟಮಾಡಿ ಹೇಳುವೆನು. ಲೋಕದ ಇಂದಿನ ಕರುಣಾ ಜನಕ ಪರಿಸ್ಥಿತಿ ಕೊನೆಗೊಳ್ಳಬೇಕು. ಜಾಗತಿಕ ಪರಿಸ್ಥಿತಿ ನೆಲಗೊಳ್ಳಬೇಕೆಂಬುದೇ ನನ್ನ ಅಭಿಪ್ರಾಯ'

ಕಾಂಗ್ರೆಸಿನ ಸೋಲೇ ರಾಜಾಜಿ ಜಿನ್ನರಿಗೆ ಮಾಡಿದ ಸೂಚನೆಯ ಕಾರಣವೆಂಬುದನ್ನು ಖಂಡಿಸಿ, ಅವರ ಸೂಚನೆ ಸದ್ಯದ ಪರಿಸ್ಥಿತಿಯನ್ನು ಹೊಂದಿಕೊಂಡಿರುವುದೆಂದೂ, ತಾನು ಸೆರೆಮನೆಯಲ್ಲಿ ಉಪವಾಸದಲ್ಲಿರುವಾಗ ಅದಕ್ಕೆ ವೈಯುಕ್ತಿಕ ಸಮ್ಮತಿಕೊಟ್ಟಿರುವುದಾಗಿಯೂ, ಜಗತ್ತನ್ನು ಈಗ ನಡೆಯುತ್ತಿರುವ ಕೊಲೆ ನಿಲ್ಲಬೇಕೆಂದೂ ಮಹಾತ್ಮರು ಬರೆದಿದ್ದರು

ನನಗೆ ಸೋಲು ಬಂದಿಲ್ಲ.

ಒಬ್ಬ ಪತ್ರಿಕೋದ್ಯಮಿಯು ಮಹಾತ್ಮಾ ಗಾಂಧೀಯವರೊಡನೆ ಕಾಂಗ್ರೆಸು ಸೋತುಹೋದ ಮೂಲಕವೂ ನೀವು ನಿಮ್ಮ ಧೋರಣೆಯನ್ನು ಬದಲಾಯಿಸಿದಿರೆಂದೂ, ಇತ್ತೀಚೆಯ ನಿಮ್ಮ ಧೋರಣದಲ್ಲಿ ನೀವು ನಿಮ್ಮ ಬೇಡಿಕೆ ಇಳಿಸಿದಿರೆಂದೂ ಟೀಕೆಮಾಡಿರುವುದಾಗಿ ಸೂಚಿಸಿದರು. ಮಹಾತ್ಮರು ಅದಕ್ಕೆ ಉತ್ತರಕೊಡುತ್ತಾ ಹೀಗೆಂದರು

"ನನ್ನ ಸೂಚನೆಗಳ ಗುಣಾವಗುಣಗಳನ್ನು ನಿರ್ವಿಕಾರ ಮನಸ್ಸಿನಿಂದ ವಿಚಾರ ಮಾಡಬೇಕು. ನನ್ನ ಬೇಡಿಕೆಗಳನ್ನು ಕಡಿಮೆ ಮಾಡುವುದರಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಗುವುದಿದ್ದರೆ ಹಾಗೆ ಮಾಡಲು ನಾನು ಹಿಂದೆ ಮುಂದೆ ನೋಡಲಾರೆ. ಕೇವಲ ಭಾರತದ ಹಿತವನ್ನು ಬಯಸುವವನಿರದೆ ಸಮಸ್ತ ಮಾನವ ಜನಾಂಗದ ಶಾಂತಿ ಬಯಸುವವನಾದ್ದರಿಂದ ನನ್ನ ಸೂಚನೆಯು ಮಹತ್ವದ್ದಿರಲಿ ಇಲ್ಲದಿರಲಿ ನಾನು ಮುಂದಿಟ್ಟಿರುವೆನು.

"ನನ್ನ ಸೂಚನೆಗಳನ್ನು ಮುಂದಿಡುವಾಗ ನನಗೇನೂ ಸೋಲಿನ ಭಾವನೆಯಿಲ್ಲ. ನನ್ನ ದೀರ್ಘವಾದ ಸಾರ್ವಜನಿಕ ಜೀವನದಲ್ಲಿ ನನಗೆ ಎಂದೂ ಸೋಲಿನ ಭಾವನೆ ಬರಲಿಲ್ಲ. ಕೆಲವು ಕಾಂಗ್ರೆಸಿಗರು ಸೋಲಿನ ಭಾವನೆ ಪಡುತ್ತಿರುವುದು ನನಗೆ ಗೊತ್ತಿದೆ. ಆದರೆ ಅದು ಕ್ಷಣಿಕವಾದುದು. ಏಕೆಂದರೆ ಭಾರತಕ್ಕೆ ಖಂಡಿತ ಸ್ವಾತಂತ್ರ್ಯ ದೊರೆಯುವುದು. ಅದು ನನ್ನ ಜೀವಮಾನದಲ್ಲಿ ದೊರೆಕದಿದ್ದರೂ ನಾನು ಚಿಂತೆಪಡುವುದಿಲ್ಲ. ಆದರೆ ಜೀವವಿರುವ ತನಕ ನಾನು ಅದಕ್ಕಾಗಿ ಹೋರಾಡುವೆನು."

"ಯುದ್ಧಾನಂತರ ಭಾರತದ ಧೋರಣೆಯ ರಚನೆಯಲ್ಲಿ ನನಗೆ ಕೈವಾಡವಿದ್ದರೆ, ಸ್ವಾತಂತ್ರ್ಯವಾದ ಭಾರತದ ಸರಕಾರವು ಸಮಸ್ತ ಲೋಕದ ಕಾಮನ್‌ವೆಲ್ತಿನಲ್ಲಿ ಸೇರುವುದು. ಅದರಲ್ಲಿ ಬ್ರಿಟನ್ ಅಮೆರಿಕಗಳೂ ಸೇರುವವು. ಆಗ ಸಾಧ್ಯವಿದ್ದಷ್ಟು ಬೇರೆಬೇರೆ ರಾಷ್ಟ್ರಗಳ ಕಲಹ ಕಡಿಮೆ ಮಾಡಲಾಗುವುದು" ಎಂಬುದಾಗಿ ಮಹಾತ್ಮರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು.

ರಶ್ಯ ಬ್ರಿಟನು ಅಮೆರಿಕಗಳು ಒಂದಾಗಿ ಜಗತ್ತಿನ ಹಿತವೇ ತಮ್ಮ ಗುರಿಯೆಂದು ಸಾರದಿದ್ದರೆ ಯುದ್ಧದ ಗಂಡಾಂತರಕ್ಕೆ ಗುರಿಯಾದ ರಾಷ್ಟ್ರಗಳು ಬದುಕುವ ಲಕ್ಷಣವಿಲ್ಲವೆಂದೂ, ತನ್ನ ಸೂಚನೆಯು ಮಿತ್ರರಾಷ್ಟ್ರಗಳ ಸತ್ವಪರೀಕ್ಷೆಯಿಂದ್ದಾಗಿದೆಯೆಂದೂ, ಸ್ವತಂತ್ರ ಭಾರತದ ಸೈನ್ಯ ಜಪಾನಿನ ವಿರುದ್ಧ ಹೋರಾಡಲು ತನ್ನ ಸಮ್ಮತಿಯಿದೆಯೆಂದೂ, ರಾಜಾಜಿ ಸೂಚನೆಗೆ ತಮ್ಮ ಒಪ್ಪಿಗೆಯಿದೆಯೆಂದೂ ಸ್ವತಂತ್ರ ಭಾರತದ ಸರಕಾರದಲ್ಲಿ ಆಂಗ್ಲ ಅಮೇರಿಕ ಬಂಡವಾಳದ ಹಿತಗೌರವಕ್ಕೆ ತಾನು ಸಲಹೆ ಕೊಡುವೆನೆಂದೂ ಮಹಾತ್ಮರು ಸ್ಪಷ್ಟಪಡಿಸಿರುವರು.

ಬಂಗಾಳದ ಕ್ಷಾಮ ಪರಿಸ್ಥಿತಿ

ಬಂಗಾಳದಲ್ಲಿ ಹಿಂದಿನ ವರ್ಷ ತಲೆದೋರಿ ಮಹಾ ಅನಾಹುತಗಳನ್ನು ನಡೆಯಿಸಿದ ಕ್ಷಾಮ ಪರಿಸ್ಥಿತಿಯು ಸುಧಾರಿಸಿಕೊಂಡಿರುವುದಾಗಿ ಪ್ರಕಟಣೆಗಳಾಗಿದ್ದರೂ, ಮತ್ತೊಮ್ಮೆ ಅದು ತಲೆದೋರುವ ಕಾರಣಗಳು ಅಲ್ಲಿ ಇನ್ನೂ ಇವೆಯಾಗಿಯೂ, ರೈತವರ್ಗವೂ, ಆಕಳು, ಇತ್ಯಾದಿಗಳು, ಕ್ಷಾಮ ಪೀಡನೆಗೆ ಒಳಗಾಗಿ, ಆಹಾರ ಸಾಮಗ್ರಿಗಳನ್ನು ತಯಾರಿಸುವುದರಲ್ಲಿ ಹೆಚ್ಚಿನ ಭಾಗವಹಿಸದುದರಿಂದಲೂ, ಬಂಗಾಳವು ಪೌರ್ವಾತ ಯುದ್ಧ ಒಂದು ಮಹಾ ಕ್ಷೇತ್ರವಾಗಿದ್ದು ಕಲ್ಕತ್ತೆಯಲ್ಲಿ ಜನಸಮುದಾಯದ ಬಿಕಟ್ಟು ವಿಪರೀತ ಹೆಚ್ಚಿರುವುದರಿಂದಲೂ, ಮಳೆಯು ಕಾಲಕ್ಕೆ ಸರಿಯಾಗಿ ಬೇಕಾದಷ್ಟು ಬಾರದ್ದರಿಂದಲೂ, ರೋಗರುಜೆಗಳ ಹಾವಳಿಯಿಂದಲೂ, ಇನ್ನೊಂದು ಕ್ಷಾಮವು ಬೇಗನೆ ತಲೆದೋರುವಂತಿದೆ. ಆದುದರಿಂದ, ಸ್ವದೇಶ ತತ್ವಜ್ಞ ಜನನ ನಾಡಾದ ರಾಜರಾಮ ಮೋಹನ್ ರಾಯ್, ಜಗದೀಶ ಚಂದ್ರ ಬೋಸ್, ಆಚಾರ್ಯ ಪ್ರಫುಲ್ಲರೆ, ಸರತ್ ಚಂದ್ರ ಚಟರ್ಜಿ, ಇತ್ಯಾದಿ ಮಹಾನಾಯಕರ ನೆಲವೀಡಾದ ಬಂಗಾಳಕ್ಕೆ, ಸಕಲರು ಮುಂದೆ ಬಂದು ಸಹಾಯವೀಯಬೇಕಾಗಿ, ಕಲ್ಕತ್ತೆಯಿಂದ ಮುಂಬಯಿಗೆ ತೆರಳಿದ ಕಲ್ಕತ್ತಾ ಮೇಯರರು, ವಿನಂತಿಸಿಕೊಂಡಿರುವರು.

ಹಿಂದೂದೇಶದ ಕ್ಷಾಮ ಪರಿಸ್ಥಿತಿಗಳನ್ನು ಪರಿಶೀಲಿಸಿ, ಅವುಗಳನ್ನು ನೀಗಲು ವ್ಯವಸ್ಥೆಗಳನ್ನು ಸೂಚಿಸಲು ಇಂಡಿಯಾ ಸರಕಾರದಿಂದ ಒಂದು ಶಿಷ್ಟಮಂಡಳವು ರಚನೆಯಾಗಿರುವುದು. ಈ ಶಿಷ್ಟ ಮಂಡಳಕ್ಕೆ ನಾಯಕರಾಗಿ ಪ್ರವೀಣರೊಬ್ಬರು ಲಂಡನಿನಿಂದ ಬಂದಿರುವರು. ಮದ್ರಾಸ ಸರಕಾರದ ಶ್ರೀ ಎಸ್. ವಿ. ರಾಮಮೂರ್ತಿಯವರು ಈ ಶಿಷ್ಟಮಂಡಳದ ಸದಸ್ಯರಲ್ಲಿ ಒಬ್ಬರು.

ಸ್ವದೇಶಾಭಿಮಾನಿ

ತಾರೀಕು 28—7—1944

ಜರ್ಮನ್-ಜಪಾನ್‌ಗಳಲ್ಲಿ ಗೊಂದಲಗಳು

ಕಳೆದ ಒಂದು ವಾರದಿಂದ ಮಿತ್ರರಿಗೆ ಎಲ್ಲಾ ರಣರಂಗಗಳಲ್ಲಿಯೂ ಗಣನೀಯ ವಿಜಯಗಳು ದೊರಕುತ್ತಿವೆ. ರಶ್ಯದಲ್ಲಿ ಕೆಂಪು ದಳವು ಎಡೆಬಿಡದೆ ಮುಂದೊತ್ತುತ್ತಿದೆ. ಪೂರ್ವ ಪಶ್ಚಿಮ ಮತ್ತು ಮಧ್ಯ ಪೋಲೆಂಡ್‌ಗಳಲ್ಲಿ ರಶ್ಯದ ಸೇನೆ ಮುಂದುವರಿಯುತ್ತಿರುವುದು. ಕೆಂಪು ಸೈನ್ಯವು ಪೋಲೆಂಡಿನ ರಾಜಧಾನಿಯಾದ ವಾರ್ಸೊವಿನ ಸಮೀಪಕ್ಕೆ ಬಂದಿರುವುದು ಸ್ಟಾಲಿನ್ ತನ್ನ ಆಕ್ರಮಣ ಕಾರ್ಯವನ್ನು ಇಂದು ಭರದಿಂದ ಮುನ್ನಡೆಸುತ್ತಿರುವನು ಇಟೆಲಿಯಲ್ಲಿಯೂ ಮಿತ್ರರು ಲೆಗ್ ಹೋರ್ನ್ ಮತ್ತು ಅಂಕೋನಗಳನ್ನು ಕೈವಶಪಡಿಸಿರುವರು ನಾರ್ಮಂಡಿಯಲ್ಲಿ ಮಿತ್ರರು ಫ್ರಾನ್ಸಿನಲ್ಲಿ ಪೂರ್ಣ ವಿಜಯ ಹೊಂದಲು ಇನ್ನೂ ತುಸು ಸಮಯ ಬೇಕಾಗಿದೆ

ಹೀಗೆ ಬೇರೆ ಬೇರೆ ಯುದ್ಧರಂಗಗಳಲ್ಲಿ ಮಿತ್ರರಿಗುಂಟಾದ ವಿಜಯವು, ಅಕ್ಷರಾಷ್ಟ್ರಗಳಲ್ಲಿ ತುಂಬಾ ಕಳವಳವನ್ನು ಹುಟ್ಟಿಸಿದೆ ಇಂದು ಜರ್ಮನಿ ಮತ್ತು ಜಪಾನ್‌ಗಳಲ್ಲಿ ಉಂಟಾದ ಗೊಂದಲಗಳೇ ಇದಕ್ಕೆ ಯೋಗ್ಯ ದೃಷ್ಟಾಂತವಾಗಿದೆ ಹಿಟ್ಲರನ ಜೀವಕ್ಕೆ ಹಾನಿಮಾಡುವ ಒಳಸಂಚು ಹಾಗೂ ಜರ್ಮನಿಯಲ್ಲಿ ಪ್ರತಿಪಕ್ಷದ ಸರಕಾರವನ್ನು ಸ್ಥಾಪಿಸುವ ಪ್ರಯತ್ನ ಇವುಗಳಿಂದ ನಾಜೀ ಸರಕಾರಕ್ಕೆ ಜರ್ಮನಿಯಲ್ಲಿ ಇಂದು ಬಲವಂತವಾದ ಹೊಡೆತವುಂಟಾಗಿರುವುದು ಇದರಿಂದಾಗಿ, ಜರ್ಮನಿಯಲ್ಲಿ ಪ್ರಬಲ ಪಕ್ಷವೊಂದು ಇಂದಿನ ಅಲ್ಲಿನ ಆಡಳಿತವನ್ನು ಕಿತ್ತು ಹಾಕಿ ಯುದ್ಧದ ಸ್ಥಿತಿಗತಿಗನುಸರಿಸಿ ಹೊಸ ಏರ್ಪಾಡು ಮಾಡುವುದರಲ್ಲಿದೆಯೆಂಬುದು ಸ್ಪಷ್ಟವಾಗಿದೆ ಹಲವು ಸೈನಿಕ ಅಧಿಕಾರಿಗಳೇ ಈ ದಂಗೆಯಲ್ಲಿ ಭಾಗವಹಿಸಿದ್ದಾರೆಂದು ತಿಳಿದುಬರುತ್ತದೆ

ಇದೇನೂ ಇಂದು ಹೊಸ ವಿಷಯವಲ್ಲ ಹಿಟ್ಲರ್ ಜರ್ಮನಿಯಲ್ಲಿ ಆಡಳಿತಕ್ಕೆ ಬರುವಾಗಲೇ ಅಲ್ಲಿ ವಿರುದ್ಧ ಪಕ್ಷವೊಂದು ಬಲವಂತವಾಗಿ ಎದ್ದಿತ್ತು ಆಗಾಗ ಅಲ್ಲಿ ದಂಗೆಗಳೇಳುತ್ತಿದ್ದವು ಆದರೆ ನಾಜೀ ಪಕ್ಷಕ್ಕೆ ವಿಜಯವಾಗುತ್ತಾ ಇದ್ದಾಗ ದಂಗೆಗಾರರು ಹಾಗೂ ವಿರುದ್ಧ ಪಕ್ಷದವರೂ ಸುಮ್ಮಗಿದ್ದರು ಅವರಿಗೆ ಈಗ ಒಳ್ಳೆಯ ಸಂದರ್ಭವೊದಗಿದೆ. ದಂಗೆಗಾರರಲ್ಲಿ ರಂಡ್‌ಸ್ಟೆಡ್, ಲೀಬ್ ಮತ್ತು ಬೋಕ್ ಇವರು ಮೂವರು ಪ್ರಮುಖರಿದ್ದಾರೆಂದು ತಿಳಿದುಬಂದಿದೆ ಈ ಮೂರು ಮಂದಿಯೂ ಒಳ್ಳೆಯ ಪ್ರಭಾವಶಾಲಿಗಳಾದ ಸೇನಾಧಿಕಾರಿಗಳು ಪೋಲೆಂಡ್ ಮತ್ತು ರಶ್ಯದ ಪ್ರಾರಂಭದ ಆಕ್ರಮಣ ಕಾರ್ಯದಲ್ಲಿ ಪರಾಕ್ರಮಶಾಲಿಗಳಾದವರು. ಇವರು ರಾಜಕಾರಣ ಧುರಂಧರರು ಮತ್ತು ಸೈನ್ಯಾಧಿಪತಿಗಳಾಗಿದ್ದವರು ಆದ್ದರಿಂದ ಈಗ ಜರ್ಮನಿಯಲ್ಲುಂಟಾದ ದಂಗೆ ವಿಷಮವೆಂದು ನಾವು ಯೋಚಿಸಬಹುದು.

ಜಪಾನಿನಲ್ಲಿ ಟೋಜೋ ಮಂತ್ರಿಮಂಡಳದ ರಾಜಿನಾಮೆಯು ಕೂಡಾ ಅಕ್ಷ ಪಕ್ಷದ ಸೋಲನ್ನು ತಿಳಿಸುತ್ತದೆ. ಅಕ್ಷ [illegible] ಗಳಿಗೆ [illegible] ಯುಂಟಾಗದಿರುಬುದು ಇದರಿಂದ ಸ್ಪಷ್ಟವಾಗುವುದು. ಫೆಸಿಫಿಕ್ನಲ್ಲಿ ಅಮೆರಿಕನ್ ನೌಕಾದಳವು ಪ್ರಗತಿ ಹೊಂದುತ್ತಲಿದೆ. ಸೈಪಾನ್ ಆಕ್ರಮಣವು ಜಪಾನರಿಗೆ ತಲೆಗೆ ಬಡಿದಂತೆ ಆಗಿರಬೇಕು. ಟೋಕಿಯೋಗೆ ಕೇವಲ ನೂರು ಮೈಲು ಅಂತರದಲ್ಲಿರುವ ಬೊನಿನ್ ದ್ವೀಪಗಳಿಗೂ ಧಾಳಿಯಾದ ಸುದ್ದಿ ಬಂದಿದೆ. ಅಸಾಮನ್ನು ಆಕ್ರಮಿಸುವ ಜಪಾನರ ಹಂಚಿಕೆ ವಿಫಲವಾಯಿತು. ಚೀನಾದಲ್ಲಿಯೂ ವಿಶೇಷ ಜಯಗಳುಂಟಾಗಲಿಲ್ಲ. ಹಾಗಾಗಿ ಟೋಜೋ ಮಂತ್ರಿಮಂಡಳವು ಒಮ್ಮೆಲೇ ರಾಜಿನಾಮೆ ಕೊಟ್ಟದ್ದು ಆಶ್ಚರ್ಯವೇನೂ ಅಲ್ಲ ಹೋದಲ್ಲೆಲ್ಲಾ ಅಪಜಯ ಹೊಂದುತ್ತಾ ಬಂದುದರಿಂದ ಟೋಜೋರ ಕ್ರಮಯೋಜನವಿಲ್ಲವೆಂದು ಜಪಾನರಿಗೆ ತೋರಿರುತ್ತದೆ ಸೈಪನಿನಲ್ಲಿ ಹಿಂದೆ ಬಿದ್ದ ವಿಷಯವನ್ನು ಚಕ್ರವರ್ತಿಗೆ ತಿಳಿಸಬೇಕಾದ ದೌರ್ಭಾಗ್ಯ ಬಂದಿದೆಯೆಂದು ಕಳೆದವಾರ ಟೋಜೋ ಹೇಳಿದ್ದಾನೆ ಈ ಪ್ರಕಟಣೆಯಾದ ಕೂಡಲೇ ಟೋಜೋ ಪ್ರಧಾನ ಪಟ್ಟದಿಂದ ಕೆಳಗಿಳಿಯಲೂ ಬೇಕಾಯಿತು. ಹೊಸ ಮಂತ್ರಿಮಂಡಳವೂ ಸ್ಥಾಪಿತವಾಯಿತು ಅಂತೂ ಇಂದಿನ ಜಪಾನ್ ಜರ್ಮನಿಗಳ ಸ್ಥಿತಿಗಳನ್ನು ನೋಡಿದರೆ ಈ ಉಭಯ ರಾಷ್ಟ್ರಗಳಲ್ಲಿ ತುಂಬಾ ಗೊಂದಲ ಹುಟ್ಟಿದೆಯೆಂಬುದು ನಿಶ್ಚಯವಾಗಿದೆ.

ಬ್ರಿಟನು ಹೇಳುವುದೇನು?

ಗಾಂಧೀಜಿ ಕಳೆದ ಒಂದು ವಾರದಿಂದ ಭಾರತದ ರಾಜಕೀಯ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದ್ದಾರೆ ಪುನಃ ಸತ್ಯಾಗ್ರಹ ಪ್ರಾರಂಭಿಸುವುದು ಇಂದಿನ ಪರಿಸ್ಥಿತಿಗೆ ಸಾಧ್ಯವಿಲ್ಲವೆಂದಿದ್ದಾರೆ ರಾಷ್ಟ್ರೀಯ ಸರಕಾರವು ಯುದ್ಧದಲ್ಲಿ ಸಹಕರಿಸುವಂತೆ ತಾನು ಸಲಹೆ ಕೊಡುವುದಾಗಿ ತಿಳಿಸಿದ್ದಾರೆ, ಜಿನ್ನರ ಪಾಕಿಸ್ಥಾನದ ಕುರಿತು ರಾಜಾಜಿಯವರ ಸೂಚನೆಗಳಿಗೆ ಸಮ್ಮತಿಯಿತ್ತಿದ್ದಾರೆ, ಹೀಗೆ ಬೇರೆ ಬೇರೆ ವಿಷಯಗಳಲ್ಲಿ ತನ್ನ ಅಭಿಪ್ರಾಯವನ್ನು ಸರಿಯಾಗಿ ತಿಳಿಸಿರುವರು

ಈಗ ಬ್ರಿಟನು ಹೇಳುವುದೇನು? ಇದು ಇಂದು ಎಲ್ಲರ ಪ್ರಶ್ನೆಯಾಗಿದೆ ಕಾಂಗ್ರೆಸ್ ಮುಖಂಡರನ್ನು ವರ್ಕಿಂಗ್ ಕಮಿಟಿ ಸದಸ್ಯರನ್ನು ಬಿಡುಗಡೆ ಮಾಡಿದರೆ ಅದರಿಂದ ಹಾನಿಯುಂಟಾಗಲಾರದು ಮಾತ್ರವಲ್ಲದೆ ಬ್ರಿಟನಿನ ಯುದ್ಧಯತ್ನಕ್ಕೆ ಅವರೊಡನೆ ವಿಚಾರವಿನಿಮಯ ಮಾಡಿ ಸಹಾಯ ಪಡೆವುದೂ ಸಾಧ್ಯವಿದೆಯೆಂದ ಗಾಂಧೀಜಿ ಮಾತಿನಿಂದ ಅರ್ಥವಾಗುತ್ತದೆ ಗಾಂಧೀಜಿಯವರಿಗೆ ಅಖಿಲ ಭಾರತದಲ್ಲಿ ಹಾಗೂ ಕಾಂಗ್ರೆಸಿನಲ್ಲಿ ಇರುವ ಪ್ರಭಾವ ಮಹತ್ವಗಳನ್ನು ಆಲೋಚಿಸಿದರೆ ಅವರ ಸ್ಪಷ್ಟೀಕರಣದಿಂದ ಯಾರಾದರೂ ಧೈರ್ಯಪಡಬಹುದು. ಇನ್ನು ಭಾರತದ ಬಿಕ್ಕಟ್ಟು ಬಿಡಿಸಲು ಗಾಂಧೀಜಿ ಹಾಗೂ ಕಾಂಗ್ರೆಸು ಸಿದ್ಧವಿಲ್ಲವೆಂಬ ಮಾತಿಗೆ ಅರ್ಥವಿಲ್ಲ ಬ್ರಿಟನು ಸುಮ್ಮಗಿರುವುದರಲ್ಲಿ ನ್ಯಾಯವಿಲ್ಲ

ಗಾಂಧೀಜಿಯ ಸ್ಪಷ್ಟೀಕರಣ ಮತ್ತು ಸೂಚನೆಗಳು ಬ್ರಿಟನಿನ ಮಾತ್ರವಲ್ಲ ಮಿತ್ರಪಕ್ಷದ ಸತ್ವಪರೀಕ್ಷೆಯ ವಿಷಯವಾಗಿದೆ ಮಿತ್ರಪಕ್ಷದವರು ಹಾಗೂ ಬ್ರಿಟನು ಜಗತ್ತಿನಲ್ಲಿ ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯ ಧ್ಯೇಯಗಳು ಬಾಳಬೇಕೆಂದು ಬಯಸಿ ಈ ಯುದ್ಧದಲ್ಲಿ ಹೋರಾಡುವುದಿದ್ದರೆ ಮಹಾತ್ಮರು ನೀಡಿದ ಸ್ನೇಹ ಹಸ್ತವನ್ನು ತಿರಸ್ಕರಿಸುವುದರಲ್ಲಿ ನ್ಯಾಯವಿಲ್ಲ.

[redacted]

ಜಪಾನಿಗೆ ಪಲಾಯನ ಮಾಡುವರೆ?

ರಷ್ಯದ ಮಹಾಜಯ, ಮಿತ್ರರ ದ್ವಿತೀಯರಂಗ, ಈ ಎರಡು ಕಾರಣಗಳಿಂದ, ಹಿಟ್ಲರ್ ಮುಸಲೋನಿಯರು ದಿಕ್ಕು ತೋಚದವರಾಗಿರುತ್ತಾರೆ. ಮಿತ್ರರ ಕೈಗಳಿಂದ ತಪ್ಪಿಸಿಕೊಳ್ಳಲು ಅವರು ಜಪಾನಿಗೆ ಪರಾರಿಯಾಗುವ ಗೂಢ ಆಲೋಚನೆಯನ್ನು ಮಾಡುತ್ತಿರುವರಂತೆ. ಹೀಗೆಂದು ಪರದೇಶದಿಂದ ಬಂದ ಬಾತ್ಮಿಯ ಅಭಿಪ್ರಾಯ.

ಚೀನಾ ಯುದ್ಧ

ಚೀನಾ-ಜಪಾನ್ ಯುದ್ಧ ಪ್ರಾರಂಭವಾಗಿ ಇಂದಿಗೆ ಎಂಟು ವರ್ಷಗಳಾದವು ಚಿಯಾಂಗ್ ಕೈ-ಶೇಕರ ಅಧಿನಾಯಕತ್ವದಲ್ಲಿ, ಅನೇಕ ಕಷ್ಟಪರಂಪರೆಗಳನ್ನು ಸಹಿಸಿ, ಬಹಳ ಸಾಹಸದಿಂದ ಕಾದಾಡಿ, ಚೀನವು ಇಂದು ಜಗತ್ತಿನ ಗೌರವಕ್ಕೆ ಪಾತ್ರವಾಗಿರುತ್ತದೆ ಈ ಯುದ್ಧದ ಅವಸರದಲ್ಲೂ ಚೀನವು ವಿದ್ಯೆ, ಕೈಗಾರಿಕೆ ಇತ್ಯಾದಿಯಲ್ಲಿ ಪ್ರಗತಿಪಥದಲ್ಲಿ ನಡೆದಿರುತ್ತದೆ ನೂರಾರು ವರ್ಷ ಗಾಢ ನಿದ್ರೆಯಲ್ಲಿದ್ದ ಈ ಜನಾಂಗವನ್ನು ಹುರುಪುಗೊಳಿಸಿದ ಕೀರ್ತಿಯು ಚಿಯಾಂಗರಿಗೆ ಸಲ್ಲತಕ್ಕುದಿದೆ

ಜನರಲ್ ಫ್ರೆಂಕೊ

ಸ್ಪೈನಿನ ಶಾಂತಿಯನ್ನು ಕೆಡಿಸಿದ ಜನರಲ್ ಫ್ರಾಂಕೋನು, ಈಗ ಸಂಧಾನ ಯತ್ನಕ್ಕೆ ಹೊರಡಿರುವನಾಗಿ ವರ್ತಮಾನವಿದೆ ಪ್ರಪಂಚದಲ್ಲಿ ಕೊಮ್ಯೂನಿಸಂ ಹರಡುವ ಕುರಿತು ಇತನೊಂದು ಎಚ್ಚರಿಕೆ ಹೊರಡಿಸಿರುವನು ಜನಾಂಗಗಳೊಳಗೆ ಪರಸ್ಪರ ಮೈತ್ರಿಯುಂಟಾಗಿ, ಚಿರವಾದ ಶಾಂತಿಯನ್ನು ಸ್ಥಾಪಿಸುವ ಅನುಭವವು ತನಗೆ ಇರುವುದಾಗಿ ಈತನು ಸಾರುತ್ತಿರುವನು' ಆದರೆ ಹಿಟ್ಲರ್-ಮುಸಲೋನಿಗಳ ಬೆಂಬಲದಿಂದ, ಮೇಲೇರಿದ ಈ ಫೆಸಿಸ್ಟ್ ನಾಯಕನ ಮಾತಿಗೆ ಬೆಲೆಯಿರುವುದೆ, ಎಂಬ ಸಂಶಯವು ಉಂಟಾಗುತ್ತಿದೆ

ಅಮೆರಿಕದ ಅಧ್ಯಕ್ಷತನ

ಅಮೆರಿಕದ ಅಧ್ಯಕ್ಷರ ಆಯ್ಕೆಯು ಇನ್ನು ಸದ್ಯದಲ್ಲೆ ಆಗಬೇಕಾಗಿದೆ "ಮ್ಯಕ್ಸ್ ರೂಸ್‌ವೆಲ್ಟರೆ ಮತ್ತೊಮ್ಮೆ ಈ ಪದವಿಗೆ ಪ್ರತಿಸ್ಪರ್ಧಿಸುವರ ಇವರಿಗೆ ಎಲ್ಲ [illegible]ತ್ಯಗಳಲ್ಲಿ ಅಧಿಕ ಮತ ಬೆಂಬಲವಿರುವುದಂತೆ. ರೂಸ್‌ವೆಲ್ಟರು ಈ ಭಾರಿ ಆರಿಸಲ್ಪಟ್ಟರೆ, ಅವರು ನಾಲ್ಕನೆ ಭಾರಿಗೂ ಅಧ್ಯಕ್ಷ ಪದವಿಯನ್ನು ಹೊಂದಿದಂತಾಗುವುದು. ಆದರೆ, ಅಲ್ಲಿನ ರಿಪಬ್ಲಿಕನ್ ಪಕ್ಷದ ಡ್ಯೂವಿ ಎಂಬವರು, ರೂಜ್‌ವೆಲ್ಟರನ್ನು ಪ್ರತಿಸ್ಪರ್ಧಿಸುವರಂತೆ. ಈ ಡ್ಯೂವಿಯವರು, ತರುಣರಾಗಿದ್ದು, ನ್ಯೂಯೊರ್ಕಿನ ಗವರ್ನರರು,— ಇವರಿಗೆ ಅಮೆರಿಕದ ಭಾಂಡವಾಳ ಶಾಹಿಯ ಬೆಂಬಲವಿರುವುದಂತೆ, ಆದರೆ ಅಮೆರಿಕವು ಯುದ್ಧದಲ್ಲಿ ದುಮುಕಿದ ಈ ಸಮಯದಲ್ಲಿ ರಾಜಾಡಳಿತವು ರೂಸ್‌ವೆಲ್ಟರಂತಹ ಅನುಭವಿಯ ಕೈಯಿಂದ ತೆಗೆಯುವ ಕುರಿತು ಅಮೆರಿಕವು ಸಿದ್ಧವಿರುವುದೇ?

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 373/1944.
R I A No 1773/1944

ಕೆ ನರಸಿಂಹ ಭಕ್ತ— ವಾದಿ.

ಮತ್ತು

1 ಅಬ್ದುಲ್ಲಖಾದರ್ ಬ್ಯಾರಿ, 2 M T. ಮಹಮ್ಮದ್ ಬ್ಯಾರಿ— ಪ್ರತಿವಾದಿರು.

ವಾದಿಯ ಕಡೆಯಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ -

2ನೇ ಪ್ರತಿವಾದಿಯು 1ನೇ ಪ್ರತಿವಾದಿ ಅಬ್ದುಲ್ಲಖಾದರ್ ಬ್ಯಾರಿಗಳಿಗೆ ತಾರೀಕು 25-3-1929ರಲ್ಲು ರೂಪಾಯಿ 2500ಕ್ಕೆ ಬರಕೊಟ್ಟ ಅರವಾರ ದಸ್ತವೇಜು ವಾದಿ, ವ ಬೇರೆ ಇತರ ಸಾಲಗಾರರಿಗೆ ಮೋಸಕೊಡುವ ಉದ್ದಿಶ್ಯ ಬರಕೊಟ್ಟದ್ದಾಗಿಯೂ ಅದು ವಾದಿಗೆ ಬಾಧಿಸತಕ್ಕದಲ್ಲವಾಗಿಯೂ ವ ಆ ದಸ್ತವೇಜಿನ ಸಂಗತಿಯಲ್ಲಿ 1ನೇ ಪತಿವಾದಿಯು ದಾಖಲು ಮಾಡಿದ ಈ ಕೋರ್ಟು R E A 1577/1942ನೇ ಬಾದ್ಯಸ್ತಿಕೆ ಅರ್ಜಿಯ ಮೇಲಾದ ಹುಕುಂ ರದ್ದುಪಡಿಸುವರೆ ಸಹವಾದಿಯು ಸಿ ಪಿ ಕೋಡಿನ 1ನೇ ಆರ್ಡರ್ 8ನೇ ರೂಲ್ ಮೇರೆಗೆ ದಾಖಲು ಮಾಡಿದ ವ್ಯಾಜ್ಯವು ತಾ 11-8-1944ಕ್ಕೆ ನೋಟೀಸು ಬಗ್ಗೆ ಇಟ್ಟಿರುತ್ತದೆ ಎಂಬ ಸಂಗತಿ ಈ ಮೂಲಕ ಸರ್ವಜನರಿಗೂ ತಿಳಿಸೋಣಾಗಿಯದೆ

K P Anantha Rao,
Advocate for Plaintiff.

ಕಾಸರಗೋಡು, ತಾ 24-7-44

38 ವರ್ಷಗಳ ಹಿರಿತನ

1906ನೇ ಇಸವಿ ಜುಲೈ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕು ಇಂದಿಗೆ 38 ವರ್ಷ ವಯಸ್ಸು ಹೊಂದಿದೆ ನಾವು 38 ವರ್ಷ ವಯಸ್ಸಿನವರೆಂಬುದೇ ನೀವು ನಮ್ಮೊಡನೆ ವಹಿವಾಟ ನಡೆಸಲು ಸಾಕಾದ ಕಾರಣವಾಗಲಾರದು

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ ಎರಡು ಮಹಾ ಯುದ್ಧಗಳು-ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು-ಈ ಮೊದಲೂ ಆಗದ ಬ್ಯಾಂಗಳ ಸಂಧಿಗ್ಧಾವಸ್ಥೆ-ಶೇರು ಮಾರ್ಕೆಟುಗಳ ಕಂಗಾಲಾವಸ್ಥೆ-ಇತ್ಯಾದಿ:

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದೆ ಪಾರಾಗಿರುವದಾದರೆ-ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮತ್ತೂ ಬೆಳೆಸಿರುವದಾದರೆ-ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದು

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುದಲ್ಲಿ ನಮ್ಮ ಶ್ರೇಷ್ಠತನದಿಂದ ನಾವು ಹಿರಿಯರಾಗಿದ್ದೇವೆ.

ಸ್ಥಾಪಿತ: 1906.

ಕೆನರಾ ಬ್ಯಾಂಕ್ ಲಿಮಿಟೆಡ್.

Canara Bank Ltd.

ಸಮರ ಭೂಮಿಯ ಸಂಚಾರ

ಜರ್ಮನಿಯಲ್ಲಿ ಬಂಡಾಯ ಹಿಟ್ಲರನ ಕೈದು!

—: ಹೊಸ ಸರಕಾರ ಸ್ಥಾಪಿತವಾಗಿದೆ! :—

ಜಪಾನ್‌ನಲ್ಲಿ ಹೊಸ ಮಂತ್ರಿಮಂಡಳ

ಜರ್ಮನ್ ಮುಖ್ಯ ಸೇನಾಧಿಕಾರಿಗಳು ಒಂದು ಹೊಸ ಸರಕಾರ ಸ್ಥಾಪಿಸಿದ್ದಾರೆ. ಜರ್ಮನಿಯ ಕೆಲಭಾಗಗಳು ಈ ಸರಕಾರದ ಸ್ವಾಧೀನದಲ್ಲಿರುವವಲ್ಲದೆ ಇಲ್ಲಿರುವ ಎಲ್ಲಾ ನಾಜಿಗಳನ್ನು ಸೆರೆಹಿಡಿಯಲಾಗಿದೆ. ವಾನ್ ಕಟಲ್, ಕರ್ನಲ್ ಜನರಲ್ ಫ್ರಾಮ್, ಜನರಲ್ ಬ್ರೂಚಿಗ್, ಜನರಲ್ ಹಾಲ್ಡರ್ ಮತ್ತು ಜನರಲ್ ವಾನ್ ಬೊಕ್ ಇವರು ಈ ಹೊಸ ಸರಕಾರದಲ್ಲಿರುವರು. ಹಿಟ್ಲರ್ ಮತ್ತು ಅವನ ಸಂಗಡಿಗರು ಜರ್ಮನಿಯಿಂದ ಪಲಾಯನ ಮಾಡಲು ನಾಲ್ಕು ವಿಮಾನಗಳನ್ನು ಮತ್ತು ಆರು ಸಾವಿರ ಮೈಲು ಪ್ರಯಾಣಕ್ಕೆ ಸಾಕಾಗುವಷ್ಟು ಪೆಟ್ರೋಲನ್ನು ಅವರಿಗೆ ಒದಗಿಸಲಾಗಿದೆ" ಹೀಗೆಂದು ಜರ್ಮನರಗುಪ್ತ ರೇಡಿಯೋದಲ್ಲಿನ ಸುದ್ದಿಯನ್ನು ಮೋಸ್ಕೋ ರೇಡಿಯೋದಲ್ಲಿ ಹೇಳಲಾಗಿದೆ. 'ಹಿಟ್ಲರನನ್ನು ಬಂಧಿಸಲಾಗಿದೆಯೆಂದು ಅಂಕಾರಾದಲ್ಲಿ ಸುದ್ದಿ ಹಬ್ಬಿದೆ.

ಹಿಟ್ಲರ್ ಕೊಲೆ ಪ್ರಯತ್ನ

ಹಿಟ್ಲರನನ್ನು ಕೊಲೆಮಾಡಲು ಯತ್ನ ಮಾಡಿದ ಕುರಿತು ಈ ರೀತಿ ಸುದ್ದಿ ಇದೆ: ಕೊಲೆಪ್ರಯತ್ನ ನಡೆಸಿದವನು ಮೂವತ್ತೇಳು ವರ್ಷ ಪ್ರಾಯದ ತರುಣನು ಹಿಟ್ಲರನ ಬಳಿ ಬಾಂಬಿಟ್ಟಿರುವವನು. ನಿವೃತ್ತರಾದ ಕೆಲ ಜರ್ಮನ್ ಸೇನಾಧಿಕಾರಿಗಳು ಈ ದಂಗೆಯ ಗುಂಪಿಗೆ ಸೇರಿದ್ದಾರೆ. ಈ ಗುಂಪಿನವರು ಶತ್ರುರಾಷ್ಟ್ರಗಳೊಡನೆ ಕೆಲ ಕಾಲದಿಂದ ಸಂಬಂಧ ಬೆಳೆಸುತ್ತಿದ್ದರು. ಬರ್ಲಿನ್‌ನಲ್ಲಿ ಗೆಸ್ಟಪೋ ದಳದವರು ಸರ್ವೆಗಾವಲು ಮಾಡುತ್ತಿದ್ದು ತಿರುಗಾಡುತ್ತಿರುವವರನ್ನು ಪರೀಕ್ಷಿಸುವ ಕೆಲಸವಮಾಡುತ್ತಿರುವುದರಿಂದ ಈಗ ಬಂಡಾಯದ ಚಿಹ್ನೆ ದೂರವಾಗುತ್ತಿದೆಯೆಂದೂ ಸುದ್ದಿ. ದಕ್ಷಿಣ ಜರ್ಮನಿಯಲ್ಲಿ ಬಂಡಾಯ ವುಂಟಾಗಿದ್ದು ಅಲ್ಲಿ ಹೋರಾಟ ನಡೆಯುತ್ತಿದೆಯೆಂದು ವಾರ್ತೆ. ಈ ಬಂಡಾಯಗಾರರು ಬೇರೆ ಬೇರೆ ಗುಪ್ತರೇಡಿಯೋಗಳಲ್ಲಿ ಮಾತಾಡುವ ಸುದ್ದಿಗಳು ಲಂಡನ್ ನಿಂದ ಪ್ರಕಟವಾಗುತ್ತಿವೆ. ಅದರಲ್ಲಿ ಬಂಡಾಯವಿನ್ನೂ ಕೊನೆಗೊಂಡಿಲ್ಲವೆಂದು ನಮಗೆ ತಿಳಿದು ಬರುತ್ತಿದೆ.

ಓಬರ್ ಸಾಲ್ಸ್ ಬರ್ಗ್‌ನಲ್ಲಿ ಕೂಡಿದ ಸಭೆಯಲ್ಲಿ ಹಿಟ್ಲರನ ಕೊಲೆಯ ಪ್ರಯತ್ನ ನಡೆಯಿತೆಂದು 'ಟೈಡಿಂಜನ್' ಸ್ವೀಡಿಶ್ ಪತ್ರಿಕೆ ಪ್ರಸಿದ್ಧಿಸಿದೆ. "ಟೈಮ್ ಬಾಂಬನ್ನಿಟ್ಟುದರಿಂದ ಅದು ಸಿಡಿಯಿತು. ಹಿಟ್ಲರನು ಎರಡು ನಿಮಿಷ ತಡವಾಗಿ ಸಭೆಗೆ ಬಂದದ್ದರಿಂದ ಅವನ ಪ್ರಾಣ ಉಳಿಯಿತು. ಬಾಂಬು ಸ್ಫೋಟವಾಗುವಾಗ ಹಿಟ್ಲರನು ಸಭಾಗೃಹದ ದ್ವಾರದ ಬಳಿಯಿದ್ದನು ಎಂದೂ ಆ ಪತ್ರಿಕೆ ತಿಳಿಸಿದೆ. ಬರ್ಲಿನ್ ನಗರದಲ್ಲಿರುವ ಸರಕಾರೀ ಕೇಂದ್ರ ಸ್ಥಳವನ್ನು ವಶಪಡಿಸಲು ಬಂಡಾಯಕಾರರು ಮಾಡಿದ ಪ್ರಯತ್ನ ಗೋಬೆಲಸನಿಂದಾಗಿ ನಿಷ್ಫಲವಾಯಿತೆಂದೂ ಜರ್ಮನ್ ರೇಡಿಯೋ ಸಾರಿರುವುದು.

ಹಿಟ್ಲರನ ಭಾಷಣ

ಹೀಗೆ ಜರ್ಮನಿಯಲ್ಲಿ ಹಿಟ್ಲರನನ್ನು ಕೊಲೆ ಮಾಡುವ ಪ್ರಯತ್ನ ನಡೆಯಿತು. ಜರ್ಮನಿಯಲ್ಲಿ ಆಂತರಿಕ ಅಶಾಂತಿ ತಲೆದೋರಿದ ಸೂಚನೆಯಿದು! ಈ ಒಳಸಂಚುಗಾರರು ಜರ್ಮನಿಯ ಹೊಸ ಸರಕಾರವೆಂಬ ಹೆಸರಲ್ಲಿ ಕೆಲವು ಆಜ್ಞೆಗಳನ್ನು ಹೊರಡಿಸಿ ಸೈನ್ಯದಲ್ಲಿ ಗೊಂದಲವನ್ನುಂಟುಮಾಡುತ್ತಿದ್ದರು. ಆದ್ದರಿಂದ ಈ ಹೊರಡಿಸಿಯಾರ ಯಾರ ಆಜ್ಞೆಯಂತೆ ಸೇನೆಗಳ ಚಟುವಟಿಕೆ ಮಾಡಬೇಕೆಂಬುದನ್ನು ತಿಳಿಸಿದ್ದಾನೆ. ಹಿಟ್ಲರನ ಕೊಲೆಯ ಪ್ರಯತ್ನಕ್ಕೆ ಕೈಹಾಕಿದ ಒಳಸಂಚುಗಾರರಲ್ಲಿ ಅನೇಕನು ಗುಂಡಿನೇಟಿಗೆ ಆಹುತಿಯಾದರು!

ಜರ್ಮನ್ ಆಕಾಶವಾಣಿಯಲ್ಲಿ ಹಿಟ್ಲರನು, ಆತನ ಕೊಲೆಯ ಪ್ರಯತ್ನದ ಸುದ್ದಿ ಪ್ರಕಟವಾದ ಕೂಡಲೇ ಭಾಷಣವನ್ನಿತ್ತನು. ಜರ್ಮನ್ ಜನರು ತನ್ನ ಧ್ವನಿ ಕೇಳಿ ಧೈರ್ಯಗೊಳ್ಳಲೆಂದೇ ಈ ರೀತಿ ಹಿಟ್ಲರ್ ಭಾಷಣವಿತ್ತಿರುವುದು. ಇದು ಮೂರನೆಯ ಸಲ ನಡೆದ ಆತನ ಕೊಲೆಯ ಪ್ರಯತ್ನವಾಗಿದೆ. ಹಿಟ್ಲರ್ ತನ್ನ ಆಕಾಶವಾಣಿಯ ಭಾಷಣದಲ್ಲಿ ಹೀಗೆಂದು ಹೇಳಿದನು.

ಕರ್ತವ್ಯಕ್ಕಾಗಿ ಬದುಕು

ಜರ್ಮನಿಯನ್ನು ೧೯೧೮ರ ಸ್ಥಿತಿಗೆ ಕೊಂಡೊಯ್ಯುವುದೇ ಈ ಒಳಸಂಚುಗಾರರ ಉದ್ದೇಶ. ಅವರು ತಪ್ಪು ಮಾಡಿದ್ದಾರೆ. ಅವರ ಒಳಸಂಚುಗಳನ್ನು ನಿರ್ದಯೆಯಿಂದ ನಿರ್ಮೂಲ ಮಾಡಲಾಗುವುದು. ಕರ್ನಲ್ ಗ್ರಾಫ್ ವಾನ್ ಸ್ಟಾಫೆನ್ ಬರ್ಗನು ಬಾಂಬಿಟ್ಟನು. ಅದು ನನ್ನ ಬಲಗಡೆ ಎರಡು ಮೀಟರ್ ದೂರ ಸಿಡಿಯಿತು; ನನ್ನೊಡನಿದ್ದ ಒಬ್ಬರು ಮರಣ ಹೊಂದಿದರು. ನನಗೆ ಮಾತ್ರ ಏನೂ ಗಾಯವಾಗಿಲ್ಲ. ದೇವರು ನನ್ನ ಮೇಲೆ ಒಂದು ಕರ್ತವ್ಯವನ್ನು ನೆರವೇರಿಸಬೇಕೆಂಬ ಭಾರ ಹೊರಿಸಿದ್ದು, ಅದನ್ನು ನಾನು ಪೂರೈಸಬೇಕೆಂದೇ ಆತನ ಇಚ್ಛೆ. ದೇಶಕ್ಕಾಗಿ ಜೀವ ದಾನ ಮಾಡುವುದೇ ನಾನು ಅಧಿಕಾರಕ್ಕೇರಿದ ಮೇಲಿನ ನನ್ನ ಉದ್ದೇಶ. ಯುದ್ಧ ಮಾಡದಿರುವುದು ಸಾಧ್ಯವಿಲ್ಲವೆಂದು ನನಗನಿಸಿತು. ಕೇವಲ ಕರ್ತವ್ಯಕ್ಕಾಗಿಯೇ ನಾನು ಬದುಕಿದ್ದೇನೆ.

"ಜರ್ಮನ್ ಸೈನ್ಯವು ಭೀಕರವಾದ ಸಂಗ್ರಾಮದಲ್ಲಿ ಆಸಕ್ತವಾಗಿರುವಾಗ ಇಟಲಿ ಹಾಗೂ ಜರ್ಮನಿಯಲ್ಲಿ ಸಣ್ಣದೊಂದು ತಂಡ ೧೯೧೮ರಂತೆ ಜರ್ಮನಿಗೆ ಬೆನ್ನ ಹಿಂದೆ ಇರಿಯಲು ಕೆಲಸ ಮಾಡುತ್ತಿದೆ. ಈ ಸಲ ಅವರು ಮಹಾ ಅಪರಾಧವನ್ನೇ ಮಾಡಿದ್ದಾರೆ. ಈ ಒಳಸಂಚುಗಾರರ ಗುಂಪು ಬಹಳ ಸಣ್ಣದಿದ್ದು ಅವರಿಂದ ಏನೂ ಆಗಲಾರದು. ಅವರನ್ನು ಕಂಡ ಕಂಡಲ್ಲಿ ಸೆರೆ ಹಿಡಿದು ಅವರು ಪ್ರತಿಭಟಿಸಿದರೆ ಕೊಲ್ಲಲಾಗುವುದು. ಈಗ ನಾನು ರೀಚ ಮಂತ್ರಿ ಹಿಮ್ಲರನನ್ನು ಗೃಹ ಸೇನೆಯ ಮುಖ್ಯ ಸೇನಾಪತಿಯಾಗಿ ಮಾಡಿರುವೆನು. ಬಾಂಬಿನ ಸ್ಫೋಟನದಿಂದ ನನ್ನ ಅತ್ಯಂತ ಆಪ್ತರಾದವರಲ್ಲಿ ಕೆಲವರು ಮಡಿದಿದ್ದಾರೆ. ಈ ಒಳಸಂಚಿನಿಂದ ಯುದ್ಧಕ್ಕೆ ಅನುಕೂಲವಾತಾವರಣವೇ ಉಂಟಾಗಿದೆ.

ದೇವರಿಗೆ ಋಣಿ

"ಈ ಕುರಿತು ನಾನು ದೇವರಿಗೆ ಋಣಿಯಾಗಿದ್ದೇನೆ. ಜೀವದಿಂದ ಉಳಿದೆನೆಂದಲ್ಲ ನನ್ನ ಜೀವ ನನ್ನ ಜನರಿಗೇ ಆಸಕ್ತಿಯುಳ್ಳದ್ದಾಗಿರುವುದು ನಾನು ನನ್ನ ಬುದ್ಧಿಗೆ ತೋರಿದಂತೆ ನಡೆದು ಕೊಳ್ಳುವುದು ದೇವರ ಇಚ್ಛೆಗೆ ತೋರಿರುವುದರಿಂದಲೇ ನಾನು ದೇವರಿಗೆ ಋಣಿಯಾಗಿರುವೆನು. ನಾನು ಇದರಿಂದ ಪಾರಾಗದಿದ್ದರೆ ಜರ್ಮನರ ಅವಸ್ಥೆ ಭೀಕರವಾಗುತಿತ್ತು. ನಾನು ನನ್ನ ಕೆಲಸ ಮುಗಿಸಬೇಕೆಂಬುದೇ ದೇವರ ಇಚ್ಛೆಯೆಂದು ನಾನು ತಿಳಿದಿದ್ದೇನೆ."

ಬಂಡಾಯಗಾರರ ಭಾಷಣ

ಫ್ರಾಂಕ್‌ಫರ್ಟ್ ರೇಡಿಯೋದಲ್ಲಿ ಬಂಡಾಯಗಾರರ ಭಾಷಣವನ್ನು ಈ ರೀತಿಯಿದೆ ಎಂದು ಲಂಡನಿನಿಂದ ಕೊಡಲಾಗಿದೆ.

"ಹಿಟ್ಲರನ ಕೊಲೆ ಪ್ರಯತ್ನ ಪ್ರಯೋಜನವಿಲ್ಲದಾಯಿತೇನೋ ನಿಜ; ಆದರೆ ಸಾರ್ವತ್ರಿಕ ಬಂಡಾಯವು ಎಡೇ ಬಿಡದೆ ನಡೆದಿದೆ. ಜರ್ಮನ್ ಅಧಿಕಾರಿಗಳಾದ ನಾವು ಹಿಟ್ಲರನ ಮೇಲೆ ಯುದ್ಧ ಹೂಡಿರುವೆವು. ಅವನ ಮರಣ ಮತ್ತು ಹೀನ ಸರಕಾರದ ಅಂತ್ಯವೇ ನಮ್ಮ ಗುರಿ. ಸ್ಟಾಫನ್ ಬರ್ಗರ ಮರಣದಿಂದ ಎಲ್ಲರ ರಕ್ತವೂ ಕುದಿಯುತ್ತಿದೆ.

"ಅತ್ಯಂತ ವಿಶ್ವಾಸಿಗಳು ಮತ್ತು ಯೋಗ್ಯರಾದ ಅಧಿಕಾರಿಗಳೇ ತನ್ನ ಮೇಲೆ ದಂಗೆಯೆದ್ದಿರುವರೆಂದು ಹಿಟ್ಲರನು ಒಪ್ಪಿದ್ದಾನೆ. ನಮ್ಮನ್ನು ನಿರ್ಮೂಲ ಮಾಡುವುದಾಗಿ ಹಿಟ್ಲರ್ ಹೆಮ್ಮೆ ಕೊಚ್ಚಿಕೊಳ್ಳಬಹುದು. ಆದರೆ ಸ್ಟಾಫನ್ ಬರ್ಗ ಒಬ್ಬನೇ ಅಲ್ಲ. ಅಂಥವರು ನಮ್ಮಲ್ಲಿ ಸಾವಿರಾರು ಮಂದಿ ಇದ್ದಾರೆ. ನಮ್ಮ ಜತೆಯಲ್ಲಿರುವ ಅಧಿಕಾರಿಗಳೆಲ್ಲರೂ ಪರಿಚಿತರೂ ಒಳ್ಳೆಯವರೂ ಇದ್ದಾರೆ. ಯಾರೂ ಹಿಟ್ಲರನ ಆಜ್ಞೆ ಪಾಲಿಸಬಾರದು. ಎಲ್ಲರೂ ಎಚ್ಚತ್ತ

(೫ನೇ ಪುಟಕ್ಕೆ ಮುಂದುವರಿದಿದೆ)

ನೋಟೀಸು

ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ಬೊಳ್ಳಿಂಬಳೆ ಸುಬ್ರಾಯ ವೋಕುಣ್ಣಾಯರ ಮಗ ಶಂಕರ ನಾರಾಯಣ ಓಕುಣ್ಣಾಯನು ತಿಳಿಯಪಡಿಸುವುದೇನಂದರೆ:—

ತಾರೀಕು 12–10–1937ರಲ್ಲು ರೂ. 800ಕ್ಕೆ ಲಕ್ಷ್ಮಿನಾರಾಯಣ ಕಡಂಬಳಿತ್ತಾಯರು ಪೆರ್ಲ ಗ್ರಾಮದ ಪಂಬತಡ್ಕ ವೆಂಕಟ ಭಟ್ಟರ ಮಗ ವೆಂಕಪ್ಪ ಭಟ್ಟರಿಗೆ ಬರಕೊಟ್ಟ ಅರ್ವಾರುವೆ ಸದ್ರಿಯವರು ತಾ. 20–3–1939ರಲ್ಲು ನನ್ನಿಂದ ಪ್ರತಿಫಲ ಪಡೆದು ನನಗೆ ಬರಕೊಟ್ಟ ತಾಜಾ ರಿಜಿಸ್ಟ್ರಿ ಮೇಲ್ಚೀಟು ವ ವಳೆ ರಿಕಾರ್ಡುಗಳು ಮತ್ತು ವಕ್ಲುಗಳಿಂದಾದ ಗೇಣಿ ಚೀಟು ಕೂಡಾ ನನ್ನ ಹಕ್ಕಿನ ರಿಕಾರ್ಡುಗಳನ್ನು ಪೆರ್ಲ ಗ್ರಾಮದ ಕುಂಡಾಪು ಪದ್ಮನಾಭ ಕಡಂಬಳಿತ್ತಾಯರ ಮಗ ಈಶ್ವರ ಕಡಂಬಳಿತ್ತಾಯರ ಕೂಡೆ ನಾನು ಕೊಟ್ಟದ್ದನ್ನು ಅವರು ಈ ತನಕ ವಾಪಸು ಕೊಡದೆ ಅನೇಕ ಸರ್ತಿ ತಗಾದೆ ಮಾಡಿದರೂ ಕೊಡದೆ ನಮಗೆ ಈಗ ಜಿಜ್ಞಾಸೆ ಹುಟ್ಟಿದ ಕಾರಣ ವಕ್ಲುಗಳಿಂದ ನನಗೆ ಬಹ ಗೇಣಿ ಕೂಡಾ ನನಗೆ ವಕ್ಲುಗಳು ಕೊಡದಂತೆ ಉಪದ್ರ ಮಾಡುತ್ತಾರೆ. ಏನೋ ದುರಾಲೋಚನೆಯಿಂದ ಈ ದ್ವೇಶ ಪೂರೈಸುವದಾಗಿದೆ. ವಕ್ಲು ಚನಿಯಪ್ಪ ಭಂಟಿಗೆ ತಾ. 11–1–44ಕ್ಕೆ ಗೇಣಿಗೆ ಲಾಯರ್ ನೋಟೀಸು ಬಿಟ್ಟಲ್ಲಿ ಆತ ಈಶ್ವರ ಕಡಂಬಳಿತ್ತಾಯ ಪಿತೂರಿಯಿಂದ ಇನ್ಕಾರು ಮಾಡಿದ್ದಾನೆ ಸದ್ರಿ ಗೇಣಿ ಬಾಕಿಗೂ ವ ರಿಕಾರ್ಡು ಸ್ವಾಧೀನತೆಗೂ ಅಗತ್ಯ ಉಳ್ಳ ವ್ಯವಹರಣೆ ಮಾಡುವ ಅಗತ್ಯ ಬೀಳುವದರಿಂದ ಈಶ್ವರ ಕಡಂಬಳಿತ್ತಾಯರು ಸದ್ರಿ ರಿಕಾರ್ಡುಗಳನ್ನು ರಿಜಿಸ್ಟ್ರಿ ಟಪ್ಪಾಲು ಮೂಲಕ ನನಗೆ ಕಳುಹಿಸಿಕೊಡಬೇಕಾಗಿ ಈ ಮೂಲಕ ತಿಳಿಯಪಡಿಸಿಯದೆ. ಸರ್ವರಿಗೂ ತಿಳಿದಿರಲಿ.

ಬಿ. ಶಂಕರನ್ನಾರಾಯಣ
ಓಕುಣ್ಣಾಯ.

ತಾ. 20–7–1944.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 30th April, 1944.

LIABILITIES	Rs. As. Ps.	ASSETS	Rs. As. Ps.
1. Paid up Capital	13,68,480– 0– 0	1. Cash on hand & with bankers in Current & Fixed Deposit A/cs	19,71,808– 0– 1
2. Reserves	4,12,120–12– 8	2. Investments on (1) Govt. Securities (2) Immovable properties etc.	24,26,660– 9– 9
3. Deposits	67,30,955– 3– 4	3. Loans on Jewels & other valuable securities	33,50,167–13–3
4. Due to Bankers	7,34,366–10– 9	4. Loans on personal securities & Bills purchased	20,49,197–13–10
5. Bills for collection	6,70,379– 8– 8	5. Bills for collection as per contra	6,70,379– 8– 8
6. Sundries including revenue items	7,58,745– 8– 4	6. Office premises, furniture etc.	93,705– 0–10
		7. Sundries including revenue items	1,13,128–13– 4
Total	1,06,75,047–11– 9	Total	1,06,75,047–11– 9

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಾರ್ಕೆಟು

೨೨ರಂದು ಮಾನ್ಯ ಜಿ. ಕಲೆಕ್ಟ [illegible]ರಿಂದ ದ್ವಾರ ಮಾಡಲ್ಪಟ್ಟ ವೆಬ್ [illegible] ಮಾರ್ಕೆಟಿನ ಪ್ರಾರಂಭೋತ್ಸವ ವನ್ನು ನೆರವೇರಿಸಿದರು. ಕಳೆದ ವರ್ಷ ೨೪ರಲ್ಲಿ ಮಾರ್ಕೆಟ್ಟು ಮೈದಾನಕ್ಕೆ ಬಿಡಲ್ಪಟ್ಟಿತ್ತು. ಹೊಸ ರಚನೆ ಗಳಿಗೆ ಸುಮಾರು ಹತ್ತು ಸಾವಿರ ಖರ್ಚಾಗಿರುವುದು. ನಗರ ಉಪಾಧ್ಯಕ್ಷ ಶ್ರೀ ಲೋಬೋ ಇವರು ವ್ಯಾಪಾರಗಾರರನ್ನು ಕಳ್ಳ ಸಂತೆ ಅಡಗಿಸಲು ನೆರವಾಗಬೇಕೆಂದು ವಿನಂತಿ. ಅಲ್ಲಿ ಮಾರಲ್ಪಡುವ [illegible] ವಸ್ತುಗಳ ಬೆಲೆಯನ್ನು ಇಳಿಸ ಬೇಕೆಂದೂ ಕೇಳಿ ಕೊಂಡರು.

ಈ ಸಂಧರ್ಭದಲ್ಲಿ ಮಾನ್ಯ ಕಲೆಕ್ಟರರು ಇತ್ತ ಭಾಷಣದಿಂದ ಕೆಲವು ವಿಷಯಗಳು ತಿಳಿದು ಬಂದವು. ಹೊಟೇಲು ಗಳಲ್ಲಿನ ಊಟದ ಬೆಲೆ ತಗ್ಗಿಸಲಾಗುವುದು ಆದ ಪ್ರಯುಕ್ತ ತರಕಾರಿಗಳ ಬೆಲೆಯೂ ತಗ್ಗಿಸಬೇಕು ನಗರದಲ್ಲಿ ೨ ತಿಂಗಳಿಗೆ ಬೇಕಾದ ಅಕ್ಕಿ ಇದೆ ಹಳ್ಳಿ ಗಳ ಕಡೆ ಗುಪ್ತವಾಗಿರಿಸಿದ್ದು ಸರಕಾರಕ್ಕೆ ಕೊಡದೆ ಇದ್ದ ಅಕ್ಕಿ ಇನ್ನೂ ತುಂಬಾ ಇದೆ. ಅದನ್ನು ಹೊರತರಲು ಪ್ರಯತ್ನಿಸಲಾಗುವುದು ಸಾರ್ವಜನಿಕರು ಯಾವುದೇ ವಸ್ತುವನ್ನೂ ಪಡೆಯುವಾಗ ರಶೀದಿ ಪಡೆಯತಕ್ಕದ್ದು ಇದು ಅವರ ಭಾಷಣ ಸಾರಾಂಶ.

ಸತ್ಕಾರ

ನಗರದಲ್ಲಿ ಸಾರ್ವಜನಿಕ ಕಾರ್ಯಕರ್ತರೆನಿಸಿರುವ ಎಂ ಎಸ್ ಮಾಧವ ರಾವ್ ಮತ್ತು ಅವರ ಪತ್ನಿಯವರು ಸದ್ಯದಲ್ಲೇ ಕೆಲವು ತಿಂಗಳ ಮಟ್ಟಿಗೆ ಬೆನಾರಿಸ್‌ಗೆ ಹೋಗಲಿರುವದರಿಂದ ಅವರನ್ನು ಬೀಳ್ಕೊಡಲು ಇಲ್ಲಿಯ ಕಲ್ಚರಲ್ ಎಸೋಶಿಯೆಶನ್‌ನವರು ಮತ್ತು ಬೆಸೆಂಟಾ ಶಾಲಾ ಅಧ್ಯಾಪಕಿ ವೃಂದದವರಲ್ಲಿ ಮತ್ತು ಶಾಲಾ ಕಮಿಟಿಯವರೂ ಒಂದೊಂದು ಪ್ರತ್ಯೇಕ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು

ದುರ್ಘಟನೆ

ಬಿಜೈ ದಡ್ಡಲಕಾಡಿನ ಬಳಿ ಕಳೆದ ತಾ ೨೨ರಲ್ಲಿ ಒಂದು ದುರ್ಘಟನೆಯ ಮರಣ ಸಂಭವಿಸಿತು ವಿಪರೀತ ಮಳೆಯಿಂದಾಗಿ ಅಲ್ಲಿಯ ಮನೆಯೊಂದರ ಗೋಡೆ ಕುಸಿದು ಬಿತ್ತು ಒಳಗಡೆ ಮಲಗಿದ್ದ ರೋಗಿಯೊಬ್ಬನು ಅನಾಹುತಕ್ಕೆ ತುತ್ತಾಗಿ ಮರಣ ಹೊಂದಿದನು ಇನ್ನಿಬ್ಬರಿಗೆ ವಿಶೇಷ ಗಾಯಗಳಾಗಿ ಆಸ್ಪತ್ರೆಗೆ ಒಯ್ಯಲಾಯಿತು ಆಶ್ಚರ್ಯವೆಂದರೆ ಗೋಡೆ ಬಿದ್ದ ಮನೆ ಹೊಸತಾಗಿ ಕಟ್ಟಲ್ಪಟ್ಟಿತು

ಚಿಲ್ಲರೆ ಶಿಕ್ಷೆ

೭೯ ರೂ ಚಿಲ್ಲರೆ ಕೂಡಿಸಿಟ್ಟ ಆರೋಪದ ಮೇಲೆ ಕಿನ್ನಿಗೋಳಿಯ ಒರ್ವ ಕ್ರಿಶ್ಚಿಯನ್ ಮಹಿಳೆಗೆ ಸಬ್. ಡಿ. ಮ್ಯಾಜಿಸ್ಟ್ರೇಟರು ೩ ತಿಂಗಳ ಶಿಕ್ಷೆ ಮತ್ತು ೩೦೦ ರೂ. ಜುಲ್ಮಾನೆ ವಿಧಿಸಿದರು.

ಮಕ್ಕಳ ಕೂಟ

ಕದ್ರಿ ಮಕ್ಕಳ ಕೂಟದಲ್ಲಿ ಕಳೆದ ರವಿವಾರ ೧೧೦ ರೂ. ಇದ್ದರೆ ನಾನೇನನ್ನು ಮಾಡುವೆ ಎಂಬ ವಿಷಯ ಮಕ್ಕಳ ಭಾಷಣ ಸ್ಪರ್ಧೆ ನಡೆಯಿತು. ಶ್ರೀ ಬಿ. ಎಂ. ಇದಿನಬ್ಬ ಅವರು ಚಿಕ್ಕ ಕವಿತೆಗಳನ್ನೂ ಹಾಡಿದರು.

ವಿಮರ್ಶೆ

ಕಳೆದ ರವಿವಾರ ಶ್ರೀ [illegible] ವರು ಶ್ರೀ ಎ. [illegible] ನಮ್ಮದು ಎಂಬ ಗ್ರಂಥದ ವಿಮರ್ಶೆ ಮಾಡಿದರು ಇದರ ಕಥಾ ವಸ್ತು ನೈಜ ಜೀವನದ ಚಿತ್ರವಾಗಿದೆಯೆಂದೂ ವಿಮರ್ಶೆಗಾರರೆಲ್ಲರೂ ಒಪ್ಪಿದರು. ಗ್ರಂಥ ಕರ್ತರ ಪ್ರತಿಭೆ, ಅಭ್ಯಾಸ, ರಾಜಕಾರಣಗಳ ಹಿನ್ನೆಲೆಯ ಸನ್ನಿವೇಶಗಳ ಸಮರ್ಪಕತೆಯ ಕುರಿತು ವಿಮರ್ಶಕರ ಬೇಧಾಭಿಪ್ರಾಯ ಪಟ್ಟರು.

ನಿಧನ

ಕನ್ನಡ ಸಾಹಿತ್ಯದಲ್ಲಿ ಅಮರ ಕೀರ್ತಿ ಗಳಿಸಿ ೧೯೪೦ರಲ್ಲಿ ಇಟಲಿಯಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿರುವಾಗಲೇ ಮೃತ ಹೊಂದಿದ ಪೇಜಾವರ ಸದಾಶಿವ ರಾಯರ ಪತ್ನಿಯವರು ತಾ ೨೨ರಂದು ಇಲ್ಲಿಯ ಪೆಂಟ್‌ಲೆಂಡ್ ಪೇಟೆಯ ತಮ್ಮ ಮನೆಯಲ್ಲಿ ಮೃತರಾದರು. ಒಂದು ಹೆಣ್ಣು ಕೂಸನ್ನು ತಮ್ಮ ಹಿಂದೆ ಬಿಟ್ಟಿರುವರು. ಅವರ ಆತ್ಮಗಳಿಗೆ ಶಾಂತಿಯಿರಲ್ಲಿ

ಕಬ್ಬಿಣ ಕಟ್ಲೆರಿ

ಇವುಗಳ ವಸ್ತುಗಳನ್ನು ನಿಯಂತ್ರಿತ ಬೆಲೆಗೆ ಮಾರುವ ಪ್ರತ್ಯೇಕ ಒಂದು ಸಂಸ್ಥೆಯನ್ನು ಸ್ಥಾಪಿಸುವ ಯೋಜನೆಗಳು ನಗರದ ವಾಣಿಜ್ಯ ಪ್ರಮುಖರಿಂದ ಪರ್ಯಾಲೋಚಿಸಲ್ಪಡುತ್ತವೆ ರಖಂ ತರಿಸುವವರೆಲ್ಲರು ತಮ್ಮ ವಸ್ತುಗಳನ್ನು ಈ ಸಂಸ್ಥೆಗೆ ಕೊಟ್ಟು ಮಾರಿಸಿದಲ್ಲಿ ಯಾವ ತೊಂದರೆಗಳಿಲ್ಲವಾಗಿ ಅಭಿಪ್ರಾಯ ಈ ಏರ್ಪಾಡಿನ ಕುರಿತು ಅಧಿಕಾರಿಗಳೊಡನೆ ಚರ್ಚಿಸಲು ಒಂದು ಪ್ರಭಾವಶಾಲಿ ಶಿಷ್ಟಮಂಡಲವು ಕಲೆಕ್ಟರಲ್ಲಿಗೆ ಹೋಗಿದೆಯಾಗಿಯೂ ತಿಳಿಯಲಾಗಿದೆ ಫಲಿತಾಂಶ ಇನ್ನೂ ತಿಳಿದಿಲ್ಲ

ಕಟ್ಲೆಗಳು

ನಗರದಲ್ಲಿ ಕೆಲವು ವ್ಯಾಪಾರಿಗಳ ಮೇಲೆ ನಡೆಸಲಾದ ಕಟ್ಲೆಗಳ ತೀರ್ಪು ವಿಚಾರಕ್ಕೆಯಾಗುತ್ತಿದೆ ಈ ಸಂಬಂಧದಲ್ಲಿ ಇನ್ನೂ ಅನೇಕತರದ ಕ್ರಮ ನಿಬಂಧನೆಗಳ ಕುರಿತು ಪರ್ಯಾಲೋಚನೆ ನಡೆಯುವುದಾಗಿ ತಿಳಿದು ಬರುತ್ತದೆ.

ಬೆಲ್ಲ, ಹುರುಳಿ

ನಗರದೊಳಗಿನ ಬೆಲ್ಲ ಮತ್ತು ಹುರುಳಿ ದಾಸ್ತಾನುಗಳನ್ನ ಅಧಿಕಾರಿಗಳು ಪರಿಶೋಧಿಸಿ ಸೀಲ್ ಮಾಡಿರುವರು ಮುಂದಿನ ಹುಕುಂ ತನಕ ಇವನ್ನು ಮಾರಬಾರದಾಗಿ ತಿಳಿಸಲಾಗಿದೆ ಇವುಗಳ ಕ್ರಯವನ್ನು ನಿಯಂತ್ರಿಸುವರಾಗಿ ತಿಳಿದು ಬಂದಿದೆ.

ರೇಶನ್

ರೇಶನ್ ಬಟಾವಡೆಯು ತೃಪ್ತಿಕರವಾಗಿ ನಡೆಯುತ್ತಿದೆ ಅರ್ಧ ಕುಚಲಕ್ಕಿ ಮತ್ತು ಅರ್ಧ ಬೆಳ್ತಿಗೆ ಅಕ್ಕಿ ಕೊಡುತ್ತಾರೆ. ಗೋದಿಯನ್ನೂ ಪಡೆಯಬಹುದು ಮುಂಬರುವ ಅಕ್ಕಿ ಅಭಾವದ ತೊಂದರೆ ಗಳಾಗದಂತೆ ಅಧಿಕಾರಿಗಳು ಪ್ರಯತ್ನದಲ್ಲಿದ್ದಾರೆ.

ಕಟ್ಟಿಗೆ

ಪುತ್ತೂರು ಕಾರ್ಕಳ ಕಡೆಯಿಂದ ಸೌದೆಯನ್ನು ತರಿಸುವ ಏರ್ಪಾಡು ಮಾಡಿರುವುದರಿಂದ ಕಟ್ಟಿಗೆಯ ಸರಬರಾಯಿಯೂ ತೃಪ್ತಿಕರವಾಗಿದೆ ಎನ್ನಬರುತ್ತದೆ ಪ್ರತಿದಿನದ ಖರ್ಚಿಗೆ ಬೇಕಾಗುವ ಮತ್ತು ಮುಖ್ಯವಾಗಿ ಆವಶ್ಯಕವಿರುವ ಈ ಒಂದು ಉರಿಸುವ ಸಾಮಗ್ರಿಯನ್ನು ಪೂರೈಸಲು ಸರ್ವ ಪ್ರಯತ್ನಗಳಾಗಬೇಕಾದ್ದುದು

ಜಿಲ್ಲಾ [illegible] ಸಭೆ

ತಾ. ೧೯ರಂದು ಅದರ ಬೈಠಕದಲ್ಲಿ ನಡೆಯಿತು. ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರೇ ಅಧ್ಯಕ್ಷತೆ ವಹಿಸಿದ್ದರು. ೪೩ ಸದಸ್ಯರು ಹಾಜರಿದ್ದರು. ಸಭೆಯಲ್ಲಿ ನಿರ್ಧರಿಸಿದ ಮುಖ್ಯ ವಿಷಯಗಳು ಈ ಕೆಳಗಿನಂತಿವೆ: ಮಂಗಳೂರಿನಿಂದ ಕಾರ್ಕಳ, ಉಡುಪಿ, ಶಿರಾಡಿಯಾಗಿ ಘಟ್ಟಕ್ಕೆ ರೈಲು ಹಾಕಬಹುದಾಗಿ ರೈಲ್ವೆ ಬೋರ್ಡಿಗೆ ಸೂಚಿಸಲಾಯಿತು. ಜಿಲ್ಲೆಯಲ್ಲಿ ೪೫ ವಿವಿಧ ವೈದಕೀಯ ಆಸ್ಪತ್ರೆಗಳನ್ನು ತೆರೆಯುವುದು ಕೊರಗ ಜಾತಿಯವರ ಕೈಗಾರಿಕೆ ವಸ್ತುಗಳನ್ನು ಜಿಲ್ಲಾ ಬೋರ್ಡು ಮಾರ್ಕೆಟುಗಳಲ್ಲಿ ಮಾರುವಾಗ ತೆರಿಗೆ ಕೊಳ್ಳಲಾಗುವುದಿಲ್ಲ ಹೊಸದಾಗಿ ಸ್ಥಾಪಿಸಲ್ಪಟ್ಟ ಜಿಲ್ಲಾ ಬೋರ್ಡುಗಳ ಚೆಂಬರ್ ಇದಕ್ಕೆ ಅಧ್ಯಕ್ಷರನ್ನೇ ಪ್ರತಿನಿಧಿಯಾಗಿ ಕಳುಹಿಸಬಹುದು ಉಡ್ಪಿಯ ಬೋರ್ಡು ಹ್ಯಾಸ್ಕೂಲನ್ನು ಕಾಪಿಗೆ ಒಯ್ಯುವುದು ಮುಂದಿನ ಸಭೆಗೆ ಇಡಲಾಯಿತು ಜಿಲ್ಲೆಗೆ ೨೫೦ ಸಾವಿರ ಮುಡಿ ಅಕ್ಕಿ ಬೇಗನೆ ತರಿಸುವರೆ ಸರಕಾರಕ್ಕೆ ವಿನಂತಿಸುವುದು

ಸಂಘ

ಇಲ್ಲಿಯ ಸೈಕಲ್ ವ್ಯಾಪಾರಿಗಳು ಸಭೆ ಸೇರಿ ತಮ್ಮದೇ ಒಂದು ಸಂಘವನ್ನು ಸ್ಥಾಪಿಸಿಹರು. ದ ಕ ಜಿಲ್ಲಾ ಸೈಕಲ್ ವ್ಯಾಪಾರಿಗಳ ಸಂಘ ಇದು ಅದರ ಸಂಪೂರ್ಣ ಹೆಸರು ಶ್ರೀ ಪಿ ಹರಿಶ್ಚಂದ್ರ ರಾವ್ ಇವರು ಅಧ್ಯಕ್ಷರು ಶ್ರೀ ಬಿ. ಮಂಜುನಾಥ ಕಾರ್ಯದರ್ಶಿ ಶ್ರೀ ಎಂ. ಗೋವಿಂದ ಖಜಾನ್ಚಿ ಸದಸ್ಯ ವರ್ಗವನ್ನು ಎ ಬಿ ಸಿ ಎಂಬ ಮೂರು ತರಗತಿಯಾಗಿ ವಿಂಗಡಿಸಿರುವರು ವಿವರಗಳನ್ನು ಕಾರ್ಯದರ್ಶಿಯವರಲ್ಲಿ ತಿಳಿಯಬಹುದು

ಮಳೆ

ಕಳೆದ ಗ್ರಹಣ ಮರುವಿನದಿಂದ ಮಳೆ ಸ್ವಲ್ಪ ಹೆಚ್ಚಾಗಿಯೇ ಇತ್ತು ಒಂದು ದಿನ ಅದರ ಭರವು ತೀರೀಕವಾಗಿ ಕೆಲವು ಶಾಲೆಗಳಿಗೆ ರಜೆ ಕೊಡಲಾಗಿತ್ತು ಮಾರ್ಗ ತೋಡುಗಳಿಗೆ ಕೆಲವು ಕಡೆ ಸ್ವಲ್ಪ ಹಾನಿಯೊಗಿದಬಹುದು

ಹೊಟೇಲುಗಳು

ಸದ್ಯದಲ್ಲಿ ಉಪಹಾರ ಗೃಹಗಳ ಕಾಲ ನಿಯಮವು ಇಂತಿಷ್ಟೆ ಇರಬೇಕೆಂಬದರ ಕುರಿತು ಒಂದು ತರದ ವ್ಯವಸ್ಥಿತ ಕಾರ್ಯಕ್ರಮದ ನಿಯಮವು ಜ್ಯಾರಿಯಲ್ಲಿ ಬರಬಹುದೆಂದು ವದಂತಿ ಇದೆ ನಗರದಲ್ಲಿ ಹಾಲಿನ ಸರಬರಾಯಿಯು ಕನಿಷ್ಟ ಮಟ್ಟಕ್ಕೆ ಬಂದಿರುವುದರಿಂದ ಚಾ ಪಾನೀಯಗಳನ್ನು ವಿಕ್ರಯಿಸುವ ಸಂಸ್ಥೆಗಳು ದಿವಸದಲ್ಲಿ ಒಂದು ನಿರ್ದಿಷ್ಟ ಸಮಯ ಮಾತ್ರ ತೆರೆದಿರುವಂತೆ ಮಾಡಿದ್ದಲ್ಲಿ ಕೊಂಚ ಮಟ್ಟಿಗೆ ಹಾಲಿನ ಬಾಧೆ ಕಡಿಮೆಯಾಗಬಹುದುದೆಂಬ ಭರವಸೆಯೇ ಈ ಏರ್ಪಾಡಿನ ಮೂಲ ಉದ್ದೇಶವೆಂದು ಊಹಿಸಲಾಗಿದೆ

ಪೆರೋಲ್

ವೆಲ್ಲೂರು ಜೈಲಿನಲ್ಲಿ ಸ್ಥಾನಬದ್ಧ ಕೈದಿ ಕೈದಿಗಳಾಗಿರಿಸಲ್ಪಟ್ಟಿದ್ದ ಶ್ರೀ ಬಿ ದಾಮೋದರ ಬಾಳಿಗಾ ಅವರು ಒಂದು ತಿಂಗಳ ಪೆರೋಲ್ ಮೇಲೆ ಬಿಡುಗಡೆ ಹೊಂದಿ ಮಂಗಳೂರಿಗೆ ಬಂದಿರುವರು. ಶ್ರೀಯುತರ ವೃದ್ಧ ಮಾತೃಶ್ರೀಯವರ ಅನಾರೋಗ್ಯವೇ ಅವರನ್ನು ಪೆರೋಲ್ ಬಿಡುಗಡೆಯಾಗುವಂತೆ ಮನವಿ ಮಾಡಿಕೊಳ್ಳಲು ಕಾರಣವೆಂದು ತಿಳಿದುಬರು

[illegible]

ಪರಿಶೀಲನೆ

ಮಾನ್ಯ ಕಲೆಕ್ಟರರು ಕಳೆದ ವಾರ ಇಲ್ಲಿ ತಂಗಿದ್ದು ವ್ಯಾಪಾರ ವಹಿವಾಟುಗಳ ಕ್ಷೇತ್ರಗಳಲ್ಲಿ ನಡೆಯುವ ವ್ಯವಹಾರದ ಪರಿಸ್ಥಿತಿಯನ್ನು ಪರಿಶೀಲಿಸಿದರಾಗಿ ತಿಳಿದು ಬರುತ್ತದೆ.

ದಿಗ್ಭ್ರಮೆ ಆಹುತಿ!

ತಕ್ಕ ಮಟ್ಟಿನ ಅನುಕೂಲಸ್ಥರೂ, ಸದ್‌ಗೃಹಸ್ಥರೂ ಆಗಿದ್ದ ಭದ್ರಗಿರಿಯ ಶ್ರೀ ನಾಗೇಶ ಪೆಡಿಯಾರ್ ಎಂಬ ಮಹನೀಯರು ತಮ್ಮ ಮನೆಯಲ್ಲಿ ನೇಣು ಹಾಕಿ ಹತ್ಯ ಮಾಡಿ ಕೊಂಡದ್ದು ವಿಷಾದಕರ ಸುದ್ದಿ. ಬಿಡ್ಡನಲ್ಲಿ ಅಪಾರ ನಷ್ಟ ಸಂಭವಿಸಿದುದೆ ಈ ಆತ್ಮ ಹತ್ಯಕ್ಕೆ ಕಾರಣವಂತೆ.

ನಿಯಂತ್ರಣ

ಕಠಿಣ ಕಾನೂನಿನ ಫಲವಾಗಿ ವ್ಯಾಪಾರ ವಹಿವಾಟುಗಳು ಸುಗಮವಾಗಿ ನಿಯಂತ್ರಣ ಬೆಲೆಗೆ ಸಿಗುವಂತಾಗಿದೆ. ಚಿಲ್ಲರೆಯೂ ಹೇರಳ ದೊರಕುವಂತಾಗಿದೆ.

ಕಾರ್ಕಳ

ಇಲ್ಲಿಯ ಪ್ರಾ ಶಾ ಉಪಾಧ್ಯಾಯ ಸಭೆ ಜರಗಿ ಗಣಿತ ಪಾಠಗಳ ವಿವಿಧ ಮಾದರಿಯ ಪಾಠಗಳು ಅನುಭವಸ್ಥ ಉಪಾಧ್ಯಾಯರಿಂದ ಮತ್ತಿತರರಿಂದ ಕೊಡಲಾಯಿತು

ಕೆಲವು ದಿನಗಳ ಹಿಂದೆ ಇಲ್ಲಿ ಸತ್ತ ಶಿಶುವಿನ ಒಂದು ಶವ ದೊರಕಿದ್ದು ಆ ಸಂಬಂಧ ಮ್ಯೊಲಿ ಜಾತಿಯ ತಾಯಿ ಮಗಳಿರ್ವರನ್ನು ಪೋಲಿಸರು ಬಂಧಿಸಿರುವರೆಂದು ತಿಳಿದು ಬರುತ್ತದೆ

ಈ ಕಡೆಗಳಲ್ಲಿ ಜಾನುವಾರ ರೋಗವು ಹರಡುವ ಚಿಹ್ನೆಗಳು ಕಂಡು ಬಂದಿವೆಯಾಗಿ ವರದಿ

ಸಿಡಿಮದ್ದಿನ ಎರಡು ಹಡಗುಗಳು ಸ್ಫೋಟಿಸುವುವು

ಮೊನ್ನೆ ಮುಂಬಾಯಿಯಲ್ಲಿ ನಡೆದಂತೆ, ಎರಡು ಸಿಡಿಮದ್ದಿನ ಸ್ಫೋಟನವು ನಡೆಯಿತು—ಸಂಯುಕ್ತ ಅಮೆರಿಕದ ಚಿಕಾಗೊ ಬಂದರದಲ್ಲಿ ಸ್ಫೋಟನದ ಕಾರಣಗಳು ಸರಿಯಾಗಿ ತಿಳಿದು ಬಂದಿಲ್ಲ. ಹಡಗಿನಲ್ಲಿರುವ ಮತ್ತು ಅದರ ಆಸುಪಾಸಿನಲ್ಲಿರುವ ಅಸಂಖ್ಯಾತ ಮಂದಿಗಳಲ್ಲಿ ಹಾನಿಯೂ, ಸಾಧಾರಣ ೬೦೦ ಜನರು ಮೃತರಾಗಿರುವರಾಗಿಯೂ ತಿಳಿದುಬಂದಿದೆ. ಚಿಕಾಗೊ ಬಂದರ ಪ್ರದೇಶವು ನೆಲಸಮವಾಗಿದ್ದು, ಸ್ಫೋಟನದ ರಭಸವು ೫೫ ಮೈಲು ದೂರಕ್ಕೂ ಪ್ರಸರಿಸಿರುವುದಾಗಿ ತಿಳಿದು ಬಂದಿದೆ. ಈ ತರದ ಸ್ಫೋಟನವು ಅಮೆರಿಕದ ಚರಿತ್ರೆಯಲ್ಲಿ ಪ್ರಥಮವಂತೆ!

ಲಾಭಕೋರತನ

ಲಾಭಕೋರತನವನ್ನು ತಡೆಯಲು ಇಂಡಿಯಾ ಸರಕಾರದಿಂದ ಹೊರಡಿಸಲ್ಪಟ್ಟ ಶಾಸನವು ಅತ್ಯಂತ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರುತ್ತಿದೆ. ದೇಶದ ಹಲವಾರು ಕಡೆಗಳಲ್ಲಿ ಲಾಭಕೋರತನದ ತಕ್ಷೀರುಗಳು ಹಿಡಿಯಲಾಗಿ ತಪ್ಪಿತಸ್ಥರಿಗೆ ಕಾರಾಗೃಹ ಮತ್ತು ಜುಲುಮಾನೆ ಶಿಕ್ಷೆಯ ವಿಧಿಸಲಾಗಿದೆ. ಯುದ್ಧದ ದೆಸೆಯಿಂದ ಉಂಟಾದ ಈ ಲಾಭಕೋರತನದಿಂದ ಉಂಟಾಗುವ ಅನರ್ಥಗಳನ್ನು ತಡೆಯುವರೆ ಈ ಶಾಸನವು ಹೊರಟದ್ದು, ಇನ್ನೂ ತೀಕ್ಷಣತೆಯಲ್ಲಿ ಕಾರ್ಯ ನಿರ್ವಹಿಸುವುದೆಂದು ಸಂಬಂಧಪಟ್ಟ ಅಧಿಕಾರಿಗಳ ಪ್ರಕಟಣೆಯಾಗಿರುತ್ತದೆ.

ಜರ್ಮನಿಯಲ್ಲಿ ಬಂಡಾಯ ಹಿಟ್ಲರನ ಕೈದು!

(೩ನೇ ಪುಟದಿಂದ)

ನಾಜಿ ಅಡಳಿತವನ್ನು ಕೊನೆಗೊಳಿಸಲು ದೃಢ ನಿಶ್ಚಯ ಮಾಡಬೇಕು" ಹೀಗೆ ಆಗಾಗ ನಾಜಿಗಳ ವಿರುದ್ಧ ಕ್ರಾಂತಿಯನ್ನು ಉಂಟು ಮಾಡಲು ಜರ್ಮನ್ ಗುಪ್ತ ರೇಡಿಯೋದಲ್ಲಿ ಬಂದೇ ಸವನೆ ಆಕಾಶವಾಣಿ ಭಾಷಣಗಳಾಗುತ್ತಿವೆ.

ಜಪಾನಿನಲ್ಲಿ ಹೊಸ ಮಂತ್ರಿ ಮಂಡಳ

ಜಪಾನಿನ ಪ್ರಧಾನಮಂತ್ರಿ ಹಾಗೂ ಯುದ್ಧ ಮಂತ್ರಿಗಳಾದ ಜನರಲ್ ಟೋಜೋ ಮುಖ್ಯ ಸೇನಾಧಿಪತ್ಯವನ್ನು ಬಿಟ್ಟು ಕೊಟ್ಟಿರುವರೆಂದು ಟೋಕಿಯೋ ರೇಡಿಯೋ ಸಾರಿದೆ. ಜನರಲ್ ಯೋಶಿಜಿರೋ ಉಮೇಜುರವರನ್ನು ಆಸ್ಥಾನಕ್ಕೆ ನೇಮಿಸಲಾಗಿದೆ. ಇವರು ಮೊದಲು ಕ್ವಾಂಟುಂಗ ಸೇನಾಪತಿಗಳಾಗಿದ್ದರಲ್ಲದೆ ಮಂಚುಕೋದಲ್ಲಿ ಜಪಾನಿ ರಾಯಭಾರಿಗಳಾಗಿದ್ದರು. ಜಪಾನರು ಈ ವರ್ಷ ಸೇನಾಧಿಪತ್ಯವನ್ನು ಎರಡು ಸಲ ಬದಲಾಯಿಸಿದರು ಕಳೆದ ಫೆಬ್ರವರಿ ತಿಂಗಳ ವರೆಗೆ ಮಾರ್ಶಲ್ ಜನರಲ್ ಸೂಜಿಯೂಮಾರವರು ಮುಖ್ಯ ಸೇನಾಪತಿಗಳಾಗಿದ್ದರು ಈಗ ಸ್ಥಾನವನ್ನು ಬಿಟ್ಟು ಕೊಟ್ಟ ಟೋಜೋರವರ ಮುಂದಿನ ಸ್ಥಾನ ಮಾನರೇನೆಂದು ತಿಳಿದಿಲ್ಲ ನೌಕಾ ಮಂತ್ರಿ ಎಡ್ಮಿರಲ್ ಶಿಮಾಡಾರವರೂ ನಿವೃತ್ತರಾದರೆಂದು ಜಪಾನಿ ಸುದ್ದಿ ಖಾತೆ ಸಾರಿದೆ ಜಪಾನ್ ಸಾರ್ವ ಚೆಮರು ಸೈಪಣದ ಮೇಲೆ ಅಮೆರಿಕನ್ ಸೈನಿಕರು ಕೈಕೊಂಡ ಧಾಳಿಯಿಂದ ತುಂಬಾ ಚಿಂತೆಗೊಳಗಾಗಿರುವರೆಂದು ಟೋಜೋರವರು ಕೊಟ್ಟ ಹೇಳಿಕೆಯೊಂದರಿಂದ ತಿಳಿದು ಬರುತ್ತದೆ ಜನರಲ್ ಕುನಿಯಾಕಿಶಿಯೋಸೋ ಈಗ ಮುಖ್ಯ ಮಂತ್ರಿಯಾಗಿದ್ದಾರೆ

ಇಟಲಿ ರಂಗದಿಂದ ಬಂದ ಸುದ್ದಿ ಪ್ರಕಾರ ಲೆಗ್‌ಹಾರ್ನ್ ಮಿತ್ರರ ಕೈವಶವಾಗಿರುವುದೆಂದು ತಿಳಿದಿದೆ ಎಂಟನೇ ಮಿತ್ರ ಪಡೆಯು ಅಂಕೋನ ಎಂಬ ಬಂದರವನ್ನು ವಶಪಡಿಸಿ ಕೊಂಡಿದೆ ಅಗುಗ್ಲಿಯಾನೇ ಮತ್ತು ಕಿವೆರಾಸೋ ನಗರಗಳು ಇಂದು ಎಂಟನೇ ಸೈನ್ಯದ ಪೋಲೀಸ್ ಸೇನೆಗಳ ವಶವಾದುವು ಮಧ್ಯ ರಂಗದಲ್ಲಿ ಬ್ರಿಟಿಷ್ ಸೇನೆಗಳು ಅರ್ನೊ ನದಿಯನ್ನು ದಾಟವೆ ಅರೆಜೋ ನಗರಕ್ಕೆ ೧೫ ಮೈಲು ಪಶ್ಚಿಮವಿರುವ ಮೊನೆಟವಾರ್ಚಿ ನಗರವನ್ನು ವಶಪಡಿಸಿ ಕೊಂಡಿವೆ. ಇದರಿಂದ ಐದನೇ ಮಿತ್ರ ಸೇನೆಯು ಪೈಸಾಮೊರೆದ್ಯ ರಸ್ತೆಯಲ್ಲಿ ಧ್ವಂತಾಗಿದೆ. ಪೊನ್ಸಾಕೋ, ಪಾಗ್ಗಿಯ ಯೂಸಿಯೊನ ಮುಂತಾದ ನಗರಗಳನ್ನೂ ಆಕ್ರಮಿಸಲಾಗಿದೆ.

ರಶ್ಯನ್ನ ರಣರಂಗದಲ್ಲಿ ವಾರ್ಸಾ ನಗರದ ಬಾಗಿಲಿನಂತಿರುವ ಕರ್ಜನ್ ವ್ಯೂಹದ ಬಲಾಢ್ಯ ದುರ್ಗವಾದ ಮತ್ತು ೧೯೪೩ರಲ್ಲಿ ಜರ್ಮನಿ-ರಶ್ಯ ಗಡಿ ಪ್ರದೇಶವಾದ ಬ್ರೆಸ್ಟಲಿಟೋವಸ್ಕದ ಹೊರ ಭಾಗವನ್ನು ಮಾರ್ಶಲ್ ರುಕೋವಸ್ಕಿಯ ಸೇನೆಗಳು ಪ್ರವೇಶಿಸಿವೆ. ಇಧ್ದೂ, ಲಾವ್ವೋಪದ ಕಡೆಗೆ ಮುನ್ನುಗ್ಗುತ್ತಿರುವ ಮಾರ್ಶಲ್ ಕೊನೀವನ ಸೇನೆಗಳ ಪ್ರಗತಿಯೂ ಮಧ್ಯ ಜರ್ಮನಿಯ ಮೇಲೆ ರಶ್ಯನರು ಕೈಕೊಳ್ಳಲಿರುವ ಉಗ್ರ ಧಾಳಿಗೆ ಪೂರ್ವ ತಳಹದಿಯೊಂದು ಮಾಸ್ಕೋದಲ್ಲಿ ಹೇಳಲಾಗಿದೆ. ಟೇಲಸೊ.ಕ್ ಬೆ.ಸ.ಲಿ ಟೋವಸ್, ದ ಮೇಲೆ ಕೆಂಪು ಸೇನೆಗಳು ಆರಂಭಿಸಿದ ಧಾಳಿಯು ಉಗ್ರ ರೂಪವನ್ನು ತಾಳುತ್ತವೆ. ಈ ಎರಡು ನಗರಗಳಿಗೂ ಗಂಡಾಂತರ ಒದಗಿದೆ. ಇವುಗಳನ್ನು ರಕ್ಷಿಸಲು ಜರ್ಮನರು ಹೊಸ ಸೇನೆಗಳನ್ನು ಕಳುಹಿಸುತ್ತಿದ್ದಾರೆ ಮಾರ್ಶಲ್ ಕೊನೀವನ್ ಹೊಸ ಟೆಂಕು ದಳವನ್ನು ದಕ್ಷಿಣ ಪೋಲೆಂಡಿನ ಹಿಟ್ಲರನ ಬಲವಂತ ದುರ್ಗವಾದ ಲ್ವಾವೋಪದ ಕಡೆಗೆ ಕಳುಹಿಸುತ್ತಿದ್ದಾರೆ ಕ್ರಾಸ್ನ ಗೋರ್ದ ಸ್ಕಾಯ ಎಂಬ ನಗರವನ್ನು ರಶ್ಯನರು ವಶಪಡಿಸಿ ಕೊಂಡಿರುವರು ಜಾಬಿಂಕಾವನ್ನು ಕೈವಶ ಮಾಡಿದರು ಕೋಸೊವಿಸ್ಕಿಯ ಸೇನೆಗಳು ಬ್ರೆಸ್ಟಲಿಟೋವಸದ ಹೊರ ಭಾಗವನು ಸೇರಿದೆ

ಕೇನದ ಪೂರ್ವ ಹಾಗೂ ದಕ್ಷಿಣ ಬೈಲುಗಳಲ್ಲಿ ಮತ್ತು ಫಾಬರ್ಗ್ ಡಿವಾಸೆಲ್ಸದಲ್ಲಿ ಈಗ ಭೀಕರ ಕಾಳಗ ನಡೆದಿದೆ ಟೆಲ್ಲಿ ದಕ್ಷಿಣದಲ್ಲಿ ಜುವಿಗ್ನಿ ಭಾಗದಲ್ಲಿ ಮಿತ್ರ ಸೈನಿಕರು ಅರ್ಧ ಮೈಲು ಮುನುಗ್ಗಿದ್ದು ವೈರಿಗಳು ರಕ್ಷಿಸಿ ಕೊಳ್ಳಲು ಜೀವದ ಹಂಗು ತೊರೆದು ಕಾದುತ್ತಾರೆ ಸೆಂಟ್ ಲೋದಿಂದ ಜರ್ಮನರನ್ನು ಹೊರ ಹಾಕಲಾಗಿದೆ, ಕೇನ್‌ನ ಆಗ್ನೇಯದಲ್ಲಿ ಭೀಕರ ಟೇಂಕ್ ಕಾಳಗ ನಡೆದಿದೆ

ಇನ್ನೂ ಹೆಚ್ಚು ಮೆಡಿಕಲ್ ಕಾಲೇಜುಗಳು

ಮದ್ರಾಸು ಪ್ರಾಂತ್ಯದಲ್ಲಿ, ಇನ್ನೆರಡು ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸುವ ಕುರಿತು ಯೋಜನೆಗಳು ಸಿದ್ಧವಾಗಿವೆಯಾಗಿ ತಿಳಿದುಬಂದಿದೆ. ಆದರೆ ಈ ಕಾಲೇಜುಗಳು, ಬಹುಶಃ ಯುದ್ಧ ಮುಗಿದನಂತರವೆ ಸ್ಥಾಪನೆಯಾಗುವವಂತೆ.

ಈ ಕಾಲೇಜುಗಳು ಎಲ್ಲಿ ಸ್ಥಾಪನೆಯಾಗಬೇಕೆಂಬುದರ ಕುರಿತು, ಪತ್ರಿಕಾ ಪತ್ರವ್ಯವಹಾರವು ಈಗಲೆ ಪ್ರಾರಂಭವಾಗಿರುತ್ತದೆ.

Canara Bank Limited

Applications are invited for clerical posts in the Bank Minimum qualification necessary S S L C Selected candidates should be prepared to deposit cash security of not less than Rs 500 and will have to undergo training for about 8 months during which period they will not be given any salary or remuneration But they will be as far as possible, allowed to work in any of the Bank s offices of their choice during the period of training

Applications with testimonials will be received up to 15—8—1944

Apply to
CANARA BANK LIMITED
Light House Hill
Mangalore

ಕಾಲ ಬದಲಾಗಿದೆ!



1780ರ ಸುಮಾರಿಗೆ ಅಬ್ರಾಹಾಂಲೂಯಿಸ್ ಬ್ರೆಗಟ್ ಓವರ್ ಕ್ವಾಲ್ ಹೇ ಸ್ಪ್ರಿಂಗ್ ಕಂಡುಹಿಡಿದ



ಬಿಜೋ ಮಿನಿಯೇಚರ್ 'ಡಿ 18 ಕ್ಯಾ ಗಟ್ಟಿ ಚಿನ್ನ ಭಾರದ, ಮುಚ್ಚಳ ರೂ 400



ಬಿಜೋ ಸೆಮಿಥಿನ್ 8 ದ ಆಕಾರ 1೮ಕ್ಯಾ ಗಟ್ಟಿ ಚಿನ್ನ, ಭಾರದ ಮುಚ್ಚಳ ರೂ 310

ಹೇಯರ್ ಸ್ಪ್ರಿಂಗ್ ಘೂಳದಚಕ ವನ್ನು ಆಟೋಪಿಸುತ್ತದೆ ಅದು ನಿರ್ಮಾಣವಾದ ಆ ಉಕ್ಕಿನ ದಪ್ಪ ಮನುಷ್ಯನ ಕೂದಲಿನ ಮೂರರಲ್ಲಿ ಒಂದು ಪಾಲಷ್ಟು ಮಾತ್ರ ಭಾರತದ ಜನತೆಗಾಗಿ ವೆಸ್ಟ್ ಎಂಡ್ ವಾಚುಗಳನ್ನು ತಯಾರಿಸುವ ಆ ಕುಶಲ ಕೆಲಸಗಾರರಂಥವರೇ ಇಂಥ ಈ ಸೂಕ್ಷ್ಮ ಭಾಗವನ್ನು ನಿರ್ಮಿಸಿ ಜೋಡಿಸುವರು

ಆಕ್ರಮಣದ ಕಲ್ಲೋಲದಿಂದ ಪ್ರಕಟಣೆಯು ಮಾದರಿಗಳಿಲ್ಲ ದೊರೆಯದಾದರೂ ಸ್ಟಾಕಿನಲ್ಲಿರುವಷ್ಟು ಆರ್ಡರು ಪೂರೈಸಲು ಪ್ರಯತ್ನಗಳವೆ

WEST END WATCH C°
Bombay — Calcutta

ವೆಸ್ಟ್ ಎಂಡ್ ವಾಚ್ ಕೊ, ಬೊಂಬಾಯಿ ಮತ್ತು ಕಲ್ಕತ್ತ

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency,	**The Joint Booking Office,**
MANGALORE	KODIALBAIL

The Bank of Mangalore Limited, Mangalore.

ESTD. 1931.

HEAD OFFICE BUNDER, Mangalore. *BRANCHES* MANGALORE, Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

FixedDepositts 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ: ಬೊಂಬಾಯಿ, ಮದರಾಸು, ಕಲ್ಕತ್ತಾ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office

Some Salient Features of The 'Bombay Life' Policies

★ Premiums are low. ★ 2½% Rebate on annual premiums.
★ "Permanent Disability Benefits free of any cost
★ Payment of double the insured amount in case of death by accident at a very smallcost of Rs, 1-8-0 per 1000.
★ Special rebates on large size policies
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the super vision of the experienced staff A specific for the puerperal diseases and also valuable to puerperal women as tonic pucreases the vitality and sexual vigour Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Offce
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದ ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Shivala Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 4—8—1944 [ಸಂಚಿಕೆ 31]

ಸ್ವತಂತ್ರ ಜೀವಿಗಳ ಸ್ವರ್ಣಭೂಮಿ ಅಮೇರಿಕಾ

ಹಲವು ದೇಶದ ಸ್ವಾತಂತ್ರ್ಯಾಭಿಮಾನಿ ಜನರು ಅಮೇರಿಕದಲ್ಲಿ ಒಂದು ಹೊಸ ಜನಾಂಗವನ್ನೇ ಕಟ್ಟಿರುವರು

ಲೇಖಿಕೆ ಪರ್ಲ್ ಬಕ್—

ಈ ಮಹಿಳೆ ಅಮೇರಿಕದ ಪ್ರಥಮ ಶ್ರೇಣಿಯ ಲೇಖಕರ ಸ್ಥಾನ ಪಡೆದಿರುವರು. ಅಮೆರಿಕದ ಸಂಯುಕ್ತ ರಾಷ್ಟ್ರದಲ್ಲಿ ಹುಟ್ಟಿ ಬಾಲ್ಯವನ್ನು ಚೀನದಲ್ಲಿ ಮಿಶನರಿ ಪ್ರಚಾರಕನಾದ ತಂದೆಯೊಡನೆ ಕಳೆದು ಉಚ್ಚ ಶಿಕ್ಷಣವನ್ನು ಅಮೇರಿಕದಲ್ಲೇ ಪಡೆದರು ಪುನಃ ಚೀನದೇಶದಲ್ಲಿ ಶಿಕ್ಷಣ ಪ್ರಚಾರ ಮಾಡುತ್ತಾ ೧೯೩೨ರ ವರೆಗೆ ಅಲ್ಲಿದ್ದರು ಈಗ ಆರು ಮಕ್ಕಳ ಸಂಸಾರಸ್ಥಳಾಗಿ ಅಮೆರಿಕದಲ್ಲೇ ಇದ್ದಾರೆ

ಇವರು ಚೀನಿಯರ ಜನಜೀವನವನ್ನು ಚಿತ್ರಿಸುವ ‘ಗುಡ್ ಅರ್ಥ್’ ಎಂಬ ಅಮೋಘ ಕಾದಂಬರಿಯನ್ನು ಬರೆದು ಅಮೆರಿಕದ ಅತ್ಯುಚ್ಚ ಪುಲಿಟ್ಜರ್ ಸಾಹಿತ್ಯ ಬಹುಮಾನವನ್ನು ಪಡೆದರು ಮಾತ್ರವಲ್ಲ ೧೯೩೮ರಲ್ಲಿ ಜಗತ್ತಿನ ಶ್ರೇಷ್ಠ ಸಾಹಿತಿ ಎನಿಸಿ ನೋಬೆಲ್ ಪಾರಿತೋಷಕವನ್ನೂ ಪಡೆದು ಬಹುಮಾನಿತರಾದರು

ಮಾನವ ಹಕ್ಕು ಸ್ವಾತಂತ್ರ್ಯಕ್ಕಾಗಿ ಪ್ರಚಾರಮಾಡುವುದೇ ಇವರ ಜೀವನ ಗುರಿ ಇವರ ತರ್ಕ ವಿಚಾರಸರಣಿಗಳು ಪ್ರತಿಭಾಪೂರ್ಣವಾಗಿ ಮನೋಹರವಾಗಿರುವ ಶೈಲಿಯಲ್ಲಿರುತ್ತವೆ

‘ಅಮೇರಿಕಾ’-ಇದೊಂದು ಮಹತ್ತರವಾದ ಯೋಜನೆ ಇದನ್ನು ಸ್ವಪ್ನೀಯ ಕಲ್ಪನಾ ಸೃಷ್ಟಿ ಎಂದು ಬೇಕಾದರೆ ಕರೆಯಿರಿ ಇದು ಅದಕ್ಕಿಂತಲೂ ಮಿಗಿಲಾದುದು ಏತಕ್ಕೆಂದರೆ ಈ ಮಹಾಯೋಜನೆಯು ಕಾರ್ಯತಃ ಶಕ್ಯವಿದೆಯೆಂದು ಕಂಡುಬಂದ ಭಾರಿ ಪ್ರಯೋಗ ಸಾಧನೆಯಾಗಿರುತ್ತದೆ

ಹಾಗಾದರೆ ಈ ಅಗಾಧವಾದ ಯೋಜನೆಯಾದರೂ ಯಾವುದಿರಬೇಕು? ಅದನ್ನು ಅತ್ಯಂತ ಸರಳವಾದ ಮಾತುಗಳಲ್ಲಿ ನಿರೂಪಿಸಬಹುದು. ಸ್ವಾತಂತ್ರ್ಯದಲ್ಲಿ ಅಖಂಡವಾದ ವಿಶ್ವಾಸ ಭರವಸೆಗಳನಿಟ್ಟ ಹಲವು ವಿಧದ ವ್ಯಕ್ತಿಗಳು ತೊಡಕು ತೊಂದರೆಗಳಿಂದ ತುಂಬಿದ ಇದೇ ಭೂಮಂಡಲದಲ್ಲಿ, ಇದೇ ನಭೋಮಂಡಲದ ಕೆಳಗೆ, ಸಂಯುಕ್ತ ಜನಾಂಗಿಕರಾಗಿ ಬಾಳಬಹುದೆಂಬುದೇ ಈ ಪ್ರಚಂಡವಾದ ಯೋಜನೆಯಾಗಿರುತ್ತದೆ ಸ್ವತಂತ್ರರಾಗಿ ಬಾಳಬೇಕೆಂಬ ಅತ್ಯಮೋಘ ಉದ್ದೇಶದಿಂದ ಹಲವು ದೇಶಗಳಿಂದಲೂ ವಿವಿಧ ಜನಾಂಗಗಳಿಂದಲೂ ಬಂದ ಜನರೇ ಅಮೇರಿಕಾ. ಅಮೇರಿಕಾ ಎಂಬ ಈ ಮಹಾಯೋಜನೆ— ಮಾನವ ಜೀವಿಗಳ ಸ್ವಾತಂತ್ರ್ಯದ ಪವಿತ್ರ ಯೋಜನೆ

ಅಮೇರಿಕಕ್ಕೆ ಬಂದವರೆಲ್ಲರೂ ಸ್ವಾತಂತ್ರ್ಯಾಭಿಮಾನಗಳಿದ್ದರೆಂದು ಹೇಳಬರುವುದಿಲ್ಲ ಒಂದಿಷ್ಟು ಉತ್ತಮ ತರದ ಜೀವನಕ್ಕೆ ತಾವು ಇಲ್ಲಿಗೆ ಬಂದಿದ್ದೇವೆ ಎಂದು ಮಾತ್ರ ಅವರು ತಿಳಿದಿದ್ದರು ಆದರೆ ಈ ತಿಳಿಯುವಿಕೆಯೇ ಸ್ವಾತಂತ್ರ್ಯಾಭಿಮಾನದ ಕುರುಹು ಜೀವನವನ್ನು ಉತ್ತಮಗೊಳಿಸುವುದೆಂದರೆ ಸ್ವತಂತ್ರರಾಗಿರುವುದು ತಮ್ಮನ್ನು ಉತ್ತಮಗೊಳಿಸಲಾಗದ ಸ್ವಾತಂತ್ರ್ಯವು ಸ್ವಾತಂತ್ರ್ಯವೆಂದಿಗೂ ಅಲ್ಲ ಕೆಲವರು ಮತ ಸ್ವಾತಂತ್ರ್ಯಕ್ಕೂ ಕೆಲವರು ಮಾತು ಸ್ವಾತಂತ್ರ್ಯಕ್ಕೂ ಇಲ್ಲಿಗೆ ಬಂದರು

ಮೇಲು ಕೀಳು ಎನಿಸಿರುವ, ಶಿಕ್ಷಿತ ಅಶಿಕ್ಷಿತರೆನಿಸಿದ, ಕಪ್ಪು ಬಿಳಿಯಾಗಿರುವ ಹಲವು ವಿಧದ ಜನರು ಅಪ್ರತಿಮವಾಗಿರುವ ಒಂದೇ ಸ್ವಾತಂತ್ರ್ಯಪ್ರೇಮದ ಮಹಾಕಲ್ಪನೆಯಿಂದ ಒಟ್ಟು ಸೇರಿಸಲ್ಪಟ್ಟು ಅದ್ವಿತೀಯ ಜನಾಂಗವೊಂದನ್ನು ಕಟ್ಟಲನುವಾದುದು ಇತಿಹಾಸದಲ್ಲೆಲ್ಲೂ ಕಾಣದ ಮಹಾ ಘಟನೆಯಾಗಿರುತ್ತದೆ ಪೂರ್ವಸಿದ್ಧತೆಯಿಂದ ಮಂತ್ರಾಲೋಚಿಸಿ ಇದನ್ನು ಸಂಘಟಿಸಲು ಪ್ರಯತ್ನಪಟ್ಟಿದ್ದರೆ ಅದು ಅಸಂಭವನೀಯವೇ ಇತ್ತು, ಸಾವಿರ ತೊಡಕುಗಳು ಅದನ್ನು ಎದುರಿಸುತ್ತಿದ್ದುವು. ಇಂದಿನ ಅದರ ಫಲದ ಪ್ರಾಪ್ತಿಯು ಸಂದೇಹಾಸ್ಪದವಿತ್ತು. ಆದರೆ ಸ್ವಾತಂತ್ರ್ಯಯೋಜನೆಯು ಬರೇ ಒಂದು ಕಲ್ಪನೆ ಮಾತ್ರವಲ್ಲ–ಅದಕ್ಕಿಂತಲೂ ಮಿಗಿಲಾದದು ಅದು ಮಾನವ ಜೀವಿಯ ಒಂದು ಪ್ರಾಕೃತೀಕ ಭಾವದ ಲಕ್ಷಣವಾಗಿರುತ್ತದೆ ಅವನಲ್ಲಿ ಆ ಭಾವವು ರಕ್ತ ಚಲಿಸಿದಂತೆ ಚಲನೆ ಹೊಂದುತ್ತದೆ ಹೇಗೆ, ಏಕೆ, ಎಂದು ಅವನಿಗೆ ಅದು ತಿಳಿಯುವುದಿಲ್ಲ ಅದು ಜೀವ ಭಾವದ್ದೇ ಒಂದು ಲಕ್ಷಣವಿರುತ್ತದೆ ಗರ್ಭಾವಸ್ಥೆಯಲ್ಲಿ ಬೆಳೆಯುವ ಮಗುವಿನಲೇ ಅದು ಕಾಣಬರುತ್ತದೆ ಗರ್ಭಕೋಶದ ಪ್ರಕಾರಗಳು ಅದರ ಬೆಳವಣಿಗೆಗೆ ತಡೆಯುಂಟುಮಾಡಿದಾಗಲೇ ತಾನು ಸಾಯದೆ ಜೀವಿಸಿರಬೇಕಾದರೆ ಸ್ವತಂತ್ರವಾಗಿರಬೇಕೆಂಬ ಪ್ರಾಕೃತೀಕ ಜ್ಞಾನವು ಅದಕ್ಕೆ ಉಂಟಾಗಿ ಅದು ಜನನಕ್ಕೆ ಬರಲು ಸಾಧಿಸುತ್ತದೆ ತನ್ನ ಮನೆ ಮಾತೃಪಿತೃಗಳಿಂದ ಸ್ವತಂತ್ರನಾಗಿರಲೇ ಬೇಕೆಂಬ ಜ್ಞಾನದಿಂದಲೇ ತರುಣನು ತನ್ನ ಅತ್ಯಂತ ಪ್ರೀತಿಯ ಈ ವಿಷಯಗಳನ್ನು ತ್ಯಜಿಸಲು ಸಿದ್ಧನಾಗುವುದು ತಮ್ಮ ಸರ್ವತೋಮುಖ ಬೆಳವಣಿಗೆಗೆ ತೊಡಕುಂಟುಮಾಡುವ ಯಾವ ಪ್ರೀತಿಪಾತ್ರರನ್ನಾದರೂ ತ್ಯಜಿಸಲು ಪ್ರತಿ ಸ್ತ್ರೀಪುರುಷನು ಸಿದ್ಧನಾಗಿಯೇ ಇರುವನು ನಮಗೆ ಸ್ವತಂತ್ರರಾಗಿರಲು ಬಿಡದವರನ್ನು ನಾವು ಎಂದೂ ಪ್ರೀತಿಸೆವು ವೃದ್ಧಾಪ್ಯದ ದೆಸೆಯಿಂದ ದೇಹಿಕ ಬಂಧನದಲ್ಲಿ ಬಿದ್ದು ಖತಿಗೊಂಡವರು, ಕೂಡಾ ಮೃತ್ಯುವಿಗೆ ಭಯಪಟ್ಟರೂ, ಮರಣವನ್ನು ಬಯಸುವರಾಗುವರು, ಕಾರಣ ಮರಣವಾದರೂ ಒಂದು ತರದ ಸ್ವಾತಂತ್ರ್ಯವೇ ಸರಿ.

ಆದುದರಿಂದ ಅಮೇರಿಕಕ್ಕೆ ಬಂದ ಈ ಸ್ತ್ರೀಪುರುಷರೆಲ್ಲ ಸ್ವಾತಂತ್ರ್ಯಾಭಿಮಾನದ ಭಾವಕ್ಕೆ ಆಜ್ಞಾವರ್ತಿಗಳಾಗಿಯೇ ಬಂದರು ಪರಿಶುದ್ಧವಾದ ಬೆಳಕನ್ನು ಕಾಣಬೇಕೆಂಬ ಉದ್ದೇಶ ಭಾವವು ನಮ್ಮಲ್ಲಿ ಎಷ್ಟು ಬಲವತ್ತರವಾಗಿವೆಯೋ, ಸ್ವತಂತ್ರರಾಗಿರಬೇಕೆಂಬ ಭಾವವೂ ಅಷ್ಟೇ ಉಜ್ವಲವಾಗಿರುತ್ತದೆ ಅತೀ ಪವಿತ್ರವಾದ ಈ ಅಭಿಮಾನದಿಂದಾಗಿ ಅವರು ಕ್ರೂರ ಸಾಗರವನ್ನು ದಾಟಿ, ಅತ್ಯಂತ ವಿಪತ್ತುಗಳನ್ನು ಲೆಕ್ಕಿಸದೆ ಈ ನೂತನ ಭೂಭಾಗದಲ್ಲಿ ಬಂದಿಳಿದರು ಆ ಭೂಮಿಯು ಅವರಿಗೆ ಪೂಜ್ಯವಾಯಿತು ಕಾರಣ ಆ ನಾಡು ಅವರ ತಾಯಿನಾಡಿಗಿಂತ ಸಂಪೂರ್ಣ ಬೇರೆಯೇ ಆಗಿದೆಂಬುದಕ್ಕಲ್ಲ ಆದರೆ ಅದು ಅವರ ಸ್ವಾತಂತ್ರ್ಯದಾಹವನ್ನು ತೃಪ್ತಿಕರವಾಗಿ ತಣಿಸಲು ಅನುಕೂಲವಾಯಿತು ಅಲ್ಲಿ ಅವರಿಗೆ ತಾವು ಬೆಳೆಯಬಹುದೆಂಬ ಭರವಸೆಯುಂಟಾಯಿತು

ಅಮೇರಿಕದ ಜನರು ಯುರೋಪಿನ ಜನರಂತೆ ಭಿನ್ನ ಭಿನ್ನ ಜನಾಂಗಿಕರಿರುವರು ಭಾರತ ಚೀನ ದೇಶಗಳ ಜನರಂತೆ ಅವರಿಗೆ ಪ್ರಭಾವಶಾಲಿ ಇತಿಹಾಸದ ಹಿನ್ನಲೆಯೂ ಇಲ್ಲ ಚೀನದ ಜನರಂತೆ ಅವರು ಒಂದೇ ಪ್ರತ್ಯೇಕ ಯಾವ ಜನಾಂಗ ಪರಂಪರೆಯವರೂ ಅಲ್ಲ ಅವರದು ಸ್ವತಂತ್ರರಾಗಿರಬೇಕೆಂಬ ಒಂದೇ ಒಂದು ಆಶಯವಲ್ಲದೆ ಇತರ ಪ್ರತಿ ಒಂದು ವಿಷಯದಲ್ಲೂ ಅವರು ಭಿನ್ನ ಭಿನ್ನರೇ ಆಗಿರುವರು

ಸರ್ವಸಾಮಾನ್ಯವಾದ ಈ ಸ್ವಾತಂತ್ರ್ಯ ಪ್ರೇಮವೇ ಅವ್ಯಾಹತವಾದ ಅವರ ಅಂತರಿಕ ಶಾಂತಿಯ ನೆಲೆಗಟ್ಟಾಗಿದೆ. ಅದಿಲ್ಲದಿರುತ್ತಿದ್ದರೆ ಅಮೇರಿಕವು ಇಂದು ಛಿದ್ರ ಛಿದ್ರವಾಗಿ ವಿಭಾಗಿಸಲ್ಪಟ್ಟು ಸಮರಸಜ್ಜಿತ ರಾಷ್ಟ್ರಗಳ ಒಂದು ರಣರಂಗವೇ ಆಗಿ ಮಾರ್ಪಟ್ಟು ಕೊಲೆ ಸುಲಿಗೆ ಅಶಾಂತಿಯ ನೆಲೆಯೂರಾಗಿ ಮೆರೆಯುತ್ತಿತ್ತು

ಆದುದರಿಂದ ಅಮೆರಿಕನರೆಲ್ಲರಲ್ಲೂ ಬೇರೂರಿರುವ ಈ ಐಕ್ಯ ಭಾವವು ಎಷ್ಟೊಂದು ಅಮೂಲ್ಯವಾದುದು! ಸ್ವಾತಂತ್ರ್ಯಭಾವ, ಸ್ವತಂತ್ರತೆಯಲ್ಲಿ ಆಳವಾದ ಭರವಸೆ, ವಿಶ್ವಾಸ, ಅದನ್ನು ಸುಭದ್ರವಾಗಿರಿಸಲು ಅವರು ಅದೆಷ್ಟು ಸಾಹಸ ಪಡುತ್ತಿರುವರು

ಸ್ವಾತಂತ್ರ್ಯವು ನಿರ್ಮಲವಾದ ಗಾಳಿಯಂತಿರುವ ಒಂದು ವಾತಾವರಣ ಮಾನವನ ಆತ್ಮ ಶಕ್ತಿಯು ತೊಡಕಿಲ್ಲದೆ ಬೆಳೆಯುವಂತಾಗುವ ಸಂಧರ್ಭಗಳ ಸನ್ನಿವೇಶ. ಸ್ವಾತಂತ್ರ್ಯ ಕಳಕೊಂಡ ಮಾನವನ ಆತ್ಮ ಶಕ್ತಿಯು ಕೊರಗಿ, ಕುಂದಿ, ನಿಸ್ಸಂದೇಹವಾಗಿ ನಾಶವಾಗಿ ಕಡೆಗೆ ಅವನು ತಿನ್ನುಣ್ಣುವ ಮತ್ತು ತನ್ನಂತಹದೇ ಜೀವಿಗಳನ್ನು ಒರೇ ಹುಟ್ಟಿಸುವ ಶಕ್ತಿ ಮಾತ್ರ ಇರುವ ಒಂದು ಪಶುವಾಗುವನು ಮಾನವನ ಅಗಾಧ ಶಕ್ತಿಯ ಬೆಳವಣಿಗೆಗೆ ಸ್ವಾತಂತ್ರ್ಯದ ನಿರ್ಮಲ ವಾತಾವರಣವಿರದಿದ್ದರೆ ಅವನ ಅತುಲ್ಯ ಕಲ್ಪನಾಪಾಂಡಿತ್ಯವೂ ನಿರ್ಭಯವಾದ ವಿಚಾರಶಕ್ತಿಯೂ, ತನ್ನನ್ನು ಶ್ರೇಯಸ್ಸಿಗೆ ತಲಿಸುವ ಅಜೇಯವಾದ ಸಾಹಸ ಶಕ್ತಿಯೂ ಮತ್ತು ಅವನ ತೀಕ್ಷ್ಣವಾದ ಕಲಾ ಮತ್ತು ಪರಿಶೋಧನಾ ಚಾತುರ್ಯತೆಯೂ ಎಲ್ಲವೂ ಮಣ್ಣುಪಾಲಾಗುವುದು ಖಂಡಿತ

ಮನುಷ್ಯರ ಪರಸ್ಪರ ವ್ಯಕ್ತಿತ್ವ ಪ್ರಭಾವವು ಬೆಳೆಯುವಂತಾಗಲು ಅಮೆರಿಕವು ಸೃಷ್ಟಿಸಲ್ಪಟ್ಟಿದೆ ಆ ದೇಶವು ಹಲವು ನಾಗರೀಕತೆಗಳ ಮಣ್ಣು ಒಟ್ಟು ಬೆರೆತು ಯಾವುದಾದರೂ ತರದ ಒಂದೇ ಮುದ್ದೆಯಾಗುವಂತಾಗುವ ಅಚ್ಚು ಪಡಿಯಲ್ಲ ಇಲ್ಲವೆ ಅದು ವಿವಿಧ ಸಂಸ್ಕೃತಿಗಳೆಂಬ ಲೋಹಗಳು ಕರಗಿ ಒಂದು ಮಿಶ್ರ ಧಾತುವುಂಟಾಗುವ ಕರಗು ಪಾತ್ರೆಯಲ್ಲ ಇದು ಎಂದಿಗೂ ಅಲ್ಲ ಮತ್ತೆ ಇನ್ನೇನು? ಅಮೆಕರಿವು ಸ್ವಾತಂತ್ರ್ಯ ಪ್ರೇಮಿ ಸ್ತ್ರೀಪುರುಷರು, ತಮ್ಮೆಲ್ಲರ ಅನೇಕ ಭೇಧಾಭೇಧಗಳನ್ನಿಟ್ಟು ಕೊಂಡೂ ಅವುಗಳನ್ನು ಬೆಳೆಸಿಕೊಂಡೂ ಮಾತ್ರವಲ್ಲ ಅವುಗಳಿಂದ ಒಳಿತನ್ನು ಪಡೆದು ಕೂಡಾ ಸ್ವಾತಂತ್ರ್ಯವೆಂಬ ಒಂದು ಧ್ಯೇಯದಿಂದ ಮಾತ್ರ ಆಧರಿಸಲ್ಪಟ್ಟವರಾಗಿ ಬಾಳುವವರ ಸ್ವತಂತ್ರ ರಾಷ್ಟ್ರ ಅದು ಅಮೆರಿಕಾ–ಯಾಕೆಂದರೆ ಭೇದಾಭಿಪ್ರಾಯಗಳಿರುವಲ್ಲಿ ಎಲ್ಲಿ ಹಿಂಸೆಯ ದಬ್ಬಾಳಿಕೆ ಇದೆಯೊ ಅಲ್ಲಿ ನಿಜವಾದ ಸ್ವಾತಂತ್ರ್ಯವೆಂದಿಗೂ ಇರಲಾರದು.

ಮಿತ್ರ ರಾಷ್ಟ್ರಗಳೊಡನೆ ಟರ್ಕಿಯ ಹೊಸ ಒಪ್ಪಂದ!

ನಿರೀಕ್ಷೆಯಂತೆ ಟರ್ಕಿಯು ಜರ್ಮನಿಯೊಡನೆ ರಾಜಕೀಯ ಸಂಬಂಧ ಕಡಿದು ಕೊಂಡ ಕೂಡಲೆ ಜರ್ಮನಿಯೊಡನೆ ಸಂಪೂರ್ಣ ವ್ಯಾಪಾರ ವ್ಯವಹಾರ ನಿಲ್ಲಿಸುವದೆಂದು ರಾಯಟರ ಸ್ಪೇಶಲ್ ಸುದ್ದಿಗಾರನು ತಿಳಿಸುತ್ತಾನೆ.

ಇತ್ತೀಚೆಗೆ ಆಂಗ್ಲೋ-ಅಮೇರಿಕನ್ ರಶಿಯನ್ ಹಾಗೂ ಟರ್ಕಿಯ ಪ್ರತಿನಿಧಿಗಳ ನಡುವೆ ಆದ ಮಾತುಕತೆಯ ಪರಿಣಾಮವಾಗಿ ಇದೇ ವಾರದಲ್ಲಿ ಟರ್ಕಿಯು ಜರ್ಮನಿಯೊಡನೆ ರಾಜಕೀಯ ಸಂಬಂಧ ಕಡಿದು ಕೊಳ್ಳುವದೆಂದು ನಂಬಲಾಗಿದೆ. ಅಲ್ಲದೆ ಅಡಾನಾ ಮತ್ತು ಸ್ಮಿರ್ನಾದಲ್ಲಿರುವ ಜರ್ಮನ ರಾಯಭಾರಿ ಕೇಂದ್ರವನ್ನು ಮುಚ್ಚಲಾಗುವದಂತೆ. ಮಧ್ಯ ಪೂರ್ವ ಮತ್ತು ಈಜಿಯನ್ ಸಾಗರ ಪ್ರದೇಶದ ಸುದ್ದಿ ಪಸರಿಸುವದಕ್ಕೆ ಜರ್ಮನರಿಗೆ ಇವೇ ಮುಖ್ಯ ಕೇಂದ್ರಗಳೆಂದು ಹೇಳಲಾಗಿದೆ.

ಈ ವಾರ ಜರ್ಮನಿಯೊಡನೆ ರಾಜಕೀಯ ಸಂಬಂಧ ಕಡಿದುಕೊಂಡು ಘೋಷಣೆಯನ್ನು ಜಗತ್ತಿಗೆ ಸಾರುವಾಗ ಟರ್ಕಿಯು ತನ್ನ ಮುಂದಿನ ಗುರಿಯನ್ನು ವಿವರಿಸಿ ಆಂಗ್ಲೋ—ಟರ್ಕಿಶ ಒಪ್ಪಂದದ ವ್ಯಾಪರವನ್ನು ವಿವರಿಸಬಹುದೆಂದೂ ರಶಿಯಾ ಅಮೇರಿಕೆಯೊಡನೆ ಸಂಬಂಧ ಬೆಳಸಿಕೊಳ್ಳುವ ಉದ್ದೇಶವನ್ನು ತಿಳಿಸಬಹುದೆಂದೂ ನಿರೀಕ್ಷಿಸಲಾಗಿದೆ.

ತನ್ಮಧ್ಯೆ ಜಪಾನ ಮತ್ತು ಹಂಗರಿಯ ರಾಯಭಾರಿ ಮಂಡಲಗಳೂ ಟರ್ಕಿಯಿಂದ ಹೊರಡುವ ಸಿದ್ಧತೆ ಮಾಡಿವೆ ಜರ್ಮನ ರಾಯಭಾರಿ ಮಂಡಲದವರೆಲ್ಲ ವಾನ್ ಪೇಪನನ ಆಜ್ಞೆಯ ಮೇರೆಗೆ ಅಂಕಾರಕ್ಕೆ ಈಗಾಗಲೆ ಹೊರಟಿದ್ದಾರೆ

ತಟಸ್ಥ ರಾಷ್ಟ್ರಗಳ ರಾಯಭಾರಿಗಳನ್ನ ಅಂಕಾರ ಸರಕಾರವು ರಾಜಧಾನಿಗೆ ಆಮಂತ್ರಿಸಿದ್ದು ಈ ವಾರಾಂಭದಲ್ಲಿಯೆ ಎಂ. ಸರಜೋಗ್ಲು ಇವರು ಆ ರಾಯಭಾರಿಗಳೊಡನೆ ಮಾತುಕತೆ ನಡಿಸಬಹುದೆಂದು ಹೇಳಲಾಗಿದೆ

ಕಪ್ಪುಕಡಲ ಕರಾವಳಿ ಬಂದರಗಳಾದ ವಾರ್ನಾ ಮತ್ತು ಬರ್ಗಾಸದಲ್ಲಿ ಸೋವಿಯಟ್ ರಾಯಭಾರಿ ಮಂಡಲವನ್ನು ಇಡಲಿಕ್ಕೆ ಬಲ್ಗೇರಿಯನ್ ಸರಕಾರವು ಒಪ್ಪಿದೆ. ಇಲ್ಲಿಂದ ಜರ್ಮನರು ಈ ಮೊದಲೇ ಖಾಲಿ ಮಾಡಹತ್ತಿದ್ದು ಇಷ್ಟರಲ್ಲಿಯೆ ಆ ಕೆಲಸವು ಮುಗಿದಿರಬೇಕೆಂದು ತಿಳಿದು ಬಂದಿದೆ.

ಯುದ್ಧ ಮುಂದುವರಿಸಲು ನಾಝಿಗಳ ಗುಪ್ತಸಿದ್ಧತೆ

ಜರ್ಮನಿಯಲ್ಲಿ ನಾಝಿ ಸೇನೆಯ ಕವಾಯತು

ಜರ್ಮನ ಸೇನೆ ಮತ್ತು ಜನರು ಶರಣಾಗತರಾದರೂ ಯುದ್ಧವನ್ನು ಮುಂದುವರಿಸಲು ನಾಝಿಗಳು ಅಪಾರ ಸಿದ್ಧತೆ ಮಾಡಿದಂತೆ ಕಾಣುತ್ತಿದೆಯೆಂದು ರಾಯಟರ್ ವಿಶೇಷ ಸುದ್ದಿಗಾರನು ಬರೆದಿರುವನು.

ಜರ್ಮನಿಯಲ್ಲಿ ನಾಝಿ ಸೇನೆಯ ಕವಾಯತು ವಿಶೇಷವಾಗಿ ನಡೆದಿದೆ ಅವರಲ್ಲಿ ಟ್ಯಾಂಕುಗಳೂ ತೋಫುಗಳೂ ಇವೆ ಇದಲ್ಲದೆ ಇಷ್ಟರ ವರೆಗೆ ಅಡಗಿಸಿಟ್ಟಿದ್ದ ಮದ್ದುಗುಂಡುಗಳನ್ನೂ ಜಾಣತನದಿಂದ ಕಾಪಾಡಿಕೊಂಡ ವಿಮಾನ ದಳಗಳನ್ನೂ ಅವರು ಉಪಯೋಗಿಸುತ್ತಿರುವರು ಈ ಸುದ್ದಿಯು ನಿಜವಾದರೆ ಫ್ರಾನ್ಸದಲ್ಲಿ ಜರ್ಮನರು ನಿರ್ಣಾಯಕ ಯುದ್ಧ ಮಾಡಲಿಕ್ಕಿಲ್ಲ ಏಕೆಂದರೆ ಸ್ಥಳವು ಅವರಿಗೆ ಅನಾನುಕೂಲವಿದೆ ಅಲ್ಲದೆ ಪೂರ್ವ ರಣರಂಗದ ಭಯ ಅವರಿಗಿದೆ ಆ ಕಾರಣದಿಂದ ಅವರು ಪಶ್ಚಿಮದಲ್ಲಿ ಯುದ್ಧವನ್ನು ತಪ್ಪಿಸಿಕೊಂಡು ಹಿಂದೆ ಸರಿಯುತ್ತಾ ಹೋಗಬಹುದು ಎಂದು ಅವನು ಅಭಿಪ್ರಾಯ ಪಡುತಿದ್ದಾನೆ

ಸೋತರೆ ಭಿಕ್ಷಾಪಾತ್ರೆ— ಹಿಡಿಯಬೇಕಾದೀತು

"ಪರಿಸ್ಥಿತಿಯು ಗಂಭೀರವಾಗಿಲ್ಲವೆಂದು ಹೇಳುವುದು ಮಹಾಪರಾಧವೇ ಸರಿ ನಮಗೆ ಶ್ರೇಷ್ಠ ಶಸ್ತ್ರಾಸ್ತ್ರಗಳು ಬೇಕು ಶ್ರೇಷ್ಠ ಯುದ್ಧದ ಹೋರಾಟದವ ಸೈನಿಕರೂ ಬೇಕು ಯೋಗ್ಯ ನಾಯಕತ್ವವೂ ಸೈನಿಕರಲ್ಲಿ ಉತ್ಸಾಹವೂ ಅವಶ್ಯ"ವೆಂದು ಮಿಲಿಟರಿ ತಜ್ಞರಾದ ಹ್ಯಾಂಜ್ ಲೀಬಶರರವರು ಬರೆದ ಒಂದು ಲೇಖನವನ್ನು ಜರ್ಮನ ಸೇನೆಯ ರೇಡಿಯೋ ಸಾರಿತು.

ಅವರು ಮತ್ತೂ ಬರೆದಿರುವುದೇನಂದರೆ—

"ಈಗ ಯುದ್ಧವನ್ನು ನಿಲ್ಲಿಸಿ ಮುಂದೆ ಪುನಃ ಒಮ್ಮೆ ಯುದ್ಧವನ್ನು ಆರಂಭಿಸಬಹುದೆಂದು ಕೆಲವರು ಹೇಳುತಿದ್ದಾರೆ. ಇದರಿಂದ ಹಾನಿಯಿದೆ ನಮ್ಮ ಮುಂದೆ ಎರಡೇ ದಾರಿಗಳಿವೆ ಒಂದೇ ನಾವು ವಿಜಯ ದೊರೆಯುವ ವರೆಗೆ ಹೋರಾಡಬೇಕು, ಇಲ್ಲವೇ ಸರ್ವಸ್ವವನ್ನು ಕಳೆದುಕೊಳ್ಳಬೇಕು. (ಬರಿ ನಾಝಿಗಳಷ್ಟೇ ನಾಶವಾಗುವರು ಮಾತ್ರವಲ್ಲ ಜರ್ಮನರೆಲ್ಲರ ಸರ್ವನಾಶ ಖಂಡಿತ) ಈ ಮಹಾಯುದ್ಧದಲ್ಲಿ ಗೌರವಾರ್ಹ ಶರಣಾಗತಿಗೆ ಅವಕಾಶವಿಲ್ಲ ಪ್ರಾಣ ಇರುವ ವರೆಗೆ ಯುದ್ಧಮಾಡಬೇಕಾಗಿರುವದು ಮುಂದಿನ ಕೆಲವು ವಾರಗಳಲ್ಲಿ, ತಿಂಗಳುಗಳಲ್ಲಿ ನಾವು ಸರ್ವಬಲದಿಂದ ಬಡಿದಾಡಬೇಕಾಗಿದೆ ಈಗ ನಾವು ಧೈರ್ಯಗುಂದಿದರೆ ಅವನತಿ ನಿಶ್ಚಯ ಮತ್ತು ಅನ್ನಾನ್ನಗತಿಕರಾಗಿ ಭಿಕ್ಷಾಂದೇಹಿ" ಎಂದು ಹೇಳಬೇಕಾದೀತು

ರೆಕ್ಕೆ ಬಾಂಬು ದಾಳಿಯ ಬಗ್ಗೆ ಜರ್ಮನರ ಹೊಸ ಗತ್ತು

ದಕ್ಷಿಣ ಇಂಗ್ಲಂಡದ ಮೇಲೆ ರೆಕ್ಕೆ ಬಾಂಬು ದಾಳಿ ನಡಿಸುವ ಗತ್ತನ್ನು ಈಗ ಜರ್ಮನರು ಬದಲಿಸಿ ಬೇರೆ ಬೇರೆ ಕಡೆಗಳಿಂದಲೂ ಒಂದೇ ಹೊತ್ತಿಗೆ ಗುಂಪು ಗುಂಪಾಗಿ ರೆಕ್ಕೆ ಬಾಂಬುಗಳನ್ನು ಕಳಿಸುತ್ತಿರುವರೆಂದೂ ಇದರಿಂದ ವಿಮಾನ ವಿರೋಧಕ ಹಾಗೂ ಇನ್ನಿತರ ದಾಳಿಗ ವಿರೋಧಕ ದಳಗಳಿಗೆ ವಿಶೇಷ ಕೆಲಸ ಉಂಟಾಗಿದೆಯೆಂದೂ ಆದರೂ ಶತ್ರುವಿನ ದಾಳಿಯ ಪ್ರಮಾಣವು ಹೆಚ್ಚದಂತೆ ಎಲ್ಲ ಉಪಾಯಗಳನ್ನು ಕೈಕೊಳ್ಳಲಾಗಿದೆಯೆಂದೂ ಹೇಳಲಾಗಿದೆ

ಶಸ್ತ್ರ ಚಿಕಿತ್ಸೆಯ ಮುನ್ನಡೆ

ಮೆದುಳು ಮತ್ತ ಹೃದಯ ಇವುಗಳ ಹೊರತು ಮಾನವ ದೇಹದ ಇತರ ಯಾರಕ್ಕೂ ಅಂಗಗಳ ಮೇಲೆ ಶಸ್ತ್ರ ಚಿಕಿತ್ಸೆ ಮಾಡಲು ಸಾಧ್ಯವಿದೆ ಎಂದು ತಿಳಿಯಲಾಗಿತ್ತು. ಆದರೆ ಹೃದಯದ ಮೇಲೂ ಶಸ್ತ್ರ ಚಿಕಿತ್ಸೆ ನಡೆಯಿಸಿ, ಮಾನವನನ್ನು ಪೀಡಿಸುವ ಅನೇಕ ತರದ ಹೃದಯ ವಿಕಾರಗಳನ್ನು ಗುಣಪಡಿಸಲು ಸಾಧ್ಯವಿದೆ ಎಂದು ಅಮೇರಿಕದ ಸುಪ್ರಸಿದ್ಧ ಶಸ್ತ್ರ ಚಿಕಿತ್ಸಾ ಪ್ರವೀಣರು, ಕಾರ್ಯರೂಪದಲ್ಲಿ ಖಚಿತಪಡಿಸಿರುವರು. ದಕ್ಷಿಣ ಆಫ್ರಿಕದಲ್ಲಿ ಸೈನಿಕನೊಬ್ಬನ ಹೃದಯದೊಳಗೆ ಬೋಂಬಿನ ಕಿಡಿಯೊಂದು ಸೇರಿತು. ಆದರೆ ಶಸ್ತ್ರ ಚಿಕಿತ್ಸೆಯಿಂದ ಆತನನ್ನು ಬದುಕಿಸಲಾಯಿತು

ಹೃದಯದ ಮೇಲಿನ ಶಸ್ತ್ರ ಚಿಕಿತ್ಸೆಯ ಕುರಿತು ಇವತ್ತಿಗೆ ಐದಾರು ವರುಷಗಳಿಂದ ಪರಿಶೋಧನಾ ಪರಿಶ್ರಮಗಳು ನಡೆಯುತ್ತಿದ್ದು ಈಗ ಅದು ಸಹಜ ಸಾಧ್ಯವಾದ ವಿಷಯವಾಗಿರುತ್ತದೆ

ಹೃದಯದ ಸುತ್ತಲೂ ಪೆರಿಕಾರ್ಡಿಯಮ್ ಎಂಬ ರಕ್ಷಣಾ ಹೊದಿಕೆಯು ಇರುತ್ತದೆ ಈ ಹೊದಿಕೆಯ ಅಂತರದಲ್ಲಿ ಕೆಲವು ಔನ್ಸು ರಕ್ತವು ಬಂದು ಕೂಡುವುದರಿಂದ, ಹೃದಯಕ್ಕೆ ಕಠಿಣ ತರದ ಒತ್ತಡವು ಪರಿಣಮಿಸುವುದು ಈ ಒತ್ತಡವು ತ್ವರೆಯಲ್ಲಿ ಲೋಪಗೊಳದಿದ್ದರೆ—ಮೃತ್ಯು ಖಂಡಿತ ಎದೆಯ ಗೂಡಿನ ನಾಲ್ಕನೆ ಅಂಕದ ಸಮೀಪ ತೂತುಮಾಡಿ, ವಿಶೇಷ ತರದ ಪಂಪುಗಳಿಂದ ಪೆರಿಕಾರ್ಡಿಯಮ್ಮಿನೊಳಗೆ ಸೇರಿದ ರಕ್ತವನ್ನು ಹೊರಸೆಳೆಯುವರು ಆಗ ಹೃದಯಾವಸ್ಥೆಯು ನೆಟ್ಟಗಾಗುವುದು

ರೋಗಾಣು ಸಂಬಂಧ ಉಂಟಾಗುವ ಹೃದಯ ಪೀಡೆಗಳನ್ನು ಕೂಡ ಶಸ್ತ್ರ ಚಿಕಿತ್ಸೆಯಿಂದ ಗುಣಪಡಿಸಲಾಗಿವೆ

ಮೊದಮೊದಲು, ಹೃದಯ ಶಸ್ತ್ರ ಚಿಕಿತ್ಸೆಯಿಂದ ಗುಣ ಹೊಂದುವವರ ಸಂಖ್ಯೆಯು ಅತಿ ಕಡಿಮೆಯಾಗಿದ್ದರೂ, ಈಗ ಚಿಕಿತ್ಸೆ ಮಾಡಲ್ಪಟ್ಟವರಲ್ಲ ಶೇ. ೫೦ ಮಂದಿಗಳಿಗೆ ಸಂಪೂರ್ಣ ಗುಣಲಾಭವು ದೊರಕಿರುವುದಂತೆ

ಇನ್ನು ಉಳಿದಿರುವುದು ಮಿದುಳು ಮೇಲೆ ಶಸ್ತ್ರಚಿಕಿತ್ಸೆ ಮಾತ್ರ

ನಿಮಗೆ ತಿಳಿದಿರುವುದೆ?

ನ್ಯೂಯೊರ್ಕಿನ ಜನಸಂಖ್ಯೆ ೭,೫೦೦,೦೦೦ ಇಲ್ಲಿನ ಶೇ ೭೦ ಮಂದಿಗಳು ಅನ್ಯ ದೇಶಿಗರು ಇಲ್ಲಿ ಒಂದು ಮಿಲಿಯ ಮಂದಿ ಮಕ್ಕಳು ವಿವಿಧ ಶಾಲೆಗಳಲ್ಲಿ ಶಿಕ್ಷಣ ಹೊಂದುತ್ತಿರುವರು ಗಗನ ಚುಂಬಿತ ಕಟ್ಟಡಗಳು ಇಲ್ಲಿ ಧಾರಳ ನ್ಯೂಯೋರ್ಕಿನಲ್ಲಿ ೩೪ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿವೆ ೩೦೦ ಖಾಸಗಿ ಶಾಲೆಗಳಿವೆ ಧರ್ಮಾರ್ಥ ವಿದ್ಯಾಭ್ಯಾಸ ಕೊಡುವ ೮೦೦ ಸರಕಾರೀ ಶಾಲೆಗಳಿವೆ ೭೫,೦೦೦ ಜನರು ಕೂಡಲು ಅನುಕೂಲವಿರುವ ಮಹತ್ತಾದ ಆಟದ ರಂಗವೊಂದು ನ್ಯೂಯೊರ್ಕಿನಲ್ಲಿದೆ ಅಲ್ಲಿನ ಸಾರ್ವಜನಿಕ ಪುಸ್ತಕಭಂಡಾರದಲ್ಲಿ ೧೯,೦೦೦,೦೦೦ ಪುಸ್ತಕಗಳಿವೆ.

ಅಲ್ಲಿನ, ರೊಕ್ ಫೆಲ್ಲರ್ ಸೆಂಟರ್ ಎಂಬ ಗಗನ ಚುಂಬಿತ ಕಟ್ಟಡದ ವಿವರಗಳು ಈ ಕೆಳಗಿನಂತಿದೆ ಈ ಕಟ್ಟಡದಲ್ಲಿ ೧೨ ಎಕ್ರೆ ಪ್ರದೇಶವಿದೆ ಅದರೊಳಗೆ, ವಿವಿಧ ಅಂಗಡಿಗಳು ವಸ್ತು ಸಂಗ್ರಾಲಯಗಳು, ಥಿಯೇಟರುಗಳು,—ಇತ್ಯಾದಿಗಳು ಇವೆ.

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara. (1906.

Statement of affairs as on 30th April, 1944.

LIABILITIES	Rs As Ps
1 Paid up Capital	13 68 480- 0- 0
2 Reserves	4 12 120-12- 8
3. Deposits	67 30 955- 3 4
4. Due to Bankers	7,34,366-10- 9
5 Bills for collection	6 70,379- 8- 8
6. Sundries including revenue items	7 58,745- 8- 4
Total	1,06,75,047-11- 9

ASSETS	Rs As Ps
1 Cash on hand & with bankers in Current & Fixed Deposit A/cs	19 71 808 0 1
2 Investments on (1) Govt Securities (2) Immovable properties etc	24 26 660 - 9- 9
3 Loans on Jewels & other valuable securities	33 50 167 13-3
4 Loans on personal securities & Bills purchased	20 49 197-13-10
5 Bills for collection as per contra	6 70 379- 8- 8
6. Office premises furniture etc	93 705- 0-10
7. Sundries including revenue items.	1,13 128-13- 4
Total	1,06,75,047-11- 9

ಪೋಲೆಂಡಿನಲ್ಲಿ ಕೆಂಪುಸೇನೆ

ಜಪಾನಿನ ವಿಚಾರವೇನು

ಬೊಂಬು ಸಮಯತಪ್ಪಿ ಸಿಡಿದು ಪ್ರಜಾಪ್ರಭುತ್ವದ ರಕ್ಷಣೆಯಾಯಿತು
ಜರ್ಮನಿಯಲ್ಲಿ ನಡೆದ ಒಳಸಂಚಿನ ರಹಸ್ಯ

ಹತ್ತು ವರುಷಗಳ ಹಿಂದೆ ಜರ್ಮನಿಯ ಹಿಂದಿನ ಸರಕಾರೀ ಭವನವಾದ ರೀಚ್ ಸ್ಟಾಗನ್ನು ಸುಟ್ಟು ನಾಜಿ ಪಕ್ಷವು ತನ್ನ ಅಧಿಕಾರವನ್ನು ಭದ್ರಗೊಳಿಸಿತು. ಅಂದೂ ಅನೇಕರ ದಸ್ತಗಿರಿ ನಡೆಯಿತು. ನಿರಪರಾಧಿಗಳನೇಕರು ಗಲ್ಲಿಗೇರಿಸಲ್ಪಟ್ಟರು. ಜರ್ಮನಿಯನ್ನು ಒಳಸಂಚುಗಾರರಿಂದ ರಕ್ಷಿಸುವ ನೆವದಿಂದ ನಾಜೀ ಪಕ್ಷ ಪಕ್ಷವು ಹಿಟ್ಲರನ ನಾಯಕತ್ವದಲ್ಲಿ ಅಧಿಕಾರ ವಹಿಸಿತು—ತನ್ನ ಕಾರ್ಯ ಸಾಧನೆ ಮಾಡಿತು. ಬರ ಬರುತ್ತಾ ನಾಜಿ ಪಕ್ಷವು ಬಲಗೊಂಡಿತು. ಜಗತ್ತಿನ ಎರಡನೆ ಮಹಾ ಯುದ್ಧವು ಉಂಟಾಯಿತು. ಅಂದಿನ ರೀಚ್ ಸ್ಟಾಗ ನಾಟಕದಿಂದ ಹಿಟ್ಲರನು ಪ್ರಬಲನಾದನು.

ಇಂದಿನ ಸ್ಥಿತಿ ಏನು? ಕೆಂಪುಸೇನೆಯು ಪೋಲೆಂಡಿನಲ್ಲಿ ಆಕ್ರಮಿಸಿ ಕೊಂಡದೆ. ಪಶ್ಚಿಮ ರಂಗದಲ್ಲಿ ಮಿತ್ರರು ಬಹಳ ರಭಸದಿಂದ ಮುಂದೆ ಸಾಗುತ್ತಿರುವರು. ಇಟಲಿಯಲ್ಲಿ ಜರ್ಮನರು ನೆಲಬಿಡಬೇಕಾಗಿ ಬಂದದೆ. ಹೀಗಾಗಿ ಜರ್ಮನ್ ದೇಶದಲ್ಲೆಲ್ಲಾ ಒಂದು ತರದ ಸೋಲು ಭಾವನೆಯು ಉಂಟಾಗಿ ಕಠಿಣ ಪರಿಸ್ಥಿತಿಯು ಉಂಟಾಗಿರುತ್ತದೆ. ಇಡೀ ದೇಶವೆ ಹಿಟ್ಲರನಿಗೆ ಎದುರು ನಿಲ್ಲುವ ವಾತಾವರಣವು ಅಲ್ಲಿದಾಗಿತ್ತು. ಈ ತರದ ಪರಿಸ್ಥಿತಿಯಿಂದ ತಮ್ಮನ್ನು ರಕ್ಷಿಸಿ ಕೊಳ್ಳಲು ದೇಶ ರಕ್ಷಣೆ ಕುರಿತು ಜನರಲ್ಲಿ ಹೊಸತೊಂದು ಹುರುಪನ್ನು ಉಂಟು ಮಾಡುವ ಉದ್ದೇಶದಿಂದಲೆ ನಾಜಿಗಳು ಮೊನ್ನಿನ ಒಳಸಂಚಿನ ನಾಟಕವನ್ನು ಆಡಿದಂತಿದೆ! ಬೊಂಬು ಹಿಟ್ಲರನು ಬರುವ ಎರಡು ನಿಮಿಷ ಮುಂಚಿತವಾಗಿಯೆ ಸ್ಫೋಟನವಾಯಿತು! ಯಾರೊ ಒಬ್ಬಿಬ್ಬರಿಗೆ ಗಾಯಗಳಾದವು. ಒಬ್ಬನು ಮಡಿದನು. ಹಿಟ್ಲರನ (ಮೊದಲೆ ಸಿದ್ಧಪಡಿಸಿದ) ಪ್ರಚಂಡ ಭಾಷಣವಾಯಿತು ಒಂದು ಮಹಾ ಒಳಸಂಚು ನಡೆದುದರ ವಾರ್ತೆಯು ಬಯಲಿಗೆ ತರಲಾಯಿತು. ನಿವೃತ್ತರಾದ ಸೇನಾನಿಗಳ ಮೇಲೆ ದೂರಿಡಲಾಯಿತು. ವೈರಿಗಳಿಗೂ ಇದರಲ್ಲಿ ಕೈಯಿರುವುದಾಗಿ ಗರ್ಜನೆಯು ಆಯಿತು. (ಯಾವಾಗಲೂ ಸರ್ಪಕಾವಲಿನಲ್ಲಿರುವ ನಾಜೀ ಗೆಸ್ಟೆಪೊ ಕಣ್ಣುಗಳಿಗೆ ಈ ಒಳಸಂಚು ಈ ಮೊದಲೆ ಏಕೆ ಕಾಣಿಸಲಿಲ್ಲವೊ!) ಪರಿಸ್ಥಿತಿಯು ಹತೋಟಿಯಲ್ಲಿರುವುದು ದೇಶವನ್ನು ವೈರಿಗಳಿಂದ ರಕ್ಷಿಸಲಾಯಿತು ಎಂದೂ ಸಾರಲಾಯಿತು.

ನಿಜವಾಗಿಯೂ ಹಿಟ್ಲರನು ಈ ಬಾಂಬಿಗೆ ಆಹುತಿಯಾಗುತ್ತಿದ್ದರೆ ಆದರಿಂದ ಪ್ರಜಾ ಪ್ರಭುತ್ವಕ್ಕೆ ಒಂದು ಮಹಾ ಹಾನಿಯೆ ಉಂಟಾಗುತಿತ್ತು. ಆ ಬಾಂಬು ಹಿಟ್ಲರನನ್ನೆ ಒಂದು ಮಹಾ ವೀರನನ್ನೆಯಾಗಿ ಮಾಡು ಬಿಡುತಿತ್ತು. ಅದು ಇನ್ನೊಂದು ಮಹಾ ಯುದ್ಧದ ಬೀಜವಾಗುತಿತ್ತು. ನಾಜಿ ಪ್ರಭಾವ ಇನ್ನೂ ಪ್ರಬಲವಾಗುತಿತ್ತು. ಹಿಟ್ಲರನು ಈ ತರದಲ್ಲಿ ಬೊಂಬಿಗೆ ಆಹುತಿಯಾಗತಕ್ಕವನಲ್ಲ ಆತನಿಗೆ ಕೈಸರನ ಸ್ಥಿತಿಯು ಸಲ್ಲತಕ್ಕುದಲ್ಲ ನೆಪೋಲಿಯನನಿಗೆ ಕೊನೆಗೆ ದೊರಕಿದ ಸ್ಥಿತಿಗೆ ಆತನಿಗೆ ದೊರಕತಕ್ಕುದಲ್ಲ ಆತನಿಗೆ ಮುಸಲೀನಿಗೆ ದೊರಕಿದ ಅಪಮಾನಕರ ಸ್ಥಿತಿಯು ಉಂಟಾಗತಕ್ಕುದ್ದು. ಜರ್ಮನಿಯಲ್ಲಿ ಪ್ರಜಾ ಪ್ರಭುತ್ವನವು ಬೇರೂರಬೇಕಾದರೆ ಹಿಟ್ಲರನ ನಾಶ ಮಾತ್ರವಲ್ಲದೆ ಹಿಟ್ಲರನ ನಾಜಿ ಪ್ರಭಾವವು ಸಂಪೂರ್ಣ ನಾಶವಾಗತಕ್ಕದ್ದು ಪ್ರಜಾ ಪ್ರಭುತ್ವದ ಹಿತಕ್ಕೂ ಎಂಬಂತೆ ಬೊಂಬು ಸಮಯ ತಪ್ಪಿ ಸಿಡಿಯಿತು. ಹಿಟ್ಲರನನ್ನು ರಕ್ಷಿಸಿತು ಯಾಕೆ? ಹಿಟ್ಲರನಿಗೆ ಇನ್ನೂ ದೀರ್ಘ ಆಯುಷ್ಯವನ್ನು ಕೊಟ್ಟಿತು. ಈ ದೀರ್ಘಾಯುಷ್ಯದಿಂದಲೆ ಹ್ಲಿಟರ್ ಪ್ರಭಾವವು ನಾಶ ಹೊಂದುವುದು.

ಜರ್ಮನಿಯ ಮೇಲೆ ಒತ್ತಡವು ಹೆಚ್ಚಿನ ಈ ಸಮಯದಲ್ಲಿ, ತಾನು ನಿವೃತ್ತಗೊಳಿಸಿದ ಹಿರಿಯ ಸೇನಾನಾಯಕರ ಗೌರವ ಕೆಡಿಸಿ, ಅವರನ್ನು ಸಂಪೂರ್ಣ ನಾಶಗೊಳಿಸುವುದೆ ನಾಜಿಗಳ ಮೊನ್ನಿನ ನಾಟಕದ ಉದ್ದೇಶವಿರಬಹುದು. ತಮಗೆ ಉಂಟಾದ ಈಗಿನ ವಿಷಮ ಪರಿಸ್ಥಿತಿಯ ದೆಸೆಯಿಂದ, (ಹಿಂದೆ ಗೀಣಿಲರಲ್ಲಿ ಉಂಟಾದಂತೆ) ಹಿಟ್ಲರನು ಜರ್ಮನ್ ಸೇನಾನಿ ಮಂಡಳದೊಡನೆ ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದನೆಂದು ತಿಳಿದುಬರುತ್ತದೆ. ಮುಂದೇನು? ನಾಜಿಗಳು ಅಧಿಕಾರ ತ್ಯಜಿಸಬೇಕೊ? ಅಧಿಕಾರದಲ್ಲಿರಲು ಮುಂದಿನ ಉಪಾಯವೇನು? ದೇಶವು ತಮ್ಮೊಡನೆ ಇರಬೇಕಾದರೆ ತಾವೇನು ಮಾಡಬೇಕು? ಮಾತ್ರನಾದಿನ ಮೇಲೆ ಮುಂದೊತ್ತಿ ಬರುತ್ತಿರುವ ವೈರಿಗಳನ್ನು ಎದುರುಗೊಂಡು ಜರ್ಮನರೆಲ್ಲರು ಕಾದಾಟುವಂತೆ ಮಾಡುವರೇ ಉಪಾಯ ಯಾವುದು?—ಇವುಗಳಿಗೆಲ್ಲಾ ಉತ್ತರ ಎಂಬಂತೆ, ಹಿಟ್ಲರನು ಮೊನ್ನಿನ ನಾಟಕವನ್ನು ನಡೆಯಿಸಿದನು. ಹಿರಿಯ ಸೇನಾನಾಯಕರು ಕೆಲವರು ದೇಶ ವಂಚಕರೆಂದು ಸಾರಲಾಯಿತು.

ಆದರೆ ನಾಜಿಗಳ ಪೆಟ್ಟಿಗೆ ಒಳಗಾದ ಹಿರಿಯ ಸೇನಾನಿಗಳು, ಜರ್ಮನಿಯಲ್ಲಿ ಬಹಳ ಹಿಂದಿನಿಂದ ಬೆಳೆದು ಬಂದ ಅತಿ ಮಹತ್ವದ ಮಿಲಿಟರಿ ಸಂಪ್ರದಾಯದ ತಂಡದವರು. ಈ ತಂಡದ ಪ್ರತಿಕಾರವು ಯಾವ ರೂಪ ಹೊಂದುವುದು, ಯಾವಾಗ ಬರುವುದು, ಎಂಬುದನ್ನು ನೋಡಬೇಕು.

ದ್ವಿತೀಯ ರಂಗ

ನೊರ್ಮಂಡಿಯಲ್ಲಿ ಮಿತ್ರರು ಒಂದೆರಡು ಪ್ರದೇಶಗಳನ್ನು ಹಿಡಿದು ಮುಂದೊತ್ತುತ್ತಿರುವರು. ಕೆಯಿನದಲ್ಲಿ, ಮಾತ್ರ ಮಿತ್ರರು ಸ್ವಲ್ಪ ಹಿಂದೆ ಸರಿಯಬೇಕಾಯಿತು. ಜರ್ಮನಿಯಲ್ಲಿ ಒಳಸಂಚು ಇತ್ಯಾದಿ ನಡೆದಿದ್ದರೂ ದ್ವಿತೀಯ ರಂಗದಲ್ಲಿ ರೋಮೆಲ್ಲನ ಬಲವು ಕುಂದಿದಂತೆ ಕಾಣುವುದಿಲ್ಲ. ಬಲವಾದ ಶಸ್ತ್ರಗಳಿಂದ ಕೂಡಿದ ಜರ್ಮನ್ ಸೇನೆಗಳು ಮಿತ್ರರನ್ನು ಎದುರುಗೊಳ್ಳುತ್ತಿರುವವು. ಇಕ್ಕಡೆಗಳಲ್ಲೂ ಸಮಬಲವಿದೆ ಎನ್ನಬಹುದು. ಮಿತ್ರರು ಬಹಳ ಪರಿಶ್ರಮದಿಂದ ಕಾದಾಡುತ್ತಿರುವರು. ಮಿತ್ರರನ್ನು ಯಾವತ್ತು ರೀತಿ ಹಿಂದೂಡುವುದೆ ನಾಜಿಗಳ ಉದ್ದೇಶವಾಗಿದ್ದು, ಅವರು ಯಾವತ್ತು ತರದ ಪರಿಶ್ರಮಗಳನ್ನು ವಹಿಸಲು ನಿಶ್ಚಯಿಸಿದಂತೆ ಕಾಣುತ್ತದೆ. ಜರ್ಮನರಿಗೆ ಬೇಕಾದ ಟೆಂಕ್, ಇತ್ಯಾದಿ ಯಾಂತ್ರಿಕ ಯುದ್ಧೋಪಕರಣ, ಇತ್ಯಾದಿ ಯುದ್ಧ ಸಾಮಗ್ರಿಗಳು, ದಾರಾಳವಾಗಿ ಬರುತ್ತಿವೆ. ಅಂತೆಯೇ ಮಿತ್ರರಿಗೂ ಯುದ್ಧೋಪಕರಣ ದಾರಾಳವಾಗಿ ಮುಟ್ಟುತ್ತಿವೆ. ದಿನೆ ದಿನ ದ್ವಿತೀಯ ರಂಗವು ಬೀಷಣವಾಗುತ್ತಾ ಬರುತ್ತಿದೆ.

ಮೊನ್ನಿನ ಗೊಂದಲದನಂತರ ಹಿಮ್ಲರನು (ಹಿಟ್ಲರನ ಎಡ ಕೈ) ಸರ್ವ ಸೇನೆಗಳ ಅಧಿಪತಿಯಾಗಿ ನೇಮಕಹೊಂದಿರುವನು. ನಾಜಿಗಳಿಗೆ ಉಂಟಾಗುವ ವಿರೋಧವು ಮೊನ್ನಿನ ಗಟನೆಯಿಂದ, ಬೆಳೆಯದಂತೆ ಮಾಡಲಾಗಿದೆ. ನಾಜಿಗಳೆ ಸರ್ವ ತಂತ್ರ ಸ್ವತಂತ್ರರಾಗಿರುವರು.

ಬ್ರಿಟಿಷರ ಪ್ರಧಾನ ಸಚೀವ ಚರ್ಚಿಲ್ಲರು ಮೊನ್ನೆ ವಿಮಾನದಲ್ಲಿ ದ್ವಿತೀಯ ರಂಗಕ್ಕೆ ಹಾರಿ, ಯುದ್ಧ ಚಟುವಟಿಕೆಗಳನ್ನು ಕಂಡು, ಸೈನಿಕರನ್ನು ಹುರುಪುಗೊಳಿಸಿ ಬಂದಿರುವರು.

ರಷ್ಯದ ವಿಚಾರವೇನು?

ಕೆಂಪು ಸೇನೆಯು ವೀರಾವೇಶದಿಂದ ತನ್ನ ಕಾರ್ಯವನ್ನು ನಡೆಯಿಸುತ್ತಿದೆ. ಬಾಲ್ಟಿಕ್ ತೀರದ ಪ್ರದೇಶಗಳು ಅವರ ಕೈವಶವಾಗಿ, ಬಾಲ್ಟಿಕ್ ಬಾಗಿಲು ಅವರಿಗೆ ತೆರೆದಂತಾಗಿದೆ. ಪೋಲೆಂಡು ಕೆಂಪು ಸೇನೆಯಿಂದ ಆಕ್ರಮಿಸಲ್ಪಟ್ಟು, ಅದು, ಪೋಲೆಂಡಿನ ರಾಜಧಾನಿ ವಾರ್ಸೋವಿನ ತೀರ ಸಮೀಪ ಬಂದಿರುವುದು. ಈ ಎಲ್ಲಾ ಪ್ರದೇಶಗಳಲ್ಲಿ ಜರ್ಮನರು ಹಿಂದೆ ಸರಿದಿರುವರು. ಕೆಂಪು ಸೇನೆಯನ್ನು ತಡೆದು ಹಿಡಿಯುವ ಕೆಲಸದಲ್ಲಿ ಜರ್ಮನರಿಗೆ ಯಶಸ್ಸು ದೊರಕಿದಂತೆ ಕಾಣುವುದಿಲ್ಲ. ಕೆಂಪು ಸೇನೆಯು ಎಲ್ಲಿಯ ತನಕ ಧಾವಿಸುವುದು? ಎಂಬುದರ ಕುರಿತು ಕೂತೂಹಲವು ಉಂಟಾಗಿದೆ. ರಷ್ಯವು ಪೋಲೆಂಡಿನಲ್ಲಿ ಕಾಲಿಟ್ಟಂದಿನಿಂದ, ಹೊಸತೊಂದು ಸಮಸ್ಯೆಯು ತಲೆದೋರಿರುವುದು. ಪೋಲೆಂಡಿನ ಸರಕಾರವೊಂದು ಲಂಡನ್ ನಗರದಲ್ಲಿರುವುದು. ಹಾಗೆ ಮೊಸ್ಕೋವಿನಲ್ಲಿ ಸ್ಟೆಲಿನಿನ ಆಚಾರ್ಯತ್ವದಲ್ಲಿ ಮತ್ತೊಂದು ಪೋಲೆಂಡ್ ಸರಕಾರದ ರಚನೆಯಾಗಿರುವುದು. ಲಂಡನಿನಲ್ಲಿರುವ ಪೋಲೆಂಡ್ ಸರಕಾರವನ್ನು ಲಕ್ಷಿಸಬೇಕಾಗಿ, ಬ್ರಿಟಿಷರ ವಾದ. ತನ್ನ ಬಳಿಯಿರುವ ಪೋಲೆಂಡ್ ಸರಕಾರವನ್ನೆ ತಾನು ಮನ್ನಿಸುವೆನು ಎಂದು ಸ್ಟೆಲಿನಿನ ತರ್ಕ. ಈ ಸಮಸ್ಯೆ ಬೆಳೆದು, ಮುಂದೆ ತಿಕ್ಕಾಟಕ್ಕೆ ಕಾರಣವಾಗುವುದೋ? ಎಂಬುದಾಗಿ ಕೆಲವೆಡೆಗಳಲ್ಲಿ ಊಹಾಪೋಹೆಗಳುಂಟಾಗಿವೆ.

ಶಾಂತಸಾಗರದಲ್ಲಿ.

ಅಮೇರಿಕನ್ ನೌಕಾಬಲವು ಅನೇಕ ವಿಜಯಗಳನ್ನು ಹೊಂದುತ್ತಿವೆ. ಮಧ್ಯ ಶಾಂತಸಾಗರದಲ್ಲಿರುವ ಕೆಲವು ಈ ಮೊದಲು ಜಪಾನಿಯರು ಆಕ್ರಮಿಸಿದುವನ್ನು ಒಂದೊಂದು, ಮಿತ್ರರ ಕೈವಶವಾಗುತ್ತಿವೆ. ಶಾಂತಸಾಗರದಲ್ಲಿ ಅಮೇರಿಕದವರ ಜಿಬ್ರಾಲ್ಟರ್ ಎಂಬಂತಿರುವ ಗ್ವಾಮದ್ವಿಪವು ಅಮೇರಿಕನರ ವಶವಾಗಿರುವುದು. ಜಪಾನಿಗೆ ತೀರ ಸಮೀಪವಿರುವ ದ್ವಿಪಗಳನ್ನು ಆಕ್ರಮಿಸಿ, ಜಪಾನಿನ ಮೇಲೆ ವಿಮಾನದಾಳಿ ನಡೆಯಿಸುವುದೆ ಅಮೇರಿಕನರ ಮುಖ್ಯ ಉದ್ದೇಶವಾಗಿರುತ್ತದೆ. ಈ ಉದ್ದೇಶ ಸಾಧನೆಯ ಮಾರ್ಗದಲ್ಲಿ ಅಮೇರಿಕನರು ಮುಂದೆ ಸಾಗುತ್ತಿರುವರು. ಇದರಿಂದ ಜಪಾನಿನಲ್ಲಿ ಗಲಿಬಿಲಿಯು ಉಂಟಾಗಿರುತ್ತದೆ.

ವಿಮಾನ ದಾಳಿಯ ಸಂಭವದಲ್ಲಿ ಜಪಾನೀಯ ನಾಗರೀಕರಿಗೆ ಅಪಾರ ನಷ್ಟವಾಗದಿದ್ದರೂ, ಯುದ್ಧಸನ್ನಹಿತ ಕೈಗಾರಿಕೆಗಳ ಮೇಲೆ ಹಲ್ಲೆಯಾಗಿ, ಅವುಗಳ ಲಯವಾದರೆ ಆಗ ಅವುಗಳನ್ನು ಪುನರಚಿಸುವ ಕಾರ್ಯವು ಅವರಿಗೆ ಕಷ್ಟಕರದ್ದಾಗುವುದು. ಕಾರಣ, ಜಪಾನಿನಲ್ಲಿ ಕಾಗದಮನೆಗಳೆ ಹೆಚ್ಚಾಗಿ ರೂಡಿಯಲ್ಲಿರುವುದರಿಂದ, ಜಪಾನೀಯ ನಗರಗಳನ್ನು ಧ್ವಂಸಪಡಿಸುವುದರಿಂದ, ಪರಿಣಾಮ ದೊಡ್ಡದಾಗದು. ಆದರೆ ಜಪಾನೀಯ ಯುದ್ಧ ಸನ್ನಾಹಿತ ಕಾರ್ಖಾನೆಗಳು ರಚನೆಯಾದುದು ವಿದೇಶಿಯರ ಯಂತ್ರಗಳಿಂದ-ಈಗ ಅವುಗಳ ನಾಶವಾದರೆ, ನೂತನ ಯಂತ್ರಗಳು ಅವರಿಗೆ ಎಲ್ಲಿಂದ ಬರಬೇಕು?

ಆದರೆ ಒಂದು ಮಾತಿದೆ. ಜಪಾನೀಯರು ಶ್ರಮ ಜೀವಿಗಳು, ಅವರ ಜೀವನವು ಅತಿ ಸರಳವಾದುದು. ಯಾವತ್ತೂ ಕಷ್ಟಪರಂಪರೆಗಳನ್ನು ಅನುಭವಿಸಲು ಅವರು ಹಿಂಜರಿಯುವುದಿಲ್ಲ. ಸ್ವದೇಶ ರಕ್ಷಣೆಯ ಎದುರು, ಅವರಿಗೆ ಜೀವದ ಮೌಲ್ಯವಿಲ್ಲ. ಜಪಾನೀಯರ ಈ ಗುಣಗಳಿಂದ ಅವರನ್ನು ಸಂಪೂರ್ಣ ಸದೆಬಡೆಯಲು ದೀರ್ಘ ಸಮಯಬೇಕಾಗುವುದೆಂದು ನಿರೀಕ್ಷೆಯಿದೆ.

38 ವರ್ಷಗಳ ಹಿರಿತನ

1906ನೇ ಇಸವಿ ಜುಲೈ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕು ಇಂದಿಗೆ 38 ವರ್ಷ ವಯಸ್ಸು ಹೊಂದಿದೆ. ನಾವು 38 ವರ್ಷ ವಯಸ್ಸಿನವರೆಂಬುದೇ ನೀವು ನಮ್ಮೊಡನೆ ವಹಿವಾಟು ನಡೆಸಲು ಸಾಕಾದ ಕಾರಣವಾಗಲಾರದು.

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ. ಎರಡು ಮಹಾ ಯುದ್ಧಗಳು—ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು—ಈ ಮೊದಲೂ ಆಗದ ಬ್ಯಾಂಗಳ ಸಂಧಿಗ್ದಾವಸ್ಥೆ—ಶೆರು ಮಾರ್ಕೆಟುಗಳ ಕಂಗಾಲಾವಸ್ಥೆ—ಇತ್ಯಾದಿ:

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದೆ ಪಾರಾಗಿರುವದಾದರೆ—ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮತ್ತೂ ಬೆಳೆಸಿರುವದಾದರೆ—ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದು.

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುದಲ್ಲಿ ನಮ್ಮ ಶ್ರೇಷ್ಠತನದಿಂದ ನಾವು ಹಿರಿಯರಾಗಿದ್ದೇವೆ.

ಸ್ಥಾಪಿತ: 1906

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಸ್ವದೇಶಾಭಿಮಾನಿ

ತಾರೀಖು 4-8-1944

ಅಮೆರಿ ಅಲ್ಲಗಳೆದರು

ಗಾಂಧೀಜಿಯವರು ಇತ್ತೀಚಿಗೆ ಹೊರಡಿಸಿದ ಸೂಚನೆಗಳು ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಸಹಕಾರಿಯಾದೀತೆಂದೂ ಬ್ರಿಟನು ಈ ಸಂದರ್ಭದಲ್ಲಿ ಮಹಾತ್ಮರು ನೀಡಿದ ಸ್ನೇಹ ಹಸ್ತವನ್ನು ಹಿಂದೂಡುವ ಪ್ರಮಾದ ಮಾಡಬಾರದೆಂದೂ ದೇಶ ವಿದೇಶಗಳಲ್ಲಿ ಪ್ರಮುಖ ರಾಜಕೀಯ ತಜ್ಞರಲ್ಲಿ ಕಳೆದ ಒಂದು ವಾರದಿಂದ ಮಾತು ಕತೆಗಳಾಗುತ್ತಿವೆ. ಇದೇ ಸಂದರ್ಭದಲ್ಲಿ ಪಾರ್ಲಿಮೆಂಟ್ ಸಭೆಯು ಕೂಡಿದೆ. ಭಾರತದ ಪರಿಸ್ಥಿತಿಯ ಕುರಿತು ಲಾರ್ಡ್ಸ್ ಮತ್ತು ಕಾಮನ್ಸ್ ಸಭೆಗಳಲ್ಲಿ ಚರ್ಚೆಗಳಾಗಿ ಅರ್ಲ್ ಮನಸ್ಸರರು ಮತ್ತು ಅಮೆರಿಯವರು ಅದಕ್ಕೆ ಉತ್ತರವಿತ್ತಿದ್ದಾರೆ. ಮಹಾತ್ಮರ ಸೂಚನೆಗಳನ್ನು ಅವರು ಅಲ್ಲಗಳೆದಿದ್ದಾರೆ. ಗಾಂಧೀಜಿಯವರ ಸೂಚನೆಗಳನ್ನು ಅನುಸರಿಸಿ ಬ್ರಿಟನು ಸಂಧಾನ ಮಾತು ಕತೆಗೆ ತೊಡಗುವುದಿಲ್ಲವೆಂದೂ ಇಂದು ಅವರು ಹೇಳಿದ ತಿರಸ್ಕಾರ ಮಾತುಗಳಿಂದ ನಿಶ್ಚಿತವಾಗಿದೆ. ಅಮೆರಿಯವರು ಹಿಂದಿನದೇ ರಾಗದಲ್ಲಿ ಅದೇ ಧಾಟಿಯಲ್ಲಿ ಮಾತನಾಡುತ್ತಾ ಸಂಧಾನದ ಬಾಗಿಲನ್ನು ಭದ್ರವಾಗಿ ಮುಚ್ಚಿ ಬಿಟ್ಟಿದ್ದಾರೆ.

ಗಾಂಧೀಜಿಯವರಿತ್ತ ಸೂಚನೆಗಳು ವೇವಲರೊಡನೆಯಾಗಲಿ ಸ್ಥಾನಬದ್ಧರಾಗಿರುವ ಮುಖಂಡರೊಡನೆಯಾಗಲಿ ಮಾತುಕತೆ ನಡೆಸಲು ಆಸ್ಪದ ಕೊಡುವಷ್ಟು ಪ್ರಯೋಜನವುಳ್ಳವಾಗಿಲ್ಲ ಎಂಬುದಾಗಿ ಅಮೆರಿ ಹೇಳಿದರು. ಅಮೆರಿಯವರ ಅಭಿಪ್ರಾಯದಲ್ಲಿ ಗಾಂಧೀಜಿ ಮಾಡುವ ತಪ್ಪೆಂದರೆ ಈಗಿನ ತಾತ್ಕಾಲಿನ ಸರಕಾರಕ್ಕೆ ಭಾರತದ ಸ್ವಾತಂತ್ರ್ಯ ಕೊಡಬೇಕೆಂದೂ ಆ ಸಂದರ್ಭದಲ್ಲಿ ವೈಸರಾಯರಿಗೆ ಸೈನಿಕ ಚಟುವಟಿಕೆಗಳಲ್ಲಿ ಮಾತ್ರ ವಿಶೇಷಾಧಿಕಾರವಿರಬೇಕೆಂದೂ ಅನ್ನುವುದು. ವೈಸರಾಯರಿಗೆ ಇರುವ ವಿಶೇಷಾಧಿಕಾರವು ಬೇರೆ ಬೇರೆ ಅಧಿಕಾರಾಂಗಗಳನ್ನು ಸರಿಯಾಗಿ ನಡೆಸಲು, ಅಲ್ಪ ಸಂಖ್ಯಾಕರ ಹಿತ ಸಂರಕ್ಷಿಸಲು ಅಗತ್ಯವೆಂದು ಅಮೆರಿ ವಾದಿಸುತ್ತಾರೆ. "ಇದರಲ್ಲಿ ಏನು ವಿಶೇಷವಿದೆ? ಕ್ರಿಪ್ಸ್ ಸಂಧಾನವನ್ನು ಹಾಳು ಮಾಡಲು ೧೯೪೨ರಲ್ಲಿಯೂ ಗಾಂಧಿ ಇದೇ ದೋರಣೆ ವಹಿಸಲಿಲ್ಲವೆ?" ಎಂದು ಅಮೆರಿಯವರು ಕೇಳುತ್ತಾ, ಗಾಂಧಿ ಈಗ ರಕ್ಷಣೆಯ ವೆಚ್ಚ ಭಾರತ ವಹಿಸಲಾರದೆಂದು ಹೇಳಿ ಪರಿಸ್ಥಿತಿಯನ್ನು ಅಂದಿಗಿಂತಲೂ ಇಂದು ಹಾಳು ಮಾಡಿದ್ದಾರೆ ಎಂಬ ಅಭಿಪ್ರಾಯ ಪಟ್ಟಿರುವರು.

ಹೀಗಾಗಿ ಮಹಾತ್ಮರು ಮುಂದೆ ಮಾಡಿದ ರಚನಾತ್ಮಕ ಸೂಚನೆಗಳಲ್ಲಿ ಅಮೆರಿಯವರಿಗೆ ಸಂಧಾನದ ಚಿಹ್ನೆಯೇ ನೂ ತೋರದಿದೆ. ಹಾಗಾಗಿ ಬ್ರಿಟನು ಇನ್ನೂ ಭಾರತದ ಕುರಿತು ದೀರ್ಘ ನಿದ್ರೆ ಮಾಡಬಹುದೆಂದು ಅಮೆರಿಯವರು ಮಾತು ಮಾಡುವರು. ಈಗಿನ್ನೂ ಬ್ರಿಟನ್ ಹೇಳಿದ ಹಾಗೆ ಹೇಳಿದ ಭಾರತದ ಬಿಕ್ಕಟ್ಟು ಬಗೆಹರಿಸಲು ಏನೇನೂ ಮುಂದೆ ಬದಲಾಗುವುದಿಲ್ಲವೆಂಬ ಸ್ಪಷ್ಟ ಅಭಿಪ್ರಾಯದಲ್ಲಿ ಈಗಲೂ ಅಮೆರಿಯವರು ಒಂದಂಶವನ್ನು ಬದಲಾವಣೆಯಾದದನ್ನು ತಿಳಿಸಲಿಲ್ಲ. ಹಾಗಾಗಿ ಅಮೆರಿಯವರು ಕೊನೆಗೆ ಬ್ರಿಟನು ಒಪ್ಪುವ ರೀತಿಯ ಒಂದು ಸೂಚನೆ ಮುಂದೆ ಬಂದೀತು ಎಂಬ ಒಂದು ಅಸ್ಪಷ್ಟ ಹಾಗೂ ಅಲಕ್ಷ್ಯ ರೀತಿಯ ಮಾತು ಹೇಳಿ ಯಾರು ಸಮಾಧಾನಗೊಳ್ಳದಿದ್ದರೂ ತಾನು ಸಮಾಧಾನ ಗೊಂಡಂತೆಯೂ ಬ್ರಿಟಿಷ್ ಸರಕಾರ ಸಮಾಧಾನ ಗೊಂಡಿರುವಂತೆಯೂ ನಮಗೆ ತಿಳಿಸಿದ್ದಾರೆ.

"ಭಾರತದ ರಕ್ಷಣೆಯ ಭಾರವನ್ನು ಭಾರತ ವಹಿಸಲಾರದು" ಎಂದು ಗಾಂಧೀಜಿ ಹೇಳಿದರೆಂಬುದಾಗಿ ಅಮೆರಿ ಹೇಳಿದ್ದಾರೆ. ಗಾಂಧೀಜಿ ಹೇಳಿದ್ದು "ಮಿತ್ರರು ಜಪಾನನ್ನು ಸೋಲಿಸಲು ಭಾರತವನ್ನು ಕ್ಷೇತ್ರವಾಗಿ ಉಪಯೋಗಿಸಿ ಹೋರಾಡುತ್ತಿರುವಲ್ಲಿ ಹಾಗೆ ಅವರನ್ನು ಮಾಡಲು ನಾವು ಬಿಡುವೆವು. ಆದರೆ ಅವರ ವೆಚ್ಚವನ್ನು ಭಾರತ ವಹಿಸಲಾರದು" ಎಂದು ಇದರಿಂದ ಭಾರತವು ನ್ಯಾಯವಾದ ತನ್ನ ರಕ್ಷಣಾ ವೆಚ್ಚವನ್ನು ವಹಿಸಿಕೊಳ್ಳುವುದಿಲ್ಲವೆಂದು ಅರ್ಥವಾಗುವುದಿಲ್ಲ. ಆದರೆ ಜಪಾನನ್ನು ಗೆಲ್ಲಲು ಅಮೆರಿಕ ಭಾರತದಲ್ಲಿ ಸೈನ್ಯವಿಟ್ಟರೆ ಆ ಸೈನ್ಯವನ್ನು ಇರಗೊಡುವುದು ಸಾಲದೆ ವೆಚ್ಚವನ್ನೂ ವಹಿಸಬೇಕೆನ್ನುವುದನ್ನು ಗಾಂಧೀಜಿ ಒಪ್ಪಲಾರರು. ಹಾಗೆ ಮಾಡಿದ ಭಾರತವನ್ನು ಸಾಲಕ್ಕೆ ಗುರಿ ಮಾಡುವುದು ಅವರಿಗೆ ಇಷ್ಟವಿಲ್ಲವೆಂಬುದು ಅವರ ಮಾತಿನಿಂದ ಸ್ಪಷ್ಟವಾಗುತ್ತದೆ.

ವೈಸರಾಯರ ವಿಶೇಷಾಧಿಕಾರದ ಕುರಿತು ಅಮೆರಿ ವಾದಿಸುತ್ತಾರೆ. ರಾಷ್ಟ್ರೀಯ ಸರಕಾರವಾದ ಕೂಡಲೇ ವಿಶೇಷಾಧಿಕಾರ ವೈಸರಾಯರಿಗೆ ಉಪಯೋಗಿಸಬೇಕಾದೀತೆಂದು ಅಮೆರಿ ಸಂಶಯಪಡುವುದೇಕೆ? ವಿಶೇಷಾಧಿಕಾರವೆಂಬುದು 'ಹೆಚ್ಚಾಗಿ ಉಪಯೋಗಿಸಲ್ಪಡದ ಅಧಿಕಾರ' ರಾಷ್ಟ್ರೀಯ ಸರಕಾರವಾದ ಕೂಡಲೆ ಹಾಗೆ ಉಪಯೋಗಿಸಲ್ಪಡದ ಅಧಿಕಾರವೂ ಉಪಯೋಗಿಸಲ್ಪಡಬೇಕಾದೀತೆಂದು ಅಮೆರಿ ತಿಳಕೊಂಡಿರುವುದು ಇದು ಬಿಕ್ಕಟ್ಟನ್ನು ಬಗೆಹರಿಸಬೇಕೆಂದೂ ಭಾರತದ ಸ್ವಾತಂತ್ರ್ಯ ಕೊಡಬೇಕೆಂದೂ ಇಚ್ಛಿಸಿರುವ ಭಾವನೆಯ ಮಾತಲ್ಲವೆಂದು ಹೇಳಬೇಕಾಗುತ್ತದೆ. ಲಾರ್ಡ್, ಕಾಮನ್ಸ್ ಸಭಾ ಮಂದಿರದಲ್ಲಿ ಅನೇಕ ಸದಸ್ಯರು ಭಾರತದ ಬಿಕ್ಕಟ್ಟು ಬಗೆಹರಿಸಬೇಕೆಂದು ಕಳಕಳಿಯಿಂದ ಕೇಳಿ ಕೊಂಡರೂ ಅಮೆರಿ ಹಾಡಿದ್ದನ್ನೆ ಹಾಡುವುದನ್ನು ನೋಡಿದರೆ ತುಂಬಾ ವ್ಯಸನವಾಗುತ್ತದೆ.

ಅಮೃತಸರದಲ್ಲಿರುವ ಪಂಜಾಬ ಸೀಖರ ಪ್ರಮುಖ ಸಂಸ್ಥೆಯಾದ ಶಿರೋಮಣಿ ಆಕಾಲಿದಳದ ಅಧ್ಯಕ್ಷರು ರಾಜಾಜಿಯವರ ಯೋಜನೆಯನ್ನು ನಿಷೇಧಿಸಿ ಅಮೆರಿಯವರಿಗೂ ಗಾಂಧೀಜಿಗೂ ತಂತಿ ಕಳಿಸಿರುವರು. ಅಸಂಖ್ಯಾತ ಸೀಖರನ್ನು ಪಾಕಿಸ್ಥಾನಕ್ಕೆ ಒಳಪಡಿಸುವುದರಿಂದ ರಾಜಾಜಿಯ ಬಿಕ್ಕಟ್ಟು ಬಿಡಿಸುವ ಸೂಚನೆಗೆ ಅವರ ಆಕ್ಷೇಪ.

ಹಿಂದುಸ್ಥಾನ

ಜೂನು ತಿಂಗಳಲ್ಲಿ ಮುಂಬಾಯಿಯಲ್ಲಿ ೨೫ ಜವಳಿ ವರ್ತಕರ ಲೈಸನ್ಸುಗಳು ರದ್ದಾಗಿವೆ, ೧೦ ವರ್ತಕರ ಖಟ್ಲೆ ನಿಕಾಲೆಯಾಗುವ ವರೆಗೆ ರದ್ದಾಗಿವೆ.

* * *

ಅಹಮದಾಬಾದ್ ನಗರ ಕಂದಾಯಾಧಿಕಾರಿಗಳು ಗಾಂಧೀಜಿಯ ನವಜೀವನ ಕಚೇರಿಯನ್ನು ಮುತ್ತಿ ಕಂದಾಯ ಬಾಕಿಯ ಬಗ್ಗೆ ಹಣದ ಪೆಟ್ಟಿಗೆ ವಶಮಾಡಿಕೊಂಡು ರೂ. ೬೨-೨-೬ ಜಪ್ತು ಮಾಡಿಕೊಂಡು ಹೋದರು.

* * *

ಕಸ್ತೂರ್‌ಬಾ ಸ್ಮಾರಕ ನಿಧಿಗೆ ಜುಲೈ ೧೫ನೇ ತಾರೀಖಿನ ವರೆಗೆ ಕೂಡಿದ ಒಟ್ಟು ಹಣ ರೂ. ೨೪,೩೦,೮೫೯-೯-೩. ಇನ್ನು ೧,೯೧,೬೦೦ ರೂಪಾಯಿಗಳ ವಾಗ್ದಾನ ದೊರೆತಿದೆ.

* * *

ದಿಲ್ಲಿ-ಲಂಡನ್‌ಗಳ ನಡುವೆ ಶೀಘ್ರವೇ ವಾಯರ್‌ಲೆಸ್ ಸರ್ವಿಸ್ ಪ್ರಾರಂಭವಾಗಲಿದೆ. ಆ ಬಗ್ಗೆ ಕೇಂದ್ರ ಟೆಲಿಗ್ರಾಫ್ ಆಫೀಸದಲ್ಲಿ ಈಗಾಗಲೆ ಅವಶ್ಯಕ ಉಪಕರಣಗಳ ಸ್ಥಾಪನೆ ಆರಂಭವಾಗಿದೆ. ಮುಂಬಾಯಿ ನ್ಯೂಯಾರ್ಕ್‌ಗಳ ನಡುವೆ ನೇರವಾದ ವಾಯರ್‌ಲೆಸ್ ಆರಂಭಿಸುವ ಪ್ರಯೋಗವೂ ನಡೆದಿದೆ.

* * *

ಇಂಡಿಯಾ ಸರಕಾರದ ಸಿವಿಲ್ ಆಡಳಿತೆಯಲ್ಲಿ ನೌಕರರ ಕೊರತೆಯಾಗಿರುವದರಿಂದ ಸೈನ್ಯ ಖಾತೆಯಿಂದ ಕೆಲವರನ್ನು ಕಡಕೊಡಲು ನಿರ್ಣಯಿಸಲಾಗಿದೆ.

* * *

ಸಿಂಧ ಮಂತ್ರಿಗಳಲ್ಲೊಬ್ಬರು ೭೦ ಸಾವಿರ ರೂಪಾಯಿ ಲಂಚ ತಿಂದದ್ದನ್ನು ನ್ಯಾಯಸ್ಥಾನದಲ್ಲಿ ಸಿದ್ಧ ಮಾಡಲು ಸಿದ್ಧರಾದವರಿಗೆ ಅಭಯ ಕೊಡಲು ಮುಖ್ಯ ಮಂತ್ರಿಗಳು ನಿರಾಕರಿಸಿದರು. ಈ ಬಗೆ ಶೇಖ ಅಬ್ದುಲ ಮಜೀದರು ಮಂಡಿಸಿದ ನಿಲುವಳಿ ಸೂಚನೆ ನಿಯಮಬಾಹ್ಯವಾಯಿತು.

* * *

ಮಹಾತ್ಮಾ ಗಾಂಧಿಯವರು ಪಂಚಗಣಿಯಿಂದ ವಾರ್ಧಾಕ್ಕೆ ತೆರಳಿರುವರು.

* * *

ಡಾ। ಶ್ಯಾಮಪ್ರಸಾದ ಮುಖರ್ಜಿಯವರು ಹಿಂದೂ ಮಹಾಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

* * *

ಡೆಮೋಕ್ರಾಟಿಕ್ ಸ್ವರಾಜ್ಯ ಪಕ್ಷದ ಸಭೆಯೊಂದು ಪೂಣೆಯಲ್ಲಿ ಜರಗಿ, ಗಾಂಧೀಜಿಯವರ ಯೋಜನೆಯು ಚರ್ಚೆಯಾಗಿ, ಅದರಲ್ಲಿ ಅನೇಕ ದೋಷಗಳಿವೆಯಾಗಿಯೂ, ಹಿಂದೆ ಕ್ರಿಪ್ಸರು ನಿರಾಕರಿಸಿದುದನ್ನು ಈಗ ಗಾಂಧೀಜೀಯವರು ಬೇಡುತ್ತಿದ್ದಾರೆಂದೂ, ಪಾಕಿಸ್ತಾನದಿಂದ ಹಿಂದೂದೇಶದ ವಿಚ್ಛೇದವಾಗುತ್ತದೆಂದೂ, ಮೊದಲಾದ ಅಭಿಪ್ರಾಯಪಟ್ಟು ಅದು ಕಾಂಗ್ರೆಸ್ಸಿನಿಂದ ದೂರವಿಲ್ಲುವುದಾಗಿ ಅಭಿಪ್ರಾಯಪಡಲಾಯಿತು.

* * *

ಕೇಂದ್ರ ಸರಕಾರದವರು, ಇನ್ನು ರಲ್ಲಿಯೇ ಕಬ್ಬಿಣ ಮತ್ತು ಉಕ್ಕು ಈ ಲೋಹಗಳನ್ನು ನಿಯಂತ್ರಿಸಲಿರುವರು.

ಬಿಕಾನೇರ ಮಹಾರಾಜರು ಸಂಸ್ಥಾನದ ಅಭಿವೃದ್ಧಿಗಾಗಿ ೨ ಕೋಟಿ ರೂ. ಗಳನ್ನು ತೆಗೆದಿಟ್ಟಿದ್ದಾರೆ.

* * *

ಪಂಜಾಬ ಕಸ್ತೂರಬಾ ಸ್ಮಾರಕ ನಿಧಿಗೆ ಇದುವರೆಗೆ ೫೭,೦೦೦ ರೂ.ಗಳು ಕೂಡಿವೆ.

* * *

ಅಹಮ್ಮದಾಬಾದದಲ್ಲಿ ಶ್ರೀ. ಎಸ್. ಎ. ಬ್ರೆಳವಿಯವರ ಅಧ್ಯಕ್ಷತೆಯಲ್ಲಿ ಸೋಮವಾರ ಕೂಡಿದ ಸಭೆಯಲ್ಲಿ ಯುದ್ಧಾಂತ್ಯದ ವರೆಗೆ ವಸತಿ ಗೃಹಗಳನ್ನು ಪೂರೈಸುವ ವ್ಯವಸ್ಥೆಯನ್ನು ಸರಕಾರದವರು ಮಾಡಬೇಕೆಂದು ಪ್ರತಿಪಾದಿಸಲಾಯಿತು.

* * *

ಮುಸ್ಲಿಮರು ಹಿಂದೂ ಮಹಿಳೆಯೊಬ್ಬಳನ್ನು ಅಪಹರಿಸಿಕೊಂಡು ಹೋಗುತ್ತಿದ್ದಾಗ ಪಂಜಾಬದ ಗುರುಗ್ರಾಂ ತಾಲೂಕಿನ ಭದ್ರಕ ನಗರವೆಂಬ ಹಳ್ಳಿಯಲ್ಲಿ ಹಿಂದೂ-ಮುಸ್ಲಿಮರ ಬಡಿದಾಟವಾಗಿ ೭ ಜನರು ಸತ್ತಿದ್ದಾರೆ.

* * *

ಕಾಂಗ್ರೆಸ್-ಮುಸ್ಲಿಂ ಲೀಗ್

ಮುಸ್ಲಿಂ ಲೀಗಿನ ಕಾರ್ಯಕಾರಿ ಮಂಡಳದ ಸಭೆಯೊಂದು ಕಳೆದವಾರ ಜರಗಿತು. ರಾಜಾಜಿಯವರ ಸೂಚನೆ, ಗಾಂಧಿಜೀಯವರ ಯೋಜನೆ, ಕಾಂಗ್ರೆಸ್-ಮುಸ್ಲಿಂ ಲೀಗ್ ಐಕ್ಯ ಮೊದಲಾದ ಸದ್ಯದ ರಾಜಕೀಯಕ್ಕೆ ಸಂಬಂಧಪಟ್ಟ ವಿಚಾರಗಳ ಆಲೋಚಿಸಲಾಯಿತು. ಬಾ। ಜಿನ್ನಾರು, ಗಾಂಧಿಜೀ ಯೋಜನೆ ಹಾಗೂ ರಾಜಾಜಿಯವರ ಸೂಚನೆಗಳ ಕುರಿತು ಸಮಾಧಾನ ಹೊಂದಿದಂತೆ ಕಾಣುವುದಿಲ್ಲ. ಆದರೆ, ಗಾಂಧಿ-ಜಿನ್ನಾ ಭೇಟಿಯೊಂದು ನಡೆಯಬೇಕೆಂದಾಗಿದೆ. ಈ ಭೇಟಿಯು ಯಶಸ್ವಿಯಾಗುವುದಾಗಿ, ಕಾರ್ಯಕಾರಿ ಮಂಡಳದ ಸದಸ್ಯರನೇಕರ ಅಭಿಪ್ರಾಯವಿರುತ್ತದೆ. ಹಿಂದೂ-ಮುಸ್ಲಿಂ ಐಕ್ಯವಾಗಬೇಕು, ಇಲ್ಲದಿದ್ದರೆ ಹಿಂದೂ ದೇಶಕ್ಕೆ ದಾಸ್ಯವು ಶಾಸ್ವತ,- ಎಂದವರ ಅಭಿಪ್ರಾಯ.

ಬರಗಾಲ ವಿಚಾರಣೆ

ಹಿಂದೂದೇಶದ ಬರಗಾಲ ಪರಿಸ್ಥಿತಿಯನ್ನು ಪರಿಶೀಲಿಸುವರೆ ನೇಮಕವಾದ ಬರಗಾಲ ವಿಚಾರಣಾ ಸಮಿತಿಯು ಅದರ ಕೆಲಸವನ್ನು ಪ್ರಾರಂಭಿಸಿಯದೆ. ಆದರೆ ವಿಚಾರಣೆಯು ಬಹಿರಂಗವಾಗಿ ನಡೆದರೆ ಜಾತಿಯ ಮತ್ತು ರಾಜಕೀಯ ಅಪಪ್ರಚಾರಕ್ಕೆ ಅವಕಾಶ ಕೊಟ್ಟಂತಾಗುವುದರಿಂದ, ಅದು ರಹಸ್ಯದಲ್ಲಿ ನಡೆಯಿಸಲಾಗುವುದಂತೆ.

ಆಹಾರ ಕೊರತೆಗೆ ಕಾರಣವೇನು? ಮುಂದೆ ಬರಗಾಲ ಪರಿಸ್ಥಿತಿಯುಂಟಾಗದಂತೆ ಏನು ಮಾಡಬೇಕು? ಮೊದಲಾದವುಗಳ ವಿಚಾರಗಳನ್ನು ತಿಳಿಯಲು, ಈ ಸಮಿತಿಯು ಬೇಕಾದ ಎಲ್ಲಾ ಸಂಗತಿಗಳನ್ನು ಕೂಡಿಸುವುದು. ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಿಗೆ ಭೇಟಿಯಿತ್ತು ಬೇಕಾದ ಸಾಕ್ಷ್ಯಗಳನ್ನು ವಿಚಾರಿಸುವುದು.

ಆಹಾರ ಪೂರೈಕೆಯ ಭಾವಿಯೋಜನೆ ಆಡಳಿತ ಸುಧಾರಣೆ, ಆಹಾರ ಬೆಳೆ, ಜನದ ಆಹಾರ ಕ್ರಮ, ಮೊದಲಾದ ಕೊನೆಯ ಭಾಗದ ವಿಚಾರಣೆಯನ್ನಾದರೂ ಬಹಿರಂಗ ನಡೆಯಿಸಬೇಕೆಂದು ಸುದ್ದಿಗಾರರು ಈ ಸಮಿತಿಯೊಡನೆ ಕೇಳಿಕೊಂಡರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ನಗರ ಸಭೆ

ಈ ತಿಂಗಳಲ್ಲಿ ನಗರ ಸಭೆ ಸೇರಿತ್ತು. ಬೊಕ್ಕಪಟ್ಣದಲ್ಲಿ ಪ್ಲೇಗಿನ ಇಲಿ ಬಿದ್ದಿತ್ತಾಗಿ ಆರೋಗ್ಯಾಧಿಕಾರಿ ಶ್ರೀ ಬಾಳಿಗರು ತಿಳಿಸಿದರು. ಕಲ್ಮಶ ಒಯ್ಯುವ ವಾಹನಗಳ ಅಭಾವದಿಂದಾಗಿ ನಗರ ನೈರ್ಮಲ್ಯತೆಯ ಕೆಲಸವು ಬೇಕಾದಷ್ಟು ತೃಪ್ತಿಕರವಾಗಿ ಮಾಡಿಸುವುದರ ತೊಂದರೆಗಳನ್ನು ಅವರು ವಿವರಿಸಿದರು.

ಜಯಕರ್ನಿ ಹೊಟೇಲಿನಿಂದ ಕೊಳೆಯಾಗುತ್ತದೆಂದು ಆರೋಪ ಮಾಡಲ್ಪಟ್ಟ ಪಳ್ನೀರು ಮಾರ್ಗದ ಚರಂಡಿಯ ಕುರಿತು ಚರ್ಚೆಯಾಗಿ ಆರೋಗ್ಯ ಸಮಿತಿಯ ತೀರ್ಮಾನಕ್ಕೆ ಬಿಡಲಾಯಿತು

ಗತವರ್ಷದ ಆಡಳಿತ ವರದಿಯನ್ನು ಸಭೆಯು ಮುಂದಿಡಲಾಯಿತು ಮುನ್ಸಿಪಲ್ ಇಲಾಖೆಯ ವಿವಿಧ ಶಾಖೆಯ ಅಧಿಕಾರಿಗಳ ಕೆಲಸವನ್ನು ಶ್ಲಾಘಿಸಿ ಮುಂದಿನ ವರ್ಷ, ರಸ್ತೆ, ದೀಪ, ಸ್ವಚ್ಛತೆಗಳ ವಿಚಾರ ಹೆಚ್ಚಿನ ಕಾರ್ಯಕ್ರಮವಾಗಬೇಕೆಂದೂ ನಿರ್ಣಯಿಸಲಾಯಿತು

ಸೇವಾಸಮಿತಿ

ನಗರದ ವಿಶ್ವ ಬ್ರಾಹ್ಮಣ ಸಮಾಜಸ್ಥರು ಸಭೆಸೇರಿ ತಾ ೩೦ರಂದು 'ದ ಕ ವಿ. ಬ್ರಾಹ್ಮಣ ಸಮಾಜಸೇವಾ ಸಮಿತಿ' ಎಂಬ ಮಂಡಳವೊಂದನ್ನು ಸ್ಥಾಪಿಸಿದರು ಶ್ರೀ ಪಲ್ಕೆ ಬಾಬುರಾಯ ಆಚಾರ್ಯ ಇವರು ಸಮಿತಿ ಅಧ್ಯಕ್ಷರೂ ಬಿ ಜನಾರ್ದನ ಆಚಾರ್ಯ, ಇವರು ಕಾರ್ಯದರ್ಶಿ.

ಅಕ್ಕಿ ಬೇಕು

ಜಿಲ್ಲಾ ಫುಡ್ ಕೌನ್ಸಿಲ್ ಅವರು ಮಾನ್ಯ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಆಹಾರ ಪರಿಸ್ಥಿತಿಯ ಕುರಿತು ವಿಷಾದ ಸೂಚಿಸಲು, ತಕ್ಕ ಏರ್ಪಾಡುಗಳು ಮಾಡುವುದಾಗಿ ಅಧ್ಯಕ್ಷರು ಭರವಸೆ ಇತ್ತರು

ಅಕ್ಕಿ ಕಡಲೆ

ಅಕ್ಕಿ ಪೂರೈಕೆ ಕಡಿಮೆ ಬಿದ್ದ ಸ್ಥಳಗಳಲ್ಲಿ ಕಡಲೆ ಹೆಸರು ಕಾಳುಗಳನ್ನು ಹಂಚಲೇರ್ಪಡಿಸಿದುದನ್ನು ಕಲೆಕ್ಟರರು ಮೇಲ್ಕಂಡ ಸಭೆಯಲ್ಲಿ ತಿಳಿಸಿದರು ಅನೇಕ ವ್ಯಾಪಾರಿಗಳು ತಮ್ಮ ಧಾನ್ಯ ದಾಸ್ತಾನನ್ನು ಸರಕಾರಕ್ಕೆ ಈ ಕಾರ್ಯಕ್ಕಾಗಿ ಕೊಟ್ಟಿರುವರು

ನೆಲಗಡಲೆ

ಮುಂಬರುವ ಕೆಲವು ವಾರಗಳಲ್ಲಿ ನಗರದಲ್ಲಿ ಅಕ್ಕಿಯ ದಾಸ್ತಾನು ಮುಗಿದು ಬೇರೆ ಆಹಾರ ಧಾನ್ಯಗಳನ್ನು ಹಂಚಬೇಕಾಗುವ ಪರಿಸ್ಥಿತಿ ಬರಬಹುದೆಂದು ಊಹಿಸಲಾಗಿದೆ ಈ ಸಂಬಂಧ ನೆಲಗಡಲೆಯನ್ನು ತರಿಸುವ ಯೋಜನೆಯೊಂದು ಸರಕಾರದ ಕಾರ್ಯಕ್ರಮದಲ್ಲಿತ್ತೆಂದೂ, ಫುಡ್ ಕೌನ್ಸಿಲ್ ಅವರು ಅದು ನಮ್ಮ ಜಿಲ್ಲೆಗೆ ಅಗತ್ಯವಿಲ್ಲವೆಂದೂ ಅಭಿಪ್ರಾಯ ಕೊಟ್ಟಿರುವರುವರಾಗಿ ತಿಳಿದು ಬರುತ್ತದೆ

ಶಿಷ್ಟಮಂಡಲಿ

ನಗರದ ಬಳಿಯ ಕಾವೂರು ಗ್ರಾಮಸ್ಥರು ತಮ್ಮೂರಿನ ಸ್ಟೋರಿನಲ್ಲಿ ಅಕ್ಕಿ ಸಿಗುತ್ತಿಲ್ಲವಾಗಿ ಮನವಿಮಾಡಿಕೊಂಡ ಫಲವಾಗಿ ಮಾನ್ಯ ಕಲೆಕ್ಟರರು ತ್ವರೆಯಾಗಿ ಮುಣೆಗಾರರ ಮೂಲಕ ತನಿಖೆ ನಡೆಸಿ ತೃಪ್ತಿಕರ ಏರ್ಪಾಡನ್ನು ಮಾಡಿದರೆಂದು ತಿಳಿದಿದೆ. ಬಹಳ ದಿನಗಳ ವರೆಗೆ ಕಾವೂರು ಆಸುಪಾಸಿನಲ್ಲಿ ಅಕ್ಕಿ ಕಳ್ಳಸಂತೆಯಾಗುತ್ತಿತ್ತಂತೆ.

ಹೆಚ್ಚು ಆಹಾರ

ಇದರ ಪ್ರಚಾರವನ್ನು ಇನ್ನೂ ಹೆಚ್ಚು ಮಾಡಿ ಬೆಳೆಸುವವರಿಗೆ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಬೇಕೆಂದು ಕೃಷಿ ಇಲಾಖಾಧಿಕಾರಿಗಳಿಗೆ ತಿಳಿಸಲು ಫುಡ್ ಕೌನ್ಸಿಲಿನ ಸಭೆ ಸೂಚಿಸಿದೆ.

ರಂಗಭೂಮಿ

ಕ. ಬಾ. ನಿಧಿ ಸಹಾಯಾರ್ಥವಾಗಿ ನಗರದ ಜನತಾ ರಂಗಭೂಮಿ ಸಮಿತಿಯವರು ವಿವಿಧ ವಿನೋದಾವಳಿಯೊಂದನ್ನು ಏರ್ಪಡಿಸಲು ನಿರ್ಧರಿಸಿರುವರು

ಬೆಲ್ಲದ ಬೆಲೆ

ನಗರದಲ್ಲಿ ಬೆಲ್ಲ ಮಾರುವ ನಿಯಂತ್ರಣ ಬೆಲೆ-೧, ೨ನೇ ತರಗತಿಯವುಗಳಿಗೆ ಮಣಕ್ಕೆ (೨೮ ರಾತ್ತಲ) ರೂ ೯, ಮತ್ತು ೮. ದ್ರವ ಬೆಲ್ಲ ಡಬ್ಬಿ (೬೦ ರಾತ್ತಲ) ರೂ ೮. ೨೬ ರಾತ್ತಲ ಡಬ್ಬಿಗೆ ರೂ. ೩॥ ಖಾಲಿ ಡಬ್ಬಿಯ ಬೆಲೆ ೮ ಆಣೆ.

ಸೀಲ್ ಮಾಡಲ್ಪಟ್ಟ ಬೆಲ್ಲವನ್ನು ಮ್ಯಾನುಲಕರು ಕಬ್ಬು ಬೆಳೆಸುವವರ ಸಹಕಾರಿ ಸಾಲ ಮತ್ತು ಮಾರಾಟದ ಸಂಘದವರಿಗೆ ಒಯ್ದು ಕೊಡಬೇಕೆಂದೂ ತಿಳಿಸಲಾಗಿದೆ.

ನಿರ್ಬಂಧ

ಸಾರ್ವಜನಿಕ ಸಭೆ ಮೆರವಣಿಗೆಗಳ ಮೇಲೆ ಹಾಕಿದ ನಿರ್ಬಂಧವನ್ನು ಪುನಃ ೨ ತಿಂಗಳಿಗೆ ಮುಂದುವರಿಸಲಾಗಿದೆ.

ಖಂಡನೆ

ಕಮ್ಯೂನಿಸ್ಟ್ ಪಾರ್ಟಿಯವರ ತಾ ೨೮ರ ಸಭೆಯೊಂದರಲ್ಲಿ ಗಾಂಧಿ-ರಾಜಾಜಿ ಯೋಜನೆಯನ್ನು ಸಮರ್ಥಿಸಿ, ಅದನ್ನು ಪ್ರಚಾರ ಮಾಡಬೇಕೆನ್ನುವ, ಮತ್ತು ಮೆರವಣಿಗೆ ನಿರ್ಬಂಧ ಆಜ್ಞೆಯನ್ನು ಖಂಡಿಸುವ ನಿರ್ಣಯಗಳಾದುವು

ಕೆ ಹಾರ್ವೆ

ನಮ್ಮ ಪ್ರಾಂತ್ಯದ ಯುದ್ಧಪ್ರಚಾರ ಅಧಿಕಾರಿಗಳಾದ ಇವರು ಇಲ್ಲಿಗೆ ಬಂದಿದ್ದರು ಸೈನ್ಯಕ್ಕೆ ಸಿಬಂಧಿಯನ್ನು ಸೇರಿಸುವ ಕಾರ್ಯಕ್ರಮದ ವ್ಯವಸ್ಥೆ ಪರೀಶಿಲಿಸಿ ಹಿಂತೆರಳಿದರು.

ಸಕ್ಕರೆ

ಈ ಸಂಬಂಧ ಪರಿಮಾಣ ತಿದ್ದುಪಾಟಿಗಾಗಿ ಬಂದಿದ್ದ ಸುಮಾರು ೨೪೦೦ ಕಾರ್ಡುಗಳನ್ನು ಸ್ಪೆಶಲ್ ಸಮಿತಿಯವರು ಕೊನೆಯ ಸೆಕ್ಷನಿಗಾಗಿ ಕಲೆಕ್ಟರರಲ್ಲಿಗೆ ಕಳುಹಿಸಲ್ಪಟ್ಟಿವೆ ಅವರು ಸ್ವತಃ ೪೫೦ಕ್ಕೂ ಮಿಕ್ಕಿದ ಅರ್ಜಿಗಳನ್ನು ಪರೀಕ್ಷಿಸಿರುವರು

ಮನವಿ

ಸಕ್ಕರೆ ಎಣ್ಣೆ ಸಂಬಂಧ ತಿದ್ದುಪಡಿಗೆ ಕಳುಹಿಸಲ್ಪಟ್ಟ ಅರ್ಜಿ, ಕಾರ್ಡುಗಳು ಬಹಳ ಸಮಯದ ವರೆಗೆ ಹಿಂತಿರುಗುವುದಿಲ್ಲವಾಗಿ ಕೆಲವರಲ್ಲಿ ಅತೃಪ್ತಿ ಹುಟ್ಟಿರುವುದು ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ ಅಧಿಕಾರಿಗಳು ತಿದ್ದುಪಾಟಿನ ಏರ್ಪಾಡನ್ನು ತ್ವರೆಗೊಳಿಸುವರಾಗಿ ನಂಬಿಕೆ.

ಮಾಂಸ

ಮಾರ್ಕೆಟಿನಲ್ಲಿ ಮಾರುವ ಮಾಂಸಗಳ ಬೆಲೆಯನ್ನು ನಗರ ಸಭೆಯವರು ನಿರ್ಧರಿಸಿದರೂ ಅದು ಜಾರಿಗೆ ಬರುವ ಮೊದಲೇ ಮಾಂಸ ವ್ಯಾಪಾರಿಗಳು ತಮ್ಮ ಮಾರಾಟ ಕಮ್ಮಿ ಮಾಡಿರುವರೆಂದೂ ತಿಳಿದುಬರುತ್ತದೆ ಹೊರ ಪ್ರದೇಶದಿಂದ ಹೆಚ್ಚು ಬೆಲೆಗೆ ಪ್ರಾಣಿಗಳನ್ನು ತಂದು ಇಲ್ಲಿಯ ನಿಯಂತ್ರಣ ಬೆಲೆಗೆ ಮಾರಿದರೆ ನಷ್ಟವಾಗುವುದೆಂಬುದೇ ಈ ಪರಿಸ್ಥಿತಿಗೆ ಕಾರಣವೆಂದು ತಿಳಿದುಬಂದಿದೆ.

ತರಕಾರಿ

ಇನ್ನು ಕೆಲವೇ ದಿವಸಗಳೊಳಗೆ ತರಕಾರಿ ಕಾಯಿಪಲ್ಯಗಳ ಬೆಲೆ ನಿಯಂತ್ರಿತವಾಗುವುದರಲ್ಲಿದೆಯಾಗಿ ಊಹಾಪೋಹೆ. ಇವುಗಳ ಬೆಲೆಗಳ ಪಟ್ಟಿಯನ್ನು ಕಮರ್ಶಿಯಲ್ ಟ್ಯಾಕ್ಸ್ ಆಫೀಸರರು ಕಲೆಕ್ಟರರಲ್ಲಿಗೆ ಕಳುಹಿಸಿರುವರೆಂದೂ, ಅಲ್ಲಿಂದ ಅದು ನಗರ ಸಭೆಯ ಕಛೇರಿಗೆ ಹೋಗಿದೆ ಎಂದೂ ತಿಳಿದುಬರುತ್ತದೆ.

ಕಂಟ್ರೋಲ್ ಸಾಮಾನು

ಇವುಗಳನ್ನು ಮಾರುವ ಒಂದು ಲಿಮಿಟೆಡ್ ಸಂಸ್ಥೆಯು 'ಫೇರ್ ಪ್ರಾಯ್ಸ್ ಡಿಪೋ' ಎಂಬ ಹೆಸರಿನಿಂದ ಸದ್ಯದಲ್ಲೆ ತೆರೆಯಲ್ಪಡುವುದು — ಹಂಪನ್‌ಕಟ್ಟೆ ಕೇಂದ್ರದಲ್ಲಿ. ಚೇಂಬರ್ ಆಫ್ ಕಾಮರ್ಸ್ ಅವರು ಇದಕ್ಕೆ ಪ್ರೋತ್ಸಾಹಿಸುವರಾಗಿಯೂ ತಿಳಿದುಬಂದಿದೆ

ಹೋಟೆಲ್ ಸಮಯ

ತಾ. ೧೧ರಿಂದ ನಗರದ ಅನೇಕ ಹೋಟೆಲುಗಳು ಆಗಲೇ ೧—೩॥ ಗಂಟೆ ತನಕ ಮುಚ್ಚಿನ ಏರ್ಪಾಡನ್ನು ಜ್ಯಾರಿಗೆ ತಂದಿರುವರು ಹಾಲಿನ ಅಭಾವವೇ ಇದಕ್ಕೆ ಕಾರಣವೆಂದು ಊಹಿಸಲಾಗಿದೆ

ಜೆಪ್ಪು ಮಾರ್ಕೆಟು ಘಟನೆ

ತಾ. ೧೮ರಂದು ರಾತ್ರೆ ಸುಮಾರು ೮ ಗಂಟೆ ಸಮಯಕ್ಕೆ ಬಲವಾದ ಗಾಳಿ ಮಳೆಗಳ ದೆಸೆಯಿಂದ ಇಲ್ಲಿ ಜೆಪ್ಪು ಮುನ್ಸಿಪಲ್ ಮಾರ್ಕೆಟ್ ಕಟ್ಟಡವು ಕುಸಿದು ಬಿತ್ತು ವ್ಯಾಪಾರಸ್ಥರೂ ಮಳೆಗೆ ಆಶ್ರಯ ತೆಗೆದುಕೊಂಡ ಕೆಲವರೂ ಬಿದ್ದ ಕಟ್ಟಡಕ್ಕೆಳಗೆ ಸಿಕ್ಕಿ ಅನೇಕ ರೀತಿಯಲ್ಲಿ ಜಖಂ ಹೊಂದಿರುವರು ೧೬ ಮಂದಿ ಗಂಡಸರು ೪ ಹೆಂಗಸರು ಆಸ್ಪತ್ರೆ ಚಿಕಿತ್ಸೆಗೆ ದಾಖಲು ಮಾಡಲ್ಪಟ್ಟಿರುವರು ನಗರದ ಅಗ್ನಿನಿರೋಧಕ ದಳದವರು ತ್ವರೆಯಾಗಿ ಘಟನೆ ಸ್ಥಳಕ್ಕೆ ಬಂದ ಫಲವಾಗಿ ಹೆಚ್ಚಿನ ದುರ್ಘಟನೆಗಳನ್ನು ತಪ್ಪಿಸಲಾಯಿತು

ಮರಣ

ಮೇಲಿನ ಘಟನೆಗೆ ತುತ್ತಾದ ಓರ್ವ ಕ್ರೈಸ್ತ ಮಹಿಳೆಯು ಆಸ್ಪತ್ರೆಗೆ ಒಯ್ಯುವಾಗಲೇ ಮರಣಪಟ್ಟದ್ದು ತುಂಬಾ ವಿಷಾದಕರ ಗಾಯಗೊಂಡವರು ಎಲುಬಿನ ನಾನಾ ತರದ ಅಪಾಯಕ್ಕೆ ಈಡಾಗಿರುವರೆಂದೂ ೩-೪ ಮಂದಿಯ ಪರಿಸ್ಥಿತಿ ಕಠಿಣವಾಗಿದೆಯೆಂದೂ ತಿಳಿದುಬರುತ್ತದೆ

ಚಿಲ್ಲರೆ

ಚಿಲ್ಲರೆ ಶೇಖರಿಸಿಟ್ಟ ಬಗ್ಗೆ ನಗರದ ಸುಮಾರು ೫೦ ಮಂದಿಯ ಮೇಲೆ ಅಧಿಕಾರಿಗಳು ಕಟ್ಲೆ ಹೂಡಿರುವರು.

ಕಟ್ಟಿಗೆ

ಇದರ ನಿಯಂತ್ರಣ ನಿಬಂಧನೆಯನ್ನು ತಪ್ಪಿ ನಡೆದದಕ್ಕೆ ೫ ಕಟ್ಟಿಗೆ ವ್ಯಾಪಾರಿಗಳನ್ನು ಬಂಧಿಸಿದ್ದು ಕೊನೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವರು ಮೊಕದ್ದಮೆ ಸದ್ಯದಲ್ಲೇ ನಡೆಯುವುದು.

ಬಸ್ ವ್ಯವಸ್ಥೆ

ನಮ್ಮ ಜಿಲ್ಲೆಯ ಬಸ್ ವಾಹನಗಳಲ್ಲಿ ಕಂಡಕ್ಟರ್ ಪದ್ಧತಿಯನ್ನು ಜಾರಿಗೆ ತರಬೇಕಾಗಿ ಅಧಿಕಾರಿಗಳು ತೀರ್ಮಾನಿಸಿರುವರಾಗಿ ತಿಳಿದು ಬರುತ್ತದೆ. ಕಮಿಶನ್ ಮೇಲೆ ಕೆಲಸ ಮಾಡುತ್ತಿದ್ದ ಏಜೆನ್ಸಿ ಕ್ರಮವನ್ನು ಸದ್ಯದಲ್ಲೆ ರದ್ದು ಮಾಡಲಾಗುವುದು. ಪ್ರಯಾಣಿಕರಿಗೆ ಟಿಕೇಟುಗಳನ್ನು ಬಸ್ಸಿನಲ್ಲೆ ಇಡಲಾಗುವ ಕಂಡಕ್ಟರರು ಕೊಡುವರು. ಮಂಗಳೂರಿನ ಏಜೆಂಟರ ಸಂಖ್ಯೆಯನ್ನು ಒಂದಕ್ಕೆ ಅರ್ಧ ಮಾಡಿ ಅವರಿಗೆ ಸಂಬಳದ ಮೇಲೆ ಕೆಲಸ ಮಾಡುವಂತೆ ಆಗುವುದಾಗಿಯೂ ತಿಳಿದು ಬರುತ್ತದೆ.

ಸ್ವೀಕಾರ

- ನಗೆನೋಟಗಳು—ಕತೆಗಾರ ಶ್ರೀ. ಕೆ. ವಿಟ್ಠಲ ಶೆಟ್ಟಿ ಬಿ. ಎ., ಎಲ್. ಟಿ. ಪ್ರಕಾಶಕರು, ಕಿರಿಯರ ಪ್ರಪಂಚ ಉಡುಪಿ, ಪುಟ ೧೦೫ ಬೆಲೆ ೧೨ ಆಣೆ.

ಕೆನೆಗಳು—ಕಾಮಧೇನು ಪುಸ್ತಕಮಾಲೆ ಕರ್ನಾಟಕ ಸಂಘ, ಕೆನರಾ ಹೈಸ್ಕೂಲ್ ಮಂಗಳೂರು ವಿದ್ಯಾರ್ಥಿಗಳಿಂದ ರಚಿಸಲಾದ ಕಥೆಗಳು.

'ರಜತ ಮಹೋತ್ಸವ – ಸಂಚಿಕೆ ಧರ್ಮಸ್ಥಳ ಶ್ರೀ ಮಂಜಯ್ಯ ಹೆಗ್ಗಡೆಯವರ ೨೫ ವರುಷಗಳ ಧರ್ಮಸ್ಥಳದ ಆಡಳಿತದ ವರದಿ. ಪ್ರಕಾಶಕರು: ರಜತ ಮಹೋತ್ಸವ ಕಮಿಟಿ ಧರ್ಮಸ್ಥಳ ದ ಕ

ತಿದ್ದುಪಡಿ

ಕಳೆದ ವಾರದ ನಮ್ಮ ಸಂಚಿಕೆಯ ಉಡುಪಿಯ ವಾರ್ತೆಯಲ್ಲಿ ಭದ್ರಗಿರಿಯ ಶ್ರೀ ನಾಗೇಶ ಪಡಿಯಾರರು ಬಿದ್ದಿಗೆ ಆಹುತಿಯಾಗಿ ಪ್ರಾಣತ್ಯಾಗ ಮಾಡಿದರೆಂದು ವಾರ್ತೆಯು ಪ್ರಕಟವಾಗಿತ್ತು. ಅವರು ಪ್ರಾಣತ್ಯಾಗ ಮಾಡಿದ್ದು ಬಿದ್ದಿನ ಸಂಬಂಧದಿಂದಲ್ಲ, ದೇಹಸ್ಥಿತಿಯು ನೆಟ್ಟಗಿಲ್ಲದುದೆ ಅದರ ಕಾರಣವೆಂದು ಅವರ ದಾಯಾದಿಗಳೊಬ್ಬರು ತಿಳಿಸುತ್ತಾರೆ.

ಕಾರ್ಕಳ

ಶಿಕ್ಷೆ

ತಾನು ಹೆತ್ತ ಶಿಶುವನ್ನು ಕೊಂದು ಚರಂಡಿಯಲ್ಲಿ ಬಿಸಾಡಿದ ಘಟನೆಯ ಸಂಬಂಧ ಕಟ್ಲೆಗೆ ಒಳಗಾದ ಮ್ಯೊಲಿಜಾತಿಯ ಮಹಿಳೆಯೋರ್ವಳನ್ನು ೩ ತಿಂಗಳ ಶಿಕ್ಷೆ ವಿಧಿಸಲಾಯಿತು

ಭಗಿನೀ ಸಮಾಜ

ಇಲ್ಲಿಯ ಕೆಲ ಮಹಿಳೆಯರ ಶ್ರಮದ ಫಲವಾಗಿ ಭಗಿನೀ ಸಮಾಜ ಎಂಬ ಸಂಸ್ಥೆ ಸ್ಥಾಪಿಸಲ್ಪಟ್ಟಿತು ಸ್ತ್ರೀಯರ ಉನ್ನತಿಯೇ ಸಮಾಜದ ಧ್ಯೇಯ

ಹಿಂದೀ

ಈ ಸಲದ ಹಿಂದೀ ಪರೀಕ್ಷೆಗಳು ಬರುವ ತಾ ೧೯ಕ್ಕೆ ಕಾರ್ಕಳದಲ್ಲಿ ನಡೆಯುವುದಾಗಿ ಪ್ರಕಟವಾಗಿದೆ

ಪುತ್ತೂರು

ಇಲ್ಲಿ ಕ ಬಾ. ಸ್ಮಾರಕ ನಿಧಿ ಸಮಿತಿ ರಚಿಸಲ್ಪಟ್ಟಿತು ಶ್ರೀ ಎಸ್ ಸದಾಶಿವ ರಾವ್ ವಕೀಲ್ ಇವರು ಅಧ್ಯಕ್ಷರು. ಸುಮಾರು ಆರು ಸಾವಿರ ರೂಪಾಯಿಯನ್ನು ಈ ತಾಲೂಕಿನಲ್ಲಿ ಶೇಖರಿಸಬೇಕೆಂದು ನಿರ್ಧರಿಸಲಾಗಿದೆ.

ಆಕಸ್ಮಿಕ ಮರಣ

ಶ್ರೀ ಬಾಬಣ್ಣ ಕಮ್ತಿ ಎಂಬವರು ತಮ್ಮ ಬಚ್ಚಲು ಮನೆಯಲ್ಲಿ ಹೃತ್ಕ್ರಿಯೆ ನಿಂತು ಕಾಲವಾದರು ತಗಡು ಕೈಗಾರಿಕೆ ಇವರ ಕಸುಬಾಗಿತ್ತು

ಉಡುಪಿ

ಮದ್ರಾಸಿನ ಅಗ್ನಿನಿವಾರಕ ದಳದವರು ತಮ್ಮ ಚಟುವಟಿಕೆಯ ಪ್ರದರ್ಶನದಿಂದ ನಾಗರಿಕರನ್ನು ಬೆರಗುಗೊಳಿಸಿದರು.

ಸಂತೆಕಟ್ಟೆಯ ಬಳಿ ಬೀಡಿ ಕಾರ್ಖಾನೆಯೊಂದಕ್ಕೆ ಅಕಸ್ಮಾತ್ತಾಗಿ ಬೆಂಕಿ ತಗಲಿತ್ತು ಸಾರ್ವಜನಿಕ ಪ್ರಯತ್ನದಿಂದ ಅಗ್ನಿಯನ್ನು ನಂದಿಸಲಾಯಿತು.

ಮಳೆಯಿಂದಾಗಿ ಕೆಲವು ರಸ್ತೆಗಳು ಇಲ್ಲಿ ಹಾಳಾಗಿ ಜನ ಸಂಚಾರಕ್ಕೆ ಅಯೋಗ್ಯವಾಗಿವೆಯಾಗಿ ವದಂತಿ. ನಗರಾಧಿಕಾರಿಗಳು ತಕ್ಕ ವ್ಯವಸ್ಥೆ ಕೈಕೊಳ್ಳದರು.

[illegible]ಮಾಡಿದ...!

ಇಂದು ಅಮೇರಿಕದಲ್ಲಿ [illegible] [illegible] ವರ್ಷಗಳ [illegible]ಯನ್ನು ಅನುಭವಿಸಬಹುದಾಗಿ [illegible].

ಆದರೆ ಹಿಂದೂದೇಶದಲ್ಲಿ?

* * *

ಅಮೇರಿಕದಲ್ಲಿ ಪ್ರತಿ ಒಂದು ಸಾವಿರ ಜನರಿಗೆ ೧೫ ಟೆಲಿಫೋನುಗಳಂತೆ ಇವೆ. ಅಲ್ಲಿನ ಕುಟುಂಬಗಳಲ್ಲಿ ಶೇಕಡ ೮೨-೮ ಗಳೊಡನೆ, ರೇಡಿಯೋ ಗ್ರಾಹಕರುಗಳಿವೆ. ಅಲ್ಲಿ ೯೧೬ ರೇಡಿಯೊ ಪ್ರಸಾರಣಾ ನಿಲಯಗಳಿವೆ.

ಆದರೆ ಹಿಂದೂದೇಶದಲ್ಲಿ?

* * *

ಜೆಫರ್‌ಸನರು ಅಮೇರಿಕದ ಮೂರನೆ ಅಧ್ಯಕ್ಷರು. ಸ್ವತಂತ್ರ ಅಮೇರಿಕದ ಸ್ಥಾಪನಾಚಾರ್ಯರೆಂಬ ಬಿರುದು ಇವರಿಗೆ ಸಲ್ಲತಕ್ಕದ್ದು. ವಿದ್ಯಾಭ್ಯಾಸದ ಕುರಿತು, ಅವರ ಅಭಿಪ್ರಾಯವು, ಹೀಗಿರುವುದು.

"ಜನರಲ್ಲಿ ಜ್ಞಾನ ಪ್ರಸಾರಣೆಯನ್ನು ಮಾಡುವ ಕ್ರಮವೆ ರಾಜಶಾಸನಗಳಲ್ಲಿ ಪ್ರಾಮುಖ್ಯವಾದುದೆಂದು ನನ್ನ ಅಭಿಪ್ರಾಯವು. ಸ್ವಾತಂತ್ರ್ಯ ಮತ್ತು ಸಂತುಷ್ಟಿಗಳನ್ನು ಸಂರಕ್ಷಿಸುವರೆ ಇದಕ್ಕಿಂತ ಶ್ರೇಷ್ಠ ತರದ ಉಪಾಯವು ಬೇರೊಂದಿಲ್ಲ.

ಆದರೆ ಹಿಂದೂದೇಶದಲ್ಲಿ?

* * *

"ಮಾನವ ಜೀವರಕ್ಷಣೆ ಮತ್ತು ಸಂತುಷ್ಟಿ ಇವುಗಳ ಸಂರಕ್ಷಣೆಯೆ ಉತ್ತಮ ಸರಕಾರದ ಗುರಿಯಾಗಿರಬೇಕು.

"ಸ್ವಾತಂತ್ರ್ಯವು ಜನಗಳ ಕೈಗಳಲ್ಲಿ ಹೊರತು ಬೇರೆಲ್ಲೂ ಸುರಕ್ಷಿತವಾಗಿರದು.

"ಎಲ್ಲರಿಗೂ, ವೈಯುಕ್ತಿಕ, ಸಾಮಾಜಿಕ, ಮತ್ತು ಸಾಂಪತ್ತಿಕ ಸಮಾನತೆಯನ್ನು ಕೊಡುವುದೆ, ಉತ್ತಮ ಸರಕಾರದ ಲಕ್ಷಣಗಳು.

'ಜೆಫರ್‌ಸನ್'

* * *

ಸೈನಿಕರ ವಿದ್ಯಾಭ್ಯಾಸದ ಕುರಿತು ಅಮೇರಿಕದ ಸರಕಾರವು ಬಹಳ ಶ್ರಮ[illegible] ಯುದ್ಧ [illegible] ಸೈನಿಕರಿಗೆ [illegible] ಜ್ಞಾನ ಸಂಪಾದನಾ ಮಾರ್ಗಗಳನ್ನು ಕಲ್ಪಿಸಲಾಗಿವೆ. ಸೈನಿಕರು ಯುದ್ಧ ಸನ್ನಾಹಿತರಾಗಿರುವಾಗಲೇ, ಅವರು ಶಿಕ್ಷಣ ಹೊಂದುವ ವ್ಯವಸ್ಥೆಗಳಾಗಿವೆ. ಯಾವತರೂ ತರದ ವಿದ್ಯಾಭ್ಯಾಸವನ್ನು ಹೊಂದಲು ಅನುಕೂಲತೆಗಳು ಮಾಡಲಾಗಿವೆ. ಪರದೇಶಗಳಿಗೆ ತೆರಳುವ ಸೈನಿಕರಿಗೆ, ಆ-ದೇಶಗಳ ಸಂಪೂರ್ಣ ಜ್ಞಾನವನ್ನು ಮಾಡಿಕೊಡುವ ಕಾರ್ಯಕ್ರಮಗಳು ಕಲ್ಪಿಸಲಾಗಿವೆ.

ಈ ವಿದ್ಯಾಯೋಜನೆಯಿಂದ ಮಿಲಿಯಗಟ್ಲೆ ಮಂದಿಗಳು ಉತ್ತಮ ನಾಗರೀಕರಾಗುವಂತೆ ಶಿಕ್ಷಣ ಹೊಂದುತ್ತಿರುವರು. ಯುದ್ಧಕಾಲದಲ್ಲೂ, ಅದರ ನಂತರವೂ, ದೇಶಕ್ಕೆ ಹಿತಕಾರಿಯಾಗಿ ಬಾಳುವ ದೃಷ್ಟಿಯಲ್ಲಿ ಅಮೇರಿಕನ್ ಸೈನಿಕರ ತರಬೇತು ಆಗುತ್ತಿದೆ. ಈ ವಿದ್ಯಾಯೋಜನೆಗೆ ಬೇಕಾದ ಸಕಲ ಸಾಹಿತ್ಯವು ದಾರಳವಾಗಿ ದೊರಕುವಂತೆ ಸೌಕರ್ಯಗಳು ಮಾಡಲಾಗಿವೆ. ಅನೇಕ ಗ್ರಂಥಗಳು ಅಧಿಕ ಸಂಖ್ಯೆಯಲ್ಲಿ ಛಾಪೆ ಹೊಂದುತ್ತಿವೆ.

ಈ ವಿದ್ಯಾಯೋಜನೆಯಲ್ಲಿ ಪ್ರಾಮುಖ್ಯವಾದ ವಿಷಯವೆಂದರೆ—ಮಹತ್ವದ ಪುಸ್ತಕ ಭಂಡರದ ವ್ಯವಸ್ಥೆ. ಪ್ರತಿಯೊಂದು ಸೈನ್ಯವಿಭಾಗಕ್ಕೊಂದು ಪುಸ್ತಕ ಭಂಡಾರವಿದ್ದು, ಅದು ಆ ಸೈನ್ಯವಿಭಾಗ ಹೋದ ಕಡೆಗೆಲ್ಲಾ ಅನುಸರಿಸಿಯೇ ಹೋಗುವುದು. ಈ ಪುಸ್ತಕ ಭಂಡಾರ ಯೋಜನೆಗಾಗಿ ಸಂಯುಕ್ತ ಅಮೇರಿಕ ಸೈನ್ಯಖಾತೆಯು, ಈಗಾಗಲೆ ಹತ್ತು ಮಿಲಿಯ ಗ್ರಂಥಗಳನ್ನು ಕೊಂಡುಕೊಂಡದೆ, ಇನ್ನೂ ೩೫ ಮಿಲಿಯ ಗ್ರಂಥಗಳನ್ನು ಪಡಕೊಳ್ಳಬೇಕಾಗಿ ವ್ಯವಸ್ಥೆಯಾಗಿದೆ.

ಈ ವಿದ್ಯಾಯೋಜನೆಯಿಂದಾಗಿ ಸೈನಿಕರಿಗಾಗಿ, ಏಳುನೂರು ತರದ ವಿದ್ಯಾಕ್ರಮಗಳು, ಸಂಯುಕ್ತ ಅಮೇರಿಕದ ಸರಕಾರದ ಅನುಮತಿಯನ್ನು ಪಡೆದಿದೆ.

ಗಾಂಧಿ-ಜಿನ್ನಾ ಭೇಟಿ

ಹಿಂದೂ ಮುಸ್ಲಿಂ ಐಕ್ಯ—

ರಾಜಾಜಿಯೋಜನೆ

ಲೋಕಮಾನ್ಯರ ಪುಣ್ಯದಿನದಂದು ಮದ್ರಾಸಿನಲ್ಲಿ ರಾಜಾಜಿ ಕೊಟ್ಟ ಭಾಷಣದಲ್ಲಿನ ಗಣನೀಯ ವಿಷಯಗಳು:—

ಪಾರ್ಲಿಮೆಂಟಿನಲ್ಲಿ ಭಾರತದ ಚರ್ಚೆ ನಡೆದಾಗ ೬೧೫ ಸದಸ್ಯರಲ್ಲಿ ೪೫ ಮಂದಿ ಮಾತ್ರ ಹಾಜರಿದ್ದರು. ಭಾರತದ ಸಂಬಂಧ ಜವಾಬ್ದಾರಿ ಹೊತ್ತ ಬ್ರಿಟಿಷರಿಗೆ ಈ ದೇಶದ ಕುರಿತು ಎಷ್ಟು ಅಭಿರುಚಿ ಇದೆ ಎಂದು ತೋರಿಸುತ್ತದೆ.

ಕ್ರಿಪ್ಸ್ ಕೊಡುಗೆ ಇನ್ನೂ 'ಇದೆ' ಎಂದು ಮನ್‌ಸ್ಟರ್ ಹೇಳಿದರು. ಭಾರತ ಬ್ರಿಟನ್‌ಗಳ ಸಂಧಾನಕ್ಕೆ ಅದು ಅಡ್ಡಿಯಾಗಿ 'ಇದೆ' ನಿಜ.

ಗಾಂಧಿ-ಜಿನ್ನಾ ಭೇಟಿ ಯಶಸ್ವಿಯಾದರೆ ಬ್ರಿಟಿಷರು 'ಐಕ್ಯತೆ ಇಲ್ಲ' ಎಂದು ಹೇಳುವ ನೇವನದ ಪೊಳ್ಳುತನ ಬಯಲಾಗುವುದು.

'ದಿಗಂತದಲ್ಲಿ ಬೆಳಕು ಕಾಣುತ್ತಿದೆ' ಎಂದು ಜಿನ್ನರು ಹೇಳಿದ್ದು ಶುಭ ಸೂಚಿಯಾಗಿದೆ, ಲಾಹೋರ್ ಲೀಗ್ ವರ್ಕಿಂಗ್ ಕಮಿಟಿಯಲ್ಲಿ ದೂಷಿಸಿ ಮಾತನಾಡಿದ್ದು ಅವರ ಸ್ವಭಾವ ಬಲದಿಂದ.

ಜಿನ್ನರು ಶ್ರೀನಗರದಿಂದ ಗಾಂಧಿಜೀಗೆ ಪ್ರೀತಿಪೂರ್ವಕವಾಗಿ ಬರೆದಿದ್ದಾರೆ. ಅವರ ಆರೋಗ್ಯದ ಕುಶಲ ಪ್ರಶ್ನೆಮಾಡಿದ್ದಾರೆ. ಬೊಂಬಾಯಿಯ ತನ್ನ ಬಂಗಲೆಯಲ್ಲಿ ಗಾಂಧಿಜೀಯನ್ನು ಭೇಟಿಯಾಗಲು ಸಂತೋಷ ಸೂಚಿಸಿದ್ದಾರೆ.

ಇನ್ನು ರಾಜಾಜಿ ಯೋಜನೆ ವಿಚಾರ ಮುಸ್ಲಿಂ ಬಹುಸಂಖ್ಯಾಕ ಪ್ರಾಂತ್ಯ ಗಡಿಗಳಲ್ಲಿರುವ ಅಲ್ಪ ಸಂಖ್ಯಾಕರ ಮತಗಣನೆ ಮಾಡುವುದು, ಒಳಿತು- ಯಾಕೆಂದರೆ ಪ್ರತ್ಯೇಕ ಪ್ರಾಂತದಲ್ಲಿರಲು ಒಪ್ಪಿರುವ ಮುಸ್ಲಿಮರು ತಮ್ಮಲ್ಲಿರುವ ಅಲ್ಪ ಸಂಖ್ಯಾಕರ ಬೆಂಬಲವನ್ನು ಪ್ರಾರಂಭದಲ್ಲೇ ಪಡೆಯುವುದು ಶ್ರೇಯಸ್ಕರ.

ಗಾಂಧಿಜೀಯವರು ವಿಶಾಲದೃಷ್ಟಿಯಿಂದ ಮುಸ್ಲಿಮರ ಶರ್ತಗಳನ್ನು ಬಗೆಹರಿಸಲು ಪ್ರಯತ್ನಪಟ್ಟರೆ ಯಾರೂ [illegible] ಪ್ರಯತ್ನದಿಂದ [illegible] ಜನರು [illegible] ಕೋಮುವಾದವನ್ನು ಬದಿಗಿಟ್ಟು [illegible] ಮಾಡುವರಾಗಿ [illegible] ಜನರು [illegible] ಯಶಸ್ವಿಯಾಗಲೆಂದು ಹಾರೈಸಲಿ.

ಗಾಂಧಿ-ಜಿನ್ನಾ ಮಾತುಕತೆ

ಸದ್ಯದಲ್ಲೆ ನಡೆಯಲಿರುವ ಗಾಂಧಿ-ಜಿನ್ನಾ ಮಾತುಕತೆಗಳಿಂದ ಹಿಂದುಗಳಿಗೂ, ಮುಸ್ಲಿಮರಿಗೂ ನ್ಯಾಯ[illegible]ನಿಸುವ ರಾಜಕೀಯ ವ್ಯವಸ್ಥೆಯೊಂದು ಯಾಗುವುದೆಂದೂ ತನಗೆ ಬಲವಾದ ನಂಬುಗೆ ಇದೆ ಎಂದೂ, ರಾಜಾಜಿಯವರು, ಮದ್ರಾಸಿನಲ್ಲಿ ವಿದ್ಯಾರ್ಥಿಗಳ ಸಭೆಯೊಂದರಲ್ಲಿ ಮಾಡಿದ ಭಾಷಣದಲ್ಲಿ ಅಭಿಪ್ರಾಯ ವ್ಯಕ್ತಮಾಡಿರುವರು.

ಗಾಂಧಿ-ಜಿನ್ನಾ ಮಾತುಕತೆಯು ಯಶಸ್ವಿಯಾಗಿ ನಡೆಯುವಂತೆ ಮಿ| ಜಿನ್ನಾರು, ಸರ್ವಯತ್ನಗಳನ್ನೂ ಮಾಡಬೇಕಾಗಿ ಕೋರಿ ಕಾಕ್ಸರ ತಂಡದ ನಾಯಕರು ಪತ್ರವೊಂದು ಮಿ| ಜಿನ್ನರಿಗೆ ಕಳುಹಿಸಿಕೊಟ್ಟಿರುವರು.

ಗಾಂಧಿಜೀಯವರ ಆರೋಗ್ಯ

ಗಾಂಧಿಜೀಯವರ ಆರೋಗ್ಯದ ಕುರಿತು ಡಾ| ಜೀವರಾಜ್ ಮೆಹತಾರವರ ಅಭಿಪ್ರಾಯವು ಈ ಕೆಳಗಿನಂತಿದೆ.

ಪಂಚಗಣಿಯಲ್ಲಿ ಉಳಿದುಕೊಂಡದರಿಂದ ಗಾಂಧಿಜೀಯವರ ಆರೋಗ್ಯವು ಬಹಳ ಮಟ್ಟಿಗೆ ಸುಧಾರಿಸಿಕೊಂಡದೆ. ಆದರೆ ವಾರ್ಧಾದಲ್ಲಿ ಅವರ ಆರೋಗ್ಯಸ್ಥಿತಿಯು ಹೇಗೆ ನಿಲ್ಲುವುದೆಂದು ದೃಢವಾ ಹೇಳಲಾರೆನು. ಕೊಕ್ಕೆ ಹುಳಗಳ ಉಪದ್ರವವು ಕಡಿಮೆಯಾಗಿದ್ದರೂ, ಕೊಕ್ಕೆ ಹುಳಗಳನ್ನು ಗಾಂಧಿಜೀಯವರ ದೇಹದಿಂದ ಸಂಪೂರ್ಣ ಹೊರ ಹಾಕಲು ಸಾಧ್ಯವಾಗಲಿಲ್ಲ. ಆರೋಗ್ಯ ಸ್ಥಿತಿಯು ಉತ್ತಮವಾಗಿ ಗಾಂಧಿಜೀಯವರು ಸ್ವಲ್ಪ ಬಲವನ್ನು ಹೊಂದಿದರಿಂದ ಕೊಕ್ಕೆ ಹುಳಗಳ ಬಾಧೆಯು ತಡೆಯಲಾಗಿದೆ. ಆದರೆ ಅಧಿಕವಾದ ಕೆಲಸ ಇತ್ಯಾದಿಗಳಿಂದ ಗಾಂಧಿಜೀಯವರ ಆರೋಗ್ಯವು ಕೆಳಮಟ್ಟಕ್ಕೆ ಬಂದರೆ, ಆಗ ಕೊಕ್ಕೆ ಹುಳಗಳ ಹಾವಳಿ ಮತ್ತೊಮ್ಮೆ ತಲೆದೋರಬಹುದು. ಗಾಂಧಿಜೀಯವ ಪ್ರಾಯದ ಕಡೆ ನೋಡಿದರೆ, ಅವರು ಅಪಾಯದಿಂದ ಸಂಪೂರ್ಣ ಹೊರಗಾಗಿರುವರೆಂದು ಹೇಳಬರುವುದಿಲ್ಲ.

ಗಾಂಧಿಜೀಯವರ ಆರೋಗ್ಯವು ನೆಟ್ಟಗಿರುವಂತೆ ಅವರಿಗೆ ವಿಶ್ರಾಂತಿಯು ಮುಖ್ಯವಾದುದರಿಂದ ಜನರು ಯಾರೂ ಅವರ ದರ್ಶನ ಇತ್ಯಾದಿಗಳನ್ನು ಅಪೇಕ್ಷಿಸಬಾರದಾಗಿ ಅವರ ವಿನಂತಿ.

ಕ್ರಿಮಿನಾಶಕದ ಶೋಧೆ

ಕ್ರೂರ ಜಾಡ್ಯಗಳಿಗೆ ರಾಮಬಾಣ

ಈಚೆಗಿನ ಹತ್ತು ವರ್ಷಗಳಲ್ಲಿ ಕಂಡು ಹಿಡಿಯಲ್ಪಟ್ಟ ವಿಚಿತ್ರ ಪರಿಣಾಮಕಾರಿ ಸಂಶೋಧನೆಗಳಲ್ಲಿ ಅತ್ಯಂತ ಮಹತ್ವದೆನಿಸಿರುವ ಒಂದು ಕ್ರಿಮಿನಾಶಕ ಔಷಧಿಯು ಮಿತ್ರ ಸೇನಾಧಿಕಾರಿಗಳ ಪ್ರಶಂಸೆಗೆ ಒಳಗಾಗಿದೆ. 'ಡಿ. ಡಿ. ಟಿ.' ಎಂದು ಇದರ ಹೆಸರು.

ವಿಷಮ ಜ್ವರ, ಮಲೇರಿಯಾ, ವಾಂತಿಬೇದಿ, ಪ್ಲೇಗ್ ಮತ್ತು ಆಮಶಂಕೆ ಮೊದಲಾದ ಭಯಂಕರ ರೋಗಾಣುಗಳನ್ನು ಪ್ರಸರಿಸುವ ಸೊಳ್ಳೆ, ನುಸಿ, ತಗಣೆ, ಜಿರಳೆ, ಮುಂತಾದ ಕ್ರಿಮಿಕೀಟಗಳನ್ನು ಈ ಔಷಧವು ನಿರ್ಮೂಲಿಸುವುದು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧ ಪೇಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು-ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

ಕಾಪು ಶ್ರೀ ಹಳೆ ಮಾರಿಮ್ಮ ದೇವರ ಭಂಡಾರದ ಬಾಬ್ತು ತಾರೀಕು 30-7-[illegible] [illegible]ಗಿನ ಒಂದು ವರ್ಷದ ಜಮಾ ಖರ್ಚುಗಳ ವಿವರ.

ಜಮಾ ವಿವರಗಳು	ನಗದು ರೂ.	ಆ.	ಪೈ.	ಪವನು	ಬೆಳ್ಳಿಗೆ ಮು.	ಕ.	ಸೇ.	ಮಸ್ಕತಿ ಮು.	ಕ.	ಸೇ.	ಭತ್ತ ಮುಡಿ	ಕ್ವಾ.	ಶಿಯಾಳ
ಗುದಸ್ತಾ ಶಿಲ್ಕು		3	1										
ಗದ್ದಿಗೆ ಪೂಜೆ ಕಾಣಿಕೆ	3313	1	1										
ಕುಂಕುಮಾರ್ಚನೆ ಕಾಣಿಕೆ	19	10											
ನವರಾತ್ರಿ ಬಾಬ್ತು ನಗ್ದಿ ವ ಅಕ್ಕಿ	26	4			1	2	1						
ಮಾರಿಪೂಜೆ 3 ಹರಕೆ ಪೂಜೆ 4 ಕೂಡಾ 7 ಪೂಜೆಗಳ ಕಾಣಿಕೆ ಜಮಾ	1023		4										
ಅಕ್ಕಿ ರಿಕ್ವಿಜಿಶನ್ ಬಾಬ್ತು ವ ಭತ್ತ ಕ್ರಯ ಜಮಾ	800	9	2										
ಹರಕೆ ಬಂದ ಬಾಬ್ತು ಜಮಾ				4									
ವೆಂಕಟ್ರಮಣ ದೇವರ ಭಂಡಾರದಿಂದ					1	1	7	19		3¼			
ಅಸ್ತಿ ಉತ್ಪತ್ತಿ ವ ನಗ್ದಿ ಜಮಾ	573	8	9					88			56	319	479
ಯೋಗ್ಯಾದಿ ಈಡು ಬಾಬ್ತು ಮಂಗಳೂರು ಸಬ್ ಕೋರ್ಟು ಒ. ಪಿ. 28/43ನೇ ಅರ್ಜಿ ಬಾಬ್ತು ಜಮಾ	6000												
ಯೋಗ್ಯಾದಿ ಈಡು ಬಾಬ್ತು ಉಡ್ಪಿ ಡಿ. ಮು. ಕೋರ್ಟು ಒ. ಪಿ. 90/43ನೇ ಅರ್ಜಿ ಬಾಬ್ತು ಜಮಾ	1000												
ಮಾರಿಗುಡಿ ಜೀರ್ಣೋದ್ಧಾರ ಎದ್ರುವೇಗಳ ಬಗ್ಗೆ ಜಮಾ	55												
ಜುಮಲಾ	12811	4	5	4	3		8	107		3¼	56	319	479

ಖರ್ಚು ವಿವರಗಳು	ನಗದು ರೂ.	ಆ.	ಪೈ.	ಪವನು	ಬೆಳ್ಳಿಗೆ ಮು.	ಕ.	ಸೇ.	ಮಸ್ಕತಿ ಮು.	ಕ.	ಸೇ.	ಭತ್ತ ಮುಡಿ	ಕ್ವಾ.	ಶಿಯಾಳ
ಅಸ್ತಿಗಳ ಶೀರ್ವೆಗೆ	221	1										315	450
ಗದ್ದಿಗೆ ಪೂಜೆಗಳಿಗೆ	297	11	11							6			27
ನವರಾತ್ರಿ ಬಾಬ್ತು	370	6	9		1	2	1	6	1	7			
ಮಾರಿಪೂಜೆಗಳ ಬಾಬ್ತು	454	8	6					11	1	2¼			
ವ್ಯವಹರಣೆಗಳ ಖರ್ಚಿಗೆ	98	4	3										
ಅಸ್ತಿಗಳ ಕೃತದ ಖರ್ಚು	96	14	6							2		4	2
ನೌಕರರ ಸಂಬಳ	926	4						35					
ಎಂಡೋಮೆಂಟ್ ಬೋರ್ಡು ವ ಕಮಿಟಿ ಓಡಿಟರರ ಫೀಸು ಕೂಡಾ	275	12											
ಬರವಣಿಗೆ ಪ್ರಯಾಣ ಹಸೂರಿ	113	11	10										
ವೆಂಕಟ್ರಮಣ ದೇವರ ಭಂಡಾರಕ್ಕೆ	300												
ಉಡ್ಪಿ ದಿ C. B. C. ಬೇಂಕ್ ಡಿಪೋಜಿಟು	2256	1											
ಮಂಗಳೂರು ದಿ ಸೌತ್ ಕೆನರಾ ಸೆಂಟ್ರಲ್ ಕೋ-ಒಪರೇಟಿವ್ ಬೇಂಕ್ ಡಿಪೋಜಿಟು	6000												
ಧರ್ಮಶಾತೆ ವ ಗುರುಗಳ ಶಿಷ್ಯ ಸಂಗ್ರಹಕ್ಕೆ	92	9	11		1	1	7						
ಇಂಡಿಯಾ ಗವರ್ನಮೆಂಟು ರಿವೆನ್ಯೂ ಬೋರ್ಡು ನಂಬ್ರ 020451ಕ್ಕೆ	1000												
ಮಾರಿಗುಡಿ ಜೀರ್ಣೋದ್ಧಾರಕ್ಕೆ	18												
ರಿಕ್ವಿಜಿಶನ್ ಡಿಪೋವಿಗೆ ಅಕ್ಕಿ								54			56		
ಅಖೈರು ಶಿಲ್ಕು	289	14	9	4									
ಜುಮಲಾ	12811	4	5	4	3		8	107		3¼	56	319	479

ಹರಕೆ ಬಂದ ಬಾಬ್ತು ಮುಗುತಿ 23 ಕಡ್ಡಿ ಮುಗುತಿ 1 ಬೊಟ್ಟು 16 ಬೆಳ್ಳಿ ಕರಿಮಣಿ 3 ದಾರಿಮಣಿ 5 ಮಿತ್ರಿ 1 ಚಿನ್ನದ ಶಿರುವಿನ ಹೂ 1 ಚಿನ್ನದ ಕೊಳ್ಳಿ 2 ಬೆಳ್ಳಿ ಗೋಪು 1 ಬೆಳ್ಳಿ ತಗಡು 2ರ ತೊಲೆ 3 ಜರ್ಮನರ ಬೆಳ್ಳಿ ಕೂಡಾ ತೊಲೆ 3 ಬೆಳ್ಳಿ ಸರಿಗೆ ತುಂಡು ¼ ಕೂಡಾ ಶಿಲ್ಕು.

ಕಾಪು ಶ್ರೀ [illegible] 1944—45ಕ್ಕೆ [illegible] ಜಮಾ ಖರ್ಚಿನ ಬಜೇಟು ವಿವರ

1944-45ಕ್ಕೆ ಅಂದಾಜು ಜಮಾ	ಖಾತೆಯ ಹೆಸರು	[illegible]
289-14-0	ಆರಂಭದ ಶಿಲ್ಕು	
3000- 0-0	ಗದ್ದಿಗೆ ಪೂಜೆ ಮಾರಿ ಪೂಜೆ ಕೂಡಾ	
1200- 0-0	ಗೇಣಿ ಉತ್ಪತ್ತಿ ಅ[illegible] ನಗ್ದಿ ಕೂಡಾ	
	ಅಸ್ತಿಗಳ ಶೀರ್ವೆಗೆ	222-[illegible]
	ನೌಕರರ ಸಂಬಳ ಅಕ್ಕಿ ವಗೈರೆ ಕೂಡಾ	1200-0[illegible]
	ಮಾರಿಪೂಜೆ ಗದ್ದಿಗೆಪೂಜೆ ನವರಾತ್ರಿ ಕೂಡಾ	1400-0[illegible]
	ಎಂಡೋಮೆಂಟ್ ಬೋರ್ಡ್ ಕಮಿಟಿ ಪ್ರಯಾಣ ವಗೈರೆ ಕೂಡಾ	500-[illegible]
	ವೆಂಕಟ್ರಮಣ ದೇವರ ಭಂಡಾರಕ್ಕೆ	400-[illegible]
4489-14-9		3772-[illegible]

K. Narasimha Shenoy,
Man[illegible]

ಕಾಪು ಶ್ರೀ ವೆಂಕಟ್ರಮಣ ದೇವರ ಭಂಡಾರದ ಬಾಬ್ತು ತಾರೀಕು 30-7-43ರಿಂದ ತಾರೀಕು 27-7-44ರ ವರೆಗಿನ ಒಂದು ವರ್ಷದ ಜಮಾ ಖರ್ಚುಗಳ ವಿವರ.

ಜಮಾ ವಿವರಗಳು	ನಗದು ರೂ.	ಆ.	ಪೈ.	ಬೆಳ್ಳಿಗೆ ಮು.	ಕ.	ಸೇ.	ಮಸ್ಕತಿ ಮು.	ಕ.	ಸೇ.	ತೆಂಗಿನ ಕ್ಯಾ
ಗುದಸ್ತಾ ಶಿಲ್ಕು	20	5	10			6¼	32	2	7¼	4
504/39ನೇ ಡಿಕ್ರಿ ಬಾಬ್ತು ಮತ್ತು ಜಮಾ	496	4								
ಆಸ್ತಿ ಹುಟ್ಟುವಳ್ಳಿ ಜಮಾ	337	14		30	2		40	1	3	365
ಅಕ್ಕಿ ರಿಕ್ವಿಸಿಶನ್ ಬಾಬ್ತು ನಗ್ದಿ ಜಮಾ	500	1	8							
ಮಾರಿಮ್ಮ ದೇವರ ಭಂಡಾರದಿಂದ	300									
ಅಮೃತಪಡಿಗೆ ಬಂದ ಬಾಬ್ತು				2	2	13				
ಕಾಶಿ ಮಠದ ಕಾಣಿಕೆ ಜಮಾ	1	10								
ಪ್ರಾಣ ದೇವರ ಕಾಣಿಕೆ ಜಮಾ	1									
ವೆಂಕಟ್ರಮಣ ದೇವರ ಕಾಣಿಕೆ ಜಮಾ	6	7								
ಕ್ರಯದ ಅಕ್ಕಿ ವ ತೆಂಗಿನ ಕ್ಯಾ ಜಮಾ				30	1	7				365
ಬಡಗು ಸುತ್ತಿನ ಬಿಡಾರ ಬಾಡಿಗೆ ಜಮಾ	8	4								
ಜುಮ್ಲಾ ಜಮಾ	1671	14	6	64	0	12¼	73	0	10¼	734

ಖರ್ಚು ವಿವರಗಳು	ನಗದು ರೂ.	ಆ.	ಪೈ.	ಬೆಳ್ಳಿಗೆ ಮು.	ಕ.	ಸೇ.	ಮಸ್ಕತಿ ಮು.	ಕ.	ಸೇ.	ತೆಂಗಿನ ಕ್ಯಾ
ಅಸ್ತಿಗಳ ಶೀರ್ವೆಗೆ	121	11								
ಎಂಡೋಮೆಂಟ್ ಬೋರ್ಡು ವ ಕಮಿಟಿ ಫೀಸು	33	2								
ಅನಂತ ವೃತದ ಕಲಶ ಪೂಜೆಗೆ	7	15	7							
ಸಮಾರಾಧನೆ ಶಾಶ್ವತ ಸಂತರ್ಪಣೆ	192	9	2	4	2	10	3		7	
ಉತ್ಸವಗಳ ವಸಂತಗಳ ಖರ್ಚು	252		2							
ನಿತ್ಯ ವಿನಿಯೋಗಗಳ ಅಕ್ಕಿ ತೆಂಗಿನಕ್ಯಾ ಎಲೆ ಅಡಕೆ ಆರತಿಬತ್ತಿ ನಂದಾದೀಪ ಎಣ್ಣೆ ಕ್ರಯ ಕೂಡಾ	912	2	6							728
ನೌಕರರ ಸಂಬಳ	114									
ಬರವಣಿಗೆ ಪ್ರಯಾಣ ಹಸೂರಿ ಕೂಡಾ	15	8	9							
ಮಾರಿಮ್ಮ ದೇವರ ಭಂಡಾರಕ್ಕೆ				1	1	7	19		3¼	
ಅಮೃತ ಪಡಿಗೆ ಅಕ್ಕಿ ಖರ್ಚು				43	1					
ರಿಕ್ವಿಸಿಶನ್ ಡಿಪೊವಿಗೆ ನೌಕರರಿಗೆ							51			
ಅಖೈರು ಶಿಲ್ಕು	22	13	4	14	1	9¼				6
ಜುಮಲಾ	1671	14	6	64	0	12¼	73	0	10¼	734

ಕಾಪು ಶ್ರೀ ವೆಂಕಟ್ರಮಣ ದೇವರ ಭಂಡಾರದ [illegible] 1944—45ಕ್ಕೆ ಒಂದು ವರ್ಷದ ಅಂದಾಜು ಜಮಾ ಖರ್ಚಿನ ಬಜೇಟು ವಿವರ.

1944-45ಕ್ಕೆ ಅಂದಾಜು ಜಮಾ	ಖಾತೆಯ ಹೆಸರು	194[illegible]
22-13-4	ಆರಂಭದ ಶಿಲ್ಕು	
168- 0-0	ಬೆಳ್ತಿಗೆ ಶಿಲ್ಕು ಅಕ್ಕಿ ಮುಡಿ 14-1-9¼	
150- 0-0	ಗೇಣಿ ಉತ್ಪತ್ತಿ ನಗ್ದಿ	
1000- 0-0	ಗೇಣಿ ಅಕ್ಕಿ ಮುಡಿ ಹಿಂದಿನ ಬಾಕಿ ಕೂಡಾ 123	
6- 0-0	ತಸ್ತಿಕು	
5- 0-0	ಕಾಣಿಕೆಗಳಿಂದ ಜಮಾ	
400- 0-0	ಮಾರಿಮ್ಮ ದೇವರ ಭಂಡಾರದಿಂದ ಈ ಭಂಡಾರಕ್ಕೆ ಜಮಾ	
	ಅಸ್ತಿಗಳ ಶೀರ್ವೆ	[illegible]
	ನಿತ್ಯಕಟ್ಲೆ ವಿನಿಯೋಗಗಳಿಗೆ	800-[illegible]
	ವಿಶೇಷ ಕಟ್ಲೆ ಉತ್ಸವ	450-[illegible]
	ನೌಕರರ ಸಂಬಳ	114-[illegible]
	ಸಾದಿಲವಾರು ಖರ್ಚು	20-[illegible]
	ಕಟ್ಟಡ ವಾಹನ ದುರುಸ್ತಿ	40-[illegible]
	ಬೋರ್ಡು ಕಮಿಟಿ ವ್ಯವಹರಣೆ ಕೂಡಾ	75-[illegible]
1751-13-4		168[illegible]

K. Narasimha Shenoy,

The Bank of Mangalore Limited, Mangalore.

ESTD: 1931

HEAD OFFICE BUNDER Mangalore. MANGALORE. BRANCHES Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)

(½% from July to Decr.)

Savings bank Accounts 1½% p. a. on daily balances

Fixed Deposits 6 months 2% p. a.

12 months 2½% p. a.

24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ವೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮವು ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low ★ 2½% Rebate on annual premiums.

★ "Permanent Disability Benefits free of any cost

★ Payment of double the insured amount in case of death by accident at a very smallcost of Rs 1-8-0 per 1000.

★ Special rebates on large size policies.

★ A special scheme by which lapsed policies can be revived without paying the arrears

★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic Increases the vitality and sexual vigour Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಹುಂಟುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ೩೮] ತಾರೀಖು 11—8—1944 [ಸಂಚಿಕೆ 32]

ಕ್ಷಿಪ್ರದಲ್ಲೇ ಜಪಾನ್ ಜರ್ಮನಿಗಳ ಸೋಲು

ಚರ್ಚಿಲ್ಲರ ಭಾಷಣ ಸಾರಾಂಶ

ತಾ. ೨ರಂದು ಪಾರ್ಲಿಮೆಂಟಿನಲ್ಲಿ ಪ್ರಧಾನ ಚರ್ಚಿಲ್ಲರು ಕೊಟ್ಟ ಭಾಷಣದ ಸಾರಾಂಶವು ಈ ಕೆಳಗಿನಂತೆ ಇವೆ.

ಹಿಟ್ಲರನ ಜರ್ಮನಿಯನ್ನೂ, ಜಪಾನರನ್ನೂ ಹಿಂದೆ ಯೋಚಿಸಿದ ಅವಧಿಗಿಂತಲೂ ಕ್ಷಿಪ್ರವಾಗಿ ಸೋಲಿಸಲಾಗುವುದು. ಜರ್ಮನಿಯ ಅಂತರಿಕ ಶಾಂತಿ ಭಂಗವಾಗಿ ಉಚ್ಚ ಅಧಿಕಾರಿಗಳು ಒಬ್ಬರನ್ನೊಬ್ಬರು ಕೊಲ್ಲುತ್ತಿರುವರು ಅಮೆರಿಕಕ್ಕೆ ಹೋಗಿ ಸಂಧಾನ ಆಜ್ಞೆ ಕೊಡುವೆವಾಗಿ ಜಂಬ ತೊಟ್ಟು ಕೊಳ್ಳುತಿದ್ದ ಜಪಾನ್ ಮಂತ್ರಿಗಳು ರಾಜಿನಾಮೆ ಕೊಟ್ಟು ಓಡುವಂತಾಯಿತು ಬೆಳೆಯುತ್ತಿರುವ ಅಮೆರಿಕನ್ ನೌಕಾ ಬಲದ ಎದುರು ಜಪಾನ್ ನೌಕೆಯು ಅಡಗಿ ನಿಂತಿರುತ್ತದೆ

ಅಸ್ಸಾಂ ರಂಗ

ಅಸ್ಸಾಂ ಕಡೆಯಿಂದ ಹಿಂದೂಸ್ಥಾನವನ್ನು ಮುತ್ತಲು ಹಂಚಿಕೆ ಹಾಕಿದ ಜಪಾನರನ್ನೂ ಪ್ರತಿ ದಿಕ್ಕಿನಲ್ಲೂ ಹಿಂದೂಡಲಾಗಿದೆ ಉತ್ತರ ಬರ್ಮಾದಲ್ಲಿನ ಪ್ರಾಮುಖ್ಯ ಪ್ರದೇಶಗಳನ್ನೂ ವಶಪಡಿಸಲಾಗಿದೆ. ಸೈನಾಧಿಕಾರಿ ಮೌಂಟ್‌ಬೆಟನರೂ ನೌಕಾಧಿಕಾರಿ ಸೊಮ್ಮರ್‌ವಿಲ್ ಇವರ ನಾಯಕತ್ವದ ಪರಿಣಾಮವಾಗಿ ಹಿಂದೂಸ್ಥಾನಕ್ಕೆ ಶತ್ರು ಭಯವು ಒಂದು ವರ್ಷಕ್ಕೆ ಇಲ್ಲದಂತಾಗಿದೆ ಇಲ್ಲಿಯ ನೌಕಾಬಲವನ್ನೂ ಇಮ್ಮಡಿಸಲಾಗಿದೆ

ಫ್ರಾನ್ಸ್ ಮುಕ್ತಿಗೆ

ಇಲ್ಲಿನ ಎಲ್ಲಾ ಕ್ಷೇತ್ರಗಳಲ್ಲೂ ಮಿತ್ರದಳಗಳು ಯಶಸ್ವಿಯಾಗಿ ಮುಂದೊತ್ತುತ್ತಿವೆ. ಮುಖ್ಯ ರೈಲ್ವೇ ಠಾಣ್ಯಗಳನ್ನು ಸದ್ಯದಲ್ಲಿ ವಶಪಡಿಸಲಾಗುವುದು. ವಿಮಾನ ಚಟುವಟಿಕೆಗಳು ಅತ್ಯಂತ ಭೀಕರ ಪರಿಣಾಮ ಮಾಡಿವೆ. ಆದರೆ ಎಪ್ರಿಲ್‌ನಿಂದ ಜೂನ್ ವರೆಗೆ ೭ ಸಾವಿರ ವೈಮಾನಿಕರು ನಾಶವಾಗಿದ್ದಾರೆ. ಇಲ್ಲವೆ ಬೇರೆ ರೀತಿಯಲ್ಲಿ ಅದೃಶ್ಯರಾಗಿದ್ದಾರೆ

ಇಟೆಲಿಯಲ್ಲಿ

ರೋಂ ನಗರವನ್ನು ಸಂಪೂರ್ಣ ಶತ್ರುಭಯದಿಂದ ಕಾಪಾಡಲಾಗಿದೆ ಸ್ವಾರಸ್ಯದ ವಿಷಯವೆಂದರೆ ಈ ರಂಗದಲ್ಲಿ ಅನೇಕ ಜನಾಂಗಿಕರ ಸೈನ್ಯ ಪಡೆಗಳು ಮಿತ್ರರೊಡನೆ ಸಹಕರಿಸಿ ಕಾದಾಡುತ್ತಿವೆ. ಬ್ರಿಟಿಷ್ ರಾಷ್ಟ್ರ ವರ್ಗಕ್ಕೆ ಸೇರಿದ ಸೈನಿಗಳು, ಗ್ರೀಕರು, ಆಫ್ರಿಕಾನರು, ಪೋಲ್ಸ್, ಫ್ರೆಂಚರು, ಕೆನಡಿಯನರು, [illegible]

ರಶ್ಯನ್ ಕ್ಷೇತ್ರ

ಇಷ್ಟರ ವರೆಗ ಹೆಚ್ಚಿನ ಸಾಹಸ ರಶ್ಯನರದು ಸೇನಾಪತಿ ಸ್ಟಾಲಿನರಿಗೆ ನಮ್ಮ ಸನ್ಮಾನ ಪೂರ್ವಕ ವಂದನೆಗಳು ಜರ್ಮನರ ಕೊಬ್ಬು ಇಳಿಸಿದ್ದು ರಶ್ಯನರು. ಬ್ರಿಟನ್ ರಶ್ಯಗಳೊಳಗಿನ ೨೦ ವರ್ಷಗಳ ಸಂಧಾನ ಕರಾರು ಯುರೋಪಿನ ಶಾಂತಿಗೆ ಸಹಾಯಕವಾಗಿದೆ

ರೆಕ್ಕೆ ಬಾಂಬು ಹಾವಳಿ

೭ ವಾರಗಳಿಂದ ಈ ಅಸ್ತ್ರವು ಲಂಡನ ಮತ್ತು ಆಸುಪಾಸು ಪ್ರದೇಶಗಳನ್ನು ಏಕ ಪ್ರಕಾರವಾಗಿ ತೊಂದರೆ ಗೊಳಿಸುತ್ತಿದೆ ೧೦ ಲಕ್ಷ ಜನರು ಲಂಡನಿನಿಂದ ಹೊರ ಹೋಗಿರುವರು ೪,೭೩೫ ಜನರು ಇದಕ್ಕೆ ತುತ್ತಾಗಿರುವರು ೧೪ ಸಾವಿರ ಜನರು ಗಾಯ ಗೊಂಡಿರುವರು ೧೭ ಸಾವಿರ ಮನೆಗಳು ಸಂಪೂರ್ಣ ನಾಶವಾಗಿವೆ ೮ ಲಕ್ಷ ಮನೆಗಳು ಜಖಂಗೊಂಡಿವೆ ಇವುಗಳಲ್ಲಿ ೬ ಲಕ್ಷ ವಸತಿಗಳನ್ನು ದುರುಸ್ತಿ ಮಾಡಿ ಸರಿ ಮಾಡಲಾಗಿದೆ ನೂರಾರು ಯಂತ್ರ ವಿಜ್ಞಾನಿಗಳು, ಈ ರೆಕ್ಕೆ ಬಾಂಬುಗಳನ್ನು ತಡೆಯುವ ಸಾಧನ ಕಂಡು ಹಿಡಿಯಲು ಹಗಲು ರಾತ್ರಿ ಪರಿಶೋಧನೆ ನಡೆಸುತ್ತಿರುವರು. ಆದರೆ ಇವುಗಳ ಠಾಣ್ಯಗಳನ್ನೇ ಹಿಡಿದೇ ಅದರ ಹಾನಿ ತಪ್ಪಿಸಬೇಕು

ಟರ್ಕಿ ಧೋರಣೆ

ಟರ್ಕಿಯು ಜರ್ಮನಿಯೊಡನೆ ಸಂಬಂಧವನ್ನು ಕಡಿದು ಕೊಂಡಿದೆ ಎಂದು ಅಧಿಕಾರ ಯುಕ್ತವಾಗಿ ತಿಳಿದಿದೆ ಇದು ಇಂಗ್ಲೆಂಡ್ ಟರ್ಕಿ ಒಪ್ಪಂದದ ಪರಿಣಾಮ ಈಗ ಆ ದೇಶವು ಶತ್ರು ಧಾಳಿಗೆ ಗುರಿಯಾಗಬಹುದು. ಆ ಸಂಧರ್ಭದಲ್ಲಿ ನಾವು ಅದರ ಸಹಾಯಕ್ಕೆ ಖಂಡಿತವಾಗಿ ಹೋಗುತ್ತೇವೆ

ಭಾವೀ ಯೋಜನೆ

ಯುದ್ಧಾನಂತರ ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲು ಈಗ ಯುದ್ಧ ಗೆಲ್ಲುವ ಪ್ರಮುಖ ಜನಾಂಗಗಳ ಒಂದು ಸಭೆಯಾಗಿ ಅನಂತರ ಇತರ ರಾಷ್ಟ್ರಗಳಿಗೆ ಅವುಗಳ ಯೋಗ್ಯತಾನುಸಾರ ಸ್ಥಾನ ಕೊಡುವಂತಾದರೆ ಆಗದೆ? ಎಲ್ಲಾ ರಾಷ್ಟ್ರಗಳ ಸಭೆಯೊಂದು ಜಗತ್ತಿನ ಆಡಳಿತವನ್ನು ನಿರ್ದೇಶಿಸುವಂತಾಗಬೇಕು.

ಭಾರತದ ಭವಿಷ್ಯ

ಅಸ್ವಾದ ಜನಾಂಗಗಳಿಗೆ ಪಾರತಂತ್ರ್ಯವೇ ಗತಿ

ಯುದ್ಧ ಅವಧಿಯ ವರೆಗೆ ಹಿಂದೂಸ್ಥಾನದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿಸುವುದರಿಂದ ಮಿತ್ರರ ನೈತಿಕ ಬಲವು ಹೆಚ್ಚುವುದೆಂದು ಹಿಂದೊಮ್ಮೆ ಗಾಂಧೀಜಿ ಹೇಳಿದ್ದರು. ನೀತಿಯ ಮಾತು ಯಾರಿಗೂ ರುಚಿಸದು. ತಮಗೆ ಇದರಿಂದ ಇತರ ಲಾಭಗಳೇನಾದರೂ ಸಿಗುತ್ತದೆಯೇ ಎಂದು ಸಾಮಾನ್ಯ ಬ್ರಿಟಿಷನೊಬ್ಬನು ಪ್ರಶ್ನಿಸಲಿಚ್ಛಿಸುವನು. ಜಾಗತ್ತಿಕ ಸ್ವಾತಂತ್ರ್ಯಕ್ಕಾಗಿ ಹೋರಾಡುವವರಿಗೆ ಭಾರತಕ್ಕೆ ಸ್ವಾತಂತ್ರ್ಯ ಕೊಡುವಾಗ ಮಾತ್ರ ಲಾಭ ಪಡೆಯುವ ಇಚ್ಛೆ ಏತಕ್ಕೆ? ಯುದ್ಧಕಾಲದಲ್ಲಿ ಅವರ ಸಮರ ಸಿದ್ಧತೆಗಳಿಗೆ ತೊಂದರೆ ಬರಬಹುದಿದ್ದರಾಯಿತು ಕೆನಡಾ ಆಸ್ಟ್ರೇಲಿಯಾಗಳಿಗೆ ಸಾಮಂತ ಸ್ವರಾಜ್ಯವನ್ನು ಕೊಟ್ಟಿದ್ದರಿಂದ ಮಿತ್ರ ಯುದ್ಧ ಪ್ರಗತಿಗೆ ತೊಂದರೆ ಸಂಭವಿಸಲಿಲ್ಲ ಯುದ್ಧ ಚಟುವಟಿಕೆಯಲ್ಲಿ ಭಾಗವಹಿಸಲು ಕಾಂಗ್ರೆಸು ಸಿದ್ಧವಿರುವುದಾಗಿ ಗಾಂಧೀಜಿಯವರು ಸ್ವಷ್ಟವಾಗಿ ತಿಳಿಸಿರುವರು

ಗಾಂಧೀಜಿಯವರು ತಮ್ಮ ಧೋರಣೆಯನ್ನು ತೃಪ್ತಿಕರವಾಗಿ ಸ್ಪಷ್ಟೀಕರಿಸಿದ ಮೇಲೂ ಸಾಮ್ರಾಜ್ಯವಾದಿಗಳು ಹಿಂದೂಸ್ಥಾನದ ಸ್ವಾತಂತ್ರ್ಯದ ವಿಚಾರ ಅಂತ್ಯವಿಲ್ಲದ ತೊಡಕುಗಳನ್ನು ತೋರಿಸಲು ಪ್ರಯತ್ನಿಸುತ್ತಿರುವುದರಿಂದ ಒಂದು ವಿಷಯವು ಸ್ಪಷ್ಟವಾಗಿ ತಿಳಿದು ಬರುತ್ತದೆ— ಒಂದು ವೇಳೆ ಯುದ್ಧಾನಂತರ ಹಿಂದೂಸ್ಥಾನಕ್ಕೆ ರಾಜಕೀಯ ಸ್ವಾತಂತ್ರ್ಯ ಕೊಟ್ಟರೂ ಸೈನ್ಯ ರಕ್ಷಣೆಯ ಹೊಣೆಗಾರಿಕೆಯನ್ನು ಮಿತ್ರ ಕೊಟ್ಟದವರೇ ಹೊತ್ತುಕೊಂಡಿರುವರೆಂಬುದು ಖಂಡಿತ ತೋರುತ್ತದೆ ಅದು ಯೂರೋಪಿನ ಶಕ್ತಿ ರಾಷ್ಟ್ರಗಳ ಆಜನ್ಮಸಿದ್ಧ ಹಕ್ಕು ಇತರ ರಾಷ್ಟ್ರಗಳು ತಮ್ಮ ಒಳ ಆಡಳಿತವನ್ನು ಮಾತ್ರ ನೋಡಿಕೊಂಡು ಇರಬೇಕು, ತಮ್ಮ ರಕ್ಷಣೆ ಸೈನ್ಯ ರಚನೆಗಾಗಿ ಇವುಗಳು ಶಕ್ತಿ ರಾಷ್ಟ್ರಗಳ ಮೇಲೆ ಹೊಂದಿಕೊಂಡಿದ್ದು ಅವುಗಳಿಗೆ ಜನ ಧನಗಳ ಕಪ್ಪಕಾಣಿಕೆ ಸಲ್ಲಿಸಿಕೊಂಡು ಬರಬೇಕು

ಇಂತಹ ತರ್ಕಗಳೆಲ್ಲ ಯುರೋಪಿನ ಹೊರಗಿರುವ ರಾಷ್ಟ್ರಗಳಿಗೆ ಮಾತ್ರ ಸೂಚಿಸಲ್ಪಡುತ್ತಿರುವುದು ಆಶ್ಚರ್ಯದ ಸಂಗತಿ ಯುರೋಪಿನ ಮಟ್ಟಿಗೆ ಅಲ್ಲಿನ ಪ್ರಮುಖ ರಾಷ್ಟ್ರಗಳು ತಮ್ಮ ಹಿಂದಿನ ಸಾಮ್ರಾಜ್ಯಗಳನ್ನೂ ಆಳಿಕೊಂಡಿರಬಹುದು ಅಂದರೆ ಆ ಸಾಮ್ರಾಜ್ಯಗಳಿರುವುದು ಹೆಚ್ಚಾಗಿ ಆಸ್ಯಾ ಖಂಡದಲ್ಲಿ, ಒಟ್ಟಿನಲ್ಲಿ ಆಸ್ಯಾಖಂ[illegible] ಆಗುವುದು ಕಾರಣ ಚರ್ಚಿಲ್ಲರು ಫ್ರಾನ್ಸಿನ ವಿಚಾರ ಮಾತನಾಡುವಾಗ ಒಮ್ಮೆ "ಫ್ರಾನ್ಸು ತನ್ನ ಹಿಂದಿನ ವೈಭವಕ್ಕೆ ಬರುವಂತೆ ಮಾಡುವುದು ನಮ್ಮ ಗುರಿ." ಎಂದು ಹೇಳಿದರು ಹಿಂದಿನ ವೈಭವಕ್ಕೆ ಬರಬೇಕಾದರೆ ಫ್ರಾನ್ಸಿಗೆ ವಸಾಹತುಗಳು ಇರಲೇಬೇಕು.

ಯುದ್ಧಗಳು ಪ್ರಾರಂಭವಾಗಿರುವುದು ಯುರೋಪಿನಲ್ಲೇ ಕಾರಣ ಅಲ್ಲಿಯ ರಾಷ್ಟ್ರಗಳು "ಸಮಯ ಸಿಕ್ಕಿದಾಗ ಶಕ್ತಿ ಸಾಧಿಸುವ" ಧೋರಣೆಯವುಗಳು. ಎಲ್ಲರಿಗೂ ವಸಾಹತುಗಳು ಬೇಕು ಎಲ್ಲರಿಗೂ ಸಾಮ್ರಾಜ್ಯಗಳು ಬೇಕು ಇವರ ಆಶೆ ಆಕಾಂಕ್ಷೆಗಳಿಂದಾಗಿ ವಸಾಹತುಗಳಲ್ಲಿ ಜನರು ತಮ್ಮ ಸ್ವಾತಂತ್ರ್ಯ ಕಳಕೊಂಡು ಬದುಕಿದರಾಯಿತು.

ಚರ್ಚಿಲ್ಲರು ಹೇಳುತ್ತಾರೆ "ಯುರೋಪಿನ ಸಮಸ್ಯೆ ಬಿಡಿಸಲು ನಾನು ಬ್ರಿಟಿಷ್ ಸಾಮ್ರಾಜ್ಯದ, ಸಂಯುಕ್ತ ಅಮೆರಿಕದ, ರಶ್ಯದ ಮತ್ತು ಫ್ರೆಂಚರ ಸಹಕಾರವನ್ನು ಪಡೆಯಲೆಳೆಸುತ್ತೇನೆ" ಎಂದು "ಇಲ್ಲಿ ಬ್ರಿಟಿಷ್ ಸಾಮ್ರಾಜ್ಯವೆಂದರೆ ಕೆನಡಾ ಮತ್ತು ಆಸ್ಟ್ರೇಲಿಯಾ ಇಂಡಿಯದ ಮತ್ತು ಮುಖ್ಯವಾಗಿ ಚೀನದ ಕೂಡಾ ಪ್ರಶ್ನೆಯೇ ಅವರ ಯೋಜನೆಯಲ್ಲಿ ಇಲ್ಲವೆಂದೇ ಅರ್ಥವಾಗುತ್ತದೆ. ಅವರಮಟ್ಟಿಗೆ ಅದೇನು ವಿಚಿತ್ರವಲ್ಲ ಏಕೆಂದರೆ ಭಾವಿಜಗತ್ತಿನ ಆಡಳಿತದ ಯೋಜನೆಯ ಕುರಿತು ಹೇಳುವಾಗ ಅವರು "ಯುದ್ಧ ಗೆಲ್ಲುವ ರಾಷ್ಟ್ರಗಳ ಒಂದು ಸಭೆಯೇ ಇತರ ಜನಾಂಗಗಳ ಸ್ಥಾನಮಾನಗಳನ್ನು ನಿರ್ದೇಶಿಸುವಂತಾದರೆ ಸಾಲದೆ?" ಎಂದು ಪ್ರಶ್ನಿಸಿರುವುದು ಗಾಳಿ ಎತ್ತ ಕಡೆ ಬೀಸುತ್ತದೆಂದು ತಿಳಿಸುತ್ತದೆ

ವಿಜಯದ ನಂತರ ಬರೀ ಎರಡು ಅಥವಾ ಮೂರು ಪ್ರಬಲ ರಾಷ್ಟ್ರಗಳೇ ಜಗತ್ತಿನ ಆಡಳಿತವನ್ನು ನಿರ್ದೇಶಿಸುವಂತಾಗಬಾರದು ಈ ರಾಷ್ಟ್ರಗಳು ಮಾತ್ರ ಮುಂಬರುವ ಶಾಂತಿಸಂಧಾನದ ಅನುಕೂಲತೆ ಪಡೆಯುವಂತಾದರೆ ಅದು 1918 ರ ವರ್ಸೆಲಿಸ್ ಒಪ್ಪಂದದಂತಾಗಿ ಇನ್ನೊಂದು ಯುದ್ಧದ ತಳಹದಿಯಾಗದಿರದು

ಆದುದರಿಂದ "ಎಂದಿಗೆ ಜಗತ್ತಿನ ಎಲ್ಲಾ ಜನಾಂಗಿಕರಿಗೆ ನ್ಯಾಯ, ಸಮಾನತೆಗಳಿಂದ ಕೂಡಿದ ಹಕ್ಕು ಸ್ವಾತಂತ್ರ್ಯಗಳು ಸಿಕ್ಕುವಂತಾಗುತ್ತದೋ ಅಂದೇ ಆಚ್ಚಿನ ರಾಷ್ಟ್ರಗಳ ಸಂಪೂರ್ಣ ಸೋಲಾಯಿತೆಂದು ತಿಳಿಯಬೇಕು" ಎಂದು ಗಾಂಧಿಜಿ ಹೇಳಿದರಲ್ಲಿ ಮಹತ್ತದ ಅರ್ಥವಿದೆ.

[illegible]

ತಾರೀಕು 11—8—1944

ಮಹತ್ವದ ಮಾತುಕತೆ

ಮುಂದಿನ ಕೆಲವು ದಿನಗಳೊಳಗೆ ಬೊಂಬಾಯಿಯಲ್ಲಿ ಮಹಾತ್ಮಾಜೀಯವರೂ ಜಿನ್ನಾ ಸಾಹೇಬರೂ ಅತ್ಯಂತ ಮಹತ್ವದ ನಿರ್ಣಯಗಳಿಗಾಗಿ ಒಟ್ಟು ಸೇರಿ ಮಾತುಕತೆ ನಡೆಸಲಿರುವರು. ಮಹಾತ್ಮರೊಡನೆ ಸಂಧಾನ ವ್ಯವಹಾರ ನಡೆಸಲು ಜಿನ್ನರು ಸಂಪೂರ್ಣ ಅಧಿಕೃತರಾಗಿರುವರು.

ಹಿಂದೆ ಅನೇಕ ತೊಡಕುಗಳಿಂದಾಗಿ ಇಂತಹ ವ್ಯಯುಕ್ತಿಕ ಮಾತುಗಳಿಗೆ ಬೇಕಾದ ತೃಪ್ತಿಕರ ವಾತಾವರಣವಿದ್ದಿಲ್ಲ. ಗಾಂಧಿಜೀ ಹಿಂದುಗಳ ಪ್ರತಿನಿಧಿಯಾಗಿರುವರೆಂದೂ ಲೀಗ್ ಮುಸಲ್ಮಾನರೆಲ್ಲರ ಏಕಮಾತ್ರ ಪ್ರತಿನಿಧಿ ಸಂಸ್ಥೆ ಎಂದೂ ಗಾಂಧೀಜಿಯವರು ಒಪ್ಪಬೇಕೆಂದು ಜಿನ್ನರು ಹಟತೊಟ್ಟಿದ್ದರು. ದೇಶವನ್ನು ವಿಭಾಗಿಸುವ ತತ್ವಕ್ಕೆ ಕಾಂಗ್ರೆಸಿನ ಸಂಪೂರ್ಣ ವಿರೋಧವಿತ್ತು.

ಈಗ ಈ ಅಭ್ಯಂತರಗಳು ಇಲ್ಲವಾಗಿ ಸಂಧಾನಕ್ಕೆ ದಾರಿಯು ಸುಗಮವಾಗಿದೆ. ಗಾಂಧೀಜಿಯವರು ಪಾಕಿಸ್ಥಾನ ತತ್ವವನ್ನು ಸ್ವೀಕರಿಸಿರುವರು. ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಗಾಂಧೀಜಿಯವರೊಡನೆ ಮಾತುಕತೆ ನಡೆಸಲು ಜಿನ್ನರು ಒಪ್ಪಿರುವರು.

ಮಾತುಕತೆಗಳನ್ನು ಯಶಸ್ವಿಗೊಳಿಸುವುದಕ್ಕೆ ತಮಗಿರುವ ಶ್ರದ್ಧೆಯನ್ನು ಗಾಂಧೀಜಿಯವರು ಸಾರ್ವಜನಿಕವಾಗಿ ಸಾರಿ ಹೇಳಿರುವರು. ಇದೇ ತರದ ಉತ್ಸುಕತೆಯನ್ನು ಜಿನ್ನರು ಪ್ರದರ್ಶಿಸಿದಲ್ಲಿ ಸಂಧಾನ ಯಶಸ್ವಿಯಾಗದಿರಲಿಕ್ಕೆ ಯಾವ ಕಾರಣವಿಲ್ಲ.

ರಾಜಾಜಿಯವರು ಆಗಲೇ ಜಿನ್ನರ ಕೆಲವೊಂದು ಪ್ರಕಟಣೆಗಳಲ್ಲಿ ಆಶಾಕಿರಣವನ್ನೂ ಕಂಡಿರುವರು. "ಭಾರತ ಸ್ವಾತಂತ್ರ್ಯ ಭಾವವನ್ನು ಕೊರಳು ಹಿಸುಕಿ ನಾಶಮಾಡಲು ಪ್ರಯತ್ನಿಸುವ ಪೈಶಾಚಿಕ ಒಳಸಂಚನ್ನು" ಮುರಿಯುವುದು ಈ ಮಾತುಕತೆಗಳ ಗುರಿಯಾಗಿದೆ ಎಂದೂ ಅವರು ಅಂದಿರುವರು. ಜಿನ್ನಾ ಸಾಹೇಬರು ಈ ಸಂದರ್ಭದಲ್ಲಿ ತಮ್ಮ ಮಹತ್ವದ ಹೊಣೆಗಾರಿಕೆಯನ್ನು ತಿಳಿದುಕೊಳ್ಳುವರಾಗಿ ನಂಬಲಾಗಿದೆ. ಯಾಕೆಂದರೆ ಈ ಮಾತುಕತೆಗಳ ಸೋಲುಗೇಲುಗಳ ಹೊಗಳು ತೆಗಳುವಿಕೆಗಳು ಅವರನ್ನೇ ಹೊಂದಿಕೊಂಡಿವೆ ಎಂಬುದರ ನಿರ್ವಿವಾದ.

ಶುಭ ಚಿಹ್ನೆ

ರಶ್ಯನ್ ಪತ್ರಿಕೆಗಳು ಭಾರತ ಸಮಸ್ಯೆಗಳಲ್ಲಿ ಗಣನೀಯ ಅಭಿರುಚಿಯನ್ನು ತೋರಿಸಲು ಪ್ರಾರಂಭಿಸಿವೆ. ನಮ್ಮ ದೇಶದ ಕಡೆಗೆ ಬ್ರಿಟಿಷರು ಕೈಕೊಂಡ ಧೋರಣೆಯನ್ನು ಅವುಗಳು ಕಡುವಾಗಿ ಟೀಕಿಸುತ್ತಿರುವುದಾಗಿ ವಾರ್ತಾ ವರದಿಗಳಿಂದ ತಿಳಿದು ಬರುತ್ತದೆ. ಬಹಳ ಕಾಲದಿಂದ ಅಮೇರಿಕದ ಮತ್ತು ಚೀನದ ವಾರ್ತಾ ಸಂಸ್ಥೆಗಳು ಭಾರತ ಸಮಸ್ಯೆಯ ಕಡೆಗೆ ಗಮನಕೊಡುತ್ತಲಿವೆ. ಸಮಾಜ [illegible]

[illegible] ಕಡೆಗೆ ಕಿವುಡು ಮುಖಂಡರ ಕಣ್ಣುಗಳನ್ನು ತೆರೆಸಿದಂತಾಗಿದೆ.

ಭಾರತ ಸಮಸ್ಯೆಯು ನಿಜವಾಗಿ ಬ್ರಿಟನ್ನಿಗೆ ಸಮಸ್ಯೆಯಲ್ಲವೆಂತಲೂ ಅದು ಮಿತ್ರ ರಾಷ್ಟ್ರಗಳೆಲ್ಲರಿಗೂ ಸಂಬಂಧಪಟ್ಟದ್ದಾಗಿದೆಯಾಗಿಯೂ ಮನ ಕೊಂಡಂತಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಕೊಡುವುದು ಯುದ್ಧದ ಯಶಸ್ವಿಗೆ ಸಹಾಯಕರವಾದುದು ಮಾತ್ರವಲ್ಲ ಮುಂದಿನ ಶಾಂತಿ ರಕ್ಷಣೆಗೆ ಅದು ಅವಶ್ಯವಿರುತ್ತದೆ.

ಆರ್. ಎ. ಎಫ್. ವಿಮಾನ ದಳದ ೪೦ ಮಂದಿ ಸದಸ್ಯರು 'ಡೈಲಿ ವರ್ಕರ್' ಪತ್ರಿಕೆಗೆ ಕಳುಹಿಸಿದ ಒಂದು ಪತ್ರದಲ್ಲಿ 'ಫೆಸಿಸ್ಟ್ ತತ್ವದ ಜಪಾನನ್ನು ಸೋಲಿಸಲಿಕ್ಕೆ ಹಿಂದೂಸ್ಥಾನದಲ್ಲಿ ಪ್ರಜಾ ಪ್ರತಿನಿಧಿ ಸರಕಾರ ಸ್ಥಾಪನೆಯು ಅವಶ್ಯಕತೆ ಇದೆ" ಎಂದು ಒತ್ತಿ ಹೇಳಿರುವರು ಇದು ಇನ್ನೊಂದು ಶುಭ ಚಿಹ್ನೆ ಇದೆ. ಮತ್ತು ಮೇಲಿನ ಊಹನೆಯನ್ನು ಸಮರ್ಥಿಸುತ್ತದೆ. ಮಿತ್ರ ರಾಷ್ಟ್ರಗಳು ಭಾರತದ ಸಮಸ್ಯೆಗಳ ಕಡೆಗೆ ಹೆಚ್ಚು ಕಾಲ ಅಲಕ್ಷ್ಯ ತೋರಿಸಲು ಶಕ್ಯವಿಲ್ಲ. ರಶ್ಯನರಿಂದ ಮತ್ತು ಆರ್. ಎ. ಎಫ್. ಪ್ರತಿನಿಧಿಗಳಿಂದ ತೋರಿಸಲ್ಪಟ್ಟ ಈ ಸಹಾನುಭೂತಿಯು ಬ್ರಿಟಿಷರ ಮೇಲೆ ತಕ್ಕ ಪರಿಣಾಮ ಮಾಡುವುದಾಗಿ ಅಪೇಕ್ಷಿಸಬಹುದು.

ಹೆಚ್ಚು ಟೀಕೆಗೆ ಒಳಗಾದ ಮಾನವ ಅಮೆರಿ

ಕೊಮನ್ಸ್ ಸಭೆಯ ಹಿಂದಿನ ವಾರ ನಡೆದ ಚರ್ಚೆಯ ಮೇಲೆ ಪ್ರಕಟವಾದ ಕೆಲವು ಆದರ್ಶ ಟೀಕೆಗಳು ಈ ಕೆಳಗಿನಂತಿವೆ.

"ಭಾರತ ಸಮಸ್ಯೆಯ ಪರಿಹಾರ ಗೊಳಿಸಲ್ಪಡುವ ಮೊದಲು ನಮಗೊಬ್ಬ ಹೊಸ ಇಂಡಿಯಾ ಸೆಕ್ರೆಟರಿಗಳಾಗಬೇಕು.

"ಗಾಂಧಿಜೀಯವರ ಹೊಸ ಸೂಚನೆಗಳು ಮಾತು ಕತೆಗಳನ್ನು ಪ್ರಾರಂಭಿಸಲಿಕ್ಕೂ ಸಹಾಯಕರವಾದ ಸಂಧರ್ಭಗಳನ್ನು ಕಲ್ಪಿಸುವಂತದಲ್ಲವೆಂದು ಮಿ॥ ಅಮೆರಿಯವರು ಹೇಳುವುದು ತಪ್ಪು.

"ಅವರ (ಮುಂದಾಳುಗಳ) ಮೇಲಿನ ಅಪನಂಬಿಗೆಯ ಭಾವವನ್ನೂ ಅಂತ್ಯಗೊಳಿಸಲ್ಲಿಕ್ಕೆ ಭಾರತೀಯ ಮುಂದಾಳುಗಳನ್ನು ಬಂಧ ಮುಕ್ತ ಗೊಳಿಸಿರಿ."

ಈ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದವರು ಭಾರತೀಯ ರಾಷ್ಟ್ರೀಯ ಮುಖಂಡರಲ್ಲ. ಪ್ರಭಾವಶಾಲಿ ಬ್ರಿಟಿಷ್ ಪತ್ರಿಕೆಗಳು ಇವುಗಳನ್ನು ತಮ್ಮ ಅಗ್ರಲೇಖಗಳಲ್ಲಿ ಬರೆದಿದ್ದರು.

ರ್ಯಾಟರ್ ವಾರ್ತಾ ಸಂಸ್ಥೆಯಿಂದ ಕಳುಹಲ್ಪಟ್ಟ ತಂತಿ ವಾರ್ತೆಗಳಲ್ಲಿ ಅಮೆರಿಯವರನ್ನು ಶ್ಲಾಘಿಸುವಂತಹ ಒಂದೇ ಒಂದು ಗೆರೆ ತೋರಿ ಬರಲಿಲ್ಲ.

ಅಮೆರಿಯವರಿಗೆ ತಮ್ಮ ಸ್ವಂತ ದೇಶದಲ್ಲಿ ಎಷ್ಟರ ಮಟ್ಟಿನ ಶ್ಲಾಘನೆ ಇದೆ ಎಂದು ತಿಳಿದುಬರುತ್ತದೆ. ಆದರೆ ಕ್ರೂರ ವಿಧಿಯು ಅದೆಂತಹ ಲೀಲೆಯನ್ನಾಡುವುದು! ಇಷ್ಟು ಕಡುತರವಾಗಿ ಟೀಕಿಸಲ್ಪಟ್ಟ ಮಹನೀಯರೇ ಮಾನವ ಜನಾಂಗದ ಐದನೇ ಒಂದು ಅಂಶದಷ್ಟು ಜನರ ಭವಿಷ್ಯವನ್ನು ಬಿಗಿಯಾಗಿ ತಮ್ಮ ಅಂಕಿತದಲ್ಲಿಟ್ಟುಕೊಂಡಿರುವರು.

[illegible] ರಂಗದದ ನಾಶವೇ!

[illegible] ಅಮೇರಿಕದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಈ ಕೆಳಗಿನ ಅಭಿಪ್ರಾಯಗಳನ್ನು ಒಳಗೊಂಡ ಲೇಖನ ಪ್ರಕಟವಾಗಿರುತ್ತದೆ.

ಕಳೆದ ಮಹಾ ಯುದ್ಧದ ನಂತರ ಜರ್ಮನಿಯಲ್ಲಿ ಅನೇಕ ಬಗೆ ಆಂತರಿಕ ಕಲಹಗಳು ಪ್ರಾರಂಭವಾದುವು. ದೊಡ್ಡ ಕೋಲಾಹಲವೆ ತಲೆದೋರಿತು. ಅದರ ಪರಿಣಾಮವಾಗಿ–ನಾಜಿ ಪಕ್ಷವೊಂದು ನೆಲೆಯೂರಿತು. ಅದು ಬೆಳೆದು ಹೂ ಬಿಟ್ಟಿತು. ಕೊನೆಗೆ ಇನ್ನೊಂದು ಮಹಾ ಯುದ್ಧವೆ ಅದರ ಫಲವಾಗಿ ಪರಿಣಮಿಸಿತು. ಈಗ ಅದೆ ತರದ ಆಂತರಿಕ ಕಲಹಗಳು ತಲೆದೋರಿವೆ. ಹಿಂದೆ ನಾಜಿ ಪಕ್ಷದ ಸ್ಥಾಪನೆಗೆ ಕಾರಣವಾದ ಈ ಪರಿಸ್ಥಿತಿಯು ಇಂದು ನಾಜಿಗಳ ಸರ್ವ ನಾಶಕ್ಕೆ ಕಾರಣವಾಗಬಹುದು. ಕೊಲೆಗಳಿಂದ ಬೆಳೆದು ಬಂದ ಈ ನಾಜಿ ಪಕ್ಷವು ಇಂದು ಕೊಲೆಗಳಿಂದಲೇ ನಾಶ ಹೊಂದುವುದು. ಹತ್ತು ವರ್ಷಗಳ ಹಿಂದೆ ಹಿಟ್ಲರನು ತನ್ನ ಪ್ರಾಮುಖ್ಯ ವಿರೋಧಿಗಳನ್ನು ನಾಶಗೊಳಿಸಿದನು. ಇದರಿಂದ ಆತನ ಅಧಿಕಾರಕ್ಕೆ ಸ್ಥಿರತೆಯು ಲಭಿಸಿತು. ಕಾಲಕ್ರಮೇಣ, ಆತನ ಇತರ ವಿರೋಧಿಗಳು ಮಾಯವಾದರು. ಕೆಲವರು ದೇಶತ್ಯಾಗ ಮಾಡಿದರು; ಕೆಲವರು ಸೆರೆಮನೆಯ ಒಳಗಾಗಿ ಶಾಸ್ವತವಾಗಿ ಬಂದಿಸಲ್ಪಟ್ಟರು, ಅಲ್ಲಿನ ಚಿತ್ರಹಿಂಸೆಗಳಿಗೆ ಒಳಗಾದರು, ಕೆಲವರು ಯಮಲೋಕಯಾತ್ರೆಯನ್ನು ಅನುಭವಿಸಬೇಕಾಯಿತು.

ಆದರೆ ಜರ್ಮನಿಯ ಸೈನ್ಯ ಖಾತೆಯು ಮಾತ್ರ ನಾಜಿ ಪ್ರಭಾವದ ಹೊರಗಿತ್ತು. ಈ ಸೈನಖಾತೆಯೆ ಹಿಟ್ಲರನನ್ನು ಉಪಯೋಗಿಸಿತು. ಹಿಟ್ಲರನು ಸೈನ್ಯಖಾತೆಯು ಕೈಕೊಂಬೆಯೊ, ಯಾ ಹಿಟ್ಲರನು ಸೈನ್ಯದ ಒಡೆಯನೊ?–ಇದರಲ್ಲಿ ಯಾವದು ಸತ್ಯ ಎಂಬುದನ್ನು ಸರಿಯಾಗಿ ತಿಳಿಯಲು ಮೊದಮೊದಲು ಸ್ವಲ್ಪ ಕಷ್ಟಸಾಧ್ಯದ ವಿಚಾರವಾಯಿತು. ಅನೇಕ ವೇಳೆ ಆತನು ಸೈನ್ಯಖಾತೆಗೆ ವಿರೋದಿಯಾಗಿ ವರ್ತಿಸಿದರೂ, ಆತನಿಗೆ ಅದರ ಜ್ಞಾನಾನುಭವ ಇತ್ಯಾದಿ ಬೇಕೆ ಬೇಕಾಗಿತ್ತು.

ಈಗ ಇದ್ದದ್ದು ಒಂದು ಅಧಿಕಾರಿ ಮಂಡಳವನ್ನು ರಚಿಸುವ ಆಲೋಚನೆಯು ಆತನದು. ಈ ಅಧಿಕಾರಿ ಮಂಡಳಕ್ಕೆ ಸೇರಿಸಲ್ಪಡುವವರು ಎಂತವರಿರಬೇಕು–ಕಡುವಾದ ನಾಜಿಯೆ ಆಗಿರಬೇಕು. ಅದರ ನಂತರ ಆತನ ಯೋಗ್ಯತೆಯು ವಿಚಾರಿಸಲಾಗುವುದು. ಇದರ ಪರಿಣಾಮವಾಗಿ, ನುರಿತ ಅನುಭವಿ ಅಧಿಕಾರಿಗಳ ಸಂಖ್ಯೆಯು ಕಡಿಮೆಯಾಗುತ್ತಿದೆ. ಹಿರಿಯ ಅಧಿಕಾರಿಗಳ ಅಸಂತುಷ್ಟಿಗೆ ಇದು ಕಾರಣವಾಗಿರುತ್ತದೆ.

ಯುದ್ಧ ಪರಿಸ್ಥಿತಿಯು ಹದಗೆಟ್ಟಿರುವ ಈ ಸಮಯದಲ್ಲಿ ಹಿಟ್ಲರನು ಸ್ವಲ್ಪ ಬ್ರಾಂತಿಗೊಂಡಿದ್ದರೂ ನಾಜಿ ಪ್ರಭಾವವನ್ನು ಹೆಚ್ಚಿಸುವ ಮಾರ್ಗವೆ ಉತ್ತಮವೆಂದು ಆತನು ಈಗ ಅಭಿಪ್ರಾಯಪಟ್ಟಂತೆ ತೋರುತ್ತಿದೆ. ಈ ಕಾರಣದಿಂದಲೇ ಆತನು ಸರಕಾರದ ಆಡಳಿತ ಸೂತ್ರದಲ್ಲಿರುವ ಅನೇಕ ಪ್ರಸಿದ್ಧ ತಜ್ಞರ ನಾಶವನ್ನು ಕೈಕೊಂಡಿರುವನು.

ಹಿಟ್ಲರನ ಮೇಲಿನ ಧೋರಣದ ಪರಿಣಾಮವಾಗಿ, ಯುದ್ಧವು ದೀರ್ಘಕಾಲ ನಡೆಯುವ ಆಧಾರಗಳು ನಾಶವಾಗುತ್ತಿವೆ. ಆತನಿಂದ ಪ್ರಾರಂಭಿಸಲ್ಪಟ್ಟ ಈ ವಿನಾಶ ಕಾರ್ಯವನ್ನು ತಡೆಗಟ್ಟುವುದಾದರು ಸಾಧ್ಯವಾಗದು; ಹಿಟ್ಲರನು ಈಗ ಕೈಗೊಂಡ ಕೊಲೆಗಡುಕತನ ಧೋರಣದಿಂದ, ಆತನ ವೈರಿಗಳ ಸಂಖ್ಯೆಯು ದಿನದಿನೆ ವೃದಿಯಾಗುತ್ತಿದೆ. ನಾಜಿಗಳ ಇಚಿಗಿನ ಧೋರಣದಿಂದ ಅವರೊಡನೆ ಉತ್ತಮ ಯೋಧರ ಸಂಖ್ಯೆಯು ಕಡಿಮೆಯಾಗಹತ್ತಿದೆ. ನಾಜಿ ಪಕ್ಷದೊಡನೆ ಉಳಿದ ಸೇನಾನಾಯಕರು ಪೂರ್ವರಂಗದಲ್ಲಿ ಕೆಂಪು ಸೇನೆಯ ಏಟುಗಳಿಂದ ದಿಗ್ಭ್ರಾಂತರಾದಂತೆ ಕಾಣುತ್ತದೆ. ದ್ವಿತೀಯರಂಗದಲ್ಲಿ ಜರ್ಮನರ ಪರಿಸ್ಥಿತಿಯನ್ನು ನೋಡಿದರೆ, ಜರ್ಮನರ ಮೊದಲಿನ ಸಾಹಸ ಪರಾಕ್ರಮಗಳು ಮಾಯವಾದಂತೆ ಭಾಸವಾಗುತ್ತದೆ. ಜರ್ಮನ್ ಸೇನಾನಿವರ್ಗವು ಈಗ ಅಂಜುವುದು. ತಮ್ಮ ವೈರಿಗಳನ್ನೆಲ್ಲ ತಮ್ಮ ಬಂಧುಗಳ ಕುರಿತು ಅವರಲ್ಲಿ ಅಂಜಿಕೆ ಉಂಟಾಗಿರುತ್ತದೆ.

ನಿಮ್ಮ ಬ್ಯಾಂಕಿಂಗ್ ಸಂಬಂಧ

ನಿಮ್ಮ ಉದ್ಯಮದಲ್ಲಿ ನಿಮ್ಮ ಬ್ಯಾಂಕು ಎಂತಹ ಸಹಕಾರಿ ಎಂದು ನೀವು ಮನಗಂಡೊಡನೆ–ನಿಮ್ಮ ಧನ ಸಹಾಯಕನಿಂದ ಯಥಾಯೋಗ್ಯ ಸಹಕಾರವು ಎಷ್ಟೊಂದು ಅವಶ್ಯವು–ನೀವು ನಿಮ್ಮ ಬ್ಯಾಂಕಿಂಗ್ ಸಂಬಂಧವನ್ನು ಜಾಗರೂಕತೆಯಿಂದ ಚೆನ್ನಾಗಿ ವಿಚಾರಿಸಿಯೇ ನಿರ್ಧರಿಸುವಿರಿ.

ನಮ್ಮದೀ ಸೂಚನೆ: ವಿಪುಲ ಧನವುಳ್ಳ ಈ ಬ್ಯಾಂಕನ್ನೇ ನಿಮ್ಮ ಆರ್ಥಿಕ ಸಹಾಯಕ ಸಂಸ್ಥೆಯಾಗಿ ಆರಿಸಿಕೊಳ್ಳಿರಿ. ಅದರ ಹೆಸರು ಗೌರವಗಳು ನಿಮಗೆ ನಿಮ್ಮ ಆರ್ಥಿಕ ಸ್ಥಿತಿಗೆ ಅಮೂಲ್ಯವಾದ ಹಿನ್ನೆಲೆಯನ್ನೊದಗಿಸುವುದು.

ಇಂದೇ ನಮ್ಮ ಏಜಂಟರಿಗೆ ಮಾಹಿತಿಯ ಬಗ್ಗೆ ವಿಚಾರಿಸಿರಿ:–

ಶಾಖೆಗಳು		ಸೇವೆ
ಕ್ವಿಲೋನ್	ಬೆಳಗಾಂವ	ಸೇವಿಂಗ್ಸ್ ಖಾತೆ
ಅಲ್ಲಪ್ಪಿ	ಧಾರವಾಡ	ಚಾಲು ಖಾತೆ
ಕೊಚ್ಚಿ	ಚಿಕ್ಕಮಂಗಳೂರು	ನಿರುಖ ಠೇವಣಾತಿ
ಕಣ್ಣಾನೂರು	ಹುಬ್ಬಳ್ಳಿ	ಓವರ್ ಡ್ರಾಫ್ಟುಗಳು
ಮಂಗಳೂರು	ದಾವಣಗೆರೆ	ಸಾಲಗಳು
	ಬೆಂಗಳೂರು	ಡಿಸ್ಕೌಂಟಿಂಗ್
ಇತ್ಯಾದಿ	ಇತ್ಯಾದಿ	ಪರಊರ ಮೇಲಣ ಡ್ರಾಫ್ಟುಗಳ

ಬೊಂಬಾಯಿ ನಗರದಲ್ಲಿ ನಾಲ್ಕು ಶಾಖೆಗಳು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಜಗತ್ತಿನ ಭಾವಿ ಶಾಂತಿಗೆ

ಪ್ರಜಾಪ್ರಭುತ್ವದ ಆದರ್ಶನಗಳ ರಕ್ಷಣೆ, ಮತ್ತು ಬೆಳವಣೆಯಾಗಬೇಕು

ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರಕದ ವಿನಹ ಜಗತ್ತಿಗೆ ಶಾಂತಿ ದೊರಕದು

ಜಗತ್ತಿನಲ್ಲಿ ಚಿರವಾದ ಶಾಂತಿಯು ನೆಲೆಗೊಳಿಸುವ ಕುರಿತು ಅನೇಕ ಸಲಹೆ ಸೂಚನೆಗಳು ಅನೇಕ ಕಡೆಗಳಿಂದ ಈಗಲೇ ಹೊರ ಬರಲು ಪ್ರಾರಂಭವಾಗಿವೆ. ಈ ಕುರಿತು ಅನೇಕ ಲೇಖಗಳು ಪತ್ರಿಕೆಗಳಲ್ಲಿ ಪ್ರಕಟವಾಗ ಹತ್ತಿವೆ. ಜಗತ್ತಿನಲ್ಲಿ ಶಾಂತಿಯು ಉಂಟಾಗಬೇಕಾದರೆ ಯಾವ ತರದ ರಾಜಕೀಯ ಸೂತ್ರವು ಸಹಕಾರಿಯಾಗುವುದು. ಎಂಬುದರ ಕುರಿತು ಮಹಾ ಚರ್ಚೆಯು ಪ್ರಾರಂಭವಾಗಿರುತ್ತದೆ. ಜಗತ್ತಿನ ವಿವಿಧ ಜನಾಂಗಗಳು ಸ್ವತಂತ್ರವಾಗಿ ಸಮಾನತೆಯನ್ನು ಪಡೆದು, ಐಕ್ಯತೆಯನ್ನು ಹೊಂದಿದ ವಿನಹ ಶಾಂತಿಯು ತಲೆ ದೋರದು ಎಂದು ಹೆಚ್ಚಿನವರ ಅಭಿಪ್ರಾಯವಿರುತ್ತದೆ.

ಈ ವಿಚಾರದಲ್ಲಿ ಹರ್‌ವಾರ್ಡ ವಿಶ್ವವಿದ್ಯಾನಿಲಯದ ತತ್ವ ಶಾಸ್ತ್ರಜ್ಞರಾದ ರಾಲ್ಫ ಬಾರ್ಟನ್ ಪೆರ್ರಿಯವರ ಈ ಕೆಳಗಿನ ಅಭಿಪ್ರಾಯವನ್ನೊಳಗೊಂಡ ಒಂದು ಲೇಖವು ಫ್ರೀ ವರ್ಲ್ಡ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿರುವುದು

ಜಗತ್ತಿನ ಶಾಂತಿಯು ರಾಜಕೀಯ ಪರಿಸ್ಥಿತಿಗಳ ಮೇಲೆ ಹೊಂದಿರದೆ, ಅದು ಶಾಸ್ವತವಾಗಿ ನೆಲೆ ನಿಲ್ಲುವಂತೆ ಜನರೆಲ್ಲಾ ಸಹಕರಿಸುವಂತೆ ಪ್ರಚಾರ ಕಾರ್ಯವನ್ನು ನಡೆಯಿಸುವ ಶಾಸ್ವತ ಯೋಜನೆಯೊಂದು ಆಗಬೇಕು. ಎಂಬುದೆ ಅವರ ಮುಖ್ಯ ಅಭಿಪ್ರಾಯ ಈ ಲೇಖವನ್ನು ಅವರು ತನ್ನ ದೇಶಿಗರನ್ನು ಉದ್ದೇಶಿಸಿ ಬರೆದಿರುವರು

"ಪ್ರಜಾಪ್ರಭುತ್ವ ನೀತಿಯ ಆದರ್ಶಗಳಿಗೆ ಉಂಟಾಗುವ ವಿರೋಧಗಳನ್ನು ನಾಶಗೊಳಿಸುವುದೆ, ಜಗತ್ತಿನ ಶಾಂತಿ ರಕ್ಷಣೆಯ ಕಾರ್ಯಕ್ಕೆ ಉತ್ತಮ ಮಾರ್ಗವು. ಯುದ್ಧ ನಡೆಯುವ ಈ ಸಮಯದಲ್ಲಾಗಲಿ ತದನಂತರವಾಗಲಿ ಸ್ವದೇಶದ ವಿಚಾರವಾಗಲಿ ಇತರ ದೇಶಗಳೊಡನೆ ನಡೆಯಿಸುವ ವ್ಯವಹಾರ ವಿಷಯಗಳಲ್ಲಾಗಲಿ ನಾವು ಇದೆ ದೃಷ್ಟಿಯಿಂದ ವರ್ತಿಸುವವರಾಗಬೇಕು.

"ನಮ್ಮ ಕೈಲಾದ ಮಟ್ಟಿಗೆ ಮಹತ್ತಾದ ಪರಿಶ್ರಮವನ್ನು ವಹಿಸಿ ಮಿತ್ರ ಪಕ್ಷಕ್ಕೆ ವಿಜಯವು ಖಂಡಿತವಾಗಿ ದೊರಕುವ ತರದಲ್ಲಿ ಯುದ್ಧವು ಮುಂದುವರಿಸಲಾಗುವುದು. ಜರ್ಮನಿ ಮತ್ತು ಜಪಾನನ್ನು ಸೋಲಿಸಿದ ನಂತರ ಈ ಯುದ್ಧದ ಪರಿಣಾಮಗಳ ಹೊಣೆಗಾರಿಕೆಯು ಅವರ ಮೇಲೆ ಹಾಕಲಾಗುವುದು ಮುಂದಕ್ಕೆ ಅವರು ಈ ತರದ ಯುದ್ಧಗಳನ್ನು ಕೈಗೊಳ್ಳದಂತೆ ಮಾಡಲಾಗುವುದು ಅವರು ವಿವಿಧ ಜನಾಂಗಗಳ ಕೂಟದಲ್ಲಿ ಸಮಾನತೆಯನ್ನು ಪಡೆಯುವಂತೆ ಪ್ರೋತ್ಸಾಹಿಸಲಾಗುವುದು.

"ಭಾವಿ ಯುದ್ಧಗಳು ಉಂಟಾಗದಂತೆ ಎಲ್ಲಾ ಜನಾಂಗಗಳು ಸಹ ಕರಿಸಲ್ಪಟ್ಟು ನಡೆಯುವ ಒಂದು ರಕ್ಷಣಾ ಯೋಜನೆಯು ಹೊರಡಿಸಲ್ಪಟ್ಟು ಎಲ್ಲಾ ಜನಾಂಗಗಳಿಗೆ ಸರಿಸಮಾನವಾದ ಹಕ್ಕು ಬಾಧ್ಯತೆಗಳು ದೊರಕುವಂತಾಗಬೇಕು.

"ಸಂಯುಕ್ತ ಅಮೇರಿಕಾವು ಎಲ್ಲಾ ರಾಷ್ಟ್ರಗಳ ಅಭ್ಯುದಯವಾಗುವ ತರದ ಅಂತರಾಷ್ಟ್ರೀಯ ಯೋಜನೆಗಳಲ್ಲಿ ಕೈ ಹಾಕಿ ಅವುಗಳು ಯಶಸ್ವಿಯಾಗಿ ನಡೆಯುವಂತೆ ಪರಿಶ್ರಮ ವಹಿಸುವಂತಾಗಬೇಕು.

"ವೈಯುಕ್ತಿಕ ಸಾಂಸ್ಕೃತಿಕ ಸ್ವಾತಂತ್ರ್ಯಗಳು ಸಾಂಪತ್ತಿಕ ವಿಚಾರಗಳಲ್ಲಿ ಮತ್ತು ನ್ಯಾಯ, ಎಲ್ಲಾ ರಾಷ್ಟ್ರಗಳು ಸರಿಸಮಾನವಾದ ರಾಷ್ಟ್ರೀಯ ಗೌರವ, ಇವೆ ಮೊದಲಾದವುಗಳನ್ನು ಪುಷ್ಟಿಕರಿಸುವ ತರದ್ದು ಆಗಬೇಕು ಸಂಯುಕ್ತ ಅಮೇರಿಕಾದ ಪರರಾಷ್ಟ್ರೀಯ ಸಮ್ಬಂಧ ಧೋರಣವು ಯುದ್ಧದ ಕಾರಣದಿಂದಾಗಿ ಕಂಡು ಹಿಡಿಯಲ್ಪಟ್ಟ ರೂಢಿಗೆ ಬಂದ ಅನೇಕ ಕರ್ಮಶಾಲೆಯ ಪ್ರಯೋಗಗಳ ವೈದ್ಯಕೀಯ ಶೋಧ, ಇತ್ಯಾದಿಗಳು ಮಾನವ ಸಮಾಜದ ಪ್ರಗತಿಯ ಬಗ್ಗೆ, ಯುದ್ಧಾನಂತರವೂ ಉಪಯೋಗಿಸಲ್ಪಡಬೇಕು"

ಆದರೆ ಹಿಂದೂದೇಶದ ವಿಚಾರವೇನು ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಡುವ ಕುರಿತು ಯಾವತ್ತೂ ವಿಚಾರವು ಅಮೇರಿಕನರು ವಹಿಸಿದಂತೆ ಕಾಣುವದಿಲ್ಲ ಹಿಂದೂದೇಶದಲ್ಲಿ ಬ್ರಿಟಿಷರು ವಹಿಸಿದ ಧೋರಣವು ಜಗತ್ತಿನ ಮುಂದಿನ ಶಾಂತಿಯ ಕುರಿತು, ಹೆಚ್ಚಿನ ಆಶಯಗಳನ್ನು ಹುಟ್ಟಿಸುವಂತಿಲ್ಲ ಜಗತ್ತಿನ ಮುಂದಿನ ಶಾಂತಿಯು ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರಕುವುದರಲ್ಲಿ ಹೊಂದಿಕೊಂಡಿದೆ ಎಂದು ಮೇಲಿನ ಲೇಖದಿಂದ ವ್ಯಕ್ತವಾಗದಿರದು

ಮಿಲಿಟರಿಯವರಿಗೆ ಬೇಡವಾದ ಮೋಟಾರು ವಾಹನಗಳನ್ನು ದುರಸ್ತಿ ಪಡಿಸಿ ಅವುಗಳನ್ನು ನಾಗರೀಕರ ಉಪಯೋಗದ ಬಗ್ಗೆ ಹಂಚುವರೇ, ಇಂಡಿಯಾ ಸರಕಾರದಿಂದ ವ್ಯವಸ್ಥೆಯಾಗಿದ್ದು, ಆ ಕುರಿತು ಕಾರ್ಯನಿರ್ವಹಿಸುವರೇ, ಯೋಗ್ಯವಾದ ಒಂದು ಸಮಿತಿಯ ರಚನೆಯು ಆಗಿರುತ್ತದೆ

* * *

ಹಿಂದೂ ದೇಶಕ್ಕೆ ಸಧ್ಯದಲ್ಲೆ ಅಮೆರಿಕ ಧಾರಾಳವಾಗಿ ಗೋಧಿ ಬರುವುದೆಂದು ವಾರ್ತೆಯಿದೆ

ವನ್ಯ ಅವಿವೇಕ ಜೀವಜಂತುಗಳ ಚಾತುರ್ಯ ಶಕ್ತಿ

ಪಂಚತಂತ್ರದಲ್ಲಿಯೂ, ಎಸೋಪನ ಕತೆಗಳಲ್ಲಿಯೂ ಮೃಗ ಪಕ್ಷಿಗಳ ಜೀವಿ ಜಂತುಗಳ ವಿಚಿತ್ರ ಬುದ್ಧಿ ಚಾತುರ್ಯಕ್ಕೆ ಸಂಬಂಧಿಸಿದ ಕಲ್ಪನಾಪೂರ್ಣ ವಿಷಯಗಳು ಇವೆ ಇವು ಕಟ್ಟು ಕತೆಗಳು. ಜೇನುನೊಣದ ಅಮೋಘ ಚತುರತೆಯು ಪ್ರಕೃತಿ ಸಹಜವಾದುದು ಎಂದೂ, ಅವಕ್ಕೆ ತಮ್ಮ ಈ ಶಕ್ತಿಯ ಹೊರತು ಬೇರೆ ವಿವೇಕವಿಲ್ಲವೆಂತಲೂ ಪ್ರಾಣಿಶಾಸ್ತ್ರಜ್ಞರು ತೀರ್ಮಾನಿಸಿರುವರು. ಆದರೆ, ಕಠಿಣ ಸಂದರ್ಭಗಳಲ್ಲಿ ಈ ಅವಿವೇಕ ಜೀವಿಗಳು ತಮ್ಮದೇ ಉಪಾಯ ಹಂಚಿಕೆಗಳನ್ನು ಕಂಡು ಹಿಡಿಯುವುವು ಎಂಬುದಕ್ಕೆ ಈ ಕೆಳಗಿನ ಕೆಲವು ಸಂಗತಿಗಳು ಆಧಾರವಾಗಿವೆ

1938ರಲ್ಲಿ ಅಮೆರಿಕದ ಇರೀ ಸರೋವರದ ದ್ವೀಪಗಳಲ್ಲಿ ಒಂದು ಚಿಕ್ಕಹಳ್ಳಿದ ಬಳಿ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರಜ್ಞರಾಗಿದ್ದ ಒಬ್ಬರು ಒಂದು ಮಿಡಿತೆಯು ನೀರ ಮಟ್ಟದ ಸ್ವಲ್ಪ ಮೇಲಿಂದ ಹಾರುವುದನ್ನು ಕಂಡರು ಮಿಡಿತೆಯ ಗೂಡು 76 ಗಜ ದೂರ ದಂಡೆಯಲ್ಲೇ ಇತ್ತು ತನ್ನ ಗೂಡಿನ ಸಮಾನ ದೂರಕ್ಕೆ ಬಂದ ಕೂಡಲೇ ನೀರಮೇಲೆ ಹಾರುತ್ತಿದ್ದ ಮಿಡಿತೆ ದಂಡೆಯ ಕಡೆಗೆ ತಿರುಗಿ ನೆಲವನ್ನು ಸೇರಿತು ಹತ್ತಿರ ಹೋಗಿನೋಡಲು ಅದು ಕಾಲಿನಿಂದ ತನಗಿಂತಲೂ ಹತ್ತುಪಾಲು ದೊಡ್ಡದಿರುವ ಒಂದು ಜೇಡರಹುಳುವನ್ನು ಎಳೆಯುತ್ತಿತ್ತು ಗೂಡಿನಿಂದ 70 ಗಜ ದೂರದಲ್ಲಿ ಸತ್ತು ಬಿದ್ದ ಜೇಡನನ್ನು ದಂಡೆಯ ಮೇಲಿಂದಲೇ ತರಲು ಪ್ರಯಾಸವಿದೆಯೆಂದು ತಿಳಿದ ಮಿಡಿತೆಯು ತನ್ನ ಕೊಳ್ಳೆಯನ್ನು ಸುಲಭವಾಗಿ ನೀರಮೇಲೆ ತೇಲಿಸಿ ದೋಣಿಯಂತೆ ನಿರಾಯಾಸವಾಗಿ ಎಳೆದು ತಂದಿತು

ಕನೆಕ್ಟಿಕಟ್ ಪ್ರಾಂತದ ಒಂದು ಹಳ್ಳಿ ಬಳಿ ಹರೋಲ್ಡ್ ಫಾತ್ ಎಂಬವರು ಮೀನು ಹಿಡಿಯುತ್ತಿದ್ದಾಗ ಕಾಲಿಗೆ ಹಲ್ಲು ಮಿಶ್ರಿತವಾದ ಕೆಸರು ಮಣ್ಣು ಮೆತ್ತುತ್ತಿದ್ದ ಒಂದು ಕಾಡುಕೋಳಿಯನ್ನು ನೋಡಿದರು ಆಮೇಲೆ ಅದು ಮೆತ್ತಿದ್ದ ಮಣ್ಣನ್ನು ಬಿಸಿಲಿನಲ್ಲಿ ಒಣಗಿಸುವ ಉದ್ದೇಶದಿಂದ ಬಿಸಿಲಿನಲ್ಲಿ ಹಾರಾಡತೊಡಗಿತು ಫಾತ್‌ರು ಅದನ್ನು ಗುಂಡಿನಿಂದ ಹೊಡೆದು ಹಿಡಿದು ನೋಡಿದಾಗ ಮಣ್ಣು ಮೆತ್ತಲ್ಪಟ್ಟ ಕೋಳಿಯ ಕಾಲಿನ ಎಲುಬು ಮುರಿದಿರುವುದು ಕಂಡುಬಂತು. ಮೆತ್ತಿದ ಮಣ್ಣಿನಿಂದಾಗಿ ಕಾಲಿನ ಘಾಯವು ಮಾಸಿರದಿದ್ದರೂ, ಬಾಗಿರಬೇಕಾದ ಎಲುಬು ನೇರವಾಗಿ ಸ್ವಸ್ಥಾನದಲ್ಲಿ ಜೋಡಿಸಲ್ಪಟ್ಟಿತು.

ಒಹಿಯೊ ನಗರದ ಗಿಯರ್ ಹಾರ್ಟ್ ಎಂಬವರು ಬೇಟೆಗೆ ಹೋದಾಗ ಅವರ ನಾಯಿಗಳು ಒಂದು ನರಿಯನ್ನು ಓಡಿಸಿಕೊಂಡು ಹೋದವು ನರಿಯು ಹತ್ತಿರದಲ್ಲಿ ಬಿದ್ದಿದ್ದ ಒಳಗೆ ಟೊಳ್ಳಾಗಿದ್ದ ಒಂದು ಮರದ ಕಾಂಡವನ್ನು ಹೊಕ್ಕಿತು ಹಿಂಬಾಲಿಸಿದ ನಾಯಿಗಳು ಕಾಂಡವನ್ನು ಹೊಕ್ಕಲು ಪ್ರಯತ್ನಿಸುವುದರೊಳಗೆ ನರಿಯು ಇನ್ನೊಂದು ತುದಿಯಿಂದ ಹೊರಬಿದ್ದು ಒಂದು ಸುತ್ತು ಓಡಿ ಪುನಃ ಮರದ ಪೊಟರೆಯನ್ನು ಹೊಕ್ಕಿತು ತಿರಗಿ ನಾಯಿಗಳ ಹತ್ತಿರ ಬರುವಷ್ಟರಲ್ಲಿ ನರಿಯು ಹೊರಬಿದ್ದು ಮತ್ತೊಂದು ಸುತ್ತು ಓಡಿ ಪುನಃ ಮರದ ತುಂಡನ್ನು ಹೊಕ್ಕು ಕ್ಷಣದೊಳಗೆ ಇನ್ನೊಂದು ತುದಿಯಿಂದ ಹೊರಬರುತ್ತಿತ್ತು ಹೀಗೆ ಅನೇಕ ಸಲ ಮಾಡಿ ನಾಯಿಗಳನ್ನು ಬಹಳವಾಗಿ ಸೋಲಿಸಿತು. ಈ ಚಮತ್ಕಾರದಲ್ಲಿ ಸಂದೇಹಗೊಂಡ ಬೇಟೆಕಾರರು ಮರದ ತುಂಡಿನೊಳಗೆ ಉದ್ದವಾದ ಬೆತ್ತವನ್ನು ಹಾಕಿ ಕುಕ್ಕಲು ಇನ್ನೊಂದು ನರಿ ಹೊರಗೆ ಬಂತು ನಾಯಿಗಳು ಹಿಂಬಾಲಿಸಿದ ನರಿ ಬೇರೆ, ಮರದಕಾಂಡದಲ್ಲೆ ಇದ್ದ ನರಿ ಬೇರೆ ಒಂದು ನರಿ ಆಯಾಸಗೊಂಡ ಕೂಡಲೇ ಇನ್ನೊಂದು ನರಿ ಪೊಟರೆಯೊಳಗಿಂದ ಓಡುತ್ತಿತ್ತು ನಾಯಿಗಳಿಗೆ ಇದರ ಮರ್ಮವೇ ತಿಳಿಯಲಿಲ್ಲ

ಕೆನಡದ ಅರಣ್ಯ ಅಧಿಕಾರಿಗಳು ತಮ್ಮ ಡೇರೆಯ ಹೊರಗೆ ಊಟಮಾಡುತ್ತಿದ್ದರು ಅವರು ಕಾಡು ಪ್ರಾಣಿಗಳು ಹತ್ತಿರ ಬರುವಂತೆ ಮಾಡಲು ಒಂದು ದೋಸೆಯನ್ನು ಬಿಸಾಡಿ ಒಳಗೆ ನಿಂತು ನಿರೀಕ್ಷಿಸುತ್ತಿದ್ದರು. ದೋಸೆಆಸೆಗೆ ಒಂದು ಅಳಿಲು ಬಂತು ದೋಸೆಯನ್ನು ಕಚ್ಚಿ ಗೂಡಿಗೆ ಒಯ್ಯಲು ಪ್ರಯತ್ನಿಸಿದಾಗ ಸಾಧ್ಯವಾಗಲಿಲ್ಲ. ಕಡೆಗೆ ಅದರ ಮಧ್ಯಕ್ಕೆ ತೂತುಮಾಡಿ ಅದರೊಳಗೆ ತಲೆಹಾಕಿ ದೋಸೆಯನ್ನು ಬೆನ್ನ ಮೇಲೆ ಹೊತ್ತುಕೊಂಡು ಹೋಯಿತು

THE CANARA BANKING CORPORATION LTD.

(Incorporated in British India with Limited Liability.)

Estd) **Head Office: UDIPI S Kanara.** **(1906.**

Statement of affairs as on 30th April, 1944.

LIABILITIES	Rs As Ps	ASSETS	Rs As Ps.
1 Paid up Capital	13 68 480- 0- 0	1 Cash on hand & with bankers in Current & Fixed Deposit A/cs	19,71 808 0 1
2 Reserves	4 12 120 12- 8	2 Investments on (1) Govt Securities (2) Immovable properties etc.	24,26 660,- 9- 9
3 Deposits	67 30 955- 3 4	3. Loans on Jewels & other valuable securities	33,50,167-13-3
4 Due to Bankers	7 34 366-10- 9	4 Loans on personal securities & Bills purchased	20,49 197-13-10
5 Bills for collection	6 70 379 8 8	5 Bills for collection as per contra	6,70 379- 8- 8
6 Sundries including revenue items	7 58 745- 8- 4	6 Office premises, furniture etc.	93,705- 0-10
		7. Sundries including revenue items	1,13,128-13- 4
Total	1,06 75,047-11- 9	Total	1,06,75,047-11- 9

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಸಭೆ

ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಶ್ರೀ ಎಂ. [illegible] ಅಧಿಕಾರಿಗಳು ಮುಂಬರುವ ಗಾಂಧೀಜಿಯವರ ಭೇಟಿಯ ಯಶಸ್ಸನ್ನು ಹಾ[illegible] ಪ್ರಕಟಿಸಿದ್ದ ಪ್ರಕಟಣೆಯೊಂದರಲ್ಲಿ, ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದನ್ನು ಸೇರಿಸುವ ಆಶ್ರಯ ತಿಳಿಸಿರುವರು. ಈ ಸಂಬಂಧ ಅನುಮತಿಗಾಗಿ ಜಿಲ್ಲಾಧಿಕಾರಿಗಳಿಗೆ ಬರೆದಿದ್ದು ಪ್ರತ್ಯುತ್ತರವನ್ನು ನಿರೀಕ್ಷಿಸುತ್ತಿರುವರು. ವಿಸ್ತೃತ ಹೇಳಿಕೆಯೊಂದು ಸದ್ಯದಲ್ಲೆ ಪ್ರಕಟಿಸುವರು.

ಟಾಗೋರ್ ದಿನ

ಪ್ರಕಾಶ ಸಾಹಿತ್ಯಕೂಟದವರು ಕವಿ ರವೀಂದ್ರರ ಪುಣ್ಯದಿನವನ್ನಾಚರಿಸಿದರು. ಸದಸ್ಯರೂ ಆಮಂತ್ರಿತರೂ ಮಹಾಕವಿಯ ಜೀವನ, ಕೃತಿಗಳಕುರಿತು ಭಾಷಣಮಾಡಿದರು. ಶ್ರೀಬ್ರಹ್ಮಾನಂದರು 'ಗುರುದೇವ' ಎಂಬ ತಮ್ಮ ಕವಿತೆಯನ್ನೋದಿದರು.

ಬಾ ನಿಧಿ

ಇದಕ್ಕೆ ಹಣಸಂಗ್ರಹಿಸುವ ಕಾರ್ಯ ತಾಲೂಕಿನ ಎಲ್ಲಾ ಕಡೆಗಳಲ್ಲೂ ಭರದಿಂದ ಸಾಗಿದೆ. ಶ್ರೀ. ಎಸ್. ಪಿ. ಬಾಳಿಗಾ ಎಂಬವರು ಕೊಲೊಂಬೊದಿಂದ ಮಂಗಳೂರ ನಿಧಿಗೆ ರೂ ೭೫ ಕಳುಹಿಸಿರುವರು.

ರಜಕಕುಲೋದ್ಧಾರ ಸಂಘದವರು ತಾ ೭ರ ತಮ್ಮ ಸಭೆಯಲ್ಲಿ ಗಾಂಧಿಜಿನ್ನಾ ಭೇಟಿ ಹಾರೈಸಿ ಬಾ ಸ್ಮಾರಕನಿಧಿಗೆ ಧನ ಸಹಾಯ ಮಾಡಲು ನಿರ್ಧರಿಸಿರುವರು.

ನೇಕಾರ ಸಂಘ

ಜಿ. ನೇಕಾರರ ಮಹಾಸಭೆಯಲ್ಲಿ ನೇಯಿಗೆಯ ಮಾಲಕರು ತಯಾರಿಸಿದ ಕಾಲಿ ಪಟ್ಟಿಯನ್ನು ಸ್ವೀಕರಿಸಲಾಯಿತು. ತಮ್ಮ ಸಂಸ್ಥೆಗಳಿಗೆ ಸರಿಯಾಗಿ ನೂಲಿನ ಸರಬರಾಯಿ ಮಾಡಿಸಲು ಟೆಕ್ಸ್‌ಟೈಲ್ ಕಂಟ್ರೋಲ್ ಅಧಿಕಾರಿಗಳನ್ನು ಕಾಣಲು ಒಂದು ಉಪಸಮಿತಿ ರಚಿಸಲಾಯಿತು.

ಐಕ್ಯ

ಕಳೆದೆರಡು ವರ್ಷಗಳಿಂದ ನಗರದ ವಿದ್ಯಾರ್ಥಿಗಳಲ್ಲಿ ಭೇದಹುಟ್ಟಿದರ ಪರಿಣಾಮವಾಗಿ ಉಂಟಾದ ಪ್ರತ್ಯೇಕ ಎರಡು ವಿದ್ಯಾರ್ಥಿಸಂಘದವರು ಪರಸ್ಪರ ತಮ್ಮ ವ್ಯತ್ಯಾಸಗಳನ್ನು ಬಿಟ್ಟು ಹೊಸ ಒಂದೇ ಕಾರ್ಯಸಮಿತಿ ರಚಿಸಿದರು.

ಅಕ್ಕಿ

ನಗರದಲ್ಲಿ ಅಕ್ಕಿಅಭಾವ ಬೀಳದಂತೆ ಅಧಿಕಾರಿಗಳು ಪ್ರಯತ್ನದಲ್ಲಿರುವರು. ಉ. ಆರ್ಕಾಟಿನಿಂದ ಆಗಲೇ ೫ವೆಗನ್ ಅಕ್ಕಿ ಬಂದಿರುತ್ತದೆ ಇನ್ನೂ ಬರಲಿದೆಯಂತೆ

ಗುಪ್ತ ಅಕ್ಕಿಮಾರಾಟವು ಇನ್ನೂ ಕೆಲವು ಕಡೆಗಳಲ್ಲಿ ನಡೆಯುತ್ತಿದೆಎಂದು ಊಹಿಸಲಾಗಿದೆ ಮೊನ್ನೆ ರಥಬೀದಿಯಲ್ಲಿ ಹಾಗೆ ಪಡಕೊಂಡರೆಂಬ ಆಪಾದನೆಯ ಸ್ವಲ್ಪ ಅಕ್ಕಿಯನ್ನು ಪೋಲಿಸರು ಹಿಡಿದು ಕೆಲವರನ್ನು ಕೈದು ಮಾಡಿರುವರು.

ಲೈಸನ್ಸ್ ಇಲ್ಲದೆ ೨ಲಾರಿ ಅಕ್ಕಿಯನ್ನು ಪುತ್ತೂರ್ ತಾಲೂಕಿನಿಂದ ಸಾಗಿಸಿದರೆಂದು ಜಿ. ಮಹಮ್ಮದ್, ಎಂಬವರನ್ನು ಬಂಧಿಸಿ ಅಕ್ಕಿಸ್ವಾಧೀನಮಾಡಲಾಗಿದೆ. ಹೊಸದುರ್ಗದ ಆಸುಪಾಸಿನಲ್ಲಿ ಸುಮಾರು ೨೫೦ ಮುಡಿ ಬತ್ತ ಹಿಡಿಯಲಾಗಿದೆ.

ಬಂಟ್ವಾಳ ಕಡೆಗಳಲ್ಲಿ ಅಕ್ಕಿಯ ಅಭಾವ ತುಂಬಾ ಇದ್ದುದರಿಂದ ಆ ಕಡೆಯ ಜನರ ಒಂದು ಶಿಷ್ಟಮಂಡಲವು ಸದ್ಯದಲ್ಲಿ ಮಾನ್ಯ ಕಲೆಕ್ಟರನ್ನು ಕಾಣುವುದು.

ಅಕ್ಕಿ ದಾಸ್ತಾನುಗಾರರಿಗೆ

ಅಕ್ಕಿ ದಾಸ್ತಾನು ಮಾಡಿಟ್ಟಿರುವವರು ದಶಂಬರ ತಿಂಗಳ ವರೆಗಿನ ಖರ್ಚಿಗೆ ಬೇಕಾದುದನ್ನು ಮಾತ್ರ ಇಟ್ಟು ಹೆಚ್ಚನ್ನು ರೇಶನ್ ಅಧಿಕಾರಿಗಳಿಗೆ ಒಪ್ಪಿಸಬೇಕೆಂದು ಆಜ್ಞೆ ಹೊರಡಿಸಲಾಗಿದೆ. ಕೆಲವು ಕಡೆಗಳಿಂದ ಅಕ್ಕಿ ಬರಲು ಸುರುವಾಗಿದೆ. ಹೊರಗಿನಿಂದ ಬರಲಿರುವ ೨೫೦೦ ಟನ್ ಅಕ್ಕಿಯಲ್ಲಿ ದಿನಾಲೂ ಸ್ವಲ್ಪ ಸ್ವಲ್ಪವಾಗಿ ಬರಹತ್ತಿದೆ. ಅಕ್ಕಿ ಅಭಾವದ ಭೀತಿ ಜನರು ಇಟ್ಟುಕೊಳ್ಳುವ ಆವಶ್ಯಕತೆ ಇಲ್ಲವೆಂದು ಅಧಿಕಾರಯುಕ್ತವಾಗಿ ತಿಳಿಯಲಾಗಿದೆ.

ರೇಶನ್ ಮೊಕದ್ದಮೆ

ರೇಶನ್ ನಿಬಂಧನೆಗಳನ್ನು ಮುರಿದ ೧೩೦ ಮಂದಿಗಳ ಮೇಲೆ ಕಾರ್ಯಕ್ರಮ ಕೈಕೊಳ್ಳಲಾಗಿದೆ. ಅವರಲ್ಲಿ ಶೇಕಡಾ ೫೦ ಮಂದಿಯನ್ನು ಎಚ್ಚರಿಕೆ ಕೊಟ್ಟು ಬಿಡಲಾಗಿದೆ, ಬಾಕಿಯವರ ಮೇಲೆ ಕಟ್ಲೆ ನಡೆಯಲಿದೆ.

ಆಗಲೇ ೧೩ ಮಂದಿಗಳ ಮೇಲೆ 'ಚಾರ್ಜುಶೀಟ್' ಹಾಕಿ ಕಟ್ಲೆಗೆ ಒಳಪಡಿಸಲಾಗಿದೆ ಇವರಲ್ಲಿ ನಗರದ ಪ್ರಮುಖ ಹೊಟೇಲುಕಾರರೂ ಕೆಲವರು ಸಿಕ್ಕಿರುವುದಾಗಿ ತಿಳಿದುಬರುತ್ತದೆ.

ಬೆಲ್ಲ

ನಗರದಲ್ಲಿ ಊರ ಬೆಲ್ಲವಲ್ಲದೆ, ಪಾಲ್ಘಾಟು ಗಟ್ಟದ ಬೆಲ್ಲಗಳು ಸಿಗುವುದಿಲ್ಲ ಕಾಫಿ ಮೊದಲಾದುವುಗಳಿಗೆ ಇವೇ ಉಪಯೋಗಿಸುವ ಅಭ್ಯಾಸವಿದ್ದುದರಿಂದ ಅಧಿಕಾರಿಗಳು ಈ ತರದ ಬೆಲ್ಲಗಳನ್ನು ಸರಬರಾಯಿ ಮಾಡುವ ಏರ್ಪಾಡು ಮಾಡುವರಾಗಿ ಕೋರಿಕೆ.

ದಿ ಸೌತ್ ಕೆನರಾ ವಿಲೇಜ್ ಇಂಡಸ್ಟ್ರೀಸ್ ಎಸೋಸಿಯೇಷನ್

ಇದರ ೧೯೪೩-೪೪ನೇ ವರ್ಷದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ: ರೂ. ೩೪೨೩—೨—೦ ಬೆಲೆಬಾಳುವ ೨೪೪೯೦ ಲಟ್ಟಿಕೈನೂಲನ್ನು ಪಡಕೊಂಡು ನೂತಮಾಜೂರಿಯಾಗಿ ರೂ೧೪೬೧ ೨೯ ನ್ನು ಹಂಚಲಾಗಿದೆ. ರೂ೨೯೧೨-೧೫-೫ ಬೆಲೆಬಾಳುವ ೬೪೩೪೹ ಗಜ ಖಾದಿಬಟ್ಟೆಯನ್ನು ತಯಾರಿಸಿ ನೆಯ್ಗೆ ಮಜೂರಿಯಾಗಿ ರೂ೭೪೬-೪-೧೧ನ್ನು ಮತ್ತು ಬ್ಲೀಚಿಂಗ್ ಮಾಜೂರಿಯಾಗಿ ರೂ ೬೭-೧-೫ನ್ನು ಸಹ ಕೊಡಲಾಗಿದೆ

ದನ್ಯ ಮತ್ತು ನೇಯ್ಗೆಯವರ ಅಭಾವದಿಂದ ಈ ಸಂಸ್ಥೆಯ ಕಾರ್ಯಕಲಾಪಗಳು ತಡೆಯಿಲ್ಲದೆಸಾಗುವಂತೆ ರಾಷ್ಟ್ರಪ್ರೇಮಿಗಳು ನೆರವಾಗುವರೆಂದು ಹಾರೈಕೆ.

ಕಂಟ್ರೋಲ್ ಅಂಗಡಿ

ಹಂಪನಕಟ್ಟೆ ಕೇಂದ್ರದಲ್ಲಿ ಬಸ್‌ಸ್ಟೆಂಡಿನ ಬಳಿ "ಸೆಂಟ್ರಲ್ ಫೇರ್ ಪ್ರೈಯ್ಸ್ ಡಿಪೊ" ಎಂಬ ಕಟ್ಲೇರಿ ಅಂಗಡಿಯೊಂದನ್ನು ಉದ್ಘಾಟಿಸುವ ಸಮಾರಂಭವನ್ನು ಜಿ. ಜಡ್ಜ್ ಶ್ರೀ ಕೋಮನ್ ಅವರು ನೆರವೇರಿಸಿದರು. ಈ ಸಂಸ್ಥೆಯು ಕೆನರಾ ಚೇಂಬರ್ ಆಫ್ ಕಾಮರ್ಸ್ ಇದರ ಆಶ್ರಯದಲ್ಲಿ ನಡೆಸಲ್ಪಡುವುದು ನಿಯಂತ್ರಣಕ್ಕೊಳಪಟ್ಟ ಎಲ್ಲಾ ಕಟ್ಲೇರಿ ಸಾಮಾನುಗಳನ್ನೂ ಇಲ್ಲಿ ಮಾರಲಾಗುವುದು.

ಷಷ್ಟ್ಯಬ್ದಿ

ದಿ. ಬೊಂಬಾಯ್ ಲೈಫ್ ಇನ್ಸೂರೆನ್ಸ್ ಕಂಪೆನಿಯ 'ಚೀಫ್' ಏಜೆಂಟರಾದ ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಎಂಬೀ ಸಂಸ್ಥೆಯ ಚೆಯರ್ ಮೇನ್ ರಾದ ಶ್ರೀ ಕೊಚ್ಚಿಕಾರ ಪದ್ಮನಾಭ ಪೈ[illegible] ಇವರನ್ನು ನಗರದ ಇತರ [illegible] ಇತರ ಪ್ರಮುಖರೂ ಒಂದು ಸತ್ಕಾರ ಕೂಟವನ್ನೇರ್ಪಡಿಸಿ ಅಭಿನಂದಿಸಿದರು. ಈ ಸಮಾರಂಭವು ಶ್ರೀ ಪೈಯವರ ೬೦ ವರ್ಷಗಳ ಚಟುವಟಿಕೆಯ ಜೀವನದ ಷಷ್ಟ್ಯಬ್ದ ಪೂರ್ತಿಯ ಸಂಬಂಧವಿದ್ದು ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಜರಗಿತು. ಜಿಲ್ಲಾ ಜಡ್ಜ್ ಶ್ರೀ ಸಿ. ಬಿ. ಕೋಮನ್ ಅವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಪೈಗಳವರು ವಿಮಾ ಪ್ರಪಂಚದಲ್ಲಿ ಸುಪ್ರಸಿದ್ಧರು—ಅಖಿಲ ಭಾರತ ಖ್ಯಾತಿಯವರು. ಕರ್ನಾಟಕದಲ್ಲಿಯೂ ಇವರು ಅತ್ಯಂತ ಜನ ಪ್ರಿಯರು ಅವರು ಆದರ್ಶ ವ್ಯಕ್ತಿಗಳು ಬೊಂಬಾಯ್ ಲೈಫ್ ಇನ್ಸೂರೆನ್ಸ್ ಸಂಸ್ಥೆಯು ಇವರಿಂದಲೇ ಉದ್ಧಾರವಾಯಿತೆಂಬ ವಿಷಯದ ಕುರಿತು ಶ್ರೀಯುತರಾದ ಡಾ. ಕೇಶವ ಪೈ. ವಿ. ಶ್ರೀನಿವಾಸ ಪೈ, ಜಿನರಾಜ ಹೆಗ್ಗಡೆ, ಎ. ವಿ. ಶೆಟ್ಟಿ, ಎನ್. ಎಸ್. ಕಿಲ್ಲೆ, ಜೆ. ಎಫ್. ರೇಗೊ, ಇವರುಗಳು ಸಾರಸ್ಯ ಭಾಷಣ ಮಾಡಿ ವಿಮಾ ಸಂಸ್ಥೆಗೆ ಅವರು ಸಲ್ಲಿಸಿದ ೩೦ ವರ್ಷಗಳ ಅಮೋಘ ಸೇವೆಯನ್ನು ಶ್ಲಾಘಿಸಿದರು. ಶ್ರೀ ಪೈಯವರು ಸಂಧರ್ಭೋಚಿತ ಮಾತುಗಳಿಂದ ತಮ್ಮ ಜೀವನದ ಕೆಲವು ಸಂಧರ್ಭ ಸನ್ನಿವೇಶಗಳನ್ನು ನಿರೂಪಿಸಿದರು. ಶ್ರೀ ಬಿ ವೆಂಕಟ್ರಾಯ ಬಾಳಿಗರು ವಂದನಾರ್ಪಣೆ ಮಾಡಿದರು.

ಹವಾಮಾನ

ಈ ವಾರದಲ್ಲಿ ನಗರದಲ್ಲಿ ಮಳೆ ಕಡಿಮೆ ಬಿಸಿಲು ಕಾಯುತ್ತಿದೆ ಸೆಕೆಯು ಅನುಭವವಾಗ ಹತ್ತಿವೆ.

ಪುತ್ತೂರು

ಇಲ್ಲಿಯ ರೈತನೊಬ್ಬನು ಹೆಚ್ಚು ಬೆಲೆ ಅಕ್ಕಿ ಮುಡಿ ಒಂದನ್ನೂ ಮಾರಿದ್ದಕ್ಕೆ ತನಖಿ ಬಗ್ಗೆ ೧೫ ದಿನ ರಿಮಾಂಡಿನಲ್ಲಿರಿಸಲ್ಪಟ್ಟಿರುವರು

ವಾಹನಗಳ ಚಲಾವಣೆಗೆ ತೊಂದರೆ ಕೊಡುತ್ತಿರುವ ಆಡು ಮುಂತಾದ ಪ್ರಾಣಿಗಳನ್ನು ದೊಡ್ಡಿಗೆ ಒಯ್ಯುವ ಕ್ರಮವು ಇಲ್ಲಿಗೆ ಹ್ಯಾಂಗೆ ಬಂದಿದೆ. ಇಲ್ಲಿ ಬೆಲ್ಲ ಸಕ್ಕರೆಗಳು ಪೂರೈಸಲ್ಪಟ್ಟಿಲ್ಲವೆಂದು ವದಂತಿ.

ಕೆಲವು ಸಮಯ ಹಿಂದೆ ಮಾಪಿಳ್ಳೆ ಹೆಂಗುಸೊಬ್ಬಳು ತನ್ನ ಜಾತಿಯ ಚಿಕ್ಕ ಹುಡುಗಿಯೋರ್ವಳ ಕಿವಿಯಲ್ಲಿದ್ದ ಚಿನ್ನವನ್ನು ಅಪಹರಿಸಲು ಅವಳನ್ನು ಕೊಲ್ಲುವ ಪ್ರಯತ್ನ ಮಾಡಿದಳೆಂಬುದಕ್ಕಾಗಿ ೨ ವರ್ಷದ ಶಿಕ್ಷೆಗೆ ಗುರಿಯಾದಳು.

ಕಾರ್ಕಳ

ಇಲ್ಲಿನ ಆಸುಪಾಸುಗಳಲ್ಲಿ ಭಯಂಕರ ಮಲೇರಿಯಾ ಜ್ವರಕ್ಕೆ ಸಂಬಂಧ ಪಟ್ಟ ಜಾಡ್ಯಗಳು ಅವ್ಯಾಹತವಾಗಿ ಹರಡುತ್ತಿವೆ. ಆರೋಗ್ಯಾಧಿಕಾರಿಗಳು ಗಮನ ಕೊಡಬೇಕಾಗಿ ಇಲ್ಲಿಯ ಜನರ ಮನಸ್ಸಿದೆ.

ಪ್ರಕಟಣೆ

ಈ ಜಿಲ್ಲೆಯಲ್ಲಿ ಜನತೆಯ ಜೀವನಕ್ಕೆ ಪ್ರಾಮುಖ್ಯವಾಗಿ ಅವಶ್ಯವುಳ್ಳ ಅಕ್ಕಿ ಭತ್ತ ಮತ್ತು ಇತರ ಆಹಾರ ಧಾನ್ಯಗಳ ಅಭಾವವು ಈಗೀಗ ಹೆಚ್ಚು ಹೆಚ್ಚಾಗಿ ಕಂಡು ಬರುತ್ತಿದ್ದು ಇದಕ್ಕೆ ಮುಖ್ಯವಾದ ಒಂದು ಕಾರಣವು ಕೆಲವರು ಸದರಿ ಅಕ್ಕಿ ಭತ್ತ ಇತ್ಯಾದಿಗಳನ್ನು ಮಿತಿಮೀರಿದ ಬೆಲೆಗೆ ಕಳ್ಳಾಟಿಕೆಯಿಂದ ಮಾರುವ ದುರಾಶೆಯಿಂದ ಅಲ್ಲಲ್ಲಿ ಗುಪ್ತವಾಗಿ ಇರಿಸಿರುವ ಸಂಗತಿಯೇ ಎಂದು ನಮ್ಮ ತಿಳುವಳಿಕೆಗೆ ಬಂದಿರುತ್ತದೆ. ಇಂತಹ ಬಚ್ಚಿಟ್ಟ ಪದಾರ್ಥಗಳನ್ನು ಪತ್ತೆ ಮಾಡುಲು ಅನುಕೂಲವಾದ ವರ್ತಮಾನಗಳನ್ನು ಕೊಡುವವರಿಗೆ ಬಹುಮಾನಗಳನ್ನು ಜಿಲ್ಲಾ ಕಲೆಕ್ಟರ್ ದೊರೆಗಳು ಕೊಡುವರೆಂಬುದನ್ನು ಈ ಮೂಲಕ ತಿಳಿಸಲಾಗುತ್ತದೆ

ದ ಕ ಜಿಲ್ಲಾ ಕಲೆಕ್ಟರರ ಆಫೀಸು

(ಸಹಿ) ಜಿ ದತ್ತಾತ್ರೇಯ ರಾವ್

ಜಿಲ್ಲಾ ಕಲೆಕ್ಟರರ ಬಗ್ಗೆ

ಮಂಗಳೂರು, ತಾ 5-8-44.

ಚಳಿ ಮತ್ತು ಶೀತಗಳನ್ನು ಕೂಡಲೇ ಗುಣಪಡಿಸುವುದು

ಜಾಂಬಕನ್ನು ಪ್ರತಿ ರಾತ್ರಿ ಮಲಕೊಳ್ಳುವಾಗ ಹಚ್ಚಿರಿ.

ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಕೊಳ್ಳುವುದರಿಂದ, ಪರಿಹರಿಸಿಕೊಳ್ಳಬಹುದು ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧ ಸತ್ವವು, ಬೇಗನೇ ಚರ್ಮಕ್ಕೆ ಹೀರಲ್ಪಟ್ಟು ನಿಮ್ಮ ಶರೀರದ ಕಾವಿನಿಂದ ಹಾರಿ ಹೋಗುವುದು. ಹಾಗೆ ಅವು ಶ್ವಾಸಕಾಲದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ಕಫದ ಭಾರವನ್ನು ಕಡಿಮೆ ಮಾಡುತ್ತದೆ ಜಾಂಬಕ್ ಕೂಡಲೇ ಶೀತ ಮತ್ತು ಇಂಫ್ಲುಯೆಂಜಾ ಕ್ರಿಮಿಗಳನ್ನು ನಾಶ ಮಾಡುತ್ತದೆ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಕ್ಕೊಬ್ಬ ವಿರಹಿತವಾದುದು.

ಗಣಿತಜ್ಞ ಬಾಲಕ

ಏಳು ವರ್ಷದ ಹುಡುಗನಿಗೆ ಎಪ್ಪತ್ತು ವರ್ಷದ ಮಿದುಳು

ಅಮೇರಿಕದಲ್ಲಿ ಸುಮಾರು ೬೦೦ ರೇಡಿಯೊ ಪ್ರಸರಣ ಕೇಂದ್ರಗಳಿವೆ. ಚಿಕಾಗೊ ರೇಡಿಯೋ ಕೇಂದ್ರದಲ್ಲಿ ಸಣ್ಣ ಮಕ್ಕಳಿಂದಲೇ ನಡೆಸಲ್ಪಡುವ ಎಂಥ ಕಾರ್ಯಕ್ರಮವಿದೆ. ಜೋಲ್ ಕುಪ್ಪರ್ ಮನ್ ಎಂಬ ೭ ವರ್ಷದ ಬಾಲಕನೊಬ್ಬನು ಇದರಲ್ಲಿ ಭಾಗವಹಿಸಿ ತನ್ನ ಶ್ರೋತೃಗಳನ್ನು ಆಶ್ಚರ್ಯಗೊಳಿಸುತ್ತಾನೆ.

ಜೋಲ್ ಚಿಕಾಗೋದ ಓರ್ವ ಎಂಜಿನಿಯರನ ಮಗ. ಅವನ ತಾಯಿ ಉಪಾಧ್ಯಾಯಿನಿ. ೩ ವರ್ಷ ಪ್ರಾಯದಲ್ಲೇ ಅವನು ತನ್ನ ಅಗಾಧ ಗಣಿತ ಜ್ಞಾನವನ್ನು ಪ್ರದರ್ಶಿಸಿದನು. ಆಗ ಅವನಿಗೆ ೩ ಸ್ಥಾನಗಳ ಅಂಕೆಯಿಂದ ಗುಣಿಸಲು ಬರುತಿತ್ತು. ಬರಿದು ಅಲ್ಲ, ಮನಸ್ಸಿನಲ್ಲೇ ಲೆಖ್ಖ ಮಾಡಿ ಕ್ಷಣದೊಳಗೆ ಉತ್ತರ ನೀಡುತಿದ್ದನು.

ನಮ್ಮ ದೇಶದಲ್ಲಿ ಮದ್ರಾಸಿನ ರಾಮಾನುಜಂ ಎಂಬವರು ತಮ್ಮ ಅತ್ಯದ್ಭುತ ಗಣಿತ - ಪಾಂಡಿತ್ಯದಿಂದ ಆಕ್ಸಫರ್ಡ್ ಪ್ರೊಫೆಸರುಗಳನ್ನು ಚಕಿತಗೊಳಿಸಿದ್ದು ನಾವು ಕೇಳಿದ್ದೇವೆ. ಅವರೆ ಜೋಲ್ ಎಂಬ ಚಿಕಾಗೊ ನಗರದ ಈ ಬಾಲಕನ ಶಕ್ತಿಯೇ ಬೇರೆ ೫ ವರ್ಷದವನಿದ್ದಾಗ ಅವನು ಗಣಿತ ಪುಸ್ತಕ ವ್ಯಾಪಾರಿಗಳಿಗೆ ಅವರ ಪುಸ್ತಕಗಳಲ್ಲಿನ ತಪ್ಪು ಉತ್ತರಗಳ ಕುರಿತು ಕಾಗದ ಬರೆದು ಅವರನ್ನು ದಿಗಿಲುಗೊಳಿಸಿದ್ದನು. ತನ್ನ ಏಳು ವರ್ಷದೊಳಗೆ ಜೋಲನು ಎಫ್. ಎ. ಬಿ. ಎ. ಕ್ಲಾಸಿನ ಬೀಜ ಗಣಿತ, ರೇಖಾ ಗಣಿತದ ಪುಸ್ತಕಗಳನ್ನೂ ಅಭ್ಯಾಸಿಸಿದ್ದನು.

ಜೋಲನ ಶಕ್ತಿ ಗಣಿತದಲ್ಲಿ ಮಾತ್ರವಲ್ಲ ಯಾವ ವಿಷಯವನ್ನು ಕೇಳಿದರೂ ಸರಿ, ಅವನು ಅತ್ಯಂತ ತೃಪ್ತಿಕರವಾದ ಉತ್ತರಗಳನ್ನು ಕೆಲವೇ ಸೆಕುಂಡುಗಳಲ್ಲಿ ಕೊಡುತಿದ್ದನು ಮಿದುಳ. ವೈದ್ಯರು ಅವನನ್ನು ಪರೀಕ್ಷಿಸಿದಾಗ ಅವನ ಶಕ್ತಿಯನ್ನು ಕಂಡು ಬೆರಗಾಗಿ ಅವನು ಖಂಡಿತವಾಗಿಯೂ ಪರಿಪಕ್ವವಾದ ಜ್ಞಾನಾವಸ್ಥೆಯಲ್ಲಿರುವನಾಗಿ ಅಭಿಪ್ರಾಯಪಟ್ಟಿರುವರ. ಅವನ ಮಾನಸಿಕ ಬೆಳವಣಿಗೆಯು ಅಪಾರವಾಗಿತ್ತು.

ರೇಡಿಯೋ ಕಾರ್ಯಕ್ರಮದ ಒಂದು ದಿನ ಓರ್ವ ಗಣಿತ ಪಂಡಿತರು ಅವನಿಗೆ ಒಂದು ಕಠಿಣ ಸಮಸ್ಯೆಯ ಲೆಖ್ಖವನ್ನು ಕೇಳಿದರು ೮ ಇಂಚು ವ್ಯಾಸದ ವೃತ್ತದೊಳಗೆ ಒಂದು ಸಮ ಬಾಹು ತ್ರಿಕೋಣವಿದೆ ತ್ರಿಕೋಣದೊಳಗೆ ಪುನಃ ಒಂದು ವೃತ್ತವಿದೆ. ಹೀಗೆ ೫ ವೃತ್ತದೊಳಗೆ ೪ ತ್ರಿಕೋಣಗಳಿವೆ ಹಾಗಾದರೆ ೫ನೇಯ ವೃತ್ತದ ಕ್ಷೇತ್ರ ಫಲವೆಷ್ಟು? ನಮಗೆ ಒಂದು ಗಂಟೆಯಾದರೂ ಬೇಕು. ಆದರೆ ಚತುರ ಜೋಲನು ಒಂದೇ ನಿಮಿಷದಲ್ಲಿ ಕಚ್ಚಿ ಕಣ್ಣು ಅರಳಿಸಿ ಕೈಕಾಲು ಬೆರಳುಗಳನ್ನು ಅಲುಗಾಡಿಸಿ ಜೋಲ್ ಉತ್ತರವನ್ನು ಕೊಟ್ಟು ಬಿಟ್ಟ. ಲೆಖ್ಖ ಕೊಟ್ಟ ಪಂಡಿತನು ತನ್ನ ಉತ್ತರದಲ್ಲೇ ತಪ್ಪು ಗುಣಿಸಿದ್ದನು. ಅವನ ಉತ್ತರವೇ ಬೇರೆ ಇತ್ತು. ಒಂದು ಕ್ಷಣಕ್ಕೆ ಜೋಲನ ಉತ್ತರ ತಪ್ಪೆಂದಾಯಿತು." ಆದರೆ ಜೋಲನ ಕಾರ್ಯಕ್ರಮವನ್ನೂ ಅತ್ಯಂತ ಅಭಿರುಚಿಯಿಂದ ಕೇಳುತಿದ್ದ ಕೆಲ ಗಣಿತ ಶಾಸ್ತ್ರಜ್ಞರು ಕೂಡಲೇ ಲೆಖ್ಖ ಹಾಕಿ ಜೋಲನ ಉತ್ತರವೇ ಸರಿ ಎಂದು ಟೇಲಿಫೋನ್ ಮೂಲಕ ತಿಳಿಸಿದರು ಅಂದಿನಿಂದ ಜೋಲನ ಕೀರ್ತಿ ಬೆಳೆಯಿತು.

ಅವನಿಗೆ ಕೇಳಲ್ಪಟ್ಟ ಇತರ ಪ್ರಶ್ನೆಗಳಲ್ಲಿ ಒಂದು ಈ ಕೆಳಗಿನದು "ಅಮೇರಿಕದ ಅಧ್ಯಕ್ಷರಿಗೆ ೨೧ ಗುಂಡುಗಳ ಮರ್ಯಾದೆ ಸಲ್ಲುತ್ತದೆ ನೌಕಾಧಿಕಾರಿಗೆ ೧೭ ಕೆಲವು ವಿಶೇಷ ಸಂಧರ್ಭಗಳಲ್ಲಿ ಓರ್ವ ಸಾಮಾನ್ಯ ಕಲಾಸಿಗೂ ಒಂದು ಗುಂಡಿನ ಮರ್ಯಾದೆ ಕೊಡಲ್ಪಡುತ್ತದೆ. ಹಾಗಾದರೆ ಆ ವಿಶೇಷ ಸಂಧರ್ಭವಾವುದು?" ಇದೇನು ಗಣಿತವಲ್ಲ ಆದರೆ ಜೋಲನಿಗೆ ಇದರ ಉತ್ತರ ಗೊತ್ತಿರಲಿಲ್ಲ ಒಂದು ಕ್ಷಣ ಯೋಚಿಸಿ ಅವನು ತನ್ನ ತೊದಲು ನುಡಿಯಲ್ಲಿ ಕಲಾಸಿಯು ನೀರಿನಲ್ಲಿ ಬಿದ್ದು ಸತ್ತರೆ ಅವನ ಹೆಣವನ್ನು ಶವನ ಪೆಟ್ಟಿಗೆಯಲ್ಲಿ ಹಾಕಿ ಪುನಃ ಸಮುದ್ರದಲ್ಲಿ ಬಿಸಾಡುವಾಗ ಒಂದು ಗುಂಡಿನ ಸಂಖೇತವನ್ನು ಮಾಡುವರು ಎಂದನು. ಉತ್ತರ ಸರಿಯಾಗಿತ್ತು

ಜೋಲನು ಕಾದಂಬರಿಗಳನ್ನು ಜೀವನ ಚರಿತ್ರೆ ಪುಸ್ತಕಗಳನ್ನೂ ಭೂಗೋಳ ಪಾಠಗಳನ್ನೂ ಓದುವನು. ಅವನ ತಂದೆ ತಾಯಿಗಳು ಅವನಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿರುತ್ತಾರೆ. ಮುಂದೆ ಈ ವಿಚಿತ್ರ ಬಾಲಕನು ಅದ್ಭುತಶಾಲಿ ವ್ಯಕ್ತಿಯಾಗುವನೆಂಬುದರಲ್ಲಿ ಸಂದೇಹವಿಲ್ಲ

ಬಾವುಗಳನ್ನು ಕೂಡಲೇ ಗುಣ ಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರಿ ಬಾವುಗಳು ಈ ರೀತಿ ಗುಣವಾಗುತ್ತವೆ ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ, ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು

CUTICURA OINTMENT

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 531/1932.

R. E. P. No. 165/1944.

ಅರ್ಜಿದಾರ-ರಾಮಯ್ಯ ಸಟ್ಟಿ, ಶೇಸಟ್ರ ಆಳಿಯ ಕುಂದಾಪುರ ತಾಲೂಕು ಇಡೂರು ಕನ್ಯಾಡಿ ಗ್ರಾಮ.

ಎದ್ರಿರು-1 ಮಂಜಯ್ಯ ಸಟ್ಟಿ (ಫೋತಿ) 2. ಸುಬ್ಬ ಸೆಡ್ತಿ 1ನೇಯವನ ತಂಗಿ. 3. ಮಂಜಮ್ಮ ಸೆಡ್ತಿ ವೆಂಕಿ ಸೆಡ್ತಿ ಮಗಳು. 4. ಚಂದಮ್ಮ ಸೆಡ್ತಿ 1ನೇ ಪ್ರತಿವಾದಿ ಸೊಸೆ. 5 ಪುಟ್ಟಮ್ಮ ಸೆಡ್ತಿ 3ನೇಯವಳ ಮಗಳು 6. ಸುಬ್ಬಿ ಸೆಡ್ತಿ ಮುರ್ಡೇಶ್ವರ ಅಬ್ಬಕ್ಕ ಸೆಡ್ತಿ ಮಗಳು. 7. ಶೇಸೆಡ್ತಿ ಕಾವೇರಿಸೆಡ್ತಿ ಮಗಳು. 8. ಸುಬ್ಬಯ್ಯ ಸಟ್ಟಿ (ಫೋತಿ) 9. ಶೇಸೆಡ್ತಿ ನಾಗಿ ಸೆಡ್ತಿ ಮಗಳು 10 ಮಂಜಯ್ಯ ಸಟ್ಟಿ (ಫೋತಿ.)

ಕುಂದಾಪುರ ತಾಲೂಕು ಗೋಳಿ ಹೊಳೆ ಗ್ರಾಮದಲ್ಲಿರುವವರು 3, 5 9ನೇ ಎದ್ರಿರಿಗೆ ಕೊಡುವ ನೋಟೀಸು

ಮೇಲಿನ O S. No. 531/1932ನೇ ಡಿಕ್ರಿಯು ತನಗೆ ಎಸ್ಸಾಇನ್‌ಮೆಂಟು ಮೂಲಕ ವರ್ಗ ಮಾಡೋಣಾಗಿದೆ ಎಂಬ ಸಬಬಿನ ಮೇಲೆ ಸದ್ರಿ ಟ್ರಾನ್ಸ್‌ಫರ್ ರುಜುವಾತಿನ ಬಗ್ಗೆ ಅರ್ಜಿದಾರನು ಮೇಲಿನ ಅಮಲ್ದಾರಿ, ದಾಖಲು ಮಾಡಿರುತ್ತಾನೆ ಸದ್ರಿ ಅಮಲ್ದಾರಿಯಲ್ಲಿ ನಿಮ್ಮದ್ದೇನಾದರೂ ಆಕ್ಷೇಪ ಇದ್ದರೆ ತಾ 16-8-44 ನೇ ದಿವಸ ಬೆಳಿಗ್ಯೆ 11ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿಜ್ಯಾಹೀರು ಮಾಡಿಕೊಳ್ಳತಕ್ಕದ್ದು

(ಕೋರ್ಟು ಹುಕುಂ ಪ್ರಕಾರ)

Y. Tejappa Shetty,
Advocate for petitioner

ನೋಟೀಸು

ದಕ್ಷಿಣ ಕನ್ನಡಾ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

O P No 77/1944.

1 ಮೇಚು ಹೆಂಗಸು, 2 ಮಮ್ಮು ಹೆಂಗಸು— ಅರ್ಜಿದಾರ

ಮತ್ತು

1. ಜಾನಮ್ಮಾ, 2 ಗೋಪಾಲ್ಯಾ, 3 ನೀಲಯ್ಯಾ, 4 ರಮ್ನಾನಾತ (ಮ್ಯಾನರರು ಗಾರ್ಡಿಯಾನ್ ಅಜ್ಜಿ ನಾಗು ಹೆಂಗಸು.)

— ರೆಸ್ಪೊಂಡೆಂಟರು.

ಇದರಿಂದ ಸಕಲ ಜನರಿಗೂ ತಿಳಿಯಪಡಿಸುವುದೇನೆಂದರೆ :-

ಮಂಗಳೂರು ತಾಲೂಕು ಪಚಿಹಿತ್ಲು ಗ್ರಾಮದಲ್ಲಿ ಇದ್ದು ಮೃತವಾದ ಲಿಂಗಪ್ಪ ಆಂಗರರಿಗೆ ದಿ ಕೆನರಾ ಬೆಂಕ್ ಲಿಮಿಟೆಡ್ ಮೂಲ್ಕಿ ಇದರಿಂದ ಸೇವಿಂಗ್ ಬೆಂಕ್ ಎಕೌಂಟ್ ಪಾಸ್ ಬುಕ್ ನಂಬ್ರ 667ರಲ್ಲಿ ತೋರುವಂತೆ ಬರಬೇಕಾದ ಐವಜು ರೂ 1311-14-4ನ್ನು ಬರಮಾಡಿಕೊಳ್ಳುವರೆ ಅರ್ಜಿದಾರರ ಬಗ್ಗೆ 1ನೆ ಅರ್ಜಿದಾರಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 14-9-'44ಕ್ಕೆ ಇಟ್ಟಿರುತ್ತದೆ ಈ ವಿಷಯದಲ್ಲಿ ಆಕ್ಷೇಪವುಳ್ಳಂಥವರು ಸದರಿ ತಾ 14-9-1944ರಲ್ಲಿ ಹಗಲು ಘಂಟೆ 10-30ಕ್ಕೆ ಕೋರ್ಟು ಮುಂದೆ ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು 7-8-44 } **M. Janardan Malya,** Pleader for Petitioners.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE BUNDER MANGALORE. *BRANCHES* Mangalore Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Dece.)

Savings bank Accounts 1½% p. a. on daily balances.

FixedDeposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕು... ಭುಜ ಹಲ್ಲು ವೇದನೆಗಳಿಗೂ ಎದೆನೋವು, ... ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋ ಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low. ★ 2½% Rebate on annual premiums.
★ "Permanent Disability Benefits free of any cost.
★ Payment of double the insured amount in case of death by accident at a very smallcost of Rs. 1-8-0 per 1000.
★ Special rebates on large size policies.
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the super vision of the experienced staff. A specific for the puerperal diseases and also valuable to puerperal women as tonic increases the vitality and sexual vigour Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Offce KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ38] ತಾರೀಕು 18—8—1944 [ಸಂಚಿಕೆ 33]

ದೊಡ್ಡ ಶಕ್ತಿಯೂ ಸಣ್ಣ ರಾಷ್ಟ್ರ

ಜಪಾನಿಯರ ಜನಾಂಗ ಜೀವನ

ಜಪಾನ್ ದೇಶ ಚಿಕ್ಕದು, ಜಪಾನಿಯರ ಯುದ್ಧ ಹಡಗಗಳೂ ಚಿಕ್ಕವು, ವಿಮಾನಗಳು ಚಿಕ್ಕವು, ಮನೆಗಳು ಚಿಕ್ಕವು, ಜಪಾನಿಯರೇ ಚಿಕ್ಕ ಜನರು. ಹೀಗಿರುವಾಗ ಅಮೆರಿಕದಂತಹ ಬೃಹದ್ರಾಷ್ಟ್ರವನ್ನು ಕೆಣಕಿ ಅದು ಹೇಗೆ ಯಶಸ್ವಿಯಾಗಬಲ್ಲುದು? ಇಂದಿನ ಜಪಾನಿನ ಶಕ್ತಿಗೆ ಜಪಾನರ ಬಲವಾದ ಸಹನಾಶಕ್ತಿ ಅಚಲ ಸಾಹಸಗಳೇ ಕಾರಣ. ಅವರ ಸ್ವಭಾವವು ಕ್ರೂರವಿರುವುದಾಗಿ ಅನೇಕ ನಿದರ್ಶನಗಳಿಂದ ತಿಳಿದುಬರುತ್ತದೆ

ವಾಸ್ತವವಾಗಿ ನೋಡಹೋದರೆ ಇಂದಿನ ಮಹಾ ಯುದ್ಧವು ಪ್ರಾರಂಭವಾದುದು ಮಂಚೂರಿಯದಲ್ಲಿ ಎನ್ನಬಹುದು–೧೯೩೧ರಲ್ಲಿ ಸಾಮ್ರಾಜ್ಯ ಲಾಲಸೆಯಿಂದ ಜಪಾನರು ಒಂದು ರೈಲ್ವೇ ಮಾರ್ಗದ ಸಂಬಂಧ ಜಗಳ ಕೆಣಕಿ ಅತೀ ಶೀಘ್ರದಲ್ಲಿಯೂ ಅತ್ಯಲ್ಪ ಖರ್ಚಿನಲ್ಲಿಯೂ ಅವರು ಮಂಚೂರಿಯುವನ್ನು ಬಗಲೊಳಗೆ ಹಾಕಿಕೊಂಡರು. ಸಾವಿರಾರು ಚೀನಿ ಸೈನಿಕರನ್ನು ಕೊಂದಿಕ್ಕಿದರು ಮಿಲಿಟರಿ ಠಾಣ್ಯಗಳನ್ನೂ ವಶಪಡಿಸಿ ಸೈನಿಕರನ್ನು ಕ್ಷಣದೊಳಗೆ ನಿರಾಯುಧಗೊಳಿಸಿದರು.

ಈ ರೀತಿ ವರ್ತಿಸಿದ ಆ ಜಪಾನಿಯರು ಎಂತಹ ಜನರು? ಅವರ ದೇಶವು ಮೇಲಿಂದ ಮೇಲೆ ಪ್ರಕೃತಿದೇವಿಯ ಆಗ್ರಹಕ್ಕೆ ತುತ್ತಾಗುವುದು–ನೆರೆ ಭೂಕಂಪ, ಜ್ವಾಲಾಮುಖಿಗಳ ಹಾವಳಿ ಎಂದಿಗೂ ತಪ್ಪಿದ್ದಿಲ್ಲ ಏಳರಲ್ಲಿ ಆರು ಅಂಶ ಮಾತ್ರ ಕೃಷಿಯೋಗ್ಯವಾದ ದೇಶ. ೭೫ ಮಿಲಿಯ ಜಪಾನಿಯರು ೧೦ ಮಿಲಿಯ ಅಮೆರಿಕನರಷ್ಟು ಶ್ರೀಮಂತರಲ್ಲ. ಆದರೂ ಜಪಾನ್ ಒಂದು ಸಾಮ್ರಾಜ್ಯವನ್ನು ಕಟ್ಟಿದೆ. ಈ ಶಕ್ತಿ ಎಲ್ಲಿಂದ ಬಂತು?

ಬಡವರಿಂದ ಶ್ರೀಮಂತರ ವರೆಗೆ ಜಪಾನಿ ಜನರ ಆಹಾರವು ಬಹಳ ಸರಳವೂ ಕಮ್ಮಿ ಖರ್ಚಿನದೂ ಇರುತ್ತದೆ, ಮಾತ್ರವಲ್ಲ ಸ್ವಲ್ಪ ತಿಂದು ಹೆಚ್ಚು ಕೆಲಸ ಮಾಡುವ ಗರ್ವ ಮತ್ತು ಶಕ್ತಿ ಜಪಾನಿಯರ ರಕ್ತದಲ್ಲೇ ತುಂಬಿದೆ. ಇದರಿಂದ ಅವರು ತಮ್ಮ ಕನಿಷ್ಠ ಉತ್ಪತ್ತಿಯಲ್ಲೂ ಉಳಿತಾಯವನ್ನು ಮಾಡುತ್ತಿರುವರು ಅವರ ಕೈಗಾರಿಕೆಯ ಅಭಿವೃದ್ಧಿಗೆ ಇದೊಂದು ಮುಖ್ಯ ಕಾರಣ. ಜಪಾನಿನಲ್ಲಿ ಹಾಳಾಗಿ ಹೋಗುವಂತಹ ಪದಾರ್ಥಗಳೇ ಇಲ್ಲವೆನ್ನಬಹುದು. ಹಣ್ಣುಗಳ ಸಿಪ್ಪೆಗಳನ್ನು ಹಿಡಿದು ಎಲುಬು ತುಂಡುಗಳನ್ನು ಕೂಡಾ ಅವರು ಕೃಷಿಗಾಗಲೀ ಕೈಗಾರಿಕೆಗಾಗಲೀ ಉಪಯೋಗಿಸಿಯೇ ಬಿಡುವರು

ಜಪಾನಿಯರ ಮನೆಗಳು ಚಿಕ್ಕವೂ, ಸರಳವೂ ಆಗಿವೆ. ಅಲ್ಲಿ ಮರ ಮತ್ತು ಮಣ್ಣಿನಿಂದ ಮತ್ತು ಪಿಂಗಾಣಿ ಸಾಮಾನುಗಳೆ ಅಧಿಕ. ಸರಿಯಾಗಿ ಒಂದು ಹಿಡಿ ಲೋಹ ಅವರ ಮನೆಗಳಲ್ಲಿ ಸಿಗಲಾರದು. ಅತ್ಯವಶ್ಯವಲ್ಲದ್ದನ್ನು ಜಪಾನಿಯರು ತಮ್ಮ ಮನೆಗಳಲ್ಲಿ ಎಂದಿಗೂ ಉಪಯೋಗಿಸುವುದಿಲ್ಲ ಅವರ ಬಾಗಿಲುಗಳಿಗೆ ಬೀಗ, ಚಿಲಕ, ಬೀಜಾಗ್ರ ಒಂದೂ ಇರುವುದಿಲ್ಲ ಅವರಲ್ಲಿ ಕದ್ದು ಹೋಗುವ ಅಮೂಲ್ಯ ಒಡವೆಗಳೇ ಕಡಿಮೆ.

ಜಪಾನಿನ ರೈತನು ಇದ್ದುದರಲ್ಲಿ ಮಹಾ ಜಿಪುಣನು. ತನಗಿರುವ ಕೆಲವು ಚಿಕ್ಕ ಗದ್ದೆಗಳಲ್ಲಿ ಹಗಲು ರಾತ್ರಿ ದುಡಿದು, ಬೆಳೆಯಲ್ಲಿನ ಒಂದು ಕಾಳು ಕೂಡಾ ಹಾಳಾಗದಂತೆ ಧಾನ್ಯಗಳನ್ನು ಬೆಳೆಸಿಕೊಂಡು ಬರುತ್ತಾನೆ ೨, ೩ ವರ್ಷದ ಅವರ ಮಕ್ಕಳಿಗೂ ಚುರುಕಾದ ಜಿಪುಣತ್ವವಿರುತ್ತದೆ

ಯುದ್ಧ ಹಡಗುಗಳಲ್ಲಿ ಜಪಾನಿ ಸೈನಿಕರು ಬಹಳ ಇಕ್ಕಟ್ಟಾಗಿ ವಾಸಿಸಬಲ್ಲರು. ಅಮೆರಿಕದ ೧೨ಪಾಲು ಹೆಚ್ಚು ಸಂಖ್ಯೆಯನ್ನು ಜಪಾನ್ ಹಡಗದಲ್ಲಿ ಒಯ್ಯುತ್ತಾರೆ. ಹಡಗುಗಳು ಮುಳುಗಿದಾಗ ಸತ್ತವರ ಸಂಖ್ಯೆಯೂ ಅವರದೇ ಹೆಚ್ಚು ಜಪಾನೀ ಸೈನಿಕನು ಸ್ವಲ್ಪ ಆಹಾರದಲ್ಲಿ ಕಾಡುಪ್ರದೇಶ ಯುದ್ಧದ ಕಠಿಣತೆಗಳನ್ನೆಲ್ಲಾ ತನ್ನ ಸ್ವಾಭಾವಿಕ ಸಹನಾ ಶಕ್ತಿಯಿಂದ ಸಹಿಸಬಲ್ಲನು ಮತ್ತು ಹೆಚ್ಚು ದೇಹಿಕ ಕಷ್ಟಗಳನ್ನೂ ಅನುಭವಿಸಬಲ್ಲನು.

ತಮ್ಮ ಆಡಳಿತೆಗೆ ಒಳಪಟ್ಟ ಮಂಚೂರಿಯಾ ಕೋರಿಯಾ ಪ್ರಾಂತ್ಯಗಳಲ್ಲಿ ಜಪಾನೀ ಸೈನಿಕರು ನಡೆಸುತ್ತಿರುವ ಅಮಾನುಷಿಕ ಹಿಂಸೆ ದಬ್ಬಾಳಿಕೆಗಳು ಅಷ್ಟಿಷ್ಟಲ್ಲ. ಒಂದು ಸಲ ಒಬ್ಬ ಕೋರಿಯದ ಹುಡುಗನು ರೈಲ್ವೇ ಗಾಡಿಯ ಕೆಳಗೆ ಅವಿತು ಕೂತಿದ್ದು ಟಿಕೇಟು ಇಲ್ಲದೆ ಪ್ರಯಾಣ ಮಾಡುತ್ತಿದ್ದನು. ಅದು ಜಪಾನೀ ಕಾವಲುಗಾರರ ಕ್ರೂರ ದೃಷ್ಟಿಗೆ ಬಿತ್ತು. ಅವರು ತಮ್ಮ ಬಂದೂಕಿನ ಕೊನೆಯಲ್ಲಿರುವ ಚೂರಿಯಿಂದ ಅವನನ್ನು ಅಡಿಗೆ ಕೊತಲ್ಲೇ ತಿವಿದು ಹೊರಗೆಡವಿದರು. ಹುಡುಗನ ದೇಹಕ್ಕೆ ಹತ್ತಿಪತ್ತು ಕತ್ತಿ ತೂತುಗಳಾದುವು. ಆ ಮೇಲೂ ಅವನನ್ನು ಹೊಡೆಯಲಾಯಿತು. ನಿಷ್ಪ್ರಯೋಜನವೆಂದು ಕಂಡ ಪ್ರಾಣಿಗಳನ್ನು ಅವರು ಆಹಾರ ಕೊಡದೆ ಒಂದು ಕಡೆ ಕಟ್ಟಿ ಉಪವಾಸ ಹಾಕಿಸಿ ಕೊಲ್ಲುವರು. ಅಂತಹ ನಾಯಿಯನ್ನೊ ಕುದುರೆಯನ್ನೊ ಸಾರ್ವಜನಿಕ ರಸ್ತೆ ಬದಿಗಳಲ್ಲಿ ತೋಟಗಳಲ್ಲಿ ಕಟ್ಟಿಹಾಕಿದ್ದನ್ನು ಸಾಮಾನ್ಯವಾಗಿ ನೋಡಬಹುದು. ಅದನ್ನು ದಾಟಿ ಹೋಗುವನೊಬ್ಬನೂ ಅದರ ಕರುಣಾಜನಕ ಸ್ಥಿತಿಯ ಕಡೆ ಗಮನ ಕೊಡುವುದೇ ಇಲ್ಲ.

ಜಪಾನಿ ಹಡಗುಗಳು ಅಮೆರಿಕನರ ನೌಕೆಯ ಅಗಾಧ ಪರಿಮಾಣಕ್ಕೆ ಸರಿಗಟ್ಟಲಾರವು. ಅವುಗಳಲ್ಲಿನ ಸಿರಂಗಿಗಳೂ ಯಂತ್ರಗಳೂ ಕೀಳು ತರಗತಿಯ ಯಾಂತ್ರಿಕ ತಯಾರಿಕೆಯವುಗಳೂ ಆಗಿವೆ. ಹೀಗೆ ಒಂದು, ಕಾಲದಲ್ಲಿ ಜಪಾನವು ಬಲಿಷ್ಠವಾಗಿತ್ತು. ಆದರೆ ಅಮೆರಿಕವು ಈಗ ಅದಕ್ಕಿಂತಲೂ ಇಮ್ಮಡಿ ಶಕ್ತಿವಂತವಾಗಿದೆ. ಅಮೆರಿಕವು ಶ್ರೀಮಂತ ಜನರ ಆಲಸ್ಯನಾಡೆಂದು ಅವರು ತಿಳಿದಿದ್ದರು ಸಮುದ್ರ, ಆಕಾಶಗಳಲ್ಲಿ ಭವ್ಯ ಕೋಟೆಗಳನ್ನೇ ಕಟ್ಟುತ್ತಿರುವ ಇಂದಿನ ಸಾಹಸಿ ಅಮೆರಿಕವನ್ನು ಅವರು ಗಮನಿಸದಿರುವುದು ಅವರ ಸೋಲಿಗೆ ಕಾರಣವಾಗದಿರದು.

ನಾಣ್ಯಗಳ ಬಗ್ಗೆ-ಅಮೇರಿಕದ ಬೆಳ್ಳಿ

ನಾಣ್ಯಗಳನ್ನು ಹೊಡೆಯುವ ಬಗ್ಗೆ ಹಿಂದೂದೇಶಕ್ಕೆ ಮಾಸ ಒಂದರ ಐದು ಮಿಲಿಯ ಔನ್ಸುಗಳು ಬೆಳ್ಳಿಯನ್ನು ಅಮೇರಿಕದ ಸರಕಾರವು ಒದಗಿಸುವ ಕುರಿತು, ಏರ್ಪಾಡು ಆಗಿರುವುದಾಗಿ ತಿಳಿದು ಬಂದಿದೆ. ಇದಲ್ಲದೆ, ತಮ್ಮ ದೇಶದ ಹಣಕಾಸಿನ ಸ್ಥಿತಿಯನ್ನು ಸ್ಥಿರಗೊಳಿಸುವರೆ ಈ ಮೊದಲೆ ಅಮೇರಿಕದಿಂದ ನೂರು ಮಿಲಿಯ ಔನ್ಸು ಬೆಳ್ಳಿಯು ಇತ್ತ ಕಡೆಗೆ ಬಂದಿರುತ್ತದೆ. ಇದರ ಪರಿಣಾಮವಾಗಿ, ಈಗ ರೂಢಿಯಲ್ಲಿರುವ ರೂಪಾಯಿ ನೋಟುಗಳು ಹಿಂತೆಗೆಯಲಾಗಬಹುದೆಂಬ ಊಹೆಯಿದೆ.

ಕೃತಕ ಕಸ್ತೂರಿ

ವಿಶೇಷ ತರದ ಔಷದೀ ಗುಣಗಳುಳ್ಳ ಕಸ್ತೂರಿಯು ಟಿಬೇಟಿನ ಒಂದು ಪ್ರಾಣಿಯಿಂದ ದೊರಕುವಂತಹುದು. ಆದರೆ ಅದು ಧಾರಳವಾಗಿ ದೊರಕಿಸಿಕೊಳ್ಳುವುದು ಬಹಳ ಪ್ರಯಾಸದ ಸಂಗತಿ

ಮಾನವ ಸಂಕಟವನ್ನು ನೀಗಿಸುವ ಅನೇಕ ಬಗೆಯ ಔಷಧಿಗಳಲ್ಲಿ ಕಸ್ತೂರಿಯು ಅಧಿಕ ಪ್ರಮಾಣದಲ್ಲಿ, ಬೇಕಾಗಿಯದೆ. ಈ ಕಾರಣದಿಂದ, ಅಮೇರಿಕದ ವಿಜ್ಞಾನಿಗಳು, ಈಗ ಕಸ್ತೂರಿಯನ್ನು ಕೃತಕ ರೀತಿಯಲ್ಲಿ ತಯಾರಿಸುವ ಉಪಾಯವನ್ನು ಕಂಡುಹಿಡಿದಿರುವರು ಅದಲ್ಲದೆ ಈ ತರದಲ್ಲಿ ಕಸ್ತೂರಿಯನ್ನು ದಾರಾಳವಾಗಿ ಸಿದ್ಧ ಪಡಿಸುವ ಕಾರ್ಖಾನೆಗಳು ಅಮೇರಿಕದಲ್ಲಿ ಸ್ಥಾಪನೆಯಾಗಿವೆ

ಈ ತರದ ಕಸ್ತೂರಿಯಲ್ಲಿ ನೈಸರ್ಗಿಕ ಕಸ್ತೂರಿಯಲ್ಲಿರುವಂತೆ ಎಲ್ಲಾ ಗುಣಗಳು ಕೂಡಿರುವುದಂತೆ ಈ ಕೃತಕ ಕಸ್ತೂರಿಯು ಸುಲಭ ಬೆಲೆಯಲ್ಲಿ ದೊರಕುವುದು.

ತವರದ ಕುರಿತು ಎಚ್ಚರಿಕೆ

ತಾಮ್ರ, ಹಿತ್ತಾಳಿ ಇತ್ಯಾದಿ ಪಾತ್ರಗಳಿಗೆ ತವರ ಹಚ್ಚಿಸುವವರು, ಈ ಕೆಳಗಿನ ವಿಷಯವನ್ನು ಸ್ವಲ್ಪ ಗಮನಿಸಬೇಕು.

ಯುದ್ಧದ ದೆಸೆಯಿಂದ ತವರಿನ ಕ್ರಯವು ವಿಶೇಷ ಮಟ್ಟಕ್ಕೆ ಯೇರಿರುವುದರಿಂದ, ಅದರೊಡನೆ ಸೀಸವನ್ನು ಬೆರೆಕೆಗೊಳಿಸುವ ಹವ್ಯಾಸವು ತಲೆದೋರಿರುತ್ತದೆ. ಈ ತರದ ತವರವನ್ನು ಪಾತ್ರಗಳಿಗೆ ಹಚ್ಚುವುದರಿಂದ ಆರೋಗ್ಯಕ್ಕೆ ಬಹಳ ಕೆಡುಕಿದೆ. ಕಾರಣ ಸೀಸವು ಮನುಷ್ಯನಿಗೆ ಅತ್ಯಂತ ವಿಷಕಾರಿಯು ಪಾತ್ರೆಗೆ ಅಂಟಿಸಿದ ಸೀಸವು ಆಹಾರದೊಡನೆ ಕಲೆತು ನಮ್ಮ ದೇಹದೊಳಗೆ ಸೇರಿ ಹೆಚ್ಚಿನ ಅನರ್ಥಗಳಿಗೆ ಕಾರಣವಾಗುವುದು. ಆದುದರಿಂದ ಪಾತ್ರಗಳಿಗೆ ತವರ ಹಚ್ಚಿಸುವ ಸಮಯದಲ್ಲಿ, ಸೀಸದ ಬೆರಕೆಯಿಲ್ಲದ ತವರವನ್ನು ದೊರಕಿಸಿಕೊಳ್ಳುವಂತೆ ಜನರು ಜಾಗರೂಕತೆಯನ್ನು ವಹಿಸತಕ್ಕುದು.

ಅಲೂಮಿನಿಯಮ್ ಪಾತ್ರೆಗಳಲ್ಲಿ ಆಹಾರವನ್ನು ಸಿದ್ಧಪಡಿಸುವುದು ಅಪಾಯಕರವಲ್ಲವೆಂದು, ಅಭಿಪ್ರಾಯವು ಅನೇಕರಲ್ಲಿರಬಹುದು. ಪರಿಶುದ್ಧವಾದ ಅಲೂಮಿನಿಯಮ್ಮಿನಿಂದ ಮಾನವದೇಹಕ್ಕೆ ಯಾವತ್ತೂ ಹಾನಿಉಂಟಾಗದಂತೆ ಆದರೆ ಅದು ಪರಿಶುದ್ಧವಾಗಿ ದೊರಕುವುದೆ ಇಲ್ಲ. ಅದು ಸೀಶ ಮಿಶ್ರವಾಗಿಯೆ ದೊರಕುತ್ತಿರುವುದು ಈ ಕಾರಣದಿಂದ ಅಲೂಮಿನಿಯಮ್ ಪಾತ್ರೆಗಳು ಕೂಡ ಹಾನಿಕರವೆಂದು ಎಣಿಸಬೇಕು. ಮಣ್ಣಿನಪಾತ್ರೆಗಳನ್ನು ಉಪಯೋಗಿಸುವುದರಿಂದ, ಮೇಲಿನ ಯಾವ ಅಪಾಯಗಳು, ಪರಿಣಮಿಸವು.

ಪುಣ್ಯಸ್ಮೃತಿ

ರಾಷ್ಟ್ರೀಯ ಕವಿ ರವೀಂದ್ರರು

— ಪುಣ್ಯದಿನದ ಸ್ಮರಣೆಗಳು —

[ರವೀಂದ್ರನಾಥಠಾಗೂರರು ಅಸ್ತಮಿಸಿ ಕಳೆದ ಹುಣ್ಣಿಮೆಗೆ ಮೂರು ವರ್ಷಗಳು ಸಂದವು; ರವೀಂದ್ರರು ರಾಷ್ಟ್ರೀಯ ಮಹಾ ಕವಿಗಳು; ನೋಬೆಲ್ ಬಹುಮಾನ ಪಡೆದ ವಿಶ್ವಕವಿಗಳು; ಠಾಗೂರ ದಿನವನ್ನು ಇಂದು ಅಖಿಲ ಭಾರತದಲ್ಲಿ ಅಲ್ಲಲ್ಲಿ ಗ್ರಾಮ ನಗರಗಳಲ್ಲಿ ಆಚರಿಸುತ್ತಿದ್ದಾರೆ; ಈ ಸಂದರ್ಭ ಅವರ ಸ್ಮೃತಿ ಮಾಡುವುದು ನಮ್ಮ ಮುಖ್ಯ ಕರ್ತವ್ಯವಾಗಿದೆ; ರವೀಂದ್ರರು ಭಾರತದ ಏಳಿಗೆಗಾಗಿ ಎಷ್ಟರಮಟ್ಟಿಗೆ ದುಡಿದಿದ್ದರು ಎಂಬ ವಿಚಾರವನ್ನು ಇಲ್ಲಿ ಸೂಕ್ಷ್ಮವಾಗಿ ಕೊಡಲಾಗಿದೆ.]

ಆಗ ಇನ್ನೂ ರವೀಂದ್ರರು ಶಾಂತಿನಿಕೇತನ ಪ್ರಾರಂಭಿಸಲಿಲ್ಲ; ಅವರ ಮನಸ್ಸು ರಾಜಕೀಯದ ಕಡೆಗೆ ಹರಿದಿತ್ತು; ದೇಶದಲ್ಲಿ ಸ್ವಾತಂತ್ರ್ಯ ಪ್ರೇಮದ ಪ್ರವಾಹವು ತುಂಬಿ ಹರಿಯುತ್ತಿತ್ತು. ರವೀಂದ್ರರೂ ಮಾತೃಭೂಮಿಯ ಸೇವೆಮಾಡಲು ಸದಾಸಿದ್ಧರಾಗಿದ್ದರು. ಮನಸ್ಸಿನಲ್ಲಿ ಮಾತ್ರವಲ್ಲ ಕೃತಿಯಲ್ಲಿಯೂ ಅವರು ದೇಶಸೇವಾ ಕಾರ್ಯಗಳನ್ನು ಕೈಕೊಂಡರು.

ಸ್ವದೇಶಿಯ ಕುರಿತು ಅವರಿಗೆ ಅಚಲ ವಿಶ್ವಾಸ ಹುಟ್ಟಿತು; ಭಾರತೀಯ ವಸ್ತುಗಳು, ಭಾರತೀಯ ಉದ್ಯಮಿಗಳ ಕೈಯಲ್ಲಿರಬೇಕೆಂದೂ ಅದರಿಂದ ದೇಶದ ಆರ್ಥಿಕ ಏಳಿಗೆಯಾಗುವುದೆಂದು ಅವರು ಉಪದೇಶಿಸಿದರು. ಬಂಗಾಳದಲ್ಲಿ ಎಲ್ಲೆಲ್ಲಿಯೂ ಸ್ವದೇಶೀ ಪ್ರಚಾರಕಾರ್ಯ ಕೈಕೊಂಡರು. ಅವರ ಇಬ್ಬರು ಸಮೀಪಸಂಬಂಧಿಕರು ಸಕ್ಕರೆಕಾರ್ಖಾನೆ ಮತ್ತು ಗೋಣಿ ಕಾರ್ಖಾನೆಗಳನ್ನು ಸ್ಥಾಪಿಸಿದರು. ಅದನ್ನು ಠಾಗೂರರು ಪ್ರೋತ್ಸಾಹಿಸಿದ್ದು ಮಾತ್ರವಲ್ಲ ಅದರ ಏಳಿಗೆಗೆ ತನ್ನ ಭಂಡವಾಳವನ್ನೂ ಕೊಟ್ಟರು. ಠಾಗೂರರ ಕೆಲವು ಗೆಳೆಯರು ಕಲ್ಕತ್ತಾದಲ್ಲಿ 'ಭಾರತೀಯ ಭಂಡಾರ' ಎಂಬೊಂದು ಸಂಸ್ಥೆಯನ್ನು ಸ್ಥಾಪಿಸಿದರು. ಠಾಗೂರರು ಈ ಸಂಸ್ಥೆಯ ಏಳಿಗಾಗಿಯೂ ದುಡಿದದ್ದು ಮಾತ್ರವಲ್ಲ ತನ್ನ ಸಂಪತ್ತಿನ ಕೆಲವಂಶವನ್ನೂ ಅದರಲ್ಲಿ ಹಾಕಿದರು. ಮುಂದೆ ಈ ಉದ್ಯಮಿಗಳು ಅಯಶಸ್ವಿಯಾದ ಕಾರಣ ಠಾಗೂರರು ಹೆಚ್ಚಿನ ನಷ್ಟಕ್ಕೆ ಗುರಿಯಾಗ ಬೇಕಾಯಿತು; ಆ ಕಾರಣವೇ ಶಾಂತಿನಿಕೇತನದ ಪ್ರಾರಂಭ ಕಾಲದಲ್ಲಿ ಅವರು ತುಂಬಾ ಆರ್ಥಿಕ ಮುಗ್ಗಟ್ಟಿನಿಂದ ಕಷ್ಟಪಟ್ಟರು.

ಬಂಗಾಳವು ಕ್ಷಾಮ ನೆರೆಹಾವಳಿಗಳಿಗೆ ಆಗಾಗ ತುತ್ತಾಗುತ್ತಿರುವುದು. ರವೀಂದ್ರರು ಈ ಸಂದರ್ಭಗಳಲ್ಲಿಯೂ ನಮ್ಮ ದೇಶಕ್ಕೆ ತುಂಬಾ ಸೇವೆ ಮಾಡಿರುವರು. ಬಡಬಗ್ಗರಿಗೆ ತನ್ನಲ್ಲಿದ್ದಷ್ಟನ್ನೂ ಕೊಟ್ಟು ನೆರವಾಗಿರುವರು. ೧೮೯೮ರಲ್ಲಿ ಬಂಗಾಳದಲ್ಲಿ ಪ್ಲೇಗು ಪಸರಿಸಿತು. ಆ ಸಮಯದಲ್ಲಿ ರೋಗಪೀಡಿತರಿಗೆ ತನ್ನ ನೆರವನ್ನು ಕೊಟ್ಟು ಠಾಗೂರರು ತನ್ನ ದೇಶಾಭಿಮಾನವನ್ನು ಚೆನ್ನಾಗಿ ಪ್ರಕಟಿಸಿದ್ದಾರೆ. ಬಿಹಾರ ಕ್ವೆಟ್ಟಾ ಭೂಕಂಪಗಳಕಾಲದಲ್ಲಿಯೂ ಠಾಗೂರರು ನಿಸ್ವಾರ್ಥಸೇವೆ ಸಲ್ಲಿಸಿದ್ದಾರೆ. ಅವರ ಉದಾತ್ತ ಜೀವವು ಮಾನವ ಸೇವೆಗೆ ಸದಾ ಆತುರವಾಗಿ ಕಾತರಿಸುತ್ತಿತ್ತು.

೧೯೦೫ರಲ್ಲಿ ಬಂಗಾಳವು ಕೆರಳಿತು; ಕರ್ಜನ್ ದೊರೆಯು ಬಂಗಾಳವನ್ನು ಎರಡಾಗಿ ವಿಭಜಿಸಿದನು; ಬಂಗಾಳವನ್ನು ಹೀಗೆ ಇಬ್ಭಾಗ ಮಾಡಿದ್ದರಿಂದ ಇಡೀ ಬಂಗಾಳವೇ ಉರಿದುನಿಂತು. ಸರಕಾರವನ್ನು ಎದುರಿಸಿತು. ತನ್ನ ನಾಡಿಗೆ-ಮಾತೆಗೆ ಇದೊಂದು ಮಹಾ ಅನ್ಯಾಯವೆಂದು ಪ್ರತಿಯೊಬ್ಬ ಬಂಗಾಳಿಯೂ ತಿಳಿದುಕೊಂಡನು. ಆದರೂ ಆಳುವವರು ಜನದ ಈ ಆವೇಶವನ್ನು ಅರ್ಥಮಾಡಿಕೊಳ್ಳಲೇ ಇಲ್ಲ. ಬಂಗಾಳ ವಿಭಜನೆಯನ್ನು ಖಂಡಿಸುವ ಸಭೆಗಳು ಎಲ್ಲೆಲ್ಲಿಯೂ ಜರಗಿದವು.! ಒಂದೇ ಬಂಗಾಳ! ಚಳವಳದಲ್ಲಿ ರವೀಂದ್ರನಾಥರು ಮುಖಂಡರಾಗಿದ್ದರು. ಕಲ್ಕತ್ತದಲ್ಲಿ ಒಂದರದ ಮೇಲೊಂದು, ಉದ್ವೇಗಗೊಂಡ ಜನಸಂದಣಿಯ ಸಭೆಗಳ ಮುಂದೆ ಅವರು ಭಾಷಣ ಮಾಡಿದರು. ಕಲ್ಕತ್ತದ ಬೀದಿ ಬೀದಿಗಳಲ್ಲಿ ತಾನು ರಚಿಸಿದ ರಾಷ್ಟ್ರೀಯ ಕವಿತೆಗಳನ್ನು ಹಾಡುತ್ತಾ, ಸರಕಾರವನ್ನು ಪಂಥಕ್ಕೆ ಆಹ್ವಾನಿಸುತ್ತಾ ಅವರು ಮೆರವಣಿಗೆ ಹೊರಡಿಸಿದರು. ಬಂಗಾಳ ವಿಭಜನೆಯನ್ನು ಎದುರಿಸುವ ಸಲುವಾಗಿ ಒಂದು ಸಭೆಯಲ್ಲಿ ಅವರಿಗೆ ೫೦ ಸಾವಿರ ರುಪಾಯಿಯ ನಿಧಿ ಸಂಗ್ರಹವಾಯಿತು! ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸಭೆಗೆ ಹಾಜರಾಗ ಬಾರದೆಂದು ಸರಕಾರ ಹೊರಡಿಸಿದ ನಿರ್ಬಂಧವನ್ನು ಅವರು ಉಗ್ರವಾಗಿ ಟೀಕಿಸಿದರು.

ಹಿಂದೂ ಮುಸ್ಲಿಂ ಸಮಸ್ಯೆ ರವೀಂದ್ರರ ಅಂತಃಕರಣವನ್ನು ತುಂಬಾ ನೋಯಿಸಿದೆ. ಬಂಗಾಳದ ರಾಜಕೀಯದಲ್ಲಿ "ಹಿಂದೂ ಪಕ್ಷ" "ಮುಸ್ಲಿಂ ಪಕ್ಷ" ಗಳೆಂಬ ಎರಡು ಪಕ್ಷಗಳು ಸ್ಥಾಪಿತವಾಗಿದ್ದವು. ಇದು ಇನ್ನಷ್ಟು ಸಂಕಟಕ್ಕೆ ಕಾರಣವಾಗಿತ್ತು ೧೯೦೮ರಲ್ಲಿ ಠಾಗೂರರು ಬಂಗಾಳ ಪ್ರಾಂತ್ ಪರಿಷತ್ತಿನ ಅಧ್ಯಕ್ಷ ಪೀಠದಿಂದ ಹೀಗೆಂದು ಉಪದೇಶಿಸಿದರು. "ದೇಶಸೇವೆ ಮಾಡಬೇಕೆಂದಿರುವ ಪ್ರತಿಯೊಬ್ಬ ಯುವಕನೂ ಹಳ್ಳಿಗೆ ಹೋಗಿ ಅಲ್ಲಿ ಕೆಲಸಮಾಡಬೇಕು; ತನ್ನ ಸಹೋದ್ಯೋಗಿಯಾಗಿ ಹಿಂದುವು ಮುಸ್ಲಿಮನನ್ನೂ ಮುಸ್ಲಿಮನು ಹಿಂದುವನ್ನೂ ತೆಗೆದುಕೊಂಡು ಮಧುರ ಬಾಂಧವ್ಯ ಹುಟ್ಟಿಸಬೇಕು. ಅವರು ಕೂಡಿ ನಡೆದು ಹಳ್ಳಿಗರಿಗೆ ನೆರವಾಗಬೇಕು. ಯಾವ ದೇಶ ಜಾತಿಯಿರಲಿ ಮಾನವಹೃದಯವೆಂಬುದು ಒಂದೇ! ಇದು ರಾಜಕೀಯ ಉನ್ನತಿಗೆ ಮಾತ್ರವಲ್ಲ; ಇದು ಕರ್ತವ್ಯವೆಂದು ಮಾಡಬೇಕಾಗಿದೆ"

ರವೀಂದ್ರರು ಆಗಾಗ ಹಿಂದುಗಳಿಗೆ ಮುಸ್ಲಿಮ್ ಜನಾಂಗದಿಂದ ತಮಗೆ ದೊರೆತ ಅಮೂಲ್ಯ ವಿಷಯಗಳ ಕುರಿತು ಹೇಳುತ್ತಿದ್ದರು. ಹೊರಗಿಂದ ಬಂದ ಮುಸ್ಲಿಮರು ತಮ್ಮೊಡನೆ ಅಮೂಲ್ಯ ಜ್ಞಾನ ಭಂಡಾರವನ್ನು ತಂದರೆಂದೂ, ಧಾರ್ಮಿಕ ಪ್ರಜಾ ಪ್ರಭುತ್ವವನ್ನು ತಿಳಿಸಿದರೆಂದೂ, ನಮ್ಮ ಸಾಹಿತ್ಯ, ಶಿಲ್ಪ, ಕಲೆಗಳಲ್ಲಿ ಮಹಮ್ಮದೀಯರು ಶಾಶ್ವತ ಸುಧಾರಣೆಮಾಡಿರುವರೆಂದೂ, ಹಾಗಿರಲು ನಾವೂ ಅವರೂ ಅನ್ಯೋನ್ಯ ಕೂಡಿ ನಡೆವುದು ಬಿಟ್ಟು ಅವರನ್ನು ವಿದೇಶೀಯರಾಗಿ ಹೀನೈಸುವುದು ಸರಿಯಲ್ಲವೆಂದೂ ಠಾಗೂರರು ಉಪದೇಶಿಸಿದರು.

ಠಾಗೂರರು ರಾಷ್ಟ್ರಾಭಿಮಾನವನ್ನು ಹುಟ್ಟಿಸುವ ಅನೇಕ ಕವಿತೆಗಳನ್ನು ಬರೆದಿದ್ದಾರೆ. 'ಜನಗಣಮನ' ಕವಿತೆಯು ಇದರಲ್ಲಿ ಅತ್ಯಂತ ಪ್ರಸಿದ್ಧವಾದುದು. ೧೯೧೧ರ ಸುಮಾರಿಗೆ ಠಾಗೂರರು ಒಮ್ಮೆ ಬ್ರಹ್ಮ ಸಮಾಜದ ಮಹೋತ್ಸವದ ಸಂದರ್ಭದಲ್ಲಿ ಈ ಕವಿತೆಯನ್ನು ಬರೆದು ತಾನೇ ಓದಿದರು. ಅಲ್ಲಿ ನೆರೆದ ಜನರು ಆ ಕವಿತೆಯಲ್ಲಿರುವ ಆ ಮೋಘ ಶಕ್ತಿಯಿಂದ ಪುನ ಮುಗ್ಧರಾದರು ಮುಂದೆ ಅದು ಭಾರತದ ರಾಷ್ಟ್ರೀಯ ಕವಿತೆಯಾಗಿ ಜನಜನಿತವಾಯಿತು.

ತಮ್ಮ ತಾಯಿನಾಡಿನ ಕುರಿತು ರವೀಂದ್ರರು ಈ ರೀತಿಯ ಪ್ರಾರ್ಥನೆಯನ್ನು ಪರಮಾತ್ಮನೊಡನೆ ಮಾಡಿಕೊಂಡಿದ್ದಾರೆ:

"ಚಿತವೆಲ್ಲಿ ಭಯಶೂನ್ಯ, ಉಚ್ಚವೆಲ್ಲಿಶಿರ,
ಜ್ಞಾನವೆಲ್ಲಿಮುಕ್ತ, ಎಲ್ಲ ಗೃಹಭಿತ್ತಿಗಳು
ತಮ್ಮ ಪ್ರಾಂಗಣತಳದಲ್ಲಿ ಹಗಲಲ್ಲಿ ರಾತ್ರಿಯಲ್ಲಿ
ವಸುಧೆಯನ್ನು ಕ್ಷುದ್ರಖಂಡಗಳಾಗಿ ಮಾಡಿಲ್ಲ,
ಎಲ್ಲಿ ಮಾತು ಹೃದಯದ ಉತ್ಸಮುಖದಿಂದ
ಸತ್ಯವಾಗಿ ಹೊರಡುವುದು, ಎಲ್ಲಿ ಕರ್ಮಧಾರೆಯು ಅವಾರಿತ ಸ್ರೋತ
ದೇಶದೇಶದಲ್ಲಿ ದಿಶದಿಶೆಯಲ್ಲಿ
ಅಜಸ, ಸಹಸ್ರವಿಧಚರಿತಾರ್ಥಕ್ಕಾಗಿ
ಹರಿಯುವುದು,
ಎಲ್ಲಿ ತುಚ್ಛ ಆಚಾರದ ಮರುವಾಲುರಾಶಿ
ವಿಚಾರದ ಸ್ರೋತಃ ಪಥವನ್ನು ನುಂಗಿಮರಸಿ,
ಪೌರುಷವನ್ನು ನೂರುತುಂಡು ಮಾಡಿಲ್ಲ,
ಎಲ್ಲಿ ನಿತ್ಯನೀನು ಕರ್ಮ ಚಿಂತೆಯನ್ನು
ಆನಂದಕ್ಕೆ ಒಯ್ಯುವೆ,
ತಂದೆ, ಭಾರತೀಯರು ಆಸ್ವರ್ಗದಲ್ಲಿ
ಎಚ್ಚರಗೊಳ್ಳುವಂತೆ
ನಿನ್ನ ಹಸ್ತದಿಂದ ನಿರ್ದಯವಾಗಿ ಆಘಾತ
ಮಾಡು"

—ಕಯ್ಯಾರ

ಪಾಕಿಸ್ತಾನ ಮತ್ತು ಮತಗಣನೆ

ಪ್ರಮುಖ ಹಿಂದೂಗಳ ನಿರಾಶೆ

ಮಹಾತ್ಮರು ಬಗ್ಗಿ ಗೆಲ್ಲುವರು

ಗಾಂಧಿ–ಜಿನ್ನಾ ಭೇಟಿಯ ದಿನವನ್ನು ಇಂದುಜಗತ್ತೇ ಉತ್ಸುಕತೆಯಿಂದ ಎದುರು ನೋಡುತ್ತಿರುವುದು. ಜನತೆ ಎಲ್ಲವೂ ಆಶೆ ನಿರೀಕ್ಷೆಗಳಿಂದ ಕೂಡಿದ್ದಾಗಿರುತ್ತದೆ. ಈ ಮಾತುಕತೆಗಳು ಏನಾಗುವುವೊ ಎಂಬ ಭಯ ಒಂದು ಕಡೆ, ಯಶಸ್ವಿಯಾದರೆ ದೇಶಕ್ಕೆ ಒಳಿತಾಗುವುದೆಂಬ ಆಶೆ ಇನ್ನೊಂದು ಕಡೆ. ರಾಜಾಜಿ ಯೋಜನೆಗೆ ಕಡುವಾದ ವಿರೋಧವಿದ್ದರೂ ಜಿನ್ನರು ರಾಜಿಗೆ ಒಪ್ಪಿದರೆ ಜನತೆಯು ಅದನ್ನು ಹರಸುವುದಾಗಿ ಅಭಿಪ್ರಾಯ ಕಂಡು ಬರುತ್ತದೆ.

ಇದಕ್ಕೆ ಕಾರಣವೆಂದರೆ ಈಗಿನ ಬಿಕ್ಕಟ್ಟಿನಿಂದ ಜನತೆಯ ಉತ್ಸಾಹವು ಸೋತಿಹೋಗಿದೆ. ಗಾಂಧಿ–ಜಿನ್ನಾ ಭೇಟಿಯಿಂದ ದೇಶದ ಸ್ವಾತಂತ್ರ್ಯವು ಸಾಧಿಸತ್ತದಾದರೆ ಜನತೆಯು ಅದನ್ನು ಸ್ವಾಗತಿಸುವುದು. ಸಂಧಾನ ಯಶಸ್ವಿಯಾಗದಿರುವಂತಹ ಕೆಟ್ಟ ಚಿಹ್ನೆಗಳು ಹೆಚ್ಚಾಗಿ ಕಾಣುವುದಿಲ್ಲ. ಆದರೆ ಬಲವಾದ ವಿರೋಧವೇನೊ ಇದ್ದೆ ಇದೆ. ಮಾತುಕತೆ ಮುರಿದರೆ ರಾಜಾಜಿ ಗಾಂಧೀಜಿಯವರು ಕಠಿಣ ಟೀಕೆಗೆ ಗುರಿಯಾಗದಿರರು. ಈಗ ಅನುಸರಿಸಿದ ಧೋರಣೆಯು ವಿವೇಕದ್ದಾದರೆ ಅದು ಯಶಸ್ವಿಯಾಗಲೇಬೇಕು.

ಐಕ್ಯ ಯೋಜನೆಯನ್ನು ಹೃತ್ಪೂರಕವಾಗಿ ಹರಸುವವರು ಕೂಡಾ ನಿರಾಶಾಭಾವತಾಳಿರುವರು. ಗಾಂಧೀಜಿಯವರು ಜಿನ್ನರನ್ನು ತೃಪ್ತಿ ಪಡಿಸಲು ಎಷ್ಟು ದೂರ ತನಕ ಹೋಗುವರು? ರಾಜಾಜಿಯವರು ಒಂದು ಭಾಷಣದಲ್ಲಿ ಮಹಾತ್ಮರ ಈ ಧೋರಣವನ್ನು ಸ್ಪಷ್ಟ ಪಡಿಸಿರುವರು. ಈ ಸ್ಪಷ್ಟೀಕರಣದಿಂದ ದೇಶದ ಅನೇಕ ಕಡೆಗಳಲ್ಲಿ ಭಯ ಕ್ರೋಧಗಳು ಉತ್ಪನ್ನವಾಗಿವೆ. ಆದರೆ ಕಳೆದ ವಾರ ಗಾಂಧೀಜಿಯವರೊಡನೆ ಮೊತ್ತಾ ಮಾತನಾಡಿ ಬಂದ ಡಾ। ಶ್ಯಾಮ ಪ್ರಸಾದ ಮುಕರ್ಜಿಯವರು ಗಾಂಧೀಜಿಯವರು ಪಾಕಿಸ್ಥಾನ ಸ್ಥಾಪನೆಗೆ ನಡೆಯುವ ಮತ ಗಣನೆಯಲ್ಲಿ ಹಿಂದೂಗಳಿಗೆ ಸೇರಿಸಬಾರದೆಂಬ ಜಿನ್ನಾರವರ ಬೇಡಿಕೆಯನ್ನು ಮನ್ನಿಸುವುದಿಲ್ಲವೆಂದು ಹೇಳಿದ ಮೇಲೆ ದೇಶದಲ್ಲಿ ಸ್ವಲ್ಪ ಸಮಾಧಾನ ಉಂಟಾಗಿದೆ ಎನ್ನಬಹುದು.

ಈ ಮಧ್ಯೆ ಜಿನ್ನಾ ಸಾಹೇಬರೇ ಒಂದು ಗಾಂಧಿ ಮಾದರಿಯ ಪ್ರಕಟನೆ ಹೊರಡಿಸಿ "ಟೀಕೆಗಳನ್ನೂ ಬದಿಗಿರಿಸಿ ಸಮರ್ಪಕ ವಾತಾವರಣವನ್ನುಂಟು ಮಾಡಿರಿ" ಎಂದು ಬಿನ್ನವಿಸಿಕೊಂಡಿರುವರು. ಗಾಂಧಿಯವರನ್ನು ಮಿಕ್ಕಿಸುವ ಒಂದು ಕುಹಕ ಯೋಜನೆ ಇದು ಎಂದು ಕೆಲವರ ಅಭಿಪ್ರಾಯ. ಜನ ಪ್ರಿಯ ಮುಖಂಡರಾದ ಮಹಾತ್ಮರನ್ನು ಕಾಲಡಿಗೆ ಬರುವಂತೆ ಮಾಡಿದ ತನ್ನ ಮಹಾ ಪ್ರಭಾವದ ವಿಪರೀತ ಹೆಮ್ಮೆ ಆನಂದಗಳ ಪರಿಣಾಮವೂ ಇದಾಗಿದೆ ಎಂದು ಮತ್ತೆ ಕೆಲವರ ಮತ. ಅಮೂಲ್ಯ ಅಭಿಪ್ರಾಯ ಕೊಡಲು ಸಮರ್ಥತಿಸಿದವರು ಜಿನ್ನರ ಹೇಳಿಕೆಗಳಲ್ಲಿ ಒಪ್ಪಂದದ ಚಿಹ್ನೆಗಳನ್ನು ಕಾಣಲಿಲ್ಲ.

ನಮ್ಮ ಮುಖಂಡರ ಅಭಿಪ್ರಾಯ ಸರಣಿಗಳ ಒಳ ಅರ್ಥವನ್ನು ಚೆನ್ನಾಗಿ ಬಲ್ಲ ಮಾಜಿ ದಿವಾನರೊಬ್ಬರು ಆನೆ ಮೇಲೆ ಕೂತ ದೇವತೆಯೊಂದು ಭೂಮಿಯ ಮೇಲಿನ ಬಡ ಮಾನವನೊಂದಿಗೆ ಮಾತನಾಡುವ ತೆರ ಜಿನ್ನರು ಗಾಂಧಿಜಿಯವರೊಡನೆ ಮಾತನಾಡುವರು ಎಂದಿದ್ದಾರೆ. ಆದರೆ ಅದ್ವಿತೀಯ ಉದಾರಿಗಳೆನಿಸಿದ ಮಹಾತ್ಮರು ತಮ್ಮ ನಮ್ರತೆಯಿಂದ ಜಿನ್ನರನ್ನು ಒಲಿಸಲು ಪ್ರಯತ್ನ ಮಾಡುವರು. ಒಂದು ವೇಳೆ ಜಿನ್ನರು ತಮ್ಮ ಜಗಳಗಂಟತನವನ್ನು ಬಿಟ್ಟು ಒಪ್ಪಂದಕ್ಕೆ ಸಮ್ಮತಿಸಿದರೆ ಅದನ್ನು ಪ್ರಕೃತಿ ಮಾಯೆಯ ವಿಚಿತ್ರವೆನ್ನಲೇ ಬೇಕು. ಮಹಾತ್ಮರ ಅಧ್ಯಾತ್ಮಿಕ ಶಕ್ತಿಯಿಂದಲೇ ಇದು ಸಾಧ್ಯವಾಗಬಹುದು. ಕೆಲವೇ ದಿವಸಗಳಲ್ಲಿ ಭಾರತದ ಉಜ್ವಲವಾದ ಭವಿಷ್ಯಕ್ಕೆ ಹಾದಿ ಸುಗಮವಾಗಬಹುದು. ಆದರೆ ನಿಶ್ಚಯವಾಗಿ ಯಾವುದನ್ನೂ ಹೇಳ ಬರುವುದಿಲ್ಲ.

(೬ನೇ ಪುಟಕ್ಕೆ ಮುಂದುವರಿದಿದೆ)

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 222/1944.
O. S. No. 132/1943.

ಮಹಾಬಲೇಶ್ವರ ಉಡ್ಪ–ವಾದಿ- ಅರ್ಜಿದಾರ

1. ಚನ್ನಮ್ಮ ಹೆಂಗಸು, 2. ದೊಡ್ಡ ಹೆಂಗಸು, (ಅಮ್ಮು ಹೆಂಗಸಿನ ಮಕ್ಕಳು.) 3. ನೀಲು ಹೆಂಗಸು, 4. ಮಾಚಿ ಹೆಂಗಸು, 5. ಬಚ್ಚಿ ಯಾನೆ ರುಕ್ಕು (1ನೇ ಪ್ರತಿವಾದಿಳ ಮಕ್ಕಳು) 7. ಗೋವಿಂದ, 2ನೇ ಎದ್ರಿ ಮಗ ಬಸ್ರೂರು ಗ್ರಾಮ— ಎದ್ರಿರು.

ಮೇಲೆ ಹೇಳಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರ್ತ ನಿರ್ಣಯಿಸಲಿಕ್ಕೆ ತಾ. 7–9–1944ಕ್ಕೆ ತನಿಕೆಗೆ ಇಡೋಣಾಗಿಯದೆಂತ ಈ ಮೂಲಕ ತಿಳಿಯಪಡಿಸಿಯದೆ.

ಕುಂದಾಪುರ, ತಾ 14—8—'44. } G. Sanjiva Rao, Pleader for Petnr.

ಅಕ್ಕಿಯನ್ನು ತಯಾರಿಸುವ ಸರಿ ರೀತಿ

ಅವಲಕ್ಕಿಯು ಶ್ರೇಷ್ಟತರದ ಆಹಾರವು

ಅಕ್ಕಿಯು ಜಗತ್ತಿನ ಅನೇಕ ದೇಶಗಳ ...ನರಿಗೆ ಮುಖ್ಯ ಆಹಾರವಾಗಿರುತ್ತದೆ. ...ಕ್ಕಿ ಅನ್ನೊಂದು ಶ್ರೇಷ್ಟತರದ ಆಹಾರ ...ಲ್ಲ, ಅಕ್ಕಿಗಿಂತ ಗೋದಿ ಮೇಲು, ಹೀ ...ಂಬ ಅಭಿಪ್ರಾಯವು ಅನೇಕರಲ್ಲಿ ಇರಬ ...ುದು. ಆದರೆ, ಈಗಿನ ಈ ಮಹಾ ಯು ...ದ ದೆಸೆಯಿಂದ ಅಕ್ಕಿಯ ಕುರಿತು ಸರಿ ...ೋಧನಾ ಕಾರ್ಯವು ನಡೆದು ಅದರ ...ೇಷ್ಟತೆಯು ಕಂಡು ಹಿಡಿಯಲಾಗಿದೆ.

...ಜೀವಾತುಗಳು, ಮನುಷ್ಯನ ಬೆಳವ ...ಗೆ, ಅರ್ಗಿಕೆ ಇತ್ಯಾದಿಗಳಲ್ಲಿ ಹೆಚ್ಚಿನ ಪರಿ ...ಾಮಕಾರಿಗಳೆಂದು ಸ್ಥಾಪಿಸಲ್ಪಟ್ಟಿದೆ. ...ಜೀವಾತುಗಳಲ್ಲಿ 'ಬಿ' ವರ್ಗದವು ...ಳು, (ಈ ಬಿ ವರ್ಗದಲ್ಲಿ ಅನೇಕ ಬಗೆ ...ಯವುಗಳಿವೆಯಾಗಿ, ಈಗ ಕಂಡು ಹಿಡಿ ...ಯಲಾಗಿದೆ.) ಮಾನವ ದೇಹದ ನರ ...ಮಂಡಳವು, ಜೀರ್ಣಾಂಗಗಳು ಆರೋ ...ಗ್ಯದಲ್ಲಿರುವಂತೆ ಬಹಳ ಉಪಕಾರಿಯಾ ...ಗಿವೆಯೆಂದು ಅನೇಕ ಶೋಧಕರಿಂದ ...ಸಿದ್ಧಪಡಿಸಲಾಗಿದೆ.

ಅಕ್ಕಿಯ ಪಿಷ್ಟದ ಭಾಗವು ಹೊರಬದಿ ...ಯಲ್ಲಿ ನಾಲ್ಕು ಆವರಣಗಳಿಂದ ಆವರಿಸ ...ಲ್ಪಟ್ಟು, 'ಬಿ' ಜೀವಾತುಗಳು ಈ ಆವ ...ರಣದಲ್ಲಿ ಅಧಿಕ ಪ್ರಮಾಣದಲ್ಲಿ ಕೂಡಿರು ...ವುದು. ಬತ್ತವನ್ನು ಕುಟ್ಟಿ ಅಕ್ಕಿ ತಯಾ ...ರಿಸುವ ಸಮಯ, ಈ ಹೊರ ಆವರಣ ...ಗಳು, ಹೆಚ್ಚು ನಷ್ಟವಾಗದಂತೆ ನೋಡಿ ...ದರೆ, ಆಗ ಅಕ್ಕಿಯ ವಿಶಿಷ್ಟ ಗುಣಗಳ ...ಲಾಭವು ನಮಗೆ ದೊರೆಯುವುದು.

ಆದರೆ ಮನುಷ್ಯನು ನಾಗರಿಕನಾ ...ದಂತೆ, ಆತನು ಅಕ್ಕಿಯ ಸಹಜವಾದ, ...ಆರೋಗ್ಯವನ್ನೀಯುವ ಕಂದು ಬಣ್ಣ ...ವನ್ನು ಸಹಿಸದಾದನು. ಅತ್ಯಂತ ಬಿಳು ...ಪಾದ ಅಕ್ಕಿಯನ್ನು ಬಯಸುವವನಾ ...ದನು. ಇದರ ಪರಿಣಾಮವಾಗಿ, ಭತ್ತ ...ವನ್ನು ಕೈಗಳಿಂದ ಕುಟ್ಟುವ ಬದಲಾಗಿ, ...ಯಾಂತ್ರಿಕ ಉಪಕರಣಗಳಿಂದ ಕುಟ್ಟುವ ...ಅಭ್ಯಾಸವು ರೂಢಿಗೆ ಬಂತು. ಅಕ್ಕಿಯ ...ಮಿಲ್ಲುಗಳ ಸಂಖ್ಯೆಯು ಬೆಳೆಯಿತು. ...ಭತ್ತವನ್ನು ಮಿಲ್ಲುಗಳಲ್ಲಿ ಸ್ವಚ್ಛಪಡಿಸುವ ...ದರಿಂದ, ಅಕ್ಕಿಯ ಪ್ರಾಮುಖ್ಯ ಭಾಗ ...ವಾದ ಹೊರಪದರು ನಷ್ಟವಾಗಿ ಅಕ್ಕಿಯ ವಿಶಿಷ್ಟ ಗುಣಗಳ ನಮಗೆ ದೊರೆಕದಂತಾಗುವುದು.

ನಮ್ಮ ಹಿರಿಯರು ಭತ್ತವನ್ನು ಶೇಖರಿಸಿ ಇಟ್ಟು, ಉಪಯೋಗಕ್ಕೆ ಬೇಕಾದ ಹಾಗೆ ಅದನ್ನು ಹೊರ ತೆಗೆದು, ಅದನ್ನು ಬೇಯಿಸಿ, ನಂತರ ಒಣಗಿಸಿ, ಕುಟ್ಟಿ ತಮ್ಮ ನಿತ್ಯ ಸೇವನೆಗೆ ಬೇಕಾದ ಅಕ್ಕಿಯನ್ನು ತಯಾರಿಸುತ್ತಿದ್ದರು. ಈ ಕ್ರಮದಿಂದ, ಭತ್ತದ ಮೇಲೆ ಮಿಲ್ಲಿನಷ್ಟು ಬಲಾತ್ಕಾರ ನಡೆಯದಿರುವುದರಿಂದ, ಅಕ್ಕಿಯ ಜೀವಾತುವಿರುವ ಪದರುಗಳು ರಕ್ಷಿಸಲ್ಪಟ್ಟಿದ್ದರಿಂದಲೆ, ನಮ್ಮ ಹಿರಿಯರು ಈಗಿನ ಆಧುನಿಕ ಸಂಕಟಗಳನ್ನು ಅನುಭವಿಸದೆ, ಬಹಳ ಸುಖದಿಂದ ಬಾಳ್ವೆಯನ್ನು ಮಾಡಿಕೊಂಡಿದ್ದರು. ಈಗಲೂ ಕೈಯಿಂದ ಕುಟ್ಟಿದ ಅಕ್ಕಿಯ ಸೇವನೆಯಿರುವಲ್ಲಿ ರೋಗಗಳ ಹಾವಳಿಯು ಕಡಿಮೆಯಾಗಿರುವುದು.

ಅಮೇರಿಕದಲ್ಲೂ ಅನೇಕ ಪ್ರದೇಶಗಳಲ್ಲಿ ಅಕ್ಕಿಯು ಮುಖ್ಯ ಆಹಾರವಾಗಿರುವುದು. ಅಕ್ಕಿಯ ಕುರಿತು ಅಲ್ಲಿನ ವಿಜ್ಞಾನಿಗಳು, ಶೋಧನಾ ಕಾರ್ಯವನ್ನು ನಡೆಯಿಸಿ, ಅದರ ಕುರಿತು ವಿಶೇಷ ಜ್ಞಾನವನ್ನು ಪಡೆದಿರುವರು. ಅಕ್ಕಿಯಲ್ಲಿರುವ 'ಬಿ' ಜೀವಾತವನ್ನು ಕೆಡಿಸದೆ ಅತ್ಯಂತ ಬಿಳುಪು ಬಣ್ಣದ ಅಕ್ಕಿಯನ್ನು ತಯಾರಿಸುವ ಉಪಾಯಗಳನ್ನು ಕಂಡುಹಿಡಿದು, ಈ ಸೂತ್ರವನ್ನನುಸರಿಸಿ ಅಕ್ಕಿಯನ್ನು ತಯಾರಿಸುವ ಮಿಲ್ಲುಗಳು ಸ್ಥಾಪಿಸಲ್ಪಟ್ಟಿರುವವು. ಭತ್ತವನ್ನು ಒಂದು ಕಬ್ಬಿಣದ ಗುಡಾಣದಲ್ಲಿ ಹಾಕಿ, ಅತಿರೇಖವಾದ ಒತ್ತಡದ ಅಡಿಯಲ್ಲಿ ಅದನ್ನು ಬೆಯಿಸುವುದರಿಂದ, ಅಕ್ಕಿ ಜೀವಾತುಗಳಿಂದ ಕೂಡಿದ ಪದರುಗಳು ಅದರ ಒಳಗೆ ಸೇರುವಂತೆ ಮಾಡುವುದು ಈ ಸೂತ್ರದ ಮರ್ಮವಾಗಿರುತ್ತದೆ. ಈ ರೀತಿಯಲ್ಲಿ ಭತ್ತವನ್ನು ಗುಡಾಣದಲ್ಲಿ ಬೇಯಿಸಿ, ನಂತರ ಅದನ್ನು ಒಣಗಿಸಿ, ಅದನ್ನು ಮಿಲ್ಲುಗಳಲ್ಲಿ ಕುಟ್ಟಿ ಅಕ್ಕಿ ತಯಾರಿಸುವುದರಲ್ಲಿ ಅಕ್ಕಿಯಲ್ಲಿರುವ ಜೀವಾತುಗಳು ನಷ್ಟವಾಗುವುದಿಲ್ಲವಾಗಿ ಕಂಡು ಹಿಡಿಯಲಾಗಿದೆ.

ಮಾನವ ದೇಹವು ಆರೋಗ್ಯದಲ್ಲಿರಬೇಕಾದರೆ, ವಿವಿಧ ಅಂಗಗಳು ಅವುಗಳು ಜರಗಿಸಬೇಕಾದ ಕಾರ್ಯವನ್ನು ಸಾಂಗವಾಗಿ ನಡೆಯಿಸಬೇಕಾದರೆ, ಮನುಷ್ಯನ ನರಮಂಡಳವು ಹೊಣೆಯಾಗಿರುತ್ತದೆ. ಈ ನರಮಂಡಳವು ಆರೋಗ್ಯವಂತವಾಗಿ ಬಾಳಬೇಕಾದರೆ, ಅದಕ್ಕೆ 'ಬಿ' ಜೀವಾತುವಿನ ಅವಶ್ಯವಿದೆ. ನಮ್ಮ ಆಹಾರದಲ್ಲಿ 'ಬಿ' ಜೀವಾತುವಿನ ಕೊರತೆಯಾದರೆ, ಆಗ ನಮ್ಮ ಪಿತ್ತಕೋಶ, ಜಠರ ಇತ್ಯಾದಿಗಳ ಸರಿಯಾಗಿ ಕಾರ್ಯಿಸದೆ ನಮಗೆ ಜಠರ ಸಂಬಂಧ, ಅಥವಾ ಪಿತ್ತಕೋಶ ಸಂಬಂಧದ ಮಹಾ ಪೀಡೆಗಳು ಉಂಟಾಗಬಹುದು. ಮಿಲ್ಲು ಅಕ್ಕಿಯನ್ನು ಸೇವಿಸಿದ ದುಷ್ಪರಿಣಾಮವಾಗಿ, ಜನರು ದಾರಳ ಸಂಖ್ಯೆಯಲ್ಲಿ ರೋಗಪೀಡಿತರಾದ ಮರದಿ ಅನೇಕ ದೇಶಗಳ ಸರಕಾರಗಳಿಂದ ಹೊರಡಿಸಲಾಗಿವೆ ಆದುದರಿಂದ ಅಕ್ಕಿ ಸೇವಿಸುವವರು, ಇತ್ತ ಗಮನ ಕೊಟ್ಟು ಅಕ್ಕಿಯ ವಿಶಿಷ್ಟ ಗುಣಗಳು ತಮಗೆ ಸಂಪೂರ್ಣ ದೊರಕುವ ತರದಲ್ಲಿ ಅಕ್ಕಿಯನ್ನು ಉಪಯೋಗಿಸತಕ್ಕದು.

[ಕುಚ್ಚಲು ಅಕ್ಕಿಯನ್ನು ತಯಾರಿಸುವುದರಲ್ಲಿ ಭತ್ತವನ್ನು ಬೇಯಿಸುತ್ತುದರಿಂದ ಅಕ್ಕಿಯಲ್ಲಿರುವ 'ಬಿ' ಜೀವಾತುಗಳು, ಅದರಲ್ಲೆ ಸ್ವಲ್ಪಮಟ್ಟಿಗೆಕೂಡಿ ಹೋಗುವದರಿಂದ, ಕುಚ್ಚಲು ಅಕ್ಕಿಯು ಬೆಳ್ತಿಗೆಗಿಂತ ಉತ್ತಮತರದೆಂದು ಪರಿಗಣಿಸಲ್ಪಟ್ಟಿದೆ. ಅವಲಕ್ಕಿಯಲ್ಲಿ ಅಕ್ಕಿ ಜೀವಾತುಗಳೆಲ್ಲಾ ಅಧಿಕಂಶದಲ್ಲಿ ರಕ್ಷಿಸಲ್ಪಡುವುದರಿಂದ ಅವಲಕ್ಕಿಯು ಉತ್ತಮ ಆಹಾರವಾಗಿದೆ]

ಅಮೇರಿಕದ ಮಿಲಿಟರಿಯವರು ತಮಗೆ ಹೆಚ್ಚಾದ ವಿಮಾನಗಳನ್ನು ನಾಗರಿಕರ ಉಪಯೋಗದ ಬಗ್ಗೆ ಮಾರುತ್ತಿರುವರು.

* * *

ಜಗತ್ತಿನಲ್ಲಿರುವ ಮಣ್ಣೆಣ್ಣೆಯ ಶೇಖರಗಳ ವಿನಿಯೋಗದ ಕುರಿತು ಸಂಯುಕ್ತ ಅಮೇರಿಕಕ್ಕೂ ಬ್ರಿಟನಿಗೂ ಒಂದು ಒಪ್ಪಂದವಾಗಿರುವುದು. ಈ ಒಪ್ಪಂದದ ಪರಿಣಾಮವಾಗಿ ಮಣ್ಣೆಣ್ಣೆ ಇರುವ ನೂತನ ಪ್ರದೇಶಗಳು ಬಳಕೆಗೆ ತರಲಾಗುವುದೆಂದು ಪ್ರಕಟವಾಗಿದೆ. ಎಲ್ಲಾ ರಾಷ್ಟ್ರಗಳ ಆವಶ್ಯಗಳಿಗೆ ಸರಿಯಾಗಿ, ಎಣ್ಣೆಯ ಹಂಚುವಿಕೆಯು ಭವಿಷ್ಯದಲ್ಲಿ ಆಗುವವಿರ್ಪಾಡು ಈ ಕರಾರಿನಲ್ಲಿರುವುದಾಗಿ ತಿಳಿದುಬಂದಿದೆ.

* * *

ಅಮೇರಿಕಾದ ಕ್ರೈಸ್ತ ಮಿಶನ್ ಒಂದು, ಹಿಂದೂ ದೇಶದ ೭೦'ಸಾವಿರ ಹಳ್ಳಿಗಳಲ್ಲಿ ಪ್ರತಿಯೊಂದು ಹಳ್ಳಿಯೊಂದರಂತೆ, ಒಂದು ಸಣ್ಣ ಪುಸ್ತಕ ಭಂಡಾರವನ್ನು ಹಂಚುವ ಏರ್ಪಾಡನ್ನು ಮಾಡಿರುವುದಾಗಿ ತಿಳಿದು ಬಂದಿದೆ. ಈ ಪುಸ್ತಕಗಳು ಹಿಂದೂದೇಶದ ಹಳ್ಳಿಗರ ವಿಷಯವಾಗಿ ಇರುವುದಾಗಿ ವದಂತಿ. ಕ್ರೈಸ್ತಧರ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಇದೊಂದು ಅಮೇರಿಕನ್ ಉಪಾಯವೆ?

* * *

ಹಿಂದೂದೇಶದ ಉದ್ಧಾರಕ್ಕಾಗಿ ಯೋಜನೆಯೊಂದು, ಬೊಂಬಾಯಿಯ, ಪ್ರಮುಖರು ಹೊರಡಿಸಿದರಷ್ಟೆ. ಈ ಯೋಜನೆಯನ್ನು ನಡೆಯಿಸುವರೆ, ಅಮೇರಿಕಾದಿಂದ ಸಾಲ ಪಡೆಯುವ ಯತ್ನಗಳಾಗುತ್ತಿವೆಯಾಗಿ ತಿಳಿದುಬರುತ್ತದೆ. ಹಿಂದೂದೇಶದಲ್ಲಿ ಕೈಗಾರಿಕೆ ಇತ್ಯಾದಿಗಳನ್ನು ಸ್ಥಾಪಿಸುವರೆ, ಸಂಯುಕ್ತ ಅಮೇರಿಕಾವು ೧೫೦೦ ಮಿಲಿಯ ಡೊಲ್ಲರುಗಳ ಸಾಲವನ್ನು ಕೊಡಲು ಸಿದ್ಧವಿರುವುದಂತೆ.

* * *

ಈ ಯುದ್ಧವು ಜರ್ಮನಿಯ ಸೋಲಿನೊಡನೆ ಕೊನೆಗೊಳ್ಳದೆಂದೂ,—ತದನಂತರ ಜಪಾನನ್ನು ಸದೆಬಡೆಯುವ ಕೆಲಸವಿರುವುದೆಂದೂ, ಜರ್ಮನಿಯ ಸೋಲು, ಮತ್ತು ಜಪಾನಿನ ಸೋಲು,— ಈ ಮಧ್ಯೆಯಿರುವ ಅವಧಿಯಲ್ಲಿ ಯಾವತರದ ಧೋರಣವಹಿಸಬೇಕೆಂಬುದರ ಕುರಿತು, ಅಮೇರಿಕಾದ ಪ್ರಾಮುಖ್ಯ ಪತ್ರಿಕೆಗಳಲ್ಲಿ ಲೇಖಗಳು ಪ್ರಕಟವಾಗುತ್ತಿವೆ. ಐರೋಪ್ಯದ ಯುದ್ಧಕ್ಕಾಗಿ ಹೂಡಿದ ಅಮೇರಿಕನ್ ಕೈಗಾರಿಕೆಯು, ಐರೋಪ್ಯದ ಯುದ್ಧವು ಮುಗಿದ ಪರಿಣಾಮವಾಗಿ, ಕೈಗಾರಿಕೆಗಳು ನಿಂತುಹೋಗಿ ನಿರುದ್ಯೋಗ ತಲೆದೋರಬಹುದು.— ಆ ಕುರಿತು ಸರಕಾರವು ಎಚ್ಚರದಲ್ಲಿರತಕ್ಕದು, ಎಂಬುದಾಗಿ ಈ ಲೇಖಗಳ ಅಭಿಪ್ರಾಯ.

* * *

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

ಪ್ರಕಟಣೆ

ದೇವಾಡಿಗರ ಸ್ವಜಾತಿ ಬಾಂಧವರಲ್ಲಿ ವಿನಂತಿ

ಪ್ರಿಯ ಮಹಾಶಯರೇ ನಮ್ಮ ಸಮಾಜದ ೧೬ ಮಾಗಣೆಯ ಮಹಾಸಭೆಯನ್ನು ಇದೇ ತಿಂಗಳ ತಾ ೨೦ಕ್ಕೆ ಕೆನರಾ ಹೈಸ್ಕೂಲಿನ ಹೋಲ್‌ನಲ್ಲಿ ಶ್ರೀ ಮಾನರಾದ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಮತ್ತು ಕಟ್ಟಿಮಾರು ರಘುಚಂದ್ರ ಬಳ್ಳಾಳರ ಜೊತೆ ಅಧ್ಯಕ್ಷತೆಯಲ್ಲಿ ಜರಗಿಸುವುದಾಗಿ ನಿಶ್ಚಯಿಸಿ ವಿನಂತಿ ಪತ್ರಗಳು ಅನೇಕರಿಗೆ ಕಳುಹಿಸಲ್ಪಟ್ಟಿಯದೆ.

ಆದರೆ ಶ್ರೀ ಮಾನರಾದ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಆದಿವಸಕ್ಕೆ ಮೀಟಿಂಗಿಗೆ, ಬರುವರೆ ಅನಾನುಕೂಲವಾದ್ದರಿಂದ ಸದ್ರಿ ಸಭೆಯನ್ನು ಮುಂದರಿಸಿಯದೆ ಎಂತ ನಾವು ಸರ್ವರಿಗೂ ಈ ಮೂಲಕ ತಿಳಿಸುತ್ತೇವೆ. ಮೀಟಿಂಗಿನ ತಾರೀಕನ್ನು ನಾವು ಮುಂದಕ್ಕೆ ತಿಳಿಸುತ್ತದೆ.

K. Sheshapal,
K. Babu alias Krishnappa,
Dafedar Gopal.

The Bank of Mangalore Limited, Mangalore.
ESTD: 1931
HEAD OFFICE · *BRANCHES*
Mangalore. · Moodabidri & Padubidri.

ANNOUNCEMENT

Deposits accepted at the following rates from 1-4-1944.
Current Accounts (½% from Jan. to June)
(½% from July to Dec.)
Savings bank Accounts 1½% p. a. on daily balances.
Fixed Deposits 6 months 2% p. a.
12 months 2½% p. a.
24 months 3% p. a.
The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ
ಕಡ್ಡಿ, ಪಿತ್ಥ ಉಪದ್ರವ,
ಹುಣ್ಣು, ವ್ರಣ ಮೊದಲಾದ ಎಲ್ಲ
ಚರ್ಮ ವ್ಯಾಧಿಗಳಿಗೂ ಉತ್ತಮ
ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯ
ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low. ★ 2½% Rebate on annual premiums.
★ "Permanent Disability Benefits free of any cost.
★ Payment of double the insured amount in case of death by accident at a very small cost of Rs. 1-8-0 per 1000.
★ Special rebates on large size policies.
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,
Chief Agents for South India including Indian States.
The "Bombay Life" Building UDIPI. S. K.
BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM
And Agencies all over South India.

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ.
ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ ೩೮] ತಾರೀಕು 25—8—1944 [ಸಂಚಿಕೆ 34]

ಭಾರತವು ಒಂದು ಜನಾಂಗವೆ?

[ಇದೊಂದು ವಿಚಾರ ಪೂರ್ಣ ಲೇಖ. ಲೇಖಕರು ಶ್ರೀ ಚಂದ್ರಶೇಖರ್ ಇವರು ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಪೌರ್ವಾತ್ಯ ಶಿಕ್ಷಣ ಶಾಖೆಯ ಮಹೋಪಾಧ್ಯಾಯ ವರ್ಗದಲ್ಲಿದ್ದಾರೆ. ನಮ್ಮ ದೇಶದಲ್ಲಿ ಪ್ರಚಂಡ ಚರ್ಚಾಸ್ಪದವಾದ ವಿಷಯವನ್ನು ಅವರು ನಿಷ್ಪಕ್ಷಪಾತ ದೃಷ್ಟಿಯಿಂದಲೂ, ಸುಸ್ಪಷ್ಟ ತರ್ಕೋದಾರಣೆಗಳಿಂದಲೂ ನಿರೂಪಿಸುತ್ತಾರೆ.]

ಇತ್ತೀಚೆಗೆ ಹಿಂದೀ ರಾಜಕೀಯವನ್ನು ಚರ್ಚಿಸುವ ಅಮೆರಿಕನ್ ಲೇಖಕರು "ಭಾರತವು ಒಂದು ಜನಾಂಗವೇ?" ಎಂಬ ಪ್ರಶ್ನೆಯನ್ನು ಬಹಳವಾಗಿ ಒತ್ತಿ ಬರೆಯುತ್ತಿರುವುದು ಒಂದು ರೂಢಿಯಾಗುತ್ತಿದೆ. ಭಾರತವು ಒಂದು ಜನಾಂಗವಲ್ಲವೆಂಬುದೇ ಅವರಲ್ಲಿ ಅನೇಕರು ಸುಲಭವಾಗಿ ನಿಷ್ಕರ್ಷೆ ಮಾಡುವರು. ಒಂದು ಜಾಡ್ಯದಂತೆ ಇದು ಅಮೆರಿಕನ್ ಪತ್ರಿಕಾಕರ್ತರಲ್ಲಿ ಇದು ಹರಡುತ್ತಿರುವುದಾದರೂ ಬ್ರಿಟಿಷ್ ಲೇಖಕರಿಗೆ ಈ ಪ್ರಶ್ನೆಯಾಗಲೀ ಅದರ ಉತ್ತರವಾಗಲೀ ಹೊಸದಲ್ಲ.

ಗಲಲ೩ರಲ್ಲಿ ಸರ್ ಜೊನ್ ಸೀಲಿ ಎಂಬವರು ಹೀಗೆ ಬರೆದರು—'ಭಾರತವು ಒಂದು ಜನಾಂಗವೆಂಬ ಕಲ್ಪನೆಯು ನೀಚವಾದ ಒಂದು ತಪ್ಪು ಭಾವನೆಯ ಮೇಲೆ ಹೊಂದಿನಿಂತಿದೆ. ಈ ತಪ್ಪನ್ನು ನಿರ್ಮೂಲಗೊಳಿಸುವುದೇ ರಾಜಕೀಯ ತತ್ವ ಶಾಸ್ತ್ರದ ಮುಖ್ಯ ಉದ್ದೇಶವಾಗಿದೆ. ಭಾರತ (ಇಂಡಿಯಾ) ಎಂಬುದು ಒಂದು ರಾಜಕೀಯ ಹೆಸರಲ್ಲ. ಯುರೋಪ್ ಆಫ್ರಿಕಾಗಳಂತೆ ಅದೊಂದು ಭೌಗೋಲಿಕ ನಾಮನಿರೂಪಣೆಯಾಗಿದೆ. ಈ ಹೆಸರು ಒಂದೇ ಭಾಷೆಯ ಒಂದೇ ಜನಾಂಗದ ಪ್ರತ್ಯೇಕ ಗಡಿಗಳನ್ನು ಗುರುತಿಸದೆ ಅನೇಕ ಭಾಷೆಯ ಅನೇಕ ಜನಾಂಗಗಳ ನಾಡಗಡಿಗಳನ್ನು ಸಂಕೇತಿಸುತ್ತದೆ."

ಐದು ವರ್ಷಗಳ ನಂತರ ಸರ್ ಜೋನ್ ಸ್ಟ್ರೇಚಿ ಅವರು ಹೀಗೆ ಬರೆದರು—"ಯಾವ ಕಾಲದಲ್ಲೂ ಭಾರತವು ಒಂದು ಜನಾಂಗವಾಗಿ ಮೆರೆದಿಲ್ಲ. ಐರೋಪ್ಯರ ವಿಚಾರಸರಣಿಗನುಸಾರವಾಗಿ ಭೌಗೋಲಿಕ, ರಾಜಕೀಯ, ಸಾಮಾಜಿಕ ಮತ್ತು ಮತೀಯ ಐಕ್ಯತೆಗಳಿಂದೊಡಕೂಡಿದ ಒಂದು ಭಾರತವು ಹಿಂದೆ ಇರಲಿಲ್ಲ, ಈಗ ಇಲ್ಲವೇ ಇಲ್ಲ. ಭಾರತೀಯ ಜನಾಂಗವೆಂಬುದೇ ಇಲ್ಲ. ಭಾರತ ಜನಾಂಗೀಕರೆಂಬುದೂ ಇಲ್ಲ." ಈ ನಂತರ ಇಲ್ಲಿಗೆ ಬಂದ ಪ್ರವಾಸಿಕರೂ, ಪ್ರಚಾರ ಪುಸ್ತಕಗಳೂ ಇದೇ ಪಲ್ಲವಿಯನ್ನು ಹಾಡಲಾರಂಭಿಸಿದರು.

ಒಂದು ಜನಾಂಗವೆಂದರೇನು?

ಮಾನವ ಸಮುದಾಯದ ಯಾವುದಾದರು ಒಂದು ಪ್ರತ್ಯೇಕ ಭಾಗದ ಜನತೆಯು ಸರ್ವಸಾಮಾನ್ಯವೆನಿಸುವ ಒಂದೇ ರೀತಿಯ ಕಟ್ಟುಕಟ್ಟಳೆಗಳನ್ನೂ, ರೀತಿ ನೀತಿಗಳನ್ನೂ, ಜೀವನ ಕ್ರಮಗಳನ್ನೂ, ಮತೀಯ ಭಾವನೆಗಳನ್ನೂ ಅನುಸರಿಸುವ ಪ್ರತ್ಯೇಕ ಒಂದು ಮಾನವ ಸಮೂಹವು ಒಂದು ಜನಾಂಗಕ್ಕೆ ಸೇರಿದ್ದೆಂದು ಹೇಳಬಹುದು. ಒಂದು ಜನಾಂಗದ ಜನರಲ್ಲಿ ಮೇಲಿನ ಎಲ್ಲಾ, ಇಲ್ಲವೇ ಕೆಲವೇ ಸಾಮಾನ್ಯ ಲಕ್ಷಣಗಳಿರಬಹುದು. ಇಂತಹ ಜನಾಂಗತ್ವದವರು ಒಂದು ರಾಜ್ಯಡಳಿತಕ್ಕೂ, ಒಂದು ಸಾಂಪತ್ತಿಕ ವ್ಯವಹಾರಕ್ಕೂ, ಒಂದು ಕುಟುಂಬ ಪದ್ಧತಿಗೂ, ಒಂದೇ ಗುರಿಯುಳ್ಳ ಮತೀಯ ಭಾವನೆಗಳಿಗೂ ಒಳಪಟ್ಟಿರುವರಿದ್ದರೆ ಅದೊಂದು ಜನಾಂಗವೆನಿಸಬಹುದು.

ಹೀಗೆ ಜನಾಂಗತ್ವವೆಂಬ ಶಬ್ದವು ಎಳೆದಷ್ಟು ವಿಶಾಲವಾಗುವ ಅರ್ಥವುಳ್ಳದ್ದು. ಮತ ಧರ್ಮದಂತೆ ಅದೊಂದು ಮಾನಸಿಕ ಭಾವನೆಯ ವಿಚಾರವಾಗಿದೆ. ಅದನ್ನು ಪವಿತ್ರ ವಿಶ್ವಾಸವೆಂತಲೂ ಕರೆಯಬಹುದು. ಈ ವಿಶಿಷ್ಟ ಲಕ್ಷಣಗಳೆಲ್ಲವೂ ಒಂದು ಜನಾಂಗಕ್ಕೆ ಇರಬೇಕೆಂದಿಲ್ಲ. ಸ್ಥೂಲವಾಗಿ ಹೇಳುವುದಾದರೆ ಚಿಕ್ಕ ಕೆಲವು ವಿಷಯಗಳಲ್ಲಿ ಸಾಮಾನ್ಯತೆ ತೋರದಿದ್ದರೂ ಒಂದು ಜನಾಂಗಕ್ಕೆ ಇತರ ದೊಡ್ಡ ವಿಷಯಗಳಲ್ಲಿ ಸರ್ವ ಸಾಮಾನ್ಯ ಲಕ್ಷಣಗಳಿದ್ದರೆ ಅದೊಂದು ಜನಾಂಗವಾಗಿ ಉಳಿಯಬಹುದು. ಒಂದೇ ಮಾತಿನಲ್ಲಿ ಹೇಳುವುದಾದರೆ ಐಕ್ಯತೆಯ ಚಿಹ್ನೆಗಳು ಹೆಚ್ಚು ಇದ್ದಷ್ಟು ಜನಾಂಗ ಭಾವನೆಗೆ ಹೆಚ್ಚು ಅನುಕೂಲ.

ಭೌಗೋಲಿಕ ಐಕ್ಯತೆ

ಜನಾಂಗ ವಿಸ್ತಾರದ ಮೇರೆ ಪ್ರಕೃತಿ ಕಲ್ಪಿತವೂ, ಮನುಷ್ಯ ಕಲ್ಪಿತವೂ ಮತ್ತು ಐತಿಹಾಸಿಕ ರಚನೆಯವೂ ಇರಬಹುದು. ಆದರೆ ಒಂದು ಮಾತೃಭೂಮಿಯಿರುವುದು ಜನಾಂಗತ್ವಕ್ಕೆ ತುಂಬಾ ಸ್ಫೂರ್ತಿದಾಯಕವಿದೆ. ಒಂದೇ ತರದ ಭೌಗೋಲಿಕ ಹವಮಾನದ ಪರಿಣಾಮಕ್ಕೆ ಒಳಪಟ್ಟವರಾಗಿ ಒಂದೇ ಶೈಕ್ಷಣಿಕ ಸಂದರ್ಭಗಳ ಅನುಕೂಲತೆಗೆ ಸೇರಿದ ಜನರು ಒಂದೇ ತರದ ಮಾನಸಿಕ, ದೇಹಿಕ ಲಕ್ಷಣಗಳಿಂದ ಕೂಡಿದವರಾಗುವರು.

ಭಾರತದ ಜನರಲ್ಲಿ ಇಂತಹ ಮೂಲ ಲಕ್ಷಣಗಳೆಲ್ಲ ಒಡೆದು ಕಾಣುತ್ತವೆ. ಮೂರು ಕಡೆಗಳಲ್ಲಿ ಸಮುದ್ರಗಳಿಂದ ಆವೃತ್ತವಾಗಿ ಒಂದು ಕಡೆಯಿಂದ ದುರ್ಗಮವಾದ ಹಿಮಾಚಲದಿಂದ ಆಸ್ಯಾಖಂಡದಿಂದ ಬೇರ್ಪಡಿಸಲ್ಪಟ್ಟಿರುವ ಭಾರತದೇಶದಲ್ಲಿ ಸ್ಪಷ್ಟವಾದ ಭೌಗೋಲಿಕ ಐಕ್ಯತೆಯು ಇದೆ. ಭಾರತವನ್ನು ವಿಭಾಗಿಸಲಾಗದ ಪ್ರಕೃತಿ ಸಹಜವಾದ ಮೇರೆಗಳನ್ನು ವಿಭಜಿಸಲು ಪ್ರಯತ್ನ ಮಾಡುವುದು ಶುದ್ಧ ಅವಿವೇಕತನವಿದೆ.

ಭಾಷಾ ವೈವಿಧ್ಯ

ಜನಾಂಗವಾಗಬೇಕಾದರೆ ಭಾಷಾ ಐಕ್ಯತೆಯು ಬೇಕು. ನಮ್ಮಲ್ಲಿ ಅತೀಮುಖ್ಯವೆನಿಸುವ ೧೬ ಭಾಷೆಗಳಿವೆ. ಇವುಗಳಲ್ಲಿ ಹಿಂದೀ, ಉರ್ದುಗಳು ರಾಷ್ಟ್ರಭಾಷೆಯಾಗಲು ಕಷ್ಟಪಡುತ್ತಿವೆ. ೪೦ ಕೋಟಿಯಲ್ಲಿ ೧೫ ಕೋಟಿ ಜನರು ಇದನ್ನು ಮಾತನಾಡಬಲ್ಲವರು. ಇನ್ನೂ ಹೆಚ್ಚು ಜನರು ಇದನ್ನು ಕಲಿತಾಗಲೀ, ಬೇರೆ ರೀತಿಯಿಂದಾಗಲೀ ತಿಳಿದುಕೊಳ್ಳಲು ಪ್ರಯತ್ನಿಸುವರು.

ನಿಜವಾಗಿ ಪರಿಶೀಲಿಸಿ ಹೇಳುವುದಾದರೆ ನಮ್ಮ ರಾಷ್ಟ್ರಕ್ಕೆ ಭಾಷಾ ಏಕ್ಯತೆಯೇನೋ ಇಲ್ಲ. ಹಿಂದೂಸ್ಥಾನಿಯನ್ನು ಭಾರತದ ರಾಷ್ಟ್ರಭಾಷೆ ಮಾಡಲು ಶ್ರಮಿಸುವ ಕೆಲವು ರಾಷ್ಟ್ರಪ್ರೇಮಿಗಳ ಸಾಹಸವನ್ನು ಪ್ರಾಂತ್ಯಭಾಷಾಭಿಮಾನಿಗಳು ಕೆಲವರು ಕಡುವಾಗಿ ದ್ವೇಷಿಸುವರು. ಮದ್ರಾಸಿನ ತಮಿಳು ಚಳವಳವು ಇದಕ್ಕೊಂದು ನಿದರ್ಶನ. ಆದರೆ ಇತ್ತೀಚೆಗೆ ಮಿಲಿಯಾವಧಿ ತರುಣರು ಹಿಂದೂಸ್ಥಾನಿಯನ್ನು ಇದು ಮಾತೃಭಾಷೆಯಾಗಿರದ ಪ್ರಾಂತ್ಯಗಳಲ್ಲಿ ಕಲಿಯುತ್ತಿದ್ದಾರೆ. ಇದೊಂದು ಶುಭಲಕ್ಷಣವೆನ್ನಬಹುದು. ಭಾವಿಜನಾಂಗದ ತರುಣರು ತಮ್ಮ ಪ್ರಾಂತ್ಯ ಭಾಷೆಯನ್ನೂ, ರಾಷ್ಟ್ರಭಾಷೆಯಾದ ಹಿಂದೂಸ್ಥಾನಿಯನ್ನೂ ಮತ್ತು ಅಂತರಾಷ್ಟ್ರೀಯ ಭಾಷೆಯೆನಿಸಿದ ಇಂಗ್ಲಿಷ್ ಭಾಷೆಯನ್ನೂ ಕಲಿಯುವುದರಲ್ಲಿ ನಮ್ಮ ದೇಶದ ಶ್ರೇಯಸ್ಸಿದೆ. ಇಂದು ಹಿಂದುಸ್ಥಾನಿಯ ಕೆಲಸವನ್ನು ಇಂಗ್ಲಿಷ್ ಭಾಷೆಯು ಮಾಡುತ್ತಿರುವುದು.

ಭಾರತದಲ್ಲೆಲ್ಲಾ ಒಂದೇ ಭಾಷೆಯು ಸಾಮಾನ್ಯವಾಗಿಲ್ಲವೆಂಬುದರಿಂದ ಅದು ಒಂದು ಜನಾಂಗವಾಗಲಿಕ್ಕೆ ಅನರ್ಹವಾಗುವುದಿಲ್ಲ. ರಶ್ಯದ ಸಂಯುಕ್ತ ರಾಷ್ಟ್ರಗಳಲ್ಲಿ ಹಲವು ಭಾಷಾ ಪ್ರಾಂತ್ಯಗಳಿದ್ದರೂ ಅಲ್ಲಿನ ಐಕ್ಯತೆಗೆ ಭಂಗವುಂಟಾಗಲಿಲ್ಲ. ಕೆನಡಾದಲ್ಲಿ ಸರಕಾರಿ ವ್ಯವಹಾರದಲ್ಲಿ ಕೂಡಾ ಫ್ರೆಂಚ್ ಮತ್ತು ಇಂಗ್ಲಿಷ್ ಪ್ರತ್ಯೇಕ ಎರಡು ಭಾಷೆಗಳನ್ನು ಉಪಯೋಗಿಸುತ್ತಾರೆ. ಐದು ಪ್ರತ್ಯೇಕ ಭಾಷೆಗಳ ಜನರಿಂದ ಕೂಡಿದ ಅತೀ ಚಿಕ್ಕ ಸ್ವಿಜರ್ ಲೆಂಡ್ ರಾಷ್ಟ್ರವು ಇಂದಿಗೂ ಐಕ್ಯಮತ್ಯದಲ್ಲಿದೆ. ನಮ್ಮಲ್ಲಿರುವಂತೆ ಅನೇಕ ಉಪ ಭಾಷೆಗಳಿಂದ ಮೆರೆಯುವ ಚೀನವು ಒಂದು ರಾಷ್ಟ್ರವೆನಿಸಿಕೊಂಡಿದೆ. ಭಾಷಾ ಐಕ್ಯತೆಯೇ ಜನಾಂಗದ ಲಕ್ಷಣವೆಂದು ಹೇಳ ಬರುವುದಿಲ್ಲವೆಂದು ಇದರಿಂದ ತಿಳಿಯಬಹುದು. ಬ್ರಿಟಿಷರೂ ಅಮೇರಿಕನರೂ, ಕೆನೇಡಿಯನರೂ, ಆಸ್ಟ್ರೇಲಿಯದವರೂ ಇಂಗ್ಲಿಷನ್ನು ಮಾತಾಡುವ ಜನರಿರುವುದಾದರೂ ಅವರು ಒಂದೇ ಜನಾಂಗಿಕರೆನಿಸಿಕೊಳ್ಳುವುದಿಲ್ಲ.

ಜನಾಂಗ ಶುದ್ಧತೆ

ಒಂದು ದೇಶದ ಜನರು ಜನಾಂಗವೆಂದೆನಿಸಿಕೊಳ್ಳಬೇಕಾದರೆ ಅವರು ಯಾವುದಾದರೂ ಒಂದೇ ಮೂಲದ ಮಾನವವರ್ಗಕ್ಕೆ ಸೇರಿದವರಿರಬೇಕೆಂದಿಲ್ಲ. ಇಂತಹ ಜನಾಂಗ ಶುದ್ಧತೆಯು ಆರ್ಯರದೆನಿಸುವ ಹಿಟ್ಲರನ ಜರ್ಮನಿಯಲ್ಲಿಯೂ ಕಾಣಸಿಗುವುದಿಲ್ಲ. ಈಗಿನ ಇಟೆಲಿ ಜನಾಂಗವೆಂದೆನಿಸಿ ಕೊಳ್ಳುವಂಥವರು ರೋಮನ್, ಗ್ರೀಸ್, ಅರಬಿ ಮೊದಲಾದ ಕೆಲವು ಭೂಮಧ್ಯ ಸಮುದ್ರ ನೆರೆಕರೆಯ ದೇಶಗಳ ಜನರ ಮಿಶ್ರಣದಿಂದುಂಟಾದವರು. ಫ್ರೆಂಚರೆಂಬ ಜನಾಂಗವು ಅದೇ ಪ್ರಕಾರ ಒಂದು ಮಿಶ್ರ ಸಂತತಿಯದು. ಕೆಲ್ಟ್, ಸೆಕ್ಸನ್, ನೋರ್ಮನ್, ಮತ್ತು ಡೆನಿಸ್ ಇವಿಷ್ಟು ವಿವಿಧ ಮೂಲ ಜನಾಂಗಿಕರ ಮಿಲನದಿಂದ ಇಂದಿನ ಬ್ರಿಟಿಷರೆಂಬ ಈ ಜನರು ಉಂಟಾಗಿರುವರು. ಅಮೇರಿಕದ ಸಂಯುಕ್ತ ರಾಷ್ಟ್ರದ ಜನರ ವಿಚಾರ ಹೇಳುವುದಾದರೆ ಅವರ ನಾಡಿಗಳಲ್ಲಿ ಸಾಧಾರಣ ಗಣನೀಯವಾದ ಪ್ರತಿಯೊಂದು ಜನಾಂಗೀಕರ ರಕ್ತವು ಮಿಶ್ರಿತವಾಗಿ ಹರಿಯುತ್ತಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಹೀಗೆ ನಮ್ಮ ದೇಶದ ಬೇರೆ ಬೇರೆ

(೬ನೇ ಪುಟಕ್ಕೆ ಮುಂದುವರಿದಿದೆ)

ಉಪನಿಷತ್ತುಗಳಲ್ಲಿ ಏನಿದೆ!

— ನಮ್ಮ ಋಷಿವರರು ಸತ್ಯಶೋಧಕರು —

ಉಪನಿಷತ್ತುಗಳಲ್ಲಿ ಏನಿದೆ!— ಈ ವಿಚಾರ ನಮಗೆ ಭಾರತೀಯರಿಗೇ ಬಹು ಮಂದಿಗೆ ಗೊತ್ತಿಲ್ಲ. ಹಿಂದುಗಳಾದವರಿಗೆ ಹಿಂದೂ ಧರ್ಮದ ಪ್ರಧಾನ ಗ್ರಂಥವಾದ ಉಪನಿಷತ್ತಿನ ವಿಚಾರ ಅರಿವಿಲ್ಲ. ನಮ್ಮ ಶಾಲೆಗಳಿಗೆ ನಮ್ಮ ಬಾಲಕ-ಬಾಲಕಿಯರಿಗೆ ನಮ್ಮ ಧರ್ಮ ಗ್ರಂಥಗಳ ವಿಚಾರ ಕಲಿಸುವುದೂ ಇಲ್ಲ. ಬದಲಾಗಿ ಎಷ್ಟೋ ಸಂದರ್ಭ ನಾವು ನಮ್ಮಲ್ಲಿನ ಕಸ್ತೂರಿಯ ಪರಿಮಳವನ್ನು ತಿಳಿಯದೆ ಪರರ ಧಾರ್ಮಿಕ ಗ್ರಂಥಗಳ ಕುರಿತು ಬೈಬಲ್ ಮೊದಲಾದ ಪಾಶ್ಚಾತ್ಯ ಧರ್ಮ ಶಾಸ್ತ್ರಗಳ ಕುರಿತು ಏನೇನೋ ಮಾತಾಡ ಬಲ್ಲವರಾಗಿದ್ದೇವೆ; ಆ ತರದಲ್ಲಿ ನಮ್ಮ ಶಿಕ್ಷಣ ಪ್ರಣಾಲಿಯೂ ಕೂಡಾ ಇದೆ.

ನಮ್ಮ ದೇಶದ ಆಧುನಿಕ ಕಾಲದ ವಿದ್ವಾಂಸರು ನಮ್ಮ ಪೂರ್ವ ಕಾಲದ ಧಾರ್ಮಿಕ ಗ್ರಂಥಗಳ ಕುರಿತು ಯಾವುದೇ ತರದ ಆಸಕ್ತಿ ವಹಿಸದಿರುವುದೇ ಈ ತರದ ಅಜ್ಞಾನಕ್ಕೆ ಒಂದು ಪ್ರಧಾನ ಕಾರಣವಾಗಿದೆ. ಇದರಿಂದ ದಿನ ದಿನಕ್ಕೆ ಭಾರತೀಯರ ಸಂಸ್ಕೃತಿ ಹಾಳಾಗುತ್ತಿದೆ. ಇಂಥಾ ನಿಕೃಷ್ಟತೆಯು ವಿದೇಶಗಳಲ್ಲಿ ಇಲ್ಲ. ಅಲ್ಲಿನ ವಿದ್ವಾಂಸರು ಆಯಾಯ ದೇಶಗಳ ಪ್ರಾಚೀನ ಮತ ಧಾರ್ಮಿಕ ಗ್ರಂಥಗಳ ವಿಚಾರ ತುಂಬಾ ಆಸಕ್ತಿ ವಹಿಸಿ ಕಲಿಯುತ್ತಿದ್ದಾರೆ. ಆದ್ದರಿಂದಲೇ ಇಂದು ವಿದೇಶೀ ಸಂಸ್ಕೃತಿಯು ಇಂದು ಅಲ್ಲಿನ ಎಲ್ಲೆಯನ್ನು ಮೀರಿ ದೂರ ದೇಶಗಳಿಗೂ ಹರಡುತ್ತಿದೆ. ಭಾರತ ಸಂಸ್ಕೃತಿಯ ಒಂದು ಅಧೋಗತಿಗೆ. ಕಾರಣವೆಂದರೆ ಇಲ್ಲಿನ ಆಧುನಿಕ ವಿದ್ಯಾವಂತರಿಗೂ ಅವಿದ್ಯಾವಂತರಿಗೂ ತಮ್ಮ ಪ್ರಾಚೀನ ಮತ ಧರ್ಮಗಳ ಕುರಿತಿರುವ ಏಕ ವಿಧವಾದ ಅಜ್ಞಾನ. ಇದನ್ನು ಹೋಗಲಾಡಿಸದೆ ಭಾರತೀಯರಿಗೆ ಮುಕ್ತಿಯಿಲ್ಲ; ಅನ್ಯ ದಾರಿಯಿಲ್ಲ.

ಪೂರ್ವಕಾಲದ ಋಷಿವರರು ಜ್ಞಾನಿ ವಿಜ್ಞಾನಿಗಳು ತಾವು ಕಂಡ ಸತ್ಯವನ್ನು ವೇದ ಉಪನಿಷತ್ ಪುರಾಣಗಳಲ್ಲಿ ಬರೆದಿಟ್ಟರು. ತಮ್ಮ ಶಿಷ್ಯ ಪರಂಪರೆಯಾಗಿ ಕಲಿಸುತ್ತಾ ಬಂದರು. ಲೌಕಿಕ ವ್ಯವಹಾರಗಳನ್ನು ಸಾಂಸಾರಿಕ ಸುಖ ದುಃಖಗಳನ್ನು ಚೆನ್ನಾಗಿ ತಿಳಕೊಂಡು ಆ ಮೇಲೆ ವಾನಪ್ರಸ್ಥಾದಿ ಆಶ್ರಮಗಳನ್ನು ವಹಿಸಿ ಸಂಸಾರ ದೂರರಾಗಿರುವ ನಮ್ಮ ಪ್ರಾಕ್ತನ ಮುನಿಗಳು ನಿರ್ಮಲವಾದ ವಾತಾವರಣದಲ್ಲಿ ಏಕಾಂತ ಯೋಗಭ್ಯಾಸದಲ್ಲಿ ತಾವು ತಿಳಿದ ಸತ್ಯವೇನೆಂದು ಈ ಉಪನಿಷತ್ತುಗಳಲ್ಲಿ ನಮಗೆ ಕೂಡಿಸಿ ಕೊಟ್ಟಿರುವರು. ಅವುಗಳ ಅಭ್ಯಾಸ ಅವುಗಳ ಪ್ರಚಾರ ಮಾಡದಿರುವುದು ನಮ್ಮ ನಿರ್ವೀರ್ಯತೆಯನ್ನು ತೋರಿಸುತ್ತದೆ; ನಮ್ಮ ಅಧೋಗತಿಯನ್ನು ತಿಳಿಸುತ್ತದೆ.

ನಾವು ಭಾರತೀಯರು ಹೀಗೆ ಉಪನಿಷದ್ಗಳ ವಿಚಾರದಲ್ಲಿ ಅಜ್ಞಾನದಲ್ಲಿದ್ದರೂ ನಮ್ಮ ಮತ ಧಾರ್ಮಿಕ ಗ್ರಂಥಗಳನ್ನು ವಿದೇಶೀಯರು ಅಭ್ಯಾಸ ಮಾಡಿದ್ದಾರೆ. ಮಾಡುತ್ತಿದ್ದಾರೆ. ನಮ್ಮ ಸಂಸ್ಕೃತಿಯ ತಿರುಳನ್ನು ತಿಳಕೊಳ್ಳಲು ಅವರು ಬೇಕಾದಷ್ಟು ಪ್ರಯತ್ನಗಳನ್ನು ಮಾಡಿ ತಮ್ಮ ಜ್ಞಾನ ಭಂಡಾರವನ್ನು ಬೆಳೆಸಿದ್ದಾರೆ. ಮ್ಯಾಕ್ಸ್ ಮುಲ್ಲರ್ ಮೊದಲಾದವರು ವೇದೋಪನಿಷತ್ತುಗಳ ಕುರಿತು ತುಂಬಾ ಅಭ್ಯಸಿಸಿ ಅವುಗಳ ಅದರ ಸಾರವನ್ನು ಸಾರಲು ದುಡಿದಿದ್ದಾರೆ.

ಭಾರತವನ್ನು ೧೭ನೇ ಶತಮಾನದಲ್ಲಿ ಆಳಿದ ಮೊಗಲ್ ಚಕ್ರವರ್ತಿ ಶಾಜಹಾನನ ಹಿರಿಯ ಮಗನೂ ಔರಂಗಜೇಬನ ಅಣ್ಣನೂ ಆದ ದಾರಷುಕೋ ಎಂಬ ಪ್ರಸಿದ್ಧ ವಿದ್ವಾಂಸನು ಅನೇಕ ವಿದ್ವಾಂಸರ ಸಹಾಯದಿಂದ ಐವತ್ತು ಪ್ರಸಿದ್ಧ ಉಪನಿಷತ್ತುಗಳನ್ನು ಪಾರಸೀ ಭಾಷೆಗೆ ಭಾಷಾಂತರಿಸಿದ್ದಾನೆ. ಈ ಭಾಷಾಂತರದ ಆಧಾರದಿಂದಲೇ ಪಾಶ್ಚಾತ್ಯ ವಿದ್ವಾಂಸರು ಕ್ರಿ. ಶ. ೧೮೦೧ರಲ್ಲಿ ಲೇಟಿನ್ ಭಾಷೆಯಲ್ಲಿ ಮೊದಲು ಭಾಷಾಂತರ ಮಾಡಿದರು. ಆ ಮೇಲೆ ಪಾಶ್ಚಾತ್ಯ ದೇಶಗಳಲ್ಲಿ ಆ ಉಪನಿಷತ್ತುಗಳ ಪ್ರಚಾರ ಕಾರ್ಯ ನಡೆಯಿತು. ಮೊಗಲ್ ರಾಜ ಪುತ್ರನಾದ ದಾರಾನಿನ ಸಂಸ್ಕೃತ ಜ್ಞಾನವೂ ಕೂಡಾ ಉಪನಿಷತ್ತಿನ ಪ್ರಚಾರಕ್ಕೆ ಅತ್ಯಂತ ನೆರವಾಗಿದೆ.

ಹೀಗೆ ನಮ್ಮ ದೇಶಕ್ಕೆ ಮೊಗಲರೂ ಯುರೋಪ್ಯರೂ ನಮ್ಮಲ್ಲಿನ ಜ್ಞಾನ ಭಂಡಾರವನ್ನು ಬೇಕಾದಷ್ಟು ತೆಕ್ಕೊಂಡಿದ್ದಾರೆ. ಅವರು ಹಾಗೆ ತೆಕ್ಕೊಂಡ ಬಗ್ಗೆ ನಾವು ಏನೊಂದೂ ಮತ್ಸರ ಪಡುವುದಿಲ್ಲ. ಬದಲಾಗಿ ನಾವು ಕೃತಜ್ಞರೇ ಇದ್ದೇವೆ. ಆದರೆ ನಾವು ಭಾರತೀಯರು ನಮ್ಮಲ್ಲಿನ ಈ ಜ್ಞಾನ ಭಂಡಾರವನ್ನು ತಿಳಕೊಳ್ಳದಷ್ಟು ಅಜ್ಞಾನಿಗಳು ನಿರ್ವೀರ್ಯರು ಎಂಬುದು ತುಂಬಾ ವಿಷಾದಕರವಿರುವುದು.

ಉಪನಿಷತ್ತುಗಳಲ್ಲಿ ಆತ್ಮ ಜ್ಞಾನದ ಬೋಧನೆ ಅಡಕವಾಗಿದೆ. ಆ ಕಾಲದ ಜೀವನ ವ್ಯವಹಾರಕ್ಕೂ ಇಂದಿನ ಕೆಲವು ವ್ಯತ್ಯಾಸಗಳಿರುವುದರಿಂದ ನಮಗೆ ಅದರ ಅರ್ಥವು ಸ್ವಲ್ಪ ಗೂಢವಾಗಬಹುದು. ಆದರೆ ನಿರಂತರ ಅಭ್ಯಾಸದಿಂದ ಅದು ನಮಗೆ ಭಾರತೀಯರಿಗೆ ಮನವರಿಕೆಯಾಗುವಷ್ಟು ಪ್ರಪಂಚದ ಯಾವುದೇ ಜನಾಂಗಕ್ಕೂ ತಿಳಿಯಲು ಸಾಧ್ಯವಿಲ್ಲ. ಉತ್ತಮ ರೀತಿಯಲ್ಲಿ ಉತ್ತಮ ಜೀವನವನ್ನು ನಡೆಸಬೇಕಾದ ಪ್ರತಿಯೊಬ್ಬನೂ ಉಪನಿಷತ್ತುಗಳನ್ನು ಅವಶ್ಯ ಓದಲೇಬೇಕೆಂದರೆ ನಾವು ಭಾರತೀಯರು ತಿಳಿಯದಿರುವುದು ನಮ್ಮ ಮೂರ್ಖತನ.

ಸತ್ಯವೇ ಉಪನಿಷತ್ತಿನ ಜೀವಾಳ. ಸತ್ಯವನ್ನು ತಿಳಿಯಬೇಕಾದವನು ಉಪನಿಷತ್ತಿನ ಅಭ್ಯಾಸ ಮಾಡಬೇಕು. ನಮ್ಮ ಋಷಿವರರು ಸತ್ಯ ಶೋಧನೆಗೆ ಹೊರಟವರು. ಕಂಡು ಅನುಭವಿಸಿದ ಸತ್ಯವನ್ನು ಉಪನಿಷತ್ತುಗಳಲ್ಲಿ ಬರೆದಿಟ್ಟಿದ್ದಾರೆ. ಸತ್ಯಶೋಧಕರೆಲ್ಲರೂ ಉಪನಿಷತ್ತುಗಳಿಗೆ ಶರಣಾಗಬೇಕು. ಉಪನಿಷತ್ತುಗಳಲ್ಲಿ ಏನಿದೆ? ಎಂದು ಬೇರೆ ಹೇಳಬೇಕೆ?

ಉಪನಿಷತ್ತುಗಳು ಸಾರುತ್ತವೆ.
"ಸತ್ಯಮೇವ ಜಯತೇ ನಾನೃತಂ"

— ಕಯ್ಯಾರ

ಸತ್ಪಾತ್ರ ದಾನ

ದಾನದಿಂದ ರಾಷ್ಟ್ರಸೇವೆ

ಈಶ್ವರಚಂದ್ರ ವಿದ್ಯಾಸಾಗರ ಇವರ ಆದರ್ಶ

ಇದು ಯುದ್ಧ, ಬರಗಾಲಗಳ ದುಷ್ಕಾಲ. ಹೊಟ್ಟೆಗಿಲ್ಲದೆ ನರಳುವ ಜನತೆಯ ಸೈನ್ಯಗಳೇ ನಮಗೆ ನೋಡಸಿಗುತ್ತವೆ. ದಾನಶೀಲರಾದ ಉದಾರ ಬುದ್ಧಿಯವರು ಬಡತನದ ಈ ಸಮಸ್ಯೆಗಳನ್ನು ದೀನೋದ್ಧಾರ ಸಂಸ್ಥೆಗಳ ಮೂಲಕ ಬಗೆಹರಿಸಲು ಪ್ರಯತ್ನ ಪಡುತ್ತಿರುವರು. ಈ ಸಂಧರ್ಭದಲ್ಲಿ ಪ್ರಖ್ಯಾತ ಸಂಸ್ಕೃತಪಂಡಿತರಾಗಿದ್ದು ಘನ ತತ್ವಜ್ಞಾನಿಗಳೆನಿಸಿದ ಈಶ್ವರ ಚಂದ್ರ ವಿದ್ಯಾಸಾಗರರ ಅವರ ಜೀವನದಲ್ಲಿ ನಡೆದ ಒಂದು ಘಟನೆಯ ಕತೆಯು ಸ್ಫೂರ್ತಿದಾಯಕವಿದೆ. (ವಿದ್ಯಾಸಾಗರ ಅವರು ೧೮೯೧ರಲ್ಲಿ ಗತಿಸಿದರು.)

ವಿದ್ಯಾಸಾಗರರು ಕಲ್ಕತ್ತೆಯ ಒಂದು ಕಾಲೇಜ್ ಪ್ರಿನ್ಸಿಪಾಲರಾಗಿದ್ದರು. ಆಫೀಸಿಗೆ ಹೋಗುವಾಗ ಒಂದು ದಿನ ಒಬ್ಬ ಬಡ ಬಾಲಕನು ಅವರ ಬಳಿಗೆ ಬಂದು "ಅಯ್ಯಾ ಒಂದು ಪಾವಣೆ ಕೊಡಿ" ಎಂದು ಬೇಡಿದನು. "ನಿನಗೆ ಅರ್ಧಾಣೆ ಕೊಟ್ಟರೆ ಏನುಮಾಡುವಿ?" ಎಂದು ಸಾಗರರು ಕೇಳಿದಾಗ ಹುಡುಗನು ಸಂಶಯಪಟ್ಟು "ತಿಂಡಿ ತಿನ್ನುತ್ತೇನೆ" ಎಂದ. "ಎರಡಾಣೆ ಕೊಟ್ಟರೆ ಏನು ಮಾಡುತ್ತಿ?" ಎಂದು ಸಾಗರರು ಮತ್ತೊಮ್ಮೆ ಕೇಳಿದರು "ಒಂದಾಣೆ ನನ್ನ ತಾಯಿಗೆ ಕೊಡುತ್ತೇನೆ" ಎಂದ ಹುಡುಗ. ಪುನಃ ಸಾಗರರು ಪ್ರಶ್ನಿಸಿದರು "ನಾಲ್ಕಾಣೆ ಕೊಟ್ಟರೆ ಏನು ಮಾಡುವಿ?" ಸಾಗರರು ತನಗೆ ಠಕ್ಕಾಯಿಸುತ್ತಿರುದಾಗಿ ಹುಡುಗ ಅಭಿಪ್ರಾಯ ಪಟ್ಟುಕೊಂಡು ಹುಡುಗ ಅಲ್ಲಿಂದ ಮುಂದೆಹೋಗಲು ಪ್ರಯತ್ನಿಸಿದ. ದಯಾಳು ಪಂಡಿತರು ಅವನ ಕೈಹಿಡಿದು "ನಿಜವಾಗಿ ನಿನಗೆ ನಾಲ್ಕಾಣೆ ಕೊಡುವೆ. ಆದರೆ ನೀನದರಿಂದ ಏನು ಮಾಡುವೆ ಎಂದುಹೇಳು" ಎಂದು ನಂಬಿಕೆ ಹುಟ್ಟುವಂತೆ ಮಾಡಿ ಕೇಳಿದರು.

"ಅಯ್ಯಾ ನಾನು ಎರಡಾಣೆಯ ಅಕ್ಕಿ ತೆಗೆದುಕೊಂಡು ತಾಯಿಗೆ ಕೊಡುತ್ತೇನೆ. ಉಳಿದೆರಡು ಆಣೆಯಿಂದ ಮಾವಿನಹಣ್ಣುಗಳನ್ನು ಪಡೆದು ಶ್ರೀಮಂತರಿಗೆ ಮಾರಿ ನಾಲ್ಕಾಣೆ ಲಾಭ ಮಾಡುತ್ತೇನೆ" ಎಂದು ಹೇಳಿದ ಹುಡುಗನಿಗೆ ಸಾಗರರು ಅತ್ಯಂತ ತೃಪ್ತಿಗೊಂಡವರಾಗಿ ಒಂದು ರೂಪಾಯಿ ಕೊಟ್ಟರು. ಹೀಗೆ ಮಾಡಿದುದರಿಂದ ವಿದ್ಯಾಸಾಗರರು ಆ ಹುಡುಗನನ್ನು ದಾರಿದ್ರ್ಯದಿಂದ ಮೇಲಕ್ಕೆತ್ತಿದರು ಮಾತ್ರವಲ್ಲ ಅವನಿಗೊಂದು ಜೀವನದ ಪ್ರಾಮಾಣಿಕ ಹಾದಿಯಲ್ಲಿ ಮುಂಬರಿಯಲು ಸಹಾಯ ಮಾಡಿದಂತಾಯಿತು.

ದಾನವೆಂದರೆ ತಕ್ಷಣದ ಹಸಿವನ್ನು ನಿವಾರಣೆಮಾಡಲಿಕ್ಕೆ ಸಿಕ್ಕಾಬಟ್ಟೆ ಕೊಡುವ ಒಂದು ಧರ್ಮಬುದ್ಧಿಯ ಲಕ್ಷಣವಾಗಿರದೆ, ಆ ಹಸಿವನ್ನುಂಟುಮಾಡಿದ ಮೂಲ ಕಾರಣವನ್ನೆ ಬಗೆಹರಿಸಲು ಮಾಡಬೇಕಾದ ವಿವೇಕ ಧರ್ಮವಾಗಿದೆ. ಇದರಿಂದ ನಮಗೆ ಸ್ವಲ್ಪ ಹಣ ಹೆಚ್ಚು ಖರ್ಚಾಗಬಹುದು. ಆದರೆ ಇದರಿಂದ ಹೆಚ್ಚು ಒಳಿತಿದೆ ಮಾತ್ರವಲ್ಲ ಅದು ಒಂದು ರಾಷ್ಟ್ರಸೇವೆಯ ಸಾಧನವೆನಿಸುವುದು. ಬೇಡುವವರ ಸಂಖ್ಯೆ ಈಗಿನ ಕಾಲದಲ್ಲಿ ಹೆಚ್ಚಿದೆಯಾದರೂ, ಸ್ವಲ್ಪ ಸ್ವಲ್ಪವಾಗಿ ಹೆಚ್ಚು ಜನರಿಗೆ ಸಹಾಯ ಮಾಡುವುದಕ್ಕಿಂತಲೂ, ಸ್ವಲ್ಪ ಜನರಿಗೆ ಸರಿಯಾಗಿ ಹೆಚ್ಚು ಕೊಟ್ಟು ಉಪಕಾರ ಮಾಡುವುದು ಉತ್ತಮ ಮಾರ್ಗ. ಸ್ವಲ್ಪ ಸ್ವಲ್ಪವನ್ನು ಹೆಚ್ಚು ಜನರಿಗೆ ಕೊಡುವುದರಿಂದ ಯಾರಿಗೆ ಏನೂ ಸಿಗದಂತಾಗುತ್ತದೆ.

ದಾನವೇ ಸೇವೆ

ಸಾಬೂನು ತಯಾರಿಸಲಿಕ್ಕೆ ಬಲ್ಲ ಒಬ್ಬ ಹುಡುಗನಿದ್ದ. ಅವನು ಬೇಡುವ ಹುಡುಗನೊಬ್ಬನಿಗೆ ಒಂದು ತಿಂಗಳ ತನಕ ತನ್ನ ಸಾಬೂನು ಮಾರುವ ಕೆಲಸಕೊಟ್ಟ. ಬೇಡುವ ಹುಡುಗನಿಗೆ ತುಂಬಾ ಲಾಭವಾಗಿ ಕಡೆಗೆ ಅವನು ತನ್ನದೇ ಒಂದು ಚಿಕ್ಕ ಅಂಗಡಿ ಸ್ಥಾಪನೆಮಾಡಲು ಶಕ್ಯನಾದನು. ಹೀಗೆ ಬಡ ಹುಡುಗನು ಅನೇಕ ತೆರದ ಲಾಭದಾಯಕ ಚಿಕ್ಕ ಕಸುಬುಗಳನ್ನು ಕಲಿತು ತಮ್ಮ ಜೀವನವನ್ನುಸಾಗಿಸಬಹುದು. ನೂಲುವುದು ನೇಯುವುದು, ತೋಟಗಾರಿಕೆ, ಮರಗೆಲಸ ಇವು ಉಪಯುಕ್ತ ವೃತ್ತಿಗಳು.

ಹೈದರಾಬಾದಿನಲ್ಲಿ ಒಬ್ಬ ದಯಾಳು ಗೃಹಸ್ಥ ನೂರಾರು ಬೇಡುವವರನ್ನು ತನ್ನ ಮನೆಯ ಅಂಗಳದಲ್ಲಿ ಕೂರಿಸಿ ಕೆಲವು ನೂಲುವಚರಕಗಳನ್ನು ಕೊಟ್ಟು ಅವರಿಂದ ನೂಲು ತೆಗೆಸಿದರು. ಕೆಲದಿನಗಳೊಳಗೆ ನೂಲಿನ ದೊಡ್ಡ ಕೇಂದ್ರವಾಯಿತು. ಸರಕಾರದವರು ಈಗ ಅದಕ್ಕೆ ಸಹಾಯ ಕೊಡಲು ಮನಸ್ಸುಳ್ಳವರಾಗಿದ್ದಾರೆ. ಹೀಗೆ ಸ್ವಲ್ಪ ಅನುಕೂಲತೆಯಿಂದ ಮತ್ತು ಬುದ್ಧಿ ಚಾತುರ್ಯದಿಂದ ದಾನಶೀಲತೆಯನ್ನು ಉಪಯುಕ್ತ ರಾಷ್ಟ್ರಸೇವಾಕಾರ್ಯವಾಗಿ ಪರಿವರ್ತಿಸಬಹುದು.

ನಿಮ್ಮ ಬ್ಯಾಂಕಿಂಗ್ ಸಂಬಂಧ

ನಿಮ್ಮ ಉದ್ಯಮದಲ್ಲಿ ನಿಮ್ಮ ಬ್ಯಾಂಕು ಎಂತಹ ಸಹಕಾರಿ ಎಂದು ನೀವು ಮನಗಂಡೊಡನೆ—ನಿಮ್ಮ ಧನ ಸಹಾಯಕನಿಂದ ಯಥಾಯೋಗ್ಯ ಸಹಕಾರವು ಎಷ್ಟೊಂದು ಅವಶ್ಯವು—ನೀವು ನಿಮ್ಮ ಬ್ಯಾಂಕಿಂಗ್ ಸಂಬಂಧವನ್ನು ಜಾಗರೂಕತೆಯಿಂದ ಚೆನ್ನಾಗಿ ವಿಚಾರಿಸಿಯೇ ನಿರ್ಧರಿಸುವಿರಿ.

ನಮ್ಮದೀ ಸೂಚನೆ: ವಿಪುಲ ಧನವುಳ್ಳ ಈ ಬ್ಯಾಂಕನ್ನೇ ನಿಮ್ಮ ಆರ್ಥಿಕ ಸಹಾಯಕ ಸಂಸ್ಥೆಯಾಗಿ ಆರಿಸಿಕೊಳ್ಳಿರಿ. ಅದರ ಹೆಸರು ಗೌರವಗಳು ನಿಮಗೆ ನಿಮ್ಮ ಆರ್ಥಿಕ ಸ್ಥಿತಿಗೆ ಅಮೂಲ್ಯವಾದ ಹಿನ್ನೆಲೆಯನ್ನೊದಗಿಸುವುದು.

ಇಂದೇ ನಮ್ಮ ಏಜಂಟರಿಗೆ ಮಾಹಿತಿಯ ಬಗ್ಗೆ ವಿಚಾರಿಸಿರಿ:—

ಶಾಖೆಗಳು		ಸೇವೆ
ಕ್ವಿಲೋನ್	ಬೆಳಗಾಂವ	ಸೇವಿಂಗ್ಸ್ ಖಾತೆ
ಅಲ್ಲೆಪ್ಪಿ	ಧಾರವಾಡ	ಚಾಲು ಖಾತೆ
ಕೊಟ್ಟಿ	ಚಿಕ್ಕಮಂಗಳೂರು	ನಿರಖು ಠೇವಖಾತೆ
ಕಣ್ಣಾನೂರು	ಹುಬ್ಬಳ್ಳಿ	ಓವರ್ ಡ್ರಾಫ್ಟುಗಳು
ಮಂಗಳೂರು	ದಾವಣಗೆರೆ	ಸಾಲಗಳು
	ಬೆಂಗಳೂರು	ಡಿಸ್ಕೌಂಟಿಂಗ್
ಇತ್ಯಾದಿ	ಇತ್ಯಾದಿ	ಪರಊರ ಮೇಲಣ ಡ್ರಾಫ್ಟುಗಳು

ಬೊಂಬಾಯಿ ನಗರದಲ್ಲಿ ನಾಲ್ಕು ಶಾಖೆಗಳು.

ಸ್ಥಾಪಿತ: 1906

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಬರ್ಮಾರಂಗದ ಪರಿಸ್ಥಿತಿಯು ಮಿತ್ರರಿಗೆ ಅನುಕೂಲವಿದೆ

ಸದ್ಯದಲ್ಲೇ ಜರ್ಮನಿಯ ಆಕ್ರಮಣ

ಈ ವಾರದಲ್ಲಿ ಜರ್ಮನಿಗೆ ಫ್ರಾನ್ಸಿನಲ್ಲಿ ಮಹತ್ವಾದ ಸೋಲುಗಳೆ ಲಭಿಸಿರುತ್ತವೆ. ಮಿತ್ರರು ಬಹಳ ಹುರುಪಿನಿಂದ ಕಾದಾಡುತ್ತಿರುವರು. ಫ್ರಾನ್ಸಿನಲ್ಲಿ ಅಮೆರಿಕನ್ ಕೆನಡಿಯನ್ ಮತ್ತು ಬ್ರಿಟಿಷ್ ದಂಡುಗಳಲ್ಲಿ ಅಮೆರಿಕನ್ ದಂಡು ಬಹಳವಾಗಿ ಮುಂದುವರಿದಿರುತ್ತದೆ. ಅದು ಸದ್ಯದಲ್ಲಿ ಫ್ರಾನ್ಸಿನ ರಾಜಧಾನಿಯಾದ ಪೆರಿಸ್ ನಗರವನ್ನು ನುಗ್ಗಬಹುದು. ಬ್ರಿಟಿಷ್ ಮತ್ತು ಕೆನಡಿಯನ್ ದಂಡುಗಳಿಗೆ ಜರ್ಮನ್ ಪ್ರತಿಭಟನೆಯು ಸ್ವಲ್ಪ ವಿಶೇಷ ತರದ್ದಾಗಿದ್ದರೂ ಅವುಗಳು ಜರ್ಮನ್ ದಂಡುಗಳನ್ನು ಹಿಂದೂಡಿ ಮುಂದೆ ಸಾಗುತ್ತಿವೆ. ಜರ್ಮನರು ಬ್ರಿಟಿಷ್ ಮತ್ತು ಕೆನಡಿಯನ್ ದಂಡುಗಳನ್ನು ಎದುರಿಸುವುದರಲ್ಲಿ ಹೆಚ್ಚಿನ ಮಟ್ಟಿಗೆ ಉದ್ಯುಕ್ತರಾದುದರಿಂದಲೆ ಅಮೆರಿಕನ್ ದಂಡುಗಳಿಗೆ ತಡೆಯು ಕಡಿಮೆಯಾಗಿರುವುದೆಂದು ಊಹಿಸಲಾಗಿದೆ. ಆರಂಭದಲ್ಲಿ ಮಿತ್ರರನ್ನು ಕರಾವಳಿಯಲ್ಲೇ ತಡೆಯುವ ಯತ್ನಗಳನ್ನು ಮಾಡಿದ ಜರ್ಮನರು, ಮಿತ್ರರ ಅತ್ಯಂತ ಬಲತರದ ಹೊಡೆತದ ಎದುರಿಗೆ ಈಗ ರಭಸದಿಂದ ಹಿನ್ನಡೆಯಲು ಪ್ರಾರಂಭಿಸಿರುವರು. ಅವರ ಈಗಿನ ಚಲನವಲನಗಳನ್ನು ನೋಡಿದರೆ ಫ್ರಾನ್ಸಿನಲ್ಲಿ ಇನ್ನು ಹೆಚ್ಚಿನ ಸಂಗ್ರಾಮ ನಡೆಯಿಸುವ ಆಲೋಚನೆಯನ್ನು ಅವರು ತೊರೆದಂತೆ ಕಾಣುತ್ತದೆ. ಅವರು ಸ್ವದೇಶ ರಕ್ಷಣೆಗಾಗಿ ಮಾತ್ರ ದೇಶದ ಕಡೆಗೆ ಧಾವಿಸುತ್ತಿರುವರಾಗಿ ಭಾಸವಾಗುತ್ತದೆ. ಎಲ್ಲಾ ಶಸ್ತ್ರಗಳಿಂದ ಸುಸಜ್ಜಿತವಾದ ಮಿತ್ರರ ದಂಡುಗಳು ಮೂರು ಕಡೆಗಳಿಂದ ಧಾವಿಸಿ ಬಂದು, ಪೆರಿಸ್ ನಗರದಲ್ಲಿ ಕೂಡಬಹುದೆಂಬ ಊಹೆಗಳಿವೆ. ಫ್ರಾನ್ಸಿನ ದಕ್ಷಿಣ ಕರಾವಳಿಯಲ್ಲಿ ಮಿತ್ರರು ಮಾರ್ಸೆಲ್ ಬಂದರದಲ್ಲಿ ಇಳಿದಿದ್ದು ಇನ್ನೊಂದು ರಂಗವನ್ನು ಪ್ರಾರಂಭಿಸಿರುವರು. ಇಲ್ಲಿ ಇಳಿದ ಮಿತ್ರರ ದಂಡಿಗೆ ಯಾವತ್ತೂ ತಡೆಗಳು ಇಲ್ಲ. ಎಲ್ಲೆಲ್ಲೂ ಸ್ವದೇಶ ಪ್ರೇಮಿ ಫ್ರೆಂಚರು ಮಿತ್ರರೊಡನೆ ಸಹಕರಿಸುತ್ತಿರುವರು. ಗ್ಲಿಲಂರಲ್ಲಿ ಜರ್ಮನರು ಫ್ರಾನ್ಸಿನಲ್ಲಿ ಯಾವ ರಭಸದಿಂದ ಇಳಿದಿದ್ದರೂ, ಅದೇ ರಭಸದಿಂದ ಅವರೀಗ ಫ್ರಾನ್ಸನ್ನು ತೊರೆದು ಪಲಾಯನ ಮಾಡುತ್ತಿರುವರು. ಮಿತ್ರರ ದಂಡುಗಳು ಸಾಗರದ ಅಲೆಗಳಂತೆ ಫ್ರಾನ್ಸಿನಲ್ಲಿ ಪ್ರಸರಿಸುತ್ತಿರುವವು ಜರ್ಮನರ ಅನೇಕ ಟೆಂಕುಗಳು ನಾಶವಾಗಿವೆ. ಮಿತ್ರರ ವಿಮಾನ ಪಡೆಯು ಸುಂಟರಗಾಳಿಯೋಪಾದಿ ಕಾರ್ಯ ನಿರ್ವಹಿಸುತ್ತದೆ. ಜರ್ಮನ್ ವಿಮಾನ ಪಡೆಗಳ ಮೇಲೆ ಇವುಗಳು ಮೇಲ್ಮೆಯನ್ನು ಪಡೆದಿವೆ.

ಜರ್ಮನಿಯು ಫ್ರಾನ್ಸಿನ ಬ್ರೆಸ್ಟ್ ಮತ್ತು ನಾರ್ಮಂಡಿ ಕರಾವಳಿ ಪ್ರದೇಶವನ್ನು ಕಳೆದುಕೊಂಡುದರ ಪರಿಣಾಮವು ಏನಾಗಬಹುದು? ಅಟ್ಲಾಂಟಿಕ್ ಸಾಗರದಲ್ಲಿ ಮಿತ್ರರ ನಾವೆಗಳನ್ನು ಬಹಳ ಪೀಡಿಸಿದ ಜಲಾಂತರಗಾಮಿಗಳ ಕೇಂದ್ರಗಳು ಈ ನಗರಗಳಲ್ಲಿದ್ದುವು. ಈಗ ಅವುಗಳು ಜರ್ಮನರಕ್ಕೆ ಬಿಟ್ಟಿದ್ದು ಮಿತ್ರರ ನಾವೆಗಳಿಗೆ ಜರ್ಮನ್ ಸಬ್‌ಮೇರಿನುಗಳು ಪೀಡೆಯು ಕಡಿಮೆಯಾಗುವುದು. ಇಷ್ಟರೊಳಗೆ ಮಿತ್ರರು ೫೦೦ ಜರ್ಮನ್ ಸಬ್‌ಮೇರಿನುಗಳನ್ನು ನಾಶಮಾಡಿರುವರು. ಫ್ರಾನ್ಸಿನಲ್ಲಿ ಇಳಿದ ಮಿತ್ರರ ದಂಡುಗಳಿಗೆ ಬೇಕಾದ ಯುದ್ಧ ಇತ್ಯಾದಿ ಸಾಮುಗ್ರಿಗಳನ್ನು ಒದಗಿಸುವ ಕಾರ್ಯವು ಅತ್ಯಂತ ಸುಲಭವೆನಿಸುವುದು. ಇಂಗ್ಲಾಂಡನ್ನು ಹಾಳುಗೆಯ್ಯುವ ರೆಕ್ಕೆ ಬಾಂಬುಗಳ ಕೇಂದ್ರ ಈ ಪ್ರದೇಶಗಳಲ್ಲಿ ಹೆಚ್ಚಾಗಿ ಇದ್ದವು. ಅವು ಈಗ ನಾಶ ಪಡಿಸಲಾಗುತ್ತಿವೆ.

ರೆಕ್ಕೆ ಬಾಂಬುಗಳ ಪ್ರಾಮುಖ್ಯ ಕೇಂದ್ರವು ಪೆರಿಸ್ ನಗರದಲ್ಲಿರುವುದು. ಮಿತ್ರರು ಈ ನಗರ ಸಮೀಪದಲ್ಲೆ ಇದ್ದು ಇನ್ನು ಕೆಲವೆ ದಿವಸಗಳಲ್ಲಿ ಅದು ಅವರ ವಶವಾಗಬಹುದು. ಆಗ ರೆಕ್ಕೆ ಬಾಂಬುಗಳ ಈ ಕೇಂದ್ರವು ಕೂಡ ನಾಶಪಡಿಸಲಾಗುವುದು.

ಪ್ಯಾರಿಸ್ ನಗರದಲ್ಲಿ ಫ್ರಾನ್ಸಿನ ಎಲ್ಲಾ ದಿಕ್ಕುಗಳಿಗೆ ತೆರಳಲು ಅನುಕೂಲವಾಗಿರು ರೈಲ್ವೆ ನಿಲ್ದಾಣವಿರುತ್ತದೆ. ಇದು ಜರ್ಮನರಿಗೆ ಆ ಪ್ರದೇಶದ ತಮ್ಮ ಯುದ್ಧ ಚಟುವಟಿಕೆಗಳಿಗೆ ಅತ್ಯಂತ ಉಪಕಾರಿಯಾಗಿತ್ತು. ಫ್ರಾನ್ಸಿನ ದಕ್ಷಿಣ ಪ್ರದೇಶವನ್ನು ಅಂಕಿತದಲ್ಲಿಟ್ಟುಕೊಳ್ಳಲು ಜರ್ಮನರಿಗೆ ಇದೊಂದು ಮಹಾ ಅನುಕೂಲವಾಗಿತ್ತು. ಫ್ರಾನ್ಸನ್ನು ಆತಿಕ್ರಮಿಸಿದ ಜರ್ಮನ್ ದಂಡುಗಳಿಗೆ ಪ್ಯಾರಿಸ್ ನಗರವೆ ಮುಖ್ಯ ಕೇಂದ್ರವಾಗಿತ್ತು. ಈಗ ಅದು ಮಿತ್ರರ ವಶವಾದರೆ, ಆಗ ಫ್ರಾನ್ಸಿನಲ್ಲಿ ಜರ್ಮನರ ಸರ್ವನಾಶವಾದಂತೆ ಸರಿ. ಫ್ರಾನ್ಸಿನಲ್ಲಿ ಪರಿಸ್ಥಿತಿಯು ತಮಗೆ ನೆಟ್ಟಗಿಲ್ಲದಿರುವುದರಿಂದ, ಫ್ರಾನ್ಸನ್ನು ತೊರೆದು ಹೊರ ನಡೆಯುವುದೆ ಉತ್ತಮವೆಂದು, ಜರ್ಮನರು ಅಭಿಪ್ರಾಯಪಟ್ಟಂತೆ ಕಾಣುತ್ತದೆ. ಆದರೆ. ಮಿತ್ರರ ಬೋನಿನಲ್ಲಿ ಸಿಲುಕಿದ ಜರ್ಮನ್ ಸೇನೆಯು ಸುಲಭದಲ್ಲಿ ಮುಕ್ತ ಹೊಂದುವ ಹಾಗಿಲ್ಲ.

ಅಂದರೆ, ಫ್ರಾನ್ಸು ಸಂಪೂರ್ಣವಾಗಿ ಮಿತ್ರರ ವಶವಾಗುವುದೆಂದು ಧೈರ್ಯದಿಂದ ಈಗಲೆ ಹೇಳಬಹುದು. ಅತ್ತ ಪೂರ್ವರಂಗದಲ್ಲಿ ಕೆಂಪು ಸೇನೆಯು ಜರ್ಮನರನ್ನು ಬ್ಯಾಲ್ಟಿಕ್ ಪ್ರದೇಶದಿಂದ ಹೊರ ಓಡಿಸಿ, ಜರ್ಮನಿಯು ಪೂರ್ವ ಪ್ರಸ್ಸಿಯಾ ಗಡಿಯಲ್ಲಿ ಬಂದು ನಿಂತಿರುತ್ತದೆ. ಮಿತ್ರರು ಪಶ್ಚಿಮ ದಿಕ್ಕಿನಲ್ಲಿ ಜರ್ಮನಿಯನ್ನು ಮುತ್ತುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಾರೆ. ಜರ್ಮನಿಯ ಆಕ್ರಮಣವು ಯಾವ ರೀತಿಯುಲ್ಲಾಗಬೇಕೆಂಬುದರ ಕುರಿತು ನಿರ್ಣಯಗಳನ್ನು ಮಾಡು ಉದ್ದೇಶದಿಂದ, ಚರ್ಚಿಲ್, ರೂಸ್‌ವೆಲ್ಟ್ ಮೊದಲಾದ ಮಿತ್ರರ ಪ್ರಭೃತಿಗಳು, ಸದ್ಯದಲ್ಲಿ ಕೂಡುವವರಿದ್ದಾರೆಂದು ವಾರ್ತೆಯಿದೆ.

ಇತ್ತ ಜಪಾನಿನ ವಿಚಾರವೇನು? ಇಷ್ಟರ ತನಕ ಮಹಾ ಕದನವನ್ನು ತಪ್ಪಿಸಿಕೊಳ್ಳುತ್ತಿರುವ ಜಪಾನಿನ ನೌಕಾ ಪಡೆಯನ್ನು ಕದನಕ್ಕೆ ಕರೆಯುವ ರೀತಿಯಲ್ಲಿ ಮಿತ್ರರ ನೌಕಾದಳಗಳ ಚಟುವಟಿಕೆಗಳು ನಡೆಯುತ್ತಿವೆ. ಪ್ರಸಿದ್ಧ ನೌಕಾಧಿಕಾರಿಗಳೊಬ್ಬರು, ಇಂಗ್ಲಾಂಡಿನಿಂದ ಶಾಂತ ಸಾಗರ ನೌಕಾದಳದ ಅಧಿನಾಯಕರಾಗಿ ಕಳುಹಿಸಲ್ಪಟ್ಟಿರುವರು. ಮಾತ್ರವಲ್ಲದೆ ಬ್ರಿಟಿಷರ ಪರವಾಗಿ ಅನೇಕ ಮಹತ್ತರ ಯುದ್ಧ ನೌಕೆಗಳು, ವಿಮಾನ ಬಲವೂ ಇತ್ತ ಕಡೆಗೆ ಕಳುಹಿಸಲ್ಪಟ್ಟಿವೆ. ಶಾಂತ ಸಾಗರದಲ್ಲಿ ಅನೇಕ ದ್ವಿಪಗಳನ್ನು ಹಿಡಿದು ಆಸ್ಟ್ರೇಲಿಯದ ಕಡೆ ನಡೆದ ಜಪಾನು, ಈಗ ಅವುಗಳಲ್ಲಿ ಅನೇಕ ದ್ವಿಪಗಳನ್ನು ಕಳೆಕೊಂಡು, ಹಿಂದೆ ನಡೆದಿರುವುದು. ಜಪಾನಿನ ವೈಮಾನಿಕರಿಂದ ಧ್ವಂಸಗೊಳಿಸಿದ ಪರ್ಲ್ ಹಾರ್ಬರ್ ಬಂದರದ ಜೀರ್ಣೋದ್ಧಾರವಾಗಿ, ಅತ್ಯಂತ ಮಹತ್ತಾದ ಅಮೇರಿಕನ್ ನೌಕಾ ಬಲವೂ, ವಿಮಾನ ದಳವು ಅಲ್ಲಿ ಶೇಖರವಾಗಿ, ಜಪಾನಿನ ಮೇಲೆ ಧಾವಿಸಲು ಸದಾ ಸಿದ್ಧವಾಗಿರುತ್ತವೆ. ಜಪಾನನ್ನು ಜಲಮಾರ್ಗವಾಗಿಯೂ, ನೆಲಮಾರ್ಗವಾಗಿಯೂ ಆಕ್ರಮಿಸಿ ಬಂದು ಮುತ್ತುವುದು, ಮಿತ್ರರ ಉದ್ದೇಶವಾಗಿರುತ್ತದೆ. ಜಪಾನನ್ನು ಸದೆಬಡೆಯುವ ಕಾರ್ಯದಲ್ಲಿ ಅಮೇರಿಕವು ಹೆಚ್ಚಿನ ಪರಿಶ್ರಮವನ್ನು ವಹಿಸುತ್ತಿದೆ.

ಇತ್ತ ಬರ್ಮಾದಲ್ಲಿ ಒಂದೆಡೆ ನಮ್ಮ ಸೇನೆಯು ಮೊದಲಿನ ಬರ್ಮಾ ರಸ್ತೆಯನ್ನು ಹಿಡಿದಿರುವುದು. ಇಂದೊಡೆ, ಬರ್ಮಾದ ಮೆಂಡಲೆ ಕಡೆ ಹೋಗುವ ಮಾರ್ಗವು ನಮ್ಮ ದಂಡುಗಳ ವಶವಾಗಿ, ಅವುಗಳು ಅತ್ತ ಕಡೆ ಧಾವಿಸುತ್ತಿರುವವು. ಅಸ್ಸಾಮು ಕಡೆಯಿಂದ, ಇಂಫಾಲಿನಿಂದ ಓಡಿಸಲ್ಪಟ್ಟ ಜಪಾನಿ ಸೈನ್ಯವು ಹಿಂದಕ್ಕೆ ಪಲಾಯನ ಮಾಡಿರುತ್ತದೆ. ಬರ್ಮಾ ರಸ್ತೆಯು ಮಿತ್ರರ ಕೈಸೇರಿದುದರಿಂದ ಮಿತ್ರರ ದಂಡುಗಳು ಚೀನಾದಂಡಿನೊಡನೆ ಸೇರಿ, ಜಪಾನಿಯರನ್ನು ಚೀನಾದಿಂದ ಹೊರ ಓಡಿಸಲು ಅನುಕೂಲವಾಗಿದೆ. ಜಪಾನನ್ನು ಆತಿಕ್ರಮಿಸುವ ನೆಲ ಮಾರ್ಗವೆ ಇದು. ಈ ರೀತಿ ಚೀನಾದಲ್ಲಿ ಜಪಾನಿಗೆ ಅತಿ ಸಮೀಪವಾದ ಸ್ಥಳದಲ್ಲಿ ಒಂದು ಠಾಣ್ಯವನ್ನು ರಚಿಸಿ, ಜಪಾನಿನ ಮೇಲೆ ಹಲ್ಲೆಗಯ್ಯುವುದೆ ಮಿತ್ರರ ಉದ್ದೇಶವಿರುತ್ತದೆ.

ಒಟ್ಟಿನ ಮೇಲೆ ಮಿತ್ರರಿಗೆ ಎರಡೂ ರಂಗಗಳಲ್ಲೂ ಅತ್ಯಂತ ಅನುಕೂಲ ಪರಿಸ್ಥಿತಿಯು ಉಂಟಾಗಿರುತ್ತದೆ. ಅಕ್ಷ ರಾಷ್ಟ್ರಗಳ ಭವಿಷ್ಯವು ಭೀಕರವಿರುತ್ತದೆ.

ಯುದ್ಧ ನಂತರ ಜನತೆಗೆ ರೂ. ೧೫೦೦ ಮೋಟಾರು ಕಾರನ್ನು ಒದಗಿಸುವುದಾಗಿ ಫೋರ್ಡ್ ಕಂಪೆನಿಯವರ ಪ್ರಕಟನೆಯಾಗಿರುತ್ತದೆ. ಸಾಗುವಳಿ ವ್ಯವಸಾಯ ಬೇಕಾದ ಯಾಂತ್ರಿಕ ಉಪಕರಣಗಳನ್ನೆ ಧಾರಾಳ ಸಂಖ್ಯೆಯಲ್ಲಿ ಸಿದ್ಧಪಡಿಸುವ ಯೋಜನೆ. ಈ ಸಂಸ್ಥೆಯಿಂದ ಯುದ್ಧಾನಂತರ ಕೈಗೊಳ್ಳಲಾಗುವುದಂತೆ.

* * *

ಸ್ವದೇಶಾಭಿಮಾನಿ

ತಾರೀಖು 25—8—1944

ಮಾನವ ಮನಸ್ಸಿನ ರಹಸ್ಯ

ಇನ್ನೊಂದು ಶುಭ ಚಿಹ್ನೆ

ಹಿಟ್ಲರನನ್ನು ವಿರೋಧಿಸಲು ಮಿತ್ರರು ಇನ್ನೊಂದು ಹೊಸ ರಂಗವನ್ನು ತೆರೆದರು. ದಕ್ಷಿಣ-ಫ್ರಾನ್ಸಿನ ದಕ್ಷಿಣ ಭಾಗದಲ್ಲಿ ಮಿತ್ರ ಬಲವು ಇಳಿದು ಮುಂದುವರಿಯುತ್ತಿದೆ. ಈ ಭಾಗದಲ್ಲಿ ಜರ್ಮನರ ನೆಲ ಸೈನ್ಯದ ವಿರೋಧವು ಅತ್ಯಲ್ಪವಿದ್ದು ವಿಮಾನ ಚಟುವಟಿಕೆಯು ಸಂಪೂರ್ಣ ಇಲ್ಲವೆ ಇಲ್ಲ. ಇದೊಂದು ಆಶ್ಚರ್ಯದ ಸಂಗತಿ ಎನಿಸುತ್ತದೆ. ಮಿತ್ರ ದಂಡುಗಳು ಪೆರಿಸ್ ನಗರಕ್ಕೆ ಹತ್ತಿಪ್ಪತ್ತು ಮೈಲುಗಳಷ್ಟೆ ದೂರದಲ್ಲಿದ್ದಾರೆ.

ಯುರೋಪನ್ನು ಮುತ್ತುವ ಮಿತ್ರೀ ಸಾಧನೆಯು ಪ್ರಚಂಡ ಸಾಹಸದ್ದಿರುತ್ತದೆ. ಆದರೂ ಹಿಟ್ಲರನ ಲುಫ್ಟ್ ವೆಫ್ ವಿಮಾನ ದಳದ ಸುಳಿವೇ ಇಲ್ಲಿ ಕಾಣುವುದಿಲ್ಲ.

ಈ ಭಾಗದಲ್ಲಿ ಆಕ್ರಮಣ ಪ್ರಾರಂಭಿಸಿದ್ದು ಜರ್ಮನರ ತೀಕ್ಷ್ಣ ಗೋಚರ ಬುದ್ಧಿಗೆ ತಿಳಿಯದಂತಾಯಿತೆ? ಹಾಗೆಂದಿಗೂ ಇರದು. ಒಂದು ದೊಡ್ಡ ನೌಕಾ ಪಡೆಯನ್ನು ಮುಚ್ಚಿಡಲು ಸಾಧ್ಯವಿಲ್ಲ. ಬ್ರಿಟಿಷ್ ಮೋರೆಗಳೂ ಪ್ರಧಾನ ಚರ್ಚಿಲ್ಲರೂ ಈ ಕಡೆಯ ರಣರಂಗಕ್ಕೆ ಭೇಟಿ ಇತ್ತು ಬಂದುದು ಭೂಮಧ್ಯ ಸಮುದ್ರದ ಸಮರ ಕ್ಷೇತ್ರದಲ್ಲಿ ಹೊಸ ರಣರಂಗವನ್ನು ಕಲ್ಪಿಸಲ್ಲಿಕ್ಕೆಂಬ ಸಂದೇಹವು ನಾಜೀಗಳಲ್ಲಿ ಉಂಟಾಗಿರಬಹುದು.

ದಕ್ಷಿಣ ಫ್ರಾನ್ಸಿನಲ್ಲಿ ಜರ್ಮನರ ಕ್ಷೀಣ ವಿರೋಧವನ್ನು ನೋಡಿದರೆ ಬಲವಾಗಿ ಘಾತಿಸಲ್ಪಟ್ಟ ಜರ್ಮನ್ ಯುದ್ಧ ಯಂತ್ರದ ನಿರ್ಬಲತೆಯು ಸ್ಪಷ್ಟ ಕಾಣುವುದು. ಈಗ ಹಿಟ್ಲರನ ಬಳಿಯಲ್ಲಿ ಶೇಖರಿಸಿಟ್ಟ ಸಜ್ಜಿತ ಸೈನ್ಯವಿಲ್ಲ, ಅವನ ವಿಮಾನಗಳ ಸಂಖ್ಯೆಯಂತೂ ಸಣ್ಣದೇ ಆಗಿ ಉಳಿದಿದೆ.

ಇದೆಂದು ಶುಭ ಚಿಹ್ನೆ. ಜನರಲ್ ಐಸೆನ್‌ಹಾವರು ಈ ಯುದ್ಧವು ಬೇಗನೆ ಕೊನೆಗೊಳ್ಳಲಿಕ್ಕಿಲ್ಲವೆಂದು ಹೇಳುವರಾದರೂ ಸರ್ ಫಿರೋಜ್ ಖಾನ್ ನೂನರು ಹೇಳಿದಂತೆ ಮಿತ್ರರ ಸಂಘಟಿತವಾದ ಮತ್ತು ಸುಸಜ್ಜಿತವಾಗಿರುವ ಶಕ್ತಿ ಬಲದಿಂದ ಜರ್ಮನಿಯು ಮೂರೇ ತಿಂಗಳಲ್ಲಿ ಕುಸಿದು ಬೀಳುವುದರಲ್ಲಿ ಸಂದೇಹವಿಲ್ಲ.

ಪುನಃ "ಇಲ್ಲ"

ಇತ್ತೀಚಿನ ಗಾಂಧಿ-ವ್ಯಾಸ್‌ರಾಯ್ ಪತ್ರ ವ್ಯವಹಾರದಿಂದ ಎರಡು ಮುಖ್ಯ ವಿಚಾರಗಳು ಸ್ಪಷ್ಟವಾಗುತ್ತವೆ. ಯುದ್ಧ ಮುಗಿಯುವರೆಗೆ ಈಗಿನ ಸರಕಾರದ ರಚನೆಯನ್ನು ಬದಲಾಯಿಸಲಾಗುವುದಿಲ್ಲವೆಂಬುದು ಮೊದಲನೇದು. ಯುದ್ಧ ಮುಗಿದ ಮೇಲೂ ಹಿಂದೂ ಮುಸ್ಲಿಮರೊಳಗೂ ಮತ್ತು ಇತರ ಮುಖ್ಯ ಅಲ್ಪ ಸಂಖ್ಯಾತರೊಳಗೂ ಒಪ್ಪಂದವಾಗದಿದ್ದರೆ ಬ್ರಿಟನ್ನು ಅಧಿಕಾರವನ್ನು ಭಾರತೀಯರಿಗೆ ಬಿಟ್ಟು ಕೊಡಲಿಕ್ಕಿಲ್ಲವೆಂಬುದು ಎರಡನೆಯದು.

ಗಾಂಧಿಜಿಯವರು ವ್ಯಾಸ್‌ರಾಯರ ಭೇಟಿಯನ್ನಪೇಕ್ಷಿಸಿ ಬರೆದ ವಿನಂತಿಯನ್ನು ತಿರಸ್ಕರಿಸಲಾಗಿದೆ. ಮೇಲೆ ಹೇಳಿದ ಶರ್ತಗಳಿಗೆ ತಕ್ಕುದಾಗಿರುವ ರಚನಾತ್ಮಕ ಸಲಹೆಗಳು ಅವರ (ಗಾಂಧಿಜಿಯವರ) ಪತ್ರದಲ್ಲಿಲ್ಲವೆಂಬುದೇ ಈ ನಕಾರಕ್ಕೆ ಕಾರಣವೆಂದೂ ತಿಳಿಸಲಾಗಿದೆ. ಇದರ ಅರ್ಥವೆಂದರೆ, ಸರಕಾರವು ತನ್ನದೇ ಶರ್ತಗಳ ಮೇಲಲ್ಲದಿದ್ದರೆ, ಬೇರೆ ಯಾವ ಶರ್ತಗಳ ಮೇಲೂ ಒಪ್ಪಂದಕ್ಕೆ ಸಿದ್ಧವಿಲ್ಲವೆಂದೇ ತಿಳಿಯಬೇಕಾಗುತ್ತದೆ.

ರಾಷ್ಟ್ರ ಮುಖಂಡರನ್ನು ಬಂಧಮುಕ್ತ ಮಾಡದಿದ್ದುದು ಈ ಊಹನೆಯನ್ನು ಸಮರ್ಥಿಸುತ್ತದೆ. ಆಗಸ್ಟ್ ಠರಾವಿನಲ್ಲಿರುವ ಕಾನೂನು ಮುರಿವ ಚಳವಳದ ಅಂಶವನ್ನು ತಿದ್ದುವಂತೆ ಮಾಡಲು ತಾನು ವರ್ಕಿಂಗ್ ಕಮಿಟಿ ಸದಸ್ಯರಿಗೆ ಸಲಹೆಕೊಡುತ್ತೇನೆ ಎಂದು ಮಹಾತ್ಮರು ಸ್ಪಷ್ಟವಾಗಿ ಹೇಳಿದ ಮೇಲೂ ಅವರನ್ನು ಸೆರೆಮನೆಯಲ್ಲಿರಿಸುವುದು ವಿವೇಕವಲ್ಲ.

ಮನುಷ್ಯನ ದೇಹದಸ್ಥಿತಿಯು, ಮನುಷ್ಯನ ಮಿದುಳಿನ ಒಳಗಿರುವ ಕೆಲವು ನರ ಕೇಂದ್ರಗಳ ಮೇಲೆ ಹೊಂದಿಕೊಂಡಿರುವುದೆಂದೂ, ಈ ಕೇಂದ್ರಗಳು, ಸರಿಯಾದ ರೀತಿ ಸಹಕರಿಸಿದರೆ ಮಾತ್ರ ದೇಹದ ವಿವಿಧ ಅಂಗಾಂಗಗಳು, ತಮ್ಮ ಕಾರ್ಯಗಳು, ಸರಿಯಾಗಿ ನಿರ್ವಹಿಸ ಬಲ್ಲವೆಂದೂ, ಈ ಕೇಂದ್ರಗಳು ಸರಿಯಾಗಿ ಕಾರ್ಯಿಸುವಂತೆ ಮಾಡಬಹುದೆಂದು, ಸೊವಿಯಟ್ ರಷ್ಯಾದ ಪ್ರಸಿದ್ಧ ಮಾನಸ ಶಾಸ್ತ್ರಜ್ಞರು ಅನೇಕ ಶೋಧೆಗಳನ್ನು ನಡೆಯಿಸಿ, ವ್ಯಕ್ತ ಪಡಿಸಿರುವರು.

ವಿಜ್ಞಾನದ ಪ್ರಗತಿಯಾದಂತೆ, ಮನುಷ್ಯನು ತನ್ನ ದೇಹದ ಕುರಿತು ಅನೇಕ ರಹಸ್ಯಗಳನ್ನು ತಿಳಿದುಕೊಂಡು, ಆರೋಗ್ಯವನ್ನು ಪಡೆಯುವ ಅನೇಕ ಸಾಧನಗಳನ್ನು ಪಡೆದನು. ಆದರೆ ಮಾನವನಿಗೆ ಆತನ ಮಿದುಳಿನ ರಹಸ್ಯವನ್ನು ತಿಳಿದುಕೊಳ್ಳಲು ಬಹಳ ಸಮಯದವರೆಗೆ ಸಾಧ್ಯವೆ ಆಗಲಿಲ್ಲ. ಆದರೆ ಈಗ, ಅನೇಕ ಪ್ರವೀಣರ ಪರಿಶ್ರಮದ ಫಲಿತಾಂಶವಾಗಿ, ಮಿದುಳಿನ ರಹಸ್ಯದ ಕುರಿತು ಅನೇಕ ವಿಷಯಗಳು ಬೆಳಕಿಗೆ ತರಲಾಗಿವೆ. ದೀರ್ಘಕಾಲ ಶೋಧನಾಕಾರ್ಯಗಳನ್ನು ನಡೆಯಿಸಿದುದರ ಪರಿಣಾಮವಾಗಿ, ಮನಸ್ಸಿನ ಕುರಿತು, ವಿಶೇಷ ತರದ ಜ್ಞಾನವು ನಮಗೆ ಲಭಿಸುವಂತಾಗಿದೆ.

ಮನಸಿನ ಕುರಿತು ಈ ಶೋಧನಾ ಕಾರ್ಯಗಳಲ್ಲಿ ಸೊವಿಯಟ್ ರಷ್ಯದಲ್ಲಿ ಪೌವ್‌ಲೌವ್ ಎಂಬವನು ಬಹಳವಾಗಿ ದುಡಿದು, ಮಿದುಳಿನ ಅನೇಕ ಸತ್ಯಗಳನ್ನು ಕಂಡುಹಿಡಿದಿದ್ದನು. ಆದರೆ ಆತನ ಕಾರ್ಯಗಳು ಪರಿಪೂರ್ಣವಾಗುವ ಮೊದಲೆ ಆತನು ಈ ಲೋಕವನ್ನು ತ್ಯಜಿಸಬೇಕಾಯಿತು. ಆದರೆ ಆತನು ಮಾಡಿದ ಕಾರ್ಯವು, ಆತನ ಶೋಧನಾಲಯದಲ್ಲಿ ಆತನ ಶಿಷ್ಯವರ್ಗದಿಂದ ಮುಂದುವರಿಸಲಾಯಿತು. ಮನಸ್ಸಿನ ಕುರಿತು ಅನೇಕ ರಹಸ್ಯಗಳನ್ನು ಅವರು ಕಂಡು ಹಿಡಿದಿರುವರು. ಆದರೆ ಮನಸ್ಸಿನ ರಹಸ್ಯವನ್ನು ಪೂರ್ಣವಾಗಿ ತಿಳಿಯಲು, ಇವರಿಗೂ ಸಾಧ್ಯವಾಗಲಿಲ್ಲ.

ಪೌವ್‌ಲೌವ್‌ನಿಂದ ಮನಸ್ಸಿನ ಕುರಿತು ನಮಗೆ ಜ್ಞಾನ ಮಾತ್ರವಲ್ಲ ಮಾನಸಿಕ ವಿಕಾರಗಳನ್ನು ಸರಿ ಪಡಿಸುವ ಅನೇಕ ಉಪಾಯಗಳು ಕಂಡು ಹಿಡಿಯಲಾಗಿದೆ. ಈ ಉಪಾಯಗಳಿಂದ ಮಾನವನನ್ನು ಪೀಡಿಸುತ್ತಿರುವ ಅನೇಕ ಮನೋವಿಕಾರಗಳನ್ನು ಇತರ ರೋಗರುಜೆಗಳನ್ನು ಗುಣ ಪಡಿಸುವ ತರದಲ್ಲಿ ಗುಣಪಡಿಸಬಂದುದು. ಯುದ್ಧ ಇತ್ಯಾದಿ ಘಟನೆಗಳಲ್ಲಿ ಶಿರಸ್ಸಿಗೆ ಹಾನಿಯಾಗಿ ಮಿದುಳಿಗೆ ಹಾನಿ ಕಟ್ಟಿದರೆ ಆಗ ಮನುಷ್ಯನನ್ನು ರಕ್ಷಿಸುವ ಅನೇಕ ಉಪಾಯಗಳು ಕಂಡು ಹಿಡಿಯಲಾಗಿವೆ.

ಮಾನವನ ದೇಹವು ಆರೋಗ್ಯವಂತವಾಗಿ ಇರಬೇಕಾದರೆ ಮಿದುಳಿನ ನರ ಕೇಂದ್ರಗಳ ಪ್ರಭಾವವು ಕಾರಣವಾಗಿರುತ್ತದೆ. ನಮ್ಮ ಮಿದುಳಿನಲ್ಲಿರುವ ಕೆಲವು ಪ್ರಾಮುಖ್ಯ ಕೇಂದ್ರಗಳು ಸರಿಯಾಗಿ ಕಾರ್ಯ ನಿರ್ವಹಿಸಿದರೆ ಮಾತ್ರ ಮನುಷ್ಯನ ಆರೋಗ್ಯ ಸ್ಥಿತಿ ನೆಟ್ಟಗಿರುವುದು. ಮಾನವನ ದೇಹದಲ್ಲಿ ಮಿದುಳೆ ಪ್ರಾಮುಖ್ಯವಾದುದು ಎಂಬುದಾಗಿ ಈಗ ಬಹಳ ಮಟ್ಟಿಗೆ ಸ್ಥಾಪಿಸಲಾಗಿದೆ.

ಮಿದುಳಿನ ಮೇಲೆ ಶಸ್ತ್ರ ಚಿಕಿತ್ಸೆಯನ್ನು ನಡೆಯಿಸಿ ಕೆಲವು ಮನೋವಿಕಾರಗಳನ್ನು ಗುಣ ಪಡಿಸುವ ಉಪಾಯಗಳು ಕಂಡು ಹಿಡಿಯಲಾಗಿದೆ.

ಆದರೆ ಮನಸ್ಸು ಯಾವ ಪ್ರಭಾವದ ದಸೆಯಿಂದ ಕಾರ್ಯಿಸುತ್ತದೆ? ಯಾವ ಶಕ್ತಿಯು ಅದಕ್ಕೆ ಕಾರಣವಾಗಿರುತ್ತದೆ. ಎಲ್ಲದಕ್ಕೂ ಶ್ರೇಷ್ಠವಾಗಿರುವ ಆಧಿಶಕ್ತಿಯೇ ಅದು.

ಬ್ರಿಟನಿನ ಬಹಿರ್ ವ್ಯಾಪಾರವು ಬಹಳವಾಗಿ ಕುಂದಿರುವುದೆಂದೂ, ಅದರಿಂದ ಯುದ್ಧಾನಂತರ ಬ್ರಿಟನಿನ ಪರಿಸ್ಥಿತಿಯು ಬಹಳ ಕೆಡಲು ಕಾರಣವಿದೆಯೆಂದೂ, ಈ ವ್ಯಾಪಾರದಲ್ಲಿ ವೃದ್ಧಿಯಾಗುವಂತೆ ಸಾಧಿಸಬೇಕೆಂದೂ,-ಸರ್ ಸ್ಟಾಫರ್ಡ್ ಕ್ರಿಪ್ಸರು, ಒಂದೆಡೆ ತಾವು ಮಾಡಿದ ಭಾಷಣದಲ್ಲಿ ಅಭಿಪ್ರಾಯ ಸೂಚಿಸಿರುವರು. ಬ್ರಿಟನು ಜಗತ್ತಿನ ಶಾಂತಿರಕ್ಷಣೆಯ ಆಧಾರವಾಗಿ ಬಾಳಬೇಕಾದರೆ, ಅದರ ಬಹಿರ್ ವ್ಯಾಪಾರದ ಅಭಿವೃದ್ಧಿಯಾಗಬೇಕಂತೆ. ಬ್ರಿಟನ್ನಿನ ಜನರ ಸುಖ ಸಂತುಷ್ಟಿಯು ಈ ವ್ಯಾಪಾರದ ಮೇಲೆ ಹೊಂದಿಕೊಂಡಿರುವುದೆಂದು ಅವರ ಅಭಿಪ್ರಾಯ.

* * *

ವೈಸ್ರಾಯರು ತನ್ನ ಸೂಚನೆಗಳನ್ನು ನಿರಾಕರಿಸಿದುದರಿಂದ ಹಿಂದೂ-ಮುಸ್ಲಿಂ ಐಕ್ಯದ ಕುರಿತು, ತನಗೆ ಯಾವತ್ತು ನಿರಾಶೆಗಳು ಉಂಟಾಗಲಿಲ್ಲವೆಂದೂ, ಬದಲಾಗಿ, ವೈಸ್ರಾಯರ ಮೊನ್ನಿನ ಸರಕಾರದ ಪ್ರಕಟಣೆಯಿಂದ ಹಿಂದೂ-ಮುಸ್ಲಿಂ ಐಕ್ಯವನ್ನು ಸಾಧಿಸಲು, ಇನ್ನೂ ಅನುಕೂಲ ಪರಿಸ್ಥಿತಿಯು ಉಂಟಾಗಿರುವುದೆಂದು ಗಾಂಧಿಜಿಯರ ಅಭಿಪ್ರಾಯ.

* * *

ಬಟ್ಟೆಯ ಕ್ರಯದಲ್ಲಿ ಇನ್ನೂ ಇಳಿತವಾಗಬಹುದೆಂದು, ವದಂತಿಯಿದೆ.

ಸಮಸ್ತರು ವಿಧ್ಯಾವಂತರಾಗುವ ತರದ ಯೋಜನೆಯೊಂದು ಹಿಂದೂದೇಶಕ್ಕೆ ಬೇಡವೆ? ಅದರಲ್ಲಿರುವುದು ಹಿಂದೂದೇಶದ ಮೋಕ್ಷ ಮಾರ್ಗವು.

* * *

ಬಹಿರ್ ದೇಶಗಳಿಂದ ವಾರ್ತೆಗಳು ನಮಗೆ ಇನ್ನಷ್ಟು ತ್ವರ್ಯದಲ್ಲಿ ಬರುವಂತೆ ರೇಡಿಯೋ ಏರ್ಪಾಡುಗಳಾಗಿವೆ.

* * *

NOTICE

In the Court of the Dt. Judge of South Kanara

O. P. No. 85/1944.

In the matter of the will of Dooma madivala, deceased.

Bollu Bangera— PETITIONER.

Notice is hereby given that an application has been made to this Court for grant of Probate of the last will and testament dated 11-6—1944 of Dooma Madivala, late of Shirva Village, Udipi Taluk, S. Kanara, who died at 18th June 1944, to the petitioner one of the Executors named in the said will, and that the 29th day of September 1944 has been appointed for the hearing of the said application.

Persons desiring to oppose the said application should lodge their Caveat on or before the said date of hearing.

Mangalore, 18—8—1944 | John Gonsalves, LL. B. Vakil for Petitioner.

ಎದೆನೋವನ್ನು ನಿವಾರಿಸಿರಿ.

ನಿಮಗೆ ಬೇಗನೇ ಶೀತವಾಗುವುದೆ? ನೀವು ಆಗಾಗ ಕೆಮ್ಮು, ಶ್ವಾಸಕೋಶದ ದೌರ್ಬಲ್ಯಗೊಳಿಸುವ ಶೀತಬಾಧೆಯಿಂದ ನರಳುತ್ತೀರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸುಗಳನ್ನು ಸೇವಿಸಿ ಗುಣಹೊಂದಿರಿ.

ಪೆಪ್ಸು ಬಾಯಲ್ಲಿ ಹಾಕಿದ ಕೂಡಲೇ ಉತ್ತ ಸುಗಂಧ ಔಷಧಿ ರಸ ಹೊರಡಿಸುತ್ತದೆ. ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುವುದು. ಹಾಗೆ ಸೇರಿ, ಎದೆನೋವು, ಕಫ, ಗಂಟಲು ನೋವು, ಶೀತಬಾಧೆ, ಕೆಮ್ಮು ಮೊದಲಾದವುಗಳನ್ನು ಗುಣಪಡಿಸುವುದು. ನೇವಸ ಮತ್ತು ಶೀತಜ್ವರಗಳಿಗೂ ಪರಮೌಷಧ, ಎಲ್ಲಾ ಔಷಧ ಷಾಪುಗಳಲ್ಲಿಯೂ ಪೆಪ್ಸು ದೊರಕುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಭಾಷಣ

ಕಳೆದ ಶುಕ್ರವಾರ ಗವರ್ನ್‍ಮೆಂಟ್ ಕಾಲೇಜಿನಲ್ಲಿ ಗವರ್ನರರ ಸಲಹೆಗಾರರಾದ ಸರ್ ನಾರ್ಮನ್ ಸ್ಮಾತೆ ಇವರು ಆರ್ಥಿಕ ಆಹಾರ ಪರಿಸ್ಥಿತಿಗಳ ಕುರಿತು ಭಾಷಣಮಾಡಿದರು. ಮಾನ್ಯ ಕಲೆಕ್ಟರರು ಅಧ್ಯಕ್ಷತೆ ವಹಿಸಿದ್ದರು. ಭಾಷಣಕಾರರು ಯುದ್ಧ ನಂತರ ಕೃಷಿ, ಕೈಗಾರಿಕೆ ಯೋಜನೆಗಳ ಕುರಿತು ಅಂಕೆ ಸಂಖ್ಯೆ ಕೊಟ್ಟು ವಿವರಿಸಿದರು. ನಂತರ ಅಧ್ಯಕ್ಷರು ವಿನೋದಪೂರ್ಣ ಭಾಷಣವಾಗಿ, ವಂದನಾರ್ಪಣೆಯಿಂದ ಸಭೆ ಕೊನೆಗೊಂಡಿತು.

೧೦. ರೂ. ನೋಟು

೫॥×೩॥ ಇಂಚು ಉದ್ದಗಲದ ಹತ್ತು ರೂಪಾಯಿ ನೋಟುಗಳನ್ನು ರಿಸರ್ವ್ ಬೇಂಕಿನವರು ಹೊರಡಿಸುವರು. ಸದ್ಯದಲ್ಲೇ ಚಲಾವಣೆಗೆ ಬರಬಹುದು

ಅಕ್ಕಿ ಒಪ್ಪಿಸಬೇಕು—ತಪ್ಪಿಲ್ಲ

ಸರಕಾರದಿಂದ ವಶಪಡಿಸಿದ ಅಥವಾ ಪಡಿಸದ ಅಕ್ಕಿ ಸ್ಟಾಕಿನಲ್ಲಿ (ನವೆಂಬರ್ ಅಂತ್ಯದವರೆಗಿನ ಖರ್ಚಿಗಿಂತ) ಮಿಕ್ಕಿ ಉಳಿಯುವ ಅಕ್ಕಿಯನ್ನು ಇದೇ ಆಗಸ್ಟ್ ಅಂತ್ಯದೊಳಗೆ ದ. ಕ ಕೋ ಸೊಸೈಟಿಯ ರಖಂ ಸ್ಟೋರ್ಸಿನ ಯಾವ ಶಾಖೆಗಳಿಗಾದರೂ ತಲ್ಪಿಸಬೇಕು ಈ ಸಂಬಂಧದ ಕಾನೂನುಗಳಿಗೆ ವಿರೋಧವಾಗಬಹುದೆಂಬ ಭಯದಿಂದ ತಮ್ಮಲ್ಲಿ ಗುಪ್ತವಾಗಿ ಇಟ್ಟುಕೊಂಡವರು ಕೂಡಾ ಈಗಲಾದರೂ ಅದನ್ನು ಒಪ್ಪಿಸಿದರೆ ಅವರ ಮೇಲೆ ತಪ್ಪಿನಕಟ್ಟು ಹೂಡಲಾಗುವುದಿಲ್ಲ ಈ ಪ್ರಕಟನೆಯನ್ನು ಮಾನ್ಯ ಕಲೆಕ್ಟರರು ಹೊರಡಿಸಿದ್ದಾರೆ

ರೇಶನಿಂಗ್ ಕಟ್ಲೆಗಳು

ರೇಶನಿಂಗ್ ಕಾನೂನು ಉಲ್ಲಂಘನೆಯ ತಪ್ಪಿಗಾಗಿ ಈ ಕೆಳಗೆ ಕಾಣಿಸಿದಂತೆ ಕಟ್ಲೆಗಳು ವಿಚಾರಣೆಗೆ ಬಂದಿವೆ —ದಾಸ್ತಾನಿನ ಲೆಕ್ಕಾಚಾರ ಪ್ರಕಟಿಸದ-೮, ಪ್ರಾಮುಖ್ಯ ವಸ್ತುಗಳನ್ನು ವಶಪಡಿಸಿದ ಕಾನೂನು ಉಲ್ಲಂಘನೆ-೧೨ ಅನಧಿಕೃತವಾಗಿ ಬತ್ತ ಮಾರಿದ್ದು—೨ ಅನಧಿಕೃತವಾಗಿ ರೇಶನ್ ವಸ್ತುಗಳನ್ನು ಹೊರಸಾಗಿಸಲು ಪ್ರಯತ್ನಿಸಿದ್ದು—೨ ಸುಳ್ಳು ಲೆಕ್ಕತೋರಿಸಿದ್ದು—೨ ಒಟ್ಟಿಗೆ ೨೬ ಕಟ್ಲೆಗಳಿವೆ

ಕೃಷಿಕರಿಗಾಗಿ

ಕಳೆದ ತಾಗಳರಲ್ಲಿ ಮಾನ್ಯ ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ಒಂದು ಚಿಕ್ಕ ಪರಿಷತ್ತು ಜರಗಿತು-ಹಜೂರು ಕಚೇರಿಯಲ್ಲಿ ಆಹಾರ ಧಾನ್ಯ ಬೆಳೆಸಲಾಗದಲ್ಲಿ ಗೆಡ್ಡೆಗೆಣಸು ಜಾತಿಯ ಪದಾರ್ಥಗಳನ್ನು ಬೆಳೆಸಲು ಪ್ರೋತ್ಸಾಹಿಸುವುದೆಂದಾಯಿತು. ಹೆಚ್ಚು ಆಹಾರ ಬೆಳೆಸಲು ಕೃಷಿಕರ ಉಪಯೋಗಕ್ಕೆ ನಮ್ಮ ಜಿಲ್ಲೆಗೆ ೬೨ ಟನ್ ಸಸ್ಯ ಗೊಬ್ಬರ (ಅಮ್ಮೋನಿಯಮ್ ಸಲ್ಫೇಟ್) ಬಂದಿರುತ್ತದೆ, ೨೨ ಟನ್ ಕೃಷಿ ಉಪಕರಣಗಳು ವ್ಯಾಪಾರಕ್ಕೆ ಕೊಡಲಾಗಿದೆ ಎಂದು ತಿಳಿದುಬರುತ್ತದೆ

ರಮ್‌ಜಾನ್‌ಗಾಗಿ

ಮುಸಲ್ಮಾನ್ ಬಂಧುಗಳಿಗೆ ಈ ಹಬ್ಬದ ಸಮಯದಲ್ಲಿ, ಅವರ ರೇಶನ್ ಕಾರ್ಡುಗಳಲ್ಲಿ ನಿರ್ಣಯಿಸಿದಕ್ಕಿಂತ ಇಮ್ಮಡಿಸಿಗುವಂತಾಗಿದೆ.

ಸಪ್ಲೈ ಕಮಿಶನರ್

ಸಿವಿಲ್ ಸಪ್ಲೈ ಡೆ. ಕಮಿಶನರ್ ರಾ. ಸಾಹೇಬ್ ರಾಘೋ ಅವರನ್ನು ಕಳೆದ ತಾ ೧೫ರಂದು ಭೂಮಾಲಿಕ ಸಂಘದ ಪ್ರತಿನಿಧಿಗಳು ಭೇಟಿಯಾಗಿ ತಮ್ಮ ಹಾಲು ಸವಾಲುಗಳನ್ನು ಅರಿಕೆಮಾಡಿಕೊಂಡರು. ಅವುಗಳನ್ನು ಸರಕಾರದ ಗಮನಕ್ಕೆ ತರುವುದಾಗಿ ಶ್ರೀ ರಾಘೋರವರು ಅಭಯವಿತ್ತರೆಂದು ತಿಳಿದುಬರುತ್ತದೆ.

ಜಡ್ಜರಿಗೆ ರಜೆ

ನಮ್ಮ ಜಿಲ್ಲೆಯ ಸೆಶ್ಯನ್ಸ್ ಜಡ್ಜರಾಗಿದ್ದ ಶ್ರೀ ಎಂ. ಸಿ ಬಿ. ಕೋಮನ್ ಐ. ಸಿ. ಎಸ್. ಅವರು ಬರುವ ತಿಂಗಳ ಪ್ರಾರಂಭದಿಂದ ರಜೆಮೇಲೆ ತೆರಳುವರಾದುದರಿಂದ ಅವರ ಸ್ಥಾನಕ್ಕೆ ಸಬ್ ಜಡ್ಜ್ ಶ್ರಿ ಕುಂಬರಾಮನ್ ಮೆನೋನ್ ಅವರು ಬರುವರು

ನೆರೆ ಕಷ್ಟಕ್ಕೆ ಸಹಾಯ

ಈ ಮಳೆಗಾಲದಲ್ಲಿ ಕಟೀಲು ಆಸುಪಾಸಿನ ನೆರೆ ಹಾವಳಿಗೆ ತುತ್ತಾದ ಜನರಿಗೆ "ಫ್ಲಡ್ ರಿಲೀಫ್ ಕಮಿಟಿ"ಯವರು ೨೪೨ ಹಾರೆ, ೮೯ ಸೀರೆ, ೪೨ ಮುಂಡುಗಳ ಸಹಾಯ ಗೀಯುವುದಾಗಿ ನಿರ್ಧರಿಸಲಾಗಿದೆ ಎಂದು ತಿಳಿದು ಬರುತ್ತದೆ ಜಿಲ್ಲಾ ಫುಡ್ ಕೌನ್ಸಿಲಿನವರೂ ಈ ವಿಚಾರ ಪರ್ಯಾಲೋಚಿಸುವರೆಂದೂ ಗೊತ್ತಾಗಿದೆ

ಮೋಸ

ಕೆಲವು ದಿನಗಳ ಹಿಂದೆ ಜಪ್ಪುವಿನಲ್ಲಿ ಒಂದು ಕಡೆ ಒಬ್ಬ ಕ್ರೈಸ್ತರ ಮನೆಯಲ್ಲಿ ಕೆಲವು ಮೋಸಗಾರರು ತಾವು ರೇಶನ್ ಅಧಿಕಾರಿಗಳು ಎಂದು ಜಪ್ತಿ ನಡೆಸಿದರಂತೆ ದಸ್ತಗಿರಿ ಮಾಡಿಸುವದಾಗಿ ಬೆದರಿಕೆ ಹಾಕಿ ೧೦ ರೂಪಾಯ್ ಲಂಚವನ್ನು ಪಡೆದರಂತೆ ಮನೆಯ ಯಜಮಾನರು ಸ್ವಲ್ಪ ಪಾಪದ ಮನುಷ್ಯರಿದ್ದುದರಿಂದ ಮೋಸಗಾರರ ಕೈ ಮೇಲಾಯಿತ್ತು ನೆರೆ ಕರೆಯ ಓರ್ವ ಗೃಹಸ್ಥರು ರೇಶನ್ ಆಫೀಸರರಿಗೆ ಈ ಸುದ್ದಿ ತಿಳಿಸಲಾಗಿ ಪುನ ಆ ಮನೆಯಲ್ಲಿ ನಿಜವಾದ ಜಪ್ತಿಯಾಗಿ ೩॥ ಮುಡಿ ಅಕ್ಕಿ ಸಿಕ್ಕಿತಂತೆ ಮೋಸ ಮಾಡಿದವರ ಪತ್ತೆ ನಡೆಯುತ್ತಿದೆ

ಅಕ್ಕಿ ಭತ್ತ ಒಯ್ಯಲು ಪರ್ಮಿಟು ಬೇಕು

ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ಯಾವುದೇ ತರದ ವಾಹನ ಮಾರ್ಗಗಳ ಮೂಲಕ ಅಕ್ಕಿ, ಅವಲಕ್ಕಿ, ಅಕ್ಕಿ ಹುಡಿ, ನುಚ್ಚು ಇವುಗಳನ್ನು ಒಯ್ಯಲು ಅಧಿಕೃತವಾದ ಪರ್ಮಿಟನ್ನು ಪಡೆಯಬೇಕಾಗಿ ಪ್ರಕಟಿಸಲಾಗಿದೆ ಇಂತಹ ಪರ್ಮಿಟುಗಳನ್ನು ಯಾವುದೇ ತರದಲ್ಲಿ ದುರುಯೋಗಗೊಳಿಸಿದಲ್ಲಿ ಅಪರಾಧವಾಗುವುದು ಒಂದೊಂದು ಸಲ ಈ ಪದಾರ್ಥಗಳನ್ನೂ ಒಯ್ಯುವಾಗ ಪ್ರತ್ಯೇಕ ಪ್ರತ್ಯೇಕ ಪರ್ಮಿಟುಗಳನ್ನು ಅರ್ಜಿಗಳ ಮೂಲಕ ಪಡೆಯತಕ್ಕದು.

ನಿಧನ

ತಾ. ೨೦ರಂದು ಇಲ್ಲಿಯ ಜನಪ್ರಿಯ ದೇಶಿ ವೈದ್ಯರಲ್ಲಿ ಓರ್ವರಾದ ಶ್ರೀ। ಕಣ್ಣೂರು ವಿಟ್ಟಪ್ಪ ಭಂಡಾರಿಗಳು ವಿಧಿವಶರಾದರು ಬಡವರಿಗೆ ಇವರಿಂದ ವೈದ್ಯಕೀಯ ಸಹಾಯವಿತ್ತು ಶ್ರೀಯುತರು ಭಸ್ಮಾದಿ ತಯಾರಿಕೆಗಳಲ್ಲಿ ತಜ್ಞರಿದ್ದರೆಂದೂ ಪ್ರತೀತಿ ಇದೆ ಅವರ ಆತ್ಮಕ್ಕೆ ಶಾಂತಿ ಇರಲಿ

ಹಿಂದೀ ಸಂಘ

ಸ್ಥಳೀಯ ಗವರ್ನಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಒಂದು ಹಿಂದೀ ಸಂಘವನ್ನು ಪ್ರಾರಂಭಿಸಿದರು. ಪ್ರಿನ್ಸಿಪಾಲರು ಸಂಘಕ್ಕೆ ಯಶಸ್ಸನ್ನು ಕೋರಿ ಹಿಂದಿಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು.

ಮಾರ್ಕೇಟು ಧಾರಣೆ

ನಗರದಲ್ಲಿ ಈ ಕೆಳಗೆ ಕಾಣಿಸಿದ ವಸ್ತುಗಳ ಧಾರಣೆ ಹೀಗಿದೆ:—ತೆಂಗಿನ ಹಿಂಡಿ ರೂ, ೮೪, ೪೬, ಎಳ್ಳಿಂಡಿ ೫೦, ೬೦. ತೆಂಗಿನ ಎಣ್ಣೆ ೧೫॥.(ಕೃಷ್ಣಾ ಮಿಲ್ಲಿನದಕ್ಕೆ ೨೧ ರೂ.) ಊರ ಬೆಲ್ಲ ೭೫, ೮೫. ಗೋದಿ ಹಿಟ್ಟು ೪೬. ಕಡ್ಲೆ ಹಿಟ್ಟು ೫೨॥. ಕಡ್ಲೆ ೩೭. ಹುರುಳಿ ೭೪-೬-೦. ಉದ್ದು ೩೭–೧೩–೦. ಹೆಸರು ೩೭–೯–೦. ಫಿ. ಶಾಖಿ ,ಬೀಜ ೩೭ ಮೆಣಸು ೧೫॥ ಉಪ್ಪು (೨॥ ಮಣ) ೧೧-೬–೦ ತೊಗರಿ ಬೇಳೆ ೫೫. ನಿರುಳ್ಳಿ ೫೦, ೬೦. (ಇಲ್ಲಿ ೧ನೇ ತರಗತಿಯವುಗಳ ಬೆಲೆ ಮಾತ್ರ ಕೊಡಲಾಗಿದೆ.)

ಶವದ ಪತ್ತೆ

ಕಳೆದ ಶುಕ್ರವಾರ ಫೆಲಿಕ್ಸ್ ಪೈ ಬಜಾರಿನ ಬಾವಿಯಲ್ಲಿ ಮಲೆಯಾಳಿ ಯುವಕನೋರ್ವನ ಶವವಿದ್ದುದು ಕಂಡು ಬಂದಿದೆ. ಇಲ್ಲಿ ಡೋಬಿ ಕೆಲಸದಲ್ಲಿದ್ದನೆಂದು ತಿಳಿದು ಬರುತ್ತದೆ

ಆಹಾರ ಪರಿಸ್ಥಿತಿ

ಹೊರಗಿನಿಂದ ಅಕ್ಕಿ ಭತ್ತ ಬರದಿರುವ ಕಾರಣ, ಇಲ್ಲಿ ಸ್ಟೋರಿನಿಂದ ಗುರುತು ಚೀಟಿ ಪಡೆದು ಜೀವನ ಮಾಡುವವರಿಗೆ ತುಂಬಾ ಸಂಕಷ್ಟವಾಗಿದೆ ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ವಿಷಮವಾಗುವುದು

ಉಡುಪಿ

ರಾವ್ ಸಾಹೇಬ್ ರಾಘೊ ಅವರು ಇಲ್ಲಿಗೆ ದಯಮಾಡಿಸಿದ್ದರು ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿದರು

ಕೆನರಾ ಬ್ಯಾಂಕಿಂಗ್ ಕೊರ್ಪೋರೇಶನ್ ಲಿಮಿಟೆಡ್ ಈ ಸಂಸ್ಥೆಗೆ ೨೮ ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾಗಲಿರುವ ಶ್ರೀ। ಎಮ್ ಶ್ರೀನಿವಾಸ ಪ್ರಭು ಇವರಿಗೆ ಬೇಂಕಿನ ಸಿಬಂಧಿಯವರು ಸತ್ಕಾರ ಕೂಟ ನಿಧಿ ಸಮರ್ಪಣೆಗಳಿಂದ ಸತ್ಕರಿಸಿದರು

ಸ್ಥಳೀಯ ಕೃಷ್ಣಾಪುರ ಮಠಾಧೀಶರ ಮೇಲೆ ೨೯। ಮುಡಿ ಅನಧಿಕೃತ ಅಕ್ಕಿ ಇಟ್ಟ ಆರೋಪದ ವಿಚಾರಣೆಯಾಗಿ ಅಲ್ಲಿಯ ಕೊಟ್ಯಾರಿಗಳಿಗೆ ಮಾತ್ರ ೩೦೦ ದಂಡ ವಿಧಿಸಲಾಯಿತು ಸುಳ್ಳು ಸಂಖ್ಯೆ ಕೊಟ್ಟ ಒಬ್ಬ ಮಹಮ್ಮದೀಯನಿಗೆ ೩೦೦ ರೂ ದಂಡವಾಗಿದೆ ಹೋಟೇಲಿನವರೊಬ್ಬರು ೮ ಸೇರು ಹೆಚ್ಚು ಅಕ್ಕಿ ಇಟ್ಟದ್ದಕ್ಕೆ ೧೦೦ ರೂ ಜುಲ್ಮಾನೆ

ಪೆರಡಾಲ

ಹೈಸ್ಕೂಲಿಗೆ ಆಸ್ತಿದಾನ

ನೆಲ್ಲಿಕಳೆಯದಲ್ಲಿರುವ ಶ್ರೀ ಕುತ್ತಗುಡ್ಡೆ ಕೇಶವ ಭಟ್ಟರು ವರ್ಷವೊಂದರ ಸುಮಾರು ಎರಡು ಖಂಡಿ ಅಡಿಕೆ, ಏಳ್ನೂರೈವತ್ತು ತೆಂಗಿನಕಾಯಿ, ಮೂರು ಮುಡಿ ಅಕ್ಕಿ ಉತ್ಪತ್ತಿಯ ಒಟ್ಟು ಹನ್ನೆರಡು ಎಕ್ರೆ ಜಮೀನು ಹಾಗೂ ಸುಮಾರು ೫೦೦ರೂಪಾಯಿ ಬೆಲೆಬಾಳುವ ಮನೆಯೊಂದು ಸಹಿತದ ಆಸ್ತಿಯೊಂದನ್ನು (ಕುಂಬಡಾಜೆ ಮತ್ತು ಆದೂರು ಗ್ರಾಮಗಳಲ್ಲಿರುವ) ಪೆರಡಾಲ ನವಜೀವನ ಹೈಸ್ಕೂಲಿನ ಬಗ್ಗೆ ಪೆರಡಾಲ ಎಜ್ಯುಕೇಶನ್ ಸೊಸೈಟಿಗೆ ತನ್ನ ಸ್ವಂತ ಖರ್ಚಿನಿಂದ ದಾನಶಾಸನಮಾಡಿ ಕೊಟ್ಟಿರುವರು

ನವಜೀವನ ಹೈಸ್ಕೂಲಿನ -I, II ಮತ್ತು III ಫಾರಮುಗಳಲ್ಲಿ ಈಗ ಒಟ್ಟು ೧೮೫(ನೂರ ಎಂಭತ್ತೈದು) ಮಂದಿ ವಿದ್ಯಾರ್ಥಿಗಳಿರುವರು

ವಿಮರ್ಶೆ

ಮಕ್ಕಳೊಡನೆ ಹೇಗೆ ವರ್ತಿಸಬೇಕು?

ಈ ಪುಸ್ತಕದ ಮೂಲ ಲೇಖಕರು ಸಿ ಡಬ್ಲೂ, ಲೆಡ್ಬೀಟರ್ ಪರಿವರ್ತಕರು ಎ ಸುಬ್ರಹ್ಮಣ್ಯಂ ಎಂ ಎ ಬಿ ಸುಬ್ಬರಾವ್ ಇವರು ಕೆಲ ಶ್ರೀಮಂತ ಪೋಷಕರ ಸಹಾಯದಿಂದ ಪ್ರಕಟಿಸಿರುವರು. ಈ ಚಿಕ್ಕ ಪುಸ್ತಕದಲ್ಲಿ ಹಿರಿಯರು ಕಿರಿಯವರೊಡನೆ ವರ್ತಿಸಬೇಕಾದ ರೀತಿ ನೀತಿಗಳನ್ನು ತರ್ಕಿಸಲಾಗಿದೆ ಮಕ್ಕಳ ಗುಣಶೀಲಗಳನ್ನು ತಿದ್ದುವ ಮೊದಲಿನ ಹೊಣೆಗಾರಿಕೆ ತಂದೆ ತಾಯಿಗಳದ್ದು, ನಂತರ ಉಪಾಧ್ಯಾಯರದು ಮತ್ತು ಇತರ ಹಿರಿಯರದು ಹಿರಿಯ ವರ್ಗದವರು ತಮ್ಮ ನಡತೆಗಳನ್ನು ತಿದ್ದಿ ಬೆಳೆಯುತ್ತಿರುವ ಮಗುವಿನಲ್ಲಿ ಸತ್ಪರಿಣಾಮವನ್ನುಂಟುಮಾಡತಕ್ಕದ್ದು ಅವರು ಆದರ್ಶ ಹಿರಿಯರಾಗಬೇಕು ಮಕ್ಕಳ ಸಂಪರ್ಕವನ್ನು ತಿರಸ್ಕರಿಸದೆ ಪ್ರೀತಿವಾತ್ಸಲ್ಯಗಳಿಂದ ಅವರನ್ನು ಸಂತೈಸಿ ತಿದ್ದಬೇಕು ಕಾಠಿಣ್ಯದಿಂದಲೂ, ಬೇಸರಿಕೆಯ ಪ್ರದರ್ಶನದಿಂದಲೂ ಮಕ್ಕಳ ಮನೋವೃತ್ತಿ ಕೆಡುವುದ ವತ್ತವರು ನಿಷ್ಪ್ರಯೋಜಕರಾಗುವರು ಗ್ರಂಥಕರ್ತರು, ಪಾಶ್ಚಾತ್ಯ ಮತ್ತು ಪೌರ್ವಾತ್ಯ ಮಕ್ಕಳ ಅನುಭವವನ್ನು ನಿರೂಪಿಸಿದ್ದಾರೆ ಥಿಯೋಸೊಫಿ ತತ್ವ ದೃಷ್ಟಿಯಿಂದ ಮಕ್ಕಳ ಮಾನಸಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ದೇಹಿಕ ಪ್ರಗತಿಗಳಿಗೆ ಯೋಗ್ಯ ಸಲಹೆ ಇತ್ತಿದ್ದಾರೆ ಎಲ್ಲರೂ ಅವಶ್ಯವಾಗಿ ಓದಬೇಕಾದ ಪುಸ್ತಕ "ನಮ್ಮ ಮಕ್ಕಳಿಗೆ ನಮ್ಮ ಕರ್ತವ್ಯ ಯೋಗ್ಯ ರೀತಿಯಲ್ಲಿ ಸಲ್ಲಿಸುತ್ತೇವೆ" ಎಂದು ಬರೆದು ರುಜು ಹಾಕಿ ರಿಪ್ಲೈ ಕಾರ್ಡು ಒಂದನ್ನು ಬಿ ಸುಬ್ಬುರಾವ್, ಥಿಯೋಸೋಫಿಸ್ಟ್, ಮೂಡಬಿದ್ರೆ ದ ಕನ್ನಡ ಜಿಲ್ಲೆ—ಈ ವಿಳಾಸಕ್ಕೆ ಕಳುಹಿಸಿದರೆ ಈ ಪುಸ್ತಕವನ್ನು ಮುಫತ್ತಾಗಿ ಕಳುಹಿಸಿ ಕೊಡಲಾಗುವುದು

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP

[illegible]
[illegible]
[illegible]
[illegible]ಭಾಗದಿಂದ [illegible]
[illegible] ಶಂಗ್ಲೆಂಡಿನ
[illegible]ಯಲ್ಲಿ ಒಂದೊಂದು
[illegible]ಂಗದವರೆಂದೂ ಹೇಳಬರುತ್ತದೆ.
[illegible] ಬಂಗಾಲಿ
[illegible] ಗುಜರಾತಿಯು, ಮರಾಠಿ ಮತ್ತು
[illegible]ರು, ಆಂಧ್ರರು, ತಮಿಳರು,
[illegible]ಡಿಗರು ಮತ್ತು ಮಲೆಯಾಳಿಗಳು
[illegible]ಲ್ಲರೂ ಒಂದೇ ಭಾರತದ ಜನತಾ ವರ್ಗ
[illegible] ಸೇರಿದವರಿರುವರು. ಭಿನ್ನ ಭಿನ್ನ
ಪ್ರಾಂತ್ಯದ ಜನರಲ್ಲಿ ಮತ್ತು ಬೇರೆ ಬೇರೆ
[illegible]ತಿಗಳ ಜನರಲ್ಲಿ ತೋರಬರುವ ಬಾಹ್ಯ
[illegible]ಪರಚನಾ ತಾರತಮ್ಯವು ಜನಾಂಗಿಕ
[illegible]ತ್ಯಾಸವಲ್ಲ. ಮಾನವ ದೇಹರಚನೆ
[illegible]ಯನ್ನು ಸೂಕ್ಷ್ಮವಾಗಿ ಪರಿಶೋಧಿಸಿದ
[illegible]ರು ಈ 'ಮೂಲ ಜನಾಂಗ'ವೆಂಬ
[illegible]ನಪ್ರಿಯವಾದ ಶಬ್ದವು ಕೇವಲ ಭ್ರಮೆ
[illegible]ನ್ನುತ್ತಾರೆ. ಯಾವ ದೇಶದ ಜನರಲ್ಲೂ
[illegible]ನಾಂಗ ಶುದ್ಧತೆ ಇಲ್ಲ. ಮಿಶ್ರಣವೇ
[illegible]ಚ್ಚಾಗಿದೆ. ಆದುದರಿಂದ ಈ 'ಶುದ್ಧತೆ'
[illegible]ಯು ಪ್ರಾಮುಖ್ಯದ್ದಲ್ಲ. ಪಾಶ್ಚಾತ್ಯರು
[illegible]ರೆದ ಅನೇಕ ಪುಸ್ತಕಗಳಲ್ಲಿ ಭಾರತವು
[illegible]ನ್ನ ಭಿನ್ನ ಜನಾಂಗಗಳ ದೇಶವೆಂಬ
[illegible]ರೂಪವು ಶಾಸ್ತ್ರೀಯ ಸಂಗತಿಗಳನ್ನು
[illegible]ಶದಪಡಿಸುವ ಯೋಗ್ಯ ಪ್ರಮಾಣವಲ್ಲ.
ಈ ವಿಚಾರದಲ್ಲಿಯೂ ಇತ್ತೀಚೆಗೆ
[illegible]ಂದು ಸುಧಾರಣೆಯಾಗಿದೆ. ಕೆಲವೇ
[illegible]ಂಗಳುಗಳಿಂದ ಚಾಣಾಕ್ಷರಾದ ಪ್ರಚಾ
[illegible]ಕರು "ಭಾರತವು ಅನೇಕ ಜನಾಂಗಿಕರ
[illegible]ಶವಲ್ಲ. ಆದರೆ ಅಲ್ಲಿ ಎರಡು ಜನಾಂಗ
[illegible]ಳಿವೆ" ಎಂದು ಸಾರ ತೊಡಗಿದ್ದಾರೆ.
[illegible]ದು ಕ್ಷುಲ್ಲಕವಾದ ರಾಜಕೀಯ ಸ್ವಾರ್ಥ
[illegible]ಧನೆಗಾಗಿ ಜನತೆಯನ್ನು ಮರುಳುಗೊ
[illegible]ಸಲು ಕಲ್ಪಿಸಿದ ಒಂದು ಅಶಾಸ್ತ್ರೀಯ
[illegible]ದ "ದಿಜನಾಂಗ ತತ್ವ."

[illegible]ತ ವಿಚಾರ

[illegible]ಕೆ ಜನಾಂಗತ್ವಕ್ಕೆ ಹಿಂದೂ ಮುಸ್ಲಿಂ
[illegible]ಕ್ಷಿಯಾಗಲೀ ಹಿಂದೂಸ್ಥಾನ್–ಪಾಕಿ
[illegible]ಸ್ಥಾನದ ಚರ್ಚೆಯಾಗಲೀ ಅವಶ್ಯವಿಲ್ಲ.
[illegible]ನಾಂಗತ್ವಕ್ಕೆ ಮತೀಯ ಐಕ್ಯತೆ ಅವಶ್ಯವೆ
[illegible]ಂದು ಯೋಚಿಸಬೇಕು. ಆದರೆ ಆತಿಥ್ಯ
[illegible]ಳಿಗೂ, ಸಹನೆ ಸಾದರಗಳಿಗೂ ಇತಿ
[illegible]ಹಾಸಪ್ರಸಿದ್ಧವಾದ ಭಾರತವು ಇಂದು
[illegible]ನೇಕ ಮತಗಳ ಮನೆಯಾಗಿದೆ.
ಸುಮಾರು ೩೦ ಕೋಟಿ ಜನರು ಅತೀ
[illegible]ಪ್ರಾಚೀನವಾದ ಹಿಂದೂ ಮತಾನುಯಾ
[illegible]ಗಳು. ಸಿಕ್, ಬುದ್ಧ, ಜೈನ್ ಮೊದ
[illegible]ಲಾದುವು ಹಿಂದೂ ಮತದ ಶಾಖೆಗಳೇ
[illegible]ಗಿವೆ. ಮಹಮ್ಮದೀಯ, ಕ್ರೈಸ್ತ, ಮತ್ತು
[illegible]ಯಹೂದಿ, ಪಾರ್ಸಿ ಜನರ ಮತಗಳು
[illegible]ಮಾತ್ರ ಹೊರಗಿನವುಗಳು. ಆದರೆ ಅದೃ
[illegible]ಷ್ಟವಶಾತ್ ಈ ಮತಾವಲಂಬಿಗಳು
[illegible]ಚ್ಚಾಗಿ ಭಾರತೀಯರೇ. ಹಿಂದೂಮತದ
[illegible]ಪ್ರಬಲತರವಾದ ಸಂಸ್ಕೃತಿಯ ಪ್ರಭಾವ
[illegible]ದ, ಈ ಮತಗಳ ಅನೇಕ ಆಚಾರ
[illegible]ಚಾರ ಪದ್ಧತಿಗಳು ಭಾರತೀಯವಾಗಿವೆ
[illegible]ಲ್ಲವೆ ಹಿಂದೂಮಯವಾಗಿವೆ.
ಭಾರತೀಯನಾದ ಬುದ್ಧನ ಚಿತ್ರವನ್ನು
[illegible]ನಿ ಜನಾಂಗಿಕರು ಚಪ್ಪಟೆ ಮುಖ
[illegible]ಳ್ಳವನಾಗಿ (ತಮ್ಮ ಹಾಗೆ) ಬರೆಯು
[illegible]ರೆ. ನಾವು ಪಲಸ್ತೀನದ ಯೇಸು
[illegible]ಕ್ರಿಸ್ತನನ್ನು ಭಾರತೀಯನನ್ನಾಗಿ ಮಾಡಿ
[illegible]ಸುತ್ತೇವೆ. ಬೇರೆ ಬೇರೆ ಪ್ರಾಂತ್ಯದಲ್ಲಿ
[illegible]ವ ಮುಸ್ಲಿಮರ ಆಚಾರ ವಿಚಾರಗಳೂ
[illegible]ಷೆಯೂ ಅವರಿರುವ ಪ್ರಾಂತ್ಯದ

[illegible]
ವಸ್ತ್ರಗಳಲ್ಲಿ [illegible]
(ಉದಾ: [illegible]ಗಳು, [illegible] ನ್ಯೂಸ್ಲಮರು) ಭಾರತೀಯ ಮುಸಲ್ಮಾನರ ಲಕ್ಷಣಗಳು ಅಫಘಾನ್ ಅಥವಾ ಅರಬೀ ಮುಸಲ್ಮಾನರ ಹಾಗೆ ಇರುವುದಿಲ್ಲ. ನಮ್ಮ ದೇಶದ ಹಳ್ಳಿನ ಜನರಂತೆ ಇರುತ್ತದೆ.

ಮುಂದುವರಿದ ದೇಶಗಳಲ್ಲಿ ಮತ ವಿಚಾರವನ್ನು ಜನರು ರಾಜಕೀಯದಲ್ಲಿ ಬೆರೆಸುವುದಿಲ್ಲ. ಮತಧರ್ಮವು ಅಲ್ಲಿ ವ್ಯಕ್ತಿಗತವಾಗಿದೆ. ಹಿಂದೆ ಅಲ್ಲಿ ಮತ ಕಲಹಗಳು ಅನೇಕ ನಡೆದಿದ್ದರೂ ಇಂಗ್ಲೆಂಡ್ ರಶ್ಯ ಅಮೇರಿಕಾಗಳ ರಾಜಕೀಯದಲ್ಲಿ ಮತವಿಚಾರಕ್ಕೆ ಪ್ರಾಧಾನ್ಯವಿಲ್ಲ.

ದುರಾದೃಷ್ಟವಶಾತ್ ನಮ್ಮ ದೇಶದಲ್ಲಿ ರಾಜಕೀಯ ಪಂಗಡಗಳನ್ನು ಮತೀಯ ತಳಹದಿಯ ಮೇಲೆ ಕಟ್ಟಿದ್ದಾರೆ. ಮಹಾತ್ಮಾ ಗಾಂಧಿಯವರು ತಮ್ಮ ಹಿಂದೂ ಮತದ ಅಧ್ಯಾತ್ಮಿಕ ತತ್ವಗಳಿಂದ ಸ್ವಾತಂತ್ರ್ಯ ಚಳವಳನ್ನು ಸ್ಫೂರ್ತಿಗೊಳಿಸಿರುವರಾದರೂ ಇಂದು ಅದು ಒಂದು ಮತಪ್ರಧಾನವೆಂದು ಹೇಳ ಬರುವುದಿಲ್ಲ. ಕಾರಣ ಸಾವರ್‌ಕರ್, ಜಿನ್ನಾ ಮುಂತಾದ ಸಣ್ಣ ಪುಟ್ಟ ಮತ ಮುಖಂಡರೂ ತಮ್ಮವರ ಏಳಿಗಾಗಿ ಮಾತ್ರ ಮತೀಯ ಭಾವನೆಗಳ ಮೇಲೆ ಚಳವಳ ಮಾಡಲು ಪ್ರಯತ್ನಿಸುತ್ತಿರುವರು.

ಜಗತ್ತಿನ ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ರಾಜಕೀಯ ಜೀವನವನ್ನು ಪಂಗಡಸರಕಾರ ಮತ್ತು ಆರ್ಥಿಕ ತತ್ವ ಯೋಜನೆಗಳ ಸಹಾಯದಿಂದ ಸುಧಾರಿಸುವರು. ಹೀಗೆ ಸಮತಾ ವಾದಿಗಳು, ಮಜೂರಪಂಗಡಿಗಳು, ಬಂಡವಾಳಶಾಹಿಗಳು, ಯುದ್ಧ ವಾದಿಗಳು, ಶಾಂತವಾದಿಗಳು ಹೀಗೆ ಅನೇಕ ಗುಂಪಿನವರಿರುವರು. ಇವರು ಬೇರೆ ಬೇರೆ ಮತಕ್ಕೆ ಸೇರಿದವರಿರಬಹುದು. ನಮ್ಮ ದೇಶದಲ್ಲಿ ಹೆಚ್ಚಿನ (ಕಾಂಗ್ರೆಸನ್ನು ಬಿಟ್ಟು) ಪಂಗಡದವರು ಮತೀಯ ಉದ್ದೇಶಗಳ ಮೇಲೆ ಒಟ್ಟುಗೂಡಿದವರಾಗಿದ್ದಾರೆ. ಮುಸ್ಲಿಂ ಸಮತಾವಾದಿಗಳು, ಮಜೂರರು ಮುಸ್ಲಿಂಲೀಗಿಗೆ ಸೇರುವಂತೆಯೂ ಹಿಂದೂ ಸಮತಾ ವಾದಿಗಳು, ಮಜೂರರುಗಳು ಹಿಂದೂ ಮಹಾಸಭೆಗೆ ಸೇರುವಂತೆಯೂ ಒತ್ತಾಯ ಮಾಡಲ್ಪಡುತ್ತಾರೆ. ಇಂತಹ

[illegible]
[illegible]
[illegible]ಲ್ಲ. ಆದುದರಿಂದ ಸ್ವಾರ್ಥ ಸಾಧನೆಯ ಈ ಮತವಾದಿಗಳು (ಕೋಮವಾದಿಗಳು) ನಮ್ಮ ರಾಜಕೀಯವನ್ನು ಬಹಳ ಕಲಂಕಿಸುತ್ತಾರೆ. ನಮ್ಮ ರಾಜಕೀಯ ಜೀವನದ ವೈಶಿಷ್ಟ್ಯವಿದು.

ಇಷ್ಟು ಮತೀಯ ಗೊಂದಲವಿದ್ದರೂ [illegible]ದು ನಮ್ಮ ಜನಾಂಗತ್ವಕ್ಕೊಂದು ಅಡ್ಡಿಯಲ್ಲ. ನಮ್ಮ ದೇಶಕ್ಕೆ ಬೇಕಾದುದು ರಾಜಕೀವಾದದಂತಹದೊಂದು ರಾಜಕೀಯ ಮತನಂಬಿಕೆಯಲ್ಲ. ಪರಸ್ಪರ ಪ್ರಾಕೃತ ತಿಳುವಳಿಕೆಗಳಿಂದ ಕೂಡಿದ ಸಹನಶೀಲತೆ ನಮ್ಮಲ್ಲಿ ಇರಬೇಕು. ಅಮೇರಿಕದಲ್ಲಿ ಕಪ್ಪು, ಬಿಳಿ ಜನರು ಐಕ್ಯಮತದಿಂದಿರುವಂತೆ ಸಾಧಿಸಬೇಕು. ಭಾರತದ ಅಭಿವೃದ್ಧಿಗಾಗಿ, ಭಾರತೀಯ ಸಮಸ್ಯೆಗಳನ್ನು ನಾವು ಬಿಡಿಸಲು ಪ್ರಯತ್ನಪಟ್ಟರೆ ಎಲ್ಲಾ ಧರ್ಮದವರೂ ಇಲ್ಲಿ [illegible]ಮಭಾವದಿಂದ ವಾಸಿಸಿಕೊಂಡಿರಬಹುದು.

ಇದಕ್ಕೆ ಜನತೆಯಲ್ಲಿ ರಾಷ್ಟ್ರೀಯ ಶಿಕ್ಷಣವನ್ನು ಸಾರಬೇಕು. ನಮ್ಮ ನಮ್ಮೊಳಗಿನ ಜಗಳದಿಂದ ಲಾಭ ಪಡೆಯುವ ಹೊರಗಿನವರ ಪ್ರಭಾವವನ್ನು ಕೊನೆಗೊಳಿಸಬೇಕು. ಅಮೇರಿಕದ 'ನಾಗರಿಕ ಶಿಕ್ಷಣ' ಕಾರ್ಯಕ್ರಮದಂತೆ ನಮ್ಮಲ್ಲಿ ರಾಷ್ಟ್ರೀಯ ಶಿಕ್ಷಣದ ಕಾರ್ಯಕ್ರಮ ಬೇಕು. ಇದರಿಂದ ಒಡೆದು ಹೋದ ಐಕ್ಯತೆಯು, ಒಟ್ಟುಗೂಡುವುದು. ಇದು ಅಮೆರಿಕನ್ ಸರಕಾರದ ಒಂದು ಮುಖ್ಯ ಉದ್ದೇಶ. ಕಾರಣ ಅಲ್ಲಿ ಅಸಂಖ್ಯಾತ ಜನಾಂಗಿಕರಿರುವರು. ಪ್ರತ್ಯೇಕ ಮತದಾನ ಚುನಾವಣೆ ಪದ್ಧತಿಗಳನ್ನು ಕಿತ್ತೊಗೆಯಬೇಕು.

ಭಾರತ ದೇಶದಲ್ಲಿ ಈಗ ಎರಡು ಮತೀಯ ಪಂಗಡಗಳೊಳಗೆ ತುಂಬಾ ಕಚ್ಚಾಟವಾಗಹತ್ತಿದೆ. ಹೀಗಿದ್ದರೂ ಎರಡು ಬೇರೆ ಬೇರೆ ಮತಗಳಿಗೆ ಸೇರಿದ್ದ ಮಾತ್ರಕ್ಕೆ ಇವರು ಎರಡು ಬೇರೆ ಬೇರೆ ಜನಾಂಗವೆಂಬುದು ಅಸಂಬದ್ಧವಾದುದು. ಅಮೆರಿಕ ಇಂಗ್ಲೆಂಡ್‌ಗಳಲ್ಲಿರುವ ಕೆಥೋಲಿಕರೂ, ಪ್ರೊಟೆಂಸ್ಟೆಂಟರೂ ಮತ್ತು ಯೆಹೂದಿ ಮತದವರೂ ಪ್ರತ್ಯಪ್ರತ್ಯೇಕ ಜನಾಂಗವೆಂದು ಎಂದಿಗೂ ತಿಳಿದು ಕೊಳ್ಳಲಾಗು

[illegible] ಪ್ರಕಾರ [illegible]
ಹಾಗಿದೆ.

ಸಾಂಸ್ಕೃತಿಕ [illegible]

ಭಾರತವರ್ಷದ ಸಾಂಸ್ಕೃತಿಕ ಜೀ[illegible]
ನಷ್ಟು ಸಾವಿರ ವರ್ಷ ಹಿಂದಿನದು. ಇದ[illegible]
ವಿವಿಧ ಸಂಸ್ಕೃತಿಗಳಿಂದ ಕೂಡಿರುವ[illegible]
ಹುದು ನಿಜವೇ. ಆದರೆ ಅಮೇರಿಕದಲ್ಲಿ[illegible]
ವಂತೆ ಅನೇಕ ಸಂಸ್ಕೃತಿಗಳು ಕೂಡಿ[illegible]
ವೇ ಆಗಿರುವುದು ಒಂದು ವೈಶಿಷ್ಟ್ಯ. ಒ[illegible]
ಕೊಂದು ಪ್ರಾಂತ್ಯದಲ್ಲಿ ಒಂದೊಂದು ತರ[illegible]
ಸಂಸ್ಕೃತಿಯು ಮೆರೆಯುತ್ತಿರುವುದಾದರೂ
ಎಲ್ಲಾ ಪ್ರಾಂತ್ಯಗಳಲ್ಲೂ ಒಂದೇ ಸಮ[illegible]
ಸಾಮಾನ್ಯ ಸಾಂಸ್ಕೃತಿಕ ಲಕ್ಷಣಗಳಿವೆ
ಮುಂಡಾಸು ಕಟ್ಟುವುದು, ಮೆಟ್ಟು ಹಾಕ[illegible]
ವುದು, ಪಂಚೆಉಡುವುದು, ಸಂಗೀತ
ಮೊದಲಾದ ಕ್ರಮಗಳು.) ಹೀಗೆ ಭಾರ[illegible]
ವು ಅನೇಕ ಸಾಂಸ್ಕೃತಿಕ ವರ್ಣಗಳಿಂ[illegible]
ದ ಪರಿಶೋಭಿಸುತ್ತದೆ.
ಅಲ್ಪಸಂಖ್ಯಾತರ ಸಾಂಸ್ಕೃತಿಕ ಪದ್ಧ[illegible]
ಗಳನ್ನು ಭಾರತೀಯವಾಗಿ ಮಾಡಬೆ[illegible]
ಕಾದ ಕೆಲಸ ಇನ್ನೂ ಇದೆ, ಇನ್ನು ಹೊ[illegible]
ಪಂಗಡಗಳು ನಮ್ಮ ದೇಶಕ್ಕೆ ಬಾರದಿದ್ದು[illegible]
ದರಿಂದ ಸ್ವಲ್ಪ ಕಷ್ಟ ಕಡಿಮೆಯಾಗಿದೆ
ಅಮೆರಿಕನ್ ದೃಷ್ಟಾಂತದಿಂದ ಭಾರತೀ[illegible]
ಶ್ರೀಯರಿಗೆ ದುಡಿವ ಮುಂದಾಳುಗಳ[illegible]
ತುಂಬಾ ಕಲಿಯಬಹುದು.– ಅಂತರ್ಜಾ[illegible]
ತೀಯ, ಮತೀಯ, ಮತ್ತು ಪ್ರಾಂತೀಯ
ವಿವಾಹಗಳು ಈ ಕಾರ್ಯವನ್ನು ಸಾ[illegible]
ಸಲು ಅನುಕೂಲಿಸುತ್ತದೆ.
ಆದುದರಿಂದ ಭಾರತದೊಳಗಿನ ವಿವಿ[illegible]
ಸಾಂಸ್ಕೃತಿಕ ಮತೀಯ ವರ್ಗ ವರ್ಣ[illegible]
ಳನ್ನು ಮಿಶ್ರಣಮಾಡಿ ಒಂದೇ ವಿವರ್ಣ[illegible]
ವಾದ ಮಾದರಿಯನ್ನು ಕಲ್ಪಿಸುವ ಅವಶ್ಯ[illegible]
ಕತೆಇಲ್ಲ. ಎಲ್ಲಾ ವರ್ಗಗಳೂ ವರ್ಣ[illegible]
ಗಳೂ ಸುಶೋಭಿತವಾಗಿ ಪ್ರಜ್ವಲಿಸುವ[illegible]
ತೆ ಬೇರೆ ಬೇರೆಯಾಗಿ ಒಂದೊಂದನ್ನ[illegible]
ಹೆಣೆದು ಕೂಡಿಸಿದರೆ ಅಂತಹ ಜೋಡಣೆ[illegible]
ಯಿಂದ ಅದ್ವಿತೀಯವಾದ ಜನಾಂಗವೊಂ[illegible]
ದರ ಏಳಿಗೆಯಾಗುವುದು.
ಇಷ್ಟು ವಿಚಾರಗಳನ್ನು ಯೋಚಿಸಿದ್ದ[illegible]
ಮೇಲೆ, "ಭಾರತವು ಒಂದು ಜನಾಂಗವೆ?"
ಎಂಬ ಪ್ರಶ್ನೆಗೆ ನಾವು ಉತ್ತರಕೊಡಬ[illegible]
ಲ್ಲೆವು. "ಹೌದು, ಖಂಡಿತವಾಗಿಯೂ
ಭಾರತವು ಒಂದು ಜನಾಂಗ" ಇದೇ
ಅದರ ಉತ್ತರ.

THE CANARA BANKING CORPORATION LTD.

(Incorporated inBritish India with Limited Liability.)

Estd) **Head Office: UDIPI S. Kanara.** **(1906.**

Statement of affairs as on 30th April, 1944.

LIABILITIES	Rs. As. Ps.
1. Paid up Capital	13,68,480- 0- 0
2. Reserves	4,12,120-12- 8
3. Deposits	67,30,955- 3- 4
4. Due to Bankers	7,34,366-10- 9
5. Bills for collection	6,70,379- 8- 8
6. Sundries including revenue items	7,58,745- 8- 4
Total	1,06,75,047-11- 9

ASSETS	Rs. As. Ps.
1. Cash on hand & with bankers in Current & Fixed Deposit A/cs	19,71,808- 0- 1
2. Investments on (1) Govt. Securities (2) Immovable properties etc.	24,26,660- 9- 9
3. Loans on Jewels & other valuable securities	33,50,167-13-3
4. Loans on personal securities & Bills purchased	20,49,197-13-10
5. Bills for collection as per contra.	6,70,379- 8- 8
6. Office premises, furniture etc.	93,705- 0-10
7. Sundries including revenue items.	1,13,128-13- 4
Total	1,06,75,047-11- 9

★ ಹೆಚ್ಚಿನ ತಡೆಗಳು ★

[ಮೇಲು ಶಿರೋನಾಮೆಯ ಅಡಿಯಲ್ಲಿ ವೈಸರಾಯರು ಮೊನ್ನೆ ಗಾಂಧೀಜಿಯರಿಗೆ, ಕಳುಹಿಸಿ ಕೊಟ್ಟ ನಕಾರಕ ಉತ್ತರದ ಕುರಿತು ಈ ಕೆಳಗಿನ ಅಭಿಪ್ರಾಯವನ್ನೊಳಗೊಂಡ ಲೇಖವೊಂದು ಮದ್ರಾಸಿನ ಒಂದು ಪ್ರಸಿದ್ಧ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.]

ಸದ್ಯದ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಪರಿಹರಿಸುವ ಕುರಿತು ಕಾಂಗ್ರೆಸ್ ಕಾರ್ಯಕಾರಿ ಮಂಡಳದೊಡನೆ ವಿಚಾರ ವಿನಿಮಯ ಮಾಡಿಕೊಳ್ಳಲು ತನಗೆ ಅವಕಾಶ ದೊರಕಿಸಿಕೊಡಬೇಕೆಂದು, ಮಹಾತ್ಮಾಜಿಯರು, ವೈಸರಾಯರೊಡನೆ ಕೋರಿಕೊಂಡಾಗ, ಗಾಂಧೀಜಿಯರು, ಖಂಡಿತ ತರದ ಮತ್ತು ರಚನಾತ್ಮಕ ತರದ ಧೋರಣವನ್ನೊಳಗೊಂಡ ಸಲಹೆಗಳನ್ನು ಮುಂದಿಟ್ಟರೆ ಮಾತ್ರ ತಾನು ಮೇಲಿನ ಅವಕಾಶವನ್ನು ಮಾಡಿಕೊಡುವೆನಾಗಿ, ಮರುತ್ತರ ಕೊಟ್ಟ ಪರಿಣಾಮವಾಗಿ, ಗಾಂಧೀಜಿಯವರು ಆ ಕುರಿತು ನಿರ್ದಿಷ್ಟ ಸೂಚನೆಗಳನ್ನು ಮಾಡಿದ್ದು ಅವುಗಳು ಬ್ರಿಟಿಷ್ ಸರಕಾರವು ಒಪ್ಪತಕ್ಕವುಗಳಲ್ಲವೆಂದು, ಉತ್ತರವು ವೈಸರಾಯರಿಂದ ಬಂದಿರುತ್ತದೆ. ಪಾರ್ಲಿಮೆಂಟ್ ಅಧಿವೇಶನದಲ್ಲಿ ಕಳೆದ ತಿಂಗಳಲ್ಲಿ ಇಂಡಿಯಾ ಸೆಕ್ರೆಟರಿ, ಮಿ। ಅಮೆರಿಯವರು, ಹೇಳಿದುದನ್ನೇ ವೈಸರಾಯರು ಸಮರ್ಥಿಸಿ ಬಿಟ್ಟಿದ್ದಾರೆ. ಆದರೆ ಗಾಂಧೀಜಿಯವರ ಸೂಚನೆಗಳು ಸರಕಾರದ ಮನಸ್ಸಿಗೆ ರುಚಿಸದ ಕಾರಣ, ಅವುಗಳು, ಖಂಡಿತರ ಮತ್ತು ರಚನಾತ್ಮಕವಲ್ಲವೆಂದು ಹೇಳಲು ಬರುವುದಿಲ್ಲ. ಗಾಂಧೀಜಿಯರು ಮೊನ್ನೆ ಹೊರಡಿಸಿದ ಸೂಚನೆಗಳಿಗೂ ೧೯೪೨ರಲ್ಲಿ ಮೌಲಾನಾ ಅಜಾದರು, ಸರ್ ಸ್ಟಾಫರ್ಡ್‌ರ ಮುಂದೆ ಹಾಕಿದ ಸೂಚನೆಗಳಿಗೂ, ಒಂದಿಷ್ಟೂ ವ್ಯತ್ಯಾಸವಿಲ್ಲವೆಂದೂ ವೈಸರಾಯರು ವಾದಿಸುತ್ತಿದ್ದರೂ, ಕೆಲವೊಂದು ಹೊಸ ಕಾರಣಗಳನ್ನು ಮುಂದೆ ಹಾಕಿ, ಗಾಂಧೀಜಿಯರ ಸೂಚನೆಗಳು ತಿರಸ್ಕರಿಸಲ್ಪಟ್ಟಿರುವವು. ಇವುಗಳಲ್ಲಿ ಈ ಕೆಳಗಿನ ಎರಡು ಕಾರಣಗಳು ಮುಖ್ಯವಾದುವುಗಳು. ಯಾವುದೆಂದರೆ, ಗಾಂಧೀಜಿಯರು ಸೂಚಿಸಿದ ಕೇಂದ್ರ ಎಸೆಂಬ್ಲಿಗೆ ಹೊಣೆಯಾಗಿರುವ ತರದ ರಾಷ್ಟ್ರೀಯ ಸರಕಾರವನ್ನು ರಚಿಸುವರೆ ಅನುಕೂಲವಾಗುವ ತರದ ಮಾರ್ಪಾಡುಗಳನ್ನು ಇಂಡಿಯಾ ಶಾಸನದಲ್ಲಿ ಮಾಡಲು ಈ ಯುದ್ಧ ಸಮಯದಲ್ಲಿ ಸಾಧ್ಯವಲ್ಲ, ಇದು ಒಂದನೆ ಕಾರಣ; ಯುದ್ಧವು ಮುಗಿದ ವಿನಹ, ರಕ್ಷಣಾ, ಮತ್ತು ಮಿಲಿಟರಿ ಕಾರ್ಯಕ್ರಮದ ನಡುವಳಿಕೆಯ ಹೊಣೆಗಾರಿಕೆಯನ್ನು ಸರಕಾರದ ಇತರ ಹೊಣೆಗಾರಿಕೆಗಳಿಂದ ಬೇರೆ ಮಾಡಲು ಸಾಧ್ಯವಿಲ್ಲ ಮತ್ತು ಯುದ್ಧವು ಕೊನೆಗೊಂಡು ನೂತನ ಇಂಡಿಯಾ ಶಾಸನವು ಜ್ಯಾರಿಗೆ ಬರುವ ತನಕ, ಬ್ರಿಟಿಷ್ ಸರಕಾರವು ಮತ್ತು ವೈಸರಾಯರು ಇಂಡಿಯಾ ಸರಕಾರದ ಯಾವತ್ತೂ ವಿಚಾರಗಳಲ್ಲಿ ಹೊಣೆಗಾರಿಕೆಯನ್ನು ತಮ್ಮಲ್ಲೇ ಇಟ್ಟುಕೊಳ್ಳಬೇಕಾಗಿಯದೆ; ಇದು ಎರಡನೆಯ ಕಾರಣವು.

ಆದರೆ ಸರ್. ಸ್ಟಾಫರ್ಡ್ ಕ್ರಿಪ್ಸರು, ಅಂದು ತಮ್ಮೊಡನೆ ಹಿಡಿದು ಬಂದ ಅಧಿಕಾರ ಪತ್ರದಲ್ಲಿ ಹಿಂದೂದೇಶಕ್ಕಾದಿ ಕಲ್ಪಿಸಲ್ಪಟ್ಟ ರಾಷ್ಟ್ರೀಯ ಸರಕಾರಕ್ಕೆ ಆಡಳಿತ ಸೂತ್ರಗಳನ್ನು ಬಿಟ್ಟು ಕೊಡುವುದರೊಡನೆ, ಆ ಸರಕಾರಕ್ಕೆ ದೇಶರಕ್ಷಣೆ ಮತ್ತು ಮಿಲಿಟರಿ ವಿಚಾರದಲ್ಲೂ ಕೆಲ ಮಟ್ಟಿಗೆ ಬ್ರಿಟಿಶ್ ಸರಕಾರದೊಡನೆ ಪಾಲುಗಾರಿಕೆಯಲ್ಲಿ ಹೊಣೆಗಾರಿಕೆಯನ್ನು ವಹಿಸುವ ಶರತುಗಳಿದ್ದವು. ವೈಸರಾಯರು ಈ ಶರತುಗಳನ್ನು ಈಗ ಮರೆತುಬಿಟ್ಟಂತೆ ಕಾಣುತ್ತದೆ. ಈ ಕುರಿತು ಸರ್ ಕ್ರಿಪ್ಸ್ ಸ್ವದೇಶಕ್ಕೆ ಹಿಂತಿರಳಿದ ನಂತರ ಪಾರ್ಲಿಮೆಂಟಿನಲ್ಲಿ ಸ್ಪಷ್ಟೀಕರಿಸಿದರು. ದೇಶ ರಕ್ಷಣೆ ಮತ್ತು ಮಿಲಿಟರಿ ವಿಚಾರ ಹೊಣೆಗಾರಿಕೆಯನ್ನು ಬ್ರಿಟಿಷ್ ಮತ್ತು ಇಂಡಿಯಾ ಸರಕಾರಗಳು, ಪಾಲುಗಾರಿಕೆಯಲ್ಲಿ ವಹಿಸುವವು, ಎಂದು ಅವರು ಒತ್ತಿ ಸಾರಿದರು. ಈ ತರದ ಹೊಣೆಗಾರಿಕೆಯನ್ನು ಕೊಟ್ಟ ವಿನಹ, ದೇಶರಕ್ಷಣೆ ಮತ್ತು ಮಿಲಿಟರಿಯ ಕುರಿತು, ದೇಶವು ಹುರುಪಿನಿಂದ ಕಾರ್ಯ ನಿರ್ವಹಿಸುವ ಸ್ಫೂರ್ತಿಗೊಳಿಸಲು, ಹಾಗೆ ರಾಷ್ಟ್ರೀಯ ಸರಕಾರಕ್ಕೆ ಸಾಧ್ಯವಾಗದೆಂದು ಅವರ ಅಭಿಪ್ರಾಯವಾಗಿದ್ದಿತು. ಸರ್. ಕ್ರಿಪ್ಸರು ರಾಷ್ಟ್ರೀಯ ಸರಕಾರಕ್ಕೆ ಆಡಳಿತ ಕಾರ್ಯಗಳಲ್ಲಿ ಮಾತ್ರವಲ್ಲದೆ ದೇಶ ರಕ್ಷಣಾ ಮತ್ತು ಮಿಲಿಟರಿ ವಿಚಾರಗಳಲ್ಲಿ ಕೆಲವು ವಿಭಾಗಗಳಲ್ಲಿ ಅವಕಾಶವನ್ನು ಕೊಡುವರೆ, ಅಂದು ಸಿದ್ಧರಿದ್ದರು. ಅದಕ್ಕೆ ಬ್ರಿಟಿಷ್ ಸರಕಾರದ ಸಮರ್ಥನೆಯೂ ಕೂಡ ಇದ್ದಿತು. ಆದರೆ ಯುದ್ಧದ ಸಮಯದಲ್ಲಿ ರಾಜ ಶಾಸನದಲ್ಲಿ ಮಹತ್ವಾದ ಮಾರ್ಪಾಡುಗಳನ್ನು ಮಾಡುವುದನ್ನು ಅವರು ನಿರಾಕರಿಸಿದ್ದರು, ಹಿಂದೂದೇಶದ ಜನರು ಕೋರಲ್ಪಟ್ಟ, ಪ್ರಜಾಪ್ರಭುತ್ವವನ್ನು ಹೆಚ್ಚಿನ ಮಟ್ಟಿಗೆ ಕೊಟ್ಟುಬಿಡುವುದರಲ್ಲಿ ತನಗೆ ಅಭಿಮತವಿದ್ದಂತೆ, ಅವರು ಅಂದಿನ ಮಾತುಕತೆಯ ಧೋರಣವಾಗಿದ್ದಿತು. ಅಂದರೆ ನೂತನವಾಗಿ ಸ್ಥಾಪಿಸಲ್ಪಡುವ ಇಂಡಿಯಾ ಸರಕಾರಕ್ಕೆ ಈಗಿನ ಶಾಸನನ್ವಯ ದೇಶರಕ್ಷಣೆ ಮತ್ತು ಮಿಲಿಟರಿ ವಿಚಾರದಲ್ಲೂ ಕೆಲವು ಅಧಿಕಾರಗಳನ್ನು ಕೊಡಲು ಬ್ರಿಟಿಷ್ ಸರಕಾರ ಅಂದು ಮುಂದೆ ಬಂದಿತ್ತು.

ಆದರೆ ಎರಡು ವರ್ಷಗಳ ನಂತರ ಈಗ ಬ್ರಿಟಿಷ್ ಸರಕಾರವು ಅಂದು ತಾವು ಹೊರಡಿಸಿದ ಸಲಹೆಗಳನ್ನು ಕ್ರಿಂತೆಗೆಯುವುದರಲ್ಲಿ ಮಾತ್ರ ತೃಪ್ತವಾಗದೆ, ಕೆಲವು ನೂತನ ಕಾರಣಗಳನ್ನು ಹೊರಡಿಸಿದುದು, ಅತಿ ವಿಪರೀತವಾದುದಾಗಿರುತ್ತದೆ. ಲಾರ್ಡ್ ವೆವೆಲ್ಲರು ಈಗ, "ಈಗಿನ ಶಾಸನನ್ವಯ, ಒಂದು ತಾತ್ಕಾಲಿಕವಾದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ಕಾರ್ಯದಲ್ಲಿ ಹಿಂದೂ, ಮುಸ್ಲಿಮರು ಮಾತ್ರವಲ್ಲದೆ ಇತರ ಪ್ರಾಮುಖ್ಯ ಅಲ್ಪ ಸಂಖ್ಯಾಕ ವರ್ಗಗಳೂ ಕೂಡ ಸಹಕರಿಸುವುದರಲ್ಲಿ ಉತ್ತಮವಿದೆ. ಆದರೆ ಆ ತರದ ರಾಷ್ಟ್ರೀಯ ಸರಕಾರದ ಸ್ಥಾಪನೆಯಾಗುವ ಮೊದಲು, ಎಲ್ಲಾ ಕೋಮುಗಳ ನೂತನವಾದ ಶಾಸನವನ್ನು ರಚಿಸುವ ಕ್ರಮಗಳ ಕುರಿತು ಒಂದು ಒಪ್ಪಂದಕ್ಕೆ ಬರುವುದು ಅವಶ್ಯವಿದೆ' ಎಂಬ ಹೇಳುತ್ತಿರುವರು. ಅಂದರೆ ಈಗಿರುವ ವೈಸರಾಯರ ಕೌನ್ಸಿಲನ್ನು ವಿಸರ್ಜಿಸಿ ಅದರ ಸ್ಥಳದಲ್ಲಿ ಈಗಿನ ರಾಜಶಾಸನಕ್ಕೆ ಸರಿಯಾಗಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕಾದರೆ, ಎರಡು ಶರತುಗಳನ್ನು ನಡೆಯಿಸಬೇಕಾಗಿಯದೆ. ಅಂತಹ ರಾಷ್ಟ್ರೀಯ ಸರಕಾರದ ಸ್ಥಾಪನೆ ಹಿಂದೂ ಮುಸ್ಲಿಮರು ಮಾತ್ರ ಸಹಕರಿಸಬೇಕಲ್ಲದೆ, ಇತರ ಅಲ್ಪ ಸಂಖ್ಯಾತ ವರ್ಗಗಳು, ಕೂಡ ಅವರೊಡನೆ ಸಹಕರಿಸಬೇಕು, ಎರಡನೆಯದಾಗಿ ಅವರು ನೂತನವಾಗಿ ರಚಿಸಲ್ಪಡಬೇಕಾದ ರಾಜ ಶಾಸನವನ್ನು ರಚಿಸುವ ಕ್ರಮದ ನಿಯಮಗಳ ಕುರಿತು ಈಗಲೇ ತಮ್ಮ ಅನುಮತಿಯನ್ನು ವ್ಯಕ್ತಪಡಿಸಬೇಕು. ಹಿಂದೂ ಮುಸ್ಲಿಂ ಒಕ್ಕಟ್ಟಾಗುವ ಕುರಿತು, ಬ್ರಿಟಿಷ್ ಸರಕಾರಕ್ಕೆ ಭಯವಿದ್ದುದರಿಂದಲೆ, ಈ ಹೊಸ ಶರತುಗಳು ಕಲ್ಪಿಸಲ್ಪಟ್ಟಿರಬೇಕು.

ಈ ನೂತನ ಶರತುಗಳಿಂದ ಸದ್ಯಕ್ಕೊಂದು ತಾತ್ಕಾಲಿಕ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಸಾಧ್ಯವಾಗದು. ಕಾರಣ ಹಿಂದೂದೇಶದ ವಿವಿಧ ಕೋಮುಗಳನ್ನು ಆ ಕುರಿತು ವಿಚಾರಿಸಿ ಬೇಕಾಗುವುದು. ಈ ಕೋಮುಗಳೆಲ್ಲಾ ಪರಸ್ಪರ ಮಾತುಕತೆಗಳನ್ನು ನಡೆಯಿಸಿ ಒಂದು ಒಪ್ಪಂದಕ್ಕೆ ಬರಲು ಬಹಳ ದೀರ್ಘ ಸಮಯ ಬೇಕಾಗುವುದು—ಹಿಂದೂ ದೇಶಕ್ಕೊಂದು ನೂತನ ರಾಜ ಶಾಸನವನ್ನು ರಚಿಸುವ ಕುರಿತು ಈ ಯುದ್ಧ ಸಮಯದಲ್ಲಿ ಮಾತುಕತೆ ಇತ್ಯಾದಿಗಳನ್ನು ನಡೆಯಿಸಲು ಅವಕಾಶವಿರದೆಂದೆ ಬ್ರಿಟಿಷ್ ಸರಕಾರದ ಅಭಿಪ್ರಾಯವಾಗಿದ್ದುದರಿಂದ ಅದು ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುವ ವಿಚಾರವನ್ನು ಯುದ್ಧವು ಕೊನೆಗೊಳ್ಳಬೇಕಾಗಿ ಮುಂದೆ ಹಾಕಿ ಈಗಿನ ರಾಜ ಶಾಸನಕ್ಕೆ ಸರಿಯಾದ ತರದಲ್ಲೆ ಎಲ್ಲಾ ಕೋಮುಗಳು ಸಹಕರಿಸಿ ಒಂದು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕಾಗಿ ಅವರು ಈ ಮೊದಲು ಕ್ರಿಪ್ಸರ ಮೂಲಕ ಸೂಚಿಸಿದ್ದರು. ಈಗ ಅದನ್ನು ಅಲ್ಲಗಳೆದಿರುವರು. ಅವರೆ ರಾಜಕೀಯ ಬಿಕ್ಕಟ್ಟಿನ ಪರಿಹಾರದ ಬಗ್ಗೆ ಯಾವತ್ತೂ ವ್ಯವಹಾರವನ್ನು ಕೊನೆಗೊಳಿಸಿರುವರು ಬಾಗಿಲನ್ನು ಬಲವಾಗಿ ಹಾಕಿ ಬಿಟ್ಟಿರುವರು. ಅಂದರೆ ಗಾಂಧೀಜಿಯರು ಅಂದಂತೆ ಅಧಿಕಾರವನ್ನು ಹಿಂದೀಯರಿಗೆ ಬಿಟ್ಟು ಕೊಡಲು ಬ್ರಿಟಿಷ್ ಸರಕಾರವು ಸಿದ್ಧವಿಲ್ಲವೆಂದೆ ತಿಳಿಯಬೇಕಾಗಿದೆ. ಸುಮ್ಮನೆ ಹೊಸ ನೆಪಗಳನ್ನು ಯಾ ಕಾರಣಗಳನ್ನು ಮುಂದೆ ಹಾಕುತ್ತಾ ಕಾಲ ಹರಣ ಮಾಡುವುದೆ ಅವರ ಉದ್ದೇಶವಿರುವುದು. ಆದುದರಿಂದ ಹಿಂದೂ ದೇಶದ ವಿವಿಧ ಕೋಮುಗಳು ಒಕ್ಕಟ್ಟಾದರೆ ಆಗ ಸತ್ಪರಿಣಾಮವು ಉಂಟಾಗಬಹುದೆಂದು ಬ್ರಿಟಿಷರ ಈ ತರದ ಧೋರಣದಿಂದ ಹಿಂದೂ ಮುಸ್ಲಿಂ ಐಕ್ಯವು ದೇಶದ ಹಿತ ಸಾಧನೆಗೆ ಅತಿ ಮಹತ್ವದೆಂದು ಇಕ್ಕಡೆಯವರಲ್ಲೂ ಹೊಳೆಯದೆ ಇರದು.

FOR SALE.

Spacious Bungalow with excellent loft, 4 motor garages, with loft, cattle-shed and 3 store rooms, 4 small houses, cooly line with 4 rooms, fruit garden of 123 cocoanut trees, 40 grafted mango trees, breadfruit, Jackfruit and other trees, well, etc. Total extent 4 acres 4 cents, situated on Main Road, Karkal Town. Also road behind Bungalow. Both roads suitable for shop buildings.

Address offers to Box No. "xxx"
C/o Swadeshabimani.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

[illegible] Bank of [illegible] Limited, Mangalore.

ESTD. 1931

HEAD OFFICE BUNDER Mangalore. BRANCHES MANGALORE, Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

(Regd)

ಅಮೃತಾಂಜನ

ತಲೆವೇದನೆ, ಕಿವಿವೇದನೆ, ಉಳುಕು, ಕುತ್ತಿ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾ[illegible], [illegible] ಕಳ್ಳುವುದು, ಚೇಳು ವಿಷ ಮುಂತಾ[illegible] ಬೇನೆ, ವಕ್ತವಾತ, ನೊಡಿಮೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುತ್ತದೆ.

THE BOMBAY LIFE ASSURANCE CO., LTD.

Our34 years' experienceia Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low. ★ 2½% Rebate on annual premiums.
★ "Permanent Disability Benefits free of any cost
★ Payment of double the insured amount in case of death by accident at a very smallcost of Rs. 1-8-0 per 1000.
★ Special rebates on large size policies.
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. [ಸಂಪುಟ 38] ತಾರೀಕು 1—9—1944 **1906** [ಸಂಚಿಕೆ 35]

ವೀರ ಮಹಿಳೆಯ ಧೀರ ಜೀವನ

ಎಗ್ನೆಸ್ ಸ್ಮೆಡ್ಲೆ

ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಅಮೆರಿಕಾಗಳು.

ಭಾರತೀಯರೆಲ್ಲರೂ ಕೇಳಬೇಕಾದ ಕತೆ ಇದು. ಇದು **ಎಗ್ನೆಸ್ ಸ್ಮೆಡ್ಲೆ** ಎಂಬವಳ ಕತೆ. ಸ್ವಾತಂತ್ರ್ಯವೇ ಅವಳ ಕತೆಯ ವಸ್ತು. ಈ ಕತೆಯಲ್ಲಿ ಭಾರತವು ಆನಂದ ಪಡುವುದು. ಎಗ್ನೆಸಳನ್ನು ಭಾರತಕ್ಕೆ ಕಾಲಿಡಲು ಬಿಡಲಿಲ್ಲ. ಆದರೂ ರಾಜಕೀಯವಾಗಿಯೂ ವೈಯಕ್ತಿಕವಾಗಿಯೂ ಅವಳು ನಮ್ಮ ದೇಶದೊಡನೆ ಸಂಬಂಧವಿಟ್ಟುಕೊಂಡಿದ್ದಳು.

ಎಗ್ನೆಸ್ ಸ್ಮೆಡ್ಲೆ ಎಂಬ ಮಹಿಳೆ ಯಾರಿವಳು?

ಹೌದು, ಎಗ್ನೆಸ್ ಸ್ಮೆಡ್ಲೆ ಎಂಬಿಕೆ ಯಾರು? ಭಾರತಕ್ಕೂ ಅವಳಿಗೂ ಯಾವ ಸಂಬಂಧ?

೧೯೩೭ರಲ್ಲಿ ಅಪ್ಟನ್ ಸಿನ್‌ಕ್ಲೇರರು ಒಂದು ಲೇಖದಲ್ಲಿ ಹೀಗೆ ಬರೆದರು:—ಚೀನದ ವಾಯುವ್ಯ ಪ್ರಾಂತ್ಯದಲ್ಲಿ ಅಮೆರಿಕನ್ ಅಧ್ಯಾಪಕಿಯೋರ್ವಳು ಅಲ್ಲಿನ ಉಗ್ರ ಸಮತಾವಾದಿಗಳ ಮುಖಂಡೆಯಾಗಿ ಕೆಲಸ ಮಾಡುತ್ತಿರುವ ಸುದ್ದಿ ಬರಹತ್ತಿದೆ. ಜಪಾನರ ವಿರೋಧವಾಗಿ ಅವಳು ಚೀನಿ ಜನತೆಯನ್ನು ಒಗ್ಗಟ್ಟು ಮಾಡುತ್ತಿರುವಳು. ಆದರೆ ಅವಳ ಆಶೆ ಆಕಾಂಕ್ಷೆಗಳಲ್ಲಿ ಭಾರತದ ವಿಷಯವೇ ಮೊದಲು ಮತ್ತೆ ಚೀನಾ. ಜೀವದ ಹಂಗು ತೊರೆದು ಅವಳು ಆ ಜನರ ಹಿತಕ್ಕಾಗಿ ದುಡಿಯುತ್ತಾಳೆ. . . . . ಅವಳು ಗೆದ್ದರೆ ಅವತಾರ ಸ್ತ್ರೀಯಾಗಿ ಪರಿಗಣಿಸಲ್ಪಟ್ಟು ಚಿರ ಸ್ಮರಣೀಯಳಾಗುವಳು.

ಇದು ಪ್ರತಿಭಾವಂತ ಮಹನೀಯರೊಬ್ಬರ ಪ್ರಶಂಸೆಯಾಗಿರಬಹುದು. ಆದರೆ ಅದರಿಂದ ನಮಗೆ ಪೂರ್ಣ ಕತೆ ತಿಳಿಯುವುದಿಲ್ಲ. "ಚೀನದ ಸಮರ ಗೀತಗಳು" ಎಂಬ ಗ್ರಂಥದಲ್ಲಿ ಎಗ್ನೆಸ್ ಸ್ಮೆಡ್ಲೆಯು ತನ್ನ ಜೀವನ ಚರಿತ್ರೆಯನ್ನು ಸಂಕ್ಷೇಪವಾಗಿ ಹೇಳುತ್ತಾಳೆ.

ಸ್ತ್ರೀ ಸ್ವಾತಂತ್ರ್ಯಕ್ಕಾಗಿ

ಎಗ್ನೆಸ್ ಸ್ಮೆಡ್ಲೆಯ ತಂದೆ ತಾಯಿಗಳು ಮಜೂರ ವರ್ಗದವರು. ಅಮೆರಿಕನ್ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದರು. ಅವಳ ಸಮತಾವಾದಿ ಭಾವನೆಗಳಿಗೂ ಕ್ರಾಂತಿಕಾರ ಚಟುವಟಿಕೆಗಳಿಗೂ ಮತ್ತು ಆಡಂಬರವಿಲ್ಲದ ಜೀವನಕ್ಕೂ ಅವಳ ದೀನ ಜನನವೇ ಮೂಲವೇ ಕಾರಣವಿರಬಹುದು. ಅವಳು ಬರೆಯುತ್ತಾಳೆ- "ನನ್ನ ಹೆತ್ತವರು ವಿವಾಹ ವಾದಾಗ ಎರಡು ಮುಖ್ಯ ಜೀವನ ಲಕ್ಷಣಗಳು ಒಟ್ಟುಗೂಡಿದಂತಾಯಿತು—ನನ್ನ ತಾಯಿಯು ನಮ್ರಳೂ, ಶ್ರಮ ಸಹಿಷ್ಣುವೂ, ಶ್ರದ್ಧಾವಂತಳೂ ಆಗಿದ್ದಳು. ತಂದೆ ಸ್ವಾತಂತ್ರ್ಯ ಪ್ರೇಮಿಯೂ, ಸಂಚಾರಪ್ರಿಯನೂ, ರಸಿಕನೂ ಆಗಿದ್ದನು.

"ನನ್ನ ತಂದೆ ಕೂಲಿ ಕೆಲಸ ಮಾಡುತಿದ್ದು ಸಂಸಾರ ತಾಪತ್ರಯಗಳನ್ನು ಮರೆಯಲು ಮದ್ಯಪಾನ ಮಾಡುತಿದ್ದನು. ನನ್ನ ತಾಯಿ ಬಟ್ಟೆ ಒಗೆಯುತಿದ್ದಳು. ಮತ್ತು ಚಿಕ್ಕ ಹೊಟೇಲು ಇಟ್ಟು ಕೊಂಡಿದ್ದಳು. . . . . ನನಗೆ ಅನೇಕ ವಿಷಯಗಳು ರುಚಿಸುತ್ತಿರಲಿಲ್ಲ. ಶ್ರೀಮಂತ ಬಾಲಕಿಯರು ನನ್ನನ್ನು ತುಂಬಾ ಅವಮಾನಕ್ಕೆ ಗುರಿಮಾಡುತಿದ್ದರು. ನನ್ನ ಉಪಾಧ್ಯಾಯಿನಿಯರು ಕೂಡಾ ನನಗೆ ಶ್ರೀಮಂತರ ಶೀಲಗಳನ್ನು ಕಲಿಯಲು ಬೋಧಿಸುತಿದ್ದರು. ಆದರೆ ಅದರಿಂದೇನೂ ಪ್ರಯೋಜನವಾಗಲಿಲ್ಲ. . . . . ನನ್ನನ್ನು ಕಟ್ಟುನಿಟ್ಟಿನ ಹುಡುಗಿ ಮಾಡಲು ಯಾವುದರಿಂದಲೂ ಸಾಧ್ಯವಿಲ್ಲ."

ಸ್ಮೆಡ್ಲೆಯು ಹದಿನಾರನೆ ಪ್ರಾಯದಲ್ಲಿ ಅವಳ ತಾಯಿ ಸತ್ತಳು. ಮಜೂರ ಜೀವನದ ದಾರಿದ್ರ್ಯದ ಪರಿಸ್ಥಿತಿಗೆ ಇವಳ ಮನಸ್ಸು ದಂಗೆ ಎದ್ದಿತು. ಆದರೆ ಅವಳ ದಂಗೆಯ ಮೊದಲನೇ ಕಾರಣವು ಹೆಂಗಸರ ಮೇಲೆ ಸರ್ವಾಧಿಕಾರದ ದಬ್ಬಾಳಿಕೆ ಮಾಡುತಿದ್ದ ಗಂಡಸರ ಮೇಲಿನ ದ್ವೇಷ. ಅಮೆರಿಕದಲ್ಲಿ ಕೂಡಾ "ಸ್ತ್ರೀಯರು ಹಿಂದುಳಿಯಬೇಕು— ಮನೆಯಲ್ಲಿ ಇದ್ದು, ಮಕ್ಕಳ ಆರೈಕೆ ನೋಡಬೇಕು." ಎಂಬ ಸಮಾಜ ಸೂತ್ರದ ಭಾವನೆಯೇ ಬಲವಾಗಿತ್ತು. ಅದನ್ನು ನಾನು ಎಂದಿಗೂ ಒಪ್ಪುವವಳಲ್ಲ."

ಗಂಡಸರಿಂದ ಆಳಲ್ಪಡುವ ಸಮಾಜತತ್ವಕ್ಕೆ ಅವಳು ತಿರಸ್ಕಾರ ತೋರಿದಳು. ಇಸಡೋರಾ ಡಂಕನ್, ಎತೆಲ್ ಮೆನ್ನಿನ್ ಮೊಂತಾದ ಧೀರ ಮಹಿಳೆಯರಂತೆ ಎಗ್ನೆಸ್ ಸ್ಮೆಡ್ಲೆಯು ಕೂಡಾ ಸ್ತ್ರೀಯರ ಪರಿಚರ್ಯಾತ್ಮಕ ಜೀವನ ಸ್ಥಿತಿಯನ್ನು ಖಂಡಿಸಿರುವಳು.

"ಸ್ತ್ರೀ ಪುರುಷರ ಪ್ರೇಮ ಜೀವನವು ಸ್ನೇಹ ವಾತ್ಸಲ್ಯಗಳಿದ್ದಿರಬೇಕು. ಅದು ಕಾಮ ಪ್ರಧಾನವಾಗಿರಬಾರದು. ಕಾಮ ತೃಷ್ಣೆಯಿಂದ ನಾನು ಎಂದೂ ಹಲುಬಿದವಳಲ್ಲ. ಅದು ಸ್ತ್ರೀಯರನ್ನು ಬಂಧನದಲ್ಲಿರಿಸಲು ಒಂದು ಸಾಧನವಾಗುತ್ತದೆ. ಸ್ತ್ರೀಯರಿಗೆ ವಿವಾಹದಿಂದ ಆಗುವ ಹೆಚ್ಚಿನ ಒಳಿತೆಂದರೆ ಹಣದ ಅನುಕೂಲತೆ ಮಾತ್ರ. ಆದರೆ ಅದು ನಮ್ಮನ್ನು ಗುಲಾಮಗಿರಿಯಲ್ಲೂ ದಬ್ಬುತ್ತದೆ ಎಂಬುದನ್ನು ಮರೆಯಬಾರದು. ಯಾವ ಸಮಾಜಕ್ಕೂ ಈ ತೊಡಕಿನ ಸಮಸ್ಯೆಯನ್ನು ಬಿಡಿಸಲಿಕ್ಕಾಗಲಿಲ್ಲ. ಸಮತಾವಾದಿ ರಶ್ಯದಲ್ಲೂ ಸ್ತ್ರೀಯರಿಗೆ ಸಲ್ಲಬೇಕಾದ ಸ್ಥಾನ ಮಾನಗಳು ದೊರಕುವುದಿಲ್ಲ: ಇದನ್ನು ನಾನು ರಶ್ಯದ ಗಂಡಸರಿಗೆ ಬಾಯಿ ಬಿಟ್ಟು ತಿಳಿಸಿದ್ದೇನೆ."

ಭಾರತದ ಸ್ವಾತಂತ್ರ್ಯಕ್ಕಾಗಿ

ಇಪ್ಪತ್ತು ವರ್ಷದಲ್ಲಿ ತರುಣಿ ಸ್ಮೆಡ್ಲೆಯು ನ್ಯೂಯೋರ್ಕ್ ನಗರಕ್ಕೆ ಬಂದಳು. "ಬೆಳಗಿನ ಹೊತ್ತು ಕೆಲಸ ಮಾಡುವುದು, ರಾತ್ರೆಯಲ್ಲಿ ಶಾಲೆ ಕಲಿಯುವುದು" ಅವಳ ಕಾರ್ಯಕ್ರಮವಿತ್ತು.

ರಾಜಕೀಯದ ವಿಷಯ ಅವಳಿಗೆ ಸ್ವಲ್ಪ ಮಾತ್ರ ತಿಳಿವಿತ್ತು. ಸಾವಿರಾರು ಮೈಲು ದೂರದ ದೇಶದಲ್ಲಿ ಕ್ರಾಂತಿಯೊಂದು ಆರಂಭವಾಗಿತ್ತು. ಇದು ಮುಂದೆ ಅಮೆರಿಕನ್ ತರುಣಿ ಸ್ಮೆಡ್ಲೆಯನ್ನು ಆಕರ್ಷಿಸಿತು. ಅವಳು ಆ ಕ್ರಾಂತಿಯಲ್ಲಿ ದುಮುಕಿದಳು. ೧೯೧೨ ವರ್ಷದಲ್ಲಿ ಅವಳು ಅಧ್ಯಾಪಕ, ವೈದ್ಯಕೀಯ ಪತ್ರಿಕೋದ್ಯೋಗ ಇವುಗಳಲ್ಲಿ ಯಾವುದನ್ನಾದರೂ ಚುನಾಯಿಸಬಹುದಿತ್ತು. ಇಲ್ಲವೆ ಸುಖವಾಗಿ ಮದುವೆ ಮಾಡಿ ಕೊಂಡು ಸಂಸಾರ ನೋಡಿ ಕೊಂಡಿರಬಹುದಿತ್ತು. ಆದರೆ ಭಾರತದ ವಿಧಿಯು ಇನ್ನೊಂದು ಎಣಿಸಿತ್ತು.

ಆ ಸಮಯದಲ್ಲಿ ಭಾರತವು ಕ್ರಾಂತಿಕಾರರ ಕೂಟ ಸ್ಥಾನವಾಗಿತ್ತು. ಅನೇಕ ಗುಪ್ತ ಕ್ರಾಂತಿಕಾರರು ರಕ್ಷಣೆಗಾಗಿ ಹೊರದೇಶಗಳಿಗೆ ಓಡಿ ಹೋದರು. ಕೆಲವರು ನ್ಯೂಯೋರ್ಕಿನಲ್ಲೂ ವಾಸಿಸತೊಡಗಿದರು. ಎಗ್ನೆಸ್ ಸ್ಮೆಡ್ಲೆಯು ಭಾರತೀಯ ಕ್ರಾಂತಿಕಾರರೊಡನೆ ತನಗಾದ ಪ್ರಥಮ ಸಂಪರ್ಕವನ್ನು ವರ್ಣಿಸುತ್ತಾಳೆ:—

"ನನ್ನ ಸ್ನೇಹಿತರಲ್ಲಿ ಇಂಡಿಯದ ಪ್ರೊಫೆಸರರೊಬ್ಬರಿದ್ದರು. ಅವರ ಹೆಸರು ಲಾಲಾ ಜಪತ್ ರೈ. ಅವರು ನನಗೆ ಭಾರತಕ್ಕೆ ಕಳಿಸುವ ಮೊದಲು ತಿಳಿಯಬೇಕಾದ ಇತಿಹಾಸ ಪಾಠಗಳನ್ನು ಹೇಳಿಕೊಟ್ಟರು. ಕೆಲವು ತರುಣರು ಸ್ವತಂತ್ರವಾಗದೆ ಭಾರತವನ್ನು ಸುಧಾರಿಸಲು ಸಾಧ್ಯವಿಲ್ಲವೆಂದು ಬೋಧಿಸಿದರು. ಕ್ರಾಂತಿಯ ಅವಶ್ಯಕತೆ ಸೂಚಿಸಿದರು. ನಾನು ಅವರ ಪತ್ರ ವ್ಯವಹಾರದ ಕೇಂದ್ರವಾದೆ. ಅವರ ಗುಪ್ತ ಸಂಕೇತ ಭಾಷೆಯನ್ನೂ ವಿಳಾಸವನ್ನೂ ಇಟ್ಟು ಕೊಳ್ಳುತಿದ್ದೆ. ಇದರ ಪರಿಣಾಮವಾಗಿ ೧೯೧೮ರಲ್ಲಿ ನನ್ನನ್ನು ಕೈದು ಮಾಡಿ ನ್ಯೂಯೋರ್ಕ್ ಸೆರೆಯಲ್ಲಿ ಕೊಳೆಸಿದರು.

೧೯೧೯ರಲ್ಲಿ ಸ್ಮೆಡ್ಲೆಯು ಯುರೋಪಿಗೆ ಪಯಣ ಬೆಳೆಸಿದಳು. ಹಡಗದಲ್ಲಿ ಅಡಿಗೆ ಕೆಲಸಕ್ಕೆ ನಿಂತಳು—ಕೈಯಲ್ಲಿ ಕಾಸಿರಲಿಲ್ಲ. ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಎಂಬುದರ ಸ್ಪಷ್ಟ ಕಾರ್ಯಕ್ರಮವು ಅವಳಿಗೆ ತಿಳಿದಿರಲಿಲ್ಲ. ಯಾವ ಸಂಸ್ಥೆಯೊಂದಿಗೂ ಅವಳಿಗೆ ಸಂಬಂಧವಿರಲಿಲ್ಲ. ಯುರೋಪಿನಲ್ಲಿ ವಾಸಿಸುತಿದ್ದ ಕೆಲವು ಕ್ರಾಂತಿಕಾರ ಭಾರತೀಯರ ವಿಷಯ ಮಾತ್ರ ಅವಳು ಕೇಳಿ ತಿಳಿದಿದ್ದಳು. ರಶ್ಯವನ್ನು ನೋಡಿ, ಭಾರತ ದೇಶಕ್ಕೆ ಹೋಗುವ ಯಾವುದಾದರೂ ಹಡಗದ ಮೇಲೆ ಕೆಲಸ ಹುಡುಕಬೇಕೆಂದು ಮಾತ್ರ ಮನಸ್ಸಾಯಿತು.

ಆದರೆ ಭಾರತಕ್ಕೆ ಹೋಗುವ ಸುಸಂಧರ್ಭವೇ ಅವಳಿಗೆ ದೊರಕದಾಯಿತು. ಇಂತಹ ಸಾಮ್ರಾಜ್ಯವಾದ ವಿರೋಧಿಯನ್ನು ಭಾರತಕ್ಕೆ ಬರಲು ಬಿಟ್ಟಾರೆ? ಎಗ್ನೆಸ್ ಸ್ಮೆಡ್ಲೆಯು ಭಾರತಕ್ಕೆ ಬರಲೇ ಇಲ್ಲ. ಆದರೆ ಭಾರತೀಯನೊಬ್ಬನನ್ನು ಮದುವೆಯಾದಳು. ಸರೋಜಿನಿ ದೇವಿಯವರ ತಮ್ಮನಾದ ವಿರೇಂದ್ರನಾಥ ಚಟ್ಟೋಪಾಧ್ಯಾಯನೇ ವೀರ ಸ್ಮೆಡ್ಲೆಯ ಪತಿಯಾದನು.

"ನಾನು ಬರ್ಲಿನಿನಲ್ಲಿ ಪ್ರಥಮ ಭೇಟಿಯಾದ ವ್ಯಕ್ತಿ ವಿರೇಂದ್ರನಾಥ ಚಟ್ಟೋಪಾಧ್ಯಾಯ— ಭಾರತ ಕ್ರಾಂತಿಕಾರ ಮುಖಂಡನು. ಅವನ ತೇಜಸ್ಸೂ, ಚಟುವಟಿಕೆ ಪೂರ್ಣ ಜೀವನವೂ ನನ್ನನ್ನು ಆಕರ್ಷಿಸಿತು. ಸ್ವಲ್ಪ ಸಮಯದೊಳಗೆ ನಾನು ಅವನೊಡನೆ ವಿವಾಹ ಸಂಬಂಧ ಬೆಳೆಸಿದೆ. ನಾನೂನು ಬದ್ಧ ವಿವಾಹವಲ್ಲ. ಆದರೆ ನಾನು ಅವನ ಹೆಸರು ನನ್ನ ಹೆಸರಿಗೆ ಜೋಡಿಸಿದೆ, ಮತ್ತು ಅವನ ಹೆಂಡತಿಯೆಂದು ಪರಿಗಣಿಸಲ್ಪಟ್ಟೆ.

"ವಿರೇಂದ್ರನನ್ನು ನಾನು ಪ್ರೀತಿಸುತ್ತಿದ್ದೆನೊ ಇಲ್ಲವೊ ನನಗೆ ತಿಳಿಯದು. ಆದರೆ ನಾನೆಲ್ಲಿ ಇದ್ದರೂ ಅವನೇ ನನ್ನ ಮನೋ ಸಾಮ್ರಾಜ್ಯದಲ್ಲಿ ನೆಲೆಸುತ್ತಿದ್ದನು. . . . ದೃಷ್ಟಿಯಿಂದ ಮಾತ್ರ ನಾನವನನ್ನು ಸ್ವಲ್ಪ ತಿರಸ್ಕರಿಸುತ್ತಿದ್ದೆ. ಆದರೂ "ಅವನು ಸಂಕಷ್ಟದಲ್ಲಿದ್ದರೆ ಅವನನ್ನು ರಕ್ಷಿಸಲು ಒಂದೇ ಕಾಲಿನಲ್ಲಿ ವಿಶ್ವವನ್ನೇ ಬೇಕಾದರೆ ಸುತ್ತಿ ಬರಲು ಸಿದ್ಧಳಿರುವೆನು" ಹೀಗೆಂದು

(೭ನೇ ಪುಟಕ್ಕೆ ಮುಂದುವರಿದಿದೆ)

ಕ್ಷಮಾ ವೀರಸ್ಯ ಲಕ್ಷಣಂ

ಪಾಪವನ್ನು ನಾವು ದ್ವೇಷಿಸಬೇಕು, ಪಾಪಿಯನ್ನಲ್ಲ

ಈ ವಿಚಾರದಲ್ಲಿ ದೃಷ್ಟಾಂತವಾಗಿ ಗಾಂಧೀಜಿಯವರ ಜೀವನದ ಕೆಲವು ಘಟನೆಗಳು ಈ ಕೆಳಗೆ ವಿವರಿಸಲಾಗಿವೆ. ಗೀತೆಯನ್ನು ಸರಿಯಾಗಿ ಮನನಮಾಡಿ ಅದನ್ನೇ ಮಾರ್ಗದರ್ಶಕವಾಗಿ ಸ್ವೀಕರಿಸಿದ ಗಾಂಧೀಜಿಯವರು, ಗೀತೆಯ 'ಅನಾಸಕ್ತಿಯೋಗ'ದ ಆಚರಣೆಯನ್ನು ತನ್ನ ಜೀವನದಲ್ಲಿ ಕೈಗೊಂಡು, ಆ ಯೋಗದ ಶ್ರೇಷ್ಠತೆಯ ಕುರಿತು, ಜಗತ್ತಿಗೆ ದಿನನಿತ್ಯ ಸಾರುತ್ತಿರುವರು. ಈ ಕೆಳಗಿನ ಘಟನೆಗಳನ್ನು ಗಾಂಧೀಜಿಯವರೊಡನೆ ಬಹಳ ವರ್ಷಗಳ ಸಮಯ ಕಳೆತು, ಅವರ ಅತ್ಯಂತ ಆಪ್ತರಾಗಿ ಗಾಂಧೀಜಿಯವರ ಕುರಿತು ಸಂಪೂರ್ಣ ಜ್ಞಾನಹೊಂದಿದ ಘನಶ್ಯಾಮದಾಸ್ ಬಿರ್ಲಾರವರು ಬರೆದ "ಬಾಪೂ" ಎಂಬ ಪುಸ್ತಕದಿಂದ ಆರಿಸಿ ತೆಗೆದುದಾಗಿರುತ್ತದೆ.

ಅಹಿಂಸಾತ್ಮಕತೆಯ ಪ್ರಾಶಸ್ತ್ಯವು ಗಾಂಧೀಜಿಯವರಲ್ಲಿ ಯಾವಾಗ ಆಯಿತು, ಸಾಮಾಜಿಕದಲ್ಲಿ, ಸಮಾಜಕಾರಣದಲ್ಲಿ, ಪರಸ್ಪರ ವೈಯಕ್ತಿಕ ವ್ಯವಹಾರದಲ್ಲಿ ಈ ತತ್ವದ ಪ್ರಯೋಗವನ್ನು ಅವರು ಯಾವಾಗ ಆರಂಭಿಸಿದರು, ಇದರ ಗುಣ ಹಾಗೂ ಮಹತ್ವದ ಬಗ್ಗೆ ಅವರ ಶ್ರದ್ಧೆ ಯಾವಾಗ ದೃಢವಾಯಿತು, ಇದನ್ನು ಹೇಳುವುದು ಕಷ್ಟಸಾಧ್ಯವಾದುದು. ಈಗ ನಮ್ಮಲ್ಲಿರುವ ಎಷ್ಟೋ ಗುಣಗಳು ಒಮ್ಮೆಲೆ ಉದ್ಭೂತವಾದವೆಂದು ನಮಗೆ ತೋರಿದರೂ ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಅವು ನಿಜವಾಗಿ ಮೆಲ್ಲಮೆಲ್ಲನೆ ಬೆಳೆಯುತ್ತ ಬಂದುವುಗಳೆಂದು ಕಂಡುಬರುವುದು. ಎಷ್ಟೋ ಗುಣಗಳ ಬೀಜಗಳು ಮೊದಲು ನಮ್ಮಲ್ಲಿ ಹುದುಗಿಕೊಂಡಿದ್ದು ಮುಂದೆ ಕ್ರಮವಾಗಿ ಮೊಳೆತು ಬೆಳೆಯುವವು. ದುರ್ಗುಣಗಳ ಹಾಗೂ ದುಷ್ಟಪ್ರವೃತ್ತಿಗಳ ಕಥೆಯಾದರೂ ಹೀಗೆಯೇ ಇರುವುದು.

ಚಿಕ್ಕಂದಿನಿಂದಲೆ ಗಾಂಧೀಜಿಯವರ ಮನಸ್ಸಿನ ಮೇಲೆ ಸತ್ಯ ಮತ್ತು ಅಹಿಂಸೆಯ ಅಚ್ಚಳಿಯದ ಚಿತ್ರವು ಒಡಮೂಡಿತ್ತೆಂಬುದನ್ನು ನಾವು ಬಲ್ಲೆವು. ಮಾಂಸಾಹಾರವು ಸಮಾಜಕ್ಕೆ ಹಿತಕರವು ಎಂಬ ತಿಳುವಳಿಕೆಯ ಮೂಲಕ, ಒಬ್ಬ ಗೆಳೆಯನ ಸಂಗತಿಯಿಂದ ಅಧರ್ಮವೆ ಧರ್ಮವೆಂದು ಮನ್ನಿಸಿ ಗಾಂಧೀಜಿಯವರು ತೀರ ಚಿಕ್ಕಂದಿನಲ್ಲಿ ಮಾಂಸವನ್ನು ತಿನ್ನಲಾರಂಭಿಸಿದರು. ಇದು ಅವರ ಮನಸ್ಸಿಗೆ ಕಟಿಯಲಾರಂಭಿಸಿತು. ಯಾಕೆಂದರೆ ಈ ಕೆಲಸವನ್ನು ಅವರು ಕಚ್ಚಿಮುಚ್ಚಿ ಮಾಡುತ್ತಿದ್ದರು. ಮಾಂಸಾಶನವು ಮೂಲತಃ ಅವರಿಗೆ ಅಷ್ಟೊಂದು ಸೇರುತ್ತಿರಲಿಲ್ಲ ಹಾಗೂ, ಆ ಅವರ ಕೆಲಸದಲ್ಲಿ ಅಸತ್ಯವು ತುಂಬಿತ್ತು. ಈ ಒಂದು ಕೆಡುಕನ್ನು ಬೆಂಬತ್ತಿ ಇನ್ನೊಂದು ಬಂದಿತು. ಕೆಡುಕಿನ ಮಾತೇ ಹಾಗೆ ಮಾಂಸವಾದ ಬಳಿಕ ತಂಬಾಕಿನ ಮೇಲೆ ಮನಸ್ಸು ಹೋಯಿತು. ಅದನ್ನು ಕೊಳ್ಳಲು ಕಾಸು ಬೇಕು. ಅದಕ್ಕಾಗಿ ಮನೆಯಲ್ಲಿ ಕಳವು ಮಾಡಬೇಕಾಯಿತು. ಬರಬರುತ್ತ ಇದೆಲ್ಲ ಗಾಂಧೀಜಿಯವರಿಗೆ ಅಸಹ್ಯವಾಯಿತು. ತಂದೆಯವರೆದುರು ಇದನೆಲ್ಲ ಒಪ್ಪಿ ಅವರಿಂದ ಕ್ಷಮೆ ಬೇಡಬೇಕೆಂದು ಅವರು ನಿರ್ಧರಿಸಿದರು. ತಂದೆಯವರ ಮನಸಿಗೆ ಎಷ್ಟು ಕೆಡಕೆನಿಸುವದೋ ಏನೋ ಎಂಬ ಭಯ ಗಾಂಧೀಜಿಯವರಿಗೆ ಇತ್ತು. ಆದರೂ ಇದ್ದ ಸಂಗತಿಯನ್ನೆಲ್ಲ ಬರೆದು ಅವರು ತಂದೆಯ ಕೈಯಲ್ಲಿಟ್ಟರು. ತಂದೆಯವರು ಓದಿಕೊಂಡು ಕಣ್ಣೀರು ಸುರಿಸಲಾರಂಭಿಸಿದರು. ಗಾಂಧೀಜಿಯವರಿಗೂ ತಡೆಯುವದಾಗಲಿಲ್ಲ. ಅವರಿಗೂ ಅಳು ತುಂಬಿ ಬಂದಿತು. ಮಗನು ಇಂಥ ಕುಕರ್ಮ ಮಾಡಲೆಸಗಿದನೆಂಬ ವಿಷಾದದ ಮೂಲಕ ತಂದೆಯ ಕಣ್ಣಿನಿಂದ ಈ ದುಃಖಾಶ್ರುಗಳು ಉದುರಿದವೊ ಅಥವಾ ಅವನು ಸತ್ಯವನ್ನಾಶ್ರಯಿಸಿದನೆಂಬ ಉಬ್ಬಿನ ಮೂಲಕ ಆನಂದಾಶ್ರುಗಳುದುರಿದವೊ ಯಾರು ಹೇಳಬಲ್ಲರು? 'ನನ್ನ ಮಟ್ಟಿಗಂತೂ ಅದೊಂದು ಅಹಿಂಸೆಯ ಪಾಠವಾಗಿತ್ತು. ಆಗ ನನಗೆ ಅಹಿಂಸೆಯ ಜ್ಞಾನವಿರಲಿಲ್ಲ ಎಂಬ ಮಾತು ನಿಜ. ಆದರೆ ಅದೊಂದು ಶುದ್ಧ ಅಹಿಂಸೆಯ ಮೂಲಕ ಕೈಕೊಂಡ ಕ್ರಮವಿತ್ತು ಎಂದು ಹೇಳಬಲ್ಲೆ,' ಗಾಂಧೀಜಿಯವರು ಆ ಸಂಗತಿಯ ಬಗ್ಗೆ ಹೀಗೆ ಬರೆದಿರುವರು. 'ತಂದೆಯವರು ಮಗನನ್ನು ಪೂರ್ಣ ಕ್ಷಮಿಸಿಬಿಟ್ಟರು; ಮಗನು ಆ ವಸ್ತುಗಳನ್ನು ಪೂರ್ಣ ತ್ಯಜಿಸಿದನು. ತಂದೆ-ಮಕ್ಕಳ ಮನಸು ಹಗುರಾಯಿತು.

ಈ ಘಟನೆಯಿಂದ ಗಾಂಧೀಜಿಯವರು ಮನಸಿನಲ್ಲಿ ಯಾವ ಹೆಚ್ಚು ಕಡಿಮೆಯಾಯಿತು ಎಂಬುದನ್ನು ಯಾರೂ ಹೇಳಲಾರರು. ಆದರೆ ಅಹಿಂಸೆಯ ಬೀಜವು ಆ ಸಮಯದಲ್ಲಿ ಅಂಕುರಿಸಿತು, ಎಂದು ಹೇಳಬಹುದು. ಆಗ ಗಾಂಧೀಜಿಯವರು ತೀರ ಒಂದು ಮಗುವಿನಂತೆ ಇದ್ದರು. ಅವರು ಇಂಗ್ಲಂಡಕ್ಕೆ ಹೋಗುವ ಸಮಯದಲ್ಲಿ ದೊಡ್ಡವರಾಗಿದ್ದರು. ಅಷ್ಟೊತ್ತಿಗೆ ಅವರ ತಂದೆಯವರು ತೀರಿಕೊಂಡಿದ್ದರು. ಪರದೇಶದಲ್ಲಿ ಎಂಥ ಪ್ರಸಂಗ ಬಂದರೂ ಮದ್ಯ ಮಾಂಸಗಳನ್ನು ಸೇವಿಸಲಿಕ್ಕಿಲ್ಲ ಎಂಬ ಪ್ರತಿಜ್ಞೆಯನ್ನು ಅವರು ತಾಯಿಯ ಮುಂದೆ ಮಾಡಿಬಿಟ್ಟಿದ್ದರು. ಆದರೆ ಜಾತಿಬಾಂಧವರ ಸಮಾಧಾನವು ಇಷ್ಟರಿಂದ ಆಗಬಲ್ಲದೆ? 'ಅಲ್ಲಿ ಅವನು ಧರ್ಮಭ್ರಷ್ಟನಾಗಬಹುದು' ಎಂದು ಅವರು ಇವರನ್ನು ತಡೆದರು. 'ಅಭೋಜ್ಯ ಭೋಜನ ಮಾಡಲಿಕ್ಕಿಲ್ಲವೆಂದು ನಾನು ಪ್ರತಿಜ್ಞೆ ಮಾಡಿರುವೆನು' ಎಂದು ಗಾಂಧೀಜಿಯವರು ಹೇಳಿದರು. ಆದರೆ ಜಾತಿಬಾಂಧವರಿಗೆ ಅದರಿಂದ ಸಮಾಧಾನವಾಗಲಿಲ್ಲ. ಅವರು ಗಾಂಧೀಜಿಯವರನ್ನು ಜಾತಿಯ ಹೊರಗೆ ಇಟ್ಟರು.

ಗಾಂಧೀಜಿಯವರು ಇಂಗ್ಲಂಡಕ್ಕೆ ಹೋದರು. ತಮ್ಮ ಪ್ರತಿಜ್ಞೆಯನ್ನು ಅಕ್ಷರಶಃ ಪಾಲಿಸಿದರು. ತಿರುಗಿ ಬಂದೊಡನೆ ಬಹಿಷ್ಕಾರವು ಅವರೆದುರು ನಿಂತಿತು. 'ಆದರೆ ನಾನು ಪಂಚರನ್ನು ಕುರಿತು ದ್ವೇಷ ಭಾವನೆಯನ್ನೂ ತಾಳಲಿಲ್ಲ, ಜಾತಿಯಲ್ಲಿ ಸೇರಲು ಯತ್ನವನ್ನೂ ಮಾಡಲಿಲ್ಲ. ನಾನು ಬಹಿಷ್ಕಾರದ ಎಲ್ಲ ನಿಯಮಗಳನ್ನು ಸರಿಯಾಗಿ ಪಾಲಿಸುತ್ತ ಬಂದೆನು. ಜಾತಿಬಾಂಧವರೊಡನೆ ಅನ್ನೋದಕ ವ್ಯವಹಾರವನ್ನು ನಾನಾಗಿ ಬಿಟ್ಟು ಬಿಟ್ಟೆನು. ಮಾವನ ಹಾಗೂ ಬೀಗರ ಮನೆಯವರು ನಾನು ಅವರಲ್ಲಿ ಉಣಬೇಕು ತಿನಬೇಕು ಎಂದು ಇಚ್ಛಿಸುತ್ತಿದ್ದರು. ಆದರೆ ಮುಚ್ಚುಮರೆಯಿಂದ ನಾನು ಹಾಗೆ ಮಾಡಬೇಕು ಎಂದು ಅವರ ಮನೀಷೆ! ನನಗೆ ಅದು ಸಲ್ಲದ ಮಾತು. ಅದುದರಿಂದ ಈ ಸಮೀಪದವರಲ್ಲಿ ಕೂಡ ನಾನು ನೀರು ಕುಡಿಯುವುದನ್ನು ಸಹ ಬಿಟ್ಟುಬಿಟ್ಟೆನು. ಈ ನನ್ನ ಕ್ರಮದ ಪರಿಣಾಮವೇನಾಯಿತೆಂದರೆ, ಅವರು ನನ್ನನ್ನು ಜಾತಿಯ ಹೊರಗೆ ಇಟ್ಟದ್ದೇನೋ ನಿಜ. ಆದರೆ ನನ್ನ ಬಗ್ಗೆ ಅವರಲ್ಲಿ ಪ್ರೀತಿ ಹೆಚ್ಚಾಯಿತು. ನನ್ನ ಇತರ ಕಾರ್ಯಗಳಲ್ಲಿ ಅವರು ಬಹಳ ಸಹಾಯ ಮಾಡಿದರು. ಈ ಶುಭ ಫಲವು ನನ್ನ ಅಹಿಂಸೆಯ ಪರಿಣಾಮವು ಎಂದು ನನ್ನ ನಂಬಿಗೆ.' ಹೀಗೆ ಆ ಬಗ್ಗೆ ಗಾಂಧೀಜಿಯವರ ಅಂಬೋಣವಿದೆ.

ಗಾಂಧೀಜಿಯವರು ಆಫ್ರಿಕೆಯಲ್ಲಿ ಸಮಸಮೀಪ ಇಪ್ಪತ್ತು ವರ್ಷ ಕಳೆದರು. ಮೊದಲು ವಕೀಲರೆಂದು ಒಂದು ಸಾಧಾರಣ ಕೆಲಸಕ್ಕಾಗಿ ಹೋದರು. ಆದರೆ ಅಲ್ಲಿ ಕಪ್ಪು ಜನರ ಬಗ್ಗೆ ಇದ್ದ ಬಿಳಿಯರ ಹೇಯಭಾವ, ಬಿಳಿಯರ ಜೋರು ಜುಲುಮೆ ಇವುಗಳನ್ನು ನೋಡಿ ತಮ್ಮ ಸಮಾಜದ ಸೇವೆಗಾಗಿ ಅವರು ಹಲವು ದಿನ ಅಲ್ಲಿ ಇದ್ದುಬಿಟ್ಟರು. ಮುಂದೆ ಹಿಂದೀಯರು ಅವರನ್ನು ಅಲ್ಲಿಂದ ಹೋಗಗೊಡಲಿಲ್ಲ ಹಾಗೂ ಒಂದೊಂದಾಗಿ ಇಪ್ಪತ್ತೊಂದು ವರುಷಗಳು ಅಲ್ಲಿಯೆ ಕಳೆದು ಹೋದವು. ಈ ಅವಧಿಯಲ್ಲಿ ಅವರು ಸಾಕಷ್ಟು ಹೋರಾಡಬೇಕಾಯಿತು ಆಗ ಅಹಿಂಸೆಯ ದೃಢವಾದ ಅವರ ಶ್ರದ್ಧೆ ಚಿರಸ್ಥಿರವಾಯಿತು. ಅಲ್ಲಿ ದೊಡ್ಡ ಪ್ರಮಾಣದಲ್ಲಿ ಅಹಿಂಸೆಯ ಪ್ರಯೋಗಗಳನ್ನು ಅವರು ಮಾಡಿದರು ಅದರಲ್ಲಿ ಅವರಿಗೆ ಸಾಫಲ್ಯ ದೊರೆಯಿತು. ವಿರುದ್ಧ ಪಕ್ಷದವರ ಹೃದಯಪರಿವರ್ತನೆ ಆಯಿತು ಯಾವ ಜನರಲ್ ಸ್ಮಟ್ಸರೊಡನೆ ಅವರು ಹೋರಾಟ ಹೂಡಿದ್ದರೊ ಅವರು ಕೊನೆಗೆ ಅವರ ಮಿತ್ರರಾದರು ಎರಡನೆ ದುಂಡುಮೇಜಿನ ಪರಿಷತ್ತಿಗಾಗಿ ಗಾಂಧೀಜಿಯವರು ಲಂಡನಕ್ಕೆ ಹೋದಾಗ ಅವರು ಸ್ಮಟ್ಸರಲ್ಲಿಯೆ ಇದ್ದರು ನನ್ನಿಂದ ಏನಾದರೂ ಕೆಲಸವಾಗುವಂತಿದ್ದರೆ ಅವಶ್ಯವಾಗಿ ನನ್ನನ್ನು ಸಂಕೋಚವಿಲ್ಲದೆ ಯೋಜಿಸಬೇಕೆಂದು ಅವರು ಹೇಳಿ ಕಳಿಸಿದರು ಗಾಂಧೀಜಿಯವರು ಕೆಲವುಟ್ಟಿಗೆ ಅವರ ಉಪಯೋಗವನ್ನು ಮಾಡಿಕೊಂಡರು

ಅಹಿಂಸಾತ್ಮಕ ಆಚರಣೆಯಿಂದ ಶತ್ರುಗಳು ಹೇಗೆ ಮಿತ್ರರಾಗುವರು ಎಂಬ ಬಗ್ಗೆ ಉಜ್ವಲ ಉದಾಹರಣೆಗಳು ಬೇಕಿದ್ದರೆ ಅಂಥ ಉದಾಹರಣೆಗಳು ಗಾಂಧೀಜಿಯವರ ಈ ಇಪ್ಪತ್ತೊಂದು ವರ್ಷದ ತಪಶ್ಚರ್ಯೆಯ ಅವಧಿಯಲ್ಲಿ ಸಾಕಷ್ಟು ದೊರೆಯುವುವು ಆಫ್ರಿಕೆಯಲ್ಲಿ ಗಾಂಧೀಯವರು ಅತ್ಯಂತ ಸೂಕ್ಷ್ಮರೀತಿಯಿಂದ ಅಹಿಂಸೆಯ ಆಚರಣೆ ಮಾಡಿದರು, ಹೊಡೆತ ತಿಂದರು, ಬೈಸಿಕೊಂಡರು, ಸೆರೆಯಲ್ಲಿ ಕುಳಿತರು, ಎಲ್ಲ ಪೀಡೆಗಳನ್ನು ಸಹಿಸಿದರು ಆದರೂ ವಿರೋಧಿಗಳನ್ನು ಕುರಿತು ಎಂದೂ ಸಿಟ್ಟಿಗೇಳಲಿಲ್ಲ, ತಮ್ಮ ಧೈರ್ಯವನ್ನು ಬಿಡಲಿಲ್ಲ, ಎದೆಗುಂದಲಿಲ್ಲ. ಕೊನೆಯವರೆಗೂ ಕ್ರೋಧವನ್ನು ತ್ಯಜಿಸಿ ಹೋರಾಡುತ್ತ ಸಾಗಿದರು ಪರಿಣಾಮತಃ ಅವರಿಗೆ ಫಲವು ದೊರೆಯಿತು ಕಾರಣ, 'ಅಹಿಂಸಾಯಾಂ ತತ್ಸನ್ನಿಧೌ ವೈರತ್ಯಾಗಃ' (ಅಹಿಂಸೆಯ ಪ್ರತಿಷ್ಠಾಪನೆಯಾದಲ್ಲಿ ಅಹಿಂಸಕನನ್ನು ಕುರಿತು ಎಲ್ಲರೂ ತಮ್ಮ ವೈರಭಾವವನ್ನು ಬಿಟ್ಟುಬಿಡುವರು) ಎಂದು ಶಾಸ್ತ್ರವಚನವಿರುವದು.

ಆಫ್ರಿಕೆಯಲ್ಲಿ ಕಪ್ಪು ಹಾಗೂ ಬಿಳಿಯರ ಭೇದವು ಬಹಳ ವ್ಯಾಪಿಸಿತ್ತು. ಹಿಂದೀಯರು ಕಪ್ಪೆಂದೆನಿಸಲಾಗಿದ್ದರು. ಕಪ್ಪು ಜನರು ಬೀದಿಯ ಬದಿಯ ಫರಸಿಯ ಮೇಲೆ ಸಹ ನಡೆಯಕೂಡದೆಂಬ ನಿರ್ಬಂಧವಿತ್ತು. ರಾತ್ರಿ ಒಂಬತ್ತು ವೇಳೆಯ ನಂತರ ಅವರು ಮನೆಯಿಂದ ಹೊರಬೀಳುವದು ನಿಷಿದ್ಧವಿತ್ತು. ಹೊರಗೆ ಅಡ್ಡಾಡುವ ಚಟವು ಗಾಂಧೀಜಿಯವರಿಗೆ ಸಾಕಷ್ಟು ಇತ್ತು. ವೇಳೆ ಅವೇಳೆ ನೋಡದೆ ಹೊರಗೆ ಹೋಗುವ ಪ್ರಸಂಗಗಳೂ ಅವರಿಗೆ ಬರುತಿದ್ದವು. ಒಂದು ದಿನ ಪ್ರೆಸಿಡೆಂಟ ಕ್ರೂಗರರ ಮನೆ ಎದುರಿನಿಂದ ಅವರು ಸಾಗಿದ್ದರು. ಆಗ ಅಕಸ್ಮಾತ್ತಾಗಿ ಪಹರಿಯು ಇವರನ್ನು ನೂಕಿ ಫರಸಿಯ ಕೆಳಗೆ ಕೆಡವಿದನು. ಸಾಲದೆ ಅವರಿಗೊಂದು ಲತ್ತೆಯನ್ನು ಕೊಟ್ಟನು. ಸುಮ್ಮನೆ ಹೊಡೆತ ತಿಂದು ಗಾಂಧೀಜಿಯವರು ಎದ್ದುನಿಂತರು. ಇವರಿಗೆ ಎಳ್ಳಷ್ಟೂ ಸಿಟ್ಟು ಬರಲಿಲ್ಲ. ಹತ್ತಿರವೆ ಹೋಗುತ್ತಿದ್ದ ಇವರೊಬ್ಬ ಬಿಳಿಯ ಮಿತ್ರನು ಇದನೆಲ್ಲ ನೋಡಿದನು ಅವನಿಗೆ ಬ್ರಹ್ಮಾಂಡ ಸಿಟ್ಟು ಬಂದಿತು. ಅವನು ಅಂದದ್ದು, 'ಗಾಂಧೀಯವರೆ, ನಾನು ಎಲ್ಲ ಸಂಗತಿಗಳನ್ನು ಪ್ರತ್ಯಕ್ಷ ನೋಡಿದ್ದೇನೆ. ಕೋರ್ಟಿನಲ್ಲಿ ನೀವು ಖಟ್ಲೇ ನಡೆಸಿರಿ. ನಾನು ಸಾಕ್ಷಿ ಹೇಳುತ್ತೇನೆ ನಿಮ್ಮೊಡನೆ ಈ ಪಹರಿಯು ಇಷ್ಟು ದುಷ್ಟರೀತಿ ನಡೆದುಕೊಂಡ ಬಗ್ಗೆ ನನಗೆ ಅತ್ಯಂತ ವಿಷಾದವಾಗಿರುವದು.' ಗಾಂಧೀಜಿಯವರು ಉತ್ತರ ಕೊಟ್ಟದ್ದು, 'ನೀವು ವಿಷಾದಿಸಬೇಡಿ ವ್ಯಕ್ತಿಗತ ಅನ್ಯಾಯದ ಪ್ರತಿಕಾರಕ್ಕಾಗಿ ಕೋರ್ಟುಕಚೇರಿಗಳ ಕಟ್ಟೆ ಏರಿ ಅವುಗಳ ಸಹಾಯ ಪಡೆಯಬಾರದೆಂದು ನನ್ನ ನಿಯಮವಿದೆ. ಪಾಪ ಈ ಮೂರ್ಖನ ತಪ್ಪೇನು? ಇಲ್ಲಿಯ ವಾತಾವರಣವೆ ಹಾಗಿದೆ. ಇವನ ಮೇಲೆ ಖಟ್ಲೇ ನಡಿಸುವದು ನನಗೆ ಇಷ್ಟವಿಲ್ಲ' ಇದೆಲ್ಲ ಆದನಂತರ ಆ ಪಹರಿಯು ಗಾಂಧೀಜಿಯವರ ಕ್ಷಮೆ ಬೇಡಿದನು!

ಹೀಗೆ ಅನೇಕ ಘಟನೆಗಳನ್ನು ಹೇಳಬಹುದು. ನಡುವೆ ಒಮ್ಮೆ ಗಾಂಧೀಜಿಯವರು ಸ್ವದೇಶಕ್ಕೆ ಬಂದು ಮರಳಿ ಆಫ್ರಿಕಾಕ್ಕೆ ಹೋದರು ಆಗ ಇವರನ್ನು ಕುರಿತು ಅನೇಕ ಸುಳ್ಳು ಸೊಟ್ಟು ಮಾತುಗಳನ್ನು ಬರೆದು ಬಿಳಿಯ ವೃತ್ತಪತ್ರಕಾರರು ಅಲ್ಲಿಯ ಜನರನ್ನು ಇವರ ವಿರುದ್ಧ ಉದ್ರೇಕಗೊಳಿಸಿದರು ಹಡಗದಿಂದ ಗಾಂಧೀಜಿಯವರು ಇಳಿಯತಕ್ಕವರಿದ್ದರು. ಆಗ ಬಿಳಿಜನರು ಇವರ ವಿರುದ್ಧ ಭಾವಪ್ರದರ್ಶನವನ್ನು ನಡೆಸಿದರು. ಈಗ ಇಳಿದರೆ ಭಯವಿದೆ, ರಾತ್ರಿ ಇಳಿಯುವದು ವಾಸಿ, ಎಂದು ಇವರ ಮಿತ್ರರು ಹಾಗೂ ಪೋಲೀಸರು ಹೇಳಿದರು. ಹಡಗದ ಕಪ್ತಾನನು ಕೇಳಿದ್ದು, 'ಬಿಳಿಯರು ನಿಮ್ಮನ್ನು ಥಳಿಸಿದರೆ ನೀವು ಅವರನ್ನು ಹೇಗೆ ಪ್ರತಿಕರಿಸುವಿರಿ?' ಇದಕ್ಕೆ ಗಾಂಧೀಜಿಯವರು ಅಂದದ್ದು, 'ನಾನು ಅವರನ್ನು ಕ್ಷಮಿಸಿಬಿಡುವಂತೆ ದೇವರು ನನಗೆ ಬುದ್ಧಿ ಹಾಗೂ ಶಕ್ತಿಯನ್ನು ದಯಪಾಲಿಸುವನು ಅವರು ಅಜ್ಞಾನಕ್ಕೀಡಾಗಿರುವರು. ಆದುದರಿಂದ ಅವರ ಬಗ್ಗೆ ನನಗೆ ಕ್ರೋಧವಿಲ್ಲ. ನಾನು ಕೆಡುಕನೆಂದು ಅವರು ನಿಜವಾಗಿ ಭಾವಿಸಿರುವರು ಅಂದ ಬಳಿಕ ಅವರ ಮೇಲೆ ನಾನು ಹೇಗೆ ಸಿಟ್ಟಾಗಲಿ?'

ಗಾಂಧೀಜಿಯವರು ಕೊನೆಗೆ ಹಡಗದಿಂದ ಇಳಿದರು. ಒಬ್ಬ ಬಿಳಿಯ ಮಿತ್ರನು ಇವರ ರಕ್ಷಣಕ್ಕಾಗಿ ಇವರೊಡನೆ ಸಾಗಿದನು. ಕಾಲುನಡಿಗೆಯಿಂದಲೆ ವೆ

(ಮುಂ: ಪುಟಕ್ಕೆ ಮುಂದುವರಿದಿದೆ)

ಯುದ್ಧ ಪರಿಸ್ಥಿತಿ

ಫ್ರಾನ್ಸಿನಿಂದ ಜರ್ಮನರ ಪಲಾಯನ

ದ್ವಿತೀಯ ರಂಗವು ಒಂದು ಮಹಾ ಅದ್ಭುತದ ವಿಷಯವೆಂದು ಸ್ವಲ್ಪ ಸಮಯದ ಹಿಂದಿನ ಭಾವನೆಯಾಗಿದ್ದಿತು. ಆದರೆ ಈಗ ಅದೊಂದು ಸುಲಭಸಾಧ್ಯವಾದ ವಿಷಯವೆಂದು ಮಿತ್ರರು ಕಾರ್ಯಕಾ ವ್ಯಕ್ತವಾಡಿರುವರು. ಫ್ರಾನ್ಸಿನಲ್ಲಿಳಿದ ಮಿತ್ರ ದಂಡುಗಳು ಕೆಲವೇ ದಿವಸಗಳ ತಮ್ಮ ಪರಿಶ್ರಮದ ಫಲಿತಾಂಶವಾಗಿ, ತುಂಬಾ ಯಶಸ್ಸನ್ನು ಪಡೆದಿವೆ. ಅಮೇರಿಕನ್ ದಂಡುಗಳು ಈಗ ಪೆರಿಸ್ ನಗರವನ್ನು ಸೇರಿಬಿಟ್ಟಿವೆ. ಆ ವಿಶಾಲ ನಗರದಲ್ಲಿ ಪ್ರಸರಿಸಿಕೊಂಡಿದ್ದ ಜರ್ಮನರನ್ನು ಕ್ರಮಶಃ ಹೊರಗೆ ಅಟ್ಟುತ್ತಿದ್ದಾರೆ. ಮಿತ್ರರ-ಮತ್ತು ಜರ್ಮನರ ಈ ಕದನದಲ್ಲಿ ಇವತ್ತಿಗೆ ಅನೇಕ ಶತಮಾನಗಳಿಂದ ಬೆಳೆದು ಬಂದು, ಜಗತ್ತಿನಲ್ಲಿ ವಿಶೇಷವಾದ ನಗರವೆಂದು ಪರಿಗಣಿಸಲ್ಪಟ್ಟ ಪೆರಿಸ್ ನಗರದ ಧ್ವಂಸವಾಗುತ್ತಿದೆ ಹಿಂದೆ ಸರಿಯುತ್ತಿದ್ದ ಜರ್ಮನ್ ದಂಡುಗಳು, ತಾವು ತ್ಯಜಿಸಬೇಕಾಗಿ ಬಂದ ಪ್ರದೇಶಗಳ ಮೇಲೆ ಸರ್ವನಾಶವನ್ನು ಥೀರುತ್ತಾ ಪಲಾಯನ ಮಾಡುತ್ತಿರುವರು.

ದಕ್ಷಿಣ ಫ್ರಾನ್ಸಿನ ಕರಾವಳಿಯಲ್ಲಿ ಇಳಿದ ಮಿತ್ರ ದಂಡುಗಳಿಗೆ ಜರ್ಮನರ ಯಾವ ತಡೆಯೂ ಇಲ್ಲ. ಫ್ರಾನ್ಸಿನಲ್ಲಿ ಈಗ ನಡೆಯುತ್ತಿರುವ ಕದನವನ್ನು ನೋಡಿದರೆ, ಮಿತ್ರರ ದ್ವಿತೀಯ ರಂಗವನ್ನು ಎದುರಿಸುವ ಕುರಿತು ಸಿದ್ಧತೆಗಳನ್ನು ಮಾಡಲು, ಜರ್ಮನರಿಗೆ ಸರಿಯಾದ ಪೂರ್ವ ಜ್ಞಾನವು ದೊರಕಿರಲಿಲ್ಲವೆಂಬ ವಿಷಯವು ವ್ಯಕ್ತವಾಗುತ್ತದೆ. ದ್ವಿತೀಯ ರಂಗವು ಯಾವ ಕಡೆಯಿಂದ ಪ್ರಾರಂಭವಾಗುವುದು-ಯಾವಾಗ ಪ್ರಾರಂಭವಾಗುವುದು- ಈ ಕುರಿತು ಮಿತ್ರರ ಸಿದ್ಧತೆಗಳು ಬಹಳ ರಹಸ್ಯದಲ್ಲಿ ನಡೆದಿದ್ದವು ಆದರೆ ಮಿತ್ರರಿನ್ನು ಅನೇಕ ಕ್ಷೇತ್ರಗಳಲ್ಲಿ ಮಹಾ ಮಹಾ ಕಾರ್ಯಗಳನ್ನು ಕೈಕೊಳ್ಳಲಿದ್ದಾರೆ ಎಂದು ಬ್ರಿಟಿಷ್ ಪ್ರಧಾನ ಮಿ। ಚರ್ಚಿಲ್ಲರಿಂದ, ತೆಹರಾನಿನ ಪರಿಷದದ ನಂತರ ಸಾರಲಾಗಿದ್ದು, ಜರ್ಮನರು ಕೆಲವೊಂದು ಸಿದ್ಧತೆಗಳನ್ನು ಮಾಡಿ ಮಿತ್ರರನ್ನು ಎದುರುಕಾಯುತ್ತಿದ್ದರು ಆದರೆ ಜರ್ಮನರ ನಿರೀಕ್ಷೆ ಒಂದೆಡೆ,- ಮಿತ್ರರ ಆಕ್ರಮಣ ಬೇರೊಂದೆಡೆ, ಹೀಗಾಗಿ, ಜರ್ಮನರಿಗೆ ಅತ್ಯಂತ ಪ್ರತಿಕೂಲ ಪರಿಸ್ಥಿತಿಯು ಉಂಟಾಗಿರುತ್ತದೆ ಜರ್ಮನರು ಫ್ರಾನ್ಸನ್ನು ಪೂರ್ಣ ತ್ಯಜಿಸಿ ಪಲಾಯನ ಮಾಡಬೇಕಾದ ಪರಿಸ್ಥಿತಿಯು ಉಂಟಾಗಿರುತ್ತದೆ.

ರೊಮೆಲ್ಲ ಮೊದಲಾದ ಜರ್ಮನ್ ಸೇನಾನಾಯಕರಿಂದ ಮಾಡಲಾದ ಮಹತ್ತಾದ ಯತ್ನಗಳೂ, ನೀರಿನಲ್ಲಿ ಹೋಮ ಮಾಡಿದಂತಾಗಿದೆ. ಕೆನೆಡಿಯನ್ ಮತ್ತು ಬ್ರಿಟಿಷ್ ದಂಡುಗಳಿಗೆ ಅವರಿಳಿದ ಪ್ರದೇಶಗಳಲ್ಲಿ ಜರ್ಮನರ ತಡೆಯು ವಿಶೇಷತರದ್ದೇ ಆಗಿದ್ದಾಗ್ಯೂ, ಆ ದಂಡುಗಳು ಬಹಳ ಹುರುಪಿನಿಂದ ಕಾದಾಡುತ್ತಿವೆ. ಈ ಪ್ರದೇಶಗಳಲ್ಲಿ ಮಿತ್ರರ ಪ್ರಗತಿಯು ನಿಧಾನವಾಗಿ ನಡೆಯುತ್ತಿರುವುದಾದರೂ, ಬ್ರಿಟಿಷ್ ಮತ್ತು ಕೆನೆಡಿಯನ್ ದಂಡುಗಳು ಮುಂದೆ ಸಾಗುತ್ತಿದ್ದು, ಅವರು ಸದ್ಯದಲ್ಲೇ ಪೆರಿಸ್ ನಗರದಲ್ಲಿ ಅಮೇರಿಕನ್ ದಂಡಿನೊಡನೆ ಸೇರುವುದು ಖಂಡಿತ. ಜರ್ಮನರು ಈಗ ಮಿತ್ರರನ್ನು ತಡೆಯುತ್ತಿರುವುದು-ಫ್ರಾನ್ಸನ್ನು ರಕ್ಷಿಸಿಕೊಳ್ಳುವ ದೃಷ್ಟಿಯಿಂದಲ್ಲ, ಮಿತ್ರರ ದಂಡುಗಳ ಎಡೆಯಲ್ಲಿ ಸಿಕ್ಕಿ ಬೀಳಬಹುದಾದ ಜರ್ಮನ್ ದಂಡುಗಳನ್ನು ಸುರಕ್ಷಿತವಾಗಿ ಹಿಂತೆಗೆಯಲು, ಸಾಕಷ್ಟು ಸಮಯವನ್ನು ದೊರಕಿಸಿಕೊಳ್ಳುವ ದೃಷ್ಟಿಯಿಂದ ಅವರು ಕಾದಾಡುತ್ತಿರುವರಾಗಿ ಕಾಣಬರುತ್ತದೆ. ಜರ್ಮನರು ಫ್ರಾನ್ಸನ್ನು ತ್ಯಜಿಸಿ, ತಮ್ಮ ದೇಶದ ಗಡಿಯಾದ ಸಿಗ್‌ಫ್ರಿಡ್ ಲ್ಯಾನಿನವರೆಗೆ ಹಿಂದೆ ನಡೆಯುವುದೆ, ಅವರ ಉದ್ದೇಶವಿದ್ದಂತೆ ಕಾಣುತ್ತದೆ

ಸ್ವದೇಶ ಪ್ರೇಮಿ ಫ್ರೆಂಚರು, ತಮ್ಮ ದೇಶವನ್ನು ಜರ್ಮನರ ಬಂಧನದಿಂದ ವಿಮುಕ್ತಗೊಳಿಸಲು, ಮಿತ್ರರೊಡನೆ ಸಹಕರಿಸಿ, ಪರಿಶ್ರಮಿಸುತ್ತಿರುವರು. ಮಿತ್ರರಿಗೂ-ಜರ್ಮನರಿಗೂ ನಡುವೆ ಕದನ ನಡೆಯುವ ಪ್ರದೇಶಗಳಲ್ಲಿ ಫ್ರೆಂಚರು ಜರ್ಮನರ ಕೈಗಳಲ್ಲಿ ಅನೇಕ ಸಂಕಟಗಳಿಗೆ ಒಳಗಾಗಿರುವರು ಹೆಬ್ಬುಲಿಯಂತೆ ಧಾವಿಸಿ ಬರುತ್ತಿರುವ ಮಿತ್ರರ ದಂಡುಗಳ ಎದುರು, ಫ್ರೆಂಚರನ್ನು ರಕ್ಷಕವಚಗಳಂತೆ ಜರ್ಮನರು ಉಪಯೋಗಿಸುತ್ತಿದ್ದಾರೆ ಜರ್ಮನರು ಫ್ರೆಂಚರ ಮೇಲೆ ದುಷ್ಟ ತರದ ಅತ್ಯಾಚಾರವನ್ನು ನಡೆಯಿಸುತ್ತಾ ಹಿಂದೆ ನಡೆಯುತ್ತಿದ್ದಾರೆ. ಆದರೂ ಇವುಗಳಿಗೆಲ್ಲಾ ಉಪೇಕ್ಷಿತರಾಗಿ ಫ್ರೆಂಚರು ತಮ್ಮ ಕೈಲಾದ ಮಟ್ಟಿಗೆ ಯತ್ನಗಳನ್ನು ಮಾಡಿ ಜರ್ಮರನ್ನು ಪ್ರತಿಭಟಿಸುತಿದ್ದಾರೆ ಜರ್ಮನ್ ಪ್ರಭಾವಿತ ಫ್ರೆಂಚ್ ನಾಯಕರು, ದೇಶತ್ಯಾಗ ಮಾಡಿ, ಜರ್ಮನಿಗೆ ಪಲಾಯನ ಮಾಡಿರುವರು ಸ್ವತಂತ್ರ ಫ್ರೆಂಚರ ನಾಯಕನಾದ ಡಿ'ಗೋಲೆಯು ಫ್ರಾನ್ಸಿನಲ್ಲಿ ಇಳಿದಿದ್ದು, ಫ್ರೆಂಚರು ಮಿತ್ರರೊಡನೆ ಸೇರುವಂತೆ ಹುರುಪುಗೊಳಿಸುತ್ತಿರುವನು ಜರ್ಮನರ ಬಂಧನದಿಂದ ವಿಮುಕ್ತಗೊಳಿಸಲಾದ ಫ್ರೆಂಚ್ ಪ್ರದೇಶಗಳನ್ನು ಡಿ'ಗೋಲೆಯವರ ಅಧಿಕಾರದಡಿ, ಸ್ವತಂತ್ರ ಫ್ರೆಂಚರಿಗೆ ಬಿಟ್ಟುಕೊಡುವ ಏರ್ಪಾಡುಗಳು ಮಿತ್ರರಿಂದ ಈಗಾಗಲೆ ಮಾಡಲಾಗಿದೆ

ಪ್ರಾರಂಭದಿಂದ ಇಷ್ಟರ ತನಕ ತಟಸ್ಥ ಧೋರಣೆಯನ್ನು ವಹಿಸಿದ ಸ್ವಿಜರ್ಲೆಂಡ್ ಈಗ ಆ ಧೋರಣವನ್ನು ತ್ಯಜಿಸಿ, ಜರ್ಮನ್ ದೇಶದೊಡನೆ ಇರುವ ಯಾವತ್ತೂ ಸಂಬಂಧವನ್ನು ಕಳಚಿ ಹಾಕಿರುವುದಾಗಿ, ವಾರ್ತೆಯು ಬಂದಿರುತ್ತದೆ. ಯುರೋಪದಲ್ಲಿ ಜರ್ಮನಿಗೆ ಸೋಲು ಖಂಡಿತವೆಂದು ಇದು ಇನ್ನೊಂದು ಸೂಚನೆಯಾಗಿರುತ್ತದೆ

ಯುಕ್ರೆನಿಯನ್ ಪ್ರದೇಶದಲ್ಲಿ ರಷ್ಯನರು ಬಹಳ ಮುಂದುವರಿದಿದ್ದು, ರುಮೇನಿಯಾ, ಬಲ್ಗೇರಿಯಾ, ಹಂಗೇರಿ, ಮೊದಲಾದ ದೇಶಗಳು, ಮಿತ್ರರಿಗೆ ಶರಣು ಬಂದಿವೆಯಾಗಿ ವಾರ್ತೆಗಳು ಬಂದಿವೆ ಇದರಿಂದ ಬಾಲ್ಕನ್ ಪ್ರದೇಶದಲ್ಲಿ ಜರ್ಮನ ಹಿಡಿತವು ಬೇಗನೆ ಸಡಿಲಾಗುವುದೆಂದು, ಧೈರ್ಯದಿಂದ ಹೇಳಬಹುದಾಗಿದೆ ಇಟಲಿಯ ಅಧಿಕಾಂಶವು ಮಿತ್ರರಿಂದ ಆಕ್ರಮಿಸಲ್ಪಟ್ಟಿದ್ದು, ಮಿತ್ರರು, ಆಸ್ಟ್ರಿಯಾವನ್ನು ನುಗ್ಗಲು, ಅನುಕೂಲವು, ಬೇಗನೆ ಉಂಟಾಗಬಹುದು.

ಸಂಕ್ಷೇಪವಾಗಿ ಹೇಳುವುದಾದರೆ, ಮಿತ್ರ ವ್ಯೂಹಗಳು, ಜರ್ಮನಿಯ ಸುತ್ತಲೂ, ಬೀಳುತ್ತಿದ್ದು, ಅವುಗಳು, ದಿನದಿನೆ, ಪ್ರಬಲವಾಗುತ್ತಿವೆ. ಮಿತ್ರರ ಕೈಗಳು, ಜರ್ಮನಿಯ ಕೊರಳಿನ, ಅತಿ ಸಮೀಪದಲ್ಲಿವೆ.- ಜರ್ಮನಿಯು ಕತ್ತು ಸದ್ಯದಲ್ಲೇ ಹಿಸುಕಲಾಗುವುದೆಂದು ಧೈರ್ಯದಿಂದ ಹೇಳಬಹುದು.

ಇತ್ತ ಶಾಂತಸಾಗರದಲ್ಲಿ ವಿಶೇಷ ತರದ ಘಟಣೆಗಳಾವವೂ ನಡೆದಿಯಾಗದಿದ್ದರೂ, ಜಪಾನಿಯರು ಅನೇಕ ಕ್ಷೇತ್ರಗಳಲ್ಲಿ ಮಿತ್ರರಿಗೆ ಸ್ಥಳಬಿಟ್ಟು ಕೊಟ್ಟಿರುವರು. ಜಪಾನ ದೇಶದ ಮೇಲೆ, ಮಿತ್ರರ, ವಿಮಾನಗಳು ಹಲ್ಲೆ ನಡೆಯಿಸಲು ಪ್ರಾರಂಭಮಾಡಿವೆ. ಇಷ್ಟರತನಕ ವಿಮಾನ ಹಲ್ಲೆಗಳ ಸವಿ ನೋಡದ ಜಪಾನೀಯರು, ಈಗ ದಿನಾಲೂ ಅವುಗಳನ್ನು ಅನುಭವಿಸಬೇಕಾಗಿಯದೆ. ಬರ್ಮಾದಲ್ಲಿ ಪರಿಸ್ಥಿತಿಯು, ಮಿತ್ರರಿಗೆ ಅನೂಕೂಲವಿದೆ ಚೀನಿಯರು, ಜಪಾನಿಯರಿಗೆ ವಿರೋಧವಾಗಿ ಬಹಳ ಸಾಹಸದಿಂದ ಕದನ ನಡೆಯಿಸುತ್ತಿರುವರು. ಚೀನಾ-ಜಪಾನ್ ಯುದ್ಧವು ಪ್ರಾರಂಭವಾಗಿ ಇವತ್ತಿಗೆ ಎಂಟು ವರ್ಷಗಳಾಗಿದ್ದರೂ, ಚೀನಿಯರ ಹುರಪು ಒಂದಿಷ್ಟು ಕಳೆಗುಂದಿಲ್ಲ

ಮಿತ್ರರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಒಳ್ಳೆ ಆಶಾಧಾಯಕವಾದ ಪ್ರತೀಕ್ಷೆಗಳೆ ಉಂಟಾಗಿವೆ.

ರೆಕ್ಕೆ ಬಾಂಬು ಹಾವಳಿ ತಿಗಣೆ ಕಾಟದಂತೆ

"ಸಿಡಿಯುವ ಉಲ್ಕಾಪಾತ" ವೆಂದು ಜರ್ಮನರು ರೆಕ್ಕೆಬಾಂಬುಗಳಿಗೆ ಕೊಟ್ಟ ಹೆಸರು. ಅಮೆರಿಕನರು ಅದನ್ನು 'ಹಾರುವ ತಿಗಣೆ' ಎಂದು ಕರೆಯುತ್ತಾರೆ ಅವುಗಳನ್ನು ಕಿರುಕುಳ ಕಷ್ಟ ಕೊಡುವ ಸ್ಫೋಟಕವೆಂದೂ ಹೇಳಬಹುದು

ರಾತ್ರಿ ಹಗಲು ಎನ್ನದೆ ಇವು ದಕ್ಷಿಣ ಇಂಗ್ಲೆಂಡಿನ ಭಾಗಗಳಲ್ಲಿ ಬೀಳುತ್ತಿರುತ್ತವೆ. ಫ್ರಾನ್ಸಿನ ಯಾವುದೊ ಒಂದು ಭಾಗದಿಂದ ಇವು ಕಳುಹಲ್ಪಡುತ್ತವೆ ಇದು ಹಿಟ್ಲರನ ಗುಪ್ತಾಸ್ತ್ರಗಳಲ್ಲಿ ಒಂದು ಇವುಗಳ ಗುಪ್ತ ನಿರ್ಮಾಣದ ಹಲವು ಭಾಗಗಳನ್ನು ಮಿತ್ರ ವೈಮಾನಿಕರು ನಾಶಮಾಡಿರುವರು ಬ್ರಿಟಿಷ ವಿಮಾನ ಖಾತೆಯ ಅಧಿಕಾರಿಗಳು ಈ ಬಾಂಬುಗಳ ಕೆಲವು ಯಂತ್ರೋಪ ಭಾಗಗಳನ್ನು ಸಂಗ್ರಹಿಸಿ ಒಂದು ರೇಖಾಚಿತ್ರವನ್ನು ತಯಾರಿಸಿರುವರು. ಅದರ ಚಲನೆ ಯಂತ್ರಗಳ ಗುಟ್ಟನ್ನು ಅವರು ಸಂಪೂರ್ಣ ಅರಿತಿರುವರೆಂದು ನಂಬಲಾಗಿದೆ.

ಸಾಮಾನ್ಯ ವಿಮಾನಗಳಿಗಿರುವಂತೆ ರೆಕ್ಕೆಬಾಂಬುಗಳ ಯಂತ್ರ ಭಾಗಗಳು ಯಾವುದೂ ಹೊರಗೆ ಕಾಣಿಸುವುದಿಲ್ಲ. ಪೆಟ್ರೋಲ್ ಇಲ್ಲವೆ ಕಲ್ಲೆಣ್ಣೆಯಿಂದ ಯಂತ್ರ ಚಲಾವಣೆಯಾಗುವುದು. ಅದು ಮುಗಿದೊಡನೆ ಯಂತ್ರದ ಕ್ರಿಯೆಯು ನಿಲ್ಲುವುದು. ಆಮೇಲೆ ತನ್ನಷ್ಟಕ್ಕೆ ಕೆಳಗೆ ಬಿದ್ದು ಸ್ಫೋಟವಾಗುತ್ತದೆ. ಹಾರುವ ಕಾಲದಲ್ಲಿ ಇದನ್ನು ಆವರಿಸಲು ಒಳಗೆ ಬುಗರಿಯಂತೆ ತಿರುಗುವ ಒಂದು ಯಂತ್ರವಿರುತ್ತದೆಯೆಂತಲೂ, ಗಡಿಯಾರದಂತೆ ಕೆಲಸಮಾಡುವ ಉಪಕರಣಗಳು ಇದನ್ನು ಗಾಳಿಯು ತೊಂದರೆಯಿಂದ ತಪ್ಪಿಸುತ್ತವೆಂತಲೂ ಯಂತ್ರವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಗಡಿಯಾರದಲ್ಲಿ 'ಎಲಾರಮ್ ಗಂಟೆ' ಯಾಗುವಂತೆ ರೆಕ್ಕೆಬಾಂಬುಗಳನ್ನೂ ಒಂದು ಇಚ್ಛಿತ ದೂರದಲ್ಲಿ ಬೀಳುವಂತೆ ಮಾಡುವ ಸಾಧನಗಳಿವೆಯಂತೆ. ಎಣ್ಣೆ ಮುಗಿದ ಮೇಲೂ ಇವುಗಳು ಬೀಳುವಂತೆ ಮಾಡಬಹುದು ಅವು ಒಂದೇ ದಿಕ್ಕನ್ನು ಹಿಡಿದು ನೇರವಾಗಿ ಹಾರುತ್ತವೆ.

ಇತರ ಬಾಂಬುಗಳಂತೆ ಇವೂ ತುಂಬಾ ಅಪಾಯಕಾರಿಗಳು. ಇವುಗಳ ಸ್ಫೋಟ ಶಬ್ದವೂ ಭಯಂಕರವಿರುತ್ತದೆ ಆದರಿಂದ ಗಾಜಿನ ಚೂರುಗಳೂ, ಕಬ್ಬಿಣ ಚೂರುಗಳೂ ಎಲ್ಲಾ ದಿಕ್ಕುಗಳಲ್ಲೂ ಸಿಡಿದು ಪ್ರಸರಿಸುತ್ತವೆ. ಆದರೂ ವಿಮಾನಗಳಿಂದ ಮೇಲಿಂದ ಮೇಲೆ ಹಾರಲ್ಪಡುವ ವಿವಿಧ ತರದ ಬೆಂಕಿಕಾರುವ ಸಿಡಿತಗಳಷ್ಟು ಅಪಾಯಕಾರಿ ಇವಲ್ಲ

ಕೊಲ್ಲುವ ಮತ್ತು ನಾಶಪಡಿಸುವ ಶಕ್ತಿಯು ವುಗಳಿದ್ದರೂ ನಾಜೀಗಳು ಇದನ್ನು ಸುಲಭ ವಂಚನೆಗೆ ಬಲಿಬೀಳುವ, ಮತ್ತು ೫ ವರ್ಷಗಳ ಯುದ್ಧದಿಂದ ಅಪಾರ ಕಷ್ಟನಷ್ಟಗಳಿಗೆ ತುತ್ತಾದ ಜರ್ಮನ್ ಜನತೆಯನ್ನು ಹುರಿದುಂಬಿಸುವ ಒಂದು ಪ್ರಚಾರ ಸಾಧನವಾಗಿ ಉಪಯೋಗಿಸುತ್ತಾರೆ. ಲಂಡನ್ ನಗರವು ಅಗ್ನಿ ಸಾಗರವಾಗಿದೆ ಎಂದೂ ಪ್ರಚಾರ ಮಂತ್ರಿ ಗೋಬೆಲ್ಲನು ಸಾರುತಿದ್ದಾನೆ ಮೂರು ವರ್ಷಗಳ ಹಿಂದೆ ಸಾವಿರಾರು ನಾಜಿ ವಿಮಾನಗಳು ಲಂಡನನ್ನು ದಾಳಿಮಾಡಿದಾಗ ಆ ನಗರವು ಸಂಪೂರ್ಣ ಧ್ವಂಸವಾಯಿತೆಂದೂ ಅವನೇ ಸಾರಿದ್ದನು ದಕ್ಷಿಣ ಇಂಗ್ಲೆಂಡ್ ಪ್ರದೇಶದಲ್ಲಿ ವಾಸಸ್ಥಳಗಳು ಸಂಪೂರ್ಣ ನಾಶ ಹೊಂದಿದೆಯಾದರೂ ಜನರು ಧೈರ್ಯ ಗುಂದಿಲ್ಲ-

ಕೆಲವುಸಲ ರೆಕ್ಕೆಬಾಂಬುಗಳು ವಿಚಿತ್ರವಾಗಿ ವರ್ತಿಸುತ್ತವೆ ಮಿತ್ರ ವೈಮಾನಿಕರು ಅದನ್ನು ಗುಂಡಿಸಿಂದ ಹೊಡೆದ ಕೂಡಲೇ ಕೆಲವು ಸರ್ರನೆ ತಿರುಗಿ ಬಂದ ದಾರಿಯತ್ತ ಕಡೆಗೇ ಹೋಗುವುವಂತೆ. ಹೀಗೆ ಈ ಸಿಡಿಯುವ ಹಕ್ಕಿಗಳು ಫ್ರಾನ್ಸಿನ ತಮ್ಮ ನಿಲ್ದಾಣಕ್ಕೆ ಹಿಂತಿರುಗಿ, ತಮ್ಮ ಸ್ವಂತ ಗೂಡಿನೊಳಗೆ ಉರುಳಿ ಬಿದ್ದು ಸಿಡಿದರೆ ಗೋಬೆಲ್ಸನ ಮುಖಕ್ಕೆ ಮಸಿ ಬಳೆದಂತಾಗುವುದು

ಗೀತೆಯನ್ನೂ ಉಪನಿಷದ್‌ಗಳನ್ನೂ ಸಂಪೂರ್ಣವಾಗಿ ಒಂದಿಷ್ಟು ದೋಷವಿಲ್ಲದೆ ಬಾಯಿಪಾಠ ಹೇಳುವ ೩ ವರುಷದ ಬಾಲಿಕೆಯೊಂದು ಉತ್ತರ ಹಿಂದೂದೇಶದಲ್ಲಿರುವಳಂತೆ. ಇಷ್ಟೆ ಅಲ್ಲ, ಇತರರು ಗೀತೆ ವಚನವನ್ನು ಮಾಡುತ್ತಿರುವಾಗ ಮಾಡುವ ತಪ್ಪುಗಳು ಆಕೆಯು ತಿದ್ದ ಬಲ್ಲಳಂತೆ. ಗೀತೆ ಉಪನಿಷದ್‌ಗಳ ಕುರಿತು ಈಕೆಯಲ್ಲಿ ತುಂಬಾ ಜ್ಞಾನವಿರುವುದಾಗಿ ತಿಳಿದು ಬಂದಿದೆ.

* * *

ಗೀತೆಯ ರಹಸ್ಯವೇನು ಎಂಬುದಾಗಿ ಶಿಷ್ಯರೊಬ್ಬರು ಶ್ರೀ ರಾಮಕೃಷ್ಣ ಪರಮಹಂಸರನ್ನು ಕೇಳಿದರಂತೆ ಗೀತಾ-ಗೀತಾ ಗೀತಾ-ಗೀತಾ ಎಂದು ಅನೇಕ ಸರ್ತಿ ಉಚ್ಚರಿಸುವುದರಲ್ಲಿದೆ ಎಂದರಂತೆ ಅಂದರೆ ಗೀತೆಯ ರಹಸ್ಯವು ತ್ಯಾಗವೆಂದು ಇದರ ಅರ್ಥ

ಧ್ಯೇಯಗಳು ಮಾಯವಾದುವೆ?

ಯುದ್ಧವು [illegible]ದಲ್ಲೇ ಕೊನೆಗೊಳ್ಳುವ [illegible]ಗಳು ತೋರಿ ಬರುತ್ತವೆ. ಯುದ್ಧ [illegible]ಯನ್ನು ಹಂಚಿಕೊಳ್ಳಲು ಪ್ರತಿಯೊಂದು ವಿಜಯಿ ಜನಾಂಗವು ಹವಣಿಸಹತ್ತಿದೆ.

ಈ ಪಾಲುಗಾರಿಕೆಗೆ ಮೊದಲು ಪ್ರಾರಂಭಿಸಿದ್ದು ರಶ್ಯ. ಹಿಂದಿನ ಯುದ್ಧಕಾಲದ ತನ್ನ ಗಡಿಗಳ ವರೆಗಿನ ಪ್ರದೇಶವನ್ನು ತನಗೆ ಕೊಡಬೇಕೆಂಬುದೇ ಅದರ ಕೋರಿಕೆ. ಹಾಗೆ ಮಾಡಿದರೆ ಪೋಲೆಂಡಿನ ಹೆಚ್ಚು ಭಾಗ ರಶ್ಯಕ್ಕೆ ಕೊಟ್ಟಂತಾಗುವುದು. ಜರ್ಮನಿಯ ಸ್ವಲ್ಪ ಭಾಗವನ್ನು ಪೋಲೆಂಡಿಗೆ ಕೊಟ್ಟು ಅದರ ನಷ್ಟವನ್ನು ಭರ್ತಿ ಮಾಡುತ್ತೇವೆಂದು ಬ್ರಿಟಿಷರು ಭರವಸೆ ಇತ್ತಿರುವರು.

ರ್‍ಹೈನ ನದಿ ಪ್ರದೇಶವನ್ನು ತನಗೇ ಕೊಡಬೇಕೆಂದು ಈಗ ಫ್ರಾನ್ಸೂ ಮುಂದೆ ಬಂದಿರುವುದು. ಚಿಕ್ಕ ಪೋಲೆಂಡಿಗಿರುವಂತೆ ದೊಡ್ಡ ಫ್ರಾನ್ಸಿಗೂ ಆಶೆ ಆಕಾಂಕ್ಷೆಗಳಿರುವುವಲ್ಲದೆ?

ಇರಲಿ. ಈಗ ಅಮೆರಿಕವು ತನ್ನ ಅಂಶದ ಪಟ್ಟಿಯನ್ನು ಮುಂದೆ ಇಟ್ಟಿದೆ. ಪೆಸಿಫಿಕ್ ಸಾಗರದಲ್ಲಿ ಜಯಿಸಲಾಗುವ ಆಯಕಟ್ಟಿನ ಠಾಣ್ಯಗಳು ತಮ್ಮ ಹಕ್ಕಿನದಾಗಬೇಕೆಂಬ ಅಭಿಪ್ರಾಯವು ಅಮೆರಿಕನರಲ್ಲಿ ಬಲವಾಗಿದೆ.

ಮುಂದೆ ಜಪಾನರ ದಬ್ಬಾಳಿಕೆಯನ್ನು ಎದುರಿಸಲು ಸಮರ ಸಜ್ಜಿತ ಠಾಣ್ಯಗಳನ್ನು ಸ್ಥಾಪಿಸಲು ಪೌರ್ವಾತ್ಯ ದೇಶಗಳಲ್ಲಿ ತಮಗೆ ಯೋಗ್ಯ ಪ್ರದೇಶಗಳು

[illegible] ಬ್ರಿಟಿಷ ಸಾಮ್ರಾಜ್ಯವಾದಿಗಳು ಮುಂದೆ ಬಂದರೆ ಯಾರೂ ಆಶ್ಚರ್ಯಪಡಬೇಕಿಲ್ಲ.

ಇನ್ನು ಯುದ್ಧ ಗೆಲ್ಲುವರೆಗೆ ಸಹಾಯ ಮಾಡಿದ ಆಸ್ಟ್ರೇಲಿಯಾ, ನ್ಯೂಜೀಲೆಂಡ್, ಸೌತ್ ಆಫ್ರಿಕಾಗಳು ಕೂಡಾ ಯೋಗ್ಯ ಸವಲತ್ತುಗಳನ್ನು ಬೇಡಿಯೇ ಬೇಡುವವು.

ಈ ಬೇಡಿಕೆಗಳಿಗೆ ಅಂತ್ಯವಿಲ್ಲ. ಮತ್ತು ಇದರಿಂದ ಇನ್ನೊಂದು ವರ್ಸೇಲಿಸ್ ಒಪ್ಪಂದವಾಗಿ ಮುಂದೆ ಇನ್ನೊಂದು ಮಹಾ ಯುದ್ಧದ ತಳಹದಿಯಾಗುವುದು ನಿಶ್ಚಯ.

ಯುದ್ಧ ಪರಿಸ್ಥಿತಿಯು ಅನುಕೂಲವಾಗಿ ಸುಧಾರಿಸಿ ಬಂದಂತೆ ಮಿತ್ರ ಸಂಯುಕ್ತ ರಾಷ್ಟ್ರಗಳು ತಮ್ಮ ಉಚ್ಚ ಧ್ಯೇಯಗಳನ್ನು ಮರೆತು ಬಿಡುವುದು ಅತೀ ಕೌತುಕದ ವಿಷಯವಾಗಿದೆ. ಇದು ಕೆಡುಕನ್ನು ಸೂಚಿಸುವಂತಹದೂ ಆಗಿದೆ. ಅಟ್ಲಾಂಟಿಕ್ ಘೋಷಣೆ, ಮಾನವ ಸ್ವಾತಂತ್ರ್ಯದ ನಾಲ್ಕು ಮುಖ್ಯ ತತ್ವಗಳು, ಎಲ್ಲವೂ ಮೂಲೆಸಾಲಾದುವೆಂದೇ ಅರ್ಥವಾಗುತ್ತದೆ. ಅತ್ಯಾಶೆ ಸ್ವಾರ್ಥ ದೃಷ್ಟಿಗಳೇ ಈಗಲೂ ಅವರ ಕಣ್ಣುಗಳನ್ನು ಮಬ್ಬು ಮಾಡಹತ್ತಿವೆ.

ಒಂದು ವಿಷಯ ಮಾತ್ರ ಈಗಲೇ ಖಂಡಿತವಾದಂತಾಯಿತು. ಯುದ್ಧಾನಂತರದ ಜಗತ್ತು ಯುದ್ಧ ಪೂರ್ವದ ಪರಿಸ್ಥಿತಿಗಿಂತ ಏನೂ ಬದಲಾಗುವಂತಿಲ್ಲ.

ಗಾಂಧಿ-ಜಿನ್ನಾ-ಮಾತುಕತೆ

ಜಿನ್ನಾ ಸಾಹೇಬರ ಅಸೌಖ್ಯದಿಂದ ಮುಂದೆ ಬಿದ್ದ ಮಾತುಕತೆಗಳು ಬರುವ ವಾರದಲ್ಲಿ ಪ್ರಾರಂಭವಾಗಬಹುದೆಂದು ನಿರೀಕ್ಷಿಸಲಾಗಿದೆ. ಆಷ್ಟರಲ್ಲಿ ಜಿನ್ನರು ಸಂಪೂರ್ಣ ಗುಣಮುಖರಾಗುವರೆಂದೂ ಆಶಿಸಲಾಗಿದೆ. ಈಗ ಅವರು ಸೌಖ್ಯವಾಗಿರುವುದಾದರೂ ಅಶಕ್ತತೆಯಿರುವುದರಿಂದ ಕೆಲವು ಸಮಯದ ವರೇಗೆ ಶ್ರಮದ ಯಾವ ಕಾರ್ಯಕ್ರಮವನ್ನು ಅವರು ಕೈಕೊಳ್ಳಲು ಶಕ್ತರಿಲ್ಲ.

ಸಂಕಲಿತ ಸಮಾಚಾರಗಳು

"ಯುರೋಪ ಖಂಡದಲ್ಲಿ ಶತ್ರುವು ಸೆಟ್ಟಗಿರುವದರಿಂದ ಸೆರೆಮನೆಯಲ್ಲಿರುವ ಹಿಂದೀ ನಾಯಕರನ್ನು ಬಿಡುಗಡೆ ಮಾಡುವುದರಿಂದ ಅಪಾಯಗಳೇನೂ ಉಂಟಾಗವು," ಎಂಬದಾಗಿ ಇಂಗ್ಲಂಡಿನ ಮಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಅಭಿಪ್ರಾಯ ಹೊರಡಿಸಿರುವುದು.

* * *

ಯುದ್ಧವು ಸದ್ಯದಲ್ಲಿ ಕೊನೆಗೊಳ್ಳುವ ಪರಿಸ್ಥಿತಿ ಇಂದಿನದಾಗಿರುವುದರಿಂದ, ಹಿಂದೂದೇಶದ ನವೀನ ರಾಜ ಶಾಸನವನ್ನು ಕಲ್ಪಿಸುವ ಕೆಲಸವನ್ನು ಈಗಲೇ ಪ್ರಾರಂಭಿಸ ಬಹುದೆಂದು ಮೇಲಿನ ಪತ್ರಿಕೆಯ ಸೂಚನೆ.

* * *

ಜಗತ್ತಿನ ಎಲ್ಲಾ ರಾಷ್ಟ್ರಗಳು ಸೇರಿ, ಒಂದು 'ಸಾಂಪತ್ತಿಕ ನಿಧಿ' ಯನ್ನು ಕೂಡಿಸಿ, ಆ ನಿಧಿಯನ್ನು ಕೂಡಿಸುವ ರಾಷ್ಟ್ರಗಳ ಸಾಂಪತ್ತಿಕ ಉದ್ಧಾರವನ್ನು ಸಾಧಿಸುವ ಕುರಿತು, ದೊಡ್ಡದೊಂದು ಪರಿಷತ್ತು ಕೂಡಿ,-ಕೆಲವು ಠರಾವುಗಳಾಗಿರುವವು. ಈ ನಿಧಿಗೆ ಸೇರಲಿಚ್ಛಿಸುವ ಜನಾಂಗಗಳು, ಬರುವ ಜನವರಿಯೊಳಗೆ ಆ ಕುರಿತು ನಿರ್ಧಾರಕ್ಕೆ ಬರಬೇಕಾಗಿದೆ. ಈ ಪರಿಷತ್ತಿಗೆ ನಮ್ಮ ಕಡೆಯಿಂದ, (ಬ್ರಿಟಿಷ್ ಮುಂದಾಳುಗಳ ಅಡಿಯಲ್ಲಿ) ಒಂದು ಶಿಷ್ಟಮಂಡಳದಲ್ಲಿ ಸರ್ ಶನ್ಮುಖಂ ಚೆಟ್ಟಿಯಾರರು ಒಬ್ಬರಾಗಿದ್ದರು. ಆ ಪರಿಷತ್ತು ಹಿಂದೂದೇಶದ ಕುರಿತು ವಹಿಸಿದ ಧೋರಣದ ಕುರಿತು ಅವರಿಗೆ ಸಮಾಧಾನವಾದಂತೆ ಕಾಣುವುದಿಲ್ಲ. ಹಿಂದೂದೇಶಕ್ಕೆ ಒಂದು ಸ್ವತಂತ್ರ ಜನಾಂಗದ ಸ್ಥಾನ ದೊರಕಲಿಲ್ಲವೆಂಬುದೆ ಅವರ ಅಸಮಾಧಾನಕ್ಕೆ ಕಾರಣವಾಗಿರುವುದು.

* * *

ಹಿಂದೂದೇಶದ ರಾಜಕೀಯದ ಕುರಿತು ಬ್ರಿಟಿಷರ ಸದ್ಯದ ಧೋರಣೆಯಿಂದ, ಬಿಕ್ಕಟ್ಟಿನ ಪರಿಸ್ಥಿತಿಯು ಇನ್ನೂ ಕೆಟ್ಟಿರುವುದಾಗಿಯೂ, ಆದುದರಿಂದ ಹಿಂದೂ ಮುಸ್ಲಿಮರ ಐಕ್ಯವಾಗುವುದು ಅತಿ ಅವಶ್ಯವು ಎಂದು ರಾಜಾಜಿಯವರ ಅಭಿಪ್ರಾಯವು.

* * *

ಸೇವಾ ಗ್ರಾಮಕ್ಕೆ ತೆರಳಿದ ಗಾಂಧಿಜಿಯರು,-ತಮ್ಮ ಆಶ್ರಮದ ಚಟುವಟಿಕೆಗಳಲ್ಲಿ ನಿರತರಾಗಿರುವರು.

* * *

ಜವಾಹರಲಾಲ ನೆಹರುಗಳವರ ಪುತ್ರಿ ಶ್ರಿ ಇಂದಿರಾ ಗಾಂಧಿಯವರು ಒಂದು ಗಂಡು ಶಿಶುವನ್ನು ಹಡೆದಿರುವರಾಗಿ ವಾರ್ತೆ ಬಂದಿದೆ.

ಮಾತುಕತೆಯ ಫಲಾಫಲಗಳ ಕುರಿತು ಕಾಂಗ್ರೆಸ್ ಲೀಗ್ ಕೇಂದ್ರಗಳಲ್ಲಿ ತುಂಬಾ ಆಶಾದಾಯಕ ವಾತಾವರಣವು ಅನುಭವಕ್ಕೆ ಬಂದಂತೆ ಭಾಸವಾಗುತ್ತಿದೆಯಾಗಿ ವರದಿಗಳಿವೆ.

ಜಿನ್ನರಿಗೆ ಈಗ 'ಎಲ್ಲಾ ಆಟಗಳು' ಗುಟ್ಟು ಚೆನ್ನಾಗಿ ಅರಿವಾಗಿದ್ದು, ಅವರು ಒಂದು ಇತ್ಯರ್ಥಕ್ಕೆ ಬರಲು ಉತ್ಸುಕರಾಗಿದ್ದಾರೆಂದೂ ಬಲ್ಲವರು ಅಭಿಪ್ರಾಯ ಪಡುತ್ತಾರೆ.

ಈ ಊಹಾ ಪೋಹೆಗಳು ಸರಿಯೆಂದಾದರೆ ಕಾಂಗ್ರೆಸ್-ಲೀಗಗಳೊಳಗೆ ಐಕ್ಯವಾಗಲು ಹೆಚ್ಚು ಸಮಯ ಹಿಡಿಯದು. ಮುಂದಿನ ವಾರದ ಘಟನೆಗಳು ನಮ್ಮ ಆಶೆಗಳನ್ನು ಫಲಪ್ರದವಾಗಿ ಮಾಡುವವಾಗಿ ಹಾರೈಸೋಣ.

ಬ್ರಿಟಿಷ ಪ್ರಧಾನ ಮಂತ್ರಿಯವರಾದ ಚರ್ಚಿಲ್ಲರ ಸಮಕ್ಷಮದಲ್ಲಿ ದಕ್ಷಿಣ ಫ್ರಾನ್ಸಿನಲ್ಲಿ ಮಿತ್ರ ದಂಡುಗಳ ಆಕ್ರಮ ನಡೆಯಿಸಿದವಂತೆ. ಚರ್ಚಿಲ್ಲರು ರೋಮಿನ ಪೋಪರನ್ನು ಭೇಟಿಯಾಗಿರುವರಂತೆ.

* * *

ಹಿಂದೂದೇಶದ ವಿವಿಧ ಪ್ರಾಂತ್ಯದ ಗವರ್ನರರ ಸಭೆಯೊಂದು ನವದಿಲ್ಲಿಯಲ್ಲಿ ಸದ್ಯದಲ್ಲಿ ಜರಗುವುದು. ಈ ಸಭೆಯಲ್ಲಿ ಹಿಂದೂದೇಶದ ಸದ್ಯದ ರಾಜಕೀಯ ಪರಿಸ್ಥಿತಿಯು ಪರಿಶೀಲಿಸಲಾಗುವುದು.

*

ಬರ್ಮಾ ರಂಗದಲ್ಲಿ ಭಾರತೀಯ ಸೈನಿಕರು ಬಹಳ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆಂದು ವರದಿಯಾಗಿದೆ.

* * *

ಗಾಂಧಿಜಿಯವರ ಆಲೋಚನೆಗಳನ್ನೊಳಗೊಂಡ, ಹಿಂದೂದೇಶದ ಸಾಂಪತ್ತಿಕ ಉದ್ಧಾರದ ಬಗ್ಗೆ ಒಂದು ಯೋಜನೆಯು ಬೇಗನೆ ಸಿದ್ಧವಾಗುವುದು. ಈ ಬಗ್ಗೆ ವಾರ್ಧಾ ವಾಣಿಜ್ಯ ಕಾಲೇಜಿನ ಶ್ರೀ. ಎಸ್. ಎನ್. ಅಗರವಾಲರು, ಗಾಂಧಿಜಿಯವರೊಡನೆ ದೀರ್ಘಕಾಲದ ಚರ್ಚೆ ನಡೆಯಿಸಿದರಾಗಿ ವಾರ್ತೆಯಿದೆ.

* * *

ರುಮೇನಿಯಾವು ಜರ್ಮನಿಯ ಮೇಲೆ ಯುದ್ಧ ಸಾರಿದೆ.

* * *

ಫ್ರಾನ್ಸಿನಲ್ಲಿ ಪೆಸಿಷ್ಟ ಪಂಗಡವು ಸ್ವಲ್ಪ ಗಲಭೆಗೆ ಕಾರಣವಾಗಿರುವುದೆಂದು ವಾರ್ತೆಯು ಬಂದಿರುತ್ತದೆ. ಈ ಪಂಗಡದ ಕೆಲವರು, ಸ್ವತಂತ್ರ ಫ್ರೆಂಚರ ನಾಯಕರಾದ ದಿ' ಗೋಲೆಯವರನ್ನು ಕೊಂದಿಕ್ಕಲು ಪ್ರಯತ್ನಪಟ್ಟರು. ದೈವವಶಾತ್ ದಿ' ಗೋಲೆಯವರು ಸುರಕ್ಷಿತರಾಗಿರುವರು. ಪೆಸಿಷ್ಟ ಪಂಗಡಿಗರು ಈ ಸಮಯ ಹಲವು ಕಡೆಗಳಲ್ಲಿ ಮೆಶಿನ್ನು ತುಪಾಕಿಯನ್ನು ಹಾರಿಸಿ, ಸ್ವಲ್ಪ ಗದ್ದಲವನ್ನು ನಡೆಯಿಸಿದರಂತೆ. ಸ್ವತಂತ್ರ ಫ್ರೆಂಚರು, ಈ ದಂಗೆಯನ್ನು ಪೂರ್ಣ ತಣಿಸಿಬಿಟ್ಟಿರುವರಂತೆ.

* * *

ತಮ್ಮ ಮಹಾ ತಪಸ್ಸಿನಿಂದಲೆ ದೇಶದ ಉನ್ನತಿಯನ್ನು ಸಾಧಿಸುವೆನಾಗಿ ಮಹಾಯೋಗಿ ಅರವಿಂದರ ಪ್ರತಿಜ್ಞೆಯಾಗಿರುವುದು ಪ್ರಾಚೀನ ಹಿಂದೂ ದೇಶದ ಋಷಿಗಳು ತಮ್ಮ ಯೋಗ ಬಲದಿಂದ ಯಾವ ಕಾರ್ಯಗಳನ್ನು ಮಾಡಲಿಲ್ಲ.

* * *

ಹಳೆಯ ಹಸ್ತ ಪತ್ರಗಳ ಆಧಾರದ ಮೇಲೆ ಒಂದು ವಿಷಯವನ್ನು ನಂಬದಿರಿ. ಅದೊಂದು ಬಾಲ್ಯದಿಂದಲೂ ನಂಬಿಕೊಂಡು ಬಂದ ರಾಷ್ಟ್ರೀಯ ವಿಷಯವೆಂಬ ಕಾರಣದಿಂದ ಒಂದು ವಿಷಯವನ್ನು ನಂಬದಿರಿ ಆ ವಿಷಯವನ್ನು ವಿದೇಶದ ವಿಚಾರಕ್ಕೆ ಒಳಪಡಿಸಿ ಅದು ನ್ಯಾಯವಾದುದು ಅದರಿಂದ ಎಲ್ಲರಿಗೂ ಒಳಿತುಂಟು ಎಂಬುದು ನಿಮ್ಮಲ್ಲಿ ಹೊಳೆದರೆ ಮಾತ್ರ ಆ ವಿಷಯವನ್ನು ನಂಬಿರಿ. ಅದನ್ನು ಅನುಸರಿಸಿ ಅದಕ್ಕೆ ತಕ್ಕಂತೆ ಜೀವನ ಸಾಗಿಸಿರಿ. ಇತರರೂ ಅದನ್ನು ಅನುಸರಿಸಿ ಜೀವಿಸುವಂತೆ ಸಾಧಿಸಿರಿ.

"ಬುದ್ಧ ವಚನ"

ಅಜ್ಞಾನವು ಮೃತ್ಯು-ಜ್ಞಾನವೆ ಜೀವನ

-ವಿವೇಕಾನಂದ.

ನಿಮ್ಮ ಬ್ಯಾಂಕಿಂಗ್ ಸಂಬಂಧ

ನಿಮ್ಮ ಉದ್ಯಮದಲ್ಲಿ ನಿಮ್ಮ ಬ್ಯಾಂಕು ಎಂತಹ ಸಹಕಾರಿ ಎಂದು ನೀವು ಮನಗಂಡೊಡನೆ-ನಿಮ್ಮ ಧನ ಸಹಾಯಕನಿಂದ ಯಥಾಯೋಗ್ಯ ಸಹಕಾರವು ಎಷ್ಟೊಂದು ಅವಶ್ಯವು-ನೀವು ನಿಮ್ಮ ಬ್ಯಾಂಕಿಂಗ್ ಸಂಬಂಧವನ್ನು ಜಾಗರೂಕತೆಯಿಂದ ಚೆನ್ನಾಗಿ ವಿಚಾರಿಸಿಯೇ ನಿರ್ಧರಿಸುವಿರಿ.

ನಮ್ಮದೀ ಸೂಚನೆ: ವಿಪುಲ ಧನವುಳ್ಳ ಈ ಬ್ಯಾಂಕನ್ನೇ ನಿಮ್ಮ ಆರ್ಥಿಕ ಸಹಾಯಕ ಸಂಸ್ಥೆಯಾಗಿ ಆರಿಸಿಕೊಳ್ಳಿರಿ. ಅದರ ಹೆಸರು ಗೌರವಗಳು ನಿಮಗೆ ನಿಮ್ಮ ಆರ್ಥಿಕ ಸ್ಥಿತಿಗೆ ಅಮೂಲ್ಯವಾದ ಹಿನ್ನೆಲೆಯನ್ನೊದಗಿಸುವುದು!

ಇಂದೇ ನಮ್ಮ ಏಜಂಟರಿಗೆ ಮಾಹಿತಿಯ ಬಗ್ಗೆ ವಿಚಾರಿಸಿರಿ:-

ಶಾಖೆಗಳು		ಸೇವೆ
ಕ್ವಿಲೋನ್	ಬೆಳಗಾಂವ	ಸೇವಿಂಗ್ಸ್ ಖಾತೆ
ಅಲ್ಲೆಪ್ಪಿ	ಧಾರವಾಡ	ಚಾಲು ಖಾತೆ
ಕೊಚ್ಚಿ	ಚಿಕ್ಕಮಂಗಳೂರು	ನಿರಖು ಠೇವಣಾತಿ
ಕಣ್ಣಾನೂರು	ಹುಬ್ಬಳ್ಳಿ	ಓವರ್ ಡ್ರಾಫ್ಟುಗಳು
ಮಂಗಳೂರು	ದಾವಣಗೆರೆ	ಸಾಲಗಳು
	ಬೆಂಗಳೂರು	ಡಿಸ್ಕೌಂಟಿಂಗ್
ಇತ್ಯಾದಿ	ಇತ್ಯಾದಿ	ಪರಊರ ಮೇಲಣ ಡ್ರಾಫ್ಟುಗಳು

ಬೊಂಬಾಯಿ ನಗರದಲ್ಲಿ ನಾಲ್ಕು ಶಾಖೆಗಳು.

ಸ್ಥಾಪಿತ: 1906

ಕೆನರಾ ಬೇಂಕ್ ಲಿಮಿಟೆಡ್

Canara Bank Ltd.

ಜಿಲ್ಲಾ ಸಮಾಚಾರಗಳು

ಮಂಗಳೂರು

ಬಾ ನಿಧಿ

ಕಸ್ತೂರಿಬಾ ನಿಧಿಗೆ ಇಷ್ಟರತನಕ ನಿರೀಕ್ಷಿಸಿದಷ್ಟು ಹಣವು ಸಂಗ್ರಹವಾಗಲಿಲ್ಲವಾದುದರಿಂದ ಸಮಿತಿಯವರು ಮಹಾ ಜನರ ಉದಾರಬುದ್ಧಿಗೆ ವಿನಂತಿಯೊಂದನ್ನು ಮಾಡಿಕೊಂಡಿರುವರು. ಕನಿಷ್ಠ ಪಕ್ಷದಲ್ಲಿ ೫೦ ಸಾವಿರವನ್ನಾದರೂ ಒಟ್ಟು ಮಾಡಬೇಕೆಂದು ಅವರ ನಿರ್ಧಾರವಿದೆ. ಸಾರ್ವಜನಿಕ ಸಂಸ್ಥೆಗಳು, ವಿದ್ಯಾರ್ಥಿಗಳು, ಶ್ರೀಮಂತರು ಎಲ್ಲರೂ ವಿಳಂಬ ಮಾಡದೆ ಧನ ಸಂಗ್ರಹಕ್ಕೆ ನೆರವಾಗಬೇಕು. ಗಾಂಧಿಜಿಯವರ ಜನ್ಮ ದಿನಕ್ಕೆ ಇನ್ನೂ ಒಂದು ಮಾಸ ಮಾತ್ರ ಉಳಿದಿರುವುದು. ಭಾರತದಲ್ಲೆಲ್ಲ ಇಷ್ಟರ ತನಕ ರೂ. ೪೯ ಲಕ್ಷ ಸಂಗ್ರಹವಾಗಿದೆ.

ಸಪ್ತಾಹ

ಕಸ್ತೂರಿಬಾ ನಿಧಿಯ ಸಂಗ್ರಹಕ್ಕೆ ಸಮಿತಿಯವರು ಇದೇ ಬರುವ ತಾ. ೪ರಿಂದ ೧೧ರ ತನಕ ಒಂದು ಸಪ್ತಾಹದ ಕಾರ್ಯಕ್ರಮವನ್ನು ಕೈಕೊಳ್ಳಲಿರುವರು. ಮಹಾಜನರು ಸಹಕರಿಸಬೇಕಾಗಿ ವಿನಂತಿ.

ಜನ್ಮದಿನ

ನಾಳೆ ತಾ.೨ಕ್ಕೆ ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಶ್ರೀ ನಾರಾಯಣ ಗುರು ಸ್ವಾಮಿಯವರ ಜನ್ಮ ದಿನಾಚರಣೆಯಾಗಲಿದೆ. ನಮ್ಮ ಜಿಲ್ಲೆಯಲ್ಲೂ ನಗರದಲ್ಲೂ ಅದನ್ನು ಅವರ ಭಕ್ತರು, ಪರಿಶುದ್ಧಾಚರಣೆಯಿಂದ ಆಚರಿಸಬೇಕಾಗಿ ಎಂ. ಕೆ. ವೈದ್ಯ ಅವರು ವಿನಂತಿಸುತ್ತಾರೆ.

ಯಶ ಕೋರಿಕೆ

ಗಾಂಧಿ—ಜಿನ್ನಾ ಭೇಟಿ ಯಶಸ್ವಿಯಾಗಲೆಂದು ಕೋರುವ ಒಂದು ಸಂಯುಕ್ತ ಪ್ರಕಟಣೆಯನ್ನು ಜಿಲ್ಲೆಯ ಕಾಂಗ್ರೆಸ್ ಮುಖಂಡರೂ, ಕಮ್ಯೂನಿಸ್ಟ್ ಪಕ್ಷದವರೂ ಸಹಿಹಾಕಿ ಹೊರಡಿಸಿರುವರು.

ಕಾಂಗ್ರೆಸ್ ಸಭೆ

ಇಂದಿನ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸಿದ ಘಟನೆಗಳ ದೃಷ್ಟಿಯಿಂದ ಪರ್ಯಾಲೋಚಿಸಲು ಕಾಂಗ್ರೆಸ್ ಕಾರ್ಯಕರ್ತರ ಸಭೆ ಕರೆಯಲು ಅಧ್ಯಕ್ಷ ಶ್ರೀ. ಅಧಿಕಾರಿಯವರು ಮಾನ್ಯ ಕಲೆಕ್ಟರರ ಸಮ್ಮತಿಗಾಗಿ ಪತ್ರ ಬರೆದಿದ್ದು ಇದು ತನಕ ಉತ್ತರ ಬಾರದಿದ್ದರಿಂದ ಈಗ ಪುನಃ ಮತ್ತೊಂದು ವಿನಂತಿ ಪತ್ರವನ್ನು ಕಳುಹಿಸಿರುವರಂತೆ.

ಪ್ಲೇಗು ವರದಿ

ನಗರದಲ್ಲಿ ಪುನಃ ಈ ಜಾಡ್ಯವು ಕುರುಹುಗಳನ್ನು ತೋರಹತ್ತಿದೆಯಾಗಿ ತಿಳಿದು ಬರುತ್ತದೆ. ಇದು ಹೆಚ್ಚಾಗಿ ಬೊಕ್ಕಪಟ್ಟಣದ ಆಸುಪಾಸಿನಲ್ಲೆಯೇ ಪ್ರಸಾರದಲ್ಲಿರಬಹುದೆಂದು ಊಹಿಸಲಾಗಿದೆ. ಆ ಸ್ಥಳಗಳಲ್ಲಿ ಕೆಲಸ ಮಾಡುವವರಿಗೆ ಈ ರೋಗ ತಗಲಿ ಒಬ್ಬನು ಮರಣಪಟ್ಟನು. ಇನ್ನೊರ್ವ ಮುದುಕಿ ಮಾತ್ರ ಪುಣ್ಯದಿಂದ ಬದುಕಿಕೊಂಡಿರುವಳಂತೆ.

ಆರೋಗ್ಯಾಧಿಕಾರಿಗಳು

ಈ ಸಂಧರ್ಭಗಳಲ್ಲಿ ಆರೋಗ್ಯ ಶಾಖೆಯ ಅಸಿಸ್ಟೆಂಟ್ ಡೈರಕ್ಟರರಾದ ಡಾ। ಸುಬ್ರಹ್ಮಣ್ಯಂ ಅವರು ನಾಳೆ ೨ಕ್ಕೆ ಇಲ್ಲಿಗೆ ಬರುವವರಿದ್ದು, ೨, ೩ ದಿನಗಳ ತನಕ ಇಲ್ಲಿರುವರೆಂದು ತಿಳಿದುಬರುತ್ತದೆ.

ರೇಶನ್ ಕಾರ್ಡ್ ವರ್ಗಾಯಿಸುವಿಕೆ

ನಗರದ ರೇಶನ್ ಜ್ಯಾರಿಯಲ್ಲಿರುವ ಪ್ರದೇಶದಲ್ಲಿ ಯಾರಾದರೂ ತಮ್ಮ ವಸತಿಯನ್ನು (ಅಂದರೆ ಒಂದು ಮನೆ ಬಿಟ್ಟು ಇನ್ನೊಂದಕ್ಕೆ ಬಿಡಾರ ಹೋಗುವಾಗ) ಸ್ಥಳಾಂತರ ಮಾಡುವಾಗ ತಮ್ಮ ಸಕ್ಕರೆ ಮತ್ತು ಎಣ್ಣೆ ಕಾರ್ಡುಗಳನ್ನು ತಾವು ಬಿಟ್ಟ ಮನೆಯಲ್ಲಿ ವಸತಿ ಬರುವವರಿಗೆ ಕೊಡಬೇಕು. ಇವರಿಗೆ ಅದರಲ್ಲಿರುವ ಪ್ರಮಾಣದಷ್ಟೆ ದೊರಕುವುದು. ಅವರು ತಮ್ಮ ಹೆಸರನ್ನು ಕಲೆಕ್ಟರರ ಆಫೀಸಿನಲ್ಲಿ ತಿದ್ದಿಸಿ ಕೊಳ್ಳಬೇಕು. ಖಾಲಿಯಾದ ಮನೆಗೆ ಯಾರೂ ಬರದಿದ್ದ ಪಕ್ಷಕ್ಕೆ ಕಾರ್ಡುಗಳನ್ನು ಕಲೆಕ್ಟರರ ಆಫೀಸಿಗೇ ಒಪ್ಪಿಸಬೇಕು. ಈ ವ್ಯವಸ್ಥೆಯಿಂದ ಒಂದು ಮನೆಯಿಂದ ಇನ್ನೊಂದು ಮನೆಗೆ ಬಿಡಾರ ಹೋಗುವವರು ಪದೇ ಪದೇ ಅರ್ಜಿ ಮಾಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ರಮ್ಜಾನ್ ರೇಶನ್

ಮುಸ್ಲಿಂ ಬಂಧುಗಳಿಗೆ ರಮ್ಜಾನ್ ಕಾಲದಲ್ಲಿ ಇಮ್ಮಡಿ ಸಕ್ಕರೆ ದೊರಕುವಂತಾಗಿದೆ ಮಾತ್ರವಲ್ಲ ಈಗ ಒಂದುವರೆ ಪಾಲಷ್ಟು ಚಿಮಿಣಿ ಎಣ್ಣೆ ಕೂಡಾ ಪಡೆಯಲು ಅರ್ಹರಾಗಿರುವರು—ರಮ್ಜಾನ್ ಕಾಲಕ್ಕೆ ಮಾತ್ರ.

ಕರ್ನಾಟಕ ಸಂಘ

ಸ್ಥಳೀಯ ಸೈಂಟ್ ಎಗ್ನೇಸ್ ಮಹಿಳೆಯರ ಕಾಲೇಜಿನಲ್ಲಿ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ಬಿ. ವಿ. ರಮಣ ಅವರು ಕರ್ನಾಟಕ ಸಂಘದ ಉದ್ಘಾಟನಾ ಸಮಾರಂಭ ನೆರವೇರಿಸಿದರು. ಅಲ್ಲಿನ ಪ್ರಧಾನ ಕನ್ನಡ ಪಂಡಿತರಾದ ಕಡಂಗೋಡ್ಲು ಶಂಕರ ಭಟ್ಟರ ಶ್ರಮದ ಫಲವಿದಿರಬಹುದು—ಸ್ತುತ್ಯ.

ನಗರ ಸಭೆ

ತಾ. ೨೧ಕ್ಕೆ ಜರಗಿದ ಮುನಿಸಿಪಲ್ ಸಭೆಯಲ್ಲಿ ಮಂಜೂರಾತಿ ಪಡೆದ ಇಲ್ಲವೆ ಪರ್ಯಾಲೋಚಿಸಲಾದ ಮುಖ್ಯ ವಿಷಯಗಳು:— ಹಂಪನಕಟ್ಟೆ ಬಸ್ ಸ್ಟೆಂಡಿನ ಬಳಿ ಪ್ರಯಾಣಿಕರ ಸೌಕರ್ಯಕ್ಕಾಗಿ ಒಂದು ಶೆಡ್ ಕಟ್ಟಿಸಲಿರುವರು. ಜಟ್ಕಾ ಸವಾರಿ ಗಾಡಿಗಳ ಬಾಡಿಗೆಯನ್ನು ಕಾನೂನು ಬದ್ಧವಾಗಿ ಮಿತಗೊಳಿಸಲು ಕಲೆಕ್ಟರ್, ಪೋಲಿಸ್ ಸುಪರಿಂಟೆಂಡ್ ಅವರಿಗೆ ಅರ್ಜಿ ಹಾಕಿ ಕೊಳ್ಳಲಾಗುವುದು. ಎ. ಆರ್. ಪಿ. (ಬಾಂಬಿನಿಂದ ರಕ್ಷಣೆ ಮಾಡಲು ಮಾರ್ಗದ ಬಳಿ ಕಟ್ಟಿಸಿದ ಗೋಡೆ ಆವರಣಗಳು) ಆಶ್ರಯಗಳನ್ನು ಮೂತ್ರಾಶ್ರಯಗಳಾಗಿ ಮಾರ್ಪಡಿಸಲು ಚರ್ಚೆಗಳಾದುವು. ವಿದ್ಯುದ್ದೀಪಗಳನ್ನು ಪ್ರಾತಃ ಕಾಲ ೪ರಿಂದ ೭ರ ತನಕ ಉರಿಸಲಾಗುವುದು. ಮಾಂಸಕ್ಕೆ ರಾತ್ರಿಗೆ ೬ ಆಣೆ ಕ್ರಯ ನಿಶ್ಚಯ ಮಾಡಲು ಪ್ರತ್ಯೇಕ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗುವುದು.

ಜುಲ್ಮಾನೆ

ಟಾರ್ಚು ಬಲ್ಬುಗಳನ್ನು ನಿಶ್ಚಿತ ದರಕಿಂತ ಹೆಚ್ಚಿಗೆ ಮಾರಿದ್ದಕ್ಕೆ ಶ್ರೀ. ಬಿ. ವೆಂಕಟೇಶ ಬಾಳಿಗ ಎಂಬವರನ್ನು ೫೦೦ ರೂ. ಜುಲ್ಮಾನೆಗೆ ಗುರಿಪಡಿಸಲಾಯಿತು.

ಮೆಟ್ಟೂರು ಮಲ್ಲ್ ಬಟ್ಟೆಯನ್ನು ನಿಶ್ಚಿತ ಬೆಲೆಗಿಂತ ಥಾನಿಗೆ ೧॥ ಆಣೆ ಹೆಚ್ಚಿಗೆ ಬೆಲೆಗೆ ಮಾರಿದ್ದಕ್ಕಾಗಿ ಮೆಸರ್ಸ್ ಚಂದ್ರಾನಾ, ಜಯಂತಿಲಾಲ್, ವಿಠಲ್ಜಿ ಮಾಧವಜಿ ಈ ಸಂಸ್ಥೆಯವರಿಗೆ ಪ್ರತಿಯೋರ್ವರಿಗೆ ರೂ. ೪೫೦ ಜುಲ್ಮಾನೆ ವಿಧಿಸಲಾಗಿದೆ.

ಪ್ರವಾಸ

ದೇವಸ್ಥಾನಗಳ ಆಡಳಿತ ಶಾಖೆಯ ಡಿವಿಜನಲ್ ಕಮಿಶನರರಾದ ಶ್ರೀ ಎಸ್. ಮನ್ನಾಡಿ ನಾಯರ್ ಎಂ. ಬಾರ್-ಎಟ್-ಲಾ ಅವರು ನಮ್ಮ ಜಿಲ್ಲೆಯಲ್ಲಿ ಹತ್ತು ದಿನ ಪ್ರವಾಸ ಮಾಡಿ ಪ್ರಮುಖ ದೇವಸ್ಥಾನ ಆಡಳಿತಗಳನು ತಿಳಿದು ಕೊಂಡು ಹಿಂತಿರುಗಿರುವರು.

ಸಹಕಾರಿ ಸಂಘ

ಜಿಲ್ಲೆಯ ೬೧ ಪ್ರೈಮರಿ ಸಹಕಾರಿ ಸಂಘಗಳ ಪ್ರತಿನಿಧಿಗಳು ಸಭೆ ಸೇರಿ ನಿಯಂತ್ರಿತ ಪದಾರ್ಥಗಳನ್ನು ತಮ್ಮಲ್ಲಿ ಮಾರಾಟಕ್ಕೆ ಕೊಡಬೇಕೆಂದು ಕೇಳುವ ಮನವಿಯನ್ನು ಸರಕಾರಕ್ಕೆ ಮಾಡಲು ನಿರ್ಧರಿಸಿರುವರು. ಶ್ರೀ ಯು. ಕಣ್ಣಪ್ಪನವರು ಅಧ್ಯಕ್ಷರಾಗಿದ್ದರು.

ಹಬ್ಬದ ಊಟವಿಲ್ಲ

ಅಕ್ಕಿ ಪೂರೈಕೆಯ ತೊಂದರೆಯಿಂದ ಈ ಸಲ ದೇವಸ್ಥಾನಗಳಲ್ಲಿ ಹಬ್ಬದ ಸಮಯ ನಡೆಯಲಿರುವ ಭೋಜನಗಳು ರದ್ದು ಮಾಡಲಾಗಿವೆ. ಅನಂತಚತುರ್ದಶಿಯ ದಿನ ವರ್ಷದ ಪ್ರಥಮ ಸಾರ್ವಜನಿಕ ಸಮಾರಾಧನೆಯಾಗುತಿತ್ತು. ಈ ಸಲ ನಿಶ್ಚಿತ ಬ್ರಾಹ್ಮಣರು ಮಾತ್ರ ಆಹ್ವಾನಿಸಲ್ಪಟ್ಟು ನಿತ್ಯದಂತೆ ಭೋಜನ ನಡೆಯುವುದು. ಪರಿಸ್ಥಿತಿಯನ್ನು ಗಮನಿಸಿ ಸಾರ್ವಜನಿಕರು ಸಹಕರಿಸುವರೆಂದು ಅಪೇಕ್ಷೆ.

ಹವಾಮಾನ

ನಗರದಲ್ಲಿ ಮಳೆಯು ಬಹಳ ಕಡಿಮೆಯಾಗಿ, ಬಿಸಿಲು ಯಥಾ ಪೂರ್ವದಂತೆ ಕಾಯಹತ್ತಿದೆ. ಮಳೆಗಾಲದಲ್ಲಿ ಹಾಳಾದ ರಸ್ತೆ ಹಾದಿಗಳನ್ನು ದುರಸ್ತಿ ಮಾಡುವ ಕಾರ್ಯವು ಸಾಗುತ್ತಿದೆ.

ತೆಂಗಿನೆಣ್ಣೆ

ಕೆಲವು ದಿವಸಗಳಿಂದ ನಗರದೊಳಗೆ ಇದರ ಅಭಾವವು ತುಂಬಾ ಅನುಭವಕ್ಕೆ ಬಂದಿತು. ದಾರಾಳವಾಗಿ ತೆಂಗು ಬೆಳೆಯುವ ಪಶ್ಚಿಮ ಕರಾವಳಿಯಲ್ಲಿ ಎಣ್ಣೆಗೆ ಬರಗಾಲ ಬಂತೆಂಬ ಭಾವನೆ ಜನತೆಯಲ್ಲಿ ಕಳವಳವನ್ನುಂಟು ಮಾಡಿತ್ತು. ಹೆಚ್ಚಾಗಿ ಕೊಚ್ಚಿ, ತಿರುವಾಂಕೂರುಗಳಿಂದ ಬರುತಿದ್ದ ಎಣ್ಣೆಯು ವಾಹನ ಸೌಕರ್ಯಗಳ ತೊಂದರೆಯಿಂದ ಕೆಲವು ನದಿ ತಡೆಗಟ್ಟಿದಂತಾದುದರಿಂದ ಈ ಎಣ್ಣೆ ಅಭಾವಕ್ಕೆ ಕಾರಣವೆಂದು ಊಹಿಸಲಾಗಿತ್ತು. ಈಗ ಪುನಃ ಆ ಕಡೆಗಳಿಂದ ಕೆಲವು ವಾಗಿನು ಎಣ್ಣೆ ಬಂದಿರುವುದರಿಂದ ಎಣ್ಣೆ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ.

ರಸ್ತೆ ನಿಯಮ

ಅತೀ ಹೆಚ್ಚು ಜನ ಮತ್ತು ವಾಹನ ಸಂಚಾರವುಳ್ಳ, ಮತ್ತೆ ಇತರ ಪ್ರಾಮುಖ್ಯ ರಸ್ತೆಗಳಲ್ಲಿ ಜನರು ಬದಿಯ ಕಾಲು ದಾರಿಯಲ್ಲಿ ನಡೆಯುವಂತೆ ನಿರ್ದೇಶಿಸಲು ಅಲ್ಲಲ್ಲಿ ಪೋಲಿಸ್ ಉಸ್ತುವಾರಿ ಇಟ್ಟಿರುವರು. ಆಗಿಂದಾಗ್ಗೆ ಮಿಲಿಟರಿ ವಾಹನಗಳೂ, ಮತ್ತಿತರ ರಭಸದಿಂದೊಡುವ ಗಾಡಿಗಳು ರಸ್ತೆಗಳಲ್ಲಿ ಒಡುವಾಗ ಆಕಸ್ಮಾತಾಗಿ ಆಗಬಹುದಾದ ಘಟನೆಗಳನ್ನು ತಪ್ಪಿಸಲು ಈ ನಿಯಮವನ್ನು ಅನುಸರಿಸಿರಬಹುದಾಗಿ ಊಹಿಸಲಾಗಿದೆ. ಅಂತೂ ಕಾಲು ದಾರಿಯಲ್ಲಿಯೇ ಹೆಚ್ಚಾಗಿ ನಡೆಯುವ ಅಭ್ಯಾಸ ಮಾಡಿದ್ದರಿಂದ ಒಳಿತಲ್ಲದೆ ಕೆಡುಕಿಲ್ಲ. ಈ ಸಂಧರ್ಭದಲ್ಲಿ ಮದ್ರಾಸ್ ನಗರದಲ್ಲಿ ದಿನ ನಿತ್ಯವೆಂಬಂತೆ ಆಗುವ ಮೋಟರ್ ಅಪಘಾತಗಳನ್ನು ನೆನಸಿದರೆ ಈ ನಿಯಮದ ಉಪಯುಕ್ತತೆಯು ತೋರದಿರದು.

ಮೈದಾನಿನಲ್ಲಿ ಹಂಚು

ಸ್ಥಳೀಯ ಲೈನ್ ಮೈದಾನಿನಲ್ಲಿ ಹಂಚನ್ನು ದಾಸ್ತಾನ ಮಾಡಿದ್ದು ಸುಮಾರು ಅರ್ಧದಷ್ಟು ಸ್ಥಳವನ್ನು ಅದು ಆಕ್ರಮಿಸಿದೆ. ಸುಮಾರು ಮುಕ್ಕಾಲು ಪಾಲು ವರೆಗಿನ ಸ್ಥಳವು ತುಂಬುವಷ್ಟು ದಾಸ್ತಾನು ಇಡಲಾಗುವುದೆಂದು ತಿಳಿದು ಬರುತ್ತದೆ. ಸಾರ್ವಜನಿಕರ ಸಾಯಂಕಾಲ ಸಂಚಾರಕ್ಕೂ ವಿಶ್ರಾಂತಿಗೂ ಮತ್ತು ಕ್ರೀಡಾ ಆಟಗಳಿಗೂ ಈ ಮೈದಾನ ಉಪಯೋಗಿಸಲ್ಪಡುತಿತ್ತು. ಮುನ್ಸಿಪಾಲಿಟಿಯವರು ಪೆಂಟ್ ಲೆಂಡ್ ಪೇಟೆ ಮೈದಾನನ್ನು ಕ್ರಿಕೆಟ್ ಮತ್ತಿತರ ಆಟಗಳಿಗೆ ಉಪಯುಕ್ತವಾಗುವಂತೆ ದುರಸ್ತಿ ಮಾಡಲು ಹಣ ಮಂಜೂರು ಮಾಡಿರುವುದು ಸ್ತುತ್ಯ. ಕ್ರೀಡಾ ಪ್ರಿಯರು ಇದರ ಅನುಕೂಲತೆ ಪಡೆಯುವರೆಂದು ಹಾರೈಸಲಾಗಿದೆ.

ಹೊಸ ರೇಶನ್ ಕಾರ್ಡು

ನಗರದಲ್ಲಿ ರೇಶನ್ ಪ್ರಾರಂಭದಲ್ಲಿ ಹಂಚಿದ ಕಾರ್ಡುಗಳ ಬದಲಿಗೆ ಈ ... ಗಳಿಂದ ಉಪಯೋಗಕ್ಕೆ ಬರುವ ಹೊಸ ಕಾರ್ಡುಗಳನ್ನು ಮುನ್ಸಿಪಾಲಿಟಿಯ ಸಂಬಂಧಿಯವರು ಹಂಚುತ್ತಿರುವರು. ತಾ. ೨ರಿಂದ ಇವುಗಳನ್ನು ಉಪಯೋಗಿಸಬೇಕು. ಹಿಂದಿನವುಗಳನ್ನು ಅಕ್ಕಿ ಪಡೆಯುವಲ್ಲಿ ಕೊಡಬೇಕು. ಆದರೆ ಈ ಹೊಸ ಕಾರ್ಡುಗಳು ಇನ್ನೂ ಅನೇಕರಿಗೆ ತಲುಪಿಲ್ಲವಾಗಿ ವದಂತಿ ಇದೆ. ದಿನ ನಿತ್ಯ ಅಕ್ಕಿ ತರುವವರು ಕಾರ್ಡು ಸಿಗದಿದ್ದರೆ ಬಹಳ ತೊಂದರೆಗೆ ಗುರಿಯಾಗುವುದರಿಂದ ಇಂತಹ ಅವ್ಯವಸ್ಥೆಯು (ಅದು ನಿಜವಾದರೆ) ಬಾರದಂತೆ ಅಧಿಕಾರಿಗಳು ಪ್ರಯತ್ನ ಮಾಡಬೇಕಾಗಿ ಮನವಿ ಇದೆ.

ಹುಲಿಕಾಟ

ಉರ್ವದ ಬಳಿ ಡಬ್ಬಲ್ ಗ.ಡ್ಡೆ... ಆಸುಪಾಸಿನಲ್ಲಿ ಹುಲಿ ಕಾಟ ತೋರಿ ಬಂದಿದೆಯಾಗಿ ಆಸುಪಾಸಿನವರ ಕಡೆಯಿಂದ ಬಂದ ವರದಿಯಿಂದ ತಿಳಿದು ಬರುತ್ತದೆ. ಕೆಲವು ದಿನಗಳ ಹಿಂದೆ ಅದು ಒಂದು ದನವನ್ನೂ ಆಡನ್ನೂ ತಿಂದುಹಾಕಲ್ಪಟ್ಟ ಕುರುಹುಗಳು ಕಂಡು ಬಂದಿವೆಯಂತೆ.

ಪುತ್ತೂರು

ಮಾರ್ಗದಲ್ಲಿ ಕಿರಕುಳ ತೊಂದರೆ ಕೊಡುವ ಪ್ರಾಣಿಗಳ ಮಾಲಕರಿಗೆ ವಿಧಿಸಿದ ಜುಲ್ಮಾನೆಯು ಕೆಲವು ಸಂದರ್ಭಗಳಲ್ಲಿ ಆ ಪ್ರಾಣಿಗಳ ಬೆಲೆಗಿಂತಲೂ ಹೆಚ್ಚಾಗಿತ್ತಂತೆ. ಹಳ್ಳಿಗಾಡಿನ ಪ್ರಾಂತವಾಗಿರುವ ಈ ಚಿಕ್ಕ ಪೇಟೆಗಳಲ್ಲಿ ಪ್ರಾಣಿಗಳ ಚಲಾವಣೆಯು ಸಾಮಾನ್ಯ ವಿಷಯವಾಗಿದೆ.

ಇಲ್ಲಿ ಬಸ್ಸು ವಾಹನಗಳು ಪೋಲಿಸ್ ಸ್ಟೇಶನ್ ಬಳಿ ಇಲ್ಲವೆ ಬಸ್ ಸ್ಟೆಂಡ್ ಬಳಿ ಮಾತ್ರ ನಿಲ್ಲುವವು. ಮಧ್ಯದಲ್ಲಿ ಎಲ್ಲೂ ನಿಲ್ಲಿಸಲಾಗುವುದಿಲ್ಲವೆಂಬುದನ್ನು ಪ್ರಯಾಣಿಕರು ಗಮನದಲ್ಲಿಡಬೇಕು.

ಉರಿಮಾಲ್ ನಾರಾಯಣ ರೈಗಳ ಕೊಲೆ ಸಂಬಂಧ ಸೆರೆಹಿಡಿಯಲ್ಪಡಬೇಕಾಗಿದ್ದ ಶ್ರೀ. ಮಾಯಿಲ್ ರೈ ವ ಶ್ರೀ. ಸಂಜೀವ ರೈ ಇವರು ಇನ್ನೂ ತಲೆ ತಪ್ಪಿಸಿಕೊಂಡಿರುವರು.

ಕಾರ್ಕಳ

ಅಕ್ಕಿಗಾಗಿ ಇಲ್ಲಿ ಅನೇಕರ ಮನೆಗಳನ್ನು ಜಪ್ತಿಮಾಡಲಾಯಿತು. ವಿಶೇಷ ಹೆಚ್ಚು ಅಕ್ಕಿ ದೊರೆಯಲಿಲ್ಲ...

[illegible] 1—9—1944

[illegible]

[illegible] ಅಭ್ಯಾಸ ನಡೆಸುತ್ತಿದ್ದಾಗ [illegible] ಬರುವ ಬುದ್ಧ [illegible] ತಮ್ಮನ್ನು ಬೆರಗು [illegible] ಅವರು [illegible] ಅಭೀಸಿ, [illegible] ಮೂರು ಕಪಿಗಳಿರುವ ಒಂದು [illegible] ಗೊಂಬೆಯನ್ನು ತೋರಿಸಿ 'ಇವರು ನನ್ನ ಗುರುಗಳು' ಎಂದರು. ಅವರನ್ನು ಸಂದರ್ಶಿಸಲು ಬಂದ ಓರ್ವ [illegible]ನಿಯನು ಅದನ್ನು ಅವರಿಗೆ ಕೊಟ್ಟಿದ್ದನು. ತಾವು ಹೋದಲ್ಲಿಗೆ ಅವರು ಅದನ್ನು ಜೊತೆಯಲ್ಲಿ ಕೊಂಡು ಹೋಗುತ್ತರು.

ಗೊಂಬೆಯಲ್ಲಿನ ಕಪಿಗಳಲ್ಲಿ ಒಂದು ತನ್ನ ಎರಡು ಕೈಗಳಿಂದ ಬಾಯಿಯನ್ನು ಮುಚ್ಚಿ ಕೊಂಡಿತ್ತು. ಇನ್ನೊಂದು ಕಣ್ಣುಗಳನ್ನು ಮುಚ್ಚಿತ್ತು. ಕಡೆದೊಂದು ಕಿವಿಗಳನ್ನು ಮುಚ್ಚಿಕೊಂಡಿತ್ತು. ಇದರ ಅರ್ಥವು ಮಹಾತ್ಮರಿಗೆ ಸ್ಫೂರ್ತಿಯ ಸಂದೇಶವನ್ನು ಕೊಟ್ಟಿದೆ. "ನಾವು ಇತರರ ವಿಷಯ 'ಕೆಡುಕು ಮಾತನಾಡಬಾರದು, ಬಳ್ಳು ಹೇಳಬಾರದು" ಎಂಬುದೇ ಬಾಯಿ ಮುಚ್ಚಿದ ಕಪಿಯ ಸಂದೇಶ. ಇತರರ ವಿಷಯ ನಿಂದ್ಯಾತ್ಮಕವಾದ ಮತ್ತು ದೋಷಾರೋಪದ ಸಂಗತಿಗಳನ್ನು ನಾವು ಕೇಳ ಬಾರದು-" ಇದು ಕಿವಿ ಮುಚ್ಚಿದ ಕಪಿಯು ಸಾರುವ ಸಂದೇಶ.

"ಈ ಮೂರು ಸಂದೇಶಗಳೇ ಮಹಾತ್ಮರ ನೈತಿಕ ಜೀವನದ ಉಚ್ಚ ತತ್ವಗಳು. ಅವರು ಸತ್ಯವಾದಿಗಳು. ದುರ್ವಿಷಯಗಳಿಗೆ ಅವರ ದೃಷ್ಟಿ ಸೋಲದು ಇತರರ ಚಾಡಿ ನಿಂದೆಗಳನ್ನು ಅವರು ಯಾರಿಂದಲೂ ಕೇಳಲು ಒಪ್ಪುವುದಿಲ್ಲ.

ಗೊಂಬೆಗಳ ವಿಚಾರ ಮಾತನಾಡುತ್ತಾ ಮಹಾತ್ಮರು ಹೀಗೆಂದರು-"ಈ ಕಪಿಗಳ ಗೊಂಬೆಗಳು ಆಕಾರದಲ್ಲಿಯೂ ಕೆತ್ತನೆಯಲ್ಲಿಯೂ ಕಲಾ ಪೂರ್ಣವಿವೆ ಆದರೆ ಅವುಗಳಿಂದ ನಮಗೆ ದೊರಕುವ ತತ್ವ ನಿರೂಪವು ಹೆಚ್ಚಿನ ಮೌಲ್ಯದ್ದಿರುತ್ತದೆ. ಮಾನವ ವರ್ಗಕ್ಕೇ ಇದು ಶುಭದಾಯಕವಿದೆ. ಮನುಷ್ಯನನ್ನು ಕೀಳು ಮಟ್ಟದಿಂದ ನೈತಿಕ ಉನ್ನತಿಗೆ ಹುರಿದೆಬ್ಬಿಸದ ಕಲೆಯಿಂದ ಪ್ರಯೋಜನವೇನು? ಈ ಗೊಂಬೆ ಕಪಿಗಳು ನನ್ನನ್ನು ಎಚ್ಚರಿಸುತ್ತಿವೆ. ಆದುದರಿಂದ ಅವು ನನ್ನ ಗುರುಗಳು."

ಗಿಡ್ಡ ಮನುಷ್ಯರಿಗೆ ರೋಗ ತಗ್ಗಲದು

ವಾಮನಾ ಕೃತಿಯ ಜನರ ಕುರಿತು ಸಾರಸ್ಯ ಸಂಗತಿಗಳು

ಸರ್ವ ಸಾಧಾರಣವಾಗಿ ಮನುಷ್ಯ ವ್ಯಕ್ತಿಯ ಎತ್ತರವು ೫ರಿಂದ ೬ ಅಡಿ ಎನ್ನಬಹುದು. ದೊಡ್ಡ ತಲೆಯಿದ್ದು ಗಿಡ್ಡವಾದ ಕೈಕಾಲು, ದೇಹಾಂಗಳಿರುವವರನ್ನು ಕುಳ್ಳರೆನ್ನುತ್ತಾರೆ. ಆದರೆ ತಲೆಯಿಂದ ಕಾಲ ಬೆರಳಿನ ತನಕ ಸರಿಯಾದ ಪ್ರಮಾಣದ ಅಂಗಾಂಗಗಳಿದ್ದು ಎತ್ತರದಲ್ಲಿ ಎರಡು ಮೂರು ಅಡಿಗಳಿಗೆ ಮಿಗದೆ ಇರುವ ಕೆಲವು ಜನರಿರುತ್ತಾರೆ. ಇವರು ಕುಳ್ಳರಲ್ಲ. ಇವರನ್ನು ಗಿಡ್ಡರೆಂದು ಕರೆಯಬಹುದು. ವಿಷ್ಣುವು ವಾಮನ ಅವತಾರ ತಾಳಿದ್ದು ಈ ಗಿಡ್ಡಾಕೃತಿಯಲ್ಲಿ ಎಂದು ಹೇಳುತ್ತಾರೆ.

ಜಗತ್ತಿನಲ್ಲಿ ಸುಮಾರು [illegible] ಸಾವಿರ ಗಿಡ್ಡರಿದ್ದಾರೆ. ಪ್ರತಿ ಮಿಲಿಯ ಜನರಲ್ಲಿ ಒಬ್ಬ ಗಿಡ್ಡ ಹುಟ್ಟುತ್ತಾನೆ. ಅವರು ಬೆಳೆಯದಿರಲಿಕ್ಕೆ ಕಾರಣ ಕೆಲವು ಸಂಕುಚಿತಗೊಂಡ ದೇಹ ಗ್ರಂಥಿಗಳೆಂದು ವಿಜ್ಞಾನಿಗಳು ಹೇಳುವರು. ಹುಟ್ಟಿನಲ್ಲಿ ಇವರು ಸಾಮಾನ್ಯ ಕೂಸಿನಷ್ಟೆ ಗಾತ್ರವಿದ್ದು ಬೆಳೆಯುವಾಗ ಕೃಶರಾಗುತ್ತಾ ಹೋಗುತ್ತಾರೆ. ಇಪ್ಪತ್ತು, ಮೂವತ್ತು ವರ್ಷ ಪ್ರಾಯದ ಗಿಡ್ಡರು ಕೆಲವು ವೇಳೆ ಚಿಕ್ಕ ಹುಡುಗರಂತೆ ತೋರುತ್ತಾರೆ. ಬುದ್ಧಿಯಲ್ಲಿ ಬೆಳೆದ ಮನುಷ್ಯರಷ್ಟೆ ಚಾತುರ್ಯವುಳ್ಳವರಾಗಿರುತ್ತಾರೆ.

ಅಮೆರಿಕದಲ್ಲಿ ಓರ್ವ ಗಿಡ್ಡನು ವಿಮಾನ ಕಾರ್ಖಾನೆಯಲ್ಲಿ ವಾರಕ್ಕೆ ೩೦೦ ರೂಪಾಯಿ ಸಂಪಾದಿಸುತ್ತಾನೆ. ದೊಡ್ಡ ವಿಮಾನ ಯಂತ್ರಗಳ ಒಳಗಿನ ದುರುಸ್ತಿ ಮಾಡಲಿಕ್ಕೆ ಉದ್ದ ಜನರಿಗೆ ಸಾಧ್ಯವಿಲ್ಲದಾಗ ಈ ಗಿಡ್ಡನನ್ನು ಒಳಗೆ ನುಗ್ಗಿಸಿ ಕೆಲಸ ಮಾಡಿಸುತ್ತಾರೆ.

ತುಂಬಿದ ಬಸ್ಸಿನಲ್ಲಿ ಓರ್ವ ತರುಣಿಯು ಬಾಲಕನಂತೆ ತೋರುವ ಗಿಡ್ಡನೊಬ್ಬನನ್ನು ತೊಡೆಯ ಮೇಲೆ ಕುಳ್ಳಿರಿಸಿದಳು. ಚಿಕ್ಕವನೆಂದು ತಿಳಿದು ಅವನ ಕಪೋಲಕ್ಕೆ ಮುತ್ತಿಟ್ಟಳು. ಈ ವಾತ್ಸಲ್ಯ ಚಿಹ್ನೆಯನ್ನು ಗಿಡ್ಡನು ತರುಣಿಗೆ ಮರುಪಾವತಿ ಮಾಡಿದಾಗ ಅವನು ೨೫ ವರ್ಷದ ಗಿಡ್ಡನೆಂದು ತಿಳಿಯಿತು. ತರುಣಿಯು ಗಾಬರಿಯಿಂದ ಚೀರಿದಳಂತೆ-

ಗಿಡ್ಡರನ್ನು ಚಿಕ್ಕ ಹುಡುಗರಂತೆ ನಾವು ಕಂಡರೆ ಅವರಿಗೆ ಬೇಸರವಾಗುತ್ತದೆ. ಅವರಿಗೆ ಬೆಳೆದವರಂತೇ ತಿನ್ನಲು-ಆಡಲು ಮನಸ್ಸಿರುವುದು. ಸಂಸಾರಸ್ಥ ಗಿಡ್ಡರು ತಮ್ಮ ಹಾಸಿಗೆಗಳನ್ನು ದೊಡ್ಡದಾಗಿಯೇ ತಯಾರಿಸುತ್ತಾರೆ. ಕೆಲವು ಗಿಡ್ಡರು ಚಿಕ್ಕ ಮನೆಗಳನ್ನು ಕಟ್ಟಿಸಿ ಅದರಲ್ಲಿ ತಮ್ಮ ಆಕೃತಿಗೆ ತಕ್ಕಂತಿರುವ ವಸ್ತುಗಳನ್ನೆ ತುಂಬಿ ಪ್ರೇಕ್ಷಕರನ್ನು ಬರ ಮಾಡಿಸಿ ಹಣ ಸಂಪಾದಿಸುತ್ತಾರೆ.

ಗಿಡ್ಡರ ಸಂಸಾರಿಕ ಜೀವನವೂ ಬೆಳೆದವರಂತೇ ಇರುವುದು. ಅವರು ತಮ್ಮಂತಿರುವವರನ್ನು ಮದುವೆ ಮಾಡಿ ಕೊಳ್ಳುವುದಿಲ್ಲ ಸರಿ ಎತ್ತರ ಬೆಳೆದವರೊಡನೆಯೇ ದಾಂಪತ್ಯ ಬೆಳೆಸಲಿಚ್ಛಿಸುತ್ತಾರೆ. ಗಿಡ್ಡ ತಂದೆಗಾಗಲಿ, ತಾಯಿಗಾಗಲಿ,

[illegible]
(ಗತ ಸಂಚಿಕೆಯಿಂದ)

[illegible]ಗೆ ಹೋಗತಕ್ಕದ್ದೆಂದು ಇವರು ನಿಶ್ಚಯಿಸಿದರು. ಯಾವ ಬಗೆಯ ಭಯವೂ ನಮಗೆ ತೋರಲಿಲ್ಲ ಎಂಬುದು ಹೀಗೆ ಮಾಡುವುದರಿಂದ ಸಿದ್ಧವಾಗುವುದು, [illegible] ಅವರ ಅಭಿಪ್ರಾಯ. [illegible] [illegible]ನ್ನು ನೋಡಿದ್ದೊಂದೇ ತಡ. ಬಿಳಿಯರ [illegible] ತಲೆಗೇರಲಾರಂಭಿಸಿತು. ಜನ[illegible] ಹೆಚ್ಚಾಗಲಾರಂಭಿಸಿತು. ಮುಂದೆ [illegible]ಗುವದು ಸಹ ಕಠಿಣವಾಯಿತು. ಜನ[illegible]ಗುಳಿಯು ಇವರ ಬಿಳಿ ಮಿತ್ರನನ್ನು [illegible]ದಿದು ಇವರಿಂದ ದೂರ ಎಳೆದು ಒಂದು

[illegible]ಟ್ಟುವ ಮಕ್ಕಳು ಎಂದಿಗೂ ಗಿಡ್ಡರಾಗುವುದಿಲ್ಲ. (ಆದರೆ ಕುಳ್ಳರಿಗೆ ಹುಟ್ಟುವವರು ಕುಳ್ಳರಾಗುವುದು ಹೆಚ್ಚಾಗಿ ತೋರಿ ಬಂದಿದೆ). ಅಮೆರಿಕದಲ್ಲಿ ಓರ್ವ ಗಿಡ್ಡ[illegible]ಗೆ ೧೪ ಮಕ್ಕಳಾಗಿವೆ-ಎಲ್ಲರೂ ಸರಿ ಎತ್ತರದವರು.

ತಿನ್ನುಣ್ಣುವುದರಲ್ಲಿ ಗಿಡ್ಡರು ಕಡಿಮೆಯಲ್ಲ. ಸರಿಯಾಗಿ ಬೆಳೆದವರಷ್ಟೆ ತಿನ್ನುತ್ತಾರೆ. ಗಿಡ್ಡವಾಗಿದ್ದಾರೆಂದು ಅವರಿಗೆ ಸ್ವಲ್ಪ ಆಹಾರ ಕೊಟ್ಟರೆ ಅವರ ಹೊಟ್ಟೆ ಉಪವಾಸ ಬೀಳುತ್ತದೆ. ಈ ಗಿಡ್ಡರು ರೋಗರುಜಿನೆಗಳಿಗೆ ತುತ್ತಾಗದಿರಲಿಕ್ಕೆ ಯಾವುದೊ ವಿಶೇಷ ಕಾರಣವಿದೆಯೆಂದು ವೈದಕೀಯ ವಿಜ್ಞಾನಿಗಳು ಅನ್ನುತ್ತಾರೆ ತಲೆ ಕೂದಲು ಉದುರುವಿಕೆಯೂ ಇವರಲ್ಲಿಲ್ಲ.

ಮೂವತ್ತು ವರ್ಷ ದಾಟಿದ ಮೇಲೆ ಗಿಡ್ಡರು ಕೆಲವು ಇಂಚು ಬೆಳೆಯುವುದಿದೆ. ಅನೇಕರು ಈ ಪ್ರಾಯದ ನಂತರ ಸಾಧಾರಣ ಮನುಷ್ಯನಷ್ಟೆ ಎತ್ತರ ಬೆಳೆದ ನಿದರ್ಶನಗಳೂ ಇವೆ ಆದರೂ ೪½ ಅಡಿಗಳಿಗೆ ಅವರು ಎಂದೂ ಮಿಗುವುದಿಲ್ಲ. ಅಮೆರಿಕದಲ್ಲಿ ಒಬ್ಬ ಗಿಡ್ಡನು ೧೪ ಪ್ರಾಯವಾದ ಮೇಲೆ ೬ ಅಡಿಗಳ ತನಕ ಬೆಳೆದನು. ೩½ ಅಡಿ ಎತ್ತರದ ಟೋಮ್ ತಂಬ್ ಎಂಬ ಗಿಡ್ಡನು ಬಾರ್ನಮ್ ಎಂಬ ಪ್ರಖ್ಯಾತ ಸರ್ಕಸ್ ಮೂಲಕನ ಪೋಷಣೆಯಲ್ಲಿದ್ದನು. ಇವನು ವಿಕ್ಟೋರಿಯಾ ಮಹಾರಾಣಿಯು ಮುಂದೆ ಅವಳ ಕಾಲುಮಣೆಯ ಮೇಲೆ ಕುಳಿತು ಮಾತನಾಡುತ್ತಾ ಚಕ್ರವರ್ತಿನಿಯನ್ನು ಸಂತೋಷ ಗೊಳಿಸುತ್ತಿದ್ದನಂತೆ,

[illegible] ಇವರ ಮೇಲೆ ಕಲ್ಲು [illegible] [illegible]ಗಳ ಸುರಿಮಳೆ ನಡೆಯಿತು. ಜನರ [illegible] ಮುಖದಾನನ್ನು ತಲೆಯಿಂದ [illegible] ದೂರ ಚಲ್ಲಿದರು. [illegible] ಗಳ ಪ್ರಹಾರ ನಡೆಯಿತು. ಗಾಂಧೀಜಿಯವರಿಗೆ ಎಚ್ಚರ ತಪ್ಪಿತು. ಆದರೂ [illegible]ಕೆಗಳು ನಿಲ್ಲಲಿಲ್ಲ. ಇಷ್ಟೆಲ್ಲ ನಡೆದರೂ ಇವರನ್ನು ಸಂರಕ್ಷಿಸುವುದು ಪರಮಾತ್ಮನ ಮನಸಿನಲ್ಲಿತ್ತು. ಹತ್ತರ ನಡೆದ [illegible] ದುರ್ಘಟನೆಯನ್ನು ಪೋಲೀಸ ಸುಪರಿಂಟೆಂಡೆಂಟನ ಹೆಂಡತಿಯು ನೋಡಿದಳು [illegible] ಈ ಗದ್ದಲದಲ್ಲಿ ಒಮ್ಮೆಲೆ ಸೇರಿದಳು ಹಾಗೂ ತನ್ನ ಛತ್ರಿಗೆಯನ್ನು ತೆರೆದು ಗಾಂಧೀಜಿಯವರ ರಕ್ಷಣೆಗೆ ನಿಂತಳು. ಜನಜಂಗುಳಿ ಕಡಿಮೆಯಾಯಿತು. ಇ[illegible]ರಲ್ಲಿ ಪೋಲೀಸ ಸುಪರಿಂಟೆಂಡೆಂಟ ಸ್ವತಃ ಬಂದನು. ಅವರನ್ನು ಸುಖರೂಪ ಕರೆದುಕೊಂಡು ಹೋದನು ಗಾಂಧೀಜಿಯವರು ಬದುಕಿದರು.

ಉಕ್ಕಿದ ಉದ್ರೇಕವು ಇಳಿದ ಬಳಿಕ ಬಹುಶಃ ಜನರಿಗೆ ಪಶ್ಚಾತ್ತಾಪವಾಗಲಿಕ್ಕೆ ಸಾಕು ಈ ರೀತಿ ವರ್ತಿಸಿದ ಬಳಿಕ ಪುಂಡರನ್ನು ಶಿಕ್ಷಿಸಲಿಕ್ಕೆಬೇಕೆಂದು ಬ್ರಿಟಿಶ ಸರಕಾರದವರು ಆಫ್ರಿಕಾ ಸರಕಾರಕ್ಕೆ ಬರೆದರು ಆದರೆ ಗಾಂಧೀಜಿಯವರು 'ಯಾರೊಡನೆಯೂ ನನ್ನ ವೈರವಿಲ್ಲ. ನನ್ನು ಈಗ ಹೊಡೆಯಲನುವಾದವರು ಸತ್ಯೋದಯವಾದಾಗ ತಮ್ಮಷ್ಟಕ್ಕೆ ತಾವೇ ಪಶ್ಚಾತ್ತಾಪವನ್ನು ವ್ಯಕ್ತಮಾಡುವರು. ನಾನು ಯಾರಿಗೂ ಶಿಕ್ಷೆ ಕೊಡಿಸಲಿಚ್ಛಿಸುವುದಿಲ್ಲ,' ಎಂದರು. ಆ ಬಗೆಯಾಗಿ ಯಾರಾದರೂ ಗಾಂಧೀಜಿಯವರನ್ನು [illegible]ಯ್ಯಬಹುದು ಇಲ್ಲವೆ ಒಧೆಯಬಹುದು ಎಂಬ ಕಲ್ಪನೆ ಸಹ ನಮಗೆ ಈಗ ಅಸಹ್ಯವೆನಿಸುವುದು.

* * *

ಕೆಡುಕು ಜನರೊಡನೆ ಅಥವಾ ಕುಮಿರ್ಗಗಳೊಡನೆ ಮಿತ್ರ ಭಾವ, ಸಂತೋಷ, ಉಪೇಕ್ಷೆ ಈ ಭಾವನೆಗಳಿಂದ ಯುಕ್ತರಾಗಿ ನಡೆಯಬೇಕು. ಸುಖ ದುಃಖ, ಪುಣ್ಯ ಪಾಪ ವಿಷಯಗಳನ್ನು ಕುರಿತ ಭಾವನೆಗಳು ಜಾಗ್ರತವಾಗಿ ಅವರ ಚಿತ್ತವು ಪ್ರಸನ್ನವಾಗುವಂತೆ ನಡಕೊಳ್ಳಬೇಕು.

THE CANARA BANKING CORPORATION LTD.

(Incorporated in British India with Limited Liability)

Estd) **Head Office: UDIPI S. Kanara.** **(1906.**

Statement of affairs as on 30th April, 1944.

LIABILITIES	Rs As Ps	ASSETS	Rs. As.Ps.
1 Paid up Capital	13,68,480- 0- 0	1 Cash on hand & with bankers in Current & Fixed Deposit A/cs	19,71,808- 0- 1
2 Reserves	4,12,120-12- 8	2 Investments on (1)Govt Securities (2) Immovable properties etc.	24,26,660.- 9- 9
3 Deposits	67 30,955- 3- 4	3. Loans on Jewels & other valuable securities	33,50,167-13-3
4 Due to Bankers	7,34,366-10- 9	4. Loans on personal securities & Bills purchased	20,49,197-13-10
5 Bills for collection	6,70,379- 8- 8	5 Bills for collection as per contra	6,70 379- 8- 8
6. Sundries including revenue items	7 58,745- 8- 4	6. Office premises, furniture etc.	93,703- 0-10
		7. Sundries including revenue items.	1,13,128-13- 4
Total	1,06,75,047-11- 9	Total	1,06,75,047-11- 9

ನಾನೊಂದು ಪತ್ರದಲ್ಲಿ ಬರೆದಿರುತ್ತೇನೆ. ಅವನು ನನ್ನನ್ನು ಪ್ರೀತಿಸುತ್ತಿದ್ದನೆಂಬುದರಲ್ಲಿ ಲೇಶವೂ ಸಂಶಯವಿರಲಿಲ್ಲ. ಯಾವ ಕಾರಣದಿಂದ ಯಾರಿಗೂ ತಿಳಿದಿರಲಿಲ್ಲ. ಕಾರಣ ಸ್ತ್ರೀಯರ ವಿಷಯದಲ್ಲಿ ಅವನಿಗೆ ಹೆಚ್ಚು ಆಸಕ್ತಿ ಇರಲಿಲ್ಲ."

ವೀರೇಂದ್ರ ಚಟ್ಟೋಪಾಧ್ಯಾಯರಿಗೆ ಐರಿಷ್ ಮಹಿಳೆಯೊಂದಿಗೆ ಕ್ರಮಬದ್ಧ ವಿವಾಹವಾಗಿತ್ತು. ಅವನನ್ನು ತನ್ನ ಮತಕ್ಕೆ ಪರಿವರ್ತಿಸಿಕೊಳ್ಳಲಿಕ್ಕಾಗಲಿಲ್ಲವುದರಿಂದ ಆಕೆ ಅವನೊಂದಿಗೆ ಜಗಳ ಮಾಡಿದಳು. ಆದರೆ ವಿವಾಹ ವಿಚ್ಛೇದವಾಗದೆ ಅವನು ಸ್ಮೆಡ್ಲೆಯನ್ನು ನ್ಯಾಯಸಮ್ಮತವಾಗಿ ವಿವಾಹ ಮಾಡಿಕೊಳ್ಳಲು ಬರುವುದಿಲ್ಲ.

ಈ ಅನಧಿಕೃತ ವಿವಾಹದಿಂದ ಒಂದು ಅನನುಕೂಲತೆಯಾಯಿತು. ಎರಡು ಸಾರಿ ಬ್ರಿಟಿಷ್ ಗುಪ್ತ ಚಾರ ಪೋಲಿಸರು ಅವಳನ್ನು ಬಂಧಿಸಲು ಪ್ರಯತ್ನಿಸಿದರು— ವೀರೇಂದ್ರನ ಪತ್ನಿಯಾದುದರಿಂದ ಬ್ರಿಟಿಷ್ ಪ್ರಜೆಯಾದಳೆಂದು. ಮದುವೆ ರಿಜಿಸ್ಟರ್ ಆಗದ್ದರಿಂದ ಇದು ಸಾಧ್ಯವಾಗಲಿಲ್ಲ. ಒಂದು ಸಾರಿ ಚೀನದ ಅಮೇರಿಕನ್ ರಾಯಭಾರಿಯೊರ್ವನೊಡನೆ ಸ್ಮೆಡ್ಲೆಯು "ನೀವು ನನ್ನನ್ನು ಏನು ಬೇಕಾದರೂ ಕರೆಯಿರಿ. ಬ್ರಿಟಿಷ್ ಪ್ರಜೆಯೆಂದು ಮಾತ್ರ ಕರೆಯಬೇಡಿರಿ" ಎಂದು ಹೇಳಿದಳಂತೆ.

ಸ್ಮೆಡ್ಲೆಯು ವೀರೇಂದ್ರನಾಥನ ಕುರಿತು ಹೀಗೆ ಬರೆದಿದ್ದಾಳೆ—

"ಅವನು ಭಾರತೀಯ ಗುಪ್ತಕ್ರಾಂತಿಕಾರೀ ಚಳವಳದ ಮೂರ್ತಿಯೇ ಆಗಿದ್ದಾನೆ. ಅವನ ಬುದ್ಧಿಯು ಖಡ್ಗಧಾರೆಯಂತೆ ತೀಕ್ಷ್ಣವಿದೆ. ತಲೆಗೆ ಕರ್ರಗಾಗಿದ್ದಾನೆ. ಕಪ್ಪಾದ ಕೂದಲಿನ ರಾಶಿಯಲ್ಲಿ ಹಣೆಯಬಳಿಯ ಕೆಲವು ಬಿಳಿಯಾಗಿವೆ. ಮುಖವು ಅತ್ಯುಗ್ರತೆಯ ಭಾವನೆಯದು. ನನಗೆ ಅವನೊಂದು ಬಿರುಗಾಳಿಯಂತೆಯೂ, ಮಿಂಚಿನಂತೆಯೂ, ಕಂಡನು. ಅವನು ಯುರೋಪಿನ ಯಾವ ದೇಶದಲ್ಲಿದ್ದರೂ ಬ್ರಿಟಿಷರಿಗೆ ಅವನು ಹಾಗೆ ಹಾಗೆ. ವಿಚಾರದಂತೆ ಅವನ ಆಚಾರವಿತ್ತು. ಅವನ ಕೈಯಲ್ಲಿ ಯಾವಾಗಲೂ ಕಾಸಿರುತ್ತಿರಲಿಲ್ಲ. ಒಂದೇ ಸೂಟಿನಲ್ಲಿ ಅವನು ಕಾಲಕಳೆಯುತಿದ್ದ. ಅದು ಹರಿದರೆ, ಹರಿದಲ್ಲಿ ಹೊಲಿಯುವುದು, ಇಸ್ತ್ರಿಮಾಡುವುದು ನನ್ನ ಕೆಲಸ. ಹೀಗೆ ನಾವು ಯಾವಾಗಲೂ ಸಾಲದಿಂದ ಮುಕ್ತರಾದವೆಂದಿಲ್ಲ. ಅವನ ಜೀವನ ಜ್ಞಾನಗಳ ಗಾಂಭೀರ್ಯವೇ ನನ್ನನ್ನು ಅವನೊಂದಿಗೆ ಬಿಗಿಯಿತು."

ಈ ವೀರೇಂದ್ರ ನಾಥನು ಏನಾದನು? ಎಲ್ಲಿದ್ದಾನೆ– ಬದುಕಿರುವನೊ ಇಲ್ಲವೊ? ಎಂಬುದು ಇನ್ನೂ ತಿಳಿಯದ ರಹಸ್ಯವಾಗಿದೆ. ಸ್ವಾತಂತ್ರ್ಯ ಪ್ರಿಯರೆಲ್ಲರೂ ಈ ವೀರ ಸಾಹಸಿ ಸಿಂಹನ ಅಂತ್ಯವು ಹೇಗಾಯಿತೆಂದು ತಿಳಿಯಲು ಕುತೂಹಲರಾಗಿರಬಹುದು.

ಯುರೋಪಿನಲ್ಲಿ ಸ್ಮೆಡ್ಲೆಯು ಇತರ ಪ್ರಖ್ಯಾತ ಭಾರತೀಯರನ್ನು ಭೇಟಿಯಾಗಿದ್ದಾಳೆ. ಪಂಡಿತ ಜವಾಹರಲಾಲರ ಕುರಿತು ಅವಳು ಬರೆದಿರುತ್ತಾಳೆ—"ಇವರು ಇತರ ಭಾರತೀಯ ಮುಖಂಡರಂತೆ ಅಲ್ಲ. ಆಡಂಭರವಿಲ್ಲದ ಪ್ರಶಾಂತ ಸ್ವಭಾವದವರು. ದಾಕ್ಷಿಣ್ಯದಿಂದ ಕೂಡಿದ ಗಂಭೀರ ವ್ಯಕ್ತಿ. ದೊಡ್ಡ ರಾಜಕೀಯ ಮುಖಂಡರೆಂದು ತೋರುವುದಿಲ್ಲವಾದರೂ ಭಾರತದ ತರುಣರ ಮೇಲೆ ಅಸಮಾನ್ಯ ಪ್ರಭಾವ ಬೀರಿದ್ದಾರೆ"

ವೀರ ಮಹಿಳೆಯ ಧೀರ ಜೀವನ

(೧ನೇ ಪುಟದಿಂದ)

ಚೀನದ ಸ್ವಾತಂತ್ರ್ಯಕ್ಕಾಗಿ

೧೯೩೦ರಿಂದ ೧೯೪೩ರ ವರೆಗೆ ಸ್ಮೆಡ್ಲೆಯು ಚೀನದಲ್ಲಿ ಹೆಚ್ಚಾಗಿ ಪ್ರಚಾರ ಮಾಡುತಿದ್ದಳು. ಇದರ ಅನುಭವವನ್ನು ಅವಳು ಒಂದು ಪುಸ್ತಕದಲ್ಲಿ ಬರೆದಿರುತ್ತಾಳೆ. ಅವಳು ಚೀನದಲ್ಲಿ ಕಾಲಿಟ್ಟಾಗ ಅಲ್ಲಿ ದೊಡ್ಡ ಕ್ರಾಂತಿ ಪ್ರಾರಂಭವಾಗಿತ್ತು. ಶ್ರೀಮಂತ ವರ್ಗದ ಪ್ರಭಾವದಲ್ಲಿದ್ದ ಕೋಮಿಟೊಂಗ್ ರಾಷ್ಟ್ರಪಕ್ಷದ ಆಡಳಿತವನ್ನು ಬದಲಾಯಿಸುವ ಪ್ರಯತ್ನಗಳಾಗುತ್ತಿದ್ದುವು. ವಿದ್ಯಾವಂತರನ್ನೂ, ವಿದ್ಯಾರ್ಥಿಗಳನ್ನೂ ಹಿಂಸೆಗೆ ಒಳಪಡಿಸಲಾಗಿತ್ತು. ರಾಷ್ಟ್ರೀಯ ಸಮಾನತೆಯ ಚಳವಳವು ಭರದಿಂದ ಪ್ರಗತಿಹೊಂದುತಿತ್ತು. ಸ್ಮೆಡ್ಲೆಯು ಮೊದಲು ಒಂದು ಜರ್ಮನ್ ಪತ್ರಿಕೆಯ ಚೀನದ ವರದಿಗಾರಳಾಗಿ ಸಂಚಾರ ಮಾಡಿದಳು. ಸ್ವಲ್ಪ ಸಮಯದಲ್ಲಿ ಸಮತಾವಾದಿಗಳೊಡನೆ ಬೆರೆಯಲಾರಂಭಿಸಿದಳಿಂದ ಗುಪ್ತ ಪೋಲಿಸರಿಂದ ಅನುಮಾನಿತಳಾದಳು. ರಶ್ಯದಿಂದ ಕಳುಹಲ್ಪಟ್ಟ ಸಮತಾವಾದಿ ಗುಪ್ತಚಾರಳೆಂದು ಪರಿಗಣಿಸಲ್ಪಟ್ಟು ಕಠಿಣ ಕಾವಲಿಗೆ ಒಳಗಾದಳು. ಬ್ರಿಟಿಷ್, ಜಪಾನ್ ಪತ್ರಿಕೆಗಳು ಅವಳನ್ನು ನಿತ್ಯ ಟೀಕೆಗೆ ಗುರಿಮಾಡಿದವು. ಕಿಯಾಂಗ್ಸಿಯಲ್ಲಿ ಚೀನಿ ಸಮತಾವಾದಿ ಪರಿಷತ್ತು ಸೇರಿದಾಗ ಅದರಲ್ಲಿ ಸ್ಮೆಡ್ಲೆಯ ಚಟುವಟಿಕೆಗಳನ್ನು ಜಪಾನ್ ಪತ್ರಿಕೆಯೊಂದು ವ್ಯಂಗ್ಯ ಮತ್ತು ನಿಂದನೀಯವಾಗಿ ಉಲ್ಲೇಖಿಸಿತು—"ಅವಳು ಒಂದು ಕೆಂಪು ಟೊಪ್ಪಿ ಧರಿಸಿ ಸಂಪೂರ್ಣ ನಗ್ನರೂಪದಲ್ಲಿ ಭಾಷಣ ವೇದಿಕೆಯಲ್ಲಿ ಮೆರೆದಳು"—ಹೀಗೆಆದರೆ ಸ್ಮೆಡ್ಲೆಯು ಅಧೀರಳಾಗಲಿಲ್ಲ.

'ಚೀನಿಯ ಸಮರ ಗೀತಗಳು' ಎಂಬೀ ಗ್ರಂಥವು ಜಪಾನಿನ ದಬ್ಬಾಳಿಕೆಯನ್ನು ಎದುರಿಸಿದ ವೀರ ಚೀನಿಯರ ಚರಿತ್ರೆ. ಬಡ ಜನತೆಯನ್ನು ಅನೇಕ ರೀತಿಯಲ್ಲಿ ಸುಲಿಗೆಮಾಡುವ ಅಲ್ಲಿನ ಶ್ರೀಮಂತ ವರ್ಗದ ಮತ್ತು ಹೊರಗಿನ ಸಾಮ್ರಾಜ್ಯಶಾಹಿ ಹಿತಗಳ ಬಿಗಿತದಿಂದ ಚೀನವನ್ನು ಮುಕ್ತಗೊಳಿಸುವುದು ಅವಳ ಜೀವನದ ಗುರಿ. ಕಾಂಗ್ರೆಸ್ಸಿನ ಕಡೆಯಿಂದ ಚೀನಕ್ಕೆ ಕಳುಹಲ್ಪಟ್ಟ ಭಾರತೀಯ ವೈದಕೀಯ ಸಹಾಯ ಮಂಡಳಿಯವರಿಗೆ ಸ್ಮೆಡ್ಲೆಯು ತನ್ನ ಪುಸ್ತಕದಲ್ಲಿ ಹೃತ್ಪೂರ್ವಕವಾಗಿ ಶ್ಲಾಘಿಸಿರುವಳು— "ಅವರ ಉದ್ದೇಶವು ವೈದಕೀಯ ಅನುಭವ ಹೊಂದಲು ಮಾತ್ರವಲ್ಲ, ರಾಜಕೀಯವೂ ಆಗಿರುತ್ತಿದು. ತಮ್ಮ ದೇಶದಲ್ಲಿ ಮುಂದೆ (ಶತ್ರುಗಳನ್ನು ಹೋರಾಡುವಾಗ) ಉಪಯೋಗಕ್ಕೆ ಬೀಳಬಹುದಾದ ಚೀನಿಯ ಯುದ್ಧ ರೀತಿಗಳನ್ನು ಅಭ್ಯಾಸಿಸುವುದೂ ಅವರ ಉದ್ದೇಶಗಳಲ್ಲಿ ಒಂದು"

ಹೀಗೆ ನಿರಂಕುಶ ಪ್ರಭುತ್ವ (ಫೆಸಿಸ್ಟ್) ತತ್ವವಾದಿಗಳಾದ ಜಪಾನಿಯರನ್ನು ವಿರೋಧಿಸುವ ಚೀನಿಯರ ಸಹಾಯಕ್ಕೆ ಹೋದ ವೈದಕೀಯ ಮಂಡಳಿಯ ಮುಖಂಡರಾದ ಡಾ| ಅಟಲ್ ಅವರು ಈಗ ಬ್ರಿಟಿಷರ ಸೆರೆಮನೆಯಲ್ಲಿ ಬಂಧಿಸಿಡಲ್ಪಟ್ಟಿರುವುದನ್ನು ಕೇಳಿದರೆ ಸ್ಮೆಡ್ಲೆ ಮಹಿಳೆಗೆ ಆಶ್ಚರ್ಯವಾಗದಿರಲಿಕ್ಕಿಲ್ಲ.

ಮಾನವ ಸ್ವಾತಂತ್ರ್ಯಕ್ಕಾಗಿ

ಏಗ್ನೆಸ್ ಸ್ಮೆಡ್ಲೆಯ ರಾಜಕೀಯ ಗೊತ್ತು ಗುರಿಗಳೇನು? ಚೀನಿ ಕೆಂಪು ಪಡೆಯವರಿಗಾಗಿ ಅವಳು ವಹಿಸಿದ ಶ್ರಮದಿಂದ ಕೆಲವರು ಅವಳನ್ನು ಉಗ್ರ ಸಮತಾವಾದಿ ಎನ್ನುತ್ತಾರೆ. ತನ್ನ ವಿಷಯವಾಗಿ ಅವಳೇ ಹೀಗೆ ಹೇಳುತ್ತಾಳೆ– "ನಾನು ಚೀನಿ ಕಮ್ಯೂನಿಸ್ಟರ ಧ್ಯೇಯ ಸಾಧನೆಯಲ್ಲಿ ಸಹಕರಿಸಿರುವೆನು. ಆದರೆ ನನ್ನ ತನುಮನಗಳನ್ನು ಅವರಿಗಾಗಿ ಕ್ರಯಿಸಲು ನಾನು ಸಿದ್ಧಳಿಲ್ಲ. ತಮ್ಮ ತತ್ವಗಳೇ ಜಗತ್ತಿನ ಸರ್ವ ಕುಂದುಗಳಿಗೆ ನಿವಾರಣೋಪಾಯವೆಂದು ನಂಬಿರುವವರ ಕೈಕೆಳಗೆ ಕೆಲಸಮಾಡಲೂ ನಾನು ಸಿದ್ಧಳಿಲ್ಲ. ಬಂಡವಾಳ ಶಾಹಿಗಳು ನನ್ನನ್ನು 'ಸಮತಾವಾದ ದಂಗೆಖೋರಳೆಂದು' ಕರೆಯಲಿಚ್ಛಿಸುತ್ತಾರೆ. ಸಮತಾವಾದಿಗಳು ನನ್ನನ್ನು 'ವ್ಯಕ್ತಿವಾದಿ' ಎಂದೂ, ಉಚ್ಚಶೀಲವಾದಿ ಎಂದೂ ಕರೆಯುತ್ತಾರೆ. ಓರ್ವ ಪ್ರಸಿದ್ಧ ಅಮೆರಿಕನ್ ಸ್ತ್ರೀಸಮತಾವಾದಿಯು ನನ್ನನ್ನು 'ಸ್ಮೆಡ್ಲೆತ್ವವಾದಿ' ಎಂದೂ ಸಂಬೋಧಿಸಿದ್ದಾಳೆ.

ಎಂತಹ ವಾದವೇ ಇರಲಿ; ಏಗ್ನೆಸ್ ಸ್ಮೆಡ್ಲೆಯು, ಸ್ವಾರ್ಥಪರಳಲ್ಲ. ವಿಶ್ವ ಸ್ವಾತಂತ್ರ್ಯ, ಸಾಮಾಜಿಕ ಸಮಾನತೆ, ಇವೇ ಇವಳ ಜೀವನದ ಗುರಿ.

ಭಾರತೀಯರಿಗೆ ಸ್ಮೆಡ್ಲೆಯು ಚಿರಸ್ಮರಣೀಯಳು. ಅವಳು ಭಾರತದ ಸ್ವಾತಂತ್ರ್ಯ ಪ್ರೇಮಿಗಳ ಪರಮ ಮಿತ್ರಳು. ಸೆರೆಮನೆವಾಸದ, ಬಡತನ ಸಂಕಷ್ಟದಲ್ಲಿಯಾದರೂ ಅವಳು ತನ್ನ ಪ್ರಿಯ ಧ್ಯೇಯಗಳನ್ನು ಬದಲಾಯಿಸುವವಳಲ್ಲ!

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ	ಮಂಗಳೂರಿಗೆ ತಲಪುವ ಸಮಯ
ಗುಡ್ಸ್ ಬಂಡಿ	ಬೆಳಗ್ಗೆ ೬-೨೫.	ರಾತ್ರಿ ೭-೪೦.
ಪಟೆಲ್ ಕನ್ನಾನ್ನೂರು ಪರಿಯಂತ ಮಾತ್ರ.	ಸಾಯಂ. ೫-೫೫	ಬೆಳಗ್ಗೆ ೯-೨೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫.	ಸಾಯಂ. ೭

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

... Limited, Mangalore.
ESTD. 1931
HEAD OFFICE ... BRANCHES
Mangalore. ... MANGALORE, Moodabidri & Padubidri.

ANNOUNCEMENT

Deposits accepted at the following rates from 1-4-1944.
Current Accounts (1% from Jan. to June)
(½% from July to Decr.)
Savings bank Accounts 1½% p. a. on daily balances.
Fixed Deposits 6 months 2% p. a.
12 months 2½% p. a.
24 months 3% p. a.
The Bank also accepts season and short term deposits and many other lucrative schemes at most favourable rates of interest. For terms etc, apply to Head office or Branches.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ಹುಳುಕಡ್ಡಿ, ಹುಳು ಕಡ್ಡಿ, ಪಿತ್ತ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ
ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low. ★ 2½% Rebate on annual premiums.
★ "Permanent Disability Benefits free of any cost
★ Payment of double the insured amount in case of death by accident at a very small cost of Rs 1-8-0 per 1000.
★ Special rebates on large size policies.
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ,
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 8—9—1944 [ಸಂಚಿಕೆ 36]

ಎಲ್ಲೆಲ್ಲೂ ಯೆಹೂದ್ಯರೆ-ಜಗತ್ತಿನ ಅಲ್ಪಸಂಖ್ಯಾತರು

ಶತಮಾನಗಳಿಂದ ಯೆಹೂದಿ ಜನರ ಮೂಲ ಸ್ಥಾನ ಪಲೆಸ್ಟೀನ್ ದೇಶ. ಅಲ್ಲಿ ಅರಬಿಗಳೂ ಇರುವರು. ಅರಬಿ ಯೆಹೂದಿಗಳೊಳಗೆ ಸದಾಕಾಲ ಕಚ್ಚಾಟ ವಿದ್ವೇಷ ಇರುತ್ತದೆ. ಕಾರಣ ಯೆಹೂದಿಗಳಿಗೆ ತಮ್ಮ ಮತ ನಮ್ಮ ದೇಶ, ತಮ್ಮ ಜನಗಳೆಂದರೆ ಪಂಚ ಪ್ರಾಣ. ತಮ್ಮ ಮತದವರಲ್ಲದವರನ್ನು ಅವರು ಎಂದಿಗೂ ವಿಶ್ವಾಸದಿಂದ, ಸಹಾನುಭೂತಿಯಿಂದ ಕಾಣುವುದಿಲ್ಲ. ಯೆಹೂದಿಗಳು ಯೇಸು ಕ್ರಿಸ್ತನ ಜನಾಂಗದವರಾದರೂ ಕ್ರೈಸ್ತರಲ್ಲ. ಅವರ ಮತ ಮೋಶೆ ಎಂಬ ಪ್ರವಾದಿಯ ಕಾಲದಿಂದ ಕ್ರಿಸ್ತಪೂರ್ವ ಸಾವಿರಾರು ವರ್ಷಗಳ ಹಿಂದಿನಿಂದ ಪಾರಂಪರ್ಯವಾಗಿ ಪಾಲಿಸಿಕೊಂಡು ಬಂದಂತದೆಂದು ಅವರು ನಂಬಿಕೆ. ಯಾವ ದೇಶದಲ್ಲೇ ಇರಲಿ ಯೆಹೂದಿಗಳು ಬೇರ್ಪಟ್ಟೂಗಿಯೇ ಇರುತ್ತಾರೆ.

ಮತಾಭಿಮಾನಿಗಳಾದ ಮಾತ್ರಕ್ಕೆ ಯೆಹೂದಿ ಜನರ ಮೇಲೆ ತಪ್ಪು ಆರೋಪಿಸಬಾರದು. ಆದರೆ ಅತಿ ಅಲ್ಪ ಸಂಖ್ಯೆಯಲ್ಲಿರುವ ಈ ಜನರು ತಾವು ತಳ ಊರಿದ ದೇಶಗಳಲ್ಲಿ ವಿಪರೀತ ಸ್ವಾರ್ಥಾಭಿಲಾಷೆಯ ಧೋರಣೆಯಿಂದ ಆ ದೇಶಗಳ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ವಿಷಮಯವಾಗಿ ಮಾಡುತ್ತಾರೆ. ಇಂದಿನ ಮತ್ತು ಹಿಂದಿನ ಮಹಾ ಯುದ್ಧಗಳೆರಡರಲ್ಲೂ ಶ್ರೀಮಂತ ಯೆಹೂದಿಗಳ ಕೈವಾಡವೇ ಮೇಲಾಗಿತ್ತೆಂದು ಹೇಳಲಾಗಿದೆ.

ಜರ್ಮನಿ ಆಸ್ಟ್ರಿಯ ಹಂಗೆರಿ ರಶ್ಯ ದೇಶಗಳಲ್ಲಿ ಯೆಹೂದಿ ಜನರ ಸಂಖ್ಯೆ ಸ್ವಲ್ಪ ಹೆಚ್ಚೇ ಇದೆ. ೧೯೧೪ರ ಮಹಾಯುದ್ಧವು ೧೯೧೮ರಲ್ಲಿ ಮುಗಿಯಿತು. ಶಾಂತಿ ಸಂಧಾನಗಳಾಗಿ ಯುದ್ಧ ರಂಗದಿಂದ ಸೈನಿಕರು ತಮ್ಮ ದೇಶಗಳಿಗೆ ಹಿಂತಿರುಗಿದಾಗ ಅಲ್ಲಿನ ನಾಗರಿಕ ಜೀವನದಲ್ಲಿ ಯೆಹೂದಿಗಳೇ ಪ್ರಾಮುಖ್ಯ ಹುದ್ದೇದಾರರಾಗಿರುವುದನ್ನು ಕಂಡರು. ದೇಶದವರಿಗೆ ನಿರುದ್ಯೋಗ ಪ್ರಾಪ್ತಿಯಾಯಿತು. ಯೆಹೂದಿಗಳು ಸುರಕ್ಷಿತರಾಗಿ ಬಾಳುವೆ ಮಾಡುವಂತಾಗಿತ್ತು. ತನ್ನ ಸ್ವಂತ ಜನರನ್ನು ನಿರುದ್ಯೋಗಕ್ಕೆ ತುತ್ತು ಮಾಡಿ ಪರಕೀಯ ಸ್ವಾರ್ಥಿಗಳನ್ನು ಸಾಕುವುದು ಯಾವ ದೇಶದ ಸರಕಾರಕ್ಕೆ ಸಹನೆಯೂ ಇದೀತು? ಅಂತೆಯೇ ೧೯೩೩ರಲ್ಲಿ ಯೆಹೂದಿ ವಿರೋಧ ಚಳವಳಿವು ಹಿಟ್ಲರನ ಜರ್ಮನಿಯಲ್ಲಿ ಪ್ರಾರಂಭವಾಯಿತು. ಯೆಹೂದಿ ಯುವಕನೊಬ್ಬನು ನಾಜೀ ಅಧಿಕಾರಿಯನ್ನು ಕೊಂದ ನೆವನ ಹಿಡಿದು ಯೆಹೂದಿಗಳನ್ನು ಜರ್ಮನಿಯಿಂದ ಹೊರದೊಬ್ಬುವ ಧೋರಣೆ ಕಠಿಣವಾಗಿ ನಿರ್ವಹಿಸಲಾಯಿತು.

ಆದರೆ ಹಿಟ್ಲರನ ಹತ್ತಿರ ೮೦ ಮಿಲಿಯ ಬಂದೂಕು ಧಾರಿಗಳಿದ್ದರೆ ಯೆಹೂದಿಗಳ ಹತ್ತಿರ ಅಪಾರ ಸಂಪತ್ತಿದೆ. ಅವರ ಜಾಗತ್ತಿಕ ಒಂದು ಸಂಸ್ಥೆ ಇದೆ. ಇದು ಪ್ರಭಾವಶಾಲಿ ಯೆಹೂದಿ ಶ್ರೀಮಂತರಿಂದ ನಡೆಸಲ್ಪಡುತ್ತದೆ. ಈ ಸಂಸ್ಥೆಯು ಜಗತ್ತಿನ ಎಲ್ಲಾ ದೇಶಗಳ ಸರಕಾರಗಳ ಮೇಲೂ ವರ್ಚಸ್ಸುಳ್ಳದ್ದಾಗಿದೆ. ಅವರು ತಮ್ಮ ಸಂಪತ್ತಿನ ಬಲದಿಂದ "ಯೆಹೂದಿಗಳಿಗೆ ಹಿಂಸೆ" "ಯೆಹೂದಿ ವಿರೋಧಿಗಳು" ಎಂಬಿತ್ಯಾದಿ ಘೋಷಣೆಗಳನ್ನು ಪ್ರಚಾರ ಮಾಡಿದರು. ಯೆಹೂದಿಗಳ ಕಡೆಗೆ ಸಹಾನುಭೂತಿ ಪಡೆಯುವುದೇ ಇದರ ಮುಖ್ಯ ಉದ್ದೇಶ. ದೊಡ್ಡ ವಾರ್ತಾ ಸಂಸ್ಥೆಗಳು ಚಲಚಿತ್ರ ತಯಾರಿಕೆ ಕಂಪೆನಿಗಳು ಯೆಹೂದಿಗಳ ಅಧಿಕಾರದಲ್ಲಿವೆ. ಅಂದ ಮೇಲೆ ಪ್ರಚಾರಕ್ಕೆ ತಡವುಂಟೇ?

ಚಾರ್ಲಿ ಚಾಪ್ಲಿನನ್ನು ಒಬ್ಬ ಬ್ರಿಟಿಷ್ ಯೆಹೂದಿ. ಅವನು 'ದಿಗ್ರೇಟ್ ಡಿಕ್ಟೇಟರ್' ಎಂಬ ಚಿತ್ರವನ್ನು ತಯಾರಿಸಿ ಹಿಟ್ಲರ್ ಮುಸೋಲಿನಿಗಳನ್ನು ಗೇಲಿ ಮಾಡಿದನು. ಅವರ ಸರ್ವಾಧಿಕಾರದ ಪೊಳ್ಳುತನವನ್ನು ಹಾಸ್ಯ ಮಾಡುವುದರೊಂದಿಗೆ ಯೆಹೂದಿಗಳು ಶಾಂತಿ ಪ್ರಿಯರು, ಅವರನ್ನು ಅವರಷ್ಟಕ್ಕೆ ಶಾಂತಿಯಲ್ಲಿ ಇರಲು ಬಿಡಿರಿ ಎಂಬ ಭಾವನೆಯನ್ನೂ ಚಾಪ್ಲಿನನ ಚಿತ್ರವು ಬೋಧಿಸಿತ್ತು. ಇದೂ ಒಂದು ಪ್ರಚಾರ.

೧೯೩೯ರಲ್ಲಿ ಇಂಗ್ಲೆಂಡಿನಲ್ಲಿ ಸುಮಾರು ೩೪೦ ಸಾವಿರ ಹೊರದೇಶಸ್ಥರಿದ್ದರು. ಇವರಲ್ಲಿ ೧೫೦ ಸಾವಿರ ಜರ್ಮನ್, ರಶ್ಯನ್, ಜೆಕ್, ಪೋಲಿಶ್, ಜನಾಂಗತ್ವದವರು. ಆದರೆ ಅವರು ಜರ್ಮನರಲ್ಲ ಇಲ್ಲವೆ ರಶ್ಯನರಲ್ಲ, ಜೆಕ್ ಜನರೂ ಅಲ್ಲ, ಪೋಲಿಶ್ ಜನಾಂಗದವರೂ ಅಲ್ಲ. ಅವರೂ ಯೆಹೂದಿಗಳೇ ಆಗಿದ್ದು ಆಯಾ ದೇಶಗಳಲ್ಲಿ ಕೆಲವು ತಲಾಂತರಗಳಿಂದ ನೆಲೆನಿಂತವರು. ತಾವು ಉಪ್ಪು ತಿಂದ ದೇಶ ರಕ್ಷಣೆಗೆ ಹೋರಾಡುವ ಬದಲು ಈ ಯೆಹೂದಿಗಳು ಜೀವ ರಕ್ಷಣೆ ಮಾಡಿಕೊಳ್ಳಲು ಎಲ್ಲಿ ಸುಲಭವೋ ಆ ದೇಶಗಳಿಗೆ ಓಡಿ ಹೋದರು. ಅಲ್ಲಿ ಸಹಾನುಭೂತಿ ಸಿಗುತ್ತದೆಂದು ಅವರಿಗೆ ಖಂಡಿತ ತಿಳಿದಿತ್ತು. 'ಶತ್ರು ದೇಶದ ಮಿತ್ರರು' ಇವರೆಂದಾಯಿತು. ಹೋದಲ್ಲಿ ಯೆಹೂದಿ 'ಮಿತ್ರ'ರಿಗೆ ಮನ್ನಣೆ ಪುರಸ್ಕಾರಗಳು ದೊರೆತವು. ಅವರು 'ಯುದ್ಧ ಪ್ರಯತ್ನಕ್ಕೆ ತುಂಬಾ ಸಹಾಯಕ'ರೆಂದೂ ಪರಿಗಣಿಸಲ್ಪಟ್ಟರು.

ಹಿಟ್ಲರನಿಂದ ಹಿಂಸೆಗೆ ಗುರಿಮಾಡಲ್ಪಟ್ಟವರು ಯೆಹೂದಿಗಳು ಮಾತ್ರವೋ? ಅಸಂಖ್ಯಾತ ಶುದ್ಧ ಜರ್ಮನರೂ, ಪೋಲರೂ, ಫ್ರೆಂಚರೂ, ಜೆಕ್ ಜನರೂ ಆರ್ಯ ಸರ್ವಾಧಿಕಾರಿಯ ಕ್ರೂರ ಶಾಸನಗಳಿಗೆ ಸಿಕ್ಕಿ ನರಳುವವರಿಲ್ಲವೆ? ಎಂಬಿತ್ಯಾದಿ ಪ್ರಶ್ನೆಗಳು ಇಂಗ್ಲೆಂಡಿನ ದೇಶಾಭಿಮಾನಿಗಳಲ್ಲಿ ಉತ್ಪನ್ನವಾಗದಿರಲಿಲ್ಲ. ಮಿಲಿಯಾಂತರ ಬ್ರಿಟಿಷರು ಅಮೇರಿಕನರು ತಮ್ಮ ದೇಶಕ್ಕಾಗಿ ರಣರಂಗದಲ್ಲಿ ಮಡಿಯಲು ತೆರಳಿದಾಗ ಅವರ ಮೇಲೆ ಹೊಂದಿಕೊಂಡಿರುವವರನ್ನು ಮೊದಲು ಕಷ್ಟದಿಂದ ಪಾರು ಮಾಡುವ ಯೋಚನೆಯನ್ನು ಮೂಲೆಗೊತ್ತಿ ಅಲ್ಪ ಸಂಖ್ಯಾಕ ಜನರಾದ ಯೆಹೂದಿಗಳ ಸೌಕರ್ಯ ನೋಡಿಕೊಳ್ಳುವುದು ಅನ್ಯಾಯವಲ್ಲವೆ?

ಇಂಗ್ಲೆಂಡಿನಲ್ಲಾದರೂ ಯೆಹೂದಿಗಳು ಯೋಗ್ಯ ರೀತಿಯಲ್ಲಿ ವರ್ತಿಸಲಿಲ್ಲ. ಸೈನ್ಯಕ್ಕೆ ಸೇರಿದ ಅವರ ಸಂಖ್ಯೆ ಬಹು ಸಣ್ಣದು. ಅನೇಕರು ಕೈಗಾರಿಕೆ ಕಾರ್ಖಾನೆಗಳಲ್ಲೊ ರೈಲು ಸಂಸ್ಥೆಗಳಲ್ಲೊ ಮತ್ತಿನ್ನಿತರ ಸುರಕ್ಷಿತ ಉದ್ಯೋಗಗಳಲ್ಲಿ ಸೇರಿ ಬಿಟ್ಟರು. ಬಹು ಮಂದಿ ಯೆಹೂದಿಗಳು ತಮ್ಮ ಠಾವುಠಿಕಾಣೆ ತಿಳಿಸದೆ ಗುಪ್ತ ರೀತಿಯಲ್ಲಿ ಕೂಲಿ ಕೆಲಸದಿಂದ ಕಾಲ ಕಳೆಯುತಿದ್ದರು. ಒಬ್ಬ ಯೆಹೂದಿಯು ಸತ್ತು ಹೋದ ಬ್ರಿಟಿಷ್ ಸೈನಿಕನ ಹೆಸರು ಧರಿಸಿ ಗಾಯ ಗೊಂಡ ಸೈನಿಕನಿಗೆ ಸಿಗುವ ಅನುಕೂಲತೆಗಳನ್ನೂ ಪಡೆದಿದ್ದನು. ಯುದ್ಧ ಪ್ರಚಾರಕ್ಕೆಂದು ಒಂದು ಚಲಚಿತ್ರ ತೆಗೆಯಲು ಸರಕಾರದಿಂದ ಹಣವನ್ನು ಮುಂಗಡ ಪಡೆದು ನೂರಾರು ಯೆಹೂದಿಗಳು ಅಮೆರಿಕಕ್ಕೆ ಹೋಗಿ ಕಾಲ ಕಳೆಯುತಿದ್ದಾರೆ. ಚಿತ್ರವಿನ್ನೂ ತಯಾರಾಗಲಿಲ್ಲ. ೧೪ ಮಂದಿ ಯೆಹೂದಿಗಳು ಒಂದು ಹೊಸ ಉಪಾಯ ಮಾಡಿದರು. ಒಬ್ಬ ಅಂಗಹೀನನಿಗೆ ಲಂಚ ಕೊಟ್ಟು, ಹದಿನಾಲ್ಕು ಬೇರೆ ಬೇರೆ ಸೈನ್ಯ ಕೇಂದ್ರಕ್ಕೆ ಕಳುಹಿಸಿ 'ಯುದ್ಧ ಅಯೋಗ್ಯ'ನೆಂಬ ಬೇರೆ ಬೇರೆ ಶಿಫಾರಾಸು ಪತ್ರ ಪಡೆದು ಒತ್ತಾಯ ಸೈನ್ಯ ಸೇರುವಿಕೆಯ ಶ್ರಮವನ್ನು ಕಳೆಸಿ ಬಿಟ್ಟರು. ಹೀಗೆ ಅನೇಕ ರೀತಿಯಲ್ಲಿ ಅಧಿಕಾರಿಗಳಿಗೆ ಮೋಸ ಮಾಡಿದ ಯೆಹೂದಿಗಳು ಪತ್ತೆ ಮಾಡಲ್ಪಟ್ಟಿದ್ದಾರೆ. ಆದರೆ ಪಾರ್ಲಿಮೆಂಟಿನ ಸಭೆಯಲ್ಲಿ ಅವರಿಗಾಗಿ ಸುರಿಸಿದ ಸಹಾನುಭೂತಿಯ ಕಣ್ಣೀರು ಆರ್ಲಿಷ್ಟಲ್ಲ.

ಬ್ರಿಟಿಷ್ ಸರಕಾರದ ಧೋರಣೆಯಾದರೂ ಅತಿ ವಿಚಿತ್ರವಾಗಿರುತ್ತದೆ. ತನ್ನ ಜನರಿಂದ ತೆರಿಗೆ ಪಡಕೊಂಡು ಪರಕೀಯರಾದ ಯೆಹೂದಿಗಳಿಗೆ ಅದನ್ನು ಸೌಕರ್ಯ ಒದಗಿಸಲು ಪ್ರಯತ್ನಗಳಾಗುತ್ತವೆ. ಇಂಡಿಯಾ, ಆಫ್ರಿಕಾದ ಪ್ರಶ್ನೆಗಳು ಬಂದರೆ ಪಾರ್ಲಿಮೆಂಟಿನ ೬೧೫ ಸದಸ್ಯರಲ್ಲಿ ಬರೀ ೪೦ ಮಂದಿಗಳು ಗೈರಹಾಜರಾಗಿರುತ್ತಾರೆ. ಅವರಲ್ಲಿಯೂ ಕೆಲವರು ಎದುರು ಬೆಂಚಿನಲ್ಲಿ ಕೂತು ಗೊರಕೆ ಹೊಡೆಯುವವರೇ ಹೆಚ್ಚು. ಒಂದು ಸಲ ವಸಾಹತು ಮಂತ್ರಿಗಳಾದ ಮಿ। ಮೆಕ್ ಡೊನಾಲ್ಡರು "ನಾವು ಮೊಟ್ಟ ಮೊದಲು ಈ ನಿದ್ರಾ ರೋಗದೊಡನೆ ಕಾದಾಡ ಬೇಕಾಗಿದೆ." ಎಂದು ಹೇಳಿದಾಗ ಎಲ್ಲರು ಗೊಳ್ಳನೆ ನಗಾಡಲು, ಅದರ ಸದ್ದಿನಿಂದ ಮಲಗಿದ್ದ ಅನೇಕ ಸದಸ್ಯರು ಎಚ್ಚರಗೊಂಡು ಕಣ್ಣು ಬಿಟ್ಟರು. ಹೀಗಿದ್ದರೂ 'ಶತ್ರು ದೇಶದ ಮಿತ್ರ'ರಾದ ಯೆಹೂದಿಗಳ ಸಣ್ಣ ವಿಚಾರವೆತ್ತಿದರೆ ಸಾಕು, ಅಮೋಘ ಭಾಷಣಗಳ ಸುರಿಮಳೆಯಾಗುವುದು.

ತಾವು ಪಡಕೊಂಡ ಸ್ಥಳಗಳನ್ನು ಯೆಹೂದಿಗಳು ತಲಾಂತರಗಳ ವರೇಗೂ ತಮ್ಮವರಿಗೇ ದೊರಕುವಂತೆ ಶಾಸನ ಬರೆದಿರುತ್ತಾರೆ. ಪಲೆಸ್ತಿನಿನಲ್ಲಿ ಹಾಗೆ ಅವರದೇ ಒಂದು ದೊಡ್ಡ ಪ್ರದೇಶ ಮಾಡಿರುವರು. ಬ್ರಿಟಿಷ್ ಸರಕಾರದಿಂದ ಅದರ ಭದ್ರತೆಯ ಭರವಸೆಯನ್ನೂ ಪಡೆದಿರುವರು. ಇತರರಿಗೆ ಅಲ್ಲಿ ಸಿಗುವುದು ತಿರಸ್ಕಾರ ಮಾತ್ರ. ಹೀಗೆ ತಮಗೆಲ್ಲಿಯಾದರೂ ಆದರೆ ಅದು ಹಿಂಸೆ, ಅನ್ಯಾಯ, ಅನಾಚಾರವೆಂದು ಬೊಬ್ಬಿಡುವರು. ತಮ್ಮಿಂದ ಇತರರಿಗೆ ಅದೇ ರೀತಿಯಾದರೆ ಅದು ನ್ಯಾಯ ಬದ್ಧವಾದದೆನ್ನುತ್ತಾರೆ.

ಯೆಹೂದಿಗಳಲ್ಲಿ ಇನ್‌ಸ್ಟೀನ ನಂತಹ ಪ್ರಖ್ಯಾತ ಜ್ಞಾನಿಗಳಿದ್ದಾರೆ, ಚಾಪ್ಲಿನ ನಂತಹ ಕಲಾವಂತರಿದ್ದಾರೆ, ರೊತ್ ಚ್ಯಾಲ್ಡರಂತಹ ಕೋಟ್ಯಾಧೀಶರಿದ್ದಾರೆ. ಆದರೆ ಜಗತ್ತಿನಲ್ಲಿ ಎಲ್ಲೆಲ್ಲೂ ಹರಡಿರುವ ಇವರು ತಮ್ಮ ಸ್ವಂತ ಸ್ವಾರ್ಥಕ್ಕಾಗಿ ಮಾತ್ರ ದುಡಿವುದು ಮತ್ತೂ ಇತರರನ್ನು ಮೋಸಗೊಳಿಸುವುದು ಎಂದಿಗೂ ಸರಿಯಲ್ಲ. ಇದರಿಂದ ಅವರ ಸ್ಥಿತಿಯು ಸುಧಾರಿಸದು.

8-9-1944

ರವೀಂದ್ರರ ಕೊನೆಯ ದಿನಗಳು

[ಲೇಖನಾಂಕ ೧]

... ಮಹೋತ್ಸವಾದ ... ರವೀಂದ್ರನಾಥ ಠಾಗೂರರ ... ದೇಶದ ಉದ್ದಗಲ ... ವಿಜೃಂಭಣೆಯಿಂದ ಜರಗಿಸಲ್ಪ ... ಕಲ್ಕತ್ತದಲ್ಲಿ ಠಾಗೂರ್ ಪ್ರದರ್ಶ ನವೊಂದು ಏರ್ಪಟ್ಟಿತು. ಕವೀಂದ್ರರ ... ಜಗತ್ತಿನ ಮಿತ್ರವೃಂದವೆಲ್ಲಾ ಸೇರಿ ಒಂದು ಪ್ರಶಸ್ತಿ ಗ್ರಂಥ ಬರೆದರು. ಕಲ್ಕತ್ತ ನಗರಭವನದಲ್ಲಿ ಪ್ರಚಂಡ ಮಹಾಸಭೆ ಯೊಂದು ಸೇರಿ ಅಲ್ಲಿ ರವೀಂದ್ರರಿಗೆ ಆ ಪುಸ್ತಕ ಸಮರ್ಪಿಸಲ್ಪಟ್ಟಿತು. ಕವಿಕೃತಿ ಗಳಾದ ಕೆಲ ನಾಟಕಗಳೂ ಪ್ರದರ್ಶಿತ ವಾದುವು. ಈ ಉತ್ಸವ ೧೯೩೮ರ ಜನ ವರಿ ತಿಂಗಳವರೆಗೂ ಮುಂದುವರಿಸ ಲ್ಪಟ್ಟಿತು.

ರಾಷ್ಟ್ರಕ್ಕೇ ಉಂಟಾದ ಈ ಉತ್ಸವಕ್ಕೆ ಒಮ್ಮೆಲೇ ದುಃಖದ ಮೋಡ ಆವರಿಸಿತು. ಜನವರಿ ಎರಡು ರೌಂಡ್‌ಟೇಬಲ್ ನಿಂದ ಮರಳಿದವರನ್ನೇ ಮಹಾತ್ಮಾ ಗಾಂಧಿಯ ವರನ್ನು ಬಂಧಿಸಿದ ವಾರ್ತೆ ಬಂತು. ರವೀಂದ್ರರು ಈ ವಾರ್ತೆಯಿಂದ ತುಂಬಾ ದುಃಖಿತರಾದದ್ದು ಮಾತ್ರವಲ್ಲ, ತನ್ನವರ ವಾಗಿ ಏರ್ಪಟ್ಟ ಉತ್ಸವಗಳನ್ನೆಲ್ಲಾ ಒಮ್ಮೆ ಲೇ ನಿಲ್ಲಿಸ ಹೇಳಿದರು. ಅದೇ ಸಮಯ ದಲ್ಲಿ ಲಂಡನಿನ 'ಟೈಮ್ಸ್' ಪತ್ರಿಕೆಗೆ ಅವ ರೊಂದು ಲೇಖನ ಬರೆದು ಬ್ರಿಟನ್ ಭಾರ ತಗಳ ಮಧುರ ಬಾಂಧವ್ಯದ ಬಗ್ಗೆ ಹೃದ ಯದ್ರಾವಕ ವಿನಂತಿಮಾಡಿಕೊಂಡರು. ಆದರೆ ದೌರ್ಭಾಗ್ಯದಿಂದ ಕವಿಗಳ ಈ ವಿನಂತಿ ಕೇವಲ ಅರಣ್ಯರೋದನ ವಾಯಿತು!

ಇದಾದ ಕೆಲ ದಿನಗಳ ನಂತರ ಗಾಂ ಧೀಜಿ ತನ್ನ ಚಾರಿತ್ರಿಕ ಮಹೋಪವಾಸ ವನ್ನು, ಜಾತೀಯ ಒಪ್ಪಂದದ ನಿಷೇಧದ ಸಲುವಾಗಿ ಕೈಕೊಂಡರು. ರವೀಂದ್ರರು ಗಾಂಧಿಜೀಯವರ ಕುರಿತು ತುಂಬಾ ಕಳ ವಳಗೊಂಡರೂ ಇಂಥಾ ಮನೋದ್ದೇಶದ ಸಲುವಾಗಿ ಬಲಿದಾನ ಮಾಡುವುದಾ ದರೂ ಉಚಿತವೆಂದೇ ಅಭಿಪ್ರಾಯಪಟ್ಟ ರು. ಹಾಗಾಗಿ ಗಾಂಧೀಜಿಯವರನ್ನು ಈ ಪ್ರಯತ್ನ ಬಿಡುವಂತೆ ರವೀಂದ್ರರು ಒತ್ತಾಯಪಡಿಸಲಿಲ್ಲ. ಆದರೆ ರವೀಂ ದ್ರರು ಯೆರವಾಡ ಸೆರೆಮನೆವರೆಗೆ ಧಾವಿಸಿ ಮಹೋಪವಾಸ ಮುರಿವ ಕಾಲಕ್ಕೆ ಮಹಾತ್ಮರ ಬಳಿಯಲ್ಲಿಯೇ ಇದ್ದರು.

ಈ ಸಂದರ್ಭದಲ್ಲಿ ರವೀಂದ್ರರು ತುಂಬಾ ಏಕಾಂಗಿಯಾಗಿದ್ದರು. ಅವರು ತಮ್ಮ ಅನೇಕ ಆಪ್ತೀಯರನ್ನು ಇಷ್ಟರಲ್ಲೇ ಕಳಕೊಂಡಿದ್ದರು. ಓರ್ವ ಸೋದರ ಬಿಟ್ಟು ಮಿಕ್ಕ ಅವರ ಎಲ್ಲಾ ಸೋದರ ಸೋದರಿಯರೂ ಒಬ್ಬೊಬ್ಬರಾಗಿ ದಿವಂಗತರಾದರು. ಅವರ ಪತ್ನಿ ಮತ್ತು ಅವರ ಮೂರು ಮಂದಿ ಮಕ್ಕಳೂ ತೀರಿಹೋಗಿದ್ದರು. ಉಳಿದ ಮಗನನ್ನೂ, ಮಗಳನ್ನೂ, ಒಬ್ಬ ಹುಡುಗಿ ಮತ್ತು ಇನ್ನೋರ್ವ ಹುಡುಗ ಹೀಗೆ ಇಬ್ಬರು ಮೊಮ್ಮಕ್ಕಳನ್ನೂ ಕವಿಗಳು ತುಂಬಾ ಪ್ರೀತಿಸುತ್ತಿದ್ದರು. ಅದರಲ್ಲಿ ಆ ಮೊಮ್ಮಗ ಹುಡುಗ ಬೆಳೆದು ದೊಡ್ಡವನಾಗಿ ಉಚ್ಚ ವಿದ್ಯಾಭ್ಯಾಸಕ್ಕಾಗಿ ಜರ್ಮನಿಗೆ ತೆರಳಿ ದನು. ಮುಂದೆ ೧೯೩೨ರಲ್ಲಿ ಕೇವಲ ಇಪ್ಪತ್ತೊಂದನೆಯ ಪ್ರಾಯದಲ್ಲಿ ಮೃತಿಹೊಂದಿ ದನು. ಇದಕ್ಕಿಂತ ಮೊದಲು ೧೯೩೦ರಲ್ಲಿ ರವೀಂದ್ರರ ಕೇವಲ ಆಪ್ತೀಯ ಮಿತ್ರ ಆಂಗ್ಲೇಯನಾದ ಡಬ್ಲ್ಯೂ. ಪೀಯರ್‌ಸನ್ ಇಟೆಲಿಯಲ್ಲಿ ರೈಲ್ವೆ ಅಪಘಾತದಿಂದ ಮೃತ ನಾಗಿದ್ದ. ೧೯೩೫ರಲ್ಲಿ ಕವಿಯ ಅಣ್ಣನ ಮಗ ದಿನೇಂದ್ರನು ಕೀರ್ತಿಶೇಷನಾ ದನು. ಹೀಗೆ ಕೊನೆಕಾಲದಲ್ಲಿ ಅವರ ಜೀವನ ತುಂಬಾ ಏಕಾಂತವಾಗಿತ್ತು!

ಕೊನೆಯ ಕಾಲವಾಗುವಾಗ ರವೀಂ ದ್ರರಿಗೆ ಮನ್ನಣೆಯ ಮೇಲೆ ಮನ್ನಣೆಗಳು ಒದಗಿದವು. ಅವರ ಶಾರೀರಿಕ ಶಕ್ತಿಗೆ ಸಾಧ್ಯವಿರುವಷ್ಟರ ಮಟ್ಟಿಗೆ ಅವರು ಸಾರ್ವಜನಿಕ ಸಭೆಗಳಲ್ಲಿ ತನ್ನ ಮುದಿ ಪ್ರಾಯದಲ್ಲಾದರೂ ಭಾಷಣಮಾಡುತ್ತಾ ತನ್ನ ಜೀವಿತ ಧ್ಯೇಯಗಳನ್ನು ಜನತೆಗೆ ತಿಳಿಸಲು ಉತ್ಸುಕರಾಗುತ್ತಿದ್ದರು. ಮಹಾ ಸಂಗ್ರಾಮದ ಕರಿ ನೆರಳು ಪ್ರಪಂಚದ ಮೇಲೆ ಮೆಲ್ಲ ಮೆಲ್ಲನೆ ಆವರಿಸಿ ಬರ್ತಾ ಇತ್ತು. ಆದಾಗಲೂ ರವೀಂದ್ರರು ಮಾನವ ಬಂಧುಭಾವ, ಪ್ರೇಮ ಹೃದಯ, ಸಕ್ತ ಸೌಂದರ್ಯಗಳ ವಿಚಾರ ಜಗತ್ತಿಗೆ ಸಾರು ತ್ತಲೇ ಇದ್ದರು. ೧೯೩೬ರಲ್ಲಿ ಬ್ರುಸೆಲ್ಸ್‌ನಲ್ಲಿ ಜಾಗತಿಕ ಶಾಂತಿಪರಿಷತ್ತು ಸೇರಿತ್ತು; ರವೀಂದ್ರರೊಡನೆ ಸಂದೇಶ ಕೇಳಿದ್ದರು. ರವೀಂದ್ರರು ಸಂದೇಶ ಕಳುಹಿಸುತ್ತಾ, ದುರ್ಬಲರನ್ನು ಪಶುಶಕ್ತಿ ಮೆಟ್ಟಲಿಲ್ಲ ನಂಥಾ ಅನ್ಯಾಯ ಕೊನೆಗಾಣದ ವಿನಾ ನಮಗೆ ಶಾಂತಿ ದೊರಕದು' ಎಂದು ತಿಳಿ ಸಿದ್ದರು.

೧೯೩೭ರಲ್ಲಿ ಕಲ್ಕತ್ತಾ ವಿಶ್ವವಿದ್ಯಾ ಲಯವು ರವೀಂದ್ರರನ್ನು ಕೊನ್ವಕೇಶನ್ ಭಾಷಣ ಮಾಡಲು ಕರೆಯಿತು. ವಿಶ್ವವಿ ದ್ಯಾಲಯದ ಇತಿಹಾಸದಲ್ಲಿಯೇ ಅದು ಮೊದಲನೆಯದಾಗಿ ಸರಕಾರೀ ಉಚ್ಚ ಅಧಿಕಾರಿಯಲ್ಲದವರೊಬ್ಬರು, ಆಂಗ್ಲ ಭಾಷೆಯಲ್ಲದೆ, ಬಂಗಾಳಿಯಲ್ಲಿ ಠಾಗೂ ರರು ಆ ಭಾಷಣಮಾಡಿದರು. ಮುಂದೆ ೧೯೪೦ರಲ್ಲಿ ಪ್ರಪಂಚದ ಇತಿಹಾಸದಲ್ಲಿ ಯೇ ಅದು ಮೊದಲನೆಯದಾಗಿ ಆಕ್ಸ್ ಫರ್ಡ್ ವಿಶ್ವವಿದ್ಯಾಲಯವು ಡಾಕ್ಟರೇಟ್ ಡಿಗ್ರಿಯನ್ನು ಶಾಂತಿನಿಕೇತನದಲ್ಲಿ ತಂದು ಠಾಗೂರರರಿಗೆ ಸಮರ್ಪಿಸಿತು. ಸರ್ ಮೊರಿಸ್ ಗ್ವಾಯರ್, ಸರ್ ಎಸ್. ರಾಧಾಕೃಷ್ಣನ್ ಮೊದಲಾದವರು ಹಾಜ ರಿದ್ದರು. ಆ ಉತ್ಸವ ಲೇಟಿನ್ ಭಾಷೆ ಯಲ್ಲಿ ಆಚರಿಸಲ್ಪಟ್ಟಿತು; ಠಾಗೂರರು ಅದಕ್ಕೆ ಸಂಸ್ಕೃತದಲ್ಲಿ ಉತ್ತರವಿತ್ತರು. ಲೇಟಿನ್ ಪಶ್ಚಿಮದ ಪ್ರಾಚೀನ ಭಾಷೆ; ಸಂಸ್ಕೃತ ಪೂರ್ವದ ಪ್ರಾಚೀನ ಭಾಷೆ. ಪೂರ್ವ ಪಶ್ಚಿಮಗಳ ಪುರಾತನ ಸಂಸ್ಕೃತಿ ಅಲ್ಲಿ ಒಟ್ಟುಗೂಡಿತು. ರವೀಂದ್ರರು ಆಗ ಸಂತೋಷ ತೋರ್ಪಡಿಸಿದ್ದರು; ಅವರ ಒಂದು ಮಹೋದ್ದೇಶವಾದ ಪೂರ್ವ ಪಶ್ಚಿಮಗಳ ಬಾಂಧವ್ಯ ಸಾಧನೆಯ ಹಾದಿ ಯಲ್ಲಿ ಇದೊಂದು ಹೆಜ್ಜೆಯಾಯಿತು!

ಮುಂದೆ ಅವರು ಪ್ರವಾಸ ಕೈಕೊಳ್ಳು ವುದಾಗಿದ್ದರೂ ಅವರ ಚಟುವಟಿಕೆ ಕಡಿಮೆಯಾಗಲಿಲ್ಲ; ಫಲವಾಗಿ ಕೊನೆಯ ಕಾಲದಲ್ಲಿ ಅವರು ಜೀವಿತದ ಎರಡು ಮಹಾ ಸ್ವಪ್ನಗಳು ಪೂರ್ಣವಾದವು. ೧೯೨೧ರಲ್ಲಿ ವಿಶ್ವ ಭಾರತಿಗೆ 'ಚೀನಾಭ ವನ' ಸೇರಿಸಲ್ಪಟ್ಟಿತು. ಚೀನದ ಜೀವನ ಮತ್ತು ಸಾಹಿತ್ಯಗಳ ಅಧ್ಯಯನ ಮಾಡಲು ಶಾಂತಿನಿಕೇತನದಲ್ಲಿ ಈ ವಿದ್ಯಾಪೀಠ ಏರ್ಪಟ್ಟಿತು. ೧೯೩೯ರ ಜನವರಿಯಲ್ಲಿ ಪಂಡಿತ ಜವಾಹರಲಾಲ ನೆಹರುಗಳಿಂದ ಶಾಂತಿನಿಕೇತನದಲ್ಲಿ ಒಂದು ಹಿಂದೀ ವಿದ್ಯಾಪೀಠವೂ ಉದ್ಘಾಟಿತವಾಯಿತು.

—ಇಯಾ...

ಹಿಂದೂದೇಶದ ಜಲಪ್ರಪಾತಗಳನು ವಿದ್ಯುತ್ ಚಕ್ತಿಯನ್ನು ಸಂಗ್ರಹಿಸುವರಿ ಉಪಯೋಗಿಸುವ ಯೋಜನೆಗಳನ್ನು ಕಲ್ಪಿಸಿಕೊಡಲು, ಅಮೇರಿಕನ್ ಪ್ರವೀಣ ರೊಬ್ಬರು, ಇಂಡಿಯಾ ಸರಕಾರದೊಡನೆ ನೇಮಕಹೊಂದಿರುವರು. ಹಿಂದೂದೇಶ ದ ಜಲಾಶ್ರಯಗಳನ್ನೆಲ್ಲಾ ವಿದ್ಯುತ್ ಚಕ್ತಿ ಯನ್ನು ತಯಾರಿಸುವಂತೆ ಅನುಕೂಲ ಪಡಿಸಿದರೆ,—ಅದರಿಂದ ಹಿಂದೂದೇಶಕ್ಕೆ ಪ್ರಗತಿ ಪಥದಲ್ಲಿ ಮುಂದೆ ನಡೆಯಲು, ಸುಲಭ ಸಾಧ್ಯವಾಗುವುದು.

* * *

ಯುದ್ಧಾನಂತರ ಇಂಡಿಯಾ ಸರಕಾ ರವು ಕೈಗೊಳ್ಳಲಿರುವ ಉದ್ಧಾರ ಯೋಜ ನೆಗಳ ಕುರಿತು, ಸಾಂಪತ್ತಿಕ ವ್ಯವಸ್ಥೆಗ ಳನ್ನು ಕಲ್ಪಿಸಲು, ಓರ್ವ ಆಫೀಸರರನು ಇಂಡಿಯಾ ಸರಕಾರವು ನೇಮಿಸಿರುವುದು.

* * *

ಕುಂದಾಪುರ ಡಿಸ್ಟ್ರಿಕ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 180/44

ಮಾರ್ಟಿಸ್ ಕ್ರಾಸ್ತ— ವಾದಿ

ಲಕ್ಷ್ಮಣ— ಪ್ರತಿವಾದಿ

ಕುಂದಾಪುರ ತಾಲೂಕು ಕಾಲ್ತೋಡು ಗ್ರಾಮ ದ ಮೂರೂರು ಕೊಕಗ ಬೆಟ್ಟಿನಲ್ಲಿರುವ ಕಪ್ಪಾದಿ ಚಿಕ್ಕಮನೆ ಸುಬ್ಬನ ಅಳಿಯ ಮೇಲಿನ ದಾವೆ ಯ ಪ್ರತಿವಾದಿ ಲಕ್ಷ್ಮಣನಿಗೆ ಈ ಮೂಲಕ ತಿಳಿ ಯಪಡಿಸುವುದು.

ನಿಮ್ಮ ಮೇಲೆ ವಾದಿಯು ಚಾಲನೇದ ಬಾಕಿಗೆ ಮಾಡಿದ ಮೇಲಿನ ದಾವೆಯು ತಾ 18-9-44ಕ್ಕೆ ಕುಂದಾಪುರ ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ಕಟ್ಟಿ ಇಟ್ಟಿರುತ್ತದೆ. ಆ ದಿವಸ ಬೆಳಿಗ್ಗೆ 11 ಗಂಟೆ ಸರಿ ಕೋರ್ಟಿನ ಮುಂದೆ ನೀವು ಸ್ವತಹಾ ವಕೀಲರ ಮುಖಾಂತರ ಹಾಜರಾಗದಿದ್ದ ಪಕ್ಷ ದಲ್ಲಿ ಸದ್ರಿ ದಾವೆಯನ್ನು ನಿಮ್ಮ ಗೈರು ಹಾಜರ ನಲ್ಲಿ ತೀರ್ಮಾನಿಸಲಾಗುವದು.

ಕುಂದಾಪುರ, 8-9-1944. M. ANANTHAYA. Advocate for plaintiff

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 316/43 R. E. P. 4/4..

ಅರ್ಜಿದಾರ ಮಾನಿ ಕೃಷ್ಣಯ್ಯ.

ಎದ್ರಿ ಸೀತಾರಾಮ ಭಟ್ಟ ಕೆಲ ಲಕ್ಕು ಮ... ದೇವರು ಭಟ್ರ ಮಗ ನಾಗೋಡಿ ಗ್ರಾಮ ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ,

ಈ ಅಮಲ್ದಾರಿಯಲ್ಲಿ ಸ್ಥಿರಾಸ್ತಿ ವಿಕ್ರಯ ಕುರಿತು ಇಸ್ತಿಹಾರಿನ ಶರ್ತ ನಿರ್ಣಯಿಸುವ ತಾ. 11-9-44ಕ್ಕೆ ಮೇಲ್ಕಂಡ ಕೋರ್ಟಿನ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನ ದರೂ ಆಕ್ಷೇಪ ಇದ್ದರೆ ಸದ್ರಿ ದಿವಸ ಹಗಲ 11 ಗಂಟೆಗೆ ಈ ಕೋರ್ಟಿನಲ್ಲಿ ಹಾಜರಾ ಗ್ಯಾಹಿರು ಮಾಡಿಕೊಳ್ಳತಕ್ಕದ್ದು.

ಕೋರ್ಟಿನ ಹುಕ್ಕುಂ ಪ್ರಕಾರ

Coondapoor 4-9-1944 Y. Tejappa Shetty, Advocate for petitioner

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 30th April, 1944.

LIABILITIES	Rs. As.Ps.	ASSETS	Rs. As.Ps.
1. Paid up Capital	14,14,580-0- 0	1. Office Buildings, safes, furniture, books, etc.	91,792- 3- 6
2. Reserves.	4,12,548- 3- 1	2. Advances	53,58,139- 7- 0
3. Due to Bankers	40,499- 5- 8	3. Investments on Govt. Securities etc.	23,94,472-13-10
4. Deposits	78,79,479- 2- 1	4. Bills for collection	4,55,475- 2- 5
5. Bills for collection	4,55,475- 2- 5	5. Other Assets	91,527- 3- 4
6. Branch Adjustments	1,99,631- 8-10	6. Cash on hand and with Bankers in Current A/cs	23,75,816-10-10
7. Other liabilities and undisbursed profits	3,65,010- 2-10		
Total	1,07,67,223-8-11	Total	1,07,67,223- 8-11

ಯುದ್ಧ ಪರಿಸ್ಥಿತಿ

ಪಶ್ಚಿಮರಂಗದಲ್ಲಿ ಮಿತ್ರರಿಗೆ ಮಹಾವಿಜಯ

ಯುದ್ಧವು ಇಂದು ಆರನೆ ವರ್ಷಕ್ಕೆ ಕಾಲಿಟ್ಟಿರುತ್ತದೆ. ಮಿತ್ರರು ತಮ್ಮ ವೈರಿಗಳ ತಡೆಗಳನ್ನು ಮುರಿದು ಹಾಕಿ ಬಹಳ ರಭಸದಿಂದ ಮುಂದೆ ಸಾಗುತ್ತಿರುವರು. ಫ್ರಾನ್ಸ್ ಜರ್ಮನಿಯ ಬಂಧನದಿಂದ ವಿಮುಕ್ತವಾಗಿರುವುದು. ಯುದ್ಧವು ೧೯೪೪ರಲ್ಲಿ ಮುಗಿಯುತ್ತದೆಂದು ಮಿತ್ರರಿಗಿದ್ದ ಭರವಸೆಯು ಒಂದು ಸತ್ಯವಾಗಿ ಪರಿಣಮಿಸಿದೆ. ಜರ್ಮನಿಯ ಅನೇಕ ಮಿತ್ರರು, ಅವರನ್ನು ತ್ಯಜಿಸಿ ಮಿತ್ರರ ಪಕ್ಷಕ್ಕೆ ಸೇರಲು ತೋರಿಸುವ ಕುತೂಹಲದಿಂದ, ಈ ಯುದ್ಧವನ್ನು ೧೯೪೪ರ ಅಂತ್ಯದಿಂತ ದೀರ್ಘಕಾಲಕ್ಕೆ ಮುಂದುವರಿಯದು ಎಂದು ಧೈರ್ಯದಿಂದ ಹೇಳಬಹುದು. ಮಿತ್ರರಿಗೆ ಪಶ್ಚಿಮ ರಣರಂಗದಲ್ಲಿ ಸಂಪೂರ್ಣ ಜಯವು ಲಭಿಸಿರುತ್ತದೆ. ಮಿತ್ರರು ದ್ವಿತೀಯ ರಂಗವನ್ನು ಪ್ರಾರಂಭಿಸಿದಾಗ, ಮೇಲಿನ ತರದಲ್ಲಿ ಅವರಿಗೆ ಯಶಸ್ಸು ದೊರಕುತ್ತದೆಂದು ಯಾರೂ ನಂಬಿರಲಿಲ್ಲ. ಅಮೇರಿಕನ್ ಸೇನಾದಳಗಳ ಎದುರು, ಮಿತ್ರರ ಅಧಿಕ ವಿಮಾನಬಲದ ಎದುರು, ಜರ್ಮನರು ಪಲಾಯನ ಮಾಡುತ್ತಿರುವರು. ಕರಾವಳಿಯಲ್ಲಿ ಕೆಲವು ಠಾಣ್ಯಗಳಲ್ಲಿ ಹೊರತು ಫ್ರಾನ್ಸಿನಲ್ಲಿ ಜರ್ಮನಿಯ ತಡೆಯು ಪೂರ್ಣ ಮಾಯವಾಗಿ ಬಿಟ್ಟಿದೆ. ಜರ್ಮನರಿಗೆ ಪಶ್ಚಿಮರಂಗದ ಈ ಕದನದಲ್ಲಿ ನಾಲ್ಕುನೂರು ಸಾವಿರ ಅಪಘಾತಗಳು ಪ್ರಾಪ್ತವಾಗಿವೆ. ಎರಡು ಲಕ್ಷ ಮಂದಿಗಳು ಬಂದಿತರಾಗಿರುವರು; ಐದು ಪೆಂಝರ ದಳಗಳು ನಷ್ಟವಾಗಿವೆ; ೨೪ ಕಾಲ್ದಳಗಳ ಡಿವಿಜನುಗಳು ನಿವೃತ್ತಹೊಂದಿವೆ. ಒಟ್ಟಿನಲ್ಲಿ, ಜರ್ಮನಿಗೆ ಫ್ರಾನ್ಸಿನಲ್ಲಿ ಮಹಾ ಸೋಲು ಲಭಿಸಿರುತ್ತದೆ.

ಮಿತ್ರರ ಪಶ್ಚಿಮ ರಂಗದ ಈ ಮೇಲಿನ ವಿಜಯದಿಂದ ಇತರರಂಗಗಳಲ್ಲಿ ಜರ್ಮನಿಗೆ ಪ್ರತಿಕೂಲವಾದ ಪರಿಸ್ಥಿತಿಯು ಪರಿಣಮಿಸಿಯದೆ. ರುಮೇನಿಯಾವು ಮಿತ್ರರ ಶಿಬಿರವನ್ನು ಸೇರಿದುದರ ಪರಿಣಾಮವಾಗಿ, ರಷ್ಯನರ ಮುನ್ನಡೆಯು ಅತಿ ಶೀಘ್ರವಾಗಿ ನಡೆದಿರುತ್ತದೆ. ಕೆಂಪು ಸೇನೆಯು ಡೆನ್ಯೂಬ್ ಬಯಲನ್ನು ದಾಟಿ ಬಲ್ಗೇರಿಯಾದ ಗಡಿಯನ್ನು ಮುಟ್ಟಿದೆ. ರುಮೇನಿಯಾದಿಂದ ಜರ್ಮನರನ್ನು ಸಂಪೂರ್ಣ ಹೊರತಳ್ಳಲಾಗಿದೆ. ರುಮೇನಿಯಾವು ಹಂಗೇರಿಯದ ಕಡೆಗೆ ಆಕ್ರಮಣವನ್ನು ನಡೆಯಿಸಿ, ಹಂಗೇರಿಯದ ಅನೇಕ ಪ್ರದೇಶಗಳನ್ನು ಹಿಡಿದುಬಿಟ್ಟಿದೆ. ಹಂಗೇರಿಗೆ ಪೂರ್ವಕಡೆಯಲ್ಲಿ ರಶ್ಯವನ್ನು ಎದುರಿಸಬೇಕಾಗಿ ಬಂದಿದೆ. ಬಾಲ್ಕನ್ ಪ್ರದೇಶದ ಕದನವು ಈಗ ಪ್ರಾರಂಭವಾಗಿದೆ ಎಂದು ಹೇಳಬಹುದು. ಯುಗೊಸ್ಲೊವಿಯದಲ್ಲಿ ರಶ್ಯನರ ಸ್ನುಗ್ಗಾಟ, ಇಟಲಿಯಲ್ಲಿ ಮಿತ್ರರ ಸ್ಥಿರವಾದ ಹಿಡಿತ ಈ ಎರಡು ಕಾರಣಗಳಿಂದ, ಯುಗೊಸ್ಲೊವಿಯವೂ, ಗ್ರೀಸ್ ದೇಶವೂ ಸದ್ಯದಲ್ಲಿ ವಿಮುಕ್ತವಾಗಬಹುದು.

ಜರ್ಮನರ ಪ್ರಭಾವವು ಕುಂದುತ್ತಾ ಬಂದ ಹಾಗೆ, ಅವರೊಡನೆ ಈ ವರೆಗೆ ಮೈತ್ರಿಯಲ್ಲಿದ್ದ ಚಿಕ್ಕ ಪುಟ್ಟ ದೇಶಗಳು, ಅವರನ್ನು ತ್ಯಜಿಸ ಹತ್ತಿವೆ. ಈ ದೇಶಗಳು ಜರ್ಮನರನ್ನು ತ್ಯಜಿಸಿ ಮಿತ್ರರ ಕಡೆಗೆ ಸೇರುತ್ತದೆ. ಬಲ್ಗೇರಿಯವು ಇದಕ್ಕೊಂದು ದೃಷ್ಟಾಂತ. ಜರ್ಮನರನ್ನು ತಮ್ಮ ದೇಶದಿಂದ ಹೊರಮಾಡಿ ತಾವು ತಟಸ್ಥರೆಂದು, ಬಲ್ಗೇರಿಯವು ಸಾರಿರುತ್ತದೆ. ಆದರೆ ಬರೆ ತಾಟಸ್ಥ್ಯದಿಂದ ಮಿತ್ರರಿಗೆ ಸಮಾಧಾನವಾಗುವಂತಿಲ್ಲ. ಬಾಲ್ಕನ್ ಪ್ರದೇಶದಿಂದ ಜರ್ಮನರನ್ನು ಹೊರಗೆ ಅಟ್ಟಲು, ಅವರಿಗೆ ಬಾಲ್ಕನ್ ರಾಷ್ಟ್ರಗಳ ಸಂಪೂರ್ಣವಾಗಿ ಸಹಕಾರ ಸಹಾನುಭೂತಿಗಳ ಅವಶ್ಯವಿದೆ. ಹಂಗೇರಿಯು ಮಿತ್ರರೊಡನೆ ಸೇರಲೂ ಕುತೂಹಲವಂತವಾಗಿರುತ್ತದೆ. ಬಲ್ಗೇರಿಯವು ಹಂಗೇರಿಯದ ಕ್ರಮವನ್ನೆ ಆಚರಿಸಲೆ ಬೇಕಾಗುವುದು. ಉತ್ತರದಲ್ಲಿ ಫಿನ್ಲೆಂಡು ರಷ್ಯನರೊಡನೆ ಯುದ್ಧವನ್ನು ನಿಲ್ಲಿಸಿ, ಸಂಧಾನ ಶರ್ತಗಳನ್ನು ಕೇಳಿದೆ. ಸ್ವಿಡನ್ ರಶ್ಯದೊಡನೆ ಸೇರಿಬಿಟ್ಟಿದೆ. ಅಂದರೆ ಎಲ್ಲರಿಂದಲೂ ತ್ಯಜಿಸಲ್ಪಟ್ಟು ಜರ್ಮನಿಯು ಒಬ್ಬಂಟಿಗನಾಗಿ, ಯುರೋಪದ ಬಹುತೇಕ ರಾಷ್ಟ್ರಗಳ ಸಹಾಯ ಸಹಕಾರದಿಂದ ಕೂಡಿದ ಮಿತ್ರರನ್ನು ಎದುರಿಸಬೇಕಾದ ಪ್ರಸಂಗವು ಉಂಟಾಗಿರುತ್ತದೆ. ಜರ್ಮನಿಯು ಸಂಧಾನಕ್ಕೆ ಪ್ರಯತ್ನಪಟ್ಟಿತೆಂದು ವಾರ್ತೆಯು ಎರಡು ದಿವಸಗಳ ಹಿಂದೆ ಬಂದಿತ್ತು. ಜರ್ಮನಿಯ ಈ ವರ್ತನೆಗೆ ಮೇಲಿನ ಪರಿಸ್ಥಿತಿಯೇ ಕಾರಣವಾಗಿರಬಹುದು.

ಈ ಲೇಖವನ್ನು ಮುಗಿಸುವುದರಷ್ಟರೊಳಗೆ ಯುರೋಪದ ಮಿತ್ರರ ಶಿಬಿರದಿಂದ ಇನ್ನೂ ಅನೇಕ ಉಲ್ಲಾಸಭರಿತ ವಾರ್ತೆಗಳು ಬಂದಿವೆ. ಬೆಲ್ಜಿಯಮ್ ಮತ್ತು ಹೊಲ್ಲೆಂಡ್ ದೇಶಗಳಲ್ಲಿ ಅಮೇರಿಕನ್ನರ ಅಭಿಕ್ರಮವಾಗಿ ಆ ದೇಶಗಳು ಮಿತ್ರರ ವಶವಾಗಿವೆ. ಇಂಗ್ಲಾಂಡನ್ನು ಧಾಳಿಗೈಯ್ಯುವ ಫ್ರಾನ್ಸ್ ಕರಾವಳಿಯಲ್ಲಿರುವ [illegible] ಮಿತ್ರವಶವಾಗಿವೆ. ಅಮೇರಿಕನರು ಜರ್ಮನರ ಸಿಗ್‌ಫ್ರಿಡ್ ಲ್ಯಾನಿನ ತೀರ ಸಮೀಪ ಬಂದಿರುವರು.

ಇತ್ತ ಏಸ್ಯಾಖಂಡದಲ್ಲಿ, ಪೌರ್ವಾತ್ಯ ರಂಗದಲ್ಲಿ ಅಮೇರಿಕನರ ಭಾರಿ ಚಟುವಟಿಕೆಗಳು ನಡೆದಿವೆ. ದಿನ ಒಂದರಒಂದು ಸಾವಿರ ವಿಮಾನಗಳನ್ನು ಉಪಯೋಗಿಸಿ, ಜಪಾನಿನ ಮೇಲೆ ದಾಳಿಮಾಡಲು ಅನುಕೂಲಗಳನ್ನು ಮಾಡಿಕೊಳ್ಳುವ ಕೆಲಸವು ಕೈಗೊಳ್ಳಲಾಗಿ, ಸದ್ಯದಲ್ಲೆ ಜಪಾನಿನ ಮೇಲೆ ಈ ದೈನಿಕ ಹಲ್ಲೆಯು ಪ್ರಾರಂಭವಾಗಬಹುದು. ಶಾಂತಸಾಗರದ ಅನೇಕ ಪ್ರಾಮುಖ್ಯ ಠಾಣ್ಯಗಳು ಜಪಾನೀಯರ ಕೈಬಿಟ್ಟಿವೆ. ಬರ್ಮಾದೇಶದಲ್ಲೂ ಪರಿಸ್ಥಿತಿಯು ಆಶಾದಾಯಕವಿದೆ. ಚೀನಿಯರ ಅತ್ಯಂತ ಹುರುಪಿನ ಯತ್ನಗಳು ನಡೆಯುತ್ತಿವೆ. ಪೌರ್ವಾತ್ಯದ ಯುದ್ಧರಂಗದಲ್ಲಿ ಸದ್ಯದಲ್ಲೆ ಮಹತ್ತರದ ಘಟನೆಗಳು ನಡೆಯಬಹುದು.

ಕೇರಳದಲ್ಲಿ ಕಳ್ಳಸಂತೆ

ಮಲೆಯಾಳದಲ್ಲಿ ಬರಗಾಲ ಚಿಹ್ನೆಗಳು

ಇನ್ನೊಂದು ಬಂಗಾಲವಾಗುತ್ತಿತ್ತು

ಬರಗಾಲವು ಈ ದುಷ್ಕಾಲದ ಲಕ್ಷಣಗಳಲ್ಲಿ ಒಂದು. ಬಂಗಾಲದಲ್ಲಿ ಅದರ ರೌದ್ರನಾಟಕವಾಯಿತು. ಮೆಲ್ಲನೆ ಅದರ ಯಮದೃಷ್ಟಿಯು ಒರಿಸ್ಸಾದ ಕಡೆ ಹೊರಳಿ ಈಗ ಮಲಬಾರದಲ್ಲಿ ಅದು ತಾಂಡವವಾಡುತ್ತಿದೆಯಾಗಿ ವದಂತಿ ಇದೆ. ಇದಕ್ಕೆ ಕಳ್ಳಸಂತೆಯೇ ಕಾರಣವೆನ್ನುತ್ತಾರೆ. ಅದನ್ನು ನಿರ್ಮೂಲಿಸಲು ಸರಕಾರವು ಪ್ರಯತ್ನಿಸುತ್ತಿವೆ.

ಮುಂಚಿನಿಂದಲೂ ಕೇರಳ ದೇಶವು ಅಕ್ಕಿಯ ಮಟ್ಟಿಗೆ ಸ್ವಾವಲಂಬಿಯಲ್ಲ. ಮುಖ್ಯ ಆಹಾರವಾದ ಅದನ್ನು ಅಲ್ಲಿ ಸಮೃದ್ಧಿ ಬೆಳೆಯುವ ತೆಂಗು, ಬಾಳೆ ಹಣ್ಣುಗಳನ್ನು ಕೊಟ್ಟು ಹೊರ ಪ್ರದೇಶದಿಂದ ಪಡೆಯಬೇಕಾಗಿತ್ತು. ಈಗ ರೈಲು ಹಡಗ ಸೌಕರ್ಯಗಳು ಕಡಿಮೆಯಾದುದರಿಂದ ಅಕ್ಕಿ ಸಿಕ್ಕಿದರೂ ಒಯ್ಯುವುದು ಕಷ್ಟವಾಗಿದೆ. ಅಲ್ಲಿ ಪ್ರತಿತಿಂಗಳು ಒಂದು ಲಕ್ಷ (ಮಲಬಾರ ಜಿಲ್ಲೆಯಲ್ಲಿ ಮಾತ್ರ) ಮುಡಿ ಅಕ್ಕಿ ಹೊರಗಿನಿಂದ ಬರಬೇಕಿತ್ತು 'ಕಂಟ್ರೋಲ್' ಆದುದರಿಂದ ಅದು ೧೫ ಸಾವಿರಕ್ಕೆ ಇಳಿದಿದೆ. ಅದನ್ನು ಕೂಡಾ ಒಯ್ಯಲು ರೈಲು ಗಾಡಿಗಳೇ ಸಿಕ್ಕುವುದಿಲ್ಲ. ಶ್ರಮ ಜೀವಿಗಳಾದ ಮಲೆಯಾಳಿಗಳಿಗೆ ಕಮ್ಮಿ ಎಂದರೆ ೩ ಪಾವು (೨೦ ತೊಲೆ) ಅಕ್ಕಿಯಾದರೂ ಬೇಕು. ಈಗ ರೇಶನ್ ಆಗಿ ಅದು ಸುಮಾರು ೧ ಪಾವು ೬ ತೊಲೆ ಮಾತ್ರ ಆಗಿದೆ.

ಕಳ್ಳಸಂತೆ ಈ ಪ್ರದೇಶದಲ್ಲಿ ಬಹಳ ಚಲಾವಣೆಯಲ್ಲಿದೆ. ವ್ಯಾಪಾರಿಗಳೂ, ದಲ್ಲಾಳಿಗಳು ತುಂಬಾ ಶ್ರೀಮಂತರಾಗಿದ್ದಾರೆ. ಬಡ ಬಗ್ಗರಿಗೆ ಕೆಲವು ಸಮಯದಲ್ಲಿ ಪಾವಿಗೆ ೮ ಆಣೆ ಎಂದರೆ ಅಕ್ಕಿ ಇಲ್ಲ. ಸಾಲದಿದ್ದದಕ್ಕೆ ಕಳೆದ ವರ್ಷ ಅಲ್ಲಿ ಕೊಲೇರಾ ರೋಗವು ದೊಡ್ಡ ಆಹುತಿ ತೆಗೆದುಕೊಂಡಿತು. ಸಾವಿರಾರು ಕುಟುಂಬಗಳು ಭಿಕ್ಷಾಪಾತ್ರೆ ಹಿಡಿದರು. ಬದುಕಿದವರಲ್ಲಿ ಸಾವಿರಾರು ಜನರು ಅನಾರೋಗ್ಯರೂ ನಿರ್ಬಲರೂ ಆಗಿ ಬೇಸಾಯ ಮಾಡಲು ಅಶಕ್ತರಾಗಿರುವುದರಿಂದ ಕೃಷಿ ಉತ್ಪನ್ನಕ್ಕೆ ಬಹಳ ಅನಾನುಕೂಲವಾಗಿದೆ. ಈ ಕಡೆಯಿಂದ ಸಾವಿರಗಟ್ಲೆ ಜನರು ಯುದ್ಧಕ್ಕೆ ಸೇರಿ ಅಸ್ಸಾಂ ರಂಗದಲ್ಲಿರುವರು. ಅವರ ಕಡೆಯಿಂದ ಅವರ ಕುಟುಂಬಕ್ಕೆ ಸ್ವಲ್ಪ ಹಣಮಾತ್ರ ಬರುತ್ತದೆ.

ಕೇರಳದಲ್ಲೆಲ್ಲ ಜನರು ಬೇರುಗಳನ್ನೊ ಮರಗೆಣಸನ್ನೊ ಇಲ್ಲವೆ ಹಲಸಿನ ಹಣ್ಣುಗಳನ್ನೊ ತಿಂದು ದಿನದೂಡುತ್ತಿದ್ದಾರೆ. ಆಹಾರ ಪೂರೈಕೆಗೆ ಸರಕಾರದವರು ತುಂಬಾ ಪ್ರಯತ್ನ ಪಡುತ್ತಿರುವರು. ರೇಶನ್ ಕಂಟ್ರೋಲ್‌ಗಳೂ ಅಲ್ಲಿ ಬಂದಿವೆ. ಬೆಲೆ ಹೆಚ್ಚಾದರೂ ಬೇಕಾದ ವಸ್ತುಗಳು ಸಿಗುತ್ತಿದ್ದುವು. ಆದರೆ ಆ ವಸ್ತುಗಳ ಮೇಲೆ ಕಂಟ್ರೋಲ್ ಹಾಕಿದ ತಕ್ಷಣ ಆ ವಸ್ತುವೆ ಮಾಯವಾಗಿ ಹೋಗುತ್ತದೆ. 'ಕಪ್ಪುಸಂತೆ' ಬಹಳ ನಡೆಯುತ್ತದೆ. ಕಂಟ್ರೋಲ್ ಆದ ಮೇಲೆ ಈಗ ಅಲ್ಲಿ ಸಕ್ಕರೆಯೇ ಸಿಗದಂತಾಗಿದೆ. ಹೀಗಾಗಿ ಅಲ್ಲಿ ಒಬ್ಬನು ಸತ್ತರೆ ಜನರು 'ಅವನು ಕಂಟ್ರೋಲ್ ಆದನು' ಎನ್ನುವರು.

ತಿರುವಾಂಕೂರು, ಕೊಚ್ಚಿಗಳಲ್ಲಿಯೂ ಪರಿಸ್ಥಿತಿ ಹೆಚ್ಚು ಕಮ್ಮಿ ಹೀಗೆಯೇ ಆಹಾರ ಬೇರುಗಳನ್ನು ತುಂಬಾ ಬೆಳೆಸಲು ಅಲ್ಲಿ ಪ್ರಚಾರ ಮಾಡುತ್ತಾರೆ. ಆದರೆ ಬೇಸಾಯಕ್ಕೆ ಜನರಿಲ್ಲ. ಮುದುಕರು ಮಕ್ಕಳು, ಹೆಂಗುಸರು ಮಾತ್ರ ಕಾಣುತ್ತಾರೆ. ಹೆಚ್ಚು ಆಹಾರ ಬೆಳೆಸಲು ಗುಡ್ಡಗಳಲ್ಲಿನ ಕಾಡುಗಳನ್ನೂ ಕಡಿದು ಬರಿದು ಮಾಡಿರುವರು. ಅಲ್ಲಿ ಎಲೆಗಳನ್ನೂ ಗೆಲ್ಲುಗಳನ್ನೂ ಒಟ್ಟು ಹಾಕಿ ಬೆಂಕಿ ಕೊಡುತ್ತಾರೆ. ಉಷ್ಣಕ್ಕೆ ನೆಲ ಒಡೆಯುತ್ತದೆ. ಒಂದು ಮಳೆ ಬಂದೊಡನೆ ಉತ್ತ ಸ್ಥಳದಂತಾಗುತ್ತದೆ—ಬೀಜ ಬಿತ್ತುತ್ತಾರೆ.

ಆಫ್ರಿಕಾದಲ್ಲಿ ಯುದ್ಧ ನಡೆಯುತ್ತಿದ್ದಾಗ ಅಲ್ಲಿ ತೆಂಗಿನ ನಾರಿನ ಹಗ್ಗದ ಕೈಗಾರಿಕೆ ಭರದಿಂದ ಸಾಗುತಿತ್ತು. ಈಗ ಅದು ನಿಂತಿದೆ. ಹೆಂಗಸರಿಗೂ ಕೆಲಸ ಕಡಿಮೆಯಾಗಿದೆ. ಹಳ್ಳಿಯಿಂದ ಗುಂಪು ಗುಂಪಾಗಿ ಬರುತ್ತಿರುವ ಆರಿಬತ್ತಲೆ ಸ್ತ್ರೀಯರು ಉಪಾಯವಿಲ್ಲದೆ ಬೇಡಿಯೊ, ವ್ಯಭಿಚಾರ ವೃತ್ತಿಯಿಂದಲೊ ಜೀವನ ಮಾಡುತ್ತಾರೆ. ಕ್ಷಾಮ ನಿವಾರಣಾ ಸಂಸ್ಥೆಗಳಿಗೂ, ಸಹಕಾರಿ ಸಂಘಗಳೂ ಹೆಸರಿಗೆ ಮಾತ್ರ ನಿವಾರಣೆಯ ಕೆಲಸ ಮಾಡುತ್ತವೆ. ಅದಕ್ಕೆ ಅಲ್ಲಿನ ಸರಕಾರದ ವಿರೋಧವಲ್ಲದೆ ಬೆಂಬಲವಿಲ್ಲ. ಅಲ್ಲಿಂದ ಚಿತ್ರಗಳನ್ನು ಎತ್ತಿ ತರಲು ಬಿಡುವುದಿಲ್ಲ—ಪ್ರಚಾರವಾದೀತೆಂಬ ಹೆದರಿಕೆ.

ಹೀಗೆ ಒಂದು ಕಾಲದಲ್ಲಿ ಸಂಪತ್ ಸಮೃದ್ಧವಾಗಿದ್ದ ಕೇರಳವು ಭೀಕರ ಬರಗಾಲದ ದವಡೆಯಲ್ಲಿ ಸಿಕ್ಕಿದೆ. ತಮಗೆ ಹೆಚ್ಚಾದುದರಿಂದ ಇತರರಿಗೆ ಅನ್ನ ಇಕ್ಕುತಿದ್ದ ಆ ನಾಡು ಹಸಿವು ಜಾಡ್ಯಗಳ ತವರೂರಾಗಿದೆ. ನಿವಾರಣೋಪಾಯಗಳನ್ನು ತ್ವರೆಯಾಗಿ ಕೈಕೊಳ್ಳದಿದ್ದಲ್ಲಿ ನಾವು ನಮ್ಮ ಆಸುಪಾಸಿನಲ್ಲೆ ಲಕ್ಷಾಂತರ ಜನರು ಸಾಯುವ ಮತ್ತೊಂದು ಬಂಗಾಲವನ್ನೂ ಪ್ರತ್ಯಕ್ಷ ಕಾಣುತ್ತಿದ್ದೆವು. ಮತ್ತು ಅಂತಹ ಪರಿಸ್ಥಿತಿಯು ಇಲ್ಲಿ ಹರಡುವ ಸಂಭವವೂ ಇತ್ತು.

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ

ಯುದ್ಧವು ಇನ್ನು ಬಹುಕಾಲ ಮುಂದರಿಯಲಿಕ್ಕಿಲ್ಲ. ಶಾಂತಿಕಾಲಕ್ಕಾಗಿ ನೀವು ಸಿದ್ಧರಾಗಿರುವಿರಾ?

ಶಾಂತಿ ಸಮಾರಂಭದಲ್ಲಿ ಅಕಲ್ಪಿತ ಘಟನೆಗಳು ಸಂಭವಿಸಬಹುದು. ಧಾರಣೆಗಳು ಇಳಿದು ಉದ್ಯೋಗ ವ್ಯಾಪಾರ ದಂದೆಗಳಿಗೆ ಧಕ್ಕೆ ತಗಲಬಹುದು. ನೀವು ಇವುಗಳಿಗಾಗಿ ನಿಮ್ಮ ಪೂರ್ವ ಸಿದ್ಧತೆ ಯನ್ನೇರ್ಪಡಿಸಿರುವಿರಾ? ಸ್ಥಿರವಾದ ಬ್ಯಾಂಕ್ ಖಾತೆಯಿಂದ ನೀವು ನಿಮ್ಮ ಸ್ಥಿತಿಯನ್ನು ಭದ್ರಗೊಳಿಸಿರುವಿರಾ? ಇಲ್ಲವಾದರೆ ನಿಮ್ಮ ಪೂರ್ವ ಸಿದ್ಧತೆಯನ್ನು ಪ್ರಾರಂಭಿಸಲೀಗ ಕಾಲಾತೀತವಾಗಿಲ್ಲ ಅನವಶ್ಯಕ ವಸ್ತುಗಳಿಗಾಗಿ ಏರಿದ ಬೆಲೆ ತೆತ್ತು ಹಣ ವೆಚ್ಚ ಮಾಡುವ ಬದಲು ಮುಂಬರುವ ಬೆಲೆ ಇಳಿತದ ಲಾಭವನ್ನು ಹೊಂದಲೋಸುಗ ಹಾಗೂ ಆಗಿನ ನವೀನ ಪರಿಸ್ಥಿತಿಯನ್ನೆದುರಿಸಲು ನಿಮ್ಮ ಉಳಿತಾಯವನ್ನೀಗ ಕೂಡಿರಿ.

ನಾವು ನಿಮಗೆ ಸಹಾಯ ಉತ್ತೇಜನಗಳ ಬಗ್ಗೆ ಭರವಸೆಯನ್ನೀಯುತ್ತೇವೆ.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಸ್ವದೇಶಾಭಿಮಾನಿ

ತಾರೀಖು 8—9—1944

ಗವರ್ನರರುಗಳ ಪರಿಷತ್ತು

ಕಳೆದ ವಾರ ಎಲ್ಲಾ ಪ್ರಾಂತೀಯ ಗವರ್ನರರುಗಳು ಡಿಲ್ಲಿಯಲ್ಲಿ ಸೇರಿ ಮುಕ್ತವಾದ ರಾಜಕೀಯ ಧೋರಣೆಯ ಕುರಿತ ವಿಷಯ ಆಲೋಚಿಸಿರಬೇಕೆಂದು ಊಹಿಸಲಾಗಿದೆ. ವೈಸ್‌ರಾಯರು ಅಧ್ಯಕ್ಷರಾಗಿದ್ದರು. ಭಾರತೀಯ ರಾಜಕೀಯ ಕೇಂದ್ರಗಳಲ್ಲಿ ಈ ಪರಿಷತ್ತಿನ ಮಹತ್ವಕ್ಕೆ ಯಾವ ಪ್ರಾಧಾನ್ಯ ಸಿಗಲಿಲ್ಲವಾದರೂ ಲಂಡನಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ತನ್ನ ಅಗ್ರಲೇಖದಲ್ಲಿ ಗಣನೀಯ ಊಹೆಯೊಂದನ್ನು ಪ್ರಕಟಿಸಿದೆ. ಯುದ್ಧ ಪರಿಸ್ಥಿತಿ ಸುಧಾರಿಸಿ, ಮಿಲಿಟರಿ ಏರ್ಪಾಡುಗಳನ್ನು ತೃಪ್ತಿಕರ ರೀತಿಯಲ್ಲಿ ಸುಭದ್ರಗೊಳಿಸಲಾದ ಕೂಡಲೇ ಸೆರೆಮನೆಯಲ್ಲಿರುವ ಭಾರತೀಯ ಮುಖಂಡರನ್ನು ಬಿಟ್ಟು ಬಿಡಲಾಗುವುದೆಂದೂ ಅನಂತರ ಸ್ವಲ್ಪ ಅವಧಿಯೊಳಗೆ ಸಾರ್ವತ್ರಿಕ ಚುನಾವಣೆಗಳು ನಡೆಯುವುದೆಂದೂ ಆ ಪತ್ರಿಕೆಯ ಅಭಿಪ್ರಾಯ

"ಈಗಲೇ ಅಲ್ಲದಿದ್ದರೂ, ಇನ್ನು ಸ್ವಲ್ಪ ಸಮಯದೊಳಗೇ ಅದು ಸಂಭವಿಸಬಹುದು" ಎಂದು ಅದು ಬರೆದುದರಲ್ಲಿ ವಿಶೇಷ ಮಹತ್ವವಿದೆ.

ಈ ಊಹೆಯು ನಿರಾಧಾರವೆಂದು ಹೇಳಬರುವುದಿಲ್ಲ. ಮೆಂಚೆಸ್ಟರ್ ಗಾರ್ಡಿಯನಿನಂತಹ ಪ್ರಭಾವಶಾಲಿ ಪತ್ರಿಕೆಯ ಸಂಪಾದಕರಿಗೆ ಬ್ರಿಟಿಷ್ ಆಡಳಿತಗಾರರ ಕೇಂದ್ರದಿಂದ ಕಿಂಚಿತ್ತಾದರೂ ಈ ವಿಷಯದ ಸೂಚನೆ ಸಿಗದಿರಲಿಕ್ಕಿಲ್ಲವೆಂದು ರಾಜಕೀಯ ತಜ್ಞರು ನಂಬಿರುವರು

ಚುನಾವಣೆಯಂತಹ ಗಹನ ವಿಚಾರವನ್ನು ತರ್ಕಿಸಲೆಂದೇ ಗವರ್ನರರ ಪರಿಷತ್ತು ಸೇರಿದ್ದರೂ ಇರಬಹುದು ಯುದ್ಧ ಪರಿಸ್ಥಿತಿಯು ಸುಧಾರಿಸಿ ಬಂದ ಮೇಲೂ ಚುನಾವಣೆಗಳನ್ನು ಮುಂದೆ ಹಾಕಲು ಸಾಧ್ಯವಿಲ್ಲ. ಆದರೆ ಚುನಾವಣೆಯ ಮೊದಲು ಮುಖಂಡರನ್ನು ಬಂಧಮುಕ್ತಗೊಳಿಸುವುದು ಅವಶ್ಯವೆನಿಸುತ್ತದೆ ಗಾರ್ಡಿಯನ್ ಪತ್ರಿಕೆಯ ಊಹೆಯು ಸತ್ಯವಾಗಿ ಸಂಭವಿಸಲೆಂದು ಹಾರೈಸೋಣ.

ಎಲ್ಲವೂ ಕಾಗದಕ್ಕಾಗಿ

ಡಾಕ್ಕಾದಲ್ಲಿ ಕಳೆದವಾರ ಉಪಾಧ್ಯಾಯ ವಿದ್ಯಾರ್ಥಿಗಳೊಳಗೆ ಚಿಕ್ಕ ಸ್ಪರ್ಧೆಯಾಯಿತು. ಇದರ ಕಾರಣ ಹಿಂದೂ ಮುಸ್ಲಿಂ ವೈಷಮ್ಯದಿಂದಲ್ಲ, ಕಾಗದದ ಅಭಾವವೇ ಈ ಜಗಳಕ್ಕೆ ಕಾರಣವೆಂದು ತಿಳಿದು ಬಂದಿದೆ

ಕಾಗದ ಸಿಕ್ಕುವುದಿಲ್ಲವಾದುದರಿಂದ ಪರೀಕ್ಷೆಗಳನ್ನು ಮುಂದಕ್ಕೆ ಹಾಕಬೇಕೆಂದು ಹುಡುಗರ ಕೇಳಿಕೆ. ಇದಕ್ಕೆ ಉಪಾಧ್ಯಾಯರು ಒಪ್ಪಲಿಲ್ಲ "ಎಂತಹ ಕಾಗದ ಚೂರುಗಳೇ ಆದರೂ ಚಿಂತಿಲ್ಲ. ಒಂದು ಕಡೆ ಬರೆದಿದ್ದವುಗಳಾದರೂ ಪರವಾ ಇಲ್ಲ, ಅವನ್ನು ತನ್ನಿರಿ" ಎಂದು ಅವರ ಸೂಚನೆ.

ಪರೀಕ್ಷೆಯ ದಿನ ಗಲಾಟೆಗೆ ಆರಂಭವಾಯಿತು. ಕಾಗದವೇ ಸಿಗದ ಹುಡುಗರು ಶಾಲೆಮುಂದೆ ಪಿಕೆಟಿಂಗ್ ನಡೆಸಿದರು. ಈ ಪರೀಕ್ಷೆಗೆ ಕೂತುಕೊಳ್ಳುವಂತೆ ಉಪಾಧ್ಯಾಯರು ಅವರನ್ನು ಸಂತೈಸಿದರು. ಆದರೆ ಕೆಲವು ತಲೆಹರಟೆ ವಿದ್ಯಾರ್ಥಿಗಳು ಕಲ್ಲು ಎಸೆದು ಗುರುಗಳ ವಿನಂತಿಯನ್ನು ಮನ್ನಿಸದವರಾದರು. ಇದರ ಪರಿಣಾಮವಾಗಿ ಪರೀಕ್ಷೆಯು ಒಂದು ವಾರಕ್ಕೆ ಮುಂದು ವರಿಸಲಾಯಿತು.

ಇತ್ತಂಡದವರನ್ನೂ ದೂರುವುದು ನಮ್ಮ ಉದ್ದೇಶವಿಲ್ಲ. ಕಾಗದವಿಲ್ಲದೆ ವಿದ್ಯಾರ್ಥಿ ಪ್ರಪಂಚವು ಭಂಗಪಡುತ್ತಿರುವ ವಿಷಯವನ್ನು ನಾವು ಒತ್ತಿ ಹೇಳಬೇಕಾಗುತ್ತದೆ. ಬರೆಯುವ ಕಾಗದಕ್ಕಾಗಿ ಅಂಗಡಿಯಿಂದ ಅಂಗಡಿಗೆ ಅಲೆಯುವ ವಿದ್ಯಾರ್ಥಿ ತಂಡಗಳನ್ನೂ ನಾವು ಕಾಣುತ್ತಿರುತ್ತೇವೆ.

ವಿದ್ಯಾ ಸಂಸ್ಥೆಗಳ ಅನುಕೂಲತೆಗಾಗಿ ನಮ್ಮ ಜಿಲ್ಲೆಯಲ್ಲಿ ಅಧಿಕಾರಿಗಳು ತಕ್ಕ ಏರ್ಪಾಡು ಮಾಡಿರುವುದು ಸ್ತುತ್ಯ. ಸದ್ರಿ ಸಂಸ್ಥೆಗಳು ಅದರ ಅನುಕೂಲತೆ ಪಡೆಯುವರೆಂದೂ ಅಪೇಕ್ಷಿಸಲಾಗಿದೆ. ಬರೆಯಲು ಉಪಯೋಗಿಸುವ ಈ ಸಾಧನವನ್ನು ವಿದ್ಯಾರ್ಥಿಗಳು ದುರುಪಯೋಗಗೊಳಿಸದೆ ಸಹಕರಿಸುವುದು 'ಕಾಗದ ಬರಗಾಲದ ಈ ಸಮಯದಲ್ಲಿ ಯೋಗ್ಯವಿದೆ.

ಅಂಬೇಡಕರರಿಗೆ ದೈವಕೃಪೆ

ಡಾ। ಅಂಬೇಡಕರು ವೈಸರಾಯರ ಕೌನ್ಸಿಲಿನ ಮಜೂರಖಾತೆಯ ಮಾನ್ಯ ಸಲಹೆಗಾರರು ಹಿಂದುಳಿದ ವರ್ಗದವರ ಜನಪ್ರಿಯ ಮುಖಂಡರು ಇವರು ಕಲ್ಕತ್ತೆಯಲ್ಲಿ ಕೊಟ್ಟ ತಮ್ಮದೊಂದು ಭಾಷಣದಲ್ಲಿ ದೈವ ಕಟಾಕ್ಷವು ತಮ್ಮವರ ಮೇಲೆ ಹೇಗೆ ಕೃಪೆದೋರಿದೆ ಎಂದು ವಿವರಿಸಿದರು.

ವ್ಯಾಸರಾಯರು ತಮ್ಮ ಇತ್ತೀಚೆಗಿನ ಹೇಳಿಕೆಯೊಂದರಲ್ಲಿ ಅಲ್ಪಸಂಖ್ಯಾತರಾದ ಹರಿಜನ ಮತ್ತು ಹಿಂದುಳಿದ ವರ್ಗದವರೊಡನೆ ಒಪ್ಪಂದ ಮಾಡಿಕೊಳ್ಳದೆ ಅಧಿಕಾರವನ್ನು ವರ್ಗಾಯಿಸಲಾಗುವುದಿಲ್ಲವೆಂದು ಹೇಳಿದ ವಿಷಯವನ್ನು ಅಂಬೇಡಕರು ಉದಾಹರಣೆಯಾಗಿ ನಿರೂಪಿಸಿದರು ಇದೊಂದು ದೈವಕೃಪೆಯಂತೆ

ಕ್ರಿಪ್ಸ್ ಯೋಜನೆಯು ಯಶಸ್ವಿಯಾಗದುದು ಅವರ ಮೇಲಿನ ದೈವ ಕೃಪೆಯ ಇನ್ನೊಂದು ನಿದರ್ಶನವೆಂತಲೂ ಮಾನ್ಯ ಮೆಂಬರರು ಹೇಳಿದರು

"ಕ್ರಿಪ್ಸ್ ಯೋಜನೆ ಯಶಸ್ವಿಯಾಗುತಿದ್ದರೆ ನಮಗೆ (ಹಿಂದುಳಿದ ವರ್ಗದವರಿಗೆ) ಏನಾಗುತ್ತಿತ್ತೆಂದು ನೀವೇ ಕಲ್ಪನೆ ಮಾಡಬಹುದು ಅದು ಮುರಿದು ಬಿದ್ದದಕ್ಕೆ ನಾನು ದೇವರನ್ನು ಸದಾ ಪ್ರಾರ್ಥಿಸುತ್ತೇನೆ" ಹೀಗೆಂದೂ ಹೇಳಿದರು.

ಕ್ರಿಪ್ಸ್ ಯೋಜನೆ ಜ್ಯಾರಿಗೆ ಬಂದಿದ್ದರೆ ಹಿಂದುಳಿದ ವರ್ಗದವರಿಗೆ ಕೇಡಾಗುತಿತ್ತೆಂಬುದರಲ್ಲಿ ನಮಗೆ ಸಂದೇಹವಿದೆ. ಆದರಿಂದ ಡಾ। ಅಂಬೇಡಕರು ಮಾತ್ರ ತಮ್ಮ ಈಗಿನ ಹುದ್ದೆಯನ್ನು ಬಿಟ್ಟುಬಿಡುವ ಪ್ರಸಂಗವೇನೊ ಬರುವ ಸಂಭವವಿತ್ತು ಅದಕ್ಕಾಗಿ ಅವರು ದಿನನಿತ್ಯ ಪ್ರಾರ್ಥಿಸಬೇಕಾದುದು ಸಮಂಜಸವಾದುದು.

ಪ್ರಚಲಿತ ಸಮಾಚಾರಗಳು

ಮೊನ್ನೆ ನಡೆದ ಮುಂಬಾಯಿ ದುರಂತದ ಕಾರಣಗಳು; ಅದರ ಕುರಿತು ವಿಚಾರಣೆ ನಡೆಯಿಸಿದ ಸಮಿತಿಯಿಂದ ವರದಿ ಹೊರಬಿದ್ದಿದೆ. ಅದೊಂದು ಆಕಸ್ಮಾತ ಅವಘಡವೆಂದು, ಸಮಿತಿಯ ಅಭಿಪ್ರಾಯ. ಮುಂಬಯಿ ಬಂದರದಲ್ಲಿ ಸ್ಫೋಟಕಗಳನ್ನು ಹಡಗಗಳಿಂದ ಇಳಿಸುವ ಮತ್ತು ಹತ್ತಿಸುವ ಸಮಯ ಹೆಚ್ಚಿನ ಜಾಗರೂಕತೆಯನ್ನು ವಹಿಸಬೇಕೆಂದು, ಈ ಸಮಿತಿಯ ಸೂಚನೆ.

* * *

ಕಸ್ತೂರ್‌ಬಾರವರು, ಪತಿಭಕ್ತಿಯನ್ನು ಆದರ್ಶ ರೀತಿಯಲ್ಲಿ ಸಲ್ಲಿಸಿ, ಜಗತ್ತಿನ ಮನ್ನಣೆಯನ್ನು ಪಡೆದವರು, ಈ ಮಹಾ ವ್ಯಕ್ತಿಯ ಸ್ಮಾರಕವಾಗಿ ಕೂಡುವ ನಿಧಿಗೆ, ಇಂಗ್ಲಾಂಡಿನ ಮಹಿಳೆಯರೂ ಕೂಡ ವಂತಿಗೆ ಈಯಬೇಕು, ಎಂಬುದಾಗಿ ಇಂಗ್ಲಾಂಡಿನ ಪ್ರಸಿದ್ಧ ಧರ್ಮ ಪ್ರಸಾರಕರಾದ ಶ್ರೀಮತಿ ಮೊಡ್ ರೊಯ್ಡನ್ ಎಂಬವರು, ಒಂದು ವಿನಂತಿ ಪತ್ರವನ್ನು ಪತ್ರಿಕೆಗಳಲ್ಲಿ ಹೊರಡಿಸಿರುವರು.

* * *

ಜಪಾನಿನ ದಕ್ಷಿಣಕ್ಕಿರುವ ಪರ್ಮೋಶಾ ದ್ವೀಪದ ಮೇಲೆ ಅಮೆರಿಕನ್ ವಿಮಾನಗಳು, ಭಯಂಕರ ಹಲ್ಲೆ ನಡೆಯಿಸಿದವು

* * *

ಅಖಿಲ ಭಾರತ ಚರಖಾ ಸಂಘದ ಸಭೆಯೊಂದು ಮೊನ್ನೆ ಗಾಂಧೀಜಿಯವರ ನೇತೃತ್ವದಲ್ಲಿ ವಾರ್ಧಾದಲ್ಲಿ ಜರಗಿತು ಚರಕವೆಂದರೆ ರಾಜಕೀಯ ಸ್ವಾತಂತ್ರವನ್ನು ದೊರಕಿಸಿಕೊಳ್ಳುವ ಅಹಿಂಸಾ ಯೋಗವು ಚರಕದ ಸಂದೇಶವು ಹಿಂದೂ ದೇಶದ ಹಳ್ಳಿ ಹಳ್ಳಿಗಳಲ್ಲಿ ಪ್ರಸರಿಸುವಂತೆ ಕಾರ್ಯ ನಡೆಯಬೇಕು. ಪ್ರತಿಯೊಂದು ಹಳ್ಳಿಯಲ್ಲಿ ಚರಖ ಸಂಘದ ಸ್ಥಾಪನೆಯಾಗಬೇಕು ಚರಕಾ ಚಟುವಟಿಕಗಳು ಅತ್ಯಂತ ಹುರುಪಿನಿಂದ ಸಾಗಬೇಕು,—" ಎಂಬುದಾಗಿ ಗಾಂಧೀಜಿಯರು ಈ ಸಭೆಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಚರಖಾ ಸಂಘಗಳು, ಕೇಂದ್ರ ಸಂಘದ ಅಧೀನವಾಗಿರದೆ, ಸ್ವಾತಂತ್ರವಾಗಿ ಯಾವತ್ತೂ ಆತಂಕವಿಲ್ಲದೆ ಕಾರ್ಯ ನಿರ್ವಹಿಸುವಂತಾಗಬೇಕೆಂದು ಗಾಂಧೀಜಿಯರ ಸೂಚನೆ ಈ ದೃಷ್ಟಿಯಿಂದ ಯೋಜನೆಯೊಂದನ್ನು ರಚಿಸಲು ಗಾಂಧೀಜಿಯರ ವಿನಂತಿ ಆಗಿರುತ್ತದೆ

* * *

ಜರ್ಮನಿಯು ಸಂಪೂರ್ಣ ಶರಣು ಬಂದ ವಿನಹ ಅದರೊಡನೆ ಸಂಧಾನ ವ್ಯವಹಾರವಿಲ್ಲವೆಂದು ಅಮೇರಿಕನ್ ಬಹೀರ್ ವ್ಯವಹಾರ ಇಲಾಖೆಯ ಕೊರ್ಡೆಲ್ ಹಲ್ಲರ ಅಭಿಪ್ರಾಯ ಸೂಚಿಸಿರುವರು.

* * *

ಹಿಂದೂದೇಶದಲ್ಲಿ ಬ್ರಿಟಿಷರ ಧೋರಣದ ಕುರಿತು ಕೆಲವು ವಿಚಾರಗಳಿರುವ ಠರಾವೊಂದು ಸಂಯುಕ್ತ ಅಮೇರಿಕಾದ ನ್ಯಾಯ ವಿಧಾಯಕ ಸಭೆಯಲ್ಲಿ ಅಲ್ಲಿನ ರಿಪಬ್ಲಿಕನ್ ಪಕ್ಷದ ಓರ್ವ ಪ್ರತಿನಿಧಿಯಿಂದ ಮಂಡಿಸಲಾಗಿದೆ.

* * *

ಹಿಂದೂ ದೇಶದ ಕುರಿತು ಅಮೇರಿಕದಲ್ಲಿ ಪ್ರಚಾರ ಕಾರ್ಯ ನಡೆಯಿಸುತ್ತಿರುವ ಸರ್. ಕಾಲ್ವಿನ್ ಡಿ. ಜೊನ್‌ಸನ್, (ಅಮೇರಿಕದಲ್ಲಿ ಬ್ರಿಟಿಷ್ ಮಂತ್ರಿ) ಮತ್ತು ಸರ್ ಗಿರಿಜಾಶಂಕರ್ ವಾಜಪೆ (ಇಂಡಿಯಾ ಸರಕಾರದ ಪ್ರತಿನಿಧಿಗಳು), ಈ ಈರ್ವ ಮಹನೀಯರು, ("ಪರ್ಸನಾ ನೊನ್‌ಗ್ರಾಟಾ")ಎಂದರೆ ಅಧಿಕಾರಯುತರಲ್ಲವೆಂದು ಮಾಡಬೇಕೆಂಬುದೆ ಮೇಲಿನ ಠರಾವಿನ ಉದ್ದೇಶ ಅಧ್ಯಕ್ಷ ರೂಸ್‌ವೆಲ್ಟರ ಇಂಡಿಯಾ ಪ್ರತಿನಿಧಿಗಳಾದ ಮಿ। ಫಿಲಿಪ್ಸರು, ಹಿಂದೂದೇಶದ ರಾಜಕೀಯ ಕುರಿತು ಮಾಡಿದ ವರದಿಯೊಂದರ ಅಭಿಪ್ರಾಯವು, ಅಮೇರಿಕದ ವಾಶಿಂಗ್ಟನ್ ಪೋಸ್ಟಿನಲ್ಲಿ ಪ್ರಕಟವಾದುದರ ಪರಿಣಾಮವು ಇದ್ದಂತೆ—ಹಿಂದೀಯರು ಅತ್ಯಂತ ಹುರುಪಿನಿಂದ ಕೂಡಿದವರಾಗಿ ಯುದ್ಧಸನ್ನಾಹಿತರಾಗವಂತೆ,ಹಿಂದೂದೇಶಕ್ಕೆ ಸ್ವಾತಂತ್ರ್ಯದ ಪ್ರಾಗ್ದಾನವಾಗಬೇಕು, ಜಪಾನನ್ನು ಸದೆಬಡೆಯುವ ಕಾರ್ಯದ ಹೆಚ್ಚಿನ ಹೊರೆಯು ಅಮೇರಿಕದ ಮೇಲಿರುವುದರಿಂದ, ಹಿಂದೀಯರು ಯುದ್ಧಯತ್ನಗಳಲ್ಲಿ ಶ್ರದ್ಧೆಯಿಂದ ಭಾಗವಹಿಸುವಂತೆ, ಅವರಿಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುವುದು, ಅಮೇರಿಕದ ಹೊಣೆಯಾಗಿರುವುದೆಂದೂ, ಮೊದಲಾದ ಅಭಿಪ್ರಾಯಗಳು ಈ ವರದಿಯಲ್ಲಿದ್ದು, ಅದ ಬ್ರಿಟಿಷ್ ಪ್ರಧಾನ ಸಚಿವ ಮಿ। ಚರ್ಚಿಲ್ಲರ ಮತ್ತು ಬಹೀರ್ ವ್ಯವಹಾರ ಇಲಾಖೆಯ ಮಂತ್ರಿಗಳಾದ ಮಿ। ಎಡೆನ್ನರ ಅಸಮಾಧಾನಕ್ಕೆ ಕಾರಣವಾಗಿ, ಅಮೇರಿಕಾದ ಮಿ। ಫಿಲಿಪ್ಸರು, ಈಗ ಲಂಡನಿನಲ್ಲಿ ಅಮೇರಿಕನ್ ಸೇನಾಪತಿಗಳಾದ ಸ್ಟಿಲ್‌ವೆಲ್ಲರಿಗೆ ಬೋಧಕರಾಗಿ ಲಂಡನಿನಲ್ಲಿ ಇರುವ ಕುರಿತು ಆಕ್ಷೇಪವೆತ್ತಿದುದರ ಪರಿಣಾಮವಾಗಿ ಮೇಲಿನ ಚರ್ಚೆಗೆ ಆಸ್ಪದವಾಗಿರುತ್ತದೆ ಮಿ। ಫಿಲಿಪ್ಸರ ಸ್ಥಾನವನ್ನು ಯುರೋಪ ಖಂಡಕ್ಕೆ ಸಾಗಿಸಬಹುದೆಂದು ಈ ಠರಾವಿನಲ್ಲಿ ಸೂಚನೆ ಇದೆ

* * *

ಹಿಂದೂದೇಶವು ಒಂದು ಸಾವಿರ ಫಿಲಿಪ್ಸರಿಗಿಂತ ಪ್ರಾಮುಖ್ಯವಾದುದೆಂದು ಮಿ। ಎಂತೋನಿ ಎಡೆನ್ನರ ವಾದ.

* * *

ಮೇಲಿನ ವರದಿಯಲ್ಲಿದ್ದ ಅಭಿಪ್ರಾಯಗಳನ್ನು ಮಿ। ಫಿಲಿಪ್ಸರು ಇನ್ನೂ ಇಟ್ಟುಕೊಂಡಿರುವರೆ? ಎಂಬ ಮಿ। ಎಡನ್ನರ ಪ್ರಶ್ನೆಗೆ, ಹಿಂದೂದೇಶದ ಕುರಿತು ಇನ್ನೂ ಉಗ್ರವಾಗಿರುವ ಅಭಿಪ್ರಾಯಗಳಿಂದ ವರದಿಗಳನ್ನು ನಾನು ನನ್ನ ಅಧ್ಯಕ್ಷರಿಗೆ ಒಪ್ಪಿಸಿರುವೆನು. "ಆದರೆ ಆ ವರದಿಯಲ್ಲಿರುವ ರಹಸ್ಯವಾದ ಮೇಲಿನ ವಿಷಯ ಪ್ರಕಟವಾದುದರ ಕುರಿತು ನಾನು ವಿಷಾದಿಸುತ್ತೇನೆ" ಎಂಬುದು ಮಿ। ಫಿಲಿಪ್ಸರ ಉತ್ತರವಾಗಿರುತ್ತದೆ.



ಜಿಲ್ಲಾ ಸಮಾಚಾರಗಳು

ಮಂಗಳೂರು

ನಗರ ಸಭೆ ಹೆಲ್ತ್ ಆಫೀಸರರ ಮೇಲೆ ಆರೋಪ

ತಾ. ೪ರಂದು ಮುನ್ಸಿಪಲ್ ಸಭೆ ಸೇರಿತ್ತು. ನಗರದ ಆಸುಪಾಸಿಗೂ ಅನೀತಿ ವ್ಯಾಪಾರ ಕಾನೂನನ್ನು ಅನ್ವಯಿಸಬೇಕೆನ್ನುವ ಸರಕಾರ ಅಪ್ಪಣೆ ಅಂಗೀಕೃತವಾಯಿತು. ಮಾರ್ಕೇಟುಗಳಲ್ಲಿ ಮಾರಲ್ಪಡುವ ಕಾಯಿಪಲ್ಲೆ ಮೊದಲಾದವುಗಳ ದರ ನಿಯಂತ್ರಿಸುವ ಸಮಿತಿಯವರ ವರದಿಯು ಕುರಿತು ಕಲೆಕ್ಟರರೊಡನೆ ಸಲಹೆ ಕೇಳುವುದೆಂದಾಯಿತು.

ಸ್ವರಕ್ ರಸ್ತೆಯಲ್ಲಿನ ಮಲ ವಿಸರ್ಜನೆಯು ಕಟ್ಟಡದ ಸಂಬಂಧ ೪೦ ಸಹಿಗಳಿಂದ ಬಂದ ಅರ್ಜಿಯು ಕುರಿತು ಚರ್ಚೆಯಾಯಿತು. ಈ ಸಮಯ ಸಭೆಯಲ್ಲಿ ಬಲು ಬಿಸಿಯಾದ ಚರ್ಚೆ ನಡೆಯಿತು. ಉಪಾಧ್ಯಕ್ಷ ಮಿ। ಸಿ. ಎಲ್ ಫ್ರೋಬೋ ಅವರು ಹೆಲ್ತ್ ಆಫೀಸರರ ಯಾದಸ್ತಿನ ಕುರಿತು ತಮ್ಮ ಸ್ವಂತ ಕಾರಣ ಕೊಟ್ಟು ಆಕ್ಷೇಪಿಸಿದರು. ಹೆಲ್ತ್ ಆಫೀಸರರ ಯಾದಸ್ತಿನ ಬರವಣಿಗೆಯಲ್ಲಿ ಎರಡು ಅಂಶಗಳಿದ್ದು ಎರಡೂ ಬೇರೆ ಬೇರೆಯಾಗಿರುವುದರಿಂದ ಮತ್ತು ನಡುವಿನ, ಕೆಲವು ವಾಕ್ಯಗಳನ್ನು ಹೊಡೆದು ಹಾಕಲಾಗಿರುವುದರಿಂದ ಅದು ಸಂಶಯಕರವೆಂದೂ, ಸಾರ್ವಜನಿಕ ದಾಖಲೆಗಳಲ್ಲಿ ಕೈ ಆಡಿಸಿದಂತಿರುವುದರಿಂದ 'ಕ್ರಿಮಿನಲ್' ಆಗುವುದೆಂದೂ ಟೀಕಿಸಿದರು. ಈ ಆಕ್ಷೇಪಗಳಿಗೆ ಉತ್ತರ ಕೊಡಲು ತಕ್ಕ ಅವಧಿಕೊಟ್ಟು ಸಭೆ ಮುಂದಕ್ಕೆ ಹಾಕಬೇಕೆಂಬ ಸೂಚನೆಗಳಾದವು

ಚರ್ಚೆಗೆ ಒಳಗಾದ ದಾಖಲೆಯು ಕಮಿಶನರರ ಸಮಕ್ಷದಲ್ಲಿ ಅವರ ತಿಳುವಳಿಕೆಯಿಂದಲೇ ಬರೆದುದಾಗಿ ತಿಳಿಸಿ ವಾಕ್ಯ ಹೊಡೆದ ಕಾರಣಗಳನ್ನು ಹೆಲ್ತ್ ಆಫೀಸರರು ವಿವರಿಸಿದರು ಮಿ। ಶ್ರೀಷ್ಟರು ಮಿ। ಫ್ರೋಬೋರವರ ಆಕ್ಷೇಪಕರ ಶಬ್ದ ಪ್ರಯೋಗಗಳನ್ನು ಪ್ರತಿಭಟಿಸಿ ಖಂಡಿಸಬೇಕೆಂದರು ಶ್ರೀ ಶಂಕರ ಆಳ್ವರೂ ಶ್ರೀ। ಶ್ರೀಷ್ಟರ ತರ್ಕವನ್ನು ಸಮರ್ಥಿಸಿದರು

ರಾ। ಸಾ। ಪೂಂಜರು, ಪ್ರತಿಸಲ ಜವಾಬುದಾರಿ ಅಧಿಕಾರಿಗಳನ್ನು ಆಕ್ಷೇಪ ಆರೋಪಗಳಿಗೆ ಗುರಿಮಾಡುವುದಕ್ಕಿಂತ ಒಂದೇ ಸಲ ಅವುಗಳನ್ನು ತೀರಿಸುವುದು ಒಳಿತೆಂದರು ತಪ್ಪಿತಸ್ಥರೆಂದು ರುಜುವಾದಲ್ಲಿ ಅಂತಹ ಅಧಿಕಾರಿಗಳನ್ನು ನಿವೃತ್ತ ಪಡಿಸಬಹುದೆಂದರು. ಈ ಚರ್ಚೆಯು ಇನ್ನೂ ಅಪೂರ್ಣವಾಗಿದ್ದಾಗಲೇ ಸಭೆಯನ್ನು ಮುಕ್ತಾಯಗೊಳಿಸಲಾಯಿತು

ಆಹಾರ ಪರಿಸ್ಥಿತಿ

ಕೆಲವು ದಿನಗಳ ಹಿಂದೆ ಜಿಲ್ಲಾ ಫುಡ್ ಕೌನ್ಸಿಲಿನ ಸಭೆ ಮಾನ್ಯ ಕಲೆಕ್ಟರ್ ಅವರ ಅಧ್ಯಕ್ಷತೆಯಲ್ಲಿ ಸೇರಿತು

ಅಧ್ಯಕ್ಷ ಕಲೆಕ್ಟರರು ಅಕ್ಕಿ ಸಂಗ್ರಹದ ಪ್ರಯತ್ನಗಳು ಯೋಚಿಸಿದಷ್ಟು ತೃಪ್ತಿಕರವಾಗಿಲ್ಲವೆಂದು ತಿಳಿಸಿ, ಭೂಮಾಲಿಕರು ಮತ್ತು ಜಮೀನ್ದಾರರು ಹೆಚ್ಚಿನ ಪರಿಮಾಣದಲ್ಲಿ ಅಕ್ಕಿಯನ್ನು ಬಿಟ್ಟುಕೊಡುವಂತೆ ಅವರ ಸಂಪರ್ಕ ವಿನಂತಿಸಿಕೊಳ್ಳಬೇಕೆಂದರು. ಚೆಂಗಲ್ಪಟ್ಟ ಜಿಲ್ಲೆಯಿಂದ ೨ ಸಾವಿರ ಟನ್ ರಾಗಿ ತರಿಸುವ ಯತ್ನಗಳು ನಡೆಯುವುವು. ಅಲ್ಲದೆ, ಗೋಧಿ ಮತ್ತಿತರ ಧಾನ್ಯ ಪದಾರ್ಥಗಳನ್ನೂ ತರಿಸುವ ಏರ್ಪಾಡು ಮಾಡಲಿರುವರೆಂದೂ ತಿಳಿಸಿದರು. ಕಾಸರಗೋಡು ಮತ್ತಿತರ ಪ್ರದೇಶಗಳಿಂದ ಹೊಸ ಬೆಳೆಯ ಉತ್ಪತ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಮಾಡಿದ ಸುಭದ್ರ ಏರ್ಪಾಡನ್ನು ಕೌನ್ಸಿಲು ಕೆಲವು ಸೂಚನೆ, ತಿದ್ದುಪಾಟು, ಸೂಚನೆಗಳಿಂದ ಪರ್ಯಾಲೋಚಿಸಲಾಯಿತು.

ಅಕ್ಕಿ ಆಮದು

ದಶಂಬರ ತಿಂಗಳವರೆಗೆ ಆಹಾರ ಪರಿಸ್ಥಿತಿಯು ಸ್ವಲ್ಪ ವಿಷಮವಾಗಿ ಉಳಿಯುವ ಸಂಭವಗಳು ತೋರುವುದರಿಂದ ಅದನ್ನು ಪರಿಹರಿಸಲು ೩೭೮೦ ಟನ್ ಅಕ್ಕಿಯನ್ನು ತ್ವರೆಯಾಗಿ ತರಿಸಬೇಕೆಂದೂ, ಕಾಸರಗೋಡು ಮತ್ತಿತರ ರೇಶನ ಪ್ರದೇಶಗಳಿಗೆ ಬೇಕಾಗುವ ಅಕ್ಕಿಯನ್ನು ಕಳುಹಲೇರ್ಪಡಿಸಬೇಕೆಂಬ ಠರಾವುಗಳಾದವು

ರಿಕ್ವಿಜೀಶನ್ ಅಕ್ಕಿಗೆ ೨ರೂ ಕಮ್ಮಿ

ಹೊಸ ಬೆಳೆಯಾದ ಮೇಲೆ ಸರಕಾರಕ್ಕೆ ಒಪ್ಪಿಸದ ಅಕ್ಕಿಯನ್ನು ವಶಪಡಿಸಿಕೊಳ್ಳಬೇಕಾಗುವುದು, ಮತ್ತು ಆ ಅಕ್ಕಿಗೆ ರೂ ೨ ಕಡಿಮೆಮಾಡಿ ದರವನ್ನು ಕೊಡಬೇಕೆಂದು ಗೊತ್ತಾಯಿತು.

ಕೊಡಗಿನ ತೋಟಗಳಿಂದ ನಮ್ಮ ಜಿಲ್ಲೆಗೆ ಬರುವ ಕೂಲಿಗಳಿಗೆ ಪ್ರಯಾಣವೇಳೆಗೆ ಖರ್ಚಿಗೆಬೇಕಾದ ಅಕ್ಕಿಯನ್ನು ಅಲ್ಲಿನ ಸರಕಾರವು ಪೂರೈಸಬೇಕೆಂದು ಅರಿಕೆಮಾಡಿಕೊಳ್ಳಬೇಕೆಂದು ನಿರ್ಧರಿಸಲಾಗಿದೆ

ಜಾನುವಾರ ಪ್ರಶ್ನೆ

ಜಿಲ್ಲೆಯಲ್ಲಿ ಹಾಲುಕೊಡುವ ಜಾನುವಾರುಗಳು ಕಡಿಮೆಯಾಗುತ್ತಿರುವುದರಿಂದ ಮುಂದಿನ ಸೀತಾನದಿ, ಕುಳುಕುಂದ ಜಾತ್ರೆಗಳಿಗೆ ಜಾನುವಾರುಗಳನ್ನು ಕಳುಹಿಸಲು ಮೈಸೂರು ಸರಕಾರವನ್ನು ವಿನಂತಿಸುವ ಠರಾವು ಫುಡ್ ಕೌನ್ಸಿಲಿನಲ್ಲಿ ಮಾಡಲಾಯಿತು

ಜನ್ಮ ದಿನ

'ಬಿಲ್ಲವರ ಎಸೋಸಿಯೇಶನ್ ಮುಂಬಯಿ, ಈ ಸಂಘದ ನೇತೃತ್ವದಲ್ಲಿ ಬ್ರಹ್ಮಶ್ರೀ ನಾರಾಯಣ ಪರಮ ಹಂಸರವರ ೮೯ನೇ ಜನ್ಮ ದಿನೋತ್ಸವವು ತಾ ೧೦ರಂದು ಆಚರಿಸಲಾಗುವುದು ಸ್ವಜಾತಿ ಬಾಂಧವರಾದ ಶ್ರೀ। ಎ ಪಿ ಕಿರೋಡಿಯನ್ ಅವರು ಅಧ್ಯಕ್ಷತೆವಹಿಸುವರು' ಕಾರ್ಯದರ್ಶಿ

ಮೊಕದ್ದಮೆಗಳು

ನಿಯಂತ್ರಣಕ್ಕೆ ಒಳಪಟ್ಟ ಕಬ್ಬಿಣದ ಸಾಮಾನುಗಳನ್ನು ಜಿಲ್ಲೆಯಿಂದ ಹೊರಕ್ಕೆ ಸಾಗಿಸಲು ಪ್ರಯತ್ನ ಪಟ್ಟ ಕೆಲವರ ಮೇಲೆ ಆರೋಪ ಹೂಡಲಾಗಿದೆ ಇದರಲ್ಲಿ ನಗರದ ಕೆಲವು ಪ್ರಮುಖ ವ್ಯಾಪಾರಿಗಳು ಸೇರಿರುವರೆಂದು ಊಹಿಸಲಾಗಿದೆ

ದುರ್ಮರಣ

ಕಂಕನಾಡಿಯ ಬೈರ್ದಕಳದಲ್ಲಿ ಒಂದು ಮನೆಯ ಬಾವಿಯಲ್ಲಿ ಮಜೂರ ವರ್ಗದ ಹುಡುಗನ ಶವಸಿಕ್ಕಿದ್ದು ಪರೀಕ್ಷೆಗೆಗಾಗಿ ವೆನ್‌ಲೊಕ್ ಆಸ್ಪತ್ರೆಗೆ ಬಂದಿತ್ತು

ಆರೋಗ್ಯ

ಈಚೆಗೆ ನಗರದಲ್ಲಿ ಪ್ಲೇಗ್ ರೋಗದ ಸುದ್ದಿ ಕೇಳಿಬರುತಿಲ್ಲ ಅದರ ಸಂಬಂಧ ಮರಣದ ವರದಿಗಳು ಬಂದಿರುವುದಿಲ್ಲ

ಮಳೆ ಕಡಿಮೆಯಾದುದರಿಂದ ರಸ್ತೆಗಳು ಒಣಗಿ ಪುನಃ ಧೂಳು ಹಾರಾಟಕ್ಕೆ ಪ್ರಾರಂಭವಾಗಿದೆ ' ದಯಾಳು ಸರಕಾರದವರೂ, ಮುನ್ಸಿಪಾಲಿಟಿಯವರೂ ಹೇಗಾದರೂ ಒಂದು ನೀರು ಹಾಕುವ ಏರ್ಪಾಡು ಮಾಡುವುದರಿಂದ ನಾಗರೀಕ ಸೌಕರ್ಯಕ್ಕೆ ತುಂಬಾ ಅನುಕೂಲವಾಗುವುದೆಂದು ಹಾರೈಸಲಾಗಿದೆ. ಇದರಿಂದ ಅನಿಷ್ಟ ಜಾಡ್ಯಗಳ ಪ್ರಸಾರವೂ ಕಡಿಮೆಯಾಗುವುದು.

ವಾಹನಗಳ ಬಾಡಿಗೆ

ಸದ್ಯದಲ್ಲಿ ಜಟ್ಕಾ, ಕಾರುಗಳ ಬಾಡಿಗೆಯನ್ನು ನಿಯಂತ್ರಿಸುವರಾಗಿ ತಿಳಿದುಬರುತ್ತದೆ. ಯುದ್ಧಕ್ಕೆ ಮುಂಚಿನ ದರಕ್ಕಿಂತ ಶೇಕಡ ೫೦ರಷ್ಟು ಮಾತ್ರ ಹೆಚ್ಚಿಗೆ ಮಾಡುವರಂತೆ.

ಬಾ ನಿಧಿಗೆ

ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್, ಇವರ ಕಡೆಯಿಂದ ೧೧೫೧ ರೂ ಮಿ। ಎಸ್. ಪಿ. ಎಸ್. ಅಲ್ಬುಕರ್ಕ್ ಅವರು ೨೫೦ ರೂ. ಎಫ್. ಎಕ್ಸ್. ಡಿ ಪಿಂಟೋ ಇವರ ೨೫೦ ರೂ. (ಮೊದಲ ಕಂತು) ಕಸ್ತೂರ್‌ಬಾ ನಿಧಿಗೆ ಕೊಡಲಾಗಿದೆಯೆಂದು ತಿಳಿದು ಬರುತ್ತದೆ

ಹೊಸ ಹುದ್ದೆಗಳು

ನಮ್ಮ ಜಿಲ್ಲಾ ಕಲೆಕ್ಟರರ ಪರ್ಸನಲ್ ಅಸಿಸ್ಟಾಂಟರಾಗಿದ್ದ ಶ್ರೀ। ದತ್ತಾತ್ರೇಯ ರಾವ್ ಅವರು ಮುಂಬಾಯಿಯ ಕಂಟ್ರೋಲರ್ ಆಫ್ ಕಂಟ್ರಿಕ್ರೇಫ್ಟ್ (ಕರಾವಳಿಯ ದೇಶಿ ಜಲವಾಹನಗಳನ್ನು ನಿಯಂತ್ರಿಸುವ ಖಾತೆ) ಸ್ಥಾನಕ್ಕೆ ನೇಮಕನಾಗಿರುವರು. ಇಲ್ಲಿಯ ಅವರ ಸ್ಥಾನಕ್ಕೆ ಡಿ। ಆಫೀಸರ್‌ರಾಗಿದ್ದ ಶ್ರೀ। ಪಿ ವಿ ಮಾಧವ ರಾಯರು ನೇಮಿಸಲ್ಪಟ್ಟಿರುವರು ಶ್ರೀ। ರಂಗನಾಥರಾವ್ ಎಂಬವರು ಇವರ ಸ್ಥಾನಕ್ಕೆ ಬರುವರು ತಹಶಿಲ್ದಾರರಾಗಿದ್ದ ಶ್ರೀ। ಸೊಲೊಮೋನ್ ಜೋಶ್ವಾ ಅವರು ಲೆಂಡ್ ರಿಕ್ವಿಜಿಶನ್ (ಮಿಲಿಟರಿ ರಾಣ್ಯ ಪ್ರದೇಶಗಳನ್ನು ಸ್ವಾಧೀನಮಾಡಿಕೊಳ್ಳುವ ಹುದ್ದೆ) ಆಫೀಸರರಾಗಿರುವರು

ಜಿಲ್ಲಾ ಬೋರ್ಡು ಸಭೆ

ಇದೇ ತಾ ೧೮ನೇ ಸೋಮವಾರ ಜಿಲ್ಲಾ ಬೋರ್ಡಿನ ವಿಶೇಷ ಸಭೆ ಜರಗುವುದು ಮೂಡುಬಿದ್ರೆಯ ಬೋ। ಹ್ಶಾ। ಎ। ಶಾಲೆಯ ಕುರಿತು ಕೆಲವು ನಿರ್ಣಯಗಳನ್ನು ಮಾಡಲಿರುವರೆಂದು ತಿಳಿದುಬರುತದೆ

ಮಹಿಳಾ ಪರಿಷತ್ತು

ಇದೇ ಬರುವ ತಾ। ೨೪ಕ್ಕೆ ಆರನೆಯ ಜಿಲ್ಲಾ ಮಹಿಳೆಯರ ಪರಿಷತ್ತು ಕೇರಳದ ಎಂ. ಎಲ್. ಎ. ಅವರಾದ ಶ್ರೀಮತಿ ಕುಟ್ಟಿಮಾಳು ಅಮ್ಮಾ ಇವರ ಅಧ್ಯಕ್ಷತೆಯಲ್ಲಿ ಸೇರುವುದು. ಜರಗುವ ಸ್ಥಳ ಭುವನೇಂದ್ರ ಹಾಲ್, ಕೆನರಾ ಹ್ಯಾಸ್ಕೂಲು. ಶ್ರೀ। ಕೆ. ಪಾರ್ವತಿಬಾಯಿಯವರು ಉದ್ಘಾಟನೆ ಮಾಡುವರು.

ಕಟ್ಟಿಗೆ ಕೊರತೆ

ಕಟ್ಟಿಗೆ ನಿಯಂತ್ರಣ ಆಜ್ಞೆಯಲ್ಲಿ ಒಡೆದ ಮತ್ತು ಒಡೆಯದ ಸೌದೆಗಳಿಗೆ ಹೆಚ್ಚು ಕಡಿಮೆ ದರಗಳಿದ್ದುವು ದಿನಕ್ಕೆ ಒಂದೆರಡು ಮಣ ಒಯ್ಯಬೇಕಾಗುವುದರಿಂದ ಪ್ರತಿದಿನ ಸಾಗಿಸುವ ಮಜೂರಿ ಬೀಳುತ್ತದೆ ಒಡೆದ ಕಟ್ಟಿಗೆ ಬದಲಿಗೆ ಒಡೆಯದ ದೊಡ್ಡ ತುಂಡುಗಳೇ ಅನೇಕರಿಗೆ ಸಿಗುವುದು. ಇದನ್ನು ಒಡೆಸಲು ಪ್ರತ್ಯೇಕ ಖರ್ಚು ಇದೆ ಈ ಪ್ರಕಾರ ಹೆಚ್ಚು ಖರ್ಚನ್ನು ಒಂದಿಗೆ ಲೆಕ್ಕ ಹಾಕುವಾಗ ನಿಯಂತ್ರಣ ದರಕ್ಕಿಂತ ಎಷ್ಟೋ ಮಿಗುವುದು. ಇದರಿಂದ ಸಾಮಾನ್ಯ ಜನತೆಗೆ ಬಹಳ ತೊಂದರೆಯಾಗುವುದೆಂದು ಒಂದು ಬಾತ್ಮಿ ಅಧಿಕಾರಿಗಳ ಗಮನ ಅಪೇಕ್ಷಿಸಲಾಗಿದೆ

ಕೋಳಿ ಮೊಟ್ಟೆ

ಕೋಳಿ ಮೊಟ್ಟೆಗಳನ್ನು ಯೋಗ್ಯ ಪರ್ಮಿಟ್ ಇಲ್ಲದೆ ಜಿಲ್ಲೆಯಿಂದ ಹೊರ ಸಾಗಿಸಬಾರದೆಂದೂ, ಪ್ರಯಾಣಿಕರ ಒಂದು ಕೋಳಿ ೫ ಮೊಟ್ಟೆಗಳನ್ನು ಮಾತ್ರ ಸಂಗಡ ಒಯ್ಯಬಹುದೆಂದೂ ಒಂದು ಪ್ರಕಟನೆ ತಿಳಿಸುತ್ತದೆ

ಸತ್ಕಾರ ಕೂಟ

ಸ್ಥಳೀಯ ಚಿತ್ರಾಪುರ ಸಾರಸ್ವತ ಯುವಕ ಸಂಘದವರು ಶ್ರೀ। ದತ್ತಾತ್ರೇಯ ರಾವ್ ಅವರನ್ನು ಹೊಸ ಹುದ್ದೆಯ ನೇಮಕ ಸಂಬಂಧದಲ್ಲಿ ಒಂದು ಸತ್ಕಾರ ಕೂಟವೇರ್ಪಡಿಸಿ ಸನ್ಮಾನಿಸಿ, ಯಶಸ್ಸನ್ನು ಕೋರಿದರು

ನಿಮ್ಮ ಸುಖ ಆರೋಗ್ಯ ನೀವು ಉಲ್ಲಾಸಯುತರಾಗಿ ಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿ ತಿರುಗಿಸಂಪಾದಿಸಬಹುದು, ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು, ಹಾಗಾಗ ಬೇಕಾದರೆ ಪ್ರತಿದಿನರಾತ್ರೆ ತಪ್ಪದೆ ಎರಡು ಬೈಲ್‌ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು, ಕೊಬ್ಬು ಬೆಳೆಯುವುದಿಲ್ಲ ಹೀಗೆ ಇದು ನಿಮ್ಮನ್ನು

ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು.

BILE BEANS

ಬೈಲ್ ಬೀನ್ಸು ನಿಮ್ಮನ್ನು ಧೃಢ ಆರೋಗ್ಯವಂತರಾಗಿ ಮಾಡುವುದು.

★ ಪತ್ತೆಯಾದ ಪತ್ತೆದಾರಿ ★

ನಿರ್ದೋಷಿಗೆ ಫಾಸಿಶಿಕ್ಷೆ

ಕೊಲೆಗಡಿಕನು ನಿರ್ದೋಷಿ

[illegible] ಚಾತ್ರೆಯುಗವು ಎನ್ನು ದಾಸ್ಯಾವಸ್ಥೆ [illegible] ಯುರೋಪಿನ [illegible] ಜೀವನ ಕ್ರಮದ [illegible] ದಾಗಿಸುತ್ತಿದ್ದ ಬದಲಾವಣೆಯ ಕಾಲ. ಇಂಗ್ಲೆಂಡಿನಲ್ಲಿ ನ್ಯಾಯನೀತಿಗಳು [illegible] ಹೊಂದುವಂತೆ ಸುಸಂ[illegible] ನಾಗರಿಕರು ನ್ಯಾಯಸ್ಥಾನದಲ್ಲಿ ಅನ್ಯಾಯಗಳೆದುರು ಹೋರಾಡುವ ಗಂಭೀರ ವಾತಾವರಣದ ಕಾಲವದು. ಸ್ಕೊಟ್ಲೆಂಡ್‌ಯಾರ್ಡ್ ಎಂಬ ಪತ್ತೆದಾರಿ ಕೇಂದ್ರವು ಇನ್ನೂ ಹುಟ್ಟಿತ್ತೊ ಇಲ್ಲವೊ ಎಂಬ ಸಂದೇಹಾಸ್ಪದ ಸಮಯವದು. ಆ ಕಾಲದಲ್ಲಿ ನಮ್ಮ ಈ ಕತೆಯ ಘಟನೆ ನಡೆಯಿತು.

ಲಂಡನ್ ಆಕ್ಸ್‌ಫರ್ಡ್ ಮಾರ್ಗವು ಈಗಿರುವಂತೆ ಆಗ ಜನನಿಬಿಡವಾಗಿರಲಿಲ್ಲ. ದೂರ ದೂರದ ಪ್ರಯಾಣಿಕರಿಗೆ ಮಾರ್ಗದ ಬದಿಯಲ್ಲಿ ಅಲ್ಲೊಂದು ಇಲ್ಲೊಂದು ಎಂಬಂತೆ ಇರುವ ಭೋಜನ ಗೃಹಗಳೇ ರಾತ್ರಿ ಹೊತ್ತಿನಲ್ಲಿ ಭದ್ರವಾದ ತಾಣಗಳು. ಹಣದ ಗಂಟು ಹಿಡಿದು ನಿವಸದ ಬೆಳಕಿನಲ್ಲಿ ತಿರುಗಾಡುವುದೇ ಕಷ್ಟಸಾಧ್ಯವೆನಿಸಿದ ಕಾಲವದು.

ಬ್ರೇಡ್‌ಫೋರ್ಡನ ಹೊಟೇಲು ಇದೇ ಮಾರ್ಗದಲ್ಲಿತ್ತು. ಅನೇಕ ವರ್ಷಗಳಿಂದ ಬ್ರೇಡ್‌ಫೋರ್ಡನು ಅದನ್ನು ನಡೆಸಿಕೊಂಡು ಬಂದುದರಿಂದ ಅದು ಜನಪ್ರಿಯವಾಗಿಯೇ ಇತ್ತೆನ್ನಬಹುದು. ಹಿಂದೆ ಎಂದೂ ಅಲ್ಲಿ ಭಯಾನಕ ಘಟನೆಗಳು ನಡೆದಿರಲಿಲ್ಲ.

ತುಸು ಶ್ರೀಮಂತ ವ್ಯಾಪಾರಿಯಾದ ವಿಲ್ಲಿಯಂ ಹೇಸ್ ಎಂಬ ವರ್ತಕನು ಲಂಡನಿಗೆ ಹೋಗಲಿದ್ದನು. ಹೊತ್ತಿಗಿಂತ ಮೊದಲೇ ಕತ್ತಲಾದುದರಿಂದ ಬ್ರೇಡ್‌ಫೋರ್ಡನ ವಿಶ್ರಾಂತಿ ಗೃಹವನ್ನು ಹೊಕ್ಕನು. ರಾತ್ರಿ ವಿರಾಮಕ್ಕೆ ಮಹಡೀಯ ಮೇಲೆ ಪ್ರತ್ಯೇಕ ಕೋಣೆಯೊಂದನ್ನು ಗೊತ್ತು ಮಾಡಿ ಹೇಸ್ ಮಹಾಶಯನು ಸಂತೃಪ್ತಿಗೊಂಡವನಂತೆ ಬಹು ಸಲಿಗೆಯಿಂದ ಅಲ್ಲಿನ ಜನರೊಡನೆ ಬೆರೆತು ಹರಟೆ ಮಾತುಕತೆಗಳಿಂದ ಹೇಗೂ ಸಮಯ ದೂಡುತಿದ್ದನು. ಬಹು ಸಮಯದಿಂದ ಗಾಬರಿಗೊಳಿಸುವ ಘಟನೆಗಳು ಆ ವಠಾರದಲ್ಲಿ ನಡೆಯದಿದ್ದುದರಿಂದ ಮತ್ತು ಹೊರಗಡೆ ತಕ್ಕಮಟ್ಟಿನ ಪೋಲೀಸ್ ಬಂದೋಬಸ್ತು ವಾರಿಯು ಬಿಗಿಯಾಗಿದ್ದುದರಿಂದ ವರ್ತಕ ಹೇಸನಿಗೆ ತನ್ನಲ್ಲಿದ್ದ ಚಿಕ್ಕ ಹಣದ ಗಂಟೆಯ ವಿಷಯ ಹೆಚ್ಚು ಜಾಗರೂಕತೆಯ ಅವಶ್ಯಕತೆ ತೋರಲಿಲ್ಲ. ಅಲ್ಲಿ ಬಂದು ವಸತಿಮಾಡಿದ ಅನೇಕರೊಡನೆ ಹೇಸನು ತಾತ್ಕಾಲಿಕ ಪರಿಚಯ ಮಾಡಿಕೊಂಡನು.

ಆ ಹೊಟೇಲಿನಲ್ಲಿ ಅಂದೇ ಬೇರೆ ಇಬ್ಬರು ಯಾರ್ಕ್‌ಶೈರಿನಿಂದ ಬಂದ ಪ್ರಯಾಣಿಕರಿದ್ದರು. ಹೇಸನಿಗೆ ಇವರ ಕೂಟವು ಬಹು ತೃಪ್ತಿಕರವಾಗಿ ಕಂಡಿರಬಹುದು. ಅವನು ಅವರನ್ನು ತನ್ನ ಅತಿಥಿಗಳಾಗಿ ಸಹಭೋಜನ ಮಾಡುವಂತೆ ಆಹ್ವಾನಿಸಿದನು. ಕೆಳಗಿನ ಭೋಜನ ಮಂದಿರದಲ್ಲಿ ರಾತ್ರಿ ಊಟದ ಸಿದ್ಧತೆಯಾದಾಗ ಹೇಸನು ತನ್ನಿರ್ವ ಅತಿಥಿ ಮಿತ್ರರೊಡನೆ ಅತ್ಯಂತ ವಿನೋದದಿಂದ ಬಂದು ಭೋಜನವನ್ನು ಅಲಂಕರಿಸಿದನು. ಭೋಜನಾನಂದದ ಊಟ ಸಾಗಿತು.

ಮಧ್ಯ ರಾತ್ರಿಯ ಹೊತ್ತಿಗೆ ಹೇಸನೂ ಮತ್ತವನ ಇರ್ವ ಸ್ನೇಹಿತರು ಮಾತ್ರ ಉಳಿದಿದ್ದರು. ಇತರರೆಲ್ಲರೂ ತಮ್ಮ ತಮ್ಮ ವಾಸಿಗೆಯಲ್ಲಿದ್ದರು. ಮಾಲಿಕನಾದ ಬ್ರೇಡ್‌ಫೋರ್ಡನು ಪಕ್ಕದ ಒಂದು ಕೋಣೆಯಲ್ಲಿ ಲೆಕ್ಕಪತ್ರ ಬರೆಯುತಿದ್ದನು. ಗಿರಾಕಿಗಳ ವರ್ತನೆಯಲ್ಲಿ ಅವನು ಯಾವ ಶ್ರದ್ಧೆವಹಿಸುತ್ತಿರಲಿಲ್ಲ. ಆದುದರಿಂದ ಗಿರಾಕಿಗಳೊಡನೆ ಅವನಿಗೆ ಎಂದೂ ಜಗಳವಿರಲಿಲ್ಲ. ಅದೇ ಪ್ರಕಾರ ಸ್ವಲ್ಪ ಕಠಿಣ ಅಮಲಿನ ರುಚಿನೋಡಿದ ಹೇಸನು ತನ್ನ ಸಂಗಾತಿಗಳೊಡನೆ ಸಿಕ್ಕಾಬಟ್ಟೆ ಹರಡುವಾಗಲೂ ಅವನು ಹೆಚ್ಚು ಗಮನಗೊಡಲಿಲ್ಲ. ಬಟ್ಲರನಾದ ಜೇಮ್ಸನಿಗಂತೂ ಮಧ್ಯರಾತ್ರಿಯವರೇಗೆ ದಿನ ನಿತ್ಯ ಕೆಲಸವಿದ್ದೆ ಇದೆ. ಹತ್ತಿರದ ಅಡಿಗೆ ಮನೆಯಲ್ಲಿ ಒಂದು ಕಡೆ ಅವನು ಸಾಮಾನುಗಳನ್ನು ಸರಿಪಡಿಸುತಿದ್ದನು. ಪಾತ್ರೆ ತೊಳೆಯುವವಳೊಬ್ಬಳು, ಮೇಜು ಒರಸುವ ಹುಡುಗ ಇವರು ಒಂದೊಂದು ಬೆಂಚಿನಲ್ಲೊ, ಮಾಳಿಗೆ ಮೆಟ್ಟಲು ಅಡಿಯಲ್ಲೊ ಗೊರಕೆ ಹೊಡೆಯುತಿದ್ದರು. ಹೊರಗೆ ಮುದಿ ನಾಯೊಂದು ಆಗಿಂದಾಗೆ ಹುಚ್ಚು ಬೊಗಳಿಕೆ ಹಾಕುತಿತ್ತು.

ಕುಡಿದು ಮತ್ತನಾದ ಮೇಲೆ ಹೇಸನು ಸ್ವಲ್ಪ ಮತಿತಪ್ಪಿ ಮಾತನಾಡತೊಡಗಿದನು. ಸಭ್ಯರಂತೆ ತೋರುವ ಅವನ ಸಂಗಾತಿಗಳು ಅವನ ವರ್ತನೆ ಮಾತುಗಳಿಗೆ ಆಗಿಂದಾಗ್ಗೆ ವಿನೋದಪಟ್ಟುಕೊಳ್ಳುತಿದ್ದರು. ಪಕ್ಕನೆ ಹೇಸನು ತನ ಹಣದ ಗಂಟಿನ ವಿಚಾರ ಹೇಳಿಯೇ ಬಿಟ್ಟನು. ಮರುಕ್ಷಣವೇ ಕುಡಿದಿದ್ದ ಅವನಿಗೂ ಒಂದು ಕ್ಷಣಕ್ಕೆ ಸ್ಮೃತಿಬಂದ ಹಾಗಾಯಿತು. ಸುತ್ತಲೂ ಒಂದು ಸಲ ನೋಡಿದನು. ಯಾರೂ ಗಮನಿಸಿದಂತೆ ಕಾಣಲಿಲ್ಲ. ಬ್ರೇಡ್‌ಫೋರ್ಡನೂ, ಬಟ್ಲರನೂ ಅವರವರ ಕೆಲಸದಲ್ಲಿ ಮಗ್ನರಾಗಿದ್ದರು. ಕಡೆಗೆ ಹೆಚ್ಚಿನ ಗಲಾಟೆಯಿಲ್ಲದೆ ಹೇಸನು ತನ್ನ ಕೋಣೆಯೊಳಗೆ ಹೋದನು. ಅವನ ಮಿತ್ರರಿಬ್ಬರೂ ತಮ್ಮ ಕೋಣೆಗೆ ಹೋದರು.

ಸುಮಾರು ಎರಡು ಗಂಟೆಯ ಸಮಯ ಹೊರಗೆ ನರಿನಾಯಿಗಳ ಬೊಬ್ಬೆಯಲ್ಲದೆ ಬೇರೆಲ್ಲಾ ನಿಶಬ್ದವಾಗಿತ್ತು. ಹೇಸನ ಕೋಣೆಗೆ ತಗಲಿಕೊಂಡಿರುವ ಕೋಣೆಯಲ್ಲಿ ಎರಡು ಬೇರೆ ಬೇರೆ ಮಂಚಗಳಲ್ಲಿ ಮಲಗಿದ್ದ ಯೋರ್ಕ್‌ಶಾಯರಿನ ಆ ಈರ್ವರೂ ಒಂದು ವಿಚಿತ್ರ ಶಬ್ದಕ್ಕೆ ಎಚ್ಚೆತ್ತು ಕೂತರು. ಮರಣಾವಸ್ಥೆಯಲ್ಲಿರುವ ಮನುಷ್ಯನ ಕೂಗೊಂದು ಅವರಿಗೆ ಕೇಳಿಸಿತು. ಅದು ತಮ್ಮ ಪಕ್ಕದ ಹೇಸನ ಕೋಣೆಯಿಂದಲೇ ಬರುತ್ತಿರುವುದಾಗಿ ಸ್ಪಷ್ಟ ತಿಳಿಯಿತು. ಕೂಡಲೇ ಅವರು ಬಾಗಿಲು ತೆರೆದು ಹೊರಗೆ ಬಂದರು. ಅವರು ಕೇಳಿದ ಗೋಳಲು ಶಬ್ದವು ಕಡಿಮೆಯಾಗುತ್ತಾ ಬಂದು ಒಂದೇಸವನೇ ನಿಂತು ಹೋಯಿತು.

ಹೇಸನ ಕೋಣೆಯ ಒಂದು ಬಾಗಿಲು ಮುಚ್ಚಿತ್ತು. ಸ್ವಲ್ಪ ಮುಂದಕ್ಕೆ ತಿರುಗುವಲ್ಲಿ ಇನ್ನೊಂದು ಬಾಗಿಲು ಮಾತ್ರ ಸ್ವಲ್ಪ ತೆರೆದಿತ್ತು. ಅದರಿಂದ ಬೆಳಕಿನ ಕಿರಣಗಳು ಸ್ಪಷ್ಟವಾಗಿ ಹೊರಕಾಣುತ್ತಿದ್ದುವು. ಮೆಲ್ಲಗೆ ಯೋರ್ಕ್‌ಶಾಯರಿನವರು ಬಾಗಿಲು ತೆರೆದು ಒಳಗೆ ಹೋದರು. ಅಲ್ಲೇನು ನೋಡುವುದು ಭಯಂಕರ ದೃಶ್ಯವೊಂದು ಅವರ ರಕ್ತವನ್ನು ಹೆಪ್ಪುಗಟ್ಟಿಸಿತು. ಅವರು ಸ್ತಂಭೀಭೂತರಾದರು. ಹೇಸನ ಹಾಸಿಗೆಯು ರಕ್ತಮಯವಾಗಿತ್ತು. ನೆಲದಲ್ಲಿ ರಕ್ತಬಿದ್ದಿತ್ತು. ಕೈಯಲ್ಲಿ ಹರಿತವಾದ ಸಪೂರ ತುದಿಯ ಚೂರಿಯೊಂಡನ್ನು ಹಿಡಿದು ದೊಡ್ಡ ವ್ಯಕ್ತಿಯೊಂದು ಹಾಸಿಗೆಯ ಬಳಿ ನಿಂತಿದ್ದು ಇವರು ಕೋಣೆಗೆ ಹೊಕ್ಕೊಡನೆ ತಿರುಗಿ ನೋಡಿತು. ಏನು ನೋಡುವುದು, ಆ ವ್ಯಕ್ತಿ ಬೇರೆಯಾರಾಗಿರದೆ ಹೊಟೇಲ್ ಮಾಲಕನಾದ ಬ್ರೇಡ್‌ಫೋರ್ಡನೇ ಆಗಿದ್ದನು. ಅವನ ಒಂದು ಕೈಯಲ್ಲಿ ಕಂದೀಲವೂ ಇತ್ತು. ವಿಳಂಬಮಾಡದೇ ಯೋರ್ಕ್‌ಶಾಯರಿನ ಪ್ರಯಾಣಿಕರು ಅವನ ಮೇಲೆ ಹಾರಿ ಇಬ್ಬರೂ ಅವನ ಎರಡು ಕೈಗಳನ್ನು ತಿರುಗಿಸಿ ನೆಲದಲ್ಲಿ ಮಲಗಿಸಿಬಿಟ್ಟರು. ಇಷ್ಟು ಮಾಡುವಾಗ ಬ್ರೇಡ್‌ಫೋರ್ಡನು ಬೊಬ್ಬೆ ಹೊಡೆದನು. "ಅಯ್ಯೋ, ನಾನು ನಿರಪರಾಧಿ ನಾನು ಕೊಲೆಮಾಡಿದವನಲ್ಲ, ನನ್ನನ್ನು ಬಿಡಿ" ಎಂದು ಕಿರಚಿದನು. ಆಸುಪಾಸಿನ ಕೆಲವರು ಸೇರಿದರು.

ಅಲ್ಲಿದ್ದವರೆಲ್ಲರೂ ಪ್ರಾಮಾಣಿಕನೆಂತಿದ್ದ ಬ್ರೇಡ್‌ಫೋರ್ಡನನ್ನು ನೋಡಿ ಕೌತುಕಗೊಂಡರು. ಅವನು ತಾನು ನಿರಪರಾಧಿಯೆಂದೇ ಎಲ್ಲರಿಗೂ ಹೇಳಿದನು. ಆದರೆ ಯಾರವನನ್ನು ನಂಬುವವರು. ಅವನ ಕೈಗೆ ರಕ್ತವಿತ್ತು. ಅವನ ಚೂರಿಯು ರಕ್ತದಲ್ಲಿ ಮುಳುಗಿತ್ತು. ಇದರ ಮೇಲೂ ನಿರಪರಾಧಿಯೇ.

ಮರುದಿನ ಪೋಲೀಸರು ಬ್ರೇಡ್‌ಫೋರ್ಡನನ್ನು ಬಂಧಿಸಿದರು. ಕೊಲೆಯ ಆರೋಪದ ಮೇಲೆ ಅವನನ್ನು ಕ್ರಿಮಿನಲ್ ಕೋರ್ಟು ವ್ಯವಹರಣೆಗೆ ಗುರಿಮಾಡಿದರು.

ಕೋರ್ಟನಲ್ಲಿ ಬ್ರೇಡ್‌ಫೋರ್ಡನು ಹೇಳಿಕೆಕೊಟ್ಟನು:—"ಹೇಸ್ ಮಹಾಶಯನು ತನ್ನಲ್ಲಿ ಹಣದ ಗಂಟಿರುವುದಾಗಿ ಎಲ್ಲರಿಗೂ ಕೇಳಿಸಿರುವಂತೆ ಹೇಳಿದಾಗ ನಾನೂ ಕೇಳಿದೆ. ಆಗ ನನ್ನ ಬಟ್ಲರನಾಗಿದ್ದ ಜೇಮ್ಸನೂ ಎಚ್ಚರವಾಗಿದ್ದು ಅಡಿಗೆ ಮನೆಯಲ್ಲಿ ಏನೋ ಕೆಲಸಮಾಡುತಿದ್ದನು. ಸಹಜವಾಗಿ ಹಣದ ಆಶೆಯಾಗಿ ನಾನು ಹೇಸನ ಹಣವನ್ನು ಅಪಹರಿಸಲು ನಿರ್ಧರಿಸಿ, ಕಂದೀಲನ್ನೂ ಚೂರಿಯನ್ನೂ ಹಿಡಿದು ಹೊರಟೆ. ಅಷ್ಟರಲ್ಲಿ ನೀರಿನ ಪಾತ್ರೆ ಹಿಡಿದು ಜೇಮ್ಸನು ಧಾವಿಸಿ ಕೆಳಗೆ ಬರುವುದನ್ನು ನೋಡಿದೆ. ಜೇಮ್ಸನು ನೆಟ್ಟಗೆ ಅಡಿಗೆ ಮನೆಗೆ ಹೋದಕೂಡಲೇ ನಾನು ಮಹಡಿಗೆ ಹೋಗಿ ನೋಡುವಾಗ ಹೇಸನು ತವಿಯಲ್ಪಟ್ಟದ್ದು ರಕ್ತವು ತುಂಬಾ ಕೆಳಗೆ ಬಿದ್ದಿತು. ಈ ದೃಶ್ಯವನ್ನು ಕಂಡಾಗ ನನ್ನ ಕೈಯೊಳಗಿನ ಚೂರಿ ರಕ್ತದಲ್ಲಿ ಬಿತ್ತು. ಗಾಬರಿಗೊಂಡು ಅದನ್ನು ಹೆಕ್ಕಿ ಹಿಡಿದುಕೊಂಡು ಏನು ಮಾಡುವುದೆಂದು ಯೋಚಿಸುತ್ತಿರುವಾಗ - "ಯೋರ್ಕ್‌ಶಾಯರಿನ ಈರ್ವರೂ ಬಂದು ನನ್ನನ್ನು ಬಂಧಿಸಿದರು. ನಾನು ನಿರಾಪರಾಧಿ."

ಆದರೆ ಸಂದರ್ಭಗಳ ಸಾಕ್ಷಿಯೇ ಬಲವಾಗಿತ್ತು. ಆ ವಿಶೇಷ ಸಂದರ್ಭದಲ್ಲಿ ಬ್ರೇಡ್‌ಫೋರ್ಡನೇ ಕೊಲೆಗಡಿಕನೆಂದಾಗುವುದು. ಅಂತೆಯೇ ಜೂರಿಯವರು ತೀರ್ಪುಕೊಟ್ಟರು. ನ್ಯಾಯಾಧೀಶರು ಫೋರ್ಡನಿಗೆ ಗಲ್ಲಿನ ಶಿಕ್ಷೆವಿಧಿಸಿಯೇ ಬಿಟ್ಟರು.

ಬ್ರೇಡ್‌ಫೋರ್ಡನು ನಿಜವಾಗಿಯೂ ನಿರಪರಾಧಿ. ಕಾರಣ ಹೇಸನ ಖೂನಿ ಮಾಡಿದವನು ಜೇಮ್ಸನೆಂಬ ಅವನ ಬಟ್ಲರನು. ಹಣದ ವಿಚಾರ ಅವನೂ ಕೇಳಿದ್ದನು. ಕಡೆತನಕ ಅವನು ನಿರ್ದೋಷಿಯಾಗಿಯೇ ಉಳಿದನು. ಆದರೆ ಅವನು ಸಾಯುವಾಗ ಮಾತ್ರ ತನ್ನ ಈ ಮಹಾಪರಾಧವನ್ನು ಒಪ್ಪಿದಾಗ ಮಾತ್ರ ಬ್ರೇಡ್‌ಫೋರ್ಡನು ನಿರಪರಾಧಿಯೆಂದು ತಿಳಿಯಿತು. ಯಾರುಕೊಂದದ್ದು? ಶಿಕ್ಷೆಯಾರಿಗೆ?

ಇದೇನು ಕಲ್ಪನೆಯ ಕತೆಯಲ್ಲ. ಆಕ್ಸ್‌ಫರ್ಡಿನ ನ್ಯಾಯಾಧೀಶರ ಕಚೇರಿಯಲ್ಲಿ ಈ ಕಟ್ಟಿಯ ದಾಖಲೆ ಈಗಲೂ ಇದೆ. ಪ್ರಖ್ಯಾತ ಪತ್ತೆದಾರಿ ಕತೆ ಲೇಖಕರನ್ನು ಈ ಘಟನೆಯು ಗೊಂದಲಗೊಳಿಸಿದೆ. ಅವರು ಇದೇ ಮಾದರಿಯ ನೂರು ಕಲ್ಪನೆಗಳನ್ನು ಮಾಡಿ ಬರೆದಿರುವರು. ಈ ಘಟನೆ ಗೊತ್ತಿಲ್ಲದ ಕೆಲವರೂ ಇದೇ ರೀತಿಯ ಕತೆಯೊಂದನ್ನು ಬರೆದಿರುವುದು ಸ್ವಾರಸ್ಯದ ವಿಷಯ. ಕಲ್ಪನೆಯ ಸನ್ನಿವೇಶಗಳೂ, ಘಟನೆಯ ಸಂದರ್ಭಗಳೂ ಹೆಚ್ಚುಕಡಿಮೆ ಒಂದೇ ಆಗುವುದು ಆಶ್ಚರ್ಯ.

ಎದೆನೋವನ್ನು ನಿವಾರಿಸಿರಿ.

—ನಿಮಗೆ ಬೇಗನೇ ಶೀತವಾಗುವುದೆ? ನೀವು ಆಗಾಗ ಕೆಮ್ಮು ಶ್ವಾಸಕೋಶದ ದೌರ್ಬಲ್ಯಗೊಳಿಸುವ ಶೀತಬಾಧೆಯಿಂದ ನರಳುತ್ತೀರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸಗಳನ್ನು ಸೇವಿಸಿ ಗುಣಹೊಂದಿರಿ.

ಪೆಪ್ಸ ಬಾಯಲ್ಲಿ ಹಾಕಿದ ಕೂಡಲೇ ಉತ್ತ ಸುಗಂಧ ಔಷಧಿ ರಸ ಹೊರಡಿಸುತ್ತದೆ. ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುವುದು. ಹಾಗೆ ಸೇರಿ, ಎದೆನೋವು, ಕಫ, ಗಂಟಲು ನೋವು, ಶೀತಬಾಧೆ, ಕೆಮ್ಮು ಮೊದಲಾದವುಗಳನ್ನು ಗುಣಪಡಿಸುವುದು. ನೇವಸ ಮತ್ತು ಶೀತಜ್ವರಗಳಿಗೂ ಪರಮೌಷಧ, ಎಲ್ಲಾ ಔಷಧಿ ಷಾಪುಗಳಲ್ಲಿಯೂ ಪೆಪ್ಸ ದೊರಕುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಬೊಂಬಾಯಿಯಲ್ಲಿ ಖಾಕ್ಸರರ "ಧಾಳಿ"

ಗಾಂಧಿ-ಜಿನ್ನಾ ಭೇಟಿಗೆ ಸಿದ್ಧತೆ

ಕಾಂಗ್ರೆಸ್ ಚಟುವಟಿಕೆ ಪ್ರಾರಂಭ

ಬೊಂಬಾಯಿ ನಗರವು ಇಂದು ಇಡೀ ಭಾರತದ ದೃಷ್ಟಿಯನ್ನು ಸೆಳೆದಿದೆ. ಜಾ. ೧೯ ರಲ್ಲಿ ಕಾಂಗ್ರೆಸ್ ಲೀಗ್ ಮುಖಂಡರೊಳಗೆ ಮಹತ್ವದ ಭೇಟಿಯಾಗಲಿದೆ. ನಗರವಾಸಿಗಳಲ್ಲಿ ನಾನಾತರದ ಉತ್ಸುಕತೆಗಳು ಬಿದ್ದುಕೊಳ್ಳುತ್ತಿವೆ.

ಸಪ್ಟೆಂಬರ್ ೯. ಇದು ಇತಿಹಾಸ ಪ್ರಸಿದ್ಧವಾಗಬಹುದು. ದೇಶದ ಐಕ್ಯತೆಯು ಇಂದು ಭದ್ರವಾಗಿ ಒಟ್ಟುಕೂಡಿ ಬರಬಹುದು. ಜಿನ್ನಾರವರು ಸಂಪೂರ್ಣ ಆರೋಗ್ಯವಂತರಾಗಿದ್ದಾರೆ. ಭೇಟಿಯ ಅನುಕೂಲ ಸಮಯವನ್ನು ಅವರು ಮಹಾತ್ಮರಿಗೆ ತಿಳಿಸಿರುವರು. ಇಂದೇ ಮಹಾತ್ಮರು ಬೊಂಬಾಯಿಗೆ ಹೊರಡುವರು. ಅವರನ್ನು ಅಭೂತಪೂರ್ವಕ ಸ್ವಾಗತಿಸಲು ನಾಲ್ಕು ಸಾವಿರ ಖಾಕ್ಸರರು ಬೊಂಬಾಯಿಗೆ ಬಂದಿರುವರು.

ಖಾಕ್ಸರರೆಂಬ ಈ ಸ್ವಯಂಸೇವಕರು ಮುಸಲ್ಮಾನರು. ಜಗತ್ತಿನಲ್ಲಿ ಇಸ್ಲಾಂ ಮತವನ್ನು ಸ್ಥಾಪನೆಮಾಡುವುದು ಇವರ ಅನೇಕ ಉದ್ದೇಶಗಳಲ್ಲಿ ಒಂದಾದರೂ ಭಾರತ ಸ್ವಾತಂತ್ರ್ಯವೇ ಇವರ ಮುಖ್ಯ ಗುರಿ ಎಂದೂ, ಅದಕ್ಕಾಗಿ ಹಿಂದೂ ಮುಸ್ಲಿಂ ಐಕ್ಯತೆಯು ತಳಹದಿಯಾಗಿರಬೇಕೆಂದೂ ಈ ಸಂಸ್ಥೆಯವರ ಉದ್ದೇಶವಿದೆಯೆಂದು ಅವರ ಮುಖಂಡರಾದ ಅಲ್ಲಾಮಾ ಮಶ್ರಿಖಿಯವರು ಸಾರಿರುವರು. ಮಹಾತ್ಮರನ್ನು ಬಂಧಮುಕ್ತಗೊಳಿಸಿದ ಕೂಡಲೇ ಮಶ್ರಿಖಿಯವರು ಗಾಂಧಿ ಜಿನ್ನಾ ಭೇಟಿಯಾಗಬೇಕೆಂದೂ, ಗಾಂಧಿ ಜಿನ್ನಾಗಳಿಬ್ಬರಿಗೂ ತಿಳಿಸಿದ್ದರು. ಮಹಾತ್ಮರೊಡನೆ ಒಪ್ಪಂದ ಮಾಡಿಕೊಳ್ಳದಿದ್ದರೆ ಖಾಕ್ಸರರು ಮುಸಲ್ಮಾನರ ನಾಯಕತ್ವ ವಹಿಸುವರಾಗಿ ಇವರು ಜಿನ್ನರಿಗೆ ಎಚ್ಚರಿಕೆ ಇತ್ತಿದ್ದರು.

ನಾಲ್ಕು ಸಾವಿರ ಖಾಕ್ಸರರು ಬೊಂಬಾಯಿ ನಗರವನ್ನು ಆಕ್ರಮಿಸಿದ್ದು ಈಗ ಪ್ರಚಂಡ ಪ್ರಚಾರ ಪ್ರಾರಂಭಿಸಿದ್ದಾರೆ. ಅರಬೀ ಪೋಷಾಕಿನಲ್ಲಿ ಖಾಕ್ಸರ್ ಸ್ವಯಂಸೇವಕರು ಗಲ್ಲಿಗಲ್ಲಿಗಳಲ್ಲಿ, ಸಂದಿಸಂದಿನಲ್ಲಿ ನಿಂತು "ಬಂಧು ಬಾಂಧವರೇ, ಗಾಂಧಿ ಜಿನ್ನಾ ಭೇಟಿ ಯಶಸ್ವಿಯಾಗುವಂತೆ ಮಾಡಿರಿ" ಎಂದು ಒದರಿ ನಾಗರೀಕರ ಗಮನವನ್ನು ಸೆಳೆಯುವರು.

ಇಷ್ಟೇ ಅಲ್ಲ. ಪ್ರತಿಯೊಂದು ಪತ್ರಿಕಾ ಕಛೇರಿಗಳನ್ನೂ ನುಗ್ಗಿ ಖಾಕ್ಸರರು ಸಾರ್ವಜನಿಕ ಅಭಿಪ್ರಾಯವನ್ನು ಹಿಂದೂ ಮುಸ್ಲಿಂ ಐಕ್ಯತೆಗೆ ಹೊಂದುಂಬಿಸಲು ಪ್ರಯತ್ನಮಾಡುವರು. ಜಿನ್ನರು ಅಕಸ್ಮಾತಾಗಿ ಅಸೌಖ್ಯಬಿದ್ದಾಗ ಬೊಂಬಾಯಿಯ ಜುಮ್ಮಾ ಮಸೀದಿಯಲ್ಲಿ ಸಾರಸ್ಯ ಘಟನೆ ನಡೆಯಿತು. ಜಿನ್ನರ ಆರೋಗ್ಯಕ್ಕಾಗಿ ಅಂದು ಪ್ರಾರ್ಥನೆಗಳೇರ್ಪಡಿಸಿದ್ದವು. ಐನೂರು ಖಾಕ್ಸರರು ಮಸೀದಿಯನ್ನು ಹೊಕ್ಕು, ಕ್ರಮವಾಗಿ ಪ್ರಾರ್ಥನೆಮಾಡಿದರು. ಶಿಸ್ತಿನಿಂದ ಸ್ವಯಂಸೇವಕರು ಪ್ರಾರ್ಥನಾ ರಂಗದ ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿದ್ದರು. ಪ್ರಾರ್ಥನೆಯಾದ ಕೂಡಲೇ ಅವರ ಒಬ್ಬ ಮುಖಂಡನು (ಇವನಿಗೆ ಸಾಲಾರ್ ಎಂದು ಕರೆಯುತ್ತಾರೆ) ಖಾಕ್ಸರ ತತ್ವ ಧ್ಯೇಯಗಳನ್ನು ಕುರಿತು ಭಾಷಣಮಾಡಲು ಪ್ರಾರಂಭಿಸಿದನು. ಇತರ ಅನೇಕ ಮುಸಲ್ಮಾನರು ಇದಕ್ಕೆ ಆಕ್ಷೇಪವೆತ್ತಿದರು. ಸ್ವಲ್ಪ ಗೊಂದಲವಾಯಿತು. ಆದರೆ ಸಿದ್ಧರಾಗಿನಿಂತ ಅಜಾನುಬಾಹುಗಳಾದ ಕೆಲವು ಖಾಕ್ಸರ್ ಸ್ವಯಂಸೇವಕರು ಕ್ಷಣದಲ್ಲಿ ಶಾಂತತೆಯನ್ನು ಸ್ಥಾಪಿಸಿದರು. ಸಾಲಾರನು ತನ್ನ ಭಾಷಣವನ್ನು ಮುಗಿಸಿದನು.

*　*　*

ಇದೇ ಸಮಯದಲ್ಲಿ ಒಂದು ತಿಂಗಳ ಹಿಂದೆ (ಆಗಸ್ಟ್ ೯ಕ್ಕೆ) ಬೊಂಬಾಯಿಯಲ್ಲಿ ಪುನಃ ಕಾಂಗ್ರೆಸ್ ಚಟುವಟಿಕೆಗಳು ಪ್ರಾರಂಭವಾದವು. ಅಂದು ಬರೀ ವಂದೇ ಮಾತರಂ ಮತ್ತು ಧ್ವಜಾರೋಹಣದಿಂದ ಶಾಂತಮಯ ಕಾರ್ಯವು ಮುಗಿಸಲಾಯಿತು. ಹೀಗೆ ಎಲ್ಲಾ ಮನೆಗಳ ಮಹಡಿಗಳ ಮೇಲೂ, ಪೇಟೆಗಳಲ್ಲೂ ಇಂತಹ ಸಭೆಗಳು ಮೌನ ರೀತಿಯಲ್ಲಿ ನಡೆದವು. ಈ ರೀತಿಯಲ್ಲಿ ಕಾಂಗ್ರೆಸು ಒಂದೊಂದಾಗಿ ತನ್ನ ಸಾರ್ವಜನಿಕ ಚಟುವಟಿಕೆಗಳನ್ನು ಪುನಃ ಪ್ರಾರಂಭಿಸುವುದೆಂದು ನಿರೀಕ್ಷಿಸಲಾಗಿದೆ.

ವರದಕ್ಷಿಣೆಯ ಅನಾಹುತ
ಸಿಂಧದಲ್ಲಿ ವಿರೋಧ ಚಳವಳಿ

ಸಿಂಧ ಪ್ರಾಂತದ ಒಬ್ಬ ಮಂತ್ರಿಗಳು ವರದಕ್ಷಿಣೆ ವಿರೋಧ ಚಳವಳಿಯ ನಾಯಕತ್ವವನ್ನು ವಹಿಸಿರುವರು. ಅಲ್ಲಿನ ಪ್ರಮುಖ ನಾಗರೀಕರು ಭಾವೀ ವರರಿಂದ ಈ ಕೆಳಗಿನಂತಿರುವ ಪ್ರತಿಜ್ಞೆಗೆ ಸಹಿ ಹಾಕಲು ಪ್ರಯತ್ನ ಪಡುತ್ತಿರುವರು:—ನಾನು ವರದಕ್ಷಿಣೆ ತೆಗೆದುಕೊಂಡು ಲಗ್ನವಾಗುವುದಿಲ್ಲ. ನಾನೂ, ನನ್ನ ಕುಟುಂಬದವರೂ ಮುಂದಾಗುವ ನಮ್ಮ ಮಕ್ಕಳು ವರದಕ್ಷಿಣೆ ತೆಗೆದುಕೊಳ್ಳದ ಹಾಗೆ ಪ್ರಯತ್ನ ಮಾಡುತ್ತೇವೆ. ಸಿಂಧ ಪ್ರಜಾ ಪ್ರತಿನಿಧಿ ಸಭೆಯ ಅನೇಕ ಸದಸ್ಯರೂ, ಮತ್ತು ಇತರ ಕುಟುಂಬ ಮುಖಂಡರೂ ಇದಕ್ಕೆ ಸಹಿಹಾಕಿದ್ದಾರೆ.

ವರದಕ್ಷಿಣೆಯಲ್ಲಿ ಅನೇಕ ತರಗತಿಗಳಿವೆ. ವರನ ಉದ್ಯೋಗದ ಮೇಲೆ ಅದು ವಿಂಗಡಿಸಲಾಗಿದೆ. ಮದುವೆಯಾಗುವ ತರುಣನು ಐ ಸಿ ಎಸ್ ಹುದ್ದೇದಾರನಿದ್ದರೆ ಅವನಿಗೆ ರೂ ೫೦ ಸಾವಿರ ಕೊಡಬೇಕು. ಕೇಂದ್ರ ಸರಕಾರದ ಕೈ ಕೆಳಗೆ ಯಾವ ಹುದ್ದೆಯಲ್ಲಿದ್ದರೂ ಒಬ್ಬನಿಗೆ ೨೦ ಸಾವಿರ ಕೊಡಲೇ ಬೇಕಾಗಿತ್ತು. ಸಾಮಾನ್ಯ ಬಿ ಎ ಕಲಿತವನು ೫ರಿಂದ ಹತ್ತು ಸಾವಿರದ ವರೆಗೆ ವರದಕ್ಷಿಣೆ ಪಡೆಯಲು ಅರ್ಹನೆಂದೆಣಿಸಲ್ಪಡುತಿದ್ದನು.

ಈಚೆಗೆ ತುಂಬಾ ಚರ್ಚೆಯ ನಂತರ ಸಿಂಧ್ ಸರಕಾರದವರು ವರದಕ್ಷಿಣೆ ಪಡೆಯುವುದನ್ನೂ, ತೆರುವುದನ್ನೂ ಅಪರಾಧವೆಂದಾಗುವ ವಿಧಾಯಕ ಕಾನೂನನ್ನು ಜ್ಯಾರಿಯಲ್ಲಿ ತಂದಿರುವರು. ಆದರೆ ಸಾರ್ವಜನಿಕರ ಹೃತ್ಪೂರ್ವಕ ಸಹಕಾರವಿಲ್ಲದೆ ಇಂತಹ ದುಷ್ಟ ಸಂಪ್ರದಾಯವನ್ನು ಸಮಾಜ ಕಟ್ಟಳೆಗಳಿಂದ ಕಿತ್ತುಹಾಕಬರುವುದಿಲ್ಲ. ಅಲ್ಲಿ ಅಸಂಖ್ಯಾತ ತರುಣಿಯರು ಇದರ ದುಷ್ಪರಿಣಾಮದಿಂದ ವಿವಾಹವಾಗದೆ ಉಳಿದಿರುವರಂತೆ.

ಬಾಯಿತುಂಬ ಹೆಸರು

ನ್ಯೂಯೋರ್ಕಿನ ಸೈನ್ಯ ಶಿಬಿರದಲ್ಲಿ ಒಬ್ಬ ಸೈನಿಕನ ಹೆಸರು ಅಧಿಕಾರಿಗಳನ್ನು ಬೆರಗುಗೊಳಿಸಿದೆ. ಅವನ ಹೆಸರು "ಲಿಯೂಯಿಸ್ ಜೆಯೂಯಿಸ್ ಜೆಸ್ ಜೆಸ್ ವಿಲ್ಲಿಯಮ್ ಹುರಿಜಸ್ಕಿಜ್" ಎಂದು. ಇದರೊಡನೆ ಅವನು ತನ್ನ ತಂದೆಯ ಹೆಸರನ್ನು ಸೇರಿಸುತಿದ್ದನು. ಅದು "ವಿಲಿಮಿಂಜಿ ಸ್ಲೋಜೀ" ಎಂದಿತ್ತು. ಈಗ ಆ ಸೈನಿಕನ ಹೆಸರಿನ ಮೊದಲ ಅಕ್ಷರಗಳನ್ನು ಮಾತ್ರ ಬರೆದು ಕೊಂಡಿರುವರು.

ಮನುಷ್ಯನ ಎದೆಯಲ್ಲಿ ಸ್ಟ್ಯಾಕಲ್ ಕಡ್ಡಿ ೧೬ ವರ್ಷಗಳ ನಂತರ ತೆಗೆದರು

ಗ್ಲಾಸ್ಗೊ ನಗರದಲ್ಲಿ ಜಾನ್ ಮಿಲ್ಲರ್ ಎಂಬ ಪೋಸ್ಟ್ ಮೇನನು ಇದ್ದಾನೆ. ೧೬ ವರ್ಷಗಳ ಹಿಂದೆ ಅವನು ಒಂದು ಸ್ಟ್ಯಾಕಲ್ ಅಪಘಡಕ್ಕೆ ಸಿಕ್ಕಿ, ಚಕ್ರದ ಹರಿತವಾದ ೯ ಇಂಚು ಕಡ್ಡಿ ಅವನ ಎದೆಯೊಳಗೆ ನಾಟಿತು. ಅದು ಸಂಪೂರ್ಣ ಎದೆಯೊಳಗೇ ಅಡ್ಡವಾಗಿ ಸಿಕ್ಕಿಕೊಂಡದ್ದರಿಂದ ವೈದ್ಯರಿಗೆ ಅದರ ಪತ್ತೆಯಾಗಲಿಲ್ಲ. ಕೆಲವು ಸಮಯದ ಹಿಂದೆ (೧೬ ವರ್ಷ ನಂತರ) ಮಿಲ್ಲರನಿಗೆ ಕೆಮ್ಮುವಾಗ ರಕ್ತಹೋಗುತಿದ್ದುದರಿಂದ ಎಕ್ಸ್‌ರೆ ತೆಗೆಯಲಾಯಿತು. ಆಗ ಎಕ್ಸರೇ ಚಿತ್ರದಲ್ಲಿ ಸ್ಟ್ಯಾಕಲ್ ಕಡ್ಡಿಯು ಶ್ವಾಸಕೋಶದ ಅಡ್ಡವಾಗಿದ್ದುದು ಸ್ಪಷ್ಟವಾಗಿ ಕಂಡುಬಂತು. ಈ ಸಲ ಡಾಕ್ಟರರು ತಪ್ಪಿ ಬೀಳಲಿಲ್ಲ. ಉಕ್ಕಿನ ಆ ಕಡ್ಡಿಯನ್ನು ಹೊರತೆಗೆದರು. ಮಿಲ್ಲರನು ಈಗ ಅದನ್ನು ತನ್ನ ಮನೆಯಲ್ಲಿ ಒಂದು ಗಾಜಿನ ನಳಿಗೆಯಲ್ಲಿಟ್ಟು ತನ್ನ ಸ್ನೇಹಿತರಿಗೆ ತೋರಿಸುತ್ತಿರುವನು.

ಹಾರುವವರಿಗೆ ಹಣ್ಣಿನ ರಸ

ಮಂಗಗಳ ವಿಚಿತ್ರ ಚೈತನ್ಯ ಶಕ್ತಿಗೆ ಅವುಗಳು ತಿನ್ನುವ ಹಣ್ಣುಗಳ ರಸವೇ ಕಾರಣವೆಂದು ತಿಳಿದು ಬಂದಿದೆ. ಮರದಿಂದ ಮರಕ್ಕೆ ಹಾರಿ ನೇತಾಡುವುದಕ್ಕೆ ಈ ರಸ ಶಕ್ತಿಯೇ ಆಧಾರವೆಂದು ಒಬ್ಬ ವಿಜ್ಞಾನಿಗಳು ಶೋಧಿಸಿರುವರು. ಯುದ್ಧದಲ್ಲಿ ಕೊಡೆವೈಮಾನಿಕರಿಗೂ ಹಣ್ಣಿನ ರಸ ಹೆಚ್ಚಾಗಿ ಸಿಕ್ಕುವಂತೆ ಮಾಡಲು ಯೋಚಿಸಿರುವರಂತೆ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ನಿರ್ವಹಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.　**The Joint Booking Office,** KODIALBAIL.

NOTICE

In the court of the subordinate Judge of S K.

R E P No 83 of 1944
O S No 138 of 1933

Between —

Vyasa Rao son of Keshavayya — Petitioner

AND

The Moolky Bank Ltd and others — Respondents

To the 3rd Respondent, S. B Bhojarajayya son of Darappa Shetty Nandikur village Udipi Taluq —

Please take notice that the above execution petition has been filed by the petitioner for the recognition of the transfer of the decree in his name and other reliefs shown in the said petition and the same is posted to 21—9—1944 at 11 O clock for final hearing before the said Court. You are required to appear either personally or through a pleader on the said date and fill your objection (if any) and on failure to appear you will be declared Experte.

(By order of Court)

Mangalore 7th 1944.

M. Venkatraya Kamath,
Advocate for petitioner

The Bank of Mangalore Limited, Mangalore.

ESTD. 1931

HEAD OFFICE BUNDER *BRANCHES*
Mangalore. MANGALORE. Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

FixedDeposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಛಳಿ, ಹಲ್ಲುವೇದನೆಗಳಿಗೂ - ಎದೆನೋವು, ಗಾ... ಬಾತುಕೊಳ್ಳುವುದು, ಚೇಳು ವಿಷ ಮುಂತಾ... ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

- ★ Premiums are low.
- ★ 2½% Rebate on annual premiums.
- ★ "Permanent Disability Benefits free of any cost
- ★ Payment of double the insured amount in case of death by accident at a very smallcost of Rs. 1-8-0 per 1000.
- ★ Special rebates on large size policies.
- ★ A special scheme by which lapsed policies can be revived without paying the arrears
- ★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Shirada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 15—9—1944 [ಸಂಚಿಕೆ 37]

ಹೆದ್ದಾರಿಗಳ ಇತಿಹಾಸ

ಮಾರ್ಗಗಳ ಮೂಲಚರಿತ್ರೆ

ಹಿಂದಿನ ಕಾಲುದಾರಿಗಳೇ-ಇಂದಿನ ರಾಜರಸ್ತೆಗಳು

ಒಂದು ದೇಶವು ಸರ್ವತೋಮುಖ ಪ್ರಗತಿ ಅಭಿವೃದ್ಧಿ ಶ್ರೇಯಸ್ಸುಗಳಿಗೆ ಅಲ್ಲಿ ರಚಿಸಲ್ಪಡುವ ಉತ್ತಮ ರಸ್ತೆಗಳೇ ಕಾರಣವೆನ್ನಬಹುದು. ವಾಣಿಜ್ಯ ವ್ಯವಹಾರವು ಮುಖ್ಯವಾಗಿ ಉದ್ದವಾದ ಹೆದ್ದಾರಿಗಳ ಮೇಲೆಯೇ ಹೊಂದಿಕೊಂಡಿದೆ.

ಅನಾದಿಯಿಂದಲೂ ನಮ್ಮ ದೇಶದ ಪೂರ್ವಜರಿಗೆ ಮಾರ್ಗಗಳ ಅವಶ್ಯಕತೆ ತಿಳಿದಿತ್ತು. ಋಗ್ವೇದದಲ್ಲಿ 'ಪಂಥ' (ಕಾಲುದಾರಿ) 'ರಥ್ಯಾ' (ವಾಹನ ಮಾರ್ಗ) 'ಮಹಾಪಥ' (ಹೆದ್ದಾರಿ), ಸೇತು (ಸಂಕ), ಎಂಬ ಶಬ್ದಗಳ ಉಲ್ಲೇಖವಿದೆ. ಜಾತಕಗಳೆಂಬ ಬೌಧ ಗ್ರಂಥಗಳಲ್ಲೂ ಮಾರ್ಗಗಳ ಕುರಿತು ಬರೆದುದಿದೆ. ಶ್ರವಸ್ತಿ ಎಂಬಲ್ಲಿಂದ ಪ್ರತಿಸ್ಥಾನ್ (ಪೈಠನಗರ) ಎಂಬಲ್ಲಿಗೆ ಆರು ವಿಶ್ರಾಂತಿ ಗೃಹಗಳಿಂದ ಕೂಡಿದ ಹೆದ್ದಾರಿಯಿತ್ತು. ಗಾಂಧಾರ, (ಕಂದಹಾರ) ಮಧ್ಯ ಮತ್ತು ಪಶ್ಚಿಮ ಏಸ್ಯಾಖಂಡದಿಂದ ಮತ್ತು ಪಾಟಲಿ ಪುತ್ರ (ಪಾಟ್ನಾ)ದಿಂದ ತಕ್ಷಶಿಲೆಯ ವಿಶ್ವವಿದ್ಯಾಲಯಕ್ಕೆ ಬ್ರಾಹ್ಮಣರು ನಿರ್ಭಯವಾದ ರಸ್ತೆಗಳಿಂದ ಬರುತ್ತಿದ್ದರಂತೆ.

ರಾಮಾಯಣ ಮಹಾಭಾರತ ಕಾಲದಲ್ಲಿ ನೆಲ, ಜಲ ಆಕಾಶ ಮಾರ್ಗಗಳು ಇದ್ದವೆಂಬುದಕ್ಕೆ ಅನೇಕ ನಿದರ್ಶನಗಳು ಸಿಗುತ್ತದೆ. ಶಾಕುಂತಲೆಯು ಗಂಡನ ಮನೆಗೆ ಕಳುಹಲ್ಪಡುವಾಗ "ಶುಭಶ್ಚ ಪಂಥಃ" (ನಿನ್ನ ಮಾರ್ಗವು ಹಿತಕರವಾಗಲಿ) ಎಂಬ ಮಾತುಗಳನ್ನು ಕಾಳಿದಾಸನು ಕಣ್ವಋಷಿಯ ಬಾಯಿಯಿಂದ ಬರುವಂತೆ ಬರೆದಿರುವನು. ದಮಯಂತಿಗೆ ಹಂಸದ ಮುಖಾಂತರ ಸಂದೇಶ ಕಳಿಸುವಾಗ ನಳಮಹಾರಾಜನು 'ತವವರ್ತ್ಮನಿ ವರ್ತತಾಂ ಶುಭಂ' (ನಿನ್ನ ಮಾರ್ಗವು ಸುಗಮವಾಗಲಿ) ಎಂದು ಹರ್ಷಕವಿಯ ನೈಷಧ ಮಹಾಕಾವ್ಯದಲ್ಲಿ ಹೇಳಲ್ಪಟ್ಟಿದೆ. ಶೇಕ್ಸ್‌ಪಿಯರ್, ಮಿಲ್ಟನ್ (೧೫ನೇ ಶತಮಾನ) ಮೊದಲಾದ ಆಂಗ್ಲ ಸಾಹಿತಿಗಳು 'ರೋಡ್' ಎಂಬ ಶಬ್ದಗಳನ್ನು ಉಪಯೋಗಿಸಿರುವುದು ಆ ಕಾಲದಲ್ಲೂ ಮಾರ್ಗಗಳೆಂಬ ಪ್ರತ್ಯೇಕ ದಾರಿಗಳಿದ್ದುವೆಂಬುದಕ್ಕೆ ನಿದರ್ಶನ.

ಪುರಾತನ ಕ್ರೈಸ್ತಮತ ಗ್ರಂಥಗಳಲ್ಲೂ ಒಂದು ಕಡೆಯಲ್ಲಿ "ನೀನು ಇಂದು ಯಾವ ಮಾರ್ಗಸ್ಥನಾದಿ?" ಎಂದು ಕೇಳಲ್ಪಟ್ಟಿರುವುದರಿಂದ ಸುಮಾರು ಐದಾರು ಸಾವಿರ ವರ್ಷಗಳ ಹಿಂದೆ ಕೂಡಾ ಮಾರ್ಗಗಳೆಂಬ ದಾರಿಗಳು ಇದ್ದವೆಂದು ತಿಳಿಯುತ್ತದೆ.

ಸಿಂಧೂನದಿ ಪ್ರದೇಶದ ಮೊಹೆಂಜದಾರೊ, ಹರಪ್ಪಾ, ಎಂಬಲ್ಲಿ ಶೋಧಿಸಲಾದ ಐದು ಸಾವಿರ ವರ್ಷ ಹಿಂದಿನ ನಗರಗಳಲ್ಲಿ ಅಚ್ಚುಕಟ್ಟಾದ, ಚರಂಡಿಗಳಿಂದ ಕೂಡಿದ ಮಾರ್ಗಗಳು ಇದ್ದುವೆಂದು ಕಂಡುಬಂದಿದೆ. ವರ್ಗಿಯಾದಿಂದ [illegible] ಸಮುದ್ರಕ್ಕೂ ಮತ್ತು ಚೀನಾದೇ[illegible] ರಾಜಮಾರ್ಗವಿದ್ದಾಗಿ ಪ್ರಖ್ಯಾತ

ಗ್ರೀಕ್ ಪ್ರಯಾಣಿಕನೂ, ಇತಿಹಾಸಕನೂ ಆದ ಹೆರೊಡೆಟಸನು ಬರೆದಿಟ್ಟ ದಾಖಲೆಗಳಿವೆ. ಎಸ್ಸಿರಿಯಾ, ಬೆಬಿಲೋನ್ ಮತ್ತು ಏಜಿಯನ್ ಸಮುದ್ರದ ವರೇಗೆ ಮಾರ್ಗ ವ್ಯವಸ್ಥೆಯಿತ್ತೆಂದೂ ಆತನು ತಿಳಿಸುತ್ತಾನೆ.

ಈಜಿಪ್ತಿನಲ್ಲಿ ಶಿಲೆಕಲ್ಲಿನ ಹಲಗೆಗಳಿಂದ ಮುಚ್ಚಲ್ಪಟ್ಟ ಮಾರ್ಗಗಳು ಎತ್ತರವಾದ ಪಿರಮಿಡ್‌ಗಳೆಂಬ ತ್ರಿಕೋಣಾಕಾರದ ಕಟ್ಟಡಗಳನ್ನು ಕಟ್ಟಿಸಿದ ಫಾರೋವಾ ಎಂಬ ರಾಜರ ಕಾಲದಲ್ಲಿದ್ದುವೆಂದು ತಿಳಿದುಬರುತ್ತದೆ. ಪಿರಮಿಡ್ಡುಗಳನ್ನು ಕಟ್ಟಲು ಸಾಮಾಗ್ರಿಗಳನ್ನು ಒಯ್ಯಲು ಈ ಮಾರ್ಗಗಳು ರಚಿಸಲ್ಪಟ್ಟಿದ್ದುವು. ಅದು ಬರೀ ಐದು ಫರ್ಲಾಂಗು ಮಾತ್ರ ಉದ್ದವಿತ್ತಾದರೂ ಅದು ಪಿರಮಿಡ್ಡುಗಳಷ್ಟೆ ವಿಚಿತ್ರದ ರಚನೆಯದಾಗಿತ್ತೆಂದು ಹೆರೊಡೆಟಸನು ಬರೆದಿರುತ್ತಾನೆ.

ಬಹು ಪ್ರಾಚೀನವಾದ ಮಾರ್ಗಗಳು ಬಹುಶ್ಯ ಕಾಡುಮೃಗಗಳೂ ಗವಿಮನುಷ್ಯನೂ ಸಂಚರಿಸುವಾಗ ಉಂಟಾದ ಕಾಲುದಾರಿಗಳು. ನೀರಿನ ತೇವವಿದ್ದ ಜವುಗು ಸ್ಥಳಗಳನ್ನು ಬಿಟ್ಟು ವನ್ಯ ಮೃಗಗಳು ಒಣಕಲು ಪ್ರದೇಶದಲ್ಲೇ ಚಲಿಸುತ್ತಿದ್ದು ಅವುಗಳಿಂದ ಉಂಟಾದ ಮಾರ್ಗಗಳು ಈಗಲೂ ಆಫ್ರಿಕಾ ಅಮೇರಿಕಾಗಳಲ್ಲಿ ನಾವು ಕಾಣಬಹುದು, ಆಫ್ರಿಕಾವನ್ನು ಕಾಲುಹೆಜ್ಜೆದಾರಿಗಳ ಖಂಡವೆಂದು ಕರೆಯಬಹುದು. "ಒಂದೆರಡು ಅಡಿ ಮಾತ್ರ ಅಗಲವಿರುವ ಈ ಕಾಲುದಾರಿಗಳು ವಿಶಾಲವಾದ ಈ ಕತ್ತಲೆಯ ಖಂಡವನ್ನು ಸುತ್ತಿವೆ. ಇವು ಎಲ್ಲಿಯೂ ೫೦ ಗಜಕ್ಕೂ ಮಿಕ್ಕಿ ನೇರವಾಗಿರದೆ ಅಂಕುಡೊಂಕಾಗಿ ತುದಿಯಿಂದ ತುದಿಗೆ ವ್ಯಾಪಿಸಿವೆ." ಹೀಗೆಂದು ಹೆನ್ರಿಡ್ರಮ್ಮೊಂಡ್ ಎಂಬ ಭೂಗೋಲ ಶಾಸ್ತ್ರಜ್ಞರು ಬರೆದಿರುವರು. ಉತ್ತರ ದಕ್ಷಿಣ ಅಮೇರಿಕಗಳಲ್ಲಿ ಕಾಡುಕೋಣಗಳೂ, ರೆಡ್ ಇಂಡಿಯನ್ನರ ಕುದುರೆಗಳೂ ಮಾಡಿದ ದಾರಿಗಳು ಇಂದಿನ ಅಲ್ಲಿನ ಹೆದ್ದಾರಿಗಳ ಮೂಲವಾದುವು.

ಎಸ್ಸೀರಿಯಾದಲ್ಲೂ ಕ್ರೀಟ್ ದ್ವೀಪದಲ್ಲೂ ಕ್ರಿಸ್ತ ಪೂರ್ವ ಐನ್ನೂರು ವರ್ಷಗಳ ಹಿಂದೆ ಉತ್ತಮ ರಸ್ತೆಗಳಿದ್ದುವಾದರೂ, ಆಫ್ರಿಕದ ಕಾರ್ತೇಜ್ ಎಂಬ ಚಿಕ್ಕದೇಶದಲ್ಲಿ ೩೫೦೦ ವರ್ಷಗಳ ಹಿಂದೆ ಶ್ರೇಷ್ಠ ತರಗತಿಯ ರಾಜಮಾರ್ಗವಿದ್ದವೆಂದು ಸರ್ವಿಯಸ್ ಮತ್ತು ಇಸೊಡರಸ್ ಎಂಬ ಗ್ರೀಕ್ ಪ್ರಯಾಣಿಕರು ಬರೆದಿಟ್ಟಿರುವರು. ರೋಮನ್ ಜನರು ಕಾರ್ತೇಜ್ ಮಾರ್ಗರಚನೆಯನ್ನು ಅನುಕರಣೆ ಮಾಡಿದರು. ರೋಮಾಯರ ವಿಶಾಲ ಸಾಮ್ರಾಜ್ಯ ಬೆಳವಣಿಗೆಯು ಅವರು ಯುರೋಪ್ ಖಂಡದ ಉದ್ದಕ್ಕೂ ಹಾಕಿದ ಹೆದ್ದಾರಿಗಳೇ ಕಾರಣವೆನ್ನಬಹುದು. ಯಾಕೆಂದರೆ ಸುಗಮವಾದ ಸೈನ್ಯ ಚಲಾವಣೆಯು ಇವುಗಳಿಂದ ಸುಲಭವಾಯಿತು. ಇಂದಿನ ಆಧುನಿಕ ಮಾರ್ಗ ರಚನೆಯ ಕ್ರಮವು ರೋಮನ್ ಮಾರ್ಗಗಳ ಮಾದರಿಯ ಮೇಲೆ ಕಟ್ಟಲ್ಪಟ್ಟಿರುವುದೆಂದು ಹೇಳಿದರೆ ಆಶ್ಚರ್ಯವಾಗಬಹುದು. ರೋಮನ್ ಮಾರ್ಗಗಳ ಒಂದು ವಿಶೇಷತೆಯೆಂದರೆ ಅವುಗಳ ಉದ್ದ. ಅವುಗಳಲ್ಲಿ ಸುತ್ತಿಕೊಂಡು ಹೋಗುವ ಮಾರ್ಗಗಳೇ ಕಡಿಮೆ. ಆದರೂ ಕೆಲವು ಕಡೆಗಳಲ್ಲಿ ಅಪಾಯವಿಲ್ಲದೆ ವಾಹನಗಳನ್ನು ಅತೀ ವೇಗದಲ್ಲಿ ಓಡುವಾಗಲೂ ತಿರುಗಿಸಲಿಕ್ಕಾಗುವಂತೆ ಕ್ರಮೇಣವಾಗಿ ಬಗ್ಗಿ ಸುತ್ತುಹೋಗುವ ಮಾರ್ಗಗಳನ್ನೂ ಅವರು ಮಾಡಿರುವರು

ಕ್ರಿ. ಪೂ. ಮೂರನೇ ಶತಮಾನದಲ್ಲಿ ಹಿಂದೂ ಸಾಮ್ರಾಜ್ಯಾಧಿಪತಿಯಾಗಿ ಆಳಿದ ಚಂದ್ರಗುಪ್ತನ ಕಾಲದಲ್ಲಿ ಅಮೋಘವಾದ ಮಾರ್ಗಗಳಿದ್ದವೆಂದು ಇತಿಹಾಸ ಹೇಳುತ್ತದೆ. ಅವನ ಮಂತ್ರಿಯಾದ ಚಾಣಕ್ಯನು ತನ್ನ ಅರ್ಥಶಾಸ್ತ್ರವೆಂಬ ಗ್ರಂಥದಲ್ಲಿ ಮಾರ್ಗ ರಚನೆಯ ಸೂತ್ರಗಳನ್ನು ಕೊಟ್ಟಿರುವುದು ಸ್ವಾರಸ್ಯದ ವಿಷಯ. ಬೇರೆ ಬೇರೆ ಪ್ರಯಾಣ ಕ್ರಮಗಳಿಗನುಕೂಲಕ್ಕಾಗಿ ಕಟ್ಟಬೇಕಾದ ಮಾರ್ಗಗಳ ರಚನೆಯ ಕುರಿತು ಅವನ ಸೂಚನೆಗಳು ಉಪಯುಕ್ತವಾಗಿವೆ. "[illegible]

ರಾಜಪ್ರಯಾಣಕ್ಕೂ ೬ ದಂಡ (೨೪ ಅಡಿ) ಗಳ ಅಗಲ ಮಾರ್ಗಬೇಕು. ಅದಕ್ಕೆ ಎರಡು ಅರತ್ನಿ (೩ ಅಡಿ)ಗಳ ಕಾಲುದಾರಿ (ಫೂಟ್‌ಪಾತ್) ಇರಬೇಕು. ಇವು ದ್ವಿಪಾದ (ಮನುಷ್ಯ) ಚತುಷ್ಪಾದ (ದನ ಎಮ್ಮೆ) ಪ್ರಾಣಿಗಳ ಸಂಚಾರಕ್ಕೆ ಯೋಗ್ಯ ವಾಹನ ಮತ್ತು ರಾಜ ಸಂಚಾರದ ಮಾರ್ಗದಲ್ಲಿ ಜನರು ನಡೆದರೆ ದಂಡ ತೆರಬೇಕು" ಹೀಗೆ ಚಾಣಕ್ಯನು ಬರೆದಿರುವನು."

ಶುಕ್ರ ನೀತಿಯೆಂಬ ಗ್ರಂಥದಲ್ಲೂ ಬೀದಿಗಳ ಶಾಸ್ತ್ರವಿದೆ. "ಪಾದ್ಯ, ಅಥವಾ ಹೆಜ್ಜೆದಾರಿಯ ಅಗಲ ೩ ಮೊಳ. ಬೀತಿ (ಬೀದಿ, ಓಣಿ,) ೪ ಮೊಳ. ಮಾರ್ಗ (ರಸ್ತೆ) ೧೦ ಮೊಳ ಮಾರ್ಗಗಳು ಆಮೆಯ ಬೆನ್ನಿನಂತೆ ಮಧ್ಯದಲ್ಲಿ ಎತ್ತರವಿದ್ದು ಬದಿಗಳಲ್ಲಿ ಇಳಿಜಾರಾಗಿರಬೇಕು. ಅಲ್ಲಲ್ಲಿ ಚಿಕ್ಕ ಸೇತುವೆಗಳಿರಬೇಕು. ಎರಡೂ ಬದಿಗಳಲ್ಲೂ ನೀರು ಹೋಗಲು ಚರಂಡಿಗಳಿರಬೇಕು." ಎಂದು ಅದರಲ್ಲಿ ಬರೆದಿರುತ್ತದೆ.

ಚಂದ್ರಗುಪ್ತನ ಕಾಲದಲ್ಲಿ ಮಾರ್ಗದ ಇಲಾಖೆಯೇ ಬೇರೆ ಇತ್ತು. ಹೆದ್ದಾರಿಗಳ ಮೇಲ್ಮನ್ಕೆಗಾಗಿ ಪ್ರತ್ಯೇಕ ಅಧಿಕಾರಿಗಳೂ ಇದ್ದರು. ಮಾರ್ಗದ ಬದಿಗಳಲ್ಲಿ ನೀರು ಕೊಳಗಳೂ, ಬಾವಿಗಳೂ, ಛತ್ರಗಳೂ ಕಟ್ಟಲ್ಪಟ್ಟಿದ್ದವು. ಅವುಗಳನ್ನು ನೆನಸುವಾಗ ಈಗಿನ ಮಾರ್ಗ ರಚನಾ ಇಲಾಖೆಗಳು ಲಜ್ಜೆ ಪಟ್ಟುಕೊಳ್ಳಬೇಕು.

ಗಾಂಧಾರ ರಾಜನಿಂದ ಚಂದ್ರಗುಪ್ತನ ಆಸ್ಥಾನಕ್ಕೆ ಕಳುಹಲ್ಪಟ್ಟ ಸೆಲ್ಯೂಕೋಸ್‌ನೆಂಬ ಗ್ರೀಕ್ ರಾಯಭಾರಿಯು "ರಾಜ್ಯದಲ್ಲಿ ೧೦೦೦೦ ಮೈಲುಗಳಷ್ಟು ದೂರದ ಮಾರ್ಗಗಳು" ಇತ್ತೆಂದು ತಿಳಿಸುತ್ತಾನೆ. ಈ ಲೆಕ್ಕವನ್ನು ಈರಾಸ್ಥೋತೆನಿಸ್‌ನೆಂಬವನು ಸರಕಾರದ ಮಾರ್ಗ ಖಾತೆಯ ಲೆಕ್ಕ ಪುಸ್ತಕಗಳನ್ನು ಪರಿಶೋಧಿಸಿ ಹೇಳಿದ ಪ್ರಮಾಣವೆಂದು ಹೇಳುತ್ತಾನೆ.

ನಂತರ ಕ್ರಿ. ಪೂ. ಎರಡನೇ ಶತಮಾನದಲ್ಲಿ ಅಶೋಕನು ತನ್ನ ಪ್ರಜೆಗಳ ಸೌಕರ್ಯಕ್ಕಾಗಿ ಅಚ್ಚುಕಟ್ಟಾದ ಹೆದ್ದಾರಿಗಳನ್ನೂ ಮಾರ್ಗಗಳನ್ನೂ ರಚಿಸಿದ್ದನು. ಅವನ ಶಿಲಾಶಾಸನವೊಂದರಲ್ಲಿ "ದಾರಿಯ ಇಬ್ಬದಿಗಳಲ್ಲಿ ಮನುಷ್ಯರಿಗೂ ಜಾನುವಾರುಗಳಿಗೂ ನೆರಳು ಕೊಡುವ ಆಲದ ಮತ್ತು ಮಾವಿನ ಮರಗಳನ್ನು ನೆಡಲಾಗಿದೆ. ಒಂದುವರೆ ಮೈಲಿಗೊಂದರಂತೆ ಬಾವಿ ತೋಡಲ್ಪಟ್ಟಿದೆ. ಛತ್ರಗಳು ಕಟ್ಟಲ್ಪಟ್ಟಿವೆ." ಹೀಗೆಂದು ಬರೆದಿದೆ.

ಐದನೇ ಏಳನೇ ಶತಮಾನಗಳಲ್ಲಿ ಹಿಂದೂದೇಶಕ್ಕೆ ಬಂದಿದ್ದ ಫಾಹೀನ್

([illegible])

The Bank of Mangalore Limited, Mangalore.

ESTD. 1931

HEAD OFFICE — BUNDER MANGALORE — Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-4-1944

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.
12 months 2½% p. a.
24 months 3% p. a.

The Bank also accepts season and short term deposits and many other lucrative schemes at most favourable rates of interest. For terms etc, apply to Head office or Branches

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಜು, ಚೆಳು ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದ್ರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low ★ 2½% Rebate on annual premiums.
★ "Permanent Disability Benefits free of any cost
★ Payment of double the insured amount in case of death by accident at a very small cost of Rs 1-8-0 per 1000.
★ Special rebates on large size policies
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the super vision of the experienced staff A specific for the puerperal diseases and also valuable to puerperal women as tonic increases the vitality and sexual vigour Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಕಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭ ಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನೆರೆ' ಹೋಗಲಾಡಿಸುತ್ತ[illegible]

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರ[illegible]

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 15—9—1944 [ಸಂಚಿಕೆ 37]

ಹೆದ್ದಾರಿಗಳ ಇತಿಹಾಸ

ಮಾರ್ಗಗಳ ಮೂಲಚರಿತ್ರೆ

ಹಿಂದಿನ ಕಾಲುದಾರಿಗಳೇ-ಇಂದಿನ ರಾಜರಸ್ತೆಗಳು

ಒಂದು ದೇಶವು ಸರ್ವತೋಮುಖ ಪ್ರಗತಿ ಅಭಿವೃದ್ಧಿ ಶ್ರೇಯಸ್ಸುಗಳಿಗೆ ಅಲ್ಲಿ ರಚಿಸಲ್ಪಡುವ ಉತ್ತಮ ರಸ್ತೆಗಳೇ ಕಾರಣವೆನ್ನಬಹುದು. ವಾಣಿಜ್ಯ ವ್ಯವಹಾರವು ಮುಖ್ಯವಾಗಿ ಉದ್ದವಾದ ಹೆದ್ದಾರಿಗಳ ಮೇಲೆಯೇ ಹೊಂದಿಕೊಂಡಿದೆ.

ಅನಾದಿಯಿಂದಲೂ ನಮ್ಮ ದೇಶದ ಪೂರ್ವಜರಿಗೆ ಮಾರ್ಗಗಳ ಅವಶ್ಯಕತೆ ಇದ್ದಿತ್ತು. ಋಗ್ವೇದದಲ್ಲಿ 'ಪಂಥ' (ಕಾಲುದಾರಿ) 'ರಥ್ಯಾ' (ವಾಹನ ಮಾರ್ಗ) ಮಹಾಪಥ' (ಹೆದ್ದಾರಿ), ಸೇತು (ಸಂಕ), ಎಂಬ ಶಬ್ದಗಳ ಉಲ್ಲೇಖವಿದೆ. ಜಾತಕಗಳೆಂಬ ಬೌಧ ಗ್ರಂಥಗಳಲ್ಲೂ ಮಾರ್ಗಗಳ ಕುರಿತು ಬರೆದುದಿದೆ. ಶ್ರವಸ್ತಿ ಎಂಬಲ್ಲಿಂದ ಪ್ರತಿಸ್ಥಾನ್, (ಪೈಠನಗರ) ಎಂಬಲ್ಲಿಗೆ ಆರು ವಿಶ್ರಾಂತಿ ಗೃಹಗಳಿಂದ ಕೂಡಿದ ಹೆದ್ದಾರಿಯಿತ್ತು. ಗಾಂಧಾರ, (ಕಂದಹಾರ) ಮಧ್ಯ ಮತ್ತು ಪಶ್ಚಿಮ ಆಸ್ಯಾ ಖಂಡದಿಂದ ಮತ್ತು ಪಾಟಲಿ ಪುತ್ರ (ಪಾಟ್ನ)ದಿಂದ ತಕ್ಷಶಿಲೆಯ ವಿಶ್ವವಿದ್ಯಾಲಯಕ್ಕೆ ಬ್ರಾಹ್ಮಣರು ನಿರ್ಭಯವಾದ ರಸ್ತೆಗಳಿಂದ ಬರುತ್ತಿದ್ದರಂತೆ.

ರಾಮಾಯಣ ಮಹಾಭಾರತ ಕಾಲದಲ್ಲಿ ನೆಲ, ಜಲ ಆಕಾಶ ಮಾರ್ಗಗಳು ಇದ್ದವೆಂಬುದಕ್ಕೆ ಅನೇಕ ನಿದರ್ಶನಗಳು ಸಿಗುತ್ತದೆ. ಶಾಕುಂತಲೆಯು ಗಂಡನ ಮನೆಗೆ ಕಳುಹಲ್ಪಡುವಾಗ "ಶುಭಶ್ಚ ಪಂಥಾಃ" (ನಿನ್ನ ಮಾರ್ಗವು ಹಿತಕರವಾಗಲಿ) ಎಂಬ ಮಾತುಗಳನ್ನು ಕಾಳಿದಾಸನು ಕಣ್ವಋಷಿಯ ಬಾಯಿಯಿಂದ ಬರುವಂತೆ ಬರೆದಿರುವನು. ದಮಯಂತಿಗೆ ಹಂಸದ ಮುಖಾಂತರ ಸಂದೇಶ ಕಳಿಸುವಾ ನಳಮಹಾರಾಜನು 'ತವವರ್ತ್ಮ ನಿವರ್ತತಾಂ ಶುಭಂ' (ನಿನ್ನ ಮಾರ್ಗವು ಸುಗಮವಾಗಲಿ) ಎಂದು ಹರ್ಷಕವಿಯು ನೈಷಧ ಮಹಾಕಾವ್ಯದಲ್ಲಿ ಹೇಳಲ್ಪಟ್ಟಿದೆ. ಶೇಕ್ಸಪಿಯರ್, ಮಿಲ್ಟನ್ (೧೫ನೇ ಶತಮಾನ) ಮೊದಲಾದ ಆಂಗ್ಲ ಸಾಹಿತಿಗಳು 'ರೋಡ್' ಎಂಬ ಶಬ್ದಗಳನ್ನು ಉಪಯೋಗಿಸಿರುವುದು ಆ ಕಾಲದಲ್ಲೂ ಮಾರ್ಗಗಳೆಂಬ ಪ್ರತ್ಯೇಕ ದಾರಿಗಳಿದ್ದುವೆಂಬುದಕ್ಕೆ ನಿದರ್ಶನ.

ಪುರಾತನ ಕ್ರೈಸ್ತಮತ ಗ್ರಂಥಗಳಲ್ಲೂ ಒಂದು ಕಡೆಯಲ್ಲಿ "ನೀನು ಇಂದು ಯಾವ ಮಾರ್ಗಸ್ಥನಾದಿ?" ಎಂದು ಕೇಳಲ್ಪಟ್ಟಿರುವುದರಿಂದ ಸುಮಾರು ಐದಾರು ಸಾವಿರ ವರ್ಷಗಳ ಹಿಂದೆ ಕೂಡಾ ಮಾರ್ಗಗಳೆಂಬ ದಾರಿಗಳು ಇದ್ದವೆಂದು ತಿಳಿಯುತ್ತದೆ.

ಸಿಂಧೂನದಿ ಪ್ರದೇಶದ ಮೊಹೆಂಜದಾರೊ, ಹರಪ್ಪಾ, ಎಂಬಲ್ಲಿ ಶೋಧಿಸಲಾದ ಐದು ಸಾವಿರ ವರ್ಷ ಹಿಂದಿನ ನಗರಗಳಲ್ಲಿ ಅಚ್ಚುಕಟ್ಟಾದ, ಚರಂಡಿಗಳಿಂದ ಕೂಡಿದ ಮಾರ್ಗಗಳು ಇದ್ದುವೆಂದು ಕಂಡುಬಂದಿದೆ. ಪರ್ಶಿಯಾದಿಂದ ಮೃತ್ಯುಸಮುದ್ರಕ್ಕೂ ಮತ್ತು ಚೀನಾದೇಶಕ್ಕೂ ರಾಜಮಾರ್ಗವಿದ್ದುದಾಗಿ ಪ್ರಖ್ಯಾತ ಗ್ರೀಕ್ ಪ್ರಯಾಣಿಕನೂ, ಇತಿಹಾಸಕನೂ ಆದ ಹೆರೋಡೆಟಸನು ಬರೆದಿಟ್ಟ ದಾಖಲೆಗಳಿವೆ. ಎಸ್ಸಿರಿಯಾ, ಬೆಬಿಲೋನ್ ಮತ್ತು ಏಜಿಯನ್ ಸಮುದ್ರದ ವರೆಗೆ ಮಾರ್ಗ ವ್ಯವಸ್ಥೆಯಿತ್ತೆಂದೂ ಆತನು ತಿಳಿಸುತ್ತಾನೆ.

ಈಜಿಪ್ಟಿನಲ್ಲಿ ಶಿಲೆಕಲ್ಲಿನ ಹಲಗೆಗಳಿಂದ ಮುಚ್ಚಲ್ಪಟ್ಟ ಮಾರ್ಗಗಳು ಎತ್ತರವಾದ ಪಿರಮಿಡ್‌ಗಳೆಂಬ ತ್ರಿಕೋಣಾಕಾರದ ಕಟ್ಟಡಗಳನ್ನು ಕಟ್ಟಿಸಿದ ಫಾರೋವಾ ಎಂಬ ರಾಜರ ಕಾಲದಲ್ಲಿದ್ದುವೆಂದು ತಿಳಿದುಬರುತ್ತದೆ. ಪಿರಮಿಡ್ಡುಗಳನ್ನು ಕಟ್ಟಲು ಸಾಮಾಗ್ರಿಗಳನ್ನು ಒಯ್ಯಲು ಈ ಮಾರ್ಗಗಳು ರಚಿಸಲ್ಪಟ್ಟಿದ್ದುವು. ಅದು ಬರೀ ಐದು ಫರ್ಲಾಂಗು ಮಾತ್ರ ಉದ್ದವಿತ್ತಾದರೂ ಅದು ಪಿರಮಿಡ್ಡುಗಳಷ್ಟೆ ವಿಚಿತ್ರದ ರಚನೆಯದಾಗಿತ್ತೆಂದು ಹೆರೊಡೆಟಸನು ಬರೆದಿರುತ್ತಾನೆ.

ಬಹು ಪ್ರಾಚೀನವಾದ ಮಾರ್ಗಗಳು ಬಹುಶ್ಯ ಕಾಡುಮೃಗಗಳೂ ಗವಿಮನುಷ್ಯನೂ ಸಂಚರಿಸುವಾಗ ಉಂಟಾದ ಕಾಲುದಾರಿಗಳು. ನೀರಿನ ತೇವವಿದ್ದ ಜವುಗು ಸ್ಥಳಗಳನ್ನು ಬಿಟ್ಟು ವನ್ಯ ಮೃಗಗಳು ಒಣಕಲು ಪ್ರದೇಶದಲ್ಲೇ ಚಲಿಸುತ್ತಿದ್ದು ಅವುಗಳಿಂದ ಉಂಟಾದ ಮಾರ್ಗಗಳು ಈಗಲೂ ಆಫ್ರಿಕಾ ಅಮೇರಿಕಾಗಳಲ್ಲಿ ನಾವು ಕಾಣಬಹುದು. ಆಫ್ರಿಕಾವನ್ನು ಕಾಲುಹೆಜ್ಜೆದಾರಿಗಳ ಖಂಡವೆಂದು ಕರೆಯಬಹುದು. "ಒಂದೆರಡು ಅಡಿ ಮಾತ್ರ ಅಗಲವಿರುವ ಈ ಕಾಲುದಾರಿಗಳು ವಿಶಾಲವಾದ ಈ ಕತ್ತಲೆಯ ಖಂಡವನ್ನು ಸುತ್ತಿವೆ. ಇವು ಎಲ್ಲಿಯೂ ೫೦ ಗಜಕ್ಕೂ ಮಿಕ್ಕಿ ನೇರವಾಗಿರದೆ ಅಂಕುಡೊಂಕಾಗಿ ತುದಿಯಿಂದ ತುದಿಗೆ ವ್ಯಾಪಿಸಿವೆ." ಹೀಗೆಂದು ಹೆನ್ರಿಡ್ರಮ್ಮೊಂಡ್ ಎಂಬ ಭೂಗೋಲ ಶಾಸ್ತ್ರಜ್ಞರು ಬರೆದಿರುವರು. ಉತ್ತರ ದಕ್ಷಿಣ ಅಮೆರಿಕಗಳಲ್ಲಿ ಕಾಡುಕೋಣಗಳೂ, ರೆಡ್ ಇಂಡಿಯನ್ನರ ಕುದುರೆಗಳೂ ಮಾಡಿದ ದಾರಿಗಳು ಇಂದಿನ ಅಲ್ಲಿನ ಹೆದ್ದಾರಿಗಳ ಮೂಲವಾದುವು.

ಎಸ್ಸೀರಿಯಾದಲ್ಲೂ ಕ್ರೀಟ್ ದ್ವೀಪದಲ್ಲೂ ಕ್ರಿಸ್ತ ಪೂರ್ವ ಐನ್ನೂರು ವರ್ಷಗಳ ಹಿಂದೆ ಉತ್ತಮ ರಸ್ತೆಗಳಿದ್ದುವಾದರೂ, ಆಫ್ರಿಕದ ಕಾರ್ತೇಜ್ ಎಂಬ ಚಿಕ್ಕದೇಶದಲ್ಲಿ ೨೫೦೦ ವರ್ಷಗಳ ಹಿಂದೆ ಶ್ರೇಷ್ಠ ತರಗತಿಯ ರಾಜಮಾರ್ಗವಿದ್ದವೆಂದು ಸರ್ವಿಯಸ್ ಮತ್ತು ಇಸೊಡರಸ್ ಎಂಬ ಗ್ರೀಕ್ ಪ್ರಯಾಣಿಕರು ಬರೆದಿಟ್ಟಿರುವರು. ರೋಮನ್ ಜನರು ಕಾರ್ತೇಜ್ ಮಾರ್ಗರಚನೆಯನ್ನು ಅನುಕರಣೆ ಮಾಡಿದರು. ರೋಮಾಯರ ವಿಶಾಲ ಸಾಮ್ರಾಜ್ಯ ಬೆಳವಣಿಗೆಯು ಅವರು ಯುರೋಪ್ ಖಂಡದ ಉದ್ದಕ್ಕೂ ಹಾಕಿದ ಹೆದ್ದಾರಿಗಳೇ ಕಾರಣವೆನ್ನಬಹುದು. ಯಾಕೆಂದರೆ ಸುಗಮವಾದ ಸೈನ್ಯ ಚಲಾವಣೆಯು ಇವುಗಳಿಂದ ಸುಲಭವಾಯಿತು. ಇಂದಿನ ಆಧುನಿಕ ಮಾರ್ಗ ರಚನೆಯ ಕ್ರಮವು ರೋಮನ್ ಮಾರ್ಗಗಳ ಮಾದರಿಯ ಮೇಲೆ ಕಟ್ಟಲ್ಪಟ್ಟಿರುವುದೆಂದು ಹೇಳಿದರೆ ಆಶ್ಚರ್ಯವಾಗಬಹುದು. ರೋಮನ್ ಮಾರ್ಗಗಳ ಒಂದು ವಿಶೇಷತೆಯೆಂದರೆ ಅವುಗಳ ಉದ್ದ. ಅವುಗಳಲ್ಲಿ ಸುತ್ತಿಕೊಂಡು ಹೋಗುವ ಮಾರ್ಗಗಳೇ ಕಡಿಮೆ. ಆದರೂ ಕೆಲವು ಕಡೆಗಳಲ್ಲಿ ಅಪಾಯವಿಲ್ಲದೆ ವಾಹನಗಳನ್ನು ಅತೀ ವೇಗದಲ್ಲಿ ಓಡುವಾಗಲೂ ತಿರುಗಿಸಲಿಕ್ಕಾಗುವಂತೆ ಕ್ರಮೇಣವಾಗಿ ಬಗ್ಗಿ ಸುತ್ತುಹೋಗುವ ಮಾರ್ಗಗಳನ್ನೂ ಅವರು ಮಾಡಿರುವರು

ಕ್ರಿ. ಪೂ. ಮೂರನೇ ಶತಮಾನದಲ್ಲಿ ಹಿಂದೂ ಸಾಮ್ರಾಜ್ಯಾಧಿಪತಿಯಾಗಿ ಆಳಿದ ಚಂದ್ರಗುಪ್ತನ ಕಾಲದಲ್ಲಿ ಅಮೋಘವಾದ ಮಾರ್ಗಗಳಿದ್ದವೆಂದು ಇತಿಹಾಸ ಹೇಳುತ್ತದೆ. ಅವನ ಮಂತ್ರಿಯಾದ ಚಾಣಕ್ಯನು ತನ್ನ ಅರ್ಥಶಾಸ್ತ್ರವೆಂಬ ಗ್ರಂಥದಲ್ಲಿ ಮಾರ್ಗ ರಚನೆಯ ಸೂತ್ರಗಳನ್ನು ಕೊಟ್ಟಿರುವುದು ಸ್ವಾರಸ್ಯದ ವಿಷಯ. ಬೇರೆ ಬೇರೆ ಪ್ರಯಾಣ ಕ್ರಮಗಳಿಗನುಕೂಲಕ್ಕಾಗಿ ಕಟ್ಟಬೇಕಾದ ಮಾರ್ಗಗಳ ರಚನೆಯ ಕುರಿತು ಅವನ ಸೂಚನೆಗಳು ಉಪಯುಕ್ತವಾಗಿವೆ. "ರಥಚಲನೆಗೂ, ರಾಜಪ್ರಯಾಣಕ್ಕೂ ೬ ದಂಡ (೨೪ ಅಡಿ) ಗಳ ಅಗಲ ಮಾರ್ಗಬೇಕು. ಅದಕ್ಕೆ ಎರಡು ಆರತ್ನಿ (೩ ಅಡಿ) ಗಳ ಕಾಲುದಾರಿ (ಫೂಟ್ ಪಾತ್) ಇರಬೇಕು. ಇವು ದ್ವಿಪಾದ (ಮನುಷ್ಯ) ಚತುಷ್ಪಾದ (ದನ ಎಮ್ಮೆ) ಪ್ರಾಣಿಗಳ ಸಂಚಾರಕ್ಕೆ ಯೋಗ್ಯ ವಾಹನ ಮತ್ತು ರಾಜ ಸಂಚಾರದ ಮಾರ್ಗದಲ್ಲಿ ಜನರು ನಡೆದರೆ ದಂಡ ತೆರಬೇಕು" ಹೀಗೆ ಚಾಣಕ್ಯನು ಬರೆದಿರುವನು."

ಶುಕ್ರ ನೀತಿಯೆಂಬ ಗ್ರಂಥದಲ್ಲೂ ಬೀದಿಗಳ ಶಾಸ್ತ್ರವಿದೆ. "ಪಾದ್ಯ, ಅಥವಾ ಹೆಜ್ಜೆದಾರಿಯು ಅಗಲ ೩ ಮೊಳ. ವೀತಿ (ಬೀದಿ, ಓಣಿ,) ೪ ಮೊಳ. ಮಾರ್ಗ (ರಸ್ತೆ) ೧೦ ಮೊಳ ಮಾರ್ಗಗಳು ಆಮೆಯ ಬೆನ್ನಿನಂತೆ ಮಧ್ಯದಲ್ಲಿ ಎತ್ತರವಿದ್ದು ಬದಿಗಳಲ್ಲಿ ಇಳಿಜಾರಾಗಿರಬೇಕು. ಅಲ್ಲಲ್ಲಿ ಚಿಕ್ಕ ಸೇತುವೆಗಳಿರಬೇಕು. ಎರಡೂ ಬದಿಗಳಲ್ಲೂ ನೀರು ಹೋಗಲು ಚರಂಡಿಗಳಿರಬೇಕು." ಎಂದು ಅದರಲ್ಲಿ ಬರೆದಿರುತ್ತದೆ.

ಚಂದ್ರಗುಪ್ತನ ಕಾಲದಲ್ಲಿ ಮಾರ್ಗದ ಇಲಾಖೆಯೇ ಬೇರೆ ಇತ್ತು. ಹೆದ್ದಾರಿಗಳ ಮೇಲ್ನಿಗಾಗಿ ಪ್ರತ್ಯೇಕ ಅಧಿಕಾರಿಗಳೂ ಇದ್ದರು. ಮಾರ್ಗದ ಬದಿಗಳಲ್ಲಿ ನೀರು ಕೊಳಗಳೂ, ಬಾವಿಗಳೂ, ಛತ್ರಗಳೂ ಕಟ್ಟಲ್ಪಟ್ಟಿದ್ದವು. ಅವುಗಳನ್ನು ನೆನಸುವಾಗ ಈಗಿನ ಮಾರ್ಗ ರಚನಾ ಇಲಾಖೆಗಳು ಲಜ್ಜೆ ಪಟ್ಟುಕೊಳ್ಳಬೇಕು.

ಗಾಂಧಾರ ರಾಜನಿಂದ ಚಂದ್ರಗುಪ್ತನ ಆಸ್ಥಾನಕ್ಕೆ ಕಳುಹಲ್ಪಟ್ಟ ಸೆಲ್ಯೂಕೋಸ್ ನೆಂಬ ಗ್ರೀಕ್ ರಾಯಭಾರಿಯು "ರಾಜ್ಯದಲ್ಲಿ ೧೦೦೦೦ ಮೈಲುಗಳಷ್ಟು ದೂರದ ಮಾರ್ಗಗಳು" ಇತ್ತೆಂದು ತಿಳಿಸುತ್ತಾನೆ. ಈ ಲೆಕ್ಕವನ್ನು ಈರಾಸ್ಟೊತೆನಿಸ್ ನೆಂಬವನು ಸರಕಾರದ ಮಾರ್ಗ ಖಾತೆಯ ಲೆಖ್ಖ ಪುಸ್ತಕಗಳನ್ನು ಪರಿಶೋಧಿಸಿ ಹೇಳಿದ ಪ್ರಮಾಣವೆಂದು ಹೇಳುತ್ತಾನೆ.

ನಂತರ ಕ್ರಿ. ಪೂ. ಎರಡನೇ ಶತಮಾನದಲ್ಲಿ ಅಶೋಕನು ತನ್ನ ಪ್ರಜೆಗಳ ಸೌಕರ್ಯಕ್ಕಾಗಿ ಅಚ್ಚುಕಟ್ಟಾದ ಹೆದ್ದಾರಿಗಳನ್ನೂ ಮಾರ್ಗಗಳನ್ನೂ ರಚಿಸಿದ್ದನು. ಅವನ ಶಿಲಾಶಾಸನವೊಂದರಲ್ಲಿ "ದಾರಿಯ ಇಬ್ಬದಿಗಳಲ್ಲಿ ಮನುಷ್ಯರಿಗೂ ಜಾನುವಾರುಗಳಿಗೂ ನೆರಳು ಕೊಡುವ ಆಲದ ಮತ್ತು ಮಾವಿನ ಮರಗಳನ್ನು ನೆಡಲಾಗಿದೆ. ಒಂದುವರೆ ಮೈಲಿಗೊಂದರಂತೆ ಬಾವಿ ತೋಡಲ್ಪಟ್ಟಿದೆ. ಛತ್ರಗಳು ಕಟ್ಟಲ್ಪಟ್ಟಿವೆ." ಹೀಗೆಂದು ಬರೆದಿದೆ.

ಐದನೇ ಏಳನೇ ಶತಮಾನಗಳಲ್ಲಿ ಹಿಂದೂದೇಶಕ್ಕೆ ಬಂದಿದ್ದ ಫಾಹೀನ್

([illegible]ನೇ ಪುಟಕ್ಕೆ ಮುಂದುವರಿದೆ) —

ರವೀಂದ್ರರ ಕೊನೆಯ ದಿನಗಳು

[ಲೇಖಾಂಕ ೨]

[illegible] ಬಾಲ್ಯದಲ್ಲಿಯೇ [illegible] ಬರೆಯುತ್ತಿದ್ದ [illegible] ಚಿತ್ರ ಲೇಖ [illegible] ಗಮನವಿತ್ತರು ತನ್ನ ೭೦ ನೆಯ ವರ್ಷ ಪ್ರಾಯದಲ್ಲಿ ಹೊಸತೊಂದು [illegible] ವನ್ನು ಯಾವಾಗಲೂ [illegible] ಸಂಬಂಧಿಸುವ ವಿಚಾರ ನಾವು ಕೇಳು ವುದು ಸಾಧ್ಯವಿಲ್ಲ. ಆದರೆ ರಾಗೂರರು ಈ ಅವರ ವಯಸ್ಸಿನಲ್ಲಿ ಹೊಸ ಕಾರ್ಯ ಕ್ರಮಕ್ಕೆ ಕೈ ಹಚ್ಚಿದ ವಿಷಯವನ್ನು ವಿಚಾರಿಸಿದರೆ ಅವರಲ್ಲಿ ಆ ಪ್ರಾಯದ ಲ್ಲಿಯೂ ಚೈತನ್ಯವು ಬಹಳ ತುಂಬಿತ್ತೆಂಬು ದಕ್ಕೆ ಅದು ಸಾಕ್ಷಿಯಾಗಿದೆ. ಅವರು ಶರೀರದಲ್ಲಿ ಮುದುಕರಾಗುತ್ತಾ ಬಂದ ರೂ ಆತ್ಮಶಕ್ತಿಯಲ್ಲಿ ಅವರಿಗೆ ಮುದಿ ತನ ಬರಲಿಲ್ಲ. ೧೯೩೦ರಲ್ಲಿ ರಾಗೂರರು ಯುರೋಪಿಗೆ ತೆರಳಿದಾಗ ತನ್ನ ಹಲವು ಚಿತ್ರ ಕಲಾ ಕೃತಿಗಳನ್ನು ತನ್ನೊಡನೆ ಒಯ್ದಿದ್ದರು. ಅಲ್ಲಿನ ಹಲವು ಮಹಾ ನಗರಗಳಲ್ಲಿ ಪ್ರದರ್ಶನಗಳಲ್ಲಿ ಅವು ಪ್ರದರ್ಶಿತವಾಗಿ ಪ್ರಶಂಸಿತವಾದುವು

ಚಿತ್ರಕಲೆಯನ್ನು ರಾಗೂರರು ಪ್ರಾರಂಭಿಸಿದ ವಿಷಯವು ತುಂಬಾ ಮನೋರಂಜಕ ಕಥೆಯಾಗಿದೆ. ಕವಿತೆಗಳನ್ನು ಬರೆಯುತ್ತಿರುವಾಗ ಅಲ್ಲಲ್ಲಿ ತಪ್ಪು ತಿದ್ದಲು ಗೆರೆ ಅಡ್ಡ ನೀಟವಾಗಿ ಅವರು ಎಳೆಯುತ್ತಿದ್ದರು. ತನ್ನ ಲೇಖನಿಯಿಂದ ಅವರು ಆಡುತ್ತಿದ್ದರು. ತಾನು ಹೀಗೆ ಅಡ್ಡ ನೀಟವಾಗಿ ಎಳೆದ ಗೆರೆಗಳು ಯಾವುದಾದರೊಂದು ರೂಪವನ್ನು ಪಡೆವಂತೆ ಅವರು ಮಾಡುತ್ತಿದ್ದರು. ಅದು ಯಾವುದಾದರೊಂದು ವಿಚಿತ್ರ ಪಕ್ಷಿ. ವಿಚಿತ್ರ ಮೀನು ಆಗಿ ತೋರುತಿತ್ತು. ಒಮ್ಮೊಮ್ಮೆ ಅವರು ಹೀಗೆ ಇಡೀ ಪುಟಗಳಲ್ಲಿಯೂ ಗೆರೆ ಎಳೆಯುತ್ತಾ ಹೋಗುವರು, ಇವುಗಳಲ್ಲಿ ಎಷ್ಟೋ ಚಿತ್ರಗಳು ಬಹಳ ಮನೋಹರವಿವೆ. ಈ ಮೂಲಕವೇ ಅವರು ಮನುಷ್ಯ ರೂಪಗಳನ್ನು ಚಿತ್ರಿಸಿದರು. ರಾಗೂರರು ಮುಂದೆ ಮರ, ಪ್ರಕೃತಿ ನೋಟಗಳ ಚಿತ್ರಗಳನ್ನೂ ಮಾಡಿದರು, ಅವರ ಚಿತ್ರ ಕಲೆಯು ಯುರೋಪಿನ ಕಲಾವಂತರಿಂದಲೂ ಪ್ರಶಂಸಿಸಲ್ಪಟ್ಟವು.

೧೯೩೭ನೇ ಸಪ್ಟಂಬರದಲ್ಲಿ ರವೀಂದ್ರರು ಒಮ್ಮೆ ತೀವ್ರ ಅಸ್ವಸ್ಥರಾದರು; ಇನ್ನು ಮುಂದೆ ಅವರು ಆರೋಗ್ಯ ಹೊಂದುವುದು ಸಾಧ್ಯವಿಲ್ಲವೆಂಬೀ ಕೆಲ ಸಮಯ ಭೀತಿಯುಂಟಾಯಿತು. ಆದರೆ ಮುಂದೆ ಮೆಲ್ಲಗೆ ಅವರು ಆರೋಗ್ಯ ಹೊಂದಿ ತನ್ನ ಕಾರ್ಯವನ್ನು ಆರಂಭಿಸಿದರು. ಈ ಸಮಯದಲ್ಲಿ ರಾಗೂರರು 'ವಿಶ್ವ ಪರಿಚಯ" ಎಂಬ ಪುಸ್ತಕವೊಂದನ್ನು ಬರೆದರು. ಇದು ಸಾಮಾನ್ಯ ವಿಜ್ಞಾನದ ಕುರಿತು ಬರೆದ ಗ್ರಂಥ. ಬಾಲ್ಯದಿಂದಲೇ ಅವರು ಆಕಾಶ ಪ್ರಪಂಚದ ಅದ್ಭುತಗಳ ಕಡೆಗೆ ಹೆಚ್ಚಿನ ಗಮನವಿಟ್ಟವರು ವೈಜ್ಞಾನಿಕ ಅಭಿವೃದ್ಧಿಯನ್ನು ಅವರು ತಿಳಕೊಂಡು ಇದ್ದರು ಈ ವಿಶ್ವದ ಹುಟ್ಟು ಬೆಳವಣಿಗೆಯ ಇತಿಹಾಸವನ್ನು ತಿಳಿದು ಅವರು ಬೆರಗುತ್ತಿದ್ದರು ಈ ವಿಶ್ವದ ವಿಚಾರವನ್ನು ಮಾಡುವಾಗ ಅವರಿಗೆ ಬೆರಗು ಸಂತೋಷಗಳೆಲ್ಲವೂ ಆಗುತ್ತಿದ್ದವು. ಅವರ ಕವಿತೆಗಳಲ್ಲಿಯೂ ವಿಶ್ವದ ವಿಜ್ಞಾನದ ಕುರಿತು ಹಲವು ಕಡೆಗಳಲ್ಲಿ ಬೆರಗು ಸಂತಸಗಳು ವ್ಯಕ್ತ ಮಾಡಲ್ಪಟ್ಟಿವೆ ವಿಜ್ಞಾನ ಮತ್ತು ಕವಿತೆಗಳು ಬೇರೆ ಬೇರೆಯೆಂದೂ ಅವುಗಳಿಗೆ ಅನ್ಯೋನ್ಯ ಸಂಬಂಧವೇನೂ ಇಲ್ಲವೆಂದೂ ನಾವು ಹಲವರು ಭಾವಿಸುತ್ತೇವೆ ರಾಗೂರರು ಹಾಗೆ ತಿಳಿದಿರಲಿಲ್ಲ "ಸೌಂದರ್ಯವೆಂದರೆ ಸತ್ಯ, ಸತ್ಯವೆಂದರೆ ಸೌಂದರ್ಯ ಎಂಬೀ ಕೀಟ್ಸ್ ಕವಿಯ ಮಾತನ್ನು ಅವರು ಪೂರ್ಣ ಒಪ್ಪಿದರು

೧೯೩೮ರಲ್ಲಿ ರಾಗೂರರು ಕವಿತೆಗಳನ್ನು ಪ್ರಹಸನಗಳನ್ನು ಬರೆದರು ಬಂಗಾಳಿ ಭಾಷೆಗೆಂದು ಮೂನ್ಸಡಿ" ಎಂಬ ಗ್ರಂಥವೊಂದನ್ನು ಬರೆದರು ಯುವಕ ಲೇಖಕರ ಕೃತಿಗಳಲ್ಲಿ ಅವರು ತುಂಬಾ ಆಸಕ್ತಿ ತೋರಿಸಿ ಅವರಿಗೆ ಹಲವು ರೀತಿಗಳಿಂದ ನೆರವಾದರು, ಬಂಗಾಳೀ ಗದ್ಯ ಲೇಖಕರಲ್ಲಿ ಅಗಸ್ರರಾದ ಪಂಡಿತ ಈಶ್ವರ ಚಂದ್ರ ವಿದ್ಯಾಸಾಗರರ ಶತಮಾನೋತ್ಸವದೆಂದು ಅಧ್ಯಕ್ಷತೆ ವಹಿಸಲು ೧೯೩೭ರಲ್ಲಿ ಅವರ ಮಿಥ್ನಾಪುರಕೆ ಹೋಗಿದ್ದರು

೧೯೩೯ರಲ್ಲಿ ದೀನಬಂಧು ಆಂಡ್ರೂಸರು ತಮ್ಮ ದೀರ್ಘ ಕಾಲದ ಅಸ್ವಸ್ಥದಿಂದ ಗುಣ ಹೊಂದಿ ಶಾಂತಿನಿಕೇತನಕ್ಕೆ ಬಂದ ಕಾಲದಲ್ಲಿ ರಾಗೂರರಿಗೆ ಅಮಿತ ಆನಂದವಾಯಿತು. ಆದರೆ ಈ ಸಂತಸ ಬಹು ಕಾಲ ಉಳಿಯಲಿಲ್ಲ ಒಂದೆರಡು ತಿಂಗಳಲ್ಲಿಯೇ ರಾಗೂರರು ತೀರಾ ಅಸ್ವಸ್ಥರಾದರು ಔಷಧೋಪಚಾರಕ್ಕಾಗಿ ಅವರನ್ನು ಕಲ್ಕತ್ತೆಗೆ ಕರೆದೊಯ್ಯಲಾಯಿತು, ಮುಂದೆ ೧೯೪೦ರ ಎಪ್ರಿಲ್ ೫ರಂದು ಎಂಡ್ರೂಸರು ಕ್ರೈಸ್ತವಾಸಿಗಳಾದರು! ಇಡೀ ಭಾರತವೇ ಈ ದುಃಖದಿಂದ ತುಂಬಾ ತಳಮಳ ಗೊಂಡಿತು,

೧೯೪೦ರಲ್ಲಿ ಯುರೋಪಿನಿಂದ ಭೀಷಣ ವಾರ್ತೆ ಬಂತು, ಡೆನ್ಮಾರ್ಕ್ ನೋರ್ವೆ ಹಾಲ್ಲೆಂಡ್, ಬೆಲ್ಜಿಯಂ, ಫ್ರಾನ್ಸ್‌ಗಳ ಆಕ್ರಮಣ ಕೇಳಿ ಬಂತು. ಈ ಪ್ರಾಂತಗಳಲ್ಲಿ ರಾಗೂರರಿಗೆ ತುಂಬಾ ಮಂದಿ ಗೆಳೆಯರಿದ್ದರು; ಅವರ ಅವಸ್ಥೆಯೇನಾಯಿತೆಂದು ಯಾರಿಗೂ ತಿಳಿಯಲಾರದು. ಯುರೋಪಿನ ಪ್ರವಾಸದಲ್ಲಿ ತನಗೆ ಅಲ್ಲಿ ಕೊಟ್ಟ ಸ್ವಾಗತದಲ್ಲಿ ಬಹು ಸಂಖ್ಯಾತರು ಸಾಮಾನ್ಯ ಜನರೇ ಅವರೇ ಈ ಯುದ್ಧಗಳಲ್ಲಿ ಹೆಚ್ಚಿನ ಸಂಕಷ್ಟಗಳಿಗೆ ಗುರಿಯಾಗುವವರೆಂದು ರಾಗೂರರಿಗೆ ತಿಳಿದಿತ್ತು. ಚೀನದಿಂದಲೂ ಸಂಕಷ್ಟ ಸಾವಿರಗಳ ವಾರ್ತೆ ಬಂದಿತು. ಈ ದುಃಖ ದಿನಗಳ ವಾರ್ತೆಯಿಂದಾಗಿ ಅವರಿಗೆ ತನ್ನ ಬಾಲ್ಯದ ಕಡೆಗೆ ಮನಸ್ಸು ಒಮ್ಮೆ ಹರಿಯಿತು, ಹಾಗಾಗಿ ೧೯೪೦ರಲ್ಲಿ ಅವರು ತನ್ನ ಬಾಲ್ಯ ಸ್ಮೃತಿಗಳು ಎಂಬ ಗ್ರಂಥವೊಂದನ್ನು ಬರೆದರು.

ಈ ಸಂದರ್ಭದಲ್ಲಿ ರಾಗೂರರು ತೀವ್ರ ಅಸ್ವಸ್ಥರಾದರು. ಕೆಲಕಾಲದಲ್ಲಿ ಅವರು ಪುನ. ಆರೋಗ್ಯ ಹೊಂದಿದರೂ ಹಿಂದಿನ ಹಾಗೆ ಆರೋಗ್ಯ ಲಾಭ ಪಡೆಯಲಿಲ್ಲ. ಮುಂದೆ ಹೆಚ್ಚಿನ ಕಾಲವನ್ನು ಅವರು ಹಾಸಿಗೆಯಲ್ಲಿಯೇ ಕಳೆಯಬೇಕಾಗಿ ಬಂತು. ಹಾಸಿಗೆಯಲ್ಲಿಯೂ ಅವರು ಕವಿತೆಗಳನ್ನು ಹಾಗೂ ಕತೆಗಳನ್ನು ಬರೆಯುತ್ತಲೇ ಇದ್ದರು ಲೇಖನಿಯನ್ನು ಕೈಯಿಂದ ಹಿಡಿಯುವುದು ಆಗದಷ್ಟು ಅವರು ದುರ್ಬಲರಾದಾಗ ತನ್ನ ಕವಿತೆಗಳನ್ನು ಅವರು ಹೇಳಿ ಬರೆಸುತ್ತಿದ್ದರು.

೧೯೪೧ರ ಎಪ್ರಿಲಿನಲ್ಲಿ ಶಾಂತಿನಿಕೇತನವು ರಾಗೂರರ ೮೦ನೆಯ ಜಯಂತಿ ಆಚರಿಸಿತು ಅಂಥಾ ಸಂದರ್ಭದಲ್ಲಿ ಆ ಪ್ರಾಯದಲ್ಲಿ ರಾಗೂರರು ಜೀವಿಸಿದ್ದು ತಮ್ಮ ಗೆಳೆಯರಿಗೆ ಬಂಧುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ತನ್ನ ಬಾಯಿಯಿಂದಲೇ ಕೆಲವು ಮಾತುಗಳನ್ನು ಹೇಳುತ್ತಿದ್ದರಿಂದ ತುಂಬಾ ಆನಂದವುಂಟಾಗಿತ್ತು ಈ ಭಾಷಣವೇ ಜಗತ್ತಿಗೆ ಅವರ ಕೊನೆಯ ಸಂದೇಶ 'ನಾಗರಿಕತೆಯಲ್ಲಿ ವೈಷಮ್ಯ" ಎಂಬೀ ಲೇಖನವು ವಿಶ್ವಭಾರತಿ ಪತ್ರಿಕೆಯಲ್ಲಿ ಪ್ರಕಟವಾಗಿದೆ ಇಡೀ ಭಾರತವೇ ರವೀಂದ್ರರ ಈ ಜಯಂತಿ ಆಚರಿಸಿತು 'ವಿಶ್ವ ಭಾರತಿ' ಪತ್ರಿಕೆಯು ರಾಗೂರ ಸಂಚಿಕೆಯೊಂದನ್ನು ಹೊರಡಿಸಿತು ಅದರಲ್ಲಿ ಅವರ ಜೀವನ ಕೃತಿಗಳ ಪರಿಚಯ ಲೇಖನಗಳಿವೆ

ಮುಂದೆ ೧೯೪೧ರಲ್ಲಿ ರವೀಂದ್ರರ ಆರೋಗ್ಯ ಬಹಳ ಕಟ್ಟಿತು ಜುಲಾಯಿಯಲ್ಲಿ ರವೀಂದ್ರರನ್ನು ಕಲ್ಕತ್ತೆಕ್ಕೆ ಕರಕೊಂಡು ಹೋದರು ಇಡೀ ಆಶ್ರಮವೇ ಅವರಿಗೆ ಕೊನೆಯ ವಂದನೆ ಸಲ್ಲಿಸಿತು ಅಲ್ಲಿ ಬೇಕಾದ ಶುಶ್ರೂಷೆ ಮಾಡಲಾಯಿತು ಆದರೆ ರಾಗೂರರು ೧೯೪೧ರ ಆಗಸ್ಟ್ ೭ರಂದು ತಾನು ಹುಟ್ಟಿದ ತನ್ನ ಮನೆತನದ ಮನೆಯಲ್ಲಿಯೇ ಶಾಂತರಾಗಿ ಪ್ರಾಣ ಬಿಟ್ಟರು. ಗಂಗಾನದಿಯ ನಿಮ್ತೊಲಾ ಘಾಟಿನಲ್ಲಿ ಅದೇ ದಿನ ಅವರ ಅಂತ್ಯಕ್ರಿಯೆ ನಡೆಯಿತು ಹೀಗೆ ರಾಗೂರರ ವಿಶ್ವದ ಮಹಾ ಕವಿಗಳೊಬ್ಬರ ಜೀವನ ಕೊನೆ ಗೊಂಡಿತು

ಕಯ್ಯಾರ—

WANTED

Applications are invited from (1) Higher Elementary and Secondary trained men candidates belonging to Christian & scheduled class communities

(2) Higher Elementary and Secondary trained women candidates belonging to Brahmin, muslim and scheduled class communities for appointment as teachers in Elementary schools under this District Board with particulars regarding community, date of birth qualifications etc The application should accompany a money order receipt or a treasury receipt for Re 0—4—0 (nil and annas four only) in support of the payment of application fee to the District Board funds. The applications should reach the under signed on or before 25th September 1944

(Sd) A. Laxminarayana Rao,
President District Board,
S. K Mangalore.

ಯುದ್ಧದ ಪರಿಸ್ಥಿತಿ

ಜರ್ಮನ ಪ್ರಾಬಲ್ಯವು ಕರಗುತ್ತಿದೆ

ಜಪಾನಿನಲ್ಲಿ ಗೊಂದಲ

ಜರ್ಮನರು ಎಲ್ಲೆಡೆಗಳಲ್ಲೂ ಹಿಂತಿರುಗುವುದರಲ್ಲಿ ಉದ್ಯುಕ್ತರಾಗಿದ್ದು, ಮಿತ್ರರು ಅವರನ್ನು ಬಹಳ ವೇಗದಿಂದ ಬೆನ್ನಟ್ಟಿ ಹೋಗುತ್ತಿರುವರು. ಪಶ್ಚಿಮ ರಣರಂಗದಲ್ಲಿ ಕಳೆದ ವಾರಾಂತ್ಯದಲ್ಲಿ ಮಿತ್ರರು, ಜರ್ಮನರ ವಶವಿದ್ದ ಬ್ರುಸೆಲ್ಸ್, ಅಂಟವರ್ಪ್, ಘೆಂಟ್, ಡಿಪ್ಪೆ, ಅಬೆವಿಲೆ, ವ್ಹರ್ಡನ್, ಮೊದಲಾದ ಪ್ರಾಮುಖ್ಯ ಬಂದರು, ನಗರಗಳನ್ನು ತಮ್ಮ ವಶಮಾಡಿಕೊಂಡು, ಅತಿ ವೇಗದಿಂದ ಜರ್ಮನಿಯ ಕಡೆಗೆ ನುಗ್ಗುತ್ತಿರುವರು. ಮೆಜಿನೊ ವ್ಯೂಹವನ್ನು ಒಂದು ಕಡೆಯಲ್ಲಿ ಭೇದಿಸಿ ಮಿತ್ರರು ಜರ್ಮನಿಯ ಒಳನುಗ್ಗಿ ಜರ್ಮನ್ ನೆಲದ ಮೇಲೆ ಹೋರಾಡುತ್ತಿರುವರೆಂದು ವಾರ್ತೆಯು ಬಂದಿರುತ್ತದೆ. ಮಿತ್ರರ ಅಭಿಕ್ರಮದ ವೇಗವು, ಹಿಟ್ಲರನ ಹಿಂದಿನ ಅಭಿಕ್ರಮದ ವೇಗಗಿಂತ ಹೆಚ್ಚಾಗಿರುವುದು, ಎಲ್ಲೆಲ್ಲೂ ಕಾಣಿಸುತ್ತದೆ. ಜರ್ಮನಿಯು ಅತ್ಯಂತ ಬುದ್ಧಿ, ಚಾತುರ್ಯ ವೆಚ್ಚದಿಂದ ಕಟ್ಟಿಸಿದ ಸಿಗ್ ಫ್ರಿಡ್ ವ್ಯೂಹವು ಮಿತ್ರರಿಗೆ ಒಂದು ಮಹಾ ತಡೆಯಾಗಿದ್ದರೂ, ಅದನ್ನು ಖಂಡಿಸಿ ಜರ್ಮನರನ್ನು ರ್‍ಹೈನ್ ನದಿಯ ದಂಡೆಯಲ್ಲಿ ಇದಿರಾಡುವ ವಿಶ್ವಾಸವು ಮಿತ್ರರಲ್ಲಿರುವುದು. ಸಮಸ್ತ ಇರೊಪವೆ ಹಿಟ್ಲರನ 'ಕೋಟೆಯಂತಿದ್ದು, ಈಗ ಸಂಕೋಚದವಾಗಿ ಇಂದು ಜರ್ಮನಿಯು ಮಾತ್ರ ಅವನ ದುರ್ಗವಾಗಿನಿಂತಿರುವುದು

ಸಿಗ್‌ಫ್ರಿಡ್ ಲ್ಯಾನಿನ ಹತ್ತಿರ ಜರ್ಮನರು ಮಿತ್ರರಿಗೆ ಅತ್ಯಂತ ಬಲವಾದ ತಡೆಯನ್ನು ಕೊಡಬಹುದೆಂದು ನಿರೀಕ್ಷೆಯಿದೆ. ಈ ಸಿಗ್‌ಫ್ರಿಡ್ ವ್ಯೂಹವು ಕೆಲವೆಡೆ ಮೂವತ್ತು ಮೈಲು ಒಳಗಿದ್ದು ಹರಡಿಕೊಂಡಿದೆ. ಮಿತ್ರರು, ಹಾಲೆಂಡು ಮತ್ತು ಬೆಲ್ಜಿಯಮ್ ಕಡೆಗಳಿಂದ ಜರ್ಮನಿಯ ಮೇಲೆ ದಾಳಿ ಹೂಡಲು, ಪ್ರಚಂಡ ಸಿದ್ಧತೆಗಳನ್ನು ಮಾಡಿರುವರಾಗಿ ವಾರ್ತೆಯಿದೆ ಆದರೆ ಜರ್ಮನರಿಗೆ ಪಶ್ಚಿಮರಂಗದಲ್ಲಿ ಅನೇಕ ಸೋಲು ಉಂಟಾದಾಗ್ಯೂ, ಹಿಟ್ಲರನ ಮನಸ್ಥೈರ್ಯವು, ಅಥವಾ ಜರ್ಮನ ಪ್ರಜೆಗಳು ಭೀತಿಗೊಂಡ ಕುರಿತು, ಯಾವತ್ತೂ ವಾರ್ತೆಗಳು ಬಂದಿಲ್ಲ ಪಶ್ಚಿಮ ರಣರಂಗದಲ್ಲಿ ಜರ್ಮನರ ವಿಮಾನಗಳು ಅತಿಕಡಿಮೆ ಸಂಖ್ಯೆಯಲ್ಲಿ ಉಪಯೋಗವಾದುದನ್ನು ನೋಡಿದರೆ, ಹಿಟ್ಲರನು ತನ್ನ ಸಮಸ್ತ ಬಲವನ್ನು ಸ್ವದೇಶ ರಕ್ಷಣೆಗಾಗಿ, ಹಿಂತೆಗೆದಿರುವನಾಗಿ ಭಾವನೆಯು ಮಿತ್ರರಲ್ಲಿ ಉಂಟಾಗಿರುತ್ತದೆ. ಜರ್ಮನರಿಗ ರಷ್ಯಾದಲ್ಲೂ, ಫ್ರಾನ್ಸಿನಲ್ಲೂ, ಅಪಾರವಾದ ನಷ್ಟ ಸಂಭವಿಸಿದಾಗ್ಯೂ, ಈಗ ಸ್ವದೇಶ ರಕ್ಷಣೆಗಾಗಿ, ಅವರಲ್ಲಿ ಬಲವು ಸಾಕಷ್ಟುಯಿರಬಹುದೆಂದು ಊಹೆಗಳಿವೆ ಮಿತ್ರರನ್ನು ಅವರು ತಮ್ಮ ಗಡಿಯಲ್ಲಿ ಬಹಳ ದೀರ್ಘ ಸಮಯ ತಡೆದಿಡ ಬಹುದೆಂದೂ, ನಂತರ ಕ್ರಮೇಣ ಮಿತ್ರರನ್ನು ಹಿಂದೆ ಓಡಿಸುವುದಲ್ಲದೆ, ಇರೋಪದ ಆಕ್ರಮಣ ಅವರು ಮತ್ತೊಮ್ಮೆ ಪ್ರಾರಂಭಿಸಬಹುದೆಂದೂ, ಕೆಲವರ ಊಹ. ಆದರೆ ಮಿತ್ರರು ಇವತ್ತಿಗೆ ಅನೇಕ ಕಾಲದಿಂದ ನಡೆಯಿಸುತ್ತಿರುವ ವಿಮಾನ ಹಲ್ಲೆಗಳಿಂದ ಜರ್ಮನರ ಅನೇಕ ಕಾಮಗಾರಿ ಕ್ಷೇತ್ರಗಳು ನೆಲಸಮವಾಗಿದ್ದು, ಅವರಿಗೆ ಇದೊಂದು ಮಹಾ ಅನಾನುಕೂಲತೆಯಾಗಿ ನಿಂತದೆ. ಜರ್ಮನಿಯ ಸುತ್ತಲಿರುವುದು ನೆಲವೆ, ಆದ್ದುದರಿಂದ ಬ್ರಿಟನಿಗೆ ಹಿಂದೆ ಜರ್ಮನರ ವಿರೋಧವಾಗಿ ದೊರಿತ ಜಲ ರಕ್ಷಣೆಯೂ, ಇವರಿಗೆ ಇಲ್ಲದಾಗಿದೆ. ಯುದ್ಧ ಯುತ್ನಗಳನ್ನು ಮಾಡಲು ಅನುಕೂಲಿಸುವ ಕೈಗಾರಿಕೆಗಳಿಗೆ ಬೇಕಾದ ಸಾಮುಗ್ರಿ, ಇತ್ಯಾದಿ ಜರ್ಮನರಿಗೆ ದೊರಕುವುದೆ ವಿರಳವಾಗುತ್ತಾ ಬಂದಿದೆ. ಒಂದು ವೇಳೆ ಜರ್ಮನಿಯ ಬಲವು ಹಿಂದಿನದೆಯಾಗಿ ಇದ್ದರೂ, ಸಂಯುಕ್ತ ರಾಷ್ಟ್ರಗಳ ಮಹತ್ವ ಬಲಗಳ ಮಿಲನದ ಎದುರು, ಅದಕ್ಕೆ ಉಳಿಗಾಲವಿಲ್ಲವೆಂದೆ ಹೇಳಬೇಕಾಗಿದೆ. ಇನ್ನೆರಡು ವಾರಗಳಲ್ಲಿ ಜರ್ಮನಿಯ ಪಶ್ಚಿಮ ಗಡಿಯಲ್ಲಿಯುದ್ಧದ ಮಹಾ ಜ್ವಾಲೆಯು ಏಳಬಹುದೆಂದು, ಧೈರ್ಯದಿಂದ ಹೇಳಬಹುದಾಗಿದೆ.

ಇತ್ತ ಪೂರ್ವರಂಗದಲ್ಲಿ ಪಶ್ಚಿಮರಂಗದಲ್ಲಿ ನಡೆದಷ್ಟು ಮಹತ್ವಾದ ಘಟಣೆಗಳು ನಡೆದಿಲ್ಲವಾದರೂ, ಅಲ್ಲಿಯೂ ಜರ್ಮನ್ ಹಿಡಿತಕ್ಕೆ ಕತ್ತರಿಬರುವ ಅನೇಕ ವಿಷಯಗಳು ನಡೆದುಬಿಟ್ಟಿವೆ ರುಮೇನಿಯವು ರಷ್ಯನರ ಕೈಸೇರಿದೆ ಅದರ ರಾಜಧಾನಿಯಲ್ಲಿ ಕೆಂಪು ಸೇನೆಯು ಶಿಬಿರಕಟ್ಟಿದೆ. ಅಲ್ಲಿಂದ ಮುಂದಕ್ಕೆ, ಕಾರ್ಪೆಥಿಯನ್ ಕಣಿವೆ ಮಾರ್ಗವಾಗಿ ಮುಂದುವರಿದು, ಕೆಂಪು ಸೇನೆಯು ಜೆಕೊಸ್ಲೊವೆಕಿಯವನ್ನು ನುಗ್ಗುವ ಸಮಯ, ಅತಿ ಸಮೀಪದಲ್ಲಿದೆ ಎಂದು ಪರಿಗಣಿಸಲ್ಪಟ್ಟಿದೆ ಇತ್ತ ಪೂರ್ವ ಪ್ರಷ್ಯಿಯಾದಲ್ಲಿ ಜರ್ಮನರ ಪ್ರತಿಭಟನೆಯು ಜೋರಾಗಿದ್ದರೂ ಅಲ್ಲಿನ ಒಂದು ನಗರವು ರಷ್ಯನರ ವಶವಾಗಿರುವುದು ಆದರೆ ಪೂರ್ವ ಪ್ರಷ್ಯಿಯಾದಲ್ಲಿ ಜರ್ಮನರ ಸ್ಥಿತಿಯು ನೆಟ್ಟಗಿಲ್ಲವಾಗಿಯೂ, ಅಲ್ಲೇನೂ ರಾಜಕೀಯ ಗೊಂದಲ ಉಂಟಾಗಿರುವ ವಾರ್ತೆಗಳುಹರಡಿವೆ ಅಜೇಯವಾದ ಕೆಂಪು ಸೇನೆಯು ಪೂರ್ವ ಪ್ರಷ್ಯಿಯಾದ ಗಡಿಗೆ ಬಂದು, ನಾಲ್ಕು ವಾರಗಳ ಸಮಯ ದಾಟಿದ್ದರೂ ಅದು ಜರ್ಮನಿಯ ಒಳಗೆ ಪೂರ್ಣನಗ್ಗದೆ ಇದ್ದುದನ್ನು ನೋಡಿದರೆ, ಜರ್ಮನಲ್ಲಿ ತಡೆಯುವ ಶಕ್ತಿಯು ಇನ್ನೂ ಅಧಿಕವಾಗಿರಬಹುದೆಂಬ ನಂಬಿಕೆಗೆ ಕಾರಣವಾಗುತ್ತದೆ ಕೆಂಪು ಸೇನೆಯು ತಮ್ಮ ಚಟುವಟಿಕೆಗಳನ್ನು ಕೆಲ ದಿವಸಗಳ ಮಟ್ಟಿಗೆ ನಿಲ್ಲಿಸಿದುದು, ದಂಡುಗಳ ಪುನರ್ ವ್ಯವಸ್ಥೆಗೆಂದೂ, ತಿಳಿದು ಬಂದಿದ್ದರೂ, ಹಿಟ್ಲರನು ಸ್ಟಾಲೀನನೊಡನೆ ಸಂಧಾನಯತ್ನಗಳನ್ನು ಮಾಡುತ್ತಿರುವುದು, ರಷ್ಯನರ ಮೇಲಿನ ಅಚೇತನಕ್ಕೆ ಕಾರಣವಾಗಿರಬಹುದೆಂದು ಕೆಲವರ ಊಹೆ. ರಷ್ಯ ಜರ್ಮನಿಯೊಳಗೆ ಸಂಧಾನ ಮಾಡಲು ಜಪಾನಿನ ವಿಶ್ವಯತ್ನಗಳು ನಡೆಯುತ್ತಿವೆಯಾಗಿ ಬಲವಾದ ವಾರ್ತೆಗಳು ಬಂದಿವೆ. ಆದರೆ ಹಿಟ್ಲರರೊಡನೆ ಯಾವತ್ತೂ ಸಂಧಾನಗಳನ್ನು ಮಾಡುವುದಿಲ್ಲವಾಗಿ ಸ್ಟಾಲಿನನ ವಚನವು ಇರುವುದರಿಂದ, ಮೇಲಿನ ವಾರ್ತೆಯು ನಂಬತಕ್ಕದಲ್ಲವೆಂದು ತಿಳಿಯಬೇಕಾಗಿದೆ

ಹಿಟ್ಲರನು ತನ್ನ ಆಧಾರಕ್ಕೆಂದು ಬಲತ್ಕಾರದಿಂದ ಕಟ್ಟಿಕೊಂಡ ಸಾಮಂತ ರಾಷ್ಟ್ರಗಳು, ಒಂದರ ಹಿಂದೆ ಒಂದು ಅವನನ್ನೀಗ ತ್ಯಜಿಸುವುದರಲ್ಲಿ ತೊಡಗಿವೆ. ಫಿನ್‌ಲೆಂಡ್, ಬಲ್ಗೇರಿಯಾ, ಮೊನ್ನಿನ ತನಕ ಜರ್ಮನಿಯ ಪರವಾಗಿ ಹೋರಾಡಿ ಕೊನೆಗೆ ಮಿತ್ರರಿಗೆ ಶರಣುಬಂದಿವೆ ಫಿನ್‌ಲೆಂಡು ರಷ್ಯದೊಡನೆ ಸಂಧಾನ ಮಾಡಿದುದರಿಂದ, ಬಾಲ್ಟಿಕದ ಅನೇಕ ಪ್ರಾಮುಖ್ಯ ಬಂದರುಗಳು ಜರ್ಮನ್ ಪ್ರಭಾವದಿಂದ ಹೊರಗಾಗಿ ರಷ್ಯನರಿಗೆ ತೆರೆಯಲ್ಪಟ್ಟಿವೆ ಇದರಿಂದ ಉತ್ತರ ಸಮುದ್ರದ ಹಾದಿಯಾಗಿ ರಷ್ಯಕ್ಕೆ ಬೇಕಾದ ಯುದ್ಧ ಸಾಮಗ್ರಿಗಳನ್ನು ಹೊರಗಿನಿಂದ ದೊರಕಿಸಿಕೊಳ್ಳಲು, ಒಂದು ಹಾದಿ ತೆರೆದಂತಾಗಿದೆ ಇಷ್ಟರ ತನಕ ತನಗೆ ಲಾಭವಾಗುವ ಕಡೆ ಧೋರಣವನ್ನುವಹಿಸಿ, ಯಾವಾಗಲೂ ಗೆದ್ದವರ ಕಡೆಗೆನೆ ಇರುವ ಬಲ್ಗೇರಿಯವು ರಷ್ಯದ ಬಲತ್ಕಾರದ ಎದುರು ತಾಟಸ್ಥ್ಯವನ್ನು ತೊರೆದು, ಜರ್ಮನಿಗೆ ವಿರೋಧವಾಗಿ ಹೋರಾಡಬೇಕಾಗಿಯದೆ ಬಾಲ್ಕನ್ ಪ್ರದೇಶದಲ್ಲಿ ಜರ್ಮನಿಯ ಹಿಡಿತವು ಸಡಿಲಾದುದರಿಂದಲೆ ಈ ವರೆಗೆ ಬ್ಲೆಕ್ ಸಿಯಲ್ಲಿರುವ ಜರ್ಮನ್ ನೌಕಾಪಡೆಯು ಪ್ರಾಣತ್ಯಾಗ ಮಾಡಿಕೊಂಡಿತು ಅಂದರೆ, ಎಲ್ಲಾ ಕಡೆಗಳಿಂದಲೂ ವೈರಿಗಳು, ಜರ್ಮನಿಯು ಸುತ್ತ ವ್ಯೂಹಹಾಕಿ, ಜರ್ಮನಿಯ ಒಳನುಗ್ಗುವ ಸ್ಥಿತಿಯಲ್ಲಿರುವರು

ಇಟೆಲಿಯಲ್ಲಿ ಮಿತ್ರರು ಇನ್ನೂ ಪ್ರಗತಿಯನ್ನು ಹೊಂದಿರುವರು ಜರ್ಮನರು ಇಟೆಲಿಯಿಂದ ಪೂರ್ಣವಾಗಿ ಹೊರಗಟ್ಟಲ್ಪಟ್ಟರೆಂದೆ ಈಗ ಹೇಳಬಹುದು.

ಬರ್ಮಾದಲ್ಲಿ ಮಿತ್ರರಸೇನೆಯು ಮಹತ್ವದ ಅನೇಕ ನಗರಗಳನ್ನು ಹಿಡಿದಿರುವರಾಗಿ ವಾರ್ತೆಗಳು ಬಂದಿರುತ್ತವೆ. ಬರ್ಮಾದಲ್ಲಿ ಅಮೇರಿಕನ್ ದಂಡುಗಳು ಅತ್ಯಂತ ಯಶಸ್ವಿನಿಂದ ಕಾರ್ಯ ನಿರ್ವಹಿಸುತ್ತಿವೆಯಾಗಿಯೂ ಭಾರತೀಯ ಮತ್ತು ಬ್ರಿಟಿಷ್ ದಂಡುಗಳು, ಬಹಳ ಸಾಹಸದಿಂದ ಮುನ್ನಡೆಯುತ್ತಿವೆಯಾಗಿಯೂ, ಇವರಿಗೆ ಅನುಕೂಲವಾಗುವ ರೀತ್ಯಾ, ಚಿಯಾಂಗರ ಚೀನಿಯ ಸೇನೆಯು, ಬರ್ಮಾದ ಕಡೆಗೆ ಚೀನಾದಲ್ಲಿ ಅನೇಕ ಮೈಲು ಮುಂದೆ ನಡೆದಿರುವುದಾಗಿಯೂ ತಿಳಿದುಬರುತ್ತದೆ ಬರ್ಮಾ ರಸ್ತೆಯನ್ನು ಪುನಃ ತಮ್ಮ ಅಂಕಿತದಲ್ಲಿ ತೆಗೆದುಕೊಳ್ಳುವುದೆ ಮಿತ್ರರ ಉದ್ದೇಶವಾಗಿರುತ್ತದೆ. ಮಿತ್ರರು ಹೀಗೆ ವಿಜಯಿಗಳಾಗುವುದರಿಂದ, ಜಪಾನಿನಲ್ಲಿ ಹೆಚ್ಚಿನ ಚೇತನಾಸ್ಥಿತಿಯು ಉಂಟಾಗಿದೆ ಮಾತ್ರವಲ್ಲ, ಅಲ್ಲಿ ಗೊಂದಲದ ಸ್ಥಿತಿಯು ಉಂಟಾಗಿರುತ್ತದೆ ತಾವು ಈ ಮೊದಲು ಹಿಡಿದ ಈಸ್ಟ್ ಇಂಡಿಸ್ ದ್ವಿಪಕ್ಕೆ ಸ್ವಾತಂತ್ರ್ಯವನ್ನು ಕೊಡುವೆವಾಗಿ ಸಾರಿರುವರು ಆದರೆ ಜಪಾನಿನ ಶಕ್ತಿ ಎಷ್ಟಿರುವುದು? ಅದರೊಡನೆ ಇರುವ ಸೈನ್ಯ ಸಂಗ್ರಹವೆಷ್ಟು? ಅವರ ಕೈಗಾರಿಕೆಗಳು ಯಾವ ಸ್ಥಿತಿಯಲ್ಲಿವೆ? ಮೊದಲಾದವುಗಳ ಕುರಿತು ಸರಿಯಾದ ಅಂದಾಜು ಯಾರಿಗೂ ಇಷ್ಟರ ತನಕ ಆಗಿಲ್ಲ ಮಿತ್ರರು ಅಮೇರಿಕದ ಅಧಿನಾಯಕತ್ವದಲ್ಲಿ ಜಪಾನಿನ ಮೇಲೆ ಹಾಯ್ದು ಹೋಗಿ, ಜಪಾನನ್ನು ಪೂರ್ಣ ಅಡಗಿಸುವ ಸ್ಥಿತಿಯು ಉಂಟಾಗುವುದೆಂದೂ ಪ್ರತೀಕ್ಷೆಗಳು ಇದ್ದರೂ ಜಪಾನರು ಅತ್ಯಂತ ಪರಿಶಮ ವಹಿಸಿಒಂದು ಶತಮಾನ ಕಾಲ ಈ ಯುದ್ಧವನ್ನು ನಡೆಸಬಹುದೆಂದೂ, ಒಂದು ಆಧಾರರಹಿತ ವಾರ್ತೆಯೂ ಇರುವುದು

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ

ಮಕ್ಕಳಿಗೂ, ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ

ದೊರಕುವ ಸ್ಥಳ - ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S. Kanara. (1906.

Statement of affairs as on 30th April, 1944.

LIABILITIES	Rs As Ps	ASSETS	Rs As Ps.
1 Paid up Capital	14 14 580- 0- 0	1 Office Bulgings safes furniture, books, etc	91 792- 3- 6
2 Reserves	4 12 548- 3 1	2 Advances	53,58,139- 7- 0
3 Due to Bankers	40 499- 5- 8	3. Investments on Govt Securities etc	23 94,472-13-10
4 Deposits	78,79,479- 2- 1	4 Bills for collection	4 55,475- 2- 5
5, Bills for collection	4,55 475- 2- 5	5. Other Assets	91,527- 3- 4
6 Branch Adjustments	1,99,631- 8-10	6. Cash on hand and with Bankers in Current A/cs	23,75 816-10-10
7. Other liabilities and undisbursed profits	3 65 010- 2-10		
Total	1,07,67,223-8-11	Total	1,07,67,223- 8-11

ಸ್ವದೇಶಾಭಿಮಾನಿ

ತಾರೀಖು 15—9—1944

ವರಪ್ರಧಾನ

ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ಮಿ. ವಿಲಿಯಂ ಪಿಲಿಪ್ಸರು ಭಾರತದ ಸಮಸ್ಯೆಯ ಮೇಲೆ ಕಳುಹಿಸಿದ ಗುಪ್ತವರದಿಯು ಪ್ರಕಟವಾದಂದಿನಿಂದ ರಾಜಕೀಯ ಕೇಂದ್ರಗಳಲ್ಲಿ ಬಿರುಗಾಳಿಯೆದ್ದಂತಾಗಿ ಅದರ ಅಲ್ಲಕಲ್ಲೋಲವು ಇನ್ನೂ ಅವ್ಯಾಹತವಾಗಿ ಮುಂದುವರಿಯುತ್ತಿದೆ ಪಿಲಿಪ್ಸರು ಅಧ್ಯಕ್ಷ ರೂಸ್‌ವೆಲ್ಟರಿಂದ ಭಾರತಕ್ಕೆ ಕಳುಹಲ್ಪಟ್ಟ ಸ್ವಂತ ಪ್ರತಿನಿಧಿಗಳು. ಅವರು ತಮ್ಮ ವರದಿಯಲ್ಲಿ ಹದಗೆಡುತ್ತಿರುವ ಭಾರತದ ಪರಿಸ್ಥಿತಿಯನ್ನು ವರ್ಣಿಸಿ ಅದನ್ನು ನಿವಾರಿಸಲು ಅಮೆರಿಕವು ಕೈಕೊಳ್ಳಬೇಕಾದ ಧೋರಣೆಯ ಅವಶ್ಯಕತೆಯನ್ನು ಅದರಲ್ಲಿ ಒತ್ತಿ ಸೂಚಿಸಿರುವರು

"ಭಾರತದಲ್ಲಿರುವ ನಮ್ಮ ಸೈನ್ಯಗಳ ಸ್ಥಾನಮಾನ ಪರಿಸ್ಥಿತಿಯಿಂದ ನಮಗೆ ಅಲ್ಲಿನ ಸಂಗತಿಗಳಲ್ಲಿ ಕೈಹಾಕಲು ಹಕ್ಕಿರಬೇಕೆಂದು ನನಗೆ ಖಂಡಿತ ಮನವರಿಕೆಯಾಗಿದೆ" ಎಂದು ಅವರು ಬರೆದಿರುವರು. ಒಂದು ಕಡೆಯಲ್ಲಿ ಅವರು ಹೀಗೆ ಬರೆದಿದ್ದಾರೆ—"ಈ ಯುದ್ಧವು ಸರ್ವಾಧಿಕಾರಿ ಮತ್ತು ಸಾಮ್ರಾಜ್ಯಶಾಹಿ ಪ್ರಭುತ್ವಗಳೊಳಗೆ ಉಂಟಾದುದೆಂದು ಆಸ್ಯದ ಜನರು ನಂಬಿರುವರು. ನನ್ನ ಈ ಅಭಿಪ್ರಾಯಕ್ಕೆ ಅನೇಕ ರಾಜತಂತ್ರ ಪ್ರವೀಣರ, ಸೈನ್ಯ ನೀತಿಜ್ಞರ ಬೆಂಬಲವಿದೆ ಬ್ರಿಟನ್ನು ತನ್ನದೊಂದು ಉದಾರವಾದ ಧೋರಣೆಯಿಂದ ಈ ಅಸಹ್ಯ ವಾತಾವರಣವನ್ನು ಬದಲಾಯಿಸಬಹುದು"

ಹೀಗೆ ತಮಗೆ ತೋರಿದ್ದನ್ನು, ತಾವು ತಿಳಕೊಂಡು ಅಭಿಪ್ರಾಯಪಟ್ಟುದ್ದನ್ನು ಧೈರ್ಯವಾಗಿ ಹೇಳಿದುದಕ್ಕೆ ಬ್ರಿಟನು ಫಿಲಿಪ್ಸರನ್ನು ಅಧಿಕ ಪ್ರಸಂಗಿಗಳೆಂದು ತಿರಸ್ಕರಿಸಿದ್ದು ಸಮಂಜಸವಲ್ಲ

"ನಮ್ಮ ಹತ್ತಿರ ಬಾರದಿರಿ" ಎಂಬ ಎಚ್ಚರಿಕೆಯನ್ನು ಬ್ರಿಟನ್ನು ಹಿಂದೆ ಅನೇಕರಿಗೆ ಕೊಟ್ಟಿದೆ. ಈ ಸಲ ಅದು ಪಿಲಿಪ್ಸರಿಗೆ ದೊರೆಯಿತು ಅಪ್ರತ್ಯಕ್ಷವಾಗಿ ಅದು ಅಮೆರಿಕಕ್ಕೇ ಕೊಟ್ಟ ಎಚ್ಚರಿಕೆಯೆಂದು ಬೇರೆ ಹೇಳುವ ಅವಶ್ಯಕತೆ ಇಲ್ಲ ತನ್ನ ಸಾಮ್ರಾಜ್ಯ ವಸಾಹತುಗಳ ಧೋರಣೆಯಲ್ಲಿ ಬ್ರಿಟನ್ನು ಯಾರ ಕೈವಾಡವನ್ನು ಸಹಿಸಲಾರದೆಂದುದಕ್ಕೆ ಇದೊಂದು ಸ್ಪಷ್ಟ ನಿದರ್ಶನ.

ಫಿಲಿಪ್ಸರ ಪತ್ರದಿಂದುಂಟಾದ ತರ್ಕವಿತರ್ಕಗಳಿಂದ ಯಾವ ಲಾಭವಿಲ್ಲವಾದರೂ ಒಂದು ಒಳಿತಿದೆ ಅಮೆರಿಕದಲ್ಲಿ ಬ್ರಿಟಿಷರಿಂದ ಕಳುಹಲ್ಪಡುವ ಭಾರತ ಕಲ್ಯಾಣದ ಪ್ರಚಾರವು ಬರೇ ಪ್ರಚಾರ ಮಾತ್ರವೆಂದು ಅಲ್ಲಿನ ಜನರಿಗೆ ತಿಳಿಯಬಹುದು

ಕೆಂಪುಸೇನೆಯು ಪೂರ್ವ ಪ್ರಶ್ಯಿಯಾ ಗಡಿಯಲ್ಲಿ ಅನೇಕ ಕಡೆಗಳಲ್ಲಿ ಜರ್ಮನರ ತಡೆಯನ್ನು ಭೇದಿಸಿ ಒಳನಡೆದಿದೆಯಾಗಿ ವಾರ್ತೆಯು ಬಂದಿರುತ್ತದೆ.

ಒಪ್ಪಂದವಾಗಲೇಬೇಕೆಂಬ ದೃಢ ನಿರ್ಧಾರ

ಗಾಂಧಿ-ಜಿನ್ನಾ ಮಾತುಕತೆ

"ನಮ್ಮಿಂದ ಕೈಲಾದ ಮಟ್ಟಿಗೆ ಯತ್ನಗಳನ್ನು ನಾವು ಮಾಡುತ್ತಿದ್ದೇವೆ—ಒಂದು ಒಪ್ಪಂದಕ್ಕೆ ಬರಲು. ಎಲ್ಲವೂ ದೈವಚಿತ್ತ ಒಪ್ಪಂದವಾಗುವ ತೆರದಲ್ಲಿ ನನ್ನ ಬಾಯಿಂದ ಮಾತುಗಳು ಹೊರಡಲೆಂದು ನಾನು ದೇವರೊಡನೆ ಪ್ರಾರ್ಥಿಸುತ್ತೇನೆ. ಹಿಂದೂದೇಶದ ಸಮಸ್ಯೆಯು ಪರಿಹಾರವಾಗುವತರದಲ್ಲಿ ನಮ್ಮ ಈ ಮಾತುಕತೆಗಳು ಸತ್ಪರಿಣಾಮ ಹೊಂದಲೆಂದು ನೀವು ದೇವರಲ್ಲಿ ಮೊರೆಯಿಡಿರಿ." ಎಂಬುದಾಗಿ ಗಾಂಧಿಜಿಯವರು ಮಂಗಳವಾರದ ಪ್ರಾರ್ಥನೆಯ ಸಮಯ ಮಾಡಿದ ಭಾಷಣದ ಅಭಿಪ್ರಾಯವಿದು.

"ಈ ಮಾತುಕತೆಗಳಿಂದ ನಾವು ಯಾವತ್ತೊಂದು ಒಪ್ಪಂದಕ್ಕೆ ಬಾರದೆ ಹೋದರೆ ಆಗ ಮಿಲಿಯಾದಿ ಜನರ ಆಶಯಗಳ ಭಂಗವಾಗುವುದು. ನಮ್ಮಲ್ಲಿ ಬುದ್ಧಿ ಚಾತುರ್ಯವೇನೂ ಇಲ್ಲವೆಂದು ಜಗತ್ತು ಎಣಿಸುವುದು. ಪರಾಧೀನರಾಗಿರುವ ಈ ಜಗತ್ತಿನ ಎಲ್ಲಾ ಜನರ ದೃಷ್ಟಿಯು ನಮ್ಮ ಮೇಲೆ ಇರುವುದು ಎಂಬುದಾಗಿ ಜಿನ್ನಾರವರು ಗಾಂಧಿಜಿಯವರೊಡನೆ ಅಭಿಪ್ರಾಯ ಸೂಚಿಸಿರುವರರು

ಒಟ್ಟಿನ ಮೇಲೆ ಈ ಮಾತುಕತೆಗಳಿಂದ ಸತ್ಪರಿಣಾಮಗಳೆ ಉಂಟಾಗುವವೆಂದು ದೃಢವಾದ ನಂಬಿಕೆಯು ಉಂಟಾಗಿರುತ್ತದೆ ಚರ್ಚೆಯು ದೀರ್ಘ ಸಮಯಕ್ಕೆ ಹೋದುದನ್ನು ನೋಡಿದರೆ ಈ ಭಾರಿ ಒಂದು ಒಪ್ಪಂದವು ಖಂಡಿತವಾಗಿ ನಡೆಯುವುದೆಂದು ಹೇಳಬಹುದಾಗಿದೆ

ಕ್ವಿಬೆಕ್ ಮಾತುಕತೆಗಳು ಮತ್ತು ಹಿಂದೂದೇಶ

ಈ ಕುರಿತು ಮದ್ರಾಸಿನ ಹಿಂದೂ ಪತ್ರಿಯಲ್ಲಿ ಪ್ರಕಟವಾದ ಅಗ್ರ ಲೇಖದ ಅಭಿಪ್ರಾಯದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ

ಕ್ವಿಬೆಕಿನಲ್ಲಿ ರೂಸ್‌ವೆಲ್ಟ ಚರ್ಚಿಲರು ಒಟ್ಟು ಕೂಡಿರುವರು ಜಪಾನನ್ನು ಸದೆ ಬಡೆಯುವ ಕುರಿತು ಪರ್ಯಾಲೋಚಿಸುವುದೆ ಈ ಭಾರಿಯ ಈ ಮಿಲನದ ಮುಖ್ಯ ಉದ್ದೇಶವು (ಸ್ಟಾಲಿನನು ಪರಿಷತ್ತಿಗೆ ಬರಲು ಅನಾನುಕೂಲತೆಯನ್ನು ಸೂಚಿಸಿರುವನು) ಮಿಲಿಟರಿ ಕಾರ್ಯಕ್ರಮದ ವಿಚಾರದೊಂದಿಗೆ ಇಲ್ಲಿ ರಾಜಕೀಯ ವಿಚಾರಗಳು ಎತ್ತಲಾಗುವುದೆಂದು ತಿಳಿದುಬರುತ್ತದೆ ಪಿಲಿಪ್ಸರು ಗ್ಲೆಷಿರ ಮಾರ್ಚಯಲ್ಲಿ ಅಧ್ಯಕ್ಷರಿಗೆ ಬರಕೊಂಡ ಪತ್ರದಿಂದ ಉಂಟಾದ ಕೋಲಾಹಲವು ಈಗ ತಣಿಯುತ್ತಾ ಬಂದಿದ್ದರೂ ಈ ಕೋಲಾಹಲದ ಶಬ್ದವು ಕ್ವಿಬೆಕ್ ತನಕ ಪ್ರಸರಿಸದೆ ಇರಲಿಕ್ಕಿಲ್ಲಾ. ಹಿಂದೂದೇಶದ ರಾಜಕೀಯ ಸಮಸ್ಯೆಯ ವಿಚಾರವು ತಮ್ಮದಿ ಆಗಿರುವುದು ಅದನ್ನು ತಾವೆ ಸುಧಾರಿಸುತ್ತೆವೆ. ಎಂದು ಚರ್ಚಿಲರು ಹಿಂದಿನ ಮಾತುಕತೆಯಲ್ಲಿ ರೂಸ್‌ವೆಲ್ಟರು ಹಿಂದೂದೇಶ ಕುರಿತು ಪ್ರಸ್ತಾಪವೆತ್ತಿದಾಗ ಅಂದಿರುವರಂತೆ. ಆದರೆ ಹಿಂದೂದೇಶದ ಸ್ವಾತಂತ್ರ್ಯಸಮಸ್ಯೆಯ ಕುರಿತು ಅಮೇರಿಕದ ಜನರಲ್ಲಿ ಉಂಟಾದ ಜಾಗ್ರತಿಯ ಕುರಿತು ಪರಿಚಯವನ್ನು ರೂಸ್‌ವೆಲ್ಟರು ಮುಂ[illegible] ಕೊಡದೆ ಇರಲಾರರು. ಯುರೋಪಿನ ಶಾಂತಿ ಸಮಸ್ಯೆಯಲ್ಲಿ ಅಮೆರಿಕವು ಹೇಗೆ ಪ್ರವೇಶಿಸಿ ಬರಬೇಕಾಗುವುದೊ ಹಾಗೆನೆ ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆಯಲ್ಲೂ ಅಮೆರಿಕದ ಪ್ರವೇಶವು ಬೇಗನೆ ಆಗತಕ್ಕದಿದೆ, ಎಂದು ಅನೇಕ ಅಮೇರಿಕನ್ ಮುತ್ಸದ್ದಿಗಳ ಅಭಿಪ್ರಾಯವು

ಯುದ್ಧದಲ್ಲಿ ಭಾಗವಹಿಸಿ ಹಿಂತಿರುಗದ ಭಾರತೀಯ ಸೈನಿಕರನ್ನು ಸಂಭೋದಿಸಿ ಇಂಡಿಯಾ ಸೆಕ್ರೆಟರಿಯವರು ಅವರ ಭವಿಷ್ಯದ ಕುರಿತು ಒಳ್ಳೆ ಆಶಯದ ವಚನಗಳನ್ನು ಕೊಟ್ಟಿರುವರು. ಭಾರತೀಯ, ಸೈನಿಕನ, ಹಳ್ಳಿಗಳ ಉದ್ಧಾರ ಮಾಡುವವೆಂದು ಒಂದು ಉದ್ಗಾರವನ್ನು ಅವರು ಎಳೆದಿರುವರು ಆದರೆ ಹಿಂದೂದೇಶದ ಪುನರುದ್ಧಾರದ ಸಮಸ್ಯೆಗಳು ಇನ್ನೂ ಹಲವು ಇವೆ ಎಂದು ಈ ಬ್ರಿಟಿಷ ರಾಜ ಕಾರಣ ಪುರುಷರ ಗಮನಕ್ಕೆ ಬರಬೇಡವೆ ಹಿಂದೂದೇಶದ ಸ್ಥಿತಿಯು ಇಂದು ನೆಟ್ಟಗಿರುವುದಿಲ್ಲ ಬ್ರಿಟಿಷ ಸರಕಾರವು ತನ್ನ ಹೊಣೆಯನ್ನು ನಡೆಯಿಸುತ್ತಿದ್ದರೂ ದೇಶದಲ್ಲಿ ಇಂದು ಉಂಟಾದ ಆಹಾರದ ಸಮಸ್ಯೆಯು ಸಂಪೂರ್ಣ ಪರಿಹಾರವಾಗಲಿಲ್ಲ ದೇಶದಲ್ಲಿ ಉಂಟಾದ ಕ್ಷಾಮ ಪರಿಸ್ಥಿತಿ ಅದರಿಂದ ಪರಿಣಮಿಸಿದ ರೋಗ ಪರಿಸ್ಥಿತಿಗಳನ್ನು ಯಶಸ್ವಿಯಾಗಿ ಲೋಪಗೊಳಿಸಬೇಕಾದರೆ ಪ್ರಜೆಗಳಿಂದಚುನಾಯಿತರಾದಜನನಾಯಕರು ಈ ಸಮಸ್ಯೆಗಳ ಹೊಣೆಯನ್ನುವಹಿಸಿಕೊಂಡರೆ ಉತ್ತಮವಿದೆ ಈ ರೀತಿಯ ಅವಕಾಶವು ಬೇಗನೆ ಉಂಟಾಗತಕ್ಕದ್ದು, ದೇಶದ ಈ ಸಮಸ್ಯೆಗಳ ಕುರಿತು ನಿರ್ಲಕ್ಷವು ಹೆಚ್ಚಾದಂತೆ ದೇಶದಲ್ಲಿಉಂಟಾದ ಅಸಂತುಷ್ಟಿಯು ಹೆಚ್ಚುವುದು. ಈ ವಿಚಾರವು ಕ್ವಿಬೆಕಿನಲ್ಲಿ ಸೇರಿದ ರೂಸ್‌ವೆಲ್ಟ-ಚರ್ಚಿಲ ಮುಂದೆ ಬರಲೆಬೇಕು

ಬಿಹಾರದಲ್ಲಿ ಕೊಲೆರಾ ಹಾವಳಿ

ಬಿಹಾರದ ಕೆಲವು ಪ್ರದೇಶಗಳಲ್ಲಿ ಕೊಲೆರಾ ರೋಗವು ತಲೆದೋರಿ ಅದರ ಹಾವಳಿಯು ಉಗ್ರರೂಪವನ್ನು ತಳೆದಿದೆ. ಅದರ ನಿವಾರಣೆ ಬಗ್ಗೆ ಸಂಬಂಧ ಪಟ್ಟವರೆಲ್ಲಾ ಹಗಲಿರುಳು ದುಡಿಯುತ್ತಿರುವರು. ಬಿಹಾರಿನ ಗವರ್ನರ್ ರೂತರ್ ಫೋರ್ಡರು ಕೊಲೆರಾ ಹಾವಳಿಗೆ ಒಳಗಾದ ಪ್ರದೇಶ[illegible] ಪ್ರವಾಸಗೈದು ಕೊಲೆರಾ ಹಾವಳಿಯನ್ನು ನಿವಾರಿಸುವ ಕುರಿತು ಒಳ್ಳೆ ನಿಗಾವನ್ನು ತೋರಿಸಿರುವರು.

ಇಷ್ಟರ ತನಕ ಸಾಧಾರಣ ೬೦ ಸಾವಿ[illegible]ಕ್ಕೆ ಮೇಲ್ಪಟ್ಟ ಜನರು ಕೊಲೆರಾಕ್ಕೆ ತುತ್ತಾಗಿರುವರೆಂದು ವರದಿಯಿದೆ.

ಈ ಬಗ್ಗೆ ಉಪಶಮನಾ ಕಾಯ[illegible] ಗಳನ್ನು ನಡೆಯಿಸುವರೆ ಮತ್ತು ಬಿಹಾ[illegible] ಸಂಕಷ್ಟ ನಿವರಣಾ ಸಮಿತಿಯವರು ಸೇ[illegible] ಸಿದ ನಿಧಿಯ ವಿನಿಯೋಗಿಸಲ್ಪಡಲು ಅನ[illegible] ಕೂಲವಾಗುವಂತೆ ಡಾಕ್ಟರ್ ರಾಜೆಂದ[illegible] ಪ್ರಸಾದರ ಬಿಡುಗಡೆಯಾಗುವುದು ಉ[illegible] ಮವಿರುವುದಾದರೂ ರಾಜೆಂದ್ರ ಪ್ರಸಾ[illegible] ರನ್ನು ಮುಕ್ತಗೊಳಿಸುವ ಅಧಿಕಾರವ[illegible] ತನ್ನದಲ್ಲವೆಂದು ಗವರ್ನರ ರೂತರ[illegible] ಫೋರ್ಡರು ಅಭಿಪ್ರಾಯ ಸೂಚಿಸಿರ[illegible] ವರು

ಅಧ್ಯಕ್ಷ ರೂಸ್‌ವೆಲ್ಟರು ಮನಸ[illegible] ಮಾಡಿದರೆ ಹಿಂದೂದೇಶದಸಮಸ್ಯೆಯನ[illegible] ಯೋಗ್ಯ ರೀತಿಯಲ್ಲಿ ಬಗೆಹರಿಸಬ[illegible] ಹುದು ಅದಕ್ಕೆ ಚರ್ಚಿಲರ ಸಹಾನ[illegible] ಭೂತಿ ದೊರತರೆ ಆಗ ಹಿಂದೂದೇಶಕೆ[illegible] ಕಲ್ಯಾಣವಾಗಬಹದು

* * *

ಜಗತ್ತಿನ ರಾಷ್ಟ್ರಗಳಿಗೆ ನಾಲ್ಕು ಸ್ವಾತಂ[illegible] ತ್ರ್ಯಗಳನ್ನು ವಾಗ್ದಾನ ಮಾಡುವ ಅಕ್ಲಾಂ[illegible] ಟಿಕ್ ಘೋಷಣೆಯು ಹಿಂದೂದೇಶಕೆ[illegible] ಅನ್ವಯಿಸತಕ್ಕದಲ್ಲವೆಂದೂ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚಿಲರಿಂದ[illegible] ಸಾರಲ್ಪಟ್ಟುದರಿಂದ ಹಿಂದೂದೇಶಕ್ಕೆ ಮಿತ್ರ ರಾಷ್ಟ್ರಗಳೊಡನೆ ಮನ್ನಣೆಯ ಸ್ಥಾನದೊರಕವ ಕುರಿತು ಸಂದೇಹವಿದೆ

* * *

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ

ಯುದ್ಧವು ಇನ್ನು ಬಹುಕಾಲ ಮುಂದರಿಯಲಿಕ್ಕಿಲ್ಲ ಶಾಂತಿಕಾಲಕ್ಕಾಗಿ ನೀವು ಸಿದ್ಧರಾಗಿರುವಿರಾ?

ಶಾಂತಿ ಸಮಾರಂಭದಲ್ಲಿ ಅಕಲ್ಪಿತ ಘಟನೆಗಳು ಸಂಭವಿಸಬಹುದು ಧಾರಣೆಗಳು ಇಳಿದು ಉದ್ಯೋಗ ವ್ಯಾಪಾರ ದಂದೆಗಳಿಗೆ ಧಕ್ಕೆ ತಗಲಬಹುದು ನೀವು ಇವುಗಳಿಗಾಗಿ ನಿಮ್ಮ ಪೂರ್ವ ಸಿದ್ಧತೆಯನ್ನೇರ್ಪಡಿಸಿರುವಿರಾ? ಸ್ಥಿರವಾದ ಬ್ಯಾಂಕ್ ಖಾತೆಯಿಂದ ನೀವು ನಿಮ್ಮ ಸ್ಥಿತಿಯನ್ನು ಭದ್ರಗೊಳಿಸಿರುವಿರಾ? ಇಲ್ಲವಾದರೆ ನಿಮ್ಮ ಪೂರ್ವ ಸಿದ್ಧತೆಯನ್ನು ಪ್ರಾರಂಭಿಸಲೀಗ ಕಾಲಾತೀತವಾಗಿಲ್ಲ ಅನವಶ್ಯಕ ವಸ್ತುಗಳಿಗಾಗಿ ಏರಿದ ಬೆಲೆ ತೆತ್ತು ಹಣ ವೆಚ್ಚ ಮಾಡುವ ಬದಲು ಮುಂಬರುವ ಬೆಲೆ ಇಳಿತದ ಲಾಭವನ್ನು ಹೊಂದಲೋಸುಗ ಹಾಗೂ ಆಗಿನ ನವೀನ ಪರಿಸ್ಥಿತಿಯನ್ನೆದುರಿಸಲು ನಿಮ್ಮ ಉಳಿತಾಯವನ್ನೀಗ ಕೂಡಿರಿ.

ನಾವು ನಿಮಗೆ ಸಹಾಯ ಉತ್ತೇಜನಗಳ ಬಗ್ಗೆ ಭರವಸೆಯನ್ನೀಯುತ್ತೇವೆ.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಜಿಲ್ಲಾ ಸಮಾಚಾರಗಳು

ಮಂಗಳೂರು

ರೇಶನ್ ಅರ್ಜಿಗಳು

ಮನೆಯಲ್ಲಿ ಜನಸಂಖ್ಯೆ ಹೆಚ್ಚಿದಾಗ ಹೆಚ್ಚಿನ ರೇಶನ್ ಪಡೆಯಲು ಇಲ್ಲವೆ ಕಡಿಮೆಯಾದಾಗ ರೇಶನ್ ಕಮ್ಮಿ ಮಾಡಲು ಬಯಸುವವರು ತಮ್ಮ ಸರ್ಕಲಿನ ಅಸಿಸ್ಟಾಂಟ್ ರೇಶನ್ ಆಫೀಸರರಿಗೇ ಅರ್ಜಿ ಮಾಡಿಕೊಳ್ಳತಕ್ಕದ್ದು. ಮಂಗಳೂರು ನಗರದಲ್ಲಿ ಸೌತ್ ನೋರ್ತ್ ಸರ್ಕಲ್ಸ್ ಎಂಬ ಎರಡು ವಿಭಾಗಗಳ ಪ್ರತ್ಯೇಕ ಆಫೀಸುಗಳಿವೆ. ಆಯಾ ಸರ್ಕಲಿನವರು ತಮ್ಮ ಸರ್ಕಲು ಯಾವುದೆಂದು ತಿಳಿದು ಸದ್ರಿ ಆಫೀಸರರಿಗೆ ಅರ್ಜಿ ಮಾಡುವುದು. ತಪ್ಪಿ ಮಂಗಳೂರು ರೇಶನ್ ಆಫೀಸರ್ ಇಲ್ಲವೇ ಡಿಸ್ಟ್ರಿಕ್ಟ್ ರೇಶನ್ ಆಫೀಸರ್ ಇವರಿಗೆ ಅರ್ಜಿ ಬರೆಕೊಂಡಲ್ಲಿ ಅನಾವಶ್ಯಕವಾಗಿ ಸಮಯ ನಷ್ಟವಾಗುತ್ತದೆ. ಹೀಗಿರುವ ಡಿ. ರೇಶನ್ ಆಫೀಸರರ ಈ ಪ್ರಕಟನೆಯನ್ನು ಪ್ರತಿಕಾರ್ಡುದಾರರು ತಿಳಿದುಕೊಳ್ಳತಕ್ಕದ್ದು.

ರೇಶನ್ ಕ್ಷೇತ್ರದ ಸಾಗುವಳಿದಾರರಿಗೆ

ಸಂಬಂಧಪಟ್ಟ ರೇ. ಆಫೀಸರರ ಅನುಮತಿ ಇಲ್ಲದೆ, ಬೆಳೆದ ಸ್ಥಳದಿಂದ ಬತ್ತವನ್ನು ಒಯ್ಯಲಾಗುವುದಿಲ್ಲ. ಬೆಳೆ ಕಟಾವಿನ ತಾರೀಕು, ಗದ್ದೆಯ ಸ್ಥಳವಿಸ್ತೀರ್ಣ, ಸರ್ವೆ ನಂಬ್ರ, ಸದ್ರಿ ಪೈರಿನ ಉಪಯೋಗ ಮೊದಲಾದ ವಿವರಗಳನ್ನು ತಿಳಿಸುವ ಅರ್ಜಿಯನ್ನು ೧೫ ವಾರಕ್ಕೆ ಮುಂಚಿತವಾಗಿ ರೇ. ವ ಅಸಿ. ರೇ. ಆಫೀಸರರಿಗೆ ನೋಟಿಸು ಕೊಡತಕ್ಕದ್ದು. ನೋಟಿಸಿನಲ್ಲಿ ಕಾಣಿಸಿದ ಕಟಾವು ತಾರೀಕಿನಂದೇ ಅಥವಾ ನಂತರದ ಅನುಕೂಲ ದಿವಸಗಳಲ್ಲಿ ಕಟಾವು ಕೆಲಸ ಹಿಡಿಯಬಹುದು. ಈ ಸಮಯದಲ್ಲಿ ಮೇಲ್ಕಂಡ ಬಗ್ಗೆ ರೇಶನ್ ಆಫೀಸಿನ ಉದ್ಯೋಗಸ್ಥರು ಹಾಜರಿದ್ದರೂ ಇರಬಹುದು. ಕಟಾವಿನ ನಂತರ ಫಸಲು ಎಷ್ಟು ಎಂಬುದನ್ನು ಸರಿಯಾದ ಲೆಕ್ಕ ಇಡಬೇಕು.

ರೇಶನ್ ಕ್ಷೇತ್ರದ ಹೊರಗಿನವರು

ರೇಶನ್ ಕ್ಷೇತ್ರದ ಹೊರಗಿನ ಜಮೀನ್ದಾರರು ಆಫೀಸರರು ನಮೂದಿಸಿದ ಪ್ಯಾದೆ ವ ಮಾರ್ಗಗಳ ಮೂಲಕ ರೇಶನ್ ಸರಹದ್ದಿನ ಹೊರಗೆ ಕೊಂಡುಹೋಗಬಹುದು. ಮಜೂರಿ ರೂಪದಲ್ಲಿ ಕೂಲಿಯವರಿಗೆ ಹಂಚಿದ ಅಕ್ಕಿ, ಬತ್ತಗಳ ಲೆಕ್ಕವನ್ನು ರೇ. ವ ಅ. ರೇ. ಆಫೀಸರರಿಗೆ ಕೊಡತಕ್ಕದ್ದು.

ವಿಶೇಷ ಸಂಧರ್ಭಗಳಲ್ಲಿ

ಅಕಸ್ಮಾತಾಗಿ ಬರುವ ಮಳೆ, ನೆರೆಗಳ ಸಂಧರ್ಭಗಳಲ್ಲಿ ಕಟಾವಿನ ಕೆಲಸವನ್ನು ನೋಟಿಸ್ ಕೊಡದೇನೇ ಕೆಲಸ ಪ್ರಾರಂಭಿಸಿ ಮುಗಿದ ನಂತರ ಫಸಲು ಲೆಕ್ಕವನ್ನು ತಿಳಿಸಬೇಕು.

ಜಮೀನ್ದಾರರ ಹಕ್ಕಿನ ಬೆಳೆ

ರೇಶನ್ ಸರಹದ್ದಿನೊಳಗೆ ವಾಸಿಸುವ ಜಮೀನು ಮಾಲಕರು ತಮ್ಮ ಕುಟುಂಬದವರ ಮತ್ತು ಸೇವಕರ ಖರ್ಚಿಗೆ, ಅವರ ರೇ. ಕಾರ್ಡಿನಲ್ಲಿ ಕಾಣಿಸಿದ ಲೆಕ್ಕ ಪ್ರಕಾರ ಒಂದು ವರ್ಷದ ಅಕ್ಕಿಯನ್ನು ಇಟ್ಟುಕೊಳ್ಳಬಹುದು. ಎರಡನೇ ಸಾಗುವಳಿಗೆ ಬೇಕಾದ ಬೀಜ ಮತ್ತು ಆ ಬೇಸಾಯ ಮಜೂರಿಗೆ ಬೇಕಾದ ಮಜೂರಿ ಬಗ್ಗೆ ಹಂಚುವ ಅಕ್ಕಿಯಾ ಬತ್ತವನ್ನು ಇಟ್ಟುಕೊಳ್ಳಬಹುದು. ಇವುಗಳಿಗೆ ಮಿಕ್ಕಿ ಉಳಿದುದನ್ನು ರೇ. ಅಧಿಕಾರಿಗಳು ನಿರ್ದೇಶಿಸುವ ಪ್ರಕಾರ ನಿರ್ವಹಿಸಬೇಕು. ಹೆಚ್ಚಿನ ಸವಿಸ್ತಾರ ವಿವರಗಳನ್ನು ಸರ್ಕಲಿನ ರೇಶನ್ ಆಫೀಸಿನಿಂದ ತಿಳಕೊಳ್ಳತಕ್ಕದೆಂದು ಜಿಲ್ಲಾ ರೇಶನ್ ಆಫೀಸರರಾದ ಶ್ರೀ. ಕೆ. ಕೃಷ್ಣಯ್ಯ ಅವರು ತಿಳಿಸುತ್ತಾರೆ.

ಹುಳಿಯಾದ ಬೆಲ್ಲ

ಹುಳಿ ರುಚಿಯನ್ನು ಕೊಡುವ ಬೆಲ್ಲವು ಅನಾರೋಗ್ಯಕರವಿರುವುದರಿಂದ ಅದನ್ನು ಮಾರುವುದು ಅಪರಾಧವಾಗುತ್ತದೆಂದು ಎಚ್ಚರಿಸಲಾಗಿದೆ. ತಾ. ೩೦ರ ಬಳಿಕ ಬೆಲ್ಲದ ಕ್ರಯ ಇಳಿಯುತ್ತದೆ. ಉಡ್ಪಿ ಕುಂದಾಪುರ ಕಡೆ ಬೆಲ್ಲ ದಾಸ್ತಾನಿರುವವರು ಅಧಿಕೃತ ಸಾರಾಯಿ ಬಟ್ಟಿ ಇಳಿಸುವ ಕಾರ್ಖಾನೆಗಳಿಗೆ ಏಜೆನ್ಸಿ ಮೂಲಕ ಒದಗಿಸಬೇಕು.

ಹಾಳು ಬೆಲ್ಲದ ಬದಲು ಒಳ್ಳೇ ಬೆಲ್ಲ

ಕಬ್ಬು ಬೆಳೆಯುವವರ ಸಂಘದಿಂದ ಆಹಾರಕ್ಕೆ ಅಯೋಗ್ಯವಾದ ೧೨ ಖಂಡಿ ಬೆಲ್ಲ ತೆಗೆದುಕೊಂಡು ಅದರ ಬದಲು ಒಳ್ಳೇಯ ೧೦ ಖಂಡಿ ಬೆಲ್ಲವನ್ನು ಮಿ|. ಫೆ. ಆಲ್ಬುಕರ್ಕರು ಕೊಟ್ಟರು. ಹುಳಿಯಾದ ಬೆಲ್ಲವನ್ನು ಬಟ್ಟಿ ಇಳಿಸಲು ಉಪಯೋಗಿಸುವರು.

ಮಾರಾಟಕ್ಕಿರುವ ಆಹಾರ ಪದಾರ್ಥಗಳು

ಇಲ್ಲಿಗೆ ೩ ಸಾವಿರ ಗೋಣಿ ಗೋದಿ ಹಿಟ್ಟು, ೧ ಸಾವಿರ ಗೋಣಿ ಸಜ್ಜಿಗೆಯೂ ಬಂದಿವೆ. ೧೧ ಸಾವಿರ ಮಣ ಬೇರು ಗೆಣಸಿನ ಪುಡಿ ಮಾರಾಟಕ್ಕಿದೆ. ಇದನ್ನು ಚಪಾತಿ ರೊಟ್ಟಿಗಳನ್ನು ಮಾಡಲು ಉಪಯೋಗಿಸಬಹುದು.

ಕಾಗದ

ಮಂಗಳೂರು, ಪುತ್ತೂರು, ಕಾಸರಗೋಡುಗಳಲ್ಲಿ ಕಾಗದ ಮಾರುವ ೧೭ ಕೇಂದ್ರಗಳು ಅಧಿಕೃತವಾಗಿವೆ. ಪ್ರತಿಯೊಬ್ಬರಿಗೂ ೨ ತಾಂವು ಕಾಗದ ಸಿಗುವುದು. ಕಾಗದವನ್ನು ದುರುಪಯೋಗಗೊಳಿಸದೆ ಉಪಯೋಗಿಸಬೇಕಾಗಿ ತಿಳಿಸಲಾಗಿದೆ.

ಬಂದರ ಕಾನೂನು ಮೀರಿದ್ದಕ್ಕೆ ಶಿಕ್ಷೆ

ತಾ. ೨ರಂದು ಮಂಗಳೂರು ಬಂದರಕ್ಕೆ ಬಂದ ಸಂಗತಿಯನ್ನು ೨೪ ತಾಸಿನೊಳಗೆ ಪೋರ್ಟ್ ಆಫೀಸರರಿಗೆ ತಿಳಿಸದಿದ್ದುದಕ್ಕಾಗಿ ೫ ಕೋಟಿಯಾಗಳ ೫ ತಂಡೇಲರಿಗೆ ತಲಾ ರೂ. ೧೦೦ ಜುಲ್ಮಾನೆ ವಿಧಿಸಲಾಯಿತು. ಆರೋಪಿಗಳು ಜುಲ್ಮಾನೆ ತೆತ್ತಿರುವರು.

ರೇಶನ್ ಅಪರಾಧ ಶಿಕ್ಷೆ

ತಿಂಗಳಿಗೆ ಬೇಕಾದ ಅಕ್ಕಿ ಸ್ಟಾಕು ಇದ್ದರೂ ಅಕ್ಕಿ ರೇಶನ್ ಪಡೆದ ಎರಡು ತಪ್ಪುಗಳಿಗೆ ಬೇರೆ ಬೈಲಿನ ಒರ್ವ ಮಹನೀಯರಿಗೆ ೧೦೦ ರೂ. ಜುಲ್ಮಾನೆ ವ ೪ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ರೇಶನ್ ಕ್ಷೇತ್ರದಿಂದ ನಿಯಮ ಮೀರಿ ಅಕ್ಕಿ ಹೊರ ಒಯ್ದುದಕ್ಕೆ ಬೊಳ್ಮ ಗ್ರಾಮಸ್ಥರೊಬ್ಬರಿಗೆ ರೂ. ೫೦. ಜುಲ್ಮಾನೆ ವ ೨ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಕದ್ರಿಯಲ್ಲಿ ಇರ್ವ ವ್ಯಾಪಾರಿಗಳು ಅರ್ಧ ಔಂಸ್ ಕಡಿಮೆ ಪ್ರಮಾಣದ ಬಾಟ್ಲಿಗಳನ್ನು ಉಪಯೋಗಿಸಿದಕ್ಕೆ ತಲಾ ೨೦ ರೂ. ಜುಲ್ಮಾನೆ ವ ೪ ತಿಂಗಳ ಶಿಕ್ಷೆಗೆ ಒಳಗಾಗಿರುವರು.

ಕಳ್ಳತನ

ಸುರತ್ಕಲ್ಲಿನ ಬಳಿ ಕರಾವಳಿ ಕಾವಲು ಡ್ಯೂಟಿಯಲ್ಲಿರಿಸಲಾದ ಇರ್ವರು ಚಿಲ್ಲರೆ ಅಂಗಡಿಯವಳೊಬ್ಬಳ ಮನೆಯಿಂದ ಕೊಡಪಾನ ಇತ್ಯಾದಿಗಳನ್ನು ಕಳವು ಮಾಡಿದರೆಂಬ ಆರೋಪದ ಮೇಲೆ ಕೈದು ಮಾಡಲ್ಪಟ್ಟು ವಿಚಾರಣೆಗೆ ಇಲ್ಲಿಗೆ ತರಲ್ಪಟ್ಟಿರುವರು.

ಪೋಲೀಸರ ಮೇಲೆ ಆರೋಪ

ಸರಿಯಾದ ಕಾರಣವಿಲ್ಲದೆ ಡ್ಯೂಟಿಯ ಮೇಲೆ ಇದ್ದಾಗ ಉದ್ಯೋಗವನ್ನು ಬಿಟ್ಟು ವರ್ತಿಸಿದರೆಂಬ ಆರೋಪದ ಮೇಲೆ ಇಲ್ಲಿನ ೫ ಮಂದಿ ಪೋಲಿಸ್ ಕಾನ್ಸ್ಟೇಬಲರ ಮೇಲೆ, ಎಸೆನ್ಷಿಯಲ್ ಸರ್ವೀಸ್ ಮೈಂಟಿನೆನ್ಸ್ ಆರ್ಡಿನೆನ್ಸ್ ಪ್ರಕಾರ ಮೊಕದ್ದಮೆ ಹೂಡಲಾಗಿದೆ. ಇವರಲ್ಲಿ ಶ್ರೀ ಸಂಜೀವ ಮತ್ತು ನಾರಾಯಣ ಶೆಟ್ಟಿ ಎಂಬವರು ಕೋರ್ಟಿನ ಮುಂದೆ ಹಾಜರಾಗಿರುವರು. ಶ್ರೀಯುತರಾದ ನಾರಾಯಣ ಮತ್ತು ಕೇಶವನ್ ನಾಯರ್ ಮತ್ತು ನೊರೋನ್ಹಾ ಎಂಬ ಇತರ ಮೂವರ ಮೇಲೆ ವಾರಂಟು ಬಿಡಲಾಗಿದೆ. ಶ್ರೀ. ಸಂಜೀವ ಇವರು ಪೋಲಿಸ್ ಮತ್ತಿತರು ರಿಸರ್ವ್ ಕಾನ್ಸ್ಟೇಬಲರು.

ನೂಲಿನ ಅಭಾವ

ಜಿಲ್ಲೆಯಲ್ಲಿ ನೂಲಿನ ಅಭಾವ ವಿರುವುದಾಗಿಯೂ ನೂರಾರು ನೇಕಾರರು ನಿರುದ್ಯೋಗಿಗಳಾಗಿರುವುದಾಗಿಯೂ, ಮತ್ತು ಶೀಘ್ರವಾಗಿ ನೂಲು ಕಳುಹಿಸುವರೆ ಏರ್ಪಡಿಸಬೇಕೆಂದೂ ನೇಕಾರರ ಸಂಘದ ಕಾರ್ಯದರ್ಶಿಗಳು ಪ್ರಾಂತಿಕ ಟೆಕ್ಸ್‌ಟೈಲ್ ಕಮಿಷನರಿಗೆ ತಂತಿ ಕಳುಹಿಸಿರುವರು. ಇದಕ್ಕೂ ತಕ್ಕ ರೇಶನ್ ಕ್ರಮವನ್ನು ಜ್ಯಾರಿಮಾಡಬೇಕೆಂದೂ ಸೂಚಿಸಲಾಗಿದೆ.

ಮಜೂರರ ಕೇಳಿಕೆಗಳು

ಜಿಲ್ಲೆಯ ಬೀಡಿ ಮಜೂರ ಸಂಘದ ಎಲ್ಲಾ ಕಡೆಯ ಪ್ರತಿನಿಧಿಗಳು ಸೇರಿ ತಮ್ಮ ಹಿತದ ಸಂಯುಕ್ತ ಬೇಡಿಕೆಗಳನ್ನು ಸರಕಾರದ ಮುಂದಿಡಲು ನಿರ್ಧರಿಸಿದರು "ಬೀಡಿ ಕೈಗಾರಿಕೆಗೆ ಕಾಗದ ಒದಗಿಸಬೇಕು. ಚಳವಳದಲ್ಲಿ ಜೈಲಿಗೆ ಹೋಗಿ ಬಂದವರಿಗೆ ಕೆಲಸಕೊಡಿಸಬೇಕು. ಬೀಡಿ ಕೈಗಾರಿಕೆಯನ್ನು "ಎಸೆನ್ಷಿಯಲ್ ಸರ್ವಿಸ್" ಆಗಿ ಒಪ್ಪಬೇಕು. ಅಕ್ಕಿಯ ಕೊರತೆ ಬಾರದಂತೆ ಮಾಡಬೇಕು. ಬೀಡಿ ಮಾಲಕರು ಮಜೂರರಿಗೆ ಯುದ್ಧಭತ್ತೆ ಕೊಡಬೇಕು." ಇವೇ ಅವರ ಕೆಲವು ಮುಖ್ಯ ಕೇಳಿಕೆಗಳು.

ಅಜೆಕಾರು

ಸ್ಥಳೀಯ ಪಂ. ಬೋರ್ಡಿನ "ಶುಕ್ರವಾರ ಸಂತೆಯು" ಅಭಿವೃದ್ಧಿಗೋಸ್ಕರ ಕಾರ್ಕಳ ರೆ. ಫಾ. ಎಸ್. ಡಿ. ಸೋಜರು ಸುಮಾರು ನಾಲ್ಕು ಸೆಂಟ್ಸ್ ಸ್ಥಳವನ್ನು ರಿಜಿಸ್ಟ್ರಿ ಮೂಲಕ ದಾನಶಾಸನವಾಗಿತ್ತಿರುವುದು ಸ್ತುತ್ಯಾರ್ಹವೂ ಮಾದರಿಯೂ ಆಗಿರುತ್ತದೆ.

ಪ್ರಚಲಿತ ಸಮಾಚಾರ

ಹಿಂದೂದೇಶ ಸ್ವಾತಂತ್ರ್ಯ ಸಮಸ್ಯೆಯು ಕುರಿತು ಫಿಲಿಪ್ಸರ ವರದಿಯ ಪ್ರಕಟಣೆಯು ಕಾರಣದಿಂದ ಅಮೇರಿಕ ಇಂಗ್ಲಾಂಡದ ನಡುವೆ ಸ್ವಲ್ಪ ಘರ್ಷಣೆಗೆ ಕಾರಣವಾಗಿದೆ.

*　*　*

ಆದರೆ ಈ ಘರ್ಷಣೆಯು ಉಂಟಾದುದು ಅಮೆರಿಕದ ಮತ್ತು ಇಂಗ್ಲಾಂಡದ ಕೆಲವು ಪತ್ರಿಕೆಗಳ ನಡುವೆ, ಮತ್ತು ಕೆಲವು ವ್ಯಕ್ತಿಗಳ ನಡುವೆ. ಅವರ ಈ ಘರ್ಷಣೆಯಿಂದ ಹಿಂದೂದೇಶಕ್ಕೆ ಹೆಚ್ಚಿನ ಉಪಕಾರವಾಗುವಂತಿಲ್ಲಾ.

*　*　*

ಜಪಾನನ್ನು ಸೋಲಿಸುವ ಕುರಿತು ಪರ್ಯಾಲೋಚಿಸಲು ಕೆನಡಾದಲ್ಲಿ ರೂಸ್‌ವೆಲ್ಟ್, ಚರ್ಚಿಲರ ಬೇಟಿಯಾಗಲಿದೆ. ಅಲ್ಲಿ ಹಿಂದೂದೇಶದ ಸಮಸ್ಯೆಗೆ ಗಣನೀಯ ಸ್ಥಾನ ದೊರಕಿದ ಮಾತ್ರ ಮೇಲಿನ ಪ್ರಕರಣವು ಮಹತ್ವತರದ್ದೆನಿಸುವುದು.

*　*　*

ಅಟ್ಲಾಂಟಿಕ್ ಘೋಷಣೆಯು ಹಿಂದೂದೇಶಕ್ಕೆ ಅನ್ವಯಿಸದು ಮಾತ್ರವಲ್ಲ ಅದು ಇಡೀ ಯುರೋಪಕ್ಕೂ ಅನ್ವಯಿಸುವುದೆ ಎಂಬ ಸಂದೇಹವು ಪೋಲರಿಗೆ ಉಂಟಾಗಿರುತ್ತದೆ. ಪೋಲೆಂಡಿನ ಗಡಿಯ ಕುರಿತು ರಶ್ಯವು ತೋರಿಸಿದ ಧೋರಣೆಯಿಂದ.

*　*　*

ಈ ಗಡಿಯ ಸಮಸ್ಯೆಯಿಂದ ರಶ್ಯಕ್ಕೂ ಸ್ವತಂತ್ರ ಪೋಲರಿಗೂ ಭೇದಾಭಿಪ್ರಾಯ ಬಂದಿರುತ್ತದೆ. ಅಂದರೆ ಈ ಯುದ್ಧವೂ ನಡೆಯುತ್ತಿರುವುದು ಜಾಗತಿಕ ಶಾಂತಿಗಾಗಿ ಎಂದು ಸಾರಲಾಗುತ್ತಿದ್ದರೂ, ಯುದ್ಧವು ಮುಂದುವರಿದು ವಿಜಯಗಳು ಲಭಿಸಿದ ಹಾಗೆಲ್ಲ ಮಿತ್ರರ ರಾಷ್ಟ್ರಗಳ ಸ್ವಾರ್ಥವೆ ಮೂಡಿ ಕಾಣಿಸುತ್ತಿದೆ.

*　*　*

ಪೋಲರೀಗ ಉಭಯಸಂಕಟಕ್ಕೆ ಒಳಗಾಗಿರುವರು. ಪೋಲೆಂಡದ ಗಡಿಯು ಕುರಿತು ರಶ್ಯದ ಸ್ವಾರ್ಥಮಯ ಕೋರಿಕೆಗಳನ್ನು ಅವರು ನಿರಾಕರಿಸಿದುದರಿಂದ ಅವರಿಗೆ ರಶ್ಯದ ಸಹಾಯವು ಕಡಿದು ಹೋಗಿದೆ. ಪೋಲೆಂಡ ಸಮಸ್ಯೆಯು ಹೇಗೆ ಬಗೆಹರಿಸಲಾಗುವುದೆಂದು ನೋಡಲಿದೆ.

*　*　*

ಗವರ್ನರರ ಪರಿಷತ್ತು ನವದೆಲ್ಲಿಯಲ್ಲಿ ಸೇರಿ ಕಾರ್ಯ ಮುಗಿಯಿಸಿತು. ಪ್ರತಿಯೊಂದು ಪ್ರಾಂತ್ಯಕ್ಕೂ ಕೇಂದ್ರದಲ್ಲಿರುವಂತೆ ಕಾರ್ಯಕಾರಿ ಮಂಡಲ ನೇಮಿಸುವುದು, ಪ್ರಚಾರ ಬಲಗೊಳಿಸುಯುದ್ಧದಿಂದ ಮರಳಿದ ಸೈನಿಕರಿಗೆ ಯುದ್ಧೋತರದಲ್ಲಿ ಕೈಗಾರಿಕೆ ಮತ್ತು ವ್ಯವಸಾಯದಲ್ಲಿ ಉದ್ಯೋಗಗಳನ್ನು ಕೊಡುವುದು ಇವೆ ಮೊದಲಾದ ವಿಚಾರಗಳಲ್ಲದೆ ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆ ಕುರಿತು ಯಾವತ್ತೂ ವಿಚಾರ ಅಲ್ಲಿ ಎತ್ತಲಾಗಲಿಲ್ಲ. ಅಟ್ಲಾಂಟಿಕ ಘೋಷಣೆಯಲ್ಲಿರುವ ನಾಲ್ಕು ಮೂಲ ಸ್ವಾತಂತ್ರ್ಯಗಳು ಹಿಂದೂದೇಶಕ್ಕೆ ದೊರಕುವ ದಿನ ಸಮೀಪದಲಿಲ್ಲವೆಂದೆ ಇದರಿಂದ ಭಾವಿಸುವಂತಾಗಿದೆ.

*　*　*

ವಿಜಯದ ಹೆಮ್ಮೆಯಿಂದ ಬ್ರಿಟನು, ಹಿಂದೂದೇಶದ ಸ್ವಾತಂತ್ರ್ಯದ ಪ್ರಶ್ನೆಯನ್ನು ಮೂಲೆಗೊತ್ತಿರುವ ಈ ಸಮಯದಲ್ಲಿ, ಹಿಂದೂದೇಶದಲ್ಲಿ ಐಕ್ಯಸಾಧನೆಯ ಯತ್ನಗಳು ಆಗುತ್ತಿವೆ. ಗಾಂಧಿಜಿನ್ನಾ ಭೇಟಿಯು ನಡೆಯುತ್ತಿದೆ. ಇಲ್ಲಿ ಐಕ್ಯ ಸಾಧನೆಯಾದರೆ, ಆಗ ಬ್ರಿಟಿಷರ ಧೋರಣದ ನಿಜಸ್ವರೂಪವು ಜಗತ್ತಿನ ದೃಷ್ಟಿಗೆ ಗೋಚರವಾಗದೆ ಇರದು.

*　*　*

ಹಿಂದೂದೇಶದ ಹಲವು ಕಡೆಗಳಲ್ಲಿ ಶೀಘ್ರವಾದ ಆಹಾರ ಸಾಮುಗ್ರಿಗಳು ಸರಿಯಾದ ಕಾಲದಲ್ಲಿ ಹಂಚಲ್ಪಡದೆ, ಕೊಳೆತು, ಹಾಳಾಗಿರುವುದೆಂದೂ, ಆ ತೆರದ ಆಹಾರವು ದಾರಾಳ ಪ್ರಮಾಣದಲ್ಲಿ ನಾಶ ಪಡಿಸಲಾಯಿತ್ತೆಂದು ವರದಿಗಳಾಗಿವೆ. ಆಹಾರ ಕೊರತೆಯು ವಿಶೇಷವಾದ ಈ ದಿವಸಗಳಲ್ಲಿ, ಆಹಾರ ಸಾಮುಗ್ರಿಗಳ್ಳು ಈ ರೀತಿ ನಷ್ಟಹೊಂದುವ ಕುರಿತು ಸರಕಾರದ ಹೆಚ್ಚಿನ ಗಮನವು ಅಗತ್ಯವಲ್ಲವೆ.

*　*　*

ಹೆದ್ದಾರಿಗಳ [illegible] ಮಾರ್ಗಗಳ [illegible]

([illegible])

ಮತ್ತು ಹ್ಯೂಎನ್ ತ್ಸಾಂಗ್ ಎಂಬ ಚೀನ ಯಾತ್ರಿಕರು ಇಲ್ಲಿನ ಮಾರ್ಗಗಳ ಕುರಿತು ವರ್ಣನೆ ಮಾಡಿರುವರು.

ಯುರೋಪಿನಿಂದ ಚೀನಕ್ಕೆ ಹೋಗಿದ್ದ ಮಾರ್ಕೋಪೋಲೋ ಎಂಬ ಸಾಹಸಿಗನಾದ ಭೂಸಂಚಾರಿಯು ೧೩ನೇ ಶತಮಾನದ ಚೀನಾದೇಶದ ವಿಶಾಲ ಕುರಿತು ವಿಸ್ತಾರ ವಂಚಿಯವನ್ನು ಬರೆದಿಟ್ಟಿರುವನು. ಅಲ್ಲಿನ ಕಿನ್ಸೆ ಎಂಬ ನಗರದಲ್ಲಿನ ಮಾರ್ಗಗಳ ಕುರಿತು ಅವನು ಹೀಗೆ ಬರೆದಿದ್ದಾನೆ. "ಇಲ್ಲಿನ ಮಾರ್ಗಗಳು ಕಲ್ಲಿನಿಂದಲೂ ಇಟ್ಟಿಗೆಗಳಿಂದಲೂ ಮುಚ್ಚಲ್ಪಟ್ಟಿವೆ. ಮಾಂಚೀಪ್ರಾಂತ್ಯದ ಎಲ್ಲಾ ಮಾರ್ಗಗಳು ಹೀಗೇ ಇವೆ. ಕಾಲುಗಳನ್ನು ಸವೆಸದ ಈ ಮಾರ್ಗಗಳಿಂದ ಜನರು ರಾಜ್ಯದ ಎಲ್ಲಾ ಭಾಗಗಳಿಗೂ ಪ್ರಯಾಣ ಮಾಡಬಹುದು. ರಾಜನ ಕುದುರೆ ದಳಗಳು ಮಾತ್ರ ಈ ನಯವಾದ ಮಾರ್ಗಗಳಿಂದ ಹೋಗಲಾರವಾದುದರಿಂದ ಅವುಗಳ ಒಂದು ಬದಿಯಲ್ಲಿ ಕುದುರೆಗಳ ಚಲಾವಣೆಗೆ ಪ್ರತ್ಯೇಕ ಮಾರ್ಗ ಭಾಗವಿದೆ. ಇಲ್ಲಿ ದೊರೆಗಾಗಿ ಮಣ್ಣು ಚೆಲ್ಲಲ್ಪಟ್ಟಿದ್ದು ಕುದುರೆಗಳು ಜಾರಿ ಬೀಳದಂತಿದೆ. ಅಲ್ಲಿನ ರಾಜಬೀದಿಗಳು ಎರಡು ಕಡೆಗಳಲ್ಲಿ ಹತ್ತತ್ತು ಹೆಜ್ಜೆ ಅಗಲವಿದ್ದು ಅವುಗಳ ಮಧ್ಯದಲ್ಲಿ ಮರಳಿನಿಂದ ಮಾಡಿದ ಮಾರ್ಗವಿದೆ. ಇದರ ನಡುವೆ ಮಳೆ ನೀರು ಹೋಗುವ ಚರಂಡಿಗಳಿದ್ದು ಮೇಲಿನಿಂದ ಅರ್ಧವೃತ್ತಾಕಾರದ ಕಲ್ಲಿನಿಂದ ಮುಚ್ಚಲ್ಪಟ್ಟಿವೆ. ವಾಹನಗಳು ಇದೇ ಮಾರ್ಗವಾಗಿ ಬಿಡುವಿಲ್ಲದೆ ಚಲಿಸುವುವು.

ಪ್ರಯಾಣಿಕರ ಸೌಕರ್ಯದ ಏರ್ಪಾಡಿನ ಕುರಿತು ಮಾರ್ಕೋಪೋಲೋನ ವರದಿ ಹೀಗಿದೆ—"ಶಕ್ಯವಿದ್ದಲ್ಲಿ ಮರಗಳನ್ನು ನೆಟ್ಟಿರುವರು. ಮರಗಳು ಬೆಳೆಯಲಾರದ ಗುಡ್ಡ ಮರ ಭೂಮಿ ಪ್ರದೇಶದಲ್ಲಿ ಮಾರ್ಗಗಳ ಉದ್ದಕ್ಕೂ ಇಕ್ಕಡೆಗಳಲ್ಲಿ ಕೈಕಂಭಗಳನ್ನೂ ಬಿಳಿಯ ಕಲ್ಲುಗಳನ್ನೂ ನೆಟ್ಟಿರುವರು. ಹಿಮದಿಂದ ನೆಲ ಮುಚ್ಚಿದ್ದು ರಸ್ತೆಗಳು ಕಾಣದಿದ್ದ ಸಂಧರ್ಭದಲ್ಲಿ ಮರಗಳ ಸಾಲುಗಳೂ ಕಲ್ಲು ಕಂಭಗಳೂ ದಾರಿಹೋಕರಿಗೆ ಮಾರ್ಗ ಹರಿದು ಹೋಗುವ ದಿಕ್ಕನ್ನು ತಿಳಿದುಕೊಳ್ಳಲನುಕೂಲವಾಗುತ್ತದೆ. ಇವುಗಳೆಲ್ಲದರ ವ್ಯವಸ್ಥೆಗಾಗಿ ಪ್ರತ್ಯೇಕ ಅಧಿಕಾರಿಗಳು ನೇಮಕ ಮಾಡಲ್ಪಟ್ಟಿರುವರು."

ನೆನ್‌ಕಿಂಗ್, ಚೆಂಗ್‌ಟು, ಸಿಯಾನ್‌ಫು ನಗರಗಳಿಂದ ಎರಡು ಸಾವಿರ ಮೈಲುಗಳ ಉದ್ದಕ್ಕೆ ರಾಜ ರಸ್ತೆಗಳು ಅನೇಕ ಉಪಬೀದಿಗಳಿಂದ ಜೋಡಿಸಲ್ಪಟ್ಟಿವೆ. ನಾಲ್ಕು ಶತಮಾನ ಹಿಂದೆ ಪೆಕಿನ್ ನಗರವು ಚೀನದ ರಾಜಧಾನಿಯಾದಾಗ ಅದು ಹೆದ್ದಾರಿಗಳ ಕೇಂದ್ರವಾಯಿತಾದರೂ ಹಿಂದಿನ ಪ್ರಾಮುಖ್ಯ ರಸ್ತೆಗಳೂ ಅದಕ್ಕೆ ಜೋಡಿಸಲ್ಪಟ್ಟವು.

ಹದಿನಾರನೇ ಶತಮಾನದಲ್ಲಿ ದಕ್ಷಿಣ ಅಮೇರಿಕಕ್ಕೆ ಹೋದ ಸ್ಪೈನ್ ದೇಶಸ್ಥರು ಅಲ್ಲಿನ ಮೂಲನಿವಾಸಿಗಳು ಕಟ್ಟಿದ ಮಾರ್ಗಗಳನ್ನೂ ನೋಡಿ ಅಚ್ಚರಿಗೊಂಡರು. ೪ ಮತ್ತು ೨ ಸಾವಿರ ಉದ್ದದ ಎರಡು ಮುಖ್ಯ ಹೆದ್ದಾರಿಗಳು ಅಲ್ಲಿದ್ದು ಅವು ೧೫ ಸಾವಿರ ಅಡಿ ಎತ್ತರದ ಬೆಟ್ಟ ಪ್ರದೇಶವನ್ನು ಹಾದು ಹೋಗಿದ್ದುವು. ಅವು ರೋಮನ್ನರ ಭವ್ಯ ಮಾರ್ಗಗಳಿಗಿಂತಲೂ ಶ್ರೇಷ್ಠವಾಗಿದ್ದುವಂತೆ. ನಡೆಯಲು ಅನಾಯಾಸಕರವಾಗಿರುವುದರಿಂದ ಸಮುದ್ರ ತೀರದಿಂದ ಕ್ಯುಜ್ಕೋ ರಾಜಧಾನಿಗೆ (೩೦೦ ಮೈಲು ದೂರ) ಚಿಸ್ತ್ರರು ಕೈಲು ಗಾಡಿಗೆ ತಗಲುವ ಸಮಯಕ್ಕಿಂತಲೂ ಬೇಗನಾಗಿ ಮೀನನ್ನು ಮುಟ್ಟಿಸುತ್ತಿದ್ದರಂತೆ. ಪ್ರತಿ ಹತ್ತತ್ತು ಮೈಲಿಗೊಬ್ಬರಂತೆ ಸರತಿ ಪ್ರಕಾರ ಓಡುವ ವ್ಯವಸ್ಥೆ ಮಾಡಿದ್ದರು. ಅಲ್ಲಿಯ ಜನರು ವಾಹನಗಳನ್ನು ಉಪಯೋಗಿಸುತ್ತಿಲ್ಲವಾದುದರಿಂದ ಅವು ಬೇಗನೇ ಹಾಳಾಗುತ್ತಿರಲಿಲ್ಲ ಮಾತ್ರವಲ್ಲ ಅಲ್ಲಿ ಮೊತ್ತ ಮೊದಲು ಒಂದು ತರದ ಡಾಮಾರನ್ನು ಮಾರ್ಗ ರಚನೆಗೆ ಉಪಯೋಗಿಸುತಿದ್ದರೆಂದು ಕಂಡುಬಂದಿರುತ್ತದೆ.

ಮೊಗಲರ ಆಳ್ವಿಕೆಯ ಕಾಲದಲ್ಲಿ ನಮ್ಮ ದೇಶದ ಹೆದ್ದಾರಿ ರಸ್ತೆಗಳು ಇನ್ನೂ ಉದ್ದಗೊಳಿಸಲ್ಪಟ್ಟವು. ಖಿಜ್ಜೀ, ಗುಲಾಮ, ಲೋಡಿ ಮುಂತಾದ ಅಫಘಾನ್ ರಾಜವಂಶಗಳು ಡಿಲ್ಲಿಯಲ್ಲಿ ಆಳುತ್ತಿರುವಾಗಲೂ ಇದ್ದ ಮಾರ್ಗಗಳು ಪ್ರಯಾಣಿಕರ ಪ್ರಶಂಸೆಗೆ ಪಾತ್ರವಾಗಿದ್ದುವು. ಇಬ್ಬನ್ ಬಾಟುಟಾನೆಂಬ ಅರಬೀ ಸಂಚಾರಿಯು ಅವುಗಳ ಕುರಿತು ಶ್ಲಾಘಿಸಿರುವನು. "ಡಿಲ್ಲಿ ದೌಲತಾಬಾದ್ ರಸ್ತೆಯು ಅಲ್ಲಿ ನೆಟ್ಟ ಮರಗಳಿಂದ ಸುಂದರ ತೋಟದಂತೆ ಕಾಣುತ್ತದೆ. ಪ್ರತಿ ೩ ಮೈಲಿಗೆಂಬಂತೆ ರಾಜ್ಯಾಧಿಕಾರಿಗಳಿಗಾಗಿ ತಂಗಲು ವಿಶ್ರಾಂತಿ ಗೃಹಗಳು ಇವೆ. ಅವುಗಳ ಬಳಿ ಜನವಸತಿಯೂ ಇದೆ. ಬಾದಶಹನಿಗೂ ಅವನ ಪರಿವಾರಕ್ಕೂ ಉಳಕೊಳ್ಳಲು ಇಲ್ಲಿ ಪ್ರತ್ಯೇಕ ಬಂಗಲೆಗಳಿವೆ. ಆದುದರಿಂದ ಪ್ರಯಾಣಿಕರು ಅಡಿಗೆ ಸಾಮಗ್ರಿಗಳನ್ನು ಜೊತೆಯಲ್ಲಿ ಒಯ್ಯುವ ಅವಶ್ಯಕತೆಯೇ ಇಲ್ಲ."

ಷರ್‌ಷಾನ (೧೫೪೧)ರ ಆಳ್ವಿಕೆಯಲ್ಲಿ ಹಿಂದೂಸ್ಥಾನದಲ್ಲಿ ಅತೀ ಭವ್ಯವಾದ ಮಾರ್ಗ ವ್ಯವಸ್ಥೆ ಇತ್ತು. ಹಿಂದೂ ಮುಸಲ್ಮಾನರಿಗೆ ಪ್ರತ್ಯೇಕ ಛತ್ರಗಳಿದ್ದವು. ಅಲ್ಲಿ ತಂಗಿದವರಿಗೆ ದಿನ ನಿತ್ಯವೂ ಊಟದ ಸಾಮಾಗ್ರಿಗಳು ಕೊಡಲ್ಪಡುತಿದ್ದುವು. ಪಂಜಾಬದಿಂದ ಬಂಗಾಲದ ವರೇಗೆ ಒಂದು ಉದ್ದವಾದ ಹೆದ್ದಾರಿ ಇತ್ತು. ಅಲ್ಲದೆ ಆಗ್ರಾದಿಂದ ಬುರಾನಪುರಕ್ಕೂ, ಜೋಧಪುರ, ಚಿತ್ತೂರುಗಳಿಗೂ ಶ್ರೇಷ್ಠ ತರಗತಿಯ ಮಾರ್ಗಗಳಿದ್ದುವು. ಅವನ ಕಾಲದಲ್ಲಿ ಪ್ರಯಾಣಿಕರಿಗೆ ಕಳ್ಳ ಕಾಕರ ಭೀತಿ ಎಂಬುದಿಲ್ಲ. "ಓರ್ವ ಮುದುಕಿಯು ಹಣದ ಗಂಟು ತಲೆಗಿಟ್ಟು ಮರಳು ಕಾಡಿನ ಮಾರ್ಗದಲ್ಲಿ ರಾತ್ರೆ ಹೊತ್ತು ಮಲಗಿಕೊಂಡರೂ ಭಯವಿದ್ದಿಲ್ಲ"ವೆಂದು ಆಗಿನ ಇತಿಹಾಸಕಾರರು ಬರೆದಿರುವರು. ಷರ್‌ಶಾನನ್ನು ಮಾರ್ಗಸ್ಥಾಪಕನೆಂದೂ ಹೇಳಬಹುದು.

ಮೊಗಲ್ ಕಾಲದಲ್ಲಿದ್ದ ಮುಖ್ಯ ರಸ್ತೆಗಳೆಂದರೆ ಡಿಲ್ಲಿಯಿಂದ ಲಾಹೋರ್, ಅಜ್ಮೀರ, ಆಗ್ರಾ, ಬನಾರಿಸ್ ಮತ್ತು ಪಾಟ್ನಾಕ್ಕೂ ಇದ್ದ ಮಾರ್ಗಗಳು ಆಗ್ರಾ-ಅಲ್ಲಾಹಾಬಾದ್, ಲಾಹೋರ್-ಮುಲ್ತಾನ್, ಗುಜರಾತ್-ಶ್ರೀನಗರ, ಮತ್ತು ಬಿಜಾಪುರ್-ಉಜ್ಜೈನ್ ಇವು ಬೇರೆ ಕೆಲವು ಮುಖ್ಯ ರಸ್ತೆಗಳು.

ಕರ್ನಾಟಕ ಸಾಮ್ರಾಜ್ಯವಾದ ವಿಜಯನಗರದ ಕಾಲದಲ್ಲಿ ಅತೀ ವಿಶಾಲವಾದ ಮಾರ್ಗಗಳಿದ್ದುವು. ಹೊಸ ಪೇಟೆಯಿಂದ ವಿಜಯನಗರಕ್ಕೆ ಆಟದ ಮೈದಾನುಗಳಷ್ಟು ಅಗಲವಾದ ಮಾರ್ಗಗಳಿದ್ದುವಾಗಿ ಡೊಮಿಂಗೊ ಪಾಸ್‌ನೆಂಬ ಪೋರ್ತುಗೀಸ ಪ್ರೇಕ್ಷಕನು ಬರೆದಿದ್ದಾನೆ. ಎರಡು ಬದಿಗಳಲ್ಲೂ ಮನೆಗಳಿರುತಿದ್ದುವು. ಮರಗಳಂತೂ ತೋಪುಗಳಂತೆ ಕಂಗೊಳಿಸುತಿದ್ದುವಂತೆ.

ಟವರ್ನಿಯರ್ ಎಂಬ ಫ್ರೆಂಚ್ ವ್ಯಾಪಾರಸ್ಥನು ೧೬೪೦ರಿಂದ ೧೬೬೭ರ ವರೆಗೆ ಐದು ಸಲ ಹಿಂದೂ ದೇಶಕ್ಕೆ ಬಂದಿದ್ದು "ಇಲ್ಲಿಯ ಮಾರ್ಗಗಳ ಕುರಿತು—ಫ್ರಾನ್ಸ್ ಮತ್ತು ಇಟಲಿಗಳಲ್ಲಿರುವ ಮಾರ್ಗಗಳಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ"ವೆಂದಿದ್ದಾನೆ. ಎತ್ತಿನ ಗಾಡಿಯಲ್ಲಿ ಆ ಕಾಲದಲ್ಲಿ ದಿನಕ್ಕೆ ಇಪ್ಪತ್ತು ಮೈಲುಗಳ ಪ್ರಯಾಣ ಮಾಡುವಷ್ಟು ಉತ್ತಮವಾಗಿದ್ದುವಂತೆ ಆಗಿನ ರಸ್ತೆಗಳು.

ಮೊಗಲ್ ಕಾಲದ ಮಾರ್ಗಗಳ ಕುರಿತು ಟವರ್ನಿಯರನು ಬರೆದ ಸಂಗತಿಗಳು ಓದಲು ಸಾರಸ್ಯವಾಗಿವೆ. ಒಂದೊಂದು ಸಲ ಕೆಲವು ಮಾರ್ಗಗಳಿಂದ ವ್ಯಾಪಾರದ ಸಾಮಾನುಗಳನ್ನು ಒಯ್ಯುವ ಒಂಟೆ, ಹೇಸರ ಕತ್ತೆಗಳ ಸಾಲುಗಳು ಮೆರವಣಿಗೆಯಂತೆ ಹೋಗುತಿದ್ದುವಂತೆ. ಇವುಗಳು ಕೆಲವು ಸಪೂರವಾದ ಭಾಗಗಳಲ್ಲಿ ದಾಟಿ ಹೋಗಲು ಮೂರು ದಿವಸಗಳು ಹಿಡಿಯುತಿದ್ದುವಂತೆ. ಅಷ್ಟರ ತನಕ ಸಣ್ಣ ಪುಟ್ಟ ವಾಹನಗಳು ಪಕ್ಕದ ಗದ್ದೆ ಮಾರ್ಗದಲ್ಲಿ ಕಾಯ ಬೇಕಿತ್ತು. ವಿಶಾಲವಾಗಿ ಕೃಷಿ ಮಾಡಲ್ಪಟ್ಟ ಆ ಪ್ರದೇಶಗಳಲ್ಲೆಲ್ಲ ನೀರಿನ ಕೊಳಗಳೂ, ಛತ್ರಗಳೂ ಇರುವುದರಿಂದ ಯಾರಿಗೂ ಅನಾನುಕೂಲವಾಗುತಿದ್ದಿಲ್ಲ.

ಸಪೂರವಾದ ಎಲೆಯ ಮರಗಳಿಂದ ಲಾಹೋರ್-ಆಗ್ರಾ-ಡಿಲ್ಲಿ ರಸ್ತೆಯು ವೃಂದಾವನದಂತೆ ಶೋಭಿಸುತಿತ್ತು. ಗೊಲ್ಕೊಂಡಾ, ಔರಂಗಾಬಾದ್, ಗೋವಾ, ಬಿಜಾಪುರ್ ಈ ಪ್ರಾಂತ್ಯಕ್ಕೆ ತಲ್ಪುವ ರಸ್ತೆಗಳು ಮಳೆಗಾಲದಲ್ಲಿ ಸ್ವಲ್ಪ ಹಾಳಾಗುತಿದ್ದುವು. ಟವರ್ನಿಯರನು ಸುರತ್ತಿನಲ್ಲಿ ಗವರ್ನರಾಗಿದ್ದ ಶಿಯಿಸ್ತಾ ಖಾನನಿಗೆ (ಔರಂಗಜೇಬನ ಚಿಕ್ಕತಂದೆ) ಬರೆದ ಪತ್ರದಲ್ಲಿ "ಮಳೆಗಾಲವಾದುದರಿಂದ ರಸ್ತೆಗಳು ವಾಹನ ಪ್ರಯಾಣಕ್ಕೆ ಅಯೋಗ್ಯವಾದ ಕಾರಣ ಈ ಸಲ ತಮ್ಮ ದರ್ಶನಕ್ಕೆ ಬರಲು ಸಾಧ್ಯವಿಲ್ಲವಾಗಿದೆ" ಎಂದು ಬರೆದಿರುವನು. ಯುರೋಪಿನಲ್ಲಿರುವ ಅತೀ ಸುಂದರವಾದ ಸೇತುವೆಗಳನ್ನು ಮೀರಿಸುವ ಕಲ್ಲು ಸಂಕಗಳೂ ಇದ್ದುವೆಂದೂ ಟವರ್ನಿಯರನು ಉಲ್ಲೇಖಿಸಿದ್ದಾನೆ. ಮಾತ್ರವಲ್ಲ ಅಲ್ಲಲ್ಲಿ ನದಿದಾಟಲು ಕಡವುಗಳ ವ್ಯವಸ್ಥೆಯೂ ಚೆನ್ನಾಗಿತ್ತು.

ಹದಿನೆಂಟನೆ ಶತಮಾನವು ಹಿಂದೂ ದೇಶದಲ್ಲಿ ತುಂಬಾ ಅವ್ಯವಸ್ಥೆಯ ಕಾಲ. ಮೊಗಲ್ ಸಾಮ್ರಾಜ್ಯವು ಹರಿದು ಹಂಚಾಗಿ ಹೋಗಿ, ಅವರ ವೈಭವವು ಕುಸಿದು ಬೀಳುತ್ತಿರುವ ಜರ್ಜರ ಸ್ಥಿತಿಯಲ್ಲಿತ್ತು. ಆ ಸಮಯದಲ್ಲಿ ಬಲವಾದ ಕೇಂದ್ರ ಸರಕಾರವು ಇಲ್ಲದುದರಿಂದ ಹೆದ್ದಾರಿಗಳು ಹಾಳುಬಿದ್ದು, ಪ್ರಯಾಣಕ್ಕೆ ಅಪಾಯಕಾರಿಯಾದುವು.

ಬ್ರಿಟಿಷರ ಆಕ್ರಮಣವಾದ ಮೇಲಾದರೂ ಮಾರ್ಗಗಳ ಸುಧಾರಣೆಯು ಭರದಿಂದ ಸಾಗಲಿಲ್ಲ. ಸಿಪಾಯಿ ದಂಗೆಯ ಕಾಲದ ವರೇಗೆ ಮೊಗಲ್ ಕಾಲದ (ಅಜ್ಮೀರ್, ಆಗ್ರಾ, ಸುರತ್) ರಸ್ತೆಗಳು ಮಾತ್ರ ದುರಸ್ತಿ ಮಾಡಲ್ಪಟ್ಟಿದ್ದುವು. ಇವಲ್ಲದೆ ಆಗ್ರಾದಿಂದ ಡಿಲ್ಲಿಗೂ, ಎಟಾವಾದಿಂದ ಅಲಹಾಬಾದಿಗೂ, ಮತ್ತು ಪಾಟ್ನಾ, ಬರಿಲಿಯಿಂದ ಕಾಶಿ ಪಟ್ಟಣಕ್ಕೂ ಮುಖ್ಯ ದಾರಿಗಳಿದ್ದುವು.

ಟಪ್ಪಾಲು ಖಾತೆಯು ಸ್ಥಾಪಿಸಿದ ಮೇಲೇ ಬ್ರಿಟಿಷ್ ಸರಕಾರದವರು ಇಲ್ಲಿನ ಅನೇಕ ರಸ್ತೆಗಳನ್ನು ಸುಧಾರಿಸಿ ಕಟ್ಟಲು ಹಿಡಿದರು. ಆಗಿಂದಾಗ್ಗೆ ಯುದ್ಧಗಳುಂಟಾಗುವ ಸಂಭವವಿದ್ದುದರಿಂದ ಮತ್ತು ಒಳ್ಳೆ ಮಾರ್ಗಗಳು ಶತ್ರುಗಳಿಗೆ ಅನುಕೂಲವಾಗುವುವೆಂಬ ಹೆದರಿಕೆಯಿಂದ ಆಗಿನ ಅಧಿಕಾರಿಗಳು ಅವುಗಳ ಸುವ್ಯವಸ್ಥೆಗೆ ಗಮನ ಕೊಡಲಿಲ್ಲವೆಂದು ಸರ್ ಜೆ. ಹೆಸ್ಸಿ ಎಂಬ ಗ್ರಂಥಕಾರರು ಬರೆದಿರುತ್ತಾರೆ. ಅಸ್ತವ್ಯಸ್ತವಾದ ಮಾರ್ಗಗಳಿಂದ ಸೈನ್ಯ ಸಾಗಿಸುವ ಮತ್ತು ಯುದ್ಧ ಮಾಡುವ ತರಬೇತಿಯೂ ಹಿಂದೀ ಸೈನಿಕರಿಗೆ ಸಿಕ್ಕದಂತಾಯಿತೆಂದೂ ಅವರ ಅಭಿಪ್ರಾಯ.

ಸುಮಾರು ೧೮೪೦ರ ನಂತರ ಸೈನಾಧಿಕಾರಿಗಳ ಸಲಹೆ ಮೇರೆಗೆ ಪ್ರಾಮುಖ್ಯ ಹೆದ್ದಾರಿಗಳನ್ನು ಸುಮಾರು ೮೦ ಲಕ್ಷ ರೂಪಾಯಿಗಳ ಖರ್ಚಿನಿಂದ ದುರಸ್ತಿ ಮಾಡಲು ಹಿಡಿಯಲಾಯಿತು. ೧೮೫೫ರಲ್ಲಿ ಕೇಂದ್ರ ಸರಕಾರದವರು ಪ್ರಾಂತಗಳಲ್ಲಿ ಮಾರ್ಗಗಳ ಇಲಾಖೆಯನ್ನು ಸ್ಥಾಪಿಸಿದರು. ಇಷ್ಟುಹೊತ್ತಿಗೆ ರೈಲುಮಾರ್ಗಗಳೂ ಬಂದುವಾದುದರಿಂದ ಅವುಗಳನ್ನು ತಲ್ಪುವರೆ ಅನುಕೂಲವಾಗುವಂತೆ ಡಾಮಾರು ಮತ್ತು ಕಲ್ಲು ಮಾರ್ಗಗಳೂ, ನದಿಗಳ ಮೇಲೆ ಸೇತುವೆಗಳೂ ಕಟ್ಟಲ್ಪಟ್ಟವು.

ಮೇಯೋ ಮತ್ತು ರಿಪನ್ ವ್ಯಾಸರಾಯರ ಕಾಲದಲ್ಲಿ ಮಾರ್ಗ ವ್ಯವಸ್ಥೆಯ ಖಾತೆಯನ್ನು ಆಯಾ ಪ್ರಾಂತೀಕ ಸರಕಾರಕ್ಕೇನೇ ಒಪ್ಪಿಸಲಾಯಿತು. ನಂತರ ಪ್ರಾಂತೀಕ ಸರಕಾರಗಳು ಜಿಲ್ಲಾಧಿಕಾರಿಗಳಿಗೂ, ಜಿಲ್ಲಾಧಿಕಾರಿಗಳಿಂದ ಗ್ರಾಮ ಪಂಚಾಯಿತಿಯವರಿಗೂ ಮಾರ್ಗ ಸುಧಾರಣೆಯ ಕಾರ್ಯವನ್ನು ವಹಿಸಿಕೊಡಲಾಯಿತು. ೧೮೮೦ರಲ್ಲಿ ಕಲ್ಲಿನಿಂದ ಮಾಡಲ್ಪಟ್ಟ ಸುಮಾರು ೨೦ಸಾವಿರ ಒಟ್ಟು ಉದ್ದದ ಮಾರ್ಗಗಳೂ, ಸೇತುವೆಗಳೂ ಇದ್ದುವು.

ಇಂದು ನಮ್ಮ ದೇಶದಲ್ಲಿ ೬೯ ಸಾವಿರ ಒಟ್ಟು ಉದ್ದಳತೆ ಇರುವ ಮುಖ್ಯ ಹೆದ್ದಾರಿ ಹಾದಿಗಳಿವೆ. ಅವುಗಳಲ್ಲಿ ಕಲ್ಕತ್ತಾದಿಂದ ಖೈಬರ್ ಕಣಿವೆಗೂ, ಕಲ್ಕತ್ತಾದಿಂದ ಮದ್ರಾಸಿಗೂ, ಇಲ್ಲಿಂದ ಬೊಂಬಾಯಿಗೂ, ಅಲ್ಲಿಂದ ಡಿಲ್ಲಿಗೂ, ಹೋಗುವ ಮಾರ್ಗಗಳು ಹಿರಿಯ ಹೆದ್ದಾರಿಗಳು-ಇವೆಲ್ಲವೂ ಪ್ರಾಣಿ ವಾಹನಗಳಿಗೆ ಮಾತ್ರ ಯೋಗ್ಯವಾದುದಾಗಿವೆ.

ಮೋಟಾರು ವಾಹನಗಳ ಚಲಾವಣೆಯು ಹೆಚ್ಚಾದಂದಿನಿಂದ "ಮಾರ್ಗಗಳ ರಚನೆಯೇ ಬೇರೆಯಾಗಬೇಕಾಗಿದೆ. ಅತಿ ಭಾರವಾದ ಹೊರೆಯನ್ನು ಹೊತ್ತು ನಾಲ್ಕು ಆರು ಚಕ್ರದ ಈ ಯಂತ್ರ ವಾಹನಗಳು ಮಾರ್ಗದ ಮೇಲ್ಭಾಗವನ್ನೇ ಕೊರೆಯಲಾರಂಭಿಸಿವೆ. ಆದರೆ ಈ ಸಂಧರ್ಭದಲ್ಲಿ ಮಾರ್ಗಗಳು ಎತ್ತಿನ ಗಾಡಿಯ ಸಪೂರವಾದ ಮತ್ತು ಕಬ್ಬಿಣ ಧಾರೆಯುಳ್ಳ ಚಕ್ರಗಳಿಂದ ಹಾಳಾಗುವಷ್ಟು ಬೇಗ ರಬ್ಬರಿನ ಮೋಟಾರು ಟಾಯರುಗಳಿಂದಾಗುವುದಿಲ್ಲ. ಟಾಯರುಗಳು ಗಾಡಿ ಚಕ್ರಗಳಿಂದ ಕಡಿದು ಹಾಕಲ್ಪಟ್ಟ ಭಾಗಗಳನ್ನು ಇನ್ನೂ ಆಳವಾಗಿಯೂ ಅಗಲವಾಗಿಯೂ ಕೊರೆಯಲು ಸಹಾಯ ಮಾಡುತ್ತವಾದುದರಿಂದ ಗಟ್ಟಿಯಾದ ಜಲ್ಲಿಕಲ್ಲಿನಿಂದಲೂ ಡಾಮಾರಿನಿಂದಲೂ ಮಾಡಲ್ಪಟ್ಟ ಮಾರ್ಗಗಳೇ ಯುದ್ಧಾನಂತರ ರಚಿಸಲ್ಪಡಬೇಕು.

ನಮ್ಮ ದೇಶದೊಳಗಿನ ಮಾರ್ಗಗಳ ಸುಧಾರಣೆಯಾಗುವುದೆಂದು ವೈಸರಾಯ ಸಾಹೇಬರು ತಮ್ಮ ಯುದ್ಧಾನಂತರ ಯೋಜನೆಯಲ್ಲಿ ತಿಳಿಸಿದ್ದಾರೆ. ಇದಕ್ಕೆ ತುಂಬಾ ಖರ್ಚು ಬೇಕಾಗುವುದಾದರೂ ಕ್ರಮೇಣ ಅದರಿಂದಾಗುವ ಲಾಭವು ಅದಕ್ಕಿಂತಲೂ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ.

ಗಾಂಧಿ-ಜಿನ್ನಾ-ವ್ಯಾಸ್‌ರಾಯ ಭೇಟಿ!

ಗಾಂಧಿ-ಜಿನ್ನಾ ಮಾತುಕತೆ ಯಶಸ್ವಿಯಾದರೆ

ಲೀಗ್-ಕಾಂಗ್ರೆಸ್ ಸಂಯುಕ್ತ ಕಾರ್ಯಕ್ರಮ

ಈ ಲೇಖನವು ವಾಚಕರಿಗೆ ತಲಪುವಾಗ ಬೊಂಬಾಯಿಯಲ್ಲಿ ನಡೆಯುವ ಗಾಂಧಿ-ಜಿನ್ನಾ ಭೇಟಿಯು ಹಲವು ಊಹಾಪೋಹೆಗಳ ವರದಿಯು ಪ್ರಕಟವಾಗಬಹುದು. ತಾ. ೯ರಂದು ಮೂರು ಗಂಟೆ-ಪರ್ಯಾಲೋಚನೆ ನಡೆದು, ತಾ. ೧೧ಕ್ಕೆ ಪುನಃ ಭೇಟಿನಡೆಯಿತು. ಬರುವ ವಾರಕ್ಕೆ ಅತೀ ಮಹತ್ವದ ವರ್ತಮಾನವನ್ನು ನಾವು ಕೇಳಲಿರುವೆವು. ಕಾಂಗ್ರೆಸ್-ಲೀಗ್ ಸಂಧಾನ ಗುರಿಮುಟ್ಟಿದರೂ, ಮುರಿದರೂ ಅದು ಇತಿಹಾಸದ ದೊಡ್ಡದೊಂದು ಘಟನೆಯಾಗುವುದರಲ್ಲಿ ಸಂದೇಹವಿಲ್ಲ.

ಈ ಮಾತುಕತೆಗಳ ಕುರಿತು ವಿವೇಕಪೂರ್ಣ ಚರ್ಚೆಯು ವಿಚಾರವಂತರೆಲ್ಲರೊಳಗೂ ನಡೆಯುತ್ತಲೆ ಇತ್ತು. ಪ್ರಾರಂಭದಲ್ಲಿ ಇದರ ಯಶಸ್ವಿ ಫಲವು ಸಂದೇಹ ದೃಷ್ಟಿಯಿಂದ ನೋಡಲಾಗುತ್ತಿದ್ದರೂ ಕಟ್ಟಕಡೆಗೆ ಈ ನಿರಾಶಾದಾಯಕ ಕಳವಳವು ಶಾಂತವಾಗಿ ಯಶಸ್ವಿ ಫಲದ ಚಿಹ್ನೆಗಳು ತೋರ ತೊಡಗಿದವು. ಅತ್ಯಲ್ಪ ಅವಧಿಯಲ್ಲಿ ಭರವಸೆಯ ಒಂದು ವಾತಾವರಣವು ಕಲ್ಪಿತವಾಯಿತು. ದೇಶ ವಿಭಜನೆಯ ತತ್ವಕ್ಕೆ ದಿಗಿಲುಗೊಂಡು ತತ್ತರಿಸುವವರು ತಮ್ಮ ಹೆದರಿಕೆಗಳನ್ನು ಬಿಟ್ಟು ನಮ್ಮ ದೇಶದ ರಾಜಕೀಯ ಜೀವನದಲ್ಲಿ ಹೊಸ ಕಾಲವೊಂದು ಬರಬಹುದೆಂದು ಉತ್ಸಾಹದಿಂದ ಭವಿಷ್ಯವನ್ನು ಹಾರೈಸುತ್ತಿರುವರು.

ಆರು ವರ್ಷಗಳ ಹಿಂದೊಮ್ಮೆ ಮಹತ್ವದ ಗಾಂಧಿ-ಜಿನ್ನಾ ಭೇಟಿಯಾಗಿತ್ತು. ದುರಾದೃಷ್ಟದಿಂದ ಅಂದಿನ ಮಾತುಕತೆಗಳು ಪರಸ್ಪರ ಭೇದ ಕ್ರೋಧಗಳಿಂದೆಂಬಂತೆ ಕೂಡಿದ್ದಾಗಿತ್ತೆಂದು ಹೇಳಲಾಗಿದೆ. ಇಂದಿನ ಈ ಮಾತುಕತೆಗಳಲ್ಲಿ ಭೇದವೇನು ಇಲ್ಲವಾದರೂ ಅತ್ಯಂತ ಸೌಹಾರ್ದ ಸದ್ಭಾವಗಳು ಕೂಡಿಕೊಂಡಿವೆ ಎಂಬ ನಿಸ್ಸಂದೇಹ ಇದೇ ದೊಡ್ಡ ಆಶಾಕಿರಣ.

ಇತ್ತಂಡದ ಮುಖಂಡರು ತಮ್ಮ ತಮ್ಮ ಗೊತ್ತುಗುರಿಗಳ ಸಂಪೂರ್ಣ ಪರಿಜ್ಞಾನದಿಂದ ಚರ್ಚೆನಡೆಸುವರು. ಒಬ್ಬರಿಗೆ ಭಾರತ ಸ್ವಾತಂತ್ರ್ಯವೇ ಮುಖ್ಯ, ಇನ್ನೊಬ್ಬರಿಗೆ ಪಾಕಿಸ್ಥಾನ ಮತ್ತದರ ಸ್ವಾತಂತ್ರ್ಯವೇ ಮುಖ್ಯ. ಆದರೆ ಭಾರತವು ಸ್ವತಂತ್ರವಾಗದೆ ಪಾಕಿಸ್ಥಾನವಾಗಲೀ ಅದರ ಸ್ವಾತಂತ್ರ್ಯವಾಗಲೀ ಸಾಧ್ಯವಿಲ್ಲವೆಂದು ಜಿನ್ನರಿಗೆ ಖಚಿತವಾಗಿದೆ.

ಸ್ಪಷ್ಟವೂ ಪ್ರತ್ಯೇಕವಾಗಿಯೂ ಮಾಡಲ್ಪಟ್ಟ ಈ ಎರಡು ಕೇಳಿಕೆಗಳೊಳಗೆ ಪರಸ್ಪರ ಪರ್ಷಣೆ ಬಾರದಾಗಿ ನಂಬಲಾಗಿದೆ. ಮಾತುಕತೆಯ ಯಶಸ್ಸಿನಿಂದ ಎರಡು ಮತಸ್ಥರೊಳಗೆ ಒಪ್ಪಂದವಾದಂತಾಗುವುದೆಂದೂ ಹೇಳಲಾಗಿದೆ. ಇದರಿಂದ ಇರ್ವರೂ ಪರಸ್ಪರ ಐಕ್ಯತೆಯಿಂದ ಪರಕೀಯರ ಪ್ರಭಾವವನ್ನು ಸುಧಾರಿಸಿಕೊಳ್ಳಬಹುದಾಗುತ್ತದೆಂದೂ, ಇಲ್ಲವೆ ನಮ್ಮೊಳಗಿನ ಕಲಹದಿಂದ ಲಾಭಹೊಂದುವವರೆಂದೆನಿಸಲ್ಪಟ್ಟವರನ್ನು ಪರಿವರ್ತಿಸಿಕೊಳ್ಳಲು ಒಟ್ಟುಗೂಡಿ ಪ್ರಯತ್ನಿಸಲು ಸಾಧ್ಯವಾಗಬಹುದೆಂದೂ ನಿರೀಕ್ಷಿಸಲಾಗಿದೆ.

ಗಾಂಧಿಜೀಯವರು ಪಕ್ಕನೆ ಹೇಗೆ ಪಾಕಿಸ್ಥಾನ ತತ್ವಕ್ಕೆ ಒಪ್ಪಿದರು ಎಂಬ ಪ್ರಶ್ನೆಯು ಮೇಲಿಂದ ಮೇಲೆ ಕೇಳಲಾಗಿದೆ. ಇದಕ್ಕೆ ಒಂದೇ ಒಂದು ಉತ್ತರವಿದೆ. ಇಷ್ಟಪಟ್ಟರೆ ಅಲ್ಪ ಸಂಖ್ಯಾಕರು ಸ್ವಾತಂತ್ರ್ಯವಾಗಬಹುದೆಂಬ ತತ್ವವನ್ನು ಕಾಂಗ್ರೆಸು ಸ್ವೀಕರಿಸಿರುತ್ತದೆ. ಪಾಕಿಸ್ಥಾನವು ಆ ತತ್ವದ ವಿಶಾಲ ರೂಪವಾಗಿರುವುದೆಂದೂ, ಅದು ದೇಶವನ್ನು ವಿಭಜಿಸುವುದರಿಂದ ಮಾತ್ರ ಬಹಳ ಖೇದಾಸ್ಪದವಾಗಬಹುದೆಂದೂ ವಿವರಿಸಲಾಗಿದೆ.

ದೇಶವನ್ನು ವಿಭಾಗಿಸುವುದೆಂದರೆ ಗಾಂಧಿಜೀಯವರಿಗೆ ದೇಹದ ಅಂಗವನ್ನು ಕೊಯ್ದು ತೆಗೆದಷ್ಟು ವೇದನೆ ಕೊಡುವಂತಹುದು. ದೇಶದ ಸ್ವಾತಂತ್ರ್ಯ ದಿನವು ಇದರಿಂದ ಸಮೀಪವಾದಂತಾಗುವುದಾದರೆ ಗಾಂಧಿಜೀಯವರು ತಮ್ಮ ಆ ವೇದನೆಯನ್ನು ಸಹಿಸಲು ಸಿದ್ಧರಿರುವರೆಂದೂ ನಂಬಲಾಗುತ್ತದೆ. "ದೇಶದ ಸ್ವಾತಂತ್ರ್ಯ ದಿನವು ಸಮೀಪವಾದಂತಾಗುವುದಾದರೆ" ಎಂಬೀ ವಾಕ್ಯದ ಕಡೆಗೆ ನಾವು ತುಂಬಾ ಗಮನ ಕೊಡಬೇಕು.

ಸಂಧಾನ ಯಶಸ್ವಿಯಾದರೆ ಜಿನ್ನರು ಗಾಂಧಿಜೀಯವರೊಂದಿಗೆ ವ್ಯಾಸರಾಯರನ್ನು ಕಂಡು ಸಂಯುಕ್ತ ಕೇಳಿಕೆಯೊಂದನ್ನು ಅವರ ಮುಂದಿಡಲು ಸಮ್ಮತಿಸಬಹುದೆಂದೂ ಆಶಿಸಲಾಗಿದೆ. ಅಂದರೆ ಗಾಂಧಿ-ಜಿನ್ನಾ ವ್ಯಾಸ್‌ರಾಯ್ ಈ ವ್ಯಕ್ತಿತ್ರಯದ ಭೇಟಿಯು ಅಸಂಭವನೀಯವಲ್ಲವೆಂದು ನಾವು ಖಂಡಿತ ತಿಳಿಯಬಹುದು. ಇದಕ್ಕೆ ಮೊದಲು ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಬೇಕೆಂಬ ಕೇಳಿಕೆಯನ್ನು ಬಲವತ್ತಾಗಿ ವ್ಯಾಸ್‌ರಾಯರ ಮುಂದಿಡಲಾಗುವುದೆಂಬುದು ನಿರ್ವಿವಾದವೆನ್ನಬೇಕು.

ಇಂತಹ ಗಭೀರ ಸನ್ನಿವೇಶಗಳ ವಾತಾವರಣದಲ್ಲಿ ಇಂದಿನ ಗಾಂಧಿ-ಜಿನ್ನಾ ಭೇಟಿಯು ನಡೆಯುತ್ತದೆ. ಅವರು ಹೆತ್ತ್ವಾರ್ಥಕವಾಗಿ ದೇಶಹಿತವನ್ನು ಸಾಧಿಸಲು, ವಿವೇಕಪೂರ್ಣವಾಗಿ ಪರ್ಯಾಲೋಚಿಸಿ ಒಂದು ಒಪ್ಪಂದಕ್ಕೆ ಬರಬೇಕೆಂದು ಜನತೆಯು ಹಾರೈಸುವುದರಲ್ಲಿ ಹಾನಿಯಿರದು.

ಭಾವೀ ಭಾರತದ ಭವ್ಯ ತಳಹದಿ

ಬೊಂಬಾಯಿಯಲ್ಲಿ ತರುಣ ವಿದ್ಯಾರ್ಥಿಗಳ ಪರಿಷತ್ತು

ಸ್ವಾತಂತ್ರ್ಯಪಡೆದ ಮೇಲೆ ಭಾರತದ ಪ್ರಜಾಪ್ರತಿನಿಧಿ ಸಭೆಯು ಹೇಗೆ ಸೇರಿ ಪರ್ಯಾಲೋಚಿಸುತ್ತದೆಂಬುವರ ಒಂದು ಮಾದರಿ ಪ್ರದರ್ಶನವೋ ಎಂದು ತೋರಿದ ಒಂದು ದೃಶ್ಯವು ಬೊಂಬಾಯಿಯಲ್ಲಿ ಸೇರಿದ ವಿದ್ಯಾರ್ಥಿ ಪರಿಷತ್ತಿನಲ್ಲಿ ಕಂಡುಬಂತು.

ಪರಿಷತ್ತು ಸುಮಂಗಲಕರವಾದ ವಾತಾವರಣದಲ್ಲಿ ಪ್ರಾರಂಭಿಸಲ್ಪಟ್ಟಿತು. ವಿಶ್ವಮಾನ್ಯ ಗಾಂಧಿಜೀಯವರು ವಿಶೇಷದ ಒಂದು ಸಂದೇಶವನ್ನು ಕಳುಹಿಸಿಕೊಟ್ಟಿದ್ದರು. ಮಾಜಿ ಕಾಂಗ್ರೆಸ್ ಪ್ರಧಾನರಾದ ಬಾಲಗಂಗಾಧರ ಖೇರರು ಪರಿಷತ್ತನ್ನು ಉದ್ಘಾಟಿಸಿದರು. ಸೆರೆಮನೆಯಿಂದ ಆಗ ತಾನೇ ಹೊರಬಂದ ಒಂಬಾಯಿಯ ಸ್ವರ್ಣ ಕಾಂಗ್ರೆಸ್ ಕಾರ್ಯಸಾಧಕರಾದ ಶ್ರೀ ಎಸ್. ಕೆ. ಪಟೇಲ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು. ವಿಶ್ವಕವಿಯಿತ್ರಿಯಾದ ಸರೋಜಿನಿ ದೇವಿಯವರು ಸಭೆಯನ್ನಲಂಕರಿಸಿದ್ದರು. ಮಹಾರಾಷ್ಟ್ರದ ಪ್ರಖ್ಯಾತ 'ಕೈದಿ'ಯಾದ ಶ್ರೀ ಗಾಡ್ಗಿಲ್ ಅವರೂ, ಹರಿಜನರ ಆಪ್ತರೂ, ತತ್ವಜ್ಞಾನಿಗಳಾದ ತಕ್ಕರ್ ಬಾಪಾ ಅವರೂ, ಕೇಂದ್ರ ಸಭೆಯಲ್ಲಿ ಕಾಂಗ್ರೆಸ್ ನಾಯಕರೂ ಪ್ರಖ್ಯಾತ ವಕೀಲರೂ ಆದ ಭೂಲಾಭಾಯಿ ಅವರೂ ಭಾಷಣಮಾಡಿದರು. ನಗರದ ಶಾಲಾ ಕಾಲೇಜುಗಳಿಂದ ಚುನಾಯಿಸಿ ಕಳುಹಲ್ಪಟ್ಟ ೯೦೦ ವಿದ್ಯಾರ್ಥಿ ಪ್ರತಿನಿಧಿಗಳೂ, ೭೦೦೦ ವಿದ್ಯಾರ್ಥಿ ವಿದ್ಯಾರ್ಥಿನಿ ಪ್ರೇಕ್ಷಕರೂ ಅಂದಿನ ಸಭೆಗೆ ಹಾಜರಾಗಿದ್ದರು.

ದೇಶದ ಮುಂದಿರುವ, ಜಾತೀಯ ಐಕ್ಯತೆ, ಸ್ವಾತಂತ್ರ್ಯ, ಸುಧಾರಣೆ ಹರಿಜನೋದ್ಧಾರ ಮುಂತಾದ ಗಹನವಿಚಾರಗಳನ್ನು ಈ ಭಾವೀ ಮುಖಂಡರು ಚರ್ಚಿಸಿ ಯೋಗ್ಯ ಕಾರ್ಯಕ್ರಮ ಕೈಕೊಳ್ಳಲು ನಿರ್ಧರಿಸಿದುದು ಸ್ತುತ್ಯ.

ಮಹಾತ್ಮರ ಅಮೂಲ್ಯ ಸಲಹೆ

ಈ ಪರಿಷತ್ತಿಗೆ ಮಹಾತ್ಮಾ ಗಾಂಧಿಜೀಯವರ ಕಳುಹಿಸಿದ ಸಂದೇಶದಲ್ಲಿ ವಿದ್ಯಾರ್ಥಿಗಳು ಮಾತ್ರವಲ್ಲ ದೇಶದ ಹಿತಸಾಧಕರೆಲ್ಲರೂ ಅನುಸರಿಸಲು ಯೋಗ್ಯವಾದ ವಿಧಾಯಕ ಕಾರ್ಯಕ್ರಮದ ಸಲಹೆಯೊಂದನ್ನು ಹತ್ತು ಮುಖ್ಯ ವಿಷಯಗಳಲ್ಲಿ ಸೂಚಿಸಿರುವರು -(೧) ಬೇರೆ ಬೇರೆ ಪಕ್ಷಗಳನ್ನು ಮಾಡಿಕೊಂಡ ವಿದ್ಯಾರ್ಥಿಗಳೆಲ್ಲರೂ ತಮ್ಮ ತಮ್ಮ ವೈಷಮ್ಯವನ್ನು ಮರೆತು, ಐಕ್ಯತೆಯನ್ನು ಸ್ಥಾಪಿಸಬೇಕು (೨) ಮುಖ್ಯ ಗುರಿಯ ಧ್ಯೇಯಗಳನ್ನು ಸಾಧಿಸಲು ಎಲ್ಲಾ ತರದ ಮತಭೇದಗಳನ್ನು ಒಟ್ಟು ಒಂದಾಗಬೇಕು (೩) ನಿಸ್ವಾರ್ಥ ತ್ಯಾಗಬುದ್ಧಿಯ ಮಾದರಿಯನ್ನು ವಿದ್ಯಾರ್ಥಿಗಳು ಕಲ್ಪಿಸಬೇಕು. (೪) ವಿದ್ಯಾರ್ಥಿ ಜೀವನದಲ್ಲಿ ರಾಜಕೀಯದಲ್ಲಿ ಕೈಹಾಕಲು ಅವಕಾಶವಿಲ್ಲವಾದರೂ ವಿದ್ಯಾರ್ಥಿಗಳು ಇದ್ದ ಸಂಧರ್ಬಗಳಲ್ಲಿ ಶಕ್ಯವಿದ್ದಷ್ಟು ಕೆಲಸಮಾಡಬೇಕು (೫) ಶಾಂತಿ ಸ್ಥಾಪನೆಯ ಕಡೆಗೆ ಅವರು ಹೆಚ್ಚು ಗಮನಕೊಡಬೇಕು (೬) ತಮ್ಮ ಸ್ವಾಭಿಮಾನ ಮಾನರಕ್ಷಣೆಗೆ ವೈಯಕ್ತಿಕ ಸತ್ಯಾಗ್ರಹದ ಮಾರ್ಗಗಳನ್ನು ಕಲ್ಪಿಸಲು ಪರ್ಯಾಲೋಚಿಸಬೇಕು (೭) ಹಿಂದುಳಿದ ವರ್ಗದವರೊಡನೆ ಕೂಡಿ ವಿದ್ಯಾರ್ಥಿಗಳು, ಹರಿಜನೋದ್ಧಾರ ಮುಂತಾದ ರಾಷ್ಟ್ರೀಯ ಸೇವೆಮಾಡಲು ಪ್ರಯತ್ನಿಸಬೇಕು (೮) ಸ್ವಾತಂತ್ರ್ಯ ಚಳವಳದಲ್ಲಿ ಭಾಗವಹಿಸಿದವರ ಹಾಗೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರರ ಬಿಡುಗಡೆಯ ಚಳವಳ ಮಾಡಿ ನೆರವಾಗಬೇಕು (೯) ಬಿಡುವಿನ ಸಮಯದಲ್ಲಿ ಮತ್ತು ರಜಾ ದಿನಗಳಲ್ಲಿ ವಿದ್ಯಾರ್ಥಿಗಳು ಕ್ಷಾಮ ನೆರೆ ಮೊದಲಾದ ಸಂಕಷ್ಟಗಳಿಂದ ನರಳುವ ಜನತೆಗೆ ಸಹಾಯ ಮಾಡುವ ವಿಧಾನಗಳಲ್ಲಿ ತಮ್ಮ ಚೈತನ್ಯವನ್ನುಪಯೋಗಿಸಬೇಕು (೧೦) ಹಸಿವು ಉಪವಾಸಗಳಿಗೆ ತುತ್ತಾದ ಬಡಜನತೆಗೆ ನೆರವಾಗಲು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಇಲ್ಲವೆ ಸಂಘಟಿತವಾಗಿ ಮನೆಯಿಂದ ಮನೆಗೆ ಹೋಗಿ ತಕ್ಕ ಸಹಾಯವನ್ನು ಸರಕಾರದ ಸಹಾಯವಿಲ್ಲದೆ ಮಾಡಬಹುದು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD: 1931
HEAD OFFICE BUNDER *BRANCHES*
Mangalore. MANGALORE, Moodabidri & Padubidri.
ANNOUNCEMENT
Deposits accepted at the following rates from 1-4-1944.
Current Accounts (1% from Jan. to June)
(½% from July to Decr.)
Savings bank Accounts 1½% p. a. on daily balances.
Fixed Deposits 6 month 2% p. a.
12 months 2½% p. a.
24 months 3% p. a.
The Bank also accepts season and short term deposits and many other lucrative schemes at most favourable rates of interest. For terms etc, apply to Head office or Branches

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳು ಕಡ್ಡಿ, ಸಿಬ್ಬ, ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.
ಅಮೃತಾಂಜನ ಡಿಪೋ,
ಬೊಂಬ್ಬಾ, ಮದರಾಸು, ಕಲ್ಕತ್ತಾ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

- ★ Premiums are low.
- ★ 2½% Rebate on annual premiums.
- ★ "Permanent Disability Benefits free of any cost
- ★ Payment of double the insured amount in case of death by accident at a very small cost of Rs 1-8-0 per 1000.
- ★ Special rebates on large size policies.
- ★ A special scheme by which lapsed policies can be revived without paying the arrears
- ★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹುಂಟಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನೆರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 22—9—1944 [ಸಂಚಿಕೆ 38]

ತುಲಸೀ ದಾಸರ ರಾಮ ಚರಿತ ಮಾನಸ

(ಶ್ರೀ ಅ. ತಿ. ಶ್ರೀನಿವಾಸ ರಾಘವಾಚಾರ್ಯರು, ಹಿಂದೀ ಅಧ್ಯಾಪಕರು, ತುಮಕೂರು)

ಭಕ್ತಶಿರೋಮಣಿ ಕವಿಕುಲತಿಲಕ ತುಲಸೀದಾಸರು ರಚಿಸಿರುವ ರಾಮಾಯಣ ಹಿಂದೂಸ್ಥಾನದ ಸಾಹಿತ್ಯದ ಇತಿಹಾಸದಲ್ಲಿ ಅಸಾಮಾನ್ಯ ಹಾಗೂ ಮಾನ್ಯ ರಾಷ್ಟ್ರೀಯ ದೃಷ್ಟಿಯಿಂದ ಅದ್ವಿತೀಯ. ಭಾರತದ ಏಳೂವರೆ ಕೋಟಿ ಪ್ರಜೆಗಳಿಗೆ ವೇದದಂತೆ ಪುರಾಣಗ್ರಂಥ. ನಿತ್ಯ ವ್ಯವಹಾರಕ್ಕೆಲ್ಲದೆ ಧರ್ಮಕ್ಕೂ ಆಧಾರ ರಾಮಭಕ್ತಿಯ ಪ್ರಚಾರಕಾರ್ಯದಲ್ಲಿ 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬಂತೆ ಆದಿಕವಿ ವಾಲ್ಮೀಕಿಗೆ ಪರಾಜಯದ ಆನಂದವನ್ನು ಕೊಡುವ ಗ್ರಂಥ. ರಾಮ ರಾವಣ ಯುದ್ಧ ರಾಮರಾವಣ ಯುದ್ಧದಂತೆ. ಹಾಗೆಯೇ ತುಲಸೀ ರಾಮಾಯಣ ತುಲಸೀ ರಾಮಾಯಣದಂತೆ. ಭಕ್ತಿಮಾರ್ಗದಲ್ಲಿ ಮತ್ಯಾವ ಗ್ರಂಥವನ್ನೂ ಇದಕ್ಕೆ ಹೋಲಿಸಲು ಸಾಧ್ಯವಿಲ್ಲ.

ಗ್ರಂಥವಿಚಾರ ವಿಮರ್ಶಿಸುವಾಗ ಗ್ರಂಥಕರ್ತೃವಿನ ವಿಚಾರವೂ ಆವಶ್ಯಕ ಇಲ್ಲಿ ತುಲಸೀದಾಸರ ವ್ಯಕ್ತಿತ್ವದ ಒಗ್ಗೆ ಸೂಕ್ಷ್ಮವಾಗಿ ನಾಲ್ಕುಮಾತು ಹೇಳಬಹುದು. ದಂತ ಕಥೆಗಳು ನೂರಾರು ಇವೆ ಇವರ ವಿಚಾರದಲ್ಲಿ ಅವು ಇಲ್ಲಿ ಅನವಶ್ಯಕ ಇವರ ಸ್ವರ್ಗವಾಸದ ವಿಚಾರದಲ್ಲಿ ಒಂದು *ದೋಹಾ ಇದೆ

> ಸಂವತ್ ಸೋಲಹ್ ಸೌ ಅಸ್ಸಿ, ಅಸೀ
> ಗಂಗ್ ಕೇ ತೀರ್
> ಶ್ರಾವಣ್ ಶುಕ್ಲಾ ಸಪ್ತಮೀ, ತುಲಸೀ
> ತಜ್ಯೋ ಶರೀರ್

ಇದರಿಂದ ಇವರು ಕ್ರಿ ಶ ಹದಿನಾರನೆಯ ಶತಮಾನದಲ್ಲಿ ಇದ್ದರೆಂಬುದು ಸ್ಪಷ್ಟವಾಗುತ್ತದೆ ಜ್ಯೋತಿಃಶಾಸ್ತ್ರಾನುಸಾರ ತಂದೆತಾಯಿಗಳು ಶಿಶುವನ್ನು ತ್ಯಜಿಸಿದರು ಮುನಿಯಾ ಎಂಬ ದಾಸಿ ತನ್ನ ಮನೆಗೆ ಕರೆದುಕೊಂಡು ಹೋಗಿ ಮಗುವನ್ನು ಪೋಷಿಸಿದಳು. ಐದು ವರ್ಷಗಳಿಗಿಂತ ಹೆಚ್ಚಾಗಿ ಆಕೆಯೂ ಈ ಲೋಕದಲ್ಲಿ ಇರಲಿಲ್ಲ. ತಂದೆಗೆ ಸಮಾಚಾರ ತಿಳಿಯಿತು. ಆದರೂ ಅವರು ಪುತ್ರನನ್ನು ಸ್ವೀಕರಿಸಲು ಒಪ್ಪಲಿಲ್ಲ ಕೆಲಕಾಲ ಅವರ ಜೀವನ ಹೇಗೋ ಕಳೆಯಿತು ಕೊನೆಗೆ ಬಾಬಾ ನರಹರಿ ದಾಸರು ಇವರನ್ನು ತಮ್ಮ ಬಳಿ ಇಟ್ಟುಕೊಂಡು ವಿದ್ಯಾಭ್ಯಾಸ ಮಾಡಿಸಿದರು. ಇದೇ ನರಹರಿ ದಾಸರಿಂದ ರಾಮಕಥಾಶ್ರವಣ ಆಯಿತು. ಇವರೊಂದಿಗೆ ಕಾಶಿಯಲ್ಲಿ ಪಂಚಗಂಗಾ ಘಾಟಿನಲ್ಲಿ ಸ್ವಾಮಿ ರಾಮಾನಂದರೊಡನೆ ಸ್ವಲ್ಪಕಾಲ ವಾಸವಾಗಿದ್ದರು. ಈ ಕಾಲದಲ್ಲಿ ಅನೇಕ ವಿದ್ವಾಂಸರ ಮತ್ತು ಸಾಧುಸಂತರ ಸಹವಾಸ ಲಾಭ ಇವರಿಗಾಯಿತು ಮಹಾತ್ಮ... ಶೇಷಸನಾತನಜೀಯವರ ಬಳಿ ವೇದ, ವೇದಾಂತ, ದರ್ಶನ, ಇತಿಹಾಸ ಪುರಾಣ ಮುಂತಾದವುಗಳನ್ನು ಅಭ್ಯಾಸಮಾಡಿದರು ಅನಂತರ ತಮ್ಮ ಜನ್ಮಸ್ಥಾನಕ್ಕೆ ಹಿಂತಿರುಗಿದರು. ಆಗ್ಗೆ ಅವರಿಗೆ ಪರಿವಾರದವರಾರೂ ಉಳಿದಿರಲಿಲ್ಲ ಇವರಲ್ಲಿ ಪ್ರಕಾಶಿಸುತ್ತಿದ್ದ ವಿದ್ಯೆ, ಶೀಲ, ವಿನಯ ಮುಂತಾದ ಸದ್ಗುಣಗಳ ಕಾರಣದಿಂದ ಒಳ್ಳೆಯ ಕುಲದಲ್ಲಿ ಯೋಗ್ಯ ಕನ್ಯೆಯೊಂದಿಗೆ "ರತ್ನಂ ಸಮಾಗಚ್ಛತು ಕಾಂಚನೇನ" ಎಂಬಂತೆ ವಿವಾಹವಾಯಿತು ಮಾತಾಪಿತೃ ಸ್ನೇಹದಿಂದ ವಂಚಿತರಾದ ಇವರು ಪತ್ನೀ ಪ್ರೇಮದಲ್ಲಿ ತೀರ ಮುಳುಗಿದರು. ಕೆಲಕಾಲದಲ್ಲಿಯೇ ವಿದ್ಯಾವಿನಯಸಂಪನ್ನಳಾದ ಹೆಂಡತಿಯ ಒಂದೇ ಒಂದು ಮಾತು ಇವರಲ್ಲಿನ ಪತ್ನೀವಿಷಯಕರಾಗ ಪ್ರೇಮವೆಲ್ಲವನ್ನೂ ಶ್ರೀರಾಮನ ಕಡೆಗೆ ತಿರುಗಿಸಿತು ಇದು ಘಟನಾವೈಚಿತ್ರ್ಯ ತುಲಸೀದಾಸರು ವಿರಕ್ತರಾದರು, ರಾಮನ ಭಕ್ತರಾದರು.

ಮನೆ ಬಿಟ್ಟು ತುಲಸೀದಾಸರು ಕಾಶಿಗೆ ಬಂದರು ಕಾಶಿಯಲ್ಲಿ ಕೆಲವು ದಿನ ಇದ್ದು ಅನಂತರ ಅಯೋಧ್ಯೆಗೆ ಹೋದರು ಅಲ್ಲಿ ನಾಲ್ಕು ತಿಂಗಳ ವಾಸ. ಅನಂತರ ತೀರ್ಥಯಾತ್ರೆಗೆ ಹೊರಟರು ಜಗನ್ನಾಥ, ಪುರಿ, ರಾಮೇಶ್ವರ, ದ್ವಾರಕಾ ಮುಂತಾದ ಸ್ಥಳಗಳನ್ನು ಒಳಸಿ ಬದರಿಕಾಶ್ರಮಕ್ಕೆ ಬಂದರು. ಅಲ್ಲಿಂದ ಕೈಲಾಸ ಮತ್ತು ಮಾನಸ ಸರೋವರಕ್ಕೆ ಹೋದರು ಈ ದೀರ್ಘ ಯಾತ್ರೆಯಲ್ಲಿ ಸುಮಾರು ೧೪ ವರ್ಷಗಳು ಕಳೆದವು ಕೊನೆಗೆ ಚಿತ್ರಕೂಟದಲ್ಲಿ ನೆಲಸಿದರು. 'ಗೀತಾವಳಿ ರಾಮಾಯಣ'ದ ರಚನೆ ಚಿತ್ರಕೂಟದಲ್ಲಿ ನಡೆಯಿತು ಅನಂತರ ಅಯೋಧ್ಯೆಗೆ ಬಂದು, ರಾಮಚರಿತ ಮಾನಸದ ರಚನೆಯನ್ನು ಪ್ರಾರಂಭಿಸಿದರು. ಇದೇ ತುಲಸೀ ರಾಮಾಯಣವೆಂದು ಪ್ರಸಿದ್ಧವಾಗಿರುವ ಗ್ರಂಥ ಈ ಗ್ರಂಥ ಬರೆಯಲು ಎರಡು ವರ್ಷ ಮತ್ತು ಏಳು ತಿಂಗಳು ಹಿಡಿಯಿತು

ತುಲಸೀದಾಸರ ಜೀವನ ಚರಿತ್ರೆಯಲ್ಲಿ ನಾವು ನಾಲ್ಕು ಅಂಶಗಳ ಕಡೆ ಗಮನ ಕೊಡಬೇಕಾಗಿದೆ. ಅವರು ವಿದ್ಯೆಯಲ್ಲಿ ಪ್ರವೀಣತೆಯನ್ನು ಪಡೆದರು; ದೇಶಾಟನೆ ಮಾಡಿದರು; ಲೋಕಾನುಭವ ಗಳಿಸಿದರು; ವಿರಕ್ತರಾಗಿ ಜೀವನ ನೂಕಿದರು. ಇವರ ಈ ಪ್ರಸಿದ್ಧ ಗ್ರಂಥ-ರಾಮಾಯಣ ಇವರ ಅನುಭವ ಮತ್ತು ಆಶೆಗಳ ಸಾರ

ರಾಮಾಯಣವೆಂದರೆ ಪುರುಷೋತ್ತಮನಾದ ಶ್ರೀರಾಮಚಂದ್ರನ ಚರಿತ್ರೆ ಆದರೆ ತುಲಸೀರಾಮಾಯಣ ಬರೀ ಕಥೆ ಮಾತ್ರವಲ್ಲ ಇದೊಂದು ಭಕ್ತಿಯ ಕಾವ್ಯ ಭಕ್ತಿಯ ಮೌಲಿಕ ನೀತಿಯ ಘೋಷಣವಿದೆ ಇದರಲ್ಲಿ ತುಲಸೀದಾಸರದು ಉದ್ದಾಮ ಭಕ್ತಿಯೂ ಅಲ್ಲ ಅದು ಸಿಯಮಿತವಾದ ಭಕ್ತಿ, ಸಂಯಮಿತವಾದ ಭಕ್ತಿ ರಾಮಾಯಣದ ಮೂಲ ಕಥೆಯನ್ನು ವಾಲ್ಮೀಕಿ ರಾಮಾಯಣ, ಅಧ್ಯಾತ್ಮ ರಾಮಾಯಣ ಮತ್ತು ಮಹಾನಾಟಕಗಳಿಂದ ತೆಗೆದುಕೊಂಡಿದ್ದಾರೆ ಅಧ್ಯಾತ್ಮ ರಾಮಾಯಣದೊಂದಿಗೆ ಸಂಬಂಧ ಹೆಚ್ಚು ವರ್ಣನಾಭಾಗಗಳಲ್ಲೂ ಮತ್ತು ಭಕ್ತಿಯ ಉದ್ಗಾರಗಳಲ್ಲೂ ಭಾಗವತದ ಮುದ್ರೆ ಬಿದ್ದಿದೆ ಗೀತೆಯ ಮುದ್ರೆಯಂತೂ ಬಿದ್ದೇ ಇದೆ

ತುಲಸೀದಾಸರ ರಾಮಾಯಣದಲ್ಲಿ ಅಯೋಧ್ಯಾಕಾಂಡವು ಲೋಕಪ್ರಿಯವಾಗಿದೆ ಈ ಕಾಂಡದಲ್ಲಿ ಭರತನ ಭೂಮಿಕೆ ಅದ್ಭುತವಾಗಿ ಚಿತ್ರಿತವಾಗಿದೆ ಭರತ ತುಲಸೀದಾಸರ ಧ್ಯಾನಮೂರ್ತಿ ಲಕ್ಷ್ಮಣ ಭರತ ಇಬ್ಬರೂ ಶ್ರೀರಾಮನ ಅನನ್ಯ ಭಕ್ತರು ಒಬ್ಬನಿಗೆ ರಾಮನ ಸಹವಾಸ, ಮತ್ತೊಬ್ಬನಿಗೆ ವಿಯೋಗ ಭರತನಿಗೆ ವಿಯೋಗವೇ ಭಾಗ್ಯವಾಯಿತು ಜನಸಾಮಾನ್ಯಕ್ಕೆ ಇರುವ ಭಾಗ್ಯ ಇಂತಹುದು ತಾನೆ! ಭರತನಿಗೆ ಈ ವಿಯೋಗದಲ್ಲಿಯೇ ಸಂಯೋಗದ ಅನುಭವ. ಜನ ಪಡೆಯಬೇಕಾದುದೂ ಇದೇ. ಲಕ್ಷ್ಮಣನ ಪಾಲಿಗೆ ಬಂದ ಈ ಸಂಗತಿಭಾಗ್ಯ ನಮಗೆಲ್ಲಿ? ಭರತನಿಂದ ನಾವು ಕಲಿಯಬೇಕಾದುದು ವಿಯೋಗವನ್ನು ಸಂಯೋಗವನ್ನಾಗಿ ಬದಲಿಸುವ ರೀತಿ. ಈ ಆದರ್ಶವನ್ನು ತುಲಸೀದಾಸರು ನಮ್ಮ ಮುಂದೆ ಇಟ್ಟಿದ್ದಾರೆ.

ಶಾರೀರಿಕ ಸಂಗತಿಗಿಂತಲೂ ಮಾನಸಿಕ ಸಂಗತಿಯಲ್ಲಿ ಮಹತ್ವ ಹೆಚ್ಚು. ಶರೀರ ದೃಷ್ಟಿಯಿಂದ ಹತ್ತಿರವಿದ್ದೂ ಸಹ ಮನುಷ್ಯ ಮನಸ್ಸಿನಿಂದ ದೂರ ಇರಬಲ್ಲ. ಶಾರೀರಿಕ ವಿಯೋಗದಲ್ಲಿ ಮಾನಸಿಕ ಸಂಯೋಗ ಆಗಬಲ್ಲುದು. ಅದರಲ್ಲಿ ಸಂಯಮದ ಪರೀಕ್ಷೆಯೂ ಸಹ ಆಗುವುದು. ಭಕ್ತಿಯ ತೀವ್ರತೆಯೂ ಸಹ ವಿಯೋಗದಲ್ಲೇ ಹೆಚ್ಚುವುದು. ಬಾಹ್ಯವಿಯೋಗ, ಆಂತರಿಕ ಸಂಯೋಗ; ಇದೇ ಭಕ್ತಿಯ ಅರ್ಥ ಇದು ಅಂತಿಂತಹ ಭಾಗ್ಯವಲ್ಲ, ಪರಮಭಾಗ್ಯ, ಮುಕ್ತಿಗಿಂತಶ್ರೇಷ್ಠಭಾಗ್ಯ ಈ ಭಾಗ್ಯ ಭರತನಿಗಿತ್ತು ತುಲಸೀದಾಸರ ಭರತ ಈ ಭಾಗ್ಯ ಮೂರ್ತಿ ಭರತ ಬೇಡುತ್ತಾನೆ

> ಧರಮ ನ ಅರಥ ನ ಕಾಮ ರುಚಿ ಗತಿ ನ
> ಚಹವುಂ ನಿರಬಾನ್
> ಜನಮ ಜನಮ ರತಿ ರಾಮ ಪದ ಯಹ
> ವರದಾನ ನ ಆನ್

'ಧರ್ಮ, ಅರ್ಥ, ಕಾಮ ಯಾವುದರ ಮೇಲೂ ನನಗೆ ಆಸೆ ಇಲ್ಲ ನಾನು ಮುಕ್ತಿಯನ್ನು ಕೋರುವುದಿಲ್ಲ. ಜನ್ಮಜನ್ಮಕ್ಕೂ ನನಗೆ ಶ್ರೀರಾಮಚಂದ್ರನ ಪಾದಪದ್ಮಗಳ ಸೇವೆಗೆ ಅವಕಾಶ ಸಿಗಲಿ ನನಗೆ ಮತ್ತಿನ್ನಾವ ವರವೂ ಬೇಡ'

ಭರತನಲ್ಲಿ ವಿಯೋಗಭಕ್ತಿಯ ಉತ್ಕರ್ಷ ಕಾಣುತ್ತದೆ ಅದ್ದರಿಂದಲೇ ಆತ ತುಲಸೀದಾಸರಿಗೆ ಪರಮಾದರ್ಶ ಸೇವಾಧರ್ಮವನ್ನೂ ಭರತ ಚೆನ್ನಾಗಿ ನಿರ್ವಹಿಸಿದ್ದಾನೆ ರಾಮನ ಆಜ್ಞೆಯಂತೆ ತಿಳಿದು ಪ್ರಜಾಪರಿಪಾಲನೆ ಮಾಡಿದ್ದಾನೆ, ರಾಜ್ಯಭಾರ ಮಾಡಿದ್ದಾನೆ ಆದರೆ ಅದರ ಫಲವನ್ನು ಶ್ರೀರಾಮಚಂದ್ರನ ಚರಣಾರವಿಂದದಲ್ಲಿ ಅರ್ಪಿಸಿ ತಾನು ನಿರ್ಲಿಪ್ತನಾಗಿದ್ದಾನೆ ಅವನದು ನಗರದಲ್ಲಿದ್ದುಕೊಂಡು ವನವಾಸದ ಅನುಭವ. ಯಮ ನಿಯಮ ಮುಂತಾದ ಕಠಿಣ ವ್ರತಗಳನ್ನು ಆಚರಿಸಿ, ಆತ್ಮನಿಗೂ ದೇವರಿಗೂ ನಡುವೆ ಅಡ್ಡವಾಗಿರುವ ದೇಹವನ್ನು ಹಗುರ ಮಾಡಿದನು ತುಲಸೀದಾಸರು ಹೇಳುತ್ತಾರೆ

> ಸಿಯ ರಾಮ ಪ್ರೇಮ ಪಿಯೂಷ ಪೂರನ್
> ಹೋತ್ ಜನಮ ನ ಭರತಕೋ
> ಮುನಿ ಮನ್ನ ಅಗಮ ಜಮ ನಿಯಮ
> ಸಮದಮ ವಿಷಯವ್ರತ ಆಚಹರತಕೋ ।
> ದುಃಖ ದಾಹ ದಾರಿದ್ರ್ಯ ದಂಭ ದೂಷಣ
> ಸುಜಸಮಿಸ ಅಪಹರತಕೋ
> ಕಲಿಕಾಲ ತುಲಸೀ ಸೇ ಸರನ್ಹಿ ಹರಿ ರಾಮ
> ಸಮ್ಮುಖ ಕರತತೋ ॥

ಸೀತಾರಾಮ ಇವರ ಪ್ರೇಮಾಮೃತದಿಂದ ತುಂಬಿದ ಭರತ ಹುಟ್ಟದೆ ಇದ್ದಿದ್ದರೆ ಋಷಿಗಳಿಗೂ ಸಾಧ್ಯವಿಲ್ಲದ ಯಾವ ನಿಯಮ, ಶಮ, ದಮ ಮುಂತಾದ ಕಠಿಣ ವ್ರತಗಳನ್ನು ಯಾರು ತಾನೇ ಆಚರಿಸುತ್ತಿದ್ದರು? ದುಃಖ, ದುರಾಸೆ, ದಾರಿದ್ರ್ಯ, ದಂಭ ಜಂಭ ಮತ್ತು ದ್ವೇಷವನ್ನು ಯಾರು ತಾನೇ ತೊಡೆದುಹಾಕಿ ನಮಗೆ ಒಳಿತನ್ನು ಮಾಡುತ್ತಿದ್ದರು? ಕಲಿಯುಗದಲ್ಲಿ ತುಲಸೀದಾಸನಂತಹ ಮೂರ್ಖನನ್ನು ಯಾರು ತಾನೇ ಬಲಾತ್ಕಾರವಾಗಿ ಶ್ರೀರಾಮಚಂದ್ರನ ಸನ್ನಿಧಿಗೆ ಒಯ್ಯುತ್ತಿದ್ದರು?

(4ನೇ ಪುಟಕ್ಕೆ ಮುಂದುವರಿದಿದೆ)

ಮೂಲ ಲೇಖಕ: ಶ್ರೀ. ಸಿ. ರಾಜು ಅವರು

ಕ್ಷೌರಿಕ

... ನನ್ನ ಕ್ಷೌರ ಮತ್ತು ಕ್ಷೌರಿಕ ... ತುಂಬಾ ... ನನ್ನ ಪ್ರಿಯ ಕ್ಷೌರಿಕನ ಕಲೂನು ... ಕತ್ತರಿಸಿಕೊಳ್ಳ ... ಶಕ್ತಿಯಿಂದಿಕ್ಕಾದುದರಿಂದ ಹೊಸ ... ತೆರೆಯಲ್ಪಟ್ಟ ಮತ್ತೊಂದು ಕ್ಷೌರ ದಂಗಡಿಯನ್ನು ಹೊಕ್ಕಿದೆನು.

ಹೊಸ ಕ್ಷೌರಿಕರ ವಿಷಯದಲ್ಲಾಗಿ ನನ್ನ ಮನಸ್ಸು ತುಂಬಾ ಉದಾರಿ. ಅಂತೇ ಹೊಸ ಸಲೂನಿಗೆ ಹೋಗಲು ನನಗೆ ಮನಸ್ಸಾಯಿತು. ಅಲ್ಲಿ ಒಂದು ಕುರ್ಚಿಯು ಖಾಲಿ ಇದ್ದು ಅದರ ಮೇಲೆ ಕಥಾಳ ಆಕೃತಿಯ ಕಪ್ಪಗಿನ ವ್ಯಕ್ತಿಯೊಂದು ಭವ್ಯವಾಗಿ ಆಸೀನವಾಗಿತ್ತು. ಅವನನ್ನು ದೃಷ್ಟಿಸಿದ ಕೂಡಲೇ ಹೆಮ್ಮೆಯ ನನ್ನ ಮನಸ್ಸು ಕುರ್ರಿಯಂತೆ ನಮ್ರವಾಯಿತು. ಆ ಕಪ್ಪು ವ್ಯಕ್ತಿಯೇ ನನ್ನ ಅಂದಿನ ಕ್ಷೌರಿಕನೆಂದು ತಿಳಿಯಿತು.

ಹೆಮ್ಮೆ ಅಹಂಕಾರದ ಮನುಷ್ಯಂಗೆ ನಾನೇನೂ ಕಮ್ಮಿ ಇಲ್ಲವಾದರೂ ನನ್ನ ಆಗಿನ ನಮ್ರ ಪರಿಸ್ಥಿತಿಯು ನನ್ನ ಕ್ಷೌರಿಕನಿಂದಲೇ ಉಂಟಾಯಿತೆಂದು ಹೇಳಲು ಲಜ್ಜಿಸುತ್ತೇನೆ. ನಾನು ದೇವದಾನವರಿಗೂ, ಹಿರಿಯ, ಹೆತ್ತವರಿಗೂ ನಮಿಸುವವನಲ್ಲವಾದರೂ ಕ್ಷೌರಿಕನಿಗೆ ಪಕ್ಷಕ್ಕೊಂದು ಬಾರಿ ನಮ್ರವಾಗಿ ತಲೆ ಬಗ್ಗಿಸುತ್ತೇನೆ. ಈ ಹಜಾಮನೆಂಬ ದೈವಕ್ಕೆ ಎಷ್ಟೋ ಹೆಚ್ಚಿನ ದರ್ಪದ ಮಹಾರಾಜಾಧಿರಾಜರುಗಳೇ ನಮಿಸುತ್ತಿರುವಾಗ ನನ್ನಂಥಾ ಅಲ್ಪ ಗರ್ವಿಯ ಪಾಡೇನು? ಸ್ವಾರಸ್ಯವೆಂದರೆ ನಾವು ಆ ದೈವಕ್ಕೆ ಪ್ರಣಾಮ ಮಾಡುವುದು ಮಾತ್ರವಲ್ಲ ಕಾಣಿಕೆ ಕೂಡಾ ಕೊಟ್ಟು ಬರುತ್ತೇವೆ

ಆದರೆ ನನ್ನ ಹೊಸ ಕ್ಷೌರಿಕನು ಸದ್ಗೃಹಸ್ಥನಂತೆ ಕಾಣುತಿದ್ದ ನಾನು ಪ್ರವೇಶಿಸಿದ ಕೂಡಲೇ ಆತ ನನಗೆ ಸವಿನಯದಿಂದ ಆಸನವನ್ನು ಕೊಟ್ಟು ಸನ್ಮಾನಿಸಿದ ನಾನು ಆರಾಮವಾಗಿ ಸುಖಾಸೀನನಾದೆ ಆದರೆ ಆ ಮಹಾರಾಯ ತನ್ನ ಕೆಲಸ ಪ್ರಾರಂಭಿಸುವ ಬದಲು ಅಧಿಕ ಪ್ರಸಂಗದ ಪ್ರಶ್ನೆಗಳಿಗೆ ಸುರುಮಾಡಿಯೇ ಬಿಟ್ಟ ಮೊದಲು ನನ್ನ ರೂಪವನ್ನು ಸಮಗ್ರವಾಗಿ ಅಳತೆಮಾಡಿದನು. ನನಗೆ ಅದು ಸರಿ ಎನಿಸಲಿಲ್ಲ ಆದರೂ ಧೈರ್ಯವಂತ ಕುಟುಂಬೋತ್ಪನ್ನನಾದದರಿಂದ ಸುಲಭವಾಗಿ ಎದೆ ಗುಂದುವವ ನಾನಲ್ಲ. ಬಲಾತ್ಕಾರದ ಮುಗುಳುನಗೆಯಿಂದ ನನ್ನ ಕನ್ನಡಕವನ್ನು ಆತನ ಕೈಗೆ ಕೊಟ್ಟು 'ಕಾಲು ನೂರು (೨೫) ರೂಪಾಯಿ ಬೆಲೆ ಇದೆ ಇದಕ್ಕೆ, ಏನೂ ಚಿಲ್ಲರೆ ಅಲ್ಲ ಜಾಗ್ರತೆಯಾಗಿ ಒಳಗಿಡು" ಎಂದೆ ಇದರಿಂದ ಅವನಲ್ಲಿ ಯಾವ ಪರಿಣಾಮವಾಗಲಿಲ್ಲ

ದುಷ್ಟ ಕ್ಷೌರಿಕ! ಎಲ್ಲರೂ ಇವನಂತವರೇ ಆದರೆ ಕ್ಷೌರದ ಗತಿ ಏನು? ಎಂದು ಯೋಚಿಸಿದೆ ಕನ್ನಡಕವನ್ನು ಕಪಾಟಿನೊಳಗಿಟ್ಟು ಹ್ಯಾಳು ಕೆಲಸಿ ಪುನಃ ಪ್ರಶ್ನಿಸಿದ-"ಸ್ವಾಮಿ! ತಾವು ಕ್ರಾಫ್ ಮಾಡಿ ಸಮಯವೆಷ್ಟಾಯಿತು?" ಅವಮಾನಕಾರಕ ಮಾತುಗಳು! ನೀಚ, ಅಧಮ ಇವನೆಂದು ತಿಳಿದೆ. ಗುರುಹಿರಿಯರ, ತಂದೆ ತಾಯಿಗಳ ಸಮಕ್ಷಮ ಸುಳ್ಳು ಹೇಳುವುದರಲ್ಲಿ ಹಿಂದೆ ಮುಂದೆ ನೋಡದ ನಾನು ಈ ಕ್ಷೌರಿಕನ ಎದುರು ಸುಳ್ಳು ಹೇಳಲು ಅಧೈರ್ಯಪಟ್ಟೆ. ಸುಳ್ಳು ಹೇಳುವ ಚತುರ ಚಾಣಾಕ್ಷರಲ್ಲಿ ನಾನೊಬ್ಬನೆಂದು ಅದುವರೆಗೆ ತಿಳಿದುಕೊಂಡಿದ್ದ ನಾನು ಹೇಡಿಯಂತೆ "ಒಂದು ತಿಂಗಳು ಎರಡು ವಾರವಾಯಿತು" ಎಂದೆ. ಸತ್ಯವನ್ನು ಹೊರಗೆಡೆಯಲು ಕ್ಷೌರಿಕರಲ್ಲಿರುವ ಬುದ್ಧಿವಂತಿಕೆಗೆ ಬೆರಗಾಗೊಂಡೆ

ಮತ್ತೆ ಕಾರ್ಯಕ್ಕೆ ಪ್ರಾರಂಭವಾಯಿತು. ಕೂದಲು ಕತ್ತರಿಸುವ ಯಂತ್ರದಿಂದ ಅವನು ನನ್ನ ತಲೆಯ ಹಿಂದಿನಿಂದ ದಾಳಿ ಮಾಡಲಾರಂಭಿಸಿದನು. ಹಿಂದೆ ಇಂತಹ ಅನೇಕ ಘೋರ ಪರ್ಷಣೆಗಳನ್ನು ಅನುಭವಿಸಿದ ತಲೆಗೆ ಇದು ಬಹಳ ಕ್ಲೇಶ ಕೊಟ್ಟಂತಾಯಿತು. ಪುನಃ ನನಗೆ ಪ್ರಶ್ನಿಸಿದ! "ಎ-ಎಎಂತ-ಹ ಕ್ರಾ-ಕ್ರಾ-ಕ್ರಾ-ಫ್ ಸ್ವಾಮಿ" ಎಂದ. ಎಲಾ ಕಷ್ಟವೇ? ಅವನ ಪ್ರತಿ ಶಬ್ದವೂ ನನ್ನ ಕಿವಿಯನ್ನೂ ಕೊರೆಯುವಂತಿತ್ತು. ಸಾಲದಕ್ಕೆ ಅವನಿಗೆ ಮಾತುಗಳು ತಡೆಯುತಿದ್ದುವು ತಡೆತಡೆದು ಮಾತಾಡುವ ಇವನಿಗೆ ಇಷ್ಟು ಸಲ್ಲದ ಹರಟೆಯೇ ನನ್ನ ಉತ್ತರವನ್ನು ನಿರೀಕ್ಷಿಸುತ್ತಿದ್ದನಾದುದರಿಂದ "ಬೆ ಬೆ ಬೆ ಬೇಸಗೆಯ ಕ್ರಾ ಕ್ರಾ ಕ್ರಾಫ್" ಎಂದೆ ದುರಾದೃಷ್ಟದ ವಿಚಿತ್ರವೆಂಬಂತೆ ನಾನೂ ಒಬ್ಬ ಗದ್ಗದಭಾಷಿ ನನಗೂ ಮಾತುಗಳು ತಡೆಯುತಿದ್ದುವು ಆ ಪಾಪಿಷ್ಟ ನನ್ನ ಮೇಲೆ ಸಹಾನುಭೂತಿ ತೋರಿಸುವ ಬದಲು ತನ್ನನ್ನು ಹಾಸ್ಯಮಾಡುತಿದ್ದ ಹಾಗೆ ತಿಳಿದುಕೊಂಡ ಮತ್ತೆ ಹೇಳಬೇಕೆ? ಪೈರು ಕತ್ತರಿಸುವ ಹಾಗೆ ಭರವಾಗಿ ನನ್ನ ತಲೆಯನ್ನು ಕೊಚ್ಚ ತೊಡಗಿದ

ಇಷ್ಟಾದರೂ ಸಂಭಾಷಣೆ ಮುಗಿಸಲು ಅವನಿಗೆ ಮನಸ್ಸಿಲ್ಲ ಇತರ ಗಿರಾಕಿಗಳೆಲ್ಲರೂ ನಮ್ಮನ್ನೇ ಗಮನಿಸುವರಾದರು ಅವನ ಜೀವನಾನುಭವದ ಕತೆಗಳಿಗಾರಂಭವಾಯಿತು ನನಗೆ ಹೂಂಗುಟ್ಟದೆ ಬೇರೆ ಉಪಾಯವೇ ಇಲ್ಲ ಅವನು ದಕ್ಷಿಣ ಆಫ್ರಿಕದ ವಜ್ರದ ಗಣಿಗಳಲ್ಲಿ ಕೆಲಸ ಮಾಡಿದ್ದನಂತೆ "ನಾನೇನು ಸಾಮಾನ್ಯ ಮನುಷ್ಯನೆಂದು ತಿಳಿಯಬೇಡಿ ಸ್ವಾಮಿ" ಎಂದು ಮಧ್ಯದಲ್ಲಿ ನನಗೆ ಎಚ್ಚರಕೊಡುತಿದ್ದನು. ಇಷ್ಟರಲ್ಲಿ ತುಂಬಾ ಅನುಭವ ಪಡೆದ ನನಗೆ ಅವನು ಸಾಮಾನ್ಯದೆಂದು ಕಾಣುವನೇ? 'ಹೌದು' ಎಂದೆ 'ಆ ವಜ್ರಗಣಿಗಳಲ್ಲಿ ಸಿಕ್ಕುವ ವಜ್ರಗಳು ಒಂದೊಂದು ತೆಂಗಿನಕಾಯಿ ಗಾತ್ರ ಸ್ವಾಮಿ" ಎಂದು ಹೇಳಿದಾಗ ತಲೆ ಬಗ್ಗಿಸಿದ್ದಲ್ಲೇ ಕಣ್ಣು ಕೆರಳಿಸಿ "ಅಬ್ಬಾ" ಎಂದೆ "ಇಲ್ಲಿಯ ರಾಜರು ನೋಡಿದರೆ ಬಾಯಿ ಬಿಡಬೇಕು ಸ್ವಾಮಿ, ಅಂತಹ ವಜ್ರಗಳು" ಎಂದು ದೇಶಿಯ ರಾಜರುಗಳನ್ನು ತುಚ್ಛೀಕರಿಸಿದ "ಆದುದರಿಂದಲೇ ಅವರ ಚಿತ್ರಗಳಲ್ಲಿ ಬಾಯಿಬಿಟ್ಟಂತೆ ಕಾಣುವುದು" ಎಂದು ಹೇಳಬೇಕೆಂದಿದ್ದೆ, ಆದರೆ ತಲೆಯನ್ನು ಸ್ವಲ್ಪ ಒತ್ತಿದ ಕೂಡಲೇ ಗಪ್ಚನೇ ಸುಮ್ಮಗಾದೆ ಅನಂತರ ಅವನ ಕಷ್ಟ ಸಂಕಷ್ಟಗಳ ವರದಿಯಾಯಿತು ಅವನು ಇಂಗ್ಲಿಷ್ ಕಲಿತ ವಿಷಯವನ್ನು ನಿರೂಪಿಸಿದ ನನಗೆ ಆಶ್ಚರ್ಯವಾದಂತೆ ನಟಿಸಿದೆ. ಕೂಡಲೇ ಪುನಃ "ನಾನೇನೂ ಚಿಲ್ಲರೆ ಮನುಷ್ಯನಲ್ಲ ಸ್ವಾಮಿ' ಎಂದ. ಮೌನವಾಗಿ ಸಮ್ಮತಿಸಿದೆ "ನನ್ನ ಜೀವಕ್ಕೆ ನಾನೇ ಸರ್ವಾಧಿಕಾರಿ ನನ್ನ ತಾಯಿಯ ಕಾಯಿಲೆಯಿಂದಾಗಿ ಇಲ್ಲಿಗೆ ಬರಬೇಕಾಯಿತು. ಪಾಪ! ಬಡವಳು ತೀರಿಹೋದಳು. ನನಗೂ ಗ್ರಹಚಾರ ಹಿಡಿಯಿತು. ಹಾಳಾದ ಬಿಡ್ಡಿಗೆ ಆಹುತಿಯಾಗಿ ಎಲ್ಲ ಹಣವನ್ನೂ ಕಳೆಕೊಂಡೆ. ಇಲ್ಲದಿದ್ದರೆ ಈ ಹಾಳು ಸಲೂನಿಗೆ ಬರುತಿದ್ದೇನೆ?" ಎಂದು ಮೊದಲಿನ ಅಂಶವನ್ನು ಮುಗಿಸಿದನು

ನನಗೆ ಬೇಸರವಾಗ ಹತ್ತಿತು. "ಸ್ವಲ್ಪ ಬೇಗನೇ ಮುಗಿಸು ಮಹಾರಾಯ ಆಫೀಸಿಗೆ ಹೊತ್ತಾಗುತ್ತದೆ" ಎಂದೆ "ಐದೇ ಮಿನಿಟು ಸ್ವಾಮಿ, ಆಯಿತು." ಎಂದು ಭರವಸೆ ಸಿಕ್ಕಿತು ಕೇವಲ ಐದು ನಿಮಿಷದೊಳಗೆ ಬಾಯಿ ಮುಚ್ಚುವ ಸಂಯಮನ ಶಕ್ತಿ ಅವನಲ್ಲಿರಲಿಲ್ಲ "ಸರಕಾರದ ಯುದ್ಧ ಪ್ರಯತ್ನಕ್ಕೆ ಕಾಂಗ್ರೆಸು ಅಡ್ಡಿ ಮಾಡುತ್ತಿರುವುದು ಸಮಂಜಸವೆಂದು ತೋರುವುದೆ ಸ್ವಾಮಿ ತಮಗೆ?" ಎಂದ. ಕ್ಷೌರಿಕ ರಾಜಕೀಯದಲ್ಲಿ ಧುಮುಕಿ ಬಿಟ್ಟ ಎಲಾ ಕಷ್ಟವೆ! ನಾನು ತೆಪ್ಪಗಾದೆ ಆದರೆ ನನ್ನಿಂದ ಉತ್ತರವನ್ನು ತರಿಸದೆ ಸುಮ್ಮನಿರುವಷ್ಟು ಹೇಡಿ ಅವನಲ್ಲ ಜಮ್ಮನೆ ತಲೆಯನ್ನೊಂದು ಸಲ ಕುಲುಕಿ ಬಿಟ್ಟ ಕತ್ತರಿಯ ಚೂಪಾದ ತುದಿಗಳು ನನ್ನಲ್ಲಿ ಜ್ಞಾನ ಪ್ರಚೋದನೆ ಮಾಡಿದವು. "ಹೌದು ಸರಿ" ಎಂದೆ. ಮತ್ತೆ ಯುದ್ಧ ಪರಿಸ್ಥಿತಿಯ ವಿಚಾರ ಬಂತು. ಅಲ್ಲಿಂದ ತಿರುಗಿ ಕಾಂಗ್ರೆಸ್ಸಿಗೇ ಬಂದ. "ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಪ್ರತಿಯೊಬ್ಬನ ಕರ್ತವ್ಯವಲ್ಲವೆ ಸ್ವಾಮಿ. ಅಂದ ಮೇಲೆ ಕಾಂಗ್ರೆಸ್ಸಿನ ಧೋರಣೆ ಸರಿಯಲ್ಲವೆ?" ರಾಜತಂತ್ರದ ತುದಿ ಮೂಲ ತಿಳಿದಿಲ್ಲದ ನಾನೇನೆಂದು ಈ ವಾರ್ತಾ ಪ್ರಿಯನಿಗೆ ಜವಾಬು ಕೊಡಲಿ ಎಂದು ಯೋಚಿಸುತ್ತಿರುವಾಗ ಕತ್ತರಿಯ ತುದಿಗಳು ಚುಂಯ್ ಅದವು. "ಹೌದೌದು" ಎಂದೆ ಬೇಗನೆ. ತೃಪ್ತಿಗೊಂಡು ಅವನು ನನ್ನ ಕತ್ತರಿಸಿದ ತಲೆಯನ್ನು ಸಿಂಹಾವಲೋಕನ ಮಾಡುತ್ತಿದ್ದನು.

ಕಟ್ಟಕಡೆಗಂತೂ ಕ್ರಾಫ್ ಕ್ರಿಯೆ ಮುಗಿಯಿತು ಸರಿಯಾಗಿದೆಯೋ ಎಂದು ಕೇಳಿದಕ್ಕೆ ನಾನು ಹಿಂದು ಮುಂದು ನೋಡದೆ "ಪರವಾ ಇಲ್ಲಾ ನನಗೆ ಹೊತ್ತಾಗುತ್ತದೆ. ಒಂದು ಸಲ ಇಲ್ಲಿಂದ ಪಾರು ಮಾಡು ಮಾರಾಯ" ಎಂದೆ ಕನ್ನಡಿಯಲ್ಲಿ ನೋಡಬೇಕೆಂದು ಒತಾಯ ಮಾಡಿದ "ಹಾಗಾದರೆ ಆ ಕನ್ನಡಕ ಕೊಡು ನನಗೆ ದೃಷ್ಟಿ

(೭ನೇ ಪುಟಕ್ಕೆ ಮುಂದುವರಿದಿದೆ)

WHEN CORRECT TIMING IS VITAL -
the choice is 'WEST END'



ಗಟ್ಟಿಯಾಗಿ ಅಮೂಲ್ಯವಾದ ಈ ಲಿವರ್ ವಾಚು ಇಂಡಿಯದ ರೈಲ್ವೆ ಕೆಲಸಗಾರರ ಶ್ರಮದ ಕೆಲಸಕ್ಕೆ ತಕ್ಕುದಾಗಿ ಬಾಳಿಕೆಬರುವಂತೆ ತಾಯಾರಿಸಲಾಗಿದೆ ಇದರ ಉತ್ತಮವಾದ ಸಲಕರಣೆ ಮತ್ತು ಕೀ ಸಗಾರಿಕೆಯಿಂದ ಶಾಶ್ವತ ಬಾಳಿಕೆ ಬರುವಂತೆ ಮಾಡಿದೆ ರೈಲ್ವೆ ಕೆಲಸಗಾರರು ಮತ್ತು ಇತರರಲ್ಲಿ ಉಂಟಾದ ಪ್ರಖ್ಯಾತಿಯು ಇದರ ಮೌಲ್ಯಕ್ಕೆ ತಕ್ಕುದಾಗಿದೆ

ರೈಲ್ವೆ ಸರ್ವಿಸ್

ಎಕ್ಸ್‌ಟ್ರಾ ಸ್ಟ್ರಾಂಗ್ ರೇಲಿಸ್ ಲಿವರ್ ವಾಚು ಸ್ಟೆಂಡಾರ್ಡ್ ತರಗತಿ 15 ಜುವೆಲ್ಸ್ ನಿಕ್‌ಲ್ ಸಿಲ್ವರ್ ಕೇಸ್ ರೂ 52.

WEST END WATCH Co
BOMBAY CALCUTTA

ಈಗಿನ ಅನಿಶ್ಚಿತ ವಾತಾವರಣದಿಂದಾಗಿ ಜಾಹಿರಾತು ಮಾಡಿದ ಎಲ್ಲಾ ವಾಚುಗಳು ಜನತೆಗೆ ಒದಗಿಸುವುದು ಕಷ್ಟ ಆದರೆ ಅದನ್ನು ಪೂರೈಸಲು ಕೈಲಾದ ಪ್ರಯತ್ನಗಳನ್ನು ಮಾಡಲಾಗುವುದು.

ವೆಸ್ಟ್ ಎಂಡ್ ವಾಚು ಕಂ. ಬೊಂಬಾಯಿ ಮತ್ತು ಕಲ್ಕತ್ತಾ.

ಅನೇಕ ಕಡೆಗಳಿಂದ ಜರ್ಮನಿಯ ಮುತ್ತಿಗೆ

ಶಾಂತ ಸಾಗರದಲ್ಲಿ ಜಪಾನರ ಪರಿಸ್ಥಿತಿ

ಪಶ್ಚಿಮ ರಂಗ

ಫ್ರಾನ್ಸು, ಬೆಲ್ಜಿಯಮ್ ಮತ್ತು ಲಕ್ಸಂಬರ್ಗ್ ಪ್ರದೇಶಗಳನ್ನು ಅತಿ ವೇಗದಿಂದ ದಾಟಿ, ಮಿತ್ರರು ಈಗ ಜರ್ಮನಿಯ ಗಡಿಯನ್ನು ಅನೇಕ ಕಡೆಗಳಲ್ಲಿ ದಾಟಿರುವರು. ಜರ್ಮನಿಯ ಸಿಗ್‌ಫ್ರಿಡ್ ಲ್ಯಾನಿನ ಸಮೀಪದ ಈಗ ಮಹಾಕದನವು ನಡೆಯುತ್ತಿದೆ. ಮಿತ್ರರು ಒಂಭತ್ತು ಮಾರ್ಗಗಳನ್ನು ಹಿಡಿದು ಜರ್ಮನಿಯ ಒಳಗೆ ನುಗ್ಗುತ್ತಿರುವರು. ಜನರಲ್ ಐಸನ್‌ಹೊವರರು ಬಹಳ ಚತುರತೆಯಿಂದ ತಮ್ಮ ಕಾರ್ಯವನ್ನು ನಡೆಯಿಸುತ್ತಿರುವರು. ಕೆನಡಾ ಸೇನಾದಳವು ಫ್ರಾನ್ಸಿನ ಕರಾವಳಿಯಲ್ಲಿ ಇಳಿದಿದ್ದದ್ದು, ಜರ್ಮನರನ್ನು ಹಿಮ್ಮೆಟ್ಟಿಸಿ ಫ್ರಾನ್ಸಿನ ಕರಾವಳಿಯಲ್ಲಿರುವ ಜರ್ಮನಿಯ ಜಲಾಂತರ್ಗಾಮಿಗಳ ಮುಖ್ಯ ರಾಣ್ಯವನ್ನು ಹಿಡಿದಿರುವರು ಅಂತೆಯೆ ಬ್ರಿಟಿಷ ಸೇನಾದಳವು ಕೂಡ ಬಹಳ ಯಶಸ್ಸಿನಿಂದ ಕಾರ್ಯ ಸಾಧಿಸಿರುವುದಾಗಿ ತಿಳಿದುಬಂದಿದೆ ಬ್ರಿಟಿಷ ಸೇನೆಯು ಬ್ರೂಸ್ಸೆಲ್ಸ್ ಪಟ್ಟಣವನ್ನು ದಾಟಿ, ಜರ್ಮನಿಯ ಗಡಿಯನ್ನು ಸಮೀಪಿಸುತ್ತಿರುವುದು ಅದರಂತೆ ಬೇರೊಂದು ಕಡೆಯಲ್ಲಿ ಫ್ರೆಂಚ್ ಕರಾವಳಿಯಲ್ಲಿ ಇಳಿದ ಇನ್ನೊಂದು ಸೈನ್ಯ ದಳವು ಮುಂದೆ ಸಾಗಿ ಬಂದು ಪ್ರಥಮ ಅಮೇರಿಕನ್ ದಳದೊಡನೆ ಕೂಡಿಕೊಂಡು ಜರ್ಮನಿಯ ಗಡಿಯ ಮೇಲೆ ಮುನ್ನುಗ್ಗುತ್ತಿರುವುದು ಹೀಗೆ ಮುತ್ತುತ್ತಿರುವ ಮಿತ್ರರ ದಂಡುಗಳು ಕೆಲವು ಜರ್ಮನ್ ಪಟ್ಟಣಗಳನ್ನು ಹಿಡಿದಿರುವುವಾಗಿ ತಿಳಿಯಲಾಗಿದೆ ಸ್ವಿಟ್ಜರ್ಲೆಂಡಿನ ಗಡಿಯಲ್ಲೂ ಜರ್ಮನ್ ಕೋಟೆಯು ಭೇದನವಾದ ವಾರ್ತೆಯು ಕೂಡ ಇದೆ

ಜರ್ಮನಿಯ ಮೇಲೆ ಈ ತರದ ಮುತ್ತಿಗೆ ನಡೆದುದು ಹಿಂದೆ 1800ರಲ್ಲಿ ಅಂದು ಫ್ರಾನ್ಸಿನ ಪ್ರಖ್ಯಾತ ನೆಪೋಲಿಯನನು ಇದೇ ತರದಲ್ಲಿ ಜರ್ಮನಿಯ ಮೇಲೆ ದಂಡೆತ್ತಿ ಹೋಗಿದ್ದನು ಮಿತ್ರರ ಈ ತರದ ನುಗ್ಗಾಟದ ಎದುರು ಸಿಗ್‌ಫ್ರಿಡ್ ವ್ಯೂಹವು ಒಂದು ಪ್ರಬಲವಾದ ತಡೆಯಾಗಬಹುದೆ? ಎಂಬೀ ಪ್ರಶ್ನೆಯು ಈಗ ಉಂಟಾಗಿರುತ್ತದೆ ಸಿಗ್‌ಫ್ರಿಡ್ ವ್ಯೂಹವು ಹಾಲೆಂಡಿನ ಗಡಿಯಿಂದ ಪ್ರಾರಂಭವಾಗಿ ಸ್ವಿಸ್ ಗಡಿಯ ವರೆಗೆ ಪ್ರಸರಿಸಿಕೊಂಡಿದೆ ಅತ್ಯಂತ ಅಭೇದ್ಯ ತರದವುಗಳಾಗಿ ಈ ಕೋಟೆಗಳು ನಿರ್ಮಿತವಾಗಿವೆ. ಬರೇ ಸಿಮೆಂಟಿನಿಂದ ರಚನೆಯಾದ ಕೋಟೆಗಳು ಇವುಗಳಲ್ಲ. ಇಲ್ಲಿ ಜರ್ಮನರ ದೇಶರಕ್ಷಣಾ ವ್ಯೂಹವು ಬಹಳ ಆಳಕ್ಕೆ ಹರಡಿರುವುದಾಗಿಯೂ, ಇಲ್ಲಿ ಅತ್ಯಂತ ಪ್ರಬಲವಾದ ಜರ್ಮನ್ ಸೇನಾದಳಗಳ ಶಿಬಿರವು ಆಗಿರುವುದೆಂದೂ ಅಭಿಪ್ರಾಯವಿದೆ ಈ ವ್ಯೂಹದಲ್ಲಿ ಜರ್ಮನರು ಅತ್ಯಂತ ಆಧುನಿಕವೆನಿಸುವ ಅಸಂಖ್ಯಾತ ರಕ್ಷಣಾ ಯೋಜನೆಗಳನ್ನು ಇಟ್ಟಿರುವರು ಜರ್ಮನ್ ಸೇನೆಯು ಇಲ್ಲಿ ಗೋಪ್ಯವಾಗಿದ್ದು, ತಮ್ಮ ವೈರಿಗಳ ಚಲನವಲನಗಳನ್ನು ದೂರದಿಂದಲೇ ನೋಡಿ ತಿಳಕೊಂಡು ಅವರನ್ನು ತಡೆಯುವ ತಕ್ಕ ವ್ಯವಸ್ಥೆಗಳನ್ನು ಮಾಡುತ್ತಿರುವರು. ಸಿಗ್‌ಫ್ರಿಡ್ ವ್ಯೂಹದ ಮುಂಗಡೆ ಸಿಡಿಯುವ ನೆಲಸುರಂಗಗಳು ಧಾರಾಳವಾಗಿ ನೆಡಲಾಗಿವೆ ಎಂಬುದು ಮಿತ್ರರ ಅನುಭವವಾಗಿರುತ್ತದೆ. ಸ್ವಿಸ್ ಗಡಿಯಿಂದೀಚೆಗೆ 'ಸಿಗ್‌ಫ್ರಿಡ್' ಲ್ಯಾನಿಗೆ ಸಮಾನಾಂತರವಾಗಿ, ರ್‍ಹೈನ್ ನದಿಯು ಹರಿಯುತ್ತಿದ್ದು, ಅದರಿಂದ ಜರ್ಮನರಿಗೆ ಬಹಳ ರಕ್ಷಣೆಯು ದೊರೆಯುವಂತಾಗಿದೆ ಇದೇ ತರದಲ್ಲಿ ಸಿಗ್‌ಫ್ರಿಡ್ ಲ್ಯಾನಿನ ಇನ್ನಿತರ ಕಡೆಗಳಲ್ಲಿ ಅನೇಕ ತರದ ನೈಸರ್ಗಿಕ ತಡೆಗಳು ತುಂಬಾ ಇವೆ. ಅದರಲ್ಲೂ ಮಳೆ ಇತ್ಯಾದಿ ಹವಾ ಪರಿಸ್ಥಿತಿಯ ಬದಲಾವಣೆಯಿಂದ ಈ ತರದ ಸ್ಥಳಗಳಲ್ಲಿ ಮಿತ್ರರಿಗೆ ಪ್ರತಿಕೂಲ ಪರಿಸ್ಥಿತಿಯು ಉಂಟಾಗಬಹುದು ಆದರೆ ಈ ತರದ ತಡೆಗಳನ್ನು ದಾಟುವ ಶಕ್ತಿಯು ಮಿತ್ರರಿಗೆ ಇರುವುದಾದರೂ ಸಿಗ್‌ಫ್ರಿಡ್ ಲ್ಯಾನಿನ ಬಳಿ ಮಿತ್ರರನ್ನು ತಡೆಯುವ ವಿಷಯವು ಮುಖ್ಯವಾಗಿ ಜರ್ಮನ್ ಸೇನಾಬಲದ ಮೇಲೆ ಯಾ ಅದನ್ನು ನಡೆಯಿಸುವ ಯೋಧರ ಮೇಲೆ ಹೊಂದಿಕೊಂಡಿರುವುದು ಜರ್ಮನ್ ಸೇನೆಯು ಬಹಳ ಶೌರ್ಯದಿಂದ ಹೋರಾಡುವುದು ನಿರ್ವಿವಾದ ಮಾತು ತಮ್ಮ ಸ್ವದೇಶ ರಕ್ಷಣೆಯನ್ನು ಮಾಡಿಕೊಳ್ಳುವರೆ ಅವರು ತಮ್ಮ ಅತ್ಯಂತ ಯುಕ್ತಿ, ಸಾಹಸ, ಬಲ, ತ್ಯಾಗ ಇತ್ಯಾದಿಗಳನ್ನು ಹಾಕದೆ ಸುಮ್ಮನೆ ಇರಲಾರರು ಜರ್ಮನ್ ಪ್ರಜೆಗಳ ಧೃತಿಯು ಕೆಡಲಿಲ್ಲವೆಂದೂ, ಮಿತ್ರರಿಗೆ ಜರ್ಮನ್ ಪ್ರದೇಶದಲ್ಲಿ ದೊರಕಿದ ಅತ್ಯಂತ ಕಡು ತರದ ವೈರಭಾವವೆ ಒಂದು ಸಾಕ್ಷ್ಯವಾಗಿರುವುದು ಈ ಗಡಿಯಲ್ಲಿ ಜರ್ಮನರು ಸಾಧಾರಣ ೧೫೦ ಡಿವಿಜನುಗಳ ಸೈನ್ಯ ಬಲವನ್ನು ಹಾಕಿರುವರಾಗಿ ತಿಳಿದು ಬಂದಿದೆ ಆದರೆ ಅವರಿಗೆ ಈತನಕ ಲಭಿಸಿದ ಅಪಾರ ನಷ್ಟ, ಇತ್ಯಾದಿಗಳನ್ನು ಪರಿಗ್ರಹಿಸಿದರೆ, ಸಿಗ್‌ಫ್ರಿಡ್ ಲ್ಯಾನಿನಲ್ಲಿ ಮೇಲೆ ಹೇಳಿದ ತರದ ಸೈನ್ಯಸಂಗ್ರಹ ಮಾಡುವ ಯೋಗ್ಯತೆಯು ಜರ್ಮನರಲ್ಲಿರುವುದೆ ಎಂಬುದಾಗಿ ಸಂದೇಹವುಂಟಾಗುತ್ತದೆ ಜರ್ಮನಿಯ ಈ ಕೋಟೆಯನ್ನು ಧ್ವಂಸಗೊಳಿಸಿ ಮುನ್ನಡೆಯುವ ಮಹಾಶಕ್ತಿಯು ಮಿತ್ರರಲ್ಲಿ ಇರುವುದು ಈ ಶಕ್ತಿಯ ಎದುರು ಫ್ರೆಂಚ್ ಕರಾವಳಿಯ ಜರ್ಮನ್ ಬಲವು ಕರಗಲಿಲ್ಲವೆ? ಹಾಗೆಯೇ ಈಗ ಸಿಗ್‌ಫ್ರಿಡ್ ಮಹಾ ತಡೆಯು ಯಾಕೆ ಕರಗಬಾರದು? ಪಶ್ಚಿಮ ರಂಗದಲ್ಲಿ ದೃಢವಾದ ಹಿಡಿತವು ದೊರಕಿದ ಮಿತ್ರರಿಗೆ ಸಿಗ್‌ಫ್ರಿಡ್ ವ್ಯೂಹವನ್ನು ಭೇದಿಸುವ ಕೆಲಸವು ಇನ್ನೂ ಸುಲಭವೆನಿಸಬಹುದು. ಮಿತ್ರಸೇನೆಗಳಿಗೆ ಬೇಕಾದ ಆಹಾರ, ಶಸ್ತ್ರ ಇತ್ಯಾದಿಗಳನ್ನು ಒದಗಿಸುವ ಖಂಡಿತ ತರದ ರಾಣ್ಯಗಳು ಮಿತ್ರರಿಗೆ ದೊರಕಿದ್ದು, ಫ್ರಾನ್ಸಿನೊಳಗೆ ಈಗ ಯುದ್ಧಸಾಮಗ್ರಿಗಳು ಸರಾಗವಾಗಿ ಸುರಿಯುತ್ತಿವೆ ಫ್ರೆಂಚ್ ಕರಾವಳಿಯಲ್ಲಿ ಅನೇಕ ಪ್ರಾಮುಖ್ಯ ಬಂದರುಗಳು ಮಿತ್ರರ ಕೈವಶವಾದುದೆ ಮೇಲಿನ ಪರಿಣಾಮದ ಕಾರಣವು ಬ್ರಿಟನಿನಿಂದ ಪೆರಿಸ್ ತನಕ ಸಾಮಾನುಗಳನ್ನು ಈಗ ನಿರಾತಂಕವಾಗಿ ಸಾಗಿಸಬಹುದಾಗಿದೆ

ಪೂರ್ವರಂಗ

ಇದೆ ತರದಲ್ಲಿ ಪೂರ್ವರಂಗದಲ್ಲೂ ಅನೇಕ ಮಹತ್ವದ ಸಂಘಟನೆಗಳು ನಡೆದುಬಿಟ್ಟಿದೆ ಪೂರ್ವ ಪ್ರಸ್ಸಿಯಾ ಪ್ರದೇಶದ ಅತಿ ಬದ್ರವೆನಿಸುವ ಲೊಮ್ಜಾ ನಗರವು ಕೆಂಪು ದಳದ ಕೈವಶವಾಗಿರುತ್ತದೆ ಅಂದರೆ ಮುಂಬರುವ ಚಳಿಗಾಲದ ಸಮಯ ಕೆಂಪು ಸೇನೆಯನ್ನು ಈ ಗಡಿಯಲ್ಲಿಯೆ ತಡೆದು ನಿಲ್ಲಿಸಬಹುದೆಂಬುದಾಗಿ ಇದ್ದ ಜರ್ಮನರ ನಂಬುಗೆಯು ಈಗ ಮಾಯವಾದಂತಾಯಿತು ಪೋಲೆಂಡಿನ ವಾರ್ಸಾ ನಗರವು ಸದ್ಯದಲ್ಲೆ ಜರ್ಮನರ ಕೈಗಳಿಂದ ವಿಮುಕ್ತವಾಗಿ ಅಲ್ಲಿನ ನಾಗರಿಕರಿಗೆ ಉಪಶಮನ ದೊರಕುವುದು ಖಂಡಿತವೆಂದೆ ಹೇಳುವ ತರದಲ್ಲಿ ಕೆಂಪು ಸೇನೆಯು ವಾರ್ಸಾವಿನ ಮೇಲೆ ಮುನ್ನುಗ್ಗುತ್ತದೆ ಬಾಲ್ಟಿಕ್ ರಂಗದಲ್ಲಿ ಮಹತ್ತಾದ ಕಾರ್ಯಸಾಧನೆಗಾಗಿ ಸ್ಟೆಲೀನನು ಅತ್ತ ಕಡೆಗೆ ಅತ್ಯಂತ ಬಲವಾದ ಸೇನಾಸಂಗ್ರಹವನ್ನು ಕಳಹಿಸಿಕೊಟ್ಟಿರುವನು ರಷ್ಯನರು ಕಾರ್ಪೆತಿಯನ್ ಹಾದಿಯಾಗಿ ಮುನ್ನಡೆದು, ಜೆಕೊಸ್ಲೊವೆಕಿಯಾವನ್ನು ಪ್ರವೇಶಿಸಿದ್ದರಾಗಿಯೂ, ರುಮೇನಿಯಾ ಸೈನ್ಯವು ಹಂಗೇರಿಯದ ವಶವಿದ್ದ ಟ್ರಾನ್ಸಿಲ್ವೆನಿಯಾವನ್ನು ಪ್ರವೇಶಿಸಿದರಾಗಿಯೂ, ಕೆಂಪು ಶಿಬಿರದಿಂದ ವಾರ್ತೆಯಿದೆ ಯುಗೊಸ್ಲೊವಿಯದಲ್ಲಿ ಕೆಂಪು ಸೇನೆಗಳ ಚಟುವಟಿಕೆ ವಾರ್ತೆಗಳು ಸರಿಯಾಗಿ ತಿಳಿದುಬಂದಿಲ್ಲದಿದ್ದರೂ, ಅಲ್ಲೂ ಕೆಂಪು ಸೇನೆಗೆ ಯಶಸ್ಸು ದೊರಕಿರಬಹುದೆಂದು ಬಲವಾದ ಊಹೆಗಳಿವೆ ಇತ್ತ ಫಿನ್‌ಲೆಂಡಿನಲ್ಲಿ ಜರ್ಮನ್ ಸೇನಾಸಂಗ್ರಹವು ಬಹಳ ಇದ್ದು, ಅದು ರಷ್ಯದೇಶಕ್ಕೆ ಉತ್ತರ ದಿಕ್ಕಿನಿಂದ ಜರ್ಮನ್ ಅಧಿಕ್ರಮಕ್ಕೆ ದೊಡ್ಡದೊಂದು ಅನುಕೂಲವಾಗಿತ್ತು. ಜರ್ಮನಿಗೆ ಬೇಕಾದ ಅನೇಕ ಕಾರಣ ಸಾಮಗ್ರಿಗಳು ಈ ಪ್ರದೇಶದಿಂದಲೆ ಹೋಗುತಿತ್ತು. ಆದುದರಿಂದ ಫಿನ್‌ಲೆಂಡಿನ ಈ ಉತ್ತರ ಪ್ರದೇಶವನ್ನು ರಕ್ಷಿಸಿಕೊಳ್ಳಲು ಜರ್ಮನರು ಮಹಾಶ್ರಮವನ್ನು ಹಾಕದೆ ಇರಲಾರರು. ಅಂದರೆ ರಷ್ಯಕ್ಕೆ ಅಲ್ಲಿ ಬಲವಾದ ಪ್ರತಿಭಟನೆಯು ಕೊಡಲಾಗುವುದು

ಶಾಂತಸಾಗರ

ಜಪಾನಿನ ಮೇಲೆ ಮಹತ್ತಾದ ಯುದ್ಧ ಯತ್ನ ಹೂಡಿ ಅದರ ದರ್ಪವನ್ನು ಅಡಗಿಸುವ ಕುರಿತು ಮಿತ್ರರು ಯೋಜನೆಗಳನ್ನು ಮಾಡಿಕೊಳ್ಳುತ್ತಿರುವಾಗ (ಕ್ವಿಬೆಕ್ ಪರಿಷತ್ತು), ಜಪಾನೀಯರು ಸದ್ಯದಲ್ಲೆ ಭಯಂಕರ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾಗಬೇಕೆಂದು ಜಪಾನ್ ಪ್ರಧಾನರಾದ ಕೈಸೊರವರು ಒಂದು ಎಚ್ಚರಿಕೆ ಹೊರಡಿಸಿರುವರು ಪ್ರಾಯಶಃ ಸಂಯುಕ್ತ ಅಮೇರಿಕದ ನೌಕಾ ಮತ್ತು ವಾಯುಬಲವು ದಿನ ದಿನೆ ಜಪಾನಿನ ಸಮೀಪವಾಗುತಿರುವುದೆ ಆತನ ತಲೆಯಲ್ಲಿ ಇದ್ದಿರಬಹುದು ಒಂದು ದಿಕ್ಕಿನಲ್ಲಿ ಮಿತ್ರರು ಜಪಾನಿನ ರಾಜಧಾನಿ ಟೋಕಿಯೊದಿಂದ ೬೫೦ ಮೈಲು ದೂರ ಬಂದಿರುವರು ಟೋಕಿಯೊದಿಂದ ೬೫೦ ದೂರವಿರು ಬೋನಿನ್ನ ದ್ವೀಪವು ಸಂಯುಕ್ತ ಅಮೆರಿಕನ್ ದಳದ ವಶವಾಗಿರುವುದು ಜನರಲ್ ಮೆಕ್ ಆರ್ತರನ, ಫಿಲಿಪ್ಪಾಯಿನ ಮೇಲೆ ದಂಡೆತ್ತಿ ಹೋಗಿರುವನ, ಮಾತ್ರವಲ್ಲದೆ ಅಲ್ಲಿನ ಸಮೀಪದ ಅನೇಕ ರಾಣ್ಯಗಳನು ಹಿಡಿದಿರುವನು ಫಿಲಿಪ್ಪಾನು ದ್ವಿಪಗಳ ಅಮೇರಿಕದ ವಶವಾದರೆ, ಆಗ ಡಚ್ ಇಸ್ಟ್ ಇಂಡಿಸ್‌ಗಳಲ್ಲಿ ಶಿಬಿರಕಟ್ಟಿದ ಜಪಾನೀ ಸೈನ್ಯಸಂಗ್ರಹವು ಸ್ವದೇಶದಿಂದ ಬೇರ್ಪಡಿಸಿದಂತಾಗುವು [illegible] ರಂಗೂನಿನಿಂದ ನೂರು ಮೈಲುಗಳ ಆಚೆ ಅಂದಮಾನು ಸಮುದ್ರದಲ್ಲಿ ಜಪಾನಿಯ ಯುದ್ಧ ಸಾಮಗ್ರಿಗಳನ್ನು ಕೊಂಡೊಯ್ಯುತ್ತಿರುವ ಅನೇಕ ಹಡಗುಗಳುಳ್ಳ ಒಂದು ಕೊನ್ವೋಯವು ನಾಶಗೊಳಿಸಲಾಗಿದೆ ಎಂಬ ವಾರ್ತೆಯು ಬಂದಿರುತ್ತದೆ ಇದರಿಂದ ಜಪಾನೀಯರ ಇತ್ತ ಕಡೆಯ ಚಟುವಟಿಕೆಗಳಿಗೆ ಅನಾನುಕೂಲತೆ ಉಂಟಾಗದೆಯಿರದು ಅಂದರೆ ಜಪಾನಿಯ ನೌಕಾ ಬಲವು ಒಂದು ಕಾಲ ಶ್ರೇಷ್ಠವಾಗಿದ್ದು ಈಗ ಕುಂದಿರುತ್ತದೆ ಮಿತ್ರ ಶಾಂತಸಾಗರದ ನೌಕಾ ಬಲದಲ್ಲಿ ಅರೇಖವಾದ ಅಭಿವೃದ್ಧಿಯು ಆಗಿರುವದೆಂದು ಇದರಿಂದ ವಿಷದವಾಗುತ್ತದೆ

THE CANARA BANKING CORPORATION LTD.

(Incorporated in British India with Limited Liability)

Estd) **Head Office: UDIPI S Kanara.** **(1906.**

Statement of affairs as on 31st July, 1944.

LIABILITIES	Rs As Ps	ASSETS	Rs As.Ps
1 Paid up Capital	14 14 580- 0- 0	1 ,Office Builgings safes furniture books etc	91,792- 3- 6
2 Reserves	4,12 548- 3- 1	2 Advances	53 58,139- 7- 0
3 Due to Bankers	40 499- 5- 8	3. Investments on Govt. Securities etc	23,94,472-13-10
4 Deposits	78 79,479- 2- 1	4. Bills for collection	4,55 475- 2- 5
5 Bills for collection	4,55,475- 2- 5	5 Other Assets	91,627- 3- 4
6 Branch Adjustments	1,99 631- 8-10	6. Cash on hand and with Bankers in Current A/cs	23,75, 816-10-10
7. Other liabilities and undisbursed profits	3 65,010- 2-10		
Total	1,07,67,223-8-11	Total	1,07,67,223- 8-11

ಸ್ವದೇಶಾಭಿಮಾನಿ

ತಾರೀಖು 22-9-1944

ಅನಾವಶ್ಯಕ

ಈ ವಾರದ ವಿಶೇಷ ಸುದ್ದಿಗಳಲ್ಲಿ ಹಿಂದೂದೇಶಕ್ಕೆ ಅನೇಕ ಹಡಗುಗಳು ತುಂಬಾ ಸಾಮಾಗ್ರಿಗಳು ಬರಲಿವೆ ಎಂಬ ವರದಿಯು ಗಣನೀಯವಿದೆ. ಇವುಗಳನ್ನು ಬೇಗನೆ ಸಾರ್ವಜನಿಕರಿಗೆ ಒದಗಿಸಿಕೊಡುವರಾಗಿಯೂ ತಿಳಿದುಬರುತ್ತದೆ.

ಇದೊಂದು ತೃಪ್ತಿಕರವಾದ ವರ್ತಮಾನವೇನೊ ಸರಿ. ಆದರೆ ಹಡಗಗಳಲ್ಲಿ ಬರಲಿರುವ ಸಾಮಾಗ್ರಿಗಳಾವುವೆಂದು ತೋರಿಸುವ ಪಟ್ಟಿಯನ್ನು ಓದಿ ನೋಡಿದಲ್ಲಿ ಈ ಸರಕುಗಳು ನಮಗೆ ಅತ್ಯಾವಶ್ಯಕವೇ ಎಂಬ ಪ್ರಶ್ನೆ ಉತ್ಪನ್ನವಾಗದಿರದು.

ಇವುಗಳಲ್ಲಿ ಕೆಲವನ್ನು ಹೆಕ್ಕಿ ತೆಗೆದು ವಿಚಾರಿಸೋಣ. ದೇಹ ಸೌಂದರ್ಯಕ್ಕೆ ಉಪಯೋಗಿಸುವ ವಸ್ತುಗಳು-(ಸ್ನೊ, ಪೌಡರ್, ಮುಂತಾದುವು) ಸ್ಯಾಕಲುಗಳು, ದುರಾಕಿನ ಸಾಮಾನುಗಳು, ಆಟದ ಸಾಮಾನುಗಳು, ಸಿಲ್ಕು ಬಟ್ಟೆ, ನೂಲು, ಫೌಂಟನ್ ಪೆನ್ನು, ಪಿಂಗಾಣಿ ಸಾಮಾನುಗಳು.

ಮೇಲೆ ಕಾಣಿಸಿದ ವಸ್ತು ಒಡವೆಗಳು ನಮ್ಮ ದೇಶದಲ್ಲಿಯೂ ತಯಾರಾಗುತ್ತವೆ. ಇವುಗಳನ್ನು ಹೊರಗಿನಿಂದ ಆಮದುಮಾಡಿಕೊಳ್ಳುವ ಅವಶ್ಯಕತೆ ಇಲ್ಲವೆನ್ನಬಹುದು. ಹೀಗೆ ಮಾಡುವುದರಿಂದ ತಲೆಯೆತ್ತುತ್ತಿರುವ ಭಾರತೀಯ ಕೈಗಾರಿಕೆ ಉದ್ಯಮಕ್ಕೆ ಕಲ್ಲು ಹಾಕಿದಂತಾಗುತ್ತದೆಂದರೆ ಅತಿಶಯವಾಗಲಿಕ್ಕಿಲ್ಲ.

ಒಂದು ವೇಳೆ ಇವುಗಳ ಬದಲಿಗೆ ಆಹಾರ ಸಾಮಾಗ್ರಿಗಳನ್ನು ತರಿಸುತ್ತಿದ್ದರೆ ಅತ್ಯುಪಕಾರವಾಗುತಿತ್ತು. ದಿನೇ ದಿನೇ ಕಠಿಣವಾಗುತ್ತಿರುವುದೆಂದು ಅಧಿಕಾರಿಗಳಿಂದಲೇ ನಂಬಲಾದ ಆಹಾರ ಪರಿಸ್ಥಿತಿಯನ್ನು ಕೊಂಚಮಟ್ಟಿಗಾದರೂ ಸುಧಾರಿಸಿದ ಹಾಗಾಗುತಿತ್ತು.

ಹಿಂದೊಮ್ಮೆ ಸರಕಾರದವರು ಹೊರಗಿನಿಂದ ಆಹಾರ ವಸ್ತುಗಳನ್ನು ತರಿಸಲು ಸಾಕಾಗುವಷ್ಟು ಹಡಗುಗಳು ಸಿಗುತ್ತಿಲ್ಲವೆಂದು ನೆಪಹೇಳಿದ್ದು ನೆನಪಿಗೆ ತಂದುಕೊಂಡರೆ ಈಗಿನ ಈ ಹಡಗುಗಳು ಎಲ್ಲಿಂದ ಪೂರೈಸಲ್ಪಟ್ಟುವೆಂದು ಸಹಜವಾಗಿ ಪ್ರಶ್ನಿಸಬೇಕಾಗುವುದು. ಅದರಲ್ಲಿಯೂ ಸಂಭೋಪ ಭೋಗದ ವಸ್ತು ಒಡವೆಗಳನ್ನು ತರಿಸಲಿಕ್ಕೆ ಇವು ಶೇಖರಿಸಲ್ಪಟ್ಟಿದ್ದು ನೋಡಿದರೆ ಖೇದಾಶ್ಚರ್ಯಗಳು ಒಮ್ಮೆಗೇ ಉಂಟಾಗದಿರದು.

ಶುಭ ಸಂಭವಿಸಲಿ

ಬೊಂಬಾಯಿಯಲ್ಲಿ ಗಾಂಧಿ-ಜಿನ್ನಾ ಮಾತುಕತೆಗಳು ನಿರಾತಂಕವಾಗಿ ಸಾಗುತ್ತಿವೆಯಾಗಿ ಭಾಸ್ತಿ. ಮುಖಂಡರಿರ್ವರು ಹರ್ಷಚಿತ್ತರಾಗಿರುವುದು ಆಶಾದಾಯಕ ಚಿಹ್ನೆ ಎನ್ನಬಹುದು. ಮಾತುಕತೆಗಳ ಅತ್ಯಂತ ರಹಸ್ಯವಾಗಿರಿಸಲ್ಪಟ್ಟಿವೆ. ಅಲ್ಪ ಅವಧಿಯಲ್ಲಿಯೇ ಅವು ಕೊನೆಗೊಳ್ಳಬಹುದು. ಅವು ಮುಂದು ವರಿವವು ಎಂಬ ಸಂದೇಹವು ದೂರವಾಗುತ್ತಿದೆ.

ಬರ್ನಾರ್ಡ್ ಷಾ

ಈಗಲ್ಲಿ ಒಂದು ಗ್ರಂಥ

ಹಿಂದೂಮತದ ಶ್ಲಾಘನೆ

ಜಾರ್ಜ್ ಬರ್ನಾರ್ಡ್ ಷಾ ಅವರು ಜಗತ್ತಿನ ಮಹಾ ಜ್ಞಾನಿಗಳಲ್ಲೊಬ್ಬರು. ಇವರು ತಮ್ಮ ಎಲವೇ ಪ್ರಾಯದಲ್ಲಿ ಅತ್ಯುಚ್ಚ ತರಗತಿಯ ಒಂದು ರಾಜಕೀಯ ಗ್ರಂಥವನ್ನು ಬರೆದಿದ್ದಾರೆ. ಇದು ಅವರ ಸ್ಫೂರ್ತಿದಾಯಕವೂ ವಿಚಾರ ಪರಿಪೂರ್ಣವೂ ಮತ್ತು ಅದ್ವಿತೀಯ ಪ್ರತಿಭಾಪೂರ್ಣವಾಗಿಯೂ ಇರುವ ಶಿಸ್ತುಮಯ ಜೀವನದ ಫಲವೆನ್ನಬಹುದು.

ಶಾರವರು ಸಾಮ್ರಾಜ್ಯವಾದಿ ತತ್ವಕ್ಕೆ ವಿರೋಧಿಗಳು. ಪ್ರಜಾಪ್ರಭುತ್ವದ ಸಮತಾವಾದವೇ ಅವರ ಮೆಚ್ಚಿನ ರಾಜ್ಯಾಂಗ ಕ್ರಮ. ಬ್ರಿಟಿಷ್ ರಾಜನೀತಿಯನ್ನು ಇವರು ಕಡುವಾಗಿ ಟೀಕಿಸುತ್ತಾರೆ. ಸರಕಾರದ ಕಾರ್ಯಕಲಾಪಗಳನ್ನು ಬಲವಾಗಿ ವಿಮರ್ಶಿಸಿ ತಿದ್ದಬೇಕೆಂದು ಇವರ ಮತ. ಈಗಿನ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಅರ್ಧದಷ್ಟು ಮಹಿಳಾ ಸದಸ್ಯರು ಇರಬೇಕೆಂದು ಅವರು ಬರೆದಿದ್ದಾರೆ.

ತಮಗೆ ಸರಿದೋರದ ವಿಷಯಗಳನ್ನು ಟೀಕಿಸುವುದರಲ್ಲಿ ಶಾರವರು ಹಿಂದುಮುಂದು ನೋಡುವವರಲ್ಲ ಪ್ರತಿಯೊಂದು ವಿಷಯವನ್ನು ಇವರು ಆಳವಾಗಿ ಅಭ್ಯಾಸಿಸಿ ಹಾಸ್ಯಾಸ್ಪದವೆಂದು ತೋರುವ ಅಭಿಪ್ರಾಯಗಳನ್ನು ಕೊಡುತ್ತಾರೆ. ಇವರಿಗೆ ಮುದಿ ಪ್ರಾಯದಿಂದ ಬುದ್ಧಿ ಭ್ರಮೆಯಾಗಿದೆ ಎಂದು ಹೇಳಿದವರೂ ಇದ್ದಾರೆ.

"ಕಟ್ಟಡ ಶಿಲ್ಪ-ಒಂದು ವಿಶ್ವ ಶಕ್ತಿ" ಎಂಬ ಲೇಖನದಲ್ಲಿ ಇವರು ಹಿಂದೂ ಮತವನ್ನು ತುಂಬಾ ಶ್ಲಾಘಿಸಿರುವರು. ಅವರು ಬರೆಯುತ್ತಾರೆ, "ದೂರದಿಂದ ನೋಡುವಾಗ ಹಿಂದೂ ಮತದಲ್ಲಿ ಅನೇಕ ದೇವರಿರುವಂತೆ ಕಾಣುತ್ತದೆ, ಅದರಲ್ಲಿ ಲೆಕ್ಕವಿಲ್ಲದಷ್ಟು ದೇವರಿದ್ದಾರೆ. ದೇವರಲ್ಲಿ ಹೆಣ್ಣು, ಗಂಡು, ಪಕ್ಷಿ, ಪ್ರಾಣಿಗಳು ಕೂಡಾ ಇವೆ. ಆದರೆ ನಿರಾಕಾರ ಸ್ವರೂಪಿಯಾದ ದೇವರು ಒಬ್ಬನೆ ಎಂದು ನಮಗೆ ಕಡೆಗೆ ಹೊಳೆಯುತ್ತದೆ. ಇತರ ಎಲ್ಲಾ ದೇವರುಗಳು ಈ ಒಂದು ಶಕ್ತಿಯ ರೂಪಾಂತರಗಳಾಗಿರುವುದರಿಂದ ಹಿಂದೂ ಮತವು ಅತೀ ಉದಾರ ಭಾವನೆಯುಳ್ಳ ಮತವಾಗಿದೆ. ಅದು ಬಹು ವಿಶಾಲವಾದುದು. ಅತ್ಯಂತ ಗಹನ ವಿಚಾರಗಳನ್ನೊಳಗೊಂಡದ್ದು ಆಗಿರುವುದು. ಆದುದರಿಂದ ಎಲ್ಲಾ ಮತಸ್ಥರಿಗೂ ಅದರಲ್ಲಿ ತೃಪ್ತಿ ಸಿಗುವುದು. ಅಧಿಕಾರಕ್ಕೆ ಬಂದಾಗ ಎಲ್ಲಾ ಮತಸ್ಥರೂ ತಮ್ಮ ಮತ ಪ್ರಚಾರಕ್ಕೆ ಹಿಂಸೆ ದಬ್ಬಾಳಿಕೆಗಳನ್ನು ಮಾಡುತ್ತಾರೆ. ಆದರೆ ಹಿಂದೂ ಮತಕ್ಕೆ ಅಂತಹ ಅವಶ್ಯಕತೆ ಇಲ್ಲ. ಕಾರಣ ಎಲ್ಲಾ ಮತಗಳ ತತ್ವಗಳು ತನ್ನದೇ ರೂಪಾಂತರಗಳೆಂದು ಅದು ಖಂಡಿತ ತಿಳಿದಿದೆ

ಶಾರವರು ಜಗತ್ತಿನ ದೊಡ್ಡ ನಾಟಕಕಾರರೆಂದೆನಿಸಿ ಕೊಂಡಿದ್ದಾರೆ. ತಮ್ಮ ಗ್ರಂಥಗಳಲ್ಲಿ ಅಲ್ಲಲ್ಲಿ ಇವರು ತಮ್ಮ ಕುಟುಂಬದವರ ವಿಷಯವನ್ನು ಎತ್ತಿ ಬರೆಯುತ್ತಾರೆ. ಇದ್ದದನ್ನು ಸತ್ಯವಾಗಿ ಹೇಳಲಿಕ್ಕೆ ಅವರಿಗೆ ಯಾವ ಅಂಜಿಕೆಯೂ ಇಲ್ಲ ತಮ್ಮ ಅಜ್ಜನ ವಿಷಯವಾಗಿ ಬರೆಯುತ್ತಾ ಒಂದು ಕಡೆ ಅವರು "ನನ್ನ ಅಜ್ಜ ಹೊರಗಿನಿಂದ ನೋಡಲು ಹಳ್ಳಿಯ ಸಭ್ಯ ಗೃಹಸ್ಥರಂತೆ ತೋರುತಿದ್ದರೂ ಗುಟ್ಟಿನಲ್ಲಿ ಆತ ಅಡವಿನ ಮೇಲೆ ಹಣ ಕೊಟ್ಟು ಧನ ಸಂಪಾದನೆ ಮಾಡುತಿದ್ದ" ಎಂದು ಬರೆದಿರುವರು.

ತಾ. ೧೨ರಂದು ಜಿನ್ನರು ಮಹಾತ್ಮರನ್ನು ಉದ್ದೇಶಿಸಿ "ಈ ಸಲ ನಾವು ಒಪ್ಪಂದಕ್ಕೆ ಬಾರದೆ ಇದ್ದರೆ ನಮ್ಮಲ್ಲಿ ವಿವೇಕವು ದೀವಾಳಿಯಾಗಿದೆ ಎಂತಲೇ ಹೇಳಬೇಕು" ಎಂದರಂತೆ. ಮಹಾತ್ಮರು "ನಾವು ಒಪ್ಪಂದಕ್ಕೆ ಬರಲು ಶಕ್ತಿ ಮೀರಿ ಪ್ರಯತ್ನಿಸುತ್ತೇವೆ" ಎಂದಿರುವರು. ಒಪ್ಪಂದವಾಗದಿದ್ದರೆ "ಕೋಟ್ಯಾಂತರ ಜನರ ಆಶೆ ಆಕಾಂಕ್ಷೆಗಳು ಮಣ್ಣು ಪಾಲಾಗುತ್ತವೆ" ಎಂದೂ ಅವರಿಗೆ ತಿಳಿದಿದೆ.

ದೇಶಕ್ಕೆ ಶುಭವಾಗುವ ರೀತಿಯಲ್ಲಿ ಒಂದು ಇತ್ಯರ್ಥವುಂಟಾಗುವುದೆಂದು ಭಾರತ ಹಿತೈಷಿಗಳೆಲ್ಲರೂ ಹಾರೈಸಿರುವರು. ಗಾಂಧಿ-ಜಿನ್ನರೊಳಗಿನ ಸಂಪರ್ಕವು ಹೆಚ್ಚೆಚ್ಚು ಪ್ರೀತಿ ವಾತ್ಸಲ್ಯಗಳಿಂದ ಕೂಡಿದ್ದಾಗಿರುತ್ತದೆ. ಮಹಾತ್ಮರು ಜಿನ್ನರ ಆರೋಗ್ಯಕ್ಕೆ ತಮ್ಮ ಸ್ವಂತ ವೈದ್ಯರನ್ನು ಕಳುಹಿಸಿಕೊಟ್ಟರು. ಜಿನ್ನರ ನಾಲ್ಕು ಮಂದಿ ಕಾರ್ಯದರ್ಶಿಗಳು ಬಿರ್ಲಾ ಭವನದ ಪ್ರಾರ್ಥನೆಗೆ ಬಂದಿದ್ದರು. ಇದೆಲ್ಲವೂ ಶುಭ ಫಲದ ಚಿಹ್ನೆಗಳಾಗಿರುವುದರಿಂದ ಸಾಧಾನವು ಯಶಸ್ವಿಯಾಗಲೆಂದು ಹಾರೈಸುವುದರಲ್ಲಿ ಅಡ್ಡಿ ಏನಿದೆ?

ನಮ್ಮ ಹಿರಿಯರು

ಭಾರತದ ಶ್ರೇಷ್ಠತೆಯ ಕುರಿತು ಕೃಷ್ಣಸ್ವಾಮಿ ಎಂಬ ಸಾಹಿತಿಗಳು ಹೀಗೆ ಬರೆದಿದ್ದಾರೆ:- ತಮ್ಮ ಉಚ್ಚ ಕವಿತಾ ಪ್ರತಿಭೆಯಿಂದ ವ್ಯಾಸ, ವಾಲ್ಮೀಕಿ, ಕಾಳಿದಾಸ, ತುಲಸಿದಾಸರೂ, ತಮ್ಮ ಅಮೋಘ ಅಧ್ಯಾತ್ಮಿಕ ತತ್ವಗಳಿಂದ ಶಂಕರಾಚಾರ್ಯ, ಮಧ್ವಾಚಾರ್ಯ, ರಾಮನುಜಾಚಾರ್ಯರೂ, ತಮ್ಮ ಅಗಾಧ ಜ್ಞಾನ ಶಕ್ತಿಯಿಂದ ವ್ಯಾಕರಣ ಗ್ರಂಥಗಳನ್ನು ರಚಿಸಿದ ಪಾಣಿನಿ, ಪತಾಂಜಲಿಗಳೂ, ವಿಜ್ಞಾನ ಪರಿಶೋಧನೆಗಳಿಂದ ಭಾಸ್ಕರಾಚಾರ್ಯರೂ, ತಮ್ಮ ಪರಿಶುದ್ಧ ಚರಿತೆಯಿಂದ ಕೃಷ್ಣ ಬುದ್ಧರೇ ಮೊದಲಾದ ಸಾವಿರಾರು ಮಹಾ ಪುರುಷರಿಂದಲೂ ಪವಿತ್ರ ಗೊಳಿಸಲ್ಪಟ್ಟ ಈ ದೇಶಕ್ಕೆ ಸರಿಸಾಟಿಯಾದ ಇನ್ನೊಂದು ದೇಶವಿಲ್ಲ. ಇಂಥಾ ಮಹಾ ವ್ಯಕ್ತಿಗಳಿಗೆ ಜನ್ಮವಿತ್ತ ಈ ನಾಡು ಇನ್ನೂ ಅನೇಕ ಜ್ಞಾನಿಗಳನ್ನು ಹೆತ್ತು ಭಾವಿ ಜನಾಂಗದ ಮಾರ್ಗದರ್ಶಕರನ್ನು ಜಗತ್ತಿಗೆ ಕೊಡದಿರದು.

ರಾಜನಿಗೆ ತಕ್ಕ ರಾಯಭಾರಿ

ಮೊಗಲ್ ಬಾದಷಾನಾದ ಷಾಜಾಹಾನನು ಪರ್ಶಿಯನ್ ರಾಯಭಾರಿಯ ಮೇಲೆ ಕೋಪಗೊಂಡು "ಇಂಥ ಹುಚ್ಚನನ್ನು ಪರ್ಶಿಯದ ರಾಜನು ನನ್ನಲ್ಲಿಗೆ ಏಕೆ ಕಳುಹಿಸಿದನು? ಅವನ ಆಸ್ಥಾನದಲ್ಲಿ ಬೇರೆ ಸದ್ಗೃಹಸ್ಥರಿರಲಿಲ್ಲವೆ?" ಎಂದನಂತೆ. ಅದಕ್ಕೆ ಪರ್ಶಿಯನ್ ರಾಯಭಾರಿಯು "ತುಂಬಾ ಇದ್ದಾರೆ. ನನಗಿಂತಲೂ ಹೆಚ್ಚು ಬುದ್ಧಿವಂತರು ಅಲ್ಲಿ ಇದ್ದಾರೆ. ಆದರೆ ನಮ್ಮ ಅರಸನು ತನ್ನಂಥವರನ್ನೇ ಚುನಾಯಿಸುತ್ತಾನೆ" ಎಂದನಂತೆ.

ರಾಕೆಟ್ ಬಾಂಬು ಹಾವಳಿ

ವಿ. ಟಿ. ಮಂತ್ರಿ ವರ್ಗದ ಹೇಳಿಕೆ

ವೊಲ್ಸನ್ ಅವರು ಈಗ ರಾಕೆಟ್ ಬಾಂಬಿನಿಂದ ನಾಶವಾದ ಕಟ್ಟಡಗಳ ಅಂಕೆ ಸಂಖ್ಯೆ ಕೊಟ್ಟಿರುವರು.

ಈ ಭಯಂಕರ ಅಸ್ತ್ರದಿಂದ ಲಂಡನಿನ ೧೧ ಲಕ್ಷದ ೪ ಸಾವಿರ ಮನೆಗಳಿಗೆ ಹಾನಿ ಗೊಂಡಿವೆ. ೨೩ ಸಾವಿರ ಮನೆಗಳು ಸಂಪೂರ್ಣ ನಾಶವಾಗಿವೆ. ಮಿಲಿಯಾಂತರ ಮನೆಗಳ ಸಂಖ್ಯೆಯೊಂದಿಗೆ ಹೋಲಿಸುವಾಗ ಇವು ಅತೀ ಕಡಿಮೆ ಎಂದು ಅವರು ಹೇಳುತ್ತಾರೆ.

೧೯೪೦ರ ವಿಮಾನ ಬಾಂಬು ಹಾವಳಿಯಿಂದ ಇದು ತನಕ ೪೪ ಸಾವಿರ ಮನೆಗಳು ಪೂರ್ಣ ನಾಶವಾಗಿವೆ. ೪೫ ಸಾವಿರ ವಸತಿಗೆ ಅಯೋಗ್ಯವಾಗಿವೆ. ೧೪೩ ಸಾವಿರ ಮನೆಗಳು ದುರುಸ್ತಿಯಾಗಬೇಕಾಗಿವೆ. ೫ ಲಕ್ಷ ಜನರು ಮನೆ ಇಲ್ಲದಂತಾಗಿದ್ದಾರೆ.

ಮಂತ್ರಿಗಳು ಲ್ಯಂಡನಿನ ಜನತೆಯ ಧೈರ್ಯ ಸ್ಥೈರ್ಯಗಳನ್ನು ತುಂಬಾ ಪ್ರಶಂಸಿಸಿದ್ದಾರೆ. ಅವರನ್ನು ಸಂಕಷ್ಟದಿಂದ ಪಾರು ಮಾಡಲು ಎಲ್ಲಾ ವ್ಯವಸ್ಥೆಯನ್ನು ಕೈಕೊಳ್ಳುವರೆಂದು ಹೇಳಲಾಗಿದೆ. ಅದಕ್ಕಾಗಿ ಪ್ರತ್ಯೇಕ ಇಲಾಖೆಯೊಂದನ್ನು ತೆರೆದಿರುವರು.

ರಮುಜಾನ್ ಹಬ್ಬದ ಮಹತ್ವ

ಈ ವಾರದಲ್ಲಿ ಉಪವಾಸದ ತಿಂಗಳಾದ ರಮುಜಾನ್‌ನಿನ ಕೊನೆಯಲ್ಲಿ ಮುಸಲ್ಮಾನ್ ಬಂಧುಗಳು ಯಿದ್-ಫಿತರ್ ಹಬ್ಬವನ್ನು ಸಂಭ್ರಮದಿಂದ ಜರಗಿಸುವರು. ಹೀರಾ ಬೆಟ್ಟದಲ್ಲಿ ಮಹಮ್ಮದ್ ಪೈಗಂಬರರು ತಮ್ಮ ಉಪವಾಸ ವ್ರತವನ್ನು ಕೊನೆಗೊಳಿಸುವಾಗ ಅವರಿಗೆ ದೈವ ಸಾನಿಧ್ಯ ದೊರೆಯಿತೆಂದು ಹೇಳಲ್ಪಟ್ಟಿದೆ. ಇದರಿಂದ ರಮ್‌ಜಾನಿಗೆ ಪವಿತ್ರತೆ ಬಂದಿದೆ.

ಈ ಉಪವಾಸದ ತಿಂಗಳಲ್ಲಿ ಮುಸಲ್ಮಾನರೆಲ್ಲರೂ ತಮ್ಮ ಸುಖೋಪ ಭೋಗಗಳನ್ನು ತ್ಯಜಿಸಿ ಬೆಳಗಿನ ಹೊತ್ತು ನಿರಾಹಾರಿಗಳಾಗಿರುವರು. ಅಂದು ಕೊಂಬಿನಾಕೃತಿಯ ಚಂದ್ರ ಬಿಂಬವನ್ನು ನೋಡುವರು. ಅದನ್ನು ನೋಡಿದೊಡನೆ ಅವರು ದೇವರಿಗೆ ಪ್ರಾರ್ಥನೆಗಳನ್ನು ಸಲ್ಲಿಸುವರು. ಇದಕ್ಕಾಗಿಯೇ ಪ್ರತ್ಯೇಕವಾಗಿ ಕಟ್ಟಲ್ಪಟ್ಟ ಇದಗಾ ಪ್ರಾರ್ಥನಾ ಮಂದಿರಕ್ಕೆ ಅವರು ಶುಚಿರ್ಭೂತರಾಗಿ ಹೋಗುತ್ತಾರೆ. ಮಂಗಳೂರಿನಲ್ಲಿ ಬಾವಟ ಗುಡ್ಡದ ಮೇಲೆ ಒಂದು ಇದಗಾ ಮಂದಿರವಿರುವುದು.

ಕುರಾನಿನಲ್ಲಿ ಉಪವಾಸದ ಕುರಿತು ಹೀಗೆ ಹೇಳಲ್ಪಟ್ಟಿದೆ:—ಓ! ನಂಬಿದವರೇ ನಿಮಗೂ ನಿಮ್ಮ ಹಿಂದಿನವರಿಗೂ ಉಪವಾಸದ ಕ್ರಮವು ವಿಧಿಸಲ್ಪಟ್ಟಿದೆ. ಇದರಿಂದ ಕೆಟ್ಟತನವನ್ನು ನೀವು ದೂರಗೊಳಿಸಬಹುದು. ಕೆಲವು ದಿನ ಉಪವಾಸ ಮಾಡಿರಿ.

ಪ್ರಾಚೀನ ಗ್ರಂಥಗಳಲ್ಲಿ ಚಿತ್ರಕಲೆ

ಹಿಂದಿನವರು ತಮ್ಮ ಶ್ರೇಷ್ಠ ಗ್ರಂಥಗಳನ್ನು ಓಲೆ ಗರಿಗಳ ಮೇಲೆ ಬರೆದರು. ಈಗಿನಂತೆ ಅವರು ಚಿತ್ರಗಳನ್ನು ಅವುಗಳಲ್ಲಿ ಬಿಡಿಸುತಿದ್ದರಂತೆ. ಅಂತಹ ಓಲೆ ಗ್ರಂಥಗಳು ಅನೇಕ ಸಿಕ್ಕಿವೆ. ಸಂಸ್ಕೃತದಲ್ಲಿ ವೈದ್ಯಶಾಸ್ತ್ರ ಬರೆದ ಗ್ರಂಥಗಳಲ್ಲಿ ಶಸ್ತ್ರ ಚಿಕಿತ್ಸೆಯ ಉಪಕರಣಗಳು ಚಿತ್ರಿತವಾಗಿದ್ದುವಂತೆ. "ಕಟ್ಟಡದ" ರಚನೆಯ ಶಾಸ್ತ್ರದ ಗ್ರಂಥಗಳಲ್ಲಿ ಅನೇಕ ನಕಾಶೆಗಳು ಬರೆಯಲ್ಪಟ್ಟಿವೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಜೂರರಖಾತೆ ಅಧಿಕಾರಿಗಳು

ಲೇಬರ್ ಕಮಿಶನರಾದ್ದ ಮಿ| ಸಿ. ಕೆ. ಜಯ ರಾಘವನ್ ಐ. ಸಿ ಎಸ್. ಅವ ಮಂಗಳೂರಿಗೆ ಬಂದದ್ದು ಕಾರ್ಖಾನೆ, ಮತ್ತು ಕೂಲಿಗಾರರ ಪರಿಸ್ಥಿತಿಗಳನ್ನು ಪರಿಶೀಲಿಸಿ ಹಿಂದಿರಿಗ್ಗಿದರು. ಶ್ರೀ ಶಾಂತಾ ರಾಮ ಪೈ, ಶ್ರೀ ಕಕ್ಕಿಲ್ಲಾಯ ಮೊದಲಾದ ಕೆಲವು ಮಜೂರ ಪ್ರತಿನಿಧಿಗಳು ಅವರನ್ನು ಕಂಡು ಮಾತನಾಡಿದರು.

ತೋಟ ಸ್ಪರ್ಧೆ

ಇದೇ ಬರುವ ತಾ| ೨೭ರಿಂದ ಮುಂದಿನ ತಿಂಗಳ ೧೨ರ ತನಕ ಮಂಗಳೂರಿನ ನೇ ಹೂ ಮತ್ತು ತರಕಾರಿ ತೋಟಗಳ ಸ್ಪರ್ಧೆ ನಡೆಯುವುದು ಹಿಂದೆ ಸ್ಪರ್ಧಿಸದ ಹೊಸ ಸ್ಪರ್ಧೆಗಾರರಿಗೆ ಮಿ| ಎ ಬಿ. [illegible]ಕ್ಸನ್ನ್ ರು ಒಂದು ವಿಶೇಷ ಬಹುಮಾನ ಇಟ್ಟಿರುವರು. ಭಾಗವಹಿಸಲಿಚ್ಛಿಸುವವರು ಜಿಲ್ಲಾ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನ ಕಾರ್ಯದರ್ಶಿಗಳಿಗೆ ವಿವರಗಳಿಗೆ ಬರೆಯಬೇಕು.

ಹೊಸ ಮುನ್ಸೀಫರು

ಮಿ| ಅಬ್ದುಲ್‌ರಹೀಮ್ ಅಹಮ್ಮದ್ ಬಿ. ಎ. ಬಿ. ಎಲ್. ಅಡ್ವೋಕೇಟ್ ಅವರು ಮಂಗಳೂರಿನ ಡಿ|| ಮುನ್ಸೀಫರಾಗಿ ನೇಮಿಸಲ್ಪಟ್ಟು ಚಾರ್ಜು ವಹಿಸಿರುವರು

ಹೊಸ ಡಿವಿಜನಲ್ ಆಫೀಸರರು

ಶ್ರೀ ರಂಗನಾಥ ರಾವ್ ನಾಯ್ಡು ಅವರು ಇಲ್ಲಿಯ ರೆವಿನ್ಯೂ ಡಿವಿಜನಲ್ ಆಫೀಸರರಾಗಿ ನೇಮಕ ಹೊಂದಿದ್ದು, ಅವರು ತಮ್ಮ ಹುದ್ದೆಯ ಚಾರ್ಜ್ ತೆಗೆದುಕೊಂಡಿರುವರು

ರೇಶನ್ ಮೊಕದ್ದಮೆಗಳು

೧೬ತಿಂಗಳ ರೇಶನ್ ಪದಾರ್ಥಗಳಿದ್ದರೂ ಪ್ರತ್ಯೇಕ ರೇಶನ್ ಪಡೆದುದಕ್ಕೆ ಬೆಂದೂರಿನ ಮಿಸ್ ಎನ್ನಿಸ್ ಸಾಲ್ದಾನಾ, ಶ್ರಿ ಐತಪ್ಪಶೆಟ್ಟಿ ಜೆಪ್ಪು, ಶ್ರಿ ಕೆರವಾರ್ ವಿಠಲ್ ರಾವ್ ಇವರ ಮೇಲೆ ಮೊಕದ್ದಮೆಯಾಗಿದೆ

ಅಕ್ಕಿ ಹೊರಗೆಸಾಗಿಸಿದ ಮೊಕದ್ದಮೆಗೆ ಒಳಗಾದವರು – ಮೂನ್ನೂರು ಗ್ರಾಮದ ಕೋಟಿ ಮೂಲ್ಯ, ತುಂಬೆ ಗ್ರಾಮದ ಕೊಯಿಲೊ, ಉಚ್ಚಿಲದ ಪಕೀರ ಬ್ಯಾರಿ

ಜನ ಕಡಿಮೆಯಾದಾಗ ರೇಶನ್ ಕಾರ್ಡಿನಲ್ಲಿ ತಿದ್ದುವಡಿಮಾಡದಿದ್ದುದಕ್ಕೆ ಮೊಕದ್ದಮೆಗೆ ಒಳಗಾದವರು –ಜೆ ಎಂ ಪೆರ್ನಾಂಡೀಸ್, ಬಲ್ಮರದ ಸಾಮುವೇಲ್ ಮಾರ್ಟಿನ್, ಎನ್ನಿಸಸಾಲ್ದಾನಾ.

ಅರಿವೆ ಬಟ್ಟೆ ಅಧಿಕಾರಿಗಳು

ಪ್ರಾಂತಿಕ ಟೆಕ್ಸ್‌ಟೈಲ್ ಕಮಿಷನರ್ ಶ್ರೀ ಎಸ್. ವೆಂಕಟೇಶ್ವರನ್ ಐ. ಸಿ. ಎಸ್. ಅವರು ಈ ತಿಂಗಳ ಕೊನೆಯೊಳಗೆ ಇಲ್ಲಿಗೆ ಆಗಮಿಸುವರು ಅರಿವೆ ಮತ್ತು ನೂಲು ವ್ಯಾಪಾರಿಗಳ ಸಂಕಷ್ಟಗಳನ್ನು ಚರ್ಚಿಸುವ ಸಭೆಯಲ್ಲಿ ಅವರು ಭಾಷಣಮಾಡಲಿರುವರು.

ಬೆಲ್ಲದ ಲೆಕ್ಕ

ಬೆಲ್ಲ ವ್ಯಾಪಾರಸ್ಥರು ಸರಿಯಾದ ಲೆಕ್ಕ ಇಟ್ಟುಕೊಳ್ಳ ಬೇಕೆಂದು ಅಧಿಕಾರಿಗಳು ಎಚ್ಚರ ವಿತ್ತಿರುವರು. ದಿನನಿತ್ಯ ತರಿಸಿದ್ದ, ಮಾರಿದ ಮತ್ತು ದಾಸ್ತಾನಿರುವ ಬೆಲ್ಲದ ಪ್ರಮಾಣವನ್ನು ತೋರಿಸುವ ಪಟ್ಟಿಯನ್ನು ತೂಗಹಾಕಬೇಕೆಂದೂ ತಿಳಿಸಲಾಗಿದೆ. ಬೆಲ್ಲದ ಸ್ಟಾಕು ಜಿಲ್ಲೆಯಲ್ಲಿ ಕಡಿಮೆಯಾಗುತ್ತಿರುವುದರಿಂದ ಇದರ ಅವಶ್ಯಕತೆ ಎಂದು ತಿಳಿಸಲಾಗಿದೆ.

ಕೊಲೆ ವಿಚಾರಣೆ

ಸ್ಟೇಶನರಿ ಸಬ್ ಮೆಜಿಸ್ಟ್ರೇಟರಲ್ಲಿ ವಿಚಾರಣೆಯಾಗುತಿದ್ದ ಶ್ರೀ ಎ. ಕೃಷ್ಣಾಜಿ ರಾಯರ ಮೇಲಿ ಖೂನಿ ಮೊಕದ್ದಮೆಯು ಮುಗಿದು ಸೆಶ್ಶನ್ನಿಗೆಕಮಿಟ್ ಮಾಡಲಾಗಿದೆ

ವಂಚನೆಗಾರರ ವಿಚಾರಣೆ

ರೇಶನಿಂಗ್ ಆಫೀಸರರೆಂದು ನಟಿಸಿ ಕೆಲವು ಕಡೆ ವಂಚನೆ ಮಾಡಿದರೆಂಬ ಆರೋಪದ ಮೇಲೆ ಪೀಟರ್ ಬಾಬು, ಕೃಷ್ಣಪ್ಪ ಮತ್ತು ಪೋಲಿಸ್ ಕಾನ್‌ಸ್ಟೇಬಲ್ ಜನಾರ್ದನ ಎಂಬ ಈ ಮೂವರ ಮೇಲೆ ಚಾರ್ಜು ಶೀಟು ದಾಖಲಾಗಿದೆ.

ಖಾದಿ ಪ್ರಸಾರ

ಸ್ಥಳೀಯ ಸೌತ್ ಕೆನರಾ ವಿಲೆಜ್ ಇಂಡಸ್ಟ್ರೀಸ್ ಎಸೋಶಿಯೇಶನ್ ಅವರು ಹೆಚ್ಚೆಚ್ಚು ನೂಲು ಮತ್ತು ಖಾದಿಯನ್ನು ತಯಾರಿಸಲು ನಿರ್ಧರಿಸಿರುವರು ೩೦೦ ನೂಲುವವರೂ, ೨೦ ಮಗ್ಗಗಳನ್ನೂ ಈ ವರ್ಷದ ಕಾರ್ಯಕ್ರಮದಲ್ಲಿ ನಿರ್ವಹಿಸುವರು.

ಜಿಲ್ಲೆಯಲ್ಲಿ ಬೆಳೆ ಕಟಾವು
ಸರಕಾರದ ಸೂಚನೆ

"ಬೆಳೆ ಕಟಾವಿನ ಸಮಯವು ಹತ್ತಿರವಾಗುತ್ತಿದೆ. ರೈತರು ಅಕ್ಕಿ ತಯಾರಿಸಿ ಮಾರಲು ತರುವಂತೆ ಕಲೆಕ್ಟರರು ಜಿಲ್ಲಾ ಯುದ್ಧ ಪ್ರಚಾರ ಸಂಪದವರ, ಕೃಷಿ ಇಲಾಖೆಯವರ ಮತ್ತು ಸಹಕಾರೀ ಸಂಸ್ಥೆಗಳ ಸಹಾಯದಿಂದ ಹಳ್ಳಿಗಳಲ್ಲಿ ಪ್ರಚಾರ ಕೈಕೊಳ್ಳಬಹುದು ಸ್ಥಳೀಯ ಆಹಾರ ಸಮಿತಿಯವರೂ, ಭೂಮಾಲಿಕರ ಸಂಘದವರೂ ಮತ್ತು ಅಂಥಹ ಇತರ ಕೆಲ ಸಂಸ್ಥೆಯವರನ್ನೂ ಪ್ರಚಾರ ಸಹಾಯಕ್ಕೆ ಕೇಳಿಕೊಳ್ಳಬಹುದು ರೈತರು ಈ ಸಲದ ಅಕ್ಕಿ ಬತ್ತಗಳನ್ನು ಗುಪ್ತವಾಗಿ ದಾಸ್ತಾನಿರಿಸದಂತೆ ಅವರನ್ನು ಭೋದಿಸುವುದು ಇವರ ಪ್ರಚಾರ ಚಳವಳದ ಉದ್ದೇಶವಿರಬೇಕು ಮತ್ತು ರೈತರು ತಮ್ಮಷ್ಟಕ್ಕೆ ಅಕ್ಕಿಯನ್ನು ತಯಾರಿಸಿ ಮಾರುವ ಸ್ಥಳಕ್ಕೆ ತರುವಂತಾಗಬೇಕು ಕಲೆಕ್ಟರರು ತೀವ್ರವಾಗಿ ಈ ವಿಷಯ ಕಾರ್ಯಕ್ರಮವನ್ನು ಕೈಕೊಳ್ಳಬೇಕು ಹೀಗೆ ತಾವಾಗಿ ರೈತರು ಅಕ್ಕಿಯನ್ನು ಇದೇ ನವಂಬರ್ ಆಖೇರಿಯೊಳಗೆ ತಂದು ಕೊಟ್ಟಲ್ಲಿ ಅವರಿಗೆ ಈಗಿನ ದರವೇ ಕೊಡಲಾಗುವುದು ನವೆಂಬರ್ ನಂತರ ಬೆಲೆಯನ್ನು ಇಳಿಸಲಾಗುವುದು "

ಟೆಪಿಯೋಕಾ(ಬೇರು ಗೆಣಸು) ಹುಡಿ
ಒಳ್ಳೇ ಆಹಾರ ಪದಾರ್ಥ

ಟೆಪಿಯೋಕಾ ಎಂಬ ಈ ಬೇರು ಗೆಣಸಿನ ಹುಡಿಯನ್ನು ಮುಖ್ಯ ಆಹಾರದ ಬದಲಿಗೆ ಉಪಯೋಗಿಸಿಕೊಳ್ಳಬಹುದು. ಸ್ವಲ್ಪ ಅಕ್ಕಿಯೊಂದಿಗೆ ಬೆರಸಿ ಬೇಯಿಸಿದರೆ ಇದು ಒಳ್ಳೇ ಗಂಜಿ ಕೊಡುವುದು ಅಕ್ಕಿ ಗೋದಿ ಹುಡಿಗಳೊಂದಿಗೆ ಬೆರಸಿ ಇದರಿಂದ ರುಚಿಯಾದ ಚಪಾತಿ ರೊಟ್ಟಿಗಳನ್ನು ಮಾಡಬಹುದು

ತೆಂಗಿನ ಕಾಯಿಯ ಚೂರುಗಳೊಂದಿಗೆ ಇದರ ಚೂರುಗಳನ್ನು ಬೇಯಿಸಿ ಮಸಾಲೆ ಹಾಕಿ ಪದಾರ್ಥ ಮಾಡಬಹುದು. ಎಣ್ಣೆಯಲ್ಲಿ ಕಾಯಿಸಿದಲ್ಲಿ ಇದಕ್ಕೆ ಒಳ್ಳೇ ರುಚಿಬರುತ್ತದೆ.

ಮಂಗಳೂರಿನಲ್ಲಿ ಟೆಪಿಯೋಕಾದ ಹುಡಿ ಮಣಕ್ಕೆ ರೂ. ೬|ರಂತೆಯೂ, ಚೂರುಗಳು ರೂ. ೪||ರಂತೆಯೂ ಮಾರಾಟ ಕ್ಕಿವೆ. ಎಲ್ಲರೂ ಇದನ್ನು ಉಪಯೋಗಿಸಿ ನಮೂನೆ ನೋಡಿದರೆ ಉಪಯುಕ್ತವೆಂದು ಖಂಡಿತ ತಿಳಿಯುವುದು, ವ್ಯಾಪಾರಸ್ಥರು ಇದನ್ನು ಹೆಚ್ಚೆಚ್ಚು ಮಾರಲು ಪ್ರಯತ್ನ ಪಡಬೇಕು.

ಜಿಲ್ಲಾ ಬೋರ್ಡು ಸಭೆ

ತಾ. ೧೮ರಲ್ಲಿ ಜಿಲ್ಲಾ ಸಭೆ ಸೇರಿತು.. ಮೂಡಬಿದ್ರೆಯ ಬೋರ್ಡು ಹಾಯರ್ ಎಲಿಮೆಂಟರಿ ಕ್ಲಾಸುಗಳನ್ನು ಬೇರೆ ಯಾವ ವಿದ್ಯಾಸಂಸ್ಥೆಗೂ ಒಪ್ಪಿಸದೆ ಬೋರ್ಡೇ ಅದನ್ನು ಚಲಾಯಿಸಬೇಕೆಂದು ನಿರ್ಧಾರವಾಯಿತು. ಕಾಪಿನಲ್ಲಿ ಒಂದು ಹೈಸ್ಕೂಲು ಸದ್ಯ ಅವಶ್ಯವಿಲ್ಲವೆಂದಾಯಿತು. ಉಡುಪಿ ಬೋರ್ಡು ಹೈಸ್ಕೂಲನ್ನು ಮುಚ್ಚಬೇಕೆಂಬ ಠರಾವು ಓಟಿನಲ್ಲಿ ಬಿದ್ದು ಹೋಯಿತು ಆದರೆ ಅದಕ್ಕೆ ಅಲ್ಲಿನ ಮುನ್ಸಿಪಾಲಿಟಿಯವರು ಸಹಾಯ ಹಣಕೊಡುವುದು ಅವಶ್ಯವೆಂಬ ಸೂಚನೆ ಮಾನ್ಯವಾಯ್ತು ಬೋರ್ಡು ಆಫೀಸು ಕಾಪಿಗೆ ವರ್ಗಾಯಿಸುವ ಠರಾವು ಸಭೆಯ ಮುಂದೆ ಬರಲಿಲ್ಲ

ಸಜ್ಜಿಗೆ–ಗೋಧಿ–ಹಿಟ್ಟು

ಮಂಗಳೂರಿಗೆ ಪ್ರತ್ಯೇಕವಾಗಿ ೩ ಸಾವಿರ ಗೋಣಿ ಗೋಧಿ ಹಿಟ್ಟು ಮತ್ತು ೧ ಸಾವಿರ ಗೋಣಿ ಸಜ್ಜಿಗೆಯೂ ಬಂದಿದ್ದು ಇನ್ನೂ ೨೪೦೦ ಗೋಣಿ ಗೋಧಿ ಹಿಟ್ಟೂ ೧ ಸಾವಿರ ಗೋಣಿ ಸಜ್ಜಿಗೆಯೂ ಜನರ ಉಪಯೋಗಕ್ಕೆ ಬರಲಿದೆ ಇಷ್ಟು ಗೋಣಿ ಸಜ್ಜಿಗೆ ಹಿಟ್ಟು ಹಿಂದೆಂದೂ ಇಲ್ಲಿಗೆ ಬರಲಿಲ್ಲ

ಉಡುಪಿಯ ಸಾಹಿತ್ಯೋತ್ಸವ

ಮೊದಲೇ ಸೂಚಿಸಿರುವಂತೆ ಉಡುಪಿಯ ಬೋರ್ಡ್ ಹೈಸ್ಕೂಲಲ್ಲಿ ಇದೇ ತಾ| ೨೭ರಿಂದ ೨೯ರ ವರೆಗೆ ದಸರೆಯ ಸಾಹಿತ್ಯೋತ್ಸವು ಜರಗಲಿದೆ ಶ್ರೀ| ಫಲಿಮಾರು ಶ್ರೀ ಶ್ರೀಗಳವರೂ ಶ್ರೀ ಶಿರೂರು ಮಠಾಧೀಶರೂ ಈ ಮಹೋತ್ಸವದಲ್ಲಿ ಭಾಗ ವಹಿಸುವುದಷ್ಟೇ ಅಲ್ಲದೆ ಶ್ರೀಗಳಾದ ಪಿ ವಿ ಉಪಾಧ್ಯರೂ, ಬಿ ವಿ ರಮಣ ಕೆ ಕೃಷ್ಣ ರಾವ್, ಸುರತ್ಕಲ್ ಸುಬ್ಬರಾವ್, ಎಂ ಗೋವಿಂದ ಪೈ ಸಿರೋಡಿ ಸುಬ್ಬರಾವ್, ವಿ ಎಸ್. ಕುಡ್ವ, ಎಸ್. ಮುಕುಂದ ರಾವ್, ಎಂ ವಾಸುದೇವ ಪ್ರಭು, ಟಿ ಗೋಪಾಲಕೃಷ್ಣ ಭಟ್ಟ, ಎಂ ಶಂಭಟ್, ಕೆ ಸೂರ್ಯನಾರಾಯಣ ಅಡಿಗ, ಕೆ. ಬಿ ಜಿನರಾಜ ಹೆಗ್ಗಡೆ, ಮೌಲಾನ್ ಒಡೆಯರ್, ಶ್ರೀಪಾದ ದಾಸ್, ಸಾಬಾಜಿ ಶ್ರೀನಿವಾಸಾಚಾರ್ಯ, ಮುಳಿಯ ತಿಮ್ಮಪ್ಪಯ್ಯ, ಸೆಡ್ಯಾಮ ಕೃಷ್ಣ ಭಟ್, ಹೊಸ ಬೆಟ್ಟು ರಾಮರಾವ್, ಮೊದಲಾದ ಮಹನೀಯರೂ ಭಾಷಣಗಳನ್ನು ಕೊಡಲಿದ್ದಾರೆ ಜತೆಯಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಶ್ರೀಗಳಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು, ಕೆ ವಿ ರಾಘವಾಚಾರ್ಯರೂ, ಸಿಟ್ಟೂರು ಶ್ರೀನಿವಾಸರಾಯರೂ ಈ ಮಹೋತ್ಸವವನ್ನು ಹರಸಲು ಉಡುಪಿಗೆ ಬರುವರೆಂದೂ ತಿಳಿದುಬಂದಿದೆ. ಈ ದಿನಗಳಲ್ಲೆಲ್ಲ ನಾಟಕ ಯಕ್ಷಗಾನ ಸಂಗೀತ, ಹರಿಕಥೆಯೇ ಮೊದಲಾದ ವಿವಿಧ ವಿನೋದಗಳೂ ಇವೆ ಈಗಾಗಲೇ ಭಾಷಣಾದಿಗಳ ಕಾರ್ಯಕ್ರಮಗಳು ತಯಾರಾಗಿರಬಹುದಾದರೂ ಸಂದರ್ಭಾನುಸಾರವಾಗಿ ಅದನ್ನು (ಭಾಷಣಕರ್ತರುಗಳ ಸೌಕರ್ಯಗಳಿಗೆ ತಕ್ಕಂತೆ) ಕೊಂಚ ಮಟ್ಟಿಗೆ ಬದಲಾಯಿಸಬೇಕಾಗಿ ಬಂದೀತೆಂಬುದೂ ನಿರೀಕ್ಷಣೀಯವೇ ಆಗಿದೆ.

ಕಾರ್ಕಳ

ಇದೇ ತಾ| ೩೪ನೇ ಆದಿತ್ಯವಾರ ಬೆಳಿಗ್ಗೆ ೧೦ ಗಂಟೆಯಿಂದ ೧೨ ಗಂಟೆಯ ವರೆಗೆ ಆನಂದನಿಕೇತನವೆಂಬ ಸಾರ್ವಜನಿಕ ವಿದ್ಯಾಸಂಘವನ್ನು ಪ್ರಾರಂಭ ಮಾಡಲು ಒಂದು ಸಭೆಯು ಸ್ಥಳೀಯ ದೇವಸ್ಥಾನ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ| ಪಿ: ವಿ. ಉಪಾಧ್ಯಾಯ, ಬಿ. ಎ., ಎಲ್ ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಜನಾಬ್ ಎಚ್: ಎಸ್. ಹುಸೇನ್ ಸಾಹೇಬ್, ಬಿ ಎ, ಬಿ. ಎಲ್‌ರವರು ಈ ಸಂಘದ ಉದ್ಘಾಟನೆಯನ್ನು ಮಾಡುವರು. ಈ ಸಂದರ್ಭದಲ್ಲಿ ಐಕ್ಯಮತ್ಯದ ಮತ್ತು ಲೋಕಶಾಂತಿಯ ಪ್ರಾರ್ಥನೆಗಳೂ ಇಡಲಾಗಿವೆ ಈ ಸಂಘವು ಮುಖ್ಯವಾಗಿ ಜನಸಾಮಾನ್ಯರಲ್ಲಿ ಆನಂದಕರವಾದ ಜೀವನಕ್ಕೆ ಅಗತ್ಯವಿರುವ ವಿದ್ಯೆಯನ್ನು ಪ್ರಚಾರಮಾಡಲಿಕ್ಕಿರುವುದರಿಂದ ಜನಸಾಮಾನ್ಯರೂ ಅವರ ಹಿತಚಿಂತಕರೂ ಸಭೆಗೆ ಚಿತ್ತೈಸಬೇಕೆಂದು ಆನಂದನಿಕೇತನದ ಸ್ಥಾಪಕರಾದ ಶ್ರೀ| ಗೋಪಾಲಕೃಷ್ಣ ಬಿ ಎ ಇವರು ಪ್ರೇಮಪೂರ್ವಕವಾಗಿ ಕೋರುತ್ತಾರೆ

ನೋಟೀಸು

ಕುಂದಾಪುರ ಡಿಸ್ಟ್ರಿಕ್ ಮುನ್ಸಿಫ್ ಕೋರ್ಟಿನಲ್ಲಿ

O S 175/1944

ಅಚ್ಯುತ ಕೃಷ್ಣ ಹೆಬ್ಬಾರ — ವಾದಿ
ಮಂಜಯ್ಯ ಸೆಟ್ಟಿ ಕೂಡಾ — ಪ್ರತಿವಾದಿಗಳು

1 ಮಂಜಯ್ಯ ಸೆಟ್ಟಿ ಸುಬ್ಬಕ್ಕ ಶೆಟ್ಟಿ ಮಗ 4 ರಂದಮ್ಮ ಶೆಟ್ಟಿ ಅಕ್ಕಮ್ಮ ಶೆಟ್ಟಿ ಮಗಳು ಕೋಟೇಶ್ವರ ಗ್ರಾಮ ವಾರ್ಕೋಟದಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ವಾದಿ ಕಡೆಯಿಂದ ಈ ಮೂಲಕ ತಿಳಿಸುವದೇನೆಂದರೆ ಮೇಲ್ಕಂಡ ವಾದಿಯು ನೀವು ವಗೈರೆರ ಮೇಲೆ ಗೇಣಿ ಬಾಕಿ ಬಗ್ಗೆ ವ್ಯಾಜ್ಯ ದಾಕಲು ಮಾಡಿದ್ದಾರೆ ಸದ್ರಿ ದಾವೆಯಲ್ಲಿ ನೀವು ಯೇನಾದ್ರೂ ತಕ್ರೀರು ಉದಾರಪಣೆ ದಾಕಲು ಮಾಡುವಂಥಾದ್ದು ಇದ್ದರೆ ಇದೇ ಇಸವಿ ಬರುವ ಅಕ್ಟೋಬರ 6ನೇ ತಾರೀಕು ಪೂರ್ವಾಹ್ನ 11 ಗಂಟೆಗೆ ಈ ಕೋರ್ಟಿನ ಮುಂದೆ ಸ್ವತಹವಾಗಿಯಾಗಲಿ ಯಾ ಪ್ಲೀಡರ್ ಮೂಲಕವಾಗಿಯಾಗಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದ್ರೆ ಸದ್ರಿ ದಾವೆಯಲ್ಲಿ ನಿಮ್ಮನ್ನು ಯಕ್ಸ ಪಾರ್ಟಿ ಮಾಡಿ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಸಿಯದೆ

ತಾ 17 9 44, ಕುಂದಾಪುರ, } **K Soorappa Shetty,** Advocate for Plaintiff

---

The Clergymen's Bénefit Society (In Liquidation)

NOTICE

Is here by given that a meeting of the members and creditors of the above Society will be held on Sunday 29-10-1944 at 10 A. M at the office of undersigned in Car Street, Mangalore for the purpose of laying befor the meeting the account showing how the winding up has been conducted and giving any explanation thereof.

Mangalore, 19-9-1944. | **M. Keshava Pai,** Advocate, Liquidator.

ಭಾರತದಲ್ಲಿ ಭಂಡವಾಳಗಾರರ ಯೋಜನೆ

15 ವರ್ಷಗಳಲ್ಲಿ ಬಡತನದ ನಿರ್ಮೂಲ

ಅದರ ಶುಭಾಶುಭಗಳು

ಬ್ರಿಟಿಷ್ ಸಮತಾವಾದಿ ಫೆನ್ನರ ಬ್ರೊಕ್ ವೇ ಇವರ ವಿ[illegible]

[illegible] ಭಾರತವು ಬಡತನದ ದೇಶ. [illegible] ಸ್ವಾರ್ಥ ಗೋಳದ [illegible] ಬಡತನದ ಈ [illegible]ವನ್ನು ಹೊಡೆದಟ್ಟಲು ಅವಿಶ್ರಾಂತವಾಗಿ ದುಡಿದಿದ್ದಾರೆ. ಅನೇಕತೆರದ ಯೋಜನೆಗಳು [illegible]ದಲ್ಲೇ [illegible] ಒಂದೂ ಕಾರ್ಯರೂಪಕ್ಕೆ ಬರಲಿಲ್ಲ. ಇತ್ತೀಚೆಗೆ ದೇಶದ ಪ್ರಮುಖ ಬಂಡವಾಳಗಾರರು ಎಂಟುಮಂದಿ ಕೂಡಿ ೧೫ ವರ್ಷದ ಒಂದು ಉದ್ಯೋಗೀಕರಣದ ಯೋಜನೆ ತಯಾರಿಸಿರುವರು. ಇದು ಅನೇಕ ಕುಂದುಕೊರತೆಗಳಿಂದ ಕೂಡಿರುವುದಾದರೂ ಸದುದ್ದೇಶದಿಂದ ಮಾಡಿದುದಾಗಿ ನಂಬಬಹುದು.

ಈ ಹೊಸ ಯೋಜನೆಯ ನಿರ್ಮಾಪಕರು ರಾಷ್ಟ್ರೀಯ ಭಾವನೆಯವರು. ಸ್ವಾತಂತ್ರ್ಯ ಚಳವಳದಲ್ಲಿ ಅಪ್ರತ್ಯಕ್ಷವಾಗಿ ಸಹಾನುಭೂತಿಯುಳ್ಳವರೆನಿಸಿಕೊಂಡವರು. ಬಿರ್ಲಾ ಬಂಧುಗಳು, ಟಾಟಾ, ಸಹೋದರರು ಮತ್ತಿತರ ಗಿರಣಿ ಮಾಲಿಕರು ಮತ್ತು ಬ್ಯಾಂಕರುಗಳು ಈ ಎಂಟು ಮಂದಿಯಲ್ಲಿದ್ದಾರೆ. ಕೆಲವು ಸಲ ಗಾಂಧಿಯವರು ಇವರ ಕೈಗೊಂಬೆಯೆಂದು ಕೂಡಾ ಕಾಂಗ್ರೆಸ್ ಕಿಸಾನರಿಂದಲೂ ಸಮತಾವಾದಿಗಳಿಂದಲೂ ಟೀಕಿಸಲ್ಪಟ್ಟಿದ್ದಾರೆ.

ರಶ್ಯದಲ್ಲಿ ಹಲವು ಯೋಜನೆಗಳಾದುವು. ಅದನ್ನು ಕಾರ್ಯ ರೂಪಕ್ಕೆ ತಂದವರು ಅಲ್ಲಿಯ ಬಡ ಜನತೆಯ ಪ್ರತಿನಿಧಿಗಳು. ಆದರೆ ಈ ಯೋಜನೆಯು ದೀನೋದ್ಧಾರಭಾವನೆಯ ಕೆಲ ಸಿರಿವಂತರು ಆದರೆ ಇದು ಜಗತ್ತಿನ ಮಹತ್ವದ ಯೋಜನೆಗಳಲ್ಲಿ ಒಂದೆಂಬುದು ನಿಸ್ಸಂದೇಹ.

ಬಡತನದಲ್ಲಿ ಕುಗ್ಗಿ ಹೋದ ಜನತೆಯ ಜರ್ಜರಿತವಾದ ದೇಹಿಕ, ಮಾನಸಿಕ, ಮತ್ತು ಸಾಂಸ್ಕೃತಿಕ ಪುನರ್ಜೀವನವೇ ಈ ಮಹಾ ಯೋಜನೆಯ ಮುಖ್ಯ ಉದ್ದೇಶ. ದಾರಿದ್ರ್ಯದಲ್ಲಿ ಮುಳುಗಿ ಉಸಿರುಕಟ್ಟಿದ ಈ ಅಪಾರ ಜನತೆಗೆ ಆಹಾರ, ವಸ್ತ್ರ, ಆರೋಗ್ಯ, ಶಿಕ್ಷಣಸೌಕರ್ಯಗಳನ್ನೊದಗಿಸುವುದು ಮನುಷ್ಯಯತ್ನಕ್ಕೆ ಮಿರಿದ ಸಾಹಸವೆಂದು ತೋರುವುದು. ಆದರೂ ಈ ಕೋಟ್ಯಾಧೀಶರು ಇದು ಸಾಧ್ಯವಿದೆಯೆಂದು ಲೆಕ್ಕ ಹಾಕಿ ತೋರಿಸಿಕೊಟ್ಟಿದ್ದಾರೆ.

ಮೊದಲು ಭಾರತದಲ್ಲಿ ಕೃಷಿ ಮತ್ತು ಕೈಗಾರಿಕೆಗಳನ್ನು ದೇಶವಿಶಾಲಕ್ಕೆ ಹರಡಬೇಕು. ಇದಕ್ಕೆ ೧೧೨೪೦ ಕೋಟಿ ರೂಪಾಯಿಗಳ ಮೂಲಧನ ಬೇಕು. ೧೩೩೪ ಕೋಟಿಗಳಷ್ಟು ರೂಪಾಯಿಗಳು ಪ್ರತಿವರ್ಷದ ಖರ್ಚಿಗೆ ತಗಲುವವು. ನಮ್ಮ ಬಡದೇಶದಲ್ಲಿ ಅಶಕ್ಯವೆಂದೇ ತೋರುವ ಸಂಖ್ಯೆ ಇದು ಆದರೆ ಯೋಜನೆಗಾರರಿಗೆ ಇಷ್ಟು ಹಣವನ್ನು ಒಟ್ಟುಗೂಡಿಸುವ ಧೈರ್ಯವಿದೆ.

೧೫ ವರ್ಷಗಳೊಳಗೆ ನಮ್ಮ ದೇಶದ ಜನರ ಸಂಪಾದನೆಯು ಈಗಿನ ದರ ಮೂರು ಪಾಲಾಗುವುದೆಂದೂ, ಕೃಷಿ ಉತ್ಪತ್ತಿಯು ಇಮ್ಮಡಿ ಮತ್ತು ಕೈಗಾರಿಕೆ ಉತ್ಪತ್ತಿ ೫ ಪಾಲಷ್ಟು ಹೆಚ್ಚಾಗುವುದೆಂದೂ ಯೋಜನೆಕರ್ತೃಗಳು ಭರವಸೆಯುಳ್ಳವರಾಗಿದ್ದಾರೆ.

ಇದರಲ್ಲಿರುವ ಲೋಪವೇನು?

ಭಂಡವಾಳಶಾಹಿಗಳು ಈ ಯೋಜನೆ ಮಾಡುತ್ತಿರುವುದರಿಂದ ಮಜೂರವರ್ಗದ ಜನತೆಯು ಅವರ ಗುಲಾಮಗಿರಿಯಿಂದ ತಪ್ಪುವ ಹಾಗಿಲ್ಲ. ಜಮೀನುದಾರಿ ಪದ್ಧತಿಯು ಹೇಗೊ ಇದೂ ಹಾಗೆಯೆ. ಉತ್ಪತ್ತಿಯ ಲಾಭದಲ್ಲಿ ಶೇಕಡಾ ೩೦ ಅಂಶವನ್ನು ಜನಸಂಖ್ಯೆಯ ಶೇಕಡಾ ಒಂದರಷ್ಟಿರುವ ಬಂಡವಾಳಗಾರರಿಗೆ ಸಿಗುವಂತಾಗುವುದು.

ಉತ್ಪತ್ತಿಯ ಲಾಭವನ್ನು ಜನತೆಗೆ ಹಂಚಿಕೊಡುವ ಮೂರು ಮುಖ್ಯ ವಿಧಾನಗಳಿವೆ. ಕೈಗಾರಿಕೆ ಮಾಲಕರು ಸ್ವಂತ ಬುದ್ಧಿಯಿಂದ ಹಂಚುವುದು ಒಂದನೇದು. ಆದರೆ ಗಾಂಧೀ ಭಾರತದಲ್ಲೂ ಈ ಸದ್ಬುದ್ಧಿ ಬಂಡವಾಳಗಾರರಿಗೆ ಬರಲಾರದು. ಸರಕಾರವು ಒತ್ತಾಯವಾಗಿ ಉತ್ಪತ್ತಿಯ ಲಾಭವನ್ನು ಜನತೆಗೆ ಕೊಡಿಸುವುದು ಎರಡನೇಯ ವಿಧಾನ. ಮೂರನೆಯ ವಿಧಾನವು ಸಮತಾವಾದಿ ತತ್ವಕನುಗುಣವಾದುದು. ದೇಶದ ಸೊತ್ತನ್ನು ಜನತೆಯಲ್ಲಿ ಸಮಾನವಾಗಿ ಹಂಚುವುದೇ ಈ ತತ್ವ.

ಮಾಲಕರಿಗೆ ಒಂದು ನಿರ್ದಿಷ್ಟ ಲಾಭ ಅಂಶವನ್ನು ಬಿಟ್ಟು ಉಳಿದುದನ್ನು ಒತ್ತಾಯವಾಗಿ ಜನತೆ ಕೊಡಿಸುವ ಎರಡನೆ ವಿಧಾನವನ್ನು ಯೋಜನೆಗಾರರು ಸಮ್ಮತಿಸಬಹುದು. ಇದರಿಂದ ಜನತೆಯ ಬಡತನ ಅಜ್ಞಾನ, ಅನಾರೋಗ್ಯಗಳು ನೀಗುವುದೇನೂ ನಿಜ.ಆದರೆ ದೇಶವು ಗುಲಾಮ ರಾಜ್ಯವಾಗಿಯೇ ಉಳಿಯುವುದು. ಸ್ವಲ್ಪ ಮಂದಿ ಬಂಡವಾಳಗಾರರ ಕೈಯಲ್ಲಿ ಹೆಚ್ಚು ಮಂದಿ ಜನತೆಯ ಭಾಗ್ಯವಿಧಿಯನ್ನು ಕೊಟ್ಟಂತಾಗುವುದು. ಇದರಿಂದ ಸರ್ವಾಧಿಕಾರದ ಲಾಲಸೆ ಉತ್ಪನ್ನವಾಗಿಯೇ ಆಗುತ್ತದೆ.

ಈ ಯೋಜನೆಯನ್ನು ಜ್ಯಾರಿಗೆ ತರಲು ಸರಕಾರವು ಅನುಕೂಲವಾದ ಶಾಸನ, ಆಜ್ಞೆಗಳನ್ನು ಮಾಡಬೇಕಾಗುವುದು. ಉತ್ಪತ್ತಿ, ಹಂಚುವಿಕೆ, ಮಾರುವಿಕೆಯ ಎಲ್ಲಾ ಹೊಣೆಗಾರಿಕೆ ಸರಕಾರದ್ದೇ ಇರುತ್ತದೆ. ಇಲ್ಲಿ ಆ ಸರಕಾರವು ಯಾವ ತರದ್ದಿರಬೇಕೆಂಬ ಪ್ರಶ್ನೆ ಬರುತ್ತದೆ. ಆ ಸರಕಾರವು ಕೈಗಾರಿಕೆ ಮುಖಂಡರ ಕೈ ಮುಷ್ಟಿಯಲ್ಲಿದ್ದರೆ ಅದು ಸರ್ವಾಧಿಕಾರಿ ತತ್ವಕ್ಕೆ ಒಳಪಡುವುದು ಕೃಷಿಕರು ಮಜೂರರು ಅದನ್ನು ಚಲಾಯಿಸಿದರೆ ಅದು ಸಮತಾವಾದಿಯಾಗುವುದು.

ಜನತಾ ಸ್ವಾತಂತ್ರ್ಯವೆಲ್ಲಿ?

ಈ ಯೋಜನೆಗಾರರು ಬಂಡವಾ[illegible] ದೃಷ್ಟಿಯಿಂದ ಸುಧಾರಣೆಗಳನ್ನೂ ನೋ[illegible]ಡುವರಾದುದರಿಂದ ಜನತೆಯ ಹಕ್[illegible] ಸ್ವಾತಂತ್ರ್ಯಗಳು ತಾತ್ಕಾಲಿಕವಾ[illegible] ಮಾಯವಾಗಬಹುದೆಂದು ಅವರೇ ಒ[illegible]ರುವರು.

ತಾತ್ಕಾಲಿಕವಾಗಿ ಹಕ್ಕು ಸ್ವಾತಂತ್ರ್ಯಗಳೆ ಮಾಯುವೆ? ದೇಶವನ್ನು ಎಲ್ಲರ ಹಂಚಿಕೊಂಡು ಸಹಕಾರ ಪದ್ಧತಿಯಿಂ[illegible] ಪ್ರಜಾಪ್ರಭುತ್ವವನ್ನು ನಡೆಸಿ ಕೊಂ[illegible] ಬರುವುದು ಉತ್ತಮ. ಇಲ್ಲದಿದ್ದರೆ ಕೆ[illegible]ವೇ ಕೈಗಾರಿಕೆ ಒಡೆಯರು ಆಳುವಂತಾ[illegible] ಇತರರು ಅವರ ಆಳುಗಳಾಗುವ ಗು[illegible]ಮು ಪರಿಸ್ಥಿತಿ ಬರುವುದು. ಇಷ್ಟಿದ್ದರೂ, ಯೋಜನೆಯು ಧೈರ್ಯದಿಂದ ಸಿ[illegible] ಮೊಡಲ್ಪಟ್ಟಿದೆ. ಅದರಲ್ಲಿ ತುಂಬಾ ಚ[illegible]ತುರ್ಯವೂ ಬುದ್ಧಿವಂತಿಕೆಯೂ ತೋ[illegible]ಸಲ್ಪಟ್ಟಿದೆ.

ಉತ್ಪತ್ತಿ, ಹಂಚುವಿಕೆ, ಹಕ್ಕು ಸ್ವಾತಂತ್ರ್ಯ ಈ ಮೂರರಲ್ಲಿ ಮೊದಲಿನದನ್ನು ಯೋಜನೆ ಪೂರೈಸುತ್ತದೆ. ಮತ್ತಿನ ಎರ[illegible] ಸಹಕಾರ, ಪ್ರಜಾಪ್ರಭುತ್ವ ಪದ್ಧತಿ ಪ್ರ[illegible]ದವೇ ಸಾಧಿಸಬೇಕು. ಇಲ್ಲದಿದ್ದರೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಪದ್ಧತಿ ಬದಲ[illegible] ಬಂಡವಾಳ ಶಾಹಿ ಸ್ವಲಿಗೆ ಪದ್ಧ[illegible] ತಂದು ಕೊಂಡತಾಗುವುದು

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ

ಮಕ್ಕಳಿಗೂ ದುರ್ಬಲರಿಗೂ ವಿಶೇಷ ಶಿಫಾರಸು ಮಾಡಲ್ಪಟ್ಟಿದೆ

ದೊರಕುವ ಸ್ಥಳ - ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರ

(೧ನೇ ಪುಟದಿಂದ)

ಭರತನ ಚರಿತ್ರೆಯನ್ನು ಕವಿ ಬೇಕಾದಷ್ಟು ಕೊಂಡಾಡಿದ್ದಾನೆ. ಆ ಕಾಲದ ಹಿರಿಯ ಜ್ಞಾನಿಗಳ ಕೈಲೆಲ್ಲಾ ಕೊಂಡಾಡಿಸಿದ್ದಾನೆ. ಕವಿಗೆ ಆದರೂ ತೃಪ್ತಿಯಿಲ್ಲ. ಚಿತ್ರಕೂಟದಲ್ಲಿ ಜನಕನ ಬಾಯಿಂದ ಹೇಳಿಸುತ್ತಾನೆ: "ಸೋನ ಸುಗಂಧ ಸುದಾ ಸಸಿ ಸಾರು". ಚಿನ್ನದಲ್ಲಿ ಸುಗಂಧ ಕೂಡಿ ಇದ್ದಂತೆ, ಚಂದ್ರನಲ್ಲಿಯ ಸಾರಭೂತವಾದ ಅಮೃತದಂತೆ ಭರತನ ಜೀವನ.

ರವಧಿ ಗುನ ನಿರುಪಮ ಪುರುಷ ಭರತ

ಭರತಸಮ ಜಾನಿ

ಕಹಿಯ ಸುಮೇರು ಕಿ ಸೇರ ಸಮ ಕವಿ

ಕುಲಮತಿ ಸುಕಚಾನಿ

ಭರತನ ಗುಣ ಅಪಾರ. ಅವನಿಗೆ ಯಾರೂ ಎಣೆಯಿಲ್ಲ. ಭರತನಿಗೆ ಸಮ ಭರತನೇ. ಸುಮೇರು ಪರ್ವತಕ್ಕೆ ಸೇರು ಸಮವಾದೀತೆ? ಕವಿಗಳ ಬುದ್ಧಿಗೆ ನಾಚಿಕೆಯಾಗಿದೆ. ಸಣ್ಣ ಸಣ್ಣ - ಉಪಮಾನಗಳನ್ನು ಕೊಟ್ಟಿದ್ದರಿಂದ.

ತುಲಸೀದಾಸರು ರಾಮನಾಮಸ್ಮರಣೆ ಮೇಧ, ತಪಸ್ಸು, ಜ್ಞಾನ ಇವುಗಳಿಗಿಂತ ಮಿಗಿಲು ಎಂದು ಹೇಳಿದ್ದಾರೆ. ಬ್ರಹ್ಮೋಪಾಸನೆಗಿಂತಲೂ ರಾಮನಾಮಸ್ಮರಣೆ ದೊಡ್ಡದು ಎಂದು ಸಪ್ರಮಾಣವಾಗಿ [illegible]

ರಾಮನಾಮ ಮನಿದೀಪ ಧರು ಜೀಹ

ದೇಹರಿದ್ವಾರ್

ತುಲಸೀ ಬಾಹರ್ ಭೀತರ್ ಜೊ ಚಾಹಸಿ

ಉಜಯಾರ್

ರಾಮನಾಮ ಮಣಿದೀಪ. ನಾಲಿಗೆ ಎಂಬ ಹೊಸಿಲಿನ ಮೇಲ್ಇಡು. ಒಳಕ್ಕೂ ಬೆಳಕು, ಹೊರಕ್ಕೂ ಬೆಳಕು. ಜನತೆಯ ಮೇಲೆ ಈ ನಾಮ ಮಹಿಮೆ ಚೆನ್ನಾಗಿ ಪ್ರಭಾವಿಸಿತು. ಇಂದೂ ಸಹ ಜನ ರಾಮನಾಮ ಭಜನೆ ಮಾಡುತ್ತಲೇ ಇದ್ದಾರೆ.

ರಾಮ ಭಗತ ಹಿತ ನರತನು ಧಾರಿ

ಸಹಿ ಸಂಕಟ ಕಿಯ ಸಾಧು ಸುಕಾರಿ

ರಾಮಚಂದ್ರ ಪರಬ್ರಹ್ಮ, ಜನೋಪಕಾರಕ್ಕಾಗಿ ಮನುಷ್ಯ ದೇಹವನ್ನು ಧರಿಸಿ ಬಂದಿದ್ದನೆಂಬ ಪುರಾಣವಾದವನ್ನೇ ತುಲಸೀದಾಸರೂ ಸಮರ್ಥಿಸಿದ್ದಾರೆ. ಮನುಷ್ಯ ಸಮಾಜದ ಸುಖ ಶಾಂತಿ ಮತ್ತು ಉನ್ನತಿ ಇವು ಕವಿಗೆ ಬೇಕು. ಕವಿತೆಯಲ್ಲಿ ಸಮಾಜದ ಕಲ್ಯಾಣಕ್ಕೆ ಬೇಕಾದ ವಿಚಾರಗಳನ್ನು ತುಂಬಿದ್ದಾರೆ. ಕಾವ್ಯದಲ್ಲಿನ ಪಾತ್ರಗಳೆಲ್ಲಾ ಸಮಾಜದ ಮುಂದೆ ಪೂರ್ಣೋನ್ನತಿಯ ಆದರ್ಶವನ್ನು ತೋರಿಸುವ ಗುರಿಯಿಂದ ಚಿತ್ರಿತವಾಗಿವೆ. ಕೆಲವು ಪಾತ್ರಗಳ ಸೂಕ್ಷ್ಮ ಪರಿಚಯವನ್ನು ಇಲ್ಲಿ ಕೊಡಬಹುದು. (ಕನ್ನಡ ನುಡಿಯಿಂದ)

([illegible])

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ

ಯುದ್ಧವು ಇನ್ನು ಬಹುಕಾಲ ಮುಂದರಿಯಲಿಕ್ಕಿಲ್ಲ. ಶಾಂತಿಕಾಲಕ್ಕಾಗಿ ನೀವು ಸಿದ್ಧರಾಗಿರುವಿರಾ?

ಶಾಂತಿ ಸಮಾರಂಭದಲ್ಲಿ ಅಕಲ್ಪಿತ ಘಟನೆಗಳು ಸಂಭವಿ[illegible] ಬಹುದು. ಧಾರಣೆಗಳು ಇಳಿದು ಉದ್ಯೋಗ ವ್ಯಾಪಾರ ದಂಗೆಗಳಿ[illegible] ಧಕ್ಕೆ ತಗಲಬಹುದು. ನೀವು ಇವುಗಳಿಗಾಗಿ ನಿಮ್ಮ ಪೂರ್ವ ಸಿದ್ಧತೆಯನ್ನೇರ್ಪಡಿಸಿರುವಿರಾ? ಸ್ಥಿರವಾದ ಬ್ಯಾಂಕ್ ಖಾತೆಯಿಂದ ನೀವು ನಿಮ್ಮ ಸ್ಥಿತಿಯನ್ನು ಭದ್ರಗೊಳಿಸಿರುವಿರಾ? ಇಲ್ಲವಾದರೆ ನಿಮ್ಮ ಪೂರ್ವ ಸಿದ್ಧತೆಯನ್ನು ಪ್ರಾರಂಭಿಸಲೀಗ ಕಾಲಾತೀತವಾಗಿಲ್ಲ ಅನವಶ್ಯಕ ವಸ್ತುಗಳಿಗಾಗಿ ಏರಿದ ಬೆಲೆ ತೆತ್ತು ಹಣ ವೆಚ್ಚ ಮಾಡುವ ಬದಲು ಮುಂಬ[illegible]ರುವ ಬೆಲೆ ಇಳಿತದ ಲಾಭವನ್ನು ಹೊಂದಲೋಸುಗ ಹಾಗೂ ಆಗಿ[illegible] ನವೀನ ಪರಿಸ್ಥಿತಿಯನ್ನೆದುರಿಸಲು ನಿಮ್ಮ ಉಳಿತಾಯವನ್ನೀ[illegible] ಕೂಡಿರಿ.

ನಾವು ನಿಮಗೆ ಸಹಾಯ ಉತ್ತೇಜನಗಳ ಬಗ್ಗೆ ಭರವಸೆಯನ್ನಿ[illegible]ಯುತ್ತೇವೆ.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

(೨ನೇ ಪುಟದಿಂದ)

ಕ್ಷೌರಿಕ

ಬಹಳ ಚಿಕ್ಕದು" ಎಂದೆ. ಇಷ್ಟಕ್ಕೆ ಅವನು ಬಹಳ ಆಶ್ಚರ್ಯ ಪಟ್ಟುಕೊಂಡ. ಕಾರಣ ಐವತ್ತು ವರ್ಷವಾದರೂ ಮೈಲು ಕಟ್ಟಿ ದೂರದ ವಸ್ತುಗಳು ಕಾಣುವ ತನ್ನ ಕಣ್ಣುಗಳಿಗೆ ಅವನು ದೂರ ದೃಷ್ಟಿಯೆಂದು ಹೆಸರಿಟ್ಟಿದ್ದ. ಕಡೆಗೆ ಕನ್ನಡಕ ಇಟ್ಟು ನೋಡುವಾಗ ನನಗೆ ರೋಮಾಂಚನವಾಯಿತು. ತಲೆ ಕೂದಲುಗಳೆಲ್ಲ ಶತ್ರುವಿಗೆ ಎದುರಿಸುವಾಗ ಮುಳ್ಳು ಹಂದಿಯ ಬೆನ್ನ ಮುಳ್ಳುಗಳಂತೆ ಎದ್ದು ನಿಂತಿದ್ದವು. "ಛೀ! ಎ ಎ ಏನು ಮಾಡಿ ಬಿಟ್ಟೆ ಮಾ ಮಾ ಮಾರಾಯಾ?" ಎಂದೆ. "ಸ ಸ ಸ ಸಮ್ಮರ್ ಕ್ರಾಪ್ ಸಾರ್" ಎಂದು ಮೆತ್ತನೆ ನುಡಿದ ಹಜಾಮ! "ಇಷ್ಟು ಚಲೋ ಕ್ರಾಪ್ ಅಟ್ಟಿಕದಲ್ಲೆಲ್ಲೂ ನಿಮಗೆ ಸಿಗದು" ಎಂದು ಕೂಡಿಸಿಯೇ ಬಿಟ್ಟ ನನ್ನದು ಮೌನ.

ಕೂದಲು ಕತ್ತರಿಸುವ ಅವನ ಕಲಾ ಪ್ರೌಢಿಮೆಗೆ ಅತೃಪ್ತಿ ಗೊಂಡದ್ದಕ್ಕೆ ಅವನು ನೊಂದುಕೊಂಡಿರಬೇಕು. ನನ್ನನ್ನು ಇನ್ನೂ ತೃಪ್ತಿ ಪಡಿಸಬೇಕೆಂದು ಬಯಸಿ "ಸ್ವಾಮಿ ಗಡ್ಡ ತೆಗೆಯಲೆ?" ಎಂದ ಗಡ್ಡದ ಕ್ಷೌರ ನಾನು ಸ್ವಂತ ಮಾಡಿಕೊಳ್ಳುತಿದ್ದೆ. ಆದರೆ ಅಂದು ಹೊತ್ತಾದುದರಿಂದ "ಹೌದು ಬೇಗ ಗಡ್ಡಥಾಗಬೇಕು" ಎಂದು ಎಚ್ಚರಿಸಿದೆ. "ಬೇಗ ಬರುತ್ತೇನೆ ಸ್ವಾಮಿ ಒಂದುಸಿಂಗಲ್ ಚಾ ಕುಡಿತ್ತೇನೆ ಬರ್ತೇನೆ" ಎಂದು ಹೊರಟಲುದ್ಯುಕ್ತನಾದ ಆದರೆ ಸೆಲೂನಿನ ಯಜಮಾನ "ಅರೇ ಗಿರಾಕಿಗಳನ್ನು ಕಾಯಿಸಿತ್ತಿಯಾ? ರಾಯರಿಗೆ ಗಡ್ಡ ತೆಗೆದು ಆ ಮೇಲೆ ಚಾ ಕುಡಿಯುವಿಯಂತೆ" ಎಂದು ಆಜ್ಞಾಪಿಸಲು, ಆ ಅಜಾನುಬಾಹು ಕಪ್ಪು ಕ್ಷೌರಿಕನು ಏನಯ್ಯಾ ಯಾರ ಹತ್ರ ಮಾತಾಡ್ತಿ ಎಂದು ತಿಳಿದೆ ನನಗೆ ಚಾ ಕುಡಿಯಬೇಕೆಂದರೆ ಚಾ ಕುಡಿಯಲೇ ಬೇಕು ಗೊತ್ತೇ?" ಎಂದು ಗರ್ಜಿಸಿ ಹೊರಟೇ ಬಿಟ್ಟ ನನಗೆ ಪರಮಾನಂದವಾಯಿತು

ಗಡ್ಡದ ಮಟ್ಟಿಗಾದರೂ ಸುಖ ಪಡೆಯೋಣವೆಂದಿದೆ "ನಾನೇ ಸುಧಾರಿಸುತ್ತೇನೆ ಸ್ವಾಮಿ" ಎಂದು ಸೆಲೂನ್ ಮಾಲಕನು ದಪ್ಪವಾದ ಬಾಳೊಂದನ್ನು ಮಸೆಯುತ್ತಾ ನನ್ನ ಕಡೆ ಮುಂದು ವರಿದನು. ಕೂಡಲೇ ಸುಖದ ನನ್ನ ಕಲ್ಪನೆ ದಿಕ್ಪಾಲಾಯಿತು. ಕಾರಣ ಮುದಿ ಮಾಲಕನ ಕೈ ನಡುಗುತ್ತಿತ್ತು-ವಿರಾಟ ಪರ್ವದಲ್ಲಿ ಸೈನ್ಯವನ್ನು ಕಂಡು ಉತ್ತರನ ಅಂಗಾಂಗಗಳು ನಡುಗಿದಂತೆ. ಭಯಗೊಂಡ ನನ್ನನ್ನು ನೋಡಿ ಅವನು "ಗಾಬರಿಗೊಳ್ಳಬೇಡಿ ಸ್ವಾಮಿ" ಎಂದು ಧೈರ್ಯ ಹೇಳಿದರೂ ಬಾಳು ಹಿಡಿದ ಕೈ ಅಲ್ಲಾಡುವ ನಮೂನೆ ನೋಡಿದರೆ ಎಂತಹ ರಣಧೀರನಿಗಾದರೂ ಭೀತಿ ಹುಟ್ಟದಿರಲಿಕ್ಕಿಲ್ಲ ಅಡರಲ್ಲೂ ಕ್ಷೌರಿಕನ ಕೈಗೆ ತಲೆ ಒಪ್ಪಿಸಿದಾಗ ನನ್ನ ಹತ್ತಿರ ಸ್ಥೈರ್ಯ ಧೈರ್ಯಗಳೆಂದರೆ ಕೇಳಬೇಡಿ. ಸಾಲದ್ದುದಕ್ಕೆ ನನ್ನ ಮುದ್ದು ಮುಖದಲ್ಲೆಲ್ಲ ಮಡಿವೆಗಳು ಮುತ್ತಿನಂತೆ ಅಲಂಕೃತವಾಗಿದ್ದುವು

ಮಾಲಕ ಕ್ಷೌರಿಕನ ಶಸ್ತ್ರಕ್ರಿಯೆಗಾರಂಭವಾಯಿತು. ಪ್ರಥಮದ ಅವಗಡವೆಂಬಂತೆ ಒಂದು ತೀಕ್ಷ್ಣ ಕಡಿತದ ಅನುಭವವಾಯಿತು. ತನ್ನಷ್ಟಕ್ಕೆ ನನ್ನ ಮುಖದ ಸ್ನಾಯುಗಳು ಹಿಂದೆಳೆಯಲ್ಪಟ್ಟವು ರಕ್ತ ಸುರಿಯಿತು "ಏನಿಲ್ಲಾ ಸ್ವಾಮಿ, ಮುದ್ದಣವೊಂದು ಕಡಿಯಿತು ಇಂತಹ ಮುಖಗಳು ಕ್ಷೌರಕ್ಕೆ ಸ್ವಲ್ಪ ಕಷ್ಟ" ಎಂದು ಸಂತೈಯಿಸಿದ ಕ್ಷೌರಿಕ

ನನಗೆ ವೇದನೆಯಿಂದ ತಡೆಯಲಾಗಲಿಲ್ಲ ನರಕ ಯಾತನೆ ಏನೆಂದು ಬಯಸುವವರು ಇಂತಹ ಕ್ಷೌರಿಕರ ಹತ್ತಿರ ಹೋಗಬೇಕು ಗವಿಯಿಂದ ಬಾವಿಗೆ ಬಿದ್ದಂತಾಯಿತು. ಮೊದಲಿನವನ ಬಾಯಿ ಗಡಗಡಿಸುತಿತ್ತು, ಇವನದು ಕೈ ನನ್ನ ಮೇಲೆ ಯಾರೂ ಕೇಸ್ ಮಾಡುವುದಿಲ್ಲವೆಂದು ಬರೆದು ಕೊಟ್ಟರೆ ಈ ಕ್ಷೌರಿಕನ ವಿಳಾಸ ಕೊಡಬಲ್ಲೆ ಮುಖವೆಲ್ಲ ಬೆಂಕಿ ಹತ್ತಿ ಉರಿಯುವಂತೆ ತೋರಿತು ನನ್ನಿಂದ ಸಹಿಸಲಾಗಲಿಲ್ಲ ಅರ್ಧದಲ್ಲೇ ಎದ್ದು ಒಂದು ರೂಪಾಯಿ ಮೇಜಿನ ಮೇಲೆ ಬಿಸುಟಿ, ಕೈ ವಸ್ತ್ರ ಮುಖಕ್ಕೆ ಹಿಡಿದು ಮನೆ ಹಾದಿ ಹಿಡಿದೆ ಆಫೀಸಿಗೆ ಹೊತ್ತಾಯಿತು

ಮನೆಗೆ ಬಂದರೆ ಸುಖವುಂಟೆ? ಎಲ್ಲರೂ ಸಂಗತಿ ಏನೆಂದು ವಿಚಾರಿಸಲು ಗುಂಪು ಕೂಡಿದರು ಸಾವಿರ ಪ್ರಶ್ನೆಗಳ ಸುರಿ ಮಳೆಯಾಯಿತು ಒಂದೂ ಉತ್ತರಿಸುವವ ನಾನಲ್ಲ ಮನೆಯಲ್ಲಿ ನಾನೇ ಸಾವಕಾಶ, ತ್ವರೆಯಾಗಿ ನನ್ನ ಸ್ವಂತ ಬ್ಲೇಡಿನಿಂದ ಗಡ್ಡ ತೆಕ್ಕಿದೆ. ಆ ಮೇಲೆ ಚೆನ್ನಾಗಿ ಮುಖ ತೊಳೆದುಕೊಂಡು ಆಫೀಸಿಗೆ ಓಡಿ ಓಡಿ ಹೋಗಬೇಕಾಯಿತು.

ಆಫೀಸಿನಲ್ಲೂ ಹಾಗೆ-ಎಲ್ಲರೂ ನನ್ನ ಮುಖವನ್ನೇ ನೋಡುವವರು. ಕೆಲವರು ಮುಗುಳು ನಗೆ ನಕ್ಕರು. ನನಗಾಗದವರೂ ಗುಟ್ಟಿನಲ್ಲಿ ಹೀಯಾಳಿಸುವಂತೆ ಭಾಸವಾಯಿತು. ಕೂಡಲೆ ಮೆನೇಜರರು ಕರೆದೇ ಬಿಟ್ಟರು. "ರಾಜು, ದಯವಿಟ್ಟು ನಿಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿ ಬನ್ನಿರಿ" ಎಂದರು. "ಯಾಕೆ ಸರ್, ನನ್ನ ಹೊಸ ಕ್ರಾಪೆ? ಹೌದು ಸರ್, ಈಗ ತಾನೇ ಮಾಡಿಸಿ ಬಂದೆ" ಎಂದೆ-ಕಗ್ಗಿದ ಸ್ವರದಿಂದ. "ನಿಮ್ಮ ಕ್ರಾಪ್ ಅಲ್ಲ, ನಿಮ್ಮ ಮುಖ" ಎಂದರು ಮೆನೇಜರರು" ನನಗೆ ಏನೂ ಹೊಳೆಯಲಿಲ್ಲ (ನನ್ನ ಹೆಮ್ಮೆಗೆ ತಕ್ಕಂತೆ ಹಿಟ್ಲರನ ಮೀಸೆ ಇಟ್ಟಿದ್ದೆ. ಕ್ಷೌರಿಕನಿಂದ ನೊಂದುಗೊಂಡು ಮನೆಗೆ ಬಂದು ಮೀಸೆಯ ಒಂದು ಕಡೆ ಮಾತ್ರ ಸ್ವಂತ ಕ್ಷೌರ ಮಾಡಿಕೊಂಡಿದರ ನೆನಪು ಬಂತು. ಇನ್ನೊಂದು ಭಾಗ ಜಖಂ ಆದುದರಿಂದ ಕೈ ಆ ಕಡೆ ಹೊರಳಿರಲಿಲ್ಲ) ಕನ್ನಡಿ ನೋಡಿದೊಡನೆ ನನಗೆ ಮೂರ್ಛೆ ಬಂತು. ಒಂದು ವ್ಯಯ ಅರ್ಧ ಮೀಸೆಯಿಲ್ಲ ತುಂಬಿದ ಮಾರ್ಗದಿಂದ ನಡೆದು ಬಂದಿದ್ದೇನೆ-ಪುನ ಮೂರ್ಛೆ

ಕೆಲವು ದಿನಗಳ ನಂತರ ಆಫ್ರಿಕದ ಹಜಾಮ ನನಗೆ ನೋಡ ಸಿಕ್ಕಿದ. "ಸ್ವಾಮಿ ಮೊನ್ನೆ ತಾವು ಕೊಟ್ಟ ರೂಪಾಯಿಂದ ನನಗೆ ಬಹಳ ಉಪಕಾರವಾಯಿತು ಮುಂದಿನ ಸಲ ಕ್ಷೌರಕ್ಕ ಬರಲು ಮರೆಯಬೇಡಿ ಎಂದ "ಆ ಆದೀತು" ಎಂದೆ.

WANTED

Applications are invited to the post of a Manager, stating (1) Age (2) Qualifications (3) Previous Experience if any (4) Salary required selected candidate will have to furnish a cash security of Rs 5000/–

Managing Director,
Canara Medical Supplies Ltd
Mangalore

ಮರಣ ಗೆಲ್ಲುವಿಕೆ

ಯುದ್ಧಗಳಿಂದ ವೈಜ್ಞಾನಿಕ ಸಂಶೋಧನೆಗಳು ಹೆಚ್ಚುತ್ತವೆ. ನವೀನ ಶಸ್ತ್ರಾಸ್ತ್ರ, ಗುಪ್ತಾಸ್ತ್ರಗಳ ಪ್ರಯೋಗವನ್ನು ನಾವು ಕೇಳುತ್ತಿರುತ್ತೇವೆ. ಇವಲ್ಲದೆ ಬೇರೆ ಇನ್ನೂ ಮಹತ್ವದ ಶೋಧೆಗಳಾಗಿವೆ.

ಈಚೆಗೆ ರಶ್ಯನರು ವಿಜ್ಞಾನ ಕ್ಷೇತ್ರದಲ್ಲಿ ಬಹಳ ಮುಂದುವರಿದಿದ್ದಾರೆಂಬುದಕ್ಕೆ ಅಲ್ಲಿಂದ ಬರುತ್ತಿರುವ ಹೊಸ ಶೋಧನೆಗಳ ಸುದ್ದಿಯೇ ಆಧಾರವಾಗಿವೆ. ತನ್ನಷ್ಟಕ್ಕೆ ಚಲಿಸುವ ಟ್ಯಾಂಕುಗಳನ್ನು ಅವರು ಪರಿಪೂರ್ಣಗೊಳಿಸಿದ್ದಾರೆ. ಈಗ ಸತ್ತವರನ್ನು ಬದುಕಿಸುವ ಉಪಾಯವನ್ನೂ ಅಲ್ಲಿನ ವೈದ್ಯ ವಿಜ್ಞಾನಿಗಳು ಕಂಡುಹಿಡಿದಿರುವರೆಂಬ [illegible] ವರ್ತಮಾನ ಬಂದಿದೆ.

ಕಳೆದ ವಾರ ಮೋಸ್ಕೋ ರೇಡಿಯೋದಲ್ಲಿ ಈ ಕೌತುಕದ ವರದಿಯು ಪ್ರಕಟಿಸಲ್ಪಟ್ಟಿತು ಒಂದು ಉಪಕರಣವು ತಯಾರಿಸಲ್ಪಟ್ಟಿದೆ. ಅದರ ಪ್ರಯೋಗದಿಂದ ಸತ್ತವನ ಇಲ್ಲವೆ ಸಾಯುವವನ ದೇಹದಲ್ಲಿ ಜೀವವು ಪುನಃ ಹಿಂತಿರುಗುವಂತಾಗುವುದಂತೆ

ಮರಣಾವಸ್ಥೆಯಲ್ಲಿರುವ ಇಲ್ಲವೆ ಸಂಪೂರ್ಣ ಪ್ರಾಣಬಿಟ್ಟ ೫೧ ಸೈನಿಕರ ದೇಹದ ಮೇಲೆ ಅಲ್ಲಿನ ಕೆಲ ವಿಜ್ಞಾನಿಗಳು ಪ್ರಯೋಗ ನಡೆಸಿ ೯ ಜನರನ್ನು ಸಂಪೂರ್ಣ ಪುನರುಜ್ಜೀವನ ಗೊಳಿಸಿರುವರು ಉಳಿದವರು ಕೆಲವು ದಿವಸಗಳ ತನಕ ಜೀವಧರಿಸಿ ಆಮೇಲೆ ಸತ್ತರು ನಂಬಲಸಾಧ್ಯವಾದುದಾದರೂ ಇದು ನಿಜವಿದೆ ವ್ಯಕ್ತಿಯನ್ನು ಜಯಿಸುವುದು ಮಾನವನ ಮಹಾತ್ವಾಕಾಂಕ್ಷೆಯಾಗಿತ್ತು ಈಗ ಅದು ಸಫಲವಾಗುವುದರಲ್ಲಿರುವಂತ ಚಿಹ್ನೆಗಳು ತೋರುತ್ತವೆ

ಭವಿಷ್ಯದಲ್ಲಿ ಇದರಿಂದ ಎಂತಹ ಅಗಾಧ ಪರಿಣಾಮಗಳಾಗಬಹುದು! ಆದರೆ ಎಷ್ಟೋ-ದು ಹತ್ತು ನಾಶಗಳ ನಂತರ ಆ ಕಾಂಕ್ಷೆಯು ಈಡೇರಿ ಬಂದುದನ್ನು ಗಣಿಸುವಾಗ ವಿಷಾದವುಂಟಾಗುತ್ತದೆ

ಮನ ಕರಗಿಸುವ ಕತೆ

ಪೆಸಿಫಿಕ್‌ನಲ್ಲಿರುವ ಸೈಪನ್ ದ್ವೀಪವನ್ನು ಹಿಡಿದಾಗ ಅಲ್ಲಿನ ಜಾಪಾನೀಜನರು ಆತ್ಮಹತ್ಯಮಾಡಿಕೊಂಡ ಭಯಂಕರ ದೃಶ್ಯದ ಘಟನೆಯೊಂದನ್ನು ಕೆಪ್ಟನ್ ಸ್ಪ್ರಿಂಗ್ ಎಂಬ ಅಮೆರಿಕನ್ ಸೈನಾಧಿಕಾರಿಗಳು ತಿಳಿಸಿದರು. ಸೈಪನ್ ದ್ವೀಪ ಹಿಡಿಯುವಿಕೆಯಲ್ಲಿ ಇವರು ಭಾಗವಹಿಸಿದ್ದರು

ಅವರು ಹೇಳುತ್ತಾರೆ— "ಗಂಡಂದಿರು ತಮ್ಮ ಹೆಂಡಂದಿರ ಕೊರಳನ್ನು ಕಡಿದರು ತಾಯಿಂದಿರು ತಮ್ಮ ಮಕ್ಕಳನ್ನು ಕೊಂದಿಕ್ಕಿದರು ಇತರ ಕೆಲವರು ತಮ್ಮ ಜನರನ್ನು ಚೂರಿಯಿಂದಲೂ ಮರದ ಕೊರಡಗಳಿಂದಲೂ, ಗುಂಡಿನಿಂದಲೂ ಹೊಡೆದು ಕೊಂದರು ಕೆಲವರು ಚಿಕ್ಕ ಕೈಬಾಂಬುಗಳನ್ನೂ ಸುಟ್ಟು ಇಲ್ಲವೆ ಗುಡ್ಡಗಳಮೇಲಿನ ದ ಹಾರಿ ಪ್ರಾಣ ತೆಗೆದುಕೊಂಡರು ",

ಗುಂಪುಗುಂಪಾಗಿ ಆತ್ಮಹತ್ಯ ಮಾಡಿಕೊಳ್ಳುವ ಈ ವಿಚಿತ್ರ ಹುಚ್ಚು ಜಪಾನಿಯರಿಗೆ ಹೊಸದಲ್ಲ. ಮಾನರಕ್ಷಣೆಮಾಡಿಕೊಳ್ಳಲು ಹೀಗೆ ಮಾಡಿಕೊಂಡ ಘಟನೆಗಳು ಹಿಂದೆ ಅಲ್ಲಿ ಅನೇಕ ಆಗಿವೆ. ಜಪಾನಿನಲ್ಲಿಯೂ ಇಂತಹ ಘೋರ ಕೆಲಸಗಳಾಗದಿರಲೆಂದೇ ಎಲ್ಲರ ಹಾರೈಕೆ.

ಕಾರಣ, ಸದ್ಯದಲ್ಲೇ ಮಿತ್ರದಳಗಳು ಜಪಾನನ್ನು ಮುತ್ತಲಿವೆ. ಆಗ ಅಲ್ಲಿ ಎಂತಹ ಭೀಕರ ಆತ್ಮಹತ್ಯೆಗಳ ಪ್ರದರ್ಶನವಾಗಲಿಕ್ಕಿಲ್ಲ?

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆಧದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

HEAD OFFICE — ESTD. 1924 — BRANCHES
MANGALORE, Moodabidri & Paddubidri.

ANNOUNCEMENT

Deposits accepted at the following rates from 1-4-1944.
Current Accounts (1% from Jan. to June)
(½% from July to Decr.)
Savings bank Accounts 1½% p. a. on daily balances.
Fixed Deposits 6 month 2% p. a.
12 months 2½% p. a.
24 months 3% p. a.
The Bank also accepts season and short term deposits and many other lucrative schemes at most favourable rates of interest. For terms etc., apply to Head office or Branches.

(Regd)

ಅಮೃತಾಂಜನ

ತಲೆನೋವು, ಶೀತ, ಮೈಕೈನೋವು, ಗಾಯಗಳಿಗೆ ಉಪಯುಕ್ತ. ಸಕಲ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ,
ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಿವ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

- ★ Premiums are low. ★ 2½% Rebate on annual premiums.
- ★ "Permanent Disability" Benefits free of any cost.
- ★ Payment of double the insured amount in case of death by accident at a very smallcost of Rs. 1-8-0 per 1000.
- ★ Special rebates on large size policies.
- ★ A special scheme by which lapsed policies can be revived without paying the arrears
- ★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the ear & lungs

Depot: **Murarala Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯ್ಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮುರಾರಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನೆರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

MISSING
29, SEPTEMBER

MISSING
29, SEPTEMBER

SWADESHABHIMANI

ESTD. 1906

[ಸಂಪುಟ ೩೮] ತಾರೀಕು 6—10—1944 [ಸಂಚಿಕೆ ೩೯]

ಹತ್ತೊಂಬತ್ತು ದಿನಗಳ ಮಾತುಕತೆ ಮುರಿದು ಬಿತ್ತು

ಗಾಂಧಿ-ಜಿನ್ನ ಪತ್ರಗಳು

ಕಳೆದ ತಿಂಗಳ ತಾ. ೯ರಿಂದ ೨೭ರ ತನಕ ಗಾಂಧಿ-ಜಿನ್ನಾ ಮಾತುಕತೆಗಳು ನಡೆದವು. ಈ ಹತ್ತೊಂಬತ್ತು ದಿನಗಳಲ್ಲಿ ಒಟ್ಟು ೨೭ ಗಂಟೆಗಳ ದೀರ್ಘ ಚರ್ಚೆ ನಡೆಯಿತು. ಇರ್ವ ಮುಖಂಡರೊಳಗೆ ನಡೆದ ಪತ್ರವ್ಯವಹಾರವೂ ಪ್ರಕಟವಾಗಿದೆ.

ಹಿಂದೂ ಮುಸ್ಲಿಮರೆಂಬ ಎರಡು ಜನಾಂಗಗಳೆಂಬ ತತ್ವ, ವಿಭಜನೆಗೆ ಬೆಂಬಲವಿದೆಯೋ ಇಲ್ಲವೋ ಎಂದು ನೋಡಲು ಆ ಪ್ರದೇಶಗಳ ಜನತೆಯಿಂದ ವೋಟು ಪಡೆಯುವ ವಿಧಾನ ಇವೇ ಮುಂತಾದ ವಿಷಯಗಳ ವಿಚಾರದಲ್ಲಿ ಪರಸ್ಪರ ಭೇದ ಹುಟ್ಟಿ ಮುಖಂಡರಿಬ್ಬರೂ ಒಪ್ಪಂದಕ್ಕೆ ಬರಲಾರದಾದರು.

ಮಿ। ಜಿನ್ನರ ಪ್ರಕಟನೆ

ಈ ಸಂಬಂಧ ಮಿ। ಜಿನ್ನರ ಹೇಳಿಕೆ ಹೀಗಿದೆ:— ಮಾತುಕತೆ ಆರಂಭದಿಂದಲೇ ಗಾಂಧೀಜಿಯವರು ತಾವು ಯಾರ ಪ್ರತಿನಿಧಿಯಲ್ಲವೆಂತಲೂ, ತಮ್ಮ ಸ್ವಂತ ಪ್ರತಿನಿಧಿ ಮಾತ್ರ ತಾವೆಂದೂ ಒತ್ತಿ ಹೇಳಿದರು. ಲೀಗಿನ ೧೯೪೦ರ ಲಾಹೋರ್ ಠರಾವಿನ ಕಡೆಗೆ (ಪಾಕಿಸ್ತಾನ್ ಠರಾವು) ತಮ್ಮನ್ನು ಪರಿವರ್ತಿಸಿಕೊಳ್ಳಬಹುದು ಎಂದು ಅವರು ಭರವಸೆ ಇತ್ತರು. ಒಪ್ಪಂದ ಮಾಡಿಕೊಳ್ಳುವ ಎರಡು ಪಕ್ಷದವರೂ ಸಮಾನ ಪ್ರಾತಿನಿಧ್ಯದ ಅಧಿಕಾರ ಹೊಂದಿದವರಾಗಿರಬೇಕೆಂದು ನಾನು ಅಪೇಕ್ಷಿಸಿದೆ. ಆದರೂ ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ಮಾತುಕತೆ ನಡೆಸಿದೆ. ಲಾಹೋರ್ ಠರಾವಿನಲ್ಲಿ ಅಡಕವಾಗಿರುವ ಮೂಲ ತತ್ವಾರ್ಥಗಳ ಕಡೆಗೆ ಅವರನ್ನು ಪರಿವರ್ತಿಸಲು ಯತ್ನಿಸಿದೆ. ಆದರೆ ಆ ಕಾರ್ಯದಲ್ಲಿ ಅಪಯಶಸ್ವಿಯಾದೆನೆಂದು ಹೇಳುತ್ತೇನೆ. ಅಂತೆಯೇ ಜನತೆಯ ವಿಮರ್ಶೆಗಾಗಿ ಈ ಪತ್ರ ವ್ಯವಹಾರವನ್ನು ಹೊರಗೆಡಬೇಕೆಂದು ನಾವಿಬ್ಬರೂ ನಿಶ್ಚಯಿಸಿದೆವು. ಇದರಿಂದ ಸಾರ್ವಜನಿಕರ ಮನಸ್ಸನ್ನು ಕೆಡಿಸಿಕೊಳ್ಳುವುದಿಲ್ಲವೆಂದು ನಾವು ನಂಬುತ್ತೇವೆ. ಇದೇ ನಮ್ಮ ಕೊನೆಯ ಪರಿಶ್ರಮವಲ್ಲವೆಂದೂ ನಾವು ನಂಬಿದ್ದೇವೆ.

ಗಾಂಧೀಜಿಯ ಹೇಳಿಕೆ

ಅಂದು ರಾತ್ರಿ ಪ್ರಾರ್ಥನೆ ನಂತರ ಮಾಡಿದ ಭಾಷಣದಲ್ಲಿ ಗಾಂಧೀಜಿಯವರು "ಜಿನ್ನಾರವರಾಗಲಿ ನಾನಾಗಲಿ ಒಬ್ಬರನ್ನೊಬ್ಬರು ಪರಸ್ಪರ ಪರಿವರ್ತಿಸಲಾರದಾದುದಕ್ಕೆ ಭಾರತದ ಜನತೆ ನಿರಾಶೆಗೊಳ್ಳಲಾಗದು" ಎಂದು ವಿನಂತಿಸಿಕೊಂಡರು.

"ಈ ಯತ್ನವೇ ಕೊನೆಯದಲ್ಲ"ವೆಂಬ ಜಿನ್ನರ ಹೇಳಿಕೆಯ ಮೇಲೆ ಗಾಂಧಿಯವರು "ವಿವಿಧ ಜಾತಿ ಪಕ್ಷಗಳಲ್ಲಿ ನಿಜವಾದ ಐಕ್ಯತೆಯನ್ನು ಸಾಧಿಸಲು ನಮ್ಮಲ್ಲಿ ಉತ್ಸಾಹ ಹೆಚ್ಚಬೇಕು" ಎಂದರು.

ಮತ್ತೂ ಗಾಂಧೀಜಿಯವರ ಹೇಳಿಕೆಯಲ್ಲಿ ಹೀಗಿದೆ:—"ಜಿನ್ನಾರವರ ಸೂಚನೆಯನ್ನು ಒಪ್ಪುವಷ್ಟು ದೂರ ನಾನು ಹೋಗಲು ಶ್ರಮಿಸಿದೆ. ಅವರನ್ನು ಅರಿತುಕೊಂಡು ಅವರು ನನ್ನನ್ನು ಅರಿಯುವಂತೆ ಮಾಡಲು ತುಂಬಾ ಪ್ರಯತ್ನಿಸಿದೆ. ಆದರೆ ಆ ಕಾರ್ಯದಲ್ಲಿ ನಿಫಲನಾದೆ.

ರಾಜಾಜಿಯವರ ಯೋಜನೆ ಅವರ ಮುಂದೆ ಇಟ್ಟೆನು. ಅವರಿಗೆ ಅದು ಅಂಗೀಕರಿಸುವಷ್ಟು ಯೋಗ್ಯ ಕಾಣದಾಯಿತು. ರಾಜಾಜಿ ಯೋಜನೆಯ ಸ್ಥಾನದಲ್ಲಿ ಅದರ ಬದಲು ನನ್ನ ಸ್ವಂತ ಯೋಜನೆಯೊಂದನ್ನು ಇಟ್ಟೆ. ಅದಕ್ಕೂ ಅವರು ಒಪ್ಪದಾದರು. ಅದೇ ರೀತಿ ಜಿನ್ನಾರ ಯೋಜನೆಯೂ ನನಗೆ ಸರಿ ತೋರಲಿಲ್ಲ. ನಾವಿರ್ವರೂ ಜವಾಬ್ದಾರಿ ಹೊತ್ತವರಾದುದರಿಂದ ಸ್ವಲ್ಪವಾದರೂ ದೌರ್ಬಲ್ಯವನ್ನು ತೋರದಾದೆವು. ಒಂದು ಪಕ್ಷ ಯಾರಾದರೊಬ್ಬರು ದೌರ್ಬಲ್ಯ ತೋರಿಸಿದ್ದರೆ ಸಂಧಾನ ಯಶಸ್ವಿಯಾಗುತಿತ್ತು. ಹಡಗಿನ ಕಪ್ತಾನನು ಧೃಡ ಮನಸ್ಕನಿರಬೇಕು. ಚಂಚಲತೆ ಅವನಲ್ಲಿದ್ದರೆ ಆತನ ಹಡಗು ಬಂಡೆಗೆ ಬಡಿದು ಪುಡಿಯಾದೀತು. ಪರಸ್ಪರ ಒಪ್ಪಿಸಲು ನಾವು ಯತ್ನಿಸಿದೆವು. ಇಬ್ಬರ ಹಾದಿಯೂ ತಪ್ಪಿರಬಹುದು. ನಮ್ಮ ನಮ್ಮ ದಾರಿಯೇ ಸರಿಯೆಂದು ಇರುವ ತನಕ ನಾವು ನಮ್ಮ ದಾರಿಗಳನ್ನು ಹೇಗೆ ಬಿಡಬಲ್ಲೆವು?

"ಸಂಧಾನ ಮುರಿತದಿಂದ ಭಾರತ ಮಿತ್ರರಿಗೆ ತುಂಬಾ ಪರಿತಾಪವಾಗುವುದೆಂದು ಬಲ್ಲೆ. ಭಾರತ ಶತ್ರುಗಳಿಗೆ ಸಂತೋಷವೂ ಆಗಬಹುದು. ನಮ್ಮಲ್ಲಿ ಒಬ್ಬರು ಮತ್ತೊಬ್ಬರ ಅಭಿಪ್ರಾಯವನ್ನು ಮೆಚ್ಚಿಕೊಳ್ಳಲಾರದಾದೆವು. ಹಾಗೆ ಮೆಚ್ಚುವಂತೆ ಸಾರ್ವಜನಿಕರು ಸಹಕರಿಸಬೇಕು; ಜನತೆಯು ಇದರಿಂದ ಎದೆ ಗುಂದಬಾರದು. ನಿರಾಶೆಗೆ ಕಾರಣನು ನಾನು. ಜಿನ್ನಾರ ಮನೆ ಬಾಗಿಲನ್ನು ತಟ್ಟಿದವನು ನಾನು. ಆದರೆ ನನಗೆ ಮಾತ್ರ ಆಶಾಭಂಗವಾಗಲಿಲ್ಲ. ಸತ್ಯ, ಅಹಿಂಸೆಗಳನ್ನು ಆಶ್ರಯಿಸಿದವನಿಗೆ ನಿರಾಶೆಯೆಂಬುದಿಲ್ಲ. ನಮಗೆ ಒಳ್ಳೆಯದು ಯಾವುದೆಂದು ಪರಮಾತ್ಮನಿಗೆ ತಿಳಿದಿದೆ. ಅವನ ದಾರಿಯನ್ನು ಪ್ರಶ್ನಿಸುವುದು ನಮ್ಮ ಕರ್ತವ್ಯವಲ್ಲ. ಆದುದರಿಂದ ಈ ಸಂಧಾನಮುರಿತದಿಂದ ನಮಗೆ ನಿರಾಶೆಯಾಗುವ ಬದಲು ಮುಂದಿನ ಪ್ರಯತ್ನಕ್ಕೆ ಹೆಚ್ಚಿನ ಸ್ಫೂರ್ತಿ ದೊರಕಬೇಕು.

"ಮೂರನೇ ಪಕ್ಷವೊಂದು ಈ ಸಂಧಾನ ಮುರಿತಕ್ಕೆ ಅಪ್ರತ್ಯಕ್ಷವಾಗಿ ಕಾರಣವಾಗಿದೆ."

ಎರಡು ಜನಾಂಗಗಳಿಲ್ಲ

ತಮ್ಮ ದೀರ್ಘ ಪತ್ರವ್ಯವಹಾರದಲ್ಲಿ ಗಾಂಧೀಜಿಯವರು ಭಾರತದಲ್ಲಿ ಎರಡು ಜನಾಂಗಗಳಿವೆಯೆಂಬ ತರ್ಕವನ್ನು ಒಪ್ಪುವುದಿಲ್ಲ. ಲಾಹೋರ್ ಠರಾವಿನಲ್ಲಿ ಪಾಕಿಸ್ತಾನದ ಮಾತೇ ಇಲ್ಲ. ಇದನ್ನು ಜಿನ್ನರೂ ಒಪ್ಪಿದ್ದಾರೆ. ಆದರೂ ಆ ಠರಾವಿನಲ್ಲಿ ಅದು ಅಡಕವಾಗಿಯೇ ಇದೆ ಎಂದು ಅವರ ವಾದ.

ಒಂದು ಪತ್ರದಲ್ಲಿ ಗಾಂಧೀಜಿ ಹೀಗೆ ತಿಳಿಸಿದ್ದಾರೆ: "ಎರಡು ಜನಾಂಗಗಳ ತರ್ಕದ ವಿಷಯ ಯೋಚಿಸುತ್ತಲೂ ನನ್ನ ಭಯ ಹೆಚ್ಚುತ್ತಿದೆ. ನೀವು ಓದಲು ಶಿಫಾರಸು ಮಾಡಿದ ಪುಸ್ತಕದಿಂದ ನನಗೇನೂ ಸಹಾಯವಾಗಲಿಲ್ಲ. ಅದು ಅರೆ ಸತ್ಯಗಳಿಂದ ತುಂಬಿದೆ. ಭಾರತದ ಮುಸ್ಲಿಮರು ಇಲ್ಲಿನ ಇತರ ನಿವಾಸಿಗಳಿಂದ ಭಿನ್ನವಾದ ಒಂದು ಪ್ರತ್ಯೇಕ ಜನಾಂಗವೆಂಬುದನ್ನು ಒಪ್ಪಲಾರೆ. ಅದನ್ನು ಅಂಗೀಕರಿಸಿದಲ್ಲಿ ಹಾನಿಯುಂಟು. ಈ ತತ್ವವನ್ನು ಒಂದು ಸಲ ಒಪ್ಪಿದರೆ ಭಾರತ ವಿಭಜನೆಗೆ ಕಮಿಗೂ ಹಕ್ಕಿದೆ ಎಂದು ಪ್ರತಿಪಾದಿಸಿ ಮುಂದೆ ಬರುವವರು ಲೆಕ್ಕವಿಲ್ಲದಷ್ಟು ಮಂದಿ ಇದ್ದಾರೆ. ಇದರಿಂದ ಭಾರತದ ವಿನಾಶವಾದಂತೆಯೇ ಸರಿ. ಒಂದು ಪಕ್ಷಕ್ಕೆ ಮುಸ್ಲಿಮರು ಬೇರೆ ಆಗಲೇ ಬೇಕಾಗಿದ್ದರೆ ಸೋದರರಿಬ್ಬರು ಸೌಹಾರ್ದದಲ್ಲಿ ಬೇರೆ ಬೇರೆ ಇರುವಂತೆ ಆಗಲಿ.

"ಹಾಗೆ ಬೇರೆ ಆಗಲು ಅಲ್ಲಿನ ಪ್ರಾಪ್ತವಯಸ್ಕರ ವೋಟು ಪಡೆಯಲು ನಿಮ್ಮ ಸಮ್ಮತಿ ಇಲ್ಲ. ಲೀಗಿನ ಪ್ರಾಮುಖ್ಯತೆಯನ್ನು ಒಪ್ಪಿಕೊಳ್ಳಬಹುದು. ಆದರೆ ನಿಜವಾಗಿ ಬೇರೆಯಾಗಲು ಅಲ್ಲಿನ ಜನತೆಯು ಬಯಸುತ್ತದೆಂಬುದಕ್ಕೆ ನಿದರ್ಶನ ಬೇಕಲ್ಲ? ವಿಭಜನೆ ಬೇಕೊ ಅಥವಾ ಬೇಡವೊ ಎಂಬುದಕ್ಕೆ ಆಯಾ ಪ್ರದೇಶದ ಜನರ ವೋಟು ತೆಗೆಯುವುದು ಯೋಗ್ಯ.

"ಅಖಂಡ ಭಾರತ ಮತ್ತು ಮುಸ್ಲಿಂ ಭಾರತದೊಳಗೆ ಸೈನ್ಯ ಸಂಬಂಧವಿರಬೇಕೆಂಬ ವಿಚಾರವನ್ನು ನೀವು ತಳ್ಳಿ ಹಾಕಿದ್ದೀರಿ. ಇಡೀ ಭಾರತದ ಭದ್ರತೆ, ವಿದೇಶ ವ್ಯವಹಾರ ಇವು ಏಕ ಪ್ರಕಾರವಾಗಿ ಸಾಗಲು ಯೋಗ್ಯವಾದ ರಕ್ಷಣೆಯ ಅವಶ್ಯಕತೆ ಇದೆ. ಇದ್ದಿಲ್ಲದಿದ್ದರೆ ವಿಭಜನೆಯ ಯಾವ ಯೋಜನೆಗೂ ನಾನು ಮನಃಪೂರ್ವಕವಾಗಿ ಒಪ್ಪಲಾರೆ.

"ನಾವೀಗ ಬುರುಟಾಕೃತಿಯ ವೃತ್ತದಲ್ಲಿ ತಿರುಗುತಿದ್ದೇವೆ. ಒಂದು ಒಪ್ಪಂದಕ್ಕೆ ಬರಬೇಕೆಂಬ ಉದ್ದೇಶದಲ್ಲಿ ನಾವು ನಂಬಿದ್ದೇವೆ. ಒಪ್ಪಂದಕ್ಕೆ ಬಂದೇ ತೀರಬೇಕೆಂದಿದ್ದರೆ ನಮ್ಮೊಳಗೆ ಮಧ್ಯಸ್ಥಗಾರಿಕೆಗೆ ಮೂರನೆಯ ಪಕ್ಷವೊಂದನ್ನು ಆಹ್ವಾನಿಸೋಣ."

ಇದಕ್ಕೆ ಉತ್ತರವಾಗಿ ಮಿ। ಜಿನ್ನರು "ವೈಯಕ್ತಿಕವಾಗಿ ಸಂಧಾನ ನಡೆಸುತಿರುವುದಾಗಿ ಹೇಳುತ್ತಿದ್ದೀರಿ. ಹೀಗಿರುವುದರಿಂದ ನಮ್ಮೊಳಗೆ ಮಧ್ಯಸ್ತಿಕೆ ವಹಿಸಲು ಬೇರೊಬ್ಬರನ್ನು ಕರೆಯುವ ಅವಶ್ಯಕತೆಯೇ ಉಪಸ್ಥಿತವಾಗುವುದಿಲ್ಲ" ಎಂದು ತಿಳಿಸಿರುವರು.

ಮಹಾತ್ಮರ ಸಲಹೆ

ರಾಜಾಜಿ ಯೋಜನೆ ಸ್ವೀಕಾರ ಯೋಗ್ಯವಲ್ಲವೆಂದಾದಲ್ಲಿ ಗಾಂಧೀಜಿಯವರು ತಮ್ಮ ಬೇರೊಂದು ಯೋಜನೆಯನ್ನು ಜಿನ್ನರ ಮುಂದಿಟ್ಟರು. ಅದರ ಕುರಿತು ಅವರು ಹೀಗೆ ಬರೆದಿದ್ದಾರೆ— "ಭಾರತ ದೇಶದಲ್ಲಿ ಎರಡು ಅಥವಾ ಹೆಚ್ಚು ಜನಾಂಗಗಳಿಲ್ಲವೆಂಬ ತತ್ವವನ್ನು ಹಿಡಿದು ನಾನು ಮುಂದುವರಿಯ ಬಯಸುತ್ತೇನೆ. ವಿಶಾಲ ಭಾರತವೆಂಬ ಈ ಸಂಸಾರದಲ್ಲಿ ಅನೇಕ ಜನರು ವಾಸಿಸುತ್ತಾರೆ. ಇವರಲ್ಲಿ ಮುಸಲ್ಮಾನರು ಬಲೂಚಿಸ್ಥಾನ್, ಸಿಂಧ್, ಗಡಿನಾಡುಗಳಲ್ಲಿ ಮತ್ತು ಪಂಜಾಬು, ಬಂಗಾಳ, ಅಸಾಮುಗಳ ಕೆಲವು ಭಾಗಗಳಲ್ಲೂ ವಾಸಿಸುವರು. ಅವರು ಭಾರತದ ಇತರ ಪ್ರದೇಶದಿಂದ ಪ್ರತ್ಯೇಕವಿರಲು ಇಚ್ಛಿಸುತ್ತಾರೆ. ಕೆಳಗೆ ಕಾಣಿಸಿದ ಶರ್ತಗಳ ಮೇಲೆ ಮುಸಲ್ಮಾನರು ಬೇರೆಯಾಗಬೇಕೆಂಬ ಬೇಡಿಕೆಗೆ ಈಗಲೂ ಮಾನ್ಯತೆ ಸಿಗುವಂತೆ ಕಾಂಗ್ರೆಸ್ಸಿಗೆ ಶಿಫಾರಸು ಮಾಡಬಲ್ಲೆ.

೧. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳು ಒಪ್ಪಿದ ಒಂದು ಸಮಿತಿಯವರು ಪಾಕಿಸ್ತಾನದ ಮೇರೆಗಳನ್ನು ಗೊತ್ತು ಮಾಡಬೇಕು. ಪ್ರಾಪ್ತವಯಸ್ಕರಿಗೆ ವೋಟಿನ ಹಕ್ಕು ಕೊಟ್ಟಾಗಲೀ, ಇತರ ಯೋಗ್ಯ ವಿಧಾನದಿಂದಾಗಲೀ ಈ ಗೊತ್ತು ಮಾಡಿದ ಪ್ರದೇಶಗಳ ಜನರ ಮತಗಣನೆ ಮಾಡಬೇಕು.

೨. ಬೇರ್ಪಡಬೇಕೆಂದು ಆ ಜನರ ಇಷ್ಟವೆಂದಾದರೆ ಭಾರತವು ವಿದೇಶಿಯರ ಒತ್ತಡದಿಂದ ಮುಕ್ತವಾದ ಕೂಡಲೇ ಆ ಪ್ರದೇಶಗಳನ್ನು ಸೇರಿಸಿ ಒಂದು ಪ್ರತ್ಯೇಕ ಸ್ಥಾನವನ್ನು ರಚಿಸಬಹುದು.

೩. ಪ್ರತ್ಯೇಕವಾಗುವಾಗ ಎರಡು ಪ್ರದೇಶಗಳಿಗೆ ಒಂದು ಒಪ್ಪಂದವಾಗಬೇಕು. ವಿದೇಶ ವ್ಯವಹಾರ, ರಕ್ಷಣೆ, ಮಾರ್ಗ ಮತ್ತು ವಾರ್ತಾ ಸೌಕರ್ಯ, ಸುಂಕತೆರಿಗೆ ವಾಣಿಜ್ಯ ಮುಂತಾದ ವಿಚಾರಗಳಲ್ಲಿ ಎರಡಕ್ಕೂ ಅನ್ವಯಿಸುವ ಸರ್ವಸಾಮಾನ್ಯ ಹಿತಗಳ ವ್ಯವಸ್ಥೆ ಇರಬೇಕು.

೪. ಎರಡೂ ಕ್ಷೇತ್ರಗಳಲ್ಲಿನ ಅಲ್ಪ ಸಂಖ್ಯಾಕರ ಹಕ್ಕು ಹಿತಗಳನ್ನು ರಕ್ಷಿಸುವ ಬಗ್ಗೆ ಆ ಒಪ್ಪಂದದಲ್ಲಿ ಪ್ರತ್ಯೇಕ ಶರ್ತಗಳಿರಬೇಕು. ಕಾಂಗ್ರೆಸು ಲೀಗುಗಳು ಈ ಒಪ್ಪಂದವನ್ನು ಸ್ವೀಕರಿಸಿದೊಡನೆ ಭಾರತ ಸ್ವಾತಂತ್ರ್ಯಕ್ಕಾಗಿ ಒಮ್ಮತದ ಒಂದು ಸಾಧನೆ ಮಾರ್ಗವನ್ನು ನಿರ್ಧರಿಸಬೇಕು.

೫. ಕಾಂಗ್ರೆಸಿನಿಂದ ನಿರ್ಧರಿಸಲ್ಪಟ್ಟ ಸ್ವಾತಂತ್ರ್ಯ ಸಂಗ್ರಾಮ ಕಾರ್ಯಕ್ರಮದಿಂದ ಇಷ್ಟವಿಲ್ಲದಿದ್ದರೆ ಲೀಗು ದೂರವಿರಬಹುದು.

ಕೊನೆಗೆ ಮಹಾತ್ಮರು ಹೀಗೆ ಹೇಳುತ್ತಾರೆ:— ಲಾಹೋರು ಠರಾವಿನ ಬೇಡಿಕೆಯನ್ನು ಪೂರೈಸಲು ನಾನು ಹಠಪೂರ್ವಕವಾಗಿ ಪ್ರಯತ್ನಿಸಿದ್ದೇನೆ. ಜಾತೀಯ ಐಕ್ಯತೆಯ ವಿಚಾರವಾಗಿ ನನ್ನ ಸೂಚನೆಯನ್ನು ತಿರಸ್ಕರಿಸುವ ಮೊದಲು ನೀವು ಐವತ್ತು ಸಾರಿ ಪರ್ಯಾಲೋಚಿಸಬೇಕು. ಹಾಗೆ ತಿರಸ್ಕರಿಸಿದಲ್ಲಿ ಆ ಜವಾಬ್ದಾರಿ ನಿಮ್ಮದೇ ಇರುತ್ತದೆ. ಆದುದರಿಂದ ಆ ಜವಾಬ್ದಾರಿಯನ್ನು ನೀವು ವಹಿಸುವುದೇ ಬೇಡ. ಅದನ್ನು ನಿಮ್ಮ ಕೌನ್ಸಿಲ್ ವಹಿಸಲಿ ಲೀಗ್ ಕೌನ್ಸಿಲಿನಲ್ಲಿ ಭಾಷಣ ಕೊಡಲು ನನಗೆ ಅವಕಾಶ ಕೊಡಿರಿ. ಅಲ್ಲಿ ಕೂಡ ನನ್ನ ಸಲಹೆ ಅಂಗೀಕರಿಸಲ್ಪಡದಿದ್ದಲ್ಲಿ ಅಖಿಲ ಭಾರತ ಮುಸ್ಲಿಂ ಲೀಗಿನ ಪ್ರಾತಿನಿಧಿಕ ಸದಸ್ಯರ ಸಭೆಯಲ್ಲಿ ನಾನು ಭಾಷಣ ಮಾಡುತ್ತೇನೆ.

ಇವೊಂದಕ್ಕೂ ಜಿನ್ನಾರವರು ಒಪ್ಪಲಿಲ್ಲ. ಲಾಹೋರ್ ಠರಾವಿನ ಬೇಡಿಕೆಗಳನ್ನು ರಾಜಾಜಿ ಯೋಜನೆಯಾಗಲೀ, ಗಾಂಧೀಜಿಯವರ ಯೋಜನೆಯಾಗಲೀ, ಪೂರೈಸುವುದಿಲ್ಲವಾದುದರಿಂದ ಅದನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ಜಿನ್ನರು ಹೇಳಿಬಿಟ್ಟರು.

ತುಲಸೀ ದಾಸರ ರಾಮ ಚರಿತ ಮಾನಸ

(ಶ್ರೀ. ಅ. ಕೃ. ಶ್ರೀನಿವಾಸ ರಾಘವಾಚಾರ್ಯರು,
ಹಿಂದೀ ಅಧ್ಯಾಪಕರು, ತುಮಕೂರು)

(ಕಳೆದ ಸಂಚಿಕೆಯಿಂದ ಮುಂದುವರಿದುದು)

[illegible] ರಾಜ ದಶರಥ ಸತ್ಯಸಂಧ [illegible] ಮುಖ್ಯಮಂತ್ರಿ ಮಹಾ [illegible]ಶಾಲಿ. ಅನೇಕ ವಿದ್ಯೆಗಳಲ್ಲಿ ಅವನು [illegible] ಧನುರ್ವಿದ್ಯೆಯಲ್ಲಿಯೂ ಸಿದ್ಧಹಸ್ತ. ಒಳ್ಳೆಯ ಯೋಗ್ಯನಾದ ಶಾಸಕ. ಹೀಗಿದ್ದೂ ಸಹ ಆತನಲ್ಲಿ ಕೆಲವು ನ್ಯೂನತೆಗಳಿದ್ದವು. ಅವನು ವಿಲಾಸಿ. ಮುಪ್ಪಿನವರೆಗೂ ಮದುವೆಗಳನ್ನು ಮಾಡಿಕೊಳ್ಳುತ್ತಲೇ ಇದ್ದ. ದುರಾಲೋಚನೆ ಇಲ್ಲದೆ ಕೈಕೆಗೆ ಎರಡು ವರಗಳನ್ನು ಕೊಡುವುದಾಗಿ ಪ್ರಮಾಣ ಮಾಡಿಬಿಟ್ಟ. ಅವಳು ವರಗಳನ್ನು ಬೇಡಿದಾಗ ರಾಮನ ವನವಾಸ ವಿಚಾರ ಆತನಿಗೆ ಸಹಿಸದಂತಾಯಿತು. ದುಃಖದಲ್ಲಿ ತಳಮಳಿಸಿ ಹೋದ. ಈಗ ಜ್ಞಾನೋದಯವಾಯಿತು. “ಕವನೇ ಅವಸರಕಾ ಭಯವು, ಜಯವು ನಾರಿ ವಿಶ್ವಾಸ್” ಎಂದು ಹೇಳುತ್ತಾನೆ ಎಂಥ ವೇಳೆಯಲ್ಲಿ ಏನಾಗಿ ಹೋಯಿತು' ಹೆಂಗಸನ್ನು ನಂಬಿ ಕೆಟ್ಟೆ ಅನ್ನುತ್ತಾನೆ. ಪರಿಣಾಮವಾಗ ಅವನಿಗೆ ಅಪಮಾನ ಮತ್ತು ಅಸಮಯ ಮೃತ್ಯು ಒದಗಿತು. ಬೇಟೆಯಲ್ಲಿ ನಿರ್ದೋಷಿ ಜೀವಿಗಳನ್ನು ಕೊಲೆ ಮಾಡಿದ್ದರಿಂದ ದೈವೀ ಫಲವನ್ನು ಅನುಭವಿಸಬೇಕಾಯಿತು. ರಾಮನ ಅಭಿಷೇಕದ ಸಮಯದಲ್ಲಿ ಭರತನನ್ನು ಕರಸದೇ ಇದ್ದುದೂ ಅವನಲ್ಲಿನ ಒಂದು ದೋಷ.

ಶ್ರೀರಾಮ: ತುಲಸೀ ರಾಮಾಯಣದಲ್ಲಿ ರಾಮನ ಚರಿತ್ರ ಚಿತ್ರಣ ಒಂದು ವೈಶಿಷ್ಟ್ಯ. ರಾಮನು ಅವತಾರಪುರುಷನೆಂದು ಮೊದಲೇ ಹೇಳಿದೆಯಷ್ಟೆ. ರಾಮಚಂದ್ರ ದೈವೀ ಪುರುಷನೆಂಬ ವಿಚಾರ ಕುರಿತು ತುಲಸೀದಾಸರು ಬೇಕಾದಹಾಗೆ ಹೇಳಿದ್ದಾರೆ. ಅದನ್ನು ಇಲ್ಲಿ ಬೆಳೆಸಿ ಹೇಳಬೇಕಾದ ಅಗತ್ಯವಿಲ್ಲ. ರಾಮ ಆದರ್ಶ ರಾಜಕುಮಾರ ಆದರ್ಶ ರಾಜನ ಆದರ್ಶ ಪುತ್ರ. ಈ ವಿಚಾರವನ್ನು ವಿಮರ್ಶಿಸುವುದಾದರೆ ಒಂದು ದೊಡ್ಡಗ್ರಂಥವೇ ಆಗುತ್ತದೆ ತುಲಸೀ ದಾಸರ ಈ ನಾಯಕ ಸುಂದರಮೂರ್ತಿ ಈತನಲ್ಲಿ ಒಂದು ಮೋಹಕ ಶಕ್ತಿ ಇದೆ ಈತ ಒಬ್ಬ ಶಾಂತವ್ಯಕ್ತಿ ಮುಖಮಂಡಲ ಕಾಂತಿಪೂರ್ಣವಾದುದು ಈತನನ್ನು ಯಾರು ನೋಡಿದರೂ ಅವ್ಯಾಜವಾಗಿ ಶ್ರದ್ಧೆ ಹುಟ್ಟುತ್ತಿತ್ತು ರಾಮನ ಮುಖಮುದ್ರೆಯನ್ನು ಕಂಡಕೂಡಲೇ ಪರಶುರಾಮನ ಕಠೋರ ಹೃದಯ ಮೆತ್ತಗಾಯಿತು ರಾಜ ಜನಕ ಈತನನ್ನು ನೋಡಿದಾಗ ತನ್ನನ್ನು ಕೃತಾರ್ಥನೆಂದು ಭಾವಿಸುತ್ತಾನೆ ಮನಸ್ಸಿನಲ್ಲಿ, ಧನುಸ್ಸನ್ನು ಮುರಿಸುವ ಪ್ರತಿಜ್ಞೆ ವಿತರ್ಕವಾಡಿದೆನೋ ಎಂದುಕೊಳ್ಳುತ್ತಾನೆ ರಾಮನ ಸ್ವಭಾವ ಸರಳ. ಗುರುಹಿರಿಯರ ಆಜ್ಞಾನುವರ್ತಿ, ಧೀರ, ಗಂಭೀರ ಮತ್ತು ಸೌಮ್ಯ ಪಿತೃ ಮಾತೃ ಭಕ್ತಿಗೆ ರಾಮ ಉದಾಹರಣೆ ಅವನ ಭ್ರಾತೃ ವಾತ್ಸಲ್ಯ ಅಪಾರ ತನ್ನ ಪ್ರಾಣ ಮತ್ತು ತನ್ನ ದೇಹದ ಮೇಲಿನ ಪ್ರೇಮಕ್ಕಿಂತಲೂ ರಾಮನಿಗೆ ತಮ್ಮಂದಿರ ವಿಷಯದಲ್ಲಿ ಪ್ರೇಮ ಹೆಚ್ಚು. ತಮ್ಮಂದಿರೂ ತಾನೂ ಒಂದೇ ದೇಹದ ಅಂಗಗಳು ಎಂಬ ಭಾವನೆ ಅವನಿಗೆ. ಲಂಕೆಯಲ್ಲಿ ಶಕ್ತಿ ತಗುಲಿ ಲಕ್ಷ್ಮಣ ಮೂರ್ಛಿತನಾಗಿದ್ದಾನೆ. ರಾಮನ ದುಃಖ ಆಗ ಹೇಳತೀರದು.

> ಜ್ಞಾ ಪಂಖ ಬಿನು ಖಗ ಅತಿ ದೀನಾ ।
> ಮಣಿ ಬಿನು ಫಣಿ ಕರಿವರ ಕರ ಹೀನಾ ।
> ಅಸ ಮಮ ಜೀವನ ಬಂಧು ಬಿನು ತೋಹೀ
> ಜೌಂ ಜಡ ದೈವ ಜಿಯಾವಯಿ ಮೋಹೀ ॥

ರೆಕ್ಕೆಯಿಲ್ಲದ ಹಕ್ಕಿಯಂತೆ, ಮಣಿ ಕಳೆದುಕೊಂಡ ಫಣಿರಾಜನಂತೆ, ಸೊಂಡಿಲಿಲ್ಲದ ಆನೆಯಂತೆ ಬದುಕಬೇಕಾಗುತ್ತದೆ. ನಾನು ಲಕ್ಷ್ಮಣನಿಲ್ಲದೆ ಹೋದರೆ:

> ಜೈಹವುಂ ಅವಧ ಕವನ ಮುಂಹ ಲಾಯೀ
> ನಾರಿ ಹೇತು ಪ್ರಿಯ ಭಾಯಿ ಗಂವಾಯಿ ।
> ಬರು ಅಪಜಸ ಸಹತೇವುಂ ಜಗ ಮಾಹೀ ।
> ನಾರಿ ಹಾನಿ ಬಿಸೇಷ ಛತಿ ನಾಹೀ ॥

ಹೇಗೆ ತಾನೇ ಮುಖ ಎತ್ತಿಕೊಂಡು ಅಯೋಧ್ಯೆಗೆ ಹೋಗಲಿ ಹೆಂಡತಿಯ ಸಲುವಾಗಿ ತಮ್ಮನನ್ನು ಕಳೆಕೊಂಡ ಮೇಲೆ? ಈ ಅಪಕೀರ್ತಿಯನ್ನಾದರೂ ಸಹಿಸಬಲ್ಲೆ. ಆದರೆ ಈ ನಷ್ಟ ಬಲು ದೊಡ್ಡದು. ಹೆಂಡತಿಯನ್ನು ಕಳೆಕೊಂಡದ್ದಕ್ಕಿಂತ ಹೆಚ್ಚಿನ ನಷ್ಟ.

ಶರಣಾಗತರ ರಕ್ಷಣೆಯ ವಿಷಯದಲ್ಲಿ ರಾಮ ಪ್ರತಿಜ್ಞೆಯನ್ನೇ ಮಾಡಿಬಿಟ್ಟಿದ್ದಾನೆ. “ಕೋಟಿ ವಿಪ್ರ ಅಘ ಲಾಗಹಿ ಜೇಹಿ ಆಯೆ ಸರಣ ತ್ಯಾಗವುಂ ತೇಹಿ” ಶರಣಾಗತನನ್ನು ಕೈಬಿಟ್ಟರೆ ಕೋಟಿ ಬ್ರಹ್ಮಹತ್ಯಾ ದೋಷ.

ಲಕ್ಷ್ಮಣ: ಲಕ್ಷ್ಮಣನ ಜೀವನ ಆದರ್ಶ ವೀರನ ಜೀವನ. ಆತನ ಜೀವನದಲ್ಲಿ ವಿಲಾಸ, ಭಯ, ಚಿಂತೆ, ಕುವಿಚಾರ ಒಂದೂ ಇಲ್ಲ. ರಾಮನ ವಿಷಯದಲ್ಲಿ ಅಪಾರ ಭಕ್ತಿ. ರಾಮನಿಗೆ ವಿರೋಧಿ ಎಂಬ ಸಂದೇಹ ಬಂದರೆ ಸಾಕು, ಬಹಳ ಸಿಟ್ಟಾಗುತ್ತಾನೆ ರಾಮನ ಮಾರ್ಗಕ್ಕೆ ಪರಶುರಾಮ ಅಡ್ಡಬಂದ, ಲಕ್ಷ್ಮಣನಿಗೆ ಸಿಟ್ಟು. ರಾಮನು ಕಾಡಿಗೆ ಹೋಗಬೇಕೆಂಬ ವಿಚಾರ ತಿಳಿಯಿತು. ದಶರಥನ ಮೇಲೆ ಅಪಾರ ಸಿಟ್ಟು ಚಿತ್ರಕೂಟದಲ್ಲಿದ್ದಾಗ ದೂರದಲ್ಲಿ ಸೈನ್ಯ ಸಮೇತ ಭರತ ಬರುತ್ತಿದ್ದುದು ಕಾಣಿಸಿತು ಲಕ್ಷ್ಮಣನಿಗೆ. ಮನಸ್ಸಿನಲ್ಲಿ ಸಂಶಯ ಹುಟ್ಟಿತು, ಭರತ ರಾಮನ ಮೇಲೆ ಯುದ್ಧಕ್ಕೆ ಬರುತ್ತಿದ್ದಾನೆಂದು ಸಿಟ್ಟೆಗೆದ್ದ ಲಕ್ಷ್ಮಣ. ಸೀತಾನ್ವೇಷಣದಲ್ಲಿ ಸುಗ್ರೀವ ಸ್ವಲ್ಪ ಕಾಲವಿಳಂಬ ಮಾಡುತ್ತಾನೆ ಲಕ್ಷ್ಮಣನ ಸಿಟ್ಟು ಅಲ್ಲಿಯೂ ಕಾಣಿಸಿಕೊಳ್ಳುತ್ತದೆ ಲಕ್ಷ್ಮಣ ಕರ್ಮವೀರ. ವ್ಯರ್ಥಪ್ರಲಾಪವೆಂದರೆ ಅವನಿಗಾಗದು. ತನ್ನ ಬಾಹುಬಲವನ್ನು ಮಾತ್ರ ನಂಬಿದ್ದವನು ಸಮುದ್ರ ದಾಟಬೇಕಾದ ಕಾಲ ವಿಭೀಷಣ ಸಮುದ್ರರಾಜನಲ್ಲಿ ಮೊರೆಯಿಡುತ್ತಾನೆ. ರಾಮ ದೈವಸಹಾಯವನ್ನು ನಿರೀಕ್ಷಿಸುತ್ತಾನೆ ಲಕ್ಷ್ಮಣನ ಮುಖಮಂಡಲ ಕೆಂಪೇರುತ್ತದೆ ದೇಹದಾದ್ಯಂತವೂ ಸಿಟ್ಟು. ಲಕ್ಷ್ಮಣನ ದೃಷ್ಟಿಯಲ್ಲಿ ಹಣೆಯಬರಹ, ಭಾಗ್ಯಾದೃಷ್ಟ, ದೈವಸಹಾಯ ಇವುಗಳಲ್ಲಿ ನಂಬಿಕೆಯನ್ನಿಡುವವರು ಹೇಡಿಗಳು.

> ನಾಥ ದೈವ ಕರ್ ಕವನ ಭರೋಸಾ
> ಸೋಖಿಯ ಸಿಂಧು ಕರಿಯ ಮನ ರೋಸಾ ।
> ಕಾದರ್ ಮನ ಕಹಂ ಏಕ್ ಆಧಾರಾ
> ದೈವ ದೈವ ಆಲಸೀ ಪುಕಾರಾ ॥

ದೇವರು ದೇವರು ಎಂದು ನಂಬಿ ಕೂಡುವುದು ಎಲ್ಲಿನ ನ್ಯಾಯ. ಅದು ಹೇಡಿಗಳ ಮತ್ತು ಸೋಮಾರಿಗಳ ಕೆಲಸ ಮನಸ್ಸಿಗೆ ಸ್ವಲ್ಪ ಕೋಪ ತಂದುಕೊಂಡು ಸಮುದ್ರವನ್ನು ಒಣಗಿಸಿ ಹೀಗೆ ಹೇಳುತ್ತಾನೆ ಲಕ್ಷ್ಮಣ.

ಕೈಕಯಿ: ಸವತಿ ಮಾತ್ಸರ್ಯದಿಂದ ಎಷ್ಟೋ ಮನೆಗಳು ವನವಾಗಿವೆ. ಕೈಕಯು ಅದೇ ಭಾವದ ಒಂದು ಪ್ರತಿಮೆ. ತುಚ್ಛ ಬುದ್ಧಿ ಮತ್ತು ಸಂಕೀರ್ಣ ಹೃದಯ ಅವಳದು. ರಾಮಪಟ್ಟಾಭಿಷೇಕದ ವಿಷಯವನ್ನು ಮಂಥರೆ ಬಂದು ಕೈಕಯಿಗೆ ತಿಳಿಸಿದಾಗ 'ರಾಮ ತಿಲಕ ಜಾ ಸಾಂಚ ಹುಕಾಲೀ । ದೇವುಂ ಮಾಂಗು ಮನ ಭಾವತ ಆಲೀ' ಅನ್ನುತ್ತಾಳೆ. ರಾಮನ ಪಟ್ಟಾಭಿಷೇಕ ನಾಳೆ ನಡೆಯುವುದು ಸತ್ಯವಾದರೆ ನಿನಗೇನು ಬೇಕೋ ಕೇಳು ಕೊಡುತ್ತೇನೆ. ಅಷ್ಟೇ ಅಲ್ಲ. 'ಪ್ರಾನತೇ ಅಧಿಕ ರಾಮುಪ್ರಿಯ ಮೋರೆ' ಅನ್ನುತ್ತಾಳೆ ಪ್ರಾಣಕ್ಕಿಂತ ಹೆಚ್ಚು ಪ್ರಿಯ ರಾಮಚಂದ್ರ. ಕೌಸಲ್ಯೆ ಮತ್ತು ಸೀತೆಯರ ಪ್ರಶಂಸೆಯನ್ನೂ ಮಾಡುತ್ತಾಳೆ. ಉಚ್ಚಕುಲದಲ್ಲಿ ಜನ್ಮಿಸಿದ್ದರಿಂದ ಮೊದಲು ಈ ಮಾತುಗಳು ಬರುತ್ತವೆ ಮಾತುಗಳೆಲ್ಲವೂ ತೋರಿಕೆಯ ಮಾತುಗಳು ಕೈಕಯಿಯ ಹೃದಯದಲ್ಲಿ ಒಂದು ಸಂದೇಹ ಮೂಡಿತ್ತು ಈ ಸಂತೋಷದ ಸಮಯಕ್ಕೆ ಮಂಥರೆಯ ಮುಖದಲ್ಲಿ ವಿಷಾದ ಕಾರಣವೇನು ಎಂದು ಬಲವಂತವಾಗಿ ಕೇಳುತ್ತಾಳೆ, ಕೈಕಯಿ ಮಂಥರೆಯನ್ನ ಮುಂದೆ ಮಂಥರೆಯ ಮಂತ್ರಾಲೋಚನೆಗನುಸಾರ ನಡೆಯುತ್ತಾಳೆ ಕೈಕಯಿಯು ಸೀತೆ ಮತ್ತು ಕೌಸಲ್ಯೆಯರನ್ನು ಪ್ರಶಂಸೆ ಮಾಡಲು ಕಾರಣ ತಾನೇ ತಿಳಿಸುತ್ತಾಳೆ “ಜೇಠ ಸ್ವಾಮೀ ಸೇವಕ ಲಘು ಭಾಯಿಯ ಹೋ ದಿನಕರ ಕುಲ ರೀತಿ ಸುಹಾಯೀ” ಹಿರಿಯಣ್ಣ ರಾಜ ತಮ್ಮಂದಿರು ಸೇವಕರು ಇದು ಸೂರ್ಯವಂಶದ ಸುಂದರ ಸಂಪ್ರದಾಯ. ಈ ಸಂಪ್ರದಾಯಕ್ಕೆ ವಿರುದ್ಧವಾಗಿ ಭರತನಿಗೆ ರಾಜ್ಯ ಹೇಗೆ ಸಿಗಬಲ್ಲುದು ಎಂಬ ವಿಚಾರ ಮೊದಲು ಕೈಕಯಿಗೆ ತೋರಿರಲಿಲ್ಲ ಮಂಥರೆ ಹೇಳುತ್ತಾಳೆ

> ರಾಜಹಿಂ ತುಮಪರ್ ಪ್ರೇಮು ಬಿಸೇಖೀ
> ಸವತಿ ಸುಭಾವು ಸಕಯಿ ನಹಿ ದೇಖೀ ।
> ರಚಿ ಪ್ರಪಂಚ ಭೂಪಹಿಂ ಅಪನಾಯೀ
> ರಾಮತಿಲಕ ಹಿತ ಲಗನ ಧರಾಯಿ ।

ರಾಜನಿಗೆ ನಿನ್ನಮೇಲೆ ಬಹಳ ಪ್ರೀತಿ. ಸವತಿಗೆ ಇದು ಸಹಿಸದು ಕಪಟವನ್ನು ಹೂಡಿ ರಾಜನನ್ನು ವಶಮಾಡಿಕೊಂಡು ರಾಮಚಂದ್ರನ ಪಟ್ಟಾಭಿಷೇಕಕ್ಕೆ ಲಗ್ನ ನಿಶ್ಚಯಿಸಿದ್ದಾಳೆ ಆದ್ದರಿಂದ

> ದುಯಿ ವರದಾನ ಭೂಪ ಸನ ಥಾತೀ
> ಮಾಂಗಹು ಆಜು ಜುಡಾವಹು ಛಾತೀ ।
> ಸುತಹಿ ರಾಜ ರಾಮಹಿ ಬನಬಾಸು
> ದೇಹು ಲೇಹು ಸಬ್ ಸವತಿ ಹುಲಾಸು ॥
> ಭೂಪತಿ ರಾಮ ಸಪಥ ಜಬ್ ಕರಯಿ
> ತಬ್ ಮಾಂಗೆಹು ಜಯಿ ವಚನ ನ ಟರಯಿ ॥
> ಹೋಯಿ ಅಕಾಜ ಆಜ ನಿಸಿ ಬೀತೇ
> ವಚನ ಮೋರ ಪ್ರಿಯ ಮಾನೆಹು ಜೀತೇ ।

“ರಾಜನಲ್ಲಿ ನಿನ್ನ ಎರಡು ವರಗಳು ಮುಡುಪಾಗಿವೆ. ಅವನ್ನು ಈ ದಿನ ಕೇಳಿ ಮನಸ್ಸನ್ನ ತಣ್ಣಗೆ ಮಾಡಿಕೊ ನಿನ್ನ ಸವತಿಯ ಆನಂದವನ್ನೆಲ್ಲ ನೀನು ಪಡೆ ರಾಜ ರಾಮನ ಮೇಲೆ ಆಣೆಯಿಟ್ಟನಂತರ ವರವನ್ನು ಬೇಡು. ಈ ದಿನ ರಾತ್ರಿ ಕಳೆದರೆ ಕೆಲಸ ಕೆಟ್ಟುಹೋಗುತ್ತದೆ. ನನ್ನ ಮಾತು ಒಳ್ಳೆಯದಕ್ಕೆಂದು ಮನಸಾರ ನಂಬು.” ಆಗ ಕಣ್ಣು ತೆರೆದಳು ಕೈಕಯಿ ಕಪಟ ನಾಟಕಕ್ಕೆ ಅನುವಾದಳು. ಮುಂದಾಗುವುದರ ಯೋಚನೆಯಿಲ್ಲ. ಫಲ ದಶರಥನ ಸಾವು. ಹೀಗೆ ಕವಿ ಒಂದೊಂದು ಪಾತ್ರದಿಂದಲೂ ಒಂದೊಂದು ಆದರ್ಶ ತೋರಿಸಿದ್ದಾನೆ.

ಈ ರಾಮಾಯಣ ಕಥಾಭಾಗ [illegible] ಪುಷ್ಟಿಯುಳ್ಳದ್ದು. ಓದುಗರ ಹೃದಯದ ಮೇಲೆ ಬಹಳ ಒಳ್ಳೆಯ ಪ್ರಭಾವವನ್ನು ಉಂಟುಮಾಡುವುದಾಗಿದೆ. ಕವಿತೆಯೂ ಸಹ ಬಹಳ ಮನೋಹರ. ಅನೇಕ ಸ್ವಾರಸ್ಯವಾದ ವಿಷಯಗಳನ್ನು ಉಲ್ಲೇಖಿಸಿದ್ದಾನೆ. ಅಯೋಧ್ಯಾಕಾಂಡದಲ್ಲಿ ಗುಹ ಮತ್ತು ರಾಮನ ಸಂಭಾಷಣೆ ಬಹಳ ರಸವತ್ತಾದ್ದು. ಗುಹ ದೋಣಿಯನ್ನು ತರುವುದಿಲ್ಲ. ರಾಮನಿಗೆ ಹೇಳುತ್ತಾನೆ: 'ನಿನ್ನ ಪಾದಪದ್ಮದ ಧೂಳಿ ತಗುಲಿದರೆ ನನ್ನ ದೋಣಿ ಹೆಣ್ಣಾದೀತು. ಅದರಲ್ಲಿ ಹೆಣ್ಣು ಮಾಡುವ ಔಷಧಿ ಇದೆ!'

> ಛುಅತ ಸಿಲಾ ಭಯಿ ನಾರಿ ಸುಹಾಯೀ
> ಪಾಹನ ತೇಂ ನ ಕಾಠ ಕಠಿನಾಯೀ ।
> ತರನಿವುಂ ಮುನಿ ಘರನೀ ಹೋಯಿ ಜಾಯೀ
> ಬಾಟ್ ಪರಯಿ ಮೋರಿ ನಾವ ಉಡಾಯೀ ॥
> ಯೇಹಿ ಪ್ರತಿಪಾಲವುಂ ಸಬ್ ಪರಿವಾರೂ
> ನಹಿಂ ಜಾನವುಂ ಕಛು ಅವುರ ಕ ಬಾರೂ ।
> ಜೌಂ ಪ್ರಭು ಪಾರ್ ಅವಸಿ ಗಾ ಚಹಹೂ
> ಮೋಹಿ ಪದ ಪದುಮ ಪಖಾರನ್ ಕಹಹೂ ॥

ಅಹಲ್ಯಾ ವೃತ್ತಾಂತವನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುವ ವಿಚಾರ ಇದು. 'ನಿನ್ನ ಪಾದಸ್ಪರ್ಶವಾದ ಕೂಡಲೇ ಕಲ್ಲು ಸುಂದರ ಹೆಣ್ಣಾಯಿತು ಕಲ್ಲಿಗಿಂತ ಮರವೇನೂ ಕಠಿನವಾಗಿಲ್ಲ. ನನ್ನ ದೋಣಿಯೂ ಋಷಿಪತ್ನಿಯಾಗಿಬಿಟ್ಟರೆ ಒಂದು ಕಡೆ ದೋಣಿಯೂ ಹೋಗುತ್ತೆ, ಮತ್ತೊಂದು ಕಡೆ ನನ್ನ ಜೀವನಕ್ಕೂ ಕಲ್ಲುಬೀಳುತ್ತೆ ಈ ದೋಣಿಯಿಂದ ದುಡಿದು ನನ್ನ ಸಂಸಾರವನ್ನೆಲ್ಲ ಕಾಪಾಡಬೇಕು ನನಗೆ ಮತ್ಯಾವ ಕಸಬೂ ಬರುವುದಿಲ್ಲ ಪ್ರಭೋ ನೀನು ಆಚಿನ ದಂಡೆಗೆ ಹೋಗಬೇಕಾದರೆ ನನಗೆ ನಿನ್ನ ಕಾಲು ತೊಳೆಯಲು ಅಪ್ಪಣೆ ಕೊಡು.”

ತುಲಸೀದಾಸರು ವಾಲ್ಮೀಕಿ ರಾಮಾಯಣವಲ್ಲದೆ ಮಹಾನಾಟಕ ಮತ್ತು ಅಧ್ಯಾತ್ಮರಾಮಾಯಣ ಇವುಗಳ ಕಥಾಭಾಗವನ್ನು ಅನುಸರಿಸಿದ್ದಾರೆಂದು ಹಿಂದೆಯೇ ಹೇಳಿದೆಯಷ್ಟೆ ಈ ಗ್ರಂಥದ ಪ್ರಾರಂಭದಲ್ಲೇ ತುಲಸೀದಾಸರು ಹೀಗೆ ಹೇಳಿದ್ದಾರೆ

> ನಾನಾ ಪುರಾಣನಿಗಮಾಗಮಸಮ್ಮತಂ
> ಯದ್ರಾಮಾಯಣೇ ನಿಗದಿತಂ ಕ್ವಚಿದನ್ಯತೋಽಪಿ
> ಸ್ವಾಂತಃಸುಖಾಯ ತುಲಸೀ ರಘುನಾಥಗಾಥಾ
> ಭಾಷಾನಿಬಂಧಮತಿಮಂಜುಲಮಾತನೋತಿ

ಅಂತೆಯೇ ಮೇಲೆ ಗುಹನ ವಾಕ್ಯಕ್ಕೆ ಅನುಸಾರವಾಗಿ ಪದ್ಮಪುರಾಣದಲ್ಲಿ ಹೀಗೆ ಹೇಳಿದೆ.

> ಕ್ಷಾಲಯಾಮಿ ತವ ಪಾದಪಂಕಜಂ
> ನಾಥ ದಾರುದೃಷದೋಃ ಕಿಮಂತರಂ
> ಮಾನುಷೀಕರಣಚೂರ್ಣಮಸ್ತಿ ತೇ
> ಪಾದಯೋರಿತಿ ಕಥಾ ಪ್ರಥೀಯಸೀ

ಇದರ ಅಭಿಪ್ರಾಯವೂ ಮೇಲೆ ಹೇಳಿದಂತೆಯೇ ಇದೆ ಈ ಮಾತುಗಳನ್ನೂ ಗುಹನೇ ಹೇಳುತ್ತಾನೆ. ತುಲಸೀದಾಸರು ಕವಿತಾವಲೀ ರಾಮಾಯಣದಲ್ಲಿ ಅಹಲ್ಯಾ ಶಾಪವಿಮೋಚನೆಯ ವಿಚಾರವಾಗಿ ಒಂದು ಹಾಸ್ಯ ಮಾಡಿದ್ದಾರೆ.

> ವಿಂಧ್ಯ ಕೇ ವಾಸೀ ಉದಾಸೀ ತಪೋಬ್ರತ
> ಧಾರಿ ಬಿನು ನಾರಿ ದುಖಾರೇ
> ಗೌತಮತೀಯ ತರೀ, ತುಲಸೀ, ಸೋ
> ಕಥಾ ಸುನಿ ಭೇ ಮುನಿವೃಂದ ಸುಖಾರೇ
> ಹ್ವೈಹೈಂ ಸಿಲಾ ಸಬ್ ಚಂದ್ರಮುಖಿ ಪರಸೇ
> ಪದ ಮಂಜುಲ ಕಂಜತಿಹಾರೇ
> ಕೀನ್ಹೀಂ ಭಲೀ ರಘುನಾಯಕಜೂ ಕರುನಾ
> ಕರಿ ಕಾನನ ಕೋ ಪಗುಧಾರೇ

(ಇನ್ನೂ ಪುಟಕ್ಕೆ ಮುಂದುವರಿದಿದೆ)

(೨ನೇ ಪುಟದಿಂದ)

ಇದರ ಅರ್ಥ ಹೀಗೆ. "ವಿಂಧ್ಯಪರ್ವತದಲ್ಲಿ ವಾಸಮಾಡುವ ಋಷಿಗಳು ಮಹಾ ತಪೋನಿಷ್ಠರಾಗಿ ಇರುವವರು. ಸ್ತ್ರೀಯರಿಲ್ಲದೆ ಹೋದದ್ದರಿಂದ ಬಹಳ ದುಃಖಿಗಳು. ಅದೇ ಋಷಿಗಳು ಅಹಲ್ಯಾಶಾಪವಿಮೋಚನ ವೃತ್ತಾಂತವನ್ನು ಕೇಳಿ ಮನಸ್ಸಿನಲ್ಲಿ ಬಹಳ ಸಂತೋಷಪಡುತ್ತಾ ಇದ್ದಾರೆ. ಶ್ರೀರಾಮ ವಿಂಧ್ಯಪರ್ವತ ಪ್ರಾಂತದಲ್ಲಿ ಸಂಚರಿಸುವಾಗ ಎಷ್ಟೋ ಕಲ್ಲುಗಳು ಸುಂದರ ಸ್ತ್ರೀಗಳಾಗುತ್ತವೆ. ತೊಂದರೆಯಿಲ್ಲದೆ ಹೆಣ್ಣು ಸಿಕ್ಕಿದಂತಾಗುವುದು. ಶ್ರೀರಾಮ ಕಾಡಿಗೆ ಬಂದದ್ದು ಒಳ್ಳೆಯದಾಯಿತು. ನಮ್ಮ ಮೇಲೆ ದಯೆಯಿಟ್ಟಂತಾಯಿತು." ಇದೇ ಅರ್ಥ ಬರುವಂತೆ ಮತ್ತೊಂದು ಕಡೆ ಗೌತಮ ಹೀಗೆ ಹೇಳಿದ್ದಾನೆ.

ಪದಕಮಲರಜೋಭಿರ್ಮುಕ್ತಪಾಷಾಣ
ದೇಹಾಂ
ಅಲಭತ ಯದಹಲ್ಯಾಂ ಗೌತಮೋಧರ್ಮ
ಪತ್ನೀಂ
ತ್ವಯಿ ಚರತಿ ವಿಶೀರ್ಣಗ್ರಾವ್ಣಿ
ವಿಂಧ್ಯಾದ್ರಿಪಾದೇ
ಕತಿ ಕತಿ ಭವಿತಾರಃ ತಾಪಸಾ ದಾರವಂತಃ

ಗುಹನ ಮಾತಿಗೇ ಹೋಗೋಣ. ಅಷ್ಟೇ ಹೇಳಿ ಸುಮ್ಮನಾಗಲಿಲ್ಲ. ರಾಮನ ಪಾದಗಳನ್ನು ತೊಳೆಯಲೇಬೇಕೆಂಬ ಅವನ ಇಚ್ಛೆ ಪ್ರತಿಜ್ಞೆಯ ರೂಪದಲ್ಲಿದೆ.

ಪದ-ಕಮಲ ಧೋಯಿ ಚಡಾಯಿ ನಾವ ನ,
ನಾಥ ಉತರಾಯಿ ಚಹೋಂ
ಮೋಹಿ ರಾಮ ರಾವುರಿ-ಆನ ದಸರಥ-
ಸಪಥ ಸಬ್ ಸಾಂಚೀ ಕಹೋಂ
ಬರು ತೀರ ಮಾರಹು ಲಖನ ಪೈ ಜಬ್
ಲಗೀನ ಪಾಯ ಪಖಾರಿ ಹೋಂ
ತಬಲಗಿನ ತುಲಸಿದಾಸ-ನಾಥ ಕೃಪಾಲ
ಪಾರ ಉತಾರಿ ಹೋಂ

'ಹೇ ನಾಥ, ನಿಮ್ಮ ಪಾದಕಮಲವನ್ನು ತೊಳೆದು ನಿಮ್ಮನ್ನು ದೋಣಿ ಹತ್ತಿಸಿ ಆಚಿನ ದಂಡೆಗೊಯ್ದ ಮೇಲೆ ತಮ್ಮನ್ನು ಕೂಲಿ ಕೇಳುವುದಿಲ್ಲ. ರಾಮಚಂದ್ರ, ನಿನ್ನಾಣೆ, ದಶರಥನಾಣೆ ನಿಜವಾಗಿ ಹೇಳುತ್ತೇನೆ. ಲಕ್ಷ್ಮಣ ಬೇಕಾದರೆ ಈಗಲೇ ನನ್ನನ್ನು ಬಾಣದಿಂದ ಹೊಡೆದುಬಿಡಲಿ, ನಾನೇನೋ ನಿಮ್ಮ ಪಾದಗಳನ್ನು ತೊಳೆಯುವವರೆಗೂ ನಿಮ್ಮನ್ನು ಆಚಿನ ದಂಡೆಗೆ ಕರೆದೊಯ್ಯುವುದಿಲ್ಲ'. ಅಂಬಿಗನ ಈ ಮಾತುಗಳು ಅಸಂಬದ್ಧವಾಗಿ ಕಾಣಬಹುದು. ಆದರೆ ಅವನ ಒಳಗಿನ ಭಕ್ತಿ ಕರುಣಾಳು ರಾಮ ಬಲ್ಲ. ಕಾಲು ತೊಳೆಯಲು ಅಪ್ಪಣೆ ಕೊಡುತ್ತಾನೆ. ಗುಹ ರಾಮನ ಪಾದಗಳನ್ನು ತೊಳೆಯುತ್ತಾನೆ. ಇದನ್ನು ತುಲಸೀದಾಸರು ಹೀಗೆ ಹೇಳುತ್ತಾರೆ.

ಪದ ಪಖಾರಿ ಜಲ ಪಾನ ಕರಿ, ಆಪು
ಸಹಿತ ಪರಿವಾರ್
ಪಿತರ ಪಾರ್ ಕರಿ ಪ್ರಭುಹಿ ಪುನಿ, ಮುದಿತ
ಗಯಉ ಲೇಇ ಪಾರ್

ಶ್ರೀರಾಮಚಂದ್ರನ ಪಾದಗಳನ್ನು ತೊಳೆದು, ತೀರ್ಥವನ್ನು ಗುಹ ತನ್ನ ಮನೆಯವರೊಡನೆ ಸ್ವೀಕರಿಸಿದ. ಶ್ರೀರಾಮ ಪ್ರಸನ್ನನಾದ, ಗುಹನ ಪಿತೃಪಿತಾಮಹರು ಸಂಸಾರ ಸಾಗರದಿಂದ ಪಾರಾದರು. ಗುಹ ಶ್ರೀರಾಮನನ್ನು ಆಚಿನ ದಂಡೆಗೆ ಕರೆದೊಯ್ದ.

ಆಚಿನ ತೀರದಲ್ಲಿ ರಾಮ ನಿಂತಿದ್ದಾನೆ. ಗುಹನಿಗೆ ಏನಾದರೂ ಕೂಲಿ ಕೊಡಬೇಕೆಂದು ರಾಮನ ಮನಸ್ಸಿನಲ್ಲಿ. ಆದರೆ ರಾಮನ ಬಳಿ ಏನೂ ಇಲ್ಲ. ಆ ವೇಳೆಗೆ ಸರಿಯಾಗಿ ಸೀತೆಯು ತನ್ನ ಕೈಯಿಂದ ಮಣಿ ಉಂಗುರವನ್ನು ತೆಗೆದು ಅಂಬಿಗನಿಗೆ ಬಾಡಿಗೆಸಲುವಾಗಿ ಕೊಡಲು ಹೋಗುತ್ತಾಳೆ. ಅಂಬಿಗ ರಾಮನ ಪಾದಗಳಿಗೆ ಎರಗಿ ಹೇಳುತ್ತಾನೆ.

ನಾಥ ಆಜು ಮೈಂ ಕಾಹನ ಪಾವ
ಮಿಟೇ ದೋಷ ದುಖ ದಾರಿದ ದಾವಾ
ಬಹುತ ಕಾಲ ಮೈಂ ಕೀನ್ಹ ಮಜೂರಿ
ಆಜು ದೀನ್ಹ ಬಿಧಿ ಬನಿ ಭಲಿ ಭೂರೀ

ಪ್ರಭೋ, ಈ ದಿನ ನಾನು ಏನೇನ್ನು ತಾನೇ ಪಡೆಯಲಿಲ್ಲ? ಈ ದಿನ ನನಗೆ ಪಾಪ, ದುಃಖ, ದಾರಿದ್ರ್ಯದ ದಾವಾಗ್ನಿ ಅಡಗಿತು. ಬಹಳ ದಿವಸಗಳಿಂದ ನಾನು ಕೂಲಿ ಮಾಡಿದ್ದೇನೆ. ಆದರೆ ಈ ದಿನ ನನಗೆ ವಿಧಿಯು ಸತ್ಫಲವನ್ನು ಕೊಟ್ಟಿದೆ.' ರಾಮ ಎಷ್ಟೆಷ್ಟೋ ಹೇಳುತ್ತಾನೆ. ಗುಹ ಏನನ್ನೂ ತೆಗೆದುಕೊಳ್ಳುವುದಿಲ್ಲ. ಭಕ್ತನಿಗೆ ವರದಾನವನ್ನು ಕೊಟ್ಟು ರಾಮ ಮುಂದಕ್ಕೆ ಹೋಗುತ್ತಾನೆ.

ಮುಂದೆ ಅರಣ್ಯ ಕಾಂಡದಲ್ಲಿ ಸ್ತ್ರೀ ಅನಸೂಯೆಯು ಸೀತೆಗೆ ಉಪದೇಶ ಮಾಡುತ್ತಾಳೆ. 'ವೇದ, ಪುರಾಣ ಮತ್ತು ಸತ್ಪುರುಷರ ಅಭಿಪ್ರಾಯದಲ್ಲಿ ಪತಿವ್ರತೆಯರು ನಾಲ್ಕು ವಿಧ. ಉತ್ತಮಳ ಮನಸ್ಸಿನಲ್ಲಿ ಪರಪುರುಷ ಸ್ವಪ್ನದಲ್ಲೂ ಬರುವುದಿಲ್ಲ. ಮಧ್ಯಮಳು ಪರಪುರುಷನನ್ನು ಅಣ್ಣ, ತಂದೆ, ಮಗ ಎಂದು ನೋಡುತ್ತಾಳೆ. ನಿಕೃಷ್ಟಳು ಧರ್ಮ ಮತ್ತು ಕುಲವನ್ನು ವಿಚಾರ ಮಾಡಿ ಪರಪುರುಷನ ಯೋಚನೆ ಮಾಡುವುದಿಲ್ಲ. ಅಧಮಳು ಸಮಯ ಸಿಕ್ಕದೆ, ಅಥವಾ ಭಯದಿಂದ ಪರಪುರುಷನ ಯೋಚನೆ ಮಾಡುವುದಿಲ್ಲ.'

ತುಲಸೀದಾಸರು ಅಧ್ಯಾತ್ಮ ತತ್ವವನ್ನು ಬಹಳ ಸುಂದರವಾಗಿಯೂ ಸುಲಭವಾಗಿಯೂ ಹೇಳುತ್ತಾರೆ. ಪಂಚವಟಿಯಲ್ಲಿ ಶ್ರೀ ರಾಮ ವಿರಾಮವಾಗಿ ಕುಳಿತಿದ್ದಾನೆ. ಲಕ್ಷ್ಮಣ ಹೋಗಿ ಅಣ್ಣನಲ್ಲಿ ಭಕ್ತಿಶ್ರದ್ಧೆಗಳಿಂದ ನಮಸ್ಕರಿಸಿ ಐದು ಪ್ರಶ್ನೆಗಳನ್ನು ಮಾಡುತ್ತಾನೆ. ಜ್ಞಾನದ ಸ್ವರೂಪ ಎಂಥದು? ವೈರಾಗ್ಯ, ಮಾಯೆ, ಭಕ್ತಿ ಎಂಥರೇನು? ಈಶ್ವರ ಮತ್ತು ಜೀವರಿಗೆ ಇರುವ ವ್ಯತ್ಯಾಸವೇನು? ರಾಮ ಬಹಳ ಪ್ರೀತಿಯಿಂದ ಸಂಕ್ಷೇಪವಾಗಿ ಉತ್ತರ ಹೇಳುತ್ತಾನೆ. 'ಸಮಸ್ತ ಜೀವಗಳನ್ನೂ ವಶಪಡಿಸಿಕೊಂಡು, ನಾನು ಮತ್ತು ನನ್ನದು, ನೀನು ಮತ್ತು ನಿನ್ನದು ಎಂಬುದೇ ಮಾಯೆ. ಈ ಮಾಯೆ ವಿದ್ಯಾ ಮಾಯೆ, ಅವಿದ್ಯಾ ಮಾಯೆ ಎಂದು ಎರಡು ವಿಧ. ಅವಿದ್ಯಾ ಮಾಯೆ ಅತ್ಯಂತ ದುಷ್ಟೆ ಮತ್ತು ದುಃಖರೂಪಿಣಿ. ಜೀವ ಈ ಅವಿದ್ಯಾ ಮಾಯೆಗೆ ಅಧೀನನಾಗಿ ಸಂಸಾರಕೂಪದಲ್ಲಿ ಬಿದ್ದಿರುತ್ತಾನೆ. ವಿದ್ಯಾ ಮಾಯೆ ಎಂಬುದು ಜಗತ್ಸೃಷ್ಟಿಯನ್ನು ಮಾಡುತ್ತದೆ. ಸಮಸ್ತ ಗುಣಗಳೂ ಇದರ ವಶ. ಆದರೆ ಅದಕ್ಕೆ ಸ್ವತಂತ್ರ ಶಕ್ತಿಯಿಲ್ಲ. ಪರಮಾತ್ಮನ ಪ್ರೇರಣೆಯಿಂದ ಎಲ್ಲವನ್ನೂ ಮಾಡುತ್ತದೆ. ಯಾವ ಅಹಂಕಾರವೂ ಇಲ್ಲದೆ ಎಲ್ಲದರಲ್ಲಿಯೂ ಸಮಾನವಾಗಿ ಬ್ರಹ್ಮಸ್ವರೂಪವನ್ನು ಕಾಣುವುದೇ ಜ್ಞಾನ. ಇಂಥ ಜ್ಞಾನವುಳ್ಳವನು, ಅಷ್ಟಸಿದ್ಧಿಗಳನ್ನೂ ಗುಣತ್ರಯವನ್ನೂ ತೃಣದಂತೆ ಕಾಣುವವನು ಅವನೇ ವಿರಾಗಿ.

ಮುಂದೆ, ಜೀವನಿಗೂ ಬ್ರಹ್ಮನಿಗೂ ಇರುವ ಭೇದವನ್ನು ಹೇಳುತ್ತಾನೆ:

ಮಾಯಾ ಈಸ ನ ಆಪ ಕಹ ಜಾನ
ಕಹಿಯ ಸೋ ಜೀವ
ಬಂಧ ಮೋಚ್ಛಪದ ಸರ್ಬ ಪರ
ಮಾಯಾಪ್ರೇರಕ ಸೀವ.

ಈಶ್ವರನನ್ನು ಮಾಯೆಯೆಂದು ತಿಳಿಯಬೇಡ. ಮಮತ್ವದಲ್ಲಿ ಮುಳುಗಿರುವ ನಿನ್ನನ್ನೇ ಜೀವವೆಂದು ತಿಳಿ. ಬಂಧವನ್ನೂ ಮೋಕ್ಷವನ್ನೂ ಕೊಡತಕ್ಕವನು, ಎಲ್ಲಕ್ಕೂ ಮೀರಿದವನು, ಮಾಯೆಗೆ ಆಜ್ಞೆ ಮಾಡುವವನು ಈಶ್ವರ. ಎಂದರೆ ಜೀವ ಪರತಂತ್ರ, ಮಾಯಾಧೀನ; ಈಶ್ವರ ಸ್ವತಂತ್ರ, ಮಾಯಾಪ್ರೇರಕ.

ಇನ್ನು ಉಳಿದುದು ಭಕ್ತಿ. ಈ ಭಕ್ತಿಯನ್ನು ಒಂಬತ್ತು ವಿಧವೆಂದು ವಿಸ್ತಾರವಾಗಿ ಹೇಳಿದ್ದಾರೆ. ಒಟ್ಟಾರೆ, ಅನುಪಮ ಸುಖಕಾರಣವಾದ ಭಕ್ತಿಯ ಸ್ವರೂಪ ಇಷ್ಟೆ. ಯಾವುದರಿಂದ ಪರಮಾತ್ಮನು ಬಹಳ ಬೇಗ ದ್ರವಿಸುವನೋ ಅದೇ ಭಕ್ತಿ.

ತುಲಸೀದಾಸರಿಗೆ ರಾಮನಲ್ಲಿ ಹೇಗೆ ಭಕ್ತಿಯೋ ಹಾಗೆಯೇ ಶಿವನಲ್ಲಿಯೂ. ಪ್ರಾರಂಭದಲ್ಲಿ ಶಿವನ ಸ್ತೋತ್ರ ಮಾಡಿದ್ದಾರೆ. ಅಲ್ಲದೆ, ಪ್ರತಿ ಕಾಂಡದ ಆರಂಭದಲ್ಲಿಯೂ ಶಿವನ ಸ್ತೋತ್ರ ಮಾಡಿದ್ದಾರೆ. ಸಮುದ್ರಕ್ಕೆ ಸೇತುವೆ ಕಟ್ಟುವ ಸಂದರ್ಭದಲ್ಲಿ ರಾಮನ ಕೈಯಿಂದ ಶಿವಲಿಂಗ ಪ್ರತಿಷ್ಠೆ ನಡೆದಿದೆ. ರಾಮನ ಬಾಯಿಂದಲೇ ಹೇಳಿದ್ದಾರೆ:

ಸಿವದ್ರೋಹೀ ಮಮ ಭಗತ ಕಹಾವಾ
ಸೋ ನರ ಸಪನೇಹು ಮೋಹಿ ನ ಭಾವಾ ।
ಸಂಕರ ವಿಮುಖ ಭಗತಿ ಚಹ ಮೋರೀ
ಸೋ ನಾರಕೀ ಮೂಢ ಮತಿ ಥೋರೀ ॥
ಸಂಕರ ಪ್ರಿಯ ಮಮ ದ್ರೋಹೀ ಸಿವ
ದ್ರೋಹೀ ಮಮ ದಾಸ್
ತೇ ನರ ಕರಹಿ ಕಲಪಭರಿ ಘೋರ ನರಕ
ಮಹವಾಸ ।

ಶಿವದ್ರೋಹಿಯಾದ ನನ್ನ ಭಕ್ತನು ಸ್ವಪ್ನದಲ್ಲಿಯೂ ನನಗೆ ಪ್ರಿಯನಾಗನು. ಶಂಕರ ವಿಮುಖನಾಗಿ ನನ್ನನ್ನು ಪೂಜಿಸುವವನು ಅಲ್ಪ ಬುದ್ಧಿ, ಮೂರ್ಖ, ಪಾಪಿ. ಶಂಕರ ಪ್ರಿಯನಾದ ನನ್ನ ದ್ರೋಹಿ, ಶಿವದ್ರೋಹಿಯಾದ ನನ್ನ ಭಕ್ತ, ಇಬ್ಬರೂ ಕಲ್ಪಗಳವರೆಗೂ ಘೋರ ನರಕವನ್ನು ಅನುಭವಿಸುತ್ತಾರೆ.

ತುಲಸೀದಾಸರ ಶಂಕರ ಪರವಾದ ಪ್ರಾರ್ಥನೆಯಿಂದ ಈ ಉಪನ್ಯಾಸವನ್ನು ಮುಗಿಸಬಹುದು.

ಭವಾನೀ ಶಂಕರೌ ವಂದೇ ಶ್ರದ್ಧಾವಿಶ್ವಾಸ
ರೂಪಿಣೌ
ಯಾಭ್ಯಾಂ ವಿನಾ ನ ಪಶ್ಯಂತಿ ಸಿದ್ಧಾಃ
ಸ್ವಾಂತಸ್ಥಮೀಶ್ವರಮ್.
ವಾಮಾಂಕೇ ಚ ವಿಭಾತಿ ಭೂಧರಸುತಾ
ದೇವಾಪಗಾ ಮಸ್ತಕೇ
ಭಾಲೇ ಬಾಲವಿಧುರ್ಗಲೇ ಚ ಗರಲಂ
ಯಸ್ಯೋರಸಿ ವ್ಯಾಲರಾಟ್
ಸೋಯಂ ಭೂತಿ ವಿಭೂಷಣಃ ಸುರವರಃ
ಸರ್ವಾಧಿಪಃ ಸರ್ವದಾ
ಶರ್ವಃ ಸರ್ವಗತಃ ಶಿವಃ ಶಶಿನಿಭಃ ಶ್ರೀಶಂಕರಃ
ಪಾತುಮಾಮ್.

(ಕನ್ನಡ ನುಡಿಯಿಂದ)

THE CANARA BANKING CORPORATION LTD.

(Incorporated in British India with Limited Liability.)

Estd) **Head Office: UDIPI S. Kanara.** **(1906.**

Statement of affairs as on 31st July, 1944.

LIABILITIES	Rs. As.Ps.	ASSETS	Rs. As.Ps.
1. Paid up Capital	14,14,580- 0- 0	1. Office Builgings, safes, furniture, books, etc.	91,792- 3- 6
2. Reserves	4,12,548- 3- 1	2. Advances	53,58,139- 7- 0
3. Due to Bankers	40,499- 5- 8	3. Investments on Govt. Securities etc.	23,94,472-13-10
4. Deposits	78,79,479- 2- 1	4. Bills for collection	4,55,475- 2- 5
5. Bills for collection	4,55,475- 2- 5	5. Other Assets	91,527- 3- 4
6. Branch Adjustments	1,99,63[illegible]- 8-10	6. Cash on hand and with Bankers in Current A/cs	23,75,816-10-10
7. Other liabilities and undisbursed profits	3,65,010- 2-10		
Total	1,07,67,223-8-11	Total	1,07,67,223- 8-11

Property for Sale

Property situated in Mangalore Town R. S. No. 278 (T. S. No. 1-1444 of 6th ward) Punja 1742 Sq. Ft. assessed at Re 0-11-0, with one Storeyed tiled house and garden situated by the Road Side in Kasba Bazar village; Mulgeni payable for the plot, Rs. 9/- per annum-will be sold by public auction on 11-10-'44 at 5 P. M. in the Office of the undersigned, Opposite the Government College, Mangalore. Upset price Rs. 2,200/- Net. For further particulars apply to:—

M. Venkatraya Kamath,
B. A., B. L.
Advocate and Property-Guardian,
Mangalore. 3-10-1944.

ಮಹಾವ್ಯಕ್ತಿ ಮಹಾತ್ಮ

ಪಾಶ್ಚಿಮಾತ್ಯರೊಬ್ಬರ ಗೌರವಯುಕ್ತ ಸನ್ಮಾನ

(ಮಹಾ ತತ್ವ ಜ್ಞಾನಿಗಳಾದ ರೊಮೈನ್ ರೋಲಾಂಡರ ಲೇಖ)

ಭಾರತೀಯರಿಗೆ ಮಹಾತ್ಮಾಗಾಂಧಿಯವರು ಕೃಷ್ಣಾ ಶ್ರೀರಾಮರ ಮಹಾ ಕಾಯಕರು ಹೋಲ್ಲವರು. ಅವರ ಮಹಾ ಮಾಯಾವೀ ಸ್ವರಕ್ಷೆ ಸು ಪ್ರಕಾಶನ ಗ್ರಂಥಗಳಲ್ಲೂ ಪ್ರತಿಷ್ಠಿಸಲ್ಪಡು ವಂತಹದು. ಅವರು ತ್ಯಾಗನ್ನವಯ ಜೀವನದ ಸ್ಪೂರ್ತಿ ಮೂರ್ತಿಗಳಾಗಿದ್ದು ಭಾರತ ಜನತೆ ಯನ್ನು ತಮ್ಮ ಅಗಾಧವಾದ ದಿಕ್ಕು ಶಕ್ತಿ, ಸ್ವಾತಂತ್ರ್ಯ ಭಿಲಾಷೆಗಳ ಕಡೆಗೆ ಜಾಗೃತರನ್ನಾಗಿ ಮಾಡಿದ ಅವತಾರ ಪುರುಷರು. ಕ್ರೈಸ್ತರಾದ ಪಾಶ್ಚಿಮಾತ್ಯರಿಂದ ಮರೆತು, ಅಲಕ್ಷಿಸಲ್ಪಟ್ಟಿದ್ದ ಆ ಕ್ರಿಸ್ತನ ಸುವಾರ್ತೆಯಲ್ಲಿ ಗಾಂಧಿಯವರು ನವಸ್ಫೂರ್ತಿಯನ್ನು ತುಂಬಿದರು. ಮಾನವ ವರ್ಗದ ಸಾಧು ಸಂತರ ಶ್ರೇಣಿಯಲ್ಲಿ ಅವರು ತಮ್ಮ ಅಮರ ಕೀರ್ತಿಯನ್ನು ಕೆತ್ತಿರುವರು. ಅವರ ವ್ಯಕ್ತಿತ್ವದ ಉಜ್ವಲ ಪ್ರಭಾಕಿರಣಗಳು ವಿಶ್ವದ ಎಲ್ಲಾ ಪ್ರದೇಶಗಳಲ್ಲೂ ಪ್ರಸರಿಸಲ್ಪಟ್ಟಿವೆ.

ಇಂತಹ ಆದರ್ಶ ವ್ಯಕ್ತಿಗಳೆಂದರೆ ಒಂದು ಸೃಷ್ಟಿ ಚಮತ್ಕಾರವೆಂದು ಭಾಸವಾಗುವ ಕಾಲದಲ್ಲಿ ಗಾಂಧಿಯವರು ಯುರೋಪ್ಯ ಜನರ ದೃಷ್ಟಿ ಪಥದಲ್ಲಿ ಬಂದರು ಕಳೆದ ಮಹಾ ಯುದ್ಧದ ಘೋರ ದುಷ್ಪರಿಣಾಮಗಳಿಂದ ಯುರೋಪು ಇನ್ನೂ ತಲೆ ಎತ್ತಲಿಲ್ಲ. ಕೊಲೆ, ಸುಲಿಗೆ, ಭಗ್ನಾವಶೇಷಗಳ ಫಲದಿಂದ ಇನ್ನೂ ಭೀಕರ ಯುದ್ಧಗಳ ಬೀಜಗಳು ಉತ್ಪನ್ನವಾಗಿ ಕರೋತ ಸಮಾಜ ದ್ವೇಶ, ಕ್ರಾಂತಿಗಳ ನಂಜು ಮುಳ್ಳುಗಳು ಜನಾಂಗಗಳ ಹೃತ್ಕೋಶಗಳನ್ನು ಕುಟ್ಟಿ ಕೊರೆಯುತಿದ್ದ ಕಾಲ. ವಿಮೋಚನೆಯ ಒಂದೇ ಒಂದು ಆಶಾಕಿರಣವಿಲ್ಲದ ದುಃಖ ದಾರಿದ್ರ್ಯಗಳಿಂದ ಗರ್ಭಿತವಾದ ಪೈಶಾಚಿಕ ಭಾವನೆಯ ಕಾರ್ಗತ್ತಲು ಯುರೋಪನ್ನು ಮುಸುಕಿದಂಥಾ ಸಂಧಿಗ್ಧ ಸಮಯದ ದಿಗಂತದಲ್ಲಿ ತೆಳ್ಳಗಿನ ಅರೆನಗ್ನ ಗಾಂಧಿ ಕಾಣಿಸಿಕೊಂಡರು. ತಮ್ಮ ಅಚಲವಾದ ನಮ್ರತೆಯಿಂದಲೂ, ಹಿಂಸಾ ರಾಕ್ಷಸನನ್ನು ಎದುರಿಸಲು ಸದ್ವಿವೇಕ ಪ್ರೀತಿಗಳೆಂಬ ದಿವ್ಯಾಸ್ತ್ರಗಳಿಂದಲೂ ಸನ್ನದರಾಗಿ ತಮ್ಮ ದಿಗ್ವಿಜಯದ ಪ್ರಾರಂಭ ಯಾತ್ರೆಯನ್ನು ಮುಗಿಸಿದ್ದರು ಅಸತ್ಯಾಭಾವನೆಯು ಕ್ರೂರ ಪದ್ಧತಿಗಳನ್ನು ಪಾರಂಪರ್ಯವಾಗಿ ನಂಬಿಬಂದ ಯುರೋಪ್ಯ ರೀತಿನೀತಿಗಳನ್ನು ಅವರು ಅಲಕ್ಷ ಭಾವದಿಂದ ಕಾಣುವವರಾದರು. ಇಂತಹ ಮಹಾವಿಭೂತಿ ಪುರುಷರ ಮಹಿಮೆಯನ್ನು ತಿಳಿಕೊಳ್ಳಲು ನಮ್ಮ ಜನರಿಗೆ ಸ್ವಲ್ಪ ಕಾಲವು ಹಿಡಿಯಿತು

ಇಂತಹ ಮಹಾತ್ಮರ ಸಂದೇಶವನ್ನು ಶೋಧಿಸಿ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಚಾರ ಮಾಡಿದವರಲ್ಲಿ ನಾನೇ ಮೊದಲಿಗನಾದುದರಿಂದ ಅವರ ವಿಚಾರಗಳು ನನಗೆ ಚೆನ್ನಾಗಿ ಅರಿತಿವೆ ಭಾರತದ ಈ ಅಧ್ಯಾತ್ಮಿಕ ಗುರುವಿನ ಕಾರ್ಯಕಲಾಪಗಳು ಸ್ಥಿರವಾಗಿಯೂ ಸಹಿಷ್ಣುತೆಯಿಂದಲೂ ಪ್ರಗತಿ ಹೊಂದುತ್ತಿರುವ ಅನುಭವವಾಗುತಿದ್ದ ಹಾಗೆ ಅವರ ಕಡೆ ಪಾಶ್ಚಿಮಾತ್ಯರ ಗಮನವೂ ನಂಬಿಕೆಯೂ ಪ್ರವಾಹರೂಪದಲ್ಲಿ ಆ ಕಡೆ ಹರಿಯತೊಡಗಿತು. ಗಾಂಧಿಯವರಲ್ಲಿ ಅನೇಕರು ಕ್ರಿಸ್ತನ ಅವತಾರ ರೂಪವನ್ನು ಕಂಡರು ಯಾವ ನೈತಿಕ ತತ್ವದಿಂದಲೂ ಆಧಾರಿಸಲ್ಪಟ್ಟಿರದ ಪಾಶ್ಚಿಮಾತ್ಯ ನಾಗರಿಕತೆಯನ್ನು ಧ್ವಂಸಗೊಳಿಸುವ ಅತ್ಯಾಧುನಿಕವೈಜ್ಞಾನಿಕ ಶೋಧೆಮಾಡಿದ ಮಹಾಸ್ತ್ರ ಭೃತಿಗಳಿಗೆ, ಈ ಘೋರ ಘಾತಕಮಯ ನಾಗರಿಕತೆಯ ಭ್ರಮೆಯನ್ನು ಖಂಡಿಸಿ ಪ್ರಕೃತೀಯವಾದ ಆರೋಗ್ಯವಂತ ಸರಳಜೀವನದ ತತ್ವವನ್ನು ಉಪದೇಶಿಸುವ ಗಾಂಧಿಯವರು ಟಾಲ್‌ಸ್ಟಾಯ್‌ನಂಥಾ ಮಹಾ ಪುರುಷರ ಅವತಾರದಂತೆ ತೋರಿದರು

ಅನೇಕ ಸರಕಾರಗಳಿಂದ ಗಾಂಧಿಯವರು ಅಲಕ್ಷಿಸಲ್ಪಟ್ಟರು, ಮಾತ್ರವಲ್ಲ ಹೀನೈಸಲ್ಪಟ್ಟಿರುವರು. ಆದರೆ ಜನತೆಯು ಅವರನ್ನು ತಮ್ಮ ಅತ್ಯಂತ ನಿಷ್ಠೆಯ ಸ್ನೇಹಿತನಂತೆಯೂ, ಬಂಧುವಂತೆಯೂ ತಿಳಕೊಂಡಿತು ಸ್ವಿಜ್ಜರ್‌ಲೆಂಡ್ ದೇಶದ ರೈತ ಜನತೆಯಲ್ಲಿ ಗಾಂಧಿಯವರಿಂದ ಸ್ಫೂರ್ತಿಗೊಳಿಸಲ್ಪಟ್ಟ ಧಾರ್ಮಿಕ ಪ್ರೀತಿ ವಿಶ್ವಾಸಗಳನ್ನು ನಾನು ಕಂಡಿದ್ದೇನೆ.

ಕ್ರಿಸ್ತನಂತೆಯೇ ಗಾಂಧಿಜೀಯವರೂ ತಮ್ಮ ಪ್ರೀತಿ ವಿವೇಕದ ತತ್ವಗಳು ಕೋಟ್ಯಾವಧಿ ಜನರಿಗೆ ಹೃದಯಸ್ಪರ್ಶಿಯಾಗಿವೆಯಾದರೂ ಅದರಿಂದ ಯುದ್ಧ ನಾಶಗಳಿಗೆ ಪಣತೊಟ್ಟ ಈ ಜಗತ್ತಿನ ದೈವಸ್ಸಂಕಲ್ಪವನ್ನು ಪರಿವರ್ತಿಸಲು ಅವರು ಆಶಿಸುವುದಿಲ್ಲ. ಅಹಿಂಸಾ ತತ್ವವನ್ನು ರಾಜಕೀಯ ರಂಗದಲ್ಲಿ ಪ್ರಯೋಗಿಸಬೇಕಾದರೆ ಅದಕ್ಕೆ ತಕ್ಕಂತ ಒಂದು ತರದ ನೈತಿಕ ವಾತಾವರಣ ಆವಶ್ಯಕತೆ ಇದೆ. ಅದಕ್ಕೆ ಬಹುವಿಧದ ನಿರ್ಮಲವಾದ ಆತ್ಮ ಬಲಿದಾನದ ಆವಶ್ಯಕತೆ ಇದೆ. ಮುಳಿಯೂವರೆ ಜನತೆಯ ರಕ್ತದಲ್ಲಿ ಪಾಶವಿ ಶಕ್ತಿಯ ಪ್ರಭಾವದ ಕುರುಹುಗಳು ಹರಿಯುತ್ತಿರುವ, ಸರ್ವಾಧಿಕಾರದ ಈ ಕಾಲದಲ್ಲಿ ಗಾಂಧೀಜೀಯವರ ತತ್ವಗಳು ಯಶಸ್ವಿಯಾಗಲಾರವೆಂದು ತೋರಬಹುದು. ಈ ಶ್ರೇಷ್ಠ ಆತ್ಮ ಬಲಿದಾನದ ಶಕ್ತಿಯು ವಿಜಯಕಾರಿಯಾಗಬೇಕಾದರೆ ಸಾಮಾನ್ಯ ಜನತೆಯು ಅಪಾರ ಕಷ್ಟನಷ್ಟಗಳನ್ನು ಸಂಭವಿಸಬೇಕಾಗುವುದು. ಇದಕ್ಕೆ ಬೇಕಾದ ಧೈರ್ಯ ಸ್ಥೈರ್ಯಗಳು ಉತ್ಪನ್ನವಾಗಬೇಕಾದರೆ ಗಾಂಧೀಜೀಯವರ ತತ್ವದಂತಹ ಸ್ಫೂರ್ತಿದಾಯಕ ತತ್ವಗಳೆ ಆವಶ್ಯವಿದೆ.

ಪಾಶ್ಚಿಮಾತ್ಯ ಜನತೆಯಲ್ಲಿಯೂ ಜನನಾಯಕರಲ್ಲಿಯೂ ದೇವರ ಮೇಲೆ ವಿಶ್ವಾಸವಿಲ್ಲದರೇ ಹೆಚ್ಚು ಮಂದಿ. ಆದುದರಿಂದ ಇಲ್ಲಿ ಸ್ಥಾಪಿಸಲ್ಪಡುವ ನವೀನ ನಂಬಿಕೆಗಳೆಲ್ಲಾ ಹಿಂಸಾ ಧೋರಣೆಯವೇ ಆಗಿರುತ್ತವೆ. ನಿರಂಕುಶ ಪ್ರಭುತ್ವದ ಭಾವನೆಯ ದರ್ಪದಿಂದಲೂ, ತಾವೇ ಶ್ರೇಷ್ಠ ಜನಾಂಗಿಕರೆಂಬ ಹೆಮ್ಮೆಯಿಂದಲೂ ಸಾಮಾನ್ಯ ಜನತೆಯನ್ನು ಸುಲಿಗೆ ಸಂಕಷ್ಟಗಳಿಗೆ ಗುರಿಮಾಡುವ ಸಾಮ್ರಾಜ್ಯತ್ವದ ಕರಾಳ ದವಡೆಗಳಲ್ಲಿ ಸಿಕ್ಕಿ ಬಳಲುತ್ತಿರುವ ಯುರೋಪಿನ ಜನತೆಗೆ ತಮ್ಮ ಜೀವ, ಹಕ್ಕು ಸ್ವಾತಂತ್ರ್ಯಗಳನ್ನು ರಕ್ಷಿಸಿಕೊಳ್ಳುವುದು ಈಗ ಅತೀ ಆವಶ್ಯವಾಗಿದೆ ಗಾಂಧಿವಾದವೇ ಇದಕ್ಕೆ ಯೋಗ್ಯವಾದ ಅಸ್ತ್ರವು.

ಪ್ರಶಾಂತಚಿತ್ತದ ಪ್ರೀತಿವಾತ್ಸಲ್ಯಭಾವಗಳಿಂದ ಕೂಡಿದ ನೈತಿಕ ನಾಗರಿಕತೆಯನ್ನು ಬೆಳೆಸಿ ಬರುವ ಪೂರ್ವಕಾಲದ ಸನ್ಯಾಸಿ ಮಠಗಳ ಪಾತ್ರವನ್ನು ಗಾಂಧಿವಾದವು ವಹಿಸಬೇಕೆಂದು ನನಗೆ ತೋರುತ್ತದೆ. ಆದರೆ ಅದೆಂತಹ ಅಮೋಘ ಪಾತ್ರ! ಮಾನವ ಜನಾಂಗವು ಪರಿವರ್ತನೆಗೊಳ್ಳುವ ಈ ಕಾಲದಲ್ಲಿ ಗಾಂಧಿಯವರ ಮಾನವ ಪ್ರೇಮದ ಸಂದೇಶವು ಹೆಚ್ಚಾಗಿ ಬೆಳಗಲೆಂದು ನಾವು ಪ್ರಾರ್ಥಿಸೋಣ. ತನ್ನ ತಮ್ಮ ಶಕ್ತಿ ಸಾಮರ್ಥ್ಯಗನುಗುಣವಾಗಿ ಕರ್ತವ್ಯಗಳನ್ನು ಮಾಡುತ್ತಿರುವ ಜ್ಞಾನವಂತರೂ, ವಿಜ್ಞಾನಿಗಳೂ, ಸಾಹಿತಿಗಳೂ, ಕಲಾಗಾರರೂ ಆಗಿದ್ದ ನಾವು ಒಂದೇ ಬಂಧುವರ್ಗದವರಾಗಿರುವುದರಿಂದ ತನುಮನಗಳಿಂದ ಭಾವಿ ಮಾನವೀಯತೆಯ ಧ್ಯೇಯಸಾಧನೆಯಲ್ಲಿ ತೊಡಗಿರುವ ಗಾಂಧಿ ಮಹಾತ್ಮನಿಗೆ ನಾವು ಸನ್ಮಾನ ಪೂರ್ವಕವಾಗಿ ವಂದನೆಗಳನ್ನು ಅರ್ಪಿಸೋಣ

ಮಹಾಮಹಿಮ ಬಾಪೂಜೀ

೧

ಧನ್ಯಳಾದಳು ನಮ್ಮ ತಾಯಿ ಭಾರತ ಮಾತೆ
ನಿನ್ನುದಯದಿಂದಾಗಿ ಮಾನ್ಯ ಬಾಪೂಜಿ
ಸನ್ನುತ ಗುಣಾನ್ವಿತನ ಕಂದನನು ತಾ ಪಡೆದು
ಧನ್ಯಳಾದಳು ನಮ್ಮ ತಾಯಿ ಬಾಪೂಜಿ

೨

ದಿನಕರನು ಕಮಲಗಳ ನಿತ್ಯವರಳಿಸುವವಂ
ನೈದಿಲೆಗಳನ್ನರಳಿಸುವನು ತುಹಿನಕರಂ
ಕಮಲಕುಮುದಗಳನ್ನು ಮೆಲ್ಲಗೆಯೊಳರಳಿಸುವ
ಓ ಶಕ್ತ ಬಾಪು ಕಾಣೆನು ನಿನ್ನ ಸಮರಂ!

೩

ರಾಜ ಕಂಠೀರವಂಗೊಂದು ನಾಡಿನ ಜನತೆ
ತಲೆಬಾಗಿಸುವುದು ಭಯಜನಿತ ಭಕ್ತಿಯಲಿ
ಓ ಬಾಪು! ಸಕಲ ಭೂತಳಮೆ ತಿರಬಾಗುವುದು
ನಿನ್ನ ಮಹಿಮೆಯ ಪೆಂಪನೇನ ಬಣ್ಣಿಸಲಿ?

೪

ಹೊಡೆದು ಗೆಲ್ಲುವುದರಲ್ಲತಿಶಯಮದೇನಿಲ್ಲ
ಹೊಡೆಯದೆಯೆ ಗೆಲ್ವಾತನಲ ವಿರಾಜಿತನು!
ಎನಿತು ಗುಣಗಳೊನಿನ್ನ ಓ ಅಹಿಂಸಾಮೂರ್ತಿ?
ಪುಣ್ಯಶಾಲಿಗಳು ನಾವ್ ಬಾಪು ನಮ್ಮವನು!

೫

ನಿದ್ರೆಯಲಿ ಸೊಗಗಂಡ ಭ್ರಾಂತ ಜನಜಂಗುಳಿಗೆ
ಜಾಗ್ರತಿಯೆ ಸುಖಮೆಂದು ಉದಯರಾಗವನು,
ಹಾಡುತೆಬ್ಬಿಸಿ ಅರುಣಕಿರಣಕಾಂತಿಯ ಪುಣ್ಯ
ಗಂಗೆಯಲಿ ಮೀಸಿ, ಮಲಿನವನು ಕಳೆದವನು!

೬

ಗಿರಿಯ ತುದಿಯಿಂದಿಳಿದ ಸುಪ್ರವಾಹವು ತಾನು
ಅತ್ಯುನ್ನತಸ್ಥಳದ ಹಸನಾಗೋಳಿಸದದು
'ನಿನ್ನ ಹೃದ್ಗಿರಿಯ ಶಾಂತಿಪ್ರವಾಹವು ಸುತ್ತ–
ಮುತ್ತಲೆತ್ತಲು ನೆಲನ ಹಸನಾಗಿಸಿಹುದು.

೭

ನಿನ್ನಶಾಂತಿಯು ಹೊನಲು ಗಂಗೆಯಾಗಿಹುದಿಂದು
ಗಂಗೆಗಿಂತಲು ಮಿಗಿಲು ಅತಿ ಪ್ರಶಾಂತಂ
ಪಂಚಸಪ್ತತಿ ವರ್ಷದಿಂದ ಹಾಡುತ್ತಿಹುದು
ದೇಶಾಭಿಮಾನವಂ ಪೆರ್ಚಿಸುವ ಗೀತಂ!

೮

ದಿವ್ಯಜೀವನ ನಡೆಸಿ ನವ್ಯಭಾರತಕಾಗಿ
ನಿನ್ನಬಾಳಿದು ಸತತ ಸವೆದು ಬಂದಿಹುದು
ಎನಿತು ತ್ಯಾಗವೊ! ಜಗದ ಸುಖಕಾಗಿ ಸಕಲವನು
ನೀಗುವವನೇ ಧನ್ಯ ತಾನೆಂಬುದಹುದು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P No 407/1944.
O S No, 307/1940.

ಎ ವಾಸುದೇವ— ವಾದಿ–ಅರ್ಜಿದಾರ.

ಮತ್ತು

ದೇಯಿ ಹೆಂಗಸು ಕೂಡಾ— ಪ್ರತಿವಾದಿರು
—ರೆಸ್ಪೊಂಡೆಂಟರು.

ಮೇಲಿನ ಅಮ್ಲುಜಾರಿಯಲ್ಲಿ 2, 4, 5ನೇ ರೆಸ್ಪೊಂಡೆಂಟರು ಲಕ್ಷ್ಮಣ, ಮೋಹನ, ಭವಾನಿ 1ನೇ ದೇಯಿ ಹೆಂಗಸು ಮಕ್ಕಳು. ಮಂಗಳೂರು ಕ್ಯಹಾರು ಅತ್ತಾವರ ರಸ್ತೆ, ಉಂಗ್ಲೆ ಕೋಡಿ ಮನೆ ಎಂಬಲ್ಲಿ ಇರುವವರು

ಮೇಲ್ಕಂಡ ಅಮ್ಲುಜಾರಿಗೆ ಕಾರಣವಾದ ಡಿಕ್ರಿ ವಿಧಿಪ್ರಕಾರ ದಾವಾ ಆಸ್ತಿಯಲ್ಲಿರುವ ಕಟ್ಟೋಣಗಳು ಬಿಚ್ಚಿ ತಗೆಸಿ ಸ್ವಾಧೀನ ಕೊಡಿಸಬೇಕಾಗಿ ವಗೈರಿ ಅರ್ಜಿದಾರನು ಕೇಳುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದರೆ ಖುದ್ದಾಗಿಯಾಗಲೀ, ವಕೀಲರ ಮುಖಾಂತರವಾಗಲೀ ತಾರೀಕು 12–10–1944ಕ್ಕೆ ಕೋರ್ಟಿನಮುಂದೆ ಹಾಜರಾಗಿ ಮನವಿ ಮಾಡಿಕೊಳ್ಳಬಹುದು ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಸದರಿ ಅಮ್ಲುಜಾರಿ ತೀರ್ಮಾನ ಮಾಡಲಾದೀತು ಎಂಬ ಸಂಗತಿ ಕೋರ್ಟಿನ ಹುಕುಂಪ್ರಕಾರ ಈ ಮೂಲಕ ತಿಳಿಸಿಯದೆ.

P. Sanjiva Rao,
Vakil for Petitioner.

ಮಂಗಳೂರು, ತಾ. 30–9–1944.

ಪಶ್ಚಿಮರಣರಂಗದಲ್ಲಿ ಜರ್ಮನರ ಪ್ರತಿಭಟನೆ

ಚರ್ಚಿಲರ ಭಾಷಣ

ಡಚ್ ಪ್ರದೇಶದಲ್ಲಿ ಜರ್ಮನರ ಪ್ರತಿಭಟನೆ

ಪಶ್ಚಿಮ ರಂಗದಲ್ಲಿ ಯುದ್ಧವು ಬಹಳ ಭೀಕರ ಪರಿಸ್ಥಿತಿಯನ್ನು ಹೊಂದಿರುತ್ತದೆ. ಹಾಲೆಂಡಿನ ಮಾರ್ಗವಾಗಿ ಜರ್ಮನಿಯ ಒಳ ನುಗ್ಗಲು ಅನುಕೂಲವಿರುವ ಸ್ಥಳದಲ್ಲಿ ಜರ್ಮನರ ಪ್ರತಿಭಟನೆಯು ವಿಶೇಷವಾಗಿ ಇರುವುದು. ಈ ಪ್ರದೇಶದಲ್ಲಿ ಕೆಲದಿವಸಗಳ ಹಿಂದೆ ಇಳಿಸಲ್ಪಟ್ಟ ವಿಮಾನವಾಹನದ ಒಂದು ದೊಡ್ಡ ಪಡೆಯು ಜರ್ಮನರಿಂದ ಸುತ್ತಲ್ಪಟ್ಟು, ಬಹಳ ಸಂಕಷ್ಟಕ್ಕೆ ಒಳಗಾಗಿ, ವಿಮಾನಗಳ ಮೂಲಕ ಸಹಾಯ ಇತ್ಯಾದಿಗಳನ್ನು ಕಳುಹಿಸಿಕೊಟ್ಟಿದ್ದರೂ, ಜರ್ಮನರ ಪ್ರತಿಭಟನೆಯಿಂದಾಗಿ ಅವುಗಳು ಅವಕ್ಕೆ ದೊರಕದೆ ಅವರಲ್ಲಿ ಅನೇಕ ಮಂದಿಗಳು ಜರ್ಮನರ ಸೆರೆಗೆ ಒಳಗಾಗಿರುವರು ಆದರೆ ಅನೇಕರು ಜರ್ಮನರಿಂದ ಪಾರಾಗಿ ಬಂದಿರುವರೆಂದು ವಾರ್ತೆಯಿದೆ. ಈ ಪ್ರದೇಶದಲ್ಲಿ ಜರ್ಮನಿಯ ಪ್ರತಿಭಟನೆಯು ವಿಶೇಷತರದ್ದಾಗಿರಲು ಮುಖ್ಯ ಕಾರಣ ಏಂದರೆ, ಡಚ್ ಪ್ರದೇಶದ ಜರ್ಮನ್ ಗಡಿಯಲ್ಲಿ ಸಿಗ್‌ಫ್ರಿಡ್ ವ್ಯೂಹವು ಭದ್ರವಾಗಿಲ್ಲದಿರುವುದು. ಇನ್ನೊಂದು ಕಾರಣವೆಂದರೆ, ಇಲ್ಲಿಂದ ಜರ್ಮನ್ ರಾಜಧಾನಿ ಬರ್ಲಿನ್ ನಗರವು ಅತಿ ಸಮೀಪದಲ್ಲಿರುವುದು ಅಂದರೆ ಈ ಪ್ರದೇಶದಲ್ಲಿ ಮಿತ್ರರಿಗೆ ಅವಕಾಶ ದೊರಕಿದ್ದರೆ, ಆಗ ನಮಗೆ ಸೋಲು ಬಂದೀತೆಂಬ ಅಭಿಪ್ರಾಯವು ಜರ್ಮನರದಾದುದರಿಂದ, ಅವರು ಮಿತ್ರರಿಗೆ ಡಚ್ ಗಡಿಯಲ್ಲಿ ಅತ್ಯುಗ್ರವಾದ ಪ್ರತಿಭಟನೆಯನ್ನು ಹಾಕಿರುವರು ಹಿಟ್ಲರನ ಜರ್ಮನಿಯ ಭವಿಷ್ಯವು ಗೊತ್ತಾಗುವುದಾದರೆ ಇದೇ ಪ್ರದೇಶದಲ್ಲಿ ಈ ಹೊಲ್ಲೆಂಡ್ ಅಭಿಯೋಗವು ಯಶಸ್ವಿಯಾದರೆ ಮಾತ್ರ ಆಗ ಮಿತ್ರರಿಗೆ ಜರ್ಮನಿಯಲ್ಲಿ ಮುನ್ನುಗ್ಗಲು ಸುಲಭಸಾಧ್ಯವಾಗುವುದು ಪಶ್ಚಿಮ ರಂಗದಲ್ಲಿ ಅನೇಕ ಕಡೆಗಳಲ್ಲಿ ಜರ್ಮನಿಯ ರಕ್ಷಣಾ ವ್ಯೂಹವನ್ನು ಭೇದಿಸಲು, ಮಿತ್ರರು ಅತ್ಯಂತ ಬಲವಾದ ಪ್ರಯತ್ನಗಳು ನಡೆಯಿಸುತ್ತಿದ್ದರೂ ಅವರು ಅಷ್ಟೊಂದು ಪ್ರಗತಿ ಹೊಂದಿದ್ದು ಕಾಣಬರುವುದಿಲ್ಲ ಜರ್ಮನಿಯ ಅಭಿಕ್ರಮಣಕ್ಕಾಗಿ ಮಿತ್ರರ ಅನೇಕ ಪಡೆಗಳು ಸರ್ವಶಸ್ತ್ರಸುಸಜ್ಜಿತರಾಗಿ ಸಿದ್ಧರಿರುವುದಾದರೂ ಇಲ್ಲಿ ದಾರಾಳ ಸಂಖ್ಯೆಯಿಂದ ಪ್ರಾಣಾರ್ಪಣವಾಗದ ವಿನಹ ಮಿತ್ರರಿಗೆ ಮೋಕ್ಷವಿಲ್ಲವೆಂದೇ ಊಹಿಸಬೇಕಾಗಿದೆ ಕೊನೆಯ ವಿಜಯದ ಮೊದಲು ಮಿತ್ರರಿಗೆ ಇದೊಂದು ಅಗ್ನಿ ಪರೀಕ್ಷೆ ಎಂದೂ ತಿಳಿಯಬೇಕಾಗಿದೆ

ಜರ್ಮನರ ಪ್ರತಿಭಟನೆ ಎಂದಿನತನಕ

ಜರ್ಮನರು ಈಗ ಮಿತ್ರರಿಗೆ ಕೊಟ್ಟಿರುವ ಪ್ರತಿಭಟನೆಯನ್ನು ಅವರು ಎಂದಿನ ವರೆಗೆ ನಡೆಯಿಸಬಲ್ಲರು? ಮುಂಬರುವ ಹವಾಸ್ಥಿತಿಯಲ್ಲಿ ಅವರಿಗೆ ಅನುಕೂಲ ದೊರಕುವುದು ನಿಜ ಹಿಟ್ಲರನ ವಿಜಯದ ಆಶೆಯು ಈಗ ಸಂಪೂರ್ಣ ಮಾಯವಾಗಿದ್ದು, ಮಿತ್ರರಿಗೆ ಕಷ್ಟಪರಂಪರೆ ಇನ್ನಷ್ಟು ಹುಟ್ಟಿಸಿ, ಅವರಿಂದ ಸಾಧ್ಯವಿದ್ದಷ್ಟು ಸವಲತ್ತುಗಳು ಪಡೆಯುವ ಉದ್ದೇಶದಿಂದಲೆ, ಅವನು ಹೋರಾಡುತ್ತಿರಬಹುದು ಆದ್ದರಿಂದ ಈ ಯುದ್ಧವು ಈ ವರ್ಷದೊಳಗೆ ಮುಗಿಯದು ಎಂದು ಕೆಲವು ಪ್ರವೀಣ ಯೋದ್ಧರ ಅಭಿಪ್ರಾಯವು ಜರ್ಮನಿಯ ಸ್ಥಿತಿಯು ದಿನದಿಂದ ದಿನಕ್ಕೆ ಕ್ಷೀಣವಾಗುತ್ತ ಬರುತ್ತಿದ್ದರೂ ದೀಪವು ಆರುತ್ತಿರುವಾಗ, ಪ್ರಜ್ವಲಿಸುವಂತೆ ಜರ್ಮನರ ಈಗಿನ ಪ್ರಚಂಡ ಪ್ರತಿಭಟನೆಯಾಗಿರುವುದು ತಮ್ಮ ನಿರ್ನಾಮವಾಗುವ ಮುನ್ನ ಮಿತ್ರರ ಮೇಲೆ ಮಹತ್ತರ ನಷ್ಟವನ್ನು ಹೇರಿಸುವುದೆ ಅವರ ಮುಖ್ಯ ಗುರಿಯಾಗಿರುವುದು ಈ ಉದ್ದೇಶ ಹೊಂದಿದ ಜರ್ಮನರು ಅತ್ಯಂತ ಅಮಾನುಷಕರವಾದ ಯುದ್ಧ ಕ್ರಮವನ್ನು ತಳೆದಿರುವರು ರೆಕ್ಕೆ ಬಾಂಬುಗಳ ದಾಳಿಯ ಉದ್ದೇಶವು ಇದೇ ಆಗಿರಬಹುದು

"ಮಿತ್ರರು ಇದೆಲ್ಲಕ್ಕೆ ಸಿದ್ಧರಾಗಿಯೇ" ಇರುವರು ಜರ್ಮನಿಯಲ್ಲಿ ನಾಜಿಗಳು ಎಂದಿನ ವರೆಗೆ ಇರುವರೊ ಅಂದಿನ ವರೆಗೆ ಯುದ್ಧವು ನಿಲ್ಲದು, ನಾಜಿಗಳ ಗೆಸ್ಟಪೊ ದಂಡಿನ ಸರ್ವನಾಶವಾದ ವಿನಹ ಯುದ್ಧವು ಕೊನೆಗೊಳ್ಳದು ಎಂದು ಅಮೆರಿಕನ್ ಜನರಲ್ ಐಸನ್ ಹೋವರನ ಅಭಿಪ್ರಾಯವಾಗಿರುವುದು. ಈ ಯುದ್ಧದಿಂದ ನಾಜಿಗಳ ಪತನವು ಖಂಡಿತ. ಇದು ಹಿಟ್ಲರನಿಗೆ [illegible]

ಶಕ್ತಿಯನ್ನು ಈಗ ಅರ್ಪಣೆಗೆಯ್ಯಲು ಮುಂದೆ ಬಂದಿರುವನು. ಆದರೆ ಮಿತ್ರರ ಮಹಾಶಕ್ತಿಯ ಎದುರು ನಾಜಿ ಪಂಗಡವು ಪೂರ್ಣ ಲಯವಾಗುವುದು ಖಂಡಿತವೆಂದೆ ಹೇಳಬೇಕು

ಜರ್ಮನಿಯ ಪೂರ್ವ ಗಡಿಯಲ್ಲಿ?

ಮಿತ್ರರಿಗೆ ಪಶ್ಚಿಮ ರಣರಂಗದಲ್ಲಿ ದೊರಕಿದಂತೆ ರಷ್ಯನರಿಗೆ ಪೋಲೆಂಡಿನ ವಾರ್ಸೊ ಪ್ರದೇಶದಲ್ಲಿ ತಡೆಯು ಉಂಟಾಗಿರುವುದು ಡಚ್ ಪ್ರದೇಶದಿಂದಲೂ, ಮತ್ತು ವಾರ್ಸೊ ನಗರದಿಂದ ಬರ್ಲಿನ್ ನಗರವು ಸಾಧಾರಣ ಸಮದೂರದಲ್ಲಿದೆ ಬರ್ಲಿನ್ ನಗರವನ್ನು ಯಾರು ಮುಂದಾಗಿ ಬಂದು ಸೇರುವರೆಂದು ನೋಡಲಿದೆ ಈ ಕುರಿತು ಮಿತ್ರರಲ್ಲಿ ಸ್ಪರ್ಧೆಯು ಉಂಟಾಗಿರುವುದೆಂದು ಕೆಲವರ ಅಂಬೋಣ ಫಿನ್‌ಲೆಂಡು ಜರ್ಮನಿಯ ಕೈಬಿಟ್ಟಿರುವುದು. ಇಸ್ತೊನಿಯಾ ಮತ್ತು ಲಿಟಿವಿಯಾದಲ್ಲಿ ರಷ್ಯನರ ಪ್ರವೇಶವಾಗಿರುವುದು ಹಂಗೇರಿಯಲ್ಲಿಯೂ ಜರ್ಮನರಿಗೆ ಪ್ರತಿಕೂಲ ಪರಿಸ್ಥಿತಿಯು ಉಂಟಾಗಿರುವುದು ಆಸ್ಟ್ರಿಯಾದೊಳಗೆ ಜರ್ಮನಿಗೆ ವಿರುದ್ಧ ದಂಗೆಗಳುಂಟಾಗುವ ಸಂಭವಗಳು ಹೆಚ್ಚುತ್ತಿರುವವು ಅಂದರೆ ಜರ್ಮನಿಯ ಸುತ್ತಲಿರುವ ಈ ಪೂರ್ವ ಪ್ರದೇಶಗಳೆಲ್ಲಾ ರಷ್ಯನರ ವಶವಾಗುತ್ತಿವೆ ಯುಗೊಸ್ಲೆವಿಯದಲ್ಲಿ ಮುಂದುವರಿಯುವ ರಷ್ಯನ್ ದಂಡಿನೊಡನೆ ಇಟಲಿ ರಂಗದ ಮಿತ್ರ ದಂಡುಗಳು ಸದ್ಯದಲ್ಲಿ ಕೂಡಬಹುದು ಪೂರ್ವರಂಗದಲ್ಲಿ ಸದ್ಯದಲ್ಲೆ ಯುದ್ಧದ ಮಹಾ ಜ್ವಾಲೆ ಉಂಟಾಗಿ ಅದರಲ್ಲಿ ಜರ್ಮನಿಯು ರಷ್ಯಕ್ಕೆ ಆಹುತಿಯಾಗಬಹುದು

ಫಿಲಿಪ್ಪಾನ್ ದ್ವೀಪಗಳಲ್ಲಿ

ಶಾಂತ ಸಾಗರದಲ್ಲಿ ಅಮೆರಿಕನರೂ ಬ್ರಿಟಿಷರೂ ಸಮ ಬಲವನ್ನು ಹಾಕಿ ಚಟುವಟಿಕೆಗಳನ್ನು ನಡೆಯಿಸುವರೆಂದು ಬ್ರಿಟಿಷ್ ಪ್ರಧಾನ ಮಂತ್ರಿಗಳ ಮೊನ್ನಿನ ಭಾಷಣದಲ್ಲಿ ಪ್ರಕಟವಾಗಿರುತ್ತದೆ ಅಮೆರಿಕನರು ಫಿಲಿಪ್ಪಾನ್ ದ್ವೀಪಗಳ ಸಮೀಪಕ್ಕೆ ಬಂದಿರುವರು ಫಿಲಿಪ್ಪಾನ್ ದ್ವೀಪಗಳ ಮೇಲೆ ವಿಮಾನ ಹಲ್ಲೆಯಾಗಿ ಜಪಾನರ ಅನೇಕ ಯುದ್ಧ ಸೈನ್ಯಗಳೂ ವಿಮಾನಗಳು ನಾಶ ಹೊಂದಿದವು ಈ ತರದ ವಿಮಾನ ಹಲ್ಲೆಗಳು ಈಗ ದಿನಾಲು ನಡೆಯುತ್ತಿವೆ ಫಿಲಿಪ್ಪಾನ್ ದ್ವೀಪಗಳನ್ನು ಜಪಾನರು ಬಿಟ್ಟು ಬಿಡುವರೆ? ಅಲ್ಲಿಂದ ಅವರು ಹಿಂದೆ ನಡೆದು ಜರ್ಮನಿಯೋಪಾದಿ ಸ್ವದೇಶ ರಕ್ಷಣೆಯನ್ನು ಮಾತ್ರ ಕೈಗೊಳ್ಳುವರೆ? ಜಪಾನಿಯರು ಫಿಲಿಪ್ಪಾನ್ ದ್ವೀಪಗಳನ್ನು ಕಳೆಗೊಂಡರೆ, ಆಗ ಮಿತ್ರರ ಅಭಿಯೋಗಕ್ಕೆ ಒಂದು ಧೃಢವಾದ ಆಧಾರವು ದೊರಕಿದಂತಾಗುವುದು ಆದುದರಿಂದಲೆ ಫಿಲಿಪ್ಪಾನ್ ದ್ವೀಪಗಳನ್ನು ರಕ್ಷಿಸಿ ಕೊಳ್ಳಲು ಜಪಾನು ಅತ್ಯಂತ ಶ್ರಮದಿಂದ ಹೋರಾಡುವುದು ಖಂಡಿತವೆಂದೆ ತಿಳಿಯಬೇಕು ಫಿಲಿಪ್ಪಾನ್ ಕಳೆದು ಹೋದರೆ ಆಗ ಡಚ್ ಇಸ್ಟ್ ಇಂಡಿಸ್ ಮೊದಲಾದ ಸ್ಥಳಗಳು ಮಿತ್ರರ ವಶವಾಗುವುದು ಖಂಡಿತ ಅಂದರೆ ಮಿತ್ರರು ಚೀನಕ್ಕೆ ಅತಿ ಸಮೀಪರಾಗುವರು ಇದರಿಂದ ಚೀನಾದಲ್ಲಿರುವ ಜಪಾನು ದಂಡುಗಳಿಗೆ ಮಹಾ ಅಪಾಯವಿದೆ ಫಿಲಿಪ್ಪಾನ್ ರಕ್ಷಣೆಗೆ ಜಪಾನರ ಅತ್ಯಂತ ದೊಡ್ಡನೌಕಾ ಬಲವು ಹೋರಾಟಕ್ಕೆ ಇಳಿಯಬಹುದು

ಚೀನಾದಲ್ಲಿ

ಬರ್ಮಾ ರಂಗದಲ್ಲಿ ಜಪಾನಿಯರನ್ನು ಹಿಮ್ಮೆಟ್ಟಿಸಿದ್ದರೂ, ಬರ್ಮಾದಿಂದ ಜಪಾನಿಯರನ್ನು ಸಂಪೂರ್ಣ ಹೊರ ದೂಡಲಾಗಲಿಲ್ಲ ಹೀಗೆ ಮಾಡಲು ಮಿತ್ರರು ಯತ್ನಗೊಳ್ಳುತ್ತಿರುವರು ಬರ್ಮಾ ರಸ್ತೆಯು ಈಗ ಜಪಾನಿಯರ ಹಿಡಿತದಿಂದ ಹೊರಗಾಗಿರುವುದರಿಂದ ಚೀನಕ್ಕೆ ಬೇಕಾದ ಸಹಾಯವನ್ನು ಈ ಕಡೆಯಿಂದ ಕಳುಹಿಸಿ ಕೊಡಲು ಸಾಧ್ಯವಿದೆ ಜಪಾನಿಯರಿಗೆ ಚೀನದಲ್ಲಿ ಕೆಲವು ವಿಜಯಗಳು ದೊರಕಿವೆ ಚೀನಿಯರು ಏಳುವರ್ಷಗಳ ಸಮಯದಿಂದ ಜಪಾನಿಯರ [illegible]

ಶಸ್ತ್ರ ಇತ್ಯಾದಿಗಳ ಕೊರತೆಯು ಸರಿಯಾಗಿ ನಿವಾರಿಸಲು ಆಗದೆ ಅವರು ಹತಾಶರಾಗಿರುವರೆಂದು ಕೆಲವರ ಅಭಿಪ್ರಾಯ ಚೀನಾದಲ್ಲಿ ತಾವು ಹಿಡಿದ ಸ್ಥಳಗಳನ್ನು ಜಪಾನಿಯರು ಸುಲಭದಲ್ಲಿ ಬಿಟ್ಟು ಕೊಡುವ ಹಾಗಿಲ್ಲ ಜಪಾನಿಯರನ್ನು ನೆಲ ಮಾರ್ಗವಾಗಿ ಎದುರಾಯಿಸಿ ಅವರನ್ನು ಧ್ವಂಸಗೊಳಿಸುವ ಕಾರ್ಯವನ್ನು ನಡೆಯಿಸಬೇಕಾಗಿ, ಮಿತ್ರರು ಹವಣಿಸುತ್ತಿರುವರು. ಆದರೆ ಚೀನಾದ ಪ್ರದೇಶಗಳನ್ನು ಉಳಿಸಿಕೊಳ್ಳುವರೇ ಜಪಾನಿಯರು ಮಹತ್ತಾದ ಶ್ರಮವನ್ನು ವಹಿಸುವುದು ಖಂಡಿತ ಈ ಕಾರಣದಿಂದಾಗಿ ಜಪಾನಿಯರು ಹಿಂದೂದೇಶದ ಮೇಲೂ ಮಳೆಗಾಲ ಮುಗಿದ ಮೇಲೆ ಧಾಳಿಗೆ ಆರಂಭ ಮಾಡಲುಬಹುದು ಆದರೆ ಬರ್ಮಾ ರಂಗದಲ್ಲಿ ಮಿತ್ರರು ವಿಶಾಲ ತರದ ಸಿದ್ಧತೆಯಲ್ಲಿರುವರಾಗಿಯೂ, ಮಿತ್ರರಿಗೆ ಸದ್ಯದಲ್ಲೆ ಈ ರಂಗದಲ್ಲಿ ವಿಶೇಷ ತರದ ಜಯ ಲಾಭಗಳು ಒದಗಬಹುದೆಂದೂ ನಿರೀಕ್ಷೆಗಳಿವೆ

ಚರ್ಚಿಲರ ಭಾಷಣ

ಅಮೆರಿಕದ ಸಹಾಯ

ಕಳೆದ ಏಳು ವಾರಗಳ ಯುದ್ಧ ಸ್ಥಿತಿಯನ್ನು ವಿಮರ್ಶೆ ಮಾಡುತ್ತಾ ಚರ್ಚಿಲರು ಒಂದು ಭಾಷಣವನ್ನು ಮೊನ್ನೆ ದಿನ ಪಾರ್ಲಿಮೆಂಟಿನಲ್ಲಿ ಮಾಡಿದರು 'ಯುರೋಪಿನ ರಣರಂಗದಲ್ಲಿ ಇಂದು ಇಪತ್ತು ಲಕ್ಷಕ್ಕೆ ಮಿಕ್ಕಿ ಸೈನಿಕರಿದ್ದಾರೆ ಈ ರಂಗದಲ್ಲಿ ಅಮೆರಿಕದಿಂದ ಮಹದುಪಕಾರವಾಗಿದೆ ಇದಕ್ಕಾಗಿ ನಾವು ಅಮೆರಿಕವನ್ನು ಎಷ್ಟು ಹೊಗಳಿದರೂ ಸಾಲದ ಯುರೋಪದ ರಂಗದಲ್ಲಿ ಅಮೆರಿಕವು ಹೆಚ್ಚಿನ ಶ್ರಮವನ್ನು ವಹಿಸಿದಾಗ್ಯೂ ಶಾಂತ ಸಾಗರದಲ್ಲಿ ಅವರು ಜಪಾನಿನೊಡನೆ ಬಹಳ ಹುರುಪಿನಿಂದ ಕಾದಾಡುತ್ತಿರುವರು ಅಮೆರಿಕದ ಬಲವು ಅತಿ ಪ್ರಬಲವಾದುದು ಈ ಕಾರಣದಿಂದ ಬ್ರಿಟನು ಇಂದು ಅಮೆರಿಕಕ್ಕೆ ಕೈ ಮುಗಿಯುತ್ತದೆ ಇನ್ನೂ ಅನೇಕ ಕೆಲಸಗಳಾಗಲಿಕ್ಕಿವೆ. ಬರಿ ಬಾಯಿ ಮಾತುಗಳಿಂದ ಕೆಡುಕು ಉಂಟಾಗಬಹುದು. ಮುಂದಕ್ಕೆ ನಾವು ಬಹಳ ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕಾಗಿದೆ

ಬರ್ಮಾ ರಂಗ

"ಬರ್ಮಾ ರಂಗದ ಕುರಿತು ಲಾರ್ಡ್ ಮೌಂಟ್ ಬೆಟನ್ನರ ಕುರಿತು ತಪ್ಪು ಅಭಿಪ್ರಾ

(೧೧ನೇ ಪುಟಕ್ಕೆ ಮುಂದುವರಿದಿದೆ)

ಪ್ರಕಟಣೆ

ಮಂಗಳೂರು ಶ್ಯಾಹರು ಪದವು ಗ್ರಾಮದ, ಕುಲಶೇಕರದಲ್ಲಿರುವ ಮಾಂಜ ಹೆಂಗಸಿನ ಮಗ, ಪಿ ಗಂಗ್ಗಯ್ಯ ಅಮೀನಾದ ನಾನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ –

ಪದವು ಗ್ರಾಮದ ಸರ್ವೆ ನಂಬ್ರ 64/3 1, 2, ಮತ್ತು 3 ಒಳಪಟ್ಟ ಆಸ್ತಿಯು ಮೂವತ್ತೈದು ಸೆಂಟ್ಸು ವಿಸ್ತೀರ್ಣವಾಗಿದ್ದು, ಅದರಲ್ಲಿ ಒಂದು ಮನೆಯೂ ಮೂರು ಅಂಗಡಿಗಳೂ ಇವೆ ಸದರಿ ಆಸ್ತಿಯು ನನ್ನ ತಾಯಿ ಮೃತಪಟ್ಟ ಮಾಂಜ ಹೆಂಗಸಿನ ಸ್ವಾರ್ಜಿತ ಆಸ್ತಿಯಾಗಿದ್ದು, ಅವಳ ನಂತರ ಅವಳ ಒಬ್ಬನೇ ಮಗನಾದ ನಾನು ಸಂಪೂರ್ಣ ಹಕ್ಕುದಾರನಾಗಿರುತ್ತೇನೆ ನನ್ನ ತಾಯಿ ಮೃತಪಟ್ಟಿರುವುದರಿಂದ ಸದರಿ ಆಸ್ತಿಯ ಪಟ್ಟೆ ತಬ್ದೀಲಿಗೆ ನಾನು ಮಂಗಳೂರು ತಾಲೂಕ ತಹಶಿಲ್ದಾರವರಿಗೆ ಅರ್ಜಿಮಾಡಿರುತ್ತೇನೆ ಈಗ ಸುಮಾರು ಒಂದು ವಾರದಲ್ಲಿ ತಾಯಿಯ ದೂರದ ಸಂಬಂಧಿಕನಾದ ಕಿಟ್ಟಿಯಾನೆ ಕೃಷ್ಣಪ್ಪ ಎಂಬವನು ಮುಂಬಾಯಿಯಿಂದ ಬಂದು, ಸದರಿ ಆಸ್ತಿಯಲ್ಲಿ ತನಗೆ ಸಂಪೂರ್ಣ ಹಕ್ಕು ಉಂಟೆಂತ ಜನರನ್ನು ನಂಬಿಸಿ ಅದನ್ನು ವಿಕ್ರಯಿಸುವ ಆಲೋಚನೆಯಲ್ಲಿಯೂ, ಪ್ರಯತ್ನದಲ್ಲಿಯೂ ಇದ್ದಾನೆ ಸದರಿ ಆಸ್ತಿಯಲ್ಲಿ ಕಿಟ್ಟಿಯಾನೆ ಕೃಷ್ಣಪ್ಪನಿಗೆ ಯಾವತರದ ಏನೊಂದು ಹಕ್ಕು ಇರುವುದಿಲ್ಲ ಯಾರಾದರೂ ಸದರಿ ಆಸ್ತಿಯನ್ನು ಕ್ರಯಕ್ಕೆ ಪಡಕೊಂಡರೆ ಅವರಿಗೆ ಸದರಿ ಆಸ್ತಿಯಲ್ಲಿ ಏನೊಂದೂ ಹಕ್ಕು ಸಿಗಲಿಕ್ಕಿಲ್ಲ ಅಲ್ಲದೆ ನಾನು ಜವಾಬ್ದಾರನಲ್ಲ ತಿಳಿದಿರಲಿ

P Gangaya,
Amina

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಯಾಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ. ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ

ಚರ್ಮವ್ಯಾಧಿಗಳು ಮೋಜಿಕಿನಂತೆ ಮಾಯವಾಗುವುವು!

ಕುಟಿಕೂರಾ ಮುಲಾಮು.

(Cuticura Ointment)

ಚರ್ಮವ್ಯಾಧಿಗಳನ್ನು ಉರ್ಜಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು.

ಕುಟಿಕೂರಾ ಮುಲಾಮು

CUTICURA OINTMENT

ಸ್ವದೇಶಾಭಿಮಾನಿ

ತಾರೀಖು 6—10—1944

ಇದು ಹೊಸತೇನಲ್ಲ

ಗಾಂಧಿ ಜಿನ್ನಾ ಮಾತುಕತೆಗಳ ಮುರಿತದೊಂದಿಗೆ ಕಾಂಗ್ರೆಸ್ ಲೀಗ್ ಇತ್ಯರ್ಥದ ನಿರೀಕ್ಷೆಗಳು ಮಣ್ಣುಪಾಲಾದವು. ವ್ಯಾತ್ರವಲ್ಲ ಸ್ವಾತಂತ್ರ್ಯದ ಆಶೆಯೂ ಹಿನ್ನೆಲೆಗೆ ಸರಿಯುವಂತಾಯಿತು.

ಮಹಾತ್ಮರ ಎಪ್ಪತ್ತೈದನೇ ಜನ್ಮದಿನೋತ್ಸವದ ಆನಂದದಲ್ಲಿ ಇದೊಂದು ವಿಷಾದಪ್ರಿಯ ಸುದ್ದಿ. ಆದರೆ ಇಂದಿಗೆ ಅರ್ಧ ಶತಮಾನದಿಂದ ದೇಶೋದ್ಧಾರಕ್ಕೆ ಜೀವನವನ್ನು ಸವೆದ ಆ ಮಹಾತ್ಮನ ಸರ್ಧಿಂತಿಯು ಕಾಲಕ್ಕೆ ಮಾತುಕತೆಗಳ ಅಸಫಲತೆಯಿಂದ ನಮ್ಮ ಮನಸ್ಸು ಖೇದಗೊಳ್ಳದಿರದು."

ಮಹಾತ್ಮರ ಜನ್ಮದಿನದಂದು ಕಾಂಗ್ರೆಸ್-ಲೀಗ್ ಇತ್ಯರ್ಥದಂತಹ ಉಡುಗೊರೆಯನ್ನು ನಾವು ಅಪೇಕ್ಷಿಸಬಹುದಿತ್ತು ಆದಕ್ಕಾಗಿಯೇ ಅವರು ಇದುತ್ತನಕ ಪ್ರಯತ್ನ-ಪಡುತ್ತಿದ್ದಾರೆ. ಆದರೆ ಅದು ಕೈಗೂಡಿ ಬರಲಿಲ್ಲವಿದ್ದುದು ಶಾಂತಿಪ್ರಿಯ ಮಹಾತ್ಮರ ತಪ್ಪಲ್ಲ."

ಪ್ರಾರಂಭದಿಂದಲೇ ಜಿನ್ನರು ಸಂಧಾನಕ್ಕೆ ವಿರೋಧದ ಭಾವನೆಯನ್ನೇ ತಳೆದಿದ್ದರೆಂದು ಯಾರಿಗೂ ತಿಳಿಯದಿರಲಿಕ್ಕಿಲ್ಲ. ಅವರಿಗೆ ಸಂಧಾನ ಬೇಕಾಗಿರಲಿಲ್ಲವೆಂದು ಸ್ಪಷ್ಟ ತಿಳಿಯುತ್ತದೆ. ಕೋರ್ಟಿನಲ್ಲಿ ಅಪಾದಿತರನ್ನು ವಿಚಾರಣೆ ಮಾಡುವ ವಕೀಲರಂತೆ ಅವರು ಗಾಂಧಿಜಿಯವರನ್ನು ಪ್ರತಿಸವಾಲಿನ ಸುರಿಮಳೆಗೆ ಗುರಿಮಾಡಿದರು. ಗಾಂಧಿಜಿಯವರಿಗೆ ತಮ್ಮ ಸಮಾನ ಸ್ಥಾನಮಾನಗಳಿಲ್ಲವೆಂಬ ಭಾವನೆಯು ಅವರಲ್ಲಿ ಕೂಡಿತ್ತು. ಅವರು ಮುಸ್ಲಿಂ ಲೀಗಿನ ಏಕಮಾತ್ರ ಸರ್ವಾಧಿಕಾರಯುಕ್ತ ಪ್ರತಿನಿಧಿಗಳಾಗಿರುವಾಗ ಮಹಾತ್ಮರು ಬರೀ ತಮ್ಮ ಸ್ವಂತ ವೈಯುಕ್ತಿಕ ಪ್ರತಿನಿಧಿತ್ವದಿಂದ ತಮ್ಮೆಡೆಗೆ ಬಂದಿರುವರೆಂದೇ ಅವರ ಅತ್ಯಂತ ಕಳಕಳಿಯ ಯೋಚನೆ.

ಜಿನ್ನರ ಇನ್ನೂ ಮಹತ್ವದ ಕೇಳಿಕೆ ಎಂದರೆ ಮುಸಲ್ಮಾನರು ಪ್ರತ್ಯೇಕ ಒಂದು ಜನಾಂಗವೆಂಬುದನ್ನು ಮಹಾತ್ಮರು ಒಪ್ಪಲೇ ಬೇಕೆಂಬುದು. ವಿಭಾಗಿಸುವ ತತ್ವವನ್ನು ಒಪ್ಪಿಕೊಂಡ ಮೇಲೆ ಇದನ್ನು ಪ್ರತ್ಯೇಕವಾಗಿ ಒಪ್ಪಬೇಕೆಂಬ ಹಟವೇಕೆ?

ಆದ್ದರಿಂದ ಜಿನ್ನರಿಗೆ ಇದೊಂದೂ ಮನಸ್ಸಿಗೆ ಹೋಗಲೊಲ್ಲದು. ರಾಜಾಜಿಯವರ ಯೋಜನೆಯನ್ನಾಗಲೀ ಅಥವಾ ಅದರ ಬದಲಿಗೆ ಗಾಂಧಿಜಿಯವರು ಮುಂದಿಟ್ಟ ಏರ್ಪಾಡನ್ನಾಗಲೀ ಅವರು ಸ್ವೀಕರಿಸುವವರಲ್ಲ.

ಗಾಂಧಿಜಿಯವರು ತಮ್ಮೊಂದು ಪತ್ರದಲ್ಲಿ ಹೀಗೆ ಬರೆದಿದ್ದಾರೆ—"ಲಾಹೋರ್ ಠರಾವಿನ ಕೇಳಿಕೆಗಳಿಗೆ ಒಂದು ದೃಢರೂಪವನ್ನು ಕೊಟ್ಟು ಇತರ ಚಿಕ್ಕಪುಟ್ಟ ವಿಷಯಗಳನ್ನು ಪರಸ್ಪರರ ತೃಪ್ತಿಗನುಸಾರವಾಗಿ ಸರಿಪಡಿಸಿ ನಮ್ಮ ಮುಂದಿರುವ ಮಹಾ ಸಮಸ್ಯೆಯನ್ನು ಬಿಡಿಸಲು ಪ್ರಯತ್ನಿಸುವುದು ಒಳಿತೆಂದು ನಾನು ತಿಳಿದುಕೊಂಡಿರುವಾಗ ನೀವು ಕೆಲವೊಂದು ನಿಮ್ಮದೇ ಅರ್ಥವುಳ್ಳ ತತ್ವ ಪ್ರಮಾಣಗಳನ್ನು ಸ್ವೀಕರಿಸಬೇಕೆಂದು ಕೇಳುತ್ತಾ ಇದ್ದೀರಿ. ನೀವು ಹೇಳಿದ ಸ್ವಂತ ಅರ್ಥವುಳ್ಳ ಲಾಹೋರ್ ಠರಾವನ್ನು ಸ್ವೀಕರಿಸಲು ನಾನೆಂದಿಗೂ ಸಿದ್ಧನಿಲ್ಲ. ಅದನ್ನು ಭಾರತದ ಜನತೆಗೆ ಒಪ್ಪುವಂತೆ ಮಾಡುವ ಆಶಾದಾಯಕ ಚಿಹ್ನೆಯೂ ನನಗೆ ಕಾಣುವುದಿಲ್ಲ"

ಇಲ್ಲಿಂದ ಮುಂದೆ ಮಾತುಕತೆಗಳ ಮುರಿತಕ್ಕೆ ಆರಂಭವಾಯಿತು. ಈ ಎರಡು ಸಂಸ್ಥೆಗಳೊಳಗಿನ ಅಂತರವು ಎಷ್ಟು ವಿಶಾಲವಾದುದಿದೆ ಎಂದು ಇಲ್ಲಿಗೆ ಸ್ಪಷ್ಟವಾಯಿತು.

ಆದರೆ ನಾವು ನಿರುತ್ಸಾಹಗೊಳ್ಳಬೇಕಾದ್ದುದಿಲ್ಲ. ಗಾಂಧಿ-ಜಿನ್ನಾ ಭೇಟಿಯೇ ಕೊನೆಯದು ಕೊನೆಯ ಪ್ರಯತ್ನವಲ್ಲವೆಂದಿರುವರು. ಇಬ್ಬರು ಮುಖಂಡರೂ ಭಾರತ ಸ್ವಾತಂತ್ರ್ಯ ಸೂರ್ಯನ ಸುಪ್ರಭಾತವಾಗುವಂತಾಗುವ ಒಂದು ಒಡಂಬಡಿಕೆಗೆ ಆದಷ್ಟು ಬೇಗನೆ ಬರಲೆಂದು ಹಾರೈಸಿ ಆ ಶುಭದಿನವನ್ನು ಇದಿರು ನೋಡುತ್ತಿರೋಣ.

ಆಯುರ್ವೇದ ಜಾತಿಕರ ಕಣ್ಣೀರಿನಲ್ಲಿ ರೋಗ ನಾಶಕ ಕ್ರಿಮಿಗಳಿವೆ

ಕೆಲವರಿಗೆ ಜಾಡ್ಯಗಳು ಬಹುಬೇಗನೆ ತಗಲುತ್ತವೆ. ಇನ್ನೂ ಕೆಲವರಿಗೆ ಎಂಥಹ ರೋಗಗಳಾದರೂ ತಗಲುವುದಿಲ್ಲ. ನಮ್ಮ ದೇಹದಲ್ಲಿ ರೋಗಾಣುಗಳನ್ನು ನಾಶ ಮಾಡುವ ಕೆಲವು ದ್ರಾವಕಗಳಿವೆ, ಅವುಗಳು ಕಡಿಮೆಯಾದ ಮನುಷ್ಯರು ರೋಗಗಳಿಗೆ ತುತ್ತಾಗುವರು.

ಅಮೇರಿಕದ ಮತ್ತು ಯುರೋಪಿನ ಕೆಲ ವೈದ್ಯಕೀಯ ವಿಜ್ಞಾನಿಗಳು ಕಣ್ಣೀರಿನಲ್ಲಿ ರೋಗಾಣು ನಾಶಕ ಈ ದ್ರಾವಕವನ್ನು ಕಂಡು ಹಿಡಿದರು. ಸೂಕ್ಷ್ಮ ರೋಗಾಣುಗಳನ್ನು ಇದರಲ್ಲಿ ಅದ್ದಿದರೆ ಅವು ತಕ್ಷಣ ನಾಶಹೊಂದುವುವು.

ಇವುಗಳಲ್ಲಿ ಲ್ಯಾಸೊ ಜ್ಯಾಮ್ ಎಂದು ಈ ದ್ರಾವಕದ ಹೆಸರು. ಇದರಲ್ಲಿ ಎವಿಡಿನ್ ಮತ್ತು ಬ್ಯೊಟಿನ್ ಎಂಬ ಎರಡು ಸತ್ವಗಳು ಮಿಶ್ರವಾಗಿವೆ. ನಮ್ಮ ದೇಹದಲ್ಲಿ ಬ್ಯೊಟಿನ್ ಇಲ್ಲದಿದ್ದರೆ ಚರ್ಮವ್ಯಾಧಿಗಳು ಉಂಟಾಗುತ್ತಿವೆಯಂತೆ. ಕಣ್ಣೀರಿನ ಮೂಲಕ ಈ ಉಪಯುಕ್ತ ರಸವಿಶೇಷಗಳು ನಷ್ಟವಾಗುವುದರಿಂದ ಅದನ್ನು ಹೆಚ್ಚಾಗಿ ಸುರಿಸದಂತೆ ನೋಡಿಕೊಳ್ಳುವುದು ಉತ್ತಮ.

ಇವರಿಗೆ ದನವೇ ದೇವರು

"ಗೋರಕ್ಷಕ" ಘೂರ್ಕರು

ಇಂದು ಇಡೀ ಭಾರತದಲ್ಲಿ ಸ್ವತಂತ್ರವೆನಿಸಿದ ರಾಜ್ಯವೆಂದರೆ ನೇಪಾಲ ಒಂದೊಂದು ಹಿಂದೂ ರಾಜ್ಯಾಧಿಪತ್ಯ. ಅಲ್ಲಿಯ ಪ್ರಜೆಗಳು ದನಗಳನ್ನೂ ದೇವರಂತೆ ಪೂಜಿಸುತ್ತಾರೆ. ಅಲ್ಲಿ ಗೋಹತ್ಯ ಮಾಡಿದ್ದವರಿಗೆ ಮರಣಪರ್ಯಂತ ಜೈಲಾಗುತ್ತದೆ. ಗೋವುಗಳಿಗೆ ಮೇಯುವುದಕ್ಕೆ ವಿಶಾಲ ಹುಲ್ಲು ಮೈದಾನುಗಳನ್ನು ಮಾಡಿರುವರು. ಇದರಿಂದಾಗಿ ನೇಪಾಲದ ಜನರು ಘೂರ್ಕರೆಂದು ಕರೆಯಲ್ಪಡುತ್ತಾರೆ. ಘೂರ್ಕರೆಂದರೆ ಗೋರಕ್ಷರು ಎಂದರ್ಥ. ಗೋರಕ್ಷಣೆಯ ಜಯಜಯಕಾರವನ್ನು ಹಾಕುತ್ತಾ ಕಾಳಿಕಾದೇವಿಯ ಹೆಸರಲ್ಲಿ ಈ ಜನರು ಹಿಂದೂ ಪತಾಕೆಗಳನ್ನು ಹಾರಿಸಿ ಹಿಂದೂಸ್ಥಾನದ ದಿಗ್ವಿಜಯಕ್ಕೆ ಹೊರಟಾಗ ಘೂರ್ಕರೆಂಬ ಈ ಹೆಸರು ಅವರಿಗೆ ದಕ್ಕಿತು. ದನಗಳ ರಕ್ಷಣೆಯೇ ಅವರ ಜೀವನ ಧ್ಯೇಯ.

ನೇಪಾಲದ ರಾಜರು ಇಂದಿಗೂ ಪ್ರಾತಃಕಾಲ ಎದ್ದೊಡನೆ ಇತರ ವಿಧಿಗಳೊಂದಿಗೆ ಗೋದರ್ಶನ ಮಾಡಿ ತಮ್ಮ ನಿತ್ಯದ ವ್ಯವಹಾರವನ್ನು ಪ್ರಾರಂಭಿಸುತ್ತಾರೆ. ದನಗಳಿಗೆ ಆಹಾರ ತಿನ್ನಿಸದೆ ಘೂರ್ಕರು ಊಟ ಮಾಡುವುದಿಲ್ಲವಂತೆ. ಗೋಗ್ರಾಸವನ್ನು ಇಡುವ ಕ್ರಮವು ಹಿಂದೂಗಳ ಪವಿತ್ರ ಸಾಂಪ್ರದಾಯವಾಗಿತ್ತು. ಈಗ ಅದು ಮಾಯವಾಗುತ್ತಿರುವುದು ಗೋವುಗಳ ಕಡೆಗಿರುವ ಅಲಕ್ಷವನ್ನು ತೋರಿಸುತ್ತದೆ.

ಹಗಲು ನಿದ್ರೆ, ರಾತ್ರಿ ಕೆಲಸ

ಟರ್ಕಿ ವಿದ್ಯಾರ್ಥಿಗಳ ಹೊಸ ಶೋಧ

ಟರ್ಕಿಯ ಅಂಕಾರಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕೆಲಸ ಮತ್ತು ವಿಶ್ರಾಂತಿಯ ಕಾಲನಿಯಮವನ್ನು ಹೀಗೆ ಬದಲಾಯಿಸಿರುವರು - ಬೆಳಿಗ್ಗೆ ೫ರಿಂದ ೮ ಗಂಟೆಯತನಕ ನಿದ್ರೆ ೮ರಿಂದ ಸಂಜೆ ೬ ಗಂಟೆಯ ತನಕ ಕೆಲಸ. ಸಂಜೆ ೬ರಿಂದ ರಾತ್ರೆ ೮ರ ತನಕ ಪುನಃ ನಿದ್ರೆ. ಮತ್ತೆ ರಾತ್ರೆ ೮ರಿಂದ ಮುಂಜಾನೆ ೫ರ ತನಕ ಪುನಃ ಕೆಲಸ.

ಹೀಗೆ ದಿನದಲ್ಲಿ ೫ ಗಂಟೆ ನಿದ್ರೆ ೧೯ ಗಂಟೆ ಕೆಲಸ. ವಿದ್ಯಾರ್ಥಿಗಳಂತಹ ಬುದ್ಧಿವಂತರಿಗೆ ಕೆಲಸಗಾರರಿಗೆ ರಾತ್ರೆ ಹೊತ್ತೇ ಅನುಕೂಲವಾದದ್ದೆಂದು ಅವರಿಗೆ ಖಚಿತವಾಗಿದೆ. ಬೆಳಗಿನ ಸಮಯದಲ್ಲಿ ಅನೇಕ ತರದ ಗುಲ್ಲು ಗಲಾಟೆ, ಗಡಿಬಿಡಿ ಇರುತ್ತವೆ. ರಾತ್ರೆಕಾಲದಲ್ಲಿ ನಿಶಬ್ದವಿರುವುದರಿಂದ ಓದುವುದಕ್ಕೆ ಅದು ಯೋಗ್ಯ ಸಮಯವಂತೆ. ರಾತ್ರೆ ಒಂದೇ ಸಮನೆ ೧೦ ಗಂಟೆ ಮಲಗುವುದರಿಂದ ಚಟುವಟಿಕೆ ಕಡಿಮೆಯಾಗುವುದೆಂದು ... ಅವರ ಅಭಿಪ್ರಾಯ. ಹಗಲು ನಿದ್ರಿಸುವ ವಿದ್ಯಾರ್ಥಿಗಳ ಸಂಖ್ಯೆ ... ಪರೀಕ್ಷಿಸಿದಾಗ ... ನಿದ್ರಿಸುವವರದೇ ಹೆಚ್ಚು ... ಗಿರುವುದೆಂದು ತಿಳಿದುಬಂತು.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 186/1944

ಪರಮೇಶ್ವರ ಶೆಟ್ಟಿ— ವಾದಿ.

ಬಚ್ಚಿ ಶೆಟ್ಟಿ ಕೂಡಾ— ಪ್ರತಿವಾದಿಗಳು

4. ಶಿವಪ್ಪ ಶೆಟ್ಟಿ ಅಬ್ಬಕ್ಕ ಶೆಟ್ಟಿ ಮಗ 8 ಡ್ಡಪ್ಪ ಶೆಟ್ಟಿ ಚಂದಮ್ಮ ಶೆಟ್ಟಿ ಮಗ— ಪ್ರತಿವಾದಿಗಳು

ಕುಂದಾಪುರ —ತಾಲೂಕು ಬೇಳೂರು ಗ್ರಾಮದ ಸ್ಥಳ್ಯತಿಯುಳ್ಳವರುವವರು.

ಸದರಿ ಪ್ರತಿವಾದಿರಿಗೆ ಈ ಮೂಲಕ ತಿಳಿಸುವುದೇನೆಂದರೆ.—

ಸದರಿ ವಾದಿಯು ನೀವು ವಗೈರೇರ ಮೇಲೆ ಸ್ವಭಾನು ಸಂವತ್ಸರದ ಮೂಲಗೇಣಿ ಬಾಕಿ ರೂಪಾಯಿ 78—8—8ಕ್ಕೆ ಈ ಕೋರ್ಟಿನಲ್ಲಿ ವ್ಯಾಜ್ಯ ದಾಖಲು ಮಾಡಿದ್ದಾರೆ. ಆ ಕುರಿತು ನಿಮ್ಮ ತಕ್ರಾರು ಉದಾಹರಣೆ ದಾಖಲು ಮಾಡುವುದಕ್ಕೆ ಬರುವ ತಾ 17—10—1944ನೇ ದಿವಸ ಪೂರ್ವಾಹ್ನ 11 ಗಂಟೆಗೆ ಈ ಕೋರ್ಟುಮುಂದೆ ನೀವು ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದ ಪಕ್ಷದಲ್ಲಿ ಸದರಿ ವ್ಯಾಜ್ಯದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿಮಾಡಿ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ನಿಮಗೆ ತಿಳಿಸಲಾಗುತ್ತದೆ.

K. Soorappa Shetty,
Advocate for Plaintiff.

ಕುಂದಾಪುರ, ತಾ 26—9—1944

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿ ತಿರುಗಿ ಸಂಪಾದಿಸಬಹುದು, ಉಲ್ಲಾಸದಿಂದ ಕೂಡಿದ್ದು ಪುಷ್ಟ ಯೌವನಶಾಲಿಗಳಾಗಿರಬಹುದು, ಹಾಗಾಗ ಬೇಕಾದರೆ ಪ್ರತಿದಿನ ರಾತ್ರೆ ತಪ್ಪದೆ ಎರಡು ಬೈಲ್ ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ. ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು. ಕೊಬ್ಬು ಬೆಳೆಯುವುದಿಲ್ಲ. ಹೀಗೆ ಇದು ನಿಮ್ಮನ್ನು



ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು

ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್ ಬೀನ್ಸು ಬಾಟ್ಲಿ ಒಂದರ 1 ರೂಪಾಯಿ ಬೆಲೆಗೆ ಸಿಗುವುದು

BILE BEANS

ಬೈಲ್ ಬೀನ್ಸು ನಿಮ್ಮನ್ನು ದೃಢ ಆರೋಗ್ಯವಂತರಾಗಿ ಮಾಡುವುದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಆಹಾರ ಪೂರೈಕೆ

ಪ್ರಾಂತೀಯ ಕಮಿಶನರರಾದ ಮಿ. ಡಿಕ್ಸನ್ ರವರು ಕಳೆದವಾರ ಇಲ್ಲಿಗೆ ಬಂದಿದ್ದು ಜಿಲ್ಲೆಯ ಆಹಾರ ಸ್ಥಿತಿಯನ್ನು ಪರಿಶೀಲಿಸಿದರು. ಕೂಮ್ನಲ್ಲಿಯ ಸಂಘದ ಮುಖ್ಯರು ಪ್ರಾಗತಿಕ ಪ್ರಮುಖರು ಅವರನ್ನು ಕಂಡು ಮುಖ್ಯ ಆಹಾರವಾದ ಅಕ್ಕಿ ಪೂರೈಕೆಯ ಅವಶ್ಯಕತೆಯ ಕುರಿತು ಅವರಿಗೆ ತಿಳಿಸಿದರು. ಸದ್ಯದಲ್ಲೇ ೩೦೦೦ ಟನ್ ಅಕ್ಕಿ, ೨೭೦೦ ಟನ್ ರಾಗಿ, ೩೦೦೦ ಟನ್ ಗೋಧಿ ಇಲ್ಲಿಗೆ ಬರುವಂತೆ ಮಾಡಲು ಪ್ರಯತ್ನಿಸಲಾಗಿದೆ ಎಂದು ತಿಳಿದು ಬಂದಿದೆ.

ಮಲಬಾರ್ ಮತ್ತು ನಮ್ಮ ಜಿಲ್ಲೆಯಲ್ಲಿ ರೇಷನಿಂಗ್ ಪಡಿಯನ್ನು ಸ್ವಲ್ಪ ಕಡಿಮೆ ಮಾಡಿದುದನ್ನು ಸರಿಗೊಳಿಸುವಂತೆ ಪ್ರಯತ್ನಿಸುವುದಾಗಿ ಮಿ. ಡಿಕ್ಸನ್ನರು ಭರವಸೆ ಇತ್ತಿರುವದಾಗಿಯೂ ತಿಳಿದುಬರುತ್ತದೆ.

ಕಟ್ಟಿಗೆ ತೊಂದರೆ

ಶ್ರೀಮಂತರೂ, ವರ್ಗದಾರರೂ, ಹಳ್ಳಿಗಳ ಕಡೆಯಿಂದ ಕಟ್ಟಿಗೆ ತರಿಸಬಹುದೆಂದೂ, ಬಡವರಿಗೆ ೨ ಮಣದಂತೆ ನಗರದ ಸೌದೆ ಅಂಗಡಿಗಳಲ್ಲಿ ಸಿಗುವಂತೆಯೂ ಏರ್ಪಡಿಸಿರುವರು. ಆದರೆ ವರ್ಗದಾರರಲ್ಲದ ಮಧ್ಯವರ್ಗದ ಜನರಿಗೆ ಕಟ್ಟಿಗೆ ಸಿಗುವುದು ಕಷ್ಟವಾಗಿದೆ. ಯಾವ ಡಿಪೋಗೆ ಹೋದರೂ ಸ್ಟಾಕಿಲ್ಲವೆಂದೇ ಹೇಳುವರು." ಎಂಬ ವದಂತಿ ತಿಳಿದು ಬಂದಿರುತ್ತದೆ. ಕೆಲವು ಕಡೆಗಳಲ್ಲಿ ಕಟ್ಟಿಗೆ ಇದ್ದೂ ಮಾರಲು ಒಪ್ಪುವುದಿಲ್ಲವಾಗಿಯೂ ಹೇಳಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕಷ್ಟಗೊಳಗಾದವರು ಕೂಡಲೇ ಅಧಿಕಾರಿಗಳ ಗಮನಕ್ಕೆ ಅದನ್ನು ತಂದು ತಪ್ಪಿತಸ್ಥ ಡಿಪೋದವರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಮಾಡುವುದು ಯೋಗ್ಯವೆಂದು ಅಪೇಕ್ಷಿಸಲಾಗಿದೆ. ಡಿಪೋಗಳಿಗೂ ಅಧಿಕಾರಿಗಳು ಸಕಾಲದಲ್ಲಿ ಕಟ್ಟಿಗೆ ಸ್ಟಾಕು ಒದಗಿಸುವಂತೆ ಏರ್ಪಡಿಸಿದರೆ ಕಟ್ಟಿಗೆ ಕಷ್ಟ ಕಡಿಮೆಯಾಗುವುದು.

ವರ್ಗ

ಇಲ್ಲಿ ಮುನ್ಸಿಪಲ್ ಹೆಲ್ತ್ ಆಫೀಸರಾಗಿದ್ದ ಡಾ। ಬಿ. ಸುಬ್ರಾಯ ಬಾಳಿಗಾ ಅವರಿಗೆ ಕಲ್ಲಿಕೋಟೆಗೆ ವರ್ಗವಾಗಿದೆ. ಅವರ ಸ್ಥಾನಕ್ಕೆ ತಿನ್ನವೆಲ್ಲಿಯಿಂದ ಡಾ। ಹನುಮಂತರಾವ್ ಅವರು ಬರುವರು.

ನಿಧನ

ಸ್ಥಳೀಯ ಕೆನರಾ ಹೈಸ್ಕೂಲಿನಲ್ಲಿ ಬಹುಕಾಲ ಕನ್ನಡ ಪಂಡಿತರಾಗಿದ್ದು ನಿವೃತ್ತರಾಗಿದ್ದ ಶ್ರೀ ಕುಂಡಿ ರಾಮ ಕಾಮತರು ತಮ್ಮ ೭೦ನೇ ವಯಸ್ಸಿನಲ್ಲಿ ಕಳೆದ ತಿಂಗಳ ತಾ। ೨೫ರಲ್ಲಿ ದಿವಂಗತರಾದರು. ಇವರ ಇರ್ವ ಮಕ್ಕಳು ಐ. ಸಿ. ಎಸ್ ಆಗಿರುವರು ಅವರಲ್ಲೊಬ್ಬರು ನಾಗಪುರದ ಫುಡ್ ಕಂಟ್ರೋಲರ್ ಆಫೀಸರಾಗಿದ್ದಾರೆ. ಇನ್ನೊರ್ವರು ತಮ್ಮ ಹುದ್ದೆಗೆ ರಾಜಿನಾಮೆ ಇತ್ತು ರಾಜಕೀಯ ಚಳವಳದಲ್ಲಿ ಭಾಗವಹಿಸಿ ಈಗ ಸೆರೆಮನೆಯಲ್ಲಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಬಯಸುವೆವು.

ಸರಕಾರದಿಂದ ಜಿಲ್ಲಾ ಬೋರ್ಡಿನಲ್ಲಿ ಹರಿಜನರ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿದ್ದ ನಿವೃತ್ತ ಲೇಬರ್ ಶಾಲಾ ಉಪಾಧ್ಯಾಯ ಶ್ರೀ ಕೆ. ಅಂಗಾರ ಅವರು ಕೆಲವು ದಿನಗಳ ಹಿಂದೆ ದಿವಂಗತರಾದರು. ಇವರ ಆತ್ಮಕ್ಕೆ ಶಾಂತಿ ದೊರೆಯಲಿ.

ಸಾಹಿತಿಗಳಿಗೆ ಸನ್ಮಾನ

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ ಅವರು ಕಳೆದ ವಾರ ಮಂಗಳೂರಿಗೆ ಬಂದಿದ್ದರು. ಸ್ಥಳೀಯ ಪತ್ರಿಕೋದ್ಯೋಗಿ ಮತ್ತು ಸಾಹಿತ್ಯ ಸಂಸ್ಥೆಗಳವರು ಶ್ರೀಮಾನ್ ಮಾಸ್ತಿಯವರನ್ನು ಸತ್ಕಾರ ಕೂಟವೇರ್ಪಡಿಸಿ ಗೌರವಿಸಿದರು. ಮಾನ್ಯ ಅತಿಥಿಗಳು ಕನ್ನಡ ನಾಡು ನುಡಿಗಳ ಏಕೀಕರಣದ ವಿಷಯ ಭಾಷಣಮಾಡಿದರು.

ಕೈದು

ಆಹಾರ ಧಾನ್ಯಗಳ ಅಪ್ಪಣೆ ಮೀರಿದ, ವಿಶ್ವಾಸದ್ರೋಹಮಾಡಿದ ಮತ್ತು ಲೆಕ್ಕ ಪತ್ರದಲ್ಲಿ ಹೆಚ್ಚು ಕಡಿಮೆ ಮಾಡಿದ ಆರೋಪಗಳ ಮೇಲೆ ಕಂಕನಾಡಿಯ ಸಹಕಾರಿ ಸ್ಟೋರಿನ ಮೆನೇಜರ್ ಶ್ರೀ ಕೋಟಿಯಣ್ಣ ಆಳ್ವ ಅವರನ್ನು ಕೈದು ಮಾಡಿ ಅನೇ ಕಾರಿಕನವರಿಗೆ ರಿಮಾಂಡ್ ಕೊಡಲಾಗಿದೆ. ವಿಚಾರಣೆ ಸದ್ಯದಲ್ಲಿ ನಡೆಯಲಿದೆ.

ಬೆಳೆ ಕಟಾವಿನ ಕುರಿತು ಗ್ರಾಮಾಧಿಕಾರಿಗಳ ವರ್ತನೆ

ಕಲೆಕ್ಟರ್-ಹೆಗ್ಡೆ ಪತ್ರವ್ಯವಹಾರ

ಸ್ವಾಮಿ,

ಭತ್ತದ ಬೆಳೆ ಕಟಾವಿಗೆ ಸಂಬಂಧಿಸಿದ ಈ ಕೆಲವು ವಿಷಯಗಳನ್ನು ನಿಮ್ಮ ಗಮನಕ್ಕೆ ತರಲು ನಮಗೆ ಬಲು ವಿಷಾದವೆನಿಸುತ್ತದೆ. ಎಲ್ಲಾ ಗ್ರಾಮಗಳಲ್ಲೂ ಈಗ ಬೆಳೆ ಉತ್ಪತ್ತಿಯ ಲೆಕ್ಕಾಚಾರ ತೆಗೆಯುತ್ತಿರುವ ಗ್ರಾಮ ಶಾನುಭೋಗರು ತಮಗೆ ತಿಳಿಸದೆ ಬೆಳೆ ಕೊಯ್ಯಬಾರದೆಂದು ರೈತರಿಗೆ ತಿಳಿಸುತ್ತಿರುವಂತಿದೆ; ಬೆಳೆ ಕಡಿಮೆ ಬಂದಿತ್ತೆಂದು ದಾಖಲೆ ಮಾಡುವ ಆಶೆ ತೋರಿಸಿ ಅದಕ್ಕಾಗಿ ಅವರು ಅನ್ಯಾಯವಾಗಿ ಲಂಚ ಕೇಳುತ್ತಿರುವರೆಂದೂ ಕಾಣುತ್ತಿದೆ. ಕೆಲವು ಸ್ಥಳಗಳಲ್ಲಿ ಗೇಣಿಯನ್ನು ಒಕ್ಕಲುಗಳು ಜಮೀನ್ದಾರರಿಗೆ ಕೊಡಬಾರದೆಂದು ಅವರು ಆಜ್ಞೆ ಕೊಡುತ್ತಿರುವಂತೆಯೂ ತೋರಿಬರುತ್ತದೆ.

ಈ ರೀತಿಯ ಆಜ್ಞೆಗಳನ್ನು ಕೊಡಲು ಶಾನುಭಾಗರಿಗೆ ಅಧಿಕಾರವಿತ್ತಿರುವ ಯಾವುದಾದರೂ ಆಜ್ಞೆ ಇದೆಯೋ ಏನೆಂಬುದು ನಮಗೆ ತಿಳಿದಿರುವುದಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಕಲೆಕ್ಟರರು ಒಂದು ಪ್ರಸ್ತಾವನೆ ಹೊರಡಿಸಿದರೆ, ಶಾನುಭಾಗರು ಈಗ ಮಾಡುತ್ತಿರುವ ಕ್ಷುದ್ರ ಪ್ರಚಾರವನ್ನು ನಿಲ್ಲಿಸಿದಂತಾಗುವುದು. ಹೊಸ ಬೆಳೆ ಕಟಾವಿಗೆ ಸಂಬಂಧಿಸಿದ ಆಜ್ಞೆಗಳ ಸರಿಯಾದ ನಕಲೊಂದನ್ನು ನಮಗೆ ಕೊಡಬೇಕೆಂದು ವಿನಂತಿಮಾಡುತ್ತೇವೆ. ಆ ಆಜ್ಞೆಗಳನ್ನು ಭಾಷಾಂತರಿಸಿ, ಹೆಚ್ಚು ಸಂಖ್ಯೆಯಲ್ಲಿ ಹಂಚಿ, ಒಕ್ಕಲುಗಳಲ್ಲಿ ಯಾವ ರೀತಿಯ ತಪ್ಪು ಗ್ರಹಿಕೆಯೂ ಇಲ್ಲದಂತೆ ಮಾಡುವೆವು.

ತಮ್ಮ ಶೀಘ್ರ ಉತ್ತರವನ್ನು ಇದಿರುನೋಡುತ್ತಿರುವ.

ತಮ್ಮ

ಕೆ. ಬಿ. ಜಿನರಾಜ ಹೆಗ್ಡೆ

ಕಾರ್ಯದರ್ಶಿ, ಜಿಲ್ಲಾ ಭೂಸ್ವಾಮಿಕರ ಸಂಘ.

ಕಲೆಕ್ಟರರ ಉತ್ತರ

ಜಿಲ್ಲಾ ಕಲೆಕ್ಟರರ ಆಫೀಸು,

ಮಂಗಳೂರು, ತಾ. ೨೬-೯-'೪೪

ಶ್ರೀ। ಹೆಗ್ಡೆಯವರೇ,

ಒಕ್ಕಲುಗಳು ತಮ್ಮ ಬೆಳೆಯನ್ನು ಕಟಾವು ಮಾಡದಂತೆ ಶಾನುಭೋಗರು ತಡೆಯೊಡ್ಡುತ್ತಿರುವರೆಂದು ಗಮನಕ್ಕೆ ತರುವ ಪತ್ರ ತಲುಪಿದೆ.

ಗ್ರಾಮ ಉದ್ಯೋಗಸ್ಥರ ಈ ಅನ್ಯಾಯಕ್ಕೆ ಆಸ್ಪದ ಕೊಡುವಂತಹ ಯಾವ ಅಂಶವೂ ನನ್ನ ಆಜ್ಞೆಗಳಲ್ಲಿ ಇಲ್ಲವೆಂದು ನಾನು ಭರವಸೆಕೊಡುತ್ತೇನೆ. ಬದಲಿಗೆ ಬೆಳೆಯನ್ನು ಕಟಾವುಮಾಡಿ ಮಾಮೂಲ ಪದ್ಧತಿಯಂತೆ ಗೇಣಿಯನ್ನು ಜಮೀನ್ದಾರರಿಗೆ ಕೊಡಲು ಒಕ್ಕಲುಗಳಿಗೆ ಬಿಡಬೇಕೆಂದೂ ಜಮೀನ್ದಾರ ಮತ್ತು ಒಕ್ಕಲುಗಳೊಳಗಿನ ಸಾಮಾನ್ಯ ಸಂಬಂಧಕ್ಕೆ ತಡೆ ತರುವ ಯಾವ ಕೆಲಸವನ್ನೂ ಮಾಡಬಾರದೆಂದೂ ನಾವು ನಿರ್ದಿಷ್ಟ ಆಜ್ಞೆಗಳನ್ನು ಕೊಟ್ಟಿರುವೆವು. ಆಹಾರ ಸಮಿತಿಯ ಸಭೆಯಲ್ಲಿ ಇವನ್ನು ನಾನು ಓದಿ ಹೇಳಿದ್ದೇನೆ; ಮತ್ತೂ ಹೆಚ್ಚು ಸಲ ಫುಡ್ ಕೌನ್ಸಿಲಿಗೂ ನಿಮಗೂ ನಾನು ಸ್ಪಷ್ಟವಾಗಿ ತಿಳಿಸಿದ್ದೇನೆ. ಈ ವಿಷಯದಲ್ಲಿ ಇನ್ನೂ ನಿಮಗೆ ಸಂಶಯವಿರುವುದನ್ನು ಕಂಡು ಆಶ್ಚರ್ಯವೆನಿಸುತ್ತಿದೆ. ಗ್ರಾಮ ಉದ್ಯೋಗಸ್ಥರ ಅಂತಹ ಯಾವ ಪ್ರಚಾರ—ತಂಟೆತಕರಾರು ಇದ್ದರೂ ದಯವಿಟ್ಟು ಖಂಡಿಸಿರಿ. ತಮ್ಮ ಸ್ವಾಭಿಮಾನ ಮತ್ತು ಸ್ವಾತಂತ್ರ್ಯವನ್ನು ಸ್ಪಷ್ಟಪಡಿಸಿ, ಗ್ರಾಮ ಉದ್ಯೋಗಸ್ಥರೂ ಕಿರಿಯ ಅಧಿಕಾರಿಗಳೂ ಅನ್ಯಾಯವಾಗಿ ವರ್ತಿಸಿ ರೈತರನ್ನು ಕಷ್ಟಕ್ಕೀಡುಮಾಡದಂತೆ ನೋಡುವುದು ಭೂಮಾಲಿಕರಿಗೂ ಮುಖ್ಯ ಜನರಿಗೂ ಸೇರಿದುದು. ತಮ್ಮ ಕೈಕೆಳಗಿನ ನೌಕರರಲ್ಲಿರಬಹುದಾದ ಇಂತಹ ಮನೋವೃತ್ತಿಯನ್ನು ನಿರ್ಮೂಲ ಮಾಡುವ ಕೆಲಸ ಕಲೆಕ್ಟರರೊಬ್ಬರಿಂದಲೇ ಸಾಧ್ಯವಾದೀತೆಂದು ನೀವು ಭಾವಿಸಬಾರದು. ಪ್ರತಿಯೊಬ್ಬನೂ ಜತೆಯಾಗಿ ಮಾಡಬೇಕಾದ ಯತ್ನ ಅದು. ಇದನ್ನು ಪುನಃ ನಿಮ್ಮೊಡನೆ ಒತ್ತಿ ಹೇಳುವುದು ಅಗತ್ಯವೆಂದು ನನಗೆ ಕಾಣುತ್ತದೆ.

ಕೃಷ್ಣರಾವ್ ಕನಪಿ ನಡೆಸಿ ಒಡನೆಯೇ ವರದಿ ಕೊಡುವುದಕ್ಕಾಗಿ ನಿಮ್ಮ ಪತ್ರದ ಪ್ರತಿಗಳನ್ನು ಎಲ್ಲಾ ರೆವಿನ್ಯೂ ಡಿವಿಜನಲ್ ಆಫೀಸರರಿಗೆ ಕಳುಹಿರುವೆನು. ಯಾವ ಗ್ರಾಮ ಉದ್ಯೋಗಸ್ಥನೂ ತಪ್ಪಿ ವರ್ತಿಸದಂತೆ ನೋಡಬೇಕೆಂದು ಎಲ್ಲಾ ತಹಶೀಲ್ದಾರರಿಗೂ ಡೆಪ್ಯುಟಿ ತಹಶೀಲ್ದಾರರಿಗೂ ತಿಳಿಸಿದ್ದೇನೆ. ನಿರ್ದಿಷ್ಟವಾದ ಇಂತಹ ದೂರುಗಳನ್ನು ತರುವಿರಾದರೆ ನಾನು ಒಡನೆಯೇ ಬಲವಾದ ಕಾರ್ಯಕ್ರಮ ಕೈಕೊಳ್ಳುವೆನು.

ನಿಮ್ಮ,

ಪಿ. ರಾಮದಾಸ.

ಕಟ್ಟಿಗೆಯ ಕುರಿತು ಕಲೆಕ್ಟರರ ಪ್ರಕಟಣೆ

ಕಟ್ಟಿಗೆಯ ಕ್ರಮವನ್ನು ನಿಯಂತ್ರಿಸಿದುದರಿಂದ, ಕಟ್ಟಿಗೆ ವ್ಯಾಪಾರಿಗಳು ಕಟ್ಟಿಗೆ ಹೊರಗಿನಿಂದ ತರಿಸದೆ, ತೊಂದರೆಗಳ ಕಾರಣರಾಗಿರುವರು. ಈ ಕೊರತೆಯಿಂದ ಸಾರ್ವಜನಿಕರನ್ನು ಪಾರುಮಾಡುವ ಉದ್ದೇಶದಿಂದ, ನಗರದಲ್ಲಿರುವ ಎಲ್ಲಾ ಕಟ್ಟಿಗೆಯನ್ನು ರಿಕ್ವಿಜಿಶನ್ ಮಾಡಿ ಜನ ಒಂದಕ್ಕೆ ಎರಡು ಮಣ ಕಟ್ಟಿಗೆ ಪ್ರಕಾರ ಮಾರಾಟವಾಗುವ ಏರ್ಪಾಡುಗಳು ಮಾಡಲಾಗಿದ್ದುವು. ಮಳೆಗಾಲವಾದುದರಿಂದ ಕೆಲವು ಶ್ರೀಮಂತರು ಬಂಡಿಗಟ್ಲೆಯಲ್ಲಿ ಕಟ್ಟಿಗೆಯನ್ನು ಪಡಕೊಳ್ಳುವರೆ ಪರ್ಮಿಟುಗಳು ಕೊಡಲಾಗಿದ್ದುವು. ಈಗ ಮಳೆಗಾಲವು ಕಳೆದುಹೋದುದರಿಂದ, ಜಮೀನುಳ್ಳವರು, ಇತ್ಯಾದಿ ಅನುಕೂಲ ಶ್ರೀಮಂತರು ತಮಗೆ ಬೇಕಾದ ಕಟ್ಟಿಗೆ ಹೊರಗಿನಿಂದ ಒದಗಿಸಿಕೊಳ್ಳುವುದರಲ್ಲಿ ಉತ್ತಮವಿದೆ. ಇದರಿಂದ ಬಡವರಿಗೆ ತುಂಬಾ ಉಪಕಾರವಿದೆ.

ಕಾರ್ಕಳ

ಶ್ರೀ। ಭುಜಬಲಿ ಬ್ರಹ್ಮಚರ್ಯ ಆಶ್ರಮ. ಜೈನ ಹುಡುಗರಿಗಾಗಿ, ಬಿರಾರಿನ ಕಾರಂಜದ ಶ್ರೀ। ಮಹಾವೀರ ಬ್ರಹ್ಮಚರ್ಯ ಆಶ್ರಮದ ಶಾಖೆಯಾಗಿ ಕಾರ್ಕಳದ ಶ್ರೀ। ಜೈನ ಜೀರ್ಣೋದ್ಧಾರಕ ಸಂಘ ಮತ್ತು ಶ್ರೀ। ಮಂಜಪ್ಪ ಶೆಟ್ಟಿ ಅವರ ಟ್ರಸ್ಟುಗಳ ಆಶ್ರಯದಲ್ಲಿ ಶಾಲೆಯೊಂದು (ವಿದ್ಯಾರ್ಥಿ ವಸತಿಯೂ ಸೇರಿ) ತಾ. ೨೭ರಂದು ಕಾರ್ಕಳದಲ್ಲಿ ಶ್ರವಣ ಬೆಳಗುಳದ ಸ್ವಸ್ತಿ ಶ್ರೀ ಚಾರುಕೀರ್ತಿ ಸ್ವಾಮಿಯರ್ ಅವರಿಂದ ತೆರೆಯಲ್ಪಟ್ಟಿತು. ಶ್ರೀ। ಡಿ. ಮಂಜಯ್ಯ ಹೆಗ್ಡೆ ಎಂ. ಎಲ್. ಸಿ., ಅವರು ಅಧ್ಯಕ್ಷತೆ ವಹಿಸಿದ್ದರು.

ಜೀರ್ಣೋದ್ಧಾರಕ ಸಂಘದ ಅಧ್ಯಕ್ಷ ಶ್ರೀ ಜಿನರಾಜ ಹೆಗ್ಡೆ ಎಂ. ಎಲ್. ಎ. (ಕೇಂದ್ರ) ಅವರು ತಮ್ಮ ಸ್ವಾಗತ ಭಾಷಣದಲ್ಲಿ ಕಾರ್ಕಳದ ಇತಿಹಾಸವನ್ನು ಚಿತ್ರಿಸಿ ಈ ಜಿಲ್ಲೆಯ ಜೈನ ವಿದ್ಯಾರ್ಥಿಗಳಿಗೆ ಇಂತಹ ಶಾಲೆ ಮತ್ತು ವಸತಿ ಅಗತ್ಯವೆಂದರು. ಶ್ರೀ। ಮಂಜಯ್ಯ ಹೆಗ್ಡೆ ಅವರು ಈ ಸಂಸ್ಥೆಯ ಉದ್ದೇಶಗಳನ್ನೊಪ್ಪಿ, ವೆಚ್ಚದ ಮೂಲ ಧನಕ್ಕಾಗಿ ರೂ. ೧,೦೦೦ ಸಂಭಾವನೆ ಕೊಡುವುದಾಗಿ ಹೇಳಿದರು. ಶ್ರೀಯುತರುಗಳಾದ ಲಿಂಗಪ್ಪ ಮುದ್ಯ, ಕುಮಾರಯ್ಯ ಪಡಿವಾಳ, ಶಾಂತಿರಾಜ ಬಲ್ಲಾಳ ಮತ್ತು ಪೂವಣಿ ಹೆಗ್ಡೆ ಇವರೂ ರೂ. ೧೨೫೦ದಂತೆ ಕೊಡಲೊಪ್ಪಿದರು. ಇತರ ರೀತಿಯ ಸಂಭಾವನೆಗಳೂ ಸಿಗುವ ಸಾಧ್ಯತೆ ಇಂತು.

ಶ್ರೀ ಕುಮಾರಯ್ಯ ಪಡಿವಾಳರ ತೈಲಚಿತ್ರವನ್ನು ಮೂಡಬಿದ್ರೆಯ ಶ್ರೀ। ಚಾರುಕೀರ್ತಿ ಭಟ್ಟರೂ, ಶ್ರೀ। ಕೆ. ಪಿ. ಶೇಷಗಿರಿ ಪ್ರಭುಗಳು ಶ್ರೀ। ನೇಮಿರಾಜ ಪಡಿವಾಳರ ತೈಲಚಿತ್ರವನ್ನೂ ಅನಾವರಣಮಾಡಿದರು.

ಆ ಸಂದರ್ಭದಲ್ಲಿ ಆಶ್ರಮಕ್ಕೆ ಯಶಸ್ಸನ್ನು ಆಶಿಸಿಕೊಂಡು ಶ್ರೀಯುತರು ಕಾರ್ಕಳದ ಲಲಿತ ಕೀರ್ತಿ ಭಟ್ಟಾರಕ, ಮೈಸೂರು ಸಂಸ್ಥಾನದ ಹುಂಚಾ ಮಠದ ಶ್ರೀ। ಅರ್ಹದಾಸಜಿ, ಸಾಹಿತ್ಯ ಪರಿಷತ್ತಿನ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಕೆ. ವಿ. ರಾಘವಾಚಾರ್, ಮೈಸೂರು ದರ್ಬಾರಿನ ಮಹಾ ವಿದ್ವಾನ್ ಸುಬ್ಬಯ್ಯ ಶಾಸ್ತ್ರಿ ಮತ್ತು ಆಸ್ಥಾನ ವಿದ್ವಾನ್ ಶಿಶುಪಾಲ ಶಾಸ್ತ್ರಿ, ಮಂಜೇಶ್ವರ ಗೋವಿಂದ ಪೈ, ಎಂ. ಶಿವರಾವ್, ಮುಳಿಯ ತಿಮ್ಮಪ್ಪಯ್ಯ ಮೊದಲಾದವರು ಭಾಷಣಗಳನ್ನಿತ್ತರು.

ಆಶ್ರಮದ ಶುಭವನ್ನು ಕೋರಿಕೊಂಡು ಅಜ್ಮೀರಿನ ಸರ್ ಶೇಠ್ ಭಾಗ್‌ಚಂದ್ ಸೋಣಿ, ಕಾರಂಜದ ಶ್ರೀ। ಸಮಂತ ಭದ್ರಜಿ ಮೊದಲಾದವರಿಂದ ಸಂದೇಶಗಳು ಬಂದಿದ್ದುವು.

ಲೋಕಪ್ರಸಿದ್ಧವಾದ ಚರ್ಮರೋಗ ನಿವಾರಕ

ಜಾಂಬಕ್ ತುರಿಕಜ್ಜಿ ಗಾಯ ಬಾವುಗಳನ್ನು ಗುಣಪಡಿಸುವುದು.

ಚರ್ಮದ ರೋಗಗಳಿಗೆ ಮತ್ತು ಗಾಯಗಳಿಗೆ ಇಡೀ ಲೋಕದಲ್ಲೇ ಪ್ರಖ್ಯಾತವಾಗಿರುವ ಔಷಧವೆಂದರೆ ಜಾಂಬಕ್. ಗಾಯವಾದರೆ ಇಲ್ಲವೇ ಕಜ್ಜಿಯಾದರೆ ಇದನ್ನು ಅದರಮೇಲೆ ಮೆಲ್ಲಗೆ ತಾಗಿಸಿರಿ; ಅದು ಕೂಡಲೇ ಸುಲಭದಲ್ಲಿ ಗುಣವಾಗುವುದು. ಜಾಂಬಕಿನಲ್ಲಿರುವ ಅಮೂಲ್ಯ ವನೌಷಧಿ ಸತ್ವವು ಚರ್ಮದ ನರಗಳಲ್ಲಿ ಕೂಡಲೇ ಹೀರಿಕೊಂಡು, ಬೇನೆಯನ್ನು ಕಡಿಮೆಮಾಡುವುದು. ಬಾವನ್ನು ಇಳಿಸುವುದು, ಒಣಗುವಂತೆ ಮಾಡಿ ಗುಣಕೊಡುವುದು. ಕಳೆಯುಳಿಯದಂತೆ ಜಾಂಬಕ್ ಗುಣಮಾಡುತ್ತದೆ. ಜಾಂಬಕ್ ಲೇಪಕ್ಕೆ ಒಂದು ರೂಪಾಯಿ ಇಲ್ಲವೆ ರೂ. ೨-೪-೦ ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ಹಿಂದೂ ಮದುವೆ ಕಾನೂನು

ವಿವಾಹ ಪದ್ಧತಿಯಲ್ಲಿ ಸುಧಾರಣೆ

ವರದಕ್ಷಿಣೆ ಕ್ರಮ ಕುಗ್ಗುವುದು

[illegible] ಸಿದ ಹಿಂದೂ ನ್ಯಾಯಸ [illegible] ಅಥವಾ ಹಿಂದೂ ಕೋಡ್ [illegible] ಹಿಂದೂ ಜನತೆಯ ಅವಗಾಹ [illegible] ಗೂ ಒಂದು ವರದಿಯನ್ನು [illegible] ರುವರು. ಹಿಂದೂ ಧರ್ಮ ಸಾಂಪ್ರದಾಯ ಪ್ರಕಾರ ಹಕ್ಕು, ವಿವಾಹ, [illegible] ಅಶನಾರ್ತ, ದತ್ತ ಕೆಯು [illegible] ಇವೇ ಮುಖ್ಯ ವಿಷಯಗ [illegible] ಸಂಬಂಧಪಟ್ಟ ಕಾನೂನುಗಳನ್ನು ಹಿಂದುಗಳೆಲ್ಲರಿಗೂ ಒಪ್ಪಿಗೆಯಾಗುವಂತೆ ತಯಾರಿಸಿರುವರು. ಇದು ಕೇಂದ್ರ ಶಾಸನ ಸಭೆಯಲ್ಲಿ ಮಂಜೂರಾತಿ ಪಡೆದರೆ ಬ್ರಿಟಿಷ್ ಇಂಡಿಯದಲ್ಲಿ ವಾಸಿಸುವ ಹಿಂದೂಗಳೆಲ್ಲರಿಗೂ ಅನ್ವಯಿಸುವುದು.

"ಹಿಂದು"ವೆಂದರೆ ಹಿಂದೂ, ಬೌಧ, ಸಿಕ್, ಮತ್ತು ಜೈನ ಮತ ತತ್ವಗಳನ್ನು ಅನುಸರಿಸುವವರು ಎಂದು ಅರ್ಥವಾಗುತ್ತದೆ. ಅಲ್ಲದೆ ಇದುತನಕ ಹಿಂದೂ ಸಾಂಪ್ರದಾಯ ಶಾಸ್ತ್ರಕ್ಕನುಗುಣವಾಗಿ ನಡೆದು ಬಂದವರಿಗೂ ಇಧು ತಗಲುತ್ತದೆ.

ಮದುವೆ-ವಿಚ್ಛೇದನೆ

ಹಿಂದೊಮ್ಮೆ ಎಸೆಂಬ್ಲಿಯಲ್ಲಿ ತರಲಾದ "ಮದುವೆಯ ಬಿಲ್"ನಲ್ಲಿ ಅನೇಕ ಕುಂದುಕೊರತೆಗಳಿರುವುದರಿಂದ ಅವುಗಳಲ್ಲಿ ಮೇಲ್ಕಂಡ ಸಮಿತಿಯವರು ನಿಷ್ಪಕ್ಷಪಾತವಾಗಿ ತಿದ್ದಿರುವರು. ಒಂದು ಮದುವೆಯು ಕಾನೂನುಬದ್ಧವೆನಿಸಬೇಕಾದರೆ ಈ ಕೆಳಗಿನ ಶರ್ತಗಳನ್ನು ಪೂರೈಸಬೇಕೆಂದು ಸಮಿತಿಯ ಅಭಿಪ್ರಾಯವಿದೆ –

೧. ಮದುವೆಸಮಯದಲ್ಲಿ ವಧುವಿಗೆ ಇನ್ನೊಬ್ಬ ಗಂಡನಾಗಲೀ, ವರನಿಗೆ ಇನ್ನೊಬ್ಬ ಹೆಂಡತಿಯಾಗಲೀ ಇರಬಾರದು.

೨. ವಧುವಾಗಲೀ ವರನಾಗಲೀ ಹುಚ್ಚನಾಗಲೀ, ಬುದ್ಧಿಭ್ರಮೆಯವರಾಗಲೀ ಇರಬಹುದು.

೩. ವಧೂವರರ ಸಂಬಂಧವು ಹಿಂದೂ ಸಾಂಪ್ರದಾಯನೀತಿಯ ಮೇರೆಯನ್ನು ತಪ್ಪಿರಬಾರದು (ಉದಾ ಮಾವನು ತನ್ನ ಸೊಸೆಯನ್ನು ಮದುವೆಯಾಗಬಾರದು ಹೀಗೆ)

೪ ವಧೂವರರು ಒಂದೇ ಪಿಂಡದವರಿರಬಾರದು ವಿವಾಹವು ಶಾಸ್ತ್ರ ಮತ್ತು ಕಟ್ಟಳೆ ಅಸಮ್ಮತವಾಗುವ ಯಾವ ಸಂಬಂಧವೂ ಅವರೊಳಗಿರಬಾರದು

೫ ವಧೂವು ಹದಿನಾರು ವರ್ಷಕ್ಕೆ ಕೆಳಗಿನವಳಿದ್ದರೆ ಅವಳ ರಕ್ಷಕನ ಸಮ್ಮತಿಯನ್ನು ಪಡೆಯಬೇಕು

ಮೇಲಿನ ಶರ್ತಗಳು ಬೌಧರಿಗೂ, ಬ್ರಹ್ಮಸಮಾಜದವರಿಗೂ ಒಪ್ಪಿಗೆಯಾಗುವಂತವುಗಳೆಂದು ಸಮಿತಿಯವರ ಅಭಿಪ್ರಾಯ ಹಿಂದೂಗಳೆನಿಸಿದವರಲ್ಲಿ ಬೇರೆ ಬೇರೆ ಪ್ರಾಂತ್ಯದಲ್ಲಿ ಬೇರೆ ಬೇರೆ ಕ್ರಮ ಕಟ್ಟಳೆಗಳು ಆಚಾರದಲ್ಲಿರುವುದರಿಂದ ವಿವಾಹ ಕಾನೂನುಗಳ ಶರ್ತಗಳನ್ನು ತಯಾರಿಸುವಾಗ ಎಲ್ಲರಿಗೂ ಸರ್ವಸಾಮಾನ್ಯವಾಗಿ ಅನ್ವಯಿಸುವಂತವುಗಳನ್ನು ತಯಾರಿಸಬೇಕಾಗುವುದು. ಇತರ ವಿಷಯಗಳಲ್ಲಿ ಉಭಯ ಪಕ್ಷದವರು ತಮ್ಮ ಸ್ವಂತ ಇಚ್ಛೆಯ ಪದ್ಧತಿಗಳನ್ನು ಅನುಸರಿಸಬಹುದು.

ಪುರಾತನ ಶಾಸ್ತ್ರ, ಸ್ಮೃತಿಗಳಲ್ಲಿ ಉಲ್ಲೇಖವಿದ್ದ ವಿವಾಹ ಸಂಬಂಧವು ಅಕ್ರಮವೆಂದೆನಿಸುವುದು. ಉದಾಹರಣೆಗಾಗಿ ಅಣ್ಣ ತಮ್ಮಂದಿರ ಮಕ್ಕಳೊಳಗಿನ ವಿವಾಹವು ಅಕ್ರಮವೆಂದೆನಿಸುವುದು. ಮಾವನ ಮತ್ತು ಸೊಸೆಯ ವಿವಾಹವು ಹಾಗೆಯೇ

ಆಗುವ ವಿವಾಹವು ನ್ಯಾಯಬದ್ಧವೂ ಕ್ರಮಬದ್ಧವೂ ಎಂದು ಸಿದ್ಧಗೊಳಿಸಬೇಕಾದ ಇಚ್ಛೆ ಇದ್ದವರು ವಿವಾಹವನ್ನು ರಿಜಿಸ್ಟರ್ ಮಾಡಿಕೊಳ್ಳಬಹುದು. ರಿಜಿಸ್ಟರ್ ಮಾಡಬೇಕೆಂಬ ಒತ್ತಾಯವಿಲ್ಲ.

ಅಂತರಜಾತೀಯ ವಿವಾಹಗಳು ರಿಜಿಸ್ಟರ್ ಆಗಬೇಕು ಸಾಂಪ್ರದಾಯಿಕ, ಅಂದರೆ ಸ್ವಜಾತಿ ವಿವಾಹವು ಇಚ್ಛೆಪಟ್ಟರೆ ಮಾತ್ರ ರಿಜಿಸ್ಟರ್ ಮಾಡಬಹುದು. ಅಂತರ್ ಜಾತೀಯ ವಿವಾಹದ ಸಂಬಂಧ ಈಗಿರುವ ಕಾನೂನನ್ನು ಸಮಿತಿಯವರು ಬದಲಾಯಿಸಲಿಚ್ಛಿಸುವುದಿಲ್ಲ.

ಪತಿಪತ್ನಿಯರ ಧರ್ಮ

ತನ್ನ ಸಂಗಡ ವಾಸಿಸುವ ತನ್ನ ಪತ್ನಿಯನ್ನು ಗಂಡನಾದವನು ಸಾಕಬೇಕು. ಗಂಡನು ಭಯಂಕರ ವ್ಯಾಧಿಯಿಂದ ನರಳುವವನೂ, ಮನೆಯಲ್ಲಿ ಬೇರೊಬ್ಬಳ ಅಕ್ರಮ ಸಹವಾಸವನ್ನಿಟ್ಟುಕೊಂಡವನೂ, ಮಹಾ ಕ್ರೂರಿಯೂ, ಹೆಂಡತಿಯನ್ನು ಬಿಟ್ಟು ಹೋದವನೂ, ಇಲ್ಲವೆ ಹಿಂದೂ ಮತವನ್ನು ಬಿಟ್ಟು ಬೇರೆ ಮತಕ್ಕೆ ಹೋದವನೂ, ಇಲ್ಲವೇ ಎಲ್ಲರೂ ಅನ್ಯಾಯವೆಂದು ಒಪ್ಪುವ ಕೃತ್ಯಗಳನ್ನು ಮಾಡುವವನೂ ಆಗಿದ್ದರೆ ಅಂತವನ ಹೆಂಡತಿಯು ಗಂಡನಿಂದ ತನಗೆ ಸಿಗುವ ಹಕ್ಕನ್ನು ಕಳಕೊಳ್ಳದೇನೆ ಬೇರೆಯಾಗಿ ವಾಸಿಸಬಹುದು

ಅಳಿಯಸಂತಾನ ಕಟ್ಟು

ಮರುಮಕ್ಕತಾಯಂ ಇಲ್ಲವೆ ಅಳಿಯ ಸಂತಾನ ಕಟ್ಟಳೆಯವರೂ ಈ ಸಮಿತಿಯವರು ತಯಾರಿಸಿದ ಕಾನೂನಿನೊಳಗೆ ಬರುವರು ಆಸ್ತಿ ಹಕ್ಕಿನಲ್ಲಿಯೂ ಅವರಿಗೆ ತಕ್ಕ ಏರ್ಪಾಡುಗಳನ್ನು ಸೂಚಿಸಲಾಗಿದೆ

ವರದಕ್ಷಿಣೆ

ವರದಕ್ಷಿಣೆ ಪದತ್ತಿಯನ್ನು ನಿರುತ್ಸಾಹಗೊಳಿಸಲು ಸಮಿತಿಯವರು ಹೊಸ ಸೂಚನೆಯನ್ನು ಮಾಡಿದ್ದಾರೆ. ವರದಕ್ಷಿಣೆಯನ್ನು ಇಷ್ಟಪಟ್ಟವರು ಯಾರಾದರೂ ಕೊಡಲೂಬಹುದು ಪಡೆಯಲೂಬಹುದು ಆದರೆ ಅದಕ್ಕೆ ಒಂದೇ ಒಂದು ಶರ್ತವಿದೆ–"ವರದಕ್ಷಿಣೆಯನ್ನು ಪಡೆದ ವರನ ಸಂಬಂಧಿಕರು ಆ ಹಣವನ್ನು ವಧುವು ಪ್ರಾಯಕ್ಕೆ ಬಂದಕೂಡಲೇ ಅವಳು ಕೇಳಿದಾಗ ಕೊಡಲು ಸಿದ್ಧರಿರಬೇಕು" ಅವಳು ಅಕಸ್ಮಾತ್ ಮರಣಪಟ್ಟರೆ ಅವಳ ಹಕ್ಕಿನ ಭಾಧ್ಯಸ್ಥರಿಗೆ ಅದು ಕೊಡಲ್ಪಡಬೇಕು ಇದರಿಂದ ವರನ ಕಡೆಯವರು ವರದಕ್ಷಿಣೆಯಿಂದ ಹೆಚ್ಚಿನ ಲಾಭ ತೆಗೆದುಕೊಳ್ಳಲಾಗುವುದಿಲ್ಲ. ವಧೂವು ತನ್ನ ತಂದೆಯು ವರದಕ್ಷಿಣೆಯಾಗಿ ಕೊಟ್ಟ ಹಣವನ್ನು ಗಂಡನ ಕಡೆಯಿಂದ ಹಿಂತಿರುಗಿ ಪಡೆದು ಇಚ್ಛೆಪಟ್ಟಲ್ಲಿ ತನ್ನ ತಂದೆಗೆ ಮರುಪಾವತಿ ಮಾಡಬಹುದು, ಇಲ್ಲವೇ ಅವಳೇ ಇಟ್ಟುಕೊಳ್ಳಬಹುದು

ಈ ಕೆಳಗಿನ ಸಂದರ್ಭಗಳಲ್ಲಿ ಮದುವೆಯು ತನ್ನಷ್ಟಕ್ಕೆ ರದ್ದೆಸಿಸುವುದು – (೧) ಮದುವೆಯ ಕಾಲದಲ್ಲಿ ವಧುವಿನಲ್ಲಾಗಲೀ ವರನಲ್ಲಾಗಲೀ ಲೈಂಗಿಕ ಕೊರತೆ ಲೋಪ ದೋಷಗಳಿದ್ದರೆ, (೨) ಇಬ್ಬರೂ ಅಕ್ರಮವೆಂದೆನಿಸುವ ಸಮಾಜ ಸಂಬಂಧದವರಿದ್ದರೆ, (ಉದಾ: ಮಾವನು ಸೊಸೆಯನ್ನು ಮದುವೆಯಾದಲ್ಲಿ) (೩) ಮದುವೆಕಾಲದಲ್ಲಿ ಯಾರೊಬ್ಬರಾಗಲೀ ಹುಚ್ಚು ಅಥವಾ ಕೊಲೆಪಾತಕಿಗಳಾಗಿದ್ದಲ್ಲಿ, (೪) ಯಾರೊಬ್ಬರಿಗೆ ಬೇರೆ ಹೆಂಡತಿ ಅಥವಾ ಗಂಡ ಇದ್ದಲ್ಲಿ–ಈ ಸಂದರ್ಭಗಳಲ್ಲಿ ಮದುವೆ ತನ್ನಷ್ಟಕ್ಕೆ ಲಗ್ನವಾದ ಮೇಲೂ ರದ್ದಾಗುವುದು.

ಮದುವೆ ವಿಚ್ಛೇದನಗೊಳಿಸಲಿಚ್ಛಿಸುವ ಪಕ್ಷದವರು ಆ ಕುರಿತು ಜಿಲ್ಲಾ ಕೋರ್ಟಿನಲ್ಲಾಗಲೀ, ಹ್ಯಾ ಕೋರ್ಟಿನಲ್ಲಾಗಲೀ ದಾವೆ ಮಾಡಬೇಕು. ಜಿಲ್ಲಾ ಕೋರ್ಟಿನ ತೀರ್ಮಾನವನ್ನು ಹ್ಯಾಕೋರ್ಟಿನಲ್ಲಿ ಸಮ್ಮತಿ ಪಡೆಯಬೇಕು/ ವಿಚ್ಛೇಧನಕ್ಕೆ ಈ ಕೆಳಗಿನ ಕಾರಣಗಳು ತೃಪ್ತಿಕರದಿರಬೇಕು.

(೧) ಗಂಡ ಇಲ್ಲವೆ ಹೆಂಡತಿಯು ಏಳು ವರ್ಷಗಳಿಂದ ಗುಣಪಡಿಸಲಾಗದ ಹುಚ್ಚು ಇಲ್ಲವೆ ಮನೋವಿಕಾರದಿಂದ ನರಳುತಿದ್ದರೆ, (೨) ಇಬ್ಬರಲ್ಲಿ ಯಾರಾದರೂ ಗುಣಪಡಿಸಲಾಗದ ಭಯಂಕರ ರೋಗದಿಂದ ನರಳುತಿದ್ದರೆ, (ಅದು ಒಬ್ಬರಿಂದೊಬ್ಬರಿಗೆ ಬಂದದ್ದಿರಬಾರದು)

(೩) ಏಳು ವರ್ಷಗಳಿಂದ ಗಂಡನು ಹೆಂಡತಿಯನ್ನು, ಇಲ್ಲವೆ ಹೆಂಡತಿ ಗಂಡನನ್ನು ಬಿಟ್ಟು ಇದ್ದರೆ

(೪) ಇಬ್ಬರಲ್ಲಿ ಯಾರದರೂ ಮತಾಂತರ ಹೊಂದಿ ಹಿಂದುವೆನಿಸಿಕೊಳ್ಳದಿದ್ದರೆ

(೫) ಇಬ್ಬರಲ್ಲಿ ಯಾರಾದರೂ ವ್ಯಭಿಚಾರ ರೋಗದಿಂದ ೭ ವರ್ಷಕ್ಕೂ ಮೇಲ್ಪಟ್ಟು ನರಳುತಿದ್ದರೆ

(೬) ಗಂಡನಾದವನು ಇನ್ನೊಬ್ಬಳನ್ನು ಅಕ್ರಮ ಸಹವಾಸಕ್ಕಾಗಿ ಮನೆಯಲ್ಲಿಟ್ಟುಕೊಂಡರೆ

(೭) ಹೆಂಡತಿಯಾಧವಳು ಇನ್ನೊಬ್ಬನೊಡನೆಯಲ್ಲಿ ಅಕ್ರಮ ಸಹವಾಸದಿಂದಿದ್ದರೆ, ಇಲ್ಲದೆ ವ್ಯಭಿಚಾರಿಣಿಯಾಗಿ ಜೀವನ [illegible] – ಈ ಸಂದರ್ಭಗಳಲ್ಲಿ ಮಾತ್ರ ವಿಚ್ಛೇದನವು ನ್ಯಾಯವೆನಿಸುವದು.

ಉತ್ತರಾಧಿಕಾರದ ಹಕ್ಕು

ಸ್ವಾರ್ಜಿತ ಆಸ್ತಿ, ಸೊತ್ತು, ಸಂಪತ್ತಿನ ಉತ್ತಾರಾಧಿಕಾರವು ಈ ಕೆಳಗಿನವರಿಗಿರುತ್ತದೆ.–ವಿಧವೆಯಾದ ಹೆಂಡತಿ, ಮಗ, ಮಗಳು, ಮೊದಲೇ ಸತ್ತ ಹಿರಿಯ ಮಗನ ಮಗ, ಇವನು ಸತ್ತಿದ್ದರೆ ಇವನ ಮಗ. ಹೆತ್ತವರನ್ನೂ ಸೊಸೆಯನ್ನೂ ಉತ್ತರಾಧಿಕಾರತ್ವದ ಭಾಧ್ಯತೆಯಿಂದ ದೂರವಿರಿಸಲಾಗಿದೆ. ಆದರೆ ಅವರಿಗೆ ಪ್ರತ್ಯೇಕ ಅಶನಾರ್ತದ ಏರ್ಪಾಡನ್ನು ಸಮಿತಿಯು ಸೂಚಿಸಿರುತ್ತದೆ.

ಅಶನಾರ್ತವು ಮೃತನ ಈ ಕೆಳಗಿನ ಸಂಬಂಧಿಕರಿಗೆ ದೊರೆಯುವುದು:–ತಂದೆ ತಾಯಿ, ಪ್ರಾಯಕ್ಕೆ ಬಾರದ ಮಗ, ಮೊಮ್ಮಗ (ಮೊದಲೇ ಸತ್ತ ಮಗನ ಮಗ,) ಮೊಮ್ಮಗನ–ಮಗ (ಮೊದಲೇ ಸತ್ತ ಮಗನ ಮಗನ ಮಗ) ಮದುವೆಯಾಗದ ಮಗಳು, ವಿಧವೆಯಾದ ಮಗಳು, ಇಲ್ಲವೆ ಸೊಸೆ (ಇವರಿಗೆ ಬೇರೆ ಅಶನಾರ್ತ ಸಿಗದಿದ್ದಲ್ಲಿ) ಮರಣ ಪರ್ಯಂತ ವಿವಾಹವಾಗದೆ ಮೃತನು ಇಟ್ಟುಕೊಂಡಿದ್ದ ಯಾರೊಬ್ಬಳಿಗೂ ಅಶಾನಾರ್ತ ಪಡೆಯುವ ಹಕ್ಕಿದೆ. ಮಾತ್ರವಲ್ಲ ಇವಳಿಂದ ಹುಟ್ಟಿದ್ದ ಮೈನರ್ ಮಗನಿಗೂ ಮಗಳಿಗೂ ಅಶಾನಾರ್ತವು ಸಿಗುವುದು. ಈ ಅಶಾನಾರ್ತವನ್ನು ಅವರವರ ಪರಿಸ್ಥಿತಿಗನುಸಾರವಾಗಿ ಪರ್ಯಾಲೋಚಿಸಿ ಕೊಡಲ್ಪಡುವುದು

ಅಟ್ಲಾಂಟಿಕ್ ಸಾಗರದಲ್ಲಿ ಕೆಲವು ಸಲ ೧ ಸಾವಿರ ಮೈಲು ಉದ್ದ, ೪೧೦ ಮೈಲು ಅಗಲದ ವರೆಗೂ ಮಂಜು ಮುಸುಕಿರುವುದನ್ನು ಕಾಣಬಹುದಂತೆ.

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ

ಯುದ್ಧವು ಇನ್ನು ಬಹುಕಾಲ ಮುಂದರಿಯಲಿಕ್ಕಿಲ್ಲ ಶಾಂತಿಕಾಲಕ್ಕಾಗಿ ನೀವು ಸಿದ್ಧರಾಗಿರುವಿರಾ?

ಶಾಂತಿ ಸಮಾರಂಭದಲ್ಲಿ ಅಕಲ್ಪಿತ ಘಟನೆಗಳು ಸಂಭವಿಸಬಹುದು ಧಾರಣೆಗಳು ಇಳಿದು ಉದ್ಯೋಗ ವ್ಯಾಪಾರ ದಂಗೆಗಳಿಗೆ ಧಕ್ಕೆ ತಗಲಬಹುದು ನೀವು ಇವುಗಳಿಗಾಗಿ ನಿಮ್ಮ ಪೂರ್ವ ಸಿದ್ಧತೆಯನ್ನೇರ್ಪಡಿಸಿರುವಿರಾ? ಸ್ಥಿರವಾದ ಬ್ಯಾಂಕ್ ಖಾತೆಯಿಂದ ನೀವು ನಿಮ್ಮ ಸ್ಥಿತಿಯನ್ನು ಭದ್ರಗೊಳಿಸಿರುವಿರಾ? ಇಲ್ಲವಾದರೆ ನಿಮ್ಮ ಪೂರ್ವ ಸಿದ್ಧತೆಯನ್ನು ಪ್ರಾರಂಭಿಸಲೀಗ ಕಾಲತೀತವಾಗಿಲ್ಲ ಅನವಶ್ಯಕ ವಸ್ತುಗಳಿಗಾಗಿ ಏರಿದ ಬೆಲೆ ತೆತ್ತು ಹಣ ವೆಚ್ಚ ಮಾಡುವ ಬದಲು ಮುಂಬರುವ ಬೆಲೆ ಇಳಿತದ ಲಾಭವನ್ನು ಹೊಂದಲೋಸುಗ. ಹಾಗೂ ಆಗಿನ ನವೀನ ಪರಿಸ್ಥಿತಿಯನ್ನೆದುರಿಸಲು ನಿಮ್ಮ ಉಳಿತಾಯವನ್ನೀಗ ಕೂಡಿರಿ

ನಾವು ನಿಮಗೆ ಸಹಾಯ ಉತ್ತೇಜನಗಳ ಬಗ್ಗೆ ಭರವಸೆಯನ್ನೀಯುತ್ತೇವೆ.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ರಶ್ಯಾದ ಶಿಕ್ಷಣ ಪದ್ಧತಿ

ಓರ್ವ ಆಂಗ್ಲ ಮಹಿಳೆಯ ಅನುಭವ

ಹಲವು ವರ್ಷ ರಶ್ಯದಲ್ಲಿ ಉಪಾಧ್ಯಾಯಿನಿಯಾಗಿ ಕೆಲಸಮಾಡಿದ್ದ ಡಿಯಾನಾ ಲೆವಿನ್ ಎಂಬ ಆಂಗ್ಲ ಮಹಿಳೆಯೊಬ್ಬಳು ಅಲ್ಲಿನ ಶಿಕ್ಷಣಕ್ರಮದ ಕುರಿತು ಬರೆದಿರುವಳು. ಅವರಲ್ಲಿನ ಮುಖ್ಯ ವಿಷಯಗಳನ್ನು ಇಲ್ಲಿ ಕೊಡಲಾಗಿದೆ:—

ರಶ್ಯದಲ್ಲಿ ಮಕ್ಕಳು ೧೫ ವರ್ಷಗಳ ತನಕ ವಿದ್ಯಾಭ್ಯಾಸ ಮಾಡಬೇಕೆಂಬ ಕಡ್ಡಾಯದ ಕಾನೂನು ಇದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಬಾಲಬಾಲಕಿಯರು ಕಲಿಸಲ್ಪಡುತ್ತಾರೆ. ಏಳು ವರ್ಷಗಳ ತನಕ ಈ ಶಿಕ್ಷಣವು ಕೊಡಲ್ಪಡುತ್ತದೆ. ಇನ್ನು ಅದು ೧೦ ವರ್ಷಗಳ ತನಕ ಸಿಗುವಂತೆ ಮಾಡುವರು.

ರಶ್ಯದ ಪ್ರತಿ ಹಳ್ಳಿಯಲ್ಲಿ ಶಾಲೆಗಳಿವೆ. ಬೆಟ್ಟದ ಮೇಲಿನ ಶಾಲೆಗಳಿಗೆ ಮಕ್ಕಳನ್ನು ಒಯ್ಯಲು ದೊಡ್ಡ ಬಸ್ಸುಗಳಿವೆ. ಚಳಿಗಾಲದಲ್ಲಿ ಹಿಮ ಬೀಳುವಾಗ ಮಕ್ಕಳು ಶಾಲೆಗಳಲ್ಲಿ ಉಳಕೊಳ್ಳುತ್ತಾರೆ.

ಹದಿನಾರು ವರ್ಷಗಳ ತನಕ ಹುಡುಗರನ್ನು ಅಲ್ಲಿ ಮಜೂರಿಯ ಯಾವ ಉದ್ಯಮಕ್ಕೂ ಸೇರಿಸಿಕೊಳ್ಳುವುದಿಲ್ಲ. ಏಳು ವರ್ಷ ಪ್ರಾರಂಭದ ಮಾಧ್ಯಮಿಕ ಶಿಕ್ಷಣವಾದ ಕೂಡಲೇ ವಿದ್ಯಾರ್ಥಿಗಳನ್ನು ಅವರವರ ಅಭಿರುಚಿಗನುವಾಗಿ ಬೇರೆ ಬೇರೆ ಉದ್ಯೋಗಿಕ, ಯಾಂತ್ರಿಕ ಮತ್ತು ಕಲಾಶಿಕ್ಷಣ ಶಾಲೆಗಳಿಗೆ ಕಳುಹಿಸುತ್ತಾರೆ.

ರಶ್ಯದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಣ ಸಮಯವನ್ನು ಎರಡು ವಿಭಾಗವಾಗಿ ಮಾಡಿರುವರು. ಬೆಳಗಿನ ಹೊತ್ತು ನಮ್ಮ ಶಾಲೆಗಳಲ್ಲಿ ಕಲಿಸುವಂತೆ ದೇಶಭಾಷೆ, ಚರಿತ್ರೆ, ಭೂಗೋಳ, ಲೆಕ್ಕ ಮೊದಲಾದ ವಿಷಯಗಳನ್ನು ಕಲಿಸುವರು. ಮಧ್ಯಾಹ್ನದಲ್ಲಿ ಮಕ್ಕಳು ಸಂಗೀತ, ಚಿತ್ರಕಲೆ, ಯಂತ್ರ ರಚನೆ, ನಾಟ್ಯ, ವ್ಯಾಯಾಮ ಮೊದಲಾದ ಅನೇಕ ಬೇರೆ ಬೇರೆ ವಿಷಯಗಳಲ್ಲಿ ತಮ್ಮ ಸ್ವಂತ ಅಭಿರುಚಿಪ್ರಕಾರ ಅಭ್ಯಾಸ ನಡೆಸುತ್ತಾರೆ. ಇವುಗಳನ್ನು ಕಲಿಸಲು ಪ್ರತ್ಯೇಕ ಉಪಾಧ್ಯಾಯರು ಇರುತ್ತಾರೆ. ತಾವು ತೆಗೆದುಕೊಂಡ ವಿಷಯಗಳನ್ನು ಮಕ್ಕಳು ಸಂಪೂರ್ಣಗೊಳಿಸದೆ ಅವರಿಗೆ ಬೇರೆ ವಿಷಯವನ್ನು ಕೊಡಿಸಲಾಗುವುದಿಲ್ಲ.

ಹದಿನೈದು ವರ್ಷದ ನಂತರ ವಿದ್ಯಾರ್ಥಿಗಳು ಉಚ್ಚ ಶಿಕ್ಷಣವನ್ನು ಪಡೆಯಲರ್ಹರೆಂದು ಕಂಡು ಬಂದಲ್ಲಿ ಅವರಿಗೆ ಕಲಾ, ಕೈಗಾರಿಕೆ ಮತ್ತು ವೈದ್ಯಕೀಯ ಶಿಕ್ಷಣಗಳಿಗೆ ಕಳುಹಿಸುತ್ತಾರೆ. ಅಲ್ಲಿ ಅವರು ನಾಲ್ಕು ಘಂಟೆ ಪುಸ್ತಕದ ವಿಷಯಗಳನ್ನೂ, ನಾಲ್ಕು ಘಂಟೆ ಸ್ವತಃ ಕಾರ್ಯರೂಪದ ಅನುಭವವನ್ನೂ ಪಡೆಯುವರು.

ಅಲ್ಲಿನ ಉಪಾಧ್ಯಾಯರು

ಕ್ರಾಂತಿಯ ಪ್ರಾರಂಭದಲ್ಲಿ ರಶ್ಯದ ಶಿಕ್ಷಣ ವ್ಯವಸ್ಥೆಯು ಅಸ್ತವ್ಯಸ್ತವಾಗಿತ್ತು. ಕ್ರಮೇಣ ಸರಕಾರದ ಶಿಕ್ಷಣ ಇಲಾಖೆಯವರು ಎಲ್ಲಾ ದೇಶಗಳ ವಿದ್ಯಾಪದ್ಧತಿಯನ್ನು ಅಭ್ಯಸಿಸಿ, ತಮ್ಮ ದೇಶಕ್ಕೆ ಯೋಗ್ಯವಾದ ಕ್ರಮವೊಂದನ್ನು ತಯಾರಿಸಿರುವರು. ಮೊತ್ತ ಮೊದಲು ಅಲ್ಲಿ ತರಬೇತಾದ ಉಪಾಧ್ಯಾಯರು ಸಿಗಲಿಲ್ಲ. ಈಗ ಉಪಾಧ್ಯಾಯರ ತರಬೇತಿಗೆ ತಕ್ಕ ವ್ಯವಸ್ಥೆಯನ್ನು ಮಾಡಿರುವರು. ತರಬೇತು ಆಗದ ಉಪಾಧ್ಯಾಯರು ಸಾಯಂಕಾಲದ ಹೊತ್ತಿನಲ್ಲಿ ವಿಶೇಷ ಅಭ್ಯಾಸ ಮಾಡಿ ಪರೀಕ್ಷೆ ಕೊಡಬೇಕು.

ಟೀಕೆ ವಿಮರ್ಶೆಗಳಿಗೆ ರಶ್ಯನ್ ಉಪಾಧ್ಯಾಯರು ಎದೆಗುಂದುವವರಲ್ಲ. ಅಲ್ಲಿನ ವಿದ್ಯಾಧಿಕಾರಿಗಳು ಶಿಕ್ಷಕರ ಕ್ರಮವನ್ನು ಆಗಿಂದಾಗ್ಗೆ ಟೀಕಿಸುತ್ತಾರೆ. ಈ ಟೀಕೆಗಳು ವಿದ್ಯಾಭಿವೃದ್ಧಿಯ ದೃಷ್ಟಿಯಿಂದ ಮಾಡಲಾಗುವುದರಿಂದ ತರುಣ ಉಪಾಧ್ಯಾಯರಿಗೆ ಮೊತ್ತ ಮೊದಲು ಸ್ವಲ್ಪ ಮಾನಸಿಕ ಖೇದವಾಗುವುದಾದರೂ ಅದು ದುರುದ್ದೇಶದಿಂದ ಕೂಡಿಲ್ಲವೆಂದು ಮನಗಂಡ ಕೂಡಲೇ ಅವರು ಸಮಾಧಾನಗೊಳ್ಳುವರು. ಹೀಗೆ ಅಲ್ಲಿನ ಉಪಾಧ್ಯಾಯರಲ್ಲಿ ಸ್ಪರ್ಧೆಯ ದ್ವೇಶವಿಲ್ಲ. ಅದರ ಬದಲಿಗೆ ಅವರಲ್ಲಿ ಪರಸ್ಪರ ಸಹಕಾರ ಭಾವನೆ ಇರುತ್ತದೆ.

ಕೆಲವೊಮ್ಮೆ ಶಾಲೆಯ ಮುಖ್ಯೋಪಾಧ್ಯಾಯರು ಕಲಿಸಲು ಕಷ್ಟವಾಗುತ್ತದೆಂದು ಹೇಳುವ ಉಪಾಧ್ಯಾಯರ ಕ್ಲಾಸಿನಲ್ಲಿ ಪಾಠದ ಸಮಯದಲ್ಲಿ ಒಂದು ಕೂತುಕೊಳ್ಳುವರು. ಅವರು ಕಲಿಸುವ ಕ್ರಮವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅಂತ್ಯದಲ್ಲಿ ಯೋಗ್ಯ ಸಲಹೆಯನ್ನು ಕೊಡುವರು. ಹೀಗೆ ಕಲಿಸುವಿಕೆಯಲ್ಲಿರುವ ಉಪಾಧ್ಯಾಯನ ಕುಂದು ಕೊರತೆಗಳನ್ನು ತೋರಿಸಿಕೊಟ್ಟು ಸುಧಾರಣೆಯ ಸಲಹೆಗಳನ್ನು ಕೊಡುವುದರಿಂದ ಉಪಾಧ್ಯಾಯರು ತಮ್ಮ ಕರ್ತವ್ಯವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಲನುಕೂಲವಾಗುತ್ತದೆ. ದಾಕ್ಷಿಣ್ಯದಿಂದ ಓರ್ವ ಉಪಾಧ್ಯಾಯನ ಶಿಕ್ಷಣ ಕ್ರಮವನ್ನು ಟೀಕಿಸದೆ ಇದ್ದರೆ ಅವನಲ್ಲಿ ಪ್ರಗತಿ ಉಂಟಾಗುವುದಿಲ್ಲ.

ಪರಿಣಾಮ

ಕ್ರಾಂತಿ ಪ್ರಾರಂಭದಲ್ಲಿ ರಶ್ಯದ ಶಿಕ್ಷಿತರ ಸಂಖ್ಯೆಯು ಶೇಕಡಾ ೧೦ ಇತ್ತು. ಈಗ ಅದು ಶೇಕಡಾ ೯೯ಕ್ಕೆ ಬಂದು ನಿಂತಿದೆ. ಕೆಲವು ಶಾಲೆಗಳಲ್ಲಿ ಆರು ವರ್ಷದ ಮಕ್ಕಳು ೬೦ ವರ್ಷದ ತಮ್ಮ ಅಜ್ಜಿ ಅಜ್ಜಂದಿರೊಡನೆ ಒಂದೇ ಕ್ಲಾಸಿನಲ್ಲಿ ಕಲಿಯುವ ಸ್ವಾರಸ್ಯ ದೃಶ್ಯವನ್ನು ನಾವು ಈಗಲೂ ರಶ್ಯದ ಅನೇಕ ಶಾಲೆಗಳಲ್ಲಿ ಕಾಣಬಹುದು. ತಮ್ಮ ಮೊಮ್ಮಕ್ಕಳಂತೆ ಈ ವೃದ್ಧರು ಭೂಗೋಳ, ಸಾಮಾನ್ಯವಿಜ್ಞಾನವನ್ನು ಕಲಿಯುತ್ತಾ ತಮ್ಮ ಅಜ್ಞಾನವನ್ನು ದೂರ ಮಾಡಲು ಪ್ರಯತ್ನಮಾಡುವರು. ತಮ್ಮ ಹೆಸರನ್ನು ಬರೆಯಲು ತಿಳಿಯದಿದ್ದ ಅಲ್ಲಿನ ವೃದ್ಧ ಜನಾಂಗವು ಈಗ ವರ್ತಮಾನ ಪತ್ರವನ್ನು ಓದುವುದನ್ನು ಕಾಣಬಹುದು.

ರಶ್ಯದ ಶಿಕ್ಷಣಧೋರಣೆಯ ಇನ್ನೊಂದು ಪ್ರಾಮುಖ್ಯ ವಿಷಯವೆಂದರೆ ಅಲ್ಲಿನ ಪ್ರಾಂತ್ಯ ಭಾಷೆಗಳಿಗಿರುವ ಪ್ರಾಧಾನ್ಯ. ರಶ್ಯವು ಹಲವು ಮಾತೃ ಭಾಷೆಗಳುಳ್ಳ ಚಿಕ್ಕ ಚಿಕ್ಕ ಪ್ರಜಾಪ್ರಭುತ್ವಗಳ ಒಂದು ಸಂಯುಕ್ತ ರಾಷ್ಟ್ರ. ಆಯಾ ಪ್ರಾಂತ್ಯದ ಮಾತೃ ಭಾಷೆಯಲ್ಲೇ ಶಿಕ್ಷಣಕೊಡಲಾಗುವುದು. ಆದರೆ ರಶ್ಯನ್ ಭಾಷೆಯನ್ನು ಎಲ್ಲರೂ ಉಪಭಾಷೆಯಾಗಿ ಕಲಿಯಲೇಬೇಕು.

ಹೀಗೆ ರಶ್ಯದಲ್ಲಿ ಶಿಕ್ಷಣ ಪ್ರಸಾರವು ಅಲ್ಲಿನ ಜನತೆಯ ಸಾರ್ವತ್ರಿಕ ಶ್ರಮದಿಂದ ಫಲಪ್ರದವಾಗಿ ಪರಿಣಾಮ ಹೊಂದಿದೆ. ಮುಂದುವರಿದ ಎಲ್ಲಾ ದೇಶಗಳ ಮಕ್ಕಳಿಗಿಂತಲೂ ಅಲ್ಲಿನ ವಿದ್ಯಾರ್ಥಿಗಳು ವಿಶೇಷ ಬುದ್ಧಿವಂತಿಕೆಯಿಂದ ಕೂಡಿರುವರು. ವಿಶ್ವಮಾನ್ಯರಾದ ಕಲಾವಂತರೂ, ಸಾಹಿತಿಗಳೂ ಅಲ್ಲದೆ ಯಂತ್ರಶಿಲ್ಪಿಗಳೂ, ವೈದ್ಯಕೀಯ ವಿಜ್ಞಾನಿಗಳೂ ರಶ್ಯದಲ್ಲಿ ಇದ್ದಾರೆ. ಇದಕ್ಕೆ ಅಲ್ಲಿನ ಶಾಲೆಗಳ ಪ್ರಾಥಮಿಕ ತರಗತಿಗಳಲ್ಲಿ ಕಲಿಸುವ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ವಸ್ತು ವಿಷಯಗಳೇ ಕಾರಣವೆನ್ನುತ್ತಾರೆ.

ಮತೀಯ ಶಿಕ್ಷಣಕ್ಕೆ ರಶ್ಯದಲ್ಲಿ ಪ್ರಾಧಾನ್ಯವಿಲ್ಲವಾದರೂ ನೈತಿಕ ಬೋಧನೆಯನ್ನು ಅಲ್ಲಿ ಮಕ್ಕಳಿಗೆ ಮುಂದಟ್ಟಾಗುವಂತೆ ಕೊಡುತ್ತಾರೆ. ಜಗತ್ತಿನ ಮಕ್ಕಳೆಲ್ಲ ಬಂಧು ಸಮಾನರು, ಸಮಾಜಿಕ ಮತ್ತು ಸಾರ್ವತ್ರಿಕ ಆಸ್ತಿ, ಒಡವೆಗಳನ್ನು ಹಾಳುಮಾಡಬಾರದು, ಶಾಲಾ ಕಟ್ಟಡವನ್ನು ಪೂಜ್ಯವೆಂದರಿಯಬೇಕು, ಬೆಂಚು ಡೆಸ್ಕುಗಳನ್ನು ಕೆತ್ತಿ ಹಾಳುಮಾಡಬಾರದು, ನೆರೆಕೆರೆಯವರೊಂದಿಗೆ ಪ್ರೀತಿಯಿಂದಲೂ ಸೌಹಾರ್ದದಿಂದಲೂ ಇರಬೇಕು, ಗುರುಹಿರಿಯರನ್ನು, ಮಾತಾ ಪಿತೃಗಳನ್ನು ಶ್ರದ್ಧೆಯಿಂದ ಕಾಣಬೇಕು, ಇವೇ ಅಲ್ಲಿ ಕಲಿಸುವ ನೈತಿಕ ಪಾಠಗಳು. ಇದನ್ನು ಎಲ್ಲಾ ವಿದ್ಯಾರ್ಥಿಗಳೂ ಕಲಿಯುವುದುತ್ತಮ.

ನಗಾಡುವ ನೈಜಾಮರು

ಹೈದರಾಬಾದಿನ ನೈಜಾಮರು ತುಂಬಾ ಹಾಸ್ಯಪ್ರಿಯರಂತೆ. ಚಿಕ್ಕ ಚಿಕ್ಕ ಸಂಭಾಷಣೆಗಳಲ್ಲಿ ಅವರು ತುಂಬಾ ಹಾಸ್ಯವನ್ನು ಹುಡುಕಿ ಹೊಟ್ಟೆತುಂಬಾ ನಗಾಡುವುದನ್ನು ಅವರ ಹತ್ತಿರ ಇದ್ದವರು ಯಾವಾಗಲೂ ಕಾಣಬಹುದು. ತಮ್ಮ ಅಪಾರ ಸಂಪತ್ತಿನ ವಿಷಯ ದೇಶದಲ್ಲಿ ಹರಡಿದ ಸಂಗತಿಗಳನ್ನು ಕೇಳಿ ಅವರು ನಕ್ಕು ನಕ್ಕು ಬೀಳುತ್ತಾರಂತೆ. ಅವರಲ್ಲಿ ಇಷ್ಟು ಹಣವು ಆಗಲಿಕ್ಕೆ ಅವರ ಜಿಪುಣತ್ವವೇ ಕಾರಣವೆಂದೂ ಹೇಳುತ್ತಾರೆ.

ಇದರ ವಿಷಯವಾಗಿ ನೈಜಾಮರ ಅರಮನೆ ಸೇವಕರಿಬ್ಬರೊಳಗೆ ಆದ ಸ್ವಾರಸ್ಯವಾದ ಸಂಭಾಷಣೆ ಒಂದು ಅವರ ಕಿವಿಗೆ ಬಿದ್ದು ಅವರನ್ನು ಬಹಳವಾಗಿ ನಗುವಂತೆ ಮಾಡಿತಂತೆ. ಅದು ಹೀಗಿದೆ — ಒಬ್ಬ ಸೇವಕ—"ನನಗೆ ನೈಜಾಮರಲ್ಲಿ ತಿಳಿಸಲು ಒಂದು ವಿಶೇಷ ವರದಿ ಇತ್ತು. ಆದರೆ ಅವರು ಗಾಢ ನಿದ್ರೆಯಲ್ಲಿದ್ದಾರೆ. ಎಬ್ಬಿಸಲು ನನಗೆ ಧೈರ್ಯ ಸಾಲದು." ಅದಕ್ಕೆ ಇನ್ನೊಬ್ಬ ಸೇವಕ — "ಛೇ, ಎರಡು ಆಣೆ ಪಾವಲಿಗಳನ್ನು ಕಿಣಿಕಿಣಿ ಮಾಡಿದರೆ ಅವರಿಗೆ ತಕ್ಷಣ ಎಚ್ಚರವಾಗುತಿತ್ತಲ್ಲವೆ?"

"ದಯವಿಟ್ಟು ಕ್ಷಮಿಸಿ"

ಚಕ್ರವರ್ತಿಯವರ ಕಳೆದ ಜನ್ಮೋತ್ಸವ ಬಿರುದಾವಳಿಗಳನ್ನು ಪಡೆದವರಲ್ಲಿ ಡಾ। ಯು ಬಿ ನಾರಾಯಣ ರಾವ್ ಎಂಬವರೂ ಒಬ್ಬರು. ಇವರಿಗೆ ರಾವ್ ಬಹದ್ದೂರ್ ಸಿಕ್ಕಿತ್ತು. (ಇವರು ನಮ್ಮ ಜಿಲ್ಲೆಯವರು) ಸಾರ್ವಜನಿಕರ ಸೇವೆಯೇ ಇವರ ಜೀವನದ ಧ್ಯೇಯ. ತಮ್ಮ ಬಿರುದನ್ನು ಹಿಂದಕ್ಕೆ ಕಳುಹಿಸಿ ಇವರು ಬೊಂಬಾಯಿಯಿಂದ ಇಂಡಿಯಾ ಸರಕಾರಕ್ಕೆ ಕಾರಣಕೊಟ್ಟು ಬರೆದ ಪತ್ರದಲ್ಲಿ ಹೀಗಿದೆ — 'ನಾನು ಸಲ್ಲಿಸುವ ನಮ್ರ ಸೇವೆಗಾಗಿ ದಯಪಾಲಿಸಲ್ಪಟ್ಟ ಬಿರುದಿಗೆ ನಾನು ತುಂಬಾ ಕೃತಜ್ಞನಿರುತ್ತೇನೆ. ನಾನು ಅಖಿಲ ಭಾರತ ವೈದ್ಯ ಸಂಘದ ಪರವಾಗಿ ಸೇವೆಮಾಡುವವನು. ವ್ಯಕ್ತಿಕವಾಗಿ ನಾನು ಬಿರುದಾವಳಿಗಳನ್ನು ಧರಿಸಿ ಮೆರೆಯುವ ಮನೋಭಾವನೆಯುವನಲ್ಲ. ಆದುದರಿಂದ ಕೃತಜ್ಞತೆಯಿಂದ ಇದನ್ನು ನಾನು ಸ್ವೀಕರಿಸುವುದಿಲ್ಲವಾಗಿ ಖೇದ ತಿಳಿಸುತ್ತೇನೆ." ಸೇವೆಯನ್ನು ಸೇವೆಯಸಲುವಾಗಿ ಮಾಡುವುದು ಅವರ ಉದ್ದೇಶವಂತೆ. ಇವರು ಈಗ ಬೊಂಬಾಯಿಯಲ್ಲಿ ವೈದ್ಯಕೀಯ ಪರಿಶ್ರಮ ನಡೆಸುತ್ತಾರೆ. ಹೀಗೆಂದು ಇಂಡಿಯನ್ ಮೆಡಿಕಲ್ ಜರ್ನಲ್ ಎಂಬ ಪತ್ರಿಕೆಯು ತಿಳಿಸುತ್ತದೆ.

ಒಂದೇ ಒಂದು ಮಾತ್ರ ನಾಶವಾಗಿದೆ

ಮಾದರಿ ಜರ್ಮನ್ ಪ್ರಕಟಣೆ

ಯುದ್ಧ ವರದಿಗಳನ್ನು ತಿಳಿಸುವ ಜರ್ಮನ್ ಪ್ರಕಟಣೆಗಳು ಹೇಗಿರುತ್ತವೆ ಎಂಬುದನ್ನು ಅಮೆರಿಕದ ವಿಮಾನದಳದ ಸುದ್ದಿ ಖಾತೆಯ ಅಧಿಕಾರಿಯೊಬ್ಬರು "ಒಂದು ಮಾದರಿ ಜರ್ಮನ್ ಪ್ರಕಟಣೆಯನ್ನು" ತಯಾರಿಸಿದ್ದಾರೆ —

"ಅಮೆರಿಕನ್ ಬಾಂಬರ್ ವಿಮಾನಗಳ ವಿಶಾಲ ಗುಂಪೊಂದು ಪಶ್ಚಿಮ ಜರ್ಮನಿಯನ್ನು ಹೊಕ್ಕಲು ಪ್ರಯತ್ನಿಸಿತು. ಧೈರ್ಯಶಾಲಿಗಳಾದ ನಮ್ಮ ವೈಮಾನಿಕ ಸಮೂಹಗಳು ಶತ್ರುಗಳನ್ನು ಹಿಮ್ಮೆಟ್ಟಿಸಿದರು. ಶತ್ರುಗಳ ೪೨೦ ವಿಮಾನಗಳು ನಾಶ ಮಾಡಲ್ಪಟ್ಟವು. ನಮ್ಮ ಮೂರು ವಿಮಾನಗಳು ಮತ್ತು ಒಂದು ಚಿಕ್ಕ ನಗರ ನಾಶವಾಗಿವೆ."

ಬೆಂಕಿತಾಗದ ಮರ

ಅಮೆರಿಕದ ನೌಕಾ ಖಾತೆಯ ಪರಿಶೋಧನಾ ಇಲಾಖೆಯವರು ಬೆಂಕಿಯಿಂದ ಸುಡಲಿಕ್ಕಾಗದ ಒಂದು ರಾಸಾಯನಿಕ ಲೇಪವನ್ನು ಕಂಡುಹಿಡಿದಿರುವರು. ಇದನ್ನು ತಗಡಿನಷ್ಟು ತೆಳ್ಳಗಿನ ಮರಕ್ಕೆ ಹಚ್ಚಿದರೆ ಆ ಮರವು ನೀರು ಕುದಿಸಲಿಕ್ಕೆ ಬೇಕಾಗುವುದಕ್ಕಿಂತ ಹತ್ತು ಪಾಲು ಹೆಚ್ಚು ಉಷ್ಣದ ಬೆಂಕಿಗೂ ಸುಟ್ಟು ಹೋಗುವುದಿಲ್ಲವಂತೆ. ಬಲವಾದ ಸೀಸಿನ ಹೊಡೆತಕ್ಕೂ ಆ ಮರವು ಹಾಳಾಗವುದಿಲ್ಲ. ನೌಕಾರಚನೆಗೆ ಇದನ್ನು ಉಪಯೋಗಿಸುವ ಯೋಜನೆಗಳು ನಡೆಯುತ್ತಿವೆ.

NOTICE

In the Court of the District Munsif of Mangalore

A S No 62 of 1944

Between —

V Narasimha Kamath— Appellant

and

Venkatramana Shanbhaga and others — Respondents

To

1st Respondent Venkatramana Shanbhaga 2nd Respondent Gopala Shanbhaga 3rd Respondent Raghavendra Shanbhaga and 4th Respondent Janardhana Shanbhaga (Children of Hejmady Subraya Shanbhaga.)

No 1 resides in Mulki Peta of Bappanad Kasba Village Mangalore Taluk and Nos 3 and 4 reside in Tea Shop Pannalal Terrace Grant Road Bombay

Please take notice that the above appeal filed by the appellant (petitioner-plaintiff) against the decree and order in R E P No 913 of 194[illegible] in O S No 42 of 1940 on the file of the District Munsif of Karkal will come on for hearing on 23—10—194[illegible] at 11 A. M. in the above Court. You may appear either in person or by pleader on that day failing which the same will be decided in your absence

M. A. Kamath

Vakil for appellant

Mangalore 2-10-1944

ಭಾರತದಲ್ಲಿ ಶಿಕ್ಷಣ ಪ್ರಸಾರ

ವಿದ್ಯೆಯಿಂದಲೇ ನಮ್ಮ ಉದ್ಧಾರ

ಅಮೆರಿಕನ್ ಪ್ರಾಜ್ಞರ ಸತ್ಸಲಹೆ

[illegible] ಹೇಳಿಕೆಯನ್ನು [illegible] ದ್ದಾ [illegible] ಭಾರತದಲ್ಲಿ [illegible] ಬೇಕಾದ [illegible] ಧೋರಣೆಯ ಕುರಿತು ಒಂದು [illegible] ವರದಿಯನ್ನು ತಯಾರಿಸಿಯವರು. ಇದನ್ನು [illegible] ಅಮೆರಿಕದ ವಿದ್ಯಾ ಶಾಖೆಯ ತಜ್ಞರಾದ [illegible] ಡಬ್ಲ್ಯು. ಸ್ಟುಡಬೇಕರ್ ಎಂಬ ಮಹನೀಯರು ಈ ಕೆಳಗಿನಂತೆ ಅಭಿಪ್ರಾಯ ಪಟ್ಟಿರುವರು.

"ಶಾರೀರಿಕ ಮಾನಸಿಕ ಮತ್ತು ನೈತಿಕ ಶಕ್ತಿಗಳನ್ನು ಅಭಿವೃದ್ಧಿಗೊಳಿಸದಿರುವ ಶಿಕ್ಷಣದಿಂದ ಯಾವ ಸಮಾಜದ ಪ್ರಗತಿಯೂ ಸಾಧ್ಯವಾಗಲಾರದು." ಎಂಬ ಭಾರತ ಶಿಕ್ಷಣ ಸಲಹೆ ಸಮಿತಿಯವರ ತತ್ವವು ಯೋಗ್ಯವಾದುದು. ಅವರು ತಯಾರಿಸಿದ ವರದಿಯು ಈ ಮೂಲ ತತ್ವದ ಮೇಲೆ ಹೊಂದಿಕೊಂಡಿದೆ. "ಈಗಿನ ವಿದ್ಯಾಕ್ರಮದಿಂದ ನಿರುದ್ಯೋಗವನ್ನು ನಿವಾರಿಸಲು ಸಾಧ್ಯವಿಲ್ಲ"ವೆಂಬುದು ಒಪ್ಪಬೇಕಾದುದು.

ಸಮಿತಿಯ ವರದಿಯಲ್ಲಿ ಸ್ತ್ರೀ ಶಿಕ್ಷಣ, ಜಾತಿವಾರು ಶಿಕ್ಷಣಗಳ ಕುರಿತು ಪ್ರತ್ಯೇಕ ಪ್ರಸ್ತಾಪವಿಲ್ಲ. ಕಾರಣ ಅವರು ಶಿಕ್ಷಣವನ್ನು ನಿಷ್ಪಕ್ಷಪಾತ ದೃಷ್ಟಿಯಿಂದಲೂ ಸಾರ್ವತ್ರಿಕ ದೃಷ್ಟಿಯಿಂದಲೂ ಪರಿಶೀಲಿಸಿರುವರು. "ಶಿಕ್ಷಣವು ಸಾರ್ವತ್ರಿಕವಾಗಿ ಕೊಡಲ್ಪಡಬೇಕು. ಅದಕ್ಕೆ ಒತ್ತಾಯದ ಕಾನೂನು ಮಾಡಬೇಕು. ಮತ್ತು ಅದು ಧರ್ಮಾರ್ಥವಾಗಿಯೂ ಇರಬೇಕು." ಎಂಬುದು ಅತ್ಯಂತ ಯೋಗ್ಯವಾದ ಸಲಹೆ ಇದಕ್ಕೆ ಬೇಕಾದ ಹಣವನ್ನು ಶೇಖರಿಸುವುದು ಹೆಚ್ಚಿನ ಕಷ್ಟದ ಕೆಲಸವಲ್ಲ.

"ಸ್ತ್ರೀಯರು ದೇಶದ ಮತ್ತು ಸಮಾಜದ ಪ್ರಗತಿಗಾಗಿಯೂ ಮತ್ತು ತಮ್ಮ ಸ್ವಂತ ಆರ್ಥಿಕ ಅನುಕೂಲತೆಗಾಗಿಯೂ ಲಾಭದಾಯಕ ಉದ್ಯಮದಲ್ಲಿ ದುಡಿಯಬೇಕು ತಾಯಂದಿರು ಕೆಲಸದಲ್ಲಿರುವಾಗ ಮಕ್ಕಳನ್ನು ಅಲಕ್ಷ ಮಾಡಬೇಕಾಗುವುದು. ಆದಕ್ಕಾಗಿ ಯೋಗ್ಯ ಶಿಶುಪಾಲನಾಲಯಗಳನ್ನಿಡಬೇಕು ಇವುಗಳಲ್ಲಿ ಶಿಶು ಸಂರಕ್ಷಣೆಯ ಕೆಲಸದಲ್ಲಿ ತರಬೇತು ಹೊಂದಿದ ಮಹಿಳೆಯರನ್ನು ಕೆಲಸಕ್ಕೆ ಇಡಬೇಕು ಒಂದರಿಂದ ನಾಲ್ಕು ವರ್ಷದ ಮಕ್ಕಳು ಇಲ್ಲಿ ಶುಚಿತ್ವವನ್ನು ಒಳ್ಳೆ ನಡತೆಗಳನ್ನು ಕಲಿಯುವಂತಾಗಬೇಕು." ಇದು ಅವಶ್ಯವಾದ ಸಲಹೆ.

"ಮಗುವಿಗೆ ಆರನೇ ವರ್ಷದಿಂದ ೧೪ನೇ ವರ್ಷದ ವರೀಗೆ ವಿದ್ಯಾಭ್ಯಾಸವು ಧರ್ಮಾರ್ಥವಾಗಿಯೂ ಒತ್ತಾಯವಾಗಿಯೂ ಕೊಡಬೇಕು. ಶಿಕ್ಷಣ ವಿಷಯಗಳು ಸಾಂಸ್ಕೃತಿಕ ತಳಹದಿಯದಿರಬೇಕು ಕೃಷಿ, ಕೈಗಾರಿಕೆ ವಾಣಿಜ್ಯ ವಿಷಯಗಳೂ ಕಲಿಸಲ್ಪಡಬೇಕು ಜೊತೆಗೆ ಉಚ್ಚ ಶಿಕ್ಷಣಕ್ಕೆ ಅನುಕೂಲವಾಗುವ ವಿದ್ಯಾಕ್ರಮವನ್ನೂ ಸೇರಿಸಬೇಕು. ಇವುಗಳಲ್ಲಿ ಮುಖ್ಯ ಎರಡು ಕಾಲ ವಿಭಾಗಗಳಾಗಬೇಕು ೬ರಿಂದ ೧೧ ವರ್ಷಗಳ ತನಕ ಒಂದು ೧೧ರಿಂದ ೧೪ ವರ್ಷಗಳ ತನಕ ಇನ್ನೊಂದು: ನಮ್ಮ ದೇಶದಲ್ಲಿ ೧೪ ವರ್ಷದಲ್ಲೆ ಶಾಲೆ ಬಿಟ್ಟು ಕೆಲಸ ನೋಡುವ ಪರಿಸ್ಥಿತಿ ಇರುವುದರಿಂದ ಅಷ್ಟರೊಳಗೆ ಎಲ್ಲರಿಗೂ ಯಾವುದಾದರೊಂದು ಕೈಗಾರಿಕೆಯ ಉದ್ಯಮವನ್ನು ಕಲಿಸುವುದು ಒಳ್ಳೇದು

ಕೆಳತರಗತಿಗಳಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾದವರಿಗೆ ಹೈಸ್ಕೂಲುಗಳಲ್ಲಿ ಕಾಲೇಜುಗಳಲ್ಲಿ ಮುಫತ್ತಾಗಿ ಶಿಕ್ಷಣವನ್ನೂ ಕೊಡಬೇಕು ಆದರಿಂದ ಕುಶಲರಾದ ಬಡವರ ಮಕ್ಕಳಿಗೆ ಯೋಗ್ಯ ಪ್ರೋತ್ಸಾಹ ಕೊಟ್ಟಂತಾಗುವುದು. ಸಮಿತಿಯವರ ಈ ಯೋಜನೆಯು ನಿಜವಾಗಿ ಯಶಸ್ವಿಯಾಗುವಂತಹುದು

"ಹೀಗೆ ಮೂಲ ಶಿಕ್ಷಣ ಮತ್ತು ಹೈಸ್ಕೂಲ್ ಶಿಕ್ಷಣ ಕ್ರಮವನ್ನು ಸ್ಥಾಪಿಸಿದ ಮೇಲೆ ಕಾಲೇಜುಗಳಲ್ಲಿ ಹೆಚ್ಚೆಚ್ಚು ವಿದ್ಯಾರ್ಥಿಗಳನ್ನು ಸ್ವೀಕರಿಸಲು ಏರ್ಪಡಿಸಬೇಕು ಈಗಿನ ಕಾಲೇಜು ಶಿಕ್ಷಣ ಕ್ರಮವು ಸರಿಯಾಗಿಲ್ಲ ಕಾಲೇಜಿನ ಪ್ರೌಢ ಶಿಕ್ಷಣವು ಎರೀ ಮೂರು ವರ್ಷಗಳಷ್ಟೇ ಸಾಕು ಉಪಾಧ್ಯಾಯ ವಿದ್ಯಾರ್ಥಿಗಳ ಸಂಪರ್ಕವು ಕಾಲೇಜು ಕಾಲದಲ್ಲಿ ಹೆಚ್ಚಾಗಬೇಕು ಎಲ್ಲ ವಿದ್ಯಾರ್ಥಿಗಳು ಉಪಯುಕ್ತ ಉದ್ಯಮಗಳಿಗೆ ಸಿದ್ಧರಾಗುವಂತಹ ಶಿಕ್ಷಣ ಕ್ರಮವನ್ನು ಜ್ಯಾರಿಗೆ ತರಬೇಕು ಈ ರೀತಿಯಿಂದ ಬಾವಿ ಜನಾಂಗದ ಕಲ್ಯಾಣವಾಗುವುದು.

'ದೇಶದಲ್ಲೆಲ್ಲಾ ಒಂದು ನಕ್ಷಣ ಚಳವಳವನ್ನೂ ಪ್ರಾರಂಭಿಸಿ ಈಗಿನ ಅಶಿಕ್ಷಿತರನ್ನು ತಕ್ಕ ಮಟ್ಟಿಗೆ ಶಿಕ್ಷಿತರನ್ನಾಗಿ ಮಾಡಿದರೆ ಮುಂದೆ ಅವರ ಮಕ್ಕಳು ವಿದ್ಯಾಭಿರುಚಿಯುಳ್ಳವರಾಗುವರು ಇದಕ್ಕೆ ಸಾರ್ವತ್ರಿಕ ಕೈಗಾರಿಕೆ ಶಿಕ್ಷಣದಿಂದೊಡಗೂಡಿದ ಕಾರ್ಯಕ್ರಮವನ್ನನುಸರಿಸುವುದು ಅವಶ್ಯವಿದೆ" ಇದೂ ಅತ್ಯಾವಶ್ಯಕವಾದುದು

ಉಪಾಧ್ಯಾಯರ ತರಬೇತಿಯ ಕುರಿತು ಸಮಿತಿಯ ಉಚಿತ ಸಲಹೆಗಳನ್ನು ಕೊಟ್ಟಿದೆ ದೇಶದಲ್ಲಿ ಈಗ ಶಿಕ್ಷಣ ವೃತ್ತಿಯು ಆದರ್ಶಕವಾಗಿಲ್ಲ. ಅತ್ಯಲ್ಪ ಸಂಬಳವೇ ಇದಕ್ಕೆ ಕಾರಣ ೧೯೪೪ರಲ್ಲಿ ಭಾರತದಲ್ಲಿ ೬೪೦ ಉಪಾಧ್ಯಾಯರ ತರಬೇತಿಯ ಶಾಲೆಗಳಿದ್ದುವು ಅವುಗಳಲ್ಲಿ ೧೯೮೦ ಉಪಾಧ್ಯಾಯರು ತರಬೇತಿ ಪಡೆಯುತ್ತಿದ್ದರು. [illegible] ಉಪಾಧ್ಯಾಯನ ಸಂಬಳವು ಸರಾಸರಿಯಾಗಿ [illegible] ದರೆ ರೂ. [illegible]ಕ್ಕೆ ಮಿಗುವುದಿಲ್ಲ. ಯುದ್ಧಕ್ಕೆ ಮುಂಚೆ ಅದು ೧೩ಕ್ಕೆ ಮುಟ್ಟಿತ್ತು. ಸಮಿತಿಯ ವರದಿಯಲ್ಲಿ "ಉಪಾಧ್ಯಾಯರ ಸಂಬಳದ ಸರಾಸರಿಯನ್ನು ರೂ. ೩೫ಕ್ಕೆ ಮುಟ್ಟಿಸಬೇಕು. ಅವರಿಗೆ ವಸತಿಗಳನ್ನೇರ್ಪಡಿಸಬೇಕು." ಅದಾಗಿದ್ದರೆ ಶೇಕಡಾ ೧೦ರಷ್ಟು ಹೆಚ್ಚು ಸಂಬಳ ಕೊಡಬೇಕು. ಕಲಿಸುವಿಕೆಯು ಸರಿಯಾಗಬೇಕಾದರೆ ಯೋಗ್ಯ ಉಪಾಧ್ಯಾಯರಿಗೆ ಸರಿಯಾದ ಸಂಬಳ ಕೊಡಲೇಬೇಕು. ಭಾರತದ ಹೊರಗಿನ ಎಲ್ಲಾ ದೇಶಗಳಲ್ಲೂ ಶಿಕ್ಷಕವರ್ಗವು ಉತ್ತಮ ಸಂಬಳವನ್ನು ಪಡೆಯುತ್ತದೆ. ಅದರಿಂದ ಅದು ಹೆಚ್ಚು ಆಕರ್ಶಿತವಿದೆ.

ಕೊನೆಯದಾಗಿ ಸಮಿತಿಯವರು ಹೀಗೆ ಬರೆದಿರುವರು – ತನ್ನ ಶಿಕ್ಷಣ ಕ್ರಮವನ್ನು ಸುಧಾರಿಸಲು ಭಾರತವು ಪ್ರಯತ್ನಿಸಬೇಕು ನಮ್ಮ ರಾಷ್ಟ್ರದ ಅತೀ ಮುಖ್ಯವಾದ ಅವಶ್ಯಕತೆ ಅದು

ಅನೇಕ ಜಾತಿ, ಮತ, ಪಂಗಡ, ಭಾಷೆ, ಹಳೇ ಸಂಪ್ರದಾಯ ಕಟ್ಟು ಕಟ್ಟಳೆಗಳಿಂದ ತುಂಬಿದ ವಿಶಾಲ ಭಾರತದಲ್ಲಿ ಸಾರ್ವತ್ರಿಕ ಒಂದು ಶಿಕ್ಷಣ ಕ್ರಮವನ್ನು ಜ್ಯಾರಿಯಲ್ಲಿ ತರುವುದು ಕಠಿಣಸಾಧ್ಯದ ಕೆಲಸವೆಂದು ತೋರುವುದಾದರೂ ತಮ್ಮ ಯೋಜನೆಯಿಂದ ಕ್ರಮೇಣ ಎಲ್ಲವೂ ತೃಪ್ತಿಕರವಾಗಿ ಸುಧಾರಿಸುವುದೆಂದು ಅವರ ಅಚಲವಾದ ನಂಬಿಕೆ ಇರುವುದು

ಈ ಸಂದರ್ಭದಲ್ಲಿ ಭಾರತದ ಜನತೆಯು "ನಿನ್ನ ನೆರೆಯವನನ್ನು ನಿನ್ನಂತೆಯೆಂದು ತಿಳಿದು ಪ್ರೀತಿಸು" ಎಂಬ ಭೋದನೆಯಂತೆ ವರ್ತಿಸಿದರೆ ಶ್ರೀಯಸ್ಸು ಉಂಟಾಗದಿರದು ೪೦ ಕೋಟಿ ಜನಸಂಖ್ಯೆಯನ್ನು ವಿದ್ಯಾವಂತರನ್ನಾಗಿ ಮಾಡಲು ಈ ನೈತಿಕ ತತ್ವ ಪ್ರಚಾರದಿಂದ ಸಾಧ್ಯವಾಗುವುದು ಅಂತೂ ಭಾರತದ ಜನತೆಯು ಶಿಕ್ಷಣದ ಈ ಜವಾಬುದಾರಿಯನ್ನು ತಿಳಿದುಕೊಂಡರೆ ಅದು ಜಗತ್ತಿನ ನಾಗರೀಕ ರಾಷ್ಟ್ರಗಳ ಸಮಾನ ಸ್ಥಾನ ಪಡೆಯುವುದು. ಇಲ್ಲದಿದ್ದರೆ ಈಗಿನ ಕೀಳು ಸ್ಥಾನದಲ್ಲೇ ಎಂದೆಂದಿಗೂ ಅದು ಉಳಿಯುವುದು



ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 58/1939.

ಕ್ರಮ ಅಮ್ಲಜಾರಿ ನಂಬ್ರ 378/1944.

ಕುಪ್ಪಣ್ಣ ಉಡುಪ— ಅರ್ಜಿದಾರ

ಮತ್ತು

1 ವೆಂಕಟ್ರಾಯ, 2 ಭುಜಂಗರಾಯ, ಮಂಗಳೂರು ತಾಲೂಕ ಮೂಡುಸೆಡ್ಡೆ ಗ್ರಾಮದಲ್ಲಿರುವವರು — ರೆಸ್ಪೊಂಡೆಂಟರು.

ಮೇಲೆ ಹೆಸರು ಕಾಣಿಸಿದ ಅರ್ಜಿದಾರನು ರೆಸ್ಪೊಂಡೆಂಟರ ಮೇಲೆ ಮ ಡಿ ಮು. ಕೋರ್ಟು O S No. 58/1939ನೇ ಡಿಕ್ರಿಯಲ್ಲಿ ನಮೂದಿಸಿದ ವಿಧಿಗಳ ಬಗ್ಗೆ ಅಮ್ಲಜ್ಯಾರಿ ಧಾಖಲುಮಾಡಿ ಸದರಿ ಅಮ್ಲಜಾರಿ ತಾ. 17–10–1944ಕ್ಕೆ ಅಖೈರು ತನಿಖೆಗೆ ಇಟ್ಟಿರುತ್ತದೆ ಆ ಕುರಿತು ರೆಸ್ಪೊಂಡೆಂಟರಿಗೆ ಏನಾದರೂ ಆಕ್ಷೇಪವಿದ್ದರೆ ಸದರಿ ತಾರೀಕಿನ ಬೆಳಿಗ್ಗೆ ಕೋರ್ಟು ಮುಂದೆ ಹಾಜರಾಗಿ ಜಾಹೀರುಪಡಿಸಿಕೊಳ್ಳಬಹುದು

ಕೋರ್ಟು ಹುಕುಂಪ್ರಕಾರ

B R Vyasrayn Achari,
ಅರ್ಜಿದಾರನ ಕಡೆ ಎಡ್ವಕೇಟ್.

ಮಂಗಳೂರು, ತಾ. 2–10–1944.

ಪಶ್ಚಿಮ ರಣರಂಗದಲ್ಲಿ ಜರ್ಮನರ ಪ್ರತಿಭಟನೆ

(೫ನೇ ಪುಟದಿಂದ)

ಮುಗ್ಗಿಂದ ಕೂಡಿದ ಸುದ್ದಿಗಳು ಅಮೇರಿಕ ಪ್ರಚಾರವಾಗುವುದು ಸರಿಯಲ್ಲ. ಪರಿಸ್ಥಿತಿ ಶೋಚನೀಯವಿದ್ದರೂ ಹಿಂದೀಯರು ಅತ್ಯಂತ ಧೈರ್ಯ ಸ್ಥೈರ್ಯಗಳಿಂದ ಸಂಗ್ರಾಮವನ್ನು ನಡೆಸುತ್ತಿದ್ದಾರೆ.

ರಶ್ಯಾ-ಪೋಲೆಂಡು ಪ್ರಕರಣ

"ಬ್ರಿಟನು, ರಶ್ಯಾ, ಅಮೆರಿಕಾ, ಈ ಮೂರು ಅತ್ಯಂತ ಬಲಾಢ್ಯ ರಾಷ್ಟ್ರಗಳು ಐಕ್ಯ ಹೊಂದಿಕೊಂಡು ಜರ್ಮನಿಯ ಪತನ ಕಾರ್ಯವನ್ನು ಕೈಕೊಂಡಿವೆ. ಈ ರಾಷ್ಟ್ರಗಳ ಪರಿಶ್ರಮದಿಂದಾಗಿ ಇವತ್ತಿಗೆ ನಾಲ್ಕು ವರ್ಷಗಳಿಂದ ಜರ್ಮನರಿಂದ ಕ್ರೂರ ನರಕ ಯಾತನೆಗಳನ್ನು ಅನುಭವಿಸುವ ಸಮಗ್ರ ಫ್ರಾನ್ಸು ದೇಶದ ವಿಮೋಚನೆಯಾಗಿರುವುದು.

"ರಶ್ಯದ ಮೇಲೆ ಜರ್ಮನಿ ಕೈಮಾಡಿತ್ತು ಜರ್ಮನರ ಕೈಯಲ್ಲಿ ಅದು ಸಹಿಸಲಾರದಷ್ಟು ನಷ್ಟ ಕಷ್ಟಗಳನ್ನು ಅನುಭವಿಸಿ ಬಹಳ ವೀರತ್ವದಿಂದ ಹೋರಾಡಿ ಜರ್ಮನರನ್ನು ತನ್ನ ಪ್ರದೇಶದಿಂದ ಹೊರದೂಡಿರುತ್ತದೆ ಈಗ ಸದ್ಯಕ್ಕೆ ರಶ್ಯವು ಪೋಲೆಂಡವನ್ನು ಸ್ವತಂತ್ರ ಗೊಳಿಸುವುದರಲ್ಲಿ ಶ್ರಮಿಸುತ್ತಿದೆ ರಶ್ಯಕ್ಕೆ ಜರ್ಮನಿಯ ಪತನಗೊಳಿಸಲು ಮಿತ್ರರಿಂದ ಸಹಾಯವಾದಂತೆ ಪೋಲೆಂಡಿಗೆ ಇಂದು ರಶ್ಯಾ ದೇಶದ ಸಹಾಯವು ಬೇಕಾಗಿರುತ್ತದೆ

ಪಶ್ಚಿಮ ರಣರಂಗ

"ಜರ್ಮನರು ಇಂದಿಗೆ ನಾಲ್ಕು ವರ್ಷಗಳ ಸಮಯ ಯುರೋಪದ ಅನೇಕ ರಾಜ್ಯಗಳಲ್ಲಿ ಹರಡಿಕೊಂಡು ಅಲ್ಲಿ ಅನೇಕ ಪೈಶಾಚಿಕ ಕಾರ್ಯಗಳನ್ನು ನಡೆಸಿ ಇಂದು ಅವುಗಳನ್ನೆಲ್ಲಾ ತ್ಯಜಿಸಿ ಸ್ವದೇಶಕ್ಕೆ ಪಲಾಯನ ಗೈದಿರುವರು ಈಗ ಈ ಹೋರಾಟದಲ್ಲಿ ಮಿತ್ರರ ಕಡೆಯಲ್ಲೂ ಅಪಾರ ಪ್ರಾಣನಷ್ಟ ಇತ್ಯಾದಿ ಆಗಿದ್ದರೂ ಎರಡು ಲಕ್ಷಕ್ಕೆ ಮಿಕ್ಕಿದ ಸಂಖ್ಯೆಯಲ್ಲಿ ಜರ್ಮನರು ಬಂದಿಗಳಾಗಿರುವರು

"ಈ ರಣರಂಗದಲ್ಲಿ ವಿಮಾನ ದಳವು ಮಾಡಿದ ಕಾರ್ಯವು ಅತ್ಯಂತ ಶ್ಲಾಘನೀಯವಿದೆ ನಾರ್ಮಂಡಿಯಲ್ಲಿ ಇಳಿದ ಮಿತ್ರರ ಪಡೆಯ ಕಾರ್ಯವನ್ನು ಎಷ್ಟು ಹೊಗಳಿದರು ಸಾಕಾಗದು ಸ್ಪೈಯಿನಿನ ಗಡಿಯಿಂದ ಹಿಡಿದು ಹಾಲೆಂಡಿನ ವರೆಗೆ ಫ್ರಾನ್ಸಿನ ಕರಾವಳಿಯು ನಮ್ಮ ವಶವಾಗಿದೆ

ಬರ್ಮಾ ರಣರಂಗ

ಬರ್ಮಾದ ದಂಡೆಯಾತ್ರೆಯು ಬಹಳ ಯಶಸ್ವಿಯಾಗಿ ನಡೆದಿರುವುದೆಂದೂ, ಅಲ್ಲಿನ ದಂಡನಾಯಕರನ್ನು ಬಹಳವಾಗಿ ಹೊಗಳಿದರು. ಈ ಕಾರ್ಯದಲ್ಲಿ ಚೀನಿಯರಿಂದ ದೊರಕಿದ ಸಹಾಯವನ್ನು ಮೆಚ್ಚಿದರು. ಅಮೇರಿಕವು ಚೀನಾಕ್ಕೆ ಬೇಕಾದ ಶಸ್ತ್ರ ಇತ್ಯಾದಿ ಸಹಾಯವನ್ನು ಒದಗಿಸುವರೆ ಯತ್ನದಲ್ಲಿದೆ ಎಂದು ತಿಳಿಸಿದರು ಚೀನಾಕ್ಕೆ ಸಹಾಯವು ವಿಮಾನಗಳ ಮೂಲಕ ನಡೆಯುತ್ತಿದೆ ಎಂದು ಇವರ ಭಾಷಣದಿಂದ ತಿಳಿಯಬರುತ್ತದೆ. ಬಹಳವಾಗಿ ವೃದ್ಧಿಯಾಗುವ ಹಿಂದೀಯರ ಜನಸಂಖ್ಯೆಯಲ್ಲಿ ಸ್ವಲ್ಪ ನಷ್ಟವುಂಟಾದರೆ, ಅದರಿಂದ ಹೆಚ್ಚಿನ ಕೆಡುಕಿಲ್ಲವೆಂದು ಅಭಿಪ್ರಾಯಪಟ್ಟರು ಹಿಂದೂದೇಶಕ್ಕೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಬಲವು ರಕ್ಷಕವಚದಂತಾಗಿ ಹಿಂದಿಯರಿಗೆ ಶಾಂತಿಯು ಲಭಿಸಿತ್ತೆಂದು ತಿಳಿಸಿದರು ಮಳೆಗಾಲವಾದ ಮೇಲೆ ಜಪಾನಿಯರ ಅತಿ ಉಗ್ರವಾದ ಪ್ರತಿಭಟನೆಯುಂಟಾಗಬಹುದೆಂದೂ ಶಾಂತಸಾಗರದ ಹೋರಾಟವು ಉಗ್ರರೂಪವನ್ನು ಹೊಂದಬಹುದೆಂದೂ ಭವಿಷ್ಯವಾಣಿಯನ್ನು ಹೊರಡಿಸಿದರು ಸಂಗ್ರಾಮ ಚಟುವಟಿಕೆಗಳೊಂದಿಗೆ, ಜನರನ್ನು ಪೀಡಿಸುತ್ತಿರುವ ಆಹಾರ ಕೊರತೆ, ರೋಗರುಜೆಗಳ ನಿವಾರಣೆ ಇತ್ಯಾದಿ ಸಮಸ್ಯೆಗಳ ಕುರಿತು ಮಿತ್ರರು ಅತ್ಯಂತ ಲಕ್ಷ್ಯವನ್ನು ವಹಿಸಿ, ಕಾರ್ಯ ನಿರ್ವಹಿಸುತ್ತಿರುವರೆಂದು ತಿಳಿಸಿದರು

ಹಿಟ್ಲರನ ಕುರಿತು

'ಹಿಟ್ಲರನನ್ನು ನೆಪೋಲಿಯನನೊಂದಿಗೆ ಸರಿಹೋಲಿಸುವುದು ನನಗೆ ಸಲ್ಲದ ಕೆಲಸವು ನೆಪೋಲಿಯನನ ಕೀರ್ತಿಗೆ ಕಳಂಕ ತಂದಂತಾಗುವುದು ಹಿಟ್ಲರನು ಕೊಲೆಗಾರ ಆದರೂ ಹಿಟ್ಲರನು, ಹಿಂದೆ ನೆಪೋಲಿಯನನು ಮಾಡಿದಂತೆ ಸಮಗ್ರ ಯುರೋಪದಲ್ಲಿ ಸಾವಿರಾರು ಮೈಲು ಉದ್ದಕ್ಕೆ ರಷ್ಯ ಇತ್ಯಾದಿ ಯುರೋಪದಲ್ಲೆಲ್ಲಾ ತನ್ನ ಸೈನಿಕರನ್ನು ಪ್ರಸರಿಸಿದ್ದನು. ಆದರೆ ಈಗ ಅವುಗಳೆಲ್ಲಾ ಮಿತ್ರರ ಬೋನಿನಲ್ಲಿ ಸಿಕ್ಕಿ ಬಿದ್ದಿವೆ ಈ ಸೈನಿಕರಲ್ಲಿ ದಾರಾಳ ಮಂದಿಗಳು ನಷ್ಟವಾಗಿರುವರು ಇಟಲಿಯ ಸಂಗ್ರಾಮದಲ್ಲಿ ೨೪ ಜರ್ಮನ್ ದಂಡುಗಳು ಲಯಹೊಂದಿದವು ಎಲ್ಲೆಲ್ಲೂ ಹರಡಿಕೊಂಡಿದ್ದ ಜರ್ಮನ್ ಯೋಧರು ಹಿಂದೆ ಸರಿದು ಸ್ವದೇಶ ರಕ್ಷಣೆಯ ಹೊರೆಯನ್ನು ವಹಿಸಲು ಸಾಧ್ಯವಿಲ್ಲದಂತೆ ನಾವು ಮಾಡಿಬಿಟ್ಟಿದ್ದೇವೆ"

ಯುರೋಪದ ಯುದ್ಧದ ಮುಕ್ತಾಯವೆಂದು?

ಈ ಪ್ರಶ್ನೆಯ ಕುರಿತಾಗಿ ಚರ್ಚಿಲರು ಈ ಕೆಳಗಿನ ಅಭಿಪ್ರಾಯವನ್ನು ಸೂಚಿಸಿದರು

ಗಿಳಸ್ತರೊಳಗೆ ಯುದ್ಧ ಮುಗಿಯುವುದೆಂದು ಪ್ರವೀಣರನೇಕರ ಸಿದ್ಧಾಂತವಾಗಿದ್ದರೂ, ಗಿಳಸ್ತರಲ್ಲೂ ಅನೇಕ ತಿಂಗಳುಗಳ ಸಮಯ ಈ ಹೋರಾಟವು ನಡೆಯಬಹುದೆಂದೂ, ಪತನ ಹೊಂದಿದ ಜರ್ಮನಿಯ ಸೈನಿಕರು ಗುಪ್ತವಾಗಿ ಅರಣ್ಯ ಗುಡ್ಡ ಇತ್ಯಾದಿ ಸ್ಥಳಗಳಲ್ಲಿದ್ದುಕೊಂಡು ಕೆಲಸಮಯ ಮಿತ್ರರನ್ನು ದಣಿಸಬಹುದೆಂದೂ ಆದರೂ ಇವತ್ತಿಗೆ ಎರಡು ವರುಷಗಳ ಹಿಂದೆಯೇ ಆಫ್ರಿಕಾದಲ್ಲಿ ಪ್ರಾರಂಭವಾದ ಮಿತ್ರರ ವಿಜಯಯಾತ್ರೆಯು ಅಲ್ಲಿಂದ ಯುರೋಪಕ್ಕೆ ನಡೆದು ಅಲ್ಲಿ ಜರ್ಮನರನ್ನು ದಣಿಸಿ, ಅಲ್ಲಿಂದ ಶಾಂತಸಾಗರಕ್ಕೆ ತೆರಳಿ ಜಪಾನಿಯರನ್ನು ಸದೆಬಡೆಯುವುದು ಖಂಡಿತವೆಂದೂ, ಮಿತ್ರರಿಗೆ ಕೊನೆಗೆ ವಿಜಯವು ಖಂಡಿತವೆಂದೂ ಭರವಸೆಯುಕ್ತ ಮಾತುಗಳನ್ನಾಡಿ ಭಾಷಣವನ್ನು ಮುಕ್ತಾಯಗೊಳಿಸಿದರು

ಚಲನಚ್ಚಿತ್ರ ವಿಶೇಷ

ಫಿಲ್ಮ್ ರಾಯಭಾರಿಗಳು

ಅಮೇರಿಕದ ಚಲಚ್ಚಿತ್ರ ಸಾಮ್ರಾಜ್ಯದಿಂದ ಐದು ಮಂದಿ ರಾಯಭಾರಿಗಳು ಜಗತ್ತಿನ ದೊಡ್ಡ ನಗರಗಳಿಗೆ ಕಳುಹಿಸಲ್ಪಡುವರಂತೆ ಲಂಡನ್, ಮೊಸ್ಕೋ, ಸಿಡ್ನಿ, ಬ್ಯೂನೆಸ್ ಏರಿಸ್, ಬೊಂಬಾಯಿ, ಈ ನಗರಗಳು ಅವರ ಕಾರ್ಯಸ್ಥಾನಗಳು ಒಬ್ಬೊಬ್ಬರಿಗೆ ವರ್ಷಕ್ಕೆ ಸುಮಾರು ೪ ಲಕ್ಷ ರೂಪಾಯಿ ಸಂಬಳ ಅಮೇರಿಕನ್ ಚಲಚ್ಚಿತ್ರ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು, ಅವರ ಚಿತ್ರಗಳನ್ನು ಹೆಚ್ಚೆಚ್ಚಾಗಿ ಜನಪ್ರಿಯಗೊಳಿಸಲು ಸಾಧಿಸುವುದೇ ಇವರ ಮುಖ್ಯ ಉದ್ದೇಶ

* * *

ನಮ್ಮ ದೇಶದಲ್ಲಿ ಈಗ ಮೂರು ಇಂಗ್ಲಿಷ್ ಭಾಷೆಯ ಚಿತ್ರಗಳನ್ನು ತಯಾರಿಸಲು ಪ್ರಯತ್ನಗಳಾಗುತ್ತವೆ ಡೈರೆಕ್ಟರ್ ಶಾಂತಾರಾಮರು ಚೀನಕ್ಕೆ ಕಳುಹಿಸಲ್ಪಟ್ಟ ಕಾಂಗ್ರೆಸ್ ವೈದಕೀಯ ಮಂಡಳದ ಸಾಹಸಗಳನ್ನು ಕುರಿತು ನಿರೂಪಿಸುವ ಚಿತ್ರವನ್ನು ತಯಾರಿಸುವರು.

ರಾಮರಾಜ್ಯ ತೆಗೆದ ಪ್ರಕಾಶ ಕಂಪೆನಿಯವರು ಇಂಗ್ಲೀಷಿನಲ್ಲಿ ಗೌತಮ ಬುದ್ಧನ ಜೀವನ ಚರಿತ್ರೆಯನ್ನು ತಯಾರಿಸುವರು ಪ್ರಖ್ಯಾತ ಕವಿಗಳಾದ ಹರೀಂದ್ರನಾಥ ಚಟ್ಟೋಪಾಧ್ಯಾಯರು ಇದರ ಸಂಭಾಷಣೆ ಬರೆಯುವರು

ವಾಡಿಯಾ ಕಂಪೆನಿಯವರು ತಯಾರಿಸಲಿದ್ದ 'ಇಂಡಿಯಾ ಕಾಲಿಂಗ್' ಎಂಬ ಇಂಗ್ಲಿಷ್ ಭಾಷೆಯ ಚಿತ್ರವು ಸದ್ಯಕ್ಕೆ ನಿಲ್ಲಿಸಲ್ಪಟ್ಟಿದೆ. ಇದಕ್ಕೂ ಚಟ್ಟೋಪಾಧ್ಯಾಯರೇ ಸಂಭಾಷಣೆ ಬರೆಯುವರು.

ಮರುಭೂಮಿ ಹಣ್ಣು ನಾಡಾಯಿತು

ರಶ್ಯದ ಅದ್ಭುತ ಸಾಹಸ

ರಶ್ಯಕ್ಕೆ ಸೇರಿದ ಮಧ್ಯ ಆಸ್ಯಾ ಪ್ರದೇಶದಲ್ಲಿ ಒಂದು ನೀರಿಲ್ಲದ ಬಂಜರು ಪ್ರದೇಶವಿತ್ತು ಇದು ಮೊಸ್ಕೋದಿಂದ ೧೩೦೦ ಮೈಲು ದೂರದ ರಶ್ಯನ್ ತುರ್ಕಿಸ್ಥಾನದಲ್ಲಿದೆ ಇದರ ಹತ್ತಿರದ ಅಲ್ಟಾಯ ಪರ್ವತ ಪ್ರದೇಶದಲ್ಲಿ ನೀರಿನ ಸರೋವರಗಳಿವೆ.

೪೫ ದಿನಗಳಲ್ಲಿ ೨೦ ಲಕ್ಷ ಕೂಲಿಯವರು ಸೇರಿ ದೊಡ್ಡ ಕಾಲುವೆಯನ್ನು ತೋಡಿ ಸರೋವರದ ನೀರನ್ನು ಬಂಜರು ಸ್ಥಳಕ್ಕೆ ಹರಿಯುವಂತೆ ಮಾಡಿದರು ಕೂಡಲೇ ಆ ಪ್ರದೇಶವನ್ನು ಸಾಗುವಳಿ ಮಾಡಿ ಹಣ್ಣು ಬೆಳೆಸಲು ಸುರುಮಾಡಿದರು ರಾಸಾಯನಿಕ ಗೊಬ್ಬರವನ್ನು ತಯಾರಿಸುವ ದೊಡ್ಡ ಕಾರ್ಖಾನೆಗಳು ರಶ್ಯದಲ್ಲಿವೆ ಇಲ್ಲಿಂದ ಗೊಬ್ಬರವನ್ನು ತರಲಾಯಿತು ಈಗ ೧೩ ಲಕ್ಷ ಎಕ್ರೆ ಬಂಜರು ಸ್ಥಳವು ಫಲವತ್ತಾಗಿ ನಾನಾ ನಮೂನೆಯ ಹಣ್ಣು ಹಂಪಲುಗಳು ಬೆಳೆಯುತ್ತವೆ

NOTICE

In the Court of the Subordinate Judge of South Kanara

S C No 63/1944

Between

K Amba Bai— Plaintiff

and

K Dharmapala Shetty— Defendants

Notice to above named defendant son of Padma Shetty landholder who last resided near the Jain Basti at Rice Beaters Street in Mangalore Town

The plaintiff has filed the above suit against you to recover the sum of Rs 300 0 0 (Rupees Three Hundred) being the amount you took as advance from her as per the agreement dated 2—4—1944 entered into by you with her the agreement having been cancelled by her for breach thereof by you and interest on the said amount etc

The suit stands posted for trial at 11 A M on 27 10-1944 in the above Court when you may appear in person or by pleader and contest the same otherwise it will be heard and decided in your absence

By Order

M Vasudeva Rao

Vakil for Plaintiff

Mangalore 3 10-1944

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸ್ಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE

The Joint Booking Office, KODIALBAIL.

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ

ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.

ದೊರಕುವ ಸ್ಥಳ ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

The Bank of Mangalore Limited, Mangalore.

ESTD. 1931

HEAD OFFICE BUNDER Mangalore. *BRANCHES* MANGALORE, Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 month 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ, ಕುಷ್ಠದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ
ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

- ★ Premiums are low.
- ★ 2½% Rebate on annual premiums.
- ★ "Permanent Disability Benefits free of any cost.
- ★ Payment of double the insured amount in case of death by accident at a very small cost of Rs. 1-8-0 per 1000.
- ★ Special rebates on large size policies.
- ★ A special scheme by which lapsed policies can be revived without paying the arrears
- ★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,

ಕಟಪಾಡಿ ದ. ಕನ್ನಡ

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಾ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

SWADESHABHIMANI

ESTD. 1906

[ಸಂಪುಟ 39] ತಾರೀಖು 13—10—1944 [ಸಂಚಿಕೆ 40]

ಕೃಷಿ ವ್ಯವಸಾಯದ ಯೋಜನೆ

ಭೂಮಿ ಸಾಗುವಳಿಯ ಅವಶ್ಯಕತೆ

ಜೀವಾಧಾರದಂತಿರುವ ಕೃಷಿ ಉದ್ಯಮದ ಅಭಿವೃದ್ಧಿಯಲ್ಲಿಯೇ ನಮ್ಮ ದೇಶದ ಸರ್ವತೋಮುಖ ಪ್ರಗತಿಯಾಗಬಲ್ಲದು. ಹಳ್ಳಿ—ಕಡೆಗಳಲ್ಲಿ ಜನತೆಯ ಜೀವನ ಮಟ್ಟವನ್ನೇರಿಸುವುದು ಅತ್ಯಾವಶ್ಯಕವಾಗಿದೆ. ಇದಕ್ಕಾಗಿ ಹೆಚ್ಚೆಚ್ಚು ಭೂಮಿಯನ್ನು ಸಾಗುವಳಿ ಯೋಗ್ಯವಾಗಿ ಮಾಡುವುದೂ ಮತ್ತು ಈಗ ಸಾಗುವಳಿಯಾಗುತ್ತಿರುವಂತಹ ಹೊಲಗದ್ದೆಗಳಿಂದ ಹೆಚ್ಚೆಚ್ಚು ಉತ್ಪನ್ನವನ್ನುಂಟು ಮಾಡಲು ಪ್ರಯತ್ನಿಸುವುದು ಇವೆರಡು ಮುಖ್ಯ ಸಾಧನ ಮಾರ್ಗಗಳು. ಬಂಜರು ಬಯಲುಗಳನ್ನು ಸಾಗುವಳಿ ಯೋಗ್ಯ ಮಾಡುವಾಗ ನಮಗೆ ಅತ್ಯಾವಶ್ಯಕವಾದ ಕಾಡುಗಳನ್ನೂ ಹುಲ್ಲುಗಾವಲುಗಳನ್ನು ಕಾಯ್ದಿಟ್ಟುಕೊಳ್ಳಬೇಕಾದುದನ್ನು ನಾವು ಮರೆಯಬಾರದು.

ಕೃಷಿ ಮಾಡಲ್ಪಡಬೇಕಾದ ಹೊಸ ಪ್ರದೇಶಗಳ ಸಹಾಯಕ್ಕೆ ನಮ್ಮಲ್ಲಿರುವ ಎಲ್ಲಾ ನೀರಾವರಿ ಅನುಕೂಲತೆಗಳನ್ನು ಉಪಯೋಗಿಸಿಕೊಳ್ಳಬೇಕು ಮಾತ್ರವಲ್ಲ ಅವುಗಳಿಗೆ ಉತ್ತಮ ಗೊಬ್ಬರಗಳೂ ಸುಧಾರಿಸಲ್ಪಟ್ಟ ಬೀಜಗಳೂ ಪೂರೈಸಲ್ಪಡಬೇಕು. ಪೈರನ್ನೂ ಜನ ಜಾನುವಾರುಗಳನ್ನೂ ರೋಗಗಳ ಹಾವಳಿಯಿಂದ ರಕ್ಷಿಸಿಕೊಳ್ಳಬೇಕಾದುದೂ ಅತ್ಯಾವಶ್ಯಕ.

ನಮ್ಮಲ್ಲಿ ಅನುಭವಸ್ಥ ಕೃಷಿ ವ್ಯವಸಾಯಗಳಿದ್ದಾರೆ. ಈ ಅನುಭವವು ಕಾರ್ಯ ರೂಪಕ್ಕೆ ರೂಪಾಂತರಿಸಬೇಕು. ಜಿಲ್ಲೆಗಳಲ್ಲಿ ಈಗ ಸ್ಥಾಪಿಸಲ್ಪಟ್ಟ ಕೃಷಿ ಇಲಾಖೆಗಳ ಸಿಬಂಧಿಯು ತೃಪ್ತಿಕರವಾದ ಸಂಖ್ಯೆಯಲ್ಲಿಲ್ಲ. ಕೇಂದ್ರ ಸರಕಾರ ಇಲಾಖೆಯಿಂದ ಹಿಡಿದು ಹಳ್ಳಿಹಳ್ಳಿಗಳ ತನಕ ಸುವ್ಯವಸ್ಥಿತವಾದ ಒಂದು ಯೋಜನೆಯು ಸ್ಥಾಪಿಸಲ್ಪಟ್ಟರೆ ಕೃಷಿಯ ಉದ್ಯಮವನ್ನು ಉದ್ಧಾರ ಮಾಡಬಹುದು.

ಪ್ರವೀಣ ಕೆಲಸಗಾರರು ಬೇಕು

ನಮ್ಮ ಕೃಷಿ ಇಲಾಖೆಗಳಲ್ಲಿ ಯೋಗ್ಯ ತರಬೇತಿ ಹೊಂದಿದ ಕೆಲಸಗಾರರಿಲ್ಲದಿದ್ದುದೇ ದೊಡ್ಡದೊಂದು ಸಮಸ್ಯೆ. ಪ್ರಾಂತಿಕ ಇಲಾಖೆಗಳನ್ನು ನಾವು ನೆನೆಸುವಷ್ಟು ಶೀಘ್ರವಾಗಿ ಮತ್ತು ಸಂಪೂರ್ಣವಾಗಿ ವಿಶಾಲಗೊಳಿಸಲು ಮತ್ತು ಸುವ್ಯವಸ್ಥಿತಗೊಳಿಸಲು ತುಂಬಾ ತೊಂದರೆಗಳೇನೊ ಇವೆ. ಕೆಲವೇ ತಿಂಗಳಲ್ಲಿ ನೂರಾರು ಯೋಗ್ಯ ಕೆಲಸಗಾರರನ್ನು ತಯಾರಿಸಲು ಸಾಧ್ಯವೇ ಇಲ್ಲ. ಆದರೆ ಇನ್ನು ಸ್ವಲ್ಪ ಹೆಚ್ಚಿನ ಅವಧಿಯೊಳಗೆ ನಮ್ಮ ಯೋಜನೆಗೆ ಬೇಕಾಗಿರುವ ಕೆಲಸಗಾರರನ್ನು ಸಿದ್ಧಗೊಳಿಸಬಹುದು. ಆಧುನಿಕ ಕೃಷಿ ವ್ಯವಸಾಯದ ಜ್ಞಾನವಿದ್ದ ಜಮೀನ್ದಾರರೂ ಮತ್ತು ವಿದ್ಯಾವಂತರಾದ ಹಳ್ಳಿ ತರುಣರು ಸಹಕರಿಸಿದರೆ ಸರಳವಾದ ಕೃಷಿ ಶಿಕ್ಷಣ ಕ್ರಮಗಳನ್ನು ಪ್ರಚಾರಕ್ಕೆ ತಂದು ಒಂದು ಕೃಷಿ ಯೋಜನೆಯನ್ನು ಪ್ರಾರಂಭಿಸಬಹುದು.

ಭಾರತೀಯ ತರುಣ ಜನಾಂಗವು ಅವಶ್ಯವಾಗಿ ಈ ಉದ್ಯಮದ ಕಡೆಗೆ ಗಮನ ತೆರಬೇಕು. ಹಳ್ಳಿಗಳಲ್ಲಿ ಹುಟ್ಟಿ ಬೆಳೆದು ಕಾಲೇಜು ಶಿಕ್ಷಣ ಪಡೆದ ಮತ್ತು ದೇಶೋದ್ಧಾರ ಭಾವನೆಯ ಸಾವಿರಾರು ತರುಣರು ಮುಖ್ಯವಾಗಿ ಇದರಲ್ಲಿ ಸಹಕರಿಸಬೇಕಾದುದು ಅತ್ಯಾವಶ್ಯಕ. ಸಾಗುವಳಿ ಉದ್ಧಾರದ ಯೋಜನೆಯಲ್ಲಿ ಇವರು ಸಹಕರಿಸಿ ಕೆಲಸಮಾಡುವಷ್ಟು ದೊಡ್ಡ ಸೇವೆಯು ಬೇರೊಂದಿಲ್ಲ.

ಸದ್ಯದ ಪರಿಸ್ಥಿತಿ

ಕೃಷಿ ವ್ಯವಸಾಯದ ಈಗಿನ ಸ್ಥಿತಿಯು ತುಂಬಾ ಚಿಂತಾಜನಕವಾದುದಿದೆ. ಭಾರತದ ಒಟ್ಟು ಕ್ಷೇತ್ರ ವಿಸ್ತಾರವು ೧೦೦೦ ಮಿಲಿಯ ಚದರ ಎಕ್ರೆಯಷ್ಟಿದೆ. ಇದರಲ್ಲಿ ೩೬೦ ಮಿಲಿಯ ಎಕ್ರೆಯಷ್ಟು ಸ್ಥಳವು ಈಗ ಕೃಷಿ ಮಾಡಲ್ಪಡುತ್ತದೆ—ತಲೆಯೊಂದಕ್ಕೆ ೯/೧೦ ಎಕ್ರೆಯಂತೆ. ಪ್ರತಿ೧೦೦ ಎಕ್ರೆ ಸಾಗುವಳಿ ಪ್ರದೇಶದಲ್ಲಿ ೫೬ ಜಾನುವಾರುಗಳಿಗೆ ಆಹಾರ ಪೂರೈಕೆಯಾಗಬೇಕು. ಸಾಗುವಳಿಯಾಗುವ ೩೦೦ ಮಿಲಿಯ ಎಕ್ರೆಯಲ್ಲಿ ಬರೇ ೫೬ ಮಿಲಿಯ (1/6) ಎಕ್ರೆಗಳಲ್ಲಿ ಮಾತ್ರ ನೀರಾವರಿ ಅನುಕೂಲತೆಗಳಿವೆ. ಉಳಿದ ಪ್ರದೇಶಗಳು ಮಳೆ ನೀರಿನ ಮೇಲೆ ಹೊಂದಿಕೊಂಡಿರಬೇಕು. ಈ ೩೦೦ ಮಿಲಿಯ ಎಕ್ರೆ ಸ್ಥಳದಿಂದ ಭಾರತದ ವಿಶಾಲ ಜನಸಂಖ್ಯೆಗೆ ಆಹಾರ ಪೂರೈಕೆಯಾಗಬೇಕಾಗಿದೆ.

ನಮ್ಮ ಜನ ಸಂಖ್ಯೆಯ ಶೇಕಡಾ ೮೭ ಮಂದಿ ಹಳ್ಳಿಗಳಲ್ಲಿ ವಾಸಿಸುವವರು. ಇವರಲ್ಲಿ 1/3ರಷ್ಟು ಜನರು ಸ್ವಂತ ಭೂಮಿ ಇಲ್ಲದ ಮಜೂರರು. ಇವರು ದೇಶದ ಜನಸಂಖ್ಯೆಯ ಶೇಕಡಾ ೧೭ರಷ್ಟು ಆಗುವರು.

ಆಧುನಿಕ ಕಾಲ ಮಹಿಮೆಯಿಂದ ಕೃಷಿ ಉದ್ಯಮದ ಪ್ರಗತಿಯು ಉಸಿರುಗಟ್ಟಿದಂತಾಗಿದೆ. ವಿದ್ಯಾವಂತರೂ, ನಾಯಕತ್ವದ ಗುಣ ಶೀಲಗಳುಳ್ಳವರೂ ಪಟ್ಟಣಗಳ ಕಡೆಗೆ ಆಕರ್ಷಿಸಲ್ಪಟ್ಟು ಹಳ್ಳಿಗಳ ಕಡೆಗೆ ಅಲಕ್ಷ್ಯದಿಂದಿರುತ್ತಾರೆ.

ಆಹಾರ ಕ್ರಮ

ನಮ್ಮ ಜನತೆಯ ಹೆಚ್ಚಿನಂಶವು ನಿಕೃಷ್ಟ ಪೋಷಣೆಯವರಿದ್ದಾರೆ ಮಾತ್ರವಲ್ಲ ತುಂಬಾ ಸಾಲಕ್ಕೆ ಒಳಗಾಗಿರುವುದರಿಂದ ಈಗಿನ ಸೌಕರ್ಯಗಳ ಅನುಕೂಲತೆಗಳನ್ನು ಕೂಡಾ ತೆಗೆದು ಕೊಳ್ಳುವಷ್ಟು ಶಕ್ಯರಾಗಿಲ್ಲ. ಶೇಕಡಾ ೩೦ರಷ್ಟು ಜನತೆ ಮಾತ್ರ ತೃಪ್ತಿಕರವಾದ ಆಹಾರ ಪೋಷಣೆಯಲ್ಲಿದೆ ಎಂದು ಲೆಕ್ಕ ಹಾಕಲ್ಪಟ್ಟಿವೆ.

ನಮ್ಮಲ್ಲಿ ಪ್ರತಿಯೊಬ್ಬರಿಗೂ ದಿನ ಒಂದಕ್ಕೆ ಆರೋಗ್ಯಕರ ಪೋಷಣೆಗೆ ಕನಿಷ್ಟ ಪಕ್ಷಕ್ಕೆ ಈ ಕೆಳಗಿನ ಆಹಾರ ವಸ್ತುಗಳು ಸಿಗುವಂತಾಗಬೇಕು:—೪೬ ತೊಲೆ ಅಕ್ಕಿ ಅಥವಾ ಧಾನ್ಯಗಳು. ೨೦ ತೊಲೆ ಹಾಲು; ೩ ತೊಲೆ ತುಪ್ಪ, ಬೆಣ್ಣೆ, ಎಣ್ಣೆಗಳು ೮ ತೊಲೆ. ೨೫ ತೊಲೆ ತರಕಾರಿಗಳು ಮತ್ತು ಹಣ್ಣುಗಳು. ಧಾನ್ಯಗಳಲ್ಲದೆ ಬೇರೆ ಯಾವ ಆಹಾರ ವಸ್ತುಗಳೂ ಸಿಗದಿರುವಲ್ಲಿ ಶರೀರದ ಚೈತನ್ಯಕ್ಕೆ ೬೫ ತೊಲೆಯಷ್ಟು ಧಾನ್ಯಗಳನ್ನು ತಿನ್ನಬೇಕು.

ಆದುದರಿಂದ ನಮ್ಮ ದೇಶದ ಜನತೆಗೆ ಆರೋಗ್ಯಕರವೂ ಚೈತನ್ಯ ಕೊಡುವಂತಹುದೂ ಆಗಿರುವ ಯೋಗ್ಯ ಪೋಷಣೆಯ ಆಹಾರ ಪ್ರಮಾಣವು ದೊರಕುವಂತೆ ಮಾಡಬೇಕಾದುದು ನಮ್ಮ ಮೊತ್ತ ಮೊದಲಿನ ಕೆಲಸವಾಗಬೇಕು.

ಉತ್ಪತ್ತಿಯನ್ನೂ ಹೆಚ್ಚಿಸುವುದು

ಇವುಗಳಲ್ಲಿ ಎರಡು ಸಾಧ್ಯತೆಗಳಿವೆ. (೧) ಹೊಸ ಪ್ರದೇಶಗಳನ್ನು ಸಾಗುವಳಿ ಮಾಡಲು ಪ್ರಯತ್ನಿಸುವುದು. (೨) ಕೃಷಿಯನ್ನು ಹೆಚ್ಚಿಸುವುದು.

ಹೊಸ ಪ್ರದೇಶಗಳ ಸಾಗುವಳಿಗೆ ನೀರಾವರಿ ಅನುಕೂಲತೆಗಳನ್ನು ಹೆಚ್ಚಿಸಬೇಕು. ಕೆಲವು ಸ್ಥಳಗಳಲ್ಲಿ ವಾಸಸ್ಥಗಳನ್ನೇರ್ಪಡಿಸಬೇಕು. ಈಗ ಸದ್ಯಕ್ಕೆ ೨೫೦ ಮಿಲಿಯ ಎಕ್ರೆಯಷ್ಟು ಸಾಗುವಳಿ ಯೋಗ್ಯವಿರುವ ಬಂಜರು ಸ್ಥಳವಿದೆ ಎಂದು ಲೆಕ್ಕ ಹಾಕಿರುವರು. ಇಲ್ಲಿ ಮಳೆಗಳ ಅಭಾವವಿರುವುದರಿಂದ ಸಾಗುವಳಿ ಅಸಾಧ್ಯವೆನ್ನಲಾಗಿದೆ. ಯೋಗ್ಯ ಬಂಡವಾಳ ಮತ್ತು ಶ್ರಮದಿಂದ ಇವುಗಳ ಪುನರೋದ್ಧಾರವು ಸಾಧ್ಯವಿದೆ.

ಹೆಂಡತಿ ಮಾರಿ ಕುದುರೆ ಪಡೆಕೊಂಡ

ಸಂಯುಕ್ತ ಪ್ರಾಂತ್ಯದ ಪಲ್‌ವಾಲ್ ಎಂಬ ಪಟ್ಟಣದ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಲ್ಲಿ ವಿಚಿತ್ರ ಮೊಕದ್ದಮೆಯೊಂದು ವಿಚಾರಣೆಗೆ ಬಂದಿದೆ. ಅಲ್ಲಿ ಬಾರಾಗಿ ರಾಮುಲಾಲ್‌ನೆಂಬ ಅಶ್ವಪ್ರಿಯನಿದ್ದಾನೆ. ಅವನಿಗೆ ಕುದುರೆಗಳೆಂದರೆ ತುಂಬಾ ಪ್ರೀತಿ. ಉಮಾರಾವ್ ಬಾರಾಗಿ ಎಂಬ ಒಬ್ಬ ಸಂಬಂಧಿಕನ ಹತ್ತಿರ ಒಂದು ಕುದುರೆ ಇತ್ತು. ರಾಮ್‌ಲಾಲನು ಅದನ್ನು ಪಡೆಯಲು ತನ್ನ ಸ್ವಂತ ಹೆಂಡತಿಯನ್ನು ಉಮಾರಾವನಿಗೆ ಮಾರಿದನಂತೆ. ಈ ವಿಚಿತ್ರ ವ್ಯಾಪಾರವನ್ನು ಅವನ ಹೆಂಡತಿ ಶ್ರೀಮತಿ ಗಂಗಾದೇವಿಯೆಂಬವಳು ತೀಕ್ಷ್ಣವಾಗಿ ವಿರೋಧಿಸಿದಳು. ಆದರೆ ಅವಳ ಅಶ್ವ ಪ್ರಿಯ ಗಂಡನ ಹತ್ತಿರ ಯಾವ ವಿರೋಧವೂ ನಡೆಯಲಿಲ್ಲ. ಕೊನೆಗೆ ಗಂಗಾದೇವಿಯು ಕೋರ್ಟಿನಲ್ಲಿ ಪತಿಯ ಮೇಲೆ ದಾವೆ ಹೂಡಿದ್ದಾಳೆ. ಎರಡನೇ ಪತಿಯೊಬ್ಬನನ್ನು ಸ್ವೀಕರಿಸುವುದು ಆ ನಾರಿಗೆ ಹೇಗೆ ಒಡಂಬಟ್ಟೀತು?

ನಮ್ಮ ಅಧ್ಯಾತ್ಮಿಕ ಬೆಳವಣಿಗೆ

ಲೌಕಿಕ ದೃಷ್ಟಿಯಿಂದ ನಾವು ಬೆಳೆದಿರಬಹುದು. ಆದರೆ ನಮ್ಮಲ್ಲಿ ಅಧ್ಯಾತ್ಮಿಕ ಬೆಳವಣಿಗೆ ಎಷ್ಟಾಗಿದೆ ಎಂದು ಅಳತೆ ಮಾಡಬೇಕಾದರೆ ಈ ವಿಷಯಗಳು ನಮ್ಮಲ್ಲಿ ಸ್ವಲ್ಪಮಟ್ಟಿಗಾದರೂ ಇರಬೇಕು:— ಪ್ರಶಾಂತವಾದ ಮನೋಭಾವ, ಸಮಾನ ದೃಷ್ಟಿ, ನಿರ್ಭಯ ಮನೋವೃತ್ತಿ, ವೈರಾಗ್ಯ ಬುದ್ಧಿ, ಸಂತೃಪ್ತಿ, ಪ್ರಾಣಿದಯೆ, ಭಕ್ತಿ.

ಮಿತ್ರರ 'ಮಿತ್ರ'

ಮೆಸರ್ ಸ್ಮಿಡ್ ಎಂಬುದು ಜರ್ಮನ್ ಬಾಂಬರುಗಳ ಹೆಸರು. ಸ್ಪಿಟ್‌ಫಾಯರ್ ಎಂದು ಮಿತ್ರ ವಿಮಾನಗಳ ಹೆಸರು. ಜೆರುಸಲೇಮಿನಲ್ಲಿ ರುಡೋಲ್ಫ್ ಮೆಸರ್ ಸ್ಮಿಡ್ ಎಂಬವನು ತನ್ನ ಹೆಸರನ್ನು ರುಡೋಲ್ಫ್ ಸ್ಪಿಟ್‌ಫಾಯರ್ ಎಂದು ಬದಲಾಯಿಸಬೇಕೆಂದು ಅಧಿಕಾರಿಗಳಿಗೆ ಅರ್ಜಿ ಮೂಲಕ ವಿನಂತಿಸಿಕೊಂಡಿರುವನಂತೆ.

ಈ ತತ್ವಜ್ಞಾನದ ಉಪಯೋಗವೇನು?

ಡಾ॥ ಸಿ. ಇ. ಎಂ. ಜೋಡರ ಲೇಖದಿಂದ

[illegible] ಉಪಯೋಗವಿಲ್ಲದ್ದೆಂದು [illegible] ತತ್ವ [illegible] ಎಂದು ತಿಳಿಯಬೇಕು. [illegible] ಜ್ಞಾನಿಗಳ ಕುರಿತು ಅನೇಕ ಹಾಸ್ಯ [illegible] ಹುಟ್ಟಿಗೆವೆ.

ತತ್ವ ಜ್ಞಾನಿಗೆ ಜ್ಞಾಪಕ ಶಕ್ತಿ ಕಡಮೆ ಯಿಂದೂ ಅವನು ತನ್ನ ಸ್ವಂತದ ಕೆಲಸ [illegible] ಅಸ್ವಸ್ಥನಾಗಿ ಮಾಡುವವ [illegible] ಮಾಡುತ್ತಾರೆ. ಕನ್ನಡಕ [illegible] ಕಿಸೆಯಲ್ಲಿಟ್ಟು ಕೋಣೆಯೆಲ್ಲ ಹುಡುಕುವುದು ಅವರ ಪದ್ಧತಿ, ನೀಲಗಿರಿಯಂತಹ [illegible] ಮೋಸಗಾರರ ಜಾಲದಲ್ಲಿ ಅವರು ಬೇಗನೇ ಸಿಕ್ಕಿ ಬೀಳುತ್ತಾರೆ—ಹೀಗೆಂದು ಕೆಲವರ ಮತ. ಅವರು ಗಂಭೀರ ಸ್ವಭಾವದವರೂ, ಜೀವನದ ಏಳು ಬೀಳುಗಳಿಗೆ ಸಿಕ್ಕಿ ಬೀಳದವರೂ ಆಗಿದ್ದು ಜೀವನಾನುಭವದ ತಲೆನೋವು ಕುಟ್ಟಸಗಳಿಗೂ ಅದರ ದುರಂತ ವಿಷಾದಗಳಿಗೂ ಅವರು ಅಡಿಮೇಲಾಗುವವರಲ್ಲ ವೆಂತಲೂ ಕೆಲವರು ವಾದಿಸುತ್ತಾರೆ

ಇವು ಬರೀ ಊಹಾಪೋಹೆಗಳೆಂದು ನನ್ನ ಭಾವನೆ. ನನ್ನ ಸ್ವಂತ ಅನುಭವದಿಂದ ಹೇಳ ಬೇಕಾದರೆ—ತತ್ವ ಜ್ಞಾನಿಗಳು ಸರ್ವ ಸಾಧಾರಣವಾಗಿ ಎಲ್ಲಾ ಮಾನವರಂತೆ ವರ್ತಿಸುತ್ತಾರೆ ಸಹಜ ಮನುಷ್ಯ ಪ್ರಕೃತಿ ಸ್ವಭಾವಗಳು ಅವರಲ್ಲೂ ಕಾಣಬಹುದು. ಸಮಯಕ್ಕೆ ಗುಂಡು ಸೂಜಿ ಸಿಕ್ಕದಿದ್ದರೆ ಅವರು ಶಪಿಸಿಕೊಳ್ಳುತ್ತಾರೆ. ಸಿಟಿ ಬಸ್ ತಪ್ಪಿದರೆ ಅವರಿಗೂ ಸಿಡಿಯಾದ ಸಿಟ್ಟು ಬರುತ್ತದೆ ತಮ್ಮ ಧರ್ಮಪತ್ನಿಗಳೊಂದಿಗೆ ಅವರಿಗೂ ಕಷ್ಟ ತಪ್ಪಿದ್ದಿಲ್ಲ ಅವರಲ್ಲಿ ತತ್ವ ಜ್ಞಾನ ಭಾವದ ಲಕ್ಷಣಗಳಿಲ್ಲವೆಂದಲ್ಲ' ತತ್ವಜ್ಞಾನದಿಂದಲೇ ಆ ಭಾವ ಅವರಲ್ಲುಂಟಾಗುತ್ತದೆಂಬುವನ್ನು ಮಾತ್ರ ನಾನು ಒಪ್ಪುವುದಿಲ್ಲ.

ಸಾಬೂನಿನಿಂದ ನಮಗೆ ಉಪಯೋಗವಿದೆ ಅಂಥ ಉಪಯೋಗ ತತ್ವ ಜ್ಞಾನದಿಂದ ಇಲ್ಲ ಅದರಿಂದ ನಾವು ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲಿಕ್ಕಾಗುವುದಿಲ್ಲ ಇಲ್ಲವೆ ನಮಗೆ ಮೇಲಿನ ಹದ್ದೆ ಅದರಿಂದ ಸಿಗುವುದಿಲ್ಲ ತತ್ವ ಜ್ಞಾನದಿಂದ ಸಮಾಜದಲ್ಲಿ ಅಗ್ರಸ್ಥಾನ ಸಿಕ್ಕುವಂತಿಲ್ಲ ಸ್ನೇಹಿತರಲ್ಲಿ ಜನಪ್ರಿಯರೆಂದೆನಿಸಿಕೊಳ್ಳಲ್ಲಿಕ್ಕೂ ಅದರಿಂದ ಸಾಧ್ಯವಿಲ್ಲ

ಜೀವನವು ಒಂದು ಕಲೆಯಾಗಿದ್ದರೆ ತತ್ವ ಜ್ಞಾನಿಗಳು ಅದರ ಚಿತ್ರಗಾರರಲ್ಲ. ಜೀವನವು ಒಂದು ದೊಡ್ಡ ಸಮಸ್ಯೆಯೆಂದು ತೆಗೆದು ಕೊಂಡರೆ ತತ್ವಜ್ಞಾನ ಅದನ್ನು ಗುಣಪಡಿಸುವ ರಾಮಬಾಣ 'ಔಷಧಿ' ಅಲ್ಲ ಇದು ತನಕ ಜ್ಞಾನಿಗಳಿಂದ ಬೋಧಿಸಲ್ಪಟ್ಟ ತತ್ವ ಜ್ಞಾನದಿಂದ ತತ್ವಜ್ಞಾನಿಯು ಒಳ್ಳೆಯ ಮನಷ್ಯನಾಗುವಂತಿಲ್ಲ ತತ್ವ ಯೋಚನೆಯಿಂದ ಅವನಿಗೆ ಸುಖವೂ ದೊರೆಯದು ಆನಂದವೂ, ಆಲೋಚನೆಗಳೂ ಬೇರೆ ಬೇರೆ ವಿಷಯಗಳು. ಹಿಂದಿನ ಗ್ರೀಕರು ಹೇಳಿದಂತೆ ತತ್ವ ಜ್ಞಾನಿಯು 'ಆನಂದದ ಹಂದಿ' ಇಲ್ಲವೇ 'ಸುಖವಿಲ್ಲದ ಸೊಕ್ರೆಟಿಸ್' ಆಗಿರಬಹುದು

'ಸಾಮಾನ್ಯ ತಿಳುವಳಿಕೆಯಿಂದ ಸುಗಮ ಜೀವನ ಸಾಧನೆಯೇ ತತ್ವ ಜ್ಞಾನದ [illegible] ರೂಪ ಪ್ರಯೋಗ ಸಾರ್ವಜನಿಕ ಜೀವನವು ಒಂದು ಕಠಿಣ ಕಲೆ. ಅದನ್ನು ಅಭ್ಯಾಸಿಸುವುದೂ ಕಷ್ಟ. ಯುಗಾಂತರಗಳಿಂದ ಜೀವನದ ಅನುಭವ ಪಡೆದು ಹಿರಿಯರು ಅನೇಕ ಗಾದೆಗಳನ್ನು ಮಾಡಿಟ್ಟಿರುವರು. 'ದುಃಖದ ಪಕ್ಷಿಗಳು ನಮ್ಮ ತಲೆಯ ಮೇಲೆ ಹಾರದಂತೆ ನೋಡಿ ಕೊಳ್ಳುವುದು ಕಷ್ಟ. ಆದರೆ ಅವು ನಮ್ಮ ತಲೆ ಕೂದಲಿನಲ್ಲಿ ಗೂಡು ಕಟ್ಟದ್ದಂತೆ ನಾವು ಮಾಡಬಹುದು ' ಚೀನಿಯರು ಗಾದೆ ಕಟ್ಟುವುದರಲ್ಲಿ ತುಂಬಾ ನಿಪುಣರು.

ಸರಳ ತರ್ಕದಿಂದ ನಾವು ಕೆಲವು ತತ್ವಗಳನ್ನು ತಿಳಕೊಳ್ಳಬಹುದು ಸುಖೋಪಭೋಗಗಳನ್ನು ಪಡೆಯಲು ಪ್ರಯತ್ನಿಸಬಾರದೆಂಬ ತತ್ವವನ್ನು ಯೋಚಿಸಿದ ಕೂಡಲೇ ನಾವು ತತ್ವ ಜ್ಞಾನದೊಳಗೆ ಕಾಲಿಟ್ಟಂತಾಗುವುದು. ಇದನ್ನು ಅರಿಸ್ಟೋಟಲನೆಂಬ ಜ್ಞಾನಿಯು ಹೀಗೆ ಸಮರ್ಥಿಸುತ್ತಾನೆ—"ಯಾವುದನ್ನೂ ವಿಪರೀತ ಮಾಡಬಾರದು ಯಾವುದನ್ನಾದರೂ ಒಂದು ಸಲ ಮಾತ್ರ ಕುಡಿಯಲು ಸಿದ್ಧರಿರಬೇಕು ಆದರೆ ಹೆಚ್ಚಾಗಿ ಯಾವುದನ್ನು ಕುಡಿಯಬಾರದು ನಿಮ್ಮ ಪ್ರಕೃತಿಯ ಪ್ರತಿಯೊಂದು ಭಾಗವನ್ನ ಅಭಿವೃದ್ಧಿಗೊಳಿಸಿರಿ ಆದರೆ ಇತರರು ಅದರ ಮೇಲೆ ಸ್ವಾಮಿತ್ವ ನಡೆಸದ ಹಾಗೆ ನೋಡಿಕೊಳ್ಳಬೇಕು ನಿಮ್ಮ ಮನಸ್ಸು, ಶರೀರ, ಆತ್ಮಗಳಿಗೆ ಸ್ವೇಚ್ಛೆಯಾಗಿ ವ್ಯಾಯಾಮ ಕೊಡಿರಿ ಕೆಲಸ ಮಾಡಿರಿ, ತಿನ್ನಿರಿ, ಯೋಚಿಸಿರಿ, ಕುಡಿಯಿರಿ, ಸೇದಿರಿ, ಮತ್ತು ಪ್ರಣಯ ಮಾಡಿರಿ• ಆದರೆ ಇವುಗಳನ್ನು ಅತಿ ಹೆಚ್ಚು ಮಾಡಲು ಮನಸ್ಸು ಉಂಟಾದ ಕೂಡಲೇ ನಿಲ್ಲಿಸಿ ಬಿಡಿರಿ. ಇದರಿಂದ ಒಳ್ಳೆಯ ಜೀವನವು ನಿಮಗೆ ದೊರೆಯುವುದು "

ಉದಾಹರಣೆಗಾಗಿ ಸಿಗರೇಟಿನ ಅಭ್ಯಾಸ ಮೊದಲು ನಾನದನ್ನು ಪ್ರಾರಂಭಿಸಿದಾಗ ನನಗೆ ತುಂಬಾ ಆನಂದ ಸಿಕ್ಕಿದಂತಾಯಿತು ಆ ಚಾಳಿಯು ಬೆಳೆಯುತ್ತಾ ಬಂದಷ್ಟಕ್ಕೆ ನನ್ನ ಕಷ್ಟಗಳು ಹೆಚ್ಚಿದುವು ಕೆಲವು ಸಲ ಜೇಬಿನಲ್ಲಿ ಸಿಗರೇಟು ಇಲ್ಲದಿದ್ದರೆ ಭಯಂಕರ ಮಾನಸಿಕ ತೊಂದರೆಗೆ ನಾನು ಗುರಿಯಾಗುತಿದ್ದೆ ನನ್ನ ಸಕಲ ಸಮಯ, ಸಂಪತ್ತು, ಶಕ್ತಿಗಳು ಅದರಲ್ಲೇ ಕಳೆದು ಹೋದಂತೆ ತೋರಿತು. "ಇದು ಹುಚ್ಚುತನ" ಎಂದು ಕೊಂಡೆ. ಮರುದಿನದಿಂದ ಆ ದರಭ್ಯಾಸವನ್ನು ಬಿಟ್ಟೇ ಬಿಟ್ಟೆ. ಅಂದಿನಿಂದ ಒಂದು ತರದ ಆನಂದವು ನನಗೆ ಅನುಭವವಾಯಿತು "ವಿವೇಕದ ಅರಮನೆಯು ಅತಿರೇಕ ಅನುಭವದ ರಾಜದ್ವಾರದೊಳಗೆ ಇದೆ" ಎಂದ ಬ್ಲೇಕನೆಂಬ ತತ್ವ ಜ್ಞಾನಿಯ ಮಾತು ನೆನಪಿಗೆ ಬಂತು:

ಆರೋಗ್ಯವಂತ ಮಕ್ಕಳ ಕೆನ್ನೆಗಳು ಕೆಂಪಾಗಿರುತ್ತವೆ. ಅದು ಆರೋಗ್ಯ ಶರೀರ ಪ್ರಕೃತಿಯ ಚಿಹ್ನೆ. ಅದೇ ರೀತಿ ಸತ್ಕಾರ್ಯದಲ್ಲಿ ತೊಡಗಿದರೆ ನಮಗೆ ಸುಖ ಪ್ರಾಪ್ತಿಯಾಗುವುದು ಖಂಡಿತ. ಸ್ವಸ್ವಾರ್ಥವೆಂಬ ಭ್ರಮೆಯ ಹೊಂಡದಿಂದ ಎತ್ತಲ್ಪಟ್ಟವರಾಗಿ ಉತ್ತಮ ಧ್ಯೇಯವೊಂದರ ಸಾಧನೆಗೆ ತೊಡಗಿರಿ ಆಗ ನಿಮಗೆ ಆನಂದದ ಅನುಭವವಾಗುವುದು. ಆನಂದವೆಂಬುದಿದು ಕೈಯಿಂದ ಕಟ್ಟಬಹುದಾದ ಮನೆಯಲ್ಲ ಅದು ನಮಗೆ ಪಕ್ಕನೆ ದೊರೆಯುವಂತಾದ್ದು—ಹಾದಿಯಲ್ಲಿ ಹೋಗುವಾಗ ಅಕಸ್ಮಾತ್ತಾಗಿ ಕಿವಿಗೆ ಇಂಪುಗೊಳಿಸುವ ಕೋಗಿಲೆಯ ಗಾನದಂತೆ

ತತ್ವ ಜ್ಞಾನವೆಂದರೆ ಜಗತ್ತಿನ ಚಿಕ್ಕ ಪುಟ್ಟ ವಿಷಯಗಳನ್ನು ತಿಳಿದು ಕೊಳ್ಳುವ ಸಾಧನೆಯಲ್ಲ ಅದು ವಿಶ್ವದ ಮರ್ಮವನ್ನೇ ತಿಳಿಯುವ ಪ್ರಯತ್ನವಾಗಿರಬೇಕು. ಭೂಗೋಳವೆಂದರೆ ಭೂಮಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿದು ಕೊಳ್ಳುವ ಹಾಗೆ "ತತ್ವ ಜ್ಞಾನಿಗಳೆಂದರೆ ಕತ್ತಲೆಯ ಕೋಣೆಯಲ್ಲಿಲ್ಲದ ಒಂದು ಕಪ್ಪು ಬೆಕ್ಕನ್ನು ಹುಡುಕುವ ಕುರುಡರೆಂದು" ಕೆಲವರು ಹಾಸ್ಯ ಮಾಡಿದ್ದಾರೆ ಅದಕ್ಕೆ ಅವರು "ಹೌದು, ಕಣ್ಣಿದ್ದ ನಿಮಗಾದರೂ ಅದು ಸಿಗುತಿತ್ತು" ಎಂದು ಉತ್ತರ ಕೊಟ್ಟರಂತೆ

ಇನ್ನೊಂದು ವಿಷಯ ನೀವು ಈ ವಿಶ್ವದ ಕುರಿತು ಹೆಚ್ಚೆಚ್ಚು ಅರಿತು ಕೊಳ್ಳಲು ಪ್ರಯತ್ನ ಮಾಡುತಿದ್ದ ಹಾಗೆ ಅದರ ವಿಶಾಲತೆಯ ಅರಿವು ನಿಮಗಾಗುತ್ತದೆ ಆ ಮೇಲೆ ನಿಮಗೆ ತಿಳಿಯದ ಅಗಾಧ ವಿಷಯಗಳಿವೆ ಎಂದು ನಿಮಗೆ ತಿಳಿದು ಬರುತ್ತದೆ ಆಗ ನಿಮಗೆ ನಿರಾಶೆಯಾಗಬಹುದು ಕತ್ತಲೆಯ ಕೋಣೆಯಲ್ಲಿರಿಸಿದ ಚಿಕ್ಕ ದೀಪವು ನೆಲದಿಂದ ಮೇಲಕ್ಕೆ ಎತ್ತಲ್ಪಟ್ಟ ಹಾಗೆ ಪ್ರಕಾಶವು ಕಡಿಮೆಯಾದಂತೆ

ಈ ಜಗತ್ತು ಸತ್ಯವೆಂದು ಕೆಲವರೂ ಅಸತ್ಯವೆಂದು ಕೆಲವರೂ ವಾದಿಸುತ್ತಾರೆ ಸತ್ಯವೆನ್ನುವವರು ನಮ್ಮ ಕಣ್ಣೆದುರಿಗೆ ಕಾಣುವ ವಿಶ್ವದ ದೃಷ್ಟಾಂತವನ್ನೇ ಆಧಾರವಾಗಿ ತಿಳಿಸುತ್ತಾರೆ• ಸತ್ಯ, ಸೌಂದರ್ಯಗಳೆಂಬ ಆ ಎರಡು ಭಾವನೆಗಳ [illegible] ವಿಶೇಷಗಳನ್ನು ಗ್ರೀಕ್ ತತ್ವಜ್ಞರು ಒಪ್ಪಿರುವರು. ಒಳ್ಳೆ ಸ್ವಭಾವವೂ ಈ ವಿಶ್ವದಲ್ಲಿ ಅನುಭವಿಸುವ ಇನ್ನೊಂದು ಗುಣ ವಿಶೇಷ. ಸತ್ಯವನ್ನು ವಿಜ್ಞಾನಿ ತತ್ವ ಜ್ಞಾನಿಗಳೂ, ಸೌಂದರ್ಯವನ್ನು ಕಲೋಪಾಸಕರೂ ನಮಗೆ ಆಗಿಂದಾಗ್ಗೆ ತೋರಿಸಿ ಕೊಡುತ್ತಾರೆ. ಸತ್ಯಸ್ವಭಾವವನ್ನು ಮಾನವನ ಗುಣಗಳಲ್ಲಿ ನಾವು ಕಾಣಬಹುದು. ಸೌಂದರ್ಯದ ಸವಿಯನ್ನು [illegible] ಬೇಕೆಂಬ ಲವಲವಿಕೆ ಇಲ್ಲದೆ ಅದನ್ನು ಅನುಭವಿಸಲಾಗುವುದಿಲ್ಲ ನಾವು ಒಳ್ಳೆಯವರಾಗಬೇಕೆಂದು ನಿರ್ಧರಿಸದಿದ್ದರೆ ಒಳ್ಳೇ ಸ್ವಭಾವವನ್ನು ಅರಿತು ಕೊಳ್ಳುವುದಕ್ಕಾಗುವುದಿಲ್ಲ ಉತ್ತಮ ಧ್ಯೇಯಗಳನ್ನು ಇಟ್ಟುಕೊಳ್ಳದೆ ನಾವು ಉನ್ನತಿಯನ್ನು ಪಡೆಯಲ್ಲಿಕ್ಕಾಗುವುದಿಲ್ಲ.

ಹೀಗೆ ನಮ್ಮ ಇಚ್ಛಿತ ಧ್ಯೇಯಗಳನ್ನು ಹೊಂದಬೇಕಾದರೆ ನಾವು ಸತ್ಯ ಶೋಧನೆಯನ್ನು ಕೈಕೊಳ್ಳಬೇಕು. ಇದರಿಂದ ಉಚ್ಚತರದ ಜೀವನವನ್ನು ನಾವು ಪಡೆಯಬಹುದು ಇದನ್ನು ವಿದ್ಯಾವಂತರು ಮಾತ್ರವಲ್ಲ ಅವಿದ್ಯಾವಂತರಾದ ಜನ ಸಾಮಾನ್ಯರೆಲ್ಲರೂ ಅನುಸರಿಸಬಹುದು. ಈ ಜಗತ್ತು ಶೂನ್ಯವಾದದಲ್ಲ ನಾವು ನೋಡುವ ಅನುಭವಿಸುವ ವಸ್ತು ವಿಷಯಗಳೆಲ್ಲವೂ ಬರೀ ಭ್ರಮೆಯಾಗಿರುವುದಿಲ್ಲ ಹೀಗೆ ಈ ರೀತಿ ಧ್ಯೇಯ ಸಾಧನೆಯಲ್ಲಿ ತೊಡಗುವುದರಿಂದ, ಜೀವನದಲ್ಲಿ ಅಭಿರುಚಿ ಹೆಚ್ಚುತ್ತದೆ

ತಮ್ಮ ಪ್ರೀತಿಯ ಧ್ಯೇಯಗಳನ್ನು ಸಾಧಿಸುವ ಪವಿತ್ರ ಕಾರ್ಯದಲ್ಲಿ ತೊಡಗಿದ ಅನೇಕಾನೇಕ ಮಹಾ ಪುರುಷರು ಹೇಗೆ ಮೃತ್ಯುವಿನ ಭಯ ವಿಲ್ಲದೆ ವರ್ತಿಸಿದರೆಂಬುದಕ್ಕೆ ಅನೇಕ ನಿದರ್ಶನಗಳು ಚರಿತ್ರೆಯಲ್ಲಿಯೂ ಪುರಾಣಗಳಲ್ಲಿಯೂ ದೊರೆಯುತ್ತದೆ ಸತ್ಯಹರಿಶ್ಚಂದ್ರ ಸತ್ಯಕ್ಕಾಗಿ, ಪ್ರಹ್ಲಾದನು ವಿಷ್ಣು ಭಕ್ತಿಗಾಗಿ—ಹೀಗೆ ತುಂಬಾ ಇವೆ

ಗ್ರೀಕ್ ತತ್ವ ಜ್ಞಾನಿಯಾದ ಸೊಕ್ರೆಟಿಸನು ಮರಣ ದಂಡನೆಯ ಶಿಕ್ಷೆ ವಿಧಿಸಲ್ಪಟ್ಟು ತನ್ನ ಅಂತಿಮ ಕಾಲವು ಸಮೀಪಿಸುತ್ತಿರುವಾಗಲಾದರೂ ತನ್ನ ಮೆಚ್ಚಿನ ಬೋಧನೆಗಳಿಂದ ಶಿಷ್ಯ ವರ್ಗವನ್ನು ಸ್ಫೂರ್ತಿಗೊಳಿಸಿದನು ಕೊನೆಗೆ ಕ್ರೂರ ವಿಷದ ಬಟ್ಟಲು ಅವನ ಕೈಗೆ ಕೊಡಲ್ಪಟ್ಟಿತು. ಆಗಲೂ ಆ ಮಹಾ ಜ್ಞಾನಿಯು ತನ್ನ ಶಿಷ್ಯರಿಗೆ ತಾನು ಅರಿತು ಕೊಂಡ ವಿಷಯಗಳನ್ನು ಅತ್ಯಂತ ಗಾಂಭೀರ್ಯದಿಂದಲೂ ಅಪ್ರತಿಮ ಶಾಂತತೆಯಿಂದಲೂ ವಿವರಿಸುತಿದ್ದನು ಅದು ತತ್ವ ಜ್ಞಾನ. ಒಂದು ಕಾಲಕ್ಕಾದರೂ ಅಂಥವನು ತತ್ವ ಜ್ಞಾನಿಯೇ ಸರಿ.

ರೇಡಿಯೋ ಎಕ್ಸ್‌ರೇ

ದೇಹದೊಳಗೆ ಹಾಳಾದ ಅವಯವಗಳನ್ನು ಪರೀಕ್ಷಿಸಲು ಎಕ್ಸರೇ ಯಂತ್ರದ ಮೂಲಕ ಚಿತ್ರಗಳನ್ನು ತೆಗೆಯುವುದನ್ನು ಬಲ್ಲೆವು. ಈಗ ದಕ್ಷಿಣ ಅಮೇರಿಕದ ಓರ್ವ ವಿಜ್ಞಾನಿಗಳು ಅತೀ ದೂರದ ದೇಶದಲ್ಲಿರುವ ಓರ್ವ ಮನುಷ್ಯನ ದೇಹದೊಳಗಿನ ಹೃತ್ಕೋಶದ ಚಲನವಲನದ ಅವಸ್ಥೆಯ ಚಿತ್ರವನ್ನು ತೆಗೆಯುವ ರೇಡಿಯೋ ಎಕ್ಸರೇ ಯಂತ್ರವೊಂದನ್ನು ತಯಾರಿಸಿರುವರು. ಅದರ ಹೆಸರು ಸ್ಪಿಗ್ಮೋಫೊನೊಕಾರ್ಡಿಯಾಗ್ರಾಫ್ ಎಂದು.

ದಿನವಹಿ ಉಪಯೋಗದ ಲೋಹದ
ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ
ದಾಗಿನೆಗಳ ಭಂಡಾರ
"ಕಲ್ಯಾಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ. ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ
ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಜಗತ್ತಿನ ಜನನ

[illegible] "ನಾವು [illegible] ಎಲ್ಲಿಂದ, ನಾವು ಎತ್ತ ಕಡೆಗೆ ಹೋಗು [illegible]" ಎಂಬ ಪ್ರಶ್ನೆಯನ್ನು ಉತ್ತರಿಸಲು [illegible] ಯತ್ನ ಪಟ್ಟಿರುವರು.

ರಾತ್ರಿ ಸಮಯದಲ್ಲಿ ಗಗನದಲ್ಲಿ ಕಾಣಿಸುತ್ತಿರುವ ಅಸಂಖ್ಯಾತ ನಕ್ಷತ್ರ ಮಂಡಳಗಳನ್ನು ನೋಡಿದರೆ ಅಷ್ಟು ವಿಸ್ತಾರವಾಗಿ ವ್ಯಾಪ್ತವಾಗಿದ್ದ ಈ ವಿಶ್ವದ ಪರಿಚಯವನ್ನು ಮಾಡಿಕೊಳ್ಳುವುದು ನಮ್ಮ ನೇತ್ರಗಳ ಉಪಯೋಗದಿಂದ ಮಾತ್ರ ಸಾಧ್ಯವಲ್ಲವೆಂದು ನಮಗೆ ತೋರವುದು. ಈ ವಿಶ್ವದಲ್ಲಿರುವ ಯಾವತ್ತೂ ಪದಾರ್ಥವೂ ಹಾಗೂ ನಮ್ಮ ಭೂಮಿಯು ಅಸಂಖ್ಯಾತ ಸೂಕ್ಷ್ಮ ಅಣುಗಳಿಂದ ಕೂಡಿದಾಗಿರುತ್ತದೆ. ಈ ಅಣುಗಳ ಪರಿಶೀಲನೆಯಿಂದ ಸಮಸ್ತ ವಿಶ್ವದ ಪರಿಚಯವನ್ನು ನಾವು ಮಾಡಿಕೊಳ್ಳಬಹುದೆಂದು ವಿಜ್ಞಾನಿಗಳು ವ್ಯಕ್ತಪಡಿಸಿರುವರು.

ಅದೃಷ್ಯ ಆದರೆ ಪ್ರಾಮುಖ್ಯವಾದ ಅಣುಗಳು

'ಪರಮಾಣು' ಎಂದರೆ ಏನು. ಸೂಕ್ಷ್ಮದರ್ಶಕದಲ್ಲೂ ನೋಡಲೂ ಅಸಾಧ್ಯವೆನಿಸಿಕೊಳ್ಳುವ ಪದಾರ್ಥದ ಕಣ ಅದು. ಇಂಥಹ ಸೂಕ್ಷ್ಮವಾದ ಅಣುವನ್ನು ಇನ್ನೂ ಎರಡಾಗಿ ವಿಭಾಗಿಸಬಹುದು. ಧನವಿದ್ಯುತ್ತಿನಿಂದ ಕೂಡಿದ್ದ ಪ್ರೊಟನ್, ಮತ್ತು ಋಣವಿದ್ಯುತ್ತಿನಿಂದ ಕೂಡಿದ ಇಲೆಕ್ಟ್ರಾನ್ ಎಂಬವು ಈ ಎರಡು ವಿಭಾಗಗಳು ಭೂಮಿಯು ಸೂರ್ಯನ ಸುತ್ತಲು ಆಕರ್ಷಿತವಾಗಿ ಸುತ್ತಾಡುತ್ತಿರುವಂತೆ ಇಲೆಕ್ಟ್ರಾನ್ ಭಾಗವು ಪ್ರೊಟೊನಿನ ಸುತ್ತಲೂ ಚಲಿಸುತ್ತಾ ಇರುತ್ತದೆ.

ಈ ವಿಶ್ವದಲ್ಲಿರುವ ಪ್ರತಿಯೊಂದು ಮೂಲ ಧಾತುವಿನಲ್ಲಿ ಅನೇಕ ಪ್ರೊಟೊನುಗಳು, ಇಲೆಕ್ಟ್ರೋನುಗಳು, ನಿಯಮಿತ ಸಂಖ್ಯೆಯಲ್ಲಿ ಸೇರಿಕೊಂಡಿವೆ. ಅತ್ಯಂತ ಲಘುವೆನಿಸಿಕೊಳ್ಳುವ ಜಲಜನಕದ ಒಂದು ಅಣುವಿನಲ್ಲಿ, ಒಂದು ಪ್ರೊಟೋನು, ಒಂದು ಇಲೆಕ್ಟ್ರೋನು ಕೂಡಿರುವುದು. ಹೀಗೆ ವಿಶ್ವದ ವಿವಿಧ ಮೂಲ ಧಾತುವುಗಳಲ್ಲಿ ವಿವಿಧ ಸಂಖ್ಯೆಯಲ್ಲಿ ಈ ಪ್ರೊಟೋನು ಇಲೆಕ್ಟ್ರೋನುಗಳು ಕೂಡಿಕೊಂಡು ಅವು ಮೇಲೆ ಹೇಳಿದಂತೆ ಚಲಿಸುತ್ತಾ ಇವೆ. ಈ ಚಲನೆಯು ಅವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆ.

ಆಕಾಶವು ಶೂನ್ಯವಲ್ಲ

ನಮ್ಮ ಸುತ್ತಲೂ ವ್ಯಾಪಿಸಿಕೊಂಡಿರುವ ಆಕಾಶವು ಶೂನ್ಯವಾಗಿರುವುದೆಂದು ಅನೇಕರ ಭಾವನೆಯಾಗಿರಬಹುದು. ಆದರೆ ಅದು ನಿಜವಲ್ಲ. ಈ ಆಕಾಶದಲ್ಲಿ ಅನೇಕ ಬಗೆಯ ಪದಾರ್ಥಗಳು ಅತ್ಯಂತ ಸೂಕ್ಷ್ಮ ರೂಪದಲ್ಲಿ ಪ್ರಸರಿಸಿಕೊಂಡಿವೆ ಎಂಬುದಾಗಿ ವಿಜ್ಞಾನಿಗಳು ಕಂಡು ಹಿಡಿದಿರುವರು. ಈ ಪದಾರ್ಥಗಳು ಎಲ್ಲಿಂದ ಬಂದವು? ಸೂರ್ಯನಿಂದ ಮತ್ತು ಇತರ ನಕ್ಷತ್ರಗಳಿಂದ. ಸೂರ್ಯನಲ್ಲಿ ಮತ್ತು ನಕ್ಷತ್ರಗಳಲ್ಲಿ ನಿರಂತರವೂ ನಡೆಯುತ್ತಿರುವ ಸ್ಫೋಟನಗಳಿಂದ ಪದಾರ್ಥಗಳು ಮೇಲೆ ಹೇಳಿದ ರೀತಿ ಆಕಾಶದಲ್ಲಿ ಪ್ರಸರಿಸಿಕೊಂಡಿರಲು ಕಾರಣವು. ಅಲ್ಲದೆ, ಆಕಾಶದ ಅತ್ಯಂತ ಅಂತರದ ದೆಸೆಯಿಂದ ಅದರಲ್ಲಿ ಪದಾರ್ಥವು ಅಧಿಕ ರಾಶಿಯಲ್ಲಿದೆ. ಎರಡು ಅಣುಗಳು ಯಾ ಒಂದು ಪ್ರೊಟೋನು ಯಾ ಇಲೆಕ್ಟ್ರೋನು ಸಮೀಪಿಸಿಕೊಂಡರೆ ಆಗ ಅವುಗಳೊಳಗೆ ಬಡಿದಾಟವು ಉಂಟಾಗುವುದೆಂದು ಪರಿಶೋಧನೆಗಳಿಂದ ಕಂಡುಹಿಡಿಯಲಾಗಿದೆ. ಒಂದು ಮೋಟಾರು ಲಾರಿಯು ಎತ್ತಿನ ಗಾಡಿಗೆ ಡಿಕ್ಕಿ ಬಡೆದಾಗ ಎತ್ತಿನ ಗಾಡಿಯ ಕೆಲವಂಶಗಳು ಲೋರಿಯೊಡನೆ ಕುಸಿದು ಹೋಗುವವು. ಇದೇತರದಲ್ಲಿ ಭಾರವಾದ ಒಂದು ಅಣುವು ಮೇಲೆ ಹೇಳಿದಂತೆ ಇನ್ನೊಂದಕ್ಕೆ ಡಿಕ್ಕಿ ಹೊಡೆದಾಗ ಇನ್ನೊಂದು ಅಣುವಿನ ಅಂಶವನ್ನು ಕಿತ್ತುಕೊಂಡು ಹೋಗಬಹುದು. ಹೀಗೆಉಂಟಾದ ಬಡಿದಾಟದ ಪರಿಣಾಮವಾಗಿ ಘರ್ಷಣೆಯು ಉಂಟಾಗುವುದು. ಈ ಘರ್ಷಣೆಯ ನಿಮಿತ್ತ ಉಷ್ಣವು ಉಂಟಾಗುವುದು.

ಜ್ಯೋತಿರ್ಮೇಘಗಳ ಉತ್ಪಾದನೆ ಹೇಗೆ ಆಯಿತು

ಸೂರ್ಯನ ಜನನವು ಹೇಗಾಯಿತು? ಎಂಬ ಪ್ರಶ್ನೆಯು ಕುರಿತು ಬಹಳ ದೀರ್ಘ ಅವಧಿಯ ಪರಿಶ್ರಮದ ಫಲವಾಗಿ, ಈ ಕೆಳಗಿನ ಜ್ಞಾನವು ಪ್ರಕಾಶಕವಾಗಿರುತ್ತದೆ.

ಈ ವಿಶ್ವದಲ್ಲಿ ಒಂದು ವಸ್ತುವು ಮತ್ತೊಂದನ್ನು ಆಕರ್ಷಿಸುತ್ತದೆಂದು 'ನ್ಯೂಟನ್' ಎಂಬ ವಿಜ್ಞಾನಿಯಿಂದ ಸ್ಥಾಪಿಸಲಾಗಿದೆ. ಈ ಸೂತ್ರವನ್ನು ಉಪಯೋಗಿಸಿ, ಸೂರ್ಯನ ಹುಟ್ಟಿನ ರಹಸ್ಯವನ್ನು ಬಹುಮಟ್ಟಿಗೆ ತಿಳಿಯಬಹುದು.

ಆಕಾಶದಲ್ಲಿ ಎರಡು ಅಣುಗಳು (ನ್ಯೂಟನ್ ಸೂತ್ರದ ಪ್ರಕಾರ) ಪರಸ್ಪರ ಆಕರ್ಷಿಸಲ್ಪಟ್ಟು ಅವುಗಳು ಸಂಘಟಿಸಿದವೆಂದು ಎಣಿಸೋಣ. ಈ ಸಂಘಟನೆಯಿಂದ, ಘರ್ಷಣೆಯು ಉಂಟಾಗಿ ಸ್ವಲ್ಪ ಉಷ್ಣದ ಉತ್ಪಾದನೆ ಆಗುವುದು ಮಾತ್ರವಲ್ಲದೆ, ದೊಡ್ಡ ಪರಿಮಾಣದ ಅಣುವೊಂದು ಉಂಟಾಗಿ ಈ ಪರಿಣಾಮದಿಂದ ಅದರ ಆಕರ್ಷಣಾ ಶಕ್ತಿಯು ಅಧಿಕವಾಗಿ ಅದು ತನಗಿಂತ ಸಣ್ಣದಾದ ಅಣುಗಳನ್ನು ತನ್ನ ಕಡೆಗೆ ಆಕರ್ಷಿಸಲು ಶಕ್ಯವಾಗುವುದೆಂದು ಹೇಳಬಹುದು.

ಈ ರೀತಿಯಲ್ಲಿ ಅಣುಗಳು ಬೆಳೆದು ಆಕಾಶದಲ್ಲಿ ಪ್ರಯಾಣಿಸುತ್ತಿರುವಾಗ, ಹಾದಿಯಲ್ಲಿ ಇನ್ನೂ ಹೆಚ್ಚಿನ ಪದಾರ್ಥವು ಅದರ ಕಡೆಗೆ ಆಕರ್ಷಿಸಲ್ಪಟ್ಟು ಕ್ರಮೇಣ ಈ ಅಣುಗಳ ಕೂಡನೆಯು ಒಂದು ಮೇಘವಾಗಿ ಪರಿಣಮಿಸುವುದು. ಈ ಮೇಘದಲ್ಲಿ ಪದಾರ್ಥದ ಅಣುಗಳ ಚಲನವಲನವು ಬಿರುಸಾಗಿ ನಡೆಯುವುದರ ಪರಿಣಾಮವಾಗಿ, ಘರ್ಷಣೆಯು ಉಂಟಾಗಿ, ಘರ್ಷಣೆಯಿಂದ ಉಷ್ಣದ ಉತ್ಪಾದನೆಯು ಆಗುವುದು. ಹೀಗೆ ಅವಘಡಗಳ ಸಂಖ್ಯೆಯು ಬೆಳೆಯುತ್ತಾ ಬಂದು ಉಷ್ಣವು ಅಧಿಕವಾಗಿ ಅದರಿಂದ ಪ್ರಜ್ವಲಿತ ಜ್ಯೋತಿಯು ಉಂಟಾಗುವುದು. ಈ ಉಷ್ಣದ ದೆಸೆಯಿಂದ ಇಲೆಕ್ಟ್ರೋನ್‌ಗಳ ಚಲನದ ವೇಗವು ತೀವ್ರವಾಗಿ ಹೀಗೆ ಜ್ಯೋತಿರ್ಮೇಘದಿಂದಲೆ ಕ್ರಮೇಣ ಸೂರ್ಯನ ಜನನವು ಆಗಿರುವುದು. ಈ ವಿಶ್ವದಲ್ಲಿ ಮೇಲೆ ವಿವರಿಸಿದ ತರದ ಜ್ಯೋತಿರ್ಮೇಘಗಳು ತುಂಬಾ ಇರುವವಾಗಿ ಖಗೋಳ ಶಾಸ್ತ್ರಜ್ಞರಿಂದ ಕಂಡು ಹಿಡಿಯಲಾಗಿದೆ.

ಸೂರ್ಯನ ಮೂಲ ಮತ್ತು ಅವನ ಕುಟುಂಬ

ಆಕಾಶದಲ್ಲಿ ಜ್ಯೋತಿರ್ಮೇಘವು ಹೇಗೆ ಉಂಟಾಯಿತೆಂದು ನಾವು ತಿಳಿದೆವು. ಈ ಜ್ಯೋತಿರ್ಮೇಘವು ಕ್ರಮೇಣ ಬೆಳೆಯುತ್ತ ಬಂತು. ಕೊನೆಗೆ ಈ ಜ್ಯೋತಿರ್ಮೇಘವು ಉಷ್ಣಭರಿತವಾದ ಬಿಳಿಪೇರಿದ ಉರಿಯುವ ಪದಾರ್ಥದ ಒಂದು ಮಹಾರಾಶಿಯ ಆಯಿತು. ಹೀಗೆ ಒಂದು ಜ್ಯೋತಿರ್ಮೇಘದಲ್ಲಿ ಪದಾರ್ಥದ ಐಕ್ಯವಾಗಿ ನಕ್ಷತ್ರಗಳು ಉಂಟಾಗಿರಬಹುದು. ಈ ನಕ್ಷತ್ರಗಳ ಸುತ್ತಲೂ ಜ್ಯೋತಿರ್ಮೇಘ ವ್ಯಾಪಿಸಿಕೊಂಡಿರಬಹುದು. ನಕ್ಷತ್ರಗಳ ಸುತ್ತಲಿರುವ ಜ್ಯೋತಿರ್ಮೇಘಗಳಿಂದ ಕ್ರಮೇಣ ನಕ್ಷತ್ರಗಳು ಉಂಟಾದವು. ಹೀಗೆ ನಕ್ಷತ್ರಗಳಿಂದಲೂ, ಜ್ಯೋತಿರ್ಮೇಘದಿಂದಲೂ ಕೂಡಿರುವ ಮಹಾ ಮಂಡಳಗಳೆ ಉಂಟಾದವು. ಇವುಗಳನ್ನು ಕ್ಷೀರಪಥವೆಂದು ಕರೆಯುತ್ತಾರೆ. ಈ ಕ್ಷೀರಪಥದಲ್ಲಿ ಅಸಂಖ್ಯಾತ ನಕ್ಷತ್ರಗಳು ಬಹು ಒತ್ತಾಗಿ ಕೂಡಿರುವವು. ಹೀಗೆ ಉಂಟಾಗಿರುವುದು ನಮ್ಮ ಸೂರ್ಯಮಂಡಳವು.

ಸೂರ್ಯಮಂಡಳದ ಮೂಲ

ನಮ್ಮ ಸೂರ್ಯಮಂಡಳದ ಮೂಲದ ಕುರಿತು ವಿಜ್ಞಾನಿಗಳು ಸದ್ಯಕ್ಕೆ ಈ ಕೆಳಗಿನ ಅಭಿಪ್ರಾಯವನ್ನು ಹೊಂದಿರುವರು.

ಆಕಾಶದಲ್ಲಿ ಸೂರ್ಯಮಂಡಳಗಳು ಹೇಗೆ ಉಂಟಾದವೆಂದು ನಮಗೆ ತಿಳಿದಿರುವುದು. ಈ ನಕ್ಷತ್ರಗಳು ಆಕಾಶದಲ್ಲಿ ಗುರುತ್ವಾಕರ್ಷಣಾ ಶಕ್ತಿಯ ದೆಸೆಯಿಂದ ಚಲಿಸುತ್ತಿರುವವು. ಸೂರ್ಯನ ಈ ಚಲನವಲನದಲ್ಲಿ ಒಂದು ಸೂರ್ಯನ ಆಕರ್ಷಣಾಶಕ್ತಿಯಿಂದ ಇನ್ನೊಂದರ ಮೇಲೆ ಪ್ರಭಾವಿತವಾಗಿ ಅದರಿಂದ ಕೆಲವು ಪರಿಣಾಮಗಳು ಉಂಟಾಗಬಹುದು. ಆದರೆ, ನಕ್ಷತ್ರಗಳ ನಡುವೆ ದೂರವು ಅತ್ಯಧಿಕವಾಗಿರುವುದರ ಕಾರಣ ಈ ತರದ ಸಂಘಟನೆಗಳು ದುರ್ಲಭವೆಂದು ಎಣಿಸಬೇಕು. ಆದರೆ ಅತೀ ಹಿಂದಿನ ಕಾಲದಲ್ಲಿ ನಮ್ಮ ಸೂರ್ಯನು ತಾರುಣ್ಯಾವಸ್ಥೆಯಲ್ಲಿರಾವಾಗ ಮೇಲೆ ನಮೂದಿಸಿದ ತರದ ಒಂದು ಸಂಘಟನೆಯು ನಡೆದಿರಬಹುದೆಂದು ನಂಬಲಾಗಿದೆ.

ಹೀಗೆ ನಮ್ಮ ಸೂರ್ಯನ ಸಮೀಪದಲ್ಲಿ ಇನ್ನೊಂದು ಮಹತ್ತರ ಸೂರ್ಯನ ಬರುವಿಕೆಯಿಂದ, ನಮ್ಮ ಸೂರ್ಯನಲ್ಲಿ ಅಲ್ಲೋಲ ಕಲ್ಲೋಲ ಸ್ಥಿತಿಯು ಉಂಟಾಗಿ ಅದರಲ್ಲಿ ಪದಾರ್ಥದ ಮಹಾ ಅಲೆಗಳ ಉಂಟಾಗಿ, ಪದಾರ್ಥಗಳ ರಾಶಿಗಳು ಸೂರ್ಯನಿಂದ ದೂರಕ್ಕೆ ಬಿರುಸಾಗಿ ಸಾಗಿರಬಹುದು. ಆದರೆ ಅವುಗಳ ವೇಗವುಅವನ್ನು ಸೂರ್ಯನ ಆಕರ್ಷಣಾಶಕ್ತಿಯ ವಲಯದಿಂದ ಹೊರವಯ್ಯುವ ತರದ್ದು ಆಗಿರಲಿಲ್ಲವೆಂದು ಭಾವಿಸಲಾಗಿದೆ. ಅವುಗಳು ಆಕಾಶದಲ್ಲಿ ಸೂರ್ಯನ ಸುತ್ತಲೂ ತಿರುಗುತ್ತಾ ನಿಂತುಬಿಟ್ಟವು. ಹೀಗೆ ಅನೇಕ ಹೊಸ ಸೂರ್ಯಗಳ ಜನನವಾಯಿತು.

ಹೀಗೆ ನೂತನವಾಗಿ ಜನ್ಮವೆತ್ತಿದ ಸೂರ್ಯರ ಪ್ರಮಾಣವು ಮೂಲ ಸೂರ್ಯನಿಗಿಂತ ಅತಿ ಕಡಿಮೆಯಾಗಿರುವ ಕಾರಣದಿಂದ ಅವು ಬೇಗನೆ ತನೆದು ಸೂರ್ಯಮಂಡಳದ ಅನೇಕ ಗ್ರಹಗಳು ಉಂಟಾದವು. ನಮ್ಮ ಭೂಮಿಯು ಇದರಲ್ಲಿ ಒಂದು ಗ್ರಹವು.

ಸೂರ್ಯಮಂಡಳಗಳ ನಾಶ

ಖಗೋಳ ಶಾಸ್ತ್ರಜ್ಞರು ದೂರದರ್ಶಕವನ್ನು ಉಪಯೋಗಿಸಿ, ಆಕಾಶದಲ್ಲಿ ಪ್ರಸರಿಸಿಕೊಂಡಿರುವ ಅನೇಕ ನಕ್ಷತ್ರಗಳನ್ನು ನಿರೀಕ್ಷಿಸಿರುವನು. ಮೇಲೆ ವಿವರಿಸಿದ ತರದಲ್ಲಿ ಉಂಟಾಗುವ ಸೂರ್ಯರೆ ಈ ನಕ್ಷತ್ರಗಳು. ಈ ನಕ್ಷತ್ರಗಳೆಲ್ಲಾ ಒಂದೇ ರೀತಿಯಲ್ಲಿ ಪ್ರಜ್ವಲಿಸುತ್ತಿರುವುದಿಲ್ಲವಾಗಿ, ಖಗೋಳಶಾಸ್ತ್ರಜ್ಞರು ನಮ್ಮ ದೂರದರ್ಶಕಗಳ ಮೂಲಕ ಕಂಡು ಹಿಡಿದಿರುವರು. ಎಲ್ಲಾ ನಕ್ಷತ್ರಗಳಿಗೆ ಸಮಾನವಾದ ಕಾಂತಿಯು ಇಲ್ಲದಿರಲು ಕಾರಣವು ಯಾವುದು? ಕೆಲವು ನಕ್ಷತ್ರಗಳು ಅತ್ಯಂತ ಕಾಂತಿಯುಕ್ತವಾಗಿರುವವು. ಅಂದರೆ ಅವುಗಳೆಲ್ಲ ಅತ್ಯಂತ ಉಷ್ಣದಿಂದ ಜ್ವಲಿಸುತ್ತಿರುವವು. ಕೆಲವಲ್ಲಿ ಜ್ವಲನೆಯು ಕುಂದುತ್ತಾ ಬಂದು, ಅವುಗಳ ಕಾಂತಿಯು ಕುಂದಿರಬಹುದು. ಈ ಕಾರಣದಿಂದಲೆ ಇವುಗಳ ಬಣ್ಣವು ನಸುಕೆಂಪಾಗಿ ಕಾಣುತ್ತಿರುದದು. ಅತ್ಯಧಿಕವಾದ ಈ ಉಷ್ಣದಿಂದ ಜ್ವಲಿಸುವ ಮೂರನೆ ತರದ ಸೂರ್ಯನ ಶೋಧನೆಯು ಆಗಿರುವುದು. ಈ ಸೂರ್ಯನಿಂದ ಪ್ರೊಟೋನು ಮತ್ತು ಇಲೆಕ್ಟ್ರೋನು ಅತಿ ರಭಸದಿಂದ ಅತ್ಯಲ್ಪ ಅವಧಿಯಲ್ಲಿ ವಿಚ್ಛೆದಗೊಳ್ಳುವುದರಿಂದ, ಈ ನಕ್ಷತ್ರವು ಬೇಗನೆ ಜೀರ್ಣವಾಗಿ, ಆಕಾಶದಲ್ಲಿ ಪದಾರ್ಥವಾಗಿ ಪ್ರಸರಿಸಬಹುದೆಂದು ಕೆಲವರ ಊಹನೆ.

ಈ ಬಗೆಯ ಪ್ರಸಾರಣೆಯಿಂದ ಎಲ್ಲಾ ನಕ್ಷತ್ರಗಳು ಮಾಯವಾಗಬೇಕು,—ಅವುಗಳಲ್ಲಿದ್ದ ಉಷ್ಣವು ನಷ್ಟವಾಗಲೇ ಬೇಕು. ಹೀಗೆನೆ ಮಿಲಿಯಾದಿ ವರುಷಗಳಿಂದ ಬಾಳಿಕೊಂಡು ಬಂದ ನಮ್ಮ ಸೂರ್ಯನು ಕೂಡ ಮೆಲ್ಲನೆ ಕ್ಷೀಣನಾಗುತ್ತಿರುವನು. ಆದರೆ ನಕ್ಷತ್ರಗಳು, ಈ ತರದಲ್ಲಿ ಕ್ಷೀಣರಾಗುತ್ತಿರುವರೊ, ಎಂಬುದು ಸಂದೇಹಾಸ್ಪದವು. ವಿಚಾರವು. ನಕ್ಷತ್ರ ಶಕ್ತಿಯು ಕ್ಷೀಣಿಸುತ್ತಿರುವುದೆಂದೂ, ಒಂದು ವೇಳೆ ಭಾವಿಸಿದರೂ, ನಮ್ಮ ಸೂರ್ಯನು ಸಂಪೂರ್ಣ ನಷ್ಟನಾಗಬೇಕಾದರೆ ಇನ್ನೂ ಸಹಸ್ರಾಧಿ ಮಿಲಿಯ ವರ್ಷಗಳು ತಗಲಬಹುದು.

ಆದರೆ ನಮ್ಮ ಸೂರ್ಯನು ಇನ್ನೂ ತಾರುಣ್ಯದಲ್ಲಿರುವನೆಂದು ಕೆಲವು ವಿಜ್ಞಾನಿಗಳ ಅಂಬೋಣ. ಸೂರ್ಯನು ತನ್ನ ತುದಿ ಮಟ್ಟಕ್ಕೆ ಮುಟ್ಟುವ ಸಮಯವು ಇನ್ನೂ ದೂರವಿರುವದೆಂದು ಅವರ ನಂಬುಗೆ. ಅಂದರೆ ಸೂರ್ಯನು ಮಾಯವಾಗಿ ನಮ್ಮ ಭೂಮಿಯು ಶೀತವೇರಿ ಅದರ ಮೇಲಿನ ಸಮಸ್ತ ಜೀವಿ ಕೋಟಿಯು ನಾಶವಾಗುವುದೆಂದು ನಾವು ಭೀತರಾಬೇಕಿಲ್ಲ.

ಆಕಾಶದಲ್ಲಿ ಪ್ರಸರಿಸಿಕೊಂಡಿದ್ದ ಎಲ್ಲಾ ನಕ್ಷತ್ರಗಳ ಶಕ್ತಿಯು ಜೀರ್ಣವಾಗಿ ಹೋ[illegible] ಅವುಗಳಲ್ಲಿ ಕೂಡಿದ್ದ ಪದಾರ್ಥವು ಆಕಾಶದಲ್ಲೆಲ್ಲಾ ಸೂಕ್ಷ್ಮವಾಗಿ ಸಮವಾಗಿ ಪ್ರಸರಿಸಿಕೊಳ್ಳುವುದೆಂದು ಕಂಡುಹಿಡಿಯಲಾಗಿದೆ.



ಕಾರ್ಖಾನೆಗಳಲ್ಲಿ ತಯಾರಾದ ಮನೆ

ವಿಮಾನಗಳಿಂದ ಎಸೆಯಲಾದ ಬಾಂಬುಗಳ ಹಾವಳಿಗೆ ತುತ್ತಾದ ಪ್ರದೇಶಗಳಲ್ಲಿ ಕಟ್ಟಡಗಳು ನೆಲಸಮವಾಗುತ್ತವೆ. ಈಚೆಗೆ ಇಂಗ್ಲಾಂಡಿನ ಮೇಲೆ ನಡೆದ ರೆಕ್ಕೆ ಬಾಂಬುಗಳ ಹಾವಳಿಯಿಂದ ಮಿಲಿಯ ಕಟ್ಟಿಯಲ್ಲಿ ಮನುಷ್ಯರ ನಿಲಯಗಳು ಮಣ್ಣುಪಾಲಾದವು. ಜನರು ಮನೆಯ ಆಶ್ರಯವಿಲ್ಲದೆ ಇರಬೇಕಾಯಿತು. ಈ ಕಾರಣದಿಂದ ಅತಿ ಶೀಘ್ರದಲ್ಲಿ ಅತಿ ಸ್ವಲ್ಪ ಹಣ ವ್ಯಯದಿಂದ ಸಕಲ ಸುಖ ಸೌಕರ್ಯಗಳಿರುವ ಸಣ್ಣ ಮನೆಗಳನ್ನು ಕಟ್ಟಿಸಬೇಕಾಯಿತು. ಈ ಮನೆಗಳು ಕಾರ್ಖಾನೆಗಳಲ್ಲಿ ಸಿದ್ಧವಾಗುತ್ತಿವೆ. ಈ ಮನೆಗಳನ್ನು ನಿರ್ಮಿಸಲು ಹೆಚ್ಚಿನ ಸಮಯವು ಬೇಕಾಗಿಲ್ಲ. ಯುದ್ಧದ ನಂತರವೂ ಮನೆಕಟ್ಟುವ ಕುರಿತು, ಈ ಯೋಜನೆಯು ಆಚರಿಸಲಾಗುವುದು.

ಪ್ರಚಲಿತ ಸಮಾಚಾರಗಳು

[illegible] ಉದ್ಧಾರದ ಉದ್ದೇಶದಿಂದ ಯುದ್ಧದ ದುಷ್ಪರಿಣಾಮಗಳಿಗೆ ಒಳಗಾದ ದೇಶಗಳಿಗೆ ಬೇಕಾದ ಉಪಕರಣಗಳು, ಸಲಕರಣೆ ಮೊದಲಾದವುಗಳನ್ನು ಒದಗಿಸಿಕೊಟ್ಟು ಆ ಯೋಜನೆಗಳನ್ನು ನಡೆಸುವುದಕ್ಕೆ ಬೇಕಾದ ಸಹಾಯವನ್ನು ಒದಗಿಸುವುದೇ ಈ ಸಂಸ್ಥೆಯ ಉದ್ದೇಶವಿರುತ್ತದೆ.

ಶತ್ರು ಉಪದ್ರವಕ್ಕೆ ಒಳಪಟ್ಟ ದೇಶಗಳು ಮಾತ್ರ ಈ ಸಮಿತಿಯ ಸಹಾಯ ಪಡೆಯಲು ತಕ್ಕವು ಎಂದು ಮೊದಲು ವಾದಿಸಲಾಗಿದ್ದು, ಹಿಂದೂದೇಶದಲ್ಲಿ ವೈರಿಗಳ ಅಭಿಯೋಗವಾಗದಿದ್ದುದರಿಂದ ಅದಕ್ಕೆ ಈ ಮೊದಲು ಅದರಲ್ಲಿ ಸ್ಥಾನವು ದೊರಕಲಿಲ್ಲವಾಗಿತ್ತು.

ಆದರೆ ಚೀನಿ ಪ್ರತಿನಿಧಿಗಳ ಉಪಕಾರದಿಂದ ಹಿಂದೂದೇಶಕ್ಕೂ ಈ ಸಮಿತಿಯಲ್ಲಿ ಒಂದು ಸ್ಥಾನವು ದೊರಕಿರುತ್ತದೆ. ಜಪಾನಿಗೆ ವಿರೋಧವಾಗಿ ನಡೆಯುವ ಅಭಿಕ್ರಮದ ಮುಖ್ಯ ಕೇಂದ್ರವು ಹಿಂದೂದೇಶವು. ಆದುದರಿಂದ ಹಿಂದೂದೇಶಕ್ಕೆ ಆಹಾರದ ಕೊರತೆ ಇತ್ಯಾದಿ ಸಮಸ್ಯೆಗಳಲ್ಲಿ ಮೇಲಿನ ಸಂಸ್ಥೆಯ ಸಹಾಯವಾಗಲೆಬೇಕಾಗಿ ಚೀನಿಯ ಪ್ರತಿನಿಧಿಗಳು ವಾದಿಸಿದುದರಿಂದ ಹಿಂದೂದೇಶಕ್ಕೆ ಅಲ್ಲಿ ಪ್ರಾತಿನಿಧ್ಯವು ಸಿಕ್ಕಿತು.

ಸಂಯುಕ್ತ ಅಮೇರಿಕಾ ಇತ್ಯಾದಿ ಪ್ರಬಲ ಜನಾಂಗಗಳ ಬೆಂಬಲವಿರುವ ಈ ಸಂಸ್ಥೆಯೊಡನೆ ಅಪಾರವಾದ ಧನಧಾನ್ಯ ಸಂಪತ್ತುಗಳು ಇವೆ.

ಯುದ್ಧದ ದೆಸೆಯಿಂದ ಹಿಂದೂದೇಶದಲ್ಲಿ ತಲೆದೋರಿದ ಆಹಾರದ ಕೊರತೆ, ಇತ್ಯಾದಿ ಕಠಿಣ ಸಮಸ್ಯೆಗಳನ್ನು ಸುಧಾರಿಸಿಕೊಳ್ಳಲು ಈ ಸಂಸ್ಥೆಯಿಂದ ಉತ್ತಮ ಸಹಾಯವು ದೊರಕಬಹುದೆಂದು ನಿರೀಕ್ಷೆಗಳು ಇವೆ.

ಸಮಗ್ರ ಭೂಮಂಡಲದಲ್ಲಿ ಸುತ್ತಾಡುತ್ತಿರುವ ಹಡಗುಗಳಲ್ಲಿ ಹಿಂದೀಯರು ದಾರಿಳ ಸಂಸ್ಥೆಯಲ್ಲಿ ದುಡಿಯುತ್ತಿರುವರು. ಈ ಹಡಗುಗಳೂ ಹೆಚ್ಚಿನವುಗಳು, ಭಾರತೀಯ ಮತ್ತು ಬ್ರಿಟಿಷ ಸಂಸ್ಥೆಗಳಿಂದ ಚಲಾಯಿಸಲಾಗುತ್ತಿವೆ.

ಜಗತ್ತಿನ ಸಾಗರಗಳಲ್ಲಿ ದುಡಿಯುತ್ತಿರುವ ಹಿಂದೀಯರಿಂದ ಉತ್ತಮ ಕೆಲಸವು ಆಗಿರುತ್ತದೆಂದು, ಇಂಗ್ಲಾಂಡಿನಲ್ಲೂ, ಹಿಂದೂದೇಶದಲ್ಲೂ, ಸರಕಾರೀ ಮತ್ತು ಖಾಸಗಿ ಜನರಿಂದಲೂ ಬಹಳ ಶ್ಲಾಘನೆಗಳು ಹೊರಡಿವೆ.

ಆದರೆ ಹಿಂದೀಯರಿಗೂ, ಅದೆ ಕೆಲಸವನ್ನು ಮಾಡುವ ಬ್ರಿಟಿಷ ಕೆಲಸಗಾರರಿಗೂ ದೊರಕುವ ತಲಬಿನಲ್ಲಿ ಅಜಗಜಾಂತರ ವ್ಯತ್ಯಾಸವಿದೆ.

ಈಚೆಗೆ ಹಿಂದೀಯರ ತಲಬಿನಲ್ಲಿ ಹೆಚ್ಚಳವಾಗಿದ್ದರೂ ಮೇಲೆ [illegible] ಯುರುವುದಾಗಿಯೂ, ತಿಳಿದುಬಂದಿದೆ.

ಪ್ರಕೃತದ ಸ್ಥಿತಿಯಿಂದ ಹಿಂದೀಯರಿಗೆ ದೊರೆಕುವ ತಲಬು ಸಾಕಾಗುವುದಿಲ್ಲ. ಹಿಂದೀಯರು ಸಂತುಷ್ಟರಾಗುವಂತೆ ಅದನ್ನು ಹೆಚ್ಚಿಸಬೇಕಾಗಿ ಹಿಂದೀ ಸರಕಾರದಿಂದಲೂ, ಇತರರಿಂದಲೂ ಯತ್ನಗಳು ನಡೆಯುತ್ತಿದ್ದು, ಹಿಂದೀ ನಾವಿಕರ ತಲಬುಗಳು ಸದ್ಯದಲ್ಲೆ ಏರಬಹುದಂತೆ.

ಆದರೆ ಈ ಸಮಸ್ಯೆಯು ತಲೆದೋರಿ ಬಹಳ ಸಮಯವು ದಾಟಿದುದನ್ನು ನೋಡಿದರೆ ಬರಿ ಮಾತುಗಳ ವೆಚ್ಚದಿಂದ ಸಮಯ ಕಳೆದು, ಯುದ್ಧ ಕೊನೆಗೊಂಡ ನಂತರ ಸುಮ್ಮನಿರುವುದೆ, ಸಂಭಂದ ಪಟ್ಟವರ ವರ್ತನೆಯೋ; ಎಂದು ಕೆಲವೆಡೆಗಳಲ್ಲಿ ಸಂದೇಹಗಳು ಉಂಟಾಗಿವೆ.

ಆಹಾರ ಸಾಮುಗ್ರಿಗಳು ಹಾಳಾಗುವ ಮುನ್ನವೆ ಅವುಗಳ ಹಂಚೋಣವು ನಡೆಯತಕ್ಕದು ಎಂದು ಕೇಂದ್ರ ಸರಕಾರದ ಅಪ್ಪಣೆಯೊಂದು, ಪ್ರಾಂತೀಕ ಸರಕಾರಗಳಿಗೆ ಕಳುಹಿಸಲಾಗಿದೆ.

ಸೆರೆಯಲ್ಲಿರುವ ನೆಹರುಗಳವರಿಗೆ ದೇಹಾಲಸ್ಯವೆಂದು ವಾರ್ತೆಯೊಂದು ಹರಡಿತ್ತು. ಈ ಈ ಕುರಿತು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರವು ನಡೆಯಿತು. ನೆಹರುಗಳ ದೇಹಸ್ಥಿತಿಯು ನೆಟ್ಟಗಿರುವುದು,—ಅವರು ಉತ್ಸಾಹ ಭರಿತರೂ ಹುರುಪುಳ್ಳವರೂ ಆಗಿರುವರೆಂದು ಇಂಡಿಯಾ ಸೆಕ್ರೆಟರಿ ಅಮೇರಿಯವರಿಂದ ಉತ್ತರವು ದೊರಕಿರುತ್ತದೆ.

೭೫ನೇ ಜನನ ದಿನೋತ್ಸವದಂದು ಗಾಂಧೀಜಿಯರಿಗೆ, ಒಂದು ಕೋಟಿಗೆ ಮಿಕ್ಕಿದ ಮೌಲ್ಯದ ನಿಧಿಯೊಂದು ಅರ್ಪಿಸಲಾಯಿತು. ಕಸ್ತೂರಬಾ ಸ್ಮಾರಕ ನಿಧಿಯಾಗಿ ಮದ್ರಾಸು ಪ್ರಾಂತವು ಈ ನಿಧಿಗೆ ೧೦ ಲಕ್ಷಕ್ಕೆ ಮಿಕ್ಕಿದ ಧನತೆತ್ತಿದೆ.

ಇದೇ ಸಂದರ್ಭದಲ್ಲಿ ಗಾಂಧೀಜಿಯವರಿಗೆ ಒಂದು ಅಭಿನಂದನ ಗ್ರಂಥವೂ ಅದರೊಡನೆ ಮಹದೇವ ದೇಸಾಯಿ ಸ್ಮಾರಕ ನಿಧಿಗಾಗಿ ಹತ್ತು ಸಾವಿರ ರೂಗಳೂ ಅರ್ಪಿಸಲಾದವು. ಈ ನಿಧಿಯನ್ನು ಬೆಳೆಯಿಸುವ ಕುರಿತು ಗಾಂಧೀಜಿಯರು ಕಾರ್ಯ ಕೈಗೊಳ್ಳಲಿದ್ದಾರೆ.

ಹಿಂದೂದೇಶಕ್ಕೆ ರಷ್ಯಾ ಕೆಂಪುಸರಕಾರದ ರಾಯಭಾರಿಯೊಬ್ಬರ ನೇಮಕವಾಗಿದೆ. ಸದ್ಯದಲ್ಲೇ ಅವರು ಡಿಲ್ಲಿಗೆ ಬರಲಿದ್ದಾರೆ.

ಯಾವತ್ತು ಪಕ್ಷಗಳ ಪ್ರಭಾವವಿಲ್ಲದ ಬ್ರಿಟಿಷ್ ಸರಕಾರದ ರಚನೆ ಮಾಡುವ ಕುರಿತು ಚರ್ಚಿಲರು ದುಡಿಯುತ್ತಿರುವರಂತೆ. ಲೇಬರ್ ಪಕ್ಷಕ್ಕೂ ಚರ್ಚಿಲ್ ಸರಕಾರಕ್ಕೂ ಕೆಲವು ಬೇದಭಿಪ್ರಾಯಗಳು ಚರ್ಚಿಲ ಮೇಲಿನ ಧೋರಣಕ್ಕೆ ಕಾರಣವಂತೆ.

ಎಡಿನ್ಬರದಲ್ಲಿ (ತನ್ನ ಸ್ವನಾಡಿನಲ್ಲಿ) ಭಾಷಣ ಮಾಡುತ್ತಾ ಇಂಡಿಯಾ ಸರಕಾರದ ಮಾಜಿ ವೈಸ್ರಾಯರಾದ ಲಿನ್‌ಲಿತ್ ಗೋರವರು, ಜಾತಿಮತ, ಭಾಷೆ ಇತ್ಯಾದಿಗಳ ವಿವಿದತೆಯಿರುವ ಭಾರತಕ್ಕೆ ಸ್ವಾತಂತ್ರ್ಯ ದಾನವಾದರೆ, ಆಗ ಹಿಂದೂದೇಶದಲ್ಲಿ ಕ್ಷೋಭೆಯುಂಟಾಗಬಹುದೆಂದೂ ಹಿಂದೂದೇಶದ ಅಲ್ಪಸಂಖ್ಯಾಕ ಸಮಸ್ಯೆ ಇತ್ಯಾದಿಗಳು ಪೂರೈಸಲ್ಪಡುವ ತನಕ ಅದು ಬ್ರಿಟಿಷರ ಆಧೀನದಲ್ಲೆ ಇರತಕ್ಕದೆಂದು, ರಾಗ ಹೊರಡಿಸಿರುವರು.

ಚರ್ಚಿಲರ ಈಚೆಗಿನ ಭಾಷಣದಲ್ಲೂ ಹಿಂದೂದೇಶದ ಕುರಿತು, ಆಶಾದಾಯಕ ಚಿಹ್ನೆಗಳೆ ಕಾಣಬರಲಿಲ್ಲ.

ಡಂಬಾರ್ಟನ್ ಓಕ್, ಎಂಬ ಅಮೆರಿಕದ ನಗರದಲ್ಲಿ ಜಾಗತಿಕ ಶಾಂತಿಯ ಕುರಿತು ಪರ್ಯಾಲೋಚಿಸಲು ಮಿತ್ರ ಜನಾಂಗಗಳ ಒಂದು ಸಭೆಯು ಕೂಡಿತ್ತು, ಜಾಗತಿಕ ಶಾಂತಿ [illegible] ಯ ಶಿಸ್ತು ಮಂಡಲವು [illegible] ಸ್ಥಾಪಿಸಲ್ಪಡಲು [illegible] ಬರುವುದರಿಂದ ಮನಸ್ತಾಪಗಳುಂಟಾಗುವವೆಂದು ಅವುಗಳ ಚರ್ಚೆಗೆ ಬಾರದೆ ಹೋದವು.

ಈ ಪರಿಷತ್ತಿನ ನಡೆವಳಿಯಿಂದ ಮಿತ್ರರಾಷ್ಟ್ರಗಳ ಸಂಭಂದದಲ್ಲಿ ಯಾವತ್ತು ಭೇದಗಳುಂಟಾಗವು ಎಂದು ತಿಳಿದು ಬಂದಿದೆ.

ಪೋಲೆಂಡಿನ ವಾರ್ಸೊ ನಗರವು ಜರ್ಮನರ ವಶವಾಗಿರುತ್ತದೆ. ಮಿತ್ರರಿಗೆ ಎಲ್ಲಾ ಕಡೆಗಳಲ್ಲಿ ವಿಜಯಗಳು ದೊರಕುವ ಸಮಯದಲ್ಲಿ ಈ ವಾರ್ತೆಯು ಅತಿ ದುಃಖದೆಂದು ತಿಳಿಯಬೇಕಾಗಿದೆ ಎಂದು ಚರ್ಚಿಲರ ಅಭಿಪ್ರಾಯವಾಗಿರುತ್ತದೆ. ವಾರ್ಸೊ ನಗರಕ್ಕೆ ಜರ್ಮನರ ಮುತ್ತಿಗೆಯಾಗಿ ಬಹಳ ದಿನಗಳು ನಡೆದು ಬಿಟ್ಟವು. ಪೋಲರು ಬಹಳ ಧೀರತನದಿಂದ ಹೋರಾಡಿದ್ದರೂ, ವ್ಯರ್ಥವಾಯಿತು. ವಾರ್ಸೊರಂಗದ ಪೋಲ ಸೇನನಾಯಕನು ಜರ್ಮನರ ಸೆರೆಯಾಳಾಗಿರುವನು.

ಯುರೋಪದ ಯುದ್ಧವು ಕಠಿಣ ರೂಪ ಹೊಂದುವುದು (ಮುಂದಕ್ಕೆ) ಎಂದು ಅಮೆರಿಕಾದ ಯುದ್ಧ ಕಾರ್ಯದರ್ಶಿಯರ ಅಭಿಪ್ರಾಯವಾಗಿರುತ್ತದೆ.

ಗ್ರಿಸ್ ದೇಶದಲ್ಲಿ ಮಿತ್ರರು ಇಳಿದಿರುವರು. ಆ ದೇಶದಲ್ಲಿ ಪ್ರಸರಿಸಿಕೊಂಡಿದ್ದ ಜರ್ಮನರು ಹಿಂದೆ ನಡೆಯುತ್ತಿರುವರು.

ಸದ್ಯದಲ್ಲಿ ಗ್ರಿಸ್ ದೇಶದ ವಿಮೋಚನೆಯಾಗಬಹುದು.

ಕಳೆದ ಚುನಾವಣೆಯಲ್ಲಿ ಅಧ್ಯಕ್ಷ ರೂಸ್‌ವೆಲ್ಟರನ್ನು ಪ್ರತಿಸ್ಪರ್ಧಿಸಿದ, ವೆಂಡಲ್ ವಿಲ್ಕಿಯವರು ಮೃತರಾಗಿರುವರು. ಪ್ರಜಾಪ್ರಭುತ್ವ ರಾಜಕಾರಣದ ಕುರಿತು ಬಹಳ ಪ್ರಸಿದ್ಧರು ಇವರು. ಇವರು ಯುದ್ಧ [illegible]ವಿತ ದೇಶಗಳನ್ನು ಸುತ್ತಾಡಿ, ನಂತರ 'One World' ಒಂದೇ ಜಗತ್ತು ಎಂಬ ಹೆಸರಿನ ಗ್ರಂಥವನ್ನು ಹೊರಡಿಸಿ, "ಪೂರ್ವ ರಾಷ್ಟ್ರಗಳನ್ನು ತಮ್ಮ ಸ್ವಪ್ರಯೋಜನಕ್ಕಾಗಿ ಉಪಯೋಗಿಸುವ ಕ್ರಮವು ಪಾಶ್ಚಾತ್ಯ ಪ್ರಭುತ್ವದ ಜನಾಂಗಗಳಿಂದ ತ್ಯಜಿಸಲ್ಪಟ್ಟ ವಿನಹ ಜಗತ್ತಿನಲ್ಲಿ ಸ್ಥಿರವಾದ ಶಾಂತಿ ತಲೆದೋರದು ಎಂಬ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಅವರ ಗ್ರಂಥವು ಮಿಲಿಯಗಟ್ಲೆ ಸಂಖ್ಯೆಯಲ್ಲಿ ಮಾರಾಟವಾಗಿತ್ತು.

ರೂಸ್‌ವೆಲ್ಟರನ್ನು ಈಗ ಪ್ರತಿಸ್ಪರ್ಧಿಸುವ ಡೂವೆರವರಿಗೆ ನಿಗ್ರೊ ಪ್ರಜೆಗಳ ಪೂರ್ಣ ವೋಟುಗಳು ದೊರಕಬಹುದೆಂದು ನಿರೀಕ್ಷೆಯಿದೆ.

ಬ್ರಿಟಿಷ ಯುದ್ಧ ಮಂತ್ರಿಮಂಡಳದಲ್ಲಿ ಮಡಿದ ಸರ್ ಫಿರೋಜ್‌ಖಾನ ನೂನರಿಗೆ ಪಂಜಾಬದ ಗವರ್ನರ ಹುದ್ದೆಯು ಕೊಡಲಾಗುವುದೆಂದು ವಾರ್ತೆ ಇದೆ.

ಅಹಮ್ಮದಾಬಾದಿನಲ್ಲಿ ಸೆರೆಯಲ್ಲಿರಿಸಲಾದ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರರಲ್ಲಿ ಒಬ್ಬರಾದ, ಡಾ| ಸಯ್ಯದ್ ಮಹಮ್ಮದರು, ಅನಾರೋಗ್ಯ ಕಾರಣದಿಂದ, ಬಿಡುಗಡೆಯಾಗಿ ಮುಂಬಾಯಿಗೆ ತೆರಳಿರುವರು.

ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಅಜಾಧರ ತೂಕದಲ್ಲಿ 42 ರಾತ್ಲು ಇಳಿತಾಯ್ತುವಾಗಿರುವುದೆಂದೂ, ನೆಹೂರುಗಳವರು ತಮ್ಮ ತೂಕದಲ್ಲಿ ಒಂದು ಮಣ ಕಡಿಮೆಯಾಗಿರುವರೆಂದೂ, ಆದರೆ ಅವರ ದೇಹಸ್ಥಿತಿಯು ಉತ್ತಮವಿದೆಯೆಂದೂ, ಸರದಾರ್ ವಲ್ಲಭಾ ಪತೇಲರು ಉದರರೋಗ ಪೀಡಿತರಾಗಿದ್ದರೆಂದೂ, ಆದರೆ ಆಹಾರದಲ್ಲಿ ವ್ಯತ್ಯಾಸ ಮಾಡಿ ಅವರು ಈ ಪೀಡೆಯನ್ನು ನಿವಾರಿಸಿಕೊಂಡರೆಂದೂ, ಪಟ್ಟಾಭಿ ಸೀತಾರಾಮಯ್ಯನವರಲ್ಲಿ ಸಿಹಿಮೂತ್ರ ವ್ಯಾಧಿ ಉಂಟಾಗಿ, ಆಹಾರ ಕ್ರಮವನ್ನು ಸುಧಾರಿಸಿ ಅವರು ಗುಣಹೊಂದಿರುವರೆಂದೂ, ತಾನೂ ಪಂಡಿತ ನೆಹೂರುಗಳೂ ಒಂದೆ ಕೋಣೆಯಲ್ಲಿ ವಾಸವಾಗಿದ್ದರೆಂದೂ, ಅಲ್ಲಿ ಸೆರೆಯಲ್ಲಿದ್ದ ವರ್ಕಿಂಗ್ ಕಮಿಟಿಯ ಸದಸ್ಯರು. ತಮ್ಮ ಸಮಯವನ್ನು ಬರವಣಿಗೆ

(೧೧ನೇ ಪುಟಕ್ಕೆ ಮುಂದುವರಿದಿದೆ)



ಜರ್ಮನರ ಉಗ್ರ ಪ್ರತಿಭಟನೆ

ಪಶ್ಚಿಮ ಗಡಿಯಲ್ಲಿ ಜರ್ಮನರ ತಡೆ

ಬಹಳ ರಭಸದಿಂದ ಫ್ರಾನ್ಸನ್ನು ವಶಪಡಿಸಿ ಮುನ್ನಡೆದ ಮಿತ್ರರ ಸೈನ್ಯಗಳು ಈಗ ಸಿಗ್‌ಫ್ರಿಡ್ ಕೋಟೆಯ ಹತ್ತಿರ ತಡೆಯಲ್ಪಟ್ಟಿರುವ ಹಾಲೆಂಡಿನ ಮಾರ್ಗವಾಗಿ ನಡೆದು ಜರ್ಮನಿಯನ್ನು ಪ್ರವೇಶಿಸಲು ಯತ್ನಿಸಿದ ಬ್ರಿಟಿಷ ಮತ್ತು ಕೆನೆಡಿಯನ್ ದಳಗಳಿಗೆ ಹೆಚ್ಚಿನ ಯಶಸ್ಸು ದೊರಕಿದ್ದು ಕಾಣುವುದಿಲ್ಲ. ಹಾಲೆಂಡ್ ನಿಂದ, ಸ್ವಿಟ್ಝರ್ಲೆಂಡಿನ ವರೆಗೆ ಹರಡಿಕೊಂಡಿದ್ದ 300 ಮೈಲು ಉದ್ದದ ಜರ್ಮನ್ ಗಡಿಯಲ್ಲಿ ಮೂರು ಮಿಲಿಯ ಮಂದಿ ಸೈನಿಕರಿರುವ ಜರ್ಮನ್ ಸೈನ್ಯ ಪಡೆಗಳು ಪ್ರಸರಿಸಿಕೊಂಡಿರುವವು. ಈ ರಂಗದಲ್ಲಿ ಕದನದ ರೂಪ ಭೀಕರವಾಗುತ್ತಾ ಬಂದಿರುತ್ತದೆ. ಅಮೆರಿಕನ್ ಸೇನಾನಿಯಾದ ಜನರಲ್ ಹೊಜ್ಜನ ಸೈನ್ಯವು ಸಿಗ್‌ಫ್ರಿಡ್ ಕೋಟೆಯನ್ನು ಭೇಧಿಸುವ ಕೆಲಸವನ್ನು ಪ್ರಾರಂಭಿಸಿದೆ. ಸಿಗ್‌ಫ್ರಿಡ್ ಕೋಟೆಯಲ್ಲಿ ಒಂದು ಬಿರುಕನ್ನು ಮಾಡಿ ಜರ್ಮನಿಯ ಒಳನುಗ್ಗಿ ನಂತರ ಬಿಸಣಿಗೆಯೋಪಾದಿ ಸಿಗ್‌ಫ್ರಿಡ್ ಗಡಿಯ ಪ್ರದೇಶದಲ್ಲಿ ಪ್ರಸರಿಸುವುದೆ ಜನರಲ್ ಹೊಜ್ಜರ ಉದ್ದೇಶವಿದ್ದಂತೆ ಕಾಣುತ್ತದೆ. ಜನರಲ್ ಹೊಜ್ಜರು ಜರ್ಮನ್ ಗಡಿಯಲ್ಲಿನ ಆಚ್ಛಾನ್ ಎಂಬಲ್ಲಿ ಸಿಗ್‌ಫ್ರಿಡ್ ಕೋಟೆಯ ಮೇಲೆ ಮುನ್ನಡೆದಿರುವರು. ಆದರೆ ಜನರಲ್ ಹೊಜ್ಜರ ಸೇನೆಯು ಮುನ್ನಡೆದಂತೆ ಜರ್ಮನ್ ತಡೆಯು ಅಧಿಕವಾಗುತ್ತಾ ಬರುತ್ತಿದೆಯೆಂದು ತಿಳಿದು ಬಂದಿದೆ. ಪಶ್ಚಿಮ ಗಡಿಯಲ್ಲಿ ಪ್ರತಿಯೊಂದು ಕಡೆಯಲ್ಲಿ ಜರ್ಮನ್ ಪ್ರತಿಭಟನೆಯು ಅತ್ಯಂತ ಉಗ್ರವಾಗಿಯೆ ಇರುವುದೆಂದು ತಿಳಿಯಬೇಕಾಗಿದೆ. ಜರ್ಮನರು ಪಶ್ಚಿಮ ಗಡಿಯಲ್ಲಿ ಉತ್ತಮ ಕ್ರಮಗಳಿಂದ ಕೂಡಿದ ರಕ್ಷಣಾ ವ್ಯೂಹಗಳನ್ನು ಹಾಕಿರುವರೆಂದು ಮಿತ್ರರ ಅಭಿಪ್ರಾಯವಿರುತ್ತದೆ. ಪಶ್ಚಿಮದಲ್ಲಿನ ಜರ್ಮನರ ಈ ತರದ ಬಲವಾದ ಪ್ರತಿಭಟನೆಯನ್ನು ಮುರಿದು ಹಾಕಲು ಮಿತ್ರರು ಮಹತ್ತಾದ ಯತ್ನಗಳನ್ನು ಮಾಡಿದ ವಿನಹ ಸಾಧ್ಯವಿರದೆಂಬ ಈಗಿನ ಅಭಿಪ್ರಾಯವು. ಫ್ರಾನ್ಸಿನ ಕೆಲೆ ಮತ್ತು ಇನ್ನೊಂದು ಪ್ರಾಮುಖ್ಯ ಬಂದರು ಪ್ರದೇಶಗಳು ಮಿತ್ರರ ವಶವಾಗಿರುವುದು. ಈ ಲಾಭದಿಂದ ಮಿತ್ರರಿಗೆ ಮಹದುಪಕಾರವಾಗುವುದು ಖಂಡಿತ. ಈ ನಗರಗಳು ಮಿತ್ರರ ವಶವಾದುದರಿಂದ ಅನುನಿತ್ಯವು ಸಿಡಿಗುಂಡುಗಳ ಹೊಡೆತಕ್ಕೆ ಒಳಗಾದ ಇಂಗ್ಲೆಂಡಿನ ಡೊವರ್ ನಗರಕ್ಕೆ, ವಿಶ್ರಾಂತಿಯು ದೊರಕಿದಂತಾಗುವುದು; ಮಿತ್ರರಿಗೆ ಬೇಕಾದ ಯುದ್ಧ ಶಸ್ತ್ರ ಇತ್ಯಾದಿ ವಸ್ತು ಒಡವೆಗಳನ್ನು ಒದಗಿಸುವರೆ ಸುಲಭ ಸಾಧ್ಯವಾಗುವುದು.

ಪೂರ್ವ ಯುರೋಪದಲ್ಲಿ

ಇಟಲಿಯು ಅಧಿಕಾಂಶವು ಮಿತ್ರರ ಕೈವಶವಾಗಿರುವುದೆಂದು ಹೇಳಬಹುದು. ಇಟಲಿಯು ಮಿತ್ರರ ಕೈಯೊಳಗೆ ಬಂದ ಪರಿಣಾಮವಾಗಿ, ಮಿತ್ರರು ಗ್ರೀಸ್ ದೇಶವನ್ನು ಜರ್ಮನರಿಂದ ವಿಮುಕ್ತಗೊಳಿಸುವ ಕಾರ್ಯವನ್ನು ಪ್ರಾರಂಭಿಸಿರುವರು. ಅಲ್ಬೇನಿಯಾದಲ್ಲಿ ಮಿತ್ರ ದಳಗಳ ನೌಕೆ ಇಳಿಸಲಾಗಿ, ಅವುಗಳ ಜರ್ಮನ್ ತಡೆಯಿಲ್ಲದೆ ಮುನ್ನಡೆದಿವೆ. ಗ್ರೀಸ್ ದೇಶದ ಸಮೀಪವಿರುವ ಕೆಲವು ದ್ವೀಪಗಳಲ್ಲೂ ಮಿತ್ರ ಪಡೆಗಳು ಇಳಿದಿರುವವು. ಈ ಪ್ರದೇಶಗಳನ್ನು ಕೈಜೆಸಿಕೊಳ್ಳುವ ನಿಟ್ಟಿನಲ್ಲಿ ನಡೆಯುವುದೆ ಜರ್ಮನರ ಉದ್ದೇಶವಾದುದರಿಂದ ಇಲ್ಲಿ ಮಿತ್ರರಿಗೆ ಜರ್ಮನರ ತಡೆಯು ಕಡಿಮೆಯಾಗಿರುವುದು. ಬಾಲ್ಕನ್ ಪ್ರದೇಶದಲ್ಲಿ ಅಕ್ಷ ರಾಷ್ಟ್ರಗಳ ಬಲವು ಸಂಪೂರ್ಣ ಕುಂದಿರುವ ಕುರಿತು ಇದೊಂದು ನಿದರ್ಶನವು. ಬಾಲ್ಕನ್ ಪ್ರದೇಶದಲ್ಲಿ ಮೇಲೆ ಕೆಂಪು ಸೈನ್ಯ ಬಹಳ ಮಟ್ಟಿಗೆ ಪ್ರಸರಿಸಿಕೊಂಡಿದೆ. ಅಲ್ಬೇನಿಯಾದಲ್ಲಿಳಿದ ಮಿತ್ರ ಸೈನ್ಯವು ಬೇಗನೆ ಯುಗೊಸ್ಲೆವಿಯಾ ದೇಶವನ್ನು ನುಗ್ಗಬಹುದು. ಬಾಲ್ಕನ್ ಪ್ರದೇಶದಿಂದ ಹಿನ್ನಡೆಯುವ ಜರ್ಮನ್ ಸೇನೆಯು, ಕೆಂಪು ಸೇನೆಯು ಮತ್ತು ಮಿತ್ರ ಸೇನೆಗಳ ಮಧ್ಯದಲ್ಲಿ ಸಿಲುಕಿರುವುದು. ಗ್ರೀಸ್ ದೇಶದಲ್ಲಿ ಪ್ರಸರಿಸಿಕೊಂಡಿರುವ ಜರ್ಮನ್ ಸೇನೆಗೂ ಇದೇ ಸ್ಥಿತಿ ಒದಗಬಹುದು.

ಸ್ವತಂತ್ರ ಯುಗೊಸ್ಲೆವಿಯಾದ ನಾಯಕ ಮಾರ್ಶಲ್ ಟಿಟೊವಿನ ಸೈನ್ಯವೂ ಕೆಂಪು ಸೇನೆಯೂ ಈಗ ಮಿಲನವಾಗಿ, ಆ ದೇಶದಲ್ಲಿ ಮುನ್ನಡೆಯುತ್ತಿವೆ. ಈ ದೇಶವು ಜರ್ಮನರ ಕೈಗಳಿಂದ ತಪ್ಪಿಹೋಗುವುದರಲ್ಲಿ ಒಂದಿಷ್ಟು ಸಂದೇಹವಿಲ್ಲ. ಸದ್ಯದಲ್ಲಿ ಅಲ್ಬೇನಿಯಾದಲ್ಲಿ ಇಳಿದ ಮಿತ್ರ ದಂಡುಗಳು ಕೆಂಪು ಸೇನೆ ಮತ್ತು ಮಾರ್ಶಲ್ ಟಿಟೊವಿನ ದಳ ಮಿಲನವಾಗಿ, ಅಲ್ಲಿಂದ ಅವರು ಆಸ್ಟ್ರಿಯಾದ ಮೇಲೆ ಅಭಿಯೋಗ ನಡೆಯಿಸಬಹುದು.

ಪೂರ್ವರಂಗದಲ್ಲಿ ಕೆಂಪುಸೇನೆಯ ಚಟುವಟಿಕೆ

ಜರ್ಮನಿಯ ಮೇಲೆ ಪೂರ್ವದಿಂದಲೂ ಪಶ್ಚಿಮದಿಂದಲೂ ಬಲವಾದ ಹೊಡತಗಳಾಗುವವೆಂದು ರಷ್ಯದೇಶದ ವಿಮರ್ಶಕರೊಬ್ಬರ ಅಭಿಪ್ರಾಯವಾಗಿರುವುದು. ಜರ್ಮನಿಯ ಮೇಲೆ ಕೊನೆಯ ಅಭಿಯೋಗಕ್ಕಾಗಿ ಪೂರ್ವ ಗಡಿಯಲ್ಲಿ ಕೆಂಪುಸೇನೆಯು ಮಹಾ ಸಂಗ್ರಹವಾಗಿರುವುದು. ಗಣನೀಯ ತರದ ಘಟನೆಗಳು ಯಾವವೂ ಕಳೆದ ವಾರ ಅಲ್ಲಿ ನಡೆಯಲಿಲ್ಲ. ಆದರೆ ಬಾಲ್ಟಿಕ್ ಪ್ರದೇಶದಲ್ಲಿ ರಷ್ಯನರು ಇನ್ನೊಂದು ದ್ವೀಪವನ್ನು ಹಿಡಿದಿರುವರು. ಲಿಥೂನಿಯಾದಿಂದ ಪೂರ್ವ ಪ್ರಷ್ಯಿಯಾದೊಳಗೆ ಒಳನುಗ್ಗಲು ರಷ್ಯನರು ಭಾರಿ ಸಿದ್ಧತೆಗಳನ್ನು ಮಾಡಿರುವರು. ಅವರು ಸದ್ಯದಲ್ಲೆ ಪ್ರಷ್ಯಿಯದ ಒಳಗೆ ನಡೆಯಬಹುದು. ಪೋಲೆಂಡದಲ್ಲಿ ಕೆಂಪು ಸೇನೆಯ ಬಲವು ವೃದ್ಧಿಯಾಗಿದ್ದರೂ, ವಾರ್ಸೊ



ಮಿತ್ರರು ಧಾರಾಳ ಸಂಖ್ಯೆಯಲ್ಲಿ ಸಿದ್ಧ ಪಡಿಸುತ್ತಿರುವ ಸಣ್ಣ ತರದ ಯುದ್ಧ ನೌಕೆ.

ನಗರವನ್ನು ರಕ್ಷಿಸಲು ಟೊಂಕಕಟ್ಟಿದ ಸ್ವತಂತ್ರ ಪೋಲರಿಗೆ ಕೆಂಪು ಸೇನೆಯಿಂದ ಹೆಚ್ಚಿನ ಸಹಾಯವು ದೊರಕದೆ ಹೋಯಿತು. 63 ದಿವಸಗಳ ತನಕ ಹೋರಾಡಿ ಆ ಧೀರ ಪೋಲರು ಹಸಿವಿನಿಂದ ಕಂಗೆಟ್ಟವರಾಗಿ ಕೊನೆಗೆ ಜರ್ಮನರಿಗೆ ಶರಣು ಬಂದರು. ಪೋಲರು ಇನ್ನು ಸ್ವಲ್ಪ ಕಾದಿದ್ದರೆ ಉತ್ತಮವಿತ್ತು, ಅವರಿಗೆ ಈಗ ಒದಗಿದ ಸ್ಥಿತಿಯು ಉಂಟಾಗದಿತ್ತು ಎಂದು ಕೆಲವರ ಅಭಿಪ್ರಾಯವಿದ್ದರೂ, ಪೋಲೆಂಡಿನ ಗಡಿಯ ಕುರಿತು ರಷ್ಯನರಿಗೂ-ಪೋಲರಿಗೂ ಉಂಟಾದ ಬೇಧಾಭಿಪ್ರಾಯವೆ ಈ ದುರ್ಘಟನೆಗೆ ಮುಖ್ಯ ಕಾರಣವಾಗಿರಬಹುದು. ಅಂದರೆ ರಶ್ಯ-ಪೋಲೆಂಡು ಪ್ರಕರಣವು ಇನ್ನೂ ಸುಧಾರಿಸಿಕೊಳ್ಳಲಿಲ್ಲವೆಂದೇ ತಿಳಿಯಬೇಕಾಗಿದೆ. ರಷ್ಯನರಿಗೆ ದಕ್ಷಿಣದಲ್ಲಿ ಅಂದರೆ ಯುಗೋಸ್ಲೆವಿಯಾ ಕಡೆಯಲ್ಲಿ ಮಹತ್ತಾದ ವಿಜಯಗಳು ದೊರಕಿವೆ. ಯುಗೊಸ್ಲೆವಿಯಾದ ರಾಜಧಾನಿಯಾದ ಬೆಲ್‌ಗ್ರೇಡ್ ಪಟ್ಟಣವು ಸದ್ಯದಲ್ಲೆ ಕೆಂಪು ಸೇನೆಯ ವಶವಾಗಬಹುದು. ಮಾರ್ಶಲ್ ಟಿಟೊವಿನ ಸೇನೆಯೊಡನೆ ಕೂಡಿದ ರಷ್ಯನ್ ಸೇನೆಗಳು, ಇತ್ತಕಡೆಗೆ ಧಾವಿಸುತ್ತಿರುವವು. ಆಸ್ಟ್ರಿಯದ ವಿಯನ್ನವು ಇಲ್ಲಿಂದ ಬರೆ 300 ಮೈಲು ದೂರದಲ್ಲಿರುವುದು. ಜರ್ಮನರ ವಿರೋಧವಾಗಿ ದಂಗೆ ಎಬ್ಬಿಸಲು, ರಷ್ಯನರು ಈಗ ಆಸ್ಟ್ರಿಯಾದ ಜನರನ್ನು ಹುರಿದುಂಬಿಸುತ್ತಿರುವರು.

ಚೀನಾದ್ದು ಗತಿಯೇನು?

ಚೀನಾಕ್ಕೆ ತಮ್ಮಿಂದ ಅಂದರೆ ಅಮೇರಿಕಾ ಬ್ರಿಟನ್ ಇತ್ಯಾದಿಗಳಿಂದ ಅತ್ಯಧಿಕವಾದ ಸಹಾಯವು ಹಿಮಾಲಯಗಳ ಮೇಲಿಂದ ಹಾರಿಸಿ, ಕಳುಹಿಸಲಾಗುತ್ತಿದೆ ಎಂದು ಚರ್ಚಿಲರ ಅಂಬೋಣವಾಗಿದ್ದರೂ, ತಮಗೆ ದೊರಕಿದ ಸಹಾಯವು ಅತ್ಯಲ್ಪವೆಂದೂ, ಚೀನಿಯರ ಎದುರು ಪ್ರಕಟಣೆಯಾಗಿ, ಅಮೆರಿಕದ ಅಧ್ಯಕ್ಷರು ಮುಂದೆ ಬಂದು ಆ ಸಹಾಯದ ಕುರಿತು ಅಂಕೆಸಂಖ್ಯೆಯ ಪಟ್ಟಿಯನ್ನು ಜಗತ್ತಿನ ಮುಂದೆ ಸಾರಿದ್ದರೂ, ಚೀನಾವು ಮಿತ್ರಮಂಡಳಿಯ ಇತರ ಪ್ರಭುತ್ವದ ರಾಷ್ಟ್ರಗಳಂತೆ ಸುಸಜ್ಜಿತಗೊಳ್ಳದೆ ಇರುವುದು. ಅವರು ಇತರ ಮಿತ್ರರಂತೆ ಅವರಿಗೂ ಹೋರಾಟದ ಹೆಚ್ಚಿನ ಶ್ರಮವು ಇರುವುದಾದರೂ, ಅದಕ್ಕೆ ಬೇಕಾದ ಶಸ್ತ್ರ, ವಿಮಾನಗಳು, ಸಿಡಿಗುಂಡು, ತುಪಾಕಿ, ಇತ್ಯಾದಿ ವಿಚಾರದಲ್ಲಿ ಚೀನಿಯರು ತಮ್ಮ ಮಿತ್ರರಿಗಿಂತ ಹಿಂದುಳಿದಿರುವರೆಂಬ ಕಾರಣದಿಂದಲೆ ಜಪಾನಿಯರು ಅವರಿಂದ ಕೆಲವು ಪ್ರದೇಶಗಳನ್ನು ವಶಮಾಡಿಕೊಂಡಿದೆ. ಜಪಾನಿಯರ ಸ್ವದೇಶದ ಮೇಲೆ ಹಲ್ಲೆಯನ್ನು ನಡೆಯಿಸುತ್ತಿರುವ ಅಮೇರಿಕದ ಹದಿನಾಲ್ಕನೆ ವಿಮಾನ ಬಲದ ಠಾಣ್ಯವಿರುವ ಪ್ರಾಮುಖ್ಯವಾದ ಒಂದು ಪ್ರದೇಶವು ಜಪಾನಿಯರ ವಶವಾಗಿರುತ್ತದೆ. ಹೀಗೆ ಚೀನಾದ ಕೈಯಲ್ಲಿ ಉಳಿದ ಇನ್ನೂ ಅನೇಕ ಪ್ರಾಮುಖ್ಯ ಕೇಂದ್ರಗಳನ್ನು ವಶಪಡಿಸಿಕೊಳ್ಳುವರೆ ಜಪಾನೀಯರು ಹೋರಾಟವನ್ನು ಪ್ರಾರಂಭ ಮಾಡುತ್ತಿರುವರು ತಮ್ಮ ದೇಶದ ಮೇಲೆ ಅಭಿಯೋಗಿಸಲು ನಡೆಯಿಸಲು ಮಿತ್ರರಿಗೆ ಅನುಕೂಲ ತರದ್ದಿರುವ ಪೂರ್ವ ಕರಾವಳಿಯ ಪ್ರದೇಶಗಳನ್ನು ಹಿಡಿಯುವುದೇ ಜಪಾನೀಯರ ಉದ್ದೇಶವಿರುತ್ತದೆ. ಜಪಾನನ್ನು ಸಮುದ್ರ ಮಾರ್ಗವಾಗಿ ಮಾತ್ರ ಸೋಲಿಸಲು ಸಾಧ್ಯವಾಗಲಾರದೇ. ಜಪಾನಿನ ಮುಖ್ಯ ಆಧಾರವು ಇರುವುದು ಚೀನಾದಲ್ಲಿ. ಚೀನಾದಲ್ಲಿ ಜಪಾನೀಯ ಬಲಕುಂದಬೇಕಾದರೆ ಚೀನಿಯರ ಬಲವು ವೃದ್ಧಿಯಾಗಬೇಕು. ಚೀನಾದ ಬಲವು ವೃದ್ಧಿಯಾಗಬೇಕಾದರೆ ಬ್ರಿಟನು, ಅಮೇರಿಕಗಳ ಸಹಾಯವು ಅದಕ್ಕೆ ಅಧಿಕ ಪ್ರಮಾಣದಲ್ಲಿ ದೊರಕಬೇಕು. ಆಸಾಮಿಂದದ ಜನರನ್ನು ಜಪಾನೀಯರಿಂದ ವಿಮುಕ್ತಗೊಳಿಸುವ ಗುರಿಯದು ಮಿತ್ರರ ಹಾಕಿರುವಾಗ ಅವರ ಈ ಉದ್ದೇಶನೆರವೇರಬೇಕಾದರೆ, ಜಪಾನಿನ ಸೊಕ್ಕು ಮುರಿಯುವಂತೆ, ಚೀನಕ್ಕೆ ಸಹಾಯ ಒದಗಿಸುವ ಕುರಿತು, ಮಿತ್ರರು ಇನ್ನೂ ಹೆಚ್ಚಿನ ಉತ್ಸಾಹ ಹೊಂದಿದರೆ ಉತ್ತಮವಿದೆ ಎಂದು ಅನೇಕರ ಅಭಿಪ್ರಾಯವಿರುತ್ತದೆ.

ಚೀನಕ್ಕೆ ಹೆಚ್ಚಿನ ಸಹಾಯದ ಅಗತ್ಯವಿದೆ

ಲೆಕ್ಕ ತಿಳಿದ ಕುದುರೆಗಳು

ವಿಜ್ಞಾನಿಗಳಿಗೆ ಆಶ್ಚರ್ಯ

ಕ್ರಾಲ್‌ಸೆಂಟ ಜರ್ಮನ್ ಆಭರಣ ವ್ಯಾಪಾರಿಯ ಹತ್ತಿರ ಕೆಲವು ಚತುರ ಕುದುರೆಗಳಿವೆ. ಇವು ಗಣಿತ ಶಾಸ್ತ್ರದಲ್ಲಿ ತುಂಬಾ ಪ್ರಾವಿಣ್ಯತೋರಿಸುತ್ತಿವೆಯೆಂದು ತಿಳಿದು ಬರುತ್ತದೆ.

ಅವುಗಳೊಂದರ ಮುಂದೆ ಕೂಡಿಸು, ಕಳೆಯುವ ಇಲ್ಲವೆ ಗುಣಿಸುವ ಭಾಗಿಸು... ಲೆಕ್ಕವೊಂದನ್ನು ಬರೆದು ತೋರಿಸಿದರೆ ಅದರ ಉತ್ತರವನ್ನು ಅವು ಕೆಲವೇ ಕ್ಷಣದಲ್ಲಿ ತಿಳಿಸುತ್ತವೆ. ತಮ್ಮ ಗೊರಸುಗಳಿಂದ ನೆಲವನ್ನು ಬಡಿದು ಉತ್ತರವನ್ನು ಸೂಚಿಸುವಂತೆ ಅವಕ್ಕೆ ಅಭ್ಯಾಸಮಾಡಲಾಗಿದೆ.

ಈ ಕುದುರೆಗಳಲ್ಲಿ ಒಂದು ಮಾತಾಡ ಬಲ್ಲುದಂತೆ ಎಂದು ಹೇಳಿದರೆ ನಮಗೆ ಆಶ್ಚರ್ಯವಾಗದಿರದು. ಅದರ ಯಜಮಾನನು ಅದಕ್ಕೆ ಗೊರಸು ಬಡಿತದಿಂದಲೇ ಶಬ್ದಗಳ ಸಂಕೇತವನ್ನು ಸೂಚಿಸಿರುವನು. ಯಾವುದಾದರೂ ಪ್ರಶ್ನೆ ಕೇಳಿದರೆ ಅದರ ಉತ್ತರವನ್ನು ಆ ಕುದುರೆಯು ಗೊರಸು ಸಂಕೇತದಿಂದ ಉತ್ತರವನ್ನು ಸೂಚಿಸುವುದು. ಇಂತಿಂಥಹ ರೀತಿಯಲ್ಲಿ ಗೊರಸನ್ನು ಬಡಿದರೆ ಇಂತಿಂಥಹ ಅಕ್ಷರವೆಂದು ಒಂದು ಕ್ರಮವಿದೆ.

ಮಹಾ ತಜ್ಞರೆನಿಸಿದ ಜರ್ಮನ್ ವಿಜ್ಞಾನಿಗಳು ಮೊತ್ತಮೊದಲು ಈ ಸುದ್ದಿಯನ್ನು ನಂಬದವರಾದರು. ಆದರೆ ಪ್ರತ್ಯಕ್ಷ ಅವರ ಎದುರಿನಲ್ಲಿ ಕುದುರೆಗಳು ತಮ್ಮ ವಿಚಕ್ಷಣ ಬುದ್ಧಿ ಶಕ್ತಿಯ ಪ್ರದರ್ಶನ ಮಾಡಿದಾಗ ಅದರ ಮರ್ಮವನ್ನು ಅವರು ಅರಿಯದವರಾಗಿ ಚಕಿತರಾದರು.

ಇದೊಂದು ಅಶ್ವ ಪಂಡಿತರ ಚಾತುರ್ಯವಾಗಿರುತ್ತದೆ. ಆದರೂ ಇಷ್ಟುದೊಡ್ಡ ತನಕ ಈ ಚತುಷ್ಪಾದಗಳನ್ನು ತರಬೇತಿಗೊಳಿಸುವುದೆಂದರೆ ಕಮ್ಮಿ ಆಶ್ಚರ್ಯದ ಸಂಗತಿಯಲ್ಲ.

ಕೋರ್ಟಿನಲ್ಲಿ ಕೋಳಿ

ವಿಚಿತ್ರ ಮೊಕದ್ದಮೆ

ಚಿಕಾಗೊ ಪೋಲಿಸ್ ಕೋರ್ಟಿನಲ್ಲಿ ಒಂದು ವಿಚಿತ್ರ ಮೊಕದ್ದಮೆ. ಅಲ್ಲಿನ ನಗರ ಸಭೆಯವರು ನಗರದಲ್ಲಿನ ಹಾನಿಕರ ಗುಲ್ಲು ಗಲಾಟೆಯನ್ನು ಕಮ್ಮಿಮಾಡಲು ಒಂದು ಸಮಿತಿ ಸ್ಥಾಪಿಸಿರುವರು. ಆ ಸಮಿತಿಯ ನಿಯಮಗಳನ್ನು ಉಲ್ಲಂಘಿಸಿ ಬೆಳಗ್ಗಿನ ಹೊತ್ತು ತನ್ನ ಅಭ್ಯಾಸದಂತೆ ಕೂಗಿ ಗುಲ್ಲೆಬ್ಬಿಸಿತೆಂದು ಪೋಲಿಸರು ಮಿಸ್ ಡ್ಯೊಲ್ ಎಂಬ ಮಹಿಳೆಯ ಮನೆಯಲ್ಲಿ ಸಾಕಿಸಿದ್ದ ಒಂದು ಹುಂಜದ ಮೇಲೆ ಕಟ್ಲೆಹೂಡಿ ಕೋರ್ಟಿಗೆಳೆದರು. ಈ ವಿಚಿತ್ರ 'ಅಪಾದಿತನನ್ನು' ನೋಡಿ ನ್ಯಾಯಾಧೀಶರು ಕಡೆಗೆ ಡ್ಯೊಲ್ ಮಹಿಳೆಗೆ "ನೀವು ಈ ಕೋಳಿಗೆ ಹಳ್ಳಿಕಡೆಯ ಹೇಟೆಯೊಂದಕ್ಕೆ ಮದುವೆಮಾಡಿಕೊಡುವುದು ಉತ್ತಮ" ಎಂದು ತೀರ್ಪು ಕೊಟ್ಟರು.

ಈ ತೀರ್ಪಿನ ವರ್ತಮಾನ ಹರಡಿದ ಕೂಡಲೇ ಹಳ್ಳಿಕಡೆಯಿಂದ ಹತ್ತು ಹೇಟೆ ಮಾಲಿಕರ ಮದುವೆ ಆಹ್ವಾನಗಳು ಬಂದುವಂತೆ. ಆಶ್ಚರ್ಯವೆಂದರೆ ಎರಡು ಪ್ರತ್ಯೇಕ ಮದುವೆ ಆಹ್ವಾನಗಳು ಶ್ರೀಮತಿ ಡ್ಯೊಲಳಿಗೇ ಬಂದವು!

ಸ್ವದೇಶಾಭಿಮಾನಿ

ತಾರೀಖು 13—10—1944

ಹಿಂದೂದೇಶದ ಸಾಗುವಳಿ

ಇಂದಿನ ಮಹಾ ಯುದ್ಧವು ಜಗತ್ತಿನ ಅನೇಕ ಕುಂದುಕೊರತೆಗಳನ್ನು ಜನತೆಯ ಮುಂದೆ ಪ್ರಕಾಶಕ್ಕೆ ಬರುವಂತೆ ಮಾಡಿದೆ. ಜಾಗತಿಕ ಶಾಂತಿಯು ಉಂಟಾಗಿ ಅದು ಚಿರವಾಗಿ ಬಾಳ ಬೇಕಾದರೆ ಈ ಕುಂದು ಕೊರತೆಗಳ ನಿವಾರಣೆಯಾಗಬೇಕೆಂದು ಜಗತ್ತಿನ ಎಲ್ಲಾ ರಾಷ್ಟ್ರಗಳಿಗೆ ಹೊಳೆದಿರುತ್ತದೆ.

ಹೀಗೆಯೇ ಹಿಂದೂದೇಶದ ಕುರಿತು ಅನೇಕ ಕೊರತೆಗಳು ಕಾಣಿಸಿ ಕೊಂಡಿವೆ. ಹಿಂದೂದೇಶವು ಬಹಳ ಹಿಂದುಳಿದಿದೆ ಎಂಬ ವಿಷಯವು ಹೊಳೆದು ಕಾಣಿಸುತ್ತದೆ. ಪ್ರಗತಿ ಪಥದಲ್ಲಿ ಹಿಂದೂದೇಶದ ಮುಂದಗತಿಗೆ ಅನೇಕ ಕಾರಣಗಳಿದ್ದರೂ ಹಿಂದೂದೇಶದ ಸಾಗುವಳಿ ಸಮಸ್ಯೆಯು ಅವುಗಳಲ್ಲಿ ಅತಿ ಪ್ರಾಮುಖ್ಯವಾದುದು. ಈ ಸಮಸ್ಯೆಯ ಕುರಿತು ಅಲ್ಪಸಲ್ಪ ಗಮನವು ಸರಕಾರದಿಂದಲೂ ಕೆಲವು ವ್ಯಕ್ತಿ, ಸಂಸ್ಥೆಗಳಿಂದಲೂ ಈ ಮೊದಲು ತೋರಿಸಲಾಗಿದ್ದರೂ ಅದರ ಕುರಿತು ಅತ್ಯಂತ ಲಕ್ಷವು ಉಂಟಾದುದು ಈಗಲೆ ಎಂದು ಹೇಳಬೇಕಾಗಿದೆ. ರೈತನ ಮಹತ್ವದ ಕುರಿತು ಜ್ಞಾನವು ಈಗ ಇಂಡಿಯಾ ಸರಕಾರದಲ್ಲಿ ಉಂಟಾಗಿದ್ದು, ಹಿಂದೂದೇಶ ಸಾಗುವಳಿ ಸಮಸ್ಯೆಯನ್ನು ಅತ್ಯಂತ ಯಶಸ್ವಿ ತರದಲ್ಲಿ ಸುಧಾರಿಸಿ, ಹಿಂದೂದೇಶದ ಸಾಂಪತ್ತಿಕ ಆರೋಗ್ಯ, ನೈತಿಕ ಸ್ಥಿತಿಗಳು ಉದ್ಧಾರವಾಗುವ ಕುರಿತು ಯೋಜನೆಗಳನ್ನು ಕಲ್ಪಿಸುವುದರಲ್ಲಿ ಹಿಂದೂದೇಶದ ಸರಕಾರವು ತೊಡಗಿರುತ್ತದೆ.

ಹಿಂದೂದೇಶದ ಸಾಗುವಳಿಯ ಕ್ರಮವು ಈಗ ನಡೆಯುತ್ತಿರುವಂತಹುದು ಅಷ್ಟೊಂದು ಉತ್ತಮ ಪಲಕಾರಿಯಲ್ಲವೆಂದು ಕಂಡು ಹಿಡಿಯಲಾಗಿದೆ. ಅಮೆರಿಕದಲ್ಲಿ ವಿಜ್ಞಾನದ ಸಹಾಯದಿಂದ ಅನೇಕ ಸುಧಾರಿತ ಸಾಗುವಳಿ ಕ್ರಮಗಳನ್ನು ಬಳಕೆಗೆ ತರಲಾಗಿ ಅನೇಕ ಉತ್ತಮ ಪರಿಣಾಮಗಳು ಪಡೆಯಲಾಗಿವೆ. ಈ ಕ್ರಮಗಳಿಂದ ಅಲ್ಲಿ ಸಾಗುವಳಿಯ ಉತ್ಪನ್ನದಲ್ಲಿ ಅತಿರೇಖ ಅಭಿವೃದ್ಧಿಯಾಗಿದೆ. ಅಮೆರಿಕವು ಇಂದು ಆಹಾರ ಸಾಮಗ್ರಿಗಳನ್ನು, ಆಹಾರದ ಕೊರತೆ ಇರುವ ದೇಶಗಳಿಗೆ ಕಳುಹಿಸಿಕೊಡುವ ಸ್ಥಿತಿಯಲ್ಲಿದೆ. ನೂತನ ಕ್ರಮಗಳಿಂದ ಅಮೆರಿಕವು ಎಷ್ಟರ ಮಟ್ಟಿಗೆ ಫಲಪಡೆಯುತ್ತೆಂದರೆ ಕೆಲವು ಪೈದಾಸುಗಳು ಅಲ್ಲಿ ಧಾರಾಳವಾಗಿ ಬೆಳೆದುದರಿಂದ ಅವುಗಳ ವಿನಿಯೋಗವು ಒಂದು ದೊಡ್ಡ ಸಮಸ್ಯೆಯಾಯಿತು.

ಹಿಂದೂದೇಶದಲ್ಲೂ ಸಾಗುವಳಿಯ ಸುಧಾರಣೆಯಾಗಬೇಕು. ಅದು ಅತಿ ಅವಶ್ಯವಿದೆ ಎಂದು ಅನೇಕ ತಜ್ಞರ ಅಭಿಪ್ರಾಯವು. ಹಿಂದೂದೇಶವು ಹಳ್ಳಿಗಳ ಬೀಡು. ಹಳ್ಳಿಗಳ ಉದ್ಧಾರವಾದರೆ ಮಾತ್ರ ಹಿಂದೂದೇಶದ ಉದ್ಧಾರವಾಗುವುದು. ಸಾಗುವಳಿಯು ರೈತನ ಸಾಂಪತ್ತಿಕ ನೈತಿಕ ಸ್ಥಿತಿಯು ಉದ್ಧಾರವಾಗುವ ತರದಲ್ಲಿ ತಡೆಯದೇ ರೈತನು ಅತನ ಹೊಲಯಲ್ಲಿ ಸಂತುಷ್ಟನಾಗಿ ದುಡಿಯುವಂತಾಗಬೇಕು. ಹಳ್ಳಿಗಳ ಸಂತುಷ್ಟಿಯು ನಗರಗಳ ಪ್ರಾಮುಖ್ಯವಾದ ಆಧಾರ. ರೈತನು ಅತ್ಯಂತ ಶ್ರದ್ಧೆಯಿಂದ ಕಾರ್ಯ ನಿರ್ವಹಿಸುವ ತರದಲ್ಲಿ ಅತನಲ್ಲಿ ಚೇತನ ಉಂಟಾಗುವ ತರದಲ್ಲಿ ಸಾಗುವಳಿಯ ಸಮಸ್ಯೆಯ ಪರಿಹಾರವಾಗಬೇಕು.

ಈ ಬಗ್ಗೆ ಇಂಡಿಯಾ ಸರಕಾರದಿಂದ ಅನೇಕ ಯೋಜನೆಗಳನ್ನು ಕಲ್ಪಿಸಲಾಗಿದೆ. ಸಾಗುವಳಿಯ ಹಿಡುವಳಿಗಳು ಅತಿ ಸಣ್ಣದಾಗುವುದರಿಂದ ಅವುಗಳ ಮೇಲೆ ಪರಿಶ್ರಮಿಸುವ ರೈತನಿಗೆ ಲಾಭದಾಯಕ ಪರಿಣಾಮಗಳು ಉಂಟಾಗಲಾರವೆಂದೂ, ಸಾಗುವಳಿಯ ಹಿಡುವಳಿಗಳು ದೊಡ್ಡದಾದರೆ ಮಾತ್ರ ಲಾಭವಿದೆ ಎಂದು ಪಂಜಾಬ ಮಧ್ಯ ಹಿಂದೂದೇಶ ಮೊದಲಾದ ಕಡೆಗಳಲ್ಲಿ ಪ್ರತ್ಯಕ್ಷ ಕೆಲಸ ನಡೆಯಿಸಿ ಕಂಡು ಹಿಡಿಯಲಾಗಿದೆ. ಸಹಕಾರ ಸೂತ್ರವನ್ನು ಅನುಸರಿಸಿ ಸಾಗುವಳಿ ಹಿಡುವಳಿಗಳನ್ನು ಐಕ್ಯಗೊಳಿಸಿ ಕಾರ್ಯ ನಿರ್ವಹಿಸಬೇಕಾಗಿ ಇಂಡಿಯಾ ಸರಕಾರದ ಸೂಚನೆಯಾಗಿರುತ್ತದೆ. ಇದಲ್ಲದೆ ಜಮೀನ್ದಾರರ ಅಡಿಯಲ್ಲೂ ಸಾಗುವಳಿ ಹಿಡುವಳಿಯು ದೊಡ್ಡದಾಗಿ ನಡೆಯುವುದಾದರೂ ಸರಕಾರಕ್ಕೆ ಸಮಾಧಾನವಿದೆ. ಆದರೆ ಜಮೀನ್ದಾರರೂ ರೈತನ ಸಂತುಷ್ಟಿಯ ಹೊಣೆಗಾರಿಕೆಯನ್ನು ವಹಿಸಿ, ನಡೆಯುವಂತಾಗಬೇಕೆಂಬ ಸೂಚನೆಗಳು ಇವೆ. ಸಾಗುವಳಿಯನ್ನು ಒಂದು ಉದ್ಯಮವಾಗಿ ಕೈಕೊಂಡು ರೈತನ ಹಿತದೃಷ್ಟಿಯಿಂದ ಅವರು ದುಡಿಯಬೇಕು.

ಇಷ್ಟೆ ಅಲ್ಲ. ಸಾಗುವಳಿಗೆ ಬೇಕಾದ ನೀರಿನ ಸರಬರಾಯಿ, ಗೊಬ್ಬರ ತಯಾರಿಕೆ ಉತ್ತಮ ಬೀಜಗಳ ತಯಾರಿಕೆ ಈ ಬೀಜಗಳಿಂದ ಉತ್ತಮ ಬೆಳೆಗಳನ್ನು ಪಡೆಯುವುದು. ಮಳೆಯ ನೀರಿನ ಸಂಗ್ರಹ ನೆಲದ ಕರಗುವಿಕೆಯನ್ನು ತಡೆಯುವುದು ಅರಣ್ಯಗಳ ರಕ್ಷಣೆ ಮತ್ತು ಅಭಿವೃದ್ಧಿ, ಆಹಾರ ಬೆಳೆಗಳನ್ನು ಮಾತ್ರವಲ್ಲದೆ ರೈತನು ತರಕಾರಿ ಹಣ್ಣು ಹಂಪಲು ಇತ್ಯಾದಿ ಬೆಳೆಗಳನ್ನು ಬೆಳೆಯಿಸುವ ಕುರಿತು ಪ್ರೋತ್ಸಾಹ, ಗೋಶಾಲೆಗಳ ಸ್ಥಾಪನೆ, ಈಗ ಬಂಜರು ಬಿದ್ದಿರುವ ಸ್ಥಳಗಳನ್ನು ಸಾಗುವಳಿಗೆ ಒಳಪಡಿಸುವ ಯೋಜನೆಗಳು, ಅರಣ್ಯಗಳ ರಕ್ಷಣೆ ಮತ್ತು ಬೆಳವಣಿಗೆ, ಕೈಗಾರಿಕೆಗಳಿಗೆ ಬೇಕಾಗುವ ಕಾರಣ ಸಾಮಗ್ರಿಗಳನ್ನು ಉತ್ತಮ ರೀತಿಯಲ್ಲಿ ಬೆಳೆಯಿಸುವ ಕ್ರಮಗಳು, ಹಳ್ಳಿಗಳ ನಡುವೆ ಉತ್ತಮ ತರದ ಸಂಚಾರ ಏರ್ಪಾಡು, ಹಳ್ಳಿಗರ ವಿದ್ಯಾಭ್ಯಾಸ; ಹಳ್ಳಿಗರ ಆರೋಗ್ಯ ಇತ್ಯಾದಿ ಸಾಗುವಳಿಗೆ ಸಂಭಂದ ಪಟ್ಟ ಅನೇಕ ಸಮಸ್ಯೆಗಳನ್ನು ಸುಧಾರಿಸಬೇಕೆಂದು ಇಂಡಿಯಾ ಸರಕಾರಕ್ಕೆ ಸೂಚನೆಗಳಾಗಿವೆ. ಈ ಸಮಸ್ಯೆಗಳ ಹೊಣೆಗಾರಿಕೆಯು ಸರಕಾರದ ಮೇಲೆ ಎಷ್ಟು ಇದೆಯೋ ಅಷ್ಟೆ ಪ್ರಜೆಗಳ ಮೇಲೂ ಇದೆ. ಆದುದರಿಂದ ಸಾಗುವಳಿಯ ಉದ್ಧಾರದ ಕುರಿತು ಎಲ್ಲರೂ ಉತ್ಸಾಹ ಮತ್ತು ಕುತೂಹಲಗಳನ್ನು ತೋರಿಸತಕ್ಕದು.

ಶಿಕ್ಷೆ

ಸಮುದ್ರ ಕರಾವಳಿ ಪೆಟ್ರೋಲ್ ಕಾನ್‌ಸ್ಟೇಬಲರಾಗಿದ್ದ ಕಾಪಿರ ಪುಜಾರಿ ಮತ್ತು ಹಸನಬ್ಬ ಎಂಬಿವರು ಸುರತ್ಕಲಿನ ಒಬ್ಬ ಅಂಗಡಿಯವಳ ಮನೆಯೊಡೆದು ಕೆಲವು ಉಪಕರಣಗಳನ್ನು ಕದ್ದ ಆರೋಪದಿಂದ ಸ್ಪೆ. ಸಬ್. ಮೆಜಿಸ್ಟ್ರೇಟರಲ್ಲಿ ವಿಚಾರಣೆಗೊಳಗಾಗಿ ಒಂದೊಂದು ವರ್ಷದ ಶಿಕ್ಷೆ ವಿಧಿಸಲ್ಪಟ್ಟಿರುವರು.

ಸುಂಭ ಪರ್ಚನ ಗೊಬ್ಬರ

ನೆಲವು ಸಾರವತ್ತಾಗಿದ್ದರೆ ಮಾತ್ರ ಬೆಳೆಯು ಉತ್ತಮವಾಗಿ ಬೆಳೆಯುವುದು. ವನಸ್ಪತಿಗಳ ಬೆಳವಣಿಗೆಗೆ ಸಾರಜನಕವೆ ಪ್ರಾಮುಖ್ಯವಾದ ಆಹಾರವು. ಈ ಸಾರಜನಕವು ವಾಯು ಮಂಡಲದಿಂದ, ವನಸ್ಪತಿಗೆ ದೊರಕಿಸಿಕೊಡುವ ನೈಸರ್ಗಿಕ ದಾರಿಯುಯಿರುವುದಾದರೂ, ಗಿಡಗಳ ಪೋಷಣೆಗಳಿಗೆ ಈ ಸಾರಜನಕವನ್ನು ನಾವು ಇತರ ಬೇರೆದಾರಿಯಿಂದ ಒದಗಿಸಬೇಕಾಗಿದೆ. ಸಾಗುವಳಿಯಲ್ಲಿ ಗೊಬ್ಬರವು ಒಂದು ಪ್ರಾಮುಖ್ಯ ಆಧಾರವು.

ಪ್ರಾಣಿಗಳ, ಮನುಷ್ಯನ ಮಲಮೂತ್ರಗಳಲ್ಲಿ ಸಾರಜನಕವು ಅಧಿಕಾಂಶದಲ್ಲಿ ಸೇರಿರುತ್ತದೆ. ಹಾಗೆನೆ ವನಸ್ಪತಿಗಳಲ್ಲೂ ಇದೂ ಕೂಡಿರುತ್ತದೆ. ರೈತನು ತನಗೆ ಬೇಕಾದ ಗೊಬ್ಬರವನ್ನು ಮಾನವನಿಂದಲೂ, ಪ್ರಾಣಿಗಳಿಂದಲೂ, ವನಸ್ಪತಿಗಳಿಂದಲೂ ಪಡೆಯಬಹುದು. ಎಣ್ಣೆ ತೆಗೆದಾದ ಮೇಲೆ ಉಳಿಯುವ ಹಿಂಡಿಯು ಒಳ್ಳೇ ಸಾರಜನಕಯುಕ್ತ ಗೊಬ್ಬರವು. ಇದಲ್ಲದೆ ವಾಯುಮಂಡಳದ ಸಾರಜನಕದಿಂದ ಕೃತಕ ಗೊಬ್ಬರವನ್ನಾಗಿ ಮಾರ್ಪಡಿಸುವ ಉಪಾಯಗಳು ಕಂಡುಹಿಡಿಯಲಾಗಿವೆ. ಸಾರಜನಕವಿರುವ ಕೃತಕ ಗೊಬ್ಬರಗಳನ್ನು ಇತರ ರೀತಿಗಳಲ್ಲೂ, ತಯಾರಿಸುತ್ತಾರೆ.

ರೈತನು ಏನೊಂದು ಪ್ರಯಾಸವಿಲ್ಲದೆ, ಹೆಚ್ಚಿನ ಹಣ ವ್ಯಯಮಾಡದೆ, ಒಂದಿಷ್ಟು ಶ್ರಮವಹಿಸಿ, ಗೊಬ್ಬರವನ್ನು ತಯಾರಿಸುವ ಉಪಾಯವು ತನ್ನದೆ ಮಲ ಮೂತ್ರಗಳ ಉಪಯೋಗ ಮತ್ತು ಪ್ರಾಣಿಗಳ ಮಲ ಮೂತ್ರದ ಉಪಯೋಗದಲ್ಲಿದೆ. ಮಾನವ ಮಲ ಮೂತ್ರ ವಿಸರ್ಜನೆಗಳನ್ನು ಸಂಗ್ರಹಿಸುವ ಕೆಲವು ಉತ್ತಮ ರೀತಿಗಳನ್ನು ಬಳಕೆಗೆ ತಂದು ಮೇಲಿನ ಉದ್ದೇಶವನ್ನು ನೆರವೇರಿಸಬಹುದು. ಗಾಂಧಿಜಿಯವರು ಈ ಕುರಿತು ಒಳ್ಳೇ ಸೂಚನೆಗಳನ್ನು ಕೊಟ್ಟಿರುವರು. ಅಲ್ಲದೆ ಮನುಷ್ಯನ ಮಲಮೂತ್ರಗಳನ್ನು ಗೊಬ್ಬರಗಳನ್ನಾಗಿ ರಕ್ಷಿಸುವ ಏರ್ಪಾಡುಗಳನ್ನು ತನ್ನ ಆಶ್ರಮದಲ್ಲಿ ಬಳಕೆಗೆ ತಂದಿರುವರು.

ನಮ್ಮ ಮಲಮೂತ್ರಗಳನ್ನು ಬಹಳ ದಿವಸಗಳವರೆಗೆ ಬಿಡಲ್ಪಟ್ಟರೆ, ಅವು ಕೊಳೆತು, ನಾವು ಸೇವಿಸುವ ವಾಯುವನ್ನು ಅಶುದ್ಧಗೊಳಿಸುತ್ತವೆ. ಈ ಕಾರಣ ಒಂದನ್ನು ನಾವು ಮಲಮೂತ್ರಗಳನ್ನು ಗೊಬ್ಬರವನ್ನಾಗಿ ಶೇಖರಿಸುವಾಗ ಗಮನಿಸ ಬೇಕಾದ ಮುಖ್ಯ ವಿಚಾರವಾಗಿರುತ್ತದೆ. ಮನುಷ್ಯನ ಮಲವನ್ನು ವಾಯುಸ್ಪರ್ಶವಿಲ್ಲದ, ಹೊಂಡಗಳಲ್ಲಿ ಶೇಖರಿಸಲ್ಪಟ್ಟರೆ, ಅಗ ಅದರಿಂದ ಯಾವತ್ತು ಕೆಟ್ಟ ಪರಿಣಾಮಗಳುಉಂಟಾಗದೆಂದು ಕಂಡುಹಿಡಿಯಲಾಗಿದೆ.

ಗಾಂಧೀಜಿಯರ ಸೇವಗ್ರಾಮದಲ್ಲಿ ಮನುಷ್ಯನ ಮಲ ಮೂತ್ರಗಳನ್ನು ಮುಂದಿನ ಉಪಯೋಗಕ್ಕಾಗಿ ಬಚ್ಚಿಡುವ ಉತ್ತಮ ಏರ್ಪಾಡುಗಳಿವೆ. ಮಲವನ್ನು ಮಣ್ಣಿನೊಡನೆ ಬೆರಸಿ ಅದನ್ನು ಶೇಖರಿಸುವ ತರದಲ್ಲಿ ಪಾಯಿಖಾನೆಗಳು ಅಲ್ಲಿ ಇವೆ. ಮೂತ್ರವನ್ನು ಬೇರೆಯಾಗಿ ಒಂದು ಪಾತ್ರದಲ್ಲಿ ಕೂಡಿಸುವ ಏರ್ಪಾಡು ಈ ಪಾಯಿಖಾನೆಗಳಲ್ಲಿವೆ. ಆ ಪಾಯಿಖಾನೆಗಳಲ್ಲಿ ಒಂದು ಬಟ್ಟಿಯಲ್ಲಿ ಮಣ್ಣು ಮತ್ತು ಅದರಲ್ಲಿ ಒಂದು ಸಣ್ಣ ತಾಟಿಯೂ ಇಡಲಾಗಿದೆ. ಪಾಯಿಖಾನೆಯನ್ನು ಉಪಯೋಗಿಸುವವರು ಮಲ ವಿಸರ್ಜನೆ ಯಾದ ನಂತರ (ಈ ಮಲವು ಕೆಳಗೆ ಒಂದು ಮಣ್ಣಿನ ಪಾತ್ರೆಯ ಬಾಲ್ಟಿಯಲ್ಲಿ ಬೀಳುವಂತೆ ಮಾಡಲಾಗಿದೆ.) ಅಲ್ಲಿರುವ ಮಣ್ಣಿನ ಬುಟ್ಟಿಯಿಂದ ಒಂದಿಷ್ಟು ಮಣ್ಣನ್ನು ತನ್ನ ಮಲದ ಮೇಲೆ ಚೆಲ್ಲಬೇಕು. ಬೆಳಿಗ್ಗೆ ಎಲ್ಲರ ಮಲವಿಸರ್ಜನೆಯುನಡೆದ ನಂತರ ಒಂದು ನಿಯಮಿತ ಸಮಯ ಮಣ್ಣಿನಿಂದ ಮುಚ್ಚಲ್ಪಟ್ಟ ಮಲವನ್ನು ದೂರದಲ್ಲಿರುವ ಒಂದು ಸಿಮೆಂಟಿನ ಹೊಂಡಕ್ಕೆ ಹಾಕಲಾಗುವುದು ಅಲ್ಲಿ ಅದು ಗಾಳಿಯ ಸಂಪರ್ಕವಿಲ್ಲದೆ ಶೇಖರಿಸಲ್ಪಟ್ಟು ಕ್ರಮೇಣ ಒಂದು ಗೊಬ್ಬರವಾಗಿ ಮಾರ್ಪಡುವುದು. ಮೂತ್ರವನ್ನು ಬೇರೆಯಾಗಿ ಹೊಂಡದಲ್ಲಿ

(೮ನೇ ಪುಟಕ್ಕೆ ಮುಂದುವರಿದಿದೆ)

ನಿದೆನೋವನ್ನು ನಿವಾರಿಸಿರಿ

ನಿಮಗೆ ಬೇಗನೇ ಶೀತವಾಗುವುದೆ? ನೀವು ಆಗಾಗ ಕೆಮ್ಮು, ಶ್ವಾಸಕೋಶದ ದೌರ್ಬಲ್ಯಗೊಳಿಸುವ ಶೀತಬಾಧೆಯಿಂದ ನರಳುತ್ತೀರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸುಗಳನ್ನು ಸೇವಿಸಿ ಗುಣಹೊಂದಿರಿ.

ಪೆಪ್ಸು ಬಾಯಲ್ಲಿ ಹಾಕಿದ ಕೂಡಲೇ ಉತ್ತಮ ಸುಗಂಧ ಔಷಧಿ ರಸ ಹೊರಡಿಸುತ್ತದೆ. ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುವುದು. ಹಾಗೆ ಸೇರಿ, ಎದೆನೋವು, ಕಫ, ಗಂಟಲು ನೋವು, ಶೀತಬಾಧೆ, ಕೆಮ್ಮು ಮೊದಲಾದವುಗಳನ್ನು ಗುಣಪಡಿಸುವುದು. ನೇವಸ ಮತ್ತು ಶೀತಜ್ವರಗಳಿಗೂ ಪರಮೌಷಧ, ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ದೊರಕುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಕರ್ನಾಟಕ ಲೇಖಕರ ಸಂಘ

ಕನ್ನಡ ಭಾಷೆಯ ಬೆಳವಣಿಗೆ, ಕನ್ನಡ ಸಾಹಿತ್ಯ, ಕಲಾಪ್ರಚಾರ, ಕನ್ನಡವಾಙ್ಮಯ ಪ್ರಸಾರ, ಇದರಿಂದ ಕರ್ನಾಟಕ ಏಕೀಕರಣ ವಾಗುವ ಮುಖ್ಯೋದ್ದೇಶದಿಂದ ಮೇಲ್ಕಂಡ ಹೊಸ ಸಂಘವು ತಾ. 8—10—44ರಲ್ಲಿ ಮಂಗಳೂರಲ್ಲಿ ಸ್ಥಾಪಿತವಾಗಿದೆ. ಇದರ ಕಾರ್ಯಾಧ್ಯಕ್ಷರಾಗಿ ಶ್ರೀ. ಕೆ. ಕೃಷ್ಣರಾವ್ ಬಿ. ಎ. ಕಾರ್ಯದರ್ಶಿಗಳಾಗಿ ಎಸ್. ಬಿ. ನಾಯ್ಕ ಬಿ. ಎ. ಇವರೂ, ಇವರಿಗೆ ಸಹಾಯಕವಾಗಿ ಎಂಟು ಮಂದಿಯನ್ನೊಳಗೊಂಡ ಕಾರ್ಯಕಾರಿ ಸಮಿತಿಯೂ ಇದೆ. ಕನ್ನಡ ನಾಡಿನ ಹಿರಿಯ ಸಾಹಿತಿಗಳನ್ನೂ ಕಿರಿಯ ಬರಹಗಾರರನ್ನೂ ಪ್ರಗತಿಗಾಮಿ ಲೇಖಕರನ್ನೂ ಸ್ವಾಗತೀಕರಿಸುತ್ತದೆ. ಈ ಸಂಘವು ಮೇಲಿನ ಉದ್ದೇಶಗಳ ಕುರಿತು ಬೇಗನೇ ಪ್ರಚಾರ ಕೈಕೊಳ್ಳುವರು. ಭಾಷಾಭಿಮಾನಿಗಳು, ಪ್ರೇಮಿಗಳೂ ಪ್ರೋತ್ಸಾಹವನ್ನೂ ಜನತೆಯು ಬೆಂಬಲವನ್ನೂ ನೀಡುವುದೆಂದು ಹಾರೈಸಲಾಗಿದೆ.

ಜನತಾ ಆಹಾರ ಸಮಿತಿ

ಇದರ ವಿಶೇಷ ಸಭೆಯೊಂದು ಶ್ರೀ. ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೇರಿತ್ತು. ಜಿಲ್ಲೆಯ ಆಹಾರ, ನೆರೆ, ಕಟ್ಟಿಗೆ ಪರಿಸ್ಥಿತಿಗಳ ಕುರಿತು ಪರ್ಯಾಲೋಚನೆ ಮಾಡಲಾಯಿತು. ಕೃಷಿ ಉದ್ಯಮದ ಜನರಿಗೆ ದಿನಕ್ಕೆ 3 ಪಾವಿನಂತೆ ಅಕ್ಕಿ, ಇಲ್ಲವೆ 2 ಪಾವು ಅಕ್ಕಿ 1 ಪಾವು ರಾಗಿ ದೊರೆಯುವಂತಾಗಬೇಕು; ಹೊಸ ಅಕ್ಕಿಯನ್ನು ದಶಂಬರದ ಮೊದಲು ಮಾಡಿದರೆ ಅದರಲ್ಲಿ ಆಹಾರ ಸತ್ವ ಕಡಿಮೆಯಾಗುವುದರಿಂದ ಅದನ್ನು ಜನವರಿ ನಂತರವೇ ತಯಾರಿಸುವುದು ಉತ್ತಮ; ಸಂಘಟನೆಗಾಗಿ ಸದ್ಯದಲ್ಲೇ ಸಮಿತಿ ಕೆಲಸಗಾರರ ಪರಿಷತ್ತು ಸೇರಿಸಬೇಕು; ನೆರೆ ಹಾವಳಿಯ ಸಂಕಷ್ಟ ನಿವಾರಣೆಗಾಗಿ ಶೇಕರಿಸಲ್ಪಟ್ಟ ಹಣ ಮತ್ತು ಕೃಷಿ ಉಪಕರಣಗಳನ್ನು ಯೋಗ್ಯ ರೀತಿಯಲ್ಲಿ ಹಂಚಬೇಕು; ಈ ನಗರದಲ್ಲಿ ಸರಿಯಾದ ಕಟ್ಟಿಗೆ ಹಂಚೋಣದ ಏರ್ಪಾಡಾಗಬೇಕು—ಎಂಬುದ್ದೇಶದ ನಿರ್ಣಯಗಳು ಅಂದಿನ ಸಭೆಯಲ್ಲಿ ಅನುಮೋದಿಸಲಾದುವು.

ವಿದ್ಯಾರ್ಥಿ ಸಂಘ

ಅಭಿಪ್ರಾಯ ಭೇದದಿಂದ ಎರಡು ಪ್ರತ್ಯೇಕ ಸಂಘಗಳಾಗಿ ಬೇರ್ಪಟ್ಟ ಮಂಗಳೂರಿನ ವಿದ್ಯಾರ್ಥಿ ಸಂಘಗಳು ಐಕ್ಯ ಹೊಂದಿ ತಾ. 5ರಂದು ಕೆನರಾ ಹೈಸ್ಕೂಲಿನಲ್ಲಿ ಸೇರಿದ ಸಭೆಯಲ್ಲಿ ಶ್ರೀ. ಎ. ಜೆ. ಜೋಸೆಫರನ್ನು ಸಂಘದ ಅಧ್ಯಕ್ಷರಾಗಿಯೂ, ಶ್ರೀ ಭುಜಂಗರಾಯರನ್ನು ಕೋಶಾಧಿಕಾರಿಗಳಾಗಿಯೂ ಚುನಾಯಿಸಲಾಯಿತು.

ಹೊಸ ಮುನ್ಸಿಫರು

ಇಲ್ಲಿ ಮುನ್ಸಿಫರಾಗಿದ್ದ ಮಿ। ಅಬ್ದುಲ್ ರಹೀಮ್ ಅಹಮ್ಮದ್ ಅವರು ಕುಂದಾಪುರ ಮುನ್ಸಿಫರಾಗಿ ವರ್ಗಾಯಿಸಲ್ಪಟ್ಟಿರುವರು. ಅಲ್ಲಿನ ಶ್ರೀ. ಡಿ. ಸುಬ್ಬರಾವ್ ಅವರು ಮಂಗಳೂರು ಜಿಲ್ಲಾ ಮುನ್ಸಿಫರಾಗಿ ಬರುವರು.

ಬಿಡುಗಡೆ

ಬೆಸಿಲ್ ಮೊಂತೆರೊ ಎಂಬವನನ್ನು ಕೊಲೆ ಮಾಡಿದನೆಂಬ ಆರೋಪದ ಮೇಲೆ ವಿಚಾರಣೆಗೆ ಒಳಗಾದ ಪುತ್ತೂರು ಕರಸವಾಡಿ ಗ್ರಾಮದ ನಾರಾಯಣ ಶೆಟ್ಟಿ ಎಂಬವನನ್ನು ಜಿಲ್ಲಾ ಜಡ್ಜರು ನಿರಪರಾಧಿ ಎಂದು ಬಿಡುಗಡೆ ಮಾಡಿರುವರು.

ಜೈಲರ್ ಮನೆಯಲ್ಲಿ ಕಳವು

ಜೈಲಾಧಿಕಾರಿ ಶ್ರೀ ಕೆ. ಜಿ. ಭಂಡಾರಿ ಅವರ ಮನೆಯಲ್ಲಿಂದ ಒಂದು ವಾಚ್, ಪೆನ್, ಮತ್ತು 200 ರೂಪಾಯಿ ನಗ್ದಿ, ಮತ್ತೊಂದು ಬೀಗದ ಗೊಂಚಲು ಕಳವಾಗಿರುತ್ತದೆಯಾಗಿ ತಿಳಿದು ಬಂದಿದೆ. ಕದ್ದವರು ಸಿಕ್ಕಿಲ್ಲ.

ಆಹಾರ ಪರಿಸ್ಥಿತಿ

ಇದನ್ನು ಪ್ರತ್ಯಕ್ಷ ಪರಿಶೀಲಿಸಲು ಸರ್ವೆಂಟ್ಸ್ ಆಫ್ ಇಂಡಿಯಾ ಸಂಘದ ಸದಸ್ಯರಾದ ಶ್ರೀ ಟಿ. ಆರ್. ಶಿವಸ್ವಾಮಿ ಅವರು ಇಲ್ಲಿಗೆ ದಯಮಾಡಿಸಿದ್ದಾರೆ.

ರೇಶನ್ ಅರೋಪಕ ಜುಲ್ಮಾನೆ

ಸ್ಪೆಶಲ್ ಮೆಜಿಸ್ಟ್ರೇಟ್ ಶ್ರೀ ಎ. ಸದಾನಂದ ಶೈ ಅವರಲ್ಲಿ ಈ ಕೆಳಗಿನವರಿಗೆ ಜುಲ್ಮಾನೆ ಆಗಿದೆ. 1 ತಿಂಗಳ ಅಕ್ಕಿ ಇದ್ದು ರೇಶನ್ ಪಡೆದುದಕ್ಕೆ ರೂ. 75 (ಆರಿಕರಿ ವಿಠಪ್ಪ ಶೆಟ್ಟಿ); ಅಕ್ರಮ ರೀತಿ ಅಕ್ಕಿ ಸಾಗಿಸಿದ್ದಕ್ಕೆ ರೂ. 100 (ಕುವೆಲ್ಲೊ, ತುಂಬೆ); ಅದೇ ಆರೋಪಕ್ಕೆ ಮುನ್ನೂರು ಕೋಟೆ ಮಾಲ್ಯರಿಗೆ ರೂ. 50; ಮೈದಿನ್ ಬ್ಯಾರಿಗೆ ರೂ. 50; ಅಕ್ರಮ ರೇಶನ್ ಪಡೆದುದಕ್ಕೆ ಸಿ. ಕೆ. ಇದಿನಬ್ಬರಿಗೆ ರೂ. 100; ಊರಲ್ಲಿಲ್ಲದ ಮಗನ ರೇಶನ್ ಪಡಿ ಪಡೆದುದಕ್ಕೆ ಬೋಳಾರದ ವಿಟ್ಠಲ್ ಭಕ್ತರಿಗೆ ರೂ. 100; ತಿಂಗಳ ಅಕ್ಕಿ ದಾಸ್ತಾನಿದ್ದೂ ರೇಷನ್ ಪಡೆದುದಕ್ಕೆ ಶ್ರೀ ಕೆರವಾರ್ ವಿಠಲ್‌ರಾಯರಿಗೆ ರೂ. 100.

ಹೊಟೇಲುದಾರರ ಸಂಘ

ನಗರದ ಕೆಲವು ಹೊಟೇಲು ಮಾಲಕರು ಸಭೆ ಸೇರಿ ತಮ್ಮದೊಂದು ಸಂಘವನ್ನು ಸ್ಥಾಪಿಸಿರುವರು. ಶ್ರೀ ಕುಡ್ವ ಗೋಪಾಲಕೃಷ್ಣ (ತಾಜ್ ಮಹಾಲ್) ಅಧ್ಯಕ್ಷ; ಶ್ರೀಗಳಾದ ಎಸ್. ವಿ. ಭಟ್ (ಕೃಷ್ಣಭವನ) ಮತ್ತು ಎನ್. ವಿ. ಭಟ್ (ಜಯಕೆಫೆ) ಇವರು ಉಪಾಧ್ಯಕ್ಷರು ಎಂ. ರಾಮಚಂದ್ರರಾವ್ (ಶ್ರಿ ವಿಲಾಸ) ಮತ್ತು ಅನಂತಭಟ್ (ಮೋಡರ್ನ್ ಕೇಫ್) ಇವರುಗಳು ಕಾರ್ಯದರ್ಶಿಗಳು. ಶ್ರೀ ವರದರಾವ್ ನಾಯ್ಕ (ಪೋರ್ಟ್ ರೆಸ್ಟೋರೆಂಟ್) ಇವರು ಕೋಶಾಧಿಕಾರಿ. ಉಪಹಾರ ಗೃಹಗಳಿಗೆ ಆಹಾರ ಪರಿಸ್ಥಿತಿಯಿಂದೊದಗಿದ ತೊಡಕುಗಳನ್ನು ನಿವಾರಿಸಲು ಪ್ರಯತ್ನಿಸುವುದೇ ಸಂಘದ ಮುಖ್ಯ ಧ್ಯೇಯಗಳಲ್ಲಿ ಒಂದೆಂದು ತಿಳಿದು ಬರುತ್ತದೆ. ಸದಸ್ಯತನಕ್ಕೆ ರೂ. 10, 5, 2ರ 3 ವರ್ಗ ಮಾಡಲಾಗಿದೆ.

ಕಟ್ಟಿಗೆಯ ಹೊಸ ದರಗಳು

ಕಟ್ಟಿಗೆ ದರಗಳು, ಮತ್ತು ಮಾರಾಟದ ಕುರಿತು ಜಿಲ್ಲಾ ಕಲೆಕ್ಟರರಿಂದ ಹೊಸತೊಂದು ಆಜ್ಞೆಯು ಹೊರಡಿಸಲಾಗಿದೆ. ಈ ಆಜ್ಞೆಯು ಕೂಡಲೆ ಜ್ಯಾರಿಗೆ ಬಂದಿರುತ್ತದೆ. ಮಂಗಳೂರು ನಗರದೊಳಗೆ ಯಾವನೊಬ್ಬ ಪೋರೆಸ್ಟ ಕಂಟ್ರಾಕ್ಟರನು ಯಾ ಕಟ್ಟಿಗೆ ಸಾವುಕಾರನು ಹಂಚಿನ ಕಾರ್ಖಾನೆ ಇತ್ಯಾದಿ ಕೈಗಾರಿಕೆ ಸಂಸ್ಥೆಗಳಿಗೆ ಕಟ್ಟಿಗೆ ಮಾರಾಟಮಾಡಬಾರದಾಗಿ ನಿಷೇಧ ಹಾಕಲಾಗಿದೆ.

ರಖಂ ದರಗಳು:— ಕರಿಮರ, ಯಾ ಗೋಳಿ, ಒಣಗಲು ಒಡೆಯುವೆ ಯಿದ್ದು, ಟನ್ನಿಗೆ (2240 ರಾತ್ತಲುಗಳು) ರೂ. 20—ಒಣಗಲು ಹೋಳುಗಳು, ಟನ್ನಿಗೆ ರೂ. 22,—ಮಂಗಳೂರು ಪಸಂಧಿ ಒಣಗಲು ಒಡೆಯದೆ ಇದ್ದದು ಟನ್ನಿಗೆ ರೂ. 18; ಒಣಗಲು ಹೋಳುಗಳು, ಟನ್ನಿಗೆ ರೂ. 20.

ಈ ರಖಂ ದರಗಳು ಇದೇ ಮಂಗಳೂರು ನಗರಕ್ಕೆ ಅನ್ವಯಿಸತಕ್ಕದು.

ಚಿಲ್ಲರೆ ದರಗಳು—(ಬಂದರದಲ್ಲಿ:) ಕರಿಮಾರು ಯಾ ಗಾಳಿ ಒಡೆಯದೆ ಇದ್ದದು ಖಂಡಿಗೆ ರೂ. 6—14—0. ಹೋಳುಗಳು ರೂ. 6-6-0. ಮಂಗಳೂರು ಪಸಂದಿ ರೂ. 5-4-0 ಹೋಳುಗಳು ರೂ. 5-12-0.

ಬಂದರದಿಂದ ಎರಡು ಫರ್ಲಂಗು ದೂರದ ಪ್ರದೇಶಗಳಲ್ಲಿ.

ಕರಿಮಾರು ಯಾ ಗಾಳಿ ಖಂಡಿಗೆ 6-2-0 ಹೋಳುಗಳು ರೂ. 7-10-0. ಮಂಗಳೂರು ಪಸಂಧಿ ಖಂಡಿಗೆ ರೂ. 5-8-0 ಹೋಳುಗಳು ರೂ. 6-0-0.

ನೂಲಿನ ಪೂರೈಕೆ

ನಮ್ಮ ಪ್ರಾಂತ್ಯದ ಟೆಕ್ಸ್‌ಟೈಲ್ ಕಮಿಶನರರಾದ ಶ್ರೀ. ವೆಂಕಟೇಶನ್ ಐ. ಸಿ. ಎಸ್. ಇವರು ಕೆಲವು ದಿನಗಳ ಹಿಂದೆ ಮಂಗಳೂರಿಗೆ ಬಂದಿದ್ದು ನಮ್ಮ ಜಿಲ್ಲೆಯ ಮಗ್ಗಗಳ ಮತ್ತು ಅವುಗಳಿಗೆ ಬೇಕಾಗುವ ನೂಲಿನ ಸರಬರಾಯಿಯ ಕುರಿತು ಪರಿಶೀಲನೆ ಮಾಡಿ ಮರಳಿದ್ದು ಈಗ ನಮ್ಮ ಜಿಲ್ಲೆಯ ಸುಮಾರು ೬ ಸಾವಿರ ಮಗ್ಗಗಳಿಗೆ ತಿಂಗಳಿಗೆ ಕೊಡಲಾಗುತ್ತಿದ್ದ ಬೇಲುಗಳ ಸಂಖ್ಯೆಯನ್ನು ೨೫೦ರಿಂದ ೪೨೫ಕ್ಕೆ ಹೆಚ್ಚಿಸಿರುವರು. ಇನ್ನೂ ಹೆಚ್ಚಿಗೆ ಬೇಕಾದಲ್ಲಿ ಪೂರೈಸಲಾಗುವುದೆಂದೂ ಭರವಸೆ ಕೊಡಲಾಗಿದೆ. ಪ್ರಾಂತ್ಯದ ನಾನಾ ಜಿಲ್ಲೆಗಳಿಗೆ ಬಟ್ಟೆ ಸರಬರಾಯಿ ಮಾಡುವ ಹೊಸ ಯೋಜನೆಯೊಂದು ಈ ತಿಂಗಳಿಂದ ಜ್ಯಾರಿಗೆ ಬರಲಿರುವುದಾಗಿಯೂ ತಿಳಿಸಲಾಗಿದೆ.

ಶ್ರೀ ಮಜೂರರಿಗೆ ಯುದ್ಧ ಭತ್ತೆ

ಇಲ್ಲಿಯ ಪಿಯರ್‌ಕಾರರ ಗೇರುಬೀಜ ಕಾರ್ಖಾನೆಯ ಮಜೂರರ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಸದರಿ ಸಂಸ್ಥೆಯ ಚಾಲಕರು ಮಜೂರರಿಗೆ ದುಡಿಯುವ ಹೆಂಗುಸರಿಗೆ ಮಾತ್ರ ಸೇಕಡಾ ೫೦ರಷ್ಟು ಯುದ್ಧ ಭತ್ತೆ ಕೊಡುವುದಾಗಿ ನಿರ್ಣಯಿಸಿದ್ದು ಕಳೆದ ತಿಂಗಳ ೧ರಿಂದ ಈ ಭತ್ತೆಯು ಅವರಿಗೆ ದೊರಕುವಂತೆ ಏರ್ಪಡಿಸಲಾಗಿದೆ ಎಂದೂ ತಿಳಿದುಬರುತ್ತದೆ. ಪರಿಸ್ಥಿತಿ ಅನುಕೂಲವಾದ ಹಾಗೆ ಮಜೂರರ ಇತರ ಸೌಕರ್ಯಗಳ ವಿಷಯದಲ್ಲೂ ಯೋಗ್ಯಕಂಡ ಏರ್ಪಾಡು ಮಾಡಲಾಗುವುದೆಂದೂ ತಿಳಿಸಲಾಗಿದೆ.

ಪ್ರತಿಬಂಧಕಾಜ್ಞೆ

ಸಭೆ ಮೆರವಣಿಗೆಗಳ ಮೇಲೆ ಹಾಕಲ್ಪಟ್ಟ ನಿರ್ಬಂಧಕಾಜ್ಞೆಯನ್ನು ರದ್ದುಮಾಡಲಾಗಿದೆ. ೧೯೪೨ನೇ ಸಪ್ಟಂಬರ ಸುಮಾರಿನಿಂದ ಇದು ತನಕ ಇದು ಜ್ಯಾರಿಯಲ್ಲಿತ್ತು.

ಆಹಾರ ವಸ್ತುಗಳು

೧೫೦೦ ಗೋಣಿ ಹುರುಳಿ ಕೊಯಮುತ್ತೂರಿನಿಂದ ಇಲ್ಲಿಗೆ ಬಂದಿರುತ್ತದೆ. (ಹುರುಳಿಯು ಇತರ ಧಾನ್ಯಗಳಿಗಿಂತ ಮನುಷ್ಯ ಉಪಯೋಗದ ಒಳ್ಳೇ ಆಹಾರವಾಗಿರುವುದು) ೧ನೇ ತರಗತಿ ಬಿಳಿ ಹುರುಳಿಗೆ ಸೇರಿಗೆ ೬। ಆಣೆ. ೨ನೇದು (ಬಿಳಿ) ಸೇರಿಗೆ ೫ ಆ. ೮ ಪೈ. ಚಿಲ್ಲರೆಯಾಗಿ ಎಲ್ಲಾ ಅಂಗಡಿಗಳಲ್ಲಿ ದೊರೆಯುತ್ತದೆ. ರಖಂ ಆಗಿ ಬಂದರದಲ್ಲಿ ಎಚ್. ಕೆ. ದಾದಾ ಅವರಲ್ಲಿ ಪಡೆಯಬಹುದು.

ನಗರದಲ್ಲಿ ಉದ್ದಿನ ಬೇಳೆಯ ಬೆಲೆ ಸೇರಿಗೆ ೧೦॥ ದೊರಕುತ್ತದೆ. ಕುಂದಾಪುರದಿಂದ ಸಾವಿರ ಡಬ್ಬೆ ಬೆಲ್ಲ ಬಂದಿರುತ್ತದೆಂದೂ, ಹಳ್ಳಿಗಳ ಕಡೆಯಿಂದ ಹೊಸ ಬೆಲ್ಲವೂ ಬರಲಾರಂಭವಾಗಿದೆಯೆಂದೂ ತಿಳಿದುಬರುತ್ತದೆ.

ಕಸ್ತೂರ್ ಬಾ ನಿಧಿ

ಸ್ಥಳೀಯ ಜನತಾ ರಂಗಭೂಮಿಯವರು ಬಾ ನಿಧಿಗಾಗಿ ಮಿಶನ್ ಹೈಸ್ಕೂಲಿನಲ್ಲಿ ಒಂದು ನಾಟಕವಾಡಿದರು. ಸುಮಾರು ರೂ. ೪೫೦ ಉತ್ಪನ್ನವಾಯಿತು. ಇದುತನಕ ಜಿಲ್ಲೆಯಲ್ಲಿ ರೂ. ೨೦ ಸಾವಿರಕ್ಕೂ ಮಿಕ್ಕಿ ಒಟ್ಟುಗೂಡಿರುವುದಾಗಿ ಸಮಿತಿ ಅಧ್ಯಕ್ಷ ಶ್ರೀ ವೈಕುಂಠ ಬಾಳಿಗರು ತಿಳಿಸಿ ಸಾರ್ವಜನಿಕರ ಔದಾರ್ಯಕ್ಕೆ ವಂದಿಸಿದರು.

ಬಿಸೆಂಟ್ ಮಾತಾ ದಿನ

ಬಿಸೆಂಟ್ ಶಾಲಾವರ್ಧಂತಿ ಮತ್ತು ಬಿಸೆಂಟ್ ಮಾತಾ ದಿನಾಚರಣೆಯೂ ಕಳೆದ ಆದಿತ್ಯವಾರ ಆ ಶಾಲೆಯಲ್ಲಿ ರಾ। ಬ। ರಾಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟವು.

ಅದೇ ದಿನ ಬೆಳಗ್ಗೆ ಈ ಶಾಲೆಯಲ್ಲಿ ಹಿಂದೂಸ್ಥಾನ್ ಸ್ಕೌಟ್ಸ್ ದಿನಾಚರಣೆ ಶ್ರೀಮತಿ ಎಂ. ಕೇಶವ ಶೈ ಇವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಕೆಲವು ಬಾಲಿಕಾ ಪಾಠ ಶಾಲೆಯಿಂದ ಬಂದ ಬಾಲಿಕಾ ಸ್ಕೌಟುದಳಗಳ ಪ್ರದರ್ಶನವಿತ್ತು.

ಉಡುಪಿ

ಸಾಹಿತ್ಯೋತ್ಸವ

ಇತ್ತೀಚೆಗೆಂಬಂತೆ ಇಲ್ಲಿ ಸ್ಥಾಪಿಸಲ್ಪಟ್ಟ ಕರ್ನಾಟಕ ಸಂಘದವರು ಸಾಹಿತ್ಯೋತ್ಸವದ ಕಾರ್ಯಕ್ರಮವೊಂದನ್ನು ಅತ್ಯಂತ ತೃಪ್ತಿಕರವಾಗಿ ನೆರವೇರಿಸಿದರು. ಹೆಚ್ಚಾಗಿ ನಮ್ಮ ಜಿಲ್ಲೆಯ ಆದ್ಯ ಸಾಹಿತಿಗಳೇ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೇರ್ಪಡಿಸಿದ್ದು ಈ ಉತ್ಸವದ ಒಂದು ವೈಶಿಷ್ಟ್ಯ. ಎಲ್ಲಾ ವರ್ಗದ ನಾಗರೀಕರೂ ಅಲ್ಲದೆ ಮಠಾಧಿಪತಿಗಳೂ ತಮ್ಮ ಹತ್ಪೂರ್ವಕ ಸಹಕಾರ ನೀಡಿದುದು ಒಂದು ಶುಭ ಚಿಹ್ನೆ. ಅನಿರೀಕ್ಷಿತವಾಗೆಂಬಂತೆ ಮೈಸೂರಕಡೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ ಅವರೂ ಇದರಲ್ಲಿ ಭಾಗವಹಿಸಿದಂತಾದುದು ಹೆಚ್ಚಿನ ಆಕರ್ಷಣೆಯುಂಟಾಯಿತು. ಅಖಿಲ ಕರ್ನಾಟಕ ಖ್ಯಾತಿಯ ನಮ್ಮ ಜಿಲ್ಲೆಯ ಸಾಹಿತ್ಯೋಪಾಸಕರಾದ ಶ್ರೀ ಮಂಜೇಶ್ವರ ಗೋವಿಂದ ಪೈ, ಶ್ರೀ ಮುಳಿಯ ತಿಮ್ಮಪ್ಪಯ್ಯ, ಶ್ರೀ ಎಂ. ವಿ. ಪ್ರಭು, ಮೌಲಾನಾ ಒಡೆಯರ್, ಶ್ರೀ ಸೇಡಿಯಾಪು ಕೃಷ್ಣಭಟ್, ಶ್ರೀ ಸಾಭಾಜಿ ಶ್ರೀನಿವಾಸಾಚಾರ್ಯರೇ ಮೊದಲಾದವರಲ್ಲದೆ, ಉದ್ಯೋಗಿಕ, ಶಿಕ್ಷಣಿಕ, ರಾಜಕೀಯ ಕ್ಷೇತ್ರಗಳಲ್ಲಿ ಪ್ರಸಿದ್ಧರೆನಿಸಿದ ಇತರ ಅನೇಕ ಮಹನೀಯರೂ ತಮ್ಮ ಅಮೂಲ್ಯ ಭಾಷಣಗಳಿಂದ ಸಾಹಿತ್ಯಾಭಿರುಚಿಯ ಸಭಿಕರನ್ನು ತೃಪ್ತಿಗೊಳಿಸಿದರು. ನೀತಿಸಾಹಿತ್ಯದ ಕುರಿತು ಮಠಾಧಿಪತಿಗಳೂ ಬೋಧನೆಯಿತ್ತರು.

ಇಂತಹ ಸಂಘಗಳು ಜಿಲ್ಲೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸ್ಥಾಪಿಸಲ್ಪಟ್ಟಲ್ಲಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯಾಗಿ ಅಖಿಲ ಕರ್ನಾಟಕದಲ್ಲಿ ಅದು ತನ್ನ ಯೋಗ್ಯ ಸ್ಥಾನವನ್ನು ಪಡೆಯದಿರದೆಂಬ ಕಾರ್ಯದರ್ಶಿಗಳ ಬಯಕೆಯು ಯಥಾಯೋಗ್ಯವಾದುದು.

ಮಕ್ಕಳ ಹೊಸ ಆಟಸ್ಥಳ

ಮನೋವೃತ್ತಿಗನುಗುಣವಾಗಿ

ಸಾಮಾನ್ಯವಾಗಿ ಮಕ್ಕಳಿಗೆ ಆಟವಾಡಲು ಸ್ಥಾಪಿಸಲ್ಪಡುವ ಆಟದ ಸ್ಥಳಗಳಲ್ಲಿ ತೂಗುಯ್ಯಾಲೆಗಳೂ, ಬಾರುಗಳೂ, ಮರದ ಕುದುರೆಗಳೂ ಮತ್ತು ಎತ್ತರವಾದ ಜಾರು ಗುಪ್ಪೆಗಳೂ ಇಡಲ್ಪಡುತ್ತದೆ. ಆದರೆ ಇವು ಮಕ್ಕಳ ಮನೋವೃತ್ತಿಗೆ ಅಭಿರುಚಿಸುವಂತಹುಗಳಲ್ಲ. ಕಾರಣ ಮಕ್ಕಳು ಉಯ್ಯಾಲೆಗಳಲ್ಲಿ ತೂಗುವುದಕ್ಕಿಂತ ಮರದ ಗೆಲ್ಲು, ಬೇರುಗಳಿಗೆ ನೇತಾಡುವುದರಲ್ಲಿ ಸಂತೋಷಿಸುತ್ತಾರೆ. ಮರದ ಕುದುರೆಗಳಲ್ಲಿ ಹತ್ತುವುದಕ್ಕಿಂತ ಮುರಿದ ಗೋಡೆಗಳ ಮೇಲೆರಿ ಹಾರುವುದರಲ್ಲಿ ಅವರಿಗೆ ಇಷ್ಟ. ಬಾರುಗಳ ಅಡಿಯಿಂದ ನುಗ್ಗಿ ಹೋಗುವುದಕ್ಕಿಂತ ನೀರು ಕೊಳವೆಗಳಿಂದ ತೂರಿ ಹೋಗುವುದು ಅವರಿಗೆ ತುಂಬಾ ಪ್ರೀತಿ.

ಮಕ್ಕಳ ಈ ಸಹಜ ಮನೋವೃತ್ತಿಗನುಸಾರವಾಗಿ ನ್ಯೂಯಾರ್ಕಿನಲ್ಲಿ ಕೃತಕ ಗೋಡೆಗಳೂ, ನೀರು ಕೊಳವೆಗಳೂ ಇರಿಸಲ್ಪಟ್ಟ ಆಟದ ರಂಗಗಳನ್ನು ಸ್ಥಾಪಿಸಿದ್ದಾರೆ. ಇದಲ್ಲದೆ ಮರದಕಾಂಡಗಳೂ ಗೆಲ್ಲುಗಳೂ ಇಡಲ್ಪಟ್ಟು ಮಕ್ಕಳ ಆಕರ್ಷಣೆಯನ್ನು ಹೆಚ್ಚಿಸಿವೆ. ಮಕ್ಕಳಿಗೆ ಈ ನವೀನ ಕ್ರೀಡಾರಂಗವು ಅತೀ ಹೆಚ್ಚಾದ ತೃಪ್ತಿ ಕೊಟ್ಟಿರುವುದೆಂದೂ ಮತ್ತು ಅವುಗಳ ಮೇಲಿನ ಅಭಿರುಚಿಯು ಎಂದಿಗೂ ಕುಂದುವಂತಹದಲ್ಲವಾಗಿರುವುದರಿಂದ ಅವರ ಚಟುವಟಿಕೆಗಳು ಹೆಚ್ಚಾಗಿ ಅವರಿಗೆ ಒಳ್ಳೇ ಶರೀರ ವ್ಯಾಯಾಮ ಸಿಕ್ಕಿದಂತಾಗಿ ಆರೋಗ್ಯವಂತರಾಗಿರಲು ಸಹಾಯಕವಾಗುತ್ತದೆ ಎಂದೂ ಇದರ ನಿರ್ಮಾಪಕರ ಅಭಿಪ್ರಾಯ.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 325/44.

ಮಾರ್ಶಾಲ ಬುತ್ತೆಲ್ಲಾ — ವಾದಿ

ಎಪ್ರೆಚಿನವಾಸ ಬಾಯಿ ಕೂಡಾ ಪ್ರತಿವಾದಿರು

2ನೇ ಪ್ರೆಡರಿಕ್ಕ ಸಿಲ್ವಾ, 4ನೇ ಲಿದ್ವಿನ ಸಿಲ್ವಾ ಬ್ಯಾ, 5ನೇ ರೊಬರ್ಟ ಸಿಲ್ವಾ } ಸಂತಾನ ಸಲ್ವನ ಮಕ್ಕಳು - ಕುಂದಾಪುರ ತಾಲೂಕು ತ್ರಾಸಿ ಗ್ರಾಮದಲ್ಲಿರುವವರು.

ವಾದಿಯು ಗೇಣಿ ಬಾಕಿ ಬಗ್ಗೆ ಹೂಡಿದ ಮೇಲೆ ಕಾಣಿಸಿದ ದಾವೆಯು ತಾ. 20-10-44ಕ್ಕೆ ತನಿಖೆಗೆ ಇಟ್ಟಿರುತ್ತದೆಂತ ತಾ. 2-4-5ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಸೋಣವಾಗುತ್ತದೆ. ಸದ್ರಿಯವ್ರು ಆ ದಿವಸ ಹಾಜರು ಆಗಲಿಕ್ಕೆ ತಪ್ಪಿದರೆ ಅವರ ಪರೋಕ್ಷದಲ್ಲಿ ಮುಂದಿನ ಕ್ರಮವು ನಡೆದೀತೆಂತ ಸಹಾ ತಿಳಿಯ ಪಡಿಸುತ್ತದೆ.

ಮೊಕ್ಕಾಂ ಕುಂದಾಪುರ ತಾ. 12-10-44.

G. Sanjiva Rao,
Pleader for Plff.

[illegible]

ಫಿಲಿಪಿನೋ ಜನರ ಸ್ವಾತಂತ್ರ್ಯ ಪ್ರೇಮ

ಜಪಾನರು ಫಿಲಿಪ್ಪಾನ್ ದ್ವೀಪದ ರಾಜಧಾನಿ ಹಿಡಿದಾಗ ಪನೇ ದ್ವೀಪದ ಗವರ್ನರರಾಗಿದ್ದ ಟೊಮಸ್ ಕನ್‌ಫೆಸರ್ ಎಂಬವರು ಅವರ ಕೈಸೆರೆ ಸಿಕ್ಕಿದರು. ಜಪಾನಿ ಮಿಲಿಟರಿ ಅಧಿಕಾರಿಗಳು ಟೊಮಸರನ್ನು ತಮ್ಮ ಕಡೆಗೆ ಪರಿವರ್ತಿಸಿಕೊಳ್ಳಲು ತುಂಬಾ ಪ್ರಯತ್ನಿಸಿದರು. ತಮ್ಮ ಕೈಗೊಂಬೆಯಾದರೆ ಮನಿಲ್ಲಾದ ಗವರ್ನರ್ ಪದವಿಯು ಅವರಿಗೆ ಕೊಡುತ್ತೇವೆಂದರು. ಆದರೆ ಗುಲಾಮಗಿರಿಯಲ್ಲಿ ಕೆಲಸಮಾಡುವ ದೇಶಾಭಿಮಾನಿ ಅವರಲ್ಲ. ಅರ್ಥಾನರ್ಥ ಒಪ್ಪಿದಂತೆ ನಟಿಸಿ ಟೊಮಸರು ತಮ್ಮ ಸೆರೆಯಿಂದ ತಪ್ಪಿಸಿಕೊಂಡು ಪನೇ ದ್ವೀಪಕ್ಕೆ ಮರಳಿದರು. ಅಲ್ಲಿ ಈಗ ಅವರು ಜೀವಂತ ಇರುವರೊ ಅಥವಾ ಜಪಾನಿಯರ ಕ್ರೂರತ್ವಕ್ಕೆ ಬಲಿಬಿದ್ದಿರುವರೊ ತಿಳಿದಿಲ್ಲ.

ಜಪಾನರ ಕಡೆಯಿಂದ ದಲಾಲರಂತೆ ಟೊಮಸರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದವರಲ್ಲಿ ಜಪಾನಿಯರ 'ಕೈಗೊಂಬೆ'ಯಾಗಿದ್ದ ಡಾ। ಫರ್ಮಿನ್ ಕಾರಾಮ್ ಎಂಬವರು ಒಬ್ಬರು. ತಪ್ಪಿಸಿಕೊಂಡ ಗವರ್ನರರಿಗೆ ಬರೆದ ಒಂದು ಪತ್ರದಲ್ಲಿ ಅವರು "ಸ್ನೇಹಭಾವದಿಂದ ವರ್ತಿಸಿ ನೀವು ಪನೇ ದ್ವೀಪದ ಶಾಂತಿ, ಸಂಕಷ್ಟ ನಿವಾರಣೋಪಾಯಗಳನ್ನು ಮಾಡಬಹುದಿತ್ತು" ಎಂದು ಬರೆದರು.

ಇದಕ್ಕೆ ಉತ್ತರವಾಗಿ ಟೊಮಸರು ದೀರ್ಘವಾದ ಒಂದು ಮರುಪತ್ರವನ್ನು ಬರೆದರು. ಅದರಲ್ಲಿ ಒಂದು ಕಡೆ ಹೀಗಿದೆ:

"ಫಿಲಿಪ್ಪಾನಿನ ಸಂಕಷ್ಟ ನಿವಾರಿಸುವುದು ನನ್ನಿಂದಾಗಲೀ ಅಲ್ಲಿನ ಜನತೆಯಿಂದಾಗಲೀ ಸಾಧ್ಯವಿಲ್ಲ. ಅಲ್ಲಿನ ಶಾಂತಿ ಅಶಾಂತಿಗಳು ಜಪಾನ್ ಮತ್ತು ಅಮೆರಿಕೆಗಳ ಮೇಲೆಯೇ ಹೊಂದಿಕೊಂಡಿವೆ. ನಮ್ಮ ಮಣ್ಣಿನ ಮೇಲೆ ಈ ಎರಡು ಜನಾಂಗಗಳು ಹೋರಾಡುವ ತನಕ ನಮ್ಮ ಜನರಿಗೆ ಸುಖವಿಲ್ಲ."

ಸ್ವಾತಂತ್ರ್ಯಪ್ರಶ್ನೆಯ ಕುರಿತು ಟೋಮಸರು ಹೀಗೆ ಬರೆದಿರುವರು.—"ಫಿಲಿಪ್ಪಾನ್ ಜಪಾನರ ಅಥವಾ ಅಮೆರಿಕನರ ಆಡಳಿತೆಗೆ ಸೇರಬೇಕೆಂಬುದು ಮಹತ್ವದ ಪ್ರಶ್ನೆಯಲ್ಲ. ಫಿಲಿಪ್ಪಾನ್ ಜನರು ತಮಗೆ ಬೇಕಾದ ಯಾವ ರೀತಿಯ ಸಾಮಾಜಿಕ, ನೈತಿಕ ಮತ್ತು ರಾಜಕೀಯ ಕ್ರಮವನ್ನು ಬಯಸುತ್ತಾರೆಂಬುದು ಮುಖ್ಯವಾದುದು. ಆದರೆ ಇಲ್ಲಿ ಜಪಾನ್ ಅಮೆರಿಕಗಳು ಹೊಡೆದಾಡುವ ತನಕ ಯಾವ ಯೋಜನೆಯೂ ಸಾಧ್ಯವಿಲ್ಲ."

ಮಿತ್ರರ ದೇಶಗಳಲ್ಲಿ ಪುರುಷರು ದಾರಳ ಸಂಖ್ಯೆಯಲ್ಲಿ ಯುದ್ಧರಂಗಕ್ಕೆ ತೆರಳಿರುವುದರಿಂದ, ಅವರ ಸ್ಥಾನವನ್ನು ಹೆಚ್ಚಿನ ಸ್ತ್ರೀಯರು ಹೊಂದಿರುವರು. ಯುದ್ಧ ಕೈಗಾರಿಕೆಗಳಲ್ಲಿ ಸ್ತ್ರೀಯರು ದಾರಳ ಸಂಖ್ಯೆಯಲ್ಲಿ ದುಡಿಯುತ್ತಿರುವರು. ಈ ಚಿತ್ರವು ವಿಮಾನ ಕಾರ್ಖಾನೆಯೊಂದರಲ್ಲಿ ಸ್ತ್ರೀಯರು ದುಡಿಯುತ್ತಿರುವುದನ್ನು ತೋರಿಸುತ್ತದೆ.

'ಕ್ವಿಟ್ ಫಿಲಿಪ್ಪಾನ್'

ಫಿಲಿಪ್ಪಾನಿನ ಸ್ವಾತಂತ್ರ್ಯವೇ ತನ್ನ ಗುರಿ ಎನ್ನುವ ಜಪಾನಿನ ಪ್ರಚಾರಕ್ಕೆ ಟೋಮಸರ ಉತ್ತರ ಇದು— "ನಮ್ಮ ದ್ವೀಪದೇಶಗಳ ಸ್ವಾತಂತ್ರ್ಯದ ಕುರಿತು ಜಪಾನು ಮನಃಪೂರ್ವಕವಾಗಿ ಪ್ರಯತ್ನಿಸುತ್ತಿದೆಯಾದರೆ ಫಿಲಿಪ್ಪಾನ್ ಜನರು ಸರ್ವ ಸ್ವತಂತ್ರರೆಂದೂ, ಅವರು ತಟಸ್ಥ ಧೋರಣೆಯವರೆಂದೂ ಈಗಲೇ ಘೋಷಿಸಲ್ಪಡಲಿ. ಮತ್ತು ತಮ್ಮ ಇಚ್ಛೆಯ ಶುಭ ಸಂಕೇತವಾಗಿ ಜಪಾನು ತನ್ನ ಸೈನ್ಯ ಸರಕಾರವನ್ನು ಕೂಡಲೇ ಹಿಂದಕ್ಕೆ ತೆಗೆದುಕೊಂಡುಹೋಗಲಿ ಮತ್ತು ಇನ್ನು ಮುಂದೆ ದಾಳಿಮಾಡುವುದಿಲ್ಲವಾಗಿ ಭಾಷೆಕೊಡಲಿ."

ಜಪಾನರು ತಮ್ಮ ಈ ಇಚ್ಛೆಯನ್ನು ಅಮೆರಿಕಕ್ಕೆ ತಿಳಿಸಿದರೆ ಅಮೆರಿಕವು ಅವಶ್ಯವಾಗಿ ಒಪ್ಪುವುದೆಂದು ಟೊಮಸರ ಅಭಿಪ್ರಾಯ.

"ರಾಜಕೀಯ ವ್ಯವಹಾರದಲ್ಲಿ ನಮಗೆ ಸಂಪೂರ್ಣ ಸ್ವಾತಂತ್ರ್ಯಬೇಕು. ಜಪಾನರು ಚೀನದಲ್ಲಿ ಸ್ಥಾಪಿಸಿದ ಕೈಗೊಂಬೆ ಸರಕಾರದಂಥ ಸರಕಾರ ನಮಗೆ ಬೇಕಿಲ್ಲ" ಎಂದು ಉತ್ತರವಿತ್ತರು.

ಯುದ್ಧದ ಕುರಿತು ಅವರು—"ಇದು ನಮಗೆ ಒಂದು ವರಪ್ರದಾನ. ಇದರಿಂದ ನಾವು ಅನುಭವಿಸುವ ಸಂಕಷ್ಟಗಳಿಂದಾಗಿ ನಮ್ಮಲ್ಲಿ ಸ್ವತಂತ್ರರಾಗಬೇಕೆಂಬ ಘನ ಉದ್ದೇಶವು ಬಲಗೊಳ್ಳುವಂತಾಗಿದೆ" ಎಂದಿರುವರು. ಟೊಮಸರು ಇನ್ನೊಂದು ಕಡೆಯಲ್ಲಿ ಹೀಗೆಂದಿರುವರು "ನಾವು ಉಜ್ವಲವಾದ ಪ್ರಜಾಪ್ರಭುತ್ವದ ತತ್ವಗಳಿಗೆ ಪಣತೊಟ್ಟವರು. ಸ್ವಾತಂತ್ರ್ಯ ಪ್ರತಿಜ್ಞೆ ತೆಗೆದುಕೊಂಡವರಲ್ಲಿ ನೀವೂ ಒಬ್ಬರಿದ್ದು, ಇಂದು ನಿಮ್ಮ ಮನೋವೃತ್ತಿಯು ಈ ಪವಿತ್ರ ಧ್ಯೇಯಗಳನ್ನು ಮಾರುವಷ್ಟರ ಮಟ್ಟಿಗೆ ಕೀಳಾಗಿರುವುದು ಖೇದದ ವಿಚಾರ ನಮ್ಮ ಸ್ಥಾನಮಾನಗಳನ್ನು ಮಾರಿ, ಇಂದು ನಮ್ಮ ಸಂಕಷ್ಟಗಳಿಗೆ ಹೆದರಿ, ಮುಖಂಡರು ಜಪಾನರಿಗೆ ಕಿರೀಟ ಒಪ್ಪಿಸಿದುದು ಸರ್ವಥಾ ಯೋಗ್ಯವಲ್ಲ." ತಮ್ಮ ಧ್ಯೇಯ ಗುಣಗಳ ಕುರಿತು ಟೋಮಸರು ಹೀಗೆ ಹೇಳುತ್ತಾರೆ—"ಘನವಾದ ತತ್ವಗಳಿಲ್ಲದಿದ್ದರೆ ಯಾವ ಜನಾಂಗವೂ ನಮ್ಮನ್ನು ಗೌರವಿಸದು. ಇಂದು ಜಪಾನರ ಕೈಗೊಂಬೆಗಳಾದ ನಮ್ಮ ಕೆಲ ಮುಖಂಡರು ಪುಷ್ಟವಾದ ಹಣದ ಚೀಲಗಳನ್ನು ಪಡೆಯುತ್ತಿರುವರಾದರೆ ಅದು ಧೀರರಾದ ನಮ್ಮ ಜನತೆಯ ಸಹನಾಶಕ್ತಿಯ ಪರಿಣಾಮವೆನ್ನಬೇಕಲ್ಲದೆ—ಲೋಭಿಗಳೂ, ಶ್ರೀಮಂತರೂ, ಅಧಿಕಾರಾಭಿಲಾಷೆಯುಳ್ಳವರೂ ಆದ ಈ ಕೈಗೊಂಬೆಗಳ ಸ್ವಂತ ವಿವೇಕ ಗುಣಗಳಿಂದಲ್ಲ."

ಶತ್ರುಗಳಿಗೆ ಶರಣಾಗತರಾಗುವುದು ತಮ್ಮ ಜನಾಂಗದ ಘನತೆಗೆ ಕುಂದೆಂದೂ ಧ್ಯೇಯಗಳನ್ನು ಬದಲಾಯಿಸಿ ಸ್ವಂತ ಸ್ವಾರ್ಥ ಸಾಧಿಸಿಕೊಳ್ಳುವುದು ನೀಚ ಮನೋವೃತ್ತಿಯ ಲಕ್ಷಣವೆಂದೂ ತಿಳಿಸಿ ಟೋಮಸರು ಹೀಗೆ ಮುಗಿಸುತ್ತಾರೆ—"ಮಿತ್ರ ಸೇನೆಗಳಿಂದ ಜಪಾನನ್ನು ಸೋಲಿಸಲಾಗುವುದಿಲ್ಲವೆಂದು ನಿಮ್ಮ ನಿರೀಕ್ಷೆ; ಆದರೆ ಜಪಾನುವರ್ತಿಗಳಾದ ನಿಮಗೆ ನಿಜವಾದ ವರ್ತಮಾನ ಹೇಗೆ ಸಿಗಬೇಕು?"

[illegible] ವೈಜ್ಞಾನಿಕ ಶೋಧೆಗಳು

ಕಳೆದ ವರ್ಷ ಅಮೆರಿಕದ ಸಂಯುಕ್ತ ರಾಷ್ಟ್ರದಲ್ಲಿ ಕಂಡುಹಿಡಿಯಲ್ಪಟ್ಟ ವೈಜ್ಞಾನಿಕ ಸಂಶೋಧನೆಗಳಲ್ಲಿ ವಿಶೇಷ ಮಹತ್ವದವುಗಳನ್ನು ಈ ಕೆಳಗೆ ಕೊಡಲಾಗಿದೆ:—

ಇದುವರೆಗೆ ಕಂಡುಹಿಡಿಯಲ್ಪಟ್ಟ ಉಪಕರಣಕ್ಕಿಂತ ಹತ್ತು ಪಾಲು ಹೆಚ್ಚು ಸೂಕ್ಷ್ಮವಾಗಿರುವ ಎಕ್ಸರೆ ಯಂತ್ರ. ಇದರಿಂದ ಶರೀರದೊಳಗಿನ ರೋಗಗ್ರಸ್ತವಾದ ಅವಯವುಗಳ ಮತ್ತು ಎಲುಬುಗಳ ಚಿತ್ರವನ್ನು ಸ್ವಚ್ಛವಾಗಿ ತೆಗೆಯಬಹುದು.

ನಮ್ಮ ದೇಹದೊಳಗೆ ರೋಗಾಣುಗಳನ್ನು ನಾಶಮಾಡುವ ಬಿಯೋಟಿನ್ ಎಂಬ ಗ್ರಂಥಿ ದ್ರಾವಕವಿದೆ. ಅದನ್ನು ರಾಸಾಯನಿಕ ವಿಧಾನದಿಂದ ಕೃತಕವಾಗಿ ತಯಾರಿಸುವ ವಿಧಾನ.

ರೋಗಾಣುಗಳನ್ನು ನಾಶಮಾಡುವ ಪೆನಿಸಿಲಿಯನ್ ಎಂಬ ಶಕ್ತಿವಂತ ದ್ರಾವಕವನ್ನು ಹೆಚ್ಚು ಪ್ರಮಾಣದಲ್ಲಿ ತಯಾರಿಸುವ ವಿಧಾನ.

ವಿದ್ಯುಚ್ಛಕ್ತಿಯಿಂದ ತನ್ನಷ್ಟಕ್ಕೆ ಚಲಿಸುವ ಬೊಂಬ್ ವಿಮಾನಗಳು

ಗಟ್ಟಿ, ಮೆದು ಅಥವಾ ಮರಳು ಪ್ರದೇಶದಲ್ಲಿ ವಿಮಾನಗಳನ್ನು ಇಳಿಸಬಹುದಾದ ಒಂದು ಸಾಧನ.

ಅತೀ ದೂರದ ನಕ್ಷತ್ರಗಳನ್ನು ಸ್ವಚ್ಛವೂ ದೊಡ್ಡದೂ ಆಗಿಕಾಣುವ ೨೬ ಇಂಚು ವ್ಯಾಸದ ಮತ್ತು ೨೬೦ ಪೌಂಡ್ ಭಾರವುಳ್ಳ ಭೂತಕನ್ನಡಿಯ ಶಕ್ತಿಯುಳ್ಳ ಹರಿವಾಣದಾಕೃತಿಯ ಗಾಜಿನ ಉಪಕರಣ.

ಸೂಕ್ಷ್ಮದರ್ಶಕ ಯಂತ್ರದಲ್ಲಿ ನೋಡಲನುಕೂಲವಾಗುವಂತೇ ಇಂಚಿನ ಸಾವಿರದ ಒಂದು ಪಾಲು ತೆಳ್ಳಗಿನ ಚರ್ಮದ ಪರೆಯನ್ನು ತೆಗೆಯುವ ವಿಧಾನ.

ಯಾವಾಗಲೂ ವಿಮಾನಗಳಿಗೇ ನೋಟವಿಟ್ಟುಕೊಂಡೇ ಇರುವ, ತೋಪುಗಳು.

ಸಮುದ್ರ ತಳದಿಂದ ಖನಿಜ ಪದಾರ್ಥಗಳನ್ನು ತೆಗೆಯಲು ಸಾಧ್ಯವಾಗುವಂತೆ ಮಾಡುವ ಯೋಜನೆ.

ರಾಸಾಯನಿಕ ವಸ್ತುಗಳನ್ನು ಮಿಶ್ರಮಾಡಿ ಸಮುದ್ರ ನೀರನ್ನು ಕುಡಿಯಲ್ಲಿಕ್ಕಾಗುವಂತೆ ಮಾಡುವ ವಿಧಾನ.

ಆಹಾರ ಪದಾರ್ಥಗಳು ಬಹುಕಾಲ ಹಾಳಾಗದಂತೆ ಇಡಲ್ಲಿಕ್ಕೆ ಅದರೊಳಗಿನ ನೀರಿನ ಅಂಶವನ್ನು ಕಡಿಮೆಮಾಡಬೇಕು. ಪದಾರ್ಥವು ಹಾಳಾಗದಂತೆಯೂ ಮತ್ತು ಅದರೊಳಗಿನ ನೀರಿನ ಅಂಶವು ಶೇಕಡಾ ೧ ರಷ್ಟು ಮಾತ್ರ ಉಳಿಯುವಂತೆಯೂ ಮಾಡುವ ವಿಧಾನ ಕಂಡುಹಿಡಿಯಲಾಗಿದೆ.

೧೩೦ ವರ್ಷ ಬದುಕಬಹುದು

ಭಾವೀ ಜನಾಂಗದ ಭಾಗ್ಯ

ಅಮೆರಿಕದ ಪ್ರಸಿದ್ಧ ರಾಸಾಯನಿಕ ಔಷಧಿಗಳನ್ನು ತಯಾರಿಸುವ ಸಂಸ್ಥೆಯ ಮುಖ್ಯಸ್ಥರಾದ ಟಿ. ಜ. ಕ್ಲಂಪ್ ಎಂಬವರು ವೈದಕೀಯ ರಾಸಾಯನ ಶಾಸ್ತ್ರವು ಮರಣದ ಕಾರಣಗಳನ್ನು ಪರಿಶೋಧಿಸಿ ಮಾನವನ ಜೀವನವು ಅದಷ್ಟು ಹೆಚ್ಚು ಆಯುಸ್ಸುಳ್ಳದಾಗುವಂತೆ ಮಾಡಲು ಶಕ್ಯವುಳ್ಳದ್ದಿದೆ, ಮತ್ತು ಆ ಸಂಬಂಧ ಶೋಧನೆ ನಡೆಯುತ್ತಿದೆ ಎಂದು ಹೇಳಿರುವರು.

(೬ನೇ ಪುಟದಿಂದ)

ಕೂಡಿಸಲ್ಪಡುವುದು. ಮಲ ಮೂತ್ರಗಳನ್ನು ಶೇಖರಿಸಿರುವ ಹೊಂಡದಲ್ಲಿ ವಾಯು ಸ್ಪರ್ಶವು ಇಲ್ಲದುದರಿಂದ ಮನುಷ್ಯನ ಆರೋಗ್ಯಕ್ಕೆ ಹಾನಿಕರವೆನಿಸುವ ರೋಗಾಣುಗಳು ಅಲ್ಲಿ ಉಂಟಾಗಲಾರವು. ಮಲದ ಮೇಲೆ ಮಣ್ಣನ್ನು ಎರಚುವುದರಿಂದ ಮಲವು ಅದರಿಂದ ಕವಿಯಲ್ಪಟ್ಟು ಆ ಬ್ವಾಲಿಗಳನ್ನು ಎತ್ತುವವರಿಗೆ ಸಹ್ಯವೆನಿಸದು.

ಹೀಗೆ ಆಕಳುಗಳ ಸಗಣಿ ಮೂತ್ರ ಇತ್ಯಾದಿಗಳನ್ನು ಶೇಖರಿಸಿ ಅದರೊಡನೆ ವನಸ್ಪತಿಗಳ ಎಲೆ ಇತ್ಯಾದಿಗಳನ್ನು ಕೊಳೆಯಿಸಿ ಉತ್ತಮ ಗೊಬ್ಬರವನ್ನು ತಯಾರಿಸಬಹುದು. ಮಾತ್ರವಲ್ಲ ಮಲದ ಮೇಲೆ ನೊಣ ಇತ್ಯಾದಿಗಳಿಗೆ ಕೂತುಕೊಳ್ಳಲು ಅವಕಾಶ ದೊರಕದು.

ನಗರಗಳ ಮಲ ಮೂತ್ರ ವಿಸರ್ಜನೆಯಿಂದ [illegible] ಸದುಪಯೋಗವಾಗುವಂತೆ ಅವುಗಳಿಂದ ಗೊಬ್ಬರ ಇತ್ಯಾದಿಗಳನ್ನು ತಯಾರಿಸುವ ತರದ ಯೋಜನೆಯು ಇಂಡಿಯಾ ಸರಕಾರದಿಂದ ಸಿದ್ಧವಾಗಿರುತ್ತದೆ.

ಸಾಗುವಳಿಗೆ ಬೇಕಾದ ಗೊಬ್ಬರದ ಪೂರೈಕೆಯನ್ನು ಸಂಪೂರ್ಣವಾಗಿ ಮಾಡಲು ಸಾಧ್ಯವಿಲ್ಲದುದರಿಂದ ಸಾಗುವಳಿಗೆ ಬೇಕಾದ ಗೊಬ್ಬರವನ್ನು ಕೃತಕ ರೀತಿಯಲ್ಲಿ ತಯಾರಿಸಿ ಒದಗಿಸಬೇಕಾಗುವುದು. ಈ ತರದ ಕೃತಕ ಗೊಬ್ಬರವನ್ನು ತಯಾರಿಸುವ ಕಾರ್ಖಾನೆಗಳು, ಹಿಂದೂ ದೇಶದಲ್ಲಿ ಸ್ಥಾಪನೆಯಾಗುತ್ತಿವೆ.

★★ ಧಾನ್ಯದ ಮಳೆ ★★

ಉದಯ ಪುರದಲ್ಲಿ ವಿಚಿತ್ರ

ಉದಯಪುರವು ರಾಜಪುತಾನದ ಒಂದು ದೇಶಿಯ ರಾಜ್ಯ. ಅಲ್ಲಿ ತಾವು ಕಂಡ ಕೆಲವು ವಿಚಿತ್ರಗಳನ್ನು ಮಾರ್ಟಿನ್ ಹಾಲಿವೆಲ್ ಎಂಬ ಸಂಚಾರಿಗಳು ಈ ರೀತಿ ಬರೆದಿರುವರು.

ಸರೋವರದ ಮಧ್ಯದಲ್ಲಿರುವ 200 ಅಡಿ ಎತ್ತರದ ಅರಮನೆಗಳನ್ನು ನೋಡಲು ಸಾಮಾನ್ಯವಾಗಿ ಪ್ರೇಕ್ಷಕರು ಉದಯ ಪುರಕ್ಕೆ ಹೋಗುತ್ತಾರೆ. ಆದರೆ ಅಲ್ಲಿ ಬೇರೆ ಕೆಲವು ಸ್ವಾರಸ್ಯ ಸಂಗತಿಗಳಿವೆ.

ರೈಲು ಬಂಡಿಯು ರಾಜಧಾನಿಯನ್ನು ಅನೇಕ ಮರದ ಹೆಬ್ಬಾಗಿಲುಗಳನ್ನೂ ಕೋಟೆ ದ್ವಾರಗಳನ್ನೂ ದಾಟಿ ತಲುಪುತ್ತದೆ. ಮುಟ್ಟಿದ ಕೂಡಲೇ ನಾನಾ ಆಕೃತಿಯ ಕೋತಿಗಳು ನಮ್ಮ ಸಾಮಾನಿನ ತಪಶೀಲು ತೆಗೆಯುತ್ತವೊ ಎಂಬಂತೆ ಸುತ್ತುಗಟ್ಟುತ್ತವೆ. ಆದರೆ ರೈಲ್ವೇ ಪೋಲಿಸನ ಬಿಗಿಲು ಕೇಳಿದೊಡನೆ ದೂರ ನಿಲ್ಲಬೇಕೆಂಬ ಬುದ್ಧಿ ಅವಕ್ಕೆ ಇದೆ.

ಉದಯಪುರ ಅರಮನೆಯ ಕಡೆಯಿಂದ ಅಲ್ಲಿ ಸುಮಾರು 300 ಕಾಡು ಹಂದಿಗಳನ್ನು ಸಾಕುತ್ತಾರೆ. ಇವು ದೊಡ್ಡ ಚಿರತೆಗಳನ್ನು ಸೀಳಿಬಿಡುತ್ತವೆ.

ಅಲ್ಲಿ ಒಂದು ದೇವಾಲಯವಿದೆ. ಮೀನಿನಾಕೃತಿಯ ಮೂರ್ತಿಯೊಂದನ್ನು (ಮತ್ಸ್ಯಾವತಾರದ ವಿಷ್ಣು) ಅಲ್ಲಿ ಪೂಜಿಸುತ್ತಾರೆ. ಇದು ಒಂದು ತಗ್ಗಾದ ಕೆರೆಯಲ್ಲಿರಿಸಲ್ಪಟ್ಟಿದೆ. ಅದು ಆಗಿಂದಾಗ್ಗೆ ಕೆರೆಯ ಒಂದು ಮೂಲೆಯಿಂದ ಇನ್ನೊಂದಕ್ಕೆ ಆತಂಕವಿಲ್ಲದೆ ಚಲಿಸುತ್ತದಂತೆ.

ಆ ಕೆರೆಯೂ ವಿಚಿತ್ರವಾದುದು. ಮಳೆಗಾಲದಲ್ಲಿ ಅದರಲ್ಲಿ ಎಷ್ಟೋ ನೀರು ತುಂಬಿದರೂ ಅದರ ಮಟ್ಟವು ಏರುವುದಿಲ್ಲ. ಬೇಸಿಗೆಯಲ್ಲಿ ಎಷ್ಟು ನೀರು ಆರಿದರೂ ಮಟ್ಟವು ಕೆಳಗೆ ಇಳಿಯುವುದಿಲ್ಲ. ಯಾವಾಗಲೂ ಒಂದೇ ಮಟ್ಟದಲ್ಲಿರುತ್ತದೆ. ಇದರಲ್ಲಿ ನಾಲ್ಕು ಸಾರಿ ಸ್ನಾನ ಮಾಡಿದರೆ ಗಂಗೆಯಲ್ಲಿ ಒಂದು ಸಾರಿ ಮಾಡಿದಷ್ಟು ಪುಣ್ಯವಿದೆಯಂತೆ.

ಒಂದು ಸಲ ಆ ಮತ್ಸ್ಯಾವತಾರದ ಮೂರ್ತಿ ಇದ್ದ ಗೋಳಿಮರದ ಕಟ್ಟೆಯ ಮೇಲೆ ಒಂದೇ ಸವನೆ ಧಾನ್ಯದ ಮಳೆ ಬೀಳಹತ್ತಿತು. ಅದು ಯಾರದಾದರೂ ಠಕ್ಕು ವಿದ್ಯೆ ಇರಬಹುದೋ, ಇಲ್ಲವೆ ಮರದ ಗೆಲ್ಲಿನಿಂದ ಬೀಳುವಂತೆ ಮಾಡಿರುತ್ತಾರೋ ಎಂದು ಪರಿಶೋಧಿಸಿದಾಗ ಒಂದೂ ತಿಳಿಯಲಿಲ್ಲ.

ಅಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ಬೆಟ್ಟವಿದೆ. ಅದು ವರ್ಷಕ್ಕೊಂದಾವರ್ತಿ ಒಂದು ಗಂಟೆಯ ತನಕ ಬಂಗಾರದಂತಾಗುತ್ತದೆಂದು ಅಲ್ಲಿಯವರು ಹೇಳುತ್ತಾರೆ.

ಅಲ್ಲಿಯ ಸರದಾರರ ತರುಣ ಹುಡುಗರು ಶಾಲೆಗೆ ಹೋಗುವಾಗಲೂ, ಟೆನ್ನಿಸ್ ಆಟವಾಡಲು ಹೋಗುವಾಗಲೂ ಕೈಯಲ್ಲಿ ಒಂದು ಖಡ್ಗವನ್ನು ಹಿಡಿದೇ ಹೋಗುತ್ತಾರೆ. ಅಲ್ಲಿಯ ರಾಜಕುಮಾರನಿಗೆ ನಿದ್ರೆ ಬರುವಂತೆ ಮಾಡಲು ಕೆಲವು ದಾದಿಯರು ಈಗಲೂ ಜೋಗುಳ ಹಾಡುಗಳನ್ನು ಹಾಡುತ್ತಾರೆ. ರಾತ್ರಿ 10 ಗಂಟೆಗೆ ಈ ದಾದಿಗಳು ಅರಮನೆಯ ಕಡೆಗೆ ಓಡುವುದನ್ನು ಕಾಣಬಹುದು. ಆನೆ ಜಗಳಗಳು ಅಲ್ಲಿ ಈಗಲೂ ಸಾಮಾನ್ಯ ವಿಷಯ. ಅವುಗಳ ಆಹಾರಕ್ಕೆ ಮದವೇರುವ ಔಷಧಿಗಳನ್ನು ಸೇರಿಸುತ್ತಾರಂತೆ. ಇಲ್ಲಿ ಇಪ್ಪತ್ತನೇ ಶತಮಾನದ ಸುಖೋಪಭೋಗಗಳೂ, ಹಳೇಯ ಪದ್ಧತಿ ವಿಶೇಷಗಳೂ ತುಂಬಾ ಇವೆ.

ಬೊಂಬಾಯಿ, ಕಲ್ಕತ್ತಾ ನಗರಗಳಲ್ಲಿಯೂ ಕೊಳಕು ಸ್ಥಳಗಳಿವೆ. ಪಾಶ್ಚಿಮಾತ್ಯ ಶೈಲಿಯನ್ನು ಅನುಸರಿಸಿದ್ದ ಈ ನಗರಗಳಲ್ಲಿ ಇಂದೂ ನುಸಿ ಸೊಳ್ಳೆಗಳ ಕಾಟ ತಪ್ಪಿದಿಲ್ಲ. ಆದರೆ ಉದಯಪುರದ ಬಜಾರುಗಳೂ, ಮಾರ್ಗಗಳೂ ಇವುಗಳಂತಿಲ್ಲ! ಅವು ಶುದ್ಧವಾಗಿಯೂ ಕಲ್ಮಶರಹಿತವಾಗಿಯೂ ಇವೆ.

ಮಿಶನರಿಗಳಿಗೆ ಬುದ್ಧಿ ಮಾತು

ಸ್ವದೇಶ ಭಾಂಧವರ ಉದ್ಧಾರ ಮೊದಲು ಆಗಲಿ

"ದರಿದ್ರಾವಸ್ಥೆಯಲ್ಲಿರುವ ತಮ್ಮ ಸ್ವಂತ ದೇಶದ ಜನರನ್ನು ಉದ್ಧಾರ ಮಾಡಲು ಈ ಬಿಳಿ ಮಿಶನರಿಗಳು ಮೊದಲು ಪ್ರಯತ್ನಮಾಡಲಿ, ಆ ಮೇಲೆ ಇತರ ದೇಶದ ಜನರನ್ನು ಅವರು ಸುಧಾರಣೆ ಮಾಡಬಹುದು" ಹೀಗೆಂದು ಒಬ್ಬ ಅಮೇರಿಕನನು ಲಂಡನಿನ ಡೈಲಿ ಹೆರ್ಆಲ್ಡ್ ಪತ್ರಿಕೆಯಲ್ಲಿ ಅದರಲ್ಲಿ ಇನ್ನೂ ಅವರು ಹೀಗೆ ಬರೆದಿದ್ದಾರೆ:—

"ಯುದ್ಧಕ್ಕಿಂತ ಮುಂಚೆ ಅಮೇರಿಕದ ಪರದೇಶಿ ಮಿಶನರಿ ಸಂಘದವರು ಜಪಾನ್, ಕೊರಿಯಾ ದೇಶಗಳಲ್ಲಿ ಮಿಶನರಿ ಪ್ರಚಾರಕ್ಕಾಗಿ ೪ ಕೋಟಿ ರೂಪಾಯಿ ಖರ್ಚುಮಾಡುತಿದ್ದರು. ಸುಮಾರು ೩೦ ಲಕ್ಷ ಮತಾನುಯಾಯಿಗಳಾದರು! ಇಷ್ಟೊಂದು ಹಣವೆ!

"ಇಷ್ಟು ಹಣವೂ, ಅವರ ಶಕ್ತಿಯೂ ಹೇಗೆ ದುರ್ವ್ಯಯವಾಗುತ್ತದೆಂದು ನಾನು ಹೇಳಬೇಕಾಗಿಲ್ಲ. ಆ ಕಡೆ ಈಗ ಯುದ್ಧ ಮಾಡುತಿದ್ದ ಯಾವನಾದರೊಬ್ಬ ಸೈನಿಕನನ್ನೂ ಕೇಳಿದರೆ ತಿಳಿಯುವುದು. ಬ್ರಿಟಿಷ್ ಮಿಶನರಿಗಳ ವಿಷಯ ನನಗೆ ಗೊತ್ತಿಲ್ಲ. ಆದರೆ ನಮ್ಮವರು ಖರ್ಚು ಮಾಡುತ್ತಿರುವ ಅಂದಾಜಿನ ಮೇಲೆ ಅವರೂ ತುಂಬಾ ಖರ್ಚು ಮಾಡುವರೆಂದು ತಿಳಿಯುತ್ತದೆ.

ಇದರಿಂದ ಏನನ್ನು ಸಾಧಿಸಿದಂತಾಗುವುದು ವರ್ಣ ಜನಾಂಗದ ಕೆಲವು ಜನರು ತಮ್ಮ ದೇಶದ ಸಾದಾ ಬಟ್ಟೆಗಳನ್ನು ತ್ಯಜಿಸಿ ಉದ್ದ ಚಲ್ಲಣಗಳನ್ನು ಉಡುವಂತಾಯಿತು—ಅಷ್ಟೇ.

"ನಿರುದ್ಯೋಗಿಗಳಾಗಿ ಹೊಟ್ಟೆಗಿಲ್ಲದ ತಮ್ಮ ಜನರಿಗೆ ಆಹಾರವನ್ನೊದಗಿಸುವುದಕ್ಕಿಂತ ಈ 'ಉಡುಪು ಬದಲಾವಣೆ' ಪ್ರಚಾರವು ಹೆಚ್ಚಿನದೊ? ವನ್ಯ ಮೃಗಗಳಂತೆ ಕೊಳಕು ಹಟ್ಟಿಗಳಂತಹ ವಸತಿಗಳಲ್ಲಿ ವಾಸಿಸುವ ನಮ್ಮ ದೇಶದ (ಅಮೇರಿಕದ) ಜನರನ್ನು ಉದ್ಧಾರ ಮಾಡುವುದರ ಕಡೆಗೆ ಗಮನ ಕೊಡುವುದು ಉಚಿತವಾಗಿದೆ.

"ಅನಾಗರಿಕರೆಂದು ಕರೆಯಲ್ಪಡುವ ಜನರ ಸುಧಾರಣೆಗೆಂದು ಖರ್ಚುಮಾಡಲ್ಪಡುವ ಅಪಾರ ಹಣದಲ್ಲಿ ಸ್ವಲ್ಪವನಾದರೂ ಈ 'ನಾಗರಿಕ' ಹಿಂದುಳಿದವರನ್ನು ಉದ್ಧರಿಸಲಿಕ್ಕೆ ಖರ್ಚುಮಾಡಬಹುದು.

"ಯುದ್ಧನಂತರವಾದರೂ ಮಿಶನರಿಗಳು ಪರದೇಶಗಳಿಗೆ ಹೋಗಿ ಉದ್ದವಾದ ತಮ್ಮ ತತ್ವಗಳನ್ನೂ ಪ್ರಚಾರಿಸುವ ಬದಲು ತಮ್ಮ ಸ್ವಂತ ದೇಶಗಳ ಜನರ ಕಡೆಗೆ ಲಕ್ಷಕೊಡುವಂತಾಗಲೆಂದು ಬಯಸುತ್ತೇನೆ. ಹೀಗೆ ಮಾಡದಿದ್ದರೆ 'ಮನೆಗೆ ಮಾರಿ ಪರೋಪಕಾರಿ' ಎಂದ ಹಾಗಾಗುತ್ತದೆ."

ಪಾಕಿಸ್ತಾನ್ ಮತ್ತು ಹಿಂದೂಸ್ತಾನ್

ಅಂಕೆ ಸಂಖ್ಯೆಗಳು

ಇಡೀ ಬ್ರಿಟಿಷ್ ಇಂಡಿಯಾದಲ್ಲಿ ಮುಸಲ್ಮಾನರ ಜನಸಂಖ್ಯೆ ಶೇಕಡಾ ೨೭.

ಮುಸಲ್ಮಾನರು ಬಹು ಸಂಖ್ಯಾತರಾಗಿರುವ ಪ್ರಾಂತ್ಯಗಳು ಮೂರು— ಸರಹದ್ದು ಪ್ರಾಂತ್ಯ (ಶೇ. ೯೨); ಸಿಂಧ್ (ಶೇ. ೭೧), ಬಲೂಚಿಸ್ತಾನ್ (ಶೇ. ೮೮). ಈ ಮೂರು ಪಾಕಿಸ್ತಾನ್ ಪ್ರಾಂತ್ಯಗಳು.

ಬಂಗಾಳದಲ್ಲಿ ಮುಸಲ್ಮಾನರು ಶೇ. ೫೫. ಪಂಜಾಬದಲ್ಲಿ ಶೇ. ೫೭. ಈ ಪ್ರಾಂತ್ಯಗಳ ಹೆಚ್ಚು ಜಿಲ್ಲೆಗಳಲ್ಲಿ ಹಿಂದೂಗಳು ಬಹು ಸಂಖ್ಯಾತರಾಗಿರುವರು. ಕೆಲವು ಕಡೆಗಳಲ್ಲಿ ಸಿಕ್‌ರು ಇರುವರು. ಆದುದರಿಂದ ಇವುಗಳನ್ನು ಸಂಪೂರ್ಣ ಪಾಕಿಸ್ತಾನಕ್ಕೆ ಸೇರಿಸಲು ಸಾಧ್ಯವಿಲ್ಲ.

ಅಸ್ಸಾಮಿನಲ್ಲಿ ಮುಸಲ್ಮಾನರು ಶೇ. ೩೪. ದಿಲ್ಲಿ ಪ್ರಾಂತ್ಯದಲ್ಲಿ ಶೇ. ೩೩.

ಮುಸಲ್ಮಾನರು ಅತ್ಯಲ್ಪ ಸಂಖ್ಯೆಯಲ್ಲಿರುವುದು – ಮದ್ರಾಸ್ (ಶೇ. ೮.); ಮಧ್ಯಪ್ರಾಂತ್ಯ (ಶೇ. ೫); ಬೊಂಬಾಯಿ (ಶೇ. ೯.). ಒರಿಸ್ಸಾ (ಶೇ. ೨); ಕೊಡಗು (ಶೇ. ೯); ಸಂಯುಕ್ತ ಪ್ರಾಂತ್ಯ (ಶೇ. ೧೫); ಬಿಹಾರ್ (ಶೇ. ೧೩).

ಪಾಕಿಸ್ತಾನದ ಸಂಪತ್ತು

ಅದು 'ಬಡ' ಪ್ರಾಂತ್ಯವಾಗುವುದು

ಕೊಲಂಬಿಯಾ ವಿಶ್ವವಿದ್ಯಾಲಯದ ಖನಿಜ ಶಾಸ್ತ್ರಜ್ಞರು ಪಾಕಿಸ್ತಾನ್-ಹಿಂದೂಸ್ತಾನ್‌ಗಳಲ್ಲಿ ದೊರೆಯುವ ಖನಿಜ ಸಂಪತ್ತಿನ ಲೆಕ್ಕವನ್ನು ಹೀಗೆ ಕೊಟ್ಟಿರುವರು:—

ಇಂಡಿಯಾದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಕಲ್ಲಿದ್ದಲು ತುಂಬಾ ಸಿಗುತ್ತದೆ.

ಇದರಲ್ಲಿ ಶೇ. ೯೦ರಷ್ಟು ಬಿಹಾರ್ ಒರಿಸ್ಸಾ ಪ್ರಾಂತ್ಯಗಳಲ್ಲಿ ದೊರೆಯುತ್ತವೆ. ಮಾತ್ರವಲ್ಲದೆ ಅಲ್ಲಿನ ಗನಿಗಳು ರೈಲು, ಹಡಗು ಮಾರ್ಗಗಳಿಗೆ ಹತ್ತಿರವಾಗಿವೆ.

ಕಬ್ಬಿಣ:– ಇದೂ ಹೆಚ್ಚಾಗಿ ಬಿಹಾರ್ ಒರಿಸ್ಸಾಗಳಲ್ಲೇ ಸಿಕ್ಕುತ್ತದೆ. ಆದುದರಿಂದ ಕಬ್ಬಿಣ ಕೈಗಾರಿಕೆಯ ಕೇಂದ್ರಗಳೆಲ್ಲ ಹಿಂದೂಸ್ತಾನದಲ್ಲೇ ಇರುತ್ತವೆ. ಪಾಕಿಸ್ತಾನದಲ್ಲಿ ಸ್ವಲ್ಪಮಟ್ಟಿಗೆ ಕಬ್ಬಿಣ ಅದುರು ಸಿಕ್ಕಿದಾದರೂ ದೊಡ್ಡ ಕೈಗಾರಿಕೆಗೆ ಸಾಲದು.

ಪೆಟ್ರೋಲ್:– ಇದು ಹೆಚ್ಚಾಗಿ ಪಾಕಿಸ್ತಾನ್ ಪ್ರಾಂತ್ಯದಲ್ಲಿ (ಪಂಜಾಬ್, ಅಸ್ಸಾಂ) ಯೇ ದೊರೆಯುವುದು.

ಮೆಂಗ್‌ನೀಸ್:– ಗಾಜು ಮುಂತಾದ ಅನೇಕ ಕೈಗಾರಿಕೆಗಳಿಗೆ ಅತ್ಯವಶ್ಯಕವಾದ ಈ ಲೋಹ ಸಿಂಧೂರವು ಮಧ್ಯಪ್ರಾಂತ್ಯದಲ್ಲಿ ದೊರೆಯುತ್ತದೆ.— ಶೇ. ೬೬.

"ಖನಿಜ ವಸ್ತುಗಳ ದೃಷ್ಟಿಯಿಂದ ನೋಡಿದರೆ ಹಿಂದೂಸ್ತಾನವು ಅಪಾರ ಸಂಪತ್ತುಳ್ಳದಾಗುವುದು. ಪಾಕಿಸ್ತಾನವು 'ಬಡ' ಪ್ರಾಂತ್ಯವಾಗಿಯೇ ಉಳಿಯುವುದು.

ಗೋಧಿ ಸಮೃದ್ಧವಾಗಿ ಬೆಳೆಯುವ ಅನೇಕ ಪ್ರದೇಶಗಳು ಪಾಕಿಸ್ತಾನದಿಂದ ಹೊರಗಾಗುತ್ತವೆ. ಬಹು ಸಂಖ್ಯಾತ ಹಿಂದೂಗಳ ಜಿಲ್ಲೆಗಳನ್ನು ವಿಂಗಡಿಸಿದರೆ, ದೊಡ್ಡ ಬಂದರೂ, ಕೈಗಾರಿಕೆಯ ಕೇಂದ್ರವೂ ಆದ ಕಲ್ಕತ್ತವು ಹಿಂದೂಸ್ತಾನಕ್ಕೆ ಸೇರುತ್ತದೆ. ಅಲ್ಲಿ ಹಿಂದುಗಳೇ ಹೆಚ್ಚು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st July, 1944.

LIABILITIES	Rs. As.Ps.	ASSETS	Rs. As.Ps.
1. Paid up Capital	14,14,580- 0- 0	1. Office Bulgings, safes, furniture, books, etc.	91,792- 3- 6
2. Reserves	4,12,548- 3- 1	2. Advances	53,58,139- 7- 0
3. Due to Bankers	40,499- 5- 8	3. Investments on Govt. Securities etc.	23,94,472-13-10
4. Deposits	78,79,479- 2- 1	4. Bills for collection	4,55,475- 2- 5
5. Bills for collection	4,55,475- 2- 5	5. Other Assets	91,527- 3- 4
6. Branch Adjustments	1,99,631- 8-10	6. Cash on hand and with Bankers in Current A/cs	23,75,816-10-10
7. Other liabilities and undisbursed profits	3,65,010- 2-10		
Total	1,07,67,223-8-11	Total	1,07,67,223- 8-11

[illegible] ಬೆಳಗಾಂವಿಲ್ಲ

ಕೃಷಿಯೋತ್ಪನ್ನ ದುರ್ಭಿಕ್ಷ್ಯ

ಕೃಷಿ ಉತ್ಪತ್ತಿಯನ್ನು ಹೆಚ್ಚಿಸಲು ಅನುಕೂಲವಾದ ಎಲ್ಲಾ ಮುಖ್ಯ ವಿಷಯಗಳ—ಉತ್ತಮ ಸಾಗುವಳಿ, ಬೀಜ, ನೀರಾವರಿ ಸೌಕರ್ಯ, ಗೊಬ್ಬರ, ಕಾಲುವೆಗಳು, ನೀರು ಶೇಖರಿಸುವಿಕೆ, ಮತ್ತು ಪೈರಿನ ಜಾಗರೂಕತೆ.

ಉತ್ತಮ ಸಾಗುವಳಿ

ಈ ಸಂಬಂಧ ನಿರ್ಧಿಷ್ಟ ಒಂದು ಯೋಜನೆಯನ್ನು ಕೈಕೊಳ್ಳುವ ಮೊದಲು ಎಲ್ಲಾ ತರದ ಕೃಷಿ ಪ್ರದೇಶಗಳ ಲೆಕ್ಕ ಮಾಡಬೇಕು. ಕೃಷಿ ಅಸಾಧ್ಯವೆಂದೇ ಕಂಡುಬಂದ ಸ್ಥಳಗಳಲ್ಲಿ ಮರಗಳನ್ನಾಗಲೀ ಹುಲ್ಲುಗಳನ್ನಾಗಲೀ ಬೆಳೆಸಬೇಕು. ಮಳೆ, ನದಿಗಳ ನೀರಿನಿಂದ ಕೊರೆದು ಹಾಳುಮಾಡಲ್ಪಡುವ ಸ್ಥಳಗಳನ್ನು ಯೋಗ್ಯ ಚರಂಡಿಗಳನ್ನು ಅಗೆಯುವುದರ ಮೂಲಕ (ನೀರು ಇವುಗಳಲ್ಲಿಯೇ ಹರಿಯುವಂತಾಗಿ ನೆಲ ಕೊರೆಯುವಿಕೆ ತಡೆದಂತಾಗುವುದು) ರಕ್ಷಿಸಿಕೊಳ್ಳಬೇಕು. ನೀರಾವರಿ ಕಾಲುವೆಗಳನ್ನು ವಿಸ್ತರಿಸಬೇಕು. ಪಟ್ಟಣಗಳೊಳಗಿನ ಮಲ ಕಲ್ಮಶಗಳನ್ನೂ, ಗದ್ದೆ ಹೊಲಗಳಲ್ಲಿನ ಎಲೆ ಹುಲ್ಲು ಮುಂತಾದ ಕೊಳೆತ ವನಸ್ಪತಿಗಳನ್ನೂ ಎಲುಬು ಚೂರುಗಳನ್ನೂ ಉತ್ತಮ ಗೊಬ್ಬರವಾಗಿ ಉಪಯೋಗಿಸುವರೆ ಏರ್ಪಾಡುಗಳನ್ನು ಮಾಡಬೇಕು.

ಉತ್ತಮ ಬೀಜ

ಪ್ರತ್ಯೇಕ ಗದ್ದೆಗಳಲ್ಲಿ ಶ್ರೇಷ್ಠ ತರಗತಿಯ ಬೀಜಗಳನ್ನು ತಯಾರಿಸಿ ಉತ್ತಮವಾದ ಫಲವನ್ನು ಪಡೆಯಬಹುದಾಗಿದೆ. ಪಂಜಾಬಿನಲ್ಲಿ ಕೆಲ ಜಮೀನ್ದಾರರು ತಮ್ಮ ಸ್ವಂತ ಗದ್ದೆಗಳಲ್ಲಿ ಉತ್ತಮ ಬೀಜಗಳನ್ನು ತಯಾರಿಸಿ ಅತ್ಯುತ್ತಮ ಫಲವನ್ನು ಪಡೆದಿರುವರು.

ನೀರಾವರಿ ಸೌಕರ್ಯ

ಕೃಷಿ ಉತ್ಪತ್ತಿಯನ್ನು ಹೆಚ್ಚಿಸಲು ನೀರಾವರಿ ಸೌಕರ್ಯಗಳನ್ನು ವಿಸ್ತರಿಸುವುದು ಅತ್ಯಾವಶ್ಯಕ. ಮಳೆ ನೀರಿನ ಮೇಲೇ ಹೊಂದಿಕೊಂಡಿರುವ ಅರ್ಧ ಮರ್ಧ ಸಾಗುವಳಿಯ ಪ್ರದೇಶಗಳಿಗೆ ಎಲ್ಲಾ ತರದ ನೀರು ಒದಗಿಸುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ ತಕ್ಕ ಏರ್ಪಾಡು ಮಾಡಬೇಕಾಗಿದೆ. ಸರಕಾರದವರು ಈ ವ್ಯವಸ್ಥೆಗಾಗಿ ಸರಿಯಾದ ಬಂಡವಾಳವನ್ನು ಹಾಕಿ ಕೆಲವು ಸಮಯದ ತನಕ ತೆರಿಗೆಯ ಲಾಭದ ಕಡೆಗೆ ಹೆಚ್ಚು ಆಸಕ್ತಿ ತೋರಿಸದಿರಬೇಕು.

ಗೊಬ್ಬರ

ನಮ್ಮ ದೇಶದ ಗದ್ದೆ ಹೊಲಗಳಿಗೆ ಸಾರವತ್ತಾದ ಗೊಬ್ಬರದ ಕೊರತೆ ತುಂಬಾ ಇದೆ. ಉತ್ತಮ ಗೊಬ್ಬರದಿಂದ ಫಲದ ಪರಿಮಾಣವು ಹೆಚ್ಚುವುದು ಖಂಡಿತ. ಈಗ ನಿಷ್ಪ್ರಯೋಜಕವಾಗಿ ಹೋಗುತ್ತಿರುವ ಗೊಬ್ಬರ ತಯಾರಿಕೆಯ ಮೂಲ ವಸ್ತುಗಳನ್ನು ಶೇಕರಿಸಿದರೆ ೧ ಕೋಟಿ ಟನ್ ರಾಸಾಯನಿಕ ಗೊಬ್ಬರವನ್ನು ಪ್ರತಿ ವರ್ಷ ತಯಾರಿಸಬಹುದೆಂದು ತಜ್ಞರು ಲೆಕ್ಕಹಾಕಿರುವರು. ವನಸ್ಪತಿ ಮತ್ತು ಪ್ರಾಣಿ ಅವಶೇಷಗಳನ್ನು ಕೊಳೆಯಿಸಿ ಈ ತರದ ಗೊಬ್ಬರವನ್ನು ಸುಲಭವಾಗಿ ತಯಾರಿಸಬಹುದು. ಮುಂದೆ ವೈಜ್ಞಾನಿಕ ಶಾಸ್ತ್ರರೀತಿಯಲ್ಲಿ ಗೊಬ್ಬರವನ್ನು ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಲು [illegible] ರಿಂದ ಸತ್ವಯುಕ್ತ ನೀರು ಗೊಬ್ಬರಗಳನ್ನು [illegible] ಉತ್ಪತ್ತಿಯು [illegible] ಹೆಚ್ಚಿಸಬಹುದು.

ಕಾಲುವೆಗಳು; ಚರಂಡಿಗಳು

ಮಳೆ ಮತ್ತು ಉಕ್ಕಿ ಹರಿಯುವ ನದಿಗಳ ನೀರಿನ ಕೊರೆಯುವಿಕೆ ಬಹಳ ಕಡೆಗಳಲ್ಲಿನ ಕೃಷಿ ಪ್ರದೇಶಗಳು ಹಾನಿಹೊಂದುತ್ತವೆ. ಇಂತಹ ನೀರು ಹಾನಿ ಇಲ್ಲದೆ ಹರಿಯುವಂತಾಗಲು ಚರಂಡಿಗಳನ್ನು ತೋಡಬೇಕು. ಬೆಟ್ಟದ ಬದಿಗಳಲ್ಲಿ ಅಗಲ ಕಿರಿದಾದ ನೀರು ಹರಿವ ತೋಡುಗಳನ್ನು ಕತ್ತರಿಸುವುದರಿಂದ ಅಲ್ಲಿಂದ ಹರಿದು ಬರುವ ನೀರು ಕ್ರಮವಾಗಿ ಬಯಲು ಪ್ರದೇಶಕ್ಕೆ ಹರಿಯುವಂತಾಗುವುದು.

ನೀರು ಶೇಖರಿಸುವಿಕೆ

ಕೆಲವು ಕಡೆಗಳಲ್ಲಿ ನದಿಗಳು ಕೃಷಿ ಪ್ರದೇಶಗಳಿಂದ ಕೆಳಗಿನ ಮಟ್ಟದಲ್ಲಿ ಹರಿಯುವುದರಿಂದ ಅವುಗಳ ನೀರು ಸಾಗುವಳಿಗೆ ಉಪಯುಕ್ತವಾಗುವುದಿಲ್ಲ. ಇಂತಹ ಕಡೆಗಳಲ್ಲಿ ಅಣೆ ಕಟ್ಟುಗಳನ್ನು ಕಟ್ಟಿ ನೀರಿನ ಮಟ್ಟವನ್ನು ಎತ್ತರಿಸಿ. ಕಾಲುವೆಗಳ ಮೂಲಕ ನೀರು ಗದ್ದೆ ಹೊಲಗಳಿಗೆ ಮುಟ್ಟುವಂತೇ ಏರ್ಪಡಿಸಬಹುದು. ಮಳೆ ಇಲ್ಲದ ಕಾಲದಲ್ಲಿಯೂ ಈ ನೀರು ಅತ್ಯುಪಯುಕ್ತವಾಗುತ್ತದೆ.

ತಗ್ಗಾದ ಕಣಿವೆ ಪ್ರದೇಶಗಳಲ್ಲಿ ಮಳೆ ನೀರಿನ ಸರೋವರಗಳನ್ನು ನಿರ್ಮಿಸಿಕೊಳ್ಳಬೇಕು. ಈ ನೀರನ್ನು ಕೊಳವೆಗಳ ಮೂಲಕ ಸಾಗುವಳಿ ಪ್ರದೇಶಕ್ಕೆ ತಲ್ಪಿಸಲು ಸಾಧ್ಯವಿದೆ. ಈ ಏರ್ಪಾಡನ್ನು ಹತ್ತಿರದ ಇತರ ನದಿ ಸರೋವರಗಳಿಗೂ ಜೋಡಿಸಿಕೊಳ್ಳಬಹುದು.

ಪೈರು ಜಾಗ್ರತೆ

ಮೃಗ ಪಕ್ಷಿ ಕ್ರಿಮಿಕೀಟಗಳಿಂದ ಪೈರುಗಳಿಗೆ ಅಪಾರ ನಷ್ಟ ಸಂಭವಿಸುತ್ತದೆ. ಇದನ್ನು ತಪ್ಪಿಸಿ ಉತ್ಪತ್ತಿಯನ್ನು ಬಹಳ ಮಟ್ಟಿಗೆ ಹೆಚ್ಚಿಸಬಹುದು. ಮಲೆ ನಾಡುಗಳಲ್ಲಿ ಕಾಡಾನೆ ಮುಂತಾದ ವನ್ಯ ಪ್ರಾಣಿಗಳನ್ನು ತಡೆಗಟ್ಟಲು ಭದ್ರವಾದ ಆವರಣಗಳನ್ನು ಹಾಕಿಕೊಳ್ಳಬೇಕು. ಪಕ್ಷಿಗಳನ್ನು ಓಡಿಸುವ ಕಾವಲುಗಾರರನ್ನು ಇಡಬೇಕು. ಆಸುಪಾಸಿನ ಜಾಗ ಸ್ಥಳಗಳನ್ನು ಕ್ರಿಮಿನಾಶಕ ಔಷಧಿಗಳಿಂದ ಶುದ್ಧಗೊಳಿಸಿದರೆ ಕ್ರಿಮಿಕೀಟಗಳ ಬಾಧೆಯು ತಪ್ಪುವುದು. ತಮ್ಮ ಜಮೀನುಗಳನ್ನು ಮುತವರ್ಜಿಯಿಂದ ಪಾಲನೆಮಾಡಿಕೊಂಡು ಬರುವ ಹುಮ್ಮಸ್ಸು ಸಾಗುವಳಿದಾರರಲ್ಲಿರಬೇಕಾದುದು ಅತ್ಯಾವಶ್ಯಕ.

ದೇಶದ ಅಪಾರವಾದ ಕೃಷಿ ಸಂಪತ್ತನ್ನು ವಿಸ್ತಾರಗೊಳಿಸಿ ಕೃಷಿ ಮಜೂರರ ಸಂಪಾದನೆಯನ್ನು ಹೆಚ್ಚಿಸಿ, ನಿರುದ್ಯೋಗವನ್ನು ಕಡಿಮೆಮಾಡುವಂತಹ ಮಹತ್ತರವಾದ ಕಾರ್ಯ ಸಾಧನೆಯನ್ನು ಮಾಡಿ ದೇಶದ ಉದ್ಧಾರವನ್ನು ಶೀಘ್ರಗೊಳಿಸಲು ಪ್ರಯತ್ನಗಳಾಗ ಬೇಕಾದುದು ಅತ್ಯಾವಶ್ಯಕ.

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು.

(1) ನಿಮ್ಮ ಕೂಡೆ ಮಾಲುಗಳ ಅತ್ಯಧಿಕ ಸಂಚಯವಿದ್ದಲ್ಲಿ ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ. ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ.

(2) ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ. ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು.

(3) ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಪರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು.

(4) ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವಿಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ. ಇಲ್ಲವಾದರೆ ಪ್ರೇರಣೆಗಳಿಗೆ ಅಥವಾ ಸಮಾಜದ ಒತ್ತರಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್,

Canara Bank Ltd.

ಜಾಗತಿಕ ಶಾಂತಿಗಾಗಿ ವ್ಯವಸ್ಥೆ

ಕಳೆದ ಯುದ್ಧದನಂತರ ಜಾಗತಿಕ ಶಾಂತಿಯ ರಕ್ಷಣೆಯ ಉದ್ದೇಶದಿಂದ 'ಲೀಗ್ ಆಫ್ ನೇಶನ್ಸ್' ಅಂದರೆ 'ವಿವಿಧ ಜನಾಂಗಗಳ ಕೂಟ' ಎಂಬದೊಂದು ಸಂಸ್ಥೆಯು ಸ್ಥಾಪನೆಯಾಗಿ, ಅದರ ಇರುವಿಕೆಯಿಂದ ಯಾವತ್ತೂ ಸಾರ್ಥಕ ಉಂಟಾಗದೆ ಇಂದಿನ ಮಹಾಯುದ್ಧವು ಬಂದಬಿಟ್ಟಿತು.

ಈಗಿನ ಮಹಾ ಯುದ್ಧ ಬೇಗನೆ ಕೊನೆಗೊಳ್ಳಬಹುದಾದ ಸ್ಥಿತಿಯು ಉಂಟಾದುದರಿಂದ ಜಾಗತಿಕ ಶಾಂತಿಯ ಕುರಿತು ವ್ಯವಸ್ಥೆಗಳ ಕುರಿತು ಪರ್ಯಾಲೋಚಿಸಲು ಅಮೆರಿಕದ ಡಂಬಾರ್ಟನ್ ಓಕ್ ಎಂಬಲ್ಲಿ ವಿವಿಧ ಜನಾಂಗಗಳ ಪರಿಷತ್ತೊಂದು ಜರಗಿ ದೊಡ್ಡದೊಂದು ವರದಿಯು ಸದ್ಯದಲ್ಲಿ ಪ್ರಕಟವಾಗಲಿದೆ.

ಜಾಗತಿಕ ಶಾಂತಿ ರಕ್ಷಣೆಯ ಕುರಿತು ಈ ಪರಿಷತ್ತಿನಲ್ಲಿ ಅನೇಕ ಸೂಚನೆಗಳೇ ಮುಂದೆ ಬಂದಿವೆ. ಹಿಂದೆ ಲೀಗ್ ಆಫ್ ನೇಶನ್ಸ್ ಇದೇ ತರದ ಸೂಚನೆಗಳನ್ನು ಜಗತ್ತಿನ ಮುಂದೆ ಹಾಕಿತ್ತು.

ಜಗತ್ತಿನ ಶಾಂತಿಭಂಗವಾಗದ ಹಾಗೆ ಕೇಂದ್ರ ಮಿಲಿಟರಿ ವ್ಯವಸ್ಥೆಯೊಂದು ಇರಬೇಕೆಂದು ಈ ಪರಿಷತ್ತಿನ ಅಭಿಪ್ರಾಯವಂತೆ. ಈ ಮಿಲಿಟರಿ ವ್ಯವಸ್ಥೆಯಲ್ಲಿ ಸಂಬಂದಪಟ್ಟ ಎಲ್ಲಾ ರಾಷ್ಟ್ರಗಳ ಪ್ರಾತಿನಿಧ್ಯವಿರಬೇಕೆಂದು ಕಲ್ಪಿಸಲಾಗಿದೆ.

ಜಗತ್ತಿನ ರಾಷ್ಟ್ರಗಳೊಳಗೆ ಇರುವ ವ್ಯಾಜ್ಯಗಳನ್ನು ತೀರ್ಮಾನಿಸುವ ಕುರಿತು ಯೋಗ್ಯ ತರದ ಏರ್ಪಾಡುಗಳಾಗಬೇಕಾಗಿ ಸೂಚನೆಗಳಾಗಿವೆ.

ಜಾಗತಿಕ ಶಾಂತಿಯನ್ನು ಕೆಡಿಸುವ ರಾಷ್ಟ್ರಗಳಿಗೆ ಬುದ್ಧಿ ನೆಟ್ಟಗೆ ಮಾಡಲು, ಮೇಲಿನ ಮಿಲಿಟರಿ ವ್ಯವಸ್ಥೆಯು ಉಪಯೋಗಿಸಲಾಗಬೇಕಂತೆ.

ಚರ್ಚಿಲ್-ಸ್ಟಾಲಿನ್ ಭೇಟಿ

ಮೊನ್ನೆ ಕ್ವಿಬೆಕ್ಕಿನಲ್ಲಿ ಜರಗಿದ ಮಿತ್ರ ರಾಷ್ಟ್ರಗಳ ನಾಯಕ ಪರಿಷತ್ತಿಗೆ ರಷ್ಯಾ ದೇಶದ ನಾಯಕರಾದ, ಸ್ಟಾಲಿನರಿಗೆ ಬರಲು ಅನಾನುಕೂಲವಾದುದರಿಂದ, ಬ್ರಿಟಿಷ್ ಪ್ರಧಾನ ಚರ್ಚಿಲ್ಲರು ಬಹಿರ್ ವ್ಯವಹಾರ ಶಾಖೆಯ ಕಾರ್ಯದರ್ಶಿಗಳಾದ ಎಡನ್ನರೊಡನೆ, ಮೊಸ್ಕೊ ನಗರಕ್ಕೆ ತೆರಳಿರುವರಾಗಿ ತಿಳಿದುಬಂದಿದೆ.

ಕ್ವಿಬೆಕ್‌ನಲ್ಲಿ ಜರಗಿದ ಹಾಗೆ ಇಲ್ಲೂ ಒಂದು ಪರಿಷತ್ತು ನೆಡೆಯುವುದೆಂದೂ, ಇದರಲ್ಲಿ ಬ್ರಿಟನ್, ಅಮೇರಿಕಾ, ರಷ್ಯ ದೇಶದ ಪ್ರಾಮುಖ್ಯ ಮಿಲಿಟರಿ ಅಧಿಕಾರಿಗಳು ಭಾಗವಹಿಸಲಿರುವರೆಂದೂ, ಇರೊಪದ ಯುದ್ಧದ ಕುರಿತು ಇಲ್ಲಿ ಪರ್ಯಾಲೋಚಿಸಲಾಗುವುದೆಂದು ತಿಳಿದುಬಂದಿದೆ.

ಮೊಸ್ಕೊ ನಗರ ವಿಮಾನ ಠಾಣ್ಯದಲ್ಲಿ ಇಳಿದೊಡನೆ ಕೆಂಪು ಸೇನೆಯ ಸಾಹಸವನ್ನು ಶ್ಲಾಘಿಸಿ, ಚರ್ಚಿಲರು ಚಿಕ್ಕದೊಂದು ಭಾಷಣಮಾಡಿದರು.

ಈ ಪರಿಷತ್ತಿನಲ್ಲಿ ಅಮೇರಿಕವು ಭಾಗವಹಿಸುವುದಿಲ್ಲವೆಂದೂ, ಅವಶ್ಯಬಿದ್ದರೆ ಮಾತ್ರ ರಷ್ಯದಲ್ಲಿರುವ ಅಮೇರಿಕನ್ ರಾಯಭಾರಿಗಳು, ಈ ಮಾತುಕತೆಗಳಲ್ಲಿ ಭಾಗವಹಿಸುವರೆಂದೂ ಒಂದು ವಾರ್ತೆಯಿದೆ.

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.

ದೊರಕುವ ಸ್ಥಳ:- ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

ಪ್ರಚಲಿತ ಸಮಾಚಾರಗಳು

(ಒಳ ಪುಟದಿಂದ)

ಯುದ್ಧಾನಂತರ ... ಪಾಚಕದಲ್ಲಿ ... ಸುತ್ತುವರಿದಿದ್ದು,—ಎಂಬುದಾಗಿ ಅಭಿಪ್ರಾಯ ... ಪ್ರತ್ಯೇಕತೆಯನ್ನು ಅವರು ತಮ್ಮನ್ನು ... ಬಂದ ಪತ್ರಿಕಾಪ್ರತಿನಿಧಿಗಳಿಗೆ ಕೊಟ್ಟಿರುವರು. ಹಿಂದೂದೇಶದ ರಾಜಕೀಯ ಕುರಿತು ಮಾತನ್ನೆತ್ತಲು ಅವರು ನಿರಾಕರಿಸಿದರು.

ಕಸ್ತೂರಬಾ ಸ್ಮಾರಕ ನಿಧಿಯು 115 ಲಕ್ಷಕ್ಕೆ ಮುಟ್ಟಿರುತ್ತದೆ.

ಆಫ್ರಿಕಾದ ಟ್ರಾನ್ಸವಾಲದಲ್ಲಿ ಹಿಂದೀಯರ ಮೇಲೆ ಬಹಿಷ್ಕಾರತರದ ಧೋರಣವು ಕೈಕೊಳ್ಳಲಾಗಿದೆ ಹಿಂದೀಯರನ್ನು ಯುರೋಪಿಯನ್ ಪ್ರದೇಶಗಳಿಂದ ಹೊರದೂಡುವ ಯತ್ನಗಳು ಅಲ್ಲಿ ನಡೆಯುತ್ತಿವೆ. ದಕ್ಷಿಣ ಆಫ್ರಿಕಾದಲ್ಲಿ ಹಿಂದೀಯರಿಗೆ ಆಸ್ಪದ ದೊರಕಬಾರದೆಂದು ಯೂನಿಯನ್ ಸರಕಾರದ ಧೋರಣವಾಗಿರುತ್ತದೆ.

ಈ ಸಮಸ್ಯೆಯು ಕುರಿತು ಗಾಂಧೀಜಿಯವರು ಹಿಂದೆ ಬಹಳ ದುಡಿದಿದ್ದು, ಸತ್ಯಾಗ್ರಹೋಪಾಯದಿಂದ ಹಿಂದೀಯರಿಗೆ ಆಗ ಒದಗಿದ ಅನೇಕ ಅನ್ಯಾಯಗಳನ್ನು ನಿವಾರಿಸಿದ್ದರು

ಇಂಡಿಯಾ ಸರಕಾರವು ಇತ್ತ ಕಡೆಗೆ ಗಮನ ಕೊಡಬೇಕಾಗಿಯೂ, ಹಿಂದೂದೇಶದಲ್ಲಿ ಆಫ್ರಿಕದ ಭಾರತೀಯರ ಸಂಕಷ್ಟ ನಿವಾರಣೆಗಾಗಿ ಚಳವಳಿಯು ನಡೆಯಬೇಕಾಗಿಯೂ, ಅಲ್ಲಿಂದ ಇಲ್ಲಿಗೆ ಬಂದ ಓರ್ವ ಆಢ್ಯ ಗೃಹಸ್ಥರು ವಿನಂತಿಸಿಕೊಂಡಿರುವರು

ಪರ್ಶಿಯಾ ದೇಶದ ಎಣ್ಣೆ ಖನಿಜ ಪ್ರದೇಶಗಳನ್ನು ಪಡಕೊಳ್ಳುವ ದೃಷ್ಟಿಯಿಂದ ಅನೇಕ ಪ್ರಭುತ್ವ ರಾಷ್ಟ್ರಗಳ ಪ್ರತಿನಿಧಿಗಳು ತೆಹರಾನಿನಲ್ಲಿರುವರು ಆ ಪ್ರಸಂಗದಲ್ಲಿ ಅಮೇರಿಕಾ ಮಾತ್ರವಲ್ಲ ರಷ್ಯವು ಇರುವುದಾಗಿ ತಿಳಿದುಬರುತ್ತದೆ.

ಹಾಲೆಂಡಿನಲ್ಲಿ ಭೀಕರ ಕ್ಷಾಮ ಪರಿಸ್ಥಿತಿಯು ಉಂಟಾಗುವ ಸಂಭವಗಳಿವೆಯಾಗಿ ವಾರ್ತೆಯಿದೆ

ಹಿಂದೂದೇಶದ ರಾಜಕೀಯದ ಸಮಸ್ಯೆಯ ಸುಧಾರಣೆ ಕುರಿತು ಪಾರ್ಲಿಮೆಂಟಿನ ಸದಸ್ಯರಿರುವ ಇನ್ನೊಂದು ಕ್ರಿಪ್ಸ್ ಮಂಡಳಿಯು ಇತ್ತ ಕಡೆಗೆ ಬರಬಹುದಾಗಿ ಊಹೆಗಳಿವೆ

ಮಿತ್ರ ರಾಷ್ಟ್ರಗಳ ನಾಯಕರು, ಸದ್ಯದಲ್ಲಿ ... ಕೂಡುವವರಿದ್ದಾರೆಂದು ವಾರ್ತೆಯಿದೆ ಈ ಬಾರಿಯು ಚರ್ಚಿಲ್, ರೂಸ್‌ವೆಲ್ಟ್, ಸ್ಟಾಲಿನರು ಕೂಡಿ ಬರುವ ರಂತೆ

"ಸದ್ಯ ಸೆರೆಯಲ್ಲಿರುವ ಭಾರತೀಯ ನಾಯಕರ ಬಿಡುಗಡೆಯಾಗಬೇಕು. ಈ ಕುರಿತು ಇಂಡಿಯಾ ಸೆಕ್ರೆಟರಿಯವರು ವ್ಯಕ್ತಪಡಿಸಿದ ನಕಾರ ಧೋರಣವು ಸರಿಯಾದುದಲ್ಲ. ಬಿಹಾರಿನ ಡಾ| ಮಹಮ್ಮದರ ಬಿಡುಗಡೆಯಾದ ಹಾಗೆ, ಪಂಡಿತ ನೆಹರು, ಮೌಲಾನಾ ಅಜಾದ ಮೊದಲಾದವರ ಬಿಡುಗಡೆ ಯಾಕೆ ಆಗಬಾರದು" ಎಂದು ಅಮೇರಿಕದ ಇಂಡಿಯಾ ಲೀಗಿನವರು ಒಂದು ಪ್ರಕಟಣೆಯನ್ನು ಹೊರಡಿಸಿರುವರು.

ಜರ್ಮನಿಯ ಮೇಲೆ ಮೊನ್ನೆ ದಿನ ಅತಿ ಪ್ರಚಂಡವೆನಿಸುವ ದಾಳಿಯು ನಡೆಯಿತು. ಈ ದಾಳಿಗಾಗಿ ಮಿತ್ರರು 5000 ವಿಮಾನಗಳನ್ನು ಉಪಯೋಗಿಸಿದರು

ಬರ್ಮಾದಲ್ಲಿನ ಅರಾಕಾನ್ ರಂಗದಲ್ಲಿ ಜಪಾನಿಯರು ಮುಂದೆ ನುಗ್ಗಿರುವರಾಗಿ ವಾರ್ತೆಯಿದೆ

ಬಿಕಾನೀರಿನ ಪ್ರಸಿದ್ಧ ಆಯುರ್ವೇದ ಪಂಡಿತರು ಒಟ್ಟುಕೂಡಿ ಮಲೇರಿಯಾ ಜ್ವರವನ್ನು ಸಂಪೂರ್ಣವಾಗಿ ನಿವಾರಿಸುವ ಒಂದು ಮಿಶ್ರಣವನ್ನು ಸಿದ್ಧಪಡಿಸಿರುವರು ಬಿಕಾನೀರಿನ ಮಲೇರಿಯಾ ಪೀಡಿತವಾದ ಅನೇಕ ಪ್ರದೇಶಗಳಲ್ಲಿ ಈ ಮಿಶ್ರಣದ ಪ್ರಯೋಗವಾಗಿ ಅದು ಖಂಡಿತ ಗುಣಕಾರಿ ಎಂದು ಕಂಡುಹಿಡಿಯಲಾಗಿದೆ

ಮಳೆ ಮತ್ತು ಹವೆಯ ಕಾರಣದಿಂದಾಗಿ ಪಸಲು ಸರಿಯಾಗಿ ಬೆಳೆಯದೆ ಆಹಾರ ಧಾನ್ಯಗಳು ಉತ್ಪತ್ತಿಯು ಕಡಿಮೆಯಾದ ಪರಿಣಾಮವಾಗಿ ಮದ್ರಾಸು ಪ್ರಾಂತ್ಯದಲ್ಲಿ ಮುಂದಿನ ವರ್ಷದಲ್ಲಿ ಸ್ವಲ್ಪ ಮಟ್ಟಿಗೆ ಆಹಾರದ ಕೊರತೆಯು ಉಂಟಾಗಬಹುದಾಗಿ ವರದಿಗಳಾಗಿವೆ

ಸರಕಾರದ ವಿವಿಧ ಇಲಾಖೆಗಳಿಗೆ ಬೇಕಾದ ಮಿತಿಯಲ್ಲಿ ಈಗ ಗುಮಾಸ್ತರು ದೊರಕುವುದಿಲ್ಲ ಎಂದು ಪಬ್ಲಿಕ್ ಸರ್ವಿಸ್ ಕಮಿಶನಿನ ಅಭಿಪ್ರಾಯವು

ಚೀನಾಕ್ಕೆ ಬೇಕಾದ ಸಹಾಯವನ್ನು ಒದಗಿಸುವ ಮಾರ್ಗವನ್ನು ನಿರ್ಮಿಸುವುದರಲ್ಲಿ ಭಾರತೀಯ ಮತ್ತು ಅಮೆರಿಕನ್ ಸೈನ್ಯ ಬಲಗಳಿಗೆ ಯಶಸ್ಸು ದೊರಕಿರುವುದಾಗಿ ತಿಳಿದುಬಂದಿದೆ

ಮಿತ್ರರ ಬಾಂಬುಗಳ ಹಾವಳಿಯಿಂದ ಜರ್ಮನಿಯ ರ್‍ಹೈನ್ ನದಿಯ ಮೇಲೆ ಅಲ್ಲಲ್ಲಿ ಕಟ್ಟಲಾದ ಅನೇಕ ಅಣೆಕಟ್ಟುಗಳು ಲಯವಾಗಿ, ಆ ಪ್ರದೇಶದ ಜರ್ಮನ್ ಕೈಗಾರಿಕೆಗಳಿಗೆ ಒಂದು ದೊಡ್ಡ ಆತಂಕವುಂಟಾಗಿದೆ ಎಂದು ವಾರ್ತೆಯಿದೆ

ಗ್ರೀಕ ಗತವೈಭವ

ಪ್ರಾಚೀನ ಕಾಲದಲ್ಲಿ ಗ್ರೀಕ ದೇಶವು ಒಂದು ಪ್ರಬಲ ರಾಷ್ಟ್ರವಾಗಿದ್ದಿತು. ಜಗತ್ತಿನಲ್ಲಿ ಇವತ್ತಿಗೂ ಮಹಾಮನ್ನಣೆಯನ್ನು ಪಡೆಯುತ್ತಿರುವ ಮಹಾ ಸಂಸ್ಕೃತಿಯು ಅಲ್ಲಿ ಆಗ ಬೆಳೆದಿತ್ತು. "ಇಕ್ಕಡೆಗಳಲ್ಲೂ ಸಮ ಬಲವಿದ್ದರೆ—ಆಗ ಮಾತ್ರ ನ್ಯಾಯಕ್ಕೆ ಗಣ್ಯಸ್ಥಾನ;—ಪ್ರಬಲರಾದವರು ಸ್ವೇಚ್ಛಾಪರರಾಗಿ ವರ್ತಿಸಬಹುದು,—ಅಶಕ್ತರು ಯಾತನೆಗಳನ್ನು ಅನುಭವಿಸಲೆ ಬೇಕು" ಎಂಬುದಾಗಿ ಆಗಿನ ಗ್ರೀಕ ಯೋಧರು ದರ್ಪದಿಂದ ನುಡಿಯುತ್ತಿದ್ದರು

ಕ್ರಿ. ಪೂ ೪೧೬ರಲ್ಲಿ ನಡೆದ ಘಟಣೆಯಿದು ಮೆಲೊನ್ ಎಂಬ ಒಂದು ವಲಸೆಯ ಮೇಲೆ ಪ್ರಬಲರಾದ ಗ್ರೀಕರು ದಂಡೆತ್ತಿಹೋದರು ಆಗಿನ ಗ್ರೀಕರ ಸಾಹಸದ ಎದುರು ಯಾರು ತಾನೆನಿಲ್ಲಬಲ್ಲರು! ಮೊಲೊನ್ ದ್ವಿಪದ ಮೇಲೆರ್ರಿ ಬಂದುದು, ಗ್ರೀಕರ ಮಹತ್ತಾದ ಸೇನಾಬಲವು ಮೆಲೊನ್ ನಿವಾಸಿಗಳ ಮುಂದೆ ಅವರು ಅಸಾಧ್ಯ ಕೋರಿಕೆಗಳನ್ನು ಹಾಕಿದರು—ಮೆಲೊನ್ ವಲಸೆಗಾರರು ದಿಕ್ಕುತೋಚದವರಾದರು ಗ್ರೀಕರಿಗೆ ಆಹುತಿಯಾದರು ಆಗ ಮೆಲೊನ್ಸ್ ಜನರ ಕೆಲವು ಜನರಿಗೂ, ಗ್ರೀಕರ ಮುಖಂಡರಿಗೂ ನಡೆದ ಸಂಭಾಷಣೆಯು ಈ ಕೆಳಗಿನಂತಿತ್ತು

ಮೆಲೊನಿಸ್ ಜನರು—ನ್ಯಾಯವಾಗ ಬೇಕಾಗಿ ಬೇಡಿಕೊಳ್ಳುವ ಅವಕಾಶದಿಂದ ಎಲ್ಲರ ರಕ್ಷಣೆಯಾಗತಕ್ಕದು ಈ ತರದ ಪರಿಸ್ಥಿತಿಯು ಒಂದು ದಿನ ನಿಮಗೂ ಉಂಟಾಗಬಹುದು

ಗ್ರೀಕರು—ಅದರ ಕುರಿತು ನಮಗೆ ಏನೂ ಹೆದರಿಕೆಯಿಲ್ಲ

ಮೆಲೊನಿಸ್ ಜನರು—ಅಂದರೆ ತಾಟ್ಸ್ಥರ ವೈರತ್ವವನ್ನು ಕಟ್ಟಿಕೊಳ್ಳುವುದು ನಿಮ್ಮ ಉದ್ದೇಶವೊ?—ಯಾಕೆಂದರೆ ನಿಮ್ಮ ಈಗಿನ ವರ್ತನೆಯಿಂದ ಅವರಲ್ಲಿ ಈ ಭಾವವು ಉಂಟಾಗದೆಯಿರಲಾರದು

ಗ್ರೀಕರು—ಇತರ ಜನಾಂಗಗಳು ನಮಗೆ ವಿರೋಧವಾಗಿ ರಕ್ಷಣಾ ಏರ್ಪಾಡುಗಳನ್ನು ಕೈಕೊಳ್ಳುವವೆಂದು ನಾವು ನಂಬುವುದಿಲ್ಲ. ಒಂದೇ ನೀವು ನಮಗೆ ಶರಣು ಬರಬೇಕು ಇಲ್ಲದಿದ್ದರೆ ಸರ್ವನಾಶಕ್ಕೆ ಸಿದ್ಧರಾಗಬೇಕು.

ಮೆಲೊನಿಸ್ ಜನರು—ನಮ್ಮ ಅಪಾಯದ ಕುರಿತು ನಮಗೆ ತಿಳಿಯುವುದು. ನ್ಯಾಯ ರಕ್ಷಣೆಯು ದೇವನಿಂದಾಗುವುದು ನಮಗೆ ಸ್ಪಾರ್ಟನ್ನರು ಸಹಾಯ ಕೊಡಬಹುದು

ಗ್ರೀಕರು— ದೇವರಲ್ಲಿ ಮೊರೆಯಿಡುವುದು ಮೂರ್ಖತನವು ಸ್ಪಾರ್ಟನ್ನರು ನಿಮಗೆ ಎಂದಿಗೂ ಸಹಾಯಕರಾಗರು.

ಮೆಲೊನ್ ಜನರು—ನಾವು ಇವತ್ತಿಗೆ ಏಳುನೂರು ವರ್ಷಗಳ ಸಮಯ ಸ್ವತಂತ್ರರಾಗಿ ಬಾಳಿದ ಜನಾಂಗ ನಮ್ಮ ಸ್ವಾತಂತ್ರ್ಯವನ್ನು ನಾವು ಎಂದಿಗೂ ಶರಣಕ್ಕೆ ಒಪ್ಪೆವು ಗ್ರೀಕರಿಗೂ, ಸ್ಪಾರ್ಟನರಿಗೂ ನಡುವೆಯಿರುವ ಯುದ್ಧದಲ್ಲಿ ನಾವು ತಟಸ್ಥರಾಗಿ ನಿಲ್ಲುವೆವು

ಮೆಲೊಸಾ ವಲಸೆಗೆ ಯಾವತ್ತೂ ಸಹಾಯ ಬಾರದೆಹೋಯಿತು ಅಲ್ಲಿನ ಪುರುಷರೆಲ್ಲ ಮೃತ್ಯುವಿಗೆ ಆಹುತಿಯಾದರು ಹೆಂಗಸರು ಮತ್ತು ಮಕ್ಕಳು, ಗುಲಾಮರಾಗಿ ವಿಕ್ರಯಿಸಲ್ಪಟ್ಟರು.

ಆದರೆ, ಸ್ವಲ್ಪ ಸಮಯದಲ್ಲೆ ಗ್ರೀಕರು, ಸಿಸಲಿಯ ಮೇಲೆ ದಂಡೆತ್ತಿ ನಡೆದರು. ಈ ಅಭಿಕ್ರಮದಿಂದ ಒಂದೆ ಒಂದು ಹಡಗವಾಗಲಿ ಒಬ್ಬನೆ ಒಬ್ಬ ಗ್ರೀಕ ಯೋಧನಾಗಲಿ ಮನೆಗೆ ಹಿಂತಿರುಗಲಿಲ್ಲ ಇದೆ ಅವರ ಕೊನೆಯ ಆಕ್ರಮಣವಾಯಿತು. ಅದರೊಡನೆ ಗ್ರೀಕರ ನಿರ್ನಾಮವು ಪ್ರಾರಂಭವಾಯಿತು ಸ್ವಲ್ಪ ವರ್ಷಗಳ ನಂತರ ಸ್ಪಾರ್ಟನರು, ಗ್ರೀಕರ ಮೇಲೆ ದಂಡೆತ್ತಿ ಬಂದು ಅವರನ್ನು ಸೋಲಿಸಿಬಿಟ್ಟರು ಸ್ಪಾರ್ಟನರು, ಗ್ರೀಕರು ಅದಕ್ಕೆ ಅರ್ಹರಾಗಿಲ್ಲದಿದ್ದರೂ ಅವರನ್ನು ಬಹಳ ದಯೆಯಿಂದ ಕಾಣಿದರು.

ಕ್ರಿಮಿಕೀಟಗಳು ಇವಕ್ಕೆ ಅಂಜುತ್ತವೆ

೩೩೦೦ ವರ್ಷ ಹಿಂದಿನ ಬೀಜಗಳ ಗಿಡ

ಈಜಿಪ್ತಿನ ಪುರಾತನ ಸಮಾಧಿ ಕಟ್ಟಡಗಳಲ್ಲಿ ೩೩ ಶತಮಾನಗಳ ಹಿಂದೆ ಹೂಳಲ್ಪಟ್ಟ ಟುಟಂಕಮೆನ್ ಎಂಬ ಅರಸನ ಶವ ಸಿಕ್ಕಿದೆ ಆಗಿನ ಕ್ರಮದಂತೆ ಶವದ ಜೊತೆಯಲ್ಲಿ ಇಡಲ್ಪಟ್ಟ ಆತನ ಪ್ರೀತಿಯ ವಸ್ತುಗಳಲ್ಲಿ ಒಂದು ತರದ ಬೀಜಗಳೂ ಸಿಕ್ಕಿದವು ೩೩೦೦ ವರ್ಷಗಳಾದರೂ ಆ ಬೀಜಗಳನ್ನು ಹಾಳಾಗದಂತೆ ಇರಿಸಿದ್ದ ಪ್ರಾಚೀನ ಈಗುಪ್ತ ಜನರ ವಿಜ್ಞಾನ ಶಕ್ತಿಯ ಒಂದು ಅಮೋಘ ನಿದರ್ಶನವೆನ್ನಬೇಕು.

ಈ ಬೀಜಗಳನ್ನು ಕಂಡುಹಿಡಿದ ಇಂಗ್ಲ ಪ್ರಾಚೀನ ಕಟ್ಟಡ ಶೋಧನಾಚತುರರೊಬ್ಬರು ಅವುಗಳನ್ನು ತಮ್ಮ ಅಮೇರಿಕದ ಸ್ನೇಹಿತರೊಬ್ಬರಿಗೆ ಕಳುಹಿಸಿಕೊಟ್ಟರು. ಅವರು ಅದನ್ನು ತಮ್ಮ ತೋಟದಲ್ಲಿ ಬಿತ್ತಿದಾಗ ಅವಕ್ಕೆ ಮೊಳಕೆ ಬಂದು ಗಿಡವಾಯಿತು ಈ ಗಿಡಗಳು ಬೀಜಬಿಟ್ಟ ಮೇಲೆ ಪುನಃ ಆ ಬೀಜಗಳು ಬಿತ್ತಿ ಸುಮಾರು ೧। ರಾತ್ತಲ ಬೀಜದೊರೆಯಿತು. ಈ ಗಿಡಗಳ ವೈಶಿಷ್ಟವೆಂದರೆ ತೋಟದಲ್ಲಿನ ಇತರ ಗಿಡಬಳ್ಳಿಗಳನ್ನು ಕ್ರಿಮಿಕೀಟಗಳು ಹಿಂಡಿ ನಾಶಪಡಿಸಿವೆಯಾದರೂ ಇವುಗಳ ಹತ್ತಿರ ಯಾವ ತರದ ಕ್ರಿಮಿಕೀಟವೂ ಸುಳಿಯಲಿಲ್ಲ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

[illegible] Limited, Mangalore.

Head Office — Estd. 1931 — **Branches**

Mangalore. — Mangalore, Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June).
(½% from July to Decr.),

Savings bank Accounts 1½% p. a. on daily balances.

Fixed Deposits 6 month 2% p. a.
12 months 2½% p. a.
24 months 3% p. a.

The Bank also accepts season and short term deposits and many other lucrative schemes at most favourable rates of interest. For terms etc. apply to Head office or Branches.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, [illegible], ಹಲ್ಲುವೇದನೆಗಳಿಗೂ, [illegible], ಬಾತುಕೊಳ್ಳುವುದು, [illegible] ಉಂಟಾದ [illegible], ಪಕ್ಷವಾತ, [illegible] ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. [illegible], ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low. ★ 2½% Rebate on annual premiums.

★ "Permanent Disability Benefits free of any cost

★ Payment of double the insured amount in case of death by accident at a very smallcost of Rs. 1-8-0 per 1000.

★ Special rebates on large size policies.

★ A special scheme by which lapsed policies can be revived without paying the arrears

★ War risk cover at no extra cost

and above all

f premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic pncreases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,

ಕಟಪಾಡಿ ದ. ಕನ್ನಡ

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಾ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನೆರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906.

[ಸಂಪುಟ 39] ತಾರೀಕು 20—10—1944 [ಸಂಚಿಕೆ 41]

★ ★ ಖಾಧಿ ಜನ್ಮ ★ ★

ಸ್ವರಾಜ್ಯ ಸಾಧನೆಯ ಅದ್ವಿತೀಯ ಅಸ್ತ್ರ

ದಕ್ಷಿಣ ಆಫ್ರಿಕೆದಲ್ಲಿದ್ದಾಗ, ಗಾಂಧೀಜಿಯವರು 'ಹಿಂದ್ ಸ್ವರಾಜ್' ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಅದರಲ್ಲಿ ಅವರು ಭಾರತ ಸ್ವಾತಂತ್ರ್ಯ ಗಳಿಸಲು ನೂಲುವ ನೇಯುವ ಕೈಗಾರಿಕೆಯು ಒಂದು ಉತ್ತಮ ಸಾಧನವೆಂದು ಅವರು ಬರೆದಿದ್ದರಾದರೂ ೧೯೧೫ರಲ್ಲಿ ಆಫ್ರಿಕದಿಂದ ಮರಳಿದ ಮೇಲೂ ಗಾಂಧೀಜಿಯವರು ಕೈನೂಲಿನ ಚರಕವನ್ನಾಗಲೀ, ನೇಯುವ ಮಗ್ಗವನ್ನಾಗಲೀ ಕಣ್ಣಿಂದ ಕೂಡಾ ನೋಡಿರದಿದ್ದುದು ಒಂದು ಆಶ್ಚರ್ಯ. ಇಂತಹರು ಮುಂದೆ, ನೂಲು ಚರಕಗಳನ್ನು ತಮ್ಮ ಜೀವನದ ತತ್ವಗಳಲ್ಲೊಂದಾಗಿ ಮಾಡಿದ 'ಸ್ವದೇಶಿ' ಚಳವಳಿಕ್ಕೆ ಉತ್ತೇಜನಕೊಟ್ಟರು.

ಸಬರಮತಿ ಆಶ್ರಮವು ಸ್ಥಾಪಿಸಲ್ಪಟ್ಟಾಗ ಕೆಲವು ಕೈಮಗ್ಗಗಳೂ ಅಲ್ಲಿ ಜೋಡಿಸಲ್ಪಟ್ಟವು. ಆಶ್ರಮವಾಸಿಗಳಲ್ಲಿ ಹೆಚ್ಚಿನವರು ಕೈಗಾರಿಕೆಯ ಪರಿಶ್ರಮದಲ್ಲಿ ಅಭಿರುಚಿ ಇಲ್ಲದಂತವರೇ ಆಗಿದ್ದರು. ಆದುದರಿಂದ ಒರ್ವ ನೇಕಾರನನ್ನು ತರಬೇಕಾಯಿತು. ಆದರೆ ಆ ನೇಕಾರನು ತನ್ನ ವಿದ್ಯೆಯನ್ನು ಸಂಪೂರ್ಣವಾಗಿ ಆಶ್ರಮವಾಸಿಗಳಿಗೆ ಕಲಿಸಲಿಲ್ಲ. ಗಾಂಧೀಜಿಯವರ ಸೋದರ ದಾಯಾದಿಯಾದ ಮಗನ್‌ಲಾಲ್ ಗಾಂಧೀ ಎಂಬವರು ಬಹು ಬೇಗನೆ ನೇಯುವ ಕಲೆಯನ್ನು ಕಲಿತುಕೊಂಡು ಇತರರಿಗೂ ಕಲಿಸತೊಡಗಿದರು.

ತಮ್ಮ ಸ್ವಂತ ಕೈಗಳಿಂದ ತಯಾರಿಸಲ್ಪಟ್ಟ ಬಟ್ಟೆಗಳನ್ನೇ ಧರಿಸಿಕೊಳ್ಳುವಂತವರು ತಾವಾಗಬೇಕೆಂಬುದು ಅವರ ಧ್ಯೇಯವಾಗಿತ್ತು. ಆದ ಪ್ರಯುಕ್ತ ಅವರು ತಮ್ಮ ಮಿಲ್ಲು ಬಟ್ಟೆಯ ಉಡುಪುಗಳನ್ನು ತ್ಯಜಿಸಿ ಭಾರತದ ಮಿಲ್ಲುಗಳಲ್ಲಿ ತಯಾರಾಗುವ ನೂಲಿನಿಂದಲೇ ಬಟ್ಟೆ ತಯಾರಿಸಿ ಉಟ್ಟುಕೊಳ್ಳುವ ನಿರ್ಧಾರ ಮಾಡಿಕೊಂಡರು. ಈ ನಿರ್ಧಾರದೊಂದಿಗೆ ಅವರಿಗೆ ತುಂಬಾ ಅನುಭವವು ಸಿಕ್ಕಿದಂತಾಯಿತು. ನೇಕಾರರೇ ಮೊದಲಾದ ಶ್ರಮಜೀವಿಗಳ ಜೀವನ ಸಂಕಷ್ಟಗಳ ಜ್ಞಾನವು ಅವರಿಗೆ ಬಹಳ ಹತ್ತಿರದಿಂದ ಆದಹಾಗಾಯಿತು. ನೇಕಾರನೊಬ್ಬನ ತಯಾರಿಕೆ ಶಕ್ತಿ, ಆದಾಯ, ನೂಲುಸಿಗುವ ಕಷ್ಟ, ಅವರಿಗಾಗುತ್ತಿರುವ ಮೋಸ ವಂಚನೆ, ಅವರ ಮೇಲೆ ಹೆಚ್ಚಾಗುತ್ತಿರುವ ಸಾಲದ ಹೊರೆ ಇವೆಲ್ಲವೂ ಸ್ಪಷ್ಟವಾಗಿ ಅನುಭವಕ್ಕೆ ಬಂದವು.

ಪ್ರಾರಂಭದಲ್ಲಿ ಆಶ್ರಮವಾಸಿಗಳೆಲ್ಲರಿಗೆ ಬೇಕಾದ ಬಟ್ಟೆ ತಯಾರಿಸುವುದು ಸಾಧ್ಯವಾಗಲಿಲ್ಲ. ಇತರ ನೇಕಾರರಿಂದ ನೇಯಲ್ಪಟ್ಟ ಬಟ್ಟೆಗಳನ್ನು ತರಲಾಯಿತು. ಭಾರತದ ಮಿಲ್ಲು ನೂಲಿನಿಂದ ನೈದು ತಯಾರಾಗಿದ್ದ ಬಟ್ಟೆ ಸಿಗುವುದೂ ಕಷ್ಟವಾಯಿತು. ಕಾರಣ ಹೆಚ್ಚಿನ ನೇಕಾರರು ತಮ್ಮ ಮಗ್ಗಗಳಿಗೆ ವಿಲಾಯತಿ ಮಿಲ್ಲಿನ ನೂಲನ್ನೇ ಉಪಯೋಗಿಸುತ್ತಿದ್ದರು. ಭಾರತದಲ್ಲಿ ಆಗ ಅಷ್ಟೊಂದು ನಾಜೂಕು ನೂಲು ತಯಾರಾಗುತ್ತಿರಲಿಲ್ಲ. ಈಗಲೂ ಅತೀ ಸಪೂರವಾದ ನೂಲು ನಮ್ಮ ಮಿಲ್ಲುಗಳಲ್ಲಿ ತಯಾರಾಗುವುದಿಲ್ಲ.

ಹೀಗಾಗಿ ಭಾರತ ಮಿಲ್ಲುಗಳ ನೂಲನ್ನು ನೇಯುವ ಕೆಲಸಗಾರರನೊಬ್ಬನನ್ನು ಬಹಳ ಕಷ್ಟದಿಂದ ತರಿಸಿಕೊಳ್ಳಲಾಯಿತು. ಅವನು ತಯಾರಿಸಿದ ಎಲ್ಲಾ ಬಟ್ಟೆಯನ್ನು ಆಶ್ರಮವಾಸಿಗಳು ಬೆಲೆಗೆ ಪಡೆದು ಕೊಳ್ಳುವಂತೆ ಅವನಿಗೆ ಭರವಸೆ ಕೊಡಲಾಯಿತು. ಹೀಗೆ ಮಿಲ್ಲು ನೂಲಿನಿಂದ ತಯಾರಿಸಿದ ಬಟ್ಟೆಗಳನ್ನು ಧರಿಸುವಂತೆ ಅವರು ಎಲ್ಲರಲ್ಲೂ ಪ್ರಚಾರ ಮಾಡತೊಡಗಿ ಮಿಲ್ಲು ನೂಲು ತುಂಬಾ ಖರ್ಚಾಗುವಂತೆ ಮಾಡಿ, ಮಿಲ್ಲು 'ಏಜಂಟ'ರಂತಾದರು. ಇದರಿಂದ ಗಿರಣಿಗಳ ಆಡಳಿತ ಕ್ರಮದ ಅನುಭವವು ಕೊಂಚಮಟ್ಟಿಗೆ ಆದಹಾಗಾಯಿತು. ಅವರ ತೊಡಕು, ಸಂಕಷ್ಟಗಳೂ ತಿಳಿದು ಬಂದುವು. ಗಿರಣಿ ಮಾಲಕರು ತಮ್ಮ ಕಾರ್ಖಾನೆಗಳಲ್ಲಿ ತಯಾರಾದ ನೂಲನ್ನು ಹೆಚ್ಚೆಚ್ಚು ಬಟ್ಟೆಯಾಗಿ ಮಾರ್ಪಡಿಸುವ ಬಗೆ ಹೇಗೆಂದು ಯೋಚಿಸುತಿದ್ದು, ಯಂತ್ರ ಮಗ್ಗಗಳನ್ನು ಸ್ಥಾಪಿಸುವ ಯೋಜನೆಯಲ್ಲಿದ್ದರು. ಆದರೂ ನೇಕಾರರನ್ನು ಪ್ರೋತ್ಸಾಹಿಸದೆ ಅವರಿಗೆ ಉಪಾಯವಿರಲಿಲ್ಲ. ಅವರ ಈ ಪ್ರೋತ್ಸಾಹವು ಮಾತ್ರ ಮನಃಪೂರ್ವಕವಾದುದಾಗಿರಲಿಲ್ಲ. ಅದು ಸ್ವಲ್ಪ ಸಮಯದ ವರೆಗೆ ಮಾತ್ರವೇ ಆಗಿತ್ತು. ಕ್ರಮೇಣ ನೇಯುವ ಗಿರಣಿಗಳೂ ತಲೆಯೆತ್ತಿ ನೇಯಿಗೆಯ ಗೃಹಕೈಗಾರಿಕೆಗೆ ಕಲ್ಲು ಬಿತ್ತು.

ಸ್ವತಃ ನೂಲು ತೆಗೆಯದೆ ಇರುವತನಕ ಗಿರಣಿ ನೂಲಿನ ಮೇಲೆ ಹೊಂದಿಕೊಂಡಿರಲೇಬೇಕಾಗುತ್ತದೆಂದು ಅವರಿಗೆ ಖಚಿತವಾಯಿತು. ಗಿರಣಿಗಳ ಏಜೆಂಟರಂತೆ ಕೆಲಸಮಾಡಿದರೆ ದೇಶಕ್ಕೆ ಹೆಚ್ಚಿನ ಸೇವೆಸಲ್ಲಿಸಿದಂತಾಗಲಿಲ್ಲವೆಂದೂ ಗಾಂಧೀಜಿಯವರಿಗೆ ಮುಂದಟ್ಟಾಯಿತು.

ಪುನಃ ಕಷ್ಟಪರಂಪರೆಗಳನ್ನು ಎದುರಿಸುವ ಕಾಲಬಂತು. ನೂಲುವ ಸಾಧನವಾಗಲೀ ನೂಲುವಿಕೆ ಕಲಿಸುವನೊಬ್ಬನಾಗಲೀ ಸಿಗುವುದೇ ಅಸಾಧ್ಯವಾಯಿತು. ಆಶ್ರಮದ ಮಗ್ಗಗಳಲ್ಲಿ ಅಚ್ಚ ನೇಯುದ ನೂಲನ್ನು ಸಪೂರ ನಳಿಗೆಯೊಂದಕ್ಕೆ ಸುತ್ತಲು ಒಂದು ತರದ ಚರಕಗಳು ಉಪಯೋಗಿಸಲ್ಪಡುತ್ತಿದ್ದುವು. ಆದರೆ ಆ ಕಾಲದಲ್ಲಿ ಅವುಗಳನ್ನು ನೂಲುವ ಚರಕವಾಗಿಯೂ ಪರಿವರ್ತಿಸಿಕೊಳ್ಳಲು ಸಾಧ್ಯವಿದೆಯೆಂದು ಯಾರಿಗೂ ಹೊಳೆಯಲಿಲ್ಲ.

ಒಮ್ಮೆ ಗಾಂಧೀಜಿಯವರ ಸ್ನೇಹಿತರಾದ ಕಾಳಿದಾಸ್ ಜಾವೇರಿ ಎಂಬವರು ಒರ್ವ ಹೆಂಗಸು ನೂಲುವ ಪ್ರದರ್ಶನ ಮಾಡುವುದಾಗಿ ತಿಳಿಸಿದರು. ಕೂಡಲೇ ಹೊಸ ವಿಷಯಗಳನ್ನು ತ್ವರೆಯಾಗಿ ತಿಳಕೊಳ್ಳುವ ಜಾಣ್ಮೆಯುಳ್ಳ ಸ್ವಯಂಸೇವಕನೊಬ್ಬನನ್ನು ಆ ನೂಲುವ ಪ್ರದರ್ಶನಕ್ಕೆ ಕಳುಹಿಸಲಾಯಿತು. ಅವನಾದರೂ ಅಲ್ಲಿಂದ ಹೆಚ್ಚಿನ ವಿಷಯಗಳನ್ನು ತಿಳಿದುಕೊಂಡು ಬರಲಿಲ್ಲ.

ಹೀಗೆ ಬಹುಸಮಯವು ಕಳೆಯುತ್ತಾ ಹೋದ ಹಾಗೆ ನೂಲುವಿಕೆ ಕಲಿಯುವ ಗಾಂಧೀಜಿಯವರ ಉತ್ಸಾಹ ಹೆಚ್ಚಾಗುತ್ತಾ ಬಂತು. ಆಶ್ರಮಕ್ಕೆ ಆಗಿಂದಾಗ್ಗೆ ಬರುವ ಪ್ರೇಕ್ಷಕರೊಂದಿಗೆ ಗಾಂಧೀಜಿ ಈ ನೂಲಿನ ಕಲೆಯ ಕುರಿತು ಏನಾದರೂ ಗೊತ್ತಿದೆಯೊ ಎಂದು ವಿಚಾರಿಸುತ್ತಲೇ ಇರುತ್ತಿದ್ದರು. ಆದರೆ ನೂಲುವ ಕಲೆಬಲ್ಲವರು ಹೆಚ್ಚಾಗಿ ಹೆಂಗುಸರೇ ಇದ್ದು ಮತ್ತು ಅದು ಅಷ್ಟೇ ಹೊತ್ತಿಗೆ ಸಂಪೂರ್ಣ ಅಳಿದು ಹೋಗಿದ್ದುದರಿಂದ, ದೇಶದ ಯಾವ ಮೂಲೆಯಲ್ಲಾಗಲಿ ಒರ್ವ ನೂಲುವವಳು ಇದ್ದಾಳೆಯೊ ಎಂದು ನೋಡುವುದಕ್ಕೆ ಯೋಗ್ಯ ವ್ಯಕ್ತಿಯು ಒರ್ವ ಮಹಿಳೆಯೇ ಆಗಬೇಕೆಂದು ಅವರಿಗೆ ಖಚಿತವಾಯಿತು.

೧೯೧೭ರಲ್ಲಿ ಒಮ್ಮೆ ಗಾಂಧೀಜಿಯವರು ಗುಜರಾತಿನ ಬ್ರೋಚ್ ಜಿಲ್ಲೆಯ ಒಂದು ಶಿಕ್ಷಣ ಪರಿಷತ್ತಿಗೆ ಹೋದಾಗ ಅವರಿಗೆ ಗಂಗಾಬೆನ್ ಮಜ್ಮುಂದಾರ್ ಎಂಬ ಮಹಿಳೆಯ ಪರಿಚಯವಾಯಿತು. ಅವಳು ಅದ್ವಿತೀಯ ಸೇವಾಶಕ್ತಿಯಿದ್ದ ಒರ್ವ ಶ್ರೇಷ್ಠ ಮಹಿಳೆ. ಇಂಗ್ಲಿಷ್ ರೀತಿಯ ವಿದ್ಯಾಭ್ಯಾಸವೇನೂ ಅವಳಿಗೆ ಆಗಿರಲಿಲ್ಲವಾದರೂ ಅವಳು ತುಂಬಾ ಜಾಣಳಿದ್ದಳು. ಅವಳಲ್ಲಿ ತುಂಬಾ ಸಾಮಾನ್ಯ ತಿಳುವಳಿಕೆಯ ಜ್ಞಾನವೂ, ಧೈರ್ಯಸ್ಥೈರ್ಯಗಳೂ ಇದ್ದುವು. ಆಗಲೇ ಅವಳು ಸ್ಪರ್ಶ, ಅಸ್ಪರ್ಶತಾ ಭಾವನೆಯನ್ನು ತ್ಯಜಿಸಿ ಹಿಂದುಳಿದ ವರ್ಗದವರ ಸುಧಾರಣೆ ಕಾರ್ಯದಲ್ಲಿ ನಿರತಳಾಗಿದ್ದಳು. ಗಂಗಾಬೆನ್ ತಕ್ಕಮಟ್ಟಿಗೆ ಅನುಕೂಲಸ್ಥಳಾಗಿದ್ದರೂ ಅವಳು ಅತ್ಯಂತ ಸರಳಜೀವನವನ್ನು ಸಾಗಿಸುತ್ತಿದ್ದಳು. ಅವಳಲ್ಲಿ ಬಲಿಷ್ಠವಾದ ದೇಹಶಕ್ತಿಯೂ ಇತ್ತು. ಯಾರ ಹೆದರಿಕೆಯೂ ಇಲ್ಲದೆ ಆಕೆ ಯಾವ ಸ್ಥಳಕ್ಕಾದರೂ ಹೋಗುತ್ತಿದ್ದಳು. ಕುದುರೆ ಸವಾರಿಯಲ್ಲಿಯೂ ಅವಳ ಪ್ರವೀಣತೆಯನ್ನು ನೋಡಿ ಗಾಂಧೀಜಿಯವರಿಗೆ ತುಂಬಾ ಕೌತುಕವಾಗಿದೆ.

ಇಂತಹ ಧೀರ ಮಹಿಳೆಯಲ್ಲಿ ಗಾಂಧೀಜಿಯವರು ತಮ್ಮ ನೂಲಿನ ಉದ್ಯಮದ ಆಸಕ್ತಿಯನ್ನು ನಿವೇದಿಸಿಕೊಂಡರು. ಕೂಡಲೇ ಗಂಗಾದೇವಿಯು ನೂಲು ಚರಕ ಶೋಧನೆಯ ಕುರಿತು ಸಕಲ ಪ್ರಯತ್ನಗಳನ್ನು ತಡೆಯಿಲ್ಲದೆ ಕೈಕೊಳ್ಳುವುದಾಗಿ ಪ್ರತಿಜ್ಞೆಮಾಡಿ ಗಾಂಧೀಜಿಯವರ ಮನಸ್ಸಿನ ಭಾರವನ್ನು ಒಮ್ಮೆಗೆ ಕಡಿಮೆ ಮಾಡಿದಳು.

ಕೊನೆಗಂತೂ ಶೋಧನೆಯಾಯಿತು

ನೂಲಿನ ಚರಕ ಶೋಧನೆಗೆ ಪಣತೊಟ್ಟ ಗಂಗಾಬೆನ್ ಮಹಿಳೆ ಗುಜರಾತವನ್ನೆಲ್ಲ ಸುತ್ತಾಡಿದ ಮೇಲೆ ಬರೋಡಾ ಸಂಸ್ಥಾನದ ವಿಜಾಪುರ ಜಿಲ್ಲೆಯಲ್ಲಿ ಒಂದು ಕಡೆ ಚರಕವೊಂದನ್ನು ಕಂಡು ಹಿಡಿದೇ ಬಿಟ್ಟಳು. ವಿಜಾಪುರಸ್ಥರ ಅನೇಕ ಮನೆಗಳಲ್ಲಿ ಒಂದು ಕಾಲದಲ್ಲಿ ನೂಲಿನ ಚರಕಗಳು ತಿರುಗುತ್ತಿದ್ದುವು. ಗಂಗಾಬೆನ್ ಅಲ್ಲಿ ಹೋದಾಗ ಅವುಗಳು ಮನೆಗಳ ಅಟ್ಟಗಳಲ್ಲಿ ಒಲೆಯ ಕಟ್ಟಿಗೆಯಂತೆ ತೂರಲ್ಪಟ್ಟಿದ್ದುವು. ಶುದ್ಧಮಾಡಿದ ಹತ್ತಿಯನ್ನು ಒದಗಿಸಿಕೊಟ್ಟರೆ ಮತ್ತು ನೂತ ನೂಲನ್ನು ಯಾವಾಗಲೂ ಕ್ರಯಕ್ಕೆ ಪಡೆಯುವಂತವರಿದ್ದರೆ ತಾವು ಬೇಕಾದಷ್ಟು ನೂಲನ್ನು ಸಿದ್ಧಮಾಡಿಕೊಡುವರಾಗಿ ಅಲ್ಲಿನ ನೂಲುಕಾರರು ಅಭಯಕೊಟ್ಟರು. ಕೂಡಲೇ ಆ ಸಂತೋಷದ ಸುದ್ದಿಯನ್ನು ಗಂಗಾ ದೇವಿಯು ಮಹಾತ್ಮರಿಗೆ ತಿಳಿಸಿದಳು.

ಶುದ್ಧ ಮಾಡಲ್ಪಟ್ಟು ನೂಲಲು ಯೋಗ್ಯವಾದ ಹತ್ತಿಯನ್ನು ಒದಗಿಸುವುದು ಇನ್ನೊಂದು ಕಷ್ಟದ ಕೆಲಸ. ಈ ಸಂಕಷ್ಟವನ್ನು ಗಾಂಧೀಜಿ ಪ್ರಖ್ಯಾತ ಪಾರ್ಶಿ ಗಿರಣಿ ಮಾಲಕರಾದ ಉಮಾರ್ ಸೋಬಾನಿಯವರ ಮುಂದೆ ಹೇಳಿಕೊಂಡಾಗ ಅವರು ತಮ್ಮ ಗಿರಣಿಯಲ್ಲಿ ತಯಾರಾಗುವ ಹತ್ತಿಯನ್ನು ಕಳುಹಿಸಿ ಕೊಡುವುದಾಗಿ ವಾಗ್ದಾನ ಮಾಡಿದರು. ಸೋಬಾನಿಯವರು ಕಳುಹಿಸಿದ ಹತ್ತಿಯ ಬತ್ತಿಗಳನ್ನು ಗಾಂಧೀಜಿಯವರು ಗಂಗಾಳಿಗೆ ಕಳುಹಿಸಿಕೊಟ್ಟ ಮೇಲೆ ವಿಜಾಪುರ ಕಡೆಯಿಂದ ಮೂಟೆಗಟ್ಟಲೆ ಕೈನೂಲು ಬರಲಾರಂಭವಾಯಿತು. ಅದನ್ನು ಬಟ್ಟೆಯಾಗಿ ಮಾಡುವುದೇ ಎಲ್ಲದಕ್ಕಿಂತಲೂ ಕಠಿಣವಾದ ಸಮಸ್ಯೆಯಾಯಿತು.

ಉಮಾರ್ ಸೋಬಾನಿಯವರ ಸಹಾಯವು ಅತ್ಯಂತ ಸ್ತುತ್ಯವಾದದ್ದು. ಆದರೆ ಗಿರಣಿ ತಯಾರಿಯ ಹತ್ತಿಯನ್ನು ಉಪಯೋಗಿಸುತ್ತ ಬಂದರೆ ಗಿರಣಿ ನೂಲನ್ನು ಮತ್ತೆ ಗಿರಣಿ ಬಟ್ಟೆಗಳನ್ನೂ ಕೂಡಾ ಉಪಯೋಗಿಸಿ ಕೊಳ್ಳುವುದರಲ್ಲಿ ಅಭ್ಯಂತರವೇನು ಎಂಬ ಪ್ರಶ್ನೆಯು ಗಾಂಧೀಜಿಯನ್ನು ಕಾಡ ತೊಡಗಿತು. ಹಿಂದಿನ ಕಾಲದಲ್ಲಿ ಜನರಿಗೆ ನೂಲಲು ಹತ್ತಿಯನ್ನು ಗಿರಣಿಗಳಿಂದ ಒದಗಿಸಲ್ಪಡುತಿದ್ದಿತೆ? ಇಲ್ಲ. ಅಂದ ಮೇಲೆ ಹತಿಯನ್ನು ಶುದ್ಧ ಮಾಡಿ ಬತ್ತಿಗಳಾಗಿ ತಯಾರಿಸಿ ಕೊಳ್ಳಲೇಬೇಕು.

ಗಾಂಧೀಜಿಯವರು ಹತ್ತಿ ಶುದ್ಧ ಮಾಡುವವರನ್ನು ತಯಾರಿಸಿ ಕೊಳ್ಳಬೇಕೆಂದು ಗಂಗಾಬೆನ್ನಳಿಗೆ ಸೂಚನೆ ಇತ್ತರು. ಆ ಮಹಿಳೆ ಧೈರ್ಯವಾಗಿ ಆ ಕೆಲಸದ ಹೊಣೆಗಾರಿಕೆಯನ್ನೂ ವಹಿಸಿ ಕೊಂಡಳು. ಅದೃಷ್ಟ ವಶಾತ್ ಹತ್ತಿ ಶೋಧಿಸಲು ತಿಳಿದಿದ್ದ ಒರ್ವ ಕೆಲಸಗಾರನೂ ಅವಳಿಗೆ ಸಿಕ್ಕಿದನು. ಅವನು ತನಗೆ ತಿಂಗಳಿಗೆ ೩೫ ರೂಪಾಯಿ ಸಂಬಳ ಕೊಡಬೇಕೆಂದನು. ಆ ಕಾಲದಲ್ಲಿ ಆ ಕೆಲಸಕ್ಕೆ ಎಷ್ಟು ಖರ್ಚಾದರೂ ಹೆಚ್ಚೆನಿಸುತ್ತಿರಲಿಲ್ಲ. ಗಂಗಾಬೆನ್ನಳ ಶ್ರಮದಿಂದ ಆಶ್ರಮದ ಕೆಲವು ಸಣ್ಣ ಹುಡುಗರು ಹತ್ತಿ ಬತ್ತಿಗಳನ್ನೂ ತಯಾರಿಸಲು ಕಲಿತು ಕೊಂಡರು. ಬೀಜದ ಹತ್ತಿಯನ್ನು ಬೊಂಬಾಯಿಯ ಯಶವಂತ ಪ್ರಸಾದ ದೇಸಾಯಿ ಎಂಬ ವರ್ತಕರು ಒದಗಿಸಿ ಕೊಡಲು ಒಪ್ಪಿ ತುಂಬಾ ಉಪಕಾರ ಮಾಡಿದರು. ಹೀಗೆ ಗಂಗಾ ಬೆನ್ನಳ ಅವಿಶ್ರಾಂತ ಶ್ರಮದ ಫಲವಾಗಿ ಹತ್ತಿ ಶುದ್ಧ ಮಾಡುವ ಕೆಲಸದಿಂದ ಹಿಡಿದು ನೂಲುವ ಮತ್ತು ನೇಯುವ ಕೆಲಸದ ತನಕ ಒಂದು ಕ್ರಮವಾದ ಉದ್ಯಮವು ಸ್ಥಾಪಿಸಲ್ಪಟ್ಟು ವಿಜಾಪುರವು ಪ್ರಥಮದ ಪ್ರಖ್ಯಾತ ಖಾಧಿ ಕೇಂದ್ರವಾಯಿತು.

ವಿಜಾಪುರದಲ್ಲಿ ಖಾಧಿ ಕಾರ್ಯವು ಮುಂದುವರಿಯುತ್ತಿರುವಾಗ ಸಬರಮತಿ ಆಶ್ರಮದಲ್ಲಿ ಚರಕ ಸುಧಾರಣೆಯ ಪ್ರಯತ್ನಗಳು ಸಾಗುತ್ತಿದ್ದುವು. ಇಂತಹ ಸಾಧನೆಗಳಲ್ಲಿ ಗಾಂಧೀಜಿಯವರ ಎಡಗೈಯಂತಿದ್ದ ಮಗನಲಾಲ್ ಗಾಂಧಿ ಅವರು ತಮ್ಮ ತೀಕ್ಷ್ಣವಾದ ಯಂತ್ರ ಶಿಲ್ಪದ ಜಾಣ್ಮೆಯನ್ನು ನೂಲು ಚಕ್ರದ ಸುಧಾರಣೆಯಲ್ಲಿ ವ್ಯಯಿಸುತ್ತಿದರು. ಮಗನಲಾಲರು ಚರಕದಲ್ಲಿ

(೯ನೇ ಪುಟಕ್ಕೆ ಮುಂದುವರಿದಿದೆ)

ಕಾಂಗ್ರೆಸ್ ಲೀಗ್ ಭೇದ

ಮುಸ್ಲಿಂ ರಾಜಕೀಯ

[illegible] ಬದಲಿಸಿಕೊಂಡರು [illegible] ಕ್ರಮವನ್ನು, ಲೀಗು [illegible] ಕಾರ್ಯ ಕ್ರಮವನ್ನು ನಿರ್ಧರಿಸಿಕೊಂಡರು. ಜಿನ್ನರು ಕಾಂಗ್ರೆಸ್ಸಿನೊಡನೆ ತಮ್ಮ ಭೇದವನ್ನು ಒತ್ತಿ ಹೇಳಿ [illegible] ಕಾಂಗ್ರೆಸ್ [illegible] ಭಾವನೆ ಇನ್ನೂ ಸ್ಪಷ್ಟ ಕಾಣುತ್ತಿರುವುದು. ಅಧಿಕಾರಿ ವರ್ಗದ ಆಕರ್ಷಣೆಯ ಧೋರಣೆಯನ್ನು ಅವರು ವಹಿಸದಾದರೂ ಇಪ್ಪತ್ತು ವರ್ಷಗಳ ಪ್ರಚಾರದ ಫಲವಾಗಿ ಸಾರ್ವಜನಿಕರಲ್ಲಿ ದಬ್ಬಾಳಿಕೆಯನ್ನು ಎದುರಿಸುವ ನವಚೇತನವು ಉಂಟಾಗಿರುತ್ತದೆ. ಕಾಂಗ್ರೆಸಿನ ಹಾಗೆ ಲೀಗು ಕೂಡಾ ಅನೇಕ ರಾಜಕೀಯ ತತ್ತ್ವವಾದಗಳನ್ನು ಒಟ್ಟು ಸೇರಿಸಿದರೂ ಅವರಲ್ಲಿ ಶ್ರೀಮಂತರ ಹಿತಗಳ ಪ್ರಭಾವ ಇನ್ನೂ ಬಲವಾಗಿರುವುದರಿಂದ ಅದು ಕಾಂಗ್ರೆಸಿನಷ್ಟು ತೀಕ್ಷ್ಣವಾದ ಬೇಡಿಕೆಗಳನ್ನು ಮುಂದೆ ಹಾಕಿಲ್ಲ.

ಯುದ್ಧಾನಂತರ ಧೋರಣೆಯಲ್ಲಿ ಲೀಗು ಕಾಂಗ್ರೆಸಿನ ಹಾದಿಯಲ್ಲೇ ಮುಂದುವರಿದಿದೆ. ಅದರ ಕಾಲ ಕಾರಣಗಳಲ್ಲಿ ಮಾತ್ರ ಸ್ವಲ್ಪ ಹೆಚ್ಚು ಕಡಿಮೆ ಇರುವುದು. ಕಾಂಗ್ರೆಸಿನಿಂದ ತಮಗೆ ತುಂಬಾ ಅನ್ಯಾಯವಾಗುತ್ತಿದೆಯಾಗಿ ಲೀಗು ಪದೆ ಪದೇ ಒತ್ತಿ ಹೇಳಿದೆಯಾದರೂ ಪರಿಣಾತ್ಮಕ ನಿರ್ಣಯಗಳನ್ನು ಕೈಕೊಳ್ಳುವಾಗ ಅದು ಕಾಂಗ್ರೆಸ್ ಆದರ್ಶವನ್ನೇ ಅನ್ನುಸರಿಸಿದೆ.

ಲಿನ್‌ಲಿತ್‌ಗೊ ವ್ಯಾಸರಾಯರು ೧೯೪೦ರ ಅಗಸ್ಟಿನಲ್ಲಿ ಇತ್ತ ಕರಾರು ಸೂಚನೆಗಳನ್ನು ಕಾಂಗ್ರೆಸು ತಿರಸ್ಕರಿಸಿದಂತೆ ಲೀಗೂ ತಿರಸ್ಕರಿಸಿತು. ಕಾಂಗ್ರೆಸಿನಂತೆ ಲೀಗೂ ಭಾರತ ರಕ್ಷಣಾ ಸಮಿತಿಯಲ್ಲಿ ಸೇರಿ ಸಹಕರಿಸಲು ಒಪ್ಪಲಿಲ್ಲ. ಕಾಂಗ್ರೆಸಿನಂತೆ ಲೀಗು ಕೂಡಾ ಚರ್ಚಿಲರಿಂದ ಕಳುಹಲ್ಪಟ್ಟ ಕ್ರಿಪ್ಸ್ ಯೋಜನೆಯನ್ನು ನಿರಾಕರಿಸಿತು. ಪ್ರತಿಯೊಂದು ಸಲವೂ ಲೀಗು ತನ್ನ ಧೋರಣೆಗೆ ಪ್ರತ್ಯೇಕ ಕಾರಣಗಳನ್ನು ಕೊಟ್ಟಿದೆ. ಕಾರಣ ನೆವಗಳನ್ನು ಏನೇ ಹೇಳಲಿ ಲೀಗಿನ ನಿರಾಕರಣೆ ಧೋರಣೆಯ ಪರಿಣಾಮವು ಕಾಂಗ್ರೆಸಿನದರ ಹಾಗೆಯೇ ಆಗಿದೆ.

ಹೀಗೆ ತಮ್ಮ ತಮ್ಮ ಧ್ಯೇಯ ಸಾಧನೆಯಲ್ಲಿ ಮಾತ್ರ ಕಾಂಗ್ರೆಸ್ ಲೀಗಗಳೊಳಗೆ ಭೇದವು ಉಳಿದಂತಾಯಿತು. ಸಮಯ ಬಂದರೆ ಉಗ್ರ ಕಾರ್ಯ ಕ್ರಮವನ್ನಾದರೂ ಕೈಕೊಂಡು ಹೋರಾಡಲು ಕಾಂಗ್ರೆಸು ಸಿದ್ಧನಿದ್ದಾಗ ಲೀಗು ಮಾತ್ರ ಸಮಯ ಸಾಧಿಸಿ ಸಂದರ್ಭಾನುಸಾರ ಹೆಚ್ಚಿನ ಶಕ್ತಿ ತ್ಯಾಗಗಳನ್ನು ವ್ಯಯಿಸದೆ ಗುರಿ ಮುಟ್ಟಲು ಹೊಂಚು ಹಾಕಿ ಕುಳಿತುಕೊಳ್ಳುವ ಧೋರಣೆ ವಹಿಸಿತು. ಈ ಮಂದಗತಿಯ ಧೋರಣೆಗೆ ಲೀಗಿನೊಳಗಿನ ಬಂಡವಾಳ ಶಾಹಿ ಹಿತಗಳ ಸದಸ್ಯತನವೇ ಕಾರಣ. ಜಿನ್ನರ ವ್ಯಯಕ್ತಿಕ ಗುಣ ಭಾವವೂ ಮತ್ತು ಅವರ ಹಿಂದಿನ ಚಟುವಟಿಕೆಗಳೂ ಒಂದು ಕಾರಣವೆನ್ನಬಹುದು. ಪ್ರಖ್ಯಾತ ವಕೀಲರಿರುವುದರಿಂದ ರಾಜ ತಂತ್ರ ನೀತಿಯ ಮೇಲೆ ಅವರು ಹೊಂದಿಕೊಂಡಿರುವರು. ಬಹಿರಂಗ ಹೋರಾಟವು ಅವರಿಗೆ ಒಗ್ಗದು.

ಈ ತರದ ರಾಜಕೀಯ ತಂತ್ರ ಧೋರಣೆಯಿಂದ ಭಾರತೀಯ ಮುಸಲ್ಮಾನರಿಗೆ ತುಂಬಾ ಹಾನಿಯಾಗಿದೆ. ಅಲ್ಪಸಂಖ್ಯಾಕರೆಂದು ಅವರ ಮುಂದೆ ಪದೇ ಪದೇ ಹಾಡಲ್ಪಟ್ಟಿರುವುದರಿಂದ ಬ್ರಿಟಿಷ್ ಶಕ್ತಿಯ ಮೇಲೆ ಮುಸಲ್ಮಾನರು ಹೊಂದಿಕೊಂಡಿರಲೇಬೇಕೆಂಬ ಭಾವ ಅವರಲ್ಲಿ ಉತ್ಪನ್ನವಾಗಿದೆ. ಮುಸಲ್ಮಾನರೊಳಗೂ ಇತರ ಮತಸ್ಥರೊಳಗೂ ತುಂಬಾ ವ್ಯತ್ಯಾಸವಿದೆ ಎಂದು ಪ್ರಚಾರ ಮಾಡಲ್ಪಟ್ಟಿದೆಯಾದರಿಂದ ಅವರಲ್ಲಿ ಸರ್ವಕ್ಷಣೆಯ ಪ್ರತಿಕ್ರಿಯೆ ಭಾವವುಂಟಾಗಿ ಅವರ ಮಾನಸಿಕ ಮತ್ತು ಚೈತನ್ಯ ಶಕ್ತಿಗಳು ನಿರಾತಂಕವಾಗಿ ವಿಕಾಸ ಹೊಂದದಂತಾಗಿದೆ.

ಜಿನ್ನರ ನಾಯಕತ್ವದ ಇತಿಹಾಸವು ಬರೆಯಲ್ಪಡುವಾಗ್ಗ ೯ ಕೋಟಿ ಮುಸಲ್ಮಾನರಲ್ಲಿ ಅವರು ದುರ್ಬಲತ್ವವನ್ನೂ, ಸ್ವಯಂ ನಿಕೃಷ್ಟತಾ ಭಾವವನ್ನೂ ತುಂಬಿಸಲು ಪ್ರಯತ್ನಿಸಿದ ಆರೋಪವು ಅವರ ಮೇಲೆ ಬೀಳದಿರದು. ಇದರಿಂದ ಇತರ ಮತಸ್ಥರಂತೆ ಮುಸಲ್ಮಾನರು ಪ್ರಗತಿ ಮಾರ್ಗದಲ್ಲಿ ಮುಂದುವರಿಯದಾಗಿದೆ. ಅವರೊಂದಿಗೆ ಮುಸಲ್ಮಾನರಿಗೆ ಸಮಾನತೆ ಬರದಂತಾಗಿದೆ. ಆದರೆ ಮುಸಲ್ಮಾನರ ಸುದೈವವೆಂಬಂತೆ ಈ ಪ್ರಯತ್ನದಲ್ಲಿ ಜಿನ್ನರು ಮಾತ್ರ ಪರಾಜಿತರಾಗಿರುವರು. ಇಂದು ಅವರಿಗೆ ವಿರೋಧವಾಗಿ ನಿಂತಿರುವ ಇತರ ಮುಸಲ್ಮಾನ ಪಕ್ಷ ಪಂಗಡಗಳು ವ್ಯಕ್ತಿಯವಾಗಿ ಲೀಗಿನಷ್ಟು ದೊಡ್ಡ ಸಂಸ್ಥೆಗಳಲ್ಲವಾದರೂ ಒಟ್ಟಾಗಿ ಅವು ಲೀಗಿಗಿಂತಲೂ ಹೆಚ್ಚು ಪ್ರಭಾವದ ಮುಸಲ್ಮಾನ ವರ್ಗದ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತವೆ.

ಇದೊಂದು ಕೌತುಕದ ವಿಷಯವಲ್ಲ. ಕಾರಣ ಮುಸಲ್ಮಾನರ ಇಡೀ ಇತಿಹಾಸವು ವಿಕಾಸ ಮತ್ತು ಪರಾಹತು ಆಕ್ರಮಣದ ಚರಿತ್ರೆಯೇ ಆಗಿರುತ್ತದೆ. ಭೌತಿಕ ಮತ್ತು ಸಾಂಸ್ಕೃತಿಕ ವಿಕಾಸವೂ ಇದರಲ್ಲಿ ಕೂಡಿಕೊಂಡಿದೆ. ಪ್ರಸಿದ್ಧ ಕವಿ ಮಹಮ್ಮದ್ ಇಕ್ಬಾಲರು ತಮ್ಮೊಂದು ಕವಿತೆಯಲ್ಲಿ ಸ್ಪೈನ್ ದೇಶದ ಟಾರಿಕ್ ಎಂಬ ವೀರ ಅರಸನು ತನ್ನ ಮಂತ್ರಿಗಳು ತಾವಲ್ಲಿ ಅಲ್ಪ ಸಂಖ್ಯಾಕರಾಗಿರುವ ಕಾರಣ ಅಲ್ಲಿಂದ ಹಿಂತೆರಳಲು ಸಲಹೆಯಿತ್ತಾಗ "ಪರದೇಶ? ದೇವರಿಗೆ ಪರದೇಶವೆಂಬುದುಂಟೆ? ಮುಸಲ್ಮಾನರಾಗಿ ನಾವು ಸೇವೆ ಮಾಡಲಿರುವ ದೇಶಗಳು ಪ್ರತ್ಯೇಕವಿವೆಯೆ" ಎಂಬರ್ಥದ ಮಾತುಗಳನ್ನು ಹೇಳಿರುವಂತೆ ಉಲ್ಲೇಖಿಸಿದ್ದಾರೆ. ಜಿನ್ನರ ಮತ್ತು ಲೀಗಿನ ಧೋರಣೆಯನ್ನು ಪ್ರತ್ಯೇಕವಾಗಿ ಟೀಕಿಸಬೇಕಾಗಿಲ್ಲ.

ಪಾಕಿಸ್ಥಾನ

ಇಂದು ಲೀಗಿನ ಧ್ಯೇಯವೆನಿಸಿದ ಪಾಕಿಸ್ಥಾನವು ಮುಸಲ್ಮಾನರ ಇತಿಹಾಸಕ್ಕೇ ವಿರುದ್ಧವಾದ ತತ್ತ್ವವು ಇಷ್ಟೆ ಅಲ್ಲ. ಪ್ರತಿ ದೇಶದ ಇತಿಹಾಸ ತತ್ತ್ವಕ್ಕೇ ಅದು ವಿರೋಧವಾಗಿದೆ. ಪ್ರತ್ಯೇಕವಾಗಿ ಇರಲೆಳಸಿಹ ಯಾವ ಜನಾಂಗವೂ ಶ್ರೇಯಸ್ಸನ್ನು ಇದು ತನಕ ಪಡೆದಿಲ್ಲ. ಜನಾಂಗಗಳಾಗಲೀ ವ್ಯಕ್ತಿಗಳಾಗಲೀ ಎಲ್ಲಾ ವಿಧದಿಂದಲೂ ಪ್ರಗತಿ ವಿಕಾಸ ಹೊಂದಲು ಬಯಸಿಯೇ ಯಶಸ್ಸು ಪಡೆಯಬಹುದು. ವಿಕಾಸಗೊಳ್ಳುವುದರಿಂದಲೇ ಸಂಸ್ಕೃತಿಗಳು ಅಳಿಯದೆ ಉಳಿದಿವೆ. ಸಂಕುಚಿತ [illegible] ವ ತಮ್ಮ ಪವಿತ್ರತೆಯನ್ನೂ ಐಕ್ಯವನ್ನೂ ಉಳಿಸಿಕೊಳ್ಳಲೆಳಸಿದ ಪ್ರಯತ್ನದ ಪರಿಣಾಮವು ಹೆಚ್ಚಿನ ಸಂದರ್ಭಗಳಲ್ಲಿ [illegible] ಗೊಂಡಿದೆ. ಈ ವಿಕಾಸಗೊಳ್ಳಬೇಕೆಂಬ ಕಾಂಕ್ಷೆಯಿಂದಲೇ ಭಾರತೀಯ ಮುಸಲ್ಮಾನರು ನಲ್ಮೆಯುಂದಿರಬಹುದು.

ಪಾಕಿಸ್ಥಾನ ನಿರ್ಣಯದಿಂದ ಲೀಗಿನ ಧೋರಣೆಯಲ್ಲಿ ಸಂಪೂರ್ಣ ಬದಲಾವಣೆಗಳಾಗಿವೆ. ಒಂದು ದೃಷ್ಟಿಯಲ್ಲಿ ಅದರಿಂದ ಲೀಗಿನ ತಳಹದಿಯೇ ನಾಶವಾದಂತಿದೆ. ಆರ್ಥಿಕ, ರಾಜಕೀಯ ಮತ್ತು ಭೌಗೋಲಿಕ ವ್ಯತ್ಯಾಸಗಳನ್ನು ಲೆಕ್ಕಿಸದೆ ಭಾರತದ ಮುಸ್ಲಿಮರ ಹಿತಗಳೆಲ್ಲವನ್ನು ಒಂದೆಂದು ಲೀಗು ಒತ್ತಿ ಹೇಳುತ್ತದೆ. ಈ ಪಾಕಿಸ್ಥಾನ ನಿರ್ಣಯದಿಂದಲೇ ಬೇರೆ ಬೇರೆ ಪ್ರಾಂತ್ಯದ ಮುಸ್ಲಿಮರಲ್ಲಿ ವ್ಯತ್ಯಾಸವಿದೆ ಎಂಬ ಸಂಗತಿಯೇ ಸ್ಪಷ್ಟವಾಗುತ್ತದೆ. ಕಾರಣ ಮುಸಲ್ಮಾನರು ಬಹುಸಂಖ್ಯಾತರಾಗಿರುವಲ್ಲಿ ಲೀಗು ಒಂದು ತರದ ಧೋರಣೆಯನ್ನು ಸೂಚಿಸಿ, ಅವರು ಅಲ್ಪ ಸಂಖ್ಯಾತರಾಗಿದ್ದಲ್ಲಿ ಬೇರೊಂದು ಧೋರಣೆಯನ್ನು ಕೈಕೊಳ್ಳುವಂತೆ ಸಲಹೆ ಇತ್ತಿದೆ. ಒಂದು ಕಡೆ ಬಹುಸಂಖ್ಯಾತ ಪ್ರಾಂತ್ಯದ ಮುಸಲ್ಮಾನರು ತಮ್ಮಲ್ಲಿನ ಅಲ್ಪ ಸಂಖ್ಯಾಕ ಇತರ ಮತಸ್ಥರಿಗೆ ರಕ್ಷಣೆಯ ಭರವಸೆ ಕೊಡಬೇಕು. ಇನ್ನೊಂದುಕಡೆ ಅವರು ತಮ್ಮ ರಕ್ಷಣೆಗಾಗಿ ಅಲ್ಲಿನ ಬಹುಸಂಖ್ಯಾಕರನ್ನೇ ಆಶ್ರಯಿಸಿಕೊಂಡಿರಬೇಕು. ಇದರಿಂದ ಬಹುಸಂಖ್ಯಾತ ಮುಸಲ್ಮಾನರ ಹಿತಗಳು ಬೇರೆ ಅಲ್ಪ ಸಂಖ್ಯಾಕ ಪ್ರದೇಶ[illegible]ಗಳ ಮುಸಲ್ಮಾನರ ಹಿತ ಬೇರೆ ಎಂದು ಸ್ಪಷ್ಟವಾಗುತ್ತದೆ. ಹಾಗಾದರೆ ಭಾರತದ [illegible] ಲ್ಲಿನ ಎಲ್ಲಾ ಮುಸಲ್ಮಾನರ ಹಿತಗಳು ಒಂದೇ ಎಂಬ ಲೀಗಿನ ತತ್ವವನ್ನು ಲೀಗೇ ಅಳಿಸಿಕೊಂಡಂತಾಯಿತು. ಒಂದುವೇಳೆ ಬಹುಸಂಖ್ಯಾತ ಪ್ರಾಂತದ ಮತ್ತು ಅಲ್ಪ ಸಂಖ್ಯಾತ ಪ್ರದೇಶಗಳ ಮುಸಲ್ಮಾನರ ಹಿತಗಳು ಒಂದೇ ಆಗಿರಲು ಸಾಧ್ಯವಿ[illegible] ಎಂದು ಅವರು ಒಪ್ಪಿಕೊಂಡದ್ದಾದರೆ ರಾಜಕೀಯ ಮತ್ತು ಆರ್ಥಿಕ ಪಕ್ಷಗಳ[illegible] ಅಭಿಪ್ರಾಯ ಭಿನ್ನತೆಗಳು ಇರಬಾರದೆಂದು, ಅವರು ವಿವಾದ ಎತ್ತಬಾರದೆಂದು ತಿಳಿಯಬೇಕಾಗಿದೆ.

ಲೀಗಿನ ಪ್ರಭಾವ ವೆಷ್ಟಿದೆ?

ಮುಸ್ಲಿಮ್ ಲೀಗಿಗೆ ಅಲ್ಪ ಸಂಖ್ಯಾ[illegible] ಪ್ರಾಂತ್ಯಗಳ ಮೇಲೆ ಇರುವಷ್ಟು ಹಿಡಿ[illegible] ಬಹುಸಂಖ್ಯಾತ ಪ್ರಾಂತಗಳ ಮೇಲೆ ಇಲ್ಲ[illegible] ಗಡಿನಾಡು ಪ್ರಾಂತ್ಯ ಜಿನ್ನರ ನಾಯಕ[illegible] ವನ್ನು ಇದುತನಕ ಒಪ್ಪಿದ್ದಿಲ್ಲ. ಪಂಜಾ[illegible] ನಲ್ಲಿ ಅವರಿಗೆ ಅರ್ಧ ಮನಸ್ಸಿನ ಬೆಂಬ[illegible] ವಿದೆ. ಬಂಗಾಳ ಸಿಂಧಗಳಲ್ಲೂ ಇದೆ[illegible] ಪರಿಸ್ಥಿತಿ. ಈ ಪ್ರಾಂತ್ಯಗಳಲ್ಲಿ ಸ್ಥಾಪಿ[illegible] ಲ್ಪಟ್ಟ ಲೀಗ್ ಮಂತ್ರಿಮಂಡಲದ ಪ್ರ[illegible] ರದಿಂದ ಒಂದುವೇಳೆ ಅಲ್ಲಿನ ನಗರಗಳ[illegible] ಲೀಗಿಗೆ ಸ್ವಲ್ಪ ಬೆಂಬಲವಿದೆಎಂದು ತೋ[illegible] ಬಂದರೂ ಹಳ್ಳಿನಾಡಿನ ಕಡೆಯ ಜನತೆಯ[illegible] ಮೇಲೆ ಯಾವ ಪರಿಣಾಮವೂ ಆಗಿಲ್ಲ[illegible] ಕೆಲವುಸಲ ಸಿಂಧ್ ಬಂಗಾಳಗಳು ಲೀ[illegible] ನ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯ[illegible] ತ್ನಿಸಿವೆ. ಲೀಗು ಪಾಕಿಸ್ತಾನ್ ನಿರ್ಣಯ[illegible] ವನ್ನು ಮಾಡಿದಮೇಲೆಯೇ ಲೀಗಿನಿಂ[illegible] ದೂರಹೋಗಲು ನಡೆದ ಈ ಪ್ರಯ[illegible] ಗಳು ಗಮನೀಯವಾದವು. ಇವು ಪಾ[illegible] ಸ್ತಾನ ತತ್ವವಿಚಾರದಲ್ಲಿ ಭೇದಾಭಿಪ್ರಾಯ ಸೂಚಕ ಚಿಹ್ನೆಗಳೆಂದೂ ಹೇಳಬಹುದು.

(ಆನೇ ಪುಟಕ್ಕೆ ಮುಂದುವರಿದಿದೆ)

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯ ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು.

(1) ನಿಮ್ಮ ಕೂಡೆ ಮಾಲುಗಳ ಅತ್ಯಧಿಕ ಸಂಚಯವಿದ್ದಲ್ಲಿ ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ. ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ.

(2) ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ. ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು.

(3) ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಪರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಾಧ್ಯವಾಗಬಹುದು.

(4) ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವಿಯೋ—ಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ. ಇಲ್ಲವಾದರೆ ಪ್ರೇರಣೆಗಳಿಗೆ ಅಥವಾ ಸಮಾಜದ ಒತ್ತರಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು

ಸ್ಥಾಪಿತ: 1906.

ಕೆನರಾ ಬ್ಯಾಂಕ್ ಲಿಮಿಟೆಡ್.

Canara Bank Ltd.

ಚಳಿಗಾಲದೊಳಗೆ — ಜರ್ಮನಿಯ ಪತನ

ಚೀನಿಯರ ಚಿಂತಾಜನಕ ಸ್ಥಿತಿ

ಕಾಲದ ಸದ್ಯದಲ್ಲಿ ಪ್ರಾರಂಭವಾಗಲಿದೆ. ಚಳಿಗಾಲವೆಂದರೆ ಯೂರೋಪಿನ ಹಲವು ಪ್ರದೇಶಗಳಲ್ಲಿ ಹಿಮ ಬೀಳುವ ಸಮಯ. ಹಿಮದ ದೆಸೆಯಿಂದ ಅನೇಕ ಅನಾನುಕೂಲತೆಗಳು ಉಂಟಾಗುವ ಸಮಯವದು. ಅದರಲ್ಲೂ ಸಂಗ್ರಾಮಸನ್ನಾಹಿತರಾದ ಜನರಿಗಂತೂ ಅದರಿಂದ ಅನೇಕ ಕಷ್ಟ ತೊಂದರೆಗಳು ಉಂಟಾಗುತ್ತವೆ. ರಶ್ಯ ದೇಶದ ಕಠಿಣ ಶೀತದ ನಿಮಿತ್ತ ಜರ್ಮನರು ಅನೇಕ ಸಂಕಷ್ಟಗಳನ್ನು ಅನುಭವಿಸಿದರು. ರಶ್ಯಾದಲ್ಲಿ ಜರ್ಮನಿಯ ಸೋಲಿಗೆ ಕೆಂಪುಸೇನೆಯ ಧೀರತನವು ಹೆಚ್ಚಿನಮಟ್ಟಿಗೆ ಕಾರಣವಾಗಿದ್ದರೂ ರಶ್ಯಾ ಯೋಧರೊಡನೆ ಹಿಮದ ಸಹಕಾರವು ಆಗಿದ್ದಿತು. ಶೀತಕಾಲದ ಕಠಿಣತೆಯಿಂದ ಜರ್ಮನರು ಕಷ್ಟ ತೊಂದರೆಗಳನ್ನು ಅನುಭವಿಸಿ, ಕೊನೆಗೆ ಅವರ ಸಹನಾಶಕ್ತಿಯು ಅನೇಕ ಪ್ರಸಂಗಗಳಲ್ಲಿ ಕೆಟ್ಟುಹೋಗಿತ್ತು.

ಹಾಗೆನೆ ಮುಂಬರುವ ಚಳಿಗಾಲದಲ್ಲಿ ಮಿತ್ರರಿಗೆ ಸ್ವಲ್ಪ ಕಷ್ಟಗಳನ್ನು ಅನುಭವಿಸಬೇಕಾಗಬಹುದು. ಟ್ಯಾಂಕು ಇತ್ಯಾದಿ ಯುದ್ಧ ವಾಹನಗಳು ಚಳಿಗಾಲದಲ್ಲಿ ಸರಿಯಾಗಿ ನಡೆಯವು. ಆದುದರಿಂದ ಚಳಿಗಾಲದ ಉದಯವಾಗುವವರೆಗೆ ಮಿತ್ರರನ್ನು ತಡೆದು, ನಂತರ ಚಳಿಯ ದೆಸೆಯಿಂದ ಸಿಕ್ಕುವ ಅವಕಾಶ, ವಿರಾಮಗಳನ್ನು ಉಪಯೋಗಿಸಿ, ತನ್ನ ಸ್ಥಿತಿಯನ್ನು ಸುಧಾರಿಸಿಕೊಂಡು ಮಿತ್ರರನ್ನು ಮತ್ತೊಮ್ಮೆ ಹೆಚ್ಚಿನ ಹುರುಪಿನಿಂದ ಎದುರುಗೊಳ್ಳಬಹುದೆಂಬ ಅಭಿಪ್ರಾಯದಿಂದ ಜರ್ಮನರು ಪಶ್ಚಿಮ ರಣರಂಗದಲ್ಲಿ ಸಿಗ್‌ಫ್ರಿಡ್ ಕೋಟೆಯ ಬಳಿ ಮಿತ್ರರಿಗೆ ತಮ್ಮ ಕೈಲಾದ ಮಟ್ಟಿಗೆ ಯತ್ನಗಳನ್ನು ಒಡ್ಡಿ ತಡೆಯನ್ನು ಕೊಟ್ಟಿರುವರು. ಜರ್ಮನರಿಗೆ ಚಳಿಗಾಲದ ಅವಕಾಶವು ದೊರಕದ ಹಾಗೆ ಮಿತ್ರರು ಏಕಾಗ್ರಚಿತ್ತದಿಂದ ಭೀಕರ ತರದಲ್ಲಿ ಹೋರಾಡುತ್ತಿರುವರು. ಚಳಿಗಾಲದೊಳಗೆ ಜರ್ಮನ ಪತನವಾಗಬೇಕೆಂಬ ಉದ್ದೇಶದಿಂದ ಮಿತ್ರರು ಅತ್ಯಂತ ಚೇತನಗೊಂಡಿರುವರು.

"ಹೋರಾಟವೇನೊ ಕಠಿಣವಿರಬಹುದು. ಆದರೆ ನಮಗೆ ಜಯವು ಖಂಡಿತ" ಎಂಬುದಾಗಿ ಮಿತ್ರರ ಸೇನಾಧಿಪತಿ ಜನರಲ್ ಐಸನ್‌ಹೋವರ್ ರವರ ಅಭಿಪ್ರಾಯವಿರುತ್ತದೆ. ರಣರಂಗದಲ್ಲಿ ಕಳೆದ ವಾರದಲ್ಲಿ ನಡೆದ ಹೋರಾಟಗಳನ್ನು ನೋಡಿದರೆ ಜರ್ಮನರು ಕಾಲ ವಿಳಂಬವಾಗುವಂತೆ ಮಿತ್ರರನ್ನು ತಡೆದಿಡುವ ಯತ್ನಗಳನ್ನು ಮಾಡುತ್ತಿರುವುದು ವ್ಯಕ್ತವಾಗುತ್ತದೆ. 500 ಮೈಲು ಉದ್ದಕ್ಕೆ ಹರಡಿಕೊಂಡಿರುವ ಪಶ್ಚಿಮ ರಂಗದಲ್ಲಿ ನಾಲ್ಕು ವಿಭಾಗಗಳಾಗಿ, ಈ ವಿಭಾಗಗಳಲ್ಲಿ ಅತಿ ಕಠಿಣ ತರದ ಹೋರಾಟವು ನಡೆಯುತ್ತದೆ. ಈ ಎಲ್ಲಾ ವಿಭಾಗಗಳಲ್ಲಿ ಜರ್ಮನರು ತಮ್ಮಲ್ಲಿರುವ ಉತ್ತಮ ರಣೋಪಾಯಗಳನ್ನು ಉಪಯೋಗಿಸುತ್ತಿರುವರು.

ಕೆನೆಡಿಯನ್ ದಳಗಳು ಇಳಿದ ಬೆಲ್ಜಿಯಮ್ ಡಚ್ ಪ್ರದೇಶದಲ್ಲಿ ಮತ್ತು ಅದರ ಸಮೀಪದ ಪ್ರದೇಶದಲ್ಲಿ ಅವರ ಮುನ್ನಡೆಯು ಮಂದಗತಿಯಾಗಿದ್ದರೂ, ಅವುಗಳು ಮಹತ್ತಾದ ಯತ್ನಗಳನ್ನು ಹಾಕಿ ಹೋರಾಡುತ್ತಿರುವರು. ಈ ಪ್ರದೇಶದಲ್ಲಿ ಶಿಬಿರ ಕಟ್ಟಿದ ಜರ್ಮನರು ಅಲ್ಲಿಂದ ಪಲಾಯನ ಗೈಯ್ಯಲು ಹಡಗ, ವಿಮಾನ, ಇತ್ಯಾದಿ ವಾಹನಗಳ ಏರ್ಪಾಡುಗಳನ್ನು ಮಾಡುತ್ತಿರುವುದನ್ನು ನೋಡಿದರೆ, ಅಲ್ಲಿ ಜರ್ಮನರು ಇನ್ನು ಹೆಚ್ಚು ಸಮಯ ಹೋರಾಡಲಾರರೆಂದು ತಿಳಿಯಬೇಕಾಗಿದೆ. ಈ ಪ್ರದೇಶದಲ್ಲಿ ಜರ್ಮನರ ಪತನವು ಖಂಡಿತವೆಂದೆ ನೆನಸಬೇಕಾಗಿಯದೆ. ಹಾಗೆನೆ ಆಚ್ಯಾನ್ ವಿಭಾಗದಲ್ಲಿ ಕದನದ ಮಹಾ ಜ್ವಾಲೆಯು ಉಂಟಾಗಿರುತ್ತದೆ. ಮಿತ್ರರ ವಿಮಾನಗಳು, ಮತ್ತು ಚಲಿಸುವ ಉಕ್ಕಿನ ಕೋಟೆಗಳು ಇಲ್ಲಿ ಧಾರಾಳ ಸಂಖ್ಯೆಯಲ್ಲಿ ಉಪಯೋಗಕ್ಕೆ ತರಲಾದ್ದರಿಂದ ಅಲ್ಲಿ ಜರ್ಮನರ ಬಿಗುವು ಸ್ವಲ್ಪ ಕಡಿಮೆಯಾಗುವ ಸ್ಥಿತಿಯು ಉಂಟಾಗಿರುತ್ತದೆ. ಈ ಪ್ರದೇಶದ ಜರ್ಮನರ ನಗರಗಳು, ಬೋಂಬುಗಳ ಹೊಯ್ದಾಟದಿಂದ ಲಯ ಹೊಂದುತ್ತಿವೆ. ಮನೆ ಮಠಗಳು ಧಾರಾಳ ಸಂಖ್ಯೆಯಲ್ಲಿ ಕುಸಿದು ಬಿದ್ದು ನಾಗರೀಕರು ಆಶ್ರಯಗಳಿಲ್ಲದೆ ಅಲೆದಾಡುವ ಪ್ರಸಂಗವು ಬಂದೊದಗಿದೆಯಾದರೂ ಜರ್ಮನರ ಸ್ಥೈರ್ಯದಲ್ಲಿ ಕುಂದು ಬಂದ ಚಿಹ್ನೆಗಳು ಕಾಣಿಸುವುದಿಲ್ಲ. ಅವರು ಇನ್ನೂ ಹೆಚ್ಚಿನ ಯತ್ನಗಳನ್ನು ಹೂಡಿ ಮಿತ್ರರಿಗೆ ಹಾಕಿದ್ದ ತಡೆಯನ್ನು ಇನ್ನೂ ಬಲವಂತಗೊಳಿಸುತ್ತಿರುವರು. ಅವರು ಕರೆದು ಬರುವಂತೆ

ಮಿತ್ರರಿಂದ ಕಳುಹಿಸಲಾದ ಎಚ್ಚರಿಕೆಗಳು ನಿರ್ಲಕ್ಷಿಸಲಾಗಿವೆ. ಈ ಪ್ರದೇಶದಲ್ಲಿ ಪ್ರಳಯವು ತಾಂಡವ ನೃತ್ಯವನ್ನು ಆಡುತ್ತಿದೆ. ಜರ್ಮನರು ಅಪಾರ ಪ್ರಾಣಹಾನಿ, ನಷ್ಟಕಷ್ಟಗಳಿಗೆ ಒಳಗಾಗಿರುವರು. ಆದರೂ ಅವರು ಕದಡದೆ ಹೋರಾಡುತ್ತಿರುವುದನ್ನು ನೋಡಿದರೆ ಜರ್ಮನರು ಅತ್ಯಂತ ಸ್ಫೂರ್ತಿಯಿಂದ ಪಶ್ಚಿಮ ರಂಗದಲ್ಲಿ ಹೋರಾಡುತ್ತಿರುವರೆಂದು ಯಾರಿಗೂ ಮನವರಿಕೆಯಾಗದೆ ಇರದು. ಈ ತರದ ಸ್ಫೂರ್ತಿಯು ಸಿಗ್‌ಫ್ರಿಡ್ ಕೋಟೆ ಸಾಲಿನ ನಾಲ್ಕು ವಿಭಾಗಗಳಲ್ಲೂ ಜರ್ಮನರ ಹೋರಾಟದಲ್ಲಿ ಕಂಡುಬಂದಿರುತ್ತದೆ. ಆರ್ನೆಮ್ ವಿಭಾಗದಲ್ಲಿ ಹದಗೆಟ್ಟುಹೋದ ಸ್ಥಿತಿಯನ್ನು ಸುಧಾರಿಸಿಕೊಳ್ಳುವರೆ ಮಿತ್ರಪಕ್ಷದ ಕೆನೆಡಿಯನ್ ದಳದ ನಾಯಕರಾದ ಜನರಲ್ ಡೆಂಪ್ಸೆರವರಿಗೆ ಈ ವರೆಗೆ ಸಾಧ್ಯವಾಗಲಿಲ್ಲ. ಇಲ್ಲೂ ಕೂಡ ಜರ್ಮನರು ಬಹಳ ಸ್ಫೂರ್ತಿಯಿಂದ ಕೂಡಿದ ತಡೆಯನ್ನು ಹಾಕಿ ಹೋರಾಡುತ್ತಿರುವರು. ಹೀಗೆ ಒಂದು ವಾರದಿಂದ ಮಿತ್ರರ ಮಹತ್ತರ ಯತ್ನಗಳು ನಡೆದಾಗ್ಯೂ ಜರ್ಮನ ವ್ಯೂಹದಲ್ಲಿ ಬಿರುಕುಗಳನ್ನು ಮಾಡಿ ಒಳನಡೆಯುವ ಕಾರ್ಯದಲ್ಲಿ ಮಿತ್ರರಿಗೆ ಹೆಚ್ಚಿನ ಯಶಸ್ಸು ದೊರಕಿದಂತೆ ಕಾಣುವುದಿಲ್ಲ. ಒಟ್ಟಿನಲ್ಲಿ ಪಶ್ಚಿಮರಂಗದಲ್ಲಿ ಮಿತ್ರರು ಜರ್ಮನಿಯ ಅತ್ಯಂತ ಉಗ್ರತರದ ತಡೆಯ ಎದುರು ಹೋರಾಡುತ್ತಿರುವರೆಂದು ಹೇಳಬಹುದು. ಯಾವದಾದರು ಒಂದು ಕಡೆಯಲ್ಲಿ ದೊಡ್ಡದೊಂದು ಬಿರುಕು ದೊರಕಿಸಿ, ಮಿತ್ರರು ಅಲ್ಲಿ ಮುನ್ನುಗ್ಗಿದ ವಿನಹ ಪಶ್ಚಿಮರಂಗದಲ್ಲಿ ಮಿತ್ರರ ನಡೆಯಲ್ಲಿ ಪ್ರಗತಿಯು ಉಂಟಾಗಿದೆ ಎಂದು ಹೇಳಬಹುದು.

ಈಗ ಪಶ್ಚಿಮರಂಗದಿಂದ ಪೂರ್ವರಂಗಕ್ಕೆ ತೆರಳುವ. ರಶ್ಯನರಿಗೆ ಬಾಲ್ಟಿಕ್ ಪ್ರದೇಶದಲ್ಲಿ ಕೆಲವು ಜಯಗಳು ದೊರಕಿವೆ. ಲಿಥುನಿಯಾದಿಂದ ಕೆಂಪು ಸೇನೆಯು ಮೆಮಲ್ ನಗರದ ಕಡೆಗೆ ಮುಂದು ಸಾಗುತ್ತಿದೆ. ಮೂರು ವಾರಗಳ ಹೋರಾಟ ನಡೆದ ಹಾದಿಯಲ್ಲಿರುವ ಲಟ್ವಿಯಾದ ರಾಜಧಾನಿಯಾದ ರಿಗಾ ನಗರವು ರಶ್ಯನರು ವಶಪಡಿಸಿಕೊಂಡಿರುವರು. ಹಾಗೆನೆ ಪೂರ್ವಪ್ರಸ್ಸಿಯಾದ ತೀರದಲ್ಲಿ ರಶ್ಯನರಿಗೆ ಒಳ್ಳೆ ಲಾಭದಾಯಕ ಸ್ಥಾನಗಳು ದೊರಕಿವೆ. ಪೂರ್ವ ಪ್ರಸ್ಸಿಯಾದ 200 ಮೈಲು ಉದ್ದದ ಗಡಿಯಲ್ಲಿ ಮಹತ್ತರವಾದ ಅಭಿಯೋಗಗೋಸ್ಕರ ರಶ್ಯನರ ಮಹಾ ಸಿದ್ಧತೆಗಳು ಆಗಿವೆ. ಇಲ್ಲೂ ಜರ್ಮನರ ರಕ್ಷಣ ವ್ಯೂಹದಲ್ಲಿ ಬಿರುಕನ್ನು ಸಾಧಿಸುವುದು ಸುಲಭವೆನಿಸದು. ಪಶ್ಚಿಮದಲ್ಲಿ ಒಡ್ಡಿದಂತೆ ಈ ಗಡಿಯಲ್ಲೂ ಜರ್ಮನರ ಪ್ರಬಲ ತಡೆಯು ಇದ್ದೇ ಇರುವುದು. ಎಲ್ಲಾ ಕಡೆಗಳಿಂದ ಜರ್ಮನಿಯ ಮೇಲೆ ಅತ್ಯಧಿಕವಾದ ಒತ್ತಡವು ಹಾಕಲ್ಪಟ್ಟರೆ ಆಗ ಮಾತ್ರ ಉತ್ತಮ ಪರಿಣಾಮಗಳು ಉಂಟಾಗಬಹುದು. ಜರ್ಮನಿಯ ಸೋಲು ತ್ವರಿತಗತಿಯಲ್ಲಿ ಉಂಟಾಗಬಹುದು. ಜರ್ಮನಿಯ ದಕ್ಷಿಣ ದಿಕ್ಕಿನಲ್ಲಿ ಕೆಂಪು ಸೇನೆಯು ಬರಿ 0 ಮೈಲು ದೂರದಲ್ಲಿ ಹಂಗೇರಿಯ ಮೈದಾನ ಪ್ರದೇಶದಲ್ಲಿ ಮುಂದೆ ಧಾವಿಸುತ್ತಿರುವುದು. ಹಂಗೇರಿಯ ಪ್ರತಿನಿಧಿಗಳು ಸಂಧಾನಗೋಸ್ಕರ ಮಿತ್ರರ ಕಡೆಗೆ ಹೊರಟಿರುವರಾಗಿ ವಾರ್ತೆಯು ಬಂದಿರುತ್ತದೆ. ಇಟಲಿ ಮತ್ತು ಗ್ರಿಸ್ ಪ್ರದೇಶಗಳಲ್ಲಿ ಪ್ರಾಮುಖ್ಯವೆನಿಸುವ ಘಟನೆಗಳ್ಯಾವವೂ ಜರುಗಿದುದಾಗಲಿಲ್ಲ. ಗ್ರೀಸ್ ದೇಶದ ಎಥೆನ್ಸ್ ಪಟ್ಟಣದಲ್ಲಿ ಮಿತ್ರರ ಪ್ರವೇಶವಾಗಿದೆ ಎಂದು ವಾರ್ತೆಯು ಬಂದಿರುತ್ತದೆ. ಬಾಲ್ಕನ್ ಪ್ರದೇಶದಲ್ಲಿ ಕೆಂಪು ಸೇನೆಗೆ ಬಲವಾದ ಹಿಡಿತವು ದೊರಕಿರುತ್ತದೆ. ಈ ಕಾರಣದಿಂದ ಈ ಮೊದಲು ಅಭಿಯೋಗ ನಡೆಸಿ, ಶಿಬಿರ ಕಟ್ಟಿದ ಜರ್ಮನರು ತಮ್ಮ ವಶವಿರುವ ಪ್ರದೇಶಗಳನ್ನು ತ್ಯಜಿಸಿ, ಜರ್ಮನಿಯ ಕಡೆ ಪಲಾಯನ ಮಾಡುತ್ತಿರುವರು. ಯುಗೊಸ್ಲೆವಿಯದಲ್ಲಿ ಅಲ್ಲಿನ ಸ್ವತಂತ್ರ ನಾಯಕ ಟಿಟೊವಿನ ದಳದೊಡನೆ ಕೂಡಿ, ಆಸ್ಟ್ರಿಯದ ಮೇಲೆ ಮುತ್ತಿಗೆ ನಡೆಯಿಸಲು, ಕೆಂಪು ಸೇನೆಯು ಮೆಲ್ಲ ಮೆಲ್ಲನೆ ಮುಂದೆ ನಡೆಯುತ್ತಿರುವುದು. ಅದರಲ್ಲೂ ಗ್ರೀಸಿನಲ್ಲಿ ಮೊನ್ನೆ ಇಳಿದ ಮಿತ್ರರ ಇತರ ದಂಡುಗಳಿಗೆ ಯಶಸ್ಸು ದೊರಕುತ್ತಾ ಇರುವುದನ್ನು ಕಂಡರೆ, ಮಿತ್ರರು ಆಸ್ಟ್ರಿಯಾ ಮಾರ್ಗವಾಗಿ ಜರ್ಮನಿಯ ಒಳನುಗ್ಗುವ ದಿನವು ಅತಿ ದೂರದಲ್ಲಿಲ್ಲವೆಂದು ತಿಳಿಯಬೇಕಾಗಿಯದೆ.

ಚರ್ಚಿಲರು ರಶ್ಯಕ್ಕೆ ತೆರಳಿ, ಚಳಿಗಾಲದೊಳಗೆ ಜರ್ಮನಿಯನ್ನು ಸೋಲಿಸುವ ಯತ್ನಗಳ ಕುರಿತು ವಿಚಾರವಿನಿಮಯ ನಡೆಯಿಸಿ ಹಿಂದೆ ಬಂದಿರುವರು. ಪೂರ್ವರಂಗದಲ್ಲಿ ರಶ್ಯವು ಮಹಾ ಹೋರಾಟಕ್ಕೆ ಸಿದ್ಧತೆಗಳನ್ನು ಮಾಡಬೇಕಾಗಿಯೂ, ಪಶ್ಚಿಮದಲ್ಲಿ ಅಮೆರಿಕ, ಬ್ರಿಟನ್ ಇತ್ಯಾದಿ ಮಿತ್ರ ಪಕ್ಷದವರು ಅದೇ ತರದಲ್ಲಿ ದುಡಿಯುವರೆಂದೂ, ಚಳಿಗಾಲದೊಳಗೆ ಹಿಟ್ಲರನನ್ನು ಸೋಲಿಸಬೇಕೆಂದು ದೃಢನಿರ್ಧಾರವಾಗಿರುತ್ತದೆ. ಈ ಕಾರಣದಿಂದ, ಮುಂದಕ್ಕೆ ಹೋರಾಟವು ಇನ್ನೂ ಭೀಕರವಾಗಬಹುದು. ಸಿಗ್‌ಫ್ರಿಡ್ ವ್ಯೂಹದ ಬಳಿ ಮತ್ತು ಪೂರ್ವ ಪ್ರಸ್ಸಿಯಾ ಗಡಿಯಲ್ಲಿ ರಕ್ತದ ಕಾಲುವೆಗಳೆ ಹರಿಯಬಹುದು. ಇದು ಹಿಟ್ಲರ್ ಪ್ರಭುತ್ವದ ಕೊನೆಯ ಯತ್ನವೊ ಎಂದು ನೋಡಲಿದೆ.

ಶಾಂತ ಸಾಗರದ ಪ್ರದೇಶದಲ್ಲಿ ಅಮೆರಿಕನ್ ಮತ್ತು ಬ್ರಿಟಿಷ್ ನೌಕಾ ಬಲವು ಅಧಿಕ ತರದಲ್ಲಿ ಬೆಳೆದುದು ಕಂಡು ಬರುತ್ತಿದೆಯಾದರೂ ಚೀನಾದಲ್ಲಿನ ಪರಿಸ್ಥಿತಿಯು ಇನ್ನೂ ಚಿಂತಾಜನಕವಾಗಿಯೆ ಉಳಿದಿರುತ್ತದೆ. ಶಾಂತ ಸಾಗರದ, ಜಪಾನಿಯರಿಂದ ಈ ಮೊದಲು ಹಿಡಿಯಲಾದ ಅನೇಕ ದ್ವೀಪಗಳನ್ನು ಅಮೆರಿಕನರು ವಶಪಡಿಸಿಕೊಂಡಿರುವರು. ಜಪಾನ್ ದ್ವೀಪದ ಮತ್ತು ಫರ್ಮೊಸಾದ ಮಧ್ಯವಿರುವ ದ್ವೀಪಗಳ ಮೇಲೆ ಅಮೆರಿಕನ ಅಭಿಕ್ರಮ ನಡೆದಿರುತ್ತದೆ. ಈ ಅಭಿಕ್ರಮದಿಂದ ಜಪಾನಿಯರ ಅನೇಕ ಯುದ್ಧ ಹಡಗುಗಳು ವಿಮಾನಗಳು ಲಯ ಹೊಂದಿವೆ. ಇಲ್ಲಿ ನಡೆದ ಅತಿ ವಿಸ್ಮಯದ ಸಂಗತಿಯೆಂದರೆ ಜಪಾನಿಯರ ಅಧೀನದಲ್ಲಿರುವ ಫರ್ಮೊಸಾ ದ್ವೀಪದ ಮೇಲೆ ಒಂದು ಸಾವಿರ ವಿಮಾನಗಳು ಭಾಗ ವಹಿಸಿ ನಡೆದ ಹಲ್ಲೆ. ಈ ಪ್ರಸಂಗದಲ್ಲಿ ಅಮೆರಿಕನ್ ವಿಮಾನ ಪಡೆ ಮತ್ತು ಜಪಾನಿ ವಿಮಾನ ಪಡೆಗಳೊಳಗೆ ಕಠಿಣ ತರದ ವಾಯು ಕಾಳಗವೊಂದು ನಡೆದು ಬಿಟ್ಟಿತು. ಈ ಕಾಳಗದಲ್ಲಿ ಜಪಾನಿಯರಿಗೆ ಮಹತ್ತಾದ ನಷ್ಟಗಳು ಸಂಭವಿಸಿವೆ. ಫಿಲಿಪ್ಪಾನ್ ದ್ವೀಪದ ಸಮೀಪ ಶಿಬಿರ ಕಟ್ಟಿದ ಜನರಲ್ 'ಮೆಕ್ ಆರ್ಥರರು ಫಿಲಿಫ್ಪಾನ್ ಸಮೂಹದ ಲ್ಯೂಜೊನ್ ದ್ವೀಪವನ್ನು ಹಿಡಿದಿರುವರು. ಜಪಾನಿನ ಅಂತರ್ಯ ರಕ್ಷಣವ್ಯೂಹದ ಸಮೀಪದಲ್ಲಿ ಇದೊಂದು ಉಪಯುಕ್ತ ಲಾಭವೆಂದೆ ತಿಳಿಯಬೇಕಾಗಿದೆ. ಆದರೆ ಚೀನದಲ್ಲಿ ಸ್ಥಿತಿಯು ಸಮಾಧಾನಕರವಾಗಿರುವುದಿಲ್ಲ. ಚೀನದಲ್ಲಿ ನಡೆಯುತ್ತಿರುವ ಜಪಾನಿಯರ ಅಭಿಯೋಗವು ತಡೆಯಲಾಗಿದೆ ಎಂದು ಹಿಂದೆ ವಾರ್ತೆಗಳು ಬಂದಿದ್ದರೂ ಅಲ್ಲಿನ ಕ್ವಾಂಗ್ಸಿ ಪ್ರದೇಶದಲ್ಲಿ ಜಪಾನಿಯರು ಯಶಸ್ವಿಯಾಗಿ ಮುನ್ನಡದ ವಾರ್ತೆಗಳು ಈಗ ವರದಿಯಾಗಿವೆ. ಚೀನದ ಈ ಪ್ರದೇಶದಲ್ಲಿ (ಈ ಪ್ರದೇಶವು ಜಪಾನಿನ ತೀರದಲ್ಲಿದ್ದು ಜಪಾನಿನ ಮೇಲೆ ಅಭಿಕ್ರಮಕ್ಕೆ ಅನುಕೂಲ ಸೋಪಾನವಾಗಿರುವುದು.) ಮಿತ್ರರಿಗೆ ಅವಕಾಶ ದೊರೆಯದಂತೆ ಮಾಡುವುದೆ ಜಪಾನಿಯರ ಉದ್ದೇಶವಾಗಿರುವುದು. ಪೌರ್ವಾತ್ಯದ ಯುದ್ಧವು ಬಹಳ ದೀರ್ಘ ಅವಧಿಯ ತನಕ ನಡೆಯದೆ ಶೀಘ್ರದಲ್ಲೆ ಕೊನೆಗೊಳ್ಳಬೇಕಾದರೆ ಜಪಾನಿಯರನ್ನು ಈ ಪ್ರದೇಶದಿಂದ ಹೊರದೂಡಿ ಮಿತ್ರರು ಅಲ್ಲಿ ಬಲವಾಗ ತಳವೂರುವುದು ಅತಿ ಅವಶ್ಯವಿದೆ. ಈ ತರದ ಪರಿಸ್ಥಿತಿಯು ಉಂಟಾಗಬೇಕಾದರೆ ಚೀನಕ್ಕೆ ಮಿತ್ರರ ಅತ್ಯಧಿಕ ಸಹಾಯವೂ ಚೀನದಲ್ಲಿ ಮಿತ್ರರ ಪ್ರವೇಶವು ಆಗುವುದು ಅತಿ ಅಗತ್ಯವಿದೆ. ಚೀನದ ಸ್ಥಿತಿಯು ಕಠಿಣವಿದೆ. ಆದರೆ ಅದನ್ನು ಸುಧಾರಿಸಬಹುದು. ಎಂದು ಚೀನದಲ್ಲಿ ಪ್ರವಾಸಗಯ್ದು ಸ್ಥಿತಿಗತಿಯನ್ನು ಪ್ರತ್ಯಕ್ಷ ನೋಡಿದ ಅಮೆರಿಕನ್ ಅಧಿಕಾರಿಗಳೊಬ್ಬರ ಅಭಿಪ್ರಾಯವಿರುತ್ತದೆ. ಈ ಸಮಯದಲ್ಲಿ ಚೀನಕ್ಕೆ ಮಿತ್ರರಿಂದ ಯುದ್ಧ ಶಸ್ತ್ರ ಸಿಡಿ ಮದ್ದು ಅಧಿಕ ರಾಶಿಯಲ್ಲಿ ಹೋಗುವುದು ಅತಿ ಅವಶ್ಯವಿದೆ ಎಂದು ಅವರಿಂದ ಹೇಳಲಾಗಿದೆ. ಬರ್ಮಾ ರಂಗದಲ್ಲಿ ಅರಕಾನ್ ಬಳಿ ಮತ್ತೊಮ್ಮೆ ಒಳ್ಳೆ ನುಗ್ಗಲು ಮಾಡಿದ ಜಪಾನರ ಪ್ರಯತ್ನಗಳು ನಿಷ್ಫಲಗೊಳಿಸಲಾಗಿವೆ. ಈ ಮಾರ್ಗವು ಚೀನಕ್ಕೆ ಬೇಕಾದ ಶಸ್ತ್ರಗಳನ್ನು ಕಳುಹಿಸುವರೆ ಅತ್ಯಂತ ಅನುಕೂಲ ತರದ್ದು ಆಗಿರುವುದರಿಂದ ಮಿತ್ರರು ಇಲ್ಲಿಂದ ಜಪಾನನ್ನು ಹಿಂದಕ್ಕೆ ಓಡಿಸಿದುದು ವಿಶೇಷ ಸಂಗತಿ ಎಂದು ತಿಳಿಯಬೇಕಾಗಿದೆ. ಬರ್ಮಾದಲ್ಲಿ ಟಿಡ್ಡಿಮ್ ಪ್ರದೇಶದಲ್ಲಿ ಮಿತ್ರರಿಗೆ ಒಳ್ಳೆಪ್ರಗತಿಯು ದೊರಕಿದ್ದು, ಹಾದಿಯ

(೪ನೇ ಪುಟಕ್ಕೆ ಮುಂದುವರಿದಿದೆ)

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st July, 1944.

LIABILITIES	Rs. As.Ps.	ASSETS	Rs. As.Ps.
1. Paid up Capital	14,14,580- 0- 0	1. Office Buildings, safes, furniture, books, etc.	91,792- 3- 6
2. Reserves	4,12,548- 3- 1	2. Advances	53,58,139- 7- 0
3. Due to Bankers	40,499- 5- 8	3. Investments on Govt. Securities etc.	23,94,472-13-10
4. Deposits	78,79,479- 2- 1	4. Bills for collection	4,55,475- 2- 5
5. Bills for collection	4,55,475- 2- 5	5. Other Assets	91,527- 3- 4
6. Branch Adjustments	1,99,631- 8-10	5. Cash on hand and with Bankers in Current A/cs	23,75,816-10-10
7. Other liabilities and undisbursed profits	3,65,010- 2-10		
Total	1,07,67,223-8-11	Total	1,07,67,223- 8-11

ಸ್ವದೇಶಾಭಿಮಾನಿ

ತಾರೀಖು 20—10—1944

ಹಿಂದೂದೇಶದ ಕುರಿತು ಚರ್ಚಿಲ್ಲರ ಧೋರಣೆ

ಅಮೇರಿಕದ ದ ಪ್ರೊಗ್ರೆಸ್ಸಿವ್ ಎಂಬ ಪತ್ರಿಕೆಯಲ್ಲಿ ಮೇಲಿನ ವಿಷಯದ ಕುರಿತು, ಅಲ್ಲಿನ ವಿಸ್ ಕೊನ್ ಸಿನ್ ವಿಭಾಗದ ಸೆನೆಟರಾದ (ಪ್ರತಿನಿಧಿಗಳು) ರೊಬರ್ಟ್ ಎಮ್, ಲೊಫೊಲೆಟ್ ಎಂಬವರು ಅಧ್ಯಕ್ಷ ರೂಸ್ ವೆಲ್ಟರನ್ನು ಉದ್ದೇಶಿಸಿ ಒಂದು ಲೇಖನವನ್ನು ಬರೆದಿರುವರು.

ಚರ್ಚಿಲ್ಲರ ನಿರಂಕುಶ ಪ್ರಭುತ್ವತರದ ಹಂಚಿಕೆಗಳಿಂದಲೂ ಮತ್ತು ರಶ್ಯದ ಪ್ರಭುತ್ವವನ್ನು ಬೆಳೆಯಿಸುವ ಸ್ಟೈಲೀನನ ಯತ್ನಗಳಿಂದಲೂ ಅಮೆರಿಕವು ದೂರ ಸರಿಯಬೇಕಾದ ಸಂದಿಗ್ಧ ಸಮಯವು ಈಗ ಬಂದಿರುತ್ತದೆ ಎಂಬುದಾಗಿ ಈ ಲೇಖನದ ಮುಖ್ಯ ಅಭಿಪ್ರಾಯವಿರುತ್ತದೆ.

ಅಮೆರಿಕದ ಭಹೀರ್ ವ್ಯವಹಾರ ಧೋರಣವು ಅತಿ ಪ್ರಾಮುಖ್ಯ ಸಮಸ್ಯೆಗಳ ಕುರಿತು ಮೌನವನ್ನಾಚರಿಸುವುದನ್ನು ಬಿಟ್ಟುಬಿಡುವಂತೆ ಮೇಲಿನ ಸೆನೆಟರರು ಅಧ್ಯಕ್ಷ ರೂಸ್ ವೆಲ್ಟರಿಗೂ, ಈಗ ಚುನಾವಣೆಗೆ ನಿಂತ ಡೂವೆರಿಗೂ ಮನವಿಮಾಡಿಕೊಂಡಿರುವರು.

"ನಮ್ಮ ಮಿತ್ರರ ನಿರಂಕುಶ ಪ್ರಭುತ್ವ ಮತ್ತು ರಾಷ್ಟ್ರೀಯ ತರದ ಯೋಜನೆಗಳಿಗೆ ನಾವು ಒಪ್ಪಿಗೆ ಕೊಟ್ಟಿರುವವೆಂದು, ಹಿಂದೂದೇಶದಲ್ಲೂ, ಸೋವಿಯಟ್ ರಶ್ಯದಲ್ಲೂ ನಮ್ಮ ಕುರಿತು ದೂರಿನ ಕೂಗು ಎದ್ದಿರುತ್ತದೆ. ಜಗತ್ತಿನ ವ್ಯವಹಾರಗಳಲ್ಲಿ ಎಲ್ಲಾ ರಾಷ್ಟ್ರಗಳು ಪರಸ್ಪರ ಸಹಕಾರದಿಂದ ವರ್ತಿಸುವವರಾಗಬೇಕೆಂದೂ ಮಾತುಕತೆಗಳು ನಡೆದಾಗ್ಯೂ, ಯುರೋಪದ ತಮ್ಮ ಸಮಸ್ಯೆಗಳಲ್ಲಿ ನಾವು ಕೈಯಿಕ್ಕಬಾರದಾಗಿ ರಶ್ಯನರು ವ್ಯಕ್ತಮಾಡಿರುವರು. ಹಾಗೆನೆ ಬ್ರಿಟಿಷರು ತಮ್ಮ ಸಾಮ್ರಾಜ್ಯದ ಸಮಸ್ಯೆಗಳಲ್ಲಿ ನಮ್ಮ ಪ್ರವೇಶವಾಗಬಾರದಾಗಿ ವಿಶದಪಡಿಸಿರುವರು. ರಶ್ಯಕ್ಕೂ ಪೋಲೆಂಡಿಗೂ ನಡುವೆ ಇರುವ ವ್ಯಾಜ್ಯವನ್ನು ತೀರ್ಮಾನಿಸುವ ಕುರಿತು ನಾವು ಮುಂದೆ ಬಂದಾಗ, ನಾವು ನಮ್ಮ ಕೆಲಸವೆಷ್ಟಿದೆಯೊ ಅಷ್ಟು ಮಾತ್ರ ಮಾಡಿ ಸುಮ್ಮನೆ ಕುಳಿತಿರಬೇಕು ಎಂದು ನಯುನುಡಿಗಳಲ್ಲಿ ನಮಗೆ ತಿಳಿಸಲಾಯಿತು."

"ಹಿಂದೂದೇಶಕ್ಕೆ ತೆರಳಿದ ನಮ್ಮ ರಾಯಭಾರಿಗಳು, ಹಿಂದೂದೇಶದ ಕುರಿತು ಬ್ರಿಟಿಷರ ವರ್ತನದಲ್ಲಿ ಮಾರ್ಪಾಟು ಆಗಬೇಕೆಂದು ಸೂಚಿಸಿದಾಗ, ಬ್ರಿಟಿಷರು ನಮ್ಮ ಮೇಲೆ ರೋಷವೆದ್ದು, ಆ ರಾಯಭಾರಿಗಳಾದ ವಿಲಿಯಮ್ ಫಿಲಿಪ್ಸರನ್ನು ಆ ಹುದ್ದೆಯಿಂದ ನಿವೃತ್ತಗೊಳಿಸಬೇಕೆಂದೂ ಕೇಳುವಂತಾಯಿತು."

ಜಾಗತಿಕ ಶಾಂತಿಯ ಕುರಿತು ಪ್ರಭುತ್ವದ ರಾಷ್ಟ್ರಗಳಲ್ಲಿ ನವಜಾಗ್ರತಿಯು ಉಂಟಾಗಬೇಕೆಂದೂ, ಜಾಗತಿಕ ಶಾಂತಿಯ ರಕ್ಷಣೆಯು ಆಗಬೇಕಾದರೆ, ಈ ಜಗತ್ತಿನ ರಾಷ್ಟ್ರಗಳಲ್ಲಿ ಪರಸ್ಪರ ವಿಚಾರ ವಿನಿಮಯಕ್ಕಾಗಿ ಒಂದು ವ್ಯವಸ್ಥೆ ಆಗಾಗ ಬರುತ್ತಿರುವ ಸಮಸ್ಯೆಗಳ ಕುರಿತು ಜಗತ್ತಿನ ರಾಷ್ಟ್ರಗಳ ಅಭಿಪ್ರಾಯಗಳಿಗೆ ಬೆಳಕಿಗೆ ಬರಲು ಅನುಕೂಲವಾಗುವಂತೆ ಒಂದು ಜಾಗತಿಕ ಚರ್ಚಾಸಂಘ, ರಾಷ್ಟ್ರಗಳಲ್ಲಿ ಪರಸ್ಪರ ಸಹಕಾರ ಮತ್ತು ಸೌಹಾರ್ದಯಿರುವುದು, ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಶಿಕ್ಷಣ ಪ್ರಚಾರ ಮತ್ತು ಅದರ ಬೆಳವಣಿಗೆ, ರಾಷ್ಟ್ರಗಳಲ್ಲಿ ಸಮಾನತ್ವ, ರಾಷ್ಟ್ರಗಳಲ್ಲಿ ವರ್ಣಬೇಧಗಳಿಂದ ಉಂಟಾಗುವ ತಿರಸ್ಕಾರದೃಷ್ಟಿ ತ್ಯಾಗ, ಕೈಗಾರಿಕೆಗಳ ಬೆಳವಣಿಗೆಗೆ ಒಂದು ಮಿತಿ, ಉತ್ತಮತರದ ಸೌಮ್ಯವಾದದ ಬೆಳವಣಿಗೆ, ನಿರಕುಂಶ ಪ್ರಭುತ್ವದ ತ್ಯಾಗ, ಎಲ್ಲಾ ರಾಷ್ಟ್ರಗಳಲ್ಲಿ ಎಲ್ಲರಿಗೂ ಉದ್ಯೋಗ ಒದಗಿಸಿ ಕೊಡುವುದು, ಮುಖ್ಯವಾಗಿ ತರುಣರು ನಿರುದ್ಯೋಗಿಗಳಾಗದಂತೆ ಮಾಡುವ ವ್ಯವಸ್ಥೆ, ಇತ್ಯಾದಿಗಳಾಗಬೇಕೆಂದು ಲೋಕದ ತಜ್ಞರಿಂದ ಹೊರಡಿಸಿದ ಲೇಖ ಮತ್ತು ಅಭಿಪ್ರಾಯಗಳಲ್ಲಿ ವ್ಯಕ್ತವಾಗಿರುತ್ತದೆ.

ಅಮೆರಿಕದ ಸೆನೆಟರರ ಮೇಲಿನ ಅಭಿಪ್ರಾಯಗಳನ್ನು ನೋಡಿದರೆ ಜಾಗತಿಕ ಶಾಂತಿಯ ಸ್ಥಾಪನೆಯ ಕುರಿತು ಸ್ಥಿತಿಯು ನೆಟ್ಟಗಿರುವುದಿಲ್ಲ ಎಂದು ನೆನಸಬೇಕಾಗಿಯದೆ.

ಎಂದಿನವರೆಗೆ ಹಿಂದೂದೇಶವು ಪರದಾಸ್ಯದಲ್ಲೆ ಇರಬೇಕಾಗುವುದೊ, ಎಲ್ಲಿಯವರೆಗೆ ಹಿಂದೂದೇಶದ ಕುರಿತು ಚರ್ಚಿಲ್ಲರ ಸಂಕುಚಿತ ಮನೋಭಾವವು ವಿಕಾಸ ಹೊಂದುವುದಿಲ್ಲವೊ, ಅಲ್ಲಿಯ ತನಕ ಜಾಗತಿಕ ಶಾಂತಿಸಾಧನೆಯಾಗದೆಂದೆ ತಿಳಿಯಬೇಕಾಗಿಯದೆ.

ಜಗತ್ತು ಸಮಹಿತಗಳುಳ್ಳ, ಎಲ್ಲಾ ವಿಚಾರಗಳಲ್ಲೂ ಸಮಾನತೆಯುಳ್ಳ ರಾಷ್ಟ್ರಗಳ ಒಂದು ಮಹಾ ಸಂಯೋಗವಾಗಬೇಕು,—ಅಲ್ಲದಿದ್ದರೆ ಪ್ರಳಯಕ್ಕೆ ಒಳಗಾಗಬೇಕು, ಎಂಬುದಾಗಿ ಎಚ್. ಜಿ. ವೆಲ್ಸರ ಅಭಿಪ್ರಾಯದ ಪ್ರಭಾವವು ಪ್ರಭುತ್ವದ ರಾಷ್ಟ್ರಗಳ ಮೇಲೆ ಆಗಲೆಂದು ನಮ್ಮ ಹಾರ್ಧಿಕೆ.

ಕ್ರಿಸ್ತನಂತೆ ಕಾಣುವ ಗಾಂಧೀಜಿ

ಒಂದು ದಿನ ಬೆಳಗ್ಗೆ ಗಾಂಧೀಜಿಯವರು ತಮ್ಮ ನಿತ್ಯಕ್ರಮದಂತೆ ಸಂಚಾರಕ್ಕೆ ಹೋದಾಗ ಅವರ ಬಳಿ ಒರ್ವ ಮಹಿಳೆಯು ತನ್ನ ಇಬ್ಬರು ಮಕ್ಕಳ ಸಮೇತ ಬಂದಿದ್ದಳು. ಅವಳು ಹಿಡಕೊಂಡ ಮಗು ಅಳಲಾರಂಭಿಸಿತು. ಎಷ್ಟು ಸಂತೈಸಿದರೂ ಕೇಳಲಿಲ್ಲ. ಕಡೆಗೆ ಗಾಂಧೀಜಿಯವರು ತನ್ನ ಮುದಿ ಕೈಗಳನ್ನು ಎತ್ತಿ ಮಗುವನ್ನು ಎತ್ತಿಕೊಂಡು ಮುದ್ದಿಸಿದಾಗ ಮಗುವು ಅಳು ನಿಲ್ಲಿಸಿ ಮಹಾತ್ಮರ ಹಲ್ಲಿಲ್ಲದ ನಗುವಿಗೆ ಪ್ರತಿ ನಗಾಡಲಾರಂಭಿಸಿತು.

ಇಷ್ಟು ಹೊತ್ತಿಗೆ ಹಿಂದಿನಿಂದ ನೆಡೆದು ಬರುತಿದ್ದ ಇನ್ನೊಂದು ಮಗು ಓಡಿ ಬಂದು ಮಹಾತ್ಮರ ಕೈಹಿಡಿದು ಮಾರ್ಗದ ಬದಿಯಲ್ಲಿ ಬೆಳೆದ ಹೂವೊಂದನ್ನು ತೋರಿಸಿ "ಬಾಪೂ ಈ ಹೂವು ಎಷ್ಟು ಚಂದವಿದೆ" ಎಂದಿತು. "ನಿಜವಾಗಿಯೂ ಚಂದವಿದೆ" ಎಂದರು ಬಾಪೂ. ಆಗ ಒಂದು ನಾಯಿ ಎದುರಿಗೆ ಬಂತು. ಅದನ್ನು ನೋಡಿ ಮಗು "ಬಾಪೂ, ಬಾಪೂ, ನಾಯಿಗೆ ಒಂದು ಬಾಲವಿದೆ!" ಎಂದಿತು. "ಹೌದೊ?" ಎಂದು ಮಗುವಿನ ಮುಗ್ಧತನದಿಂದ ಪ್ರಶ್ನಿಸಿದರು ಬಾಪೂ. ಒಂದು ಕ್ಷಣ ಬಿಟ್ಟು ಮತ್ತೆ ಗಾಂಧೀಜಿ ಮಗುವಿನೊಂದಿಗೆ "ಅವರೆ ನಿನಗೂ ಒಂದು ಬಾಲವಿದೆಯೋ?" ಎಂದು ಕೇಳಿದರು. ಅದಕ್ಕೆ ಮಗು ನಗಾಡುತ್ತಾ "ನೀನು ಇಷ್ಟು ದೊಡ್ಡ ಮುದುಕನಾಗಿದ್ದರೂ ಮನುಷ್ಯರಿಗೆ ಬಾಲವಿಲ್ಲವೆಂದು ನಿನಗೆ ಗೊತ್ತಿಲ್ಲ. ನೀನೊಬ್ಬ ಹೆಡ್ಡ" ಎಂದಾಗ ಗಾಂಧೀಜಿ ಸಮೇತ ಹತ್ತಿರ ಇದ್ದವರೆಲ್ಲರೂ ಗೊಳ್ಳನೆ ನಗಾಡಿದರಂತೆ.

ಅಂದಿನ ಆ ನಗಾಟದಲ್ಲಿ ಭಾಗವಹಿಸಿದ ಒರ್ವ ಮಹಸೀಯರು ಹೀಗೆ ಬರೆಯುತ್ತಾರೆ—ಮಕ್ಕಳೊಂದಿಗೆ ಗಾಂಧೀಜಿ ಮಗುವಿನಂತಿರುತ್ತಾರೆ. ತಮ್ಮ ಎಪ್ಪತ್ತು ಚಿಲ್ಲರೆ ವಯಸ್ಸನ್ನು ಮರೆತೇಬಿಡುತ್ತಾರೆ. ಜಗತ್ತಿನ ಮತ್ತು ಭಾರತದ ಶ್ರೇಯಸ್ಸಿಗೆ ಹೋರಾಡುವ ಮಹಾತ್ಮ ಸಣ್ಣ ಕೂಸಂತೆ ಬದಲಾಗುತ್ತಾರೆ. ಇದನ್ನು ಕಂಡಾಗ ನನಗೆ ಪಲೇಸ್ತೀನ್‌ದ ಮಾರ್ಗದಲ್ಲಿ ಮಕ್ಕಳ ಗುಂಪಿನಲ್ಲಿ ನಿಂತ ಯೇಸುಕ್ರಿಸ್ತನ ವರ್ಣನೆಯು ನೆನಪಿಗೆ ಬರುತ್ತದೆ. ಅವನ ಪ್ರೇಮಪೂರ್ಣ ಕಣ್ಣುಗಳು ಬಾಪೂವಿನಲ್ಲಿಯೂ ಕಾಣಬಹುದು."

ಸುಬ್ರಮಣ್ಯ

ಜಾನುವಾರು ಸಂತೆ— ದೀಪೋತ್ಸವ ಸಮಯ ಕುಳಕುಂದದಲ್ಲಿ ಜಾನುವಾರ ಜಾತ್ರೆ ಒಕ್ಟೋಬರ್ 31ರಿಂದ ನವೆಂಬರ್ 14ರ ತನಕ ಜರಗುವುದು. ಈ ಸಂತೆಗೆ ಮೈಸೂರು ಕಡೆಯಿಂದ ಜಾನುವಾರ ತರಿಸಬೇಕಾದರೆ ಅಲ್ಲಿನ ಆಯಾ ಜಿಲ್ಲಾ ಮೆಜಿಸ್ಟ್ರೇಟರ ಅನುಮತಿ ಪಡೆಯಬೇಕೆಂದು ಮೈಸೂರ ಸರಕಾರ ಪ್ರಕಟನೆ ಇದೆ. ಆ ಕಡೆಯಿಂದ ವ್ಯಾಪಾರಕ್ಕೆ ಜಾನುವಾರು ತರಿಸಲಿಚ್ಛಿಸುವವರು ಕ್ಲಪ್ತ ಸಮಯದಲ್ಲಿ ಮೈಸೂರು ಪ್ರಾಂತ್ಯದ ಸಂಬಂಧಪಟ್ಟ ಮೆಜಿಸ್ಟ್ರೇಟರಿಗೆ ಬರಕೊಳ್ಳತಕ್ಕದ್ದು

ಉಡುಪಿ

ಇಲ್ಲಿಯ ವ್ಯಾಪಾರಿಗಳಾದ ಶ್ರೀ| ಗೋವಿಂದ ರಾಯ ಪೈ ಮತ್ತು ಶ್ರೀ| ರಾಮಕೃಷ್ಣ ನಾಯ್ಕ ಇವರು ವಿಪರೀತ ಹೆಚ್ಚು ಬೆಲೆಗೆ ವಸ್ತುಗಳನು ಮಾರಿದ್ದಕ್ಕೆ ತಲಾ ಒಂದು ಸಾವಿರದ ಜುಲ್ಮಾನೆಗೆ ಒಳಗಾಗಿರುವರು.

ಶಿರೂರು ಮಠದ ಶ್ರೀ ಸ್ವಾಮಿಜಿಯವರಿಗೆ ಅಯೋಧ್ಯೆಯ ಸಂಸ್ಕೃತ ಕಾರ್ಯಾಲಯದವರು 'ದ್ವೈತವೇದಾಲಂಕಾರ' ಬಿರುದನ್ನು ಕೊಟ್ಟು ಸನ್ಮಾನಿಸಿರುತ್ತಾರೆ.

ಕಾಸರಗೋಡು

ಹರಿ ಜನರ ಸಪ್ತಾಹ

ಕಾಸರಗೋಡಿನಲ್ಲಿ ಕಳೆದ ತಾ. ೧ರಿಂದ ೭ ತನಕ ಹರಿಜನ ಬಂಧುಗಳ ವಿವಿಧ ಕಾರ್ಯಕ್ರಮಗಳ ಭಜನಾ ಸಪ್ತಾಹವು ಜರುಗಿತು. ಸಭೆ ಮೆರವಣಿಗೆಗಳೂ ಇದ್ದುವು.

(ಹಿಂದೀ ಪುಟದಿಂದ)

ಮೂಲಕ ಚೀನಾಕ್ಕೆ ಬೇಕಾದ ಸಹಾಯವನ್ನು ಕಳುಹಿಸಿಕೊಡಲು, ಪರ್ವತ ಶ್ರೇಣಿಗಳ ಮಧ್ಯದಲ್ಲಿ ಒಂದು ರಸ್ತೆಯ ರಚನೆಯು ಆಗಿರುತ್ತದೆ.

ಪೌರ್ವಾತ್ಯದಲ್ಲಿ ಸದ್ಯದಲ್ಲೆ ಮಿತ್ರರು ಮಹತ್ವದ ಹೋರಾಟ ಚಟುವಟಿಕೆಗಳನ್ನು ನಡೆಯಿಸುವವರಿದ್ದಾರೆ. ಈ ಚಟುವಟಿಕೆಗಳಿಗೆ ಹಿಂದೂದೇಶವು ಒಂದು ತಳಹದಿಯಾಗಿ ಮಾಡಲಾಗಿದೆ. ಅಂದರೆ ಹಿಂದೂದೇಶದ ಕೈಗಾರಿಕೆ, ಇತ್ಯಾದಿಗಳು ಇನ್ನೂ ಹೆಚ್ಚು ಚೇತರಿಸಿಕೊಳ್ಳುವವು. ಈ ಯುದ್ಧಯತ್ನಗಳಿಂದ ಪ್ರಭಾವಿತವಾದ ಸನ್ನಿವೇಶಗಳು ಹಿಂದೂದೇಶದಲ್ಲಿ ಉಂಟಾಗದೆ ನಿಲ್ಲವು. ಈ ಕುರಿತು ಇಂಡಿಯಾ ಸರಕಾರವು ಅತ್ಯಂತ ಲಕ್ಷ್ಯವನ್ನು ತೋರಿಸುತ್ತಿರುವುದು.

ಕೋಮಲ ಸೌಂದರ್ಯ ನಿಮಗೆ ಇರಬೇಕೆ

ನಿಮಗೆ ಶುದ್ಧವಾದ ಮತ್ತು ಕಳಾಗದ ಕೋಮಲ ಚರ್ಮವಿರಬೇಕೆ? ಈ ಹೊರ ಸೌಂದರ್ಯ ಚಿಹ್ನೆಯು ಅಂತರಿಕ ಆರೋಗ್ಯದಿಂದ ಉಂಟಾಗುತ್ತದೆ. ಹಾಗಾಗ ಬೇಕಾದರೆ, ಪ್ರತಿದಿನ ರಾತ್ರಿ ಎರಡು ಬೈಲ್‌ಬೀನ್ಸುಗಳನ್ನು ಸೇವಿಸಿರಿ. ಬೈಲ್ ಬೀನ್ಸು ಶುದ್ಧ ವನಸ್ಪತಿಯಿಂದಲೇ ತಯಾರಿಸಿದುದು. ಅದು ಶರೀರವನ್ನು ಸುಸ್ಥಿತಿಯಲ್ಲಿಡುವುದು. ರಕ್ತವನ್ನು ಶುದ್ಧಗೊಳಿಸುವುದು. ದಿನಂಪ್ರತಿಯ ಅಶುದ್ಧಾಹಾರವನ್ನು ಹೊರಹಾಕುವುದು ಹೀಗೆ ಪೂರ್ಣ ಆರೋಗ್ಯ ಮತ್ತು ಸೌಂದರ್ಯವನ್ನುಂಟುಮಾಡಿ ಶರೀರಕ್ಕೆ

ಕೋಮಲತೆಯನ್ನುಂಟುಮಾಡುವುದು.

ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್ ಬೀನ್ಸನ್ನು ಬಾಟ್ಲಿ ಒಂದನ್ನು ಒಂದು ರೂಪಾಯಿ ಬೆಲೆಗೆ ಮಾರುವರು.

BILE BEANS

ಬೈಲ್ ಬೀನ್ಸು ನಿಮಗೆ ಇಮ್ಮಡಿ ಸೌಂದರ್ಯ ಕೊಡುವುದು.

ಮಾಲ್ಟಿನ್

ಟಿ

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.

ದೊರಕುವ ಸ್ಥಳ:—ಬಾಲಸಾಹಿತ್ಯ ಮಂಡಳಿ ಲಿಮಿಟೆಡ್, ಮಂಗಳೂರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಈ ಸಲದ ಬೆಳೆ ಅರ್ಧ

ತಾ. ೧೪ರಲ್ಲು ಕಲೆಕ್ಟರರ ಆಫೀಸಿನಲ್ಲಿ ದ. ಕ. ಜಿಲ್ಲಾ ಫುಡ್ ಕೌನ್ಸಿಲ್ ಇದರ ಸಭೆ ಸೇರಿತ್ತು. ಜಿಲ್ಲೆಯಲ್ಲಿನ ಬಟ್ಟ ಗದ್ದೆಗಳು ಶೇಕಡಾ ೫೦ ರಷ್ಟು ಬೆಳೆಯನ್ನು ಕಮ್ಮಿ ಕೊಟ್ಟಿವೆ. ಈಸಲದ ಹವಾನಿಕಾರಕ ಋತು ಪರಿಸ್ಥಿತಿಯೇ ಇದಕ್ಕೆ ಕಾರಣ. ತತ್ಪರಿಣಾಮವಾಗಿ ಈ ವರ್ಷ ಜಿಲ್ಲೆಯ ಆಹಾರ ಪರಿಸ್ಥಿತಿಯೂ ಅತೀ ವಿಷಮಾವಸ್ಥೆಯದಾಗಿ ಸಂಭವಿಸಬಹುದು" ಎಂಬ ಈ ವಿಷಯವನ್ನು ಕೌನ್ಸಿಲು ಸರಕಾರದ ಗಮನಕ್ಕೆ ತಂದಿದೆ.

ಆಹಾರ ಸಾಮಗ್ರಿ-ಸಂಗ್ರಹದ ಚಟುವಟಿಗೆಗಳಿಗಾಗಿ ಸರಕಾರದವರು ಸ್ಪೆಶಲ್ ಪೋಲಿಸ್ ಪಡೆಯೊಂದನ್ನು ಮಂಜೂರು ಮಾಡಿದಕ್ಕೆ ಕೌನ್ಸಿಲು ಕೃತಜ್ಞತೆ ಸೂಚಿಸುತ್ತಿದೆ.

ಗೇಣು ಗದ್ದೆಯ ವ್ಯಾಪಾರದ ಮೇಲೆ ಹಾಕಲ್ಪಟ್ಟ ನಿರ್ಬಂಧಗಳ ಕುರಿತು ಪರ್ಯಾಲೋಚಿಸಲು ಕೌನ್ಸಿಲಿನವರು ಶ್ರೀಯುತರಾದ ಶಿವರಾವ್, ಚಾವ್ನಾಡ್, ರಾಮರಾವ್, ಸವೂರ್ ಮತ್ತು ಎ. ಬಿ. ಶೆಟ್ಟಿ ಇವರಿಂದ ಕೂಡಿದ ಒಂದು ಸಮಿತಿ ನಿರ್ಮಿಸಿರುವರು.

ಸದ್ಯದಲ್ಲೇ ಬೆಲ್ಲದ ಬೆಲೆಯು ನಿಯಂತ್ರಿಸಲ್ಪಡುವುದು. ಅದರ ದಾಸ್ತಾನನ್ನು ವಶಪಡಿಸಿಕೊಳ್ಳಲೂ ಪ್ರಯತ್ನಗಳು ನಡೆಯುವುವು.

ಹೆಲ್ತ್ ಆಫೀಸರ್

ಮುನ್ಸಿಪಲ್ ಹೆಲ್ತ್ ಆಫೀಸರರಾಗಿದ್ದ ಡಾ। ಸುಬ್ರಾಯ ಬಾಳಿಗರು ಕಲ್ಲಿಕೋಟೆಗೆ ವರ್ಗಾಯಿಸಲ್ಪಟ್ಟರೆಂದು ಪ್ರಕಟವಾಗಿತ್ತು. ಈಗ ಪುನಃ ಶ್ರೀ ಬಾಳಿಗರು ಇಲ್ಲೆ ತಮ್ಮ ಹುದ್ದೆಯನ್ನು ಮುಂದುವರಿಸುವಂತಾಗಿದೆ ಎಂದೂ ತಿಳಿದು ಬರುತ್ತದೆ. ನಗರದ ಆರೋಗ್ಯದ ವಿಚಾರದಲ್ಲಿ ಅದ್ವಿತೀಯ ಶ್ರದ್ಧೆವಹಿಸುವವರೆಂದೆನಿಸಲ್ಪಟ್ಟ ಈ ನಗರ ಆರೋಗ್ಯಾಧಿಕಾರಿಗಳು ನಿವೃತ್ತರಾಗಲಿಕ್ಕಿರುವ ಕೆಲವು ತಿಂಗಳುಗಳ ತನಕ ನಗರದ ಸೇವೆಯಲ್ಲಿರುವಂತಾದುದು ಅತ್ಯಂತ ತೃಪ್ತಿಯ ವಿಷಯವಾಗಿದೆಯೆಂದು ವಾರ್ತೆ.

ಕಾಯಿಪಲ್ಯ ಬೆಲೆ

ನಗರದಲ್ಲಿ ತರಕಾರಿ ಕಾಯಿಪಲ್ಯಗಳ ಬೆಲೆ ತಡೆಯಿಲ್ಲದೆ ಏರುತ್ತಿರುವುದರಿಂದ ಬಡನಾಗರೀಕರಿಗೆ ಬಹಳ ತೊಂದರೆಯುಂಟಾಗಿದೆ. ಎಂದು ತಿಳಿದುಬರುತ್ತದೆ. ನಗರ ಸಭೆಯವರು ಇವುಗಳ ಬೆಲೆಯನ್ನು ನಿಯಂತ್ರಿಸುವರೆಂಬ ವದಂತಿ ಕೆಲವು ವಾರಗಳ ಹಿಂದೆ ಪ್ರಕಟವಾಗಿತ್ತು. ಇನ್ನಾದರೂ ಈ ವಿಚಾರದಲ್ಲಿ ಯೋಗ್ಯ ಕಾರ್ಯಕ್ರಮವು ಕೈಕೊಳ್ಳುವರೆಂದು ಅಪೇಕ್ಷಿಸಲಾಗಿದೆ.

ಶ್ರೀ ಕಾಶೀಮಠಾಧಿಪತಿಗಳು

ಶ್ರೀ ಕಾಶೀಮಠ ಸಂಸ್ಥಾನಾಧೀಶ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಜಿಯವರು ಇದೇ ಮುಂಬರುವ ಶ್ರೀ ವಿಠೋಬ ದೇವಳದ ಸಪ್ತಾಹ ಭಜನೋತ್ಸವ ಕಾಲದಲ್ಲಿ ಮಂಗಳೂರಿಗೆ ಚಿತ್ತೈಸಬಹುದೆಂದು ತಿಳಿದುಬರುತ್ತದೆ. ಶ್ರೀ ಸ್ವಾಮಿಯವರ ಶಿಷ್ಯಂದಿರಾದ ಸುಧೀಂದ್ರ ತೀರ್ಥ ಸ್ವಾಮಿಜಿಯವರು ಕರೆತರಲ್ಪಡುವರು. ಋತಿವರ್ಯರುಗಳು ನಗರದಲ್ಲಿ ಏರ್ಪಡಿಸುವ ಮೆರವಣಿಗೆಯಲ್ಲಿಯೂ ವಿಠೋಬ ದೇವರ ಪೂಜೆಪುರಸ್ಕಾರಗಳಲ್ಲೂ ಭಾಗವಹಿಸಿ ಕೆಲವು ಗಂಟೆಗಳ ತನಕ ಇಲ್ಲಿಇದ್ದು ಸ್ವಸ್ಥಾನ ಮೂಲ್ಕಿಗೆ ಹಿಂತೆರಳುವರಾಗಿ ವದಂತಿ ಇದೆ. ಈ ಸಮಯದಲ್ಲಿ ಶ್ರೀ ಸ್ವಾಮಿಜಿಯ ಶಿಷ್ಯ ಸಮಾಜ ವೃಂದದವರು ಸ್ವಾಮಿಜಿಯವರ ಸ್ವಾಗತ ಏರ್ಪಾಡುಗಳಿಗೆ ಆತಂಕ ಬರದಂತೆ ಸಹಕರಿಸಬೇಕಾಗಿ ಸ್ವಾಗತ ಕಾರ್ಯಕರ್ತರೊಬ್ಬರ ವಿನಂತಿ ಇದೆ.

ಶಿಷ್ಯರಿಗೆ ಶಿಕ್ಷಣ

ಕಾಶೀ ಮಠದ ಉತ್ತರಾಧಿಕಾರಿಗಳಾದ ಶ್ರೀ ಸುಧೀಂದ್ರರು ಸದ್ಯದಲ್ಲೇ ೫ ವರ್ಷದ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ತೆರಳಲಿರುವರು. ಗೌಡ ಸಾರಸ್ವತ ಸಮಾಜಕ್ಕೆ ಸೇರಿದ ಅಲ್ಲಿನ ಕೆಲವು ಮಹನೀಯರು ತರುಣ ಸ್ವಾಮಿಜಿಯವರ ಈ ಶಿಕ್ಷಣ ಏರ್ಪಾಡಿನಲ್ಲಿ ಸಹಾಯ ಸಹಕಾರವೀಯುವುದಾಗಿ ಭರವಸೆಯಿತ್ತಿರುವರು. ಸಮಾಜದ ದೇವಳದ ಆಡಳಿತಗಳ ಕಡೆಯಿಂದಲೂ ಈ ಯೋಜನೆಗೆ ಪ್ರೋತ್ಸಾಹವಿದೆ ಎಂದೂ ವದಂತಿ ಇದೆ. ಅಂತೂ ಹಿರಿಯ ಸ್ವಾಮಿಜಿಯವರ ಈ ನಿರ್ಣಯವು ಸ್ತುತ್ಯವಾದುದು.

ಮೆಡಿಕಲ್ ಆಫೀಸರರ ಫಿರ್ಯಾದು

ನಗರದ ವೆನ್ ಲೊಕ್ ಆಸ್ಪತ್ರೆಗೆ ಬಿಸ್ಕುಟು, ಸಿಹಿತಿಂಡಿ, ಹಾಲು ಮುಂತಾದವುಗಳನ್ನು ಸಪ್ಲೈ ಮಾಡುವ ಕಂಟ್ರಾಕ್ಟು ಇದ್ದ ಶ್ರೀ ವಾಮನ ಪ್ರಭು ಎಂಬವರ ನೌಕರ ಬಿ. ಪ್ರಭಾಕರ ಎಂಬಾತನೂ ಅದೇ ಆಸ್ಪತ್ರೆಯ ಗುಮಾಸ್ತ ಚಂದ್ರಶೇಖರ ರಾವ್ ಎಂಬಾತನೂ ಪರಸ್ಪರ ಸಹಕಾರದಿಂದ ಹೆಚ್ಚಿಗೆ ದರದ ಬೆಲೆಯ ಪಟ್ಟಿಗಳನ್ನು ಮಂಜೂರಾತಿಪಡಿಸಿಕೊಳ್ಳಲು ಪ್ರಯತ್ನಪಟ್ಟರೆಂದು ಮುಖ್ಯ ಮೆಡಿಕಲ್ ಆಫೀಸರರು ಪೋಲಿಸ್ ಫಿರ್ಯಾದಿಕೊಟ್ಟಿರುವರೆಂದು ತಿಳಿದುಬರುತ್ತದೆ.

ದ. ಕ. ಜಿ. ಸೆಂಟ್ರಲ್ ಕೊ-ಒಪರೇಟಿವ್ ರಖಂ ಸ್ಟೋರ್ಸ್, ಲಿಮಿಟೆಡ್, ಇವರ ಪಡಕೊಳ್ಳುವ ಡಿಪೋಗಳು

ಇವರ ಡಿಪೋಗಳು ಕುಂದಾಪುರ ತಾಲೂಕಿನಲ್ಲಿ ೧೫ ಇವೆ. ಉಡುಪಿ ತಾಲೂಕು—೧೮. ಕಾರ್ಕಳ—೧೪. ಪುತ್ತೂರು—೨೨. ಕಾಸರಗೋಡು ೧೮. ಮಂಗಳೂರು—೨೭. ಹೊಸದುರ್ಗ ಸಬ್ ತಾಲೂಕಿನಲ್ಲಿ—೧೫.

ಹೀಗೆ ಜಿಲ್ಲೆಯಲ್ಲಿ ಈ ಸಂಸ್ಥೆಯವರ ಒಟ್ಟು ೧೨೯ ಡಿಪೋಗಳು ಇವೆ.

೧॥ ಪಾಲು ಸಕ್ಕರೆ ಹಿಂದುಗಳಿಗೆ

ದೀಪಾವಳಿಯನಿಮಿತ್ತ ನಗರದ ರೇಶನ್ ಕ್ಷೇತ್ರದಲ್ಲಿನ ಹಿಂದುಗಳಿಗೆ ರೇಶನ್ ಪ್ರಮಾಣಕ್ಕಿಂತ ೧॥ ಪಾಲು ಹೆಚ್ಚು ಸಕ್ಕರೆ ದೊರೆಯುವಂತೆ ಏರ್ಪಡಿಸಿರುವುದು ಸ್ತುತ್ಯ. ಈ ತಿಂಗಳ ಆಖೇರುವರೇಗೆ ಈ ಏರ್ಪಾಡು ಇರುತ್ತದೆ.

ಕ್ರಿಕೆಟ್ ಪಂದ್ಯಾಟ

ಸ್ಥಳೀಯ ಕೆನರಾ ಹೈಸ್ಕೂಲಿನ ಜೂನಿಯರ್ ಟೀಮಿಗೂ ಗಣಪತಿ ಹೈಸ್ಕೂಲಿನ ಟೀಮಿಗೂ ನಡೆದ 'ಕಪ್ ಪಂದ್ಯಾಟ'ದಲ್ಲಿ ಕೆನರಾ ಶಾಲೆಯವರೇ ವಿಜಯಿಗಳಾಗಿ ಬಹುಮಾನಕ್ಕೆ ಅರ್ಹರಾದರು. ಇತ್ತಂಡದವರೂ ಮುಖ್ಯವಾಗಿ ವಿಜಯಿ ಕಡೆಯ ಆಟಗಾರರು ತಮ್ಮ ಆಟ. ಕುಶಲತೆಯಿಂದ ಪ್ರೇಕ್ಷಕರನ್ನು ರಂಜನೆಗೊಳಿಸಿದರು. ಒಬ್ಬ ವಿದ್ಯಾರ್ಥಿ ಬಸಿಕ್ಸರ್ ಹೊಡೆದಿರುವನು,

ಪುನಃ ಪ್ಲೇಗು ಚಿಹ್ನೆ?

ಕೆಲವು ದಿನಗಳ ಹಿಂದೆ ನಗರದಲ್ಲಿ ಒಂದು ಪ್ಲೇಗು ಮರಣವಾಗಿದೆ ಎಂದು ತಿಳಿದುಬರುತ್ತದೆ. ನಗರ ಆರೋಗ್ಯಾಧಿಕಾರಿಗಳು ಪ್ರತಿಬಂಧಕ ಏರ್ಪಾಡುಗಳನ್ನು ನಿರ್ವಹಿಸುತ್ತಿರುವರು.

ಸ್ಮಾರಕ ಏರ್ಪಾಡು

ಕಲ್ಲಿಕೋಟೆಯಲ್ಲಿ ಕೆಲವು ದಿನಗಳ ಹಿಂದೆ ಮಡಿದ ಸುವಿಚಾರನಂದ ಸ್ವಾಮಿಜಿ ಎಂಬವರ ಸ್ಮರಣೆಯನ್ನು ಚಿರಗೊಳಿಸುವ ಏರ್ಪಾಡನ್ನು ಪರ್ಯಾಲೋಚಿಸಲು ಅವರ ಅನುಯಾಯಿಗಳ ಸಭೆಯೊಂದು ಕೆನರಾ ಹೈಸ್ಕೂಲಿನಲ್ಲಿ ಜರಗಿ ದಿವಂಗತರ ಸ್ಮಾರಕವೊಂದನ್ನು ನಿರ್ಣಯಿಸಿದರು. ಡಾ। ಎಂ ಕೇಶವ ಪೈಯವರೇ ಮುಂತಾದವರ ಭಾಷಣಗಳಿದ್ದವು. ದೈವಾಧೀನರಾದ ಸ್ವಾಮಿಜಿಯವರು ಸನ್ಯಾಸ ಸ್ವೀಕಾರದ ಮುಂಚಿನ ಹೆಸರು ಗಣಪತಿ ರಾವ್ ಎಂದು, ಇವರು ಅಮ್ಮೆಂಬಳ್ ಶ್ರೀನಿವಾಸ ಪೈ ಅವರ ಮಾವಂದಿರು.

ಐ. ಸಿ ಎಸ್ ಕಾಮತರು

ದಿವಂಗತ ಹುಂಡಿ ರಾಮ ಕಂಮ್ತಿಯವರ ಹಿರಿಯ ಪುತ್ರರೂ, ನಾಗಪುರದ ಫುಡ್ ಕಂಟ್ರೋಲ್ ಆಫೀಸರರೂ ಆಗಿರುವ ಶ್ರೀ ಎಚ್. ಶ್ರೀನಿವಾಸ ಕಾಮತ್ ಐ. ಸಿ. ಎಸ್. ಅವರು ತಮ್ಮ ಪಿತನ ಉತ್ತರಕ್ರಿಯೆಯನ್ನು ಮಾಡಲು ಇಲ್ಲಿಗೆ ಬಂದಿದ್ದು ಕೆಲವು ದಿನನಂತರ ಮರಳಿದರು.

ಮರ ಕಡಿವವರಿಗೆ ಎಚ್ಚರಿಕೆ

ವಿಮ್ಕೊ ಬೆಂಕಿಪೆಟ್ಟಿಕಂಪೆನಿಗೆ ಮರವೊದಗಿಸುವ ಕಂಟ್ರಾಕ್ಟರರು ಮತ್ತು ಇತರ ಮರ ಕಂಟ್ರಾಕ್ಟರರುಗಳು ಕೆಲವರು, ಕಾನೂನು ಮೀರಿ ಮರ ಕಡಿಯುವರೆಂದು ಜಿಲ್ಲಾ ಕಲೆಕ್ಟರರ ತಿಳುವಳಿಕೆಗೆ ಬಂದಿರುತ್ತದೆ. ಮರ ಕಡಿಯಲ್ಪಟ್ಟ ಗ್ರಾಮಗಳ ಬಳಿಯಲ್ಲಿನ ಕೆಲ ಗ್ರಾಮಾಧಿಕಾರಿಗಳೂ, ಪೋಲಿಸ್ ಸಿಬಂಧಿಯವರೂ ಈ ಅಕ್ರಮ ಕೃತ್ಯವನ್ನು ಕಂಡೂ ಕಾಣದಂತೆ ವರ್ತಿಸಿದರೆಂದೂ ವದಂತಿ. ಈ ವಿಚಾರದಲ್ಲಿ ಜಾಗರೂಕತೆಯ ಕಾರ್ಯಕ್ರಮವನ್ನು ತ್ವರಿಯಾಗಿ ಕೈಕೊಳ್ಳುವಂತೆ ನಾನ್ಯ ಕಲೆಕ್ಟರರು ಪೋಲಿಸ್, ರೆವಿನ್ಯೂ ಮತ್ತು ತಹಶೀಲ ಅಧಿಕಾರಿಗಳಿಗೆ ತಿಳಿಸಿರುವರೆಂದು ಒಂದು ಪ್ರಕಟಣೆ ತಿಳಿಸುತ್ತದೆ.

ತೆರಿಗೆ ಅಧಿಕಾರಿ

ಎಕ್ಸೈಜ್ ಮತ್ತು ಕಮರ್ಶಿಯಲ್ ಟೇಕ್ಸ್ ಕಮಿಶನರ್ ಮಿ। ಇ. ಸಿ. ವುಡ್ ಅವರು ಮೊನ್ನೆ ಇಲ್ಲಿಗೆ ಆಗಮಿಸಿರುವರು. ತಮ್ಮ ಇಲಾಖೆಗೆ ಸಂಬಂಧ ಪಟ್ಟ ವಿಷಯಗಳನ್ನು ಪರಿಶೀಲಿಸಿ ಅವರು ನಾಳೆ ಹಿಂದಿರುಗುವರೆಂದು ತಿಳಿದುಬರುತ್ತದೆ.

ಬತ್ತದ ಕಟ್ಟೆ

ಅವಲಕ್ಕಿ ಕೇರಿಯಲ್ಲಿನ ರಾಮಕೃಷ್ಣ ನಾಯ್ಕ, ಬೀಬೀ ಅಲಾಬಿ ಬಳಿಯ ಗೌರಿ ಮತ್ತು ಬಾಬು ನಾಯ್ಕ ಎಂಬವರು ತಮ್ಮಲ್ಲಿದ್ದ, ೩೦,೨೬ ಮತ್ತು ೭೦ ಗೋಣಿ ಬತ್ತದಸ್ಟಾಕನ್ನು ಪ್ರಕಟಪಡಿಸದಿದ್ದುದಕ್ಕೆ ಸ್ಪೇ! ಸಬ್. ಮೆಜಿಸ್ಟ್ರೇಟರ ಕೋರ್ಟಿನ ವಿಚಾರಣೆಗೆ ಒಳಪಟ್ಟಿದ್ದಾರೆ.

ಸೈನ್ಯ ಸಂಗ್ರಹಾಧಿಕಾರಿಗಳು

ಲೆಫ್ಟನೆಂಟ್ ಕರ್ನಲ್ ಇ. ಜಿ. ಪೈತಿಯನ್ ಆಡಮ್ಸ್, ಮೇಜರ್ ಎಚ್. ಸಿ. ಇಂಗಲ್ ಮತ್ತು ಫ್ಲೈಟ್ ಲೆಫ್ಟನೆಂಟ್ ಎಸ್. ಎಲ್ ಸ್ಟೋನ್ಸ್ (ಇವರು ನಮ್ಮ ಜಿಲ್ಲೆಯವರು) ಅವರು ಬೆಂಗಳೂರಿನಿಂದ ಇಲ್ಲಿಗೆ ರಿಕ್ರೂಟಿಂಗ್ ಸಂಬಂಧ ಬಂದಿದ್ದು ಕೆಲದಿನ ಇದ್ದು ಹಿಂತೆರಳಿದರು.

ಪೈಂಟ್, ವಾರ್ನಿಶ್ ಕ್ರಯಪಟ್ಟಿ

ಪೈಂಟ್ ವಾರ್ನಿಶ್ ಮೊದಲಾದವುಗಳ ಬೆಲೆ ನಿಯಂತ್ರಿಸಿದ ಕ್ರಯಪಟ್ಟಿಯನ್ನು ಇಲ್ಲಿಯ ಇಲ್ಲಿಯ ವ್ಯಾಪಾರಿಗಳು 'ಮದ್ರಾಸ್ ಹಾರ್ಡವೇರ್ (ಸಂಧಿ) ಮತ್ತು ಪೈಂಟ್ಸ್ ಮರ್ಚೆಂಟ್ಸ್ ಅಸೋಶಿಯೇಶನ್' ಇದರ ಕಾರ್ಯದರ್ಶಿಯವರಿಂದ ತರಿಸಿಕೊಳ್ಳಬಹುದು-ಹೀಗೆಂದು ಕಮರ್ಶಿಯಲ್ ಟೇಕ್ಸ್ ಅಧಿಕಾರಿಗಳು ತಿಳಿಸುತ್ತಾರೆ.

ಚಿಲ್ಲರೆಗೆ ಜುಮ್ಮಾನೆ

ಅವಶ್ಯಕತೆಗಿಂತಲೂ ಹೆಚ್ಚಾಗಿ ಚಿಲ್ಲರೆ ನಾಣ್ಯಗಳನ್ನು ಇಟ್ಟುಕೊಂಡದಕ್ಕೆ ಕಂಕನಾಡಿಯ ಬಳಿಯ ರಾಮಪ್ಪ ಪೂಜಾರಿ ಎಂಬವರಿಗೆ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ೭೫ ರೂ. ಜುಲ್ಮಾನೆ ವಿಧಿಸಿದರು.

ಮಂಜೇಶ್ವರ

ಇಲ್ಲಿ ಬರುವ ಜನವರಿ ೫ಕ್ಕೆ ೧೪ನೇ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಲನ ಜರಗುವುದು. ಈ ಸಂಬಂಧ ಶ್ರೀ ವೈಕುಂಠ ಭಕ್ತರೇ ಮೊದಲಾದ ಪುರ ಪ್ರಮುಖರು ಸೇರಿ ಸ್ವಾಗತ ಸಮಿತಿಯೊಂದನ್ನು ನಿರ್ಮಿಸಿರುವರು.

ಪುತ್ತೂರು

ಪುತ್ತೂರು ಬೋರ್ಡು ಹೈಸ್ಕೂಲಿನಲ್ಲಿ ಸ್ಥಳ ಸಂಕೋಚದ ದೆಸೆಯಿಂದ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಈಗ ಪಡುತ್ತಿರುವ ಮತ್ತು ಸದ್ಯದಲ್ಲೇ ಪಡಬೇಕಾಗಿಬರುವ ಸಂಕಷ್ಟಗಳನ್ನು ಊರವರೇ ನಿವಾರಿಸಬೇಕಾಗಿ ಬಂದಿರುವುದರಿಂದ ತಾ. ೩-೯-೪೪ರಲ್ಲಿ ಹೈಸ್ಕೂಲಿನಲ್ಲಿ ಜರಗಿದ ಮಹಾಸಭೆಯ ನಿರ್ಣಯಕ್ಕನುಸಾರವಾಗಿ ಏರ್ಪಡಿಸಿರುವ ಬಿಲ್ಡಿಂಗ್ ಕಮಿಟಿಯ ಕಾರ್ಯಕಾರಿ ಮಂಡಲಿಯವರು ಶಾಲೆಗೆ ಅತ್ಯಗತ್ಯವಾಗಿ ಬಂದಿರುವ ಕ್ಲಾಸುಗಳನ್ನು ನಡಿಸತಕ್ಕ ೫ ಕೋಣೆಗಳನ್ನೂ ಒಂದು ಸಭಾ ಮಂದಿರವನ್ನು ಒಳಕೊಂಡಿರುವ ಒಂದು ಕಟ್ಟೋಣವನ್ನೂ ಕೂಡಲೇ ಕಟ್ಟಿಸಬೇಕೆಂಬ ಉದ್ದೇಶದಿಂದ ಆ ಬಗ್ಗೆ ಕಡಿಮೆಪಕ್ಷಕ್ಕೆ ಬೇಕಾಗಿರುವ ರೂ. ೨೦,೦೦೦-ನ್ನು ಒಟ್ಟುಗೂಡಿಸುವುದಕ್ಕಾಗಿ ತಾಲೂಕಿನ ಎಲ್ಲಾ ಮಹನೀಯರಿಗೂ ಶಾಲೆಯ ಹಳೆಯ ವಿದ್ಯಾರ್ಥಿಗಳಿಗೂ ವಿನಂತಿ ಪತ್ರವನ್ನು ಕಳುಹಿಸುವುದು ಮಾತ್ರವಲ್ಲದೆ ಹಣದ ವಸೂಲಿಬಗ್ಗೆ ಆದಷ್ಟು ಮಟ್ಟಿಗೆ ಕಮಿಟಿಯ ಮೆಂಬರರು ಪುತ್ತೂರು ತಾಲೂಕಿನ ಹಳ್ಳಿಹಳ್ಳಿಗೆ ಹೋಗಿ ಮಾನ್ಯ ಗೃಹಸ್ಥರನ್ನು ಸಂದರ್ಶಿಸುತಿದ್ದಾರೆ. ತಾಲೂಕಿನ ಎಲ್ಲಾ ಮಹನೀಯರೂ, ಶಾಲೆಯ ಹಳೆಯ ವಿದ್ಯಾರ್ಥಿಗಳೂ ಆ ಸಂದರ್ಭದಲ್ಲಿ ಉದಾರಹಸ್ತದಿಂದ ಧನಸಹಾಯಮಾಡಬೇಕಾಗಿ ವಿನಂತಿಯಿದೆಯೆಂದು ಜತೆಕಾರ್ಯದರ್ಶಿಗಳು ತಿಳಿಸಿರುತ್ತಾರೆ.

(R)

ಎಲ್ಲಾ ಜನರಿಗೂ ತಿಳಿಯಪಡಿಸುವುದೇನಂದರೆ:—

೧೯೪೩ನೇ ಇಸವಿಯ. ಮದ್ರಾಸು ರೇಶನಿಂಗ್ ಆರ್ಡರಿನ ೨ನೇ ಕ್ಲೋಸ್ (೭) ನೇ ಸಬ್ ಕ್ಲೋಸ್ ಪ್ರಕಾರ ಮದರಾಸು ಸರಕಾರದವರು ಮದರಾಸ್ ಸಂಸ್ಥಾನದಲ್ಲಿರುವ ಎಲ್ಲಾ ರೇಶನಿಂಗ್ ಇರುವ ಸ್ಥಳಗಳಲ್ಲಿ, ತಾ. ೮-೧೦-೧೯೪೪ರಿಂದ ಅಕ್ಕಿಯ ಹುಡಿ ಮತ್ತು ದಕ್ಷಿಣಕನ್ನಡಾ ಜಿಲ್ಲೆಯ ರೇಶನಿಂಗ್ ಸರಹದ್ದುಗಳ ಮಟ್ಟಿಗೆ ಅವಲಕ್ಕಿ ಕೂಡಾ ರೇಶನ್ ಪದಾರ್ಥಗಳು ಎಂಬುದಾಗಿ ಪ್ರಕಟಿಸಿರುತ್ತಾರೆ. ಆದ್ದರಿಂದ ಸದ್ರಿ ತಾರೀಕಿನ ನಂತರ ಈ ಎರಡು ಪದಾರ್ಥಗಳಿಗೆ ಎಲ್ಲಾ ರೇಶನ್ ಕಾನೂನುಗಳು ಲಗಾವಾಗುತ್ತವೆ. ರೇಶನಿಂಗ್ ಆಫೀಸರರಿಂದ ಅಧಿಕಾರ ಹೊಂದಿದವರು ವಿನಹಾ ಬೇರೆ ಯಾರೊಬ್ಬರೂ ಅಕ್ಕಿಹುಡಿ ಯಾ ಅವಲಕ್ಕಿ ಮಾರಾಟಮಾಡಿದರೆ ಕಾನೂನಿಗೆ ವಿರೋಧ.

ಕೆ. ಕೃಷ್ಣಯ್ಯ.
ಜಿಲ್ಲಾ ರೇಶನಿಂಗ್ ಆಫೀಸರರು.

ಬಾವು ಮತ್ತು ರಕ್ತ ವಿಷವೇರುವುದನ್ನು ತಡೆಯಿರಿ.

ಜಾಂಬಕ್ ಆದರ್ಶ ವಿಷಹಾರಿ ಔಷಧ

ಗಣ್ಯಮಾಡದ ಗಾಯವು, ವಿಷರೂಪಿಯಾಗಿ ನೋವು ಮತ್ತು ಸಂಕಷ್ಟಗಳನ್ನುಂಟುಮಾಡುತ್ತದೆ. ಇದನ್ನು ಯಾವಾಗಲೂ ಗಾಯವಾದ ಕೂಡಲೇ ಜಾಂಬಕ್ ಲೇಪಿಸುವುದರಿಂದ ಪರಿಹರಿಸಬಹುದು, ಜಾಂಬಕಿನಲ್ಲಿರುವ ಅತ್ಯುತ್ತಮ ಶುದ್ಧ ವನಸ್ಪತಿ ತೈಲವು ಚರ್ಮಕ್ಕೆ ಬೇಗನೇ ಅಂಟಿ ಕೊಂಡು ನೋವನ್ನು ಕಡಿಮೆ ಮಾಡಿ, ಬಾವನ್ನು ಇಳಿಸಿ, ಹೀಗೆ ಎಲ್ಲಾ ತರದ ಗಾಯ ವ್ರಣಗಳ ಕೊಳೆ ವಸ್ತುಗಳನ್ನು ಹೊರಹಾಕುತ್ತದೆ. ಜಾಂಬಕ್ ಕಲೆಯಿಲ್ಲದೆ ಗುಣಮಾಡುವುದು.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣ ಕೊಬ್ಬು ವಿರಹಿತವಾದುದು.

ಭಾರತದಲ್ಲಿ ರಾಷ್ಟ್ರೀಯ ಸರಕಾರ

ಸತ್ವರದಲ್ಲೇ ಸಂಪೂರ್ಣ ಸ್ವಾತಂತ್ರ್ಯ

ಭಾರತ ಅಮೇರಿಕಾ ವಾಣಿಜ್ಯ ವ್ಯವಹಾರ

[illegible] ಸಾಧನೆಯಲ್ಲಿ ಭಾರತೀಯ ... ವರು ... ದ ಕಾರ್ಯ ಸಾಧನೆಯಲ್ಲಿ ಪಕ್ಷಕಾರರಾಗುವಂತಾಗುವುದೆಂಬ ಈ ... ಸೂಚನೆಯನ್ನು ಅಮೆರಿಕನ್ ಪೆಟ್ರೋಲಿಯಂ ಸಂಸ್ಥೆಯೊಂದರ ಮುಖ್ಯಸ್ಥರಾದ ಮಿ। ವಸಿಸಸ್ ಲೀ ವಿಟ್ನಿ ಅವರು ವಿದೇಶಾಂಗ ವ್ಯಾಪಾರ ಪರಿಷತ್ತಿನಲ್ಲಿ ಕೊಟ್ಟ ಭಾಷಣವೊಂದರಲ್ಲಿ ತಿಳಿಸಿದರು

ಮಿ। ವಿಟ್ನಿ ಅವರು ಕಳೆದ ೧೨ ವರ್ಷಗಳಿಂದ ಭಾರತದಲ್ಲಿದ್ದವರು ಮುಂದುವರಿಯುತ್ತಾ ಅವರು—'ನಮ್ಮ ಮಿತ್ರ ರಾಷ್ಟ್ರವಾದ ಭಾರತ ದೇಶವು ಬ್ರಿಟಿಷ್ ಸಾಮ್ರಾಜ್ಯಾಧಿಪತ್ಯ ಮಂಡಳಿಯ ಸರ್ವ ಸಮಾನತೆಯ ಸದಸ್ಯ ರಾಷ್ಟ್ರವಾಗಿ ಸ್ವತಂತ್ರ ಪ್ರಜಾಪ್ರಭುತ್ವ ದೇಶಗಳ ಹಾದಿಯಲ್ಲಿ ಅದು ಚಲಿಸುವಂತೆ ನಾವು ಮಾಡಬೇಕು' ಎಂದು ಸಾರಿದರು.

—ಯುದ್ಧಾನಂತರ ಭಾರತ ಅಮೆರಿಕಾಗಳಲ್ಲಿ ವಾಣಿಜ್ಯ ಸಂಬಂಧವು ತುಂಬಾ ಬೆಳೆಯಲಿಕ್ಕಿದೆ. ಅದಕ್ಕೆ ಇಲ್ಲಿ ಸ್ಥಿರವಾದ ಸರಕಾರ ಸ್ಥಾಪನೆಯಾಗಬೇಕು ಮುಂದೆ ಇಲ್ಲಿ ಸಂಘಟಿಸಲ್ಪಡುವ ರಾಷ್ಟ್ರೀಯ ಸರಕಾರವು ಬಲವಾಗಿಯೂ ಸ್ಥಿರವಾಗಿರುವಂತಹದೂ ಆಗುವುದೆಂದು ಭರವಸೆ ಅವರಿಗಿದೆ

ಕೆಲವು ಕೋಟ್ಯಾಧೀಶರಿಂದ ತಯಾರಿಸಲ್ಪಟ್ಟ ಬೊಂಬಾಯಿ ಯೋಜನೆಯನ್ನು ಸಂಕ್ಷೇಪವಾಗಿ ಅವರು ಸಭಿಕರಿಗೆ ವಿವರಿಸಿ ಅಮೆರಿಕನ್ ಕೈಗಾರಿಕೆ ಸಂಸ್ಥೆಗಳಿಗೆ ಅದರಿಂದ ಅನುಕೂಲವಿದೆ ಎಂದರು ವಿದ್ಯುತ್ ಉಪಕರಣಗಳು, ಮೋಟಾರು ಕಾರು, ಲಾರಿಗಳು ಮುಂತಾದವುಗಳು ಪ್ರಾರಂಭದಲ್ಲಿ ಅದಕ್ಕೆ ಅವಶ್ಯವಿದೆಯೆಂದೂ ಮಿ। ವಿಟ್ನಿಯವರು ತಿಳಿಸಿದರು ಇಲ್ಲಿ ಮಾರ್ಗ ಸೌಕರ್ಯಗಳನ್ನು ಹೆಚ್ಚಿಸುವರಾದರಿಂದ ರೈಲು ಯಂತ್ರಗಳು, ಮಾರ್ಗ ತಯಾರಿಸುವ ಯಂತ್ರಗಳು, ಸೇತುವೆ ಸಲಕರಣೆಗಳು ತುಂಬಾ ಬೇಕಾಗಬಹುದು

"ಭಾರತ–ಅಮೆರಿಕಾಗಳೊಳಗಿನ ವಾಣಿಜ್ಯ ವ್ಯವಹಾರ ಬೆಳವಣಿಗೆಗಾಗಿ ಒಂದು ಪ್ರತ್ಯೇಕ ವಿಷಯ ಸಂಗ್ರಹಕ ಸಮಿತಿ ರಚನೆಯಾಗಬೇಕು ಭಾರತೀಯರು ಅಮೆರಿಕದಲ್ಲಿ ವಾಸಿಸಿಕೊಂಡಿರಲು ಅನುಕೂಲವಾಗುವ ಶಾಸನಗಳನ್ನು ಮಾಡಿ ಚೀನಕ್ಕೆ ಕೊಟ್ಟಂತೆ ಸಮಾನ ಸವಲತ್ತುಗಳನ್ನೂ ಭಾರತಕ್ಕೂ ಕೊಡಬೇಕು

ಬ್ರಿಟಿಷ್ ಮಜೂರ ಪರಿಷತ್ತು

ಭಾರತಕ್ಕೆ ಸಹಾನುಭೂತಿ

ಈ ವರ್ಷದ ಬ್ರಿಟಿಷ್ ಮಜೂರ ಪರಿಷತ್ತು ಬ್ಲೇಕ್ ಪೂಲ್ ಪಟ್ಟಣದಲ್ಲಿ ನಡೆಯುತ್ತಿದೆ ಇದರಲ್ಲಿ ಮಹತ್ವದ ವಿಚಾರಗಳು ನಿರ್ಣಯಿಸಲ್ಪಡಬಹುದೆಂದು ನಿರೀಕ್ಷಿಸಲಾಗಿದೆ ಮುಂಬರುವ ಇಲ್ಲಿನ ಚುನಾವಣೆಗಳಲ್ಲಿ ತುಂಬಾ ಪರಿಣಾಮಕಾರಿಯಾಗಬಹುದಾದ ಧೋರಣೆಯನ್ನು ಮಜೂರರು ವಹಿಸಬಹುದು

ಭಾರತದಲ್ಲಿನ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಮುಖಂಡರನ್ನು ಬಂಧಮುಕ್ತಗೊಳಿಸಬೇಕೆಂದು ಅನೇಕರು ಒತ್ತಾಯ ಮಾಡುತ್ತಿದ್ದರಂತೆ. ಮಜೂರರ ಒಂದು ಜಾಗತಿಕ ಪರಿಷತ್ತು ಸೇರಿಸಲು ಪರ್ಯಾಲೋಚನೆಯಾಗುವುದು. ಈ ಯೋಜನೆಯು ಬಹುಕಾಲದಿಂದ ಮುಂದೂಡಲ್ಪಡುತ್ತಿದೆ. ಬ್ರಿಟಿಷ್ ಅಮೆರಿಕನ್ ಮತ್ತು ರಶ್ಯನ್ ಮಜೂರ ಸಂಸ್ಥೆಗಳು ಇದನ್ನು ಸೇರಿಸಲು ಪ್ರಯತ್ನ ಮಾಡುವ ಒಪ್ಪಂದವೊಂದು ಖಂಡಿತವಾಗಿಯೂ ಆಗಬಹುದೆಂದು ಹಾರೈಸಲಾಗಿದೆ

ದೇಶದಲ್ಲಿನ ಬೇರೆ ಬೇರೆ ಮಜೂರ ಹಿತ ಸಂಸ್ಥೆಗಳನ್ನು ಹೇಗೆ ಒಟ್ಟುಗೂಡಿಸಬಹುದೆಂಬ ಪ್ರಶ್ನೆಯು ಮೇಲಿನ ಪರಿಷತ್ತಿನಲ್ಲಿ ಚರ್ಚಿಸಲ್ಪಡುವುದು ಕೆಲವು ಮಜೂರರ ಸಂಘಗಳಲ್ಲಿ ಸದಸ್ಯರ ಸಂಖ್ಯೆಯು ಬಹಳ ಕಡಿಮೆಯಿರುವುದು ಶೇಕಡಾ ೬೦ರಷ್ಟು ಸಂಘಗಳಲ್ಲಿ ಒಟ್ಟು ಸಂಘಗಳ ಸದಸ್ಯರ ಸಂಖ್ಯೆಯ ಶೇಕಡಾ ಒಂದರಷ್ಟು ಸದಸ್ಯರಿದ್ದಾರೆ ಶೇಕಡಾ ೧೬ ಸಂಘಗಳಲ್ಲಿ ಮಜೂರ ಸಂಖ್ಯೆಯ ಮೊತ್ತದ ಶೇಕಡಾ ೭೦ರಷ್ಟು ಸದಸ್ಯರಿದ್ದಾರೆ ಅಲ್ಲಿ ಹತ್ತಿ ಗಿರಣಿಯಲ್ಲಿ ಕೆಲಸ ಮಾಡುವವರ ೫೦ ಮಜೂರ ಸಂಘಗಳಿವೆ ಗನಿ ಮಜೂರರು, ಇಂಜಿನಿಯರರು, ಮತ್ತು ರೈಲ್ವೇ ಕೆಲಸಗಾರರ ಚಿಕ್ಕ ಚಿಕ್ಕ ಸಂಘಗಳೂ ಈಚೆಗೆ ಬಲಗೊಳ್ಳುತ್ತಿವೆ ಓರ್ವ ಮಜೂರನು ಹಲವು ಸಂಸ್ಥೆಗಳ ಸದಸ್ಯನಾಗಿರುವ ಅವ್ಯವಸ್ಥೆಯೂ ಈ ಸಂಘಗಳಲ್ಲಿದೆ ಕೆಲವು ಕಡೆಗಳಲ್ಲಿನ ಸಂಘಗಳು ತಮ್ಮ ಸದಸ್ಯತನದ ಸಂಖ್ಯೆಯನ್ನು ಹೆಚ್ಚಿಸಲು ಸ್ಪರ್ಧೆಯಿಂದ ಕೆಲಸಮಾಡುವ ಪರಿಸ್ಥಿತಿಯೂ ಕಂಡುಬರುತ್ತಿದೆ ಇಂತಹ ಹಾನಿಕಾರಕ ಚಟುವಟಿಕೆಗಳನ್ನು ತಡೆಗಟ್ಟುವ ಏರ್ಪಾಡುಗಳನ್ನು ಬ್ರಿಟಿಷ ಮಜೂರರು ಮಾಡಬಯಸುತ್ತಾರೆ

ಸಂಘಗಳನ್ನು ಸುಧಾರಿಸಿ ಸುವ್ಯವಸ್ಥಿತಗೊಳಿಸುವ ಮಜೂರ ಪರಿಷತ್ತಿನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಅಭಿರುಚಿಯಿಲ್ಲ ಆದರೆ ಯುದ್ಧಾನಂತರದ ಜಗತ್ತಿನಲ್ಲಿ ಕೂಲಿಗಾರರ ಸಂಘವು ಯಾವ ಧೋರಣೆಯನ್ನು ವಹಿಸುವುದೆಂಬುದೇ ಎಲ್ಲರಿಗೂ ಪ್ರಾಮುಖ್ಯವಾದ ವಿಚಾರ ಸದ್ಯಕ್ಕೆ ಮಜೂರ ಸಂಘಗಳಲ್ಲಿ ೭ ಮಿಲಿಯ ಸದಸ್ಯರಿದ್ದು ೫೦ ಮಿಲಿಯ ಪವನಿನ ನಿಧಿಯು ಅವರ ವಶದಲ್ಲಿದೆ. ಇದರಿಂದ ಅವುಗಳ ಪ್ರಭಾವವು ಅತ್ಯಂತಿಕಗೆ ಏರಿದೆ ಯುದ್ಧಾರಂಭದಿಂದ ಅವರು ಸರಕಾರದೊಡನೆ ಸಹಕರಿಸಿ ಪ್ರತಿಯೊಂದು ಇಲಾಖೆಯಲ್ಲಿಯೂ ಕೆಲಸ ಮಾಡುತ್ತಿದ್ದಾರೆ

ಮುಂದಿನ ಧೋರಣೆ ಏನು?

ಸಹಕಾರದ ತಮ್ಮ ಧೋರಣೆಯನ್ನು ಮಜೂರ ಪರಿಷತ್ತಿನವರು ಮುಂದುವರಿಸುತ್ತಾರೋ, ಇಲ್ಲವೆ ತಮ್ಮ ಇಷ್ಟಾರ್ಥಗಳನ್ನು ಪಡೆಯಲು ಸಾಧಿಸುವರೋ ಎಂಬುದೇ ಅತಿ ಪ್ರಾಮುಖ್ಯದ ಪ್ರಶ್ನೆ ಬ್ರಿಟಿಸಿನ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ (ಮಜೂರ ಕೇಂದ್ರ ಸಂಘ) ತಾತ್ಕಾಲಿಕ ವರದಿಯೊಂದರಲ್ಲಿ ಸಮತಾವಾದದ ತತ್ವಗಳನ್ನೂ ಪ್ರತಿಪಾದಿಸಲಾಗಿದೆ. ಕೈಗಾರಿಕೆಯ ಆಡಳಿತ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಸಾರ್ವಜನಿಕ ಸೊತ್ತಾಗಿ ಮಾಡಬೇಕೆಂದು ಅದರಲ್ಲಿ ಸೂಚಿಸಲಾಗಿದೆ. ಎಲ್ಲಾ ಕೈಗಾರಿಕೆಗಳ ಆಡಳಿತದಲ್ಲಿ ಮಜೂರರಿಗೆ ಪ್ರಾತಿನಿಧ್ಯ ಕೊಡಬೇಕೆಂಬ ಸಲಹೆಯೂ ಅದರಲ್ಲಿದೆ. ಕೈಗಾರಿಕೆ ಕ್ಷೇತ್ರಗಳನ್ನು ಕೆಲವೇ ವ್ಯಕ್ತಿ ಕೂಟಗಳ ಪ್ರತ್ಯೇಕವಾಗಿ ಕಾಯ್ದಿಟ್ಟ ಹಕ್ಕಿನಂತೆ ನಡೆಸಿಕೊಂಡು ಬರುವುದನ್ನು ಆ ವರದಿಯಲ್ಲಿ ಖಂಡಿಸಿ ದೇಶದ ಸಂಪತ್ತನ್ನು ಸಾರ್ವಜನಿಕ ಸೊತ್ತಾಗಿ ಮಾಡಬೇಕೆಂದು ಹೇಳಲಾಗಿದೆ

ಮಜೂರ ಸಂಘಗಳು ಮೇಲೆ ಹೇಳಲ್ಪಟ್ಟ ಧ್ಯೇಯಗಳನ್ನು ಕಾರ್ಯರೂಪಕ್ಕೆ ತರುವಂತೆ ಕೆಲವೊಂದು ಸಾಧನ ಮಾರ್ಗಗಳನ್ನು ಅಸ್ಪಷ್ಟ ರೀತಿಯಲ್ಲೆಂಬಂತೆ ಅದೇ ವರದಿಯಲ್ಲಿ ಸೂಚಿಸಲಾಗಿದೆ ಕೈಗಾರಿಕೆ ಸಂಸ್ಥೆಗಳ ಮಾಲಕರೊಡನೆ ಮತ್ತು ಕೈಗಾರಿಕೆ ಹಿತವುಳ್ಳ, ಸರಕಾರದ ಬೆಂಬಲವುಳ್ಳ ಇತರೊಡನೆ ಪರಸ್ಪರ ಮಾತುಕತೆಗಳ ಮೂಲಕ ಈ ಧ್ಯೇಯಗಳನ್ನು ಸಾಧಿಸುವುದು ಒಂದು ಮಾರ್ಗವೆಂದು ಯೋಜಿಸಲಾಗಿದೆ

ಆದರೆ ಸಮತಾವಾದಿ ಮಜೂರರ ಧೈರ್ಯದ ಸಾಧನೆ ಮಾರ್ಗಕ್ಕೂ, ರಾಜಿ ಪಂಚಾಯಿತಿಕೆಯಿಂದ ತೀರ್ಮಾನಿಸಲಿಚ್ಛಿಸುವ ಇತರರ ಮಾರ್ಗಕ್ಕೂ ಅಜಗಜಾಂತರವಿದೆ ಬ್ರಿಟನ್ನಿನ ಬಂಡವಾಳ ವರ್ಗದವರು ರಾಜಪಂಚಾಯಿತಿಕೆಯ ಧೋರಣೆಯವರ ಅಧೈರ್ಯತನದ ಅನುಕೂಲತೆ ಪಡೆದು ತಮ್ಮ ಹಿತ ರಕ್ಷಣೆ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ ಮಜೂರ ಸಂಘಗಳು ಸಮತಾವಾದಿ ಪಂಗಡವಾಗಿ ಪ್ರತ್ಯೇಕವಿರಲು ಬಯಸುತ್ತವೊ ಇಲ್ಲವೆ ಈಗಿನಂತೆ ಸರಕಾರದೊಡನೆ ಸಹಕರಿಸಿ ಮುಂದಿನ ಕೈಗಾರಿಕೆಯ ಧೋರಣೆಯಲ್ಲಿ ಕೈವಾಡವುಳ್ಳವಾಗಿರಲು ಇಷ್ಟಪಡವುವೊ ಎಂಬುದೇ ಬಂಡವಾಳಗಾರರ ಪ್ರಶ್ನೆ ಇದಕ್ಕೆ ಉತ್ತರವನ್ನು ಬ್ಲೇಕ್ ಪೂಲಿನ ಪರಿಷತ್ತು ಕೊಡಲಿ

ಹಣ ಕಾಸಿನ ಪರಿಷತ್ತು

ಭಾರತ ವ್ಯಾಪಾರದ್ರವ್ಯದ ಶಿಲ್ಕು

ಯೋಗ್ಯ ನಿರ್ವಹಣೆಯ ಯೋಜನೆ

ಯುದ್ಧ ಕಾಲದ ಕೈಗಾರಿಕೆಯ ಅಭಿವೃದ್ಧಿಯ ಪರಿಣಾಮವಾಗಿ ಬ್ರಿಟನ್ ಭಾರತದೊಳಗಿನ ವ್ಯಾಪಾರ ವ್ಯವಹಾರದಿಂದ ಭಾರತದ ಪಾಲಿನ ಲೆಕ್ಕದಲ್ಲಿ ಅಪಾರ ಹಣ ಉಳಿತಾಯವಾಗಿದೆ. ಅದನ್ನು ಯಾವ ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದೆಂಬುದರ ಕುರಿತು ಒಂದು ಪರಿಷತ್ತು ಸೇರಲಿದೆ.

ಈ ಪರಿಷತ್ತಿನಲ್ಲಿ ಭಾರತದ ಮಾತ್ರವಲ್ಲ ಈಜಿಪ್ಟ್ ಮುಂತಾದ ಇತರ ದೇಶಗಳ ಉಳಿತಾಯ ಹಣದ ಯೋಜನೆಯೂ ಪರ್ಯಾಲೋಚಿಸಲ್ಪಡುವುದು.

ಉಳಿತಾಯವಾದ ಈ ಅಪಾರ ಲಾಭದ್ರವ್ಯವು ರಿಸರ್ವ್ ಬೇಂಕಿನವರ ವಶದಲ್ಲಿದೆ. ರಿಸರ್ವ್ ಬೇಂಕಿನವರು ಅದನ್ನು ನೋಟು ಚಲಾವಣೆಯ ಭದ್ರತೆಗಾಗಿ ಮೀಸಲಾಗಿಟ್ಟುಕೊಂಡಿರುವರು ಮುಂದೆ ಈ ಹಣದಿಂದ ಭಾರತಕ್ಕೆ ಬೇಕಾದ ಆವಶ್ಯಕ ಸಾಮುಗ್ರಿಗಳನ್ನು ಪರದೇಶಗಳಿಂದ ತರಿಸಿಕೊಳ್ಳಬಹುದೆಂದು ಹಣಕಾಸು ತಜ್ಞರು ಸೂಚನೆ ಇತ್ತಿದ್ದಾರೆ. ಬ್ರಿಟನಿನೊಡನೆ ಪರ್ಯಾಲೋಚನೆ ನಡೆಸಿ ಇದನ್ನು ಇತ್ಯರ್ಥ ಮಾಡಬಹುದೆಂದೂ ಹೇಳಲಾಗಿದೆ ಈ ಇತ್ಯರ್ಥಕ್ಕಾಗಿ ಈಗಿನ ಪರಿಷತ್ತು ಸೇರುವುದು.

ಬ್ರೆಟನ್ ವುಡ್ ಎಂಬಲ್ಲಿ ಸೇರಿದ ಹಣಕಾಸಿನ ಪರಿಷತ್ತಿನಲ್ಲಿ ಈ ಲಾಭ ಉಳಿತಾಯ ದ್ರವ್ಯದ ಕುರಿತು ಚರ್ಚಿಸಲ್ಪಡಲಿಲ್ಲ ಆದುದರಿಂದ ಬ್ರೆಟನ್ ವುಡ್ ಪರಿಷತ್ತಿನ ಸೂಚನೆಗಳನ್ನು ಸ್ವೀಕರಿಸುವತನಕ ಶಿಲ್ಕು ದ್ರವ್ಯದ ಪರ್ಯಾಲೋಚನೆ ನಿಲ್ಲಿಸಬೇಕಾಗುವುದಿಲ್ಲ ಆದರೆ ಈ ವಿಷಯದಲ್ಲಿ ಕೊನೆಯ ಇತ್ಯರ್ಥವಾಗಬೇಕಾದರೆ ಅಮೆರಿಕದ ಸಲಹೆಯನ್ನೂ ಕಾಯಬೇಕಾಗುವುದು ಅಮೆರಿಕವು ಮುಂದಿನ ಜನವರಿಯಲ್ಲಾಗುವ ಅಲ್ಲಿನ ಚುನಾವಣೆಗಳಲ್ಲಿ ಮಗ್ನವಾಗಿರುವುದರಿಂದ ಅಷ್ಟರ ತನಕ ಯಾವ ಸೂಚನೆಯನ್ನು ಕೊಡಲಾಗುವುದಿಲ್ಲ ಅಮೇರಿಕದ ಸಲಹೆ ಬಂದ ವೇಳೆಯೇ ಬ್ರಿಟನ ತನ್ನ ಅಭಿಪ್ರಾಯವನ್ನು ಪ್ರಕಟಿಸುವುದು ಬ್ರಿಟನು ಅಮೆರಿಕಗಳು ಒಪ್ಪಿಗೆ ಕೊಡುವವೆಂದು ಭರವಸೆ ಇದ್ದರೆ ಭಾರತದಲ್ಲಿ ನಡೆಯುವ ಪರಿಷತ್ತು ಯೋಗ್ಯ ನಿರ್ಧಾರಗಳನ್ನು ಕೈಕೊಳ್ಳಲಡ್ಡಿಯಿಲ್ಲ

ಸತ್ತ ಜಪಾನ್ ಸೈನಿಕರ ತಲೆಬುರುಡೆಗಳನ್ನೂ, ಅವರ ಎಲುಬಿನಿಂದ ಮಾಡಿದ ಚಿಕ್ಕ ಉಪಕರಣಗಳನ್ನೂ ಕೆಲ ಅಮೇರಿಕನರು ಯುದ್ಧ ಬಹುಮಾನವಾಗಿ ಕಳುಹಿಸುತ್ತಿದ್ದಾರಂತೆ ಇದು ಕ್ರೂರತ್ವವೆಂದು ಅಮೆರಿಕದ ಕೆಥೋಲಿಕ್ ಕ್ರೈಸ್ತ ಸಂಘದವರು ಖಂಡಿಸಿರುವರು.

* * *

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಮ್ರಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು!

ವಿ. ಸೂ.—ಗಿರಾಕಿಗಳ ಅಭಿರುಚಿಗೆನುಸಾರವಾಗಿ ತಾಮ್ರ, ಹಿತ್ತಾಳೆ, ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಪ್ರಚಲಿತ ಸಮಾಚಾರಗಳು

ವಾಫ್ದ್ ಪಕ್ಷ ಇವರೆಗೆ ಅಧಿಕಾರದಲ್ಲಿದ್ದ ವಾಫ್ದ್ ಮಂತ್ರಿಮಂಡಳವು ಅಕಸ್ಮಾತ್ ಅರಸರಿಂದ ಬರಖಾಸ್ತಗೊಳಿಸಲಾಗಿದೆ.

ವಾಫ್ದ್ ಪಂಗಡವು ಪ್ರಜೆಗಳ ಅಧಿಕ ಬೆಂಬಲವಿರುವ ಪಕ್ಷ, ನಾಹಸ್ ಪಾಶಾರವರು ಈ ಪಕ್ಷದ ನಾಯಕರಾಗಿದ್ದು, ವಾಫ್ದ್ ಮಂತ್ರಿಮಂಡಳದಲ್ಲಿ ಪ್ರಧಾನರಾಗಿದ್ದರು.

ವಾಫ್ದ್ ಪಂಗಡ ಜನಜನಿತವಾಗುತ್ತ ಬಂದುದೇ ಅರಸರ ಈ ವರ್ತನೆಗೆ ಕಾರಣವಿರಬಹುದಂತೆ.

ಅರಸರ ಮಿತ್ರರೆನಿಸಿಕೊಳ್ಳುವ ಕೆಲವರನ್ನು ನಾಹಸ್‌ಪಾಶಾರವರು ಇತ್ತೀಚೆಗೆ ಬಂದಿಸಿದುದು,_ಇನ್ನೊಂದು ಕಾರಣವಾಗಿರಬಹುದಂತೆ.

ಇಟ್ಟಿನ ಮೇಲೆ ಪ್ರಜೆಗಳಿಗೆ ಹೊಣೆಯಾಗಿರುವ ಸರಕಾರವು ಹೋಗಿ, ನಿರಂಕುಶ ಪ್ರಭುತ್ವದ ಸರಕಾರದ ರಚನೆಯು ಈಗ ಆಗಿರುತ್ತದೆ

ಅರಸರ ಈ ವರ್ತನೆಯಿಂದ ಇಜಿಪ್ತದಲ್ಲಿ ಮಾತ್ರವಲ್ಲ, ಎಲ್ಲಾ ಅರಬಿ ದೇಶಗಳಲ್ಲಿ ಗೊಂದಲ ಉಂಟಾಗಬಹುದೆಂದು ನಿರೀಕ್ಷೆಯಿದೆ

ಕಾರಣ ನಾಹಸ್ ಪಾಶಾರವರು ಅರಬ ರಾಷ್ಟ್ರಗಳ ಸಂಯೋಗದ ಕುರಿತು ಬಹಳ ದುಡಿದು, ಎಲ್ಲಾ ಅರಬ ರಾಷ್ಟ್ರಗಳ ಮನ್ನಣೆಗೆ ಪಾತ್ರರಾಗಿರುವರು.

ಪೋಲೆಂಡ್ ಸಮಸ್ಯೆಯು ಮೊಸ್ಕೊದಲ್ಲಿ ಚರ್ಚೆಗೆ ಬಂದಿತ್ತು. ಲಂಡನಿನ ಪೋಲೆಂಡ್ ಸರಕಾರದ ಪ್ರಧಾನರು ಸ್ಟೆಲಿನರನ್ನು ಕಂಡು ಮಾತನಾಡಿದರು. ಇವರು ಮೊಸ್ಕೊ ನಗರಕ್ಕೆ ತೆರಳಿದ ಚರ್ಚಿಲರನ್ನೂ ಎಡೆನ್ನರನ್ನೂ ಕಂಡು ತುಸುಸಮಯ ಮಾತನಾಡಿದರಂತೆ

ಪೋಲೆಂಡಿನ ಲಂಡನ್ ಸರಕಾರದಂತೆ ಮೊಸ್ಕೊದಲ್ಲೂ ಇನ್ನೊಂದು ಪೋಲೆಂಡ್ ಸರಕಾರವು ಇರುವುದು

ಜರ್ಮನಿಯನ್ನು ಸೋಲಿಸಿದನಂತರ ರಷ್ಯವು ಜಪಾನನ್ನು ಸೋಲಿಸುವ ಕೆಲಸದಲ್ಲಿ ಮಿತ್ರರೊಡನೆ ಸಹಕರಿಸುವುದಂತೆ

ಮೊಸ್ಕೊದಲ್ಲಿ ಜರಗಿದ ಚರ್ಚಿಲ್—ಸ್ಟೇಲಿನ್ ಬೇಟಿಯಲ್ಲಿ ಹಿಂದೂದೇಶಕ್ಕೆ ರಷ್ಯನ್ ರಾಯಬಾರಿಗಳನ್ನು ಕಳುಹಿಸುವ ಕುರಿತು ವಿಷಯವು ಎತ್ತಲಾಗಿದ್ದಿತಂತೆ

ಹಿಂದೂದೇಶದಲ್ಲಿ ರಾಷ್ಟ್ರೀಯ ಸರಕಾರವೊಂದು ಸ್ಥಾಪನೆಯಾಗಬೇಕೆಂದು ಸೋವಿಯಟ್ ಸರಕಾರದ ಅಭಿಪ್ರಾಯವಿರುವುದಂತೆ

ತಾವು ಪೌರ್ವಾತ್ಯದ ಯುದ್ಧದಲ್ಲಿ ಮಿತ್ರರ ಬದಿಯಲ್ಲಿ ಯುದ್ಧರಂಗಕ್ಕೆ ದುಮುಕಬೇಕಾದರೆ, ಹಿಂದೂದೇಶದಲ್ಲಿ ರಾಷ್ಟ್ರೀಯ ಸರಕಾರ ರಚನೆಯಾಗಲೆಬೇಕೆಂದು ಸೋವಿಯಟ್ ಸರಕಾರವು ಒಂದು ಶರತ್ತನ್ನು ಮುಂದೆ ಹಾಕಿರುವುದಂತೆ ಇದು ಸತ್ಯವಿರಬಹುದೆ?

ಹಿಂದೂದೇಶದ ಬಡತನ ನಿವಾರಣೆಯಾಗಬೇಕು! ಹಾಗಾಗಬೇಕಾದರೆ ಹಿಂದೂದೇಶದಲ್ಲಿ ವಿದ್ಯಾಪ್ರಚಾರವು ಆಗಬೇಕು—ಎಂದು ಪ್ರೊಫೆಸರ್ ಎ ವಿ ಹಿಲ್ ಎಂಬ ಪ್ರಖ್ಯಾತ ಆಂಗ್ಲೇಯ ವಿಜ್ಞಾನಿಗಳೊಬ್ಬರ ಅಭಿಪ್ರಾಯ ಈ ಮಹನೀಯರು ಹಿಂದೂದೇಶದ ಪ್ರವಾಸಗೈದು, ಮೊನ್ನೆ ಸ್ವದೇಶಕ್ಕೆ ಹಿಂತೆರಳಿದವರು ತಮ್ಮ ಪ್ರವಾಸದ ಅನುಭವದ ಮೇಲೆ ಅವರು ಮೇಲಿನ ಟೀಕೆಯನ್ನು ಮಾಡಿರುವರು ವಿದ್ಯಾಪ್ರಚಾರವಾಗದೆ ಬಡತನ ನಿವಾರಣೆಯಾಗದು ಬಡತನ ನಿವಾರಣೆಯಾಗದೆ ವಿದ್ಯಾಪ್ರಚಾರವಾಗದು

ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ವಿದ್ಯಾಪ್ರಚಾರವಾಗಿ, ಎಲ್ಲರ ಮನಸ್ಸುಗಳು ವಿಕಾಸಿತವಾದರೆ ಮಾತ್ರ ಜಾಗತಿಕ ಶಾಂತಿಗೆ ಆಸ್ಪದ ದೊರಕುವುದು ಇದು ಪ್ರಖ್ಯಾತ ಆಂಗ್ಲೇಯ ಲೇಖಕರಾದ, ಹೆಗ್ ಜಿ ವೆಲ್ಸರ ಅಭಿಪ್ರಾಯವಿರುತ್ತದೆ

ಈಗ ಜಗತ್ತಿನಲ್ಲಿ ವಿವಿದ ರಾಷ್ಟ್ರಗಳಲ್ಲಿ ಜನರಲ್ಲಿ ಇರುವ ಸಂಕುಚಿತ ಮನೋದೃಷ್ಟಿಯು ಹೋಗಿ, ವಿಶಾಲದೃಷ್ಟಿಯು ಬರಬೇಕಾಗಿಯದೆ. ಈಗ ಜಗತ್ತಿನಲ್ಲಿ ಶಾಂತಿ ತಲೆದೋರವುದು, ಎಂದು ಇದೇ ಲೇಖಕರ ಅಭಿಪ್ರಾಯವು.

ಸೆರೆಯಲ್ಲಿರುವ ಪಂಡಿತ ನೆಹರುಗಳವರು, ಪುಸ್ತಕ ವಾಚನದಲ್ಲಿ ತಲ್ಲೀನರಾಗಿರುವರಂತೆ. ಜಗತ್ತಿನ ವಿವಿಧ ಪ್ರಕಾಶಕರಿಂದ ಅವರಿಗೆ ಪುಸ್ತಕಗಳು ಬರುತ್ತಿವೆಯಂತೆ.

ಇದಲ್ಲದೆ ಇನ್ನು ಹಲವು ಪುಸ್ತಕಗಳನ್ನು ಅವರು ವಾಚನಕ್ಕಾಗಿ ಬರಮಾಡಿಕೊಳ್ಳುತ್ತಿದ್ದಾರಂತೆ

ಅಹಮ್ಮದಬಾದಿನ ಸೆರೆಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರು ಚಲೋದಾದ ಒಂದು ತೋಟವನ್ನು ಬೆಳೆಸಿರುವರಂತೆ

ಆರೋಗ್ಯದ ಕುರಿತು ಗಾಂಧೀಜಿಯವರ ಸೂತ್ರಗಳನ್ನು ಅನುಸರಿಸಿ, ವರ್ಕಿಂಗ್ ಕಮಿಟಿಯ ಹಲವು ಸದಸ್ಯರು ತಮ್ಮ ಆರೋಗ್ಯರಕ್ಷಣೆ ಮಾಡುತ್ತಿರುವರಂತೆ

ಹಿಂದೂದೇಶದಲ್ಲೂ, ಯಾಂತ್ರಿಕ ಕೈಗಾರಿಕೆಗಳಿಗೆ ಬೇಕಾದ ಉಕ್ಕಿನ ಉಪಕರಣಗಳನ್ನು ತಯಾರಿಸಬಹುದೆಂದು, ಕಂಡು ಹಿಡಿಯಲಾಗಿದೆ ಯುದ್ಧದ ದೆಸೆಯಿಂದ ಈ ಸತ್ಯದ ಶೋಧನೆಯಾಯಿತು

ಡೆಕ್ಕಾನಿನ ಪ್ಲಾಲ್ಟಾನ ಎಂಬ ದೇಶಿಯ ರಾಜ್ಯದ ಪ್ರಜೆಗಳಿಗೆ, ಅಲ್ಲಿನ ರಾಜನಿಂದ ಪ್ರಜೆಗಳ ಹೊಣೆಗಾರಿಕೆ ಇರುವಂತಹ ಸರಕಾರದ ದಾನವಾಗಿದೆ

ರಾಜರ ಈ ವರ್ತನೆಯು ಗಾಂಧೀಜಿಯರ ಶ್ಲಾಘನೆಗೆ ಒಳಗಾಗಿರುತ್ತದೆ

ಹೀಗೆನೆ ಹಿಂದೆ ಡೆಕ್ಕಾನ್ ಪ್ರದೇಶದ ಔಂಧ ರಾಜ್ಯದಲ್ಲೂ ಕೂಡ ಜವಾಬ್ದಾರಿ ಸರಕಾರದ ಸ್ಥಾಪನೆ ಆಗಿತ್ತು

ಚೀನಾದಲ್ಲಿ ವನಸ್ಪತಿ ತೈಲ್ಯದ ಮೇಲೆ ನಡೆಯುವ ಮೋಟಾರು ವಾಹನಗಳು ರೂಢಿಗೆ ಒರಲಿವೆ ಎಂದು ತಿಳಿದುಬಂದಿದೆ

ಚೀನಾದೇಶಧ-ವಿಜ್ಞಾನಿಗಳ ಪರಿಶೋದನಾ ಪರಿಶ್ರಮದ ಫಲವಾಗಿ ವನಸ್ಪತಿ ತೈಲ್ಯಗಳನ್ನು ಮೋಟಾರು ಇಂಜಿನುಗಳಲ್ಲಿ ಉಪಯೋಗಿಸುವ ಕ್ರಮವೊಂದು ಕಂಡುಹಿಡಿಯಲಾಗಿದೆ

ಈಗ ಮೋಟಾರುಗಳು ಕಟ್ಟಿಗೆಯ ಅಂಗಾರವನ್ನು ಉಪಯೋಗಿಸುತ್ತಿವೆ ಮುಂದೆ ಅವು ತೆಂಗಿನ ಎಣ್ಣೆಯನ್ನೂ ಉಪಯೋಗಿಸಬಹುದು

ಹಿಂದೂದೇಶದಲ್ಲಿ ವಿದ್ಯಾಪ್ರಚಾರದ ಕುರಿತು ಅನುಭವನ್ನು ಪಡೆಯಲು, ಆಂಗ್ಲೆಯ ಮಹನೀಯರೊಬ್ಬರಾದ ಸಾರ್ಜೆಂಟರೆಂಬವರು ಅಮೇರಿಕದ ಸಂಯುಕ್ತ ದೇಶಗಳ ಪ್ರವಾಸ ಮಾಡಿರುವರು

ಇಂಡಿಯಾ ಸರಕಾರವು ಈ ಯುದ್ಧದ ನಂತರ ರೂಢಿಗೆ ತರಲಿರುವ ವಿದ್ಯಾಯೋಜನೆ ಕಲ್ಪನಾಚಾರ್ಯರು ಈ ಮಹನೀಯರು

ಈ ಯೋಜನೆಗೆ ಅಮೇರಿಕದ ಶಿಕ್ಷಣ ಪ್ರವೀಣರ ಶಿಫಾರಸು ದೊರಕಿರುವುದಂತೆ

ಈ ಯೋಜನೆ ಪ್ರಕಾರ ಹಿಂದೂದೇಶದಲ್ಲಿ ಇನ್ನೂ ಎರಡು ಮಿಲಿಯ ಮಂದಿ ಅಧ್ಯಾಪಕರ ಆವಶ್ಯಕತೆಯು ಉಂಟಾಗುವುದಂತೆ

ಅಮೇರಿಕೆದ ಸಂಯುಕ್ತ ರಾಷ್ಟ್ರಗಳಲ್ಲಿ ಚುನಾವಣೆಯು ಗದ್ದಲವೆ ಗದ್ದಲ

ರೂಸ್‌ವೆಲ್ಟರೂ ಮತ್ತೊಮ್ಮೆ ಅಧ್ಯಕ್ಷರಾಗಿ ಆರಿಸಿ ಬರಬಹುದೆಂದೂ, ಹಾಗೆನೆ ಡೂವೆರವರಿಗೂ ಅಧ್ಯಕ್ಷ ಪದವಿ ಹೊಂದುವ ಸಂಭವಗಳು ಇವೆ ಎಂದೂ ವಾರ್ತೆಗಳು ಬಂದಿವೆ

ಎರಡು ಪಕ್ಷಗಳು ಪ್ರಚಾರ ಗೈಯುತ್ತಿವೆ. ಭಾಷಣಗಳ ಸುರಿಮಳೆಯು ಅಲ್ಲಿ ಪ್ರಾರಂಭವಾಗಿರುತ್ತದೆ

ಭಿಕ್ಷೆ ಎತ್ತುವುದು ಒಂದು ಅಕ್ರಮವಾಗಿ ಮಾಡುವ ಶಾಸನವು ಮುಂಬಾಯಿ ಮದ್ರಾಸು ಸರಕಾರಗಳಿಂದ ಹೊರಡಿಸಲಾಗುವುದು.

ಮುಂಬಾಯಿ ಪ್ರಾಂತ್ಯದ ವಿವಿಧ ಕಡೆಯ ಬಿಕ್ಷುಕರನ್ನು ಒಟ್ಟುಗೂಡಿಸಿ, ಅವರನ್ನು ಕೆಲವು ಠಾಣ್ಯಗಳಲ್ಲಿ ಇರಿಸಲಾಗುವುದು.

ಈ ಠಾಣ್ಯಗಳಲ್ಲಿ ಸರಕಾರವು ಭಿಕ್ಷುಕರನ್ನು ಸಲಹುವುದು.

ಈ ಠಾಣ್ಯದಲ್ಲಿ ಕೂಡಿಸಿದ ಬಿಕ್ಷುಕರಲ್ಲಿ ಅಂಗಗಳು ಸರಿಯಿರುವವರಿಗೆ ಜೀವನೋಪಾಯವನ್ನು ಕಲ್ಪಿಸಿ ಕೊಡುವ ಕಸಬುಗಳಲ್ಲಿ ತರಬೇತು ಕೊಡಲಾಗುವುದು.

ಸಿಂದ್ ದೇಶದ ಮಾಜಿ ಪ್ರಧಾನ ಅಲ್ಲಾಭಕ್ಷರನ್ನು ಕೊಲೆಪಡಿಸಿದ ಒಳಸಂಚಿನ ಅಪಾದನೆಗೆ ಒಳಗಾದ, ಸಿಂದ್‌ದ ಅಂದಿನ ಮಂತ್ರಿಮಂಡಳದ ಸದಸ್ಯರಾಗಿದ್ದು, ಮೊನ್ನೆ ನಿವೃತ್ತಗೊಳಿಸಲಾದ ಖಾನ್‌ಬಹದೂರ್ ಕುರ್ಹೊ ಮತ್ತು ಇರ್ವರು, ಇವರ ವಿಚಾರಣೆಯು ಸಕ್ಕೂರಿನಲ್ಲಿ ಪ್ರಾರಂಭವಾಗಿರುತ್ತದೆ

ಅಲ್ಲಾಭಕ್ಷರು ಒಳ್ಳೇ ವಿಶಾಲ ದೃಷ್ಟಿಯುಳ್ಳವರಾಗಿದ್ದರು ರಾಷ್ಟ್ರೀಯ ಮುಸ್ಲಿಮರಾ ಮುಂದಾಳುಗಳಲ್ಲಿ ಒಬ್ಬರಾಗಿದ್ದರು

ಹಿಂದೂದೇಶದಲ್ಲಿ ಸದ್ಯಕ್ಕೆ ಇರುವ ಅಜಾದ್ ಮುಸ್ಲಿಂಮರ ದಳ, ಕಾಕ್ಸಾಕರು, ಪ್ರೊಜಾ ಪಕ್ಷ ಮೊದಲಾದ ರಾಷ್ಟ್ರೀಯ ಮುಸ್ಲಿಂ ಪಕ್ಷಗಳನ್ನು ಕೆಲಮಟ್ಟಿಗೆ ಐಕ್ಯಗೊಳಿಸಿದ ಕೀರ್ತಿಯು ಅವರಿಗೆ ಸಲ್ಲಬೇಕು

ಹಿಂದು-ಮುಸ್ಲಿಂ ಐಕ್ಯಕ್ಕಾಗಿ ಬಹಳ ದುಡಿದವರು ಕಾಂಗ್ರೆಸ್ಸಿನ ಮಿತ್ರರು ಉತ್ತರದಲ್ಲಿ ಎಲ್ಲ ಮುಸ್ಲಿಂ ಒಂಘುಗಳ ಮನ್ನಣೆಗೆ ಅವರು ಪಾತ್ರರಾಗಿದ್ದರು

ಚರ್ಚಿಲ್ಲರ ಹಿಂದೂದೇಶದ ಕುರಿತು ನಿರ್ಲಕ್ಷ್ಯದ ಧೋರಣದ ಕುರಿತು ಅಸಮಾಧಾನ ಸೂಚಿಸಿ ಒಂದು ಲೇಖವು ಅಮೇರಿಕದ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ

ಅಮೆರಿಕದ ಪ್ರಜಾಮಂಡಳದ ಸದಸ್ಯರೊಬ್ಬರು ಈ ಲೇಖವನ್ನು ಬರೆದವರ

ಸ್ಟೆಲೀನನು ರಶ್ಯದ ಬೆಳವಣಿಗೆ ಕುರಿತು ಮಾತ್ರ ಆಸಕ್ತನಾಗಿರುವನೆಂದು ಈ ಲೆಖದಿಂದ ವ್ಯಕ್ತವಾಗುತ್ತದೆ

ಹಿಂದೂದೇಶದ ಸಮಸ್ಯೆಯಲ್ಲಿ ಅಮೆರಿಕದ ಪ್ರವೇಶದಿಂದ ಬ್ರಿಟಿಶರಿಗೆ ಉಂಟಾದ ರೋಷದ ಕುರಿತು ಈ ಲೇಖದಲ್ಲಿ ಪ್ರಸ್ತಾಪಿಸಲಾಗಿದೆ

ಈಗಿನ ಮಹಾ ಯುದ್ಧದ ಹೊರೆಯು ಅಮೆರಿಕದ ತಲೆಯ ಮೇಲೆ ಒಂದಿರುವಾಗ್ಯ, ಅಮೆರಿಕಕ್ಕೆ ಮೇಲಿನ ಸಮಸ್ಯೆಗಳಲ್ಲಿ ಕೈಹಾಕಲು ಅಧಿಕಾರವಿಲ್ಲವೆ ಎಂಬುದಾಗಿ ಮೇಲಿನ ಸೆನೆಟರರ ಪ್ರಶ್ನೆ.

ಆದುದರಿಂದ ಅಮೆರಿಕವು ಬ್ರಿಟನಿನ ಮತ್ತು ರಶ್ಯದ ಸ್ವಾರ್ಥದ ಹಂಚಿಕೆಗಳಿಂದ ದೂರವಿರುವ ಸಮಯ ಬಂದಿದೆ ಎಂದು ಈ ಲೇಖದ ವಾದ

ಪರ್ಸಿಯಾ ದೇಶದಲ್ಲಿ ಖನಿಜ ಎಣ್ಣೆಯಿರುವ ದೊಡ್ಡ ಪ್ರದೇಶಗಳು ಇರುವವು

ಅಮೆರಿಕದಲ್ಲಿ ಖನಿಜ ಎಣ್ಣೆಯ ಬಾವಿಗಳು ಒರಿದಾಗುತ್ತಾ ಒಂದಿವೆ ಎಂದ ವಾರ್ತೆಯಿದೆ

ಬ್ರಿಟನಿಗೂ ಎಣ್ಣೆಯ ಅವಶ್ಯವಿದೆ

ಜಗತ್ತಿನ ಎಣ್ಣೆ ವ್ಯಾಪಾರದಲ್ಲಿ ಕೈಹಾಕಲು ಅನುಕೂಲವಾಗುವಂತೆ ರಶ್ಯಕ್ಕೂ ಪರ್ಸಿಯದ ಎಣ್ಣೆ ಪ್ರದೇಶದ ಅವಶ್ಯವಿದೆ.

ಈ ಮೂವರು ಪ್ರಭುತ್ವದ ರಾಷ್ಟ್ರಗಳು ಎಣ್ಣೆಗಾಗಿ ಪರ್ಸಿಯಾ ರಾಜನ ಕುತ್ತು ಹಾಕಿವೆ.

ಎಣ್ಣೆಯು ರಾಷ್ಟ್ರಗಳ ಪ್ರಭುತ್ವದ ಒಂದು ಮುಖ್ಯ ಆಧಾರವಾಗಿರುವುದು.

ಎಣ್ಣೆಯಿಂದಲೆ ಕೈಗಾರಿಕೆಗಳು ನಡೆಯುತ್ತವೆ.

ಎಣ್ಣೆಯಿಂದಲೇ ಈ ಯುದ್ಧವು ನಡೆಯುತ್ತಿರುವುದು

ಎಣ್ಣೆಯ ಕೊರತೆಯಿಂದಲೇ ಜರ್ಮನಿಯು ಪತನವಾಗಬಹುದು.

ಎಣ್ಣೆಯೇ ಜಪಾನಿನ ನಿರಂಕುಶ ಪ್ರಭುತ್ವಕ್ಕೆ ಅವಶ್ಯವಿರುವ ಸಾಮಗ್ರಿಯು

ಹತ್ತೊಂಬತ್ತನೆ ಶತಮಾನದ ಕೊನೆಯಿಂದ ಆರಂಭವಾದ ಕೈಗಾರಿಕೆ ಯುಗಕ್ಕೆ ಎಣ್ಣೆ ಯುಗವೆಂದೂ ಕರೆಯಬಹುದು

ಎಣ್ಣೆಯಿಂದ ಬೆಳೆದ ಈ ಜಗತ್ತು ಎಣ್ಣೆಯಿಂದಲೇ ಈಗ ನಿರ್ನಾಮವಾಗುವುದೆ?

ಘರ್ಷಣೆಯನ್ನು ನಿವಾರಿಸಲು ಎಣ್ಣೆಯ ಉಪಯೋಗವಾಗುತ್ತದೆ ಈ ಎಣ್ಣೆಯಿಂದಲೇ ಈ ಜಗತ್ತಿನ ರಾಷ್ಟ್ರಗಳಲ್ಲಿ ಘರ್ಷಣೆಯು ಉಂಟಾಗಿರುತ್ತವೆ

ಹಿಂದೂದೇಶವನ್ನು ಅಖಂಡವಾಗಿ ಉಳಿಸುವ ಕುರಿತು ಒಂದು ಚಳವಳವು ಪ್ರಾರಂಭವಾಗಿರುತ್ತದೆ

ಈ ಚಳವಳದ ಸಂಬಂಧ ಅಖಂಡ ಹಿಂದೂಸ್ಥಾನ ಪರಿಷತ್ತು ಒಂದು ಮೊನ್ನೆ ನಡೆಯಿತು

ಕೋಮುಗಳ ವೈವಿದ್ಯತೆಯು ಅಖಂಡ ಹಿಂದೂಸ್ಥಾನದ ಸ್ಥಾಪನೆಯ ಸಾದನವಾಗಬೇಕೆಂಬ ನಿರ್ಣಯಗಳಾಗಿವೆ

ಕೋಮುಗಳು ಹಿಂದೂದೇಶದ ವಿಭಜನೆಗೆ ಕಾರಣವಾಗುವ ಬದಲಿಗೆ, ಬಾಂದವ್ಯಭಾವಕ್ಕೆ ಕಾರಣವಾಗಿ, ಹಿಂದೂದೇಶವು ಯಾಕೆ ಒಂದು ಅಖಂಡ ರಾಷ್ಟ್ರವಾಗಬಾರದು?

ಒಕ್ಕಟ್ಟಿನಲ್ಲಿ ಒಲವಿದೆ ಎಂದು ಎಲ್ಲಾ ಕೋಮುಗಳು ತಿಳಿದು ವರ್ತಿಸಬೇಕಾಗಿಯದೆ

ಸ್ವಾತಂತ್ರ್ಯವು ಎಲ್ಲ ಹಿತಗಳಿಗಿಂತ ಶ್ರೇಷ್ಟವು

ಸತ್ತ ಮಗು ೭ ದಿನ ನಂತರ ಬದುಕಿತು

ಹೂಳಲ್ಪಟ್ಟ ಏಳು ದಿನಗಳ ನಂತರ ಬದುಕಿಕೊಂಡ ಮಗುವೊಂದರ ವಿಚಿತ್ರ ಘಟನೆಯ ವರದಿ ದರ್ಭಾಂಗಾ ಜಿಲ್ಲೆಯಿಂದ ಒದಿರುತ್ತದೆ ರಾಮ ಪ್ರಸಾದ ಮಾಥೋ ಎಂಬ ಬಕ್ತಿಯಾರ ಪುರ ಹಳ್ಳಿಯ ಜಮೀನ್ದಾರನೊಬ್ಬನ ೨೪ ದಿನಗಳ ಶಿಶು ಸತ್ತುಹೋಯಿತು. ಅದನ್ನು ಶವದ ಪೆಟ್ಟಿಗೆಯಲ್ಲಿ ಹಾಕಿ ಕುಟುಂಬದ ಸಮಾಧಿಸ್ಥಳದಲ್ಲಿ ಹೂಳಿಡಲಾಯಿತು ಏಳು ದಿನಗಳ ನಂತರ ಹೂಳಲ್ಪಟ್ಟ ಸ್ಥಳದಿಂದ ೪೦೦ ಗಜಗಳ ದೂರದಲ್ಲಿ ಅದೇ ಮಗು ಜೀವಂತ ಬಿದ್ದಿರುವುದು ಕಂಡುಬಂತು ಅದರ ಎಡಕಣ್ಣು ಘಾಯಗೊಂಡಿತ್ತು ಚರ್ಮವು ಇದ್ದಳ ಹುಳದಿಂದ ತಿನ್ನಲ್ಪಟ್ಟಿತ್ತು

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP

ಹೊಸ ಸುದ್ದಿ ಸಂಗ್ರಹಗಳು

...ರ್ವ ರಿಡರ್ ನಗರದವರು ನಗರದೊಳಗಣ ಬಾದ್ಗಳಲ್ಲಿ ಹುಲ್ಲು ...ಸುವ ಯಂತ್ರದ ಬದಲಿಗೆ ... ಕುರಿಗಳನ್ನು ಬಾಡಿಗೆಗೆ ಪಡೆದೊಂದು ಮೇಯಲು ಬಿಟ್ಟರಂತೆ.

* * *

ಬೆಟ್ಟಿ ಗ್ರೇಬಲ್ ಎಂಬ ಪ್ರಖ್ಯಾತ ಸಿನೆಮಾ ನಟಿಯ ಅಂದವಾದ ಕಾಲುಗಳ ಗುರುತನ್ನು ಯಾರು ಸರಿಯಾಗಿ ಕಂಡು ಹಿಡಿಯುವರೆಂದು ನೋಡಲು ಸಂಯುಕ್ತ ರಾಷ್ಟ್ರದ ಒಂದು ಪಟ್ಟಣದಲ್ಲಿ ಒಂದು ಸ್ಪರ್ಧೆ ನಡೆದಾಗ ಪ್ರಥಮ ಬಹುಮಾನ ಒಬ್ಬ ಪಾದ್ರಿಗೆ ದೊರಕಿತು.

* * *

ತಮ್ಮ ಕೋಣೆಯಿಂದ ಬೆಳಕಿನ ಕಿರಣವೊಂದು ಹೊರಗೆ ಕಾಣಿಸಿಕೊಂಡಂತಾದುದಕ್ಕೆ ಬ್ರಿಟನ್ನಿನ ಪೋಲಿಸ್ ಸುಪರಿಟೆಂಡರೊಬ್ಬರು ಬ್ಲೇಕ್ ಔಟ್ ನಿಯಮ ಮೀರಿದಂತಾಯಿತೆಂದು ತಮ್ಮ ಮೇಲೆ ತಾವೇ ಕಟ್ಟಿಹೂಡಿ ವಿಚಾರಣೆಗೆ ಒಳಗಾದರಂತೆ.

* * *

ಒಂದು ತೆಂಗಿನ ಕಾಯಿಯ ಮೇಲೆ ವಿಳಾಸ ಬರೆದು ಅದರ ಜುಟ್ಟಿನ ಮೇಲೆ ಸ್ವಂತ ಹಸ್ತ ಅಕ್ಷರದಲ್ಲಿದ್ದ ... ಸೈನಿಕನೊಬ್ಬನು ಅದನ್ನು ಇಂಗ್ಲೆಂಡಿನಲ್ಲಿರುವ ತನ್ನ ಮನೆಗೆ ಟಪ್ಪಾಲು ಮುಖಾಂತರ ಕಳುಹಿಸಿದನು.

* * *

ಜಗತ್ತಿನಲ್ಲಿ ಅತೀ ಚಿಕ್ಕ (ಒಂದು ನೊಣದಷ್ಟು) ಆಕೃತಿಯ ಕಪ್ಪೆಗಳು ಉತ್ತರ ಅಮೇರಿಕದ ಇಕ್ವಾಡೋರ್ ರಾಜ್ಯದಲ್ಲಿ ಕಾಣಸಿಗುತ್ತವೆ.

* * *

ಪಾರ್ಲಿಮೆಂಟಿನ ಲಾರ್ಡ್ಸ್ ಸಭೆಗೆ ಬಂದು ಹಾಜರಾಗಲಿಕ್ಕೆ ಬೇಕಾಗುವ ಖರ್ಚನ್ನು ವಹಿಸುವಷ್ಟು ಅನುಕೂಲತೆ ಇಲ್ಲದ ಅನೇಕ ಲಾರ್ಡ್ಸ್ ಮಹನೀಯರು ಇಂಗ್ಲೆಂಡಿನಲ್ಲಿರುವರೆಂದು ವಸಾಹತು ಮಂತ್ರಿ ಕ್ರೇನ್ ಬೋರ್ನ್‌ರು ತಿಳಿಸಿದರು.

* * *

ಚೀನದಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ೪೩೪೬ ಕೈಗಾರಿಕಾ ಸಂಸ್ಥೆಗಳಿವೆ.

* * *

ಸಿರಿಯದ ಬಳಿ ೧೦ ಸಾವಿರ ಡ್ರುಜೆಸ್ ಎಂಬ ಒಂದು ಮೂಲನಿವಾಸಿಗಳ ಸ್ವತಂತ್ರ ಪ್ರದೇಶವಿತ್ತು. ಮೊನ್ನೆ ಮಿತ್ರರು ಸಿರಿಯನ್ನು ಹಿಡಿದಾಗ ಈ ೮೦೦ ವರ್ಷದಿಂದ ಸ್ವತಂತ್ರರಾಗಿದ್ದ ಡ್ರುಜೆಸ್ ಜನರು ತಮ್ಮನ್ನು ಸಿರಿಯದ ಅಧಿಕಾರಿಗಳು ಆಳುವಂತೆ ... ಕೊಂಡರಂತೆ. ಈ ಜನರ ಮತವು ಕ್ರೈಸ್ತ ಮತ್ತು ಮುಸಲ್ಮಾನ್ ಮತ್ತ ತತ್ವಗಳಿಂದ ಕೂಡಿದ್ದಾಗಿದೆ.

* * *

ಮಕ್ಕಳ ಪಕ್ಷವಾತ ರೋಗವನ್ನು ಶಸ್ತ್ರಕ್ರಿಯೆಯ ಮೂಲಕ ಗುಣಪಡಿಸಿ, ಅದರ ಕಾರ್ಯವನ್ನು ೫ ದಿನಗಳಲ್ಲಿ ಪೂರ್ಣವಾಸಿಯಾಗುವಂತೆ ಮಾಡಬಲ್ಲ ವಿಧಾನವೊಂದನ್ನು ಅಮೆರಿಕದ ಸೈನ್ಯ ಡಾಕ್ಟರರೊಬ್ಬರು ಪ್ರಕಟಿಸಿದ್ದಾರೆ.

* * *

ಆಫ್ರಿಕದಲ್ಲಿ ಸೆರೆಹಿಡಿಯಲ್ಪಟ್ಟ ಆರ್ಥರ್ ಲೆಸ್ಸರನೆಂಬ ಸೈನಿಕನ ರಿಸ್ಟ್ ವಾಚನ್ನು ಜರ್ಮನ್ ಅಧಿಕಾರಿಯೊಬ್ಬನು ಕಸಕೊಂಡನು. ಕೆಲವು ವಾರಗಳ ಹಿಂದೆ ಲೆಸ್ಸರನ ತಮ್ಮನು ಸೆರೆಹಿಡಿದ ಜರ್ಮನ್ ಅಧಿಕಾರಿಯ ಕೈಯಲ್ಲಿ ಆ ವಾಚ್ ಸಿಕ್ಕಿತು.

* * *

ಭಾರತದ ಮುಖಂಡರು ರಾಜಕೀಯದ ಗೊಂದಲದಲ್ಲಿ ಮಗ್ನರಾಗಿದ್ದಾರೆ. ಆದರೆ ಇಂಗ್ಲೆಂಡಿನ ಕೆಲ ಕೈಗಾರಿಕೆ ಮುಖಂಡರು ದಕ್ಷಿಣ ಭಾರತದಲ್ಲಿ ೫೦ ಕೋಟಿ ಬಂಡವಾಳ ಹಾಕಿ ಹೊಸ ಕಂಪೆನಿಗಳನ್ನು ಸ್ಥಾಪಿಸುವ ಯೋಚನೆಮಾಡುತಿದ್ದಾರಂತೆ.

* * *

...ಭಾಗಗಳ ದೇಹದಿಂದ ಹೃದಯ, ಶ್ವಾಸಕೋಶ, ಅನ್ನಕೋಶ ಮುಂತಾದ ಅವಯವಗಳನ್ನು ಬೇರ್ಪಡಿಸಿ ಅವು ಬಹು ಸಮಯದ ವರೆಗೆ ಕೊಳೆಯದಂತೆ ಇಟ್ಟು, ಪುನಃ ಜೋಡಿಸಲಾಗುವಂತೆ ಮಾಡುವ ವಿಧಾನವನ್ನು ಅಲೆಕ್ಸಿಸ್ ಕೆರೆಲ್ ಎಂಬ ಅಮೇರಿಕನ್ ವೈದ್ಯಕೀಯ ವಿದ್ವಾಂಸರು ಪ್ರಯೋಗ ಮೂಲಕ ತೋರಿಸಿಕೊಟ್ಟರು. ಅವರಿಗೆ ನೋಬೆಲ್ ಪಾರಿತೋಷಕ ಸಿಕ್ಕಿದೆ.

* * *

ಇಂಗ್ಲೆಂಡಿನ ಕ್ರೊಯ್ಡನ್ ವಿಮಾನ ನಿಲ್ದಾಣದ ಬಳಿ ೧೯೪೦ರಲ್ಲಿ ಜರ್ಮನ್ ವಿಮಾನಗಳು ಹಾಕಿದ ೨೦೦೦ ಪೌಂಡ್ ಬಾಂಬು ಒಂದನ್ನು ಕೆಲವು ದಿನಗಳ ಹಿಂದೆ ೩೦ ಅಡಿ ಆಳದ ಹೊಂಡದಿಂದ ಹೊರಗೆ ತೆಗೆಯಲಾಯಿತು. ಅದು ಸಿಡಿದಿರಲಿಲ್ಲ.

* * *

ಅರಬಿ ಪಂಗಡಗಳೆರಡು ಜಗಳಮಾಡಿಕೊಳ್ಳುವಾಗ ಎರಡು ಕಡೆಯವರೂ ತಮ್ಮನ್ನು ಹುರಿದುಂಬಿಸಲು ಲಾವಣೆಹಾಡುವ ಕವಿಗಳನ್ನು ಸಂಗಡ ತರುವರು. ಈ ಕವಿಗಳು ತಮ್ಮ ಪಕ್ಷದವರ ಸಾಹಸಗಳನ್ನು ವರ್ಣಿಸಿ ಸ್ಫೂರ್ತಿದಾಯಕ ಕವಿತೆಗಳನ್ನು ಕಟ್ಟಿ ಹಾಡುವರು. ಇದರಿಂದ ಜಗಳಾಡುವವರು ಉತ್ತೇಜನಗೊಳ್ಳುವರು.

* * *

ಕಾಂಗ್ರೆಸ್ ಲೀಗ್ ಭೇದ

(೨ನೇ ಪುಟದಿಂದ)

ಬಹುಸಂಖ್ಯಾತ ಪ್ರಾಂತ್ಯಗಳ ಮುಸ್ಲಿಮರಲ್ಲೇ ಪರಸ್ಪರ ಭೇಧಾಭಿಪ್ರಾಯಗಳಿದ್ದರೆ ಅಲ್ಲಿಯವರು ಸದಾ ಬೇರೆಯವರ ರಕ್ಷಣೆಯಲ್ಲೇ ಹೊಂದಿಕೊಂಡಿರುವ ನಾಯಕರನ್ನು ವೃಥಾ ಹಿಂಬಾಲಿಸದೆ, ತಮ್ಮ ಸ್ವಂತನಾಯಕರನ್ನು ಮಾಡಿಕೊಳ್ಳಬೇಕು. ಇಂದಾಗಲಿ ನಾಳೆಯಾಗಲಿ ಭಾರತೀಯ ಮುಸಲ್ಮಾನರ ನಾಯಕತ್ವವು ಬಹುಸಂಖ್ಯಾತ ಪ್ರಾಂತ್ಯದಿಂದಲೇ ವಹಿಸಲ್ಪಡಬೇಕೆಂಬ ವಿಷಯವನ್ನು ಮುಸಲ್ಮಾನರಾದವರು ಸ್ಪಷ್ಟ ತಿಳಿದುಕೊಳ್ಳಬೇಕು. ಅಲ್ಪಸಂಖ್ಯಾತ ಪ್ರದೇಶಗಳಲ್ಲಿ ಬೆಳೆಯುತ್ತಿರುವ ಈ ನಕಾರಾತ್ಮಕ ಮನೋಭಾವವು ಧೈರ್ಯದ ಮತ್ತು ವಿವೇಕಪೂರ್ಣ ನಾಯಕತ್ವಕ್ಕೆ ಯೋಗ್ಯ ವಾತಾವರಣ ಕಲ್ಪಿಸಿಕೊಟ್ಟಂತಾಗುವುದಿಲ್ಲ.

ಹೀಗೆ ಪಾಕಿಸ್ತಾನದಿಂದ ಲೀಗಿನ ಭವ್ಯತಳಹದಿಯೇ ನಾಶವಾದಂತಾಗಿ, ಹೊರಗಿನಿಂದ ತೋರುವ ಐಕ್ಯದ ಲಕ್ಷಣಗಳೊಳಗೆ ಭಿನ್ನಾಭಿಪ್ರಾಯದ ಚಿಹ್ನೆಗಳು ಕಾಣಹತ್ತಿವೆ. ಬಾಹ್ಯ ದೃಷ್ಟಿಗೆ ಲೀಗು ಬಹಳ ಶಕ್ತಿವಂತವಾಗಿ ಕಾಣುವುದಾದರೂ ಒಳಗಿನಿಂದ ಅದರ ಬಲವು ಕುಗ್ಗುತ್ತಿದೆ. ಲೀಗು ಈ ಅಲ್ಪಸ್ವಲ್ಪ ಶಕ್ತಿಯನ್ನು ಕಾಂಗ್ರೆಸಿನ ರೀತಿ, ನೀತಿ, ಧೋರಣೆಗಳನ್ನು ಖಂಡಿಸುವುದರ ಮೂಲಕವೇ ಪಡೆದುಕೊಂಡಿದೆಯಾದರೂ, ಕ್ರಮೇಣ ಮುಸಲ್ಮಾನರು ಲೀಗಿನ ಈ ದ್ವೇಷ ಧೋರಣೆಯಿಂದ ಜಿಗುಪ್ಸೆಗೊಳ್ಳುವರೆಂಬುದು ಖಂಡಿತ. ಹಳೇ ಪಕ್ಷಪಂಗಡಗಳೂ, ಹೊಸ ಪಂಗಡಗಳೂ ಮತ್ತು ಲೀಗಿನೊಳಗೇ ಇದ್ದು ಬೇಸತ್ತ ಪಂಗಡಗಳೂ ಒಟ್ಟು ಸೇರಿ ಈಗಿನ ನಕಾರಾತ್ಮಕ ಧೋರಣೆಯ ಬದಲಿಗೆ ಸಮಾಜ ಸುಧಾರಣೆಯ ಕಾರ್ಯ ರೂಪೀ ಧೋರಣೆಯನ್ನು ವಹಿಸುವಂತಾಗುವುದು.

ಪಾಕಿಸ್ತಾನದಿಂದ ಉಪಯೋಗ

ಲೀಗಿನ ಪಾಕಿಸ್ತಾನ್ ಕೇಳಿಕೆಯಿಂದ ಭಾರತದ ರಾಜಕೀಯ ಜೀವನಕ್ಕೆ ಒಂದು ದೊಡ್ಡ ಅನುಕೂಲವು ಆಗಿದೆ. ಇದರಿಂದ ಅಲ್ಪಸಂಖ್ಯಾಕರ ಸಮಸ್ಯೆಗಳ, ಮತ್ತು ವಿವಿಧ ಪ್ರಾಂತ್ಯವಿಭಾಗಗಳ ಸಮಸ್ಯೆಗಳ ಕಡೆಗೆ ಕಾಂಗ್ರೆಸು ಹೊಸದಾಗಿ ಗಮನ ತೆರುವಂತಾಯಿತು. ಒಂದೇ ತರದ ಜನಾಂಗಿಕ ಮತ್ತು ಸಾಂಸ್ಕೃತಿಕ ಗುಣಲಕ್ಷಣದ ಪ್ರಾಂತ್ಯಗಳು ಪ್ರತ್ಯೇಕಿಸಲ್ಪಡಬೇಕೆಂಬುದಕ್ಕೆ ಮಾತ್ರ ಪಾಕಿಸ್ಥಾನವು ನಿಂತರೆ ಅದೊಂದು ನಮ್ಮ ರಾಜಕೀಯ ತತ್ತ್ವವಿಚಾರದಲ್ಲಿ ಪ್ರಗತಿಪರ ಚಿಹ್ನೆ ಎಂದು ತಿಳಿದುಕೊಳ್ಳಲೇಬೇಕು. ಆದರೆ ಲೀಗಿನ ಕೇಳಿಕೆಯೇ ಬೇರೆ. ಪ್ರಾಂತಿಕ ಸ್ವರಾಜ್ಯದಿಂದ ಅದು ದೇಶವಿಭಾಗೀಕರಣದ ಕಡೆಗೆ ಹೊರಳಿದೆ. ಇತ್ತೀಚಿಗಿನ ತನಕ ಪ್ರಜಾಪ್ರತಿನಿಧಿ ಸಭೆಯ ತತ್ವಕ್ಕೆ ವಿರೋಧವಿದ್ದ ಲೀಗು ಪಾಕಿಸ್ತಾನ ವಿಚಾರದಲ್ಲಿ ಮತಗಣನೆ, ವೋಟು, ಚುನಾವಣೆಗಳ ತತ್ವಕ್ಕೆ ಸಮ್ಮತಿಸಿದ್ದು ಅಪ್ರತ್ಯಕ್ಷವಾಗಿ ಪ್ರಜಾಪ್ರತಿನಿಧಿ ತತ್ವಕ್ಕೆ ಸಮ್ಮತಿಸಿದಂತೆ ಸರಿ. ಈಗಾದರೂ ಲೀಗು ಮುಸ್ಲಿಮರೊಳಗೇ ಮತಗಣನೆಯಾಗಬೇಕೆಂದು ಹೇಳುತ್ತಿದೆ. ಆದರೆ ಆದರೆ ೧೯೪೦ರಲ್ಲಿ ಲೀಗ್ ಇದನ್ನು ಕೂಡಾ ಒಪ್ಪಿರಲಿಲ್ಲ.

ಉಪಸಂಹಾರ

ದೇಶದಲ್ಲಿನ ರಾಜಕೀಯ ಪಂಗಡಗಳೂ ಬ್ರಿಟಿಷರೂ ಸೇರಿ ತಮ್ಮ ಇಚ್ಛೆಯನ್ನು ನೆರವೇರಿಸಬೇಕೆಂಬ ಉದ್ದೇಶ ಲೀಗಿನದಿತ್ತು. ಲೀಗೇ ದೇಶದ ಮುಸಲ್ಮಾನರ ಏಕಮಾತ್ರ ಬಲಶಾಲಿಸಂಸ್ಥೆಯೆಂದೂ ಅದರ ನಾಯಕರು ತಿಳಕೊಂಡಿದ್ದರು. ಪ್ರಾಂತಿಕ ಸ್ವರಾಜ್ಯತತ್ವವನ್ನು ಅಂಗೀಕರಿಸಿ ಕಾಂಗ್ರೆಸ್ಸು ಲೀಗಿನ ಮೂಲ ಧ್ಯೇಯವನ್ನೂ ಒಪ್ಪಿಕೊಂಡಿತು. ಜಮಾಯತ್ ಉಲೇಮಾ ಮತ್ತು ಅಜಾದ್ ಮುಸ್ಲಿಂ ಸಂಘಗಳ ಸೂಚನೆಯ ಮೇಲೆ ಕಾಂಗ್ರೆಸು ತನ್ನ ಧೋರಣೆ ಬದಲಿಸಿದ್ದು ಗಣನೀಯ ವಿಚಾರ. ಹಿಂದೂ ಮಹಾಸಭೆ ಕೂಡಾ ಬಹಳಮಟ್ಟಿಗೆ ತನ್ನ ಧೋರಣೆ ಬದಲಿಸಿಕೊಂಡಿದೆ. ಜನತೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ದೇಶದ ರಾಜಕೀಯ ಪಂಗಡಗಳೊಳಗಿನ ವ್ಯತ್ಯಾಸವು ಕಡಿಮೆಯಾಗತೊಡಗಿದೆ. ಹಿಂದಿನ ದ್ವೇಷ ವೈಷಮ್ಯಗಳನ್ನು ಮರೆಯಲು ಪ್ರಯತ್ನಗಳಾಗುತ್ತವೆ. ಇಷ್ಟಾದ ಮೇಲೂ ಒಂದು ಯೋಗ್ಯ ಇತ್ಯರ್ಥವಾಗಲಿಲ್ಲವಾದರೆ ಅದಕ್ಕೆ ಅಡ್ಡಿಯಾದವರು ಖಂಡನಾರ್ಹರು.

ಖಾದಿ ಜನ್ಮ

(೧೯ನೇ ಪುಟದಿಂದ)

ಪರಿಣಾಮಕಾರಿ ಶೋಧ ಪ್ರಯೋಗವನ್ನು ಮಾಡಿ ನೂಲುವಿಕೆಯನ್ನು ಪ್ರಗತಿ ಪಥದಲ್ಲಿ ಸಾಗುವಂತೆ ಮಾಡಿದರು. ಆಶ್ರಮದಲ್ಲಿ ಅನೇಕ ತರದ ಚರಕಗಳೂ ವಸ್ತ್ರದ ಉಪ ಭಾಗಗಳೂ ತಯಾರಿಸಲ್ಪಡುತ್ತಿದ್ದವು. ಆಶ್ರಮದಲ್ಲಿ ನೂಲುವಿಕೆ ಪ್ರಾರಂಭವಾಗಿ ಶುದ್ಧ ಕೈನೂಲಿನ ಬಟ್ಟೆ ತಯಾರು ಮಾಡುವ ಏರ್ಪಾಡುಗಳಾದುವು. ಆಶ್ರಮದಲ್ಲಿ ಮೊದಲು ತಯಾರಾದ ಖಾದಿ ಬಟ್ಟೆಗೆ ಗಜ ಒಂದಕ್ಕೆ ೧೭ ಆಣೆ ಬೆಲೆ ಬಿತ್ತಾದ್ದರೂ ಎಲ್ಲರೂ ಸಂತೋಷದಿಂದ ಅದನ್ನು ತೆಗೆದುಕೊಳ್ಳುವವರಾದರು.

ಗಾಂಧೀಜಿ ಬೊಂಬಾಯಿಯಲ್ಲಿ ಅಸೌಖ್ಯದಿಂದ ಕೆಲವು ದಿನ ಇದ್ದರು. ಸ್ವಲ್ಪ ಗುಣವಾದ ಮೇಲೆ ಅವರು ಅಲ್ಲಿ ಇಬ್ಬರು ನೂಲುವವರನ್ನು ಕಂಡು ಮಾತನಾಡಿದರು. ಒಂದು ಸೇರು ನೂಲಿಗೆ (೪೦ ತೊಲೆ) ಅವರು ೧ ರೂ. ಮಜೂರಿ ಕೇಳಿದರು. ಆಗ ಮಹಾತ್ಮರಿಗೆ ಖಾದಿಯ ಆದಾಯ ವೆಚ್ಚದ ಅಂಕೆ ಸಂಖ್ಯೆಗಳ ಅನುಭವವಿದ್ದಿಲ್ಲ. ಕೆಲವು ಸಮಯ ಸೇರಿಗೆ ರೂಪಾಯಿಯಂತೆ ಗಾಂಧೀಜಿ ನೂಲು ತೆಗೆಸಿದರು. ಆದರೆ ವಿಜಾಪುರದ ಕೆಲಸಗಾರರು ಎಷ್ಟೊ ಕಮ್ಮಿ ಮಜೂರಿಯಲ್ಲಿ ನೂಲುತ್ತಾರೆಂದು ತಿಳಿದು ಬಂದ ಮೇಲೆ ಗಾಂಧೀಜಿ ತಮ್ಮ ಬೊಂಬಾಯಿಯ ನೂಲುಗಾರರಿಗೆ ಮಜೂರಿ ಕಮ್ಮಿ ಮಾಡಲು ವಿನಂತಿಸಿ ಕೊಂಡಾಗ ಅವರು ಸಮ್ಮತಿಸಲಿಲ್ಲ—ಅವರನ್ನು ಬಿಟ್ಟು ಬಿಡಬೇಕಾಯಿತು. ಆದರಿಂದ ಹೆಚ್ಚು ತೊಂದರೆಯಾಗಲಿಲ್ಲ ಕಾರಣ ಆ ಸಮಯದಲ್ಲಿ ಗಾಂಧೀಜಿಯವರ ಶುಶ್ರೂಷೆಯಲ್ಲಿದ್ದ ಅವಂತಿಕಾಬಾಯ್, ರಮಿಬಾಯ್ ಕಾಮ್‌ದಾರ್, ಮತ್ತು ವಸುಮತಿ ಬೆನ್ ಎಂಬ ಮಹಿಳೆಯರು ನೂಲುವಿಕೆಯ ಮರ್ಮವನ್ನು ಕಲಿತು ಕೊಂಡಿದ್ದರು. ಗಾಂಧೀಜಿಯವರ ಕೋಣೆಯಲ್ಲಿ ಚರಕವು ನಿಲ್ಲದೆ ಕಿರುಗುಟ್ಟ ತೊಡಗಿತು.

ಚರಕದ ತಿರುಗುವಿಕೆಯು ಮಹಾತ್ಮರ ಆರೋಗ್ಯ ಪ್ರಗತಿಗೆ ಸಹಾಯಕವಾದುದು ಒಂದು ವಿಶೇಷ ಸಂಗತಿ. ಕಾರಣ ನೂಲುವ ಉದ್ಯಮವು ಯಶಸ್ವಿಯಾಯಿತೆಂಬ ಮಾನಸಿಕ ಉಲ್ಲಾಸವು ಮುಖ್ಯವಾಗಿ ಮಹಾತ್ಮರ ಸೌಖ್ಯಕ್ಕೆ ಉತ್ತೇಜಕವಾಯಿತೆಂಬ ವಿಚಾರದಲ್ಲಿ ಅವರು "ಮಾನಸಿಕ ಉಲ್ಲಾಸದ ಸತ್ಪರಿಣಾಮದ ಶಕ್ತಿ ಬಲದಿಂದ ಶರೀರ ಸೌಖ್ಯವು ಹೇಗೆ ಉತ್ತಮಗೊಳ್ಳುವುದೆಂದು ತಿಳಿದು ಬಂತು." ಎಂದು ಬರೆದಿರುವರು.

ಕೊನೆಗೆ ವಿಜಯ

ಬೊಂಬಾಯಿಯಲ್ಲಿಯೂ ಕೈಯಿಂದ ತಯಾರಿಸಿದ ಹತ್ತಿಯನ್ನು ಪಡೆಯುವ ತೊಂದರೆಯೇ ಗಾಂಧೀಜಿಯ ಮುಂದೆ ಪುನಃ ಎದ್ದು ನಿಂತಿತು. ಒಂದು ದಿನ ಅವರು ತಮ್ಮ ನಿವಾಸದ ಹತ್ತಿರ ಹಾಸಿಗೆಗಳಿಗೆ ಹತ್ತಿ ಶುದ್ಧ ಮಾಡಿ ತುಂಬಿಸುವನೊಬ್ಬನು ತನ್ನ ದೊಡ್ಡ ಹತ್ತಿ ಬಾಣವನ್ನು ಹೆಗಲ ಮೇಲೆ ಹಾಕಿ ಹೋಗುವುದನ್ನು ಕಂಡು ಅವನನ್ನು ಕರೆಸಿದರು. ಆದರೆ ಅವನು ನೂಲುಯೋಗ್ಯವಾದ ಹತ್ತಿ ತಯಾರಿಸಿ ಕೊಡಲು ವಿಪರೀತ ಮಜೂರಿ ಕೇಳಿದನು—ಅದಕ್ಕೆ ಒಪ್ಪಲೇಬೇಕಾಯಿತು. ಆ ಮೇಲೆ ಅಲ್ಲಿ ತಯಾರಿಸಲ್ಪಟ್ಟ ನೂಲನ್ನು ಗಾಂಧೀಜಿಯವರು ಜನಿವಾರಕ್ಕೆ ಉಪಯೋಗಿಸಲು ತಮ್ಮ ಕೆಲವು ವೈಷ್ಣವಾಚಾರದ ಸ್ನೇಹಿತರಿಗೆ ಮಾರಿದರು. ಇವೆಲ್ಲ ಪ್ರಯೋಗಕ್ಕೆ ತುಂಬಾ ಹಣ ವೆಚ್ಚವಾಯಿತು. ಆದರೆ ದೇಶ ಪ್ರೇಮಿಗಳೂ ಖಾದಿ ಭಕ್ತರೂ ಆದ ಕೆಲವು ಸ್ನೇಹಿತರು ಆ ವೆಚ್ಚವನ್ನು ವಹಿಸಿಕೊಳ್ಳುವವರಾದರು. ಹೀಗೆ ವ್ಯಯಿಸಲ್ಪಟ್ಟ ಹಣವು ನಿರರ್ಥಕವಾಯಿತೆಂದು ಗಾಂಧೀಜಿ ತಿಳಿಕೊಳ್ಳಲಿಲ್ಲ. ಇದರಿಂದ ಅವರಿಗೆ ಅಮೂಲ್ಯ ಅನುಭವವು ದೊರಕಿ ನೂಲು, ಚರಕದಲ್ಲಿ ಗರ್ಭಿತವಾದ ವಿಶಾಲ ಅನುಕೂಲತೆಗಳು ಕಾಣಿಸಿಕೊಳ್ಳುವಂತಾಯಿತು.

ಅಲ್ಲಿಂದ ಮುಂದೆ ಸಂಪೂರ್ಣ ಖಾದಿಧಾರಿಗಳಾಗಬೇಕೆಂದು ಕುತೂಹಲವು ಗಾಂಧಿಯವರಲ್ಲಿ ಹುಟ್ಟಿತು. ವಿಜಾಪುರದಲ್ಲಿಯೂ ಸಬರಮತಿಯಲ್ಲಿಯೂ ತಯಾರಾಗುತಿದ್ದ ಖಾದಿಯು ಅಗಲದಲ್ಲಿ ೩೦ ಇಂಚುಗಳಿಗೆ ಮಿಕ್ಕಿ ಇರುತ್ತಿರಲಿಲ್ಲ. ಆದಕ್ಕಿಂತ ಹೆಚ್ಚು ಅಗಲವನ್ನು ತಯಾರಿಸುವುದು ಬಹಳ ಪ್ರಯಾಸದ ಕೆಲಸವಾಗಿತ್ತು. ಆದರೆ ಗಂಗಾ ಬೆನ್ನಳಿಗೆ ಗಾಂಧಿಯವರು "೪೫ ಇಂಚಿನ ಒಂದು ಧೋತಿ ತಯಾರಿಸಿ ಕೊಡದಿದ್ದರೆ ೩೦ ಇಂಚಿನ ದೊರಗು ಖಾದಿಯನ್ನೆ ಧರಿಸಲಾರಂಭಿಸುತ್ತೇನೆ." ಎಂದು ಸೂಚನೆ ಕೊಟ್ಟರು. ಆ ಮಹಿಳೆಗೆ ಗಾಂಧೀಜಿಯವರ ಈ 'ಹುಕುಂ'ನಿಂದ ಒಂದು ಸಮಯಕ್ಕೆ ಬೆರಗು ಸಂಕಷ್ಟಗಳು ಒಂದೇ ಸಲವುಂಟಾಗಿತ್ತಾದರೂ ಕಾರ್ಯ ಸಾಧನೆಯ ಅವಳು ಎದೆ ಗುಂದದೆ ತನ್ನ ಅವಧಿಯೊಳಗೆ ೪೫ ಇಂಚಿನ ಧೋತಿಯೊಂದನ್ನು ತಯಾರಿಸಿಯೇ ಕಳುಹಿಸುವವಳಾದಳು. ಗಾಂಧೀಜಿಯವರಂತವರು ಆಗಿನ ಕಾಲದಲ್ಲಿ ಮೊಣ ಕಾಲು ತನಕ ಮಾತ್ರ ಎಟಕುವ ೩೦ ಇಂಚಿನ ಧೋತಿಯನ್ನು ಉಡುವುದೆಂದರೆ ಸ್ವಲ್ಪ ಕೌತುಕದ ವಿಷಯವೇ ಆಗಿತ್ತು.

ಇದೇ ಸಮಯದಲ್ಲಿ ಲಕ್ಷ್ಮೀದಾಸರೆಂಬವರು ರಾಮಜೀ ಎಂಬ ನೇಕಾರನನ್ನೂ ಅವನ ಹೆಂಡತಿಯಾದ ಗಂಗಾ ಎಂಬವಳನ್ನೂ ಸಬರಮತಿ ಆಶ್ರಮಕ್ಕೆ ಕರೆತಂದರು. ಕುಶಲರಾದ ಈ ನೇಕಾರ ದಂಪತಿಗಳು ತಮ್ಮ ಶ್ರಮದಿಂದ ಆಶ್ರಮಸ್ಥರಿಗೆ ಬೇಕಾಗುವ ಧೋತಿಗಳನ್ನು ನೇಯ್ದು ಕೊಡುತಿದ್ದರು. ಖಾದಿ ಪ್ರಚಾರದ ಇತಿ ಹಾಸದಲ್ಲಿ ಈ ದಂಪತಿಗಳ ಪಾತ್ರವು ಸಾಮಾನ್ಯವಾದುದಲ್ಲ. ಗುಜರಾಥಿನಲ್ಲಿ ಇವರು ಖಾದಿ ನೇಯಿಗೆಯ ಕಲೆಯನ್ನು ತುಂಬಾ ಪ್ರಸರಿಸಿದರು. ಗಂಗಕ್ಕನು ಮಗ್ಗದ ಮೇಲೆ ಕೂತು ಚತುರ ರೀತಿಯಲ್ಲಿ ಬಟ್ಟೆ ನೇಯುವುದನ್ನು ನೋಡಿದರೆ ಯಾರಿಗೂ ಸ್ಫೂರ್ತಿಯುಂಟಾಗುತಿತ್ತು. ಅವಳು ತನ್ನ ಕಾರ್ಯದಲ್ಲಿ ಮಗ್ನಳಾದಳೆಂದರೆ ಅವಳ ಗಮನವನ್ನು ಬೇರೆ ಕಡೆ ಸೆಳೆಯುವುದೇ ಕಷ್ಟವಾಗುತಿತ್ತು. ಖಾದಿ ಎಂಬ ಶಿಶುವು ಜನ್ಮಕ್ಕೆ ಬಂದ ಮೇಲೆ ಅದನ್ನು ತೊಟ್ಟಿಲಲ್ಲಿ ಹಾಕಿ ತೂಗುತ್ತಿರುವಂತೆ ಅವಳು ಕಾಣುತಿದ್ದಳು.

ಜಪಾನಿಯರ ಕ್ರೌರ್ಯತ್ವದ ಕಾರಣ

ಜಪಾನ್ ತಾಯಂದಿರ ಶಿಶು ಪಾಲನೆ

ಬಹಳ ಸಂಕಷ್ಟದ ಬಾಲ್ಯ ಜೀವನ

ಕೆಲವೇ ತಿಂಗಳ ಮಗುವಿರುವಾಗ ಜಪಾನಿ ತಾಯಿಂದಿರು ತಮ್ಮ ಮಗುವನ್ನು ಮಾರ್ಗದ ಮೇಲಾಗಲೀ, ಇಲ್ಲವೇ ಮಾಡಿನಮೇಲಾಗಲೀ ಆಡಲು ಬಿಡುತ್ತಾರೆ. ಅವು ತಂಟೆ ತಕರಾರು ಮಾಡಿದರೆ ತಾಯಿಂದಿರು ಕರ್ಕಶವಾಗಿ ಅವನ್ನು ಬೈದು ಬೆದರಿಸುತ್ತಾರೆ—ಅವಕ್ಕೆ ಹೊಡೆಯುತ್ತಾರೆ. ಮಕ್ಕಳನ್ನು ಹದಮಿಕ್ಕಿ ಉಣ್ಣಿಸುವುದರಿಂದ ದೊಡ್ಡವರಾದ ಮೇಲೆ ಆಹಾರದಲ್ಲಿ ಹೆಚ್ಚು ಅಭಿರುಚಿ ಇರುವುದಿಲ್ಲ. (ಜಪಾನಿ ಸೈನಿಕರು ಹಸಿವೆಯ ಪರಿವೆ ಇಲ್ಲದೆ ಮತ್ತು ಅತ್ಯಲ್ಪ ಆಹಾರ ತಿಂದು ಕಾದಾಡುವ ಶಕ್ತಿಗೆ ಇದೇ ಕಾರಣವೆಂದು ಊಹಿಸಲಾಗಿದೆ.) ಇಂತಹ ನಿರ್ದಯ ವಾತಾವರಣದಲ್ಲಿ ಬೆಳೆದ ಜಪಾನಿಯನು ಮುಂದೆ ಅತೀ ಕ್ರೂರಿಯಾಗುವುದು ಸಹಜವೆಂದು ವಿಜ್ಞಾನಿಗಳ ಅಭಿಪ್ರಾಯ.

ಆರು ತಿಂಗಳ ಮಗುವಿಗೆ ಅಲ್ಲಿ ಬಗ್ಗಿ ನಮಸ್ಕರಿಸುವ ಶಿಷ್ಟಾಚಾರವನ್ನು ಕಲಿಸಲಾರಂಭಿಸುವರು. ಎರಡು ವರ್ಷ ತನಕ ಮಗುವಿನ ಹೆಚ್ಚು ಸಮಯವು ತಾಯಿಯ ಬೆನ್ನಮೇಲೆ ಕಟ್ಟಲ್ಪಟ್ಟಲ್ಲಿ ಕಳೆದುಹೋಗುವುದು. ಮಕ್ಕಳನ್ನು ಬೆನ್ನಿಗೆ ಕಟ್ಟಲ್ಪಡುವ ಈ ಕ್ರಮದಿಂದ ಅವರ ಶರೀರದ ಬೆಳವಣಿಗೆಯು ಬಹಳ ಮಟ್ಟಿಗೆ ಕುಗ್ಗುವುದು. ಚಳಿಗಾಲದಲ್ಲಿ ಮಗುವು ಕೆಲವು ಬಟ್ಟೆಗಳ ರಾಶಿಯಲ್ಲಿ ಸುತ್ತಲ್ಪಡುವುದು. ಒಂದು ವರ್ಷದ ಮಗುವಿಗೆ ನೆಟ್ಟಗೆ ಬಿಗಿಯಾಗಿ ಕುಳಿತುಕೊಳ್ಳಲು ಅಭ್ಯಾಸಿಸುವರು. ಮನೆಯಲ್ಲಿ ಜಪಾನಿ ಮಗುವಿಗೆ ಅನೇಕ ತೊಂದರೆಗಳಿವೆ. ಇಕಟ್ಟಾಗಿರುವ ಅವರ ಮನೆಯಲ್ಲಿ ಮಗುವಿಗೆ ನಿರಾತಂಕವಾಗಿ ಚಲಿಸಲು ಬಿಡುವುದಿಲ್ಲ. ಕಾಗದದ ಗೋಡೆಗಳನ್ನು ಹರಿದು ಹಾಕದಂತೆ, ಒಲೆಯ ಬೆಂಕಿಯ ಬಳಿ ಹೋಗದಂತೆ ಅವನ್ನು ಕಟ್ಟಿಹಾಕುವರು.

ಬಾಲಕನಾದ ಮೇಲೆ ಜಪಾನಿಯನಿಗೆ ಕೆಲವು ಸ್ವಾತಂತ್ರ್ಯಗಳು ಸಿಕ್ಕುತ್ತವೆ. ಆಗ ಅವನು ಅತೀಯಾಗಿ ಮುದ್ದಿಸಲ್ಪಡುವನು. ತಂದೆ ತಾಯಿಗಳು ಅವನ ತುಂಟತನಕ್ಕೆ ಒಂದಿಷ್ಟೂ ಬೆದರಿಕೆ ಹಾಕುವುದಿಲ್ಲ. ಜಪಾನಿಯರು ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳಿಗೆ ಹೆಚ್ಚಾಗಿ ಪ್ರಾಧಾನ್ಯ ಕೊಡುವುದೇ ಇದರ ಕಾರಣ. "ಗಂಡಸು ಆಜ್ಞೆ ಕೊಡುವನು. ಹೆಂಗಸು ತಿರಸ್ಕಾರಕ್ಕೂ, ಕ್ರೂರ ಪೋಷಣೆಗೂ ಯೋಗ್ಯಳು" ಎಂದೇ ಅವರ ಭಾವನೆ.

ಹೀಗೆ ಬಾಲಕನು ತುಂಟನೂ ಕ್ರೂರಿಯೂ ಆಗಿ ಬೆಳೆಯ ತೊಡಗುವನು. ಕೆಲವು ಸಲ ಅವನು ಹಿರಿಯ ಹೆಂಗಸರನ್ನು ಬೈದು, ಕಚ್ಚಿ, ಹೊಡೆದು ಬಿಡುವನು. ತಾಯಿಗೂ ಈ ದಂಡನೆ ತಪ್ಪಿದ್ದಲ್ಲ. ಇಷ್ಟಾದರೂ ಅವನನ್ನು ತಡೆಯುವ ಸಾಹಸಕ್ಕೆ ಯಾರೂ ಹೋಗುವುದಿಲ್ಲ.

ತಮ್ಮ ಮಕ್ಕಳು ಪರರಿಂದ ಹೀನೈಸಲ್ಪಟ್ಟರೂ ಜಪಾನಿ ತಂದೆ ತಾಯಿಗಳು ಸಹಿಸುವುದಿಲ್ಲ. ಹೊರಗಿನವರ ಕೈಯಲ್ಲಿ ಅವಮಾನಿತರಾಗುವುದೆಂದರೆ ಜಪಾನಿಯರಿಗೆ ಒಗ್ಗದ ವಿಷಯ. ಈ ಕಾರಣದಿಂದಲೇ ಅವರು ಮಾನಹಾನಿಯಾಗುವ ಸಂದರ್ಭಗಳಲ್ಲಿ ತಮ್ಮ ಸಂಬಂಧಿಕರನ್ನೂ ಆಪ್ತೇಷ್ಟರನ್ನೂ ಕೊಂದು ತಾವೂ ಆತ್ಮಹತ್ಯಮಾಡಿಕೊಳ್ಳುವುದು. ಅವಮಾನಕ್ಕೆ ಒಳಗಾಗುವ ಸಂಭವವಿದ್ದರೆ ಜಪಾನಿಯನು ಆತ್ಮಹತ್ಯ ಮಾಡಿಯೇ ಕೊಳ್ಳುವನು. ದೊಡ್ಡ ದೊಡ್ಡ ಜಪಾನಿ ರಾಜಕೀಯ ಮುತ್ಸದ್ದಿಗಳು ಕೂಡಾ ಈ ಧೋರಣೆಯನ್ನು ಅನುಸರಿಸುವುದು ನಾವು ಆಗಿಂದಾಗ್ಗೆ ಕೇಳುತ್ತಿರುತ್ತೇವೆ.

ತಮ್ಮ ವಿದೇಶಾಂಗದ ರಾಜಕೀಯ ವ್ಯವಹಾರ ಸಂಬಂಧದಲ್ಲಿಯೂ ಜಪಾನಿಯರು 'ಗಂಡಸು', 'ಹೆಂಗಸು' ಭಾವನೆಯಿಂದಲೇ ವರ್ತಿಸುತ್ತಾರೆ. ೧೯ನೇ ಶತಮಾನದಲ್ಲಿ ಅವರು ಪಾಶ್ಚಾತ್ಯ ರೀತಿನೀತಿಗಳನ್ನು ಅನುಸರಿಸಲಾರಂಭಿಸಿದಾಗ ಅಮೆರಿಕ, ಬ್ರಿಟನ್ನುಗಳನ್ನೂ, 'ಗಂಡು ಜನಾಂಗ'ಗಳೆಂಬ ಭಾವನೆಯನ್ನು ತಾಳಿದ್ದರು. ಸಾಮ್ರಾಜ್ಯಲಾಲಸೆಯು ಹೆಚ್ಚಿದಂತೆ ಈ ಅಭಿಪ್ರಾಯವನ್ನು ಅವರು ಬದಲಿಸಿದರು. ಈ 'ಗಂಡು ಜನಾಂಗಿಕರ' ದುರ್ಬಲತೆ ಅವರಿಗೆ ತೋರಿದಂತಾಯಿತು. ಅಂತೆಯೇ ಅವರು ತಮ್ಮ ತುಂಟತನಕ್ಕೆ ಸುರುಮಾಡಿದರು. ಅಲ್ಲಿಂದಲೇ ಯುದ್ಧವನ್ನು ಆರಂಭಿಸಿದರು. "ಅವರನ್ನು ಯೋಗ್ಯ ನಾಗರೀಕರನ್ನಾಗಿ ಮಾಡಬೇಕಾದರೆ ಅವರ ಬಾಲ್ಯ ಜೀವನದ ಕ್ರಮವನ್ನು ಬದಲಿಸಿ ಅವರಿಗೆ ಇತರ ವಿಶಾಲ ಭಾವನೆಯ ಶಿಸ್ತನ್ನು ಕಲಿಸಬೇಕೆಂದು" ಈ ಲೇಖನ ಬರೆದ ವಿಜ್ಞಾನಿಗಳು ಸೂಚಿಸುತ್ತಾರೆ.

ಬಹಳ ಗೋಪ್ಯವಾಗಿಡಲ್ಪಟ್ಟ ಯುರೋಪು ಮುತ್ತಿಗೆಯ ಏರ್ಪಾಡುಗಳ ವಿಚಾರಗಳು ಆರು ತಿಂಗಳ ಮುಂಚೆಯೇ ತಿಳಿದವರು ಇಂಗ್ಲೆಂಡಿನಲ್ಲಿ ೧೧,೦೦೦ಮಂದಿಗಳಿದ್ದರಂತೆ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931.

HEAD OFFICE UNDER *BRANCHES*

Mangalore. MANGALORE, Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 month 2% p. a.
12 months 2½% p. a
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತಾ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

Deepavali Greetings

ON THIS FESTIVE OCCASION

Kochikar Brothers Ltd.

Chief Agents for South India
Special Agents for Bombay City

The Bombay Life Assurance Co., Ltd.

CONVEY TO ALL THEIR

POLICY-HOLDERS, AGENTS, MEDICAL EXAMINERS AND WELL-WISHERS

All happiness and prosperity for

THE NEW YEAR

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಾ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 39] ತಾರೀಕು 3—11—1944 [ಸಂಚಿಕೆ 43]

ಕಾಂಗ್ರೆಸಿಗರ ಕಾರ್ಯಕ್ರಮ

ಮಹಾತ್ಮರ ಸಲಹೆ

ರಚನಾತ್ಮಕ ಕಾರ್ಯವು ಸಾಗಲಿ

ಬೊಂಬಾಯಿಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕರ್ತರುಗಳ ಪರಿಷತ್ತಿಗೆ ಮಹಾತ್ಮರು ತಮ್ಮ ಅಮೂಲ್ಯ ಸಲಹೆಗಳನ್ನು ಕಳುಹಿಸಿ ಹೀಗೆ ಸೂಚಿಸಿದ್ದಾರೆ:

ರಚನಾತ್ಮಕ ಕಾರ್ಯಕ್ರಮದ ಮೂಲಕ ಪೂರ್ಣ ಸ್ವರಾಜ್ಯವನ್ನು ಹೊಂದುವುದೇ ನಿಜವಾದ ಅಹಿಂಸಾತ್ಮಕ ಮತ್ತು ಸತ್ಯ ರೀತಿಯ ಸಾಧನ' ಮಾರ್ಗವೆಂಬುದನ್ನು ಕಾರ್ಯಕರ್ತರು ಖಂಡಿತ ತಿಳಿಯಬೇಕು ಅದನ್ನು ಪೂರ್ತಿಗೊಳಿಸುವುದೆಂದರೆ ಸಂಪೂರ್ಣ ಸ್ವಾತಂತ್ರ್ಯ ಗಳಿಸಿದಂತೆಯೇ ಸರಿ. ೪೦ ಕೋಟಿ ಜನರು ತಮ್ಮ ಉನ್ನತಿಗಾಗಿ ರಚನಾತ್ಮಕ ಕಾರ್ಯಕ್ರಮದಲ್ಲಿ ನಿರತರಾಗಿರುವುದು ಎಷ್ಟು ಚೆನ್ನಾಗಿ ಎಂದು ನಾವು ಕಲ್ಪನೆಮಾಡಬಹುದು ಇದರಿಂದ ಪರದೇಶಿ ಅಧಿಕಾರವನ್ನು ಹೊರ ತಳ್ಳುವ ಮತ್ತು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಬಹುದೆಂಬುದನ್ನು ಯಾರು ಸಂದೇಹಿಸುವರು? ೪೦ ಕೋಟಿ ಜನರು ಇದರಲ್ಲಿ ಸಹಕರಿಸುವುದೆಂದರೆ ಕೆಲವರಿಗೆ ಹಾಸ್ಯಾಸ್ಪದವೆನಿಸುವುದು. ಅದು ಸ್ವಲ್ಪಮಟ್ಟಿಗೆ ನಿಜವಾದರೂ ಮನಃಪೂರ್ವಕ ಕೆಲಸಗಾರರಿಂದ ಆ ಕಾರ್ಯಕ್ರಮವನ್ನು ಇತರ ಎಲ್ಲಾ ಯೋಜನೆಗಳಿಗಿಂತ ಯಶಸ್ವಿಯಾಗಿ ಮಾಡಬಹುದು. ಅಹಿಂಸಾತ್ಮಕವಾದ ಯೋಜನೆಗೆ ಸರಿಸಮಾನವಾದುದು ಬೇರೊಂದು ನನ್ನ ಮಟ್ಟಿಗೆ ತೋರುವುದಿಲ್ಲ

ರಚನಾತ್ಮಕ ಕಾರ್ಯ ತರಬೇತಿ

ಸಾರ್ವಜನಿಕ ಮತ್ತು ವೈಯುಕ್ತಿಕ ಸತ್ಯಾಗ್ರಹಗಳು ರಚನಾತ್ಮಕ ಕಾರ್ಯಕ್ಕೆ ಸಹಕಾರಿಗಳು. ಸಶಸ್ತ್ರ ದಂಗೆಯು ಬದಲು ಅವನ್ನು ಉಪಯೋಗಿಸಬಹುದು. ಸಶಸ್ತ್ರ ದಂಗೆಗೆ ತರಬೇತಿ ಅವಶ್ಯವಿರುವಂತೆ ರಚನಾತ್ಮಕ ಕಾರ್ಯಕ್ಕೂ ಅದು ಅವಶಕ್ಯ ಸಶಸ್ತ್ರ ದಂಗೆ ಏಳುವುದು ಸಂದರ್ಭಾನುಸಾರವಾಗಿ ಅದೇ ರೀತಿ ಸತ್ಯಾಗ್ರಹದ ಪ್ರಶ್ನೆ ಇರುತ್ತದೆ. ಆದುದರಿಂದ ರಚನಾತ್ಮಕ ಕಾರ್ಯಕರ್ತರು ಕಾನೂನು ಮುರಿಯುವಿಕೆಯ ಸಮಯ ಕಾಯ್ದಿರಬಾರದು. ರಚನಾತ್ಮಕ ಕ್ರಮವು ಅಯಶಸ್ವಿಗೊಳಿಸಲು ಪ್ರಯತ್ನಗಳಾಗುವಾಗ ಮಾತ್ರ ಅವರು ಸಿದ್ಧರಾಗಿ ನಿಲ್ಲಬೇಕು.

ಉದಾಹರಣೆಗಾಗಿ ರಾಜಕೀಯ ಒಪ್ಪಂದ ಪ್ರಯತ್ನಗಳನ್ನು ಮುರಿಯಬಹುದು, ಆದರೆ ಜಾತೀಯ ಐಕ್ಯತೆಯ ಪ್ರಯತ್ನಗಳನ್ನು ಸೋಲಿಸಲು ಸಾಧ್ಯವಿಲ್ಲ. ಹಿಂದೆ ಸ್ನೇಹಾಚಾರವಿಲ್ಲದುದ

ಕ್ಕಾಗಿ ರಾಜಕೀಯ ಒಪ್ಪಂ
ಖಾದಿ ಬಟ್ಟೆಯನ್ನು ಜ
ಯಾರಿಂದಲೂ ಆ ಉದ್ಯ
ಸಲು ಸಾಧ್ಯವಿಲ್ಲ. ಖಾ
ಜನತೆಯ ಮೇಲೆ ಬಲತಾ
ಸಲು ಸಾಧ್ಯವಿಲ್ಲ, ಅದನ
ಚಳವಳದ ಒಂದು ಭಾ
ಸ್ವಬುದ್ಧಿಯಿಂದ ಪ್ರೋ
ಜಗತ್ತಿನಲ್ಲಿ ಯಾವ
ಆರಂಭದಲ್ಲಿ ಅದ್ದಿ
ಮುಂದುವರಿಸಲು ಸಾಧ

ಕ್ಕೆ ತಂಬಾ ಸಂಕಷ್ಟ ಸಹಿಷ್ಣುತಾ ಶಕ್ತಿಬೇಕು.

ಸಂಕಷ್ಟಗಳನ್ನನುಭವಿಸದೆ ಸ್ವರಾಜ್ಯ ದೊರೆಯದು. ಹಿಂಸೆ ಕಾರ್ಯದಲ್ಲಿ ಸತ್ಯಕ್ಕೆ ಲೋಪಬರುತ್ತದೆ ಅಹಿಂಸೆಯಲ್ಲಿ ಸತ್ಯವು ಸದಾ ವಿಜಯಿಯಾಗುತ್ತದೆ ಈ ಮೂಲ ತತ್ವವು ಓದುಗರಿಗೆ ಮನಗಂಡರೆ ರಚನಾತ್ಮಕ ಕಾರ್ಯಕ್ರಮದಲ್ಲಿ ಅವರಿಗೆ ಅಭಿರುಚಿ ತನ್ನಷ್ಟಕ್ಕೆ ಹುಟ್ಟುವುದು ಅದು ರಾಜಕೀಯದಷ್ಟೆ ಸ್ವಾರಸ್ಯವುಳ್ಳದಾಗುತ್ತದೆ.

ಹಿಂದೆ ನಾನು ಪ್ರಕಟಿಸಿದ ರಚನಾತ್ಮಕ ಕಾರ್ಯಕ್ರಮದ ಪಟ್ಟಿಯನ್ನು ಕಾರ್ಯಕರ್ತರು ಪರಿಶೀಲಿಸಿ ತಮ್ಮ ಸ್ಥಳೀಯ ಸಂದರ್ಭಗಳಿಗನುಸಾರವಾಗಿ ತಕ್ಕ ಏರ್ಪಾಡುಗಳನ್ನು ಕೈಕೊಳ್ಳಬೇಕು

ಕೃಷಿಕರಿಗೆ ಸೇವೆ ಸಲ್ಲಿಸಿರಿ

ರಚನಾತ್ಮಕ ಕಾರ್ಯಕ್ರಮದಲ್ಲಿ ಕೃಷಿಕನಿಗೆ ಪ್ರಾಧಾನ್ಯಕೊಡಬೇಕು ಅವನು ಸ್ವಂತ ಜಮೀನಿಲ್ಲದ ಶ್ರಮಜೀವಿ ಇರಲಿ, ಇಲ್ಲವೆ ಆಸ್ತಿವಂತನಾದ ರೈತನಿರಲಿ, ರೈತನೇ ಮುಖ್ಯ ವ್ಯಕ್ತಿ. ಭೂಮಿಯು ಹುಟ್ಟುವಳಿಯು ಅದರ ಹಕ್ಕುದಾರನಾದ ಜಮೀನ್ದಾರನಿಗಿಂತಲೂ ರೈತನಿಗೆ ಸಲ್ಲತಕ್ಕದ್ದಾದರೂ ಅವನು ಅದನ್ನು ಹಿಂಸಾತ್ಮಕವಾಗಿ ಬಲಾತ್ಕಾರದಿಂದ ಪಡೆಯಲು ಪ್ರಯತ್ನಿಸಬಾರದು. ಜಮೀನ್ದಾರರು ತಮ್ಮನ್ನು ಸುಲಿಗೆ ಮಾಡದಂತೆ ಅವರು ಕಾರ್ಯ ನಡಿಸಬೇಕು. ಇದಕ್ಕೆ ಒಕ್ಕಲಿಗರೊಳಗೆ ಹತ್ತಿರದ ಸಹಕಾರ ಅವಶ್ಯವಿದೆ. ಇದಕ್ಕಾಗಿ ಪ್ರತ್ಯೇಕ ಸಂಘಗಳು ರಚಿಸಲ್ಪಡಬೇಕು.

ಕೆಚ್ಚಾಗಿ ಅಶಿಕ್ಷಿತ ವರ್ಗ
ಗೆ ಪ್ರೌಢ ಶಿಕ್ಷಣ ಪದ್ಧ
ಕ ವಿದ್ಯೆಕೊಡಬೇಕು.
ಸಾಮಾನ್ಯ ಜೀವಿತಕ್ಕೆ
ಮಜೂರಿ ಕೃಷಿ ಮಜೂ
ತಾಗಬೇಕು — ಆರೋಗ್ಯ
ಾರ, ವಸತಿ, ಮತ್ತು

ತಿಯನ್ನು ಪರಿಶೀಲಿಸ
ತ್ತ ಕೃಷಿಕರ ಸಾಲದ
ವಿಮುಕ್ತಿ ಮಾಡುವ ಉಪಾ

ಯಗಳನ್ನು ಹುಡುಕಬೇಕು. ಜಾನುವಾರುಗಳ ಸಮಸ್ಯೆಯು ನಮ್ಮ ದೇಶದಲ್ಲಿ ಅತೀ ಪ್ರಾಮುಖ್ಯದ್ದು. ತರಬೇತು ಹೊಂದಿದ ಕೆಲಸಗಾರರು ಅದರ ಹೊಣೆಗಾರಿಕೆಯನ್ನು ವಹಿಸಬೇಕು.

ಮಜೂರರ ಚಳವಳ

ಕೃಷಿಕನಂತೆ ಇತರ ಮಜೂರರ ಕಡೆಗೂ ಗಮನ ಕೊಡಬೇಕು ಈ ಸಂಘಟನೆಯ ಕೆಲಸವು ಹೆಚ್ಚಾಗಿ ನಗರಗಳಲ್ಲಿ ನಡೆಯಬೇಕು ಹಾಗೆ ಮಾಡುವುದರಿಂದ ಅವರನ್ನು ರಾಜಕೀಯ ಕಾರ್ಯದಲ್ಲಿ ಸುಲಭವಾಗಿ ಉಪಯೋಗಿಸಕೊಳ್ಳಬಹುದು ರಚನಾತ್ಮಕ ಕಾರ್ಯಕ್ಕೆ ನಗರದಲ್ಲಿನ ಮಜೂರರು ಚೆನ್ನಾಗಿ ಆಕರ್ಷಿಸಲ್ಪಡುತ್ತಾರೆ. ಈ ಕಾರ್ಯಕಿಂತ ಮಜೂರರ ಸ್ಥಾನಮಾನಗಳನ್ನು ಊರ್ಜಿತಗೊಳಿಸುವುದಕ್ಕೆ ಹೆಚ್ಚಿನ ಗಮನ ಕೆರಬೇಕು ಹೀಗೆ ಮಜೂರರಿಗೆ ನೈತಿಕ ಮತ್ತು ಆರ್ಥಿಕ ವಿಚಾರಗಳ ಶಿಕ್ಷಣ ಕೊಟ್ಟು ಅವರು ಮುಂದೆ ಬಂಡವಾಳ ಪದ್ಧತಿಯ ಗುಲಾಮರಾಗಿರದೆ ಅದರ ಯಜಮಾನ್ಯತೆಯನ್ನು ಪಡೆಯುವಂತಹರಾಗುವಂತೆ ಪ್ರಯತ್ನಿಸುವುದು ಮಜೂರ ಸುಧಾರಕನೊಬ್ಬನ ಗುರಿಯಿರಬೇಕು ಭಂಡವಾಳಶಾಹಿಗೆ ಅದರ ಕರ್ತವ್ಯವು ಲಕ್ಷಕ್ಕೆ ಬರುವಂತೆ ಮಾಡಬೇಕು. ಆ ಮೇಲೆ ಎಲ್ಲಾ ಹಕ್ಕುಗಳು ಸುಗಮವಾಗಿ ಕೈಗೂಡಿ ಬರುವವು.

ಸ್ಥೂಲರೂಪವಾಗಿ ಹೇಳುವುದಾದರೆ ಮಜೂರರಿಗೆ ಅವರ ಸ್ವಂತ ಸಂಘಗಳಿರಬೇಕು. ರಾತ್ರೆ ಶಾಲೆಗಳ ಮೂಲಕ ರಾಷ್ಟ್ರೀಯ ಶಿಕ್ಷಣವು ಕೊಡುವ ಏರ್ಪಾಡಾಗಬೇಕು. ಮಜೂರರ ಮಕ್ಕಳನು ಮೂಲ ಶಿಕ್ಷಣ ಪದ್ಧತಿಪ್ರಕಾರ ತರಬೇತು ಮಾಡಬೇಕು. ಅವರಿಗೆ ಪ್ರತಿಯೊಂದು ತರದ ಸ್ತ್ರೀಪುರುಷರ ಆಸ್ಪತ್ರೆಗಳಿರಬೇಕು. ಮುಷ್ಕರಗಳ ಕಾಲದಲ್ಲಿ ಅವರು ಸ್ವತಂತ್ರ ಜೀವನಾರ್ಥವನ್ನು ಸಂಪಾದಿಸುವಷ್ಟು ಇತರ ಕೈಗಾರಿಕೆ ತಿಳಿದವರಿರಬೇಕು. ಅವರಿಗೆ ಅಹಿಂಸಾತ್ಮಕ ಮುಷ್ಕರ ಮಾಡುವ ರೀತಿಯನ್ನು ಕಲಿಸಬೇಕು

ಅಹಮದಾಬಾದಿನಲ್ಲಿರುವ ಮಜೂರ ಸಂಘವೊಂದು ಆದರ್ಶನೀಯವಿದೆ ಅದು ನನ್ನ ತತ್ವಗಳನ್ನು ಸಂಪೂರ್ಣ ಅನುಸರಿಸುವುದೆಂದು ಹೇಳಲಾರೆನಾದರೂ ಅದು ಆ ಪ್ರಯತ್ನದಲ್ಲಿದೆ ಎಂದು ಬಲ್ಲೆನು. ವಿದ್ಯೆಯಲ್ಲಿಯೂ ಬುದ್ಧಿಯಲ್ಲಿಯೂ ಸುವ್ಯವಸ್ಥಿತವಾಗಿ ರಚನೆಹೊಂದಿದ ಮಜೂರ ಸಂಘವು ಬಂಡವಾಳ ಶಾಹಿಯನ್ನು ಯಾವಾಗಲೂ ತನ್ನ ಕೈಕೆಳಗೆ ಇಟ್ಟುಕೊಳ್ಳಬಹುದು.

ವಿದ್ಯಾರ್ಥಿಗಳ ಕರ್ತವ್ಯ

ವಿದ್ಯಾರ್ಥಿ ವರ್ಗವೂ ಪ್ರಾಮುಖ್ಯವಾದ ಒಂದು ವರ್ಗ ನಮ್ಮಲ್ಲಿ ಯೋಗ್ಯ ಮಾದರಿಯ ಕೆಲಸಗಾರರಿದ್ದರೆ ಅವರು ಪ್ರಾಥಮಿಕ ವರ್ಗದಲ್ಲಿ ಕಲಿಯುವ ಚಿಕ್ಕ ವಿದ್ಯಾರ್ಥಿಗಳ ನಡುವಿನಲ್ಲೂ ಕೆಲಸ ಮಾಡಬೇಕೆಂದು ನಾನು ಬಯಸುತ್ತೇನೆ ಶಾಲಾ ವಯಸ್ಸಿನಿಂದ ಅವರನ್ನು ವಶಪಡಿಸಿಕೊಳ್ಳಬೇಕು ರಾಜಕೀಯ ಚಳವಳದಲ್ಲಿ ಅವರನ್ನು ಉಪಯೋಗಿಸಿಕೊಳ್ಳುವುದು ನನ್ನ ಇಚ್ಛೆಯಲ್ಲವೆಂಬುದನ್ನು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ

ಈಗ ಸದ್ಯಕ್ಕೆ ಶಾಲೆಗಳೆಲ್ಲಾ ಸರಕಾರದ ಹತೋಟಿಯಲ್ಲಿವೆ ಆದ ಪ್ರಯುಕ್ತ ವಿದ್ಯಾರ್ಥಿಗಳ ಶಿಕ್ಷಣವು ದೋಷಭರಿತವಾಗಿದೆಯೆನ್ನಬೇಕು ದೇಶದ ರಾಜಕೀಯ ಪರಿಸ್ಥಿತಿಯು ಎಷ್ಟು ಕಠಿಣತರದ್ದಿದೆ ಎಂದು ಅವರಿಗೆ ತಿಳಿಯುವ ಸೌಕರ್ಯಗಳಿಲ್ಲ ಪತ್ರಿಕೆಗಳ ಮತ್ತು ಕೆಲ ಭಾಷಣಕಾರರ ಮೂಲಕ ಅವರು ಸ್ವಲ್ಪವನ್ನು ಮಾತ್ರ ತಿಳಕೊಳ್ಳುವರು. ಕಾಂಗ್ರೆಸ್ ಕೆಲಸಗಾರರಿಂದ ಅವರ ಶಿಕ್ಷಣ ಪದ್ಧತಿಯು ಮಾರ್ಪಡಿಸುವಂತಾಗಬೇಕು. ಕಾಂಗ್ರೆಸ್ ಕ್ರಮವನ್ನು ಈಗಿನ ಪದ್ಧತಿಯು ಸ್ಥಾನದಲ್ಲಿ ಯಾವ ರೀತಿಯಿಂದ ಕೂರಿಸಬಹುದೆಂಬುದೇ ಸ್ವಲ್ಪ ಕಷ್ಟದ ಪ್ರಶ್ನೆ. ಆದರೆ ಅದನ್ನೂ ಬಗೆಹರಿಸಲೇ ಬೇಕು. ಮೆಟ್ರಿಕ್ ತರಗತಿಯ ತನಕ ವಿದ್ಯಾರ್ಥಿಗಳ ಹೆತ್ತವರ ಸಹಕಾರವು ಅವಶ್ಯಕ.

(೬ನೇ ಪುಟಕೆ ಮುಂದುವರಿದಿದೆ)

ಅದ್ಭುತ ಯೋಗಸಾಧನೆ

ಯೋಗಿ ಅರವಿಂದರ ಸಾಹಸ

ಜಗತ್ತಿಗೆ ಶಾಂತಿ ಅವರೇ ಕೊಡುವರು

[illegible] ಬ್ರಿಟಿಷ್ ಇಂಡಿಯದಲ್ಲಿ [illegible] ಅವರು ಫ್ರೆಂಚ್ ಇಂಡಿಯದಲ್ಲಿ ಆಶ್ರಯಪಡೆದರೆಂದು ಅನೇಕರು ತಪ್ಪು ತಿಳಕೊಂಡಿದ್ದಾರೆ. ಕಾರಣ ಬ್ರಿಟಿಷ್ ಇಂಡಿಯಾದಲ್ಲಿರುವಾಗ ಅರವಿಂದರು ಮೂರು ಸಲ ಕೋರ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ಮೂರು ಸಲವೂ ನಿರಪರಾಧಿಗಳೆಂದು ಬಿಡುಗಡೆಮಾಡಲ್ಪಟ್ಟಿದ್ದಾರೆ. ಅವರ ಮೇಲೆ ಯಾವ 'ವಾರಂಟೂ' ಇರಲಿಲ್ಲ. ದೈವ ಪ್ರೇರಣೆಯಿಂದಲೇ ಅವರು ಪಾಂಡುಚೇರಿಯಲ್ಲಿ ಆಶ್ರಮವನ್ನು ಕಟ್ಟಿ ವಾಸಿಸಲು ನಿರ್ಧರಿಸಿದ್ದು. ಬ್ರಿಟಿಷ್ ಇಂಡಿಯದ ಗೊಂದಲಮಯ ವಾತಾವರಣವು ಮುಂದಿನ ಅವರ ಯೋಗಸಾಧನೆಗೆ ಯೋಗ್ಯವೆನಿಸಲಿಲ್ಲ.

ಅರವಿಂದರೊಂದು ಸಿಂಹಗಾಂಭೀರ್ಯದ ವ್ಯಕ್ತಿ. ಬಾಲ್ಯದಿಂದ ವಿದ್ಯಾಭ್ಯಾಸವನ್ನು ಇಂಗ್ಲೆಂಡಿನಲ್ಲೆ ಪಡೆದವರಿದ್ದು ಇಂಗ್ಲಿಷ ಭಾಷೆಯನ್ನು ಮಾತೃಭಾಷೆಯಂತೆ ಮಾತನಾಡಲೂ ಬರೆಯಲೂ ಬಲ್ಲರು. ಇಂಗ್ಲಿಷಿನಲ್ಲಿ ಅವರು ಅತ್ಯಮೋಘ ಶೈಲಿಯ ಕಾವ್ಯ, ಕವಿತೆ, ಪ್ರಬಂಧಗಳನ್ನು ಬರೆದಿದ್ದಾರೆ. ಗ್ರೀಕ್, ಲೆಟಿನ್ ಭಾಷೆಗಳಲ್ಲಿ ಅವರೊಬ್ಬ ವಿದ್ವಾಂಸರೇ ಆಗಿರುವರು. ಇದಲ್ಲದೆ ಫ್ರೆಂಚ್, ಜರ್ಮನ್, ಇಟೆಲಿಯನ್ ಭಾಷೆಯಲ್ಲಿಯೂ ಅವರಿಗೆ ತುಂಬಾ ಪ್ರಾವಿಣ್ಯವಿದೆ. ಬಂಗಾಳಿ ಅವರ ಮಾತೃ ಭಾಷೆಯಾದರೆ, ಸಂಸ್ಕೃತದಲ್ಲಿ ಅವರು ದೊಡ್ಡ ಪಂಡಿತರು. ನಮ್ಮ ದೇಶದ ಅನೇಕ ಇತರ ಭಾಷೆಗಳೂ ಅವರಿಗೆ ಚೆನ್ನಾಗಿ ಗೊತ್ತಿದ್ದುವು.

ಒಂದು ಕಾಲದಲ್ಲಿ ಅರವಿಂದರು ಅಗಾಧ ರಚನಾತ್ಮಕ ಶಕ್ತಿಯುಳ್ಳ ರಾಜಕೀಯ ಮುಖಂಡರಿದ್ದು, ಅತ್ಯಂತ ಮೇಧಾವಿಗಳೂ ಬೃಹದ್ ತತ್ವಜ್ಞಾನಿಗಳೂ ಆಗಿರುವರು. ಅವರು ಈಚೆಗೆ ಬರೆದಿರುವ 'ಪರಮಾತ್ಮ ಜೀವನ'ವೆಂಬ ಗ್ರಂಥವು ಅತ್ಯಮೋಘ ಶ್ರೇಷ್ಠತೆಯುಳ್ಳದ್ದು ನೋಬೆಲ್ ಬಹುಮಾನಕ್ಕೆ ಅರ್ಹವೆಂದು ಪಾಶ್ಚಾತ್ಯರಿಂದ ಶ್ಲಾಘಿಸಲ್ಪಟ್ಟಿದೆ.

ರಾಜಕೀಯ ಚಳವಳದಲ್ಲಿ ಲೋಕಮಾನ್ಯ ತಿಲಕರ ಸಹೋದ್ಯೋಗಿಗಳಾಗಿದ್ದಾಗ ಅರವಿಂದರು ಸಾರ್ವಜನಿಕ ಜೀವನದ ಮುಂಬೆಳಕಿನಲ್ಲಿದ್ದರು. ಈಗ ಅವರ ಹೆಸರು ಅಧ್ಯಾತ್ಮಿಕ ಹಿನ್ನೆಲೆಯಿಂದ ಪ್ರಕಾಶಿಸುತ್ತಿರುವುದು. ಜಗತ್ತಿಗೆ ಮಾರ್ಗದರ್ಶಕರು ಇವರೆಂದು ಪಾಶ್ಚಿಮಾತ್ಯ, ಪೌರ್ವಾತ್ಯ ಮಹಾಜ್ಞಾನಿಗಳು ಇವರಿಗೆ ಮನ್ನಣೆ ಸಲಿಸುತಿದ್ದಾರೆ.

ರಾಜಕೀಯ ಜೀವನದ ಕಾಲದಿಂದಲೂ ಅರವಿಂದರು ಯೋಗಭ್ಯಾಸವನ್ನು ಅಭ್ಯಸಿಸುತ್ತಿದ್ದರು. ಹಲವು ಬಾರಿ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಸ್ವೀಕರಿಸಬೇಕೆಂದು ಅವರಿಗೆ ವಿನಂತಿಸಲಾಯಿತು. ಆದರೆ ಅವರಿಗೆ ತಮ್ಮ ಜೀವನ ಧ್ಯೇಯವು ಅದಕ್ಕಿಂತಲೂ ಉನ್ನತ ಶ್ರೇಣಿಯದಿದೆ ಎಂದು ಮಂದಟ್ಟಾದುದರಿಂದ ಅವರು ಅದಕ್ಕೆ ಸಮ್ಮತಿಸದಾದರು. ಮಾನವನ ಬಾಹ್ಯ ವ್ಯಕ್ತಿತ್ವದ ಅನುಭವಕ್ಕೆ ಬರುವ ಈ ಘೋರ ಜೀವನ ಸಂಗ್ರಾಮದ ಹಿಂದಿನಿಂದ ಭಾರತದ ಪ್ರತಿಭಾನಂತ ಜ್ಞಾನಶಕ್ತಿಯು ತನ್ನ ಕೆಲಸವನ್ನು ಮಾಡಬೇಕಾದುದು ಅವಶ್ಯವೆಂದೂ ಪುರಾತನ ಕಾಲದಿಂದಾದರೂ ಭಾರತದಲ್ಲಿ ಇದೊಂದು ವೈಶಿಷ್ಟ್ಯವೆಂತಲೂ ಅವರು ತಿಳಿದುಕೊಂಡು ತಮ್ಮ ಈಗಿನ ಸಾಧನೆಗೆ ತೊಡಗಿದರು.

ಅರವಿಂದರದೊಂದು ಅಖಂಡ ಯೋಗಸಾಧನೆ. ಮಾನವನಲ್ಲಿ ಹುದುಗಿರುವ ಅಸಮಾನ್ಯ ಆತ್ಮಶಕ್ತಿಯನ್ನು ಹೊರತರುವುದೇ ಅವರ ಸಾಧನೆಯ ಗುರಿ. ಅದನ್ನು ಅತ್ಯುನ್ನತವಾದ ಶಿಖರಕ್ಕೆ ಮುಟ್ಟಿಸುವುದೇ ಅವರ ಧ್ಯೇಯ. ಸೃಷ್ಟಿಯಲ್ಲಿನ ನಿರ್ಜೀವ ವಸ್ತುಗಳಿಗಿಂತ ಜೀವಕೋಟಿಗಳು ಉನ್ನತ ಮಟ್ಟದವುಗಳು, ಮಾನವನ ಮನಸ್ಸು ಈ ಜೀವ ಕೋಟಿಗಿಂತಲೂ ಎತ್ತರ ಸ್ಥಾನದ್ದಿರುವುದು. ಮನಸ್ಸಿಗಿಂತಲೂ ಉನ್ನತವಾದ ಒಂದು ಸ್ಥಿತಿ ಇದೆ, ಅದನ್ನು ಹೊಂದುವುದೇ ಅರವಿಂದರ ದಿವ್ಯ ಉದ್ದೇಶ.

ಜವಾಹರಲಾಲರ ಅಪ್ರತಿಮ ಸಾಹಸ ವೀರ್‍ಯತೆಯನ್ನೂ, ಗಾಂಧೀಜಿಯವರ ನೈತಿಕ ಸಂಸ್ಕೃತಿಯ ಧ್ಯೇಯಗಳನ್ನೂ ಮಿಕ್ಕಿ ಅರವಿಂದರು ಒಂದು ಹೆಜ್ಜೆ ಮುಂದರಿದಿದ್ದಾರೆ. ಈಗಿನ ವಿಜ್ಞಾನ, ತತ್ವ ಜ್ಞಾನಗಳ ಮಟ್ಟಕ್ಕಿಂತಲೂ ಮೇಲೇರಬೇಕೆಂಬುದೇ ಅವರ ಸಾಹಸ. ಮನುಷ್ಯನು ತನ್ನ ವ್ಯಕ್ತಿತ್ವಕ್ಕಿಂತಲೂ ಶ್ರೇಷ್ಠನೆನಿಸಸಿದ್ದರೆ ಅವನಿಗೆ ಇಹದಲ್ಲಿ ಯಶಸ್ಸು ದೊರೆಯಲಾರದೆಂಬುದೇ ಅವರ ದೃಢ ನಂಬಿಗೆ.

ಅತ್ಯಂತ ಸಹಿಷ್ಣುತೆಯಿಂದ ಅವರು ತಮ್ಮ ಯೋಗ ಸಾಧನೆಯಲ್ಲಿ ತೊಡಗಿದ್ದಾರೆ. ಅವರ ಯೋಗ ಸಾಧನೆಯೆಂದರೆ ನಾವು ಸಾಮಾನ್ಯವಾಗಿ ಕೇಳುತ್ತಿರುವ ಶಾರೀರಿಕ ವ್ಯಾಯಾಮದಿಂದಲ್ಲ. ಇಲ್ಲವೆ ಕಠಿಣ ಪ್ರಾಣಾಯಾಮದ ಅಭ್ಯಾಸದಿಂದಲ್ಲ. ಎಲ್ಲಾ ತರದ ಬಾಹ್ಯ ಮತ್ತು ಅಂತರಿಕ ಚಟುವಟಿಕೆಗಳನ್ನು ಸ್ತಬ್ಧಗೊಳಿಸಿ ಉಚ್ಚವಾದ ಪರಮಾತ್ಮಾನುಭವದಲ್ಲಿ ಲೋಲುಪ್ತನಾಗಿರುವ ಸಮಾಧಿ ಸ್ಥಿತಿಯನ್ನು ಪಡೆಯುವುದರ ಮೂಲಕ ಶಾರೀರಿಕ ಮತ್ತು ಮಾನಸೀಕ ಸುಪ್ರಸನ್ನತೆಯನ್ನು ಹೊಂದುವುದೇ ಅವರ ಸಾಧನೆಯು ಮುಖ್ಯ ತತ್ವ. ಯೋಗ ಸಾಧನೆಯ ಮೂಲಕ ಅದ್ಭುತ ಶಾರೀರಿಕ ಶಕ್ತಿಯನ್ನು ಪಡೆದ ಸಾಧು ಯೋಗಿಗಳನ್ನು ನಾವು ಕಂಡಿರಬಹುದು. ಅದೇ ಪ್ರಕಾರ ಪ್ರಚಂಡವಾದ ಮಾನಸೀಕ ಶಕ್ತಿಯನ್ನೂ ಪಡೆಯಬಹುದೆಂದು, ಮನಗಂಡ ಅರವಿಂದರು ದಿನೆ ದಿನೇ ತಮ್ಮ ಬೃಹದ್ ಸಾಧನೆಯಲ್ಲಿ ಯಶಸ್ಸು ಪಡೆಯುತ್ತಿರುವುದು. ಇಡೀ ಲೋಕಕ್ಕೇ ಒಂದು ಶುಭ ಸೂಚಿಯಾಗಿದೆ ಎನ್ನಬಹುದು.

ನಮ್ಮಂಥ ಸಾಮಾನ್ಯರಿಗೆ ಇದೊಂದು ಹುಚ್ಚು ಸಾಹಸವೆಂದು ಸಂದೇಹವಾಗಬಹುದು. ಆದರೆ ನಮ್ಮ ಈ ಭಾರತ ದೇಶವು ಪರಮಾತ್ಮ ಶಕ್ತಿ ರೂಪವನ್ನು ಹೊಂದಿದ ಮಹಾ ಮಹಾ ಯೋಗ ಮುನೀಶ್ವರರ ಪುಣ್ಯ ಭೂಮಿಯೆಂಬ ವಿಷಯವನ್ನೂ ನಾವು ಮರೆಯಬಾರದು. ರಾಮಕೃಷ್ಣ ಪರಮಹಂಸ, ವಿವೇಕಾನಂದರೇ ಮುಂತಾದ ಕೆಲವರು ಈ ಶಕ್ತಿಯ ಇತ್ತೀಚಿಗಿನ ನಿದರ್ಶನಗಳು.

ಇಂದಿಗೆ ಹದಿನೇಳು ವರ್ಷಗಳ ಕೆಳಗೆ ಅರವಿಂದರ ಸಂದೇಶದಲ್ಲಿ ತಮ್ಮ ಧ್ಯೇಯವು ಗುರಿ ಮುಟ್ಟಲು ಶಕ್ಯವಿದೆ ಎಂದು ಭರವಸೆ ಸೂಚಿಸಿದ್ದರು. ಅಂದರೆ ಸುಮಾರು ಹತ್ತು ವರ್ಷಗಳ ಸಾಧನೆಯ ನಂತರ ಅವರಿಗೆ ಈ ಭರವಸೆ ಬಂತು.

ರವೀಂದ್ರನಾಥ ಠಾಗೋರರು ಅವರಿಗೆ ಹೀಗೆ ಬರೆದಿದ್ದರು: ನಮ್ಮ ಮುಕ್ತಿ ಮಾರ್ಗವು ನಿಮ್ಮ ಕೈಯಲ್ಲಿದೆ. ನಾವು ನಿಮ್ಮ ಸೂಚನೆಯನ್ನು ಕಾಯುತಿದ್ದೇವೆ. ಭಾರತವು ಜಗತ್ತಿಗೆ ನಿಮ್ಮ ಮೂಲಕ ತನ್ನ ಅಮರವಾಣಿಯನ್ನು ಪಸರಿಸಲು ಇಷ್ಟ ಪಡುತ್ತದೆ.

ಪೂರ್ವ ಪಶ್ಚಿಮದ ಜ್ಞಾನ ನಿಧಿ

ಲಂಡನ್ ಪತ್ರಿಕೆಯ ಮನ್ನಣೆ

"ಭಾರತದ ಆಧುನಿಕ ಗ್ರಂಥ ಲೇಖಕರಲ್ಲಿ ಮಹಾ ಕವಿಗಳೂ, ವಿಮರ್ಶಕರೂ, ವಿದ್ವಾಂಸರೂ, ತತ್ವಜ್ಞಾನಿಗಳೂ, ದೇಶಪ್ರೇಮಿಗಳೂ, ಮಾನವ ಹಿತೈಷಿಗಳೂ ಆಗಿರುವ ಶ್ರೀ ಅರವಿಂದೂ ಅವರು ಗಣನೀಯರೂ ಮತ್ತು ಅತ್ಯ ಶ್ರೇಷ್ಠ ವ್ಯಕ್ತಿಗಳೂ ಆಗಿದ್ದಾರೆ. ಇಂಗ್ಲೆಂಡ ಅಮೇರಿಕಗಳಲ್ಲಿ ಅವರ ವಿಚಾರ ಬಲ್ಲವರು ತುಂಬಾ ವಿರಳ. ಅವರೊಬ್ಬ ವಿರಾಟ ಕಲ್ಪನೆಯ ತತ್ವ ಜ್ಞಾನಿಗಳು. ಒಂದು ಕಾಲದಲ್ಲಿ ಅವಿಶ್ರಾಂತ ಚಟುವಟಿಕೆಯ ಜೀವನವನ್ನು ನಡೆಸಿ ಈಗ ಪಾಂಡುಚೇರಿಯಲ್ಲಿನ ಒಂದು ಪ್ರಶಾಂತ ಆಶ್ರಮದಲ್ಲಿ ಯೋಚನಾಮಗ್ನರಾಗಿರುವ ಮಹಾಮಹಿಮ ಹಿಂದುಗಳು ಅವರಾಗಿದ್ದಾರೆ."

ಹೀಗೆಂದು ಲಂಡನಿನ ಟ್ಯಾಮ್ಸ್ ಪತ್ರಿಕೆಯು ಬರೆಯುತ್ತದೆ. "ಪಾಶ್ಚಿಮಾತ್ಯ ಭೌತಿಕ ಜ್ಞಾನವನ್ನೂ, ಪೌರ್ವಾತ್ಯ ಅಧ್ಯಾತ್ಮಿಕ ವಿವೇಕವನ್ನೂ ಅವರು ತಮ್ಮಲ್ಲಿ ಮಿಲನಗೊಳಿಸಿ ಕೊಂಡಿದ್ದಾರೆ. ಅವರ ಗ್ರಂಥಗಳನ್ನು ಓದುವುದರಿಂದ ನಾವು ನಮ್ಮ ಜ್ಞಾನ ಕ್ಷೇತ್ರವನ್ನೂ ಖಂಡಿತವಾಗಿ ವಿಶಾಲಗೊಳಿಸಬಹುದು.

ಹಿಂದಿನ ಸೆಕ್ರೆಟರಿ ಆಫ್ ಸ್ಟೇಟ್ ಲಾರ್ಡ ಜೆಟ್ಲೆಂಡರು ಅರವಿಂದರ ಭಕ್ತರಲ್ಲಿ ಒಬ್ಬರಿದ್ದರು. 'ಜಗತ್ತಿನ ರಂಗದಲ್ಲಿ ನವೀನ ಮನುಷ್ಯನೊಬ್ಬನು ಕಾಣಿಸಿಕೊಂಡಿದ್ದಾನೆ' ಎಂದು ಅವರು ಹೇಳಿದ್ದಾರೆ.

"ಪಾಶ್ಚಿಮಾತ್ಯರು ಜೀವ ಸಂಬಂಧ ಜ್ಞಾನವನ್ನು ಬೆಳೆಸಿಕೊಂಡಿದ್ದಾರೆ. ಭಾರತೀಯರು ಆತ್ಮ ಸಂಬಂಧ ತಿಳುವಳಿಕೆ ಪಡೆದಿದ್ದಾರೆ ಅರವಿಂದರು ಈ ಎರಡು ಜ್ಞಾನಗಳನ್ನು ತಮ್ಮಲ್ಲಿ ಸುಪ್ರಸನ್ನತೆಗೆ ಒಯ್ಯಲು ಸಾಧಿಸುತ್ತಾರೆ." ಹೀಗೆಂದು ಟ್ಯಾಮ್ಸ್ ಪತ್ರಿಕೆಯು ಅವರ ಕುರಿತು ಸರಳವಾಗಿ ವಿವರಿಸುತ್ತದೆ.

ಇಟೆಲಿಯ ಬಟ್ಟ ಪ್ರದೇಶದಲ್ಲಿ ೩೨ ಚದರ ಮೈಲು ವಿಸ್ತಾರದ ಸೇನ್ ಮೆಲಿನೊ ಎಂಬ ಚಿಕ್ಕ ಸ್ವತಂತ್ರ ರಾಜ್ಯವಿದೆ-೧೫ ಸಾವಿರ ಜನಸಂಖ್ಯೆ. ಹಳೆಯ ಟಪ್ಪಾಲು ಚೀಟಿಗಳನ್ನು ಮಾರುವುದೆ ಮುಖ್ಯ ಕಸುಬು. ಹಿಂದಿನ ಮಹಾಯುದ್ಧದಲ್ಲಿ ಈ ರಾಜ್ಯ ಟರ್ಕಿಯ ವಿರುದ್ಧ ಯುದ್ಧ ಸಾರಿತು. ಒಪ್ಪಂದವಾದಾಗ ಶಾಂತಿಪತ್ರಕ್ಕೆ ರುಜು ಹಾಕಲು ಈ ರಾಜ್ಯದ ಅಧಿಕಾರಿಗಳು ಮರೆತರಂತೆ. ೧೯೩೫ರಲ್ಲಿ ಓರ್ವ ಟರ್ಕನು ಇವರ ರಾಜ್ಯಕ್ಕೆ ಬಂದಾಗ 'ಶತ್ರು'ವೆಂದು ಸೆರೆಹಿಡಿಯಲ್ಪಟ್ಟನು. ಮೊನ್ನೆ ಮಿತ್ರ ಬಾಂಬುಗಳು ಅಲ್ಲಿ ಬಿದ್ದಾಗ ತಾವು ತಟಸ್ಥರೆಂದು ಅಲ್ಲಿನ ಅಧಿಕಾರಿಗಳು ವಿರೋಧ ಸೂಚಿಸಿದರು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st July, 1944.

CAPITAL AND LIABILITIES	Rs. As. Ps.	PROPERTY AND ASSETS	Rs. As. Ps.
1. Paid up Capital	14,39.556- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,-065 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39, 895- 5- 4
7. Other liabilities and undisbursed profits	3,62,459- 2- 5		
Total	1,14,27,102-10-11	Total	1,14,27,102-10-11

ನೂತನ ಶಿಕ್ಷಣ ಪದ್ಧತಿ

ಗಾಂಧೀವಾದದ ಪ್ರಸ್ತಾವನೆ

ಕಸ್ತೂರಬಾ ನಿಧಿಯ ಧ್ಯೇಯ

ಕೈಗಾರಿಕೆಗಳ ಮೂಲಕ ವಿದ್ಯಾಭ್ಯಾಸವನ್ನು ಕೊಡುವ ಗಾಂಧೀಜಿಯ ಕಡೆಯ ವಸ್ತು ಮಗು ಎಂದೆನಿಸಲ್ಪಟ್ಟ ನವೀನ ಶಿಕ್ಷಣ ಕ್ರಮವು ಮಹಾತ್ಮರ ಶಿಕ್ಷಣ ಪರಿಶೀಲನೆಗೆ ಒಳಗಾಗಿದೆ. ಈ ತರಹದ ವಿದ್ಯಾ ಪದ್ಧತಿಯು ಶ್ರೇಯಸ್ಕರ ಪರಿಣಾಮವನ್ನುಂಟುಮಾಡುವ ಲಕ್ಷಣಗಳಿಂದ ಕೂಡಿದೆ ಎಂದು ಒಮ್ಮೆ ಅವರು ಹೇಳಿದ್ದರು. ಮಾನವನ ಇಡೀ ಜೀವಮಾನವನ್ನು ಕೈಗಾರಿಕೆಯ ಮೂಲಕ ಸಾಫಲ್ಯಗೊಳಿಸುವಂತೆ ಮಾಡಿಸುವ ಶಿಕ್ಷಣ ಕ್ರಮವಿದು. ಅಖಿಲ ಭಾರತ ಚರಕಾ ಸಂಘ ಮತ್ತು ಅಖಿಲಭಾರತ ಗ್ರಾಮಕೈಗಾರಿಕೆ ಸಂಘದವರ ಕಾರ್ಯಕ್ರಮವನ್ನು ಕೃಷಿ ಧಾನ್ಯ ಉದ್ಯಮದೊಂದಿಗೆ ಇದು ಆವರಿಸಿರುವುದು.

ಇದಕ್ಕೆ ವಾರ್ಧಾ ಶಿಕ್ಷಣ ಯೋಜನೆ ಎಂತಲೂ ಕರೆಯುವುದುಂಟು. 'ಟಾಲಿಮಿ ಸಂಘ'ವೆಂಬ ಸಂಸ್ಥೆಯೊಂದು ಇದರಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದೆ. ಏಳು ವರ್ಷದಿಂದ ೧೪ರೊಳಗಿನ ಮಕ್ಕಳನ್ನು ಈ ಪದ್ಧತಿ ಮೂಲಕ ತರಬೇತು ಮಾಡುವ ಪ್ರಯೋಗವನ್ನು ಈ ಸಂಘದವರು ಕೈಕೊಂಡಿದ್ದರು. ಸೆರೆಮನೆಯಲ್ಲಿದ್ದಾಗಲೂ ಬಾಪೂಜಿ ಇದರ ಪ್ರಚಾರದ ಕುರಿತು ತುಂಬಾ ಕಳಕಳಿಯಿಂದ ಯೋಚಿಸುತ್ತಲೇ ಇದ್ದರು.

"ಈಗಿನ ಯಶಸ್ಸಿನಿಂದ ನಾವು ತೃಪ್ತರಾಗಿ ಕೂತಿರಬಾರದು. ಇದರ ಪ್ರಚಾರವನ್ನು ಮಕ್ಕಳ ಮನೆಗಳಿಗೇ ನಾವು ಒಯ್ಯಬೇಕು. ಅವರ ಹೆತ್ತವರಿಗೆ ಇದರ ಲಾಭವನ್ನು ತಿಳಿಸಬೇಕು. ಈ ವಿದ್ಯಾ ಪದ್ಧತಿಯು ಪ್ರತಿಯೋರ್ವನ ಜೀವನ ಶಿಕ್ಷಣವಾಗಿರಬೇಕು" ಎಂದು ಮಹಾತ್ಮರು ಹೇಳಿದ್ದಾರೆ.

ಕಸ್ತೂರಬಾ ನಿಧಿಯನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸುವಂತೆ ನಿರ್ದೇಶಿಸುವ ಉದ್ದೇಶದಿಂದ ಮಹಾತ್ಮರು ಅದರ ಅಧ್ಯಕ್ಷತೆಯನ್ನು ಸ್ವೀಕರಿಸಿದ್ದಾರೆ. ಹಳ್ಳಿ ಕಡೆಗಳಲ್ಲಿನ ಸ್ತ್ರೀ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆ ನಿಧಿಯು ವ್ಯಯಿಸಲ್ಪಡುವುದು. ಅವರ ವಿದ್ಯಾಭ್ಯಾಸವು ಕೈಗಾರಿಕೆಗಳ ಮೂಲಕ ಕೊಡಲ್ಪಡುವ ಶಿಕ್ಷಣ ಪದ್ಧತಿಯ ಮೂಲಕವೇ ಕೊಡಲ್ಪಡಬೇಕಾದುದು ಯಥಾಯೋಗ್ಯವಾದುದು. ಅದರಿಂದ ಅವರು ಸ್ವಾವಲಂಬಿಗಳಾಗುವರು ಮಾತ್ರವಲ್ಲ ಅವರ ಮಾನಸಿಕ ಬೆಳವಣಿಗೆಯೂ ಅಭಿವೃದ್ಧಿಗೊಳ್ಳುವುದು. ಆದುದರಿಂದ ತಮ್ಮ ಈ ಇಚ್ಛೆಯನ್ನು ಕಸ್ತೂರಬಾ ನಿಧಿಯ ಮೂಲಕ ನೆರವೇರಿಸುವಂತಾಗಲು ಮಹಾತ್ಮರು ಪ್ರಯತ್ನಿಸುವರು.

ಈ ನವೀನ ಮೂಲ ಶಿಕ್ಷಣ ಪದ್ಧತಿಯನ್ನು ಬಾ ನಿಧಿಯ ಕಾರ್ಯಕ್ರಮದಲ್ಲಿ ತಳಹದಿಯಾಗಿಟ್ಟುಕೊಳ್ಳುವಂತೆ ನಿರ್ವಾಹಕ ಮಂಡಳಿಯವರು ಪ್ರಯತ್ನಿಸುವರು. ಆದರೆ ಗಾಂಧೀಜಿಯವರಿಗೆ ತಮ್ಮ ಇಚ್ಛೆಯನ್ನು ಬಾ ನಿಧಿಯ ಕಾರ್ಯಕರ್ತರ ಮೇಲೆ ಒತ್ತಾಯದ ಮೂಲಕ ಹೇರಲು ಮನಸ್ಸಿಲ್ಲ. ಅವರು ಸರ್ವಾನುಮತದಿಂದ ಬೇರೆ ಯಾವ ಶಿಕ್ಷಣ ಪದ್ಧತಿಯನ್ನಾದರೂ ಅನುಸರಿಸಲು ಸ್ವತಂತ್ರರಿರಬೇಕೆಂದು ಅವರ ಆಶಯ. "ಆದರೆ ಟಾಲಿಮಿ ಸಂಘದವರಿಗೆ ಇದಕ್ಕಿಂತಲೂ ಉತ್ತಮವಾದ ಶಿಕ್ಷಣ ಕ್ರಮವು ಬೇರೊಂದಿಲ್ಲವೆಂಬ ಭರವಸೆ ಇರಬೇಕು. ತನ್ನ ಸ್ವಂತ ಯೋಗ್ಯತೆಯ ಮೇಲೆಯೇ ಈ ನವೀನ ಶಿಕ್ಷಣ ಪದ್ಧತಿಯು ಸ್ವೀಕಾರಕ್ಕೆ ಯೋಗ್ಯವಾಗುವುದು. ಬರೀ ಚರ್ಚೆಯಿಂದಲೇ ಯಾವ ಸುಧಾರಣೆಯು ಸಾಧ್ಯವಿಲ್ಲ. ಜನ ಪ್ರಿಯತೆಯಿಂದಲೇ ಅದು ಪಸರಿಸುವುದು. ಒಂದೇ ಒಂದು ಹಳ್ಳಿಯಲ್ಲಿ ನಮ್ಮ ಈ ಪ್ರಯೋಗವನ್ನು ಯಶಸ್ವಿ ಮಾಡಿದರೆ ನಮ್ಮ ಸಂಗ್ರಾಮವು ಅರ್ಧ ಗೆದ್ದಂತೆಯೇ ಸರಿ. ಆದುದರಿಂದ ನಾವು ಬಹು ನಿಧಾನವಾಗಿ ಮುಂದುವರಿಯಬೇಕು. ನಿಧಿಯ ಹಣವನ್ನು ಸಂಪೂರ್ಣವಾಗಿ ಹಳ್ಳಿಗಳಲ್ಲೇ ಸ್ತ್ರೀಯರ ಮತ್ತು ಮಕ್ಕಳ ಶಿಕ್ಷಣಕ್ಕಾಗಿ ವ್ಯಯಿಸಿದರೂ ಅಡ್ಡಿಯಿಲ್ಲ.

ಮಹಿಳಾ ಕಾರ್ಯಕರ್ತರು ಬೇಕು

ತಮ್ಮ ಸಲಹೆ ಕೊಡುವಾಗ ಮಹಾತ್ಮರು ಹೀಗೆಂದರು—ಸ್ತ್ರೀ ಸುಧಾರಣೆಯೇ ನಿಮ್ಮ ಕಾರ್ಯ ಕ್ಷೇತ್ರ. ಮಹಿಳೆಯರ ಸೇವೆ ಮಾಡಲು ನಾನು ಸದಾ ಹಾತೊರೆಯುತ್ತಿದ್ದೇನೆ. ಸ್ತ್ರೀಯರು ನನ್ನನ್ನು ಅವರ ಸ್ನೇಹಿತನಾಗಿಯೂ ಸೇವಕನಾಗಿಯೂ ಇರುವನೆಂದು ತಿಳಿದಿರುವರು. ನಾನು ಅವರೊಳಗಿನವನೊಬ್ಬನೆಂದು ಅವರು ನನ್ನನ್ನು ತಿಳಕೊಂಡಿರುವರು. ಅವರ ಉದ್ಧಾರದ ಕುರಿತು ನನ್ನಲ್ಲಿ ಕ್ರಾಂತಿಕಾರ ಶ್ರದ್ಧಾಭಿಪ್ರಾಯಗಳಿವೆ. ಅದು ನನ್ನ ಬಾಯಿ ಆಡಂಬರವೆಂದು ತಿಳಕೊಂಡವರೂ ಇದ್ದಾರೆ. ದೈವೇಚ್ಛೆ ಇದ್ದರೆ ನನ್ನ ಪರಿಶೋಧನೆಯು ಸಂಪೂರ್ಣವಾದೊಡನೆ ನನ್ನ ಕೆಲವು ನಿರ್ದಿಷ್ಟ ಅಭಿಪ್ರಾಯಗಳನ್ನು ಸಾರ್ವಜನಿಕರ ಮುಂದಿಡ ಬಯಸುತ್ತೇನೆ. ನಿಜವಾದ ಮಹಿಳಾ ಸುಧಾರಣೆಯು ಅವರಿಂದಲೇ ಆಗಬೇಕಾಗಿದೆ. ಆದುದರಿಂದ ಬಾ ನಿಧಿಯ ಕಾರ್ಯಕ್ರಮವನ್ನು ನಿರ್ವಹಿಸಲು ಹೆಚ್ಚಾಗಿ ಮಹಿಳಾ ಸೇವಕಿಯರು ಮುಂದೆ ಬರಬೇಕು.

ಮೂಲ ಶಿಕ್ಷಣವು ಕೊಡಲ್ಪಡುವ ಮಕ್ಕಳ ಪ್ರಾಯವು ಟಾಲಿಮಿ ಸಂಘದವರ ಅಭಿಪ್ರಾಯದಲ್ಲಿ ೧೪ರ ವರೆಗಿರಬಹುದೆಂದಿದೆ. ಆದರೆ ಅದನ್ನು ೭ಕ್ಕೆ ತಗ್ಗಿಸಬೇಕೆಂದು ಗಾಂಧೀಜಿಯ ಅಭಿಪ್ರಾಯ. ಹೆಣ್ಣು ಮತ್ತು ಗಂಡು ಮಕ್ಕಳ ಶಿಕ್ಷಣಕ್ಕೆ ಒಂದೇ ತರದ ಸೌಕರ್ಯಗಳಿವೆ ಎಂದು ತಿಳಿದರೆ ಹೆತ್ತವರು ಹೆಣ್ಣು ಮಕ್ಕಳನ್ನು ಮನೆ ಕೆಲಸಕ್ಕಿಟ್ಟುಕೊಂಡು ಗಂಡು ಮಕ್ಕಳನ್ನೇ ಬಾ ನಿಧಿಯ ಶಾಲೆಗೆ ಕಳುಹಿಸುತ್ತಾರೆ. ಇದರಿಂದ ಬಾ ನಿಧಿಯ ಉದ್ದೇಶದ ವಿರೋಧವಾಗಿ ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳಿಗೇ ಹೆಚ್ಚು ಅನುಕೂಲತೆ ದೊರಕಿದಂತಾಗುತ್ತದೆ.

ಒಂದು ಸ್ಥಳದಲ್ಲಿ ಹುಡುಗಿಯರು ಸರಿಯಾದ ಸಂಖ್ಯೆಯಲ್ಲಿ ಸಿಗದಿದ್ದರೆ ಮಾತ್ರ ೭ ವರ್ಷಕ್ಕೆ ಮಿಕ್ಕಿದ ಹುಡುಗರನ್ನು ಶಾಲೆಗೆ ತೆಗೆದುಕೊಳ್ಳಬಹುದು. ಆದರೆ ಹುಡುಗಿಯರ ಸಂಖ್ಯೆ ಹೆಚ್ಚಿದಾಗ ಹುಡುಗರು ಆ ಶಾಲೆಗಳನ್ನು ಬಿಡಬೇಕಾಗುವುದು. ಹುಡುಗರನ್ನು ಹಿಂದೆ ಹಾಕಬೇಕೆಂಬ ಉದ್ದೇಶವಿದಲ್ಲ. ಆದರೆ ಬಾ ನಿಧಿಯ ಉದ್ದೇಶಕ್ಕೆ ಅವರಿಂದ ವ್ಯರ್ಥ ಭಾರ ಬೀಳಬಾರದು.

ಹೆಮ್ಮಕ್ಕಳಿಗಾಗಿಯೇ ಮೀಸಲಾಗಿರಿಸಲ್ಪಡುವ ನಿಧಿಯ ಉಪಯುಕ್ತತೆಯನ್ನು ೭ ವರ್ಷಕ್ಕೆ ಮೇಲ್ಪಟ್ಟ ಹುಡುಗರು ಹುಡುಗಿಯರಿಗಿಂತ ಹೆಚ್ಚಿನ ಸೌಲಭ್ಯಗಳನ್ನು ಪಡೆವಂತಾಗದಂತೆ ನೋಡಿಕೊಳ್ಳುವುದು ಅವಶ್ಯ.

"ಗಂಡು ಹೆಣ್ಣು ಮಕ್ಕಳಿರ್ವರಿಗೂ ಅನುಕೂಲತೆ ಕಲ್ಪಿಸಲಿಕ್ಕಾಗದಲ್ಲಿ ಹೆಮ್ಮಕ್ಕಳಿಗಾಗಿಯೇ ಪ್ರತ್ಯೇಕ ಮೂಲ ಶಿಕ್ಷಣ ಶಾಲೆಗಳನ್ನು ತೆರೆಯಬೇಕು" ಹೀಗೆಂದು ಮಹಾತ್ಮರ ಅಭಿಪ್ರಾಯ.

"ಕೋಟಿಗಟ್ಟಲೆಯಲ್ಲಿ ಹುಡುಗರು ಶಿಕ್ಷಣಾಪೇಕ್ಷಿಗಳಾಗಿ ಬಂದರೆ ಸ್ಥಳ ಸಂಕೋಚದಿಂದ ಈ ಶಾಲೆಗಳಲ್ಲಿ ಪ್ರವೇಶವನ್ನು ತಿರಸ್ಕರಿಸಬೇಕೆ?" ಎಂದೊಬ್ಬರು ಪ್ರಶ್ನಿಸಿದಾಗ ಮಹಾತ್ಮರು "ಖಂಡಿತ ಹಾಗಾಗಬಾರದು. ಶಾಲೆಯಲ್ಲಿ ಸ್ಥಳವಿಲ್ಲದಿದ್ದರೆ ಮರದ ನೆರಳಿನಲ್ಲಿ ಅವರಿಗೆ ಕಲಿಸಲ್ಪಡುವ ವ್ಯವಸ್ಥೆಯಾಗಬೇಕು. ಕಬ್ಬಿಣದ ತಕಲಿಗಳಿಲ್ಲದಿದ್ದರೆ ಬಿದಿರಿನ ತಕಲಿಗಳು ಅವರಿಗೆ ಕೊಡಲ್ಪಡುವಂತೆ ಮಾಡುವೆ. ಇವುಗಳಿಂದಲೇ ಅವರ ಶಿಕ್ಷಣಾಭ್ಯಾಸವು ಪ್ರಾರಂಭಿಸುವಂತೆ ಮಾಡುವೆನು" ಎಂದರು.

ಇಷ್ಟು, ಬಾಲಬಾಲಕಿಯರ ಶಿಕ್ಷಣದ ಕುರಿತಾಯಿತು. ಪ್ರಾಯಕ್ಕೆ ಬಂದವರ ಶಿಕ್ಷಣದ ವ್ಯವಸ್ಥೆಯೇನೆಂದು ಕೇಳಿದಾಗ ಮಹಾತ್ಮರು "ಮೂಲ ಶಿಕ್ಷಣದ ಕ್ಷೇತ್ರವನ್ನು ವಿಸ್ತರಿಸಬೇಕು. ಅದರಲ್ಲಿ ಪ್ರತಿಯೋರ್ವನಿಗೆ ಅವನ ಜೀವನದ ಪ್ರತಿಯೊಂದು ಕಾಲಮಾನದಲ್ಲೂ ಶಿಕ್ಷಣ ದೊರಕುವಂತಾಗಬೇಕು" ಎಂದರು.

ಮೂಲ ಶಿಕ್ಷಣ ಉಪಾಧ್ಯಾಯನ ಕರ್ತವ್ಯ

"ಮೂಲ ಶಿಕ್ಷಣ ಕಲಿಸುವವನು ತಾನೊಬ್ಬ ವಿಶ್ವ ಉಪಾಧ್ಯಾಯನೆಂದು ತಿಳಿಯಬೇಕು. ಅವನ ಸಂಪರ್ಕದಲ್ಲಿ ಬರುವ ಪ್ರತಿಯೋರ್ವ ಸ್ತ್ರೀಪುರುಷನಿಗೆ ಅವನು 'ಈಗ ಇವರಿಗೆ ನಾನೇನನ್ನು ಕೊಡಲಿ' ಎಂದು ತನ್ನಲ್ಲೇ ಯೋಚಿಸಿಕೊಳ್ಳಬೇಕು."

"ಅದೊಂದು ಆ ಉಪಾಧ್ಯಾಯನ ಅಧಿಕ ಪ್ರಸಂಗತನವಾಗಲಾರದೊ?" ಎಂದು ಒಬ್ಬರು ಪ್ರಶ್ನಿಸಿದರು.

ಉತ್ತರವಾಗಿ ಗಾಂಧೀಜಿ ಹೀಗೆಂದರು: "ಇಲ್ಲ. ಅಜ್ಞಾನಿಯಾದ ಕೂಲಿಕ ಮುದುಕನೋರ್ವನು ನನ್ನ ಬಳಿಗೆ ಬಂದನೆಂದು ತಿಳಿದುಕೊಳ್ಳಿ. ಅವನಿಗೆ ಅವನ ಹಳ್ಳಿಯೇ ಒಂದು ಲೋಕವಿದ್ದಂತೆ. ಅವನಿಗೆ ಸ್ವಚ್ಛತೆಯನ್ನು ಕಲಿಸುವುದು, ಅವನ ಅಜ್ಞಾನವನ್ನು ದೂರಗೊಳಿಸುವುದು, ಅವನ ಮಾನಸಿಕ ದಿಗಂತವನ್ನು ವಿಕಾಸಗೊಳಿಸುವುದು ನನ್ನ ಕೆಲಸ. ನಾನು ಅವನ ಉಪಾಧ್ಯಾಯನಾಗಬೇಕೆಂಬುದನ್ನು ಅವನಿಗೆ ತಿಳಿಸಬೇಕಾಗುದಿಲ್ಲ. ಅವನೊಂದಿಗೆ ಒಂದು ಆತ್ಮೀಯ ಸಂಬಂಧವನ್ನು ಬೆಳೆಸಿ ಅವನ ಭರವಸೆಗೆ ಒಳಗಾಗಲು ನಾನು ಪ್ರಯತ್ನಿಸುವೆನು. ಮೊತ್ತ ಮೊದಲು ಅವನು ನನ್ನ ಬೋಧನೆಯನ್ನು ತುಚ್ಛೀಕರಿಸಬಹುದು. ಆದರೆ ನಾನು ಸೋಲಲು ಒಪ್ಪುವವನಲ್ಲ. ಅವನ ಸ್ನೇಹವನ್ನು ಗಳಿಸುವ ತನಕ ನಾನು ನನ್ನ ಪ್ರಯತ್ನವನ್ನು ಮುಂದುವರಿಸುವೆ. ಒಂದು ಸಲ ಅದು ಸಾಧ್ಯವಾದರೆ ಉಳಿದ ವಿಷಯಗಳು ತನ್ನಷ್ಟಕ್ಕೆ ಹಿಂಬಾಲಿಸುತ್ತವೆ.

"ಮಕ್ಕಳು ಹುಟ್ಟುವಂದಿನಿಂದ ನಾವು ನಮ್ಮ ಕಾರ್ಯವನ್ನು ಪ್ರಾರಂಭಿಸಬ

(೭ನೇ ಪುಟಕ್ಕೆ ಮುಂದುವರಿದಿದೆ)

ಯುದ್ಧೋತ್ತರ ದಿನಗಳಿಗಾಗಿ
ಹಣ ಕೂಡಿಡಿ

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು.

(1) ನಿಮ್ಮ ಕೂಡೆ ಮಾಲುಗಳ ಅತ್ಯಧಿಕ ಸಂಚಯವಿದ್ದಲ್ಲಿ ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ. ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ.

(2) ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ. ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು.

(3) ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಪರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು.

(4) ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವಿಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ. ಇಲ್ಲವಾದರೆ ಪ್ರೇರಣೆಗಳಿಗೆ ಅಥವಾ ಸಮಾಜದ ಒತ್ತರಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಸ್ವದೇಶಾಭಿಮಾನಿ

ತಾರೀಖು 3—11—1944

ಇದು ಸಮಂಜಸವಲ್ಲ

ಎರಡು ವರ್ಷಗಳ ಹಿಂದೆ ಬೊಂಬಾಯಿಯಲ್ಲಿ ಆಗಸ್ಟ್ ಮೊದಲನೇ ವಾರದಲ್ಲಿ ಇತಿಹಾಸಪ್ರಸಿದ್ಧವಾದ ಕಾಂಗ್ರೆಸ್ ಮುಖಂಡರ ಸಭೆ ಸೇರಿದಾಗ ಮಹಾತ್ಮರ ಮನಸ್ಸಿನಲ್ಲಿ ನಿಜವಾದ ಯಾವ ಧೋರಣೆ ಇತ್ತೆಂಬುದನ್ನು ವರ್ಕಿಂಗ್ ಕಮಿಟಿಯ ಸದಸ್ಯರಾದ ಡಾ। ಸಯ್ಯದ್ ಮಹಮ್ಮದ್ ಅವರು ವ್ಯಾಸ್‌ರಾಯರಿಗೆ ಬರೆದ ಒಂದು ಪತ್ರದಿಂದ ತಿಳಿದುಬರುತ್ತದೆ.

ಸರಕಾರವು ಮಹಾತ್ಮರ ವಿಚಾರವಾಗಿ ತಪ್ಪು ತಿಳುವಳಿಕೆಯನ್ನು ಹೊಂದಿದರೆಂತಲೂ, ಅವರ ಧೋರಣೆಯ ಕುರಿತು ತಪ್ಪಭಿಪ್ರಾಯವನ್ನು ತಳೆದರೆಂತಲೂ ಅವರು ತಮ್ಮ ಪತ್ರದಲ್ಲಿ ಸೂಚಿಸಿದ್ದಾರೆ "ಮುಂದಿನ ಕಾರ್ಯವು ಅತೀ ವೇಗದ್ದೂ, ಅತ್ಯಲ್ಪ ಅವಧಿಯದೂ" ಎಂದು ಮಹಾತ್ಮರು ಹೇಳಿದಾಗ ಅವರ ಮನಸ್ಸಿನಲ್ಲಿ ಹಿಂಸಾತ್ಮಕ ಗೊಂದಲದ ಯೋಚನೆಯಿತ್ತೆಂದು ಹೇಳುವುದು ಸರಿಯಲ್ಲವೆಂದು ಡಾ। ಮಹಮ್ಮದರು ಬರೆಯುತ್ತಾರೆ ಸಾರ್ವತ್ರಿಕ ಕಾನೂನುಭಂಗ ಚಳವಳ ಹೂಡಿದಾಕ್ಷಣ ಸರಕಾರವು ಕುಸಿದು ಬೀಳುತ್ತದೆಂದು ತಿಳಕೊಳ್ಳುವಷ್ಟು ಭ್ರಾಂತಿ ಮನೋಭಾವದ ಪುರುಷರು ಮಹಾತ್ಮರಲ್ಲ.

ಬ್ರಿಟಿಷ್ ಸರಕಾರದಲ್ಲಿ ಮತ್ತು ವ್ಯಾಸ್‌ರಾಯರಲ್ಲಿ ಆತ್ಮ ಜಾಗೃತಿಯಾಗುವಂತಹ ಅದೊಂದು ಕಾರ್ಯಕ್ರಮವು ನಿಜವಾಗಿ ಮಹಾತ್ಮಾಗಾಂಧಿಯವರ ಮನಸ್ಸಿನಲ್ಲಿತ್ತು. ವ್ಯಾಸ್‌ರಾಯರನ್ನು ಕಾಣಲು ಅವರಿಗೆ ತುಂಬಾ ಉತ್ಸಾಹವಿತ್ತಾಗಿಯೂ, ಮತ್ತದರಿಂದ ಉಪಯುಕ್ತವಾದ ಫಲವುಂಟಾಗುತಿತ್ತೆಂದೂ ಅವರು ಆಶಿಸಿಕೊಂಡಿದ್ದರೆಂದೂ ಡಾ। ಮಹಮ್ಮದರಪತ್ರದಲ್ಲಿ ತಿಳಿಸಲಾಗಿದೆ

ಈ ದೃಷ್ಟಿಯಿಂದ ಮುಖಂಡರನ್ನು ಇನ್ನೂ ಬಂಧನದಲ್ಲಿಡುವುದು ಸಮಂಜಸವಾದ ಧೋರಣೆಯೆಂದು ತೋರುವುದಿಲ್ಲ ಅದು ಮುಖಂಡರಿಗೆ ಯೋಗ್ಯವಾದ ಶಿಕ್ಷೆಯೂ ಅಲ್ಲ, ಸರಕಾರಕ್ಕೆ ಶ್ರೇಯಸ್ಸು ತರುವಂತಹದೂ ಅಲ್ಲವೆಂದುಹೆಚ್ಚಿನವರು ಅಭಿಪ್ರಾಯಪಡಬೇಕಾಗಿದೆ.

ತುಂಡು ತಂಡಗಳು

ಹಿಂದಿನ ಮಹಾಯುದ್ಧವು ಕೊನೆಗೊಂಡೊಡನೆ ಗೆದ್ದ ಶಕ್ತಿ ರಾಷ್ಟ್ರಗಳು ಯುರೋಪಿನ ಹಲವುಕಡೆಗಳಲ್ಲಿನ ರಾಜ್ಯಗಳನ್ನು ತುಂಡು ತುಂಡಾಗಿ ಸೀಳಿ ಅವುಗಳ ಬೇರೆ ಬೇರೆ ಭಾಗಗಳನ್ನು ಪ್ರತಪ್ರತ್ಯೇಕ ರಾಷ್ಟ್ರಗಳ ಗಡಿಗಳಲ್ಲಿ ಸೇರಿಸಿ ಕೆಲವೊಂದು ಗೊಂದಲಮಯ ಚಿಕ್ಕಪುಟ್ಟ ಜನಾಂಗಗಳಾಗಿ ಮಾಡಿದರು. ಪರಿಣಾಮವಾಗಿ ಅಂತ್ಯವಿಲ್ಲದ ಅಂತಃಕಲಹಗಳು ಪ್ರಾರಂಭವಾಗಿ ಇಂದಿನ ಭೀಕರ ಸಂಗ್ರಾಮಕ್ಕೆ ಕಾರಣವಾಯಿತೆನ್ನಬಹುದು.

ಇದರ ನಿದರ್ಶನವೆಂದರೆ ಬಾಲ್ಕನ್ ರಾಜ್ಯಗಳು. ಅಂದಿನ ಆ ಸಂಕುಚಿತ ಧೋರಣೆಯ ಧೋರಣೆಯಿಂದಾಗಿ ಈ ರಾಜ್ಯಗಳಲ್ಲಿ ಬಿಡಿಸಲಾಗದ ಸಮಸ್ಯೆಗಳು ತಲೆಯೆತ್ತಿವೆ. ಪೋಲೆಂಡಿನ ಅವಸ್ಥೆಯೂ ಅದೇ ತರದ್ದಾಗಿದೆ

ಚರ್ಚಿಲ್ಲರು ಮಿತ್ರರಾಷ್ಟ್ರಗಳಲ್ಲಿ ಭೇದವನ್ನು ಕಲ್ಪಿಸಿಕೊಳ್ಳಬಾರದೆಂದೂ ಅದರಿಂದ ಹಿಟ್ಲರನಿಗೆ ಬಹಳ ಅನುಕೂಲತೆಯುಂಟಾಗುವುದೆಂದೂ ಆದುದರಿಂದ ಐಕ್ಯತೆಯನ್ನು ಕಾಪಾಡಿಕೊಂಡು ಅವನನ್ನು ಸೋಲಿಸಬೇಕೆಂದೂ ಬಹಳ ಪ್ರಯತ್ನಪಡುತಿದ್ದಾರೆ ಆದರೆ ತೃಪ್ತಿಕರವಾಗಿ ಯಾವ ಮಾತುಕತೆಗಳನ್ನೂ ಪೂರೈಸಲಾಗದಿದ್ದುದು ತುಂಡು ರಾಜ್ಯಗಳನ್ನಾಗಿ ಮಾಡಿದ್ದವರ ಒಂದು ಬುದ್ಧಿಪ್ರಮಾದವೆಂದು ತಿಳಿದುಕೊಳ್ಳಬೇಕಾಗುತ್ತದೆ.

ಅದೇ ರೀತಿಯಲ್ಲಿ ಭಾರತದಲ್ಲಿಯೂ ಹೊಸ ಹೊಸ ಪಕ್ಷಗಳನ್ನು ಪ್ರಾರಂಭಿಸುವ ಯೋಜನೆಗಳಾಗುತ್ತಿರುವುದು ಕಳವಳದ ವಿಚಾರವಾಗಿದೆ ಶಿಪಾಯಿಗಳ ಒಂದು ಪಾರ್ಟಿಯಾಗುತ್ತಿದೆಯಂತೆ ಪಂಜಾಬಿನ ಪ್ರಧಾನ ಮಂತ್ರಿ ಕಿಜಾರ್ ಹಯತ್ ಖಾನರೇ ಈ ಹೊಸ ಕಲ್ಪನೆಯ ಕಾರಣ ಕರ್ತೃಗಳು

ಶಿಪಾಯಿಗಳ ಪ್ರತಿನಿಧಿಗಳಿಗೆ ಮುಂದಿನ ರಾಜ್ಯಾಂಗ ಸುಧಾರಣೆಯಲ್ಲಿ ಹೆಚ್ಚಿನ ಕೈವಾಡಕ್ಕೆ ಆಸ್ಪದ ಸಿಗಬೇಕೆಂಬುದೇ ಅವರ ಅಭಿಪ್ರಾಯ ಇದಕ್ಕಾಗಿ ಚುನಾವಣೆಗಳಲ್ಲಿ ಸೈನಿಕ ವರ್ಗದ ಪ್ರತ್ಯೇಕ ಕ್ಷೇತ್ರವೊಂದನ್ನು ಕಲ್ಪಿಸಿ ಅವರಿಗೆ ಎರಡೆರಡು ವೋಟುಗಳ ಹಕ್ಕನ್ನು ಕೊಡಬೇಕೆಂದು ಅವರು ಸೂಚಿಸಿದ್ದಾರೆ

ಪ್ರಜಾಪ್ರತಿನಿಧಿ ಸಭೆಗಳಲ್ಲಿ ಸೈನಿಕರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡುವ ಈ ಪದ್ಧತಿಯು ಜಗತ್ತಿನ ಇತಿಹಾಸದಲ್ಲೇ ಯಾರೂ ಕಂಡೂ ಕೇಳದ ವಿಷಯ ಅಗಲೇ ನಮ್ಮ ದೇಶದಲ್ಲಿ ಸ್ಥಾಪಿಸಲ್ಪಡಬೇಕೆಂದು ಕೂಗಾಟವೆದ್ದ ಅನೇಕ ಸ್ಥಾನಗಳಜೊತೆಗೆ ಈ 'ಶಿಪಾಯಿ ಸ್ಥಾನ'ದ ನಿರ್ಮಾಣವಾದರೆ ಕಸ ಬಿದ್ದ ಕಣ್ಣಿಗೆ ಎಣ್ಣೆ ಬಿಟ್ಟಂತಾಗುವುದು,

ಇಂತಹ ಅಪ್ರಾಸಂಗೀಕ ಸೂಚನೆಗಳು ಮುಂದೆ ಬಾರದಂತೆ ಸರಕಾರದವರು ಸಕಾಲದಲ್ಲಿ ಎಚ್ಚರಿಕೆ ಕೊಟ್ಟು ಐಕ್ಯಸಾಧನೆಯ ಮಾರ್ಗಗಳನ್ನೇ ಸಂಶೋಧಿಸಬೇಕಾಗಿ ದೇಶ ಹಿತವುಳ್ಳವರ ಹಾರೈಕೆ.

ವಿವಿಧ ಯುದ್ಧರಂಗಗಳಿಂದ

ಬರ್ಮಾ

ಮಳೆಗಾಲದಿಂದ ಅಸ್ಸಾಮಿನ ಮಲೇರಿಯಾ ಜ್ವರದ ಅರಣ್ಯಗಳಲ್ಲಿ ಇರಬೇಕಾದ ಮಿತ್ರ ಸೈನ್ಯಕ್ಕೆ ತುಂಬಾ ಸಂಕಷ್ಟವೊದಗಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಅಂತಹದೇನೂ ಸಂಭವಿಸಲಿಲ್ಲ. ಅಗಲೇ ವನ ಸಮರದಲ್ಲಿಯೂ, ಗುಡ್ಡಕಾಡು ಕಾದಾಟದಲ್ಲಿಯೂ ತುಂಬಾ ಪ್ರವೀಣತೆ ಪಡೆದ ಮಿತ್ರ ದಳಗಳು ತಮ್ಮ ವಾಹನ ಮಾರ್ಗಗಳನ್ನೂ ಸರಬರಾಯಿಗಳನ್ನೂ ಭದ್ರಪಡಿಸಿರುವರು

ಬರ್ಮಾದಲ್ಲಿನ ಜಪಾನಿಯರಿಗೆ ಮಿತ್ರರ ಆರ್. ಮುಂದಳಗಳು ತುಂಬಾ ಸಂಕಷ್ಟವನ್ನುಂಟು ಮಾಡಬಹುದು. ಚಿಂದ್‌ವಿನ್ ಬಾವೊ ಮತ್ತು ಸಾಲ್ವಿನ್ ನದಿ ಪ್ರದೇಶಗಳ ಮೇಲೆ ಇವು ಚಿಮುಟಿಯಂತೆ ಮುಚ್ಚಿಕೊಂಡು ಶತ್ರುಗಳನ್ನು ಸುತ್ತಿ ಬಚ್ಚಿ ಬಿಡಲು ಪ್ರಯತ್ನಿಸುತ್ತವೆ

ಕೆಲವೇ ದಿನಗಳ ಹಿಂದೆ ಒಂದು ಶತ್ರು ವಿಮಾನವು ಬಂಗಾಲದ ಬಳಿಯ ಕಾಕ್ಸ ಬಜಾರ ಮೇಲೆ ಬಾಂಬೆಸೆದು ಸ್ವಲ್ಪ ಹಾನಿ ಮಾಡಿದೆ. ಇದು ನಿರ್ಧಾರಯುಕ್ತ ಧಾಳಿ ಎಂದು ಹೇಳಲಾಗುವುದಿಲ್ಲ. ಆದರೂ ಅದೊಂದು ಹೆದರಿಕೆ ಹಾಕುವ ಒಂದು ಉಪಾಯವಲ್ಲದೆ ಅವರ ಶಕ್ತಿಯ ಸೂಚನೆಯಲ್ಲವೆಂದು ತಿಳಿಯಲಾಗಿದೆ.

ಈ ಸಂದರ್ಭದಲ್ಲ ಜನರಲ್ ಸ್ಟಿಲ್‌ವೆಲ್ಲರನ್ನು ಬರ್ಮಾ ರಂಗದ ಮುಖ್ಯಾಧಿಕಾರತ್ವದಿಂದ ಹಿಂದಕ್ಕೆ ಕರೆಸಿಕೊಳ್ಳಲಾಗಿದೆ ಇದರ ವಿಷಯ ಅನೇಕ ಊಹಾಪೋಹೆಗಳಿವೆಯಂತೆ. ಆದರೆ ಚೀನದಲ್ಲಿ ಸದ್ಯದಲ್ಲೆ ಅಮೆರಿಕನ್-ದಳಗಳು ಮುತ್ತಿಗೆ ಹಾಕುವ ಯೋಜನೆಯಲ್ಲಿರುವುದರಿಂದ ಸ್ಟಿಲ್‌ವೆಲ್ಲರು ಆದರ ನಾಯಕರಾಗಿ ಮರಳಬಹುದೆಂದು ಊಹಿಸಲಾಗಿದೆ.

ಪೆಸಿಫಿಕ್

ಫಿಲಿಪ್ಪಾಯಿನ್ ದ್ವೀಪಸ್ತೋಮದ ಸುತ್ತುಮುತ್ತಿನಲ್ಲಿ ಕಳೆದ ವಾರ ಭಯಂಕರ ನೌಕಾ ಯುದ್ಧವಾಯಿತು ಎಡ್ಮಿರಲ್ ನಿಮಿಟ್ಜರ ಅಮೆರಿಕನ್ ಪಡೆಯು ಎರಡು ಜಪಾನೀ ಪಡೆಗಳಿಂದ ಇದಿರಿಸಲ್ಪಟ್ಟಿತ್ತು. ಆದರೆ ಮಿತ್ರ ಪಡೆಗಳ ಅಪಾರ ನೌಕಾ ಶಕ್ತಿಯ ಮುಂದೆ ಶತ್ರು ನಾವೆಗಳು ತುಸು ಪ್ರಯತ್ನದಲ್ಲೇ ಪಲಾಯನಗೊಳ್ಳಬೇಕಾಯಿತು

ಈ ಜಲ ಯುದ್ಧದ ಪರಿಣಾಮವಾಗಿ ಜಪಾನಿ ನೌಕಾ ವಿಮಾನ ಪಡೆಗಳು ೧೯ ಅಮೆರಿಕನ್ ವಿಮಾನ ವಾಹನಗಳನ್ನೂ ಇತರ ದೊಡ್ಡ ನೌಕೆಗಳನ್ನು ಮುಳುಗಿಸಿವೆಯೆಂದು ಟೋಕಿಯೋ ರೇಡಿಯೋದಿಂದ ಸಾರಲಾಗಿದೆಯಂತೆ

ಆದರೆ ಅಧಿಕಾರಿಯುಕ್ತ ಅಮೆರಿಕನ್ ಪ್ರಕಟನೆಯಲ್ಲಿ ಜಪಾನಿಗಳ ೨೪ ಹಡಗಗಳು ಮುಳುಗಿಸಲ್ಪಟ್ಟಿವೆ ೧೩ ನಾವೆಗಳು ಜಖಂಗೊಂಡು ಮುಳುಗಿವೆ ೨೧ ಇತರ ನೌಕೆಗಳು ಬಲವಾಗಿ ಹಾನಿಗೊಳಗಾಗಿವೆಯಂತೆ ೧೫೦ಕ್ಕೂ ವಿಕ್ಕಿ ಶತ್ರು ವಿಮಾನಗಳು ಕೆಡಹಲ್ಪಟ್ಟಿವೆ ಅಮೆರಿಕನರ ೧೦ ವಿಮಾನಗಳು ಮಾತ್ರ ನಾಶವಾಗಿವೆ.

ಈ ಸಾಗರ ಸಮರದಲ್ಲಿ ಜಪಾನಿಯರ ಎರಡು ಗುಪ್ತ ಯುದ್ಧ ಹಡಗಗಳು ಭಾಗವಹಿಸಿವೆಯೆಂದೂ ಹೇಳಲ್ಪಟ್ಟಿದೆ. ಇವು ಎಂಟು ವರ್ಷಗಳ ಹಿಂದಿನಿಂದ ಗುಪ್ತವಾಗಿ ಜರ್ಮನ್ ಯುದ್ಧಕಾರ್ಯದಿಂದ ಜರ್ಮನ್ ಯುದ್ಧನಾವೆಗಳ ಮಾದರಿಯಲ್ಲಿ ಕಟ್ಟಲ್ಪಟ್ಟವೆಗಳೆಂದು ಊಹಿಸಲಾಗಿದೆ. ಇವು ಭಯಂಕರ ಹಾನಿಕಾರಕ ಧಾಳಿ ಮಾಡಲು ಶಕ್ತಿಯುಳ್ಳವುವೆಂದೂ ನಂಬಲಾಗಿದೆ.

ಯುರೋಪ್ ರಂಗ

ಇಲ್ಲಿ ಮಿತ್ರ ಪ್ರಗತಿಯು ಮಂದಗತಿಯನ್ನು ತಾಳಿದೆ. ಜರ್ಮನರು ಮಹಾವೇಷದಿಂದ ಕಾದಾಡುತ್ತಿರುವುದೇ ಇದಕ್ಕೆ ಕಾರಣ. ಪಶ್ಚಿಮದಲ್ಲಿ ಹೋಲೆಂಡಿನ ಬಳಿಯ ತಗ್ಗು ಪ್ರದೇಶವನ್ನು ವಶಮಾಡಿಕೊಳ್ಳುತ್ತಾ ಮುಂದೆ ಸಾಗಲಾಗಿದೆ. ಪಶ್ಚಿಮ ಹೋಲೆಂಡಿನಿಂದ ಜರ್ಮನರನ್ನು ಸಂಪೂರ್ಣ ಓಡಿಸಲಾಗಿದೆ. ಇಲ್ಲಿಂದ ಮುಂದುವರಿದ ಬ್ರಿಟಿಷ್ ದಳಗಳು ಆಚೆನ್ ಬಳಿಯ ಕೆನಡಿಯನ್ ದಳದೊಂದಿಗೆ ಕೂಡಿವೆಯಂತೆ.

ಇತ್ತ ಡನ್‌ಕರ್ಕನಲ್ಲಿ ಇನ್ನೂ ಭದ್ರವಾಗಿದ್ದ ಜರ್ಮನ್ ಸೈನ್ಯ ಠಾಣ್ಯದಮೇಲೆ ಮಿತ್ರ ದಳಗಳು ಆಕ್ರಮಣಮಾಡಲಾರಂಭಿಸಿವೆಯೆಂದು ಸುದ್ದಿ.

ರಶ್ಯನ್ ರಣರಂಗದಲ್ಲಿ

ದಕ್ಷಿಣದಲ್ಲಿ ರಶ್ಯನರು ಹಂಗೇರಿಯ ಹೆಚ್ಚಿನ ಭಾಗವನ್ನು ಜರ್ಮನರಿಂದ ಮುಕ್ತಗೊಳಿಸಿದ್ದಾರೆ. ಈ ಯಶಸ್ಸಿಗೆ ರುಮೇನಿಯನ್ ದಳಗಳು ತುಂಬಾ ಸಹಾಯಮಾಡಿವೆ

ಪೂರ್ವ ಪ್ರಶ್ಯದಲ್ಲಿ ಬಲವತ್ತರವಾದ ನೆಲದಡಿಯಲ್ಲಿ ಕೋಟೆಕೊತ್ತಳಗಳಿವೆಯೆಂದು ಅಲ್ಲಿ ತಡೆಯಲ್ಪಟ್ಟ ರಶ್ಯನ್ ಸೈನ್ಯ ಶಿಬಿರದಿಂದ ವರದಿ ಬಂದಿದೆ ಅವುಗಳ ಹಿಂದೆ ಜರ್ಮನ್ ಕಾಲುದಳಗಳು ಆಶ್ರಯಪಡೆದಿವೆಯಂತೆ.

ಇತ್ತ ವಾರ್ಸೊ ಬಳಿಯಲ್ಲಿಯೂ ರಶ್ಯನ್ ಸೈನ್ಯಗಳು ಪರಿಣಾಮಕಾರಿ ಪ್ರಗತಿಯಿಂದ ಸಾಗುತ್ತಿವೆ ಇಲ್ಲಿಯೂ ಜರ್ಮನರ ಉಗ್ರ ಪ್ರತಿಭಟನೆ ಇರುವುದಾದರೂ ಮಾರ್ಶಲ್ ರೋಕೊಸೊವ್ಸ್ಕಿಯವರ ದಳಗಳು ಸ್ವಲ್ಪ ಸ್ವಲ್ಪವಾಗಿ ಪ್ರದೇಶಗಳನ್ನು ಹಿಡಿದು ಭದ್ರಮಾಡಿ ಮುನ್ನುಗ್ಗುತ್ತಿವೆ ಲೆಟ್ವಿಯದಲ್ಲಿಯ ೩೦ ಜರ್ಮನ್ ದಳಗಳು ಹಿಂದೆ ಸರಿದಿರುವುದಾಗಿ ವರದಿ ಫಿನ್‌ಲೆಂಡಿನ ದಳಗಳು ಅನೇಕ ಸಂಧಿಸ್ಥಾನಗಳನ್ನು ಹಿಡಿದಿವೆ ಅಗಲೇ ಮಿತ್ರರು ಅವರಿಗೆ ವಿಮಾನಗಳನ್ನು ಕಳುಹಿಸುತ್ತಿರುವರು ಅನೇಕ ಬ್ರಿಟಿಷ್ ವಿಮಾನಗಳು ಸಣ್ಣ ಸಣ್ಣ ಗುಂಪಾಗಿ ಅತ್ತ ತೆರಳಿವೆಯೆಂದು ಸುದ್ದಿ

ಒಂದು ಕಡೆಯಿಂದ ರಶ್ಯನರು ಜೆಕೊಸ್ಲೊವೇಕಿಯದೊಳಗೆ ನುಗ್ಗಿದ್ದಾರೆ. ಉತ್ತರದಲ್ಲಿ ಅವರು ನಾರ್ವೆಯೊಳಗೆ ನುಗ್ಗಿರುವರು ಅಲ್ಲಿ ಶತ್ರುಗಳ ಕೆಲವು ಹಡಗುರಾಣ್ಯಗಳೂ ಹಿಡಿಯಲ್ಪಟ್ಟಿವೆ.

ದಿನವಹಿ ಉಪಯೋಗದ ಲೋಹದ
ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ.
ದಾಗಿಸೆಗಳ ಭಂಡಾರ.
"ಕಲ್ಲಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ॰ ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ, ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ಬತ್ತದ ಕುರಿತು ಕಲೆಕ್ಟರರ ಪ್ರಕಟಣೆ

ಶ್ರೀ ಕೆ. ಬಿ. [illegible] ಹೆಗ್ಡೆ ಎಂ. ಎಲ್. ಎ. ಅವರು ಅಕ್ಕಿ, ಬತ್ತ, ಗೇಣಿ, ರಿಕ್ವಿಜೇಶನ್, ರಿಕ್ವಿಜೇಶನ್‌ಗಳ ನಿಯಮಗಳ ವಿಚಾರ ಕೆಲವು ಸಂದೇಹಗಳ ಕುರಿತು ನಮ್ಮ ಕಲೆಕ್ಟರರಿಗೆ ಪತ್ರ ಬರೆದದ್ದು, ಕಲೆಕ್ಟರರು ಅದಕ್ಕೆ ತಮ್ಮ ಉತ್ತರಗಳನ್ನು ಸ್ಪಷ್ಟೀಕರಣದ ಉದ್ದೇಶದಿಂದ ಕೊಟ್ಟಿರುತ್ತಾರೆ. ಅವುಗಳ ಮುಖ್ಯ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಪ್ರ:—ಒಕ್ಕಲಿಗೆ (೧) ಗೃಹಕೃತ್ಯ, (೨) ಬೇಸಾಯಕ್ಕೆ (೩) ಬೆಳೆ ಬೀಜಕ್ಕೆ ಅವಶ್ಯವಿರುವ ಖರ್ಚನ್ನು ಬಿಟ್ಟು ಧನಿಗೆ ಸಲ್ಲಿಸಲಿಕ್ಕೆ ಬೇಕಾದಷ್ಟು ಬೆಳೆ ಬೆಳೆಯದಿದ್ದರೆ ಅವನ ಪೂರಾ ಗೇಣಿಯನ್ನು (ಸುಗ್ಗಿ ಇದ್ದರೆ ಎರಡನೇ ಅಂಶ. ಇಲ್ಲದಿದ್ದರೆ ಎರಡರ ಪೂರ್ಣಭಾಗ) ರಿಕ್ವಿಜೇಶನ್ ಮಾಡಲಾಗುವುದೆ?

ಉ:—ವರ್ಗದಾರನ ಸ್ವಂತ ಅವಶ್ಯಕತೆಯನ್ನು ಮಿಕ್ಕಿ ಉಳಿದ ಅವನ ಗೇಣಿಯನ್ನೂ, ಗೇಣಿಕೊಟ್ಟು ಒಕ್ಕಲಿನ ಬಳಿ ಇರುವ ಉತ್ಪತ್ತಿಯಲ್ಲಿ ಅವನ ಖರ್ಚಿಗೆ ಮಿಕ್ಕಿ ಉಳಿದುದನ್ನೂ ರಿಕ್ವಿಜೇಶನ್ ಮಾಡಲಾಗುವುದು. ಅಗತ್ಯವಿದ್ದಲ್ಲಿ ಒಕ್ಕಲಿಗೆ 'ಗುರುತು ಕಾರ್ಡು' ಕೊಡಲಾಗುವುದು.

ಪ್ರ:—ಮೇಲಿನ ೧, ೨, ೩ರಲ್ಲಿನ ಖರ್ಚಿಗೆ ಬೇಕಾದಷ್ಟು ತೆಗೆದು ಒರ್ವ ಒಕ್ಕಲಿನ ಬಳಿ ಗೇಣಿಯನ್ನು ಪೂರ್ತಿಗೊಡುವಷ್ಟು ಉಳಿಯದಿದ್ದರೆ ಮತ್ತು ಇದ್ದಷ್ಟನ್ನು ರಿಕ್ವಿಜೇಶನ್ ಮಾಡಿದರೆ ಅವನಿಗೆ 'ಗುರುತು ಕಾರ್ಡು' ಕೊಡಲಾಗುವುದೆ? ಹಾಗಿದ್ದಲ್ಲಿ ಅವನು ಯಾರ ಬಳಿ ಮನವಿ ಮಾಡಬೇಕು?

ಉ:—ಅವನ ಬಳಿಯುಳ್ಳದ್ದ ಪಾಲು ಖರ್ಚಾದ ಮೇಲೇ ಅವನಿಗೆ ಕಾರ್ಡು ಕೊಡಲಾಗುವುದು. ಗ್ರೈನ್ ಪರ್ಚೆಸಿಂಗ್ ಆಫೀಸರರು ಈ ಕುರಿತು ತನಿಖೆ ನಡೆಸುವರು. ಒಕ್ಕಲು ಇಂತಹ ಅಧಿಕಾರಿಗೆ, ರೆವಿನ್ಯೂ ಇನ್ಸ್‌ಪೆಕ್ಟರರಿಗೆ, ಇಲ್ಲವೆ ತಹಶೀಲ್ದಾರರಿಗೆ ಅಥವಾ ಅವರಿಂದ ಅಧಿಕರಿಸಲ್ಪಟ್ಟ ಆಫೀಸರರಿಗೆ ಮನವಿಮಾಡಬಹುದು.

ಪ್ರ:—ಒಕ್ಕಲು ತನ್ನ ಅವಶ್ಯ ಖರ್ಚು ಕಳೆದು ಧನಿಗೆ ಸಲ್ಲಿಸಬೇಕಾದ ಗೇಣಿ ಪ್ರಮಾಣಕ್ಕೆ ಕಮ್ಮಿಯಾದರೆ, ಮತ್ತು, ಅದನ್ನು ಸರಿಯೆಂದು ಧನಿಯು ಒಪ್ಪಿಕೊಂಡು ಇರ್ವರೂ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಮಾಡಿದಲ್ಲಿ ಅವರ ರಿಕ್ವಿಜೆಶನ್ ಪ್ರಮಾಣವನ್ನು ಕಡಿಮೆಮಾಡಲಾಗುವುದೇ?

ಉ:—ಇಲ್ಲ.

ಪ್ರ:—ಒಂದುಕಡೆ ರಿಕ್ವಿಜೆಶನ್ ನೋಟಿಸ್ ಕೊಟ್ಟ ಅಧಿಕಾರಿಗಳು ಮಿಗತೆಯ ಯಾವ ನಿಯಮಪ್ರಕಾರ ಅದರ ಪ್ರಮಾಣ ನಿರ್ಧರಿಸಿದರೆಂದು ತಿಳಿಯುವುದಿಲ್ಲ. ಹೀಗೆ ಆಧಾರಕೊಡದೆ ರಿಕ್ವಿಜೆಶನ್ ಮಾಡಿದುದು ಕಲೆಕ್ಟರರು ಕೊಟ್ಟ ಅಪ್ಪಣೆಗೆ ತಕ್ಕಂತವುಗಳಾಗಿರುತ್ತದೆಯೆ?

ಉ:—ಮಿಗತೆಯ ಪ್ರಮಾಣ ನಿರ್ಧರಿಸುವ ಸರಕಾರದ ಸೂಚನೆಯ ಹುಕುಮು ಅಧಿಕಾರಿಗಳ ಬಗ್ಗೆ ಕೊಟ್ಟದ್ದಿರುತ್ತದೆ. ಕೊಡುವ ಅಥವಾ ಕೊಡಲ್ಪಟ್ಟ ರಿಕ್ವಿಜೆಶನ್ ನೋಟಿಸುಗಳು ಹೇಗಿದ್ದರೂ ಅವು ಸರಿಯೆಂದಲೇ ಲೆಕ್ಕ. ಸದ್ರಿ ಅಧಿಕಾರಿಗಳು ತಮ್ಮ ಬಳಿ ತಮ್ಮ ನಿರ್ಧಾರದ ಸಮಂಜಸವಾದ ದಾಖಲೆ, ಸತ್ಯಾಂಶಗಳನ್ನು ಇಟ್ಟುಕೊಳ್ಳಬೇಕು. ಈ ಸಂಬಂಧ ತಮಗೆ ಅನ್ಯಾಯವಾಗಿದೆಯೆಂದು ಆಕ್ಷೇಪವಿದ್ದವರು ಸದ್ರಿ ರಿಕ್ವಿಜೆಶನ್ ಆಫೀಸರರೊಂದಿಗೆ ಕೂಡಲೇ ತಿಳಿಸಬೇಕು. ಆಗ ಅದನ್ನು ತಿದ್ದಲೂ, ರದ್ದು ಮಾಡಲೂಬಹುದು. ಆಗಲೂ ತೃಪ್ತಿಯಾಗದಿದ್ದರೆ ರೆವಿನ್ಯೂ ಡಿವಿಜನಲ್ ಆಫೀಸರರಿಗೆ ಅರಿಕೆ ಮಾಡಿಕೊಳ್ಳಬಹುದು.

ಪ್ರ:—ನೀರು ಹಾಯಿಸಿಯೇ ಮಾಡಲಾಗುವ ೨ನೇ ಬೆಳೆಯ ಖರ್ಚಿಗೆ ಎಕ್ರೆಗೆ ೩ ಮುಡಿಯಂತೆ ಖರ್ಚು ಹಿಡಿಯಬೇಕೆಂದು ಹುಕುಂ ಆಗಿದೆ. ಇದು ಕಮ್ಮಿ ಎಂದು ಅನುಭವಕ್ಕೆ ಬಂದಿದೆ. ಹೆಚ್ಚಿಗೆ ಬೇಕಾದಲ್ಲಿ ಒಂದುವೇಳೆ ಅದಕ್ಕೆ ಯಾರಲ್ಲಿ ಮನವಿಮಾಡಬೇಕು?

ಉ:—ಅಕ್ಕಿ ಬತ್ತ ಕೊಡದಲ್ಲಿ [illegible] ಈ ಕೆಲಸವನ್ನು ಪೂರೈಸಿದರೂ ಈ ಮಾಹು ಮುಡಿಯ ಒಳಗೇ ಆ ಖರ್ಚು ಸಾಕಾಗುವುದು. ಇದಕ್ಕೆ ಕಮ್ಮಿಯಾಗುವಲ್ಲಿ [illegible] ನಿಶ್ಚಯಿಸಲಾಗುವುದು.

ಪ್ರ:—ಒಂದು ಹಳ್ಳಿಯಲ್ಲಿ ರಿಕ್ವಿಜೆಶನ್ ನೋಟಿಸು ಬಂದ ದಿನವೇ ತಹಶೀಲ್ದಾರರ ರಿಕ್ವಿಜೆಶನ್ (ವಶಪಡಿಸುವ) ಹುಕುಂ ಬಂದಿರುತ್ತದೆ. ಈ ನಡವಳಿಕೆಯು ಸಮಂಜಸವಾದುದೇ?

ಉ:—ಕಾನೂನು ಪ್ರಕಾರ ಇದು ಸರಿ, ವಿಶೇಷ ಯಾವುದೋ ಸಂದರ್ಭದಲ್ಲಿ ಮಾತ್ರ ಈ ನಡವಳಿಕೆ ಕೈಕೊಂಡಿರಬಹುದು. ತಾವಾಗಿ ತಂದೊಪ್ಪಿಸುವ ಕೆಲಸಕ್ಕೆ ಯಾವಾಗಲೂ ಸಮಯ ಕೊಡಲಾಗುವುದು. ಹಾಗೆ ಒಪ್ಪಿಸದಿದ್ದಲ್ಲಿ ಮಾತ್ರ 'ರಿಕ್ವಿಜೆಶನ್' ಆಜ್ಞೆ ಕೊಡಲಾಗುವುದು. ಕಂತು ಕ್ರಮದಲ್ಲಿ ತಂದೊಪ್ಪಿಸಲು ಒಪ್ಪಿದಲ್ಲಿ ಸಾಧ್ಯವಾದ ಮಟ್ಟಿಗೆ ಕಂತು ಹುಕುಮಿನ ಕ್ರಮವನ್ನು ಅನುಸರಿಸಲಾಗುವುದು.

ಪ್ರ:—ಬೆಳ್ತಂಗಡಿಯ ಬಳಿ ಒಂದು ಕಡೆ ಬತ್ತವನ್ನೇ ತಾ. ೧೫ರೊಳಗೆ ತಂದೊಪ್ಪಿಸಬೇಕೆಂದು ತಹಶೀಲ್ದಾರರ ಹುಕುಂ ಆಗಿದೆ. ಆದರೆ ಅಲ್ಲಿನ ಅಧಿಕೃತ ಸ್ಟೋರ್ಸಿನವರು ಅದನ್ನು ಸ್ವೀಕರಿಸಲು ಒಪ್ಪಲಿಲ್ಲ. ಇಂತಹ ಸಂದರ್ಭದಲ್ಲಿ ಒಕ್ಕಲು ಏನು ಮಾಡಬೇಕು?

ಉ:—ತಂದೊಪ್ಪಿಸುವ ವಾಯಿದೆ ಈ ತಿಂಗಳ ೧೫ರ ತನಕ ಮುಂದುವರಿಸಿದೆ. ಹೊಸ ದುರ್ಗ ಸಬ್ ತಾಲೂಕಿನಲ್ಲಿ ಮಾತ್ರ ೧ ತಿಂಗಳ ಹಿಂದೆ ಕಟಾವು ಪ್ರಾರಂಭವಾಗಿದ್ದರಿಂದ ಕೂಡಲೇ ತಂದೊಪ್ಪಿಸಬೇಕೆಂದು ಹುಕುಂ ಆಗಿದೆ.

ಪ್ರ:—ರಿಕ್ವಿಜೆಶನ್ ನೋಟಿಸಿನಲ್ಲಿರುವ ಒಂದು ಸೂಚನೆ ಪ್ರಕಾರ ಒಕ್ಕಲು ಬತ್ತವನ್ನು ಅಕ್ಕಿ ಮಾಡಿ ಕೊಡುವ ಸಂಬಂಧ ಒಂದು 'ಕಂಟ್ರಾಕ್ಟ್' ಮಾಡಿ ಕೊಳ್ಳಬಹುದೆಂದಿದೆ. ಕೆಲವು ಸಂದರ್ಭಗಳಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರರು ಈ ಏರ್ಪಾಡನ್ನೂ ರದ್ದು ಮಾಡಿದ್ದಾರೆ. ಇದು ಸರಿಯೆ? ಒಕ್ಕಲು ಯಾರೊಡನೆ ಕಂಟ್ರಾಕ್ಟ್ ಮಾಡಬೇಕು?

ಉ:—'ಕಂಟ್ರಾಕ್ಟ್' ಪ್ರಕಾರ ಅಕ್ಕಿ ಬತ್ತ ಒಪ್ಪಿಸುವುದು ಈ ಜಿಲ್ಲೆಗೆ ಅನ್ವಯಿಸುವುದಿಲ್ಲ. ಇಲ್ಲಿ ಅದಕ್ಕೆ ಅವಕಾಶವೇ ಇಲ್ಲ.

ಪ್ಲೇಗ್ ವರದಿ

ಇದರ ಕುರಿತು ನಿವಾರಣೆಯ ಏರ್ಪಾಡುಗಳು ಮುತುವರ್ಜಿಯಿಂದ ನಡೆಯುತ್ತಿವೆ. ಕೆಲವು ಕಡೆಗಳಲ್ಲಿ ಇಲಿಗಳು ಅಪರೂಪವಾಗಿ ಬೀಳುತ್ತವೆ. ಅವುಗಳಲ್ಲಿ ಕೆಲವೊಂದು ಪ್ಲೇಗಿನವು ಎಂದು ಕಂಡು-ಬಂದಿದೆ. ಇಂತಹವು ಬಂದರ, ಬೊಕಪಟ್ಣದ ಬಳಿ ಬಿದ್ದದ್ದೆಂದು ತಿಳಿದು ಬರುತ್ತದೆ. ವಿಷ ವಾಯು ಪ್ರಯೋಗದಿಂದ ಇಲಿ ಬಿಲಗಳ ಶೋಧಿಸಲ್ಪಡುತ್ತವೆ. ಕಳೆದ ವಾರ ಯಾರಿಗೂ ಪ್ಲೇಗು ಸೋಂಕಿಲ್ಲ.

ಗಾ। ಸಾ। ಬ್ರಾ। ಪರಿಷತ್ತು

ಇದೇ ಬರುವ ದಶಂಬರ ತಿಂಗಳ ಕೊನೆಯ ಸುಮಾರಿಗೆ ಮೇಲ್ಕಂಡ ಪರಿಷತ್ತು ಸೇರುವುದೆಂದು ತಿಳಿದು ಬರುತ್ತದೆ. ಆಗ ಮಂಡಿಸಲಿಚ್ಛಿಸುವ ಠರಾವುಗಳನ್ನು ಸದಸ್ಯರು ಬರುವ ತಿಂಗಳ ೭ರೊಳಗೆ 'ಗೌರವ ಕಾರ್ಯದರ್ಶಿ, ಶ್ರೀ ರಂಗ ಭವನ, ಹಂಪನಕಟ್ಟೆ' ಇಲ್ಲಿಗೆ ತಲ್ಪಿಸಬೇಕು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ದುರ್ಮರಣ

ನಿನ್ನೆ ಬೆಳಗ್ಗೆ ಸ್ಥಳೀಯ ರೈಲ್ವೆ ಸ್ಟೇಶನಿನ ಬಳಿ, ಕಣ್ಣನೂರಿನಿಂದ ಬರುತ್ತಿರುವ ರೈಲುಗಾಡಿಯ ಕೆಳಗೆ ಮಾಪಿಳ್ಳೆ ಜಾತಿಯ ಒಬ್ಬ ಮಿಶನ್ ಹೈಸ್ಕೂಲಿನ ೫ನೇ ಫಾರ್ಮಿನಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಯು ಬಿದ್ದು ಮೃತಪಟ್ಟ ವಿಷಾದ ಘಟನೆ ನಡೆಯಿತು. ಈ ಸಂಬಂಧ ಸಂತಾಪ ಸೂಚಕವಾಗಿ ಮಿಶನ್ ಹೈಸ್ಕೂಲಿಗೆ ರಜಾ ಕೊಡಲಾಗಿತ್ತು. ಹುಡುಗನು ಉಳ್ಳಾಲದಿಂದ ನಡೆದು ಬರುತ್ತಿದ್ದನಂತೆ. ಅಪಘಾತದ ಪೂರ್ಣ ಕಾರಣಗಳು ಸವಿಸ್ತಾರವಾಗಿ ತಿಳಿದುಬಂದಿಲ್ಲ.

ವಾರ್ಷಿಕ ದಿನ

ಸ್ಥಳೀಯ ಸೆಂಟ್ರಲ್ ಮೈದಾನಿನಲ್ಲಿ ಕಳೆದ ತಾ. ೩೧ರ ಸಾಯಂಕಾಲ ಪಂಡಿತ್ ತಾರಾನಾಥರವರ ವಾರ್ಷಿಕ ದಿನಾಚರಣೆಗಾಗಿ ಸಭೆಯೊಂದು ಸೇರಿತು. ಡಾ। ಯಂ. ಆರ್. ಭಟ್ಟರವರು ಅಧ್ಯಕ್ಷತೆ ವಹಿಸಿದ್ದರು. ಪಂಡಿತಜಿಯವರ ಆದರ್ಶ ಜೀವನ, ತ್ಯಾಗ ಸೇವಾಸಕ್ತಿ ಕುರಿತು ಭಾಷಣ, ಪ್ರಾರ್ಥನೆಗಳಾದುವು.

ನಿಧನ

ಕಳೆದ ತಾ. ೨೭ರಲ್ಲಿ ಮಂಗಳೂರಲ್ಲಿ ನಿವೃತ್ತ ಸಬ್ ಜಡ್ಜ್ ಶ್ರೀ। ಕೈಲು ಗೋಪಾಲಕೃಷ್ಣಯ್ಯ ಅವರು ನಿಧನ ಹೊಂದಿದರು. ತಮ್ಮ ೬೬ ವರ್ಷದ ಉಪಯುಕ್ತ ಜೀವನದಲ್ಲಿ ಮೃತರು ಸಮಾಜ ಸೇವೆಯ ಅನೇಕ ಕ್ಷೇತ್ರಗಳಲ್ಲಿ ದುಡಿಯುತಿದ್ದರು.

ಇಲ್ಲಿಯ ಕಾಮನ್‌ವೆಲ್ತಿನ ಅಸಿಸ್ಟಾಂಟ್ ಜನರಲ್ ಮೆನೇಜರ್ ಆದ ಗನ್ ಸಾಹೇಬರು ಕೆಲವು ದಿನಗಳ ಅಸ್ವಸ್ಥತೆಯಿಂದ ನಿಧನ ಹೊಂದಿದರು. — ವರ್ತಕವರ್ಗದಲ್ಲಿ ಇವರು ತುಂಬಾ ಜನಪ್ರಿಯರಿದ್ದರು. ಮೇಲಿನ ಮೃತರಿರ್ವರ ಆತ್ಮಕ್ಕೆ ಶಾಂತಿ ಇರಲಿ.

ಶಿಕ್ಷೆ, ಜುಲ್ಮಾನೆಗಳು

ಪೋಲಿಸಿಗೆ ಸುಳ್ಳು ಫಿರ್ಯಾದಿ ಕೊಟ್ಟದಕ್ಕೆ ತಣ್ಣೀರು ಬಾವಿಯ ನಾರ್ಣಪ್ಪ ಮೊಯ್ಲಿ ಎಂಬವರಿಗೆ ೬ ತಿಂಗಳ ಕಠಿಣ ಸಜೆಯಾಗಿದೆ.

ಸಿಲ್ವೆಸ್ಟರ್ ಕುತಿಂಞ ಎಂಬ ಕದ್ರಿಯ ರೊಟ್ಟಿ ವ್ಯಾಪಾರಿಗಳೊಬ್ಬರು ರೂ. ೨೨–೧೨–೭ಯ ಚಿಲ್ಲರೆ ಇಟ್ಟುಕೊಂಡದಕ್ಕೆ ೨೦೦ ರೂ. ಜುಲ್ಮಾನೆ ಆಗಿದೆ.

ರೇಶನಿಂಗ್ ಶಿಕ್ಷೆ

ಕದ್ರಿಯ ಜೆ. ಎಂ. ರೇಗೊ ಎಂಬವರ ರೇಶನಿಂಗ್ ನಿಬಂಧನೆ ಮುರಿತಕ್ಕೆ ರೂ. ೧೫೦ ಜುಲ್ಮಾನೆ ವ ೬ ವಾರ ಕಠಿಣ ಸಜೆ.

ಅವಲಕ್ಕಿ ಕೇರಿ ಗೌರಿ, ರಾಮಕೃಷ್ಣ ನಾಯ್ಕ, ಬಾಬುನಾಯ್ಕ ಇವರಿಗೆ ತಮ್ಮ ಬಳಿ ಇರುವ ಬತ್ತದ ಸ್ಟಾಕ್ ತಿಳಿಸದಿದ್ದಕ್ಕೆ ಕ್ರಮವಾಗಿ ರೂ. ೧೦೦, ೧೨೫, ೧೫೦. ಜುಲ್ಮಾನೆಯಾಗಿದೆ. ಇವರಿಂದ ವಶಪಡಿಸಿಕೊಂಡ ಬತ್ತದ ಮಾರಾಟ ಹಣವನ್ನು ಅವರಿಗೆ ಹಿಂದಿರುಗಿಸಲಾಗಿದೆ.

ದೇರೆಬೈಲಿನ ಲೂಯಿಸ್ ಲೋಬೊ ಅವರು ತಿಂಗಳಿಗೂ ಹೆಚ್ಚಿಗೆ ಖರ್ಚಿನ ಅಕ್ಕಿ ಇದ್ದು ರೇಶನ್ ಪಡೆದುದಕ್ಕೆ ರೂ. ೧೦೦ರ ಜುಲ್ಮಾನೆ.

ಶ್ರೀ। ಗಣಪತಿ ಪ್ರಭು ಎಂಬವರು ಸಹಕಾರಿ ಸ್ಟೋರಿಗೆ ಕೊಡದೆ ಅಕ್ಕಿಯನ್ನು ಇತರರಿಗೆ ಮಾರಿದರೆಂಬುದಕ್ಕೆ ರೂ. ೧೦೦ ಜುಲ್ಮಾನೆ ಆಗಿದೆ.

ಮೋತಿಲಾಲ್ ನೆಹರು

ತಂದೆಯ ಕುರಿತು ಮಗನ ವರ್ಣನೆ

"ಅವರು (ಮೋತಿಲಾಲ್ ನೆಹರು) ಯಾವ ಸಭೆಯಲ್ಲಿದ್ದರೂ ಕೇಂದ್ರ ವ್ಯಕ್ತಿಗಳಾಗುತಿದ್ದರು. ಯಾವ ದೇಶದಲ್ಲಿಯೂ ಔತಣ ಮೇಜಿನ ಬಳಿ ಕುಳಿತಾಗ ಅವರು ಮುಖಂಡರಂತೆ ಕಾಣುತಿದ್ದರು. 'ಮೇಜಿನ ಮುಖ್ಯವ್ಯಕ್ತಿ' ಎಂದು ಒರ್ವ ಇಂಗ್ಲಿಷ್ ಜಡ್ಜರು ಅವರನ್ನು ವರ್ಣಿಸಿದ್ದರು. ಅವರ ಸ್ವಭಾವ ನಮ್ರವೂ ಅಲ್ಲ. ವಿನೋದಗ್ರವೂ ಅಲ್ಲ. . . ವಿಶಾಲವಾದ ಹಣೆ, ಬಿಗಿಯಾಗಿಬತ್ತಲ್ಪಟ್ಟ ತುಟಿ, ಮತ್ತು ನಿರ್ಧಾರ ಸೂಚಕ ಮುದ್ರೆಗಳಿದ್ದುದರಿಂದ ಅವರಲ್ಲಿ ರೋಮನ್ ಚಕ್ರವರ್ತಿಗಳ ಶಿಲಾಮೂರ್ತಿಗಳ ಹೋಲಿಕೆಯಿತ್ತು. ಪ್ರಾಯಹೋಗುತ್ತಾ ಮುಂದೆ ಅವರ ತಲೆಯು ಬೆಳ್ಳಿ ಕೂದಲುಗಳಿಂದ ಶೋಭಿತವಾಗಿತ್ತು. ಅದರಲ್ಲಿ ಒಂದು ತರದ ಅಸಮಾನ್ಯ ಅಮೋಘತೆ ಕಂಡುಬರುತಿತ್ತು." —ಜವಾಹರಲಾಲ್ ನೆಹರು.

ಭಾರತದ ಸೈನಿಕರ ಶ್ಲಾಘನೆ

ಅಮೆರಿಕನ್ ಪತ್ರಿಕೆಯ ಲೇಖ

"ಅತ್ಯಂತ ಯಶಸ್ವಿಯಾಗಿ, ಭಾರತ ಸೈನ್ಯ ದಳಗಳು ಇಟಲಿಯ ರಣರಂಗದಲ್ಲಿ ಕಾದಾಡುತ್ತಿರುತ್ತವೆಂಧು ತಿಳಿಯಲು ಬಹು ತೃಪ್ತಿಯಾಗುತ್ತದೆ." ಹೀಗೆಂದು ಓಕಲೆಂಡ್ ಕ್ರ್ಯೂಸಿಡ್ ಎಂಬ ಅಮೆರಿಕನ್ ಪತ್ರಿಕೆ ಬರೆಯುತ್ತದೆ. "ಭಾರತೀಯರು ವಿದೇಶ ಸಮರಸಾಹಸದಲ್ಲಿ ಎಷ್ಟರ ಮಟ್ಟಿನ ಉತ್ಸಾಹತ್ತೋರಿಸುತ್ತಿರುವರೆಂಬುದು ನಮಗೆ ತಿಳಿಯುತ್ತದೆ, ನಾಜೀವಾದವನ್ನು ನಾಶಮಾಡಲು, ಅವರು ಅದೆಷ್ಟು ಶ್ರಮವಹಿಸುವರು? ಇವರು ಇರಾಕ್, ಸಿರಿಯಾ, ಇರಾನ್ ಕ್ಷೇತ್ರದಲ್ಲೂ ಕಾದಿರುವರು. ರೊಮೆಲ್ಲನನ್ನು ಓಡಿಸಲು ಹೆಚ್ಚಿನ ಸಹಾಯಮಾಡಿದ್ದು ಈ ಧೀರ ಭಾರತೀಯರೇ. ಈಗ ಅವರು ಹಿಟ್ಲರನನ್ನೇ ಸದೆಬಡಿಯಲಿರುವರು."

ನೀವು ನಿಮ್ಮ ಪ್ರಾಯಕ್ಕಿಂತ ತರುಣರಾಗಿ ಯಾಕೆ ಆಗಬಾರದು?

ಪ್ರತಿದಿನ ರಾತ್ರಿ ಎರಡು ಬೈಲ್ ಬೀನ್ಸುಗಳನ್ನು ಸೇವಿಸುವ 'ಸುವರ್ಣ ನಿಯಮ'ವನ್ನನುಸರಿಸಿದರೆ, ನೀವು ನಿಮ್ಮ ನಿಜವಾದ ಪ್ರಾಯಕ್ಕಿಂತ ಎಳೆಯವರಾಗಿ ಕಾಣುವುದು ಮಾತ್ರವಲ್ಲ ಸ್ವತಃ ನೀವೇ ಹಾಗೆಂದು ಅನುಭವಿಸುವಿರಿ. ಬೈಲ್ ಬೀನ್ಸು ಶುದ್ಧ ಶಾಕಾಹಾರದಿಂದಲೇ ಮಾಡಿದ್ದು ಅವು ಅವಯವಗಳನ್ನು ಸರಿಗೊಳಿಸುವವು. ರಕ್ತವನ್ನು ಶುದ್ಧಿಗೊಳಿಸುವವು. ದಿನ ನಿತ್ಯದ ಕೊಸಿಯನ್ನು ನಿರ್ಮೂಲಗೊಳಿಸುವವು. ಹೀಗೆ ನಿಮ್ಮನ್ನು ಆರೋಗ್ಯವಂತರಾಗಿ ತರುಣರಾಗಿ ಮತ್ತು ಆಕರ್ಷಕರಾಗಿ ಮಾಡುವವು.

ಬೈಲ್ ಬೀನ್ಸು ನಿಮ್ಮನ್ನು ತರುಣರಾಗಿಯೂ ಆರೋಗ್ಯವಂತರಾಗಿಯೂ ಮಾಡುವವು.

BILE BEANS

ಪ್ರಚಲಿತ ಸಮಾಚಾರಗಳು

ಕೈಗಾರಿಕೆಯ ವಿಚಾರದಲ್ಲಿ ಹಿಂದೂದೇ[illegible] ಹಿಂದೂ ದೇಶದ ಅಭಿವೃದ್ಧಿಯಾಗಬೇಕಾದರೆ, ಹಿಂದೂದೇಶದಲ್ಲಿ ಇಂಗ್ಲೆಂಡ್ ಅಮೇರಿಕಾ ದೇಶಗಳಲ್ಲಿರುವಂತೆ ಕೈಗಾರಿಕೆಗಳು ಸ್ಥಾಪನೆಯಾಗಬೇಕೆಂದು ಇಂಡಿಯಾ ಸರಕಾರದಲ್ಲಿ ಪ್ಲಾನೋದಯವು ಆಗಿರುತ್ತದೆ.

ಈ ಕುರಿತು ಯೋಜನೆಯೊಂದು ಮುಂಬಾಯಿಯ ಕೈಗಾರಿಕೋದ್ಯಮಿಗಳ ಸಮಿತಿಯೊಂದರಿಂದ ಹೊರಡಿಸಲ್ಪಟ್ಟು, ಅದರ ಕುರಿತು ಈಗ ಪ್ರಚಾರವು ನಡೆಯುತ್ತಿದೆ.

ಪಾಶ್ಚಾತ್ಯದಲ್ಲಿ ನಡೆದಂತೆ ಹಿಂದೂದೇಶದಲ್ಲೂ ಉದ್ಯೋಗೀಕರಣವು ಅಧಿಕತರದಲ್ಲಿ ಆಚರಣೆಗೆ ಬರಬೇಕಾಗಿ ಒಂದು ವಾದವು ಈಗ ಹೊರಡಿರುತ್ತದೆ.

ಯುದ್ಧಾನಂತರ ಅನೇಕ ಕೈಗಾರಿಕೆಗಳ ಸ್ಥಾಪನೆಯು ಆಗಬೇಕಾಗಿಯದೆ, ಅನೇಕ ಯಂತ್ರಗಳು ಇಂಡಿಯಕ್ಕೆ ಬಹಿರ್ ದೇಶಗಳಿಂದ ಬರಬೇಕಾಗಿದೆ, ಕೈಗಾರಿಕೆಗಳಲ್ಲಿ ನುರಿತ ಕಾಮಗಾರರ ಸಂಖ್ಯೆಯು ಅಭಿವೃದ್ಧಿಯಾಗಬೇಕಾಗಿದೆ ಎಂಬ ದೃಷ್ಟಿಯಿಂದ ಇಂಡಿಯಾ ಸರಕಾರವು ಚೇತನಗೊಂಡಿರುವುದು. ಈಗಲೆ ಅದು ಆ ಬಗ್ಗೆ ಕೆಲವು ಯೋಜನೆಗಳನ್ನು ನಡೆಯಿಸುವುದಾಗಿ ತಿಳಿದು ಬಂದಿದೆ.

ಕೈಗಾರಿಕೆಗಳ ಬೆಳವಣಿಗೆಯಿಂದ ಹಿಂದೂದೇಶಕ್ಕೆ ಉದ್ಧಾರ ಆಗುವುದೆ? ಕೈಗಾರಿಕೆಗಳಿಂದ ಪಾಶ್ಚಾತ್ಯದಲ್ಲಿ ಸುಖಸಂತುಷ್ಟಿಯು ಉಂಟಾಗಿರುವುದೆ? ಕೈಗಾರಿಕೆ ಬೆಳವಣಿಗೆಯಿಂದ ಅಲ್ಲಿ ಯಾವ ಪರಿಣಾಮಗಳು ಉಂಟಾಗಿವೆ? ಇವೆ ಮೊದಲಾದ ಪ್ರಶ್ನೆಗಳನ್ನು ವಿಚಾರಿಸಿ, ಮುಂದೆ ಸಾಗುವುದು ಉತ್ತಮವಿದೆ—ಎಂಬ ಇನ್ನೊಂದು ವಾದವು ಈಗ ಹೆಚ್ಚಿನ ಕಡೆಗಳಿಂದ ಹೊರಡಿರುತ್ತದೆ.

ಹಿಂದೂದೇಶಕ್ಕೆ, ಪಾಶ್ಚಾತ್ಯ ನೀತಿಯ ಅವಲಂಬನದಲ್ಲಿ ಮೋಕ್ಷ ವಿದೆಯೆ? ಅಥವಾ ಅದು ತನ್ನದೆ ಸಂಸ್ಕೃತಿಯ ಬಲದಿಂದ ಮೋಕ್ಷ ಪಡೆಯಬಲ್ಲುದೊ? ಎಂಬುದು ಗಮನಿಸಬೇಕಾದ ವಿಚಾರವಾಗಿರುತ್ತದೆ.

ಹಿಂದೂದೇಶವು ನದಿಗಳ ಊರು. ಈ ನದಿಗಳನ್ನು ಮಾನವ ಸೇವೆಗಾಗಿ ಉಪಯೋಗಿಸುವುದರಲ್ಲಿ, ಅಮೇರಿಕವು ತುಂಬಾ ಯಶಸ್ಸನ್ನು ಪಡೆದಿರುತ್ತದೆ. ಒಂದು ಸಮಯದಲ್ಲಿ ಬಂಜರು ಬಿದ್ದಿದ್ದ ವಿಸ್ತಾರವಾದ ಅಮೇರಿಕದ ಟೆನ್ನಿಸೆ ಬಯಲು ಪ್ರದೇಶವು, ಇಂದು ಸಂತುಷ್ಟಿಯ ನಾಡಾಗಿರುತ್ತದೆ.

ಮಳೆಯು ಬಿದ್ದು ಭೂಮಿಯ ನೀರು ಹರಿದು ನಷ್ಟವಾಗುವ ಬದಲಿಗೆ, ಬೇಸಾಯದಲ್ಲಿ ಅದರ ಸದುಪಯೋಗವಾಗುವರೆ ಅನುಕೂಲಿಸುವ ಕಾಮಗಾರಿಗಳು ಅಲ್ಲಿ ನಡೆದಿದೆ.

ಮಳೆಯಿಂದ ಅಲ್ಲಿ ಭೂಮಿಯು ಕೊರೆಯಲ್ಪಟ್ಟು ವ್ಯವಸಾಯಕ್ಕೆ ಬೇಕಾದ ಸಾರವತ್ತಾದ ಮಣ್ಣು ನಷ್ಟವಾಗುವ ಸಂಭವಗಳು ಅಲ್ಲೀಗ ಅತಿ ಕಡಿಮೆಯಾಗಿವೆ.

ಅಲ್ಲಿನ ಬೇಸಾಯಗಾರನು ನೀರಿಗಾಗಿ, ಹವಾಸ್ಥಿತಿಯ ಮೇಲೆ ಹೊಂದಿಕೊಂಡಿರಬೇಕಾಗಿಲ್ಲ. ಆತನು ಇಡಿ ವರ್ಷದಲ್ಲಿ ಬೇಸಾಯ ವೃತ್ತಿಯನ್ನು ನಡೆಯಿಸಬಹುದಾಗಿದೆ. ನೀರಿನ ಅನುಕೂಲತೆಗಳು ಅಲ್ಲಿ ಉಂಟಾಗಿವೆ. ಜಲಪ್ರಪಾತಗಳಿಂದ ನಡೆಯುವ ವಿದ್ಯುತ್ ಶಕ್ತಿ ಸಂಗ್ರಹಾಲಯಗಳು ಸ್ಥಾಪನೆಯಾಗಿವೆ. ವಿದ್ಯುತ್ ಶಕ್ತಿಯಿಂದ ರೈತರ ಮನೆಗಳು ವಿದ್ಯುತ್ ದೀಪಗಳಿಂದ ಶೋಭಾಯಮಾನವಾಗಿವೆ ಮಾತ್ರವಲ್ಲ ಬೇಸಾಯದ ಯಾಂತ್ರೀಕರಣವು ಸುಲಭಸಾಧ್ಯವಾಗಿದೆ.

ವಿದ್ಯುತ್‌ಶಕ್ತಿಯ ದೆಸೆಯಿಂದ ಈ ಪ್ರದೇಶದ ಅನೇಕ ಕಡೆಗಳಲ್ಲಿ ಬೇಸಾಯವನ್ನು ಹೊಂದಿ ನಡೆಯುವ ಅನೇಕ ಕೈಗಾರಿಕೆಗಳು ಸ್ಥಾಪನೆಯಾಗಿವೆ.

ಒಟ್ಟಿನ ಮೇಲೆ ನಿಸರ್ಗದ ಅತ್ಯಧಿಕ ಉಪಯೋಗವನ್ನು ಪಡೆಯುವ ಮಹತ್ತರದ ಯೋಜನೆಯು ಇದು.

ಹಿಂದೂದೇಶಕ್ಕೂ ಈ ತರದ ಯೋಜನೆಗಳು ಸಿದ್ಧವಾಗುತ್ತಿವೆ. ಈ ಕುರಿತು ಅನುಭವ ಕೊಡಲು ಅಮೇರಿಕದ ಟೆನ್ನಿಸೆ ಬಯಲಿನ ಯೋಜನೆಯಲ್ಲಿ ದುಡಿದ ಪ್ರವೀಣರೊಬ್ಬರು, ಇಂಡಿಯಾ ಸರಕಾರದ ಜಲಾಶ್ರಯಗಳಿಂದ ವಿದ್ಯುತ್ ಶಕ್ತಿಯನ್ನು ಪಡೆಯುವ ಯೋಜನೆಗಳ ಅಧಿಕಾರಿಗಳಾಗಿ ನೇಮಕ ಹೊಂದಿರುವರು.

ಜಲಾಶ್ರಯಗಳಿಂದ ವಿದ್ಯುತನ್ನು ಪಡೆಯುವ ಯೋಜನೆಗಳಿಗೆ ಕೇಂದ್ರ ವ್ಯವಸ್ಥೆಯೊಂದು ಇಂಡಿಯಾ ಸರಕಾರದ ಅಧೀನದಲ್ಲಿ ಸ್ಥಾಪನೆಯಾಗುವುದು. ಈ ಕೇಂದ್ರ ವ್ಯವಸ್ಥೆಯ ಅಡಿಯಲ್ಲಿ ಪ್ರಾಂತೀಕ ವ್ಯವಸ್ಥೆಗಳಾಗುವವು.

ಹಿಂದೂದೇಶದಲ್ಲಿ ಯುದ್ಧಾನಂತರ ಸ್ಥಾಪನೆಯಾಗಲಿರುವ ಕೈಗಾರಿಕೆಗಳಿಗೆ ದಾರಳ ವಿದ್ಯುತ್‌ಶಕ್ತಿ ಸಂಗ್ರಹವು ಬೇಕಾಗಿರುತ್ತದೆ. ಇದನ್ನು ಬಹಳ ಮಟ್ಟಿಗೆ ಹರಿಯುವ ನದಿಗಳ ಜಲಾಶ್ರಯಗಳಿಂದ ಪಡೆಯುವ ಯೋಜನೆಗಳು ಹಿಂದೂದೇಶದ ಅನೇಕ ಕಡೆಗಳಲ್ಲಿ ನಡೆಯಿಸಲಾಗುವವೆಂದು ತಿಳಿದುಬಂದಿದೆ.

ಒಂದು ರಾಷ್ಟ್ರದ ಪ್ರಗತಿಯು ವಿದ್ಯಾಪ್ರಚಾರದ ಮೇಲೆ ಹೊಂದಿಕೊಂಡಿರುವುದು. ವಿದ್ಯೆಯಿಂದಲೆ ಅಮೇರಿಕದ, ರಶ್ಯದ, ಬ್ರಿಟನಿನ, ಯುರೋಪ ರಾಷ್ಟ್ರಗಳ ಬೆಳವಣಿಗೆಯಾಗಿರುತ್ತದೆ.

ವಿದ್ಯೆಯಿಂದಲೆ ಅಜ್ಞಾನದ ಕತ್ತಲೆಯನ್ನು ಹೋಗಗೊಳಿಸಬಹುದು. ವಿದ್ಯೆಯಿಂದಲೆ ಮಾನವ ಸಮಾಜಕ್ಕೆ ಸುಖಸಾಧಿತಿಯ ಜ್ಞಾನಾರ್ಜನೆಯು ಆಗುವುದು. ವಿದ್ಯೆಯಿಂದಲೆ ಒಂದು ರಾಷ್ಟ್ರದ ಬಲದ ಬೆಳವಣಿಗೆಯಾಗುವುದು. ವಿದ್ಯೆಯಿಂದಲೆ ಒಂದು ರಾಷ್ಟ್ರವು ಆರೋಗ್ಯವಂತವಾಗುವುದು, ಸಂತುಷ್ಟಿಯಾಗುವುದು.

ಸತ್ಯ ಮತ್ತು ಅಹಿಂಸೆಗಳ ತಳಹದಿಯ ಮೇಲೆ ಬೆಳೆದ ಸಂಸ್ಕೃತಿಯು ಹಿಂದೂದೇಶಕ್ಕೆ ಈಗಲೂ ಅವಿಚ್ಛಿನ್ನವಾಗಿ ಉಳಿದಿರುವುದು. ಈ ತರದ ದೇಶದಲ್ಲಿ ಉತ್ತಮತರದ ವಿದ್ಯಾಪ್ರಚಾರವು ನಡೆಯುತ್ತಿದ್ದರೆ—ಉತ್ತಮ ಪರಿಣಾಮಗಳು ಉಂಟಾಗುವವು.

ಜಾಗತಿಕ ಶಾಂತಿಸ್ಥಾಪನೆಗೆಂದು ಪ್ರಬಲ ಯೋಜನೆಯು ಈಗ ಸಿದ್ಧವಾದಿರುತ್ತದೆ. ಅಮೇರಿಕದಲ್ಲಿ ಕಳೆದ ಮಹಾಯುದ್ಧದ ಸಮಯದಲ್ಲೂ ಸಂಯುಕ್ತ ರಾಷ್ಟ್ರಗಳಲ್ಲಿ ಈ ತರದ ಚೇತನವು ಉಂಟಾಗಿತ್ತು. ಯುದ್ಧಗಳನ್ನು ತಡೆಯುವ ನೀತಿಯಿಂದ ಕೂಡಿದ ರಾಷ್ಟ್ರ ಮಂಡಳದ ಸ್ಥಾಪನೆಯು ಆಗಿತ್ತು.

ಈ ರಾಷ್ಟ್ರ ಮಂಡಳವು ಪ್ರಾರಂಭದ ಉತ್ಸಾಹದಲ್ಲಿ ಕೆಲವೊಂದು ಉತ್ತಮ ಕೆಲಸಗಳನ್ನು ಮಾಡಿ ಬಿಟ್ಟಿತು. ಆದರೆ ಬರ ಬರುತ್ತಾ ಅದರ ಮಹತ್ವವು ಕಡಿಮೆಯಾಗುತ್ತಾ ಬಂತು.

ಯುದ್ಧಗಳನ್ನು ತಡೆಯಲು ಸ್ಥಾಪನೆಯಾದ ಜನಾಂಗ ಮಂಡಳದ ಸಮಕ್ಷಮದಲ್ಲೆ ಇನ್ನೊಂದು ಭೀಕರ ಯುದ್ಧದ ಸಿದ್ಧತೆಗಳು ನಡೆದುಬಿಟ್ಟವು. ಇನ್ನೊಂದು ಮಹಾ ಯುದ್ಧವು ಪರಿಣಮಿಸಿಯೇಬಿಟ್ಟಿತು.

ಬಲವಂತರು ಬಲಹೀನರನ್ನು ತಮ ಸ್ವಪ್ರಯೋಜನಕ್ಕಾಗಿ ದುಡಿಸುವ ನೀತಿಯು ಲೋಪವಾಗದೆ ಜಾಗತಿಕ ಶಾಂತಿ ದೊರಕದು; ಪಾಶ್ಚಾತ್ಯ ರಾಷ್ಟ್ರಗಳ ಅಹಂಭಾವದಿಂದ ಹುಟ್ಟಿದ ವರ್ಣಬೇದವು ಲೋಪವಾಗದೆ, ಜಾಗತಿಕ ಶಾಂತಿಯು ಲಭಿಸದು ಎಂದು ವೆಂಡಿಲ್ ವಿಲ್ಕಿ, ಹೆಚ್ ಜಿ ವೆಲ್ಸ್, ಬರ್ನಾರ್ಡ್ ಶಾ, ಮಹಾತ್ಮಗಾಂಧಿ, ಕವಿ ಠಾಗೂರ ಮೊದಲಾದ ಜಗತ್ತಿನ ಶ್ರೇಷ್ಠ ವ್ಯಕ್ತಿಗಳ ಅಭಿಪ್ರಾಯವಿರುತ್ತದೆ.

ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರು ಜಾಗತಿಕ ಶಾಂತಿಯನ್ನು ರಕ್ಷಿಸುವ ಕುರಿತು ಉತ್ಸಾಹವನ್ನು ವ್ಯಕ್ತಪಡಿಸಿ ಭಾಷಣವನ್ನು ಮಾಡಿರುವರು.

ಪರ್ಸಿಯಾ ದೇಶದ ಎಣ್ಣೆಯ ಗನಿಗಳ ಉಪಯೋಗದ ಕುರಿತು ಬಿಕ್ಕಟ್ಟಿನ ಪರಿಸ್ಥಿತಿಯು ಉಂಟಾಗಿರುವುದು ಮಿತ್ರ ರಾಷ್ಟ್ರಗಳಾದ ರಶ್ಯಾ ಬ್ರಿಟನು ಅಮೇರಿಕಾ ಈ ಮೂವರ ಆ ಗನಿಗಳ ಕುರಿತು ಕೋರಿಕೆಗಳು ಪರ್ಸಿಯಾದ ಸುಲ್ತಾನನಿಂದ ನಿರಾಕರಿಸಲ್ಪಟ್ಟಿವೆ.

ಈ ಮೇಲಿನ ಪ್ರಕರಣದಿಂದ ಯಾವ ಪರಿಣಾಮಗಳು ಉಂಟಾಗುವವು ಎಂದು ನೋಡಬೇಕು. ಪರ್ಸಿಯಾದ ವರ್ತನೆಯಿಂದ ರಶ್ಯಕ್ಕೆ ತುಂಬಾ ಅಸಮಾಧಾನ ಉಂಟಾಗಿರುವುದೆಂದು ಸುದ್ದಿ.

ಮಧ್ಯ ಪೂರ್ವದಲ್ಲಿ ಹೀಗೆ ಎಣ್ಣೆಯುರುವ ಪ್ರದೇಶಗಳು ತುಂಬಾ ಇವೆ. ಈ ಪ್ರದೇಶಗಳ ಜನರಲ್ಲಿ ಪ್ರಜಾಪ್ರಭುತ್ವ ನೀತಿಯ ಕುರಿತು ಅನುರಾಗವೂ ಸ್ವಾತಂತ್ರ್ಯಾಭಿಲಾಷೆಯು ಉಂಟಾಗಿರುವುದು.

ಗಾಂಧೀಜಿಯರು ನಿರಶನ ವೃತವನ್ನು ಆಚರಿಸುವ ಕುರಿತು ತಮ್ಮ ಮಿತ್ರರೊಡನೆ ವಿಚಾರ ಪತ್ತಿರುವರಂತೆ. ಅವರ ಸತ್ಯಾಗ್ರಹದ ನೀತಿಯಲ್ಲಿ ನಿರಶನ ವೃತವು ಕೊನೆಯ ಶಸ್ತ್ರ. ಹಿಂದೂ ಮುಸ್ಲಿಂ ಐಕ್ಯವು ಈ ಭಾರಿಯ ವ್ರತದ ಉದ್ದೇಶವಾಗಬಹುದೆಂದು ಊಹೆಗಳಿವೆ.

ಸತ್ಯವನ್ನು ಅಹಿಂಸಾ ರೀತಿಯಲ್ಲಿ ಸಾಧಿಸುವುದೆ ಗಾಂಧೀಜಿಯರ ನೀತಿ. ಈ ನೀತಿಯಿಂದ ಮೊದಲು ಆಫ್ರಿಕದಲ್ಲೂ ನಂತರ ಭಾರತದಲ್ಲೂ ಅನೇಕ ಸಮಸ್ಯೆಗಳು ಅವರಿಂದ ಬಹಳ ಯಶಸ್ವಿ ತರದಲ್ಲಿ ಸುಧಾರಿಸಲ್ಪಟ್ಟಿವೆ.

ಅಹಿಂಸಾ ಸತ್ಯ ವೃತವನ್ನು ಆಚರಿಸುತ್ತಿರುವ ಗಾಂಧೀಜಿಯರಲ್ಲಿ ಆತ್ಮಶಕ್ತಿಯು ಬೆಳೆದಿರುತ್ತದೆ. ಈ ಆತ್ಮಶಕ್ತಿಯ ಪ್ರೇರಣೆಯಿಂದಲೆ ಅವರು ಯಾವತ್ತು ನಿರ್ಧಾರಗಳನ್ನು ಮಾಡುತ್ತಿರುವರು.

ನಿರಶನ ವೃತದಿಂದ ಆತ್ಮ ಶುದ್ಧಿಯಾಗುವುದೆಂದು ಗಾಂಧೀಜಿಯರ ವಿಶ್ವಾಸ.

ಇಟೆಲಿಯಲ್ಲಿ

ಮುಸಲೋನಿಯ ಹುಟ್ಟೂರಾದ ಪ್ರೆಡಾಪಿಯೊವನ್ನು ಭಾರತ ಸೈನಿಕರು ಹಿಡಿದಿರುವುದು ಸ್ವಾರಸ್ಯದ ಸಂಗತಿ. ಗ್ರೀಸಿನಿಂದ ಆಗಲೇ ಜರ್ಮನರು ಹಿಂತೆರಳಿರುವರೆಂದೂ ಅದು ಸಂಪೂರ್ಣ ಮಿತ್ರರ ವಶವಾಗಿದೆಯೆಂದೂ ವದಂತಿ.

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ

ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.

ದೊರಕುವ ಸ್ಥಳ:—ಬಾಲಸಾಹಿತ್ಯ **ಮಂಡಳ ಲಿಮಿಟೆಡ್**, ಮಂಗಳೂರು.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.

ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ- ಅಷ್ಟು ಸುಖಕರ— ಅಷ್ಟು ಚರ್ಮ ಮೃದುಕರ—

ಕುಟಿಕೂರ ಟಾಲ್ಕಮ್ ಪೌಡರ್

CUTICURA TALCUM POWDER

ನೂತನ ಶಿಕ್ಷಣ ಪದ್ಧತಿ

ಗಾಂಧೀವಾದದ ಪ್ರಸ್ತಾವನೆ

(ಹಿಂದಿನ ಪುಟದಿಂದ)

ಹುದು. ಉದಾಹರಣೆಗಾಗಿ ಹಳ್ಳಿಯಲ್ಲಿ ...ರ್ವ ಮಹಿಳೆಯು ಗರ್ಭಿಣಿಯಾಗಿದ್ದರೆ ...ಹದೇವಿ ಎಂಬ ಬಾನಿಧಿ ಕಾರ್ಯಕರ್ತೆಳು ಅವಳ ಬಳಿಗೆ ಹೋಗಿ "ನಾನೂ ...ರ್ವ ... ಯಾಗಿದ್ದೇನೆ. ನಿನಗೆ ಹುಟ್ಟುವ ಮಗುವಿನ ಆರೋಗ್ಯ ಆರೈಕೆಗಳನ್ನು ಹೇಗೆ ನೋಡಿಕೊಳ್ಳಬೇಕೆಂದು ನಾನು ನನ್ನ ಅನುಭವದಿಂದ ನಿನಗೆ ತಿಳಿಸಿಕೊಡುತ್ತೇನೆ" ಎಂದು ಹೇಳಬೇಕು ಗರ್ಭಿಣಿಯಾದ ಸ್ತ್ರೀಯು ಗಂಡನಿಗೆ ಅವನ ಪತ್ನಿ ವಿಹಾರ ಹೇಗಿರಬೇಕೆಂದು ಅವಳು ತಿಳಿಸಬೇಕು ಹುಟ್ಟುವ ಮಗುವಿನ ಆರೈಕೆಯಲ್ಲಿ ಅವನು ಹೇಗೆ ಸಹಕರಿಸಬೇಕೆಂದು ತಿಳಿಸಬೇಕು ಹೀಗೆ ಮೂಲ ಶಿಕ್ಷಣ ಉಪಾಧ್ಯಾಯಿನಿಯು ಮಕ್ಕಳು ಪ್ರೌಢರಾಗುವ ತನಕ ಮಾರ್ಗ ದರ್ಶಕಳಾಗಿರಬಹುದು

ಯೋಗ್ಯ ಪ್ರೌಢ ಶಿಕ್ಷಣ ಕ್ರಮ

."ಅನೇಕ ಕಡೆಗಳಲ್ಲಿ ಪ್ರಾಯಸ್ಥರ ಶಿಕ್ಷಣ ಪ್ರಯತ್ನಗಳು ನಡೆಯುತ್ತಿವೆ ದೊಡ್ಡ ನಗರಗಳಲ್ಲಿ ಅದು ಹೆಚ್ಚಾಗಿ ಗಿರಣಿ ಮಜೂರರಿಗೆ ಕೊಡಲಾಗುತ್ತಿದೆ ಹಳ್ಳಿಗಳಲ್ಲಿ ಇದನ್ನು ಪ್ರಚಾರಿಸಲು ಯಾರೂ ಪ್ರಯತ್ನ ಮಾಡತ್ತಿಲ್ಲ ಬರೀ ಓದು ಬರಹ ಕಲಿಸುವ ಇಲ್ಲವೆ ರಾಜಕೀಯ ಭಾಷಣ ಕೊಡುವ ಪ್ರಯತ್ನಗಳಲ್ಲಿ ನನಗೆ ನಂಬಿಕೆ ಇಲ್ಲ ನನ್ನ ಯೋಜನೆ ಪ್ರಚಾರ ಇಂತಹ ಶಿಕ್ಷಣವು ಅವರನ್ನು ಉತ್ತಮ ನಾಗರಿಕರನ್ನಾಗಿ ಮಾಡುವಂತಹದಾಗಬೇಕು ಮಕ್ಕಳ ಶಿಕ್ಷಣಕ್ಕಿಂತ ಪ್ರಾಯಸ್ಥರ ಶಿಕ್ಷಣದ ಯೋಜನೆಯು ತುಂಬಾ ಕಷ್ಟ ತರದ್ದು ಎರಡು ತರದ ಶಿಕ್ಷಣ ಪದ್ಧತಿಗಳೂ ಗ್ರಾಮ ಕೈಗಾರಿಕೆಯ ಮೂಲಕವೇ ಕೊಡಲ್ಪಡಬೇಕು ಮೂಲ ಶಿಕ್ಷಣ ಕಾರ್ಯ ಕ್ರಮದಲ್ಲಿ ಕೃಷಿ ವಿಚಾರವೇ ಪ್ರಾಮುಖ್ಯ ಪಾತ್ರ ವಹಿಸುವಂತಾಗಬೇಕು ಓದು ಬರಹದ ಕಡೆಗೆ ಯೋಗ್ಯ ಗಮನ ಕೊಡಲೂಬೇಕು ಬಾಯಿಯಿಂದಲೇ ತುಂಬಾ ವಿಚಾರಗಳನ್ನು ಕಲಿಸಬಹುದು ಕಲಿಯುವವರಿಗಿಂತ ಕಲಿಸುವವರು ಹೆಚ್ಚು ಪುಸ್ತಕಗಳನ್ನು ಓದಬೇಕು ಬಹು ಸಂಖ್ಯಾತರೂ ಅಲ್ಪಸಂಖ್ಯಾತರೂ ಪರಸ್ಪರ ಹೇಗೆ ವರ್ತಿಸಬೇಕೆಂದು ಕಲಿಸಬೇಕು ಅಸ್ಪೃಶ್ಯತೆ ಮತ್ತು ಜಾತೀಯತೆಯ ಸಮಸ್ಯೆಗಳನ್ನು ನಿರ್ಮೂಲಿಸುವಂತ ಅವರಿಗೆ ಶಿಕ್ಷಣ ಕೊಡಲ್ಪಡಬೇಕು

ಕೈಗಾರಿಕೆ ಶಿಕ್ಷಣ

ಯಾವ ಕೈಗಾರಿಕೆಯ ಮೂಲಕ ಶಿಕ್ಷಣ ಕೊಡಲ್ಪಡಬೇಕೆಂದು ಆಯಾ ಪ್ರದೇಶದ ಸ್ಥಳೀಯ ಪರಿಸ್ಥಿತಿಗನುಸಾರವಾಗಿ ನಿರ್ಧರಿಸಬೇಕು ಉದಾಹರಣೆಗಾಗಿ ಒಂದು ಹಳ್ಳಿಯಲ್ಲಿ ಜನರು ತಮಗೆ ನೂಲು ನೇಯುವುದಕ್ಕಿಂತ ಕೃಷಿ ವ್ಯವಸಾಯದಲ್ಲಿ ಹೆಚ್ಚು ಅಭಿರುಚಿಯಿದೆ ಎಂದು ತಿಳಿಸಿದರೆ ಕೃಷಿ ಗಾರಿಕೆಯನ್ನೇ ನೀವು ಶಿಕ್ಷಣ ಮಾಧ್ಯಮವಾಗಿ ಚುನಾಯಿಸಬಹುದು ನೀವು ಅಲ್ಲಿನ ಜಾನುವಾರಗಳ ಲೆಕ್ಕವನ್ನು ತೆಗೆದು ಕಾರ್ಯ ಪ್ರಾರಂಭಿಸಬಹುದು ನಮ್ಮ ಸೇವಾಗ್ರಾಮದಲ್ಲಿ ಪ್ರತಿಯೊಬ್ಬನಿಗೆಂಬಂತೆ ಒಂದೊಂದು ಎತ್ತು ಮತ್ತು ಗಾಡಿ ಇದೆ. ಇದು ನಿರರ್ಥಕವಾದುದು

ಹಳ್ಳಿಗರಿಗೆ ಸಹಕಾರ ತತ್ವವನ್ನು ಕಲಿಸಬೇಕು ಸ್ತ್ರೀ ಪುರುಷರೊಳಗಿನ ಸಂಬಂಧದ ಕುರಿತು ಅವರಿಗ ಸರಿಯಾದ ತತ್ವವನ್ನು ತಿಳಿಸಬೇಕು ಪುರುಷರು ಸ್ತ್ರೀಯರಷ್ಟೇ ಕೆಲಸ ಮಾಡಿದರೂ ಅವರಿಗೆ ಹೆಚ್ಚು ಮಜೂರಿ ಸಿಗುತ್ತದೆ ಕೆಲವು ಸಲ ಪುರುಷರು ಆಲಸ್ಯದಿಂದ ಮನೆಯಲ್ಲಿ ಕೂತುಕೊಂಡು ಸ್ತ್ರೀಯರಿಂದಲೇ ಕೆಲಸ ಮಾಡಿಸುತ್ತಾರೆ ಇದು ಮಹಾ ದೊಡ್ಡ ತಪ್ಪೆಂದು ಅವರಿಗೆ ತಿಳಿಸಬೇಕು ಈ ಮೂಲಕವೇ ಶಿಕ್ಷಣ ಕ್ರಮವು ವಿಸ್ತರಿಸಲ್ಪಡಬೇಕೆಂದು ನೀವು ಒಪ್ಪುವುದಾದರೆ ನಿಮ್ಮ ಆಡಳಿತ ಕ್ರಮವನ್ನು ಅದೇ ರೀತಿಯಲ್ಲಿ ಬದಲಾಯಿಸಬೇಕು.

ನವೀನ ಸಮಾಜ ಯೋಜನೆ

ಡಂಬಾರ್ಟನ್ ಮಾತುಕತೆ

ಹೊಸ ಜನಾಂಗ ಸಭೆ

ಸಾವಿರ ವರ್ಷ ಬಾಳಲಿದ್ದ ಹಿಟ್ಲರನ ಕನಸ್ಸು ಸಾಮ್ರಾಜ್ಯವು ತನ್ನ ಕೊನೆಯ ದಿನಗಳನ್ನು ಎದುರುನೋಡುವಂತಿದೆ. ಈ ಸಮಯದಲ್ಲಿ ಮುಂದಿನ ವಿಶ್ವಶಾಂತಿಗೆ ಯೋಗ್ಯವಾದ ಯೋಜನೆಯೊಂದು ಸಿದ್ಧಗೊಳಿಸಬೇಕಾದುದು ಅತ್ಯಾವಶ್ಯಕ ಹಿಂದಿನ ಯುದ್ಧದ ಪರಿಣಾಮವಾಗಿ ಲೀಗ್ ಆಫ್ ನೇಶನ್ಸ್ ಎಂಬ ಜನಾಂಗ ಸಭೆಯು ಸ್ಥಾಪಿಸಲ್ಪಟ್ಟಿತು. ದುರಾದೃಷ್ಟವಶಾತ್ ಅದರಿಂದ ಪರಿಣಾಮಕಾರಿ ಯಾವ ಕಾರ್ಯವನ್ನೂ ಮಾಡಲಾಗಲಿಲ್ಲ ಸೊಕ್ಕಿದ ದಬ್ಬಾಳಿಕೆಗಾರರು ಅದನ್ನು ಮೂಲೆಕಸವಾಗಿ ಮಾಡಿದರು

ಕೆಲವು ದಿನಗಳ ಹಿಂದೆ ಅಮೆರಿಕದ ಡಂಬಾರ್ಟನ್ ಓಕ್ಸ್ ಎಂಬಲ್ಲಿ ಬ್ರಿಟಿಷ್, ಅಮೆರಿಕನ್ ರಶ್ಯನ್ ಮತ್ತು ಚೀನೀ ಪ್ರತಿನಿಧಿಗಳು ಸೇರಿ ವಿಶ್ವ ಶಾಂತಿಯನ್ನು ಚಿರಗೊಳಿಸುವ ಒಂದು ಯೋಜನೆಯ ಕುರಿತು ಚರ್ಚಿಸಿದರು ಜಗತ್ತಿನ ಎಲ್ಲಾ ಜನಾಂಗಗಳಿಗೂ ಶ್ರೇಯಸ್ಕರವಾದ ಶಾಶ್ವತ ಏರ್ಪಾಡುಗಳು ಇಲ್ಲಿ ಪರ್ಯಾಲೋಚಿಸಲ್ಪಟ್ಟವು

ವಿಶ್ವವ್ಯಾಪಕ ಸರ್ವಾಧಿಕಾರಿಗಳಿಂದ ಜಗತ್ತಿಗೆ ಆಗುತ್ತಿದ್ದ ಅಸಹನೀಯ ಯಾತನೆಯಿಂದನೊಂದ ಪರಿಣಾಮವೇ ಈ ಮಾತುಕತೆಗಳ ಆವಶ್ಯಕತೆಯ ಕಡೆಗೆ ಜನಾಂಗಗಳನ್ನು ಹತ್ತಿರ ನೇರಿಸುವಂತಾಯಿತು ಈ ರಕ್ತಪ್ರವಾಹವನ್ನು ತಪ್ಪಿಸಬೇಕು ಈ ಹೊಣೆಗಾರಿಕೆಯ ಪ್ರಥಮತವಾಗಿ ದೊಡ್ಡ ಶಕ್ತಿರಾಷ್ಟ್ರಗಳ ಮೇಲೆ ಬಿದ್ದಿದೆ ಶತ್ರುಗಳಾದವರನ್ನು ಅಣಗಿಸಲು ಅಗಾಧವಾದ ನೆಲ, ಜಲ, ಆಕಾಶ ಸಮರ ಶಸ್ತ್ರಗಳನ್ನು ವಿಶಾಲಪ್ರಮಾಣದಲ್ಲಿ ತಯಾರಿಸುವ ಅನಿವಾರ್ಯ ಕಾರ್ಯದಲ್ಲಿ ಅವರು ತತ್ಪರರಾಗಿದ್ದಾರೆ

ಡಂಬಾರ್ಟನ್ ಓಕ್ಸ್‌ನಲ್ಲಿ ಚರ್ಚಿಸಲಾದ ಯೋಜನೆಯು ಜಗತ್ತಿನ ಜನತೆಯ ಸಮಾಜರಚನೆಯನ್ನು ಒಂದು ನವೀನ ವ್ಯವಸ್ಥೆಯಲ್ಲಿ ಏರ್ಪಡಿಸುವಂತಹದು ಎಪ್ಪತ್ತು ಹಿಂದೆ ಜನಾಂಗ ಸಭೆಯಂತಹ ಒಂದು ಪ್ರಯೋಗವು ಅಪಯಶಸ್ಸಿನಲ್ಲಿ ಕೊನೆಗೊಂಡಿತು ಈಗಿನ ಯೋಜನೆಯು ಈ ಎಲ್ಲ ಅನುಭವಗಳ ಆಧಾರದಿಂದ ರಚಿಸಲ್ಪಟ್ಟಿದೆ ಕಳೆದ ಮಹಾಯುದ್ಧ ಸಂಪೂರ್ಣ ಕೊನೆಗೊಂಡನಂತರವೇ ಶಾಂತಿ ಏರ್ಪಾಡಿನ ಯೋಜನೆಗಳು ಮೆಲ್ಲನೆ ನಡೆದುದರಿಂದ ಚಿಕ್ಕ ಚಿಕ್ಕ ಸ್ವಾರ್ಥಿ ಜನಾಂಗಗಳು ತಲೆಯೆತ್ತುವಂತಾಯಿತು ವಿಶ್ವ ಶಾಂತಿಯು ರಕ್ಷಣೆಯು ಸುವ್ಯವಸ್ಥಿತ ಏರ್ಪಾಡಿನ ಕಡೆಗೆ ಅಂದಿನ ಜೇತ್ತ ಜನಾಂಗಗಳು ಗಂಭೀರವಾದ ಗಮನ ಕೊಡದಾದರು ಒಂದೇಮಾತಿನಲ್ಲಿ ಹೇಳಬೇಕಾದರೆ ಅಂದಿನ ಒಂದು ಜನಾಂಗವಾದರೂ ತನ್ನ ಹೊಣೆಗಾರಿಕೆಯನ್ನು ಸಂಪೂರ್ಣ ತಿಳಕೊಂಡಂತೆ ತೋರುವುದಿಲ್ಲ.

ಹಿಂದಿನ ತಪ್ಪುಗಳನ್ನು ಈಸಲ ಬಿಟ್ಟು ಬಿಡಲಾಗಿದೆ ಮತ್ತು ಯುದ್ಧ ಅಂತ್ಯವಾದ ಮೇಲೆ ಗಡಿಬಿಡಿಯಲ್ಲಿ ಮುಂದಿನ ಯೋಚನೆಮಾಡಲು ಪ್ರಯತ್ನವಾಡಲಿಲ್ಲ ವಿಶ್ವ ಶಾಂತಿ ಸಂಸ್ಥೆಯೊಂದನ್ನು ಮತ್ತು ಯುದ್ಧ ಕಾರಣಗಳನ್ನು ತಡೆಗಟ್ಟುವ ಎರಡು ಪ್ರತ್ಯೇಕ ಏರ್ಪಾಡುಗಳು ಯೋಜಿಸಲಾಗಿವೆ ಯಥಾವಕಾಶವಾಗಿ ಅವರಲ್ಲಿ ಸವಿಸ್ತಾರವಾದ ಉಪಯೋಜನೆಗಳು ಕೂಡಿಸಲಾಗುವುವು ಈಗ ಐಕ್ಯದಿಂದಲ್ಲಿ ನಿಂತು ಯುದ್ಧಮಾಡಲು ಸಾಧ್ಯವಾದ ... ವಿಷಯವನ್ನೇ ... ಈ ಯೋಜನೆಯ ಯಶಸ್ಸು ಅನಕೂಲವಾಗಿದ ನಾಲ್ಕು ಶಕ್ತಿರಾಷ್ಟ್ರಗಳ ತಮ್ಮ ಜವಾಬ್ದಾರಿಕೆಯನ್ನು ತಿಳಕೊಂಡು ಕೆಲಸಮಾಡುವುದರಿಂದ ಮುಂದಿನ ವಿಶ್ವಶಾಂತಿ ಸುಂದರದ ರಚನೆಯು ಸಫಲವಾಗ ... -

ಹೀಗೆಂದು ನ್ಯೂಯೋರ್ಕ್ ಹೆರಾಲ್ಡ್ ಟ್ರಿಬ್ಯೂನ್ ಪತ್ರಿಕೆಯ ಸಂವಾದಕರು ಬರೆದಿದ್ದಾರೆ..

ಹೈದರ್ ಆಲಿಯ ಚಾಣಕ್ಯ ತಂತ್ರ

ಮೈಸೂರಿನ ಹೈದರ್ ಆಲಿಯು ಧಾರವಾರ ಕೋಟೆಯನ್ನು ಹಿಡಿದದ್ದು ಒಂದು ಚತುರ ಉಪಾಯದಿಂದ ಬಹಳಕಾಲದಿಂದ ಮುತ್ತಿಗೆ ಹಾಕಿದರೂ ಅದು ವಶವಾಗಲಿಲ್ಲ ಕೋಟೆಯ ಒಳಗೆ ಇದ್ದ ಸೇನಾಪತಿಗೆ ಹೈದರ್ ಒಂದು ರಕ್ಷ್ಯ ಪತ್ರ ಬರೆದನು "ನಿಮಗೆ ಮರಾಠರ ಕಡೆಯಿಂದ ಸಹಾಯವು ಬೇಗನೆ ಬರುವುದು" ಎಂದು ಅದರಲ್ಲಿ ಸೂಚಿಸಿತ್ತು

ಹೈದರನ ಕೆಲ ಸೈನಿಕರು ಮರಾಠರ ಪೋಷಾಕು ಧರಿಸಿ ಕೋಟೆಯ ಕಡೆಗೆ ಓಡಿಬಂದರು. ಹಿಂದಿನಿಂದ ಹೈದರನ ಕೆಲ ಸೈನಿಕರು ಕೆಲವು ... ಗುಂಡುಗಳನ್ನು ಹಾರಿಸಿದರು ಕೋಟೆಯೊಳಗಿನ ಮರಾಟರು ತಮಗೆ ಸಹಾಯ ಬಂತೆಂದು ತಿಳಿದು ಪೋಷಾಕಿನಲ್ಲಿದ್ದ ಹೈದರನ ಸೈನ್ಯವನ್ನು ಒಳಗೆ ಬಿಟ್ಟರು ಅವರು ಕೂಡಲೆ ಮರಾಟರ ... ಮಾಡಿ, ಅವನ ಸೈನ್ಯ ... ಶಸ್ತ್ರ ... , ಕೋಟೆಯನ್ನು ವಶಪಡಿಸಿದರು



ಫಿಲಿಪ್ಪೈನರು ಸಾಯುತಿದ್ದಾರೆ

ದುಷ್ಟ ಆಡಳಿತದ ಕಠಿಣಗಾಲ

ಅಮೆರಿಕನರ ಹಿತ ದೃಷ್ಟಿ

ಫಿಲಿಪ್ಪಾನ್ ದ್ವೀಪಗಳು ಅಮೆರಿಕನ್ ಆಳಿತದೊಳಗಿರುವಾಗ ಅಲ್ಲಿಯ ಜನರು ಹಳ ಅಭಿವೃದ್ಧಿಯಲ್ಲಿದ್ದರು. ಈಗ ಪಾನರ ಕ್ರೂರ ಆಳ್ವಿಕೆಗೆ ಒಳಗಾದ ಲ್ಲಿನ ಜನತೆಗೆ ಹೊಟ್ಟೆಗೆ ಸರಿಯಾದ ಹಾರ ಸಿಗುತ್ತಿಲ್ಲವಂತೆ.

ಎರಡು ವರ್ಷ ಜಪಾನರ ಕೈಸೆರೆಯ ಒರ್ವ ಅಮೆರಿಕನ್ ಪತ್ರಿಕೋದ್ಯೋಗಿಗಳು ಅಲ್ಲಿನ ಪರಿಸ್ಥಿತಿಯ ರಿತು ಈ ಕೆಳಗಿನಂತೆ ಬರೆದಿದ್ದಾರೆ:– ಅಮೆರಿಕನ್ ಸರಕಾರದ ಕೈಕೆಳಗಿದ್ದಾಗ ಫಿಲಿಪ್ಪೈನ್ ಜನರು ಸುಖ ಸಂತೋಷದಲ್ಲಿ ತೇಲಾಡುತಿದ್ದರು. ಅವರ ಜೀವನ ಮಟ್ಟವು ಏಸ್ಯದ ಇತರ ಜನರಿಗಿಂತ ಎಲ್ಟು ಪಾಲು ಹೆಚ್ಚಿತ್ತು.

ಈ ದ್ವೀಪಸ್ತೋಮದ ಪ್ರತಿಯೊಂದು ಡೆಯ ಜನರಿಗೆ ಶ್ರೇಷ್ಠತರಗತಿಯ ಸುಖೋಪಭೋಗದ, ಆರಾಮ ವಿಶ್ರಾಂತಿ ಟ ಪಾಟಗಳ ವ್ಯವಸ್ಥೆಯು ಒದಗಿಸಿಡಲಾಗಿತ್ತು.

ವಿದ್ಯಾವಂತರಿಗೆ ದೊಡ್ಡ ದೊಡ್ಡ ಕೆಲಗಳು ಸಿಗುತಿದ್ದುವು. ಅವರಿಗೆ ತುಂಬಾ ಸಂಬಳವೂ ಕೊಡಲ್ಪಡುತಿತ್ತು. ಅನೇಕರು ಮೋಟಾರು ಕಾರುಗಳನ್ನು ಇಟ್ಟು ಕೊಂಡಿದ್ದರು. ಇನ್ನೂ ಹೆಚ್ಚಿನ ವಿದ್ಯಾವಂತರು ಆಡಳಿತ ಖಾತೆಯ ದೊಡ್ಡ ದೊಡ್ಡ ಹುದ್ದೆಗಳನ್ನು ಹಿಡಿದಿದ್ದರು.

ಅಲ್ಲಿಯ ರೈತರಿಗೆ ಏಸ್ಯದ ಇತರ ರೈತರಿಗಿಂತ ಇಮ್ಮಡಿ ಉತ್ಪತ್ತಿ ಲಾಭಗಳಿದ್ದುವು. ಅಕ್ಕಿ, ಸಕ್ಕರೆ, ಧವಸ ಧಾನ್ಯಗಳನ್ನು ಬೆಳೆಸಲಿಕ್ಕೂ, ಮಾರಲಿಕ್ಕೂ, ಅವರಿಗೆ ತುಂಬಾ ಸೌಕರ್ಯಗಳಿದ್ದುವು. ಎಶಲ ಕೈಗಾರಿಕೆಯ ಕೆಲಸಗಾರರಿಗೆ ಇತರರಿಗಿಂತ ಮೂರು ಪಾಲು ಹೆಚ್ಚು ಮಜೂರಿ ಸಿಗುತಿತ್ತು.

ಹೊರ ದೇಶದಿಂದ ಮುಖ್ಯವಾಗಿ ಅಮೆರಿಕದಿಂದ ಫಿಲಿಪ್ಪೈನರಿಗೆ ಎಲ್ಲಾ ತರದ ಯಂತ್ರೋಪಕರಣಗಳೂ ಆಹಾರ ಪದಾರ್ಥಗಳೂ ಪೂರೈಸಲಾಗುತಿತ್ತು.

ಒಟ್ಟಿನಲ್ಲಿ ಹೇಳುವುದಾದರೆ ಅಲ್ಲಿಯ ಜನರಿಗೆ ಎಲ್ಲಾ ತರದ ನಾಗರಿಕ ಸೌಕರ್ಯಗಳೂ, ಯಾವ ಆತಂಕಗಳಿಲ್ಲದೆ ಒದಗಿಸಿ ಕೊಡಲಾಗುತಿತ್ತು. ಆದುದರಿಂದಲೇ ಅವರು ಅಮೆರಿಕವನ್ನೂ ಅಮೆರಿಕನರನ್ನೂ ತುಂಬಾ ಸಹಾನುಭೂತಿಯಿಂದ ಕಾಣುತ್ತಾರೆ. ಅವರು ತುಂಬಾ ವಿಧೇಯರಾಗಿಯೂ ಇದ್ದರು.

ಜಪಾನಿಯವರು ಬಂದ ಮೇಲೆ ದಬ್ಬಾಳಿಕೆಯೇ ಫಿಲಿಪ್ಪೈನ ಜನರ ಪಾಲಿಗೆ ಬಂದಿರುವ ಸ್ಥಿತಿ. ಅವರು ತಮ್ಮ ಸೈನ್ಯಗಳಿಗಾಗಿ ಒಕ್ಕಲಿಗರಿಂದ ಅಕ್ಕಿ ಧಾನ್ಯಗಳನ್ನು ದೋಚಿಕೊಂಡು ಹೋಗುತ್ತಾರೆ. ಅವುಗಳಿಗೆ ತಮಗೆ ತೋರಿದ ಬೆಲೆಯನ್ನು ಕೊಡುತ್ತಾರೆ.

ಉಪವಾಸದ ಸ್ಥಿತಿಗೆ ಬಂದಿರುವ ಫಿಲಿಪ್ಪೈನರು ದಿಕ್ಕು ಕಾಣದಾಗಿದ್ದಾರೆ. ಮಿತ್ರರ ದಳಗಳು ತಮ್ಮನ್ನು ಈ ಸಂಕಷ್ಟದಿಂದ ಎಂದು ಪಾರು ಮಾಡುವರೆಂದು ಎದುರು ನೋಡುತಿದ್ದಾರೆ. ಮುಂದಿನ ಬೆಳೆಯನ್ನು ಮಾಡದಿದ್ದರೆ ಗುಂಡಿಕ್ಕಿ ಕೊಲ್ಲುತ್ತೇವೆಂದು ಜಪಾನಿಯರು ಬೆದರಿಸಿದರು. ಅಲ್ಲಿನ ಜನರು ಅದಕ್ಕೂ ಸಿದ್ಧರಿದ್ದಾರೆ.

ಫಿಲಿಪ್ಪೈನರ ಇನ್ನೊಂದು ಮುಖ್ಯ ಪದಾರ್ಥ ಅಂದರೆ ಸಕ್ಕರೆ. ಅಲ್ಲಿನ ಸಕ್ಕರೆ ಕಾರ್ಖಾನೆಗಳನ್ನು ಜಪಾನಿಯರು ಮದ್ಯ ಸಾರವನ್ನು ತೆಗೆಯುವ ಸ್ಥಳಗಳಾಗಿ ಪರಿವರ್ತನೆ ಮಾಡಿದ್ದಾರೆ. ಈ ಮದ್ಯ ಸಾರವನ್ನು ಅವರು ತಮ್ಮ ಮೋಟಾರುಗಳಿಗೆ ಉರಿಸಲು ಉಪಯೋಗಿಸುತ್ತಾರೆ.

ಫಿಲಿಪ್ಪೈನರು ಉಪವಾಸ ಸಾಯುತಿದ್ದಾರೆ. ಶಾಲೆ, ಕಾಲೇಜು, ಆಸ್ಪತ್ರೆಗಳನ್ನು ಆಕ್ರಮಣಗಾರರು ಸೈನ್ಯ ಠಾಣ್ಯಗಳಾಗಿ ಮಾಡಿದ್ದಾರೆ. ಅಮೆರಿಕನ್ ಧಾಳಿಯಿಂದ ತಪ್ಪಿಸಿ ಕೊಳ್ಳಲು ಅವರ ಪವಿತ್ರ ದೇವಾಲಯಗಳನ್ನು ಅವರು ಉಪಯೋಗಿಸುತಿದ್ದಾರೆ.

ಜಪಾನಿಯರಿಗೆ ಅಮೆರಿಕನರ ಭಯ ಇದೆ. ಅವರು ಖಂಡಿತ ಬರುವರೆಂದು ಅವರಿಗೆ ಖಚಿತವಾಗಿದೆ. ಅಮೆರಿಕನರು ಬಂದೇ ಬರುವರೆಂದು ಫಿಲಿಪ್ಪೈನರೂ ಖಂಡಿತ ಭರವಸೆಯುಳ್ಳವರಿದ್ದಾರೆ.

ಆಡಳಿತದ ಅಧಿಕಾರದಲ್ಲಿರುವ ಕೆಲವು ಜಪಾನಿಯರ ಕೈಗೊಂಬೆಯಂತಿರುವ ಫಿಲಿಪ್ಪೈನ್ ಮುಖಂಡರಿಗಾದರೂ ಸುಖವಿಲ್ಲ, ಲಾರೆಲ್ ಮತ್ತು ಎಕ್ವಿನೊ ಎಂಬಿವರ್ರನ್ನು ಕೊಲ್ಲಲು ಪ್ರಯತ್ನಗಳಾದುವು. ಅವರಿಗೆ ಗುಂಡಿನೇಟಾದರೂ ಸಾಯಲಿಲ್ಲ. ಅವರಿಗೆ ಹೊಡೆದ ಆರೋಪದ ಮೇಲೆ ಐದು ಮಂದಿ ನಿರಪರಾಧಿಗಳನ್ನು ಗಲ್ಲಿಗೇರಿಸಲಾಯಿತು.

ಆದರೆ ಸ್ವಾತಂತ್ರ್ಯ ಚಳವಳವು ಅಲ್ಲಿ ಪ್ರಾರಂಭವಾಗಿದೆ ಮಾತ್ರ. ಅದು ಇನ್ನೂ ಬೆಳೆಯಲಿದೆ. ಜಪಾನಿಯ ಆಡಳಿತಗಾರರೊಂದಿಗೆ ಸ್ಪೈನ್ ದೇಶದ ಕೆಲವು ಠಾಯಭಾರಿಗಳು ಸಹಕರಿಸುತಿದ್ದಾರೆ. ಅವರ ಮೇಲೂ ಅಲ್ಲಿನ ಜನರಿಗೆ ಕಣ್ಣಿದೆ. ಕಾಲ ಹೋದ ಹಾಗೆ ಫಿಲಿಪ್ಪೈನರ ದ್ವೇಷವೂ ಹೆಚ್ಚುತ್ತಿದೆ. ತಮ್ಮ ಅತ್ಯಲ್ಪ ಉತ್ಪತ್ತಿಯಿಂದ ಆ ಜನರು ಅರೆ ಹೊಟ್ಟೆಯಲ್ಲಿ ಎಂಬಂತೆ ದಿನ ತಳ್ಳುತಿದ್ದಾರೆ. ಆದರೆ ಅಮೆರಿಕನ್ ವಿಜಯದ ವರೆಗೆ ಅವರು ತಾಳ್ಮೆ ವಹಿಸಿಕೊಂಡಿರುವರು.

ಚೀನದಲ್ಲಿ ಗಾಂಧಿ ಯೋಜನೆ

ಸಮುದಾಯವಾದ ಹೆಚ್ಚುತ್ತಿದೆ

ವಿಶ್ವವ್ಯವಹಾರದಲ್ಲಿ ಚೀನದ ಸ್ಥಾನ

ಚೀನಾ ಸರಕಾರದ ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರಾದ ಸನ್ ಫೋರವರು ಇತ್ತೀಚೆಗೆ 'ಚೀನದ ಮುನ್ನೋಟ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಅದರಲ್ಲಿ ಬ್ರಿಟನ್ ಅಮೆರಿಕಗಳು ಚೀನದ ಪ್ರಗತಿಗೆ ಹೇಗೆ ಆತಂಕ ತಂದೊಡ್ಡಿದರೆಂಬ ವಿಷಯವು ವಿವರಿಸಲಾಗಿದೆ. ದೊಡ್ಡ ದೊಡ್ಡ ಕೈಗಾರಿಕೆ ಸಂಸ್ಥೆಗಳನ್ನು ಸ್ಥಾಪಿಸಿದ್ದ ಪರಕೀಯರು ಅಲ್ಲಿನ ಜನರ ನಿರುದ್ಯೋಗವನ್ನು ನಿವಾರಣೆ ಮಾಡಲು ಪ್ರಯತ್ನಿಸಲಿಲ್ಲವೆಂದು ಅವರು ಆರೋಪಿಸುತ್ತಾರೆ.

ತಮ್ಮ ಪುಸ್ತಕದಲ್ಲಿ ಸನ್ ಫೋರವರು ರಶ್ಯದ ಸಮತಾವಾದ ಪದ್ಧತಿಯ ಕಡೆಗೆ ತಮಗಿರುವ ಸಹಾನುಭೂತಿಯನ್ನು ಒತ್ತಿ ಹೇಳಿರುತ್ತಾರೆ. ಅವರ ತಂದೆಯವರಾದ ಸನ್ ಯಟ್‌ಸೆನ್ನರ ರಾಷ್ಟ್ರೀಯ ಸ್ವಾತಂತ್ರ್ಯ, ರಾಜಕೀಯ ಪ್ರಜಾಪ್ರಭುತ್ವ, ಆರ್ಥಿಕ ಸುಧಾರಣೆ ಈ ಮೂರು ತತ್ವಗಳನ್ನು ಅದರಲ್ಲಿ ಸವಿಸ್ತಾರವಾಗಿ ಪ್ರತಿಪಾದಿಸಲಾಗಿದೆ. ಇದು ಅಲ್ಲಿನ ರಾಷ್ಟ್ರೀಯ ಪಕ್ಷದ ಮುಖ್ಯತತ್ವ. ಇದು ರಶ್ಯನ್ ಪದ್ಧತಿಗೆ ಬಹಳ ಹತ್ತಿರದಲ್ಲಿ ಸರಿಹೋಲುವುದು.

ಅವರು ಹೀಗೆ ಬರೆಯುತ್ತಾರೆ:–ಚೀನದ ಈಗಿನ ಸರಕಾರದಲ್ಲಿ ಪ್ರಜಾಪ್ರಭುತ್ವಕ್ಕೆ ಮನ್ನಣೆ ಕಡಿಮೆಯಾಗುತ್ತಿದೆ. ಚೀನಿಯರು ಅದನ್ನು ಸರಿಪಡಿಸಬೇಕು. ಚೀನವು ಮುಂದೆ ಜಗತ್ತಿನ ವ್ಯವಹಾರದಲ್ಲಿ ಪ್ರಾಮುಖ್ಯ ಪಾತ್ರ ವಹಿಸಲಿರುವುದು. ಈಗಿನ ಧೋರಣೆ ಬದಲಾಯಿಸದಿದ್ದರೆ ಅದು ಇತರ ದೇಶಗಳಿಗಿಂತ ಹಿಂದೆಬೀಳುವುದು.

ಚೀನವು ಪ್ರತ್ಯೇಕವಿರುವುದಕ್ಕೆ ಬಯಸುವುದಿಲ್ಲ. ಈಗಿನ ಮಿತ್ರ ರಾಷ್ಟ್ರಗಳ ಮೇಲೆ ಚೀನಿಯರಿಗೆ ಭರವಸೆ ಇದೆ. ಚೀನಿಯರು ಧೈರ್ಯದಿಂದ ವಿಶ್ವವ್ಯವಹಾರದಲ್ಲಿ ಭಾಗವಹಿಸಲು ಪ್ರಯತ್ನಿಸಬೇಕು.

ಕೈಗಾರಿಕೆಯ ಕುರಿತು ಪ್ರಸ್ತಾಪಿಸುತ್ತಾ ಸನ್ ಫೋರವರು:–ದೊಡ್ಡ ಕೈಗಾರಿಕೆಗಳನ್ನು ಸರಕಾರದವರು ನಡೆಸಬೇಕು. ಚಿಕ್ಕ ಚಿಕ್ಕ ಗೃಹ ಕೈಗಾರಿಕೆಗಳನ್ನು ಸ್ವತಂತ್ರ ವ್ಯಕ್ತಿಗಳು ಪ್ರೋತ್ಸಾಹಿಸಬೇಕು. ಹಳ್ಳಿಗಳಲ್ಲಿ ಸ್ಥಾಪಿತವಾಗಿರುವ ಪಂಚಾಯತು ಆಡಳಿತಗಳು ಲಂಚಕೋರರ ಕೈಯಲ್ಲಿವೆ. ಅವನ್ನು ಸುಧಾರಿಸಬೇಕು. ತರುಣ ಜನಾಂಗವನ್ನು ಆರೋಗ್ಯಕರವಾದ ರಾಷ್ಟ್ರೀಯ ಭಾವನೆಯಲ್ಲಿ ಬೆಳಸಿ, ಈಗಿನ ರಾಜಕೀಯದಲ್ಲಿರುವ ಕುಂದುಕೊರತೆಗಳನ್ನು ನಿವಾರಿಸಿ ಚೀನವು ಶ್ರೇಷ್ಠ ರಾಷ್ಟ್ರಗಳ ಶ್ರೇಣಿಯಲ್ಲಿ ಮೆರೆವಂತಾಗಬೇಕು" ಎಂದಿರುವರು.

೧೩ ವರ್ಷದಲ್ಲಿ ಕಾಲೇಜ್ ಪದವಿ

ನಿಗ್ರೋ ಬಾಲಕನ ಬುದ್ಧಿಶಕ್ತಿ

ಅಮೆರಿಕದ ಸಿನ್ಸಿನಾಟಿ ವಿಶ್ವವಿದ್ಯಾಲಯದ ಕಾಲೇಜಿಗೆ ೧೩ ವರ್ಷದ ನಿಗ್ರೋ ಬಾಲಕನೊಬ್ಬನು ಸೇರಿದ್ದಾನೆ. ಡಾರ್ವಿನ್ ಟರ್ನ್ಸರ್ ಎಂದು ಅವನ ಹೆಸರು. ಆ ಕಾಲೇಜಿಗೆ ಅಷ್ಟು ಸಣ್ಣ ಬೇರೊಬ್ಬ ಹುಡುಗನು ಇದುತನಕ ಸೇರಿರಲಿಲ್ಲ.

ಬಾಲಕ ಟರ್ನರನ ತಾಯಿಯೂ ಬಹುವಿದ್ಯಾಭಿರುಚಿಯವಳು. ಮಗನಂತೆ ಅವಳು ತನ್ನ ೧೫ ವರ್ಷದಲ್ಲಿ ಕಾಲೇಜು ಸೇರಿ ೧೮ ವರ್ಷದೊಳಗೆ ಬಿ. ಎ. ಡಿಗ್ರಿ ಸಂಪಾದಿಸಿದ್ದಳು. ೧೩ ವರ್ಷದಲ್ಲಿ ಸೇರಿ ಮಗನು ತಾಯಿಯ ದಾಖಲೆಯನ್ನು ಮುರಿದನು.

ತಾಯಿಗಿಂತ ಹೆಚ್ಚು ಡಿಗ್ರಿಗಳನ್ನು ಸಂಪಾದಿಸಬೇಕೆಂದು ಟರ್ನರನ ಮಹತ್ವಾಂಕ್ಷೆ. ಎರಡು ವರ್ಷದ ಮಗುವಿರುವಾಗ ಅವನಿಗೆ ಶಾಲೆಗೆ ಹಾಕಿದರು. ನಾಲ್ಕನೇ ವರ್ಷದಲ್ಲಿ ಅವನು ಪ್ರಾಥಮಿಕ ಶಿಕ್ಷಣ ಮುಗಿಸಿ, ೭ನೇ ವರ್ಷದಲ್ಲಿ ಹೈಸ್ಕೂಲ್ ಕ್ಲಾಸುಗಳಿಗೆ ಸೇರಿಸಲ್ಪಟ್ಟನು. ಮುಂದೆ ದೊಡ್ಡ ವಕೀಲನಾಗಬೇಕೆಂದು ಅವನು ಹೇಳುಕೊಳ್ಳುತಿದ್ದಾನೆ.

(೧ನೇ ಪುಟದಿಂದ)

ವಿದ್ಯಾರ್ಥಿಗಳೂ ರಾಜಕೀಯವೂ

ರಾಜಕೀಯದಿಂದ ಪ್ರತ್ಯೇಕವಿರಬೇಕೆಂಬ ನನ್ನ ಅಭಿಪ್ರಾಯ ಈಗಲೂ ಇದೆ. ಆದರೆ ಸಾರ್ವಜನಿಕ ಕಾನೂನುಭಂಗ ಚಳವಳಿಯ ಸಮಯದಲ್ಲಿ ಮಾತ್ರ ಈ ವಿಚಾರ ಬೇರೆ. ಆದರೆ ಬಹುಮಟ್ಟಿಗೆ ಅದರ ಪ್ರಶ್ನೆಯು ಸದ್ಯಕ್ಕೆ ಇಲ್ಲವೆನ್ನಬಹುದು. ಆದರೆ ರಾಷ್ಟ್ರೀಯ ಜಾಗೃತಿಯ ಕುರಿತು ಅವರಿಗೆ ತಕ್ಕ ಶಿಕ್ಷಣ ದೊರೆಯಲೇ ಬೇಕು. ನಾಗರಿಕರು ದೇಶಪ್ರೇಮಿಗಳಾಗಿರುವಂತೆ ಕಲಿಸುವುದು ಸ್ವತಂತ್ರ ಸರಕಾರದ ಕರ್ತವ್ಯ. ಈಗ ಶಿಕ್ಷಣವು ಪರದೇಶಿ ಭಾಷೆಯಲ್ಲಿ ಕೊಡಲ್ಪಡುತ್ತದೆ. ಅದು ರಾಷ್ಟ್ರೀಯ ಭಾವನೆಗೆ ವಿರೋಧವಾದುದು. ಅದನ್ನು ಸಾಧಿಸಲು ಒಂದು ಕಾರ್ಯಕರ್ತರ ದಳ ತಯಾರಾಗಬೇಕು. ಈ ವಿಚಾರದಲ್ಲಿ ಇದೊಂದು ಹೊಸ ಕಾರ್ಯರಂಗ.

ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಯು ಹೊರಬಾರದಂತೆ ನಾವು ನೋಡಬೇಕು. ಒಂದು ಸುವ್ಯವಸ್ಥಿತ ರೀತಿಯಲ್ಲಿ ಈಗಿನ ವಿದ್ಯಾಂಗ ಕ್ರಮವನ್ನು ಬೇರೊಂದು ಪದ್ಧತಿಯಿಂದ ಬದಲಾಯಿಸುವಂತೆ ಮಾಡಬೇಕು. ರಾಷ್ಟ್ರೀಯ ಶಿಕ್ಷಣ ಪದ್ಧತಿಯೊಂದು ಅನ್ಯ ಪರದೇಶಿ ಪದ್ಧತಿಯೊಂದಗಿಂತಲೂ ಶ್ರೇಷ್ಠತರವೆಂದು ನಾವು ತೋರಿಸಿ ಕೊಡಬೇಕು.

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು

	ರೂ. ಆ.				
		ಮೂರು ಪ್ರಹಸನಗಳು	0–14	ವೀರಭೂಮಿ	0– 2
ಸುಲಭದಲ್ಲಿ ಇಂಗ್ಲಿಷ್	1–4	ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0– 8
ಯುವಕರಿಗೆ ಮತ್ತು ವಯ		ಪುರುಷವಧು	0– 4	ಕವಿತೆಗಳು	
ಸ್ಕರಿಗೆ ಸುಲಭವಾಗಿ ಇಂಗ್ಲಿ		ಹೆಂಡ್ತಿ ಗಂಡನಾದರೆ	0– 4	ಕಾವ್ಯ ಸಾಮ್ರಾಜ್ಯ	0–12
ಷನ್ನು ಅನ್ಯ ಸಹಾಯವಿಲ್ಲದೆ		ಕತೆಗಳು		ಮುಗುಳು	0– 3
ಕಲಿಸುವ ಇಂಗ್ಲಿಷ್ ಸ್ವಯಂ		ನಗೆನೋಟಗಳು	0–14	ಶ್ರೀಮುಖ	1– 0
ಬೋಧಿನಿ.		ಅನ್ನದೇವರು		ಪುರಂದರದಾಸರ	
ನಾಟಕಗಳು		ಮತ್ತು ಇತರ ಕಥೆಗಳು	1– 0	ಕೀರ್ತನೆ	1– 0
ಪ್ರೇಮವಿಜಯ	0–12	ಭಾರತೀಯ ಕತೆಗಳು	0–14	ಭಗವದ್ಗೀತಾ (ಮೂಲ-	
ದೇಶಭಕ್ತ	1 –4	ನಂದಾದೀಪ	0–10	ಸಿಲ್ಕ್ ಬೈಂಡು)	1– 4
ವ್ಯಭಿಚಾರಿಣಿ ಯಾರು	0–12	ನಾಡಗತೆಗಳು	0– 8	ಇತರ ಪುಸ್ತಕಗಳು	
ಕುಶಲವ	0– 5	ಕಂಡೂಕಾಣದ		ಮುಂದಿನ ದೇವರು	0–8
ಸಂಶಯ ಪಿಶಾಚಿ	0– 8	ನೋಟಗಳು	0– 8	ರಾಷ್ಟ್ರಸಭೆಯ ಇತಿಹಾಸ	2-8
ರಂಗಭೂಮಿ	0– 8	ನಾರೀಹೃದಯ	0–14	ಬಾಲವಾಙ್ಮಯ	0– 3
ಪ್ರಕಾಶ	1–12	ಅಂತರಂಗದ ಕತೆಗಳು	0–10	ಮಿತಸಂತತಿ	0– 8
ಧರ್ಮಸಂಕಟ	0– 4	ಪ್ರೇಮಪ್ರವಾಹ	0– 6	ನಿಶ್ಚಯಜ್ಞಾನ	0– 8
ಆರೋಗ್ಯ ಪ್ರತಾಪ.	0–12	ಆಹುತಿ ಇತ್ಯಾದಿ ಕತೆಗಳು	0-12	ಪಾಪಪೂರಿತ ಪಟ್ಟಣಗಳು	1-8
ಪಂಚಾರತಿ	0– 6	ಲೋಪಾಮುದ್ರೆ	0– 6	ಚಿಗುರು	0– 6
ಪ್ರತೀಕಾರ.	0– 8	ಕಾದಂಬರಿಗಳು		– ಇತರ ಪುಸ್ತಕಗಳ ಕೆಟಲಾಗ್ಗೆ	
ಸೇವಾಪಥ	0– 8	ಸನ್ಯಾಸಿಯ ಸೋಗಿನಲ್ಲಿ	0– 8	0-2 ಸ್ಟಾಂಪಿಟ್ಟು ಬರೆಯಿರಿ.	

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ, ದ. ಕ.

ಸಿಹಿ ಸುದ್ದಿ ಸಂಗ್ರಹ

ಚೀನದಲ್ಲಿ ಕಟ್ಟಡಗಳ ಮಾಡಿನ ಬಣ್ಣವನ್ನು ನೋಡಿ ನಾವು ಅದು ಯಾವ ತರದೆಂದು ತಿಳಿಯಬಹುದು. ಹಸರು ಬಣ್ಣ ಬದ್ದರೆ–ಸರಕಾರ ಅಫೀಸುಗಳು. ಹಳದಿ–ವ್ಯಾಪಾರಿ ಸಂಸ್ಥೆಗಳು. ಕೆಂಪು–ಸ್ವತಂತ್ರ ವಾಸಸ್ಥಳಗಳು.

*   *   *

ಶೀತ ಜ್ವರವು ಒಂದು ಲೆಕ್ಕದಲ್ಲಿ ಅತ್ಯಂತ ಉಪಕಾರಿ ಜಾಡ್ಯವೆಂದೂ, ಅದರಿಂದ ನಮ್ಮ ದೇಹದಲ್ಲಿ ಇತರ ಭಯಂಕರ ರೋಗಗಳನ್ನು ತಡೆಗಟ್ಟುವ ಶಕ್ತಿ ಉಂಟಾಗುತ್ತದೆಂತಲೂ ಓರ್ವ ಬ್ರಿಟಿಷ್ ವೈದ್ಯರು ತಿಳಿಸುತ್ತಾರೆ.

*   *   *

ಇಂಗ್ಲೆಂಡಿನ ಸಸೆಕ್ಸ್ ಜಿಲ್ಲೆಯಲ್ಲಿ ಒಂದು ಕ್ಲಬ್ ಇದೆ. ನಸ್ಯ ಸೇದುವವರು ಮಾತ್ರ ಇದರ ಸದಸ್ಯರು. ಸದಸ್ಯರು ನಸ್ಯ ಡಬ್ಬಿ ತರದಿದ್ದರೆ, ಎಡಗೈಯಿಂದ ನಸ್ಯ ಎಳೆದರೆ, ನಸ್ಯ ಸೇದುವಾಗ ಸೀನು ಬಂದರೆ, ಇಲ್ಲವೆ ಕೃತಕ ಔಷದೀಯ ನಸ್ಯಗಳನ್ನು ಉಪಯೋಗಿಸಿದ್ದರೆ ದಂಡ ತೆರಬೇಕು. ಇದು ರೆಡ್ ಕ್ರೊಸ್ ಫಂಡಿಗೆ ಕೊಡಲಾಗುವುದು.

*   *   *

ದಕ್ಷಿಣ ಅಮೆರಿಕದ ಅರಿಜೋನಾ ಮರುಭೂಮಿಯಲ್ಲಿ ಉಷ್ಣ ೧೩೦ ಡಿಗ್ರಿಗೂ ಮಿಕ್ಕುತ್ತದೆ. ಒಂದುಸಲ ಓರ್ವ ಸೈನಾಧಿಕಾರಿಯು ಇದನ್ನು ಹಾದುಹೋಗುವಾಗ ಅವನ ದೇಹದೊಳಗಿನ ತೇವವೆಲ್ಲ ಆರಿಹೋಗಿ ೧೮೦ ರತ್ತಲು ಭಾರಇದ್ದ ಅವನು ೩೦ ಪೌಂಡುಗಳಷ್ಟು ಕಮ್ಮಿಯಾದನಂತೆ.

*   *   *

ಕ್ರಿಸ್ತಪೂರ್ವ ಒಂದು ಶತಮಾನದ ಹಿಂದೆ ರೋಮ್ ನಗರದಲ್ಲಿ ಅಗ್ನಿಶಾಮಕ (ಫ್ಯಾಯರ್ ಸರ್ವಿಸ್) ದಳವಿತ್ತು. ಕ್ರಿ. ಪೂ. ನಾಲ್ಕು ಶತಮಾನಗಳ ಹಿಂದೆ ಪ್ಲಾಟೊ ಎಂಬ ಗ್ರೀಕ್ ವಿಜ್ಞಾನಿಯು ನೀರು ಹರಿತದಿಂದ ಚಲಾವಣೆಯಾಗುವ ಒಂದು ಎಲಾರಮ್ ಗಡಿಯಾರವನ್ನು ತಯಾರಿಸಿದ್ದನು.

*   *   *

ಐರಿಶ್ ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆನಿಂತಿದ್ದ ಕೆಲ್ಲಿ ಎಂಬ ಹುರಿಯಾಳು ಅಸ್ವಸ್ಥದಿಂದ ಇನ್ನೊಬ್ಬ ಹುರಿಯಾಳುತನವನ್ನು ಹಿಂದೆಗೆದನು. ಆದರೆ ಅವನ ಪತ್ರ ತಲುಪುವುದರೊಳಗೆ ಚುನಾವಣೆಗಳು ನಡೆದು ಅವನು ಆರಿಸಲ್ಪಟ್ಟಿದ್ದನು.

*   *   *

ಅಮೆರಿಕದ ಕೆಂಟುಕಿ ಎಂಬಲ್ಲಿ ಹಾವು ಕಚ್ಚಿಸಿಕೊಳ್ಳುವವರ ಸಂಘವೊಂದಿದೆ. ಅವರು ಜೀವರಕ್ಷೋಷಕ ವಿಶ್ವಾಸದಿಂದಲೇ ಹಾವು ಕಡಿತದ ವಿಷದಿಂದ ಬದುಕಿಕೊಳ್ಳಲು ಪ್ರಯತ್ನಿಸುವರು. ಅವಿಶ್ವಾಸಪಟ್ಟ ಅವರಲ್ಲಿನ ಒಬ್ಬನು ಮರಣಪಟ್ಟನು. ಅವರ ಗುರುವು ಹಾವಿನ ವಿಷವನ್ನು ಕುಡಿದು ದೈವವಿಶ್ವಾಸದ ಮಹಿಮೆಯನ್ನು ಪೋಲಿಸ್ ಅಧಿಕಾರಿಗಳ ಮುಂದೆ ಪ್ರದರ್ಶಿಸಿದನು.

*   *   *

ಡೆರಾಡೆನ್ ಬಳಿ ದ್ಯೊವಾಲಾ ಎಂಬೂರಲ್ಲಿ ಜುಗಾರಿಗಳ ಕೂಟವಿದೆ. ಒಬ್ಬ ದರ್ಜಿಯೂ ಅದರಲ್ಲಿಸೇರಿ ತನ್ನ ಹೊಲಿಗೆ ಯಂತ್ರ ಮುಂತಾದುವನ್ನು ಅಡವುಇಟ್ಟು ಮತ್ತೂ ಸಾಕಾಗದೆ ತನ್ನ ಹೆಂಡತಿಯನ್ನೂ ಗಿರವು ಬರೆದುಕೊಟ್ಟನು–ಧರ್ಮರಾಯನು ದ್ರೌಪದಿಯನ್ನು ಕೊಟ್ಟಹಾಗೆ. ಸರಕಾರದವರು ಆ ಕೂಟವನ್ನು ಹಿಡಿಯುವ ಪ್ರಯತ್ನದಲ್ಲಿದ್ದಾರೆ.

*   *   *

ಓಲ್ಡ್‌ಹಾಮಿ (ಇಂಗ್ಲೆಂಡ್) ನಲ್ಲಿ ಅಂಬ್ರೋನ್ ಮಿಟನ್ ಎಂಬ ಕ್ರೀಡಾನಿಪುಣನ ದೃಷ್ಟಿ ಕುರುಡಾಗುತ್ತಾ ಬರುತಿತ್ತು. ಓಡುವ, ಹಾರುವ ವ್ಯಾಯಾಮ ಬಿಟ್ಟು ಅವನು ಯೋಗ ಸಾಧನೆಗೆ ತೊಡಗಿದಮೇಲೆ ಈಗ ಅವನ ಕಣ್ಣುಗಳು ಸರಿಯಾಗಿವೆ. ಬಹಳಸಮಯದವರೇಗೆ ನೆಲದಡಿಯಲ್ಲಿ ಅವನು ಸಮಾಧಿ ಸ್ಥಿತಿಯಲ್ಲಿರಬಲ್ಲನು. ಅವನ ಶಕ್ತಿಯು ಹೆಚ್ಚುತ್ತಾ ಬೆಳೆದಿದೆ.

*   *   *

ಅಧ್ಯಕ್ಷ ರೂಸ್‌ವೆಲ್ಟರಿಗೂ, ಪ್ರಧಾನ ಚರ್ಚಿಲ್ಲರಿಗೂ ಅಲ್ಬರ್ಟ್ ಸಿಲಿಪ್ಸ್ ಎಂಬ ಮಹನೀಯನು ಎರಡು ಚಿತ್ರಗಳನ್ನು ಕೊಡುವಂತೆ ತನ್ನ ಮರಣಪತ್ರದಲ್ಲಿ ಸೂಚಿಸಿದ್ದಾನೆ–ಅವರ ಮೇಲೆ ತನಗಿರುವ ಗೌರವಕ್ಕಾಗಿ. ಅಧ್ಯಕ್ಷರಿಗೆ–ನ್ಯೂಯೋರ್ಕ್ ಬಂದರದ ಚಿತ್ರ. ಪ್ರಧಾನರಿಗೆ–ಗಾಳಹಾಕುವ ದೋಣಿಯ ಚಿತ್ರ.

ತಲೆತೆರಿಗೆ ತೆಗೆದರು

ಜಗತ್ತಿನ ಅತೀ ದೊಡ್ಡ ಮಸೀದಿ

ಮೂನ್ನೂರು ವರ್ಷಗಳ ಹಿಂದೆ ಮೊಗಲ್ ಅರಸನಾದ ಶಹಾಜಾಹಾನನು ದಿಲ್ಲಿಯಲ್ಲಿ ಜಗತ್ತಿನ ಅತೀ ದೊಡ್ಡದೆನಿಸುವ ಜುಮ್ಮಾ ಮಸೀದಿಯನ್ನು ಕಟ್ಟಿಸಿದನು. ಐತಿಹಾಸಿಕ ಕಟ್ಟಡವಾದುದರಿಂದಲೂ, ಮತ್ತು ಬಹಳ ಸುಂದರವಾಗಿರುವುದರಿಂದಲೂ ಈಗಲೂ ದೇಶವಿದೇಶದ ಪ್ರೇಕ್ಷಕರು ಅದನ್ನು ನೋಡಲು ಬರುತ್ತಾರೆ.

ಔರಂಗಜೇಬನು ಮುಸಲ್ಮಾನರಲ್ಲದವರ ಮೇಲೆ ತಲೆ ತೆರಿಗೆ ಹೊರಿಸಿದ್ದನಲ್ಲವೆ? ಅದರ ಕುರುಹು ಎಂಬಂತೆ ದಿಲ್ಲಿಯ ಜುಮ್ಮಾ ಮಸೀದಿಯನ್ನು ನೋಡಹೋಗುವ ಹಿಂದುಗಳು ಮೊನ್ನೆ ಮೊನ್ನೆಯ ತನಕ ಒಂದು ತರದ ತೆರಿಗೆಯನ್ನು ಕೊಡಬೇಕಿತ್ತು.

ಕ್ರೈಸ್ತರಾಗಿದ್ದವರು ಈ ತೆರಿಗೆಯನ್ನು ಕೊಡಬೇಕಾಗಿದ್ದಿಲ್ಲ. ಯುರೋಪಿಯಾನರಿಗೆ ಈ ತೆರಿಗೆಯೂ ಇರಲಿಲ್ಲ. ಮಾತ್ರವಲ್ಲ ಅವನ್ನು ಕಾಲಿಗೆ ಬೂಟ್ಸು ಹಾಕಿ ಪ್ರಾರ್ಥನಾ ಮಂದಿರದ ಚಂದ್ರಶಿಲೆಯ ಜಗಲಿಯ ಮೇಲೂ ಹೋಗಬಿಡುತಿದ್ದರು. ಆದರೆ ಗತಿಸಿದ ಮೌಲಾನಾ ಮಹಮ್ಮದ್ ಅಲೀ (ಕಾಂಗ್ರೆಸ್ ಅಧ್ಯಕ್ಷರಾಗಿದ್ದರು) ಅವರು ಬಿಳಿ ಜನರಿಗೆ ತೋರಿಸಲಾಗುತಿದ್ದ ಈ ಔದಾರ್ಯವನ್ನು ನಿಲ್ಲಿಸಲು ಪ್ರಯತ್ನಪಟ್ಟರು. ಅಮೇಲೆ ಅವರ ಬೂಟ್ಸುಗಳನ್ನು ಮುಚ್ಚಲು ಮಸೀದಿ ದ್ವಾರದಲ್ಲಿ ಕೆಲವು ಬಟ್ಟೆಗಳನ್ನು ಇಡುತಿದ್ದರು. ಇತರರೆಲ್ಲರೂ (ಮುಸಲ್ಮಾನರು ಕೂಡಾ) ಬೂಟ್ಸು ತೆಗೆದೇ ಒಳಗೆಹೋಗಬೇಕು.

ಈಗ ಅಲ್ಲಿ ಆಡಳಿತ ಬದಲಾಗಿದೆ. ಹೊಸ ಆಡಳಿತಗಾರರು ಎಲ್ಲರಿಗೂ ಸಮಾನವಾಗಿರುವ ನಿಯಮಗಳನ್ನು ಮಾಡಿದ್ದಾರೆ. ಈಗ ಭೇದವಿಲ್ಲದೆ ಎಲ್ಲರೂ ಬೂಟ್ಸು ತೆಗೆಯಲೇ ಬೇಕು. ಹಿಂದುಗಳು ಈಗ ತೆರಿಗೆ ತೆರಬೇಕಾಗಿದ್ದಿಲ್ಲ. ಕಳೆದ ರಮ್ಜಾನ್ ಶುಕ್ರವಾರ ದಿನ ಭಾರತದ ಸೇನಾಧಿಪತಿ ಆಕಿನ್‌ಲೆಕರು ಮಸೀದಿ ನೋಡಲು ಬಂದಾಗ ಅವರೂ ಬೂಟ್ಸು ತೆಗೆಯಬೇಕಾಯಿತು.

ದೇವರ ಸ್ಥಳವು ತಾರತಮ್ಯವಿಲ್ಲ ಎಲ್ಲರಿಗೂ ಪ್ರವೇಶ ಯೋಗ್ಯವಾಗಿ ಪವಿತ್ರವಾಗಿರಬೇಕೆಂಬುದೇ ಹೊಸ ಆಡಳಿತಗಾರರ ಉದ್ದೇಶ. ಮುಸಲ್ಮಾನರಲ್ಲದವರ ಮೇಲೆ ಭೇದ ತೋರಿಸುವುದು ಪಾಪವೆಂದು ಅವರ ದೃಢಾಭಿಪ್ರಾಯ.

ಅರಸರ ಮನೆಯಲ್ಲಿ ಗಾಂಧಿ ಗುಡಿಸಲು

ಗತಿಸಿದ ಗಾಯಕವಾರರ ಅಭಿಷ್ಟ

ಬರೋಡ ಸಂಸ್ಥಾನಾಧಿಪತಿಗಳಾಗಿದ್ದ ಗತಿಸಿದ ಸಂಯ್ಯಾಜಿ ರಾವ್ ಗಾಯಕವಾರರ ಅತ್ಯಂತ ವೈಭವದ ಅರಮನೆಯ ಒಳಗೆ ಒಂದು ಮಣ್ಣು ಗೋಡೆಯ ಗುಡಿಸಲು ಕೋಣೆ ಇರುವ ವಿಷಯ ಹೆಚ್ಚಿನವರಿಗೆ ಗೊತ್ತಿಲ್ಲ. ಈ ಅರಮನೆಯ ನೆಲವು ಚಂದ್ರಶಿಲೆಯಿಂದ ಮುಚ್ಚಲ್ಪಟ್ಟಿದೆಯಾದರೂ ಅದರ ಒಳಗಿರುವ ಈ ಗುಡಿಸಲಿನ ನೆಲಕ್ಕೆ ಸೆಗಣಿಬಳಿಯಲ್ಪಡುತ್ತದೆ. ಗಾಯಕವಾರರು ಅರಸರಾಗುವ ಮುಂಚೆ ದನ ಮೇಯಿಸುವ ಹುಡುಗರಾಗಿದ್ದರು. ಬ್ರಿಟಿಷ್ ಅಧಿಕಾರಿಗಳು ಆ ಹುಡುಗನು ರಾಜವಂಶಕ್ಕೆ ಸೇರಿದವನೆಂದು ಕಂಡುಹಿಡಿದು ಪಟ್ಟದ ಮೇಲೆ ಕುಳ್ಳಿಸಿದರಂತೆ.

ತನ್ನ ಈ ಬಡತನದ ಬಾಲ್ಯದ ಸ್ಮರಣೆಯನ್ನು ಚಿರವಾಗಿಉಳಿಯುವಂತೆ ಅರಸರಾದ ಮೇಲೆ ಗಾಯಕವಾರರು ತಮ್ಮ ಅರಮನೆಯಲ್ಲಿ ಆ ಗುಡಿಸಲನ್ನು ಕಟ್ಟಿಸಿದ್ದು ಅದು ಈಗಲೂ ಅಲ್ಲಿ ಪ್ರೇಕ್ಷಕರನ್ನು ಕೌತುಕಗೊಳಿಸುತ್ತದೆ. ಇನ್ನೂ ಸ್ವಾರಸ್ಯವೆಂದರೆ ಈ ಗುಡಿಸಲು ಸೇವಾ ಗ್ರಾಮದಲ್ಲಿರುವ ಗಾಂಧಿಜಿಯವರ ಆಶ್ರಮದಲ್ಲಿನ ಒಂದು ಕೋಣೆಯಂತಿದೆ. ಅದನ್ನು ಕಟ್ಟಿಸಿದ ಮೇಸ್ತ್ರಿಗಳು ಬಹುಶ್ಯ ಗಾಂಧಿ ಆಶ್ರಮವನ್ನು ನೋಡಿದವರಿರಬಹುದು.

ಹೆಂಗುಸರು ಯುದ್ಧ ಸಹಾಯಕ್ಕೆ, ಅಸ್ತ್ರ ತಯಾರಿಕೆಗೆ ನಾರಿಯರು

ಮಿತ್ರ ದಳಗಳಿಗೆ ಪೂರೈಕೆಯಾಗುತ್ತಿರುವ ಅಪಾರ ಶಸ್ತ್ರಾಸ್ತ್ರಗಳನ್ನು ಇಂದು ಅಮೆರಿಕದಲ್ಲಿ ಸ್ತ್ರೀ ಮಜೂರರ ಸಹಾಯದಿಂದಲೇ ತಯಾರಿಸಲಾಗುತ್ತಿರುವುದೆಂದು ಸಂಯುಕ್ತ ಅಮೆರಿಕದ ಮಜೂರ ಖಾತೆಯ ಅಧಿಕಾರಿಣಿಯೋರ್ವಳು ತಿಳಿಸುತ್ತಾಳೆ. ಮಹಿಳೆಯೊಬ್ಬಳು ಈ ಖಾತೆಯ ಅಧಿಕಾರಕ್ಕೆ ನೇಮಿಸಲ್ಪಟ್ಟದ್ದು ಇದೇ ಕಾರಣದಿಂದಿರುತ್ತದೆ.

ಅಲ್ಲಿಯ ಮಹಿಳೆಯರ ಸಹಕಾರದಿಂದ ೧೧೦ ಲಕ್ಷ ಸೈನಿಕರು ದಳಗಳಿಗೆ ಸೇರುವಂತಾಯಿತು.

ಕುಶಲ ಕೈಗಾರಿಕೆಸ್ಥಾನಗಳಲ್ಲಿ ಅಲ್ಲಿನ ಸ್ತ್ರೀಯರೇ ಅಧಿಕ ಸಂಖ್ಯೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ಒಂದು ವರ್ಷದಲ್ಲಿ ೫ ಲಕ್ಷ ವಿಮಾನಗಳು ತಯಾರಾಗುವಂತಾಗಿದೆ. ವರ್ಷಕ್ಕೆ ೫೭ ಸಾವಿರ ಟ್ಯಾಂಕುಗಳೂ, ಸಣ್ಣದೊಡ್ಡ ೩೧ ಸಾವಿರ ವಿಮಾನಗಳೂ, ೨೩ ಶತಕೋಟಿ ಪೌಂಡು ಒಟ್ಟು ಭಾರದ ಸಿಡಿಮದ್ದುಗಳೂ ಈಗ ಅಲ್ಲಿ ಸಿದ್ಧಗೊಳಿಸಬಹುದಾಗಿದೆ. ಸ್ತ್ರೀಯರು ಭಾಗ ವಹಿಸಿದುದರಿಂದ ಅಲ್ಲಿನ ಏರ್ಪಾಡುಗಳನ್ನು ಚಿಕ್ಕ ಚಿಕ್ಕ ಇಲಾಖೆಗಳಾಗಿ ಗೊಂದಲವಿಲ್ಲದಂತೆ ಏರ್ಪಡಿಸಲಿಕ್ಕೆ ಸಾಧ್ಯವಾಗಿದೆ.

ಆಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

[illegible] Ltd.,
MANGALORE

Interest on Fixed Deposits

It is notified for the information of Depositors, that interest on all Fixed Deposits received from this date will be paid every half year instead of quarterly as hitherto; those received prior to this date will also be paid accordingly with effect from 1-1-1945

Office of the Bank,
Mangalore, 30th Oct. 1944. } By Order
H. S. KAMATH, *Manager*



ಹುಳುಕಡ್ಡಿ ಮದ್ದು

[illegible]

ಅನ್ನುಕಾಂಚನ ಡಿಪೋ.

ಬೊಂಬ್ಯಾ, ಮದರಾಸು, ಕಲ್ಕತ್ತ, ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

FOREMOST

In insurance service since 1910, we are proud of our achievements for over 30 year. With a net-work of Branches all over South India and a field organisation assisted by men and women of ability and ambition it shall be our endeavour to extend widely the advantages of Life Assurance to every one who seek it.

Agency opportunities available on liberal terms

KOCHIKAR BROTHERS LTD.

CENTRAL OFFICE—UDIPI, S. K.

Chief Agents for South India including Indian States.

The Bombay Life Assurance Co., Ltd.,

P. B. 337- 30, MOUNT ROAD, MADRAS.

Other Offices at:

BOMBAY BANGALORE CALICUT MADURA MANGALORE TRIVANDRUM

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products, Ltd.
Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಜಿ. ವಿ. ಪಂಡಿತರ

ನೀಲಾ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ!
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

MISSING
10 Nov 1944

MISSING
10 Nov 1944

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 17—11—1944 [ಸಂಚಿಕೆ 45]

ಧೀರ ಪುರುಷ ವೀರ ಜವಾಹರ್

ದೇಶವಿಖ್ಯಾತ ತಂದೆಯೋರ್ವನ ಕಣ್ಣೆದುರಿನಲ್ಲೇ ಮಗನೋರ್ವನು ವಿಶ್ವವಿಖ್ಯಾತನಾದುದು ಜಗತ್ತಿನ ಇತಿಹಾಸದಲ್ಲಿ ಅಪರೂಪದ ಘಟನೆ. ಭಾರತ ರಾಷ್ಟ್ರೀಯ ಸಭೆಯ ಅಧಿಪತಿಯಾದ ತಂದೆ ಮೋತಿಲಾಲರ ಉತ್ತರಾಧಿಕಾರಿ ಅಧ್ಯಕ್ಷ ಪಟ್ಟವನ್ನು ಏರಿದ ಜವಾಹರಲಾಲ್ ಓರ್ವ ಅತ್ಯಮೋಘ ವ್ಯಕ್ತಿಗಳು. ನಮ್ಮಂತ ಸಾಮಾನ್ಯರು ಅವರನ್ನು ಅವೇಶಪೂರ್ಣ ಅವತಾರಿ ಪುರುಷರೆಂದರೆ ವಿಶೇಷವೆನ್ನಿಸಲಿಕ್ಕಿಲ್ಲ.

ತಂದೆಯಿಂದ ಆಗರ್ಭ ಶ್ರೀಮಂತಿಕೆಯ ಗಂಭೀರತ್ವವನ್ನೂ, ತಾಯಿಯಿಂದ ಭದ್ರ ಭರವಸೆಯ ಮುಖಭಾವವನ್ನೂ ಜವಾಹರಲಾಲರು ತಮ್ಮ ಕಾಶ್ಮೀರಿ ಶರೀರ ಲಕ್ಷಣಗಳಲ್ಲಿ ಕೂಡಿಸಿಕೊಂಡಿದ್ದಾರೆ. ಜರ್ಮನರು ಕೊಚ್ಚಿಕೊಳ್ಳುವುದಕ್ಕಿಂತಲೂ ಶುದ್ಧವಾದ ಆರ್ಯವಂಶದ ರಕ್ತವನ್ನು ತಮ್ಮ ನಾಡಿಗಳಲ್ಲಿ ಧರಿಸಿಕೊಂಡವರಾಗಿ ಅತ್ಯಾಧುನಿಕ ಪಾಶ್ಚಾತ್ಯ ಸಂಸ್ಕೃತಿಯನ್ನು ತಮ್ಮ ಆಚಾರವಿಚಾರಗಳ ಶಕ್ತಿಯಾಗಿ ಅರೆದು ಕುಡಿದು, ವಿಶ್ವಬಾಂಧವ್ಯವನ್ನೇ ತನ್ನ ಜೀವನದ ಹೆಗ್ಗುರಿಯಾಗಿ ಪಣತೊಟ್ಟ ಧೀರ ಪುರುಷ-ಜವಾಹರ್ ಲಾಲ್ ನೆಹರು.

ಆಳವಾದ ಯೋಚನಾಶಕ್ತಿಯ ಪ್ರಜ್ವಲಿಸುವ ಮುಖಭಾವ, ಕಲಾವಂತ ಶಿಲ್ಪಿಯಿಂದ ಕೆತ್ತಲ್ಪಟ್ಟಿರುವಂತೆ ತೋರುವ ತುಟಿಬಾಯಿ, ಅಗಾಧ ಪಾಂಡಿತ್ಯವನ್ನು ಬೀರುವ ವಿಶಾಲ ಹಣೆ, ಇವುಗಳಿಂದ ಕೂಡಿದ ಶರೀರ ವ್ಯಾಯಾಮ ಸಾಧಕನ ನಿಲುವಿಕೆಯ ದೇಹಾಕೃತಿಯಿಂದ ಜವಾಹರರು ರೋಮನ್ ಸೈನಿಕನಂತೆ ಕಾಣುವರು.

ಅವಿಶ್ರಾಂತ ಚೈತನ್ಯ ಚಟುವಟಿಕೆಗಳನ್ನು ಸೂಚಿಸುವ ಮುಖದಲ್ಲಿ ಪ್ರಶಾಂತ ಗಬೀರತೆಯು ಎದ್ದು ಕಾಣುತ್ತದೆ—ಬಿಗಿದು ಹಿಡಿಯಲ್ಪಟ್ಟ ಮನೋವ್ಯಥೆಯಿಂದ ಕಣ್ಣಸುತ್ತಿನ ಕಪ್ಪು ನೆರಿಗಳು ಜನತೆಯ ಗೌರವಾರಾಧನೆಯಿಂದ ತೃಪ್ತಿಗೊಂಡಂತೆ ತೋರುವ ಮುಗುಳು ನಗೆಯೊಂದಿಗೆ ಎಳೆಯಲ್ಪಟ್ಟು ವಿವರ್ಣ ಹೊಂದುತ್ತವೆ. ನಿರ್ಧಾರವನ್ನು ಸೂಚಿಸುವ ನಯವಾದ ಗಡ್ಡ ಭಾಗ, ತ್ವರೆಯಾಗಿ ಕಲ್ಪನೆಗಳನ್ನು ನಿಯೋಜಿಸಲು ಶಕ್ಯವುಳ್ಳ ಶೀಘ್ರ ಬುದ್ಧಿ ಶಕ್ತಿಯನ್ನು ಸೂಚಿಸುವ ಚೂಪಾಗಿರುವ ತುಟಿಮುದ್ರೆ, ಉಕ್ಕಿ ಹರಿಯುವ ದೇಶಪ್ರೇಮವನ್ನೂ, ಹೊರಹೊಮ್ಮುವ ತತ್ವಜ್ಞಾನಮಯ ಜೀವನದ ದೃಷ್ಟಿಯ ಉತ್ಸಾಹವನ್ನು ಸೂಸುವ ಈ ಮಹಾ ಪುರುಷನನ್ನು ಮಾನವ ಜೀವನುದ್ದೇಶ ಕರ್ತವ್ಯಗಳ ಸಂಕ್ಷೇಪಾರ್ಥ ಕೊಡುವ 'ಘನಗಂಭೀರ' ಎಂಬೆರಡು ಮಾತುಗಳಲ್ಲೇ ವರ್ಣಿಸಬಹುದು.

ನೆಹರುಗಳಿಗಿಂತ ಉನ್ನತ ಶೈಲಿಯ ಬರೆಹಗಾರರಿರಬಹುದು, ಗ್ರಂಥಕರ್ತರಿರಬಹುದು. ಆದರೆ ಅವರ ಲೇಖನಿಯಲ್ಲಿ ತೀಕ್ಷ್ಣ ವಿಮರ್ಶಾ ಸಾಮರ್ಥ್ಯವೂ, ಉಜ್ವಲ ದೇಶಭಕ್ತಿಯೂ, ಮತ್ತು ಎಲ್ಲಗಿಂತಲೂ ಮಿಗಿಲಾದ ವಿಶ್ವಬಾಂಧವ್ಯದ ಅಂತರಾಷ್ಟ್ರೀಯ ಮನೋಭಾವವೂ ತುಂಬಿತುಳುಕುತ್ತಿದೆ. ಇವರಷ್ಟು ಸಿಂಹ ಗಾಂಭೀರ್ಯದಿಂದ ಬರೆಯುವವರು ಅತೀ ವಿರಳ. ಅವರಲ್ಲಿ ಸ್ತ್ರೀ ಸಹಜವಾದ ಕಲಾವಂತಿಕೆಯೂ, ಪುರುಷ ಸಹಜವಾದ ಜ್ಞಾನಾನುಭವವೂ ಮಿಶ್ರವಾಗಿವೆ.

ತಮ್ಮ ವಿಷಯವಾಗಿ ಆತ್ಮಕಥೆಯಲ್ಲಿ ಅವರು ಹೀಗೆ ಬರೆದಿದ್ದಾರೆ: ನಾನೊಬ್ಬ ಸಾಹಿತ್ಯ ಪರಿಶ್ರಮಿಯಲ್ಲ. ಇತಿಹಾಸಗಾರನಲ್ಲ; ಹಾಗಾದರೆ ನಾನ್ಯಾರಿರಬಹುದು? ಅದರ ಉತ್ತರವು ನನಗೇ ಕಠಿಣವೆನಿಸುತ್ತದೆ. ಶಿಕ್ಷಣವಿಚಾರದಲ್ಲಿ ನಾನೊಬ್ಬ ಅರ್ಧಮರ್ಧ ಗೊಂದಲದ ವ್ಯಕ್ತಿ. ಕಾಲೇಜಿನಲ್ಲಿ ಮೊದಲು ವಿಜ್ಞಾನಾಭ್ಯಾಸಮಾಡಿದೆ. ಮತ್ತೆ ಅದನ್ನು ಬಿಟ್ಟು ನ್ಯಾಯಶಾಸ್ತ್ರ ಕಲಿಯಲು ಶ್ರಮಿಸಿದೆ. ಕಡೆಗೆ ಜೀವನದಲ್ಲಿ ವಿವಿಧ ತರದ ಅಭಿರುಚಿಯ ಕ್ಷೇತ್ರಗಳಲ್ಲಿ ಕೈಯಾಡಿಸಿ ಕೊನೆಗೆ ಜನಪ್ರಿಯವೂ ಹಲವರಿಂದ ಸಾಧನೆ ಮಾಡಲ್ಪಟ್ಟದ್ದೂ ಆಗಿರುವ 'ತುರಂಗ ಉದ್ಯಮ'ವನ್ನೇ ನನ್ನದಾಗಿ ಮಾಡಿಕೊಂಡೆ.

ಜವಾಹರರು ಜೀವನ ಪ್ರಿಯರೂ, ಅಧಿಕಾರ ಪ್ರೇಮಿಗಳೂ, ಕಾರ್ಯತುಷ್ಟಿಯವರೂ ಆಗಿರುವ ಮನುಷ್ಯರು. ರಾಜಕೀಯದಲ್ಲಿ ಅವರು ತಮ್ಮ ಪಾತ್ರವನ್ನು ದುಷ್ಟ ಸಂಹಾರಕ ಶಿಷ್ಟ ಪರಿಪಾಲನೆಯ ಅವತಾರ ಮೂರ್ತಿಯಂತೆ ಅತ್ಯಮೋಘ ಗಂಭೀರ ಭಾವದಿಂದಲೂ, ಧೈರ್ಯ ಸ್ಥೈರ್ಯ ಕುಶಲತೆಯಿಂದಲೂ ನಿರ್ವಹಿಸುತ್ತಾರೆ. ತಮ್ಮ ದೇಶದ ಸ್ವಾತಂತ್ರ್ಯ ಗೌರವಗಳಿಗಿಂತ ಮಿಗಿಲಾದ ವಸ್ತು ಅವರಿಗೆ ಬೇರೊಂದಿಲ್ಲ.

ದೇಶಹಿತಕ್ಕಾಗಿ ಹೆಣಗುವ ಅಪ್ರತಿಮ ಧುರೀಣರಲ್ಲಿ ಸೈನಿಕ ಶಿಸ್ತಿನಿಂದ ಪ್ರಜ್ವಲಿಸುವವರೆಂದರೆ ಜವಾಹರರೇ. ಅವರು ಸಾಗರದಂತಿರುವ ಜನಸಮೂಹದ ಮಧ್ಯೆ ಭಾಷಣಕೊಡುವಾಗ ದೇವತೆಗಳೇ ನೋಡಬೇಕಾದ ದೃಶ್ಯವೊಂದು ಸೃಷ್ಟಿಯಾಗುತ್ತದೆ. ಕೇಸರಿ ಉಡುಪಿನ ದೇಶಸೇವಿಕಿಯರ ನಡುವಿನಿಂದ ವಂದೇ ಮಾತರಂ ಹಾಡಿಗೆ ಮೇಳವಾದ ಕಾಲುನಡೆಯಿಂದ ಉತ್ಸಾಹಕರಾಗಿ ಅವರು ಸಭಾಪೀಠವನ್ನೇರಿದಾಗ ಲೋಕವೇ ರೋಮಾಂಚನಗೊಳ್ಳಬೇಕು.

ಜೀವನದಂತೆ ಅವರ ಉಡುಪೂ ಸರಳವಾದುದು. ಶುದ್ಧ ಬಿಳಿಯಾದ ಪಂಚೆ ಜಿಬ್ಬಾಗಳೊಂದಿಗೆ ನಸು ಕಂದುವರ್ಣದ ವೇಸ್ಟ್‌ಕೋಟು ಇದ್ದು ಇದು ದೇಶದ ಪ್ರಗತಿಶೀಲರೆಲ್ಲರ ಸಂಕೇತಾರ್ಥವುಳ್ಳ ಉಡುಪು ಶೈಲಿಯಾಗಿದೆ. 'ಬಂದಿವಾನರ ಧರಿಸುವ ಆ ಕೂರೂಪಿ ತಲೆಕಟ್ಟು'-ಖದ್ದರ್ ಟೊಪ್ಪಿ-ಅವರ ವ್ಯಕ್ತಿತ್ವದ ಆಕರ್ಷಣೆಗೆ ಕಳೆಗೊಡುತ್ತದೆ. ಪಾಶ್ಚಾತ್ಯ ಶೈಲಿಯಲ್ಲಿ ಅವರು ಪೋಷಾಕು ಹಾಕಿಕೊಂಡರೆ ಯುರೋಪಿಯಾನರಿಗೆ ಅವರು ಒಬ್ಬ ಭಾರತೀಯರೆಂದೇ ತೋರುವುದಿಲ್ಲವೆಂದು ಒಂದುಸಲ ಕೆಂಟರಬರಿಯ ಆರ್ಚ್‌ಬಿಶೋಪರು ಹೇಳಿದ್ದಾರೆ. ಭಾಷಣಕೊಡಲಾರಂಭಿಸಿದರೆ ಅವರ ಮಧುರ ಧಾಟಿಯ ಕಂಠಧ್ವನಿಯು ಶ್ರೋತೃಗಳ ಹೃದಯದಲ್ಲಿ ಪ್ರತಿಧ್ವನಿಗೈಯದಿರುವುದಿಲ್ಲ. ಒಂದರಹಿಂದೆ ಒಂದೆಂಬಂತೆ ನಿರಾತಂಕವಾಗಿ ನಿರೂಪಿಸುವ ಅವರ ವಿನಂತಿಪೂರ್ವಕವಾದ ಭಾಷಾಸರಣಿ ವಿಚಾರ ವೇದನಗಳು ವಾಯುವೇಗದ ಪಂದ್ಯಾಟದ ಕುದುರೆಯ ಭರವನ್ನು ತಾಳುವುದು.

"ನಮ್ಮಿಚ್ಛೆಯ ನಾಡು ಬಹಳ ದೂರದಲ್ಲಿರಬಹುದು. ಅಲ್ಲಿಗೆ ಮುಟ್ಟಿಸಲು ನಾವು ಘೋರಾರಣ್ಯ, ಮರುಭೂಮಿಗಳನ್ನು ದಾಟಬೇಕಾಗಿ ಬಂದರೂ ಬರಬಹುದು. ಆದರೆ ಫಾಸೀ ಕಂಭವನ್ನೇ ಗೆದ್ದ, ದುಃಖ ಸಂಕಷ್ಟಗಳನ್ನೇ ಜಯಿಸಿದ ನಮ್ಮ ಆ ಅಮರವಾದ ಮನೋಭಿಲಾಷೆಯನ್ನು ಕಿತ್ತುಹಾಕಲು ಯಾರಿಂದ ಸಾಧ್ಯವಿದೆ? ಅನೇಕ ಶಿಲುಬೆಗಳನ್ನು ಗೆದ್ದು ಮೇಲಿಂದ ಮೇಲೆ ಜನ್ಮವೆತ್ತ ಭಾರತದ ಧೀರಸ್ಫೂರ್ತಿಯನ್ನು ಭಗ್ನಗೊಳಿಸುವಂತಾ ಎದೆಗಾರಿಕೆ ಯಾವಾತನಲ್ಲಿದೆ?" ಸಭೆಯು ಸ್ಫೂರ್ತಿಯಿಂದ ಚೇತನಹೊಂದಿ ಪ್ರತಿಯೊರ್ವನಲ್ಲೂ ದೇಶ ಪ್ರೇಮಾಗ್ನಿಯು ತಾಂಡವವಾಡ ತೊಡಗುವುದು.

ಅದು-ಜವಾಹರಲಾಲ ನೆಹ್ರುಗಳ ಪ್ರಭಾವ ಅದು. ಸಮತಾವಾದಿಗಳಲ್ಲಿ ಉಗ್ರರೂ, ಪ್ರಜಾ ಪ್ರಭುತ್ವವಾದಿಗಳಲ್ಲಿ ಅಗ್ರಗಣ್ಯರೂ, ಅಂತರ್ರಾಷ್ಟ್ರೀಯ ವಾದಿಗಳಲ್ಲಿ ಪ್ರಥಮ ಪ್ರಮುಖರೂ, ಕ್ರಾಂತಿಕಾರದಲ್ಲಿ ಪ್ರಗತಿಶೀಲರೂ ಆಗಿರುವ ನೆಹ್ರುಗಳು ಭಾರತ ಜನತೆಯ ಒಂದು ಆಶಾಚಿಹ್ನೆ.

ಅವರು ತಮ್ಮೊಂದಿಗೆ ಪ್ರಚಂಡ ಜ್ವಲನಶಕ್ತಿಯ ಅಗ್ನಿ ಸ್ಫೋಟಕಗಳನ್ನೇ ಕೂಡಿಕೊಂಡವರಿರುವರು. ಅವರ ಸ್ಫೂರ್ತಿಶಕ್ತಿಯ ಎದುರಿಗೆ ವಿರೋಧಿ ಪಕ್ಷಗಳು ಭಗ್ನೀಭೂತವಾಗಿದಂತೆಭಾಸವಾಗುತ್ತದೆ. ಸಾಮ್ರಾಜ್ಯವಾದಿಗಳು ಜವಾಹರರ ಎದುರಿಗೆ ತರತರನೆ ನಡುಗುತ್ತಾರೆ.

ಧೋರಣೆಯಲ್ಲಿ ಜವಾಹರರು ಸರ್ವಾಧಿಕಾರ ತತ್ವಕ್ಕೆ ಬದ್ಧ ವಿರೋಧಿಗಳು. ಅಂತರ್ರಾಷ್ಟ್ರೀಯ ಪ್ರಜಾಪ್ರಭುತ್ವವು ಅವರ ಮೆಚ್ಚುಗೆಗೆ ಪಾತ್ರವಾದ ವಿಷಯ. ಸಮತಾವಾದವೇ ಅವರ ಅಂತಿಮಧ್ಯೇಯ. ಸುಶಿಕ್ಷಿತವಾದ ಸುಖಶಾಂತಿಮಯ ಸಮಾಜವೇ ಅವರ ಇಚ್ಛೆಯ ಮಾನವ ವರ್ಗೀಕರಣ. ಉನ್ನತವಾದ ಗುಣಶೀಲ ಸ್ವಭಾವ ಮನಪೂರ್ವಕವಾದ ಕಾರ್ಯಸ್ಫೂರ್ತಿ ಅವರ ದಿನನಿತ್ಯದ ಪರಾಯಣೆಯ ಧರ್ಮ ವಿಚಾರಗಳು.

ಎಲ್ಲದಕಿಂತಲೂ ಮಿಗಿಲಾದ ಅವರ ಅತ್ಯಂತ ಪ್ರೀತಿಯ ವಿಷಯವೆಂದರೆ ಆರ್ಥಿಕ ಸುಧಾರಣೆ. "ನಾನು ರೈಲಿನ ಮೂರನೇ ತರಗತಿಯಲ್ಲಿ ಪ್ರಯಾಣಮಾಡುವುದು ಸರಳಜೀವನದ ಯಾವ ಧ್ಯೇಯಸಾಧನೆಗಲ್ಲ. ಯಾವ ಆದರ್ಶವನ್ನು ಕಲ್ಪಿಸಲಿಕ್ಕಿಲ್ಲ. ನನ್ನಮಟ್ಟಿಗೆ ಅದು ರೂಪಾಯಿ, ಆಣೆ, ಪೈಗಳ ವಿಷಯವಾಗಿದೆ." ಹೀಗೆ ಅವರು ಸ್ವತಃಶ್ರೀಮಂತರಾದರೂ ಶಿಸ್ತಿನ ಆರ್ಥಿಕ ವ್ಯವಸ್ಥೆಯಲ್ಲಿನ ತಮ್ಮ ಭರವಸೆಯನ್ನು ತೋರ್ಪಡಿಸಿದ್ದಾರೆ. ಜಗತ್ತಿನ ಇತಿಹಾಸವನ್ನೆ ಅವರು ಆರ್ಥಿಕ ದೃಷ್ಟಿಯಿಂದ ವಿವರಿಸಲು ಪ್ರಯತ್ನಿಸಿದ್ದಾರೆ.

ಇಂಥಾ ಪ್ರಚಂಡ ಪುರುಷನೊಬ್ಬನನ್ನು ತನ್ನ ಅಂಕಿತದಲ್ಲಿಟ್ಟುಕೊಂಡಿರುವ ಆ ಮಹಾತ್ಮಾ ಗಾಂಧಿಯವರಾದರೂ ಎಂತಹ ವ್ಯಕ್ತಿಗಳಿರಬೇಕು. "ಜವಾಹರರೇ ನನ್ನ ಉತ್ತರಾಧಿಕಾರಿ. ನನ್ನ ಕಾರ್ಯವನ್ನು ಅವರೇ ಮುಂದರಿಸಬೇಕು. ನನ್ನ ಅವರೊಳಗೆ ತುಂಬಾ ಭೇದಾಭಿಪ್ರಾಯ

([illegible]ನೇ ಪುಟಕ್ಕೆ ಮುಂದುವರಿದಿದೆ)

ಶಾಸ್ತ್ರ ವಿಚಾರ

ಶ್ಲ ಮುಟ್ಟಿಗೆ ಶಾಸ್ತ್ರ [illegible] ವಿಚಾರದಲ್ಲಿ ನನ್ನ ಸ್ವಂತ ಅರ್ಥ ಅಭಿಪ್ರಾಯಗಳಿವೆ. ಇತರರ ಅಭಿಪ್ರಾಯಗಳ ಕಡೆಗೆ ಸಹನಶೀಲತೆಯುಳ್ಳ ಕೇಳುವ ಪ್ರಶಾಸ್ತ್ರಭಕ್ತವಾದಿಗಳು ನೀವಿಷ್ಟರೆ ನನ್ನ ವ್ಯಾಖ್ಯಾನವನ್ನು ಓದಿ ಹಾಸ್ಯ ಮಾಡಿದರೂ ನನಗೆ ಬೇಸರವಿಲ್ಲ.

ಕಗ್ಗತ್ತಲೆ ದಿನ ಕತ್ತಲೆಯ ಕೋಣೆಯಲ್ಲಿ, ಅಲ್ಲಿ ನಿಜವಾಗಿಯೂ ಇಲ್ಲದ ಕಪ್ಪು ಬೆಕ್ಕೊಂದನ್ನು ಹುಡುಕುವ ವ್ಯರ್ಥ ಶ್ರಮದ ತತ್ವಜ್ಞಾನಿ ನಾನಲ್ಲ. ನನಗೆ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವ ವಿಷಯಗಳನ್ನೇ ನಾನು ಕೇಳಿದ ಶಾಸ್ತ್ರಗಳಿಗೆ ಅನ್ವಯಿಸಿ ಅರ್ಥಮಾಡಿಕೊಳ್ಳುವ ಸ್ವತಂತ್ರವಿಚಾರಿ ನಾನು. ನಾನು ಹೇಳುವ ಶಾಸ್ತ್ರ ಅರ್ಥಕ್ಕೆ ಆಧಾರವಿಲ್ಲದೆಂದು ನೀವು ತಿಳಕೊಂಡರೆ ತಪ್ಪು.

ಕಾರಣ ರಾಮಾಯಣದಲ್ಲಿ ರಾಕ್ಷಸರೆಂದೆನಿಸಲ್ಪಟ್ಟ ರಾವಣ ಕುಂಭಕರ್ಣಾದಿಗಳು ನಿಜವಾದ ರಕ್ಕಸರಿರದೆ ಅವರು ಆಗಿನ ಕಾಲದ ಆರ್ಯ ಜನರ ದೃಷ್ಟಿಯಲ್ಲಿ ರಾಕ್ಷಸೀ ಆಚಾರ ವಿಚಾರಗಳುಳ್ಳ ಜನರೆಂದೂ, ಅವರ ಶಾರೀರಿಕ ಲಕ್ಷಣಗಳು ಸುಂದರ ದೇಹಿಗಳಾದ ಆರ್ಯ ಜನರಂತಿರದೆ ವಿಲಕ್ಷಣವಾಗಿದ್ದುದರಿಂದ ಅವರು ಕವಿಗಳಿಂದ ರಾಕ್ಷಸರೆಂದು ಕರೆಯಲ್ಪಟ್ಟರೆಂದು ಇತ್ತೀಚೆಗಿನ ಆಧುನಿಕ ಪಂಡಿತರು ನಮಗೆ ತಿಳಿಸುತ್ತಾರೆ ಇದೇ ದೃಷ್ಟಿಯಿಂದ ನಾನು ಸಕಲ ಹಿಂದೂ ಶಾಸ್ತ್ರವನ್ನು ನೋಡಬಯಸುತ್ತೇನೆ

ರಾವಣ ಕುಂಭಕರ್ಣಾದಿಗಳೇನು ವಿಶೇಷತರದ ವ್ಯಕ್ತಿಗಳಲ್ಲ ಪರಸತಿಯರನ್ನು ಅಪಹರಿಸುವ ಎಷ್ಟೊಂದು ರಾವಣರು, ಸಾಯಂಕಾಲದ ತನಕ ನಿದ್ರಿಸುವ ಎಷ್ಟೊಂದು ಕುಂಭಕರ್ಣರು ನಮ್ಮಲ್ಲಿಲ್ಲ? ದಕ್ಷಿಣ ಭಾರತದಲ್ಲಿ, ಸಿಂಹಳದಲ್ಲಿ ಇರುವ ದ್ರಾವಿಡ ಜನರ ಮುಖಲಕ್ಷಣಗಳು ನಮಗೆ ಹನುಮಾದಿಗಳ ನೆನಪನ್ನುಂಟು ಮಾಡದಿರದು ಒಂದು ಕಾಲದಲ್ಲಿ ಗುಡ್ಡ ಕಾಡುಗಳಲ್ಲಿ ಅವರು ವಾಸಿಸುತ್ತಿದ್ದುದೂ ಇತಿಹಾಸದಲ್ಲಿ ಹೇಳಲ್ಪಟ್ಟಿದೆ

ಒಂದು ಕಾಲದಲ್ಲಿ ಮನುಷ್ಯನು ಕಪಿಗಳಂತಿದ್ದನೆಂದು ಡಾರ್ವಿನನೆಂಬ ವಿಜ್ಞಾನಿ ಉದಾಹರಣೆ ಕೊಟ್ಟು ತಿಳಿಸಿದ್ದಾನೆ ಆದರೆ ನಮ್ಮ ಶಾಸ್ತ್ರಕಾರರು "ಮನುಷ್ಯನು ೮೪ ಲಕ್ಷ ಜೀವಾದಿಗಳಲ್ಲಿ ಜನ್ಮ ತಾಳಿದ ನಂತರ, ದನವಾಗಿ ಹುಟ್ಟಿ ಕಡೆಗೆ ಮನುಷ್ಯ ಜನ್ಮದಲ್ಲಿ ಹುಟ್ಟುವನು" ಎಂದು ಹೇಳುತ್ತಾರಂತೆ ಇದಕ್ಕೂ ಆದಾರವಿದೆ ಮನುಷ್ಯನು ಹಾದುಹೋಗುವ ಈ ಎಲ್ಲ ಜೀವಜಂತುಗಳ ಗುಣ ವಿಶೇಷಗಳನ್ನು ವಿವರಿಸುವುದು ನನ್ನಂತ ಅಲ್ಪಮತಿಗೆ ಅಸಾಧ್ಯವಾದರೂ ಮನುಷ್ಯನು ಅವುಗಳಲ್ಲಿ ಕೆಲವದರ ಗುಣಲಕ್ಷಣಗಳನ್ನು ಧರಿಸಿಕೊಳ್ಳುವುದರಿಂದಲೇ ಶಾಸ್ತ್ರದಲ್ಲಿ ಆ ರೀತಿ ಹೇಳಿರಬೇಕೆಂದು ನನಗನಿಸುತ್ತದೆ

ನಾವು ಇಂದು ಇಷ್ಟು ಅಲ್ಪಮತಿಗಳಾಗುತ್ತೇವೆಂದೂ ಏನೊ ಜ್ಞಾನಿಗಳಾದ ಹಿರಿಯರು ಮೇಲ್ಗಡೆಯಿಂದ ಸರಳವಾಗಿ ತೋರುವ ಅರ್ಥವುಳ್ಳ ವಿಚಾರಗಳನ್ನೂ ನಮಗಾಗಿ ಬರೆದಿಟ್ಟಿರುವರು—ರಾವಣನು ರಾಕ್ಷಸನೆಂದು ವರ್ಣಿಸಿದ ಹಾಗೆ.

ನಾವು ಅನುಸರಿಸಬೇಕೆಂದು ಶಾಸ್ತ್ರಗಳು ನಿರ್ದೇಶಿಸುವ ಅನೇಕ ಆಚಾರ ವಿಚಾರಗಳೂ ಹಾಗೆ. ಅಶ್ವತ್ಥಮರ ತುಳಸಿ ಗಿಡಗಳು ಪ್ರಾತಃಕಾಲ ಸಾರಜನಕವಾಯುವನ್ನು ಬಿಟ್ಟುಬಿಡುತ್ತವೆ. ಅವುಗಳ ಸೇವನೆಯು ನಮ್ಮ ಆರೋಗ್ಯಕ್ಕೆ ಕ್ಷೇಮಕರವೆಂದು ಅದನ್ನು ಸ್ಮೃತಿಯು ಆಚಾರಗಳಲ್ಲಿ ಸೇರಿಸಿರುವರು. ಗೋಪಿಚಂದನ ಭಸ್ಮಗಳು ನಮ್ಮ ದೇಹದ ಮೇಲೆ ಉಪಯುಕ್ತ ಪರಿಣಾಮ ಮಾಡುತ್ತವೆಂದೇ ಅವುಗಳನ್ನು ಧರಿಸಿಕೊಳ್ಳಲು ಒತ್ತಾಯ ಮಾಡಲಾಗಿದೆ

ಈ ಕೆಲ ಆಧಾರಗಳನ್ನಿಟ್ಟು ತರ್ಕಿಸಿದರೆ ಮನುಷ್ಯನ ಹಲವು ಜೀವನಾವಸ್ಥೆಗಳನ್ನು ಅವನ್ನು ತಾಳುವ ಜನ್ಮರೂಪಗಳೆಂದು ನಾವು ತಿಳಕೊಳ್ಳಬಹುದು. ಇದಕ್ಕೆ ಹೇರಳವಾದ ಉದಾಹರಣೆಗಳನ್ನು ಕೊಟ್ಟು ಪ್ರಸ್ತಾಪಿಸಬಹುದು

ಬಾಲ್ಯದಲ್ಲಿ ತುಂಬಾ ಕೊಳಕು ವಾತಾವರಣದಲ್ಲಿ ಬಳೆವ ಮಗುವೊಂದು ಹಂದಿ ಜನ್ಮ ತಾಳಿತೆಂದು ಹೇಳಬಹುದು. ಸ್ವಾಮಿನಿಷ್ಠವಾದ ಓರ್ವ ಸಾಮಾನ್ಯ ಮತಿಯ, ಅಲ್ಪ ತೃಪ್ತಿಯ ಓರ್ವ ಮನುಷ್ಯನು ಸ್ವಾಮಿಭಕ್ತ ಪ್ರಾಣಿ ಎನಿಸಿದ ನಾಯಿ ಕುದುರೆಗಳ ಜನ್ಮದವರೆನ್ನಬಹುದು.

ವಿಶಾಲ ಆಕೃತಿಯ ಸ್ಥೂಲ ದೇಹದ ವ್ಯಕ್ತಿಗಳನ್ನು ನಾವು ಆನೆಗಳಿಗೆ ಹೋಲಿಸುತ್ತೇವೆ ಮಹಾ ಪರಾಕ್ರಮಿಗಳನ್ನು ಸಿಂಹರೂಪಿಗಳೆನ್ನುತ್ತೇವೆ ಮೇಲಿನ ಗುಣಲಕ್ಷಣಗಳುಳ್ಳವರು ಆ ಜಂತುಗಳ ಜನ್ಮ ತಾಳಿದಂತಾಗುತ್ತದೆ ಕ್ರೂರಿಗಳೂ ಘಾತುಕರೂ ಆಗಿರುವವರು ಅಡಗಿದ್ದು ಮೇಲೆ ಹಾಯುವ ಹುಲಿಜನ್ಮದವರು ಕುಯುಕ್ತಿಗಳಿಂದ ಜೀವನ ಮಾಡುವವರು ನರಿಗಳು ಕೊಟ್ಟಭಾಷೆಗೆ ತಪ್ಪುವವರು ಹಾವಿನಂತೆ ಎರುಡು ನಾಲಗೆಯವರು ಮಾತ್ರವಲ್ಲ ಸರ್ಪದಂತಹ ಕಠೋರ ವಿಷವುಳ್ಳ ಮಾತುಗಳನ್ನು ಕಾರುವವರೂ ನಮ್ಮಲ್ಲಿ ಹಲವರಿದ್ದಾರೆ

ಕೋಣದಂತೆ ಜಡಭರಿತರಾದ, ಕೆಸರಿನಂತಹ ಕೆಲಸದಲ್ಲಿ ಮಗ್ನರಾಗಿರುವವರು ಹಲವರಿರುವರು ಎತ್ತಿನಂತೆ ದುಡಿಯುವ ಪಶುಗಳು ಈ ಜಗತ್ತಿನಲ್ಲಿ ಲೆಕ್ಕವಿಲ್ಲದಷ್ಟು ಮಂದಿ ಇದ್ದಾರೆ ಜಿಂಕೆಯಂತೆ ಸರಳ ಜೀವನದ, ಸಾಧುಸ್ವಭಾವದವರೂ ಈ ಜಗತ್ತಿನಲ್ಲಿರುತ್ತಾರೆ

ಇತರರ ಕಷ್ಟಗಳಲ್ಲಿ ತೋರಿಕೆಯ ಸಹಾನುಭೂತಿ ತೋರಿಸುವ ಕಪಟಿಗಳು ಕಣ್ಣೀರು ಸುರಿಸುವ ಮೊಸಳೆಗಳಿದ್ದೂ, ಪ್ರತಿಯೊಂದು ವಿಷಯದಲ್ಲಿ ಸಂಶಯ ದೃಷ್ಟಿ ತಾಳುವವರನ್ನೂ ವಕ್ರದೃಷ್ಟಿಯ ಕಾಗೆಗಳೆಂದೂ ಸಂಬೋಧಿಸಲ್ಪಡುತ್ತಾರೆ ಸ್ವಂತ ಧೋರಣೆ ಇಲ್ಲದೆ ಇತರರ ಅಭಿಪ್ರಾಯಗಳನ್ನೇ ತನ್ನ ಸ್ವಂತವಾಗಿ ಒತ್ತಿಹೇಳುವರು ಗಿಳಿಗಳೆಂದೂ ವರ್ಗೀಕರಿಸಬಹುದು

ಕನಿಷ್ಟ ತರಗತಿಯ ಜಿಪುಣರನ್ನು ಚರ್ಮ ತಿನ್ನುವ ಕತ್ತೆಕಿರುಬಗಳೆಂದರೂ ಅತಿಶಯವಿಲ್ಲ ಅತಿಶಯವಾಗಿ 'ತಿನ್ನುಣ್ಣುವವರನ್ನು ಹೊಟ್ಟೆಬಾಕ ಪಕ್ಷಿಗಳೆಂದೂ, ಹಸಿಹಸಿಯಾದ ಮೋಸಮಾಡಿ ಜೀವಿಸುವವರನ್ನು ಹೆಬ್ಬಾವುಗಳೆಂದೂ ತಿಳಕೊಳ್ಳಬೇಕು

ಜ್ಞಾನ ತಿಲಮಾತ್ರವಿಲ್ಲದಿದ್ದರೂ ಜ್ಞಾನಿಗಳಂತೆ ಗಡ್ಡಬೆಳೆಸಿಕೊಂಡಿರುವವರು ಹೋತಸಿಗೆ ಸಮಾನರು ವೇಗವಾಗಿ ಓಡುವವರನ್ನು ಅಶ್ವ ಜನ್ಮದವರೆಂದು ತಿಳಿಯಬಹುದು. ಚಲನ ವಲನಗಳಲ್ಲಿ ಚಟ ವಟಿಕೆ ಇಲ್ಲದ ನಿರುಪದ್ರವಿಗಳನ್ನು ಆಮೆಗಳಿಗೂ, ಸಿಕ್ಕಿದಾಗ ತುಂಬಾ ತಿಂದು ಇಲ್ಲದಿದ್ದಾಗ ನಿರಾಹಾರಿಗಳಾಗಿ ಬಹು ದಿನ ತೆಗೆಯುವವರನ್ನು ಒಂಟೆಗಳಿಗೂ ಸರಿ ಹೋಲಿಸಬಹುದು.

ತಮಗೆ ತಿಳಿದದ್ದು ಮಾತ್ರ ಸತ್ಯವೆಂತಲೂ ಉಳಿದುದೆಲ್ಲ ಮಿಥ್ಯವೆಂತಲೂ ಯೋಚಿಸುವ ಸ್ವಭಾವದವರು ಬಾವಿಯಲ್ಲಿನ ಕಪ್ಪೆಗಳೋಪಾದಿ ಕದ್ದು ತಿನ್ನುವವರು ಇಲಿಗಳೂ ಆಲಸ್ಯದಿಂದ ತಿರುಗಿ ತಿನ್ನುವವರು ಅಲೆಯುವ ನಾಯಿಗಳೂ ಬೆನ್ನುಮುರಿಯುವ ತನಕ ಶ್ರಮಿಸುವ ಮೂಢಮತಿಗಳು ಕತ್ತೆ ಜನ್ಮದವರೂ ಆಗಿರುತ್ತಾರೆ

ಮೇಲೆ ವಿವರಿಸಿದ ಗುಣ ಸ್ವಭಾವಗಳ ಜನರನ್ನು ನಾವು ನೋಡುವಾಗ (ಅವು ಒಂದುವೇಳೆ ನಮ್ಮಲ್ಲಿದ್ದರೂ ಇರಬಹುದು) ನಿಜವಾಗಿಯೂ ಅವರು ಆಯಾ ಜೀವಿಗಳಲ್ಲೇ ಜನ್ಮಕ್ಕೆ ಬಂದೇ ಪುನೀತರಾಗಬೇಕೆಂದು ತೋರುವುದಿಲ್ಲ

ಕ್ರೂರಿಯೂ, ಕಪಟಿಯೂ, ಜಿಪುಣನೂ, ಕೊಳಕನೂ ಆದ ಒಬ್ಬನು ತನ್ನ ಸ್ವಜ್ಞಾನದಿಂದಾಗಲೀ, ಸತ್ಯ ಸಂಪರ್ಕದಿಂದಾಗಲೀ ತನ್ನ ಚರ್ಯೆಗಳನ್ನು ತಿದ್ದಿಕೊಂಡನೆಂದರೆ ಅವನು ಆ ಜನ್ಮಗಳನ್ನು ಬಿಟ್ಟು ಸುಧಾರಿಸಿದ ಪ್ರಾಣಿಗಳ ರೂಪತಾಳಿದಂತಾಗುತ್ತದೆ. ಉದಾ. ಕ್ರೂರಿಯಾದ ನರಭಕ್ಷನಂತಿರುವ ಘಾತುಕ ಹುಲಿಜನ್ಮದ ಮಾನವನೊಬ್ಬನು ದಯಾವಂತನೂ, ಪರೋಪಕಾರಿಯೂ ಆದರೆ ಅವನು ಗೋವಿನ ಜನ್ಮಕ್ಕೆ ಪರಿವರ್ತನೆ ಹೊಂದಿದಂತಾಯಿತು

ಹೀಗೆ ಪರಿವರ್ತನೆ ಹೊಂದಿದ ನಿದರ್ಶನಗಳು ಪುರಾಣಗಳಲ್ಲೂ ಇತಿಹಾಸದಲ್ಲೂ ಅನೇಕವಿವೆ. ದರೋಡೆಕಾರನೂ, ಕ್ರೂರಿಯೂ ಆಗಿದ್ದ ವಾಲ್ಮೀಕಿ ಎಂಬ ಬೇಡನು ಪರಿವರ್ತನ ಹೊಂದಿ ಶ್ರೇಷ್ಠ ಮುನಿಯೂ ಕವಿಯೂ ಆದನು. ಯುದ್ಧಪ್ರಿಯನಾದ ಅಶೋಕನು ತನ್ನ ಹಿಂಸೆಗಳಿಗೆ ಮರುಗಿ ಬೌಧನಾದುದು ಐತಿಹಾಸಿಕ ನಿದರ್ಶನೆ ಭಕ್ತನೂ ಕವಿಯೂ ಆದ ಪುರಂದರ ದಾಸನು ಒಂದು ಕಾಲದಲ್ಲಿ ಕಾಸಿಗೆ ಕಾಸು ಗಂಟುಹಾಕುವ ಜಿಪುಣ ಲೌಕಿಕನಾಗಿದ್ದನು.

ಹೀಗೆ ತನ್ನ ಜೀವಮಾನದಲ್ಲೇ ಮಾನವನು ತನ್ನ ಸ್ವಭಾವ ದೋಷಗಳನ್ನು ತಿದ್ದಿಕೊಂಡು ಪರಹಿತವನ್ನು ಸಾಧಿಸಲು ಪ್ರವರ್ತನಾದಾಗ ಅವನು ಪೂಜ್ಯವಾದ ಗೋವಿನ ಜನ್ಮದಲ್ಲಿ ಬರುವನು.

ಮುಂದುವರಿಯುತ್ತಾ ಮನುಷ್ಯನು ಉಚ್ಚವಾದ ಜ್ಞಾನವನ್ನು ಹೊಂದಿ, ವಿವೇಕಿಯಾಗಿಯೂ, ಗುಣಶೀಲನಾಗಿಯೂ ಧರ್ಮಪರಾಯಣನಾಗಿಯೂ, ಲೋಕಹಿತೈಷಿಯಾಗಿಯೂ, ಕ್ಷಮಾ, ದಯಾ, ಶಾಂತತೆಗಳಿಂದ ಕೂಡಿದವನಾಗಿಯೂ ಇರುವ ಆ ಉತ್ತ ಪದವಿಯನ್ನು ಹೊಂದಿದಾಗಲೇ ಮಾನವನೆಂದೆನಿಸಲ್ಪಡುವನು

ಆದುದರಿಂದ ನಮ್ಮಲ್ಲಿ ಕಾಣಬರುವ ಸ್ವಭಾವ ವಿಶೇಷಗಳೇ ನಾವು ಹೊಂದುವ ಜನ್ಮಗಳು. ಮಾನವನೆನಿಸಬೇಕಾದರೆ ನಮ್ಮಲ್ಲಿ ಅದಕ್ಕೆ ತಕ್ಕದೆನಿಸುವ ಗುಣಗಳಿರಬೇಕು ಆಚಾರ ವಿಚಾರಗಳಿರಬೇಕು ಇದೇ ನನ್ನ ಶಾಸ್ತ್ರ ವಿಚಾರ

—ವಿನಯ

ಸೂಜಿಕಲ್ಲಿನ ಆಕರ್ಷಣಶಕ್ತಿಯ ಉಪಕರಣಗಳಿಂದ ಶೋಧಮಾಡಲಾಗದ ಗಾಜಿನ— ನೆಲದಡಿಯಲ್ಲಿ ಹುಗಿದಿಟ್ಟು ಕಾಲುತಾಗಿದೊಡನೆ ಸಿಡಿಯುವ—ಬಾಂಬುಗಳನ್ನು ಅಮೇರಿಕನ್ನರು ಫಿಲಿಪ್ಪೈನನಲ್ಲಿ ಉಪಯೋಗಿಸುತ್ತಿರುವರು.

* * *

THE CANARA BANKING CORPORATION LTD.

(Incorporated in British India with Limited Liability)

Estd) **Head Office: UDIPI S Kanara.** **(1906.**

Statement of affairs as on 31st July, 1944.

CAPITAL AND LIABILITIES	Rs As Ps	PROPERTY AND ASSETS	Rs. As.Ps.
1 Paid up Capital	14 39 556- 0- 0	1 Office Buildings safes, furniture books etc	93 560- 3- 3
2 Reserves	4 12 017- 3- 7	2 Advances	52,55,-065 9- 5
3 Due to Bankers	78 603-14- 2	3 Investments on Govt Securities etc	28,74,632- 0- 0
4 Deposits	83 73 191- 0- 5	4 Bills for collection	4,39,235- 2- 7
5 Bills for collection	4 39 235- 2- 7	5 Other Assets	1,24,714- 6- 4
6 Branch Adjustments	3 22,041- 3- 9	6 Cash on hand and with Bankers in Current A/cs	26,39,895- 5- 4
7 Other liabilities and undisbursed profits	3,62,459- 2- 5		
Total	1,14,27,102-10-11	Total	1,14,27,102-10-11

ಕೆಂಪುಪಡೆ ಬಲಿಷ್ಠವಾಗಿದೆ

ಜರ್ಮನಿಯು ಸುತ್ತುಗಟ್ಟಲ್ಪಟ್ಟಿದೆ

೪ ವರ್ಷದ ಯುದ್ಧ ವರದಿ

"ಕೆಂಪುಪಡೆಯ ಶಕ್ತಿಯು ಅಸಮಾನ್ಯವಾಗಿ ಬೆಳೆದಿದೆ. ಸರ್ವವಿಧದಲ್ಲಿಯೂ ಶತ್ರುವಿಗಿಂತ ಶ್ರೇಷ್ಠವೆನಿಸುವ ರೀತಿಯಲ್ಲಿ ಅದು ಸುಸಜ್ಜಿತಗೊಳಿಸಲಾಗಿದೆ" ಹೀಗೆಂದು ರಷ್ಯದ ಮಾರ್ಶಲ್ ಸ್ಟೇಲಿನರು ಕ್ರಾಂತಿಯ ೨೭ನೇ ವರ್ಧಂತುತ್ಸವ ಭಾಷಣದಲ್ಲಿ ಘೋಷಿಸುವವರಾದರು.

ಬರ್ಲಿನ್ ಮೇಲೆ ಸೋವಿಯಟ್ ಧ್ವಜ

ಸ್ಟೇಲಿನರ ಭಾಷಣದ ಸಾರಾಂಶ:

ಸರ್ವಾಧಿಕಾರಿ ನಾಜೀ ಮೃಗವನ್ನು ಅದರ ಗುಹೆಯಲ್ಲೇ ಹೋಗಿ ಹೊಡೆಯುತ್ತೇವೆ. ಈ ಯುದ್ಧವನ್ನು ಗೆಲ್ಲುವುದು ಮಾತ್ರವಲ್ಲ ಮುಂದೆ ಯುದ್ಧಗಳಾಗದಂತೆ ತಡೆಯುವುದು ನಮ್ಮ ಧ್ಯೇಯ. ಸದ್ಯದಲ್ಲೇ ನಮ್ಮ ಧ್ವಜವು ಬರ್ಲಿನಿನ ಮೇಲೆ ಹಾರಿಸಲ್ಪಡುವುದು.

ಇದುತನಕ ಜರ್ಮನರ ೧೨೦ ದಳಗಳನ್ನು ನಾವು ಪುಡಿಮಾಡಿದ್ದೇವೆ. ಶತ್ರುವಿನ ಬಳಿಗೆ ಈಚೆಗೆ ಸಾರ್ವತ್ರಿಕ ಸೈನ್ಯಭರ್ತಿ ಮೂಲಕ ಸೇರಿಸಲ್ಪಟ್ಟ ೨೪೦ ದಳಗಳಿವೆ. ಅದರಲ್ಲಿ ಶುದ್ಧ ಜರ್ಮನರದು ಬರೀ ೧೮೦ ದಳಗಳು ಮಾತ್ರ. ಉಳಿದವುಗಳು ಅವನ ಕೆಲ ಪುಂಡ ಮಿತ್ರರದು. ಈ ಯುದ್ಧದಲ್ಲಿ ಜರ್ಮನಿಗೆ ಇತರ ಅನೇಕ ಚಿಕ್ಕ ಚಿಕ್ಕ ರಾಜ್ಯಗಳ ಸಹಾಯ ಸಿಕ್ಕಿತು. ಆದರೂ ಇಂದು ಅವರು ತಮ್ಮ ಕೊನೆಯ ದಿನಗಳನ್ನು ಲೆಕ್ಕ ಮಾಡುತ್ತಿದ್ದಾರೆ. ರಶ್ಯವು ಜರ್ಮನಿಯ ತೋಳನ್ನು ಮುರಿದು ಹಾಕಿದಂತಾಗಿದೆ.

ಟೆಹರಾನ್ ಮಾತುಕತೆ

ಟೆಹರಾನಿನಲ್ಲಿ ಮಿತ್ರ ಮುಖಂಡರು ಸೇರಿ ಜರ್ಮನಿಯನ್ನು ಎಲ್ಲಾ ದಿಕ್ಕುಗಳಿಂದಲೂ ಸುತ್ತುಗಟ್ಟುವ ಏರ್ಪಾಡನ್ನು ಪರ್ಯಾಲೋಚಿಸಿ ಈಗ ಅದು ಕಾರ್ಯರೂಪಕ್ಕೆ ಬಂದಿದೆ. ಫ್ರಾನ್ಸಿನಿಂದಲೂ, ಇಟಲಿಯಿಂದಲೂ ಮಿತ್ರ ಸೇನೆಗಳು ಶತ್ರುವಿನ ಪ್ರದೇಶದ ಮೇಲೆ ಆಕ್ರಮಿಸುತ್ತಿರುವರು. ಹಲವು ಕಡೆಗಳಿಂದ ಅವನಿಗೆ ಜಗಳ ಕೊಡಬೇಕಾದ ಸಂಕಷ್ಟ ಬಂದಿರುತ್ತದೆ.

ಈ ಕಡೆಯಿಂದ ನಾವು ಆ ಕಡೆಯಿಂದ ನಮ್ಮ ಮಿತ್ರರು ಮುಂದುವರಿಯುತ್ತಿದ್ದೇವೆ. ಇನ್ನು ಅತ್ಯಲ್ಪ ಸಮಯದಲ್ಲಿ ಹಿಟ್ಲರನನ್ನೂ ಅವನ ಕೂಟಗಾರರನ್ನೂ ಜಜ್ಜಿ ಬಿಡುತ್ತೇವೆ. ಈಗ ಅವನು ತನ್ನ ಪ್ರದೇಶದ ಮೇಲೆ ಮಾತ್ರ ಒದ್ದಾಡುತ್ತಿದ್ದಾನೆ. ನಮ್ಮ ನಾಡಿನಿಂದ ಪುಂಡ ನಾಜೀಗಳನ್ನು ಸಂಪೂರ್ಣವಾಗಿ ಓಡಿಸಿಬಿಟ್ಟಿದ್ದೇವೆ ಎಂದು ತಿಳಿಸಲು ಸಂತೋಷಪಡುತ್ತೇನೆ.

ರಷ್ಯದ ಶಕ್ತಿ

ಸಮತಾವಾದಿ ಕ್ರಾಂತಿಯಿಂದ ಸಂಸ್ಥಾಪಿಸಲ್ಪಟ್ಟ ಈ ಸೋವಿಯಟ್ ರಷ್ಯವು ಅಗಾಧ ಶಕ್ತಿಯನ್ನು ಬೆಳೆಸಿದೆ ಎಂದು ಈಗಿನ ಅದರ ಯಶಸ್ಸಿನಿಂದ ಖಚಿತವಾಗುತ್ತದೆ. ರಷ್ಯನರ ಬಳಿಯಲ್ಲಿ ಇಂದು ಜರ್ಮನಿಗಿಂತಲೂ ಉತ್ತಮ ತರಗತಿಯ ಶಸ್ತ್ರಾಸ್ತ್ರಗಳಿವೆ. ನಾವು ಒಬ್ಬಂಟಿಗರಾಗಿ ಜಯಹೊಂದಲಿಕ್ಕೆ ನಮ್ಮ ಯುದ್ಧ ಕೈಗಾರಿಕೆಯೇ ಕಾರಣವೆನ್ನಬೇಕು.

ಎಲ್ಲಾ ಜನಾಂಗದ ಜನರಿಂದ ಮಿಶ್ರಿತವಾಗಿದ್ದ ರಷ್ಯದ ಜನರ ದೇಶ ಭಕ್ತಿಯು ವರ್ಣದ್ವೇಷವಿಲ್ಲದೆ ಅದು ಮಾತೃಭೂಮಿಯ ಸೇವಕರೆಲ್ಲರ ಪರಸ್ಪರ ಸೌಹಾರ್ದತೆಯಿಂದ ಉಕ್ಕಿ ಹರಿಯುತ್ತದೆ. ನಮ್ಮ ದೇಶದೊಳಗಿನ ಜನರೆಲ್ಲರೂ ಸುಖಶಾಂತಿಯಲ್ಲಿರಬಯಸುತ್ತಾರೆ. ಹೊರಗಿನ ಎಲ್ಲಾ ಜನಾಂಗದವರ ಹಕ್ಕು ಸ್ವಾತಂತ್ರ್ಯಗಳನ್ನು ರಷ್ಯನ್ ಜನರು ಮನ್ನಿಸುತ್ತಾರೆ.

ನಮ್ಮಲ್ಲಿ ಒಂದು ಗಾದೆ ಇದೆ: 'ತೋಳವನ್ನು ಕೊಲ್ಲುವುದು ಅದರ ಬಣ್ಣಕಲ್ಲ, ಅದರ ಕ್ರೂರ ಬುದ್ಧಿಗಾಗಿ.' ಅದೇ ರೀತಿ ಇಂದು ನಾವು ಜರ್ಮನರನ್ನು ದ್ವೇಷಿಸುವುದು ಅವರು ಜಗತ್ತಿಗೆ ತಂದೊಡ್ಡಿದ ಮಹಾ ಸಂಕಷ್ಟಗಳಿಗಾಗಿ.

ಬಿಳಿ ಜನಾಂಗ, ಕಪ್ಪು ಜನಾಂಗ ಮತ್ತು ವರ್ಣ ಜನಾಂಗವೆಂಬ ಭಾವನೆಯು ಜರ್ಮನರಲ್ಲಿ ಇಂದು ಬೇರೂರಿರುತ್ತದೆ. ತಾವೇ ಶುದ್ಧ ಜನಾಂಗ ಮೂಲವಿದ್ದವರೆಂದು ಅವರ ಹೆಮ್ಮೆಯ ತತ್ವ. ಅದಕ್ಕಾಗಿ ಅವರು ಜಗತ್ತಿನ ಜನರನ್ನು ತಮ್ಮ ಗುಲಾಮರನ್ನಾಗಿ ಮಾಡಬಯಸುತ್ತಾರೆ. ಈ ಹೆಮ್ಮೆಯಿಂದಲೇ ಇಂದು ಜರ್ಮನಿಯು ಇಷ್ಟು ನಿರ್ಬಲವಾಗಲು ಕಾರಣವಾಯಿತು. ಹಿಟ್ಲರನ ಕೊಲೆಪಾತಕಿ ಕೂಟವು ದುರ್ಬಲವಾಗಿರುವುದಕ್ಕೆ ಇದೇ ಕಾರಣ.

ನಾಜಿಗಳಿಗೆ ನೈತಿಕ ಮತ್ತು ರಾಜಕೀಯ ಸೋಲು

ಈವತ್ತಿನ ದಿವಸಕ್ಕೆ ಜರ್ಮನಿಗೆ ವಿರೋಧವಾಗಿ ಫ್ರಾನ್ಸ್, ಪೋಲೆಂಡ್, ಗ್ರೀಸ್, ಬೆಲ್ಜಿಯಮ್‌ಗಳು ಮಾತ್ರವಲ್ಲ ಒಂದು ಕಾಲದಲ್ಲಿ ಅದರ ಮಿತ್ರರಾಷ್ಟ್ರಗಳಾಗಿದ್ದ ಇಟಲಿ, ರುಮೇನಿಯಾ, ಫಿನ್‌ಲೆಂಡುಗಳು ಕೂಡಾ ದಂಗೆ ಎದ್ದಿವೆ. ತಮ್ಮ ಜನಾಂಗ ದರ್ಪದಿಂದ ಅದು ಜಗತ್ತಿನ ಜನರ ದ್ವೇಷಕ್ಕೆ ಒಳಗಾಗಿದೆ.

ನಮ್ಮ ದೇಶದಲ್ಲಿರುವ ಜನಾಂಗಗಳ ಐಕ್ಯತೆ, ಸ್ನೇಹಭಾವ ಸಹಕಾರ ಭಾವನೆಗಳು ಜನಾಂಗದರ್ಪದ ಭಾವನೆಯು ಹಿಟ್ಲರನ ನೈತಿಕ ಮತ್ತು ರಾಜಕೀಯ ಅಧಃಪತನಕ್ಕೆ ಕಾರಣವಾಗಿದೆ. ನಮ್ಮ ತತ್ವಗಳೇ ಶ್ರೇಷ್ಠವಾದುವು ಎಂದು ಇದರಿಂದ ತಿಳಿದುಬರುತ್ತದೆ.

ಮುಂದಿನ ಜಗತ್ತಿನಲ್ಲಿ ಸೋವಿಯಟ್ ಜನರ ಕರ್ತವ್ಯವೇನೆಂದು ಎಲ್ಲರಿಗೂ ವಿಷದವಾಯಿತು. ಸದ್ಯಕ್ಕೆ ಯುರೋಪನ್ನು ಅವರು ನಾಜೀಗಳಿಂದ ಮುಕ್ತಗೊಳಿಸಿದ್ದಾರೆ. ಹಿಟ್ಲರನ ಪುಂಡತಂಡವನ್ನು ತುಂಡರಿಸಿ ರಷ್ಯವು ಮಾನವಜನಾಂಗಕ್ಕೆ ಸೇವೆಯನ್ನು ಸಲ್ಲಿಸಿದೆ.

ರಷ್ಯದ ವಿದೇಶಾಂಗ ಧೋರಣೆ

ಬ್ರಿಟನ್ ಅಮೇರಿಕಗಳೊಂದಿಗೆ ಐಕ್ಯಮತ್ಯದಿಂದ ಸಹಕರಿಸಿ ಹೇಗೆ ನಾವು ಜರ್ಮನಿಯನ್ನು ಸುವ್ಯವಸ್ಥಿತ ರೀತಿಯಿಂದ ಸೋಲಿಸಿದೆವೆಂಬುದು ಜಗತ್ತಿಗೇ ತಿಳಿಯಿತು. ಇನ್ನು ಮುಂದಿನ ಯೋಜನೆಗಳೇನೆಂದು ಅದೇ ಐಕ್ಯಮತ್ಯದಿಂದ ಸಾಧಿಸಬೇಕಾಗಿದೆ. ಆಗಲೇ ಡಂಬಾರ್ಟನ್ ಓಕ್ಸ್ ಎಂಬಲ್ಲಿ ಮಿತ್ರ ಪ್ರತಿನಿಧಿಗಳು ಸೇರಿ ಭಾವೀ ಜಗತ್ತಿನ ಶಾಂತಿ ರಕ್ಷಣೆಯ ಏರ್ಪಾಡೊಂದನ್ನು ಪರ್ಯಾಲೋಚಿಸಿರುವರು. ನಮ್ಮೊಳಗೆ ಅಭಿಪ್ರಾಯ ಭೇದಗಳಿಲ್ಲವೆಂದಿಲ್ಲ. ಒಂದೇ ಪಕ್ಷದವರಲ್ಲೂ ಅನೇಕ ವೇಳೆ ವ್ಯತ್ಯಾಸಗಳು ಇದ್ದೇ ಇರುತ್ತವೆ. ಆದರೆ ನಮ್ಮೊಳಗೆ ಬಹಳ ಕಮ್ಮಿ ದೃಷ್ಟಿ ವ್ಯತ್ಯಾಸಗಳಿರುವುದು ಒಂದು ಸಾರಸ್ಯ ವಿಷಯ. ಮಾತ್ರವಲ್ಲ ಅವುಗಳನ್ನು ಯಾವಾಗಲೂ ನಾವು ತಿದ್ದಿಕೊಳ್ಳಲು ತಯಾರಿರುತ್ತೇವೆ.

ಎರಡನೇ ರಂಗವನ್ನು ಪ್ರಾರಂಭಿಸಲಿದ್ದಾಗಲೂ ನಮ್ಮಲ್ಲಿ ಭೇದಾಭಿಪ್ರಾಯಗಳಿದ್ದುವು. ಆದರೆ ನಾವು ಅವುಗಳನ್ನು ಸೌಹಾರ್ದತೆಯಿಂದ ಸುಧಾರಿಸಿಕೊಂಡೆವು. ಮುಂದಿನ ಶಾಂತಿ ರಕ್ಷಣೆಯ ಕುರಿತು ನಮ್ಮೊಳಗಿರುವ ಅಭಿಪ್ರಾಯ ಭೇದಗಳನ್ನು ನಾವು ಕ್ರಮೇಣ ಸರಿಪಡಿಸಿಕೊಂಡೇ ಕೊಳ್ಳುತ್ತೇವೆ.

ಮೊಸ್ಕೊ ಮಾತುಕತೆಗಳು

ಇತ್ತೀಚೆಗೆ ನನ್ನ ಮತ್ತು ಚರ್ಚಿಲ್ಲರೊಳಗೆ ನಡೆದ ಮೊಸ್ಕೋ ಮಾತುಕತೆಗಳೂ ಹಾಗೆಯೇ—ತುಂಬಾ ಸ್ನೇಹಭಾವದಲ್ಲಿ ಅವು ನಡೆದವು. ಮಿತ್ರರೊಳಗೆ ಭೇದವನ್ನು ಕಲ್ಪಿಸಲು ಮಾಡಿದ ಹಿಟ್ಲರನ ಕುಯುಕ್ತಿಗಳು ಮಣ್ಣುಗೂಡಿದವು. ಇನ್ನು ಮುಂದೆಯಾದರೂ ಅವರು ಅಂತಹ ಪ್ರಯತ್ನಗಳನ್ನು ಕೈಕೊಳ್ಳುವರು. ಆದರೆ ರಷ್ಯ, ಬ್ರಿಟನ್, ಅಮೇರಿಕಗಳೊಳಗಿನ ಮೈತ್ರಿಯು ಸಂದರ್ಭಾನುಸಾರ ಒಟ್ಟುಗೂಡಿ ಬಂದುದಲ್ಲ. ಅದು ತಾತ್ಕಾಲಿಕವೂ ಅಲ್ಲ. ಮೂರು ವರ್ಷಗಳ ಯುದ್ಧವನ್ನು ತಡೆದು ನಿಂತ ಈ ಮೈತ್ರಿಯು ಯುದ್ಧ ಕೊನೆಗೊಂಡ ಮೇಲೂ ಮುಂದರಿಯುತ್ತದೆಂಬುದಕ್ಕೆ ಸಂದೇಹವಿಲ್ಲ.

ಜರ್ಮನಿಯ ಕಡೆಯಿಂದ ಯುದ್ಧ ಮಾಡುತ್ತಿದ್ದ ಇಟಲಿ, ಫಿನ್‌ಲೆಂಡ್, ಬಲ್ಗೇರಿಯಾ, ರುಮೇನಿಯಾಗಳು ಅದರ ಹಿಡಿತದಿಂದ ತಪ್ಪಿಸಿಕೊಂಡವು ಮಾತ್ರವಲ್ಲ ಅದಕ್ಕೆ ವಿರುದ್ಧವಾಗಿ ಯುದ್ಧವನ್ನು ಕೂಡಾ ಸಾರಿರುವರು. ಈಗ ಜರ್ಮನಿಗೆ ಒಂದೇ ಒಂದು ಮಿತ್ರ ದೇಶ ಉಳಿದಿದೆ. ಅದೆಂದರೆ ಹಂಗೆರಿ. ಅದನ್ನು ಸ್ವಲ್ಪ ಸಮಯದಲ್ಲೇ ಸದೆಬಡಿಯಲಿದ್ದೇವೆ. ಆ ಮೇಲೆ ಜರ್ಮನಿಯು ಒಬ್ಬಂಟಿಗನಾಗಿ ಯುದ್ಧ ಮಾಡಬೇಕಾಗಿ ಬರುತ್ತದೆ. ಅಂದ ಮೇಲೆ ಅದರ ಅಂತ್ಯವೂ ಸಮೀಪಿಸಿದಂತೆಯೇ ಸರಿ.

ಜರ್ಮನಿಯ ಆಕ್ರಮಣ

ಕೆಲವು ಸಮಯದೊಳಗೆ ಮಿತ್ರರು ಜರ್ಮನಿಯನ್ನು ವಶಪಡಿಸುವರು. ಯುದ್ಧವನ್ನು ಗೆಲ್ಲುವುದೆಂದರೆ ಒಂದು ದೊಡ್ಡ ಐತಿಹಾಸಿಕ ಸಾಹಸವಾದರೂ ಶಾಂತಿಯನ್ನು ರಕ್ಷಿಸಬೇಕಾದುದು ಇನ್ನೂ ಹೆಚ್ಚಿನ ಮಹತ್ವದ್ದು. ಜಗತ್ತಿನ ಜನರಿಗೆ ನಾವು ಭದ್ರತೆಯನ್ನು ಕೊಡಬೇಕಾಗಿದೆ.

ಜರ್ಮನಿಯನ್ನು ನಾವು ನಿಶಸ್ತ್ರ ಮಾಡಿಯೇ ಮಾಡುತ್ತೇವೆ. ಆರ್ಥಿಕ, ಸೈನಿಕ ಮತ್ತು ರಾಜಕೀಯ ದೃಷ್ಟಿಯಿಂದ ಜರ್ಮನಿಯ ಸೋಲು ಆಗ ಸಂಪೂರ್ಣವಾಗುವುದು. ೨೦, ೩೦, ವರ್ಷಗಳೊಳಗೆ ಪುನಃ ಜರ್ಮನಿಯು ಶಸ್ತ್ರಾಸ್ತ್ರ ಸಜ್ಜಿತವಾಗಿ ದಬ್ಬಾಳಿಕೆಗೆ ಆರಂಭಿಸಲಿಕ್ಕಿಲ್ಲವೆಂದು ತಿಳಿದರೆ ಮೂಢತನವೆನ್ನಬೇಕು. ಕಾರಣ ದಬ್ಬಾಳಿಕೆ ರಾಷ್ಟ್ರಗಳ ಲಕ್ಷಣವೇ ಹಾಗೆ.

ಶಾಂತಿಯಿಂದಿರಲು ಇಷ್ಟಪಡುವ ರಾಷ್ಟ್ರಗಳು ಯುದ್ಧ ತಯಾರಿಯ ಕಡೆಗೆ ಅಸಡ್ಡೆ ಮಾಡುತ್ತವೆ. ಪರ್ಲ್‌ಹಾರ್ಬರ್, ಫಿಲಿಪ್ಪೈನ್ ಮತ್ತು ಮಲಾಯಾ, ಸಿಂಗಾಪುರಗಳು ನಾಶಹೊಂದಿದ್ದು ನೋಡಿದರೆ ನಮಗೊಂದು ಎಚ್ಚರಿಕೆ ಬರುತ್ತದೆ.

ಜಪಾನವು ಸಿದ್ಧವೇ ಇತ್ತು

ಶಾಂತಿ ಧೋರಣೆಗಳನ್ನು ಅನುಸರಿಸುತ್ತಿದ್ದ ಬ್ರಿಟನ್ ಅಮೇರಿಕಗಳಿಗಿಂತ ಜಪಾನು ಹೆಚ್ಚು ಸಿದ್ಧತೆಯಲ್ಲಿತ್ತು. ಹಿಟ್ಲರನು ನಮ್ಮಿಂದ ಉಕ್ರೇನ್, ಬಾಲ್ಟಿಕ್ ಮುಂತಾದ ಪ್ರದೇಶಗಳನ್ನು ಹಿಡಿದದ್ದು ಅದೇ ಧೋರಣೆಯ ಫಲವಾಗಿದೆ.

ಜಪಾನಿಯರಾಗಲೀ, ಜರ್ಮನರಾಗಲೀ ದೂರದರ್ಶಿಗಳು, ಮಹಾ ಶೂರರು ಎಂದು ಹೇಳುವುದರಲ್ಲಿ ಯಾವ ಅರ್ಥವಿಲ್ಲ. ಅವರು ನಮಗಿಂತ ಹೆಚ್ಚು ಶೂರರೂ ಅಲ್ಲ, ದೂರದರ್ಶಿಗಳೂ ಅಲ್ಲ. ಆದರೆ ಅವರು ನಮಗಿಂತ ಹೆಚ್ಚು ಯುದ್ಧಾಸಕ್ತಿಯುಳ್ಳವರು. ಗುಟ್ಟಿನಲ್ಲಿ ಅವರು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದ್ದು ಶಾಂತಿಪ್ರಿಯರಾದ ನಮ್ಮ ಗಮನಕ್ಕೆ ಬರಲಿಲ್ಲ. ಆದುದರಿಂದಲೇ ಪ್ರಾರಂಭದಲ್ಲಿ ಅವರ ಕೈವಾಡ ಮೇಲಾಯಿತು.

ಈಗ ಮುಂದೆ ಜರ್ಮನಿಯು ದಬ್ಬಾಳಿಕೆಗೆ ಕೈಹಾಕದಂತೆ ಮಾಡಲು ನಮ್ಮಲ್ಲಿ ಯಾವ ಏರ್ಪಾಡಿದೆ ಎಂದು ಯೋಚಿಸಬೇಕು. ಎಲ್ಲಾ ಶಾಂತಿಪ್ರಿಯ ಜನಾಂಗದವರೂ ಸೇರಿ ಒಂದು ಕೇಂದ್ರ ಸಭೆಯನ್ನು ರಚಿಸಿ, ನಮ್ಮ ನಮ್ಮ ಸೈನ್ಯಗಳ ಭಾಗಗಳನ್ನು ಆ ಸಭೆಯ ವಶಕ್ಕೆ ಕೊಟ್ಟು ದಬ್ಬಾಳಿಕೆಗಾರರು ತಲೆ ಎತ್ತದಂತೆ ಮಾಡಬೇಕಾದುದು ಅತ್ಯಾವಶ್ಯವಿದೆ.

ರಷ್ಯವು ಮುಕ್ತವಾಯಿತು

ಈ ದೇಶಪ್ರೇಮ ಯುದ್ಧದ ದುಷ್ಪರಿಣಾಮವನ್ನು ನಿವಾರಿಸಲು ರಷ್ಯನರು ಪ್ರಯತ್ನಿಸುತ್ತಾರೆ. ಹಿಟ್ಲರ್ ಕ್ರಿಮಿಯನ್ನು ನಾವು ತಳ್ಳಿ ಹಾಕಿದೆವು. ನಾಜೀ ಪೆಡಂಭೂತವನ್ನು ಈಗ ಅದರ ಸ್ಥಾನದಲ್ಲೇ ಹೊಡೆದು, ಬರ್ಲಿನ್ ಮೇಲೆ ನಮ್ಮ ಧ್ವಜ ಮೆರೆಯಲಿರುವೆವು.

ಕೆಂಪು ಪಡೆಗೆ ಜಯವಾಗಲಿ, ಕೆಂಪು ಪಡೆಯು ಚಿರಾಯುವಾಗಲಿ ನಮ್ಮ ಮಾತೃಭೂಮಿಗೆ ಜಯವಾಗಲಿ! ಜರ್ಮನ್ ಸಾಮ್ರಾಜ್ಯವಾದಿ ದಬ್ಬಾಳಿಕೆಗಾರನ ನಾಶವಾಗಲಿ.

ದಿನವಹಿ ಉಪಯೋಗದ ಲೋಹದ
ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ
ದಾಗಿನೆಗಳ ಭಂಡಾರ
"ಕಲ್ಯಾಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ. ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಪ್ರಚಲಿತ ಸಮಾಚಾರಗಳು

[illegible] ನಾಲ್ಕನೆ ಬಾರಿಗೆ ಅಧ್ಯಕ್ಷರಾಗಿ ಚುನಾಯಿತರಾಗಿರುವರು.

ಅಮೇರಿಕದಲ್ಲಿ ಅನೇಕ ಪಕ್ಷಗಳಿವೆ. ಅವುಗಳ ನಿಜವಾದ ರೂಪವನ್ನು ತಿಳಿಯುವುದು ಅಸಾಧ್ಯದ ಕೆಲಸ. ಸದ್ಯಕ್ಕೆ ಪ್ರಸಿದ್ಧಿಗೆ-ಬೆಳಕಿಗೆ-ಬಂದ ಪಕ್ಷಗಳೆರಡು -ಡೆಮೊಕ್ರೆಟಿಕ್ ಪಕ್ಷ ಮತ್ತು ರಿಪಬ್ಲಿಕನ್ ಪಕ್ಷ.

ಹೆಸರಿನಲ್ಲಿ ಏನಿದೆ? ಮೇಲಿನ ಎರಡು ಪಕ್ಷಗಳು ಕೆಲವೊಂದು ರಾಜಕೀಯ ಆದರ್ಶಗಳನ್ನು ಎತ್ತಿ ಹಿಡಿಯಲು ಹಿಂದೆ ಸ್ಥಾಪಿಸಲಾಗಿದ್ದರೂ, ಆ ಮೂಲ ಧ್ಯೇಯಗಳು ಬರ ಬರುತ್ತಾ ಈ ಪಕ್ಷಗಳಿಂದ ಲೋಪವಾಗಿವೆ.

ನಿಗ್ರೊಗಳ ಗುಲಾಮಗಿರಿಯನ್ನು ನಿವಾರಿಸುವರೆ ಪ್ರಖ್ಯಾತ ಅಬ್ರಾಹಮ್ ಲಿಂಕೊನ್‌ರಿಂದ ಸ್ಥಾಪಿಸಲ್ಪಟ್ಟ ರಿಪಬ್ಲಿಕನ್ ಪಕ್ಷವು ಇಂದು ಮಜೂರ ವರ್ಗದ ವಿರೋಧಿಯಾಗಿದೆ! ಶ್ರೀಮಂತ ವರ್ಗದ ಹಿತವನ್ನು ರಕ್ಷಿಸುವರೆ ಅಧ್ಯಕ್ಷ ಜೆಫರ್ಸನ್ನರಿಂದ ಸ್ಥಾಪಿಸಲ್ಪಟ್ಟ ಡೆಮೊಕ್ರೆಟಿಕ್ ಪಕ್ಷವು "ಮಜೂರಹಿತ" ಕಾಂಕ್ಷೆಗಳಿಂದ ಕೂಡಿದ್ದಾಗಿರುತ್ತದೆ!

ವ್ಯವಹಾರಿಕ ಅಮೆರಿಕಾದಲ್ಲಿ ವಿದ್ಯಮಾನಗಳು ವಿಚಿತ್ರ ರೀತಿಯಲ್ಲಿ ನಡೆಯುತ್ತಿವೆ. ರಾಜಕೀಯ ಪಕ್ಷಗಳು ತಮ್ಮ ಏಳ್ಗೆಗೆ ಅನುಕೂಲವಾಗುವಂತೆ ತಮ್ಮ ಆದರ್ಶಗಳನ್ನು ಬದಲಾಯಿಸುತ್ತ ಇವೆ. ಆದುದರಿಂದ ಮೊನ್ನಿನ ಚುನಾವಣೆಯಲ್ಲಿ ಡೆಮೊಕ್ರೆಟಿಕ್ (ಪ್ರಜಾ ಪ್ರಭುತ್ವವಾದ) ಎಂಬ ಪಕ್ಷಕ್ಕೆ ಒಂದು ಜಯವೆಂದು ಸಾರಲಾಗಿದ್ದರೂ ಆದರಿಂದ ಜಗತ್ತು ಹೆಚ್ಚಿನದನ್ನು ಬಯಸಬೇಕಾಗಿಲ್ಲ.

ಆದರೆ ಇಷ್ಟನ್ನು ಹೇಳಬಹುದು. ಒಳ್ಳೆ ಆದರ್ಶಗಳಿಂದ ಪ್ರಭಾವಿತರಾದ, ಸಜ್ಜನರಾದ, ಅನುಭವಶಾಲಿಯಾದ, ಶ್ರದ್ಧಾಳುಗಳಾದ ಅಮೆರಿಕದ ಏಳ್ಗೆಯನ್ನು ಸಾಧಿಸುವ, ಪಿಸಿಷ್ಟ ವಿರೋಧಿಗಳಾದ, ಸಾಮ್ಯವಾದಿಗಳಲ್ಲದಿದ್ದರೂ ಸೌಮ್ಯವಾದ ಹಿತಕಾಂಕ್ಷಿಗಳಾದ ನ್ಯಾಯಶಾಲಿಗಳೆನಿಸುವ ಇತ್ಯಾದಿ ಕೆಲ ಸುಗುಣಗಳುಳ್ಳ, ಹಿರಿಯ ಅಮೆರಿಕನ್ ನಾಯಕರೊಬ್ಬರು ಅಧಿಕಾರಕ್ಕೆ ಬಂದಿರುವರು. ಕೆಲವೊಂದು ಒಳಿತನ್ನು ಇವರು ಸಾಧಿಸಬಹುದು.

ಈ ಚುನಾವಣೆಯ ಫಲಿತಾಂಶವಾಗಿ ಹಿಂದೂದೇಶಕ್ಕಾದರೊ - ರೂಸ್‌ವೆಲ್ಟರು ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆಯ ಕುರಿತು ಅನಾಸಕ್ತರಾಗಿಯೆ ಇರುವುದಾದರೂ-ಜಗತ್ತಿನ ರಾಜಕೀಯ ವಾತಾವರಣದಲ್ಲಿ ರೂಸ್‌ವೆಲ್ಟರ ಚುನಾವಣೆಯಿಂದ ಉಂಟಾಗುವ ಸುಧಾರಿತ ಸ್ಥಿತಿಯಿಂದ ಸ್ವಲ್ಪ ಮಟ್ಟಿಗೆ ಲಾಭವೆ ಆಗಬಹುದೆಂದು ಹೇಳಬಹುದು. ಆದರೆ ಹಿರಿಯದಾಶೆಯನ್ನು ಭಾರತೀಯರು ಕಟ್ಟಿಕೊಳ್ಳಬೇಕಾಗಿಲ್ಲ.

ಅಮೆರಿಕದಲ್ಲಿ ಸಂಸ್ಥೆಗಳ ಹೆಸರಿಗೆ ತಕ್ಕುದಾದ ಅವುಗಳ ನೀತಿಗಳಿಲ್ಲವೆಂಬುದಾಗಿ ಇನ್ನೊಂದು ನಿದರ್ಶನವೆಂದರೆ ಅಲ್ಲಿ ಜನಜನಿತವಾದ, ನಾಲ್ಕು ಬಾರಿ ವಿಚ್ಛೇದ ಪಡೆದು ವಿವಾಹಿತಳಾದ [illegible] ಸಾಮಾನ್ಯ ಸ್ತ್ರೀಯಿಂದ (ತಿಳಿವಳಿಕೆಯ ಹೆಚ್ಚಿನ ಗಂಧವಿಲ್ಲದ) ಸ್ಥಾಪನೆಯಾದ ಕ್ರಿಶ್ಚನ್ ಸಾಯನ್ಸ್ ಅಂದರೆ ಕ್ರೈಸ್ತೀಯ ವಿಜ್ಞಾನ ಎಂಬ ಧರ್ಮವು. ಜನರ ಅಂಧಶ್ರದ್ಧೆಯೆ ಈ ಧರ್ಮದ ಜೀವಾಳವು.

ಈ ಧರ್ಮದ ಹೆಸರು ಮಹತ್ವಾದುದನ್ನು ಸೂಚಿಸುತ್ತಿರುವುದಾದರೂ, ಈ ಧರ್ಮವು ಕ್ರೈಸ್ತೀಯವೂ ಅಲ್ಲ, ವಿಜ್ಞಾನವು ಯವೂ ಅಲ್ಲ. ಇದೊಂದು ಓರ್ವ ಭ್ರಾಂತಗೊಂಡ ಸ್ತ್ರೀಯಿಂದ ಹೊರಡಿಸಲ್ಪಾದ ಜೊಳ್ಳುನೀತಿಯನ್ನು ತತ್ವಗಳನ್ನಾಗಿ ಆಚರಿಸಿದ ಜನರ ಸಂಗಡ ಶ್ರೀಮಂತ ಸಂಗಡ.

ರೋಗರುಜೆಗಳನ್ನು, ವಾತಪಿತ್ತವಿಕಾರಗಳನ್ನು, ಸರವ್ಯಾಧಿಗಳನ್ನು ಇತ್ಯಾದಿ ಮಾನವನನ್ನು ಪೀಡಿಸುವ ಎಲ್ಲಾ ರೋಗವಿಕಾರಗಳನ್ನು ಮದ್ದಿನ ಉಪಯೋಗವಿಲ್ಲದೆ, -ಬರೆ ದೇವರ ಮೇಲೆ ವಿಶ್ವಾಸದಿಂದಲೆ ಪ್ರಾರ್ಥನೆಯ ಮಹಿಮೆಯಿಂದಲೆ ಗುಣಪಡಿಸಬಹುದೆಂದು, ಕಣ್ಣು ಮುಚ್ಚಿ, ಕಿವಿ ಮುಚ್ಚಿ, ನಂಬುವುದೆ 'ಕ್ರಿಶ್ಚನ್ ಸಾಯನ್ಸ್' ಧರ್ಮದ ಆಜ್ಞೆಯಾಗಿರುತ್ತದೆ.

ಈ ಸಂಘವು ಸ್ಥಾಪನೆಗೊಂಡ ಪ್ರಕರಣವು ವಿಚಿತ್ರವಿದೆ. ಈ ಧರ್ಮ ಸಂಸ್ಥಾಪಕರು ತನ್ನ ತಾರುಣ್ಯದಲ್ಲಿ ನರಸಂಬಂಧ ಪೀಡೆಯಿಂದ ಬಾಧಿತಳಾಗಿದ್ದಳು. ಮದ್ದಿನ ಪ್ರಯೋಗದಿಂದ ಅವಳ ಪೀಡೆ ನಿವಾರಣೆ ಹೊಂದದಿರಲು, ಸುಪ್ತ್ಯಾವಾಹನ ವಿದ್ಯೆಯಿಂದ, ಅವಳನ್ನು ಗುಣಪಡಿಸಲಾಯಿತು.

ಸುಪ್ತ್ಯಾವಾಹನ ವಿದ್ಯೆಯನ್ನು ನಡೆಯಿಸಿದ ಮನುಷ್ಯನಲ್ಲಿ ಅಡಕವಾಗಿದ್ದ ಕ್ರೈಸ್ತನು ತನ್ನನ್ನು ಗುಣಪಡಿಸಿದವನೆಂದು ಭ್ರಾಂತಳಾಗಿ, ಆ ಕುರಿತು ಭಾರಿ ಪ್ರಚಾರದಲ್ಲಿ ತೊಡಗಿದಳು. ಇದೆ 'ಕ್ರಿಶ್ಚಿಯನ್ ಸಾಯನ್ಸ್' ಧರ್ಮದ ಮೂಲ.

ದೇಶದಲ್ಲೆಲ್ಲ ಕಾಂಗ್ರೆಸ್ ಚಟುವಟಿಕೆಗಳು ಮತ್ತೊಮ್ಮೆ ಚೇತನಗೊಂಡರೆ, ಗಾಂಧೀಜಿಯವರು ಉಪವಾಸವನ್ನು ಕೈಗೊಳ್ಳುವ ಉದ್ದಿಶ್ಯವನ್ನು ಬಿಟ್ಟುಬಿಡಬಹುದು-ಎಂಬುದಾಗಿ ಸೇವಾಗ್ರಾಮಕ್ಕೆ ತೆರಳಿ ಗಾಂಧೀಜಿಯನ್ನು ಕಂಡು ಹಿಂತೆರಳಿದ ಮುಂದಾಳುಗಳ ಅಭಿಪ್ರಾಯವಿರುತ್ತದೆ.

ಈ ಕಾಂಗ್ರೆಸ್ ಚಟುವಟಿಕೆಗಳಾವವೆಂದರೆ,-೧೯೪೨ರ ಆಗಸ್ಟ ಮೊದಲು ನಡೆಯುತ್ತಿದ್ದವುಗಳು— ದೃಷ್ಟಾಂತವಾಗಿ, ಮಾಸಿಕ ರಾಷ್ಟ್ರೀಯ ಧ್ವಜವಂದನೆ, ಸಾರ್ವಜನಿಕ ಸಭೆಗಳು, ಇದೆತರದ ಇತರ ಚಟುವಟಿಕೆಗಳು.

ದೇಶದಲ್ಲಿ ಈಗ ಹರಡಿರುವ ಲಾಭಕೋರತನ, ಕೂಡಿಡುವುದು. ಮತ್ತು ಸಮಾಜ ಕಂಟಕ ತಪ್ಪು ನಡುವಳಿಕೆಗಳಿಂದಲೂ, ಸರಕಾರಿ ಆಜ್ಞೆಗಳಿಂದಲೂ, ಇತ್ಯಾದಿ ದೇಶದ ಸದ್ಯದ ಸ್ಥಿತಿಯಿಂದ ಗಾಂಧೀಜಿಯವರ ಮನವು ಬಹಳ ನೊಂದಿರುವುದಂತೆ. ಈ ಸ್ಥಿತಿಯನ್ನು ಸುಧಾರಿಸಬೇಕಾಗಿ ಗಾಂಧೀಜಿಯರ ಆತ್ಮವು ಹಾತೊರೆಯುತ್ತಿದೆ. ಜನರ ಮನೋಭಾವದಲ್ಲಿ ಬದಲಾವಣೆಯಾಗುವಂತೆ ಕಾಂಗ್ರೆಸ್ಸು ಕಾರ್ಯನಿರ್ವಸುತ್ತಿರಬೇಕು. ರಚನಾತ್ಮಕ ಕಾರ್ಯಕ್ರಮಗಳು ಅತ್ಯಂತ ಹುರುಪಿನಿಂದ ನಡೆದು ದೇಶದ ಉದ್ಧಾರವಾಗಬೇಕು, ಎಂದು ಗಾಂಧೀಜಿಯವರ ಬಯಕೆಯಾಗಿರುತ್ತದೆ. ದೇಶವನ್ನು ಸದ್ಯದ ಕಠಿಣ ಪ್ರಸಂಗದಿಂದ ಮೇಲಕ್ಕೆತ್ತುವ ವಿಚಾರವು ಗಾಂಧೀಜಿಯವರನ್ನು ಬಲವಾಗಿ ಕಾಡುತ್ತಿದೆ.

ನಿವೃತ್ತಗೊಳಿಸಲಾದ ಕಾಂಗ್ರೆಸ್ಸ ಕಾರ್ಯಕರ್ತರನ್ನು [illegible] ವ ಉದ್ದೇಶದಿಂದಲೆ, ದೇಶದ ಹಲವು ಪ್ರಾಂತೀಯ ಕಾಂಗ್ರೆಸ್ ಕಮಿಟಿಗಳಿಗೆ ೧೯೪೨ರಲ್ಲಿ ನಡೆದ ಕಾಂಗ್ರೆಸ್ ಚಟುವಟಿಕೆಗಳ ಕುರಿತು ವಿಚಾರವೆತ್ತಿ ಪ್ರಶ್ನಾಮಾಲಿಯುಳ್ಳ ಪತ್ರಕವು ಸೇವಾಗ್ರಾಮದ ಶ್ರೀಮತಿ ಕುರ್ಶದ್ ಬೆನ್ನರ ಮೂಲಕ ಗಾಂಧೀಜಿಯವರಿಂದ ಕಳುಹಿಸಲಾಗಿದೆ. ೧೯೪೨ರ ನಂತರ ಕಾಂಗ್ರೆಸ್ ಚಟುವಟಿಕೆ ಯಾವ ಮಟ್ಟದಲ್ಲಿತ್ತು ಈಗ ಹೇಗಿದೆ ಎಂಬುದನ್ನು ತಿಳಕೊಳ್ಳುವುದೆ ಈ ಪತ್ರಕದ ಉದ್ದೇಶವಿರುತ್ತದೆ.

ಹಿಂದೂದೇಶದ ಏಳು ಲಕ್ಷ ಹಳ್ಳಿಗಳಲ್ಲಿ, ಗಾಂಧೀಜಿಯವರಿಂದ ನಿರೂಪಿಸಲಾದ ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಯಿಸುವರೆ, ಏಳು ಲಕ್ಷಮಂದಿ ಸ್ವಯಂಸೇವಕರು, ಏಳು ಕೋಟಿ ರೂಗಳ ನಿಧಿಯು ದೇಶವು ಕೂಡಿಸಿಕೊಟ್ಟರೆ,-ಗಾಂಧೀಜಿಯವರು ಉಪವಾಸ ಗೈಯುವ ಉದ್ದಿಶ್ಯವನ್ನು ಬಿಟ್ಟುಬಿಡಬಹುದೆಂದು ನಿರೀಕ್ಷೆಯಿದೆ. ಗಾಂಧೀಜಿಯವರು ಉಪವಾಸ ಕೈಕೊಳ್ಳದಂತೆ ಮಾಡುವ ಹೆಚ್ಚಿನ ಹೊಣೆಯು ಸಮಸ್ತ ದೇಶದ ಮೇಲಿದೆ.

ಲಂಡನಿನಲ್ಲಿ, ಜವಾಹರಲಾಲ ನೆಹರೂರವರ ೫೫ನೇ ಜನ್ಮದಿನಾಚರಣೆಯು ಮೊನ್ನೆ ತಾ. ೧೪ರಲ್ಲಿ ನಡೆಯಿತು. ಹಿಂದೂದೇಶದ ಹಿತಕಾಂಕ್ಷಿಗಳಾದ ಇಂಗ್ಲಾಂಡಿನ ಮಹಾ ಪ್ರಭೃತಿಗಳು, ಲಂಡನಿನಲ್ಲಿದ್ದ ಭಾರತೀಯರು ಈ ಉತ್ಸವದಲ್ಲಿ ಭಾಗವಹಿಸಿದ್ದರು. ಹಿಂದೂದೇಶದ ಸದ್ಯದ ಸಂಧಿಗ್ಧದಲ್ಲಿ ನೆಹರುಗಳಂತ ಮಹಾ ಪ್ರಭೃತಿಗಳು, ಸೆರೆಮನೆಯಲ್ಲಿರುವುದು, ಬ್ರಿಟಿಷ ಸರಕಾರಕ್ಕೆ ಅಪಮಾನಕರವೆಂದು,-ಅಭಿಪ್ರಾಯವುಳ್ಳ ಸಂದೇಶವೊಂದು, ಪೆನ್ನರಬ್ರಾಕ್ವೆಯವರಿಂದ ಈ ಸಮಾರಂಭದ ಸಮಯ ಬಂದಿತ್ತು.

ಹಿಂದೂದೇಶ ಸ್ವಾತಂತ್ರ್ಯ ಸಮಸ್ಯೆಯು ಸಮಗ್ರ ಭೂಮಂಡಳಕ್ಕೆ ಅನ್ವಯಿಸುವಂತಹುದು, ಎಂಬ ಅಭಿಪ್ರಾಯವು ಇಲ್ಲಿ ಸೂಚಿಸಲಾಯಿತು.

ಜಾಗತಿಕ ಶಾಂತಿಯ ಕುರಿತು, ಪ್ರಕಟಣೆಗಳು, ಯೋಜನೆಗಳ ಮಳೆಯು ಈಗ ಸುರಿಯುತ್ತಿವೆ. ಯುದ್ಧೋತ್ತರದಲ್ಲಿ ಭೂಲೋಕದ ಪ್ರತಿಯೊಂದು ರಾಷ್ಟ್ರವು ರಾಮರಾಜ್ಯವಾಗುವುದೆಂದು ಸಾರಲಾಗುತ್ತಿದೆ. ಆದರೆ ಅವುಗಳೆಲ್ಲಾ ಬರೆ ಮಾತಿನ ರಾಶಿಗಳಲ್ಲದೆ, ಕಾರ್ಯರೂಪಕ್ಕೆ ಬರುವುದು ಸ್ವಲ್ಪ ಸಂದೇಹಾಸ್ಪದಕರವೆಂಬ ಅಭಿಪ್ರಾಯವು ಹುಟ್ಟುತ್ತಿದೆ, ಸಂಯುಕ್ತ ರಾಷ್ಟ್ರಗಳ ಮುಂದಾಳುಗಳ ಸದ್ಯದ ಧೋರಣದಿಂದ.

ವಸಾಹತುಗಳ ಕುರಿತು ಸದ್ಯ ಮಿತ್ರರು ತಳೆದಿರುವ ಧೋರಣದಿಂದ,-ಬ್ರಿಟನಿನ, ಫ್ರಾನ್ಸಿನ ವಸಾಹತುಗಳಿಗೆ ಸ್ವಾತಂತ್ರ್ಯ ಲಭಿಸುವ ದಿನವು ದೂರವಿದೆ,-ಇವುಗಳನ್ನು ಸ್ವಲಾಭಕ್ಕೆ ಉಪಯೋಗಿಸುವ ಕ್ರಮವನ್ನು ಅವರು ತ್ಯಜಿಸಲು ಸಿದ್ಧವಿಲ್ಲ—ಎಂಬುದು ಅವರ ಸದ್ಯದ ವರ್ತನೆಗಳಲ್ಲಿ ಹೊಳೆದು ಕಾಣಿಸುತ್ತಿದೆ.

ಜಾಗತಿಕ ಶಾಂತಿ-ಇಲ್ಲಿ ಜಗತ್ತೆಂದರೆ ಯಾವದು,-ಪಾಶ್ಚಾತ್ಯ ಜಗತ್ತೆ, ಅಥವಾ ಮತ್ತು ಸಮಗ್ರ ಜಗತ್ತಿನ ಶಾಂತಿಗೆ ಹೋರಾಡುತ್ತಿರುವರೆ ಎಂಬುದು ಸ್ಪಷ್ಟವಾಗಬೇಕಿದೆ.

ಆದರೆ ಇಂಡೋಚೀನಾವನ್ನು ಮರಳಿ ಫ್ರಾಂಚರಿಗೆ ಕೊಡಬೇಕಾಗಿ ಮಿತ್ರರ ನಿರ್ಣಯವು, ಹಿಂದೂದೇಶದಲ್ಲಿ ಬ್ರಿಟಿಷರು ತಮ್ಮ ಅಧಿಕಾರವನ್ನು ಇನ್ನೂ ಬಲವಂತಗೊಳಿಸುವರೆ ಯತ್ನಿಸುವುದನ್ನೂ, ಚೀನಾದಲ್ಲಿ ಅವಕಾಶ ದೊರಕಿಸಿಕೊಳ್ಳುವರೆ ಅಮೆರಿಕನ ಯತ್ನಗಳು, ಪರ್ಶಿಯಾದ ಎಣ್ಣೆ ಪ್ರದೇಶದ ಕುರಿತು, ಅಮೆರಿಕಾ ಬ್ರಿಟನ ರಾಷ್ಟ್ರಗಳ ಆಸಕ್ತಿ, ಇವುಗಳೆಲ್ಲಾ ಶುಭ ಚಿಹ್ನೆಗಳಲ್ಲ.

ಸದ್ಯದಲ್ಲೇ ಸಂಯುಕ್ತ ರಾಷ್ಟ್ರಗಳ ಮೂವರು ಮುಂದಾಳುಗಳು ಮತ್ತೊಮ್ಮೆ ಕೂಡಿ ಬರುವವರಿದ್ದಾರೆ. ಅವರು ಈ ಸಮಸ್ಯೆಗಳ ಬಗೆ ಹರಿಸುವರೆ?-ಆಗ ಮಾತ್ರ ಜಾಗತಿಕ ಶಾಂತಿಯು ಲಭಿಸುವ ಕುರಿತು ನಾವು ಆಶಯಗಳನ್ನು ಹೊಂದಬಹುದು.

ದೇಶದಲ್ಲಿ ಜನರಿಗೆ ಯೋಗ್ಯ ಪುಷ್ಟಿದಾಯಕ ಆಹಾರವೂ, ಹಾಲೂ ದೊರಕುತ್ತಿಲ್ಲ, ಹಿಂದೂದೇಶವು ಸದ್ಯದ ಮಹಾ ಯುದ್ಧದಲ್ಲಿ ಭಾಗಿಯಾದ ಕಾರಣದಿಂದ ಈ ಪರಿಸ್ಥಿತಿಯು ಉಂಟಾಗಿರುವುದೆಂದೂ, ಈ ಸ್ಥಿತಿಯನ್ನು ಸುಧಾರಿಸುವರೆ ಭೂಪ್ಯವಸಾಯವು ಸುಧಾರಿಸಲ್ಪಟ್ಟು, ಇನ್ನೂ ಹೆಚ್ಚಿನ ಹುರುಪಿನಿಂದ ನಡೆಯಬೇಕೆಂದೂ, ಉತ್ತಮ ತರದ ಆಕಳುಗಳ ಸಂಖ್ಯೆಯನ್ನು ಹೆಚ್ಚಿಸುವ ವ್ಯವಸ್ಥೆಗಳಾಗಬೇಕೆಂದೂ, ಹಿಂದೂದೇಶದೊಳಗೆ ಭಹೀರ್ ದೇಶಗಳಿಂದ ಆಹಾರ ಸಾಮಗ್ರಿಗಳನ್ನು ಬರಮಾಡಿಕೊಳ್ಳಬೇಕೆಂದೂ ಮುಂಬ್ಯಾಪ್ರಾಂತ್ಯದ ಆಹಾರ ಸಮಿತಿಯ ಅಧ್ಯಕ್ಷರಾದ ಶ್ರೀ ಮಸಾನಿಯವರು ಹೊರಡಿಸಿದ ಒಂದು ಪ್ರಕಟಣೆಯ ಸಾರವಿರುತ್ತದೆ.

ಊಟ ಕುದುರೆಯ ಮೇಲೆ. ಬ್ರಾಹ್ಮಣ ಪೇಶ್ವೆ ಬಾಲಾಜಿ ರಾಯನ ಕ್ಷತ್ರಿಯ ಜೀವನ

ಬ್ರಾಹ್ಮಣನಾಗಿದ್ದರೂ ಕ್ಷತ್ರಿಯನಂತೆ ಯುದ್ಧಮಾಡಿ ಪಂಜಾಬಿನ ತನಕ ಮರಾಟ ಸಾಮ್ರಾಜ್ಯ ವಿಸ್ತರಿಸಿದ ಪುನೆಯ ಪ್ರಖ್ಯಾತ ಪೇಶ್ವೆ ಬಾಲಾಜಿರಾಯನು ತನ್ನ ಸೈನಿಕರ ಸಂಕಷ್ಟಗಳಲ್ಲಿ ಭಾಗಿಯಾಗುತಿದ್ದನಂತೆ. ಮೊಗಲ್ ಸಾಮ್ರಾಜ್ಯವನ್ನು ಮಣ್ಣುಗೂಡಿಸುವುದು ಇವನ ಮಹಾತ್ವಾಕಾಂಕ್ಷೆ ಇತ್ತು.

ಡಿಲ್ಲಿಯ ಮೊಗಲ್ ಅರಸನಾದ ನಿರ್ಬಲ ಮಹಮ್ಮದಷಾನು ಹೈದರಾಬಾದಿನ ನೈಜಾಮ-ಉಲ್-ಮುಲ್ಕನಿಗೆ ಸಹಾಯಕ್ಕೆ ಕರೆದನು. ಆದರೆ ಪೇಶ್ವೆಯು ನಿಜಾಮನನ್ನು ಸಂಪೂರ್ಣ ಸೋಲಿಸಿ ಮಾಲವ ಗುಜರಾತವನ್ನು ವಶಪಡಿಸಿಕೊಂಡನು.

ಈ ಯುದ್ಧ ಸಮಯದಲ್ಲಿ ನಿಜಾಮನಿಗೆ ಬಾಲಾಜಿಯನ್ನು ನೋಡಬೇಕೆಂದು ಆಸೆಯಾಯಿತು. ಅವನು ತನ್ನ ಆಸ್ಥಾನದ ಓರ್ವ ಚಿತ್ರಗಾರನಿಗೆ ಗುಪ್ತವಾಗಿ ಬಾಲಾಜಿಯ ಚಿತ್ರ ಬಿಡಿಸಿತರಲು ಆಜ್ಞಾಪಿಸಿದನು.

ಚಿತ್ರಗಾರನು ತಂದ ಬಾಲಾಜಿಯ ನಕ್ಷೆಯಲ್ಲಿ ಪೇಶ್ವೆಯು ತನ್ನ ಕುದುರೆಯ ಲಗಾಮನ್ನು ಕೊರಳಿಗೆಹಾಕಿದ ಒಂದು ಚೀಲದಲ್ಲಿ ಸಿಕ್ಕಿಸಿ ಈಟಿಯನ್ನು ಹೆಗಲಲ್ಲಿ ಆಧರಿಸಿ, ಎರಡೂ ಕೈಯಿಂದ ಕೊರಳ ಚೀಲದಲ್ಲಿನ ಜೋಳದ ಕಾಳನ್ನು ತಿನ್ನುತಿದ್ದಂತೆ ರೂಪಿಸಲಾಗಿತ್ತು.

ಭಾರತ ಆಫ್ರಿಕ ಯುದ್ಧ

ಆಫ್ರಿಕದ ಭಾರತೀಯರ ದುರವಸ್ಥೆ

ಎಸೆಂಬ್ಲಿಯಲ್ಲಿ ಐಕ್ಯಮತ್ಯ ಬಿಳಿಯರ ವರ್ಣದ್ವೇಷ

"ಆಫ್ರಿಕದ ಬಿಳಿಯವರು ವರ್ಣದ್ವೇಷದಿಂದ ಮತಿಗೆಟ್ಟಿದ್ದಾರೆ. ಅಲ್ಲಿ ನೆಲೆಸಿಂತಿರುವ ಭಾರತೀಯರನ್ನು ಅವರು ಅಸ್ಪೃಶ್ಯರಂತೆ ಕಾಣುತ್ತಾರೆ. ಈಗ ಅವರನ್ನು ಬಿಳಿಯರ ಪ್ರದೇಶದಿಂದ ದೂರ ಓಡಿಸುವ ಪ್ರಯತ್ನಗಳಾಗುತ್ತಿವೆ. ಭಾರತೀಯರ ಸ್ವಾಭಿಮಾನಕ್ಕೆ ಹಾನಿಕರವಾದಂತಹ ಕಾನೂನುಗಳನ್ನು ಮಾಡಿ ಅಲ್ಲಿನ ಸರಕಾರವು ದರ್ಪದ ಪ್ರದರ್ಶನ ಮಾಡಿದೆ. ನಾವು ನಮ್ಮ ದೇಶ ಬಾಂಧವರ ರಕ್ಷಣೆಗೆ ಈಗಲೇ ಇಳಿಯದಿದ್ದರೆ ಮುಂದೆ ಜಗತ್ತಿನಲ್ಲಿ ನಮಗೆ ಸ್ಥಾನಮಾನಗಳು ಸಿಗಲಾರವು. ನಾನಾದರೆ ಇಂದೇ ಆಫ್ರಿಕದ ಮೇಲೆ ಯುದ್ಧ ಸಾರಿ ಸೈನ್ಯದ ಮುಂದಾಳತ್ವ ವಹಿಸಿ ಆ ದೇಶದವರ ಹೆಮ್ಮೆಯನ್ನು ಇಳಿಸುತಿದ್ದೆ" ಹೀಗೆಂದು ಡಾ| ಖರೆಯವರು ಮೊನ್ನಿನ ಅಸೆಂಬ್ಲಿಯಲ್ಲಿ ಸ್ಫೂರ್ತಿದಾಯಕವಾಗಿ ಭಾಷಣ ಮಾಡಿದರು.

ಗೊಂದಲಕ್ಕೆ ಕಾರಣವೇನು?

ಇಂದಿಗೆ ಕೆಲವು ಶತಮಾನಗಳಿಂದ ಲಕ್ಷೋಪಲಕ್ಷ ಭಾರತೀಯ ಮಜೂರರು ವ್ಯಾಪಾರಸ್ಥರು ಮತ್ತು ಇತರ ಉದ್ಯಮಗಾರರು ಆಫ್ರಿಕದಲ್ಲಿ—ಮುಖ್ಯವಾಗಿ ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ನೆಲೆಸಿಂತಿದ್ದಾರೆ.

ಅಲ್ಲಿನ ಕೆನ್ಯಾಪ್ರಾಂತ್ಯವೊಂದರಲ್ಲಿ ೪೦ ಸಾವಿರ ಭಾರತೀಯರಿದ್ದಾರೆ ಆದರೆ ಅಲ್ಲಿರುವ ಎಲ್ಲಾ ಜನಾಂಗದ ಬಿಳಿಯರ ಸಂಖ್ಯೆ ೧೭ ಸಾವಿರ ಇಷ್ಟಾದರೂ ಅಲ್ಲಿನ ತಂಪಾದ ಎತ್ತರ ಪ್ರದೇಶಗಳನ್ನು ಬಿಳಿ ಜನರಿಗೆ ಮಾತ್ರ ವಸತಿಸ್ಥಾನವಾಗಿ ಮೀಸಲಿಟ್ಟಿದ್ದಾರೆ ವರ್ಣ ಜನಾಂಗದವರಿಗೆ ಅಲ್ಲಿ ಪ್ರವೇಶವಿಲ್ಲ

ನೆಟಲ್ ಪ್ರಾಂತ್ಯದಲ್ಲಿ ೧೯೫ ಸಾವಿರ ಹಿಂದೀಯರು ನೆಲೆಸಿಂತಿದ್ದಾರೆ ಅಲ್ಲಿನ ಬಿಳಿಯರ ಸಂಖ್ಯೆ ೨೦೫ ಸಾವಿರ ಈಗ ಈ ಪ್ರಾಂತ್ಯದಲ್ಲಿ ಬಿಳಿಯರು ವಾಸಮಾಡುವಲ್ಲಿ ಭಾರತೀಯರು ಮನೆಮಾಡಿಕೊಂಡಿರಲಿಕ್ಕಾಗುವುದಿಲ್ಲ ಮ್ಯುನ್ಸಿಪಲ್ ಕ್ಷೇತ್ರದಲ್ಲಂತೂ ಹಿಂದೀಯರಿಗೆ ಪ್ರವೇಶವೇ ಇಲ್ಲ

ಹಿಂದೊಮ್ಮೆ ಅಲ್ಲಿನ ಸರಕಾರದವರು ಹಿಂದೀಯರನ್ನು ದೂರವಿರಿಸುವ ಕಾನೂನುಗಳನ್ನು ಮಾಡಲೆತ್ನಿಸಿದ್ದಾಗ ದೊಡ್ಡ ಚಳವಳವೆದ್ದು ಕಡೆಗೆ ಅಲ್ಲಿನ ಪ್ರಧಾನರಾದ ಜನರಲ್ ಸ್ಮಟ್ಸ್‌ರು ಒಂದು ಒಪ್ಪಂದ ಮಾಡಿ ಹಿಂದೀಯರಿಗೆ ಅನಾನುಕೂಲವಾಗುವ ಕಾನೂನನ್ನು ಮಾಡದಂತೆ ಭರವಸೆ ಕೊಟ್ಟರು ಇದಕ್ಕೆ ಪ್ರಿಟೋರಿಯಾ ಒಪ್ಪಂದವೆಂದು ಹೆಸರಾಯಿತು

ಈ ಒಪ್ಪಂದದ ಷರ್ತಗಳನ್ನೂ ಮುರಿದು ಈಗ ಪುನಃ ಅಲ್ಲಿನ ಸರಕಾರದವರು ವರ್ಣದ್ವೇಷದಿಂದ ಪ್ರೇರಣಗೊಂಡು ಹಿಂದೀಯರ ವಿರೋಧ ಕಾನೂನುಗಳನ್ನು ಜಾರಿಗೆ ತಂದಿರುವುದು ಎಲ್ಲಾ ಸ್ವಾಭಿಮಾನಿ ಭಾರತೀಯರ ಆಗ್ರಹಕ್ಕೆ ಕಾರಣವಾಗಿರುವುದು.

ಇಂಡಿಯಾ ಸರಕಾರದ ವಸಾಹತು ಸಾಮಂತ ರಾಜ್ಯ ಸಂಬಂಧ ಶಾಖೆಯ ಸಚಿವರಾದ ಮಾಜಿ ಕಾಂಗ್ರೆಸ್ ಮಂತ್ರಿ ಡಾ| ಖರೆಯವರು ಈ ವಿಷಯದ ಕುರಿತು ಅಲ್ಲಿನ ಸರಕಾರದೊಂದಿಗೆ ತುಂಬಾ ಪತ್ರವ್ಯವಹಾರ ನಡೆಸಿದ್ದರೂ ಅವರು ಅದನ್ನು ತಿರಸ್ಕಾರ-ದೃಷ್ಟಿಯಿಂದ ನೋಡಿದ್ದಾರೆ.

ಇಂಡಿಯಾ ಸರಕಾರದ ಪರವಾಗಿ ಓರ್ವ ಪ್ರತಿನಿಧಿಗಳು ಆಫ್ರಿಕದಲ್ಲಿರುವರು. ಅವರನ್ನು ಈಗ ಪುನಃ ಹಿಂದಕ್ಕೆ ತರಿಸಿಕೊಳ್ಳಬೇಕೆಂದೂ, ಆಫ್ರಿಕಕ್ಕೂ ಭಾರತಕ್ಕೂ ಇರುವ ವ್ಯಾಪಾರ ಸಂಬಂಧವನ್ನು ಕಡಿದುಕೊಳ್ಳಬೇಕೆಂದೂ, ಮೊನ್ನಿನ ಎಸೆಂಬ್ಲಿಯ ನಿರ್ಣಯ, ಸೂಚನೆಗಳಾದುವು.

ಸರ್ವ ಪಕ್ಷದವರ ವಿರೋಧ

ಎಸೆಂಬ್ಲಿಯಲ್ಲಿ ಎಲ್ಲಾ ಪಕ್ಷದವರು ವಿರೋಧ ಸೂಚಿಸಿ ಮಾಡಿದ ಭಾಷಣಗಳ ಸಂಕ್ಷೇಪ ವರದಿಯನ್ನು ಈ ಕೆಳಗೆ ಕೊಡಲಾಗಿದೆ

ಡಾ| ಖರೆ: ಆಫ್ರಿಕದ ವಿರೋಧವಾಗಿ ಕಾರ್ಯಕ್ರಮ ಕೈಕೊಳ್ಳಲಾಗುವುದು ಅಲ್ಲಿನ ಸರಕಾರದ ವರ್ತನೆಯ ಖಂಡನೆಯಲ್ಲಿ ವೈಸ್‌ರಾಯರು ಸಮೇತವಾದ ಇಂಡಿಯಾ ಸರಕಾರದ ಪ್ರತಿಯೊಬ್ಬ ಮಂತ್ರಿಯೂ ಒಮ್ಮತವನ್ನು ಪ್ರದರ್ಶಿಸಿರುತ್ತಾರೆ

ಭಾರತೀಯ ಸೈನಿಕರು ಇಂದು ಅಪ್ರತಿಮ ಸಾಹಸದಿಂದ ಬ್ರಿಟಿಷರ ಪರವಾಗಿ ಕಾದಾಡುತ್ತಿರುವಾಗ ವರ್ಣ ದ್ವೇಷದ ಈ ಕಾನೂನನ್ನು ಆಫ್ರಿಕದ ಯೂನಿಯನ್ ಸರಕಾರದವರು ಜಾರಿಮಾಡಿದ್ದು ಯುದ್ಧ ಪ್ರಯತ್ನಕ್ಕೆ ದೊಡ್ಡ ಆತಂಕವನ್ನು ತಂದೊಡ್ಡಿದಂತಾಗಿದೆ.

ಆಫ್ರಿಕವು ಭಾರತಗಿಂತಲೂ ಹೆಚ್ಚು ಹಕ್ಕು ಸ್ವಾತಂತ್ರ್ಯ ಸಂಪಾದಿಸಿದ ಬ್ರಿಟಿಷ್ ಸಾಮಂತ ರಾಜ್ಯವಾಗಿದೆ ಅದು ಇನ್ನೊಂದು ಅಂತಹ ವಸಾಹತು ರಾಜ್ಯವು ಕೀಳೆಂದೆನಿಸುವ ಕಾನೂನುಗಳನ್ನು ಮಾಡಿದ್ದು ಉದ್ಧಟನದ ವರ್ತನೆಯಿದ್ದು, ಅದಕ್ಕೆ ಪ್ರತೀಕಾರವನ್ನು ನಾವು ಮಾಡಲೇಬೇಕು

ಸರ್ ಫ್ರೆಡ್ರಿಕ್ ಜೇಮ್ಸ್: (ಯುರೋಪಿಯನ್ ಪಕ್ಷ) ಆಫ್ರಿಕಾದ ಸರಕಾರದ ವರ್ತನೆಯನ್ನು ನಾವೂ ಖಂಡಿಸುತ್ತೇವೆ. ಪ್ರಾಮುಖ್ಯ ಅಲ್ಪ ಸಂಖ್ಯಾತ ಪಕ್ಷವಾದ ಭಾರತೀಯರ ಹಕ್ಕು-ಬಾಧ್ಯತೆಗಳನ್ನು ಕಡೆಗಣಿಸಿದ್ದು ಅಪಮಾನಕರ ನಮಗೆ ಆ ವಿಷಯದಲ್ಲಿ ತುಂಬಾ ಸಹಾನುಭೂತಿ ಇದೆ

ಆದರೆ ವ್ಯಾಪಾರ ವಹಿವಾಟು ಸಂಬಂಧವನ್ನು ಕಡಿದುಕೊಳ್ಳಬಾರದೆಂದು ನಮ್ಮ ಅಭಿಪ್ರಾಯ ಕಾರಣ ಅದರಿಂದ ಯುದ್ಧ ಪ್ರಯತ್ನಕ್ಕೆ ತೊಡಕುಂಟಾಗಬಹುದು. ವೆಟಲ್ ಬಾರ್ಕ್ ಎಂಬ ಒಂದು ಮರದ ತೊಗಟೆಯು ಆಫ್ರಿಕದಿಂದ ಇಲ್ಲಿ ತರಿಸಿಕೊಂಡು ಅದನ್ನು ಚರ್ಮ ಹದ ಮಾಡಲು ಉಪಯೋಗಿಸುತ್ತಾರೆ ಇದು ಒರುವುದು ನಿಂತರೆ ಕಾಲುಕವಚ (ಬೂಟ್ಸ್) ಗಳ ತಯಾರಿಕೆಗೆ ತೊಂದರೆಯಾಗಬಹುದು

ಪ್ರತೀಕಾರದ ನಿರ್ಧಾರ ಮಾಡುವ ಮೊದಲು ಅಲ್ಲಿನ ಸರಕಾರದೊಡನೆ ಪತ್ರ ವ್ಯವಹಾರ ನಡಸಿ ಅವರು ತಗಡುಕೊಂಡ ಧೋರಣೆಯನ್ನು ಬದಲಾಯಿಸಲು ಪ್ರಯತ್ನ ಮಾಡುವುದು ಒಳಿತು

ಸರ್ ಸುಲ್ತಾನ್ ಅಹಮುದ್: (ಸರಕಾರದ ಮುಂದಾಳುಗಳು) ಈಗಿನ ಪ್ರಶ್ನೆಯು ಸಾರ್ವಭೌಮ್ಯರ ಐದನೇ ನಾಲ್ಕಂಶದ ಪ್ರಜೆಗಳಿಗ ಸಂಬಂಧಿಸಿದ ವಿಷಯ ಆಫ್ರಿಕದ ಸರಕಾರದೊಡನೆ ಬಿನ್ನವಿಸಿಕೊಳ್ಳುವುದರಲ್ಲಿ ಯಾವ ಅರ್ಥವಿಲ್ಲ—ಕೋರ್ಟಿನಲ್ಲಿ ಅದೇ ಬಿಯೊಡನೆ ಬಿನ್ನವಿಸಿ ನ್ಯಾಯ ತೀರ್ಮಾನ ಮಾಡಿದಂತಾಗುತ್ತದೆ ಹಿಂದಿನ ಒಪ್ಪಂದದ ಭಾಷೆ ತಪ್ಪಿ ಅಲ್ಲಿನ ಸರಕಾರದವರು ಎಲ್ಲಾ ಭಾರತೀಯರ ಗೌರವ ಸ್ವಾಭಿಮಾನಗಳಿಗೆ ಕೊಡಲಿ ಹಾಕಿದ್ದಾರೆ

ಯುದ್ಧ ಪ್ರಯತ್ನಕ್ಕೆ ತೊಂದರೆಯುಂಟಾಗುವುದಾದರೆ ಅದಕ್ಕೆ ಆಫ್ರಿಕದ ಯೂನಿಯನ್ ಸರಕಾರವೇ ಹೊಣೆ ವ್ಯಾಪಾರ ಸಂಬಂಧ ಕಡಿಯುವುದರಿಂದ ಚರ್ಮ ಕೈಗಾರಿಕೆಗೆ ತೊಂದರೆಯುಂಟಾಗುತ್ತದೆಯಂತೆ ಒಂದು ವೇಳೆ ಹಾಗಾದರೂ ಚಿಂತೆಯಿಲ್ಲ ನಮ್ಮ ದೇಶದ ಹತ್ತನೇ ಒಂಬತ್ತು ಪಾಲಿನ ಜನರು ಸಾದಾ ಕಾಲಿನಲ್ಲಿ ನಡೆಯುವವರು ಮಿಕ್ಕುಳಿದವರು ಬೇಕಾದರೆ ಬರಿಕಾಲಿನಲ್ಲಿ ಯೇ ದಿನತೆಗೆಯಲು ಸಿದ್ಧರಿರುತ್ತೇವೆ

ಆದರೆ ಈ ಅವಮಾನವನ್ನು ನಾವು ಸಹಿಸಲಾರೆವು. ಆಫ್ರಿಕದವರಿಗೆ ಯುದ್ಧ ಬೇಕಾದರೆ ನಮಗೇನು?

ದೇಶಮುಖ್: (ರಾಷ್ಟ್ರೀಯ ಪಕ್ಷ) ಒಂದು ಜನಾಂಗವು ಇನ್ನೊಂದನ್ನು ತುಳಿದಿಡಬಯಸುತ್ತದೆ ಸಾರ್ವಭೌಮ್ಯ ಸರಕಾರಕ್ಕೆ ನಾವು ಈಗ ವಿನಂತಿಸಿದರೆ ಫಲವಿಲ್ಲ. ಹಿಂದೆ ಇಂತಹ ವಿನಂತಿಗಳನ್ನು ಅವರು ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ಯುದ್ಧ ಪ್ರಯತ್ನವೆಂದರೆ ಭಾರತೀಯರು ಅವಮಾನಪಟ್ಟು ಯುರೋಪಿಯಾನರು ಸುಖವಾಗಿರುವುದೆಂದು ಅರ್ಥವೆ?

ಹಿಂದೀಯ ಸೈನಿಕರು ಜರ್ಮನ್ ಇಟೆಲಿಯವರನ್ನು ಓಡಿಸಿ ಆಫ್ರಿಕವನ್ನು ನಾಜಿಗಳಿಂದ ಕಾಪಾಡಿದಕ್ಕೆ ಅವರ ಬಂಧುಗಳಿಗೆ ಸಂದ ಮನ್ನಣೆ ಇದೇನು?

ಮುಸೋಲಿನಿಯನ್ನು ಓಡಿಸಿದ ಹಿಂದೀ ಸೈನ್ಯವನ್ನು ನಾವು ಇಂದು ಆಫ್ರಿಕದ ಆಕ್ರಮಣಕ್ಕೆ ಉಪಯೋಗಿಸಿ ಆ ದೇಶದ ಹೆಮ್ಮೆಯನ್ನು ಮುರಿಯಬಾರದೇಕೆ?

ಸರ್ ಪಿ ಎಚ್ ಗಜ್ನಾವಿ: ವ್ಯಾಪಾರಿಯ ದೃಷ್ಟಿಯಿಂದ ನಾನು ಹೇಳುವುದಾದರೆ ಈ ತಂಟೆಗೆ ನಾವು ಬುದ್ಧಿವಾದ ಕಲಿಸಲೇ ಬೇಕು ಕಠಿಣವಾದ ಪ್ರತಿಕಾರವನ್ನು ನಾವು ಈಗಲೇ ಕೈಕೊಳ್ಳಬೇಕು ಹೊತ್ತು ಮೀರಿದರೆ ಪ್ರಯೋಜನವಿಲ್ಲ ಆದುದರಿಂದ ಈಗಲೇ ಮಾಡಿರಿ

ಸರ್ದಾರ್ ಸಾಂತಸಿಂಗ್: ಆಫ್ರಿಕದ ಸರಕಾರದ ಕಾಲಿನ ಮೇಲೆ ಬಿದ್ದೇ ತಮ್ಮ ರಕ್ಷಣೆ ಮಾಡಿಕೊಳ್ಳಬೇಕೆಂದು ಅಲ್ಲಿನ ಸರಕಾರ ಕಡಮ ಪತ್ರಿಕೆಯೊಂದು ಹೇಳುತ್ತದೆ ಈ ಪರಿಸ್ಥಿತಿಯನ್ನು ತಪ್ಪಿಸಲೇ ಬೇಕು. ಯುದ್ಧ ಪ್ರಯತ್ನಕ್ಕೆ ಭಾರತ ಮಾತ್ರ ಹೊಣೆಯಲ್ಲ ಇತರ ಜನಾಂಗಗಳಿವೆ ಅವರು ಇದನ್ನು ಕುರಿತ ಪರ್ಯಾಲೋಚಿಸಲಿ

ಶ್ರೀ| ಎನ್. ಎಂ ಜೋಶಿ: (ಮಜೂರ ಪಕ್ಷ) ಭಾರತ ಸರಕಾರವು ಇದುವರೆಗೆ ಇಷ್ಟು ಸ್ಫೂರ್ತಿ ವಹಿಸಿಲ್ಲ ಇದೊಂದು ಆನಂದದ ಆಶ್ಚರ್ಯವೆನ್ನಬೇಕು ಈಗಲಾದರೂ ಬಿಳಿಯರ ವರ್ತನೆಯ ಕುರಿತ ಇವರ ಕಣ್ಣು ತೆರೆದಂತಾದುದು ಸಂತೋಷ ಯುದ್ಧ ಪ್ರಯತ್ನದ ಸಕಲ ಜವಾಬ್ದಾರಿಕೆಯನ್ನು ನಾವೇ ವಹಿಸಬೇಕೆಂದಿಲ್ಲ ಇತರರು ಹೇಗಾದರೂ ಮಾಡಲಿ ನಾವು ಮಾತ್ರ ಬಾಯಿ ಮುಚ್ಚಿ ಯುದ್ಧಕ್ಕೆ ಸಹಾಯ ಮಾಡಬೇಕೆಂದೇನು ಅವಶ್ಯ?

ಲಿಯಾಖತ್ ಅಲೀ ಖಾನ್: (ಮುಸ್ಲಿಂ ಲೀಗ್) ಒಂದು ಗುಲಾಮ ಜನಾಂಗಕ್ಕೆ ಜಗತ್ತಿನಲ್ಲಿ ಸ್ಥಾನಮಾನ

(೮ನೇ ಪುಟಕ್ಕೆ ಮುಂದುವರಿದಿದೆ)

ಈಗತಾನೆ ಹೊರಬಿದ್ದಿದೆ! ದೊಡ್ಡ ಆಕಾರದ ಹೊಸ ನಿಘಂಟು!

ಶ್ರೀ| ಡಿ. ಕೆ. ಭಾರದ್ವಜರ ಇಂಗ್ಲಿಷ್-ಇಂಗ್ಲಿಷ್-ಕನ್ನಡ ಸ್ಟಾಂಡರ್ಡ್ ಡಿಕ್ಷನರಿ ಬೆಲೆ 5-0-0

ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿ ಸಿಕ್ಕುವುದು

ದಕ್ಷಿಣ ಕನ್ನಡ ಮತ್ತು ಕೊಡಗು ಸೀಮೆಗೆ ಸೋಲ್ ಏಜಂಟರು

ಸ್ಕೂಲ್ ಬುಕ್ ಕಂಪೆನಿ ಮಂಗಳೂರು :

SCHOOL BOOK CO., Mangalore

ಇದುವರೆಗೆ ಕರ್ನಾಟಕದಲ್ಲಿ ಪ್ರಕಟವಾಗಿರುವ ಎಲ್ಲ ಇಂಗ್ಲಿಷ್-ಇಂಗ್ಲಿಷ್-ಕನ್ನಡ ನಿಘಂಟುಗಳಿಗಿಂತ ಮಿಗಿಲಾದ್ದೆನಿಸಿ, ಸುಪ್ರಸಿದ್ಧ "ಆಕ್ಸ್‌ಫರ್ಡ್" "ಚೆಂಬರ್ಸ್" ಡಿಕ್ಷನರಿಗಳ ಮೊದಲಿ ರಚಿತವಾದ

ಸ್ವದೇಶಾಭಿಮಾನಿ

ತಾರೀಖು 17—11—1944

ವರ್ಣ ದ್ವೇಷವು

ಇಂದು ಹಿಟ್ಲರನೂ ಅವನ ಕೂಟದವರೂ ಕೊಲೆಪಾತಕಿಗಳೆನಿಸಿಕೊಂಡಿರುವುದಕ್ಕೆ ಅವರ ವರ್ಣದ್ವೇಷವು ಧೋರಣೆಯೇ ಕಾರಣವೆಂದು ಮಿತ್ರರಾಷ್ಟ್ರಗಳು ಸಾರಿವೆ. ತಾವು ಶುದ್ಧ ಆರ್ಯರೆಂದೂ, ಇತರ ಜನಾಂಗಗಳು ತಮ್ಮ ಸೇವೆಮಾಡುವ ಆಳುಗಳೆಂದೂ ಅವರು ತಿಳಿದುಕೊಂಡಿರುವರಂತೆ.

ರಷ್ಯದ ಸ್ಟೇಲಿನರು "ಜರ್ಮನಿಯ ಹದಮೀರಿದ ಜನಾಂಗ ಹೆಮ್ಮೆಯೇ ಅದರ ಅಧಃಪತನಕ್ಕೆ ಕಾರಣ"ವೆಂದಿದ್ದಾರೆ. ವರ್ಣಜನಾಂಗಗಳಲ್ಲಿ ಪರಿಗಣಿಸಲ್ಪಟ್ಟ ರಷ್ಯವು ಜರ್ಮನರನ್ನು ತನ್ನ ನಾಡಿನಿಂದ ಸಂಪೂರ್ಣವಾಗಿ ಹೊರಗಟ್ಟಿ ತನ್ನ ಅಗಾಧವಾದ ಶಕ್ತಿಯನ್ನು ತೋರಿಸಿದೆ. ಸದ್ಯದಲ್ಲೇ ಕೆಂಪು ಧ್ವಜವು ಬರ್ಲಿನಿನ ಮೇಲೆ ಹಾರಾಡುವುದೆಂಧು ರಷ್ಯನ್ ಸರ್ವಾಧಿಕಾರಿಯ ಭರವಸೆ. ಅಷ್ಟಾದರೆ ಒಂದು ಬಿಳಿ ಜನಾಂಗದ ವರ್ಣ ದ್ವೇಷದ ಪಿತ್ತವನ್ನು ಇಳಿಸಿದಂತಾಯಿತು.

ಆದರೂ ಬಿಳಿಜನರಲ್ಲಿ ಈ ಕಪ್ಪು ಬಿಳಿ ಪಕ್ಷಪಾತದ ಮನೋಭಾವವು ಕಡಿಮೆಯಾಗುವ ಲಕ್ಷಣಗಳು ತೋರುವುದಿಲ್ಲ. ಇತ್ತೀಚೆಗೆ ಈ ಯುದ್ಧದ ಮಧ್ಯದಲ್ಲೇ ಎಂಬಂತೆ ಸಾಮಾನ್ಯ ಸಾಮಂತ ರಾಜ್ಯವಾದ ಬ್ರಿಟಿಷ್ ಆಫ್ರಿಕದಲ್ಲಿ ಭಾರತೀಯರಿಗೆ ಕೀಳುಗಾಣಿಸುವ ವಿಧಾಯಕ ಕಾನೂನುಗಳನ್ನು ಜಾರಿಗೆತಂದರು. ಅಲ್ಲಿರುವ ಎರಡುವರೆ ಲಕ್ಷ ನಮ್ಮ ಬಂಧುಗಳನ್ನು ಸಂಪೂರ್ಣವಾಗಿ ನಿಕೃಷ್ಟಸ್ಥಾನಕ್ಕೆ ತಳ್ಳಲಾಗಿದೆ.

ದಕ್ಷಿಣ, ಪಶ್ಚಿಮ ಆಫ್ರಿಕಗಳನ್ನು ಪ್ರಗತಿಯ ಮಾರ್ಗದಲ್ಲಿ ಮುಂದುವರಿಯುವಂತೆ ಅಲ್ಲಿ ನೆಲೆನಿಂತ ಹಿಂದೀಯರು ತಮ್ಮ ತನು ಮನ ಧನಗಳನ್ನು ಅರ್ಪಿಸಿ ಸಾಧಿಸಿದ್ದಾರೆ. ಭಾರತೀಯ ಮಜೂರರು ಅಲ್ಲಿನ ನಗರ ಪಟ್ಟಣಗಳನ್ನು ಸುಂದರಗೊಳಿಸಲು ಬೆವರಿಳಿಸಿದ್ದಾರೆ. ಭಾರತೀಯ ವ್ಯಾಪಾರಿಗಳು ಅಲ್ಲಿನ ವಾಣಿಜ್ಯ ವ್ಯವಹಾರ್ಯದಲ್ಲಿ ತುಂಬಾ ವ್ಯವಸಾಯ ಮಾಡಿ ಉಪಯುಕ್ತ ಅಂತರ್ರಾಷ್ಟ್ರೀಯ ಸಂಸ್ಥೆಗಳನ್ನು ನಿರ್ಮಿಸಿದ್ದಾರೆ. ಭಾರತೀಯರಿಗೆ ಈ ಕೃತಜ್ಞತೆಯನ್ನು ಸಲ್ಲಿಸುವ ಬದಲಿಗೆ ಅವರಿಗೆ ತಮ್ಮ ವರ್ಣದ್ವೇಷ ಪರ್ವದಿಂದ ಸನ್ಮಾನಿಸಿದ್ದಾರೆ.

ಸ್ತುತ್ಯ ಧೋರಣೆ

ಮಹಾತ್ಮಾ ಗಾಂಧಿಯವರು ಆಫ್ರಿಕದಲ್ಲಿ ಪಟ್ಟ ಸಂಕಷ್ಟಗಳು ಅಷ್ಟಿಷ್ಟಲ್ಲ. ಅವರು ತಮ್ಮ ದೇಶದ ಸಂಸ್ಕೃತಿಗನುಸಾರವಾಗಿ ಬಹಳಮಟ್ಟಿಗೆ ಹಿಂದೀಯರ ಸಂಕಷ್ಟಗಳನ್ನು ನಿವಾರಿಸಲು ಪ್ರಯತ್ನಿಸಿ ಯಶಸ್ವಿಯಾದರು. ಅಲ್ಲಿ ವಾಸಿಸುವರೆಲ್ಲರೂ ನ್ಯಾಯದೃಷ್ಟಿಯಿಂದ ಸಮಾನರು ಎಂದು ಸ್ವತಂತ್ರಭಾವನೆಗೆ ಗೌರವಿತ್ತೊಂ[illegible]ದ್ದಾರೆ. ಆ ಕಾಲದಲ್ಲಿ ಅಧಿಕಾರದಲ್ಲಿದ್ದ ಜನರಲ್ ಸ್ಮಟ್ಸರು ಭಾರತೀಯರಿಗೆ ಮುಂದಕ್ಕೆ ಯಾವತರದ ಅವಮಾನಕರ ಕಾನೂನುಗಳಿಗೆ ಒಳಪಡಿಸದಂತೆ ನೋಡಿಕೊಳ್ಳುವುದಾಗಿ ಭರವಸೆ ಇತ್ತಿದರು.

ಇಂದು ಅದೇ ಸ್ಮಟ್ಸ್ ಸಾಹೇಬರ ಕಣ್ಣ ಮುಂದೆಯೇ ಅಲ್ಲಿನ ಭಾರತೀಯರ ಮೇಲೆ ಅತ್ಯಾಚಾರದ ನಿರ್ಬಂಧಗಳನ್ನು ಹೊರಿಸಿದ್ದಾರೆ. ಮ್ಯುನ್ಸಿಪಲ್ ಕ್ಷೇತ್ರದಲ್ಲಿ ಅವರಿಗೆ ಆಸ್ತಿಪಾಸ್ತಿಗಳನ್ನೂ, ಮನೆಮಠಗಳನ್ನೂ ಮಾಡಿಕೊಂಡಿರಲಿಕ್ಕೂ, ಇಲ್ಲಿಂದ ಅವರ ಸಂಬಂಧಿಕರು ಅಲ್ಲಿಹೋಗಿ ನೆಲ್ಲಲಿಕ್ಕೂ ಆತಂಕಗಳನ್ನು ತಂದೊಡ್ಡಿದ್ದಾರೆ. ಅವರು ಅಸ್ಪೃಶ್ಯರಂತೆ ನಗರದ ಹೊರವಲಯದ ಪ್ರದೇಶಗಳಲ್ಲಿ ವಾಸಿಸಿಕೊಂಡಿದ್ದು, ಕೂಲಿಕಾರರಂತೆ ಹೊಟ್ಟೆಹೊರಕೊಂಡಿರಬೇಕಾಗಿದೆ.

ಇಂಡಿಯಾ ಸರಕಾರದವರೂ ದಕ್ಷಿಣ ಆಫ್ರಿಕನ್ನರ ಮೇಲೂ ಅದೇತರದ ನಿರ್ಬಂಧಗಳನ್ನು ಹಾಕಲು ನಿರ್ಧರಿಸಿ ಸ್ವಲ್ಪ ಮಟ್ಟಿಗೆ ತಮ್ಮ ಸ್ವಾಭಿಮಾನಪ್ರಿಯತೆಯನ್ನು ಪ್ರದರ್ಶಿಸಿದ್ದಾರೆ. ಎಸೆಂಬ್ಲಿಯೊಳಗಿನ ಸರ್ವಪಕ್ಷದ ಪ್ರತಿನಿಧಿಗಳೂ ಒಮ್ಮತದಿಂದ ಪ್ರತೀಕಾರ ಧೋರಣೆಗೆ ಸಮ್ಮತಿ ಇತ್ತಿರುವುದು ಸ್ತುತ್ಯವಿಚಾರ. ಇದೇ ಐಕ್ಯತೆಯನ್ನು ಅವರು ದೇಶಗೌರವದ ಇತರ ಕಾರ್ಯಗಳಲ್ಲೂ ತೋರಿಸುತ್ತಿದ್ದರೆ ಭಾರತವು ದೇಶದ ಸ್ವತಂತ್ರ ದೇಶಗಳಸ್ಥಾನದಲ್ಲಿ ಮೆರೆಯುವುದೆಂಬುದರಲ್ಲಿ ಸಂದೇಹವಿಲ್ಲ.

ಬಿಳಿಯರ ಈ ವರ್ಣದ್ವೇಷದ ಕುರುಹುಗಳು ನಮ್ಮ ಸ್ವಂತದೇಶದಲ್ಲಿಯೂ ಹೆಚು ಸಂಖ್ಯೆಯಲ್ಲಿ ಅನುಭವಕ್ಕೆ ಬರುತ್ತವೆ. ನಮ್ಮ ದೇಶದ ರೈಲುಗಳಲ್ಲಿ, ಹೋಟೇಲುಗಳಲ್ಲಿ, ಸಿನೇಮಾ ಮಂದಿರಗಳಲ್ಲಿ, ಸಭೆಗಳಲ್ಲಿ ಬಿಳಿ ಜನರು ಮದೋನ್ಮತ್ತತೆಯಿಂದವರ್ತಿಸಿದ ನಿದರ್ಶನಗಳು ಎಸೆಂಬ್ಲಿಯಲ್ಲಿ ಅನೇಕಸಲ ಎತ್ತಿ ತೋರಿಸಲಾಗಿದೆ. ಆಫ್ರಿಕದ ಬಿಳಿಯರಿಗೆ ಮಾತ್ರವಲ್ಲ ಭಾರತದೊಳಗಿನ ಬಿಳಿಯರಿಗೂ ಒಂದು ಯೋಗ್ಯ ವರ್ತನೆಯನ್ನು ಕಲಿಸಲು ಪ್ರಯತ್ನಿಸಬೇಕಾದುದು ಪ್ರತಿಯೊರ್ವ ಭಾರತೀಯ ಮುಂದಾಳುವಿನ ಕರ್ತವ್ಯವಾಗಿದೆ.

ಸ್ವಾತಂತ್ರ್ಯಕ್ಕೆ ಗೆಲುವು

ನಾಲ್ಕನೇ ಸಲಕ್ಕೆ ಅಧ್ಯಕ್ಷಪದವಿಗೆ ಚುನಾಯಿಸಲ್ಪಟ್ಟ ರೂಸ್‌ವೆಲ್ಟರು ಜಗತ್ತಿನ ಆಳಲ್ಪಡುವ ಜನಾಂಗಗಳ ಹೆಚ್ಚಿನ ಭರವಸೆಗೆ ಪಾತ್ರರಾಗಿದ್ದಾರೆ. ಮುಖ್ಯವಾಗಿ ಅಮೇರಿಕದ ವರ್ಣಜನಾಂಗವೆನಿಸಿದ ನಿಗ್ರೋಗಳು ತಮಗೆ ಅಲ್ಲಿನ ಬಿಳಿಯರ ಕೈಯಲ್ಲಿ ಆಗುತ್ತಿರುವ ಸಂಕಷ್ಟಗಳನ್ನು ಪರಿಹರಿಸಲು ಅಧ್ಯಕ್ಷ ರೂಸ್‌ವೆಲ್ಟರ ಕಡೆಗೆ ನಿರೀಕ್ಷೆಯಿಂದ ನೋಡುತಿದ್ದಾರೆ.

ಜಗತ್ತೆಲ್ಲಾ ಸ್ವಾತಂತ್ರ ಜನಾಂಗಗಳ ಬೀಡಾಗಬೇಕೆಂಬ ದಿವ್ಯ ಉದ್ದೇಶದಿಂದ ಆವೃತರಾದ ರೂಸ್‌ವೆಲ್ಟರಿಗೆ ಇನ್ನೂ ನಾಲ್ಕು ವರ್ಷದ ಅಧಿಕಾರ ಅವಧಿ ಇದೆ. ಅಷ್ಟರೊಳಗೆ ಈ ಭಯಂಕರ ಯುದ್ಧವೂ ಕೊನೆಗೊಳ್ಳಬಹುದು. ಈ ಅವಧಿಯೊಳಗೆ ಅವರು ತಮ್ಮ ಧ್ಯೇಯವನ್ನು ಸಾಧಿಸಿದರೆ ಇಡೀ ಜಗತ್ತೇ ಅವರಿಗೆ ಚಿರಋಣಿಯಾಗಿರುವುದು.

ವಿವಿಧ ಯುದ್ಧರಂಗಗಳಿಂದ

ನಾಜಿಗಳನ್ನು ಪೂರ್ಣ ಸೋಲಿಸಬೇಕಾದರೆ ಸಂಯುಕ್ತ ರಾಷ್ಟ್ರಗಳು ಇನ್ನೂ ಹೆಚ್ಚಿನ ಪರಿಶ್ರಮವನ್ನು ವಹಿಸಿ ಹೋರಾಡಬೇಕು. ಮಿತ್ರರು ನಾರ್ಮಂಡಿಯಲ್ಲಿ ಇಳಿದು ಬಹಳ ತೀವ್ರಗತಿಯಲ್ಲಿ ಫ್ರಾನ್ಸನ್ನು ಆಕ್ರಮಿಸಿ ಜರ್ಮನಿಯ ಹೆಬ್ಬಾಗಿಲ ಮುಂದೆ ನಿಂತು ಅನೇಕ ದಿನಗಳಾದುವು. ತನ್ನ ಗುಹೆಯನ್ನು ಸೇರಿದ ವೈರಿಯು ಗುಹೆಯ ದ್ವಾರಗಳನ್ನು ಅತ್ಯಂತ ಭದ್ರವಾಗಿ ಮುಚ್ಚಿಬಿಟ್ಟಿರುವನು. ಇದು ಯುರೋಪದ ಯುದ್ಧರಂಗದ ಈಗಿನ ಪರಿಸ್ಥಿತಿಯು.

ನಾರ್ಮಂಡಿಯ ಆಕ್ರಮಣದಲ್ಲಿ ಮಿತ್ರರು ಬೀರಿದ ಗೆಲುವಿನ ನೋಟವು ಇಂದು ಸ್ವಲ್ಪ ಕಳೆಗುಂದಿರುತ್ತದೆ. ಪಶ್ಚಿಮ ರಂಗದಲ್ಲಿ ಡಚ್ ಗಡಿಯಲ್ಲಿ, ಪೂರ್ವ ರಂಗದಲ್ಲಿ ಎಲ್ಲೆಲ್ಲೂ ನಾಜಿಗಳು ಬಲವಾದ ವ್ಯೂಹಗಳನ್ನು ಹಾಕಿರುವರು. ಜರ್ಮನಿಯ ಮಿಲಿಟರಿಯು ಅಧಿಕ ಬಲವು ದೇಶ ರಕ್ಷಣೆಯ ಕಾರ್ಯದಲ್ಲಿ ಟೊಂಕಕಟ್ಟಿ ನಿಂತಿರುತ್ತದೆ. ಜರ್ಮನಿ ಗಡಿಯಲ್ಲಿ ಠಾಣ್ಯಕರಿಸಿದ ಜರ್ಮನ್ ದಂಡುಗಳು ಭೀಕರ ತರದ ಯುದ್ಧಾಯುಧಗಳಿಂದ ಕೂಡಿದವಾಗಿ ಹೋರಾಡುತ್ತಿವೆ. ಮುಂದೆ ಹೋಗಿ ವೈರಿಗೆ ಪ್ರಾಣಾಹುತಿ ಕೊಡುವ ಬದಲು ಸೈನಿಕರನ್ನು ಉಳಿಸಿಕೊಳ್ಳುವುದು ಮಿತ್ರರ ಸದ್ಯದ ಧೋರಣವಾಗಿರುತ್ತದೆ.

ಬ್ರಿಟಿಷ ಪ್ರಧಾನ ಚರ್ಚಿಲ್ಲರು ಹೇಳುವಂತೆ, ಯುರೋಪದಲ್ಲಿ ತಳವೂರಿದ ಮಿತ್ರಸೇನೆಗೆ ಬೇಕಾದ ಸಾಮಗ್ರಿಗಳನ್ನು ಪೂರೈಸಿಕೊಡುವರೆ ಫ್ರಾನ್ಸಿನ, ಹಾಲೆಂಡಿನ ಕೆಲವು ಬಂದರ, ಪ್ರದೇಶಗಳು, ಹಾಳುಗೆಡವಲ್ಪಟ್ಟವುಗಳು, ಈಗ ದುರುಸ್ತಿಪಡಿಲಾಗುತ್ತಿವೆ. ಈ ದುರುಸ್ತಿ ಕೆಲಸವು ತೀವ್ರವಾಗಿ ನಡೆಯುವಂತೆ, ಮಿತ್ರ ಸೇನೆಗಳು ಈ ಕುರಿತು ಹೆಚ್ಚಿನ ಪರಿಶ್ರಮವನ್ನು ವಹಿಸಬೇಕಾಗಿದೆ. ಪಶ್ಚಿಮರಂಗದಲ್ಲಿ ಈಗಿನ ತಟಸ್ಥ ಸ್ಥಿತಿಗೆ ಇದೊಂದು ಕಾರಣವಾಗಿರಬಹುದು.

ಜರ್ಮನಿಯು ಇನ್ನೂ ಸತ್ವಭರಿತವಿದೆ. ಅದನ್ನು ಸದೆಬಡೆಯಲು ಮಹತ್ತ್ವದ ಯತ್ನದ ಅವಶ್ಯವಿದೆ, ವೈರಿಯ ಸದ್ಯದ ಸಿದ್ಧತೆಯ ಎದುರು, ಮಿತ್ರರು ಅದಕ್ಕೆ ಮಿಗಿಲೆನಿಸಿದ ಸಿದ್ಧತೆಗಳು ಮಾಡಿದರೆ ಮಾತ್ರ ಮಿತ್ರರಿಗೆ ಜಯವು ಖಂಡಿತ ದೊರಕುವುದು, ಎಂಬದು ಮಿತ್ರರ ಮಿಲಿಟರಿ ಮುಂದಾಳುಗಳ ಅಭಿಪ್ರಾಯವಿದ್ದುದರಿಂದ ಮಿತ್ರರೀಗ ಆ ತರದ ಮಹಾಸಿದ್ಧತೆಯ ಕಾರ್ಯದಲ್ಲಿ ತೊಡಗಿರುವರು.

ಜರ್ಮನಿಯಿಂದ ನೂತನವಾಗಿ ಹೊರಬಂದ ಆಕಾಶ ಬಾಣಗಳ ಹಾವಳಿಯನ್ನು ತಡೆಯುವರೆ, ಜರ್ಮನಿಯ ಒಳಗಿರುವ, ಈ ಆಕಾಶ ಬಾಣಗಳು ಸಿದ್ಧವಾಗುವ ಕಾರ್ಖಾನೆಗಳನ್ನೇ ಧ್ವಂಸಗೊಳಿಸುವ ಉದ್ದೇಶದಿಂದ ಮಿತ್ರರ ವಿಮಾನಗಳು ಧಾರಾಳ ಸಂಖ್ಯೆಯಲ್ಲಿ ಜರ್ಮನಿಯೊಳಗೆ ಹಾರಾಡಿ ಅತ್ಯಂತ ಭೀಕರ ತರದ ಹಾವಳಿಯನ್ನು ನಡೆಯಿಸುತ್ತಿವೆ. ಫ್ರೆಂಚ್ ಮತ್ತು ಡಚ್ ಕರಾವಳಿ ಪ್ರದೇಶಗಳು ಮಿತ್ರರ ವಶವಾದಂದಿನಿಂದ ಹಾರುವ ಬಾಂಬುಗಳ ಹಾವಳಿಯು ತಡೆಯಲ್ಪಟ್ಟಿರುತ್ತದೆ. ಆದರೆ ಮಿಂಚಿನೋಪಾದಿ ಅತ್ಯಂತ ದೂರಕ್ಕೆ ತೆರಳುವ ಶಕ್ತಿಯುಳ್ಳ ಈ ಆಕಾಶ ಬಾಣಗಳ ಹಾವಳಿಯನ್ನು ಪೂರ್ಣ ತಡೆಯುವರೆ ಜರ್ಮನಿಯ ಆಕ್ರಮಣವಾಗಲೇಬೇಕಾಗುವುದು.

ಇಷ್ಟಿದ್ದರೂ, ಮಿತ್ರರು ಪಶ್ಚಿಮರಂಗದಲ್ಲಿ ಕೆಲವೊಂದು ಕಾರ್ಯಸಿದ್ಧಿಯನ್ನು ಪಡೆದಿರುವರು. ಡಚ್ ಬೆಲ್ಜಿಯಮ್ ಕರಾವಳಿಯ ತೀರವಿರುವ ದ್ವೀಪಗಳನ್ನೇ ಮಿತ್ರರು ಹಿಡಿದಿರುವರು. ತಮಗೆ ಬೇಕಾದ ಸಾಮಾನು, ಸಾಮಗ್ರಿಗಳನ್ನು ಪೂರೈಸುವರೆ, ಎಂಟವರ್ಪ ಬಂದರವು ಮಿತ್ರರ[illegible] ಠಾಣ್ಯವಾಗಿ ಸದ್ಯದಲ್ಲಿ ದೊರಕಬಹುದು. ಹಾಲೆಂಡಿನಲ್ಲಿ ಇಳಿದ ಜನರಲ್ ಡೆಂಪ್ಸೆಯವರ ದಂಡುಗಳು ಮಾಸ್ ನದಿ ಪ್ರದೇಶದಲ್ಲಿ ಮುಂದುಸರಿದಿವೆ. ಆಚ್ಯಾನ್ ಮತ್ತು ಮೆಟ್ಜ ಪ್ರದೇಶದಲ್ಲಿ ಅಮೇರಿಕನ್ ದಂಡುಗಳು ಜರ್ಮನಿ ಕೈಗಾರಿಕೆ ಪ್ರದೇಶವಾದ ಕೊಲೊನಿನ ಕಡೆ ಮುಂದುವರಿಯುತ್ತಿವೆ. ಆದರೆ ಈ ಮುನ್ನಡೆಯು ಮಂದಗತಿಯಲ್ಲಿ ನಡೆಯುತ್ತಿದೆ. ಆದರೆ ಲೋರೇನ್ಸ್ ಪ್ರದೇಶದಲ್ಲಿರುವ ಅಮೇರಿಕನ್ ದಂಡುಗಳಿಗೆ ಹೆಚ್ಚಿನ ಯಶಸ್ಸು ದೊರಕಿರುತ್ತದೆ. ಈ ದಂಡುಗಳು ಬೇಗನೆ ಜರ್ಮನಿಯ ಕಲ್ಲಿದಲ್ಲು ಸಂಗ್ರಹವಿರುವ ಸಾರ್ ಬ್ರೂಕಸ್ ಪ್ರದೇಶವನ್ನು ನುಗ್ಗಬಹುದು. ಮಿತ್ರರ ಮೇಲೆ ಹೇಳಿದ ಆಕ್ರಮಣಗಳು ಯಶಸ್ವಿಯಾಗಿಬಿಟ್ಟವೆಂದರೆ, ಮಿತ್ರರು ಜರ್ಮನಿ ಸಿರಿವಂತ ನಾಡಾದ ರ್ಹೂರ್ ಮತ್ತು ರ್ಹೈನ್‌ಲೆಂಡ್ ಪ್ರದೇಶವನ್ನು ಪ್ರವೇಶಿಸಿದಂತಾಗುತ್ತದೆ.

ಯೂರೋಪದ ಇತರ ರಂಗಗಳಲ್ಲಿ ಮಿತ್ರರ ಮುನ್ನಡೆಯ ಗತಿಯು ಮಂದವಿರುತ್ತದೆ. ಇಟಲಿಯ ಬೊಲೊಗ್ನಾವಿನ ಸಮೀಪವಿರುವ ಫೊರ್ಲಿ ನಗರದಲ್ಲಿ ಮಿತ್ರ ದಂಡುಗಳ ಪ್ರವೇಶವಾಗಿರುತ್ತದೆ. ಗ್ರೀಸ್ ದೇಶದಿಂದ ಜರ್ಮನರು ಸಂಪೂರ್ಣವಾಗಿ ಹೊರ ಅಟ್ಟಲ್ಪಟ್ಟಿರುವರು. ಪೂರ್ವರಂಗದಲ್ಲಿ ಕೆಂಪು ದಂಡುಗಳು ಹಂಗೇರಿಯ ಬುಡಾಪೆಸ್ಟ್ ನಗರದ ಮೇಲೆ ಕೂಡಿಬರುತ್ತಿವೆ. ಪೂರ್ವ ಪ್ರಸ್ಸಿಯಾದಲ್ಲಿದ್ದಂತೆ, ಇಲ್ಲಿ ಜರ್ಮನರ ತಡೆಯು ಅತಿ ಬಿಗಿಯಾಗಿರುವುದೆಂದು ತಿಳಿದುಬಂದಿದೆ.

ಜಪಾನಿಯರನ್ನು ಸದೆಬಡೆಯಲು ಕನಿಷ್ಠ ಎರಡು ವರ್ಷಗಳ ಸಮಯಾವಾದರೂ ಬೇಕಾಗುವುದೆಂದು ಮಿತ್ರರ ಮಿಲಿಟರಿ ಪ್ರವೀಣರು ಅಂದಾಜುಮಾಡಿರುವರು. ಜಪಾನಿಯ ಆಕ್ರಮಿತ ಸಿಂಗಾಪುರ, ಸುಮಾತ್ರಾ, ಜಾವಾ, ಇತ್ಯಾದಿ ಪ್ರದೇಶಗಳು, ಮಿತ್ರರ ನಿತ್ಯಲೂ ನಡೆಯುವ ವಿಮಾನ ಹಲ್ಲೆಗಳ ಆಹುತಿಗಳಾಗಿವೆ. ಈ ಕಾರಣದಿಂದ ಜಪಾನಿಯರು ಆರು ಸಾವಿರ ಮೈಲು ಹಬ್ಬಿಕೊಂಡಿರುವ ಶಾಂತ ಸಾಗರದಲ್ಲಿ ನೌಕಾ ಚಟುವಟಿಕೆಗಳನ್ನು ನಡೆಯಿಸಬೇಕಾಗಿಯದೆ. ಫಿಲಿಪ್ಪೈನ ದ್ವೀಪಗಳಲ್ಲಿ ಕದನವು ಅತ್ಯಂತ ಭೀಕರ ರೂಪವನ್ನು ಹೊಂದಿರುತ್ತದೆ. ಜಪಾನಿಯರ ಅನೇಕ ನೌಕೆಗಳು ಅಮೇರಿಕನ್ ನೌಕಾಬಲಕ್ಕೆ ಆಹುತಿಯಾಗುತ್ತಿವೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ವ್ಯಾಸರಾಯರಿಗೆ ದ. ಕನ್ನಡಿಗರ ಮನವಿ

ನಮ್ಮ ಜಿಲ್ಲೆಯ ಉಪ್ಪಿನಂಗಡಿ ಕುಂಬಳೆ ಕಡೆಯ ಕೆಲ ಪ್ರದೇಶಗಳನ್ನು ಮಿಲಿಟರಿ ಉಪಯೋಗಕ್ಕಾಗಿ ಸ್ವಾಧೀನಮಾಡಿಕೊಳ್ಳಲು ಯೋಜನೆಯಾಗಿದೆ. ಇದಲ್ಲದೆ ಸಂಬಂಧಪಟ್ಟ ಖಾತೆಯವರು ಈ ಪ್ರದೇಶಗಳನ್ನು ಪರಿಶೀಲಿಸಿ ಗುರುತುಮಾಡಿರುವರು. ಈ ಸ್ಥಳಭಾಗಗಳನ್ನು ಬಿಟ್ಟುಕೊಟ್ಟರೆ ಅಲ್ಲಿಯ ಜನರಿಗೆ ಆಗಬಹುದಾದ ನಷ್ಟ ಸಂಕಷ್ಟಗಳನ್ನು ವಿವರಿಸಿ ಜನರಿಗೆ ನಷ್ಟ ಸಂಭವಿಸಿದ ಪ್ರದೇಶಗಳನ್ನೇ ಆರಿಸಿದ್ದರೆ ಒಳಿತೆಂಬ ಸೂಚನೆಯ ಮನವಿಯೊಂದನ್ನು ಜಿಲ್ಲೆಯ ಕೆಲ ಪ್ರಮುಖರ ಸಹಿಯೊಂದಿಗೆ ವ್ಯಾಸರಾಯರಿಗೆ ಕಳುಹಿಸಲಾಗಿದೆ ಎಂದು ತಿಳಿದುಬರುತ್ತದೆ.

ಇದರಿಂದ ನಷ್ಟ ವೆಷ್ಟು?

ಮಿಲಿಟರಿ ಖಾತೆಯವರ ಯೋಜನೆಯೊಳಗೆ ಬಂದಿರುವ ಈ ಪ್ರದೇಶಗಳಲ್ಲಿ ಸುಮಾರು ೧೭೦೦ ಮನೆಗಳಿದ್ದು ೮೦೦೦ ಜನರು ಸ್ಥಳಾಂತರ ಹೊಂದಬೇಕಾಗುವುದು.

ಕೃಷಿ ಯೋಗ್ಯವಾದ ಸುಮಾರು ೨೫೦೦ ಎಕ್ರೆಯಷ್ಟು ಬೈಲು, ಬೆಟ್ಟು ಗದ್ದೆಗಳೂ, ೭೫೦ ಎಕ್ರೆಯಷ್ಟು ಅಡಿಕೆ, ಬಾಳೆ ಮುಂತಾದ ಫಲೋತ್ಪತ್ತಿ ತೋಟ ಪ್ರದೇಶಗಳೂ ಇವೆಯೆಂದು ತಿಳಿದಿದೆ.

ಇವುಗಳನ್ನು ಸ್ವಾಧೀನಪಡಿಸಿಕೊಳ್ಳುವುದರಿಂದ ಸುಮಾರು ೨೫ ಸಾವಿರ ಮುಡಿಗಳಷ್ಟು ಅಕ್ಕಿ ಉತ್ಪತ್ತಿ ಕಮ್ಮಿಯಾದಂತಾಗುವುದು. ತೋಟಗಳಲ್ಲಿ ಸುಮಾರು ೧೬೦೦ ಖಂಡಿಯಷ್ಟು ಅಡಿಕೆ, ಕೆಲವು ಲಕ್ಷದಷ್ಟು ತೆಂಗಿನಕಾಯಿಗಳು ಸಿಗುತ್ತಿತ್ತೆಂದು ಅಂದಾಜುಹಾಕಲಾಗಿದೆ.

ಮತೀಯ ಸಂಸ್ಥೆಗಳು

ಒಂದು ಮಸೀದಿಯಲ್ಲದೆ, ಹಿಂದೂಗಳ ೧೪ ಚಿಕ್ಕದೊಡ್ಡ ದೇವಾಲಯಗಳೇ ಮುಂತಾದ ಅನೇಕ ದೇವಾರಾಧನೆಯ ಸ್ಥಾನಗಳೂ ಈ ಪ್ರದೇಶದೊಳಗೆ ಇವೆ. ಇವುಗಳನ್ನು ಮುಚ್ಚುವಂತಾದರೆ ಆ ಸ್ಥಳಗಳ ಮೇಲೆ ಬಹುಸಂಖ್ಯಾತ ಹಿಂದೂಗಳಿಗಿರುವ ಮತೀಯ ಭಾವನೆಗಳನ್ನು ನೋಯಿಸಿದಂತಾಗುತ್ತದೆಂದೂ, ಅವುಗಳಿಗೆ ಚ್ಯುತಿಬಂದರೆ ಎಲ್ಲಾ ತರದ ಧರ್ಮಾಭಿಮಾನಿಗಳ ಮೇಲೆ ಪರಿಣಾಮವಾಗುತ್ತದೆಂದೂ ಮನವಿಯಲ್ಲಿ ಸೂಚಿಸಲ್ಪಾಗಿದೆ.

ಕೃಷಿಗೆ ಹಾನಿ

ಅತ್ಯುತ್ತಮವೂ ಫಲವತ್ತಾದುದೂ ಎಂದೆನಿಸುವ ಈ ಪ್ರದೇಶದ ಅನೇಕ ತೋಟಗಳಿಂದ ವರ್ಷಕ್ಕೆ ೫ ಲಕ್ಷ ರೂ. ಉತ್ಪತ್ತಿ ಇದೆ. ಮತ್ತೆ ಹೊಸ ತೋಟಗಳನ್ನು ನೆಟ್ಟು ಬೆಳೆಸಲು ಹತ್ತು ಹಿನ್ನೈದು ವರ್ಷಗಳು ಬೇಕಾಗುತ್ತವೆ. ಇದಕ್ಕೆ ಅಪಾರ ಮೂಲ ಧನವೂ ಬೇಕಾಗುವುದು. ತಲಾಂತರಗಳಿಂದ ವ್ಯವಸಾಯಮಾಡಿಬಂದ ಈ ತೋಟಗಳನ್ನು ಕಳಕೊಳ್ಳುವುದರಿಂದ ಸುಮಾರು ಅರ್ಧ ಕೋಟಿಯ ನಷ್ಟವಾಗಬಹುದೆಂದೂ ಹೇಳಲಾಗಿದೆ.

ಬೇರೆ ಸ್ಥಳಗಳು

ಸೈನ್ಯ ಖಾತೆಯ ಆವಶ್ಯಕತೆಯು ಯುದ್ಧ ಕಾಲದಲ್ಲಿ ಪ್ರಾಮುಖ್ಯದ್ದಿರುತ್ತದೆ. ಆದರೆ ಮೇಲೆ ಹೇಳಿದಷ್ಟು ನಷ್ಟ, ನೋವುಗಳುಂಟಾಗದ ಇತರ ಪ್ರದೇಶಗಳನ್ನು ಸರಕಾರದವರು ಉಪಯೋಗಿಸಿ ಕೊಳ್ಳುವಂತಾದರೆ ಜನರಿಗೆ ಅವುಗಳಿಂದ ತಪ್ಪಿಸಿದಂತಾಗುವುದೆಂದು ಸೂಚಿಸಿ ಆ ಬೇರೆ ಸ್ಥಳಗಳ್ಯಾವುವೆಂದೂ ಮನವಿಗಾರರು ತೋರಿಸಿರುವರು.

ಈ ಕೃಷಿ ಪ್ರದೇಶಗಳನ್ನು ಸ್ವಾಧೀನ ಪಡಿಸದೆ ನಿರ್ವಾಹವಿಲ್ಲವೆಂದಾದ ಸಂದರ್ಭದಲ್ಲಿ ಕನಿಷ್ಠ ಪಕ್ಷ ಆ ಪ್ರದೇಶದಲ್ಲಿನ ದೇವಾರಾಧನೆಯ ಮಸೀದಿ, ದೇವಳಗಳು ಇರುವ ಸ್ಥಳಗಳನ್ನಾದರೂ ಈ ಯೋಜನೆಯಿಂದ ಬಿಟ್ಟುಬಿಡಬೇಕೆಂದೂ ಮನವಿಯಲ್ಲಿ ಪ್ರಾರ್ಥಿಸಲಾಗಿದೆ ಎಂದು ತಿಳಿದುಬರುತ್ತದೆ.

ಗವರ್ನರರ ಸಲಹೆಗಾರರು

ಮದ್ರಾಸ್ ಗವರ್ನರರ ಸಲಹೆಗಾರ ಮಂಡಳಿಯ ಸದಸ್ಯರಾದ ಮಿ| ಟಿ. ಆಸ್ಟಿನ್ ಅವರು ಕಳೆದ ತಾ. ೮ಕ್ಕೆ ಮಂಗಳೂರಿಗೆ ಬಂದಿದ್ದು ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ತಾ. ೯ರಂದು ಬೆಳಿಗ್ಗೆ ಬಂಟ್ಸ್ ಹಾಸ್ಟೆಲಿನಲ್ಲಿ, ಸಂಜೆ ನಗರ ಸಭೆಯಲ್ಲಿ ಮಾನ್ಯ ಸಲಹೆಗಾರರಿಗೆ ಮಾನಪತ್ರಗಳನ್ನರ್ಪಿಸಲಾಯಿತು. ತಾ. ೧೦ರಂದು ಸ್ಥಳೀಯ ಗ. ಕಾಲೇಜ್ ದಿನಾಚರಣೆಯಲ್ಲಿ ಅಧ್ಯಕ್ಷ ಸ್ಥಾನವಹಿಸಿದರು. ಅಂದೇ ಬೆಳಿಗ್ಗೆ ಡಾ| ಕೇಶವ ಪೈ, ಶ್ರೀ ವೆಂಕಟೇಶ ಪೈ ಇವರಿಂದಕೂಡಿದ ಶಿಷ್ಟಮಂಡಲಕ್ಕೆ ಸಂದರ್ಶನ ಕೊಟ್ಟರು.

ಸಲಹೆಗಾರರ ಸೂಚನೆ

ತಮ್ಮ ಕಾರ್ಯಕ್ರಮದ ಬೇರೆ ಬೇರೆ ಸಂದರ್ಭಗಳಲ್ಲಿ ಮಾನ್ಯ ಸಲಹೆಗಾರರು ಕೊಟ್ಟ ಸಲಹೆ ಸೂಚನೆಗಳು ಹೀಗಿವೆ:

ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಗುಪ್ತ ಅಕ್ಕಿ ಸಾಗಿಸುವಿಕೆಯನ್ನೂ, ಕಳ್ಳಸಂತೆಯನ್ನೂ ನಿಲ್ಲಿಸಬೇಕಷ್ಟೆ.

ಯುದ್ಧೋತ್ತರ ಯೋಜನೆಗಳಲ್ಲಿ ನಗರಸಭೆಗಳಿಗೆ ಎಲ್ಲಾ ತರ ನಾಗರೀಕ ಸೌಕರ್ಯಗಳನ್ನು ಒದಗಿಸಲಾಗುವುದು.

ಜಿಲ್ಲೆಗೆ ಹಾಲಿನ ಜಾನುವಾರುಗಳು ಮೈಸೂರುಕಡೆಯಿಂದ ಬರುವಂತೆ ಸರಕಾರ ಪ್ರಯತ್ನಿಸುತ್ತಿದೆ.

ಎಲ್ಲಾ ಮತ ಜಾತಿಯ ಜನರಿಗೂ, ಅವರ ಸಂಸ್ಥೆಗಳಿಗೂ ಸಲ್ಲತಕ್ಕ ಯೋಗ್ಯ ಸ್ಥಾನಮಾನಗಳನ್ನೂ, ರಕ್ಷಣೆ ಭದ್ರತೆಗಳನ್ನೂ ಕೊಡಲಾಗುವುದು.

ಆಜೀವ ಸಜೆ

ಮೈಸೂರಿನ ಲಿಂಗರಾಜ ಅರಸು ಎಂಬವನು ಖೂನಿಮಾಡಲ್ಪಟ್ಟ ಆರೋಪದಲ್ಲಿ ವಿಚಾರಣೆಗೆ ಒಳಗಾದ ಶ್ರೀ ಕೃಷ್ಣೋಜಿರಾಯರನ್ನು ಜಿಲ್ಲಾ ಜಡ್ಜರು ತನಿಖೆನಡೆಸಿ—ಜನ್ಮಾವಧಿ ಶಿಕ್ಷೆ ಅಥವಾ ಜನ್ಮಟಾಪು ಶಿಕ್ಷೆಯನ್ನು ವಿಧಿಸಿರುವರು. ಇನ್ನಿತರ ನಾಲ್ಕು ಆರೋಪಗಳಿಗಾಗಿ ಆರಾರು ತಿಂಗಳ ಪ್ರತ್ಯೇಕ ಸಜೆ ಕೊಡಲ್ಪಟ್ಟಿದೆ. ಎಲ್ಲಾ ಸಜೆಗಳೂ ಏಕಕಾಲದಲ್ಲಿ ಅನುಭವಿಸಲ್ಪಡುವಂಥವುಗಳು. ಖೂನಿಯು ಉದ್ದೇಶಪೂರ್ವಕ ನಡೆದುದಲ್ಲವೆಂತಲೂ, ಅದು ನಡೆದಾಗ ಆರೋಪಿಯು ಅಮಲಿನ ಆವೇಶದಲ್ಲಿರಬೇಕೆಂಬ ಅಂಶಗಳು ವಿಚಾರಣೆಯ ಕಾಲದಲ್ಲಿ ತಿಳುವಳಿಕೆಗೆ ಬಂದಿವೆ ಎಂದು ತಿಳಿದುಬರುತ್ತದೆ.

ಮಾಯಿಲ್ ರೈಯವರ ಮರಣ

ಬಹುಕಾಲದಿಂದ ಖೂನಿ ಮೊದಲಾದ ಆರೋಪಗಳ ಸಂಬಂಧ ಪೋಲಿಸರಿಂದ ಹುಡುಕಲ್ಪಡುತಿದ್ದ ಪುತ್ತೂರಿನ ಶ್ರೀ ಮಾಯಿಲ್ ರೈ ಎಂಬ ಬೆಳ್ಳಿಪಾಡಿಯ ಜಮೀನ್ದಾರರೊಬ್ಬರು ಅಕಸ್ಮಾತಾಗಿ ಸ್ಥಳೀಯ ವೆನ್‌ಲಾಕ್ ಆಸ್ಪತ್ರೆಯಲ್ಲಿ ವೈದ್ಯಕೀಯ ಶುಶ್ರೂಷೆಗಾಗಿ ಕರತಲ್ಪಟ್ಟರೆಂದೂ, ಅಲ್ಲಿ ಆರೈಕೆಯ ಕಾಲದಲ್ಲಿ ಅವರನ್ನು ಕೈದಿಗೊಳಪಡಿಸಲಾಯಿತಾಗಿಯೂ ತಿಳಿದುಬರುತ್ತದೆ. ಕಠಿಣ ಕ್ಷಯದಿಂದ ನರಳುತಿದ್ದರಾದುದರಿಂದ ಶ್ರೀಯುತರು ಮೊನ್ನೆ ತಾ. ೧೨ರ ಆದಿತ್ಯವಾರ ಮೃತಿಯನ್ನೈದಿದರೆಂದು ತಿಳಿದುಬರುತ್ತದೆ.

ಹೋಟೇಲುಗಾರರಿಗೆ ಎಚ್ಚರಿಕೆ

ಮಂಗಳೂರು ನಗರದ ಹೋಟೇಲು ಚಾಲಕರು ತಮ್ಮ ಸಂಸ್ಥೆಗಳ ವಿಚಾರವಾಗಿ ಕಲೆಕ್ಟರರ ಆಫೀಸಿಗೆ ಕಳುಹಿಸಿಕೊಡಬೇಕಾದ ವಿವರಗಳನ್ನು ಇದುತನಕ ಕಳುಹಿಸಿಕೊಟ್ಟಿಲ್ಲವೆಂಬ ವಿಚಾರವು ಮಾನ್ಯ ಜಿಲ್ಲಾ ಕಲೆಕ್ಟರರ ಗಮನಕ್ಕೆ ಬಂದಿದೆ. ಮುನ್ಸಿಪಲ್ ಕಮಿಶನರರು ಸಂಬಂಧದ ಕೆಲಸವನ್ನು ಆದಷ್ಟು ಬೇಗನೇ ತ್ವರೆಗೊಳಿಸುವರೆ ಏರ್ಪಡಿಸಬೇಕಾಗಿ ವಿನಂತಿಸಲ್ಪಟ್ಟಿರುವರು.

ತಮ್ಮಿಂದ ರೇಶನ್ ಚೀಟುಗಳನ್ನು ಕೊಡಲ್ಪಡುವ ಹೊಟೇಲುಗಳು ಸರಿಯಾಗಿ ನಿಯಮಬದ್ಧವಾಗಿ ನಡೆಸಲ್ಪಡುವವೊ ಎಂದು ರೇಶನ್ ಅಧಿಕಾರಿಗಳು ತನಿಖೆ ನಡಿಸಬೇಕಾಗಿ ಕಲೆಕ್ಟರರು ನಿರ್ದೇಶಿಸಿರುವರು.

ಊಟದ ದರಗಳು

ಈ ನಗರದ ಹೋಟೇಲುಗಳಲ್ಲಿ ಊಟದ ದರಗಳು ಹೀಗಿರಬೇಕೆಂದು ಕಲೆಕ್ಟರರ ಪ್ರಕಟನೆ ಇದೆ. ಸಾಮಾನ್ಯ ಮಾಂಸಾಹಾರದ ಊಟಕ್ಕೆ (ಒಂದು ನ್ಯಾಯವಾದ ಪ್ರಮಾಣವುಳ್ಳ ಅನ್ನ ಮಾಂಸ ಯಾ ಮೀನು, ತರಕಾರಿ ಇಲ್ಲವೆ ಧಾನ್ಯಗಳ ಪಲ್ಯ ಪದಾರ್ಥಗಳುಳ್ಳದ್ದು) ದರ ೪ ಆಣೆ. ಒಂದು ಸಸ್ಯಾಹಾರ ಊಟಕ್ಕೆ (ನ್ಯಾಯವಾದ ಪ್ರಮಾಣದ ಅನ್ನ, ರಸಂ ಇಲ್ಲವೆ ಕೊಳೊಂಬೊ, ತರಕಾರಿ ಇಲ್ಲವೆ ಧಾನ್ಯಗಳ ಪಲ್ಯ ಪದಾರ್ಥ, ಹಾಲು ಇಲ್ಲವೆ ಮಜ್ಜಿಗೆ) ದರ ೩ ಆಣೆ.

ತಿಂಗಳು ಲೆಕ್ಕದಲ್ಲಿ ಊಟದವರ ದರ ೧೦ ರೂ.ಗಳಿಗೆ ಮಿಗಬಾರದು.

ಅಧಿಕಾರಿಗಳು ಪರಿಶೀಲಿಸಬೇಕು

ಸಬ್ ಕಲೆಕ್ಟರರೂ ಸಬ್ ಡಿವಿಜನಲ್ ಆಫೀಸರರೂ ತಮ್ಮ ಪ್ರದೇಶಗಳ ಹೊಟೇಲುಗಳಲ್ಲಿ ಕಲೆಕ್ಟರರು ನಿಯಂತ್ರಿಸಿದ ದರಗಳನ್ನು ಜಾರಿಗೆತರಬೇಕು.

ಯಾವ ಸಂದರ್ಭಗಳಲ್ಲಿಯೂ ಹೊಟೇಲು ಮಾಲಿಕರು ಕಲೆಕ್ಟರರ ನಿಯಮಗಳನ್ನು ಅಕ್ಷರಶಃ ಪಾಲಿಸುವಂತೆ ರೇಶನ್ ಅಧಿಕಾರಿಗಳೂ, ರೆವಿನ್ಯೂ ಅಧಿಕಾರಿಗಳೂ ತಪಾಸನೆ ಮೂಲಕ ನೋಡಿಕೊಳ್ಳಬೇಕು.

ಊಟಕೊಂಡೊಯ್ಯುವ ಪಾತ್ರೆಗಳಲ್ಲಿ ಎರಡು ಊಟಗಳವೆಯೆಂದು ನೆವಹೇಳಿ ಹೆಚ್ಚಿನ ದರಗಳನ್ನು ಪಡೆಯಲು ಪ್ರಯತ್ನಿಸುತ್ತಾರೆಂದು ಕಲೆಕ್ಟರರ ಗಮನಕ್ಕೆ ಬಂದಿರುತ್ತದೆ. ಹೊಟೇಲಿನವರು ಮಾಡಬಹುದಾದ ಇತರ ಇಂತಹ ಅನೇಕ ಕುಹಕೋಪಾಯಗಳನ್ನು ಯೋಗ್ಯ ಕಾರ್ಯಕ್ರಮದಿಂದ ತಡೆಗಟ್ಟುವುದೂ ಅವಶ್ಯವಿದೆ.

ಕಮರ್ಶಿಯಲ್ ಟೇಕ್ಸ್ ಆಫೀಸರರೂ ಇದರ ಮೇಲ್ತನಿಕೆ ನಡಿಸಬಹುದು.

ವೇದಾಂತ ಪಾಠಶಾಲೆ

೧೩| ಸಾ| ಬ್ರಾಹ್ಮಣ ದೇವಸ್ಥಾನದ ಟ್ರಸ್ಟಿಗಳ ಸಂಘದ ಪರವಾಗಿ ಒಂದು ಶಿಷ್ಟಮಂಡಳವು ಮಾನ್ಯ ಎಡ್ವೈಜರ್ ಆಸ್ಟಿನ್ನರನ್ನು ಬೇಟಿಮಾಡಿ ತಮ್ಮ ದೇವಸ್ಥಾನಗಳ ವಿಚಾರ, ಒಂದು ವೇದಾಂತ ಪಾಠಶಾಲೆಯನ್ನು ಸ್ಥಾಪನೆಮಾಡಬೇಕಾದ್ದ ಮತ್ತಿತರ ಸವಲತ್ತುಗಳನ್ನು ಒದಗಿಸುವಂತೆ ವಿನಂತಿಸಿಕೊಂಡರೆಂದೂ ಎಂಡೋಮೆಂಟ್ ಅಧಿಕಾರಿಗಳ ಗಮನಕ್ಕೆ ಅದನ್ನು ತರುವುದಾಗಿ ಎಡ್ವೈಜರರು ಭರವಸೆ ಇತ್ತರಾಗಿಯೂ ತಿಳಿದುಬರುತ್ತದೆ.

ಉಡುಪಿ

ಇಲ್ಲಿ ಬೆಳ್ತಿಗೆ ಅಕ್ಕಿಯ ಅಭಾವ ಇದೆಯೆಂದು ತಿಳಿದುಬರುತ್ತದೆ. ರೇಶನಿಂಗ್ ಕ್ಷೇತ್ರದಲ್ಲೂ ರಾಗಿ, ಗೋದಿಗಳನ್ನು ಕೊಡುತ್ತಿರುವರು.

ಬೆಲ್ಲದ ಕ್ರಯವು ಈ ತಾಲೂಕಿನಲ್ಲೂ ನಿಯಂತ್ರಿಸಲ್ಪಟ್ಟಿದೆ.

ಕಾರ್ಕಳ

ಇಲ್ಲಿಯ ಸ್ಮಶಾನ ಮತ್ತು ರಾಮಸಮುದ್ರದ ಬಳಿಯ ಕಾಡಿಗೆ ಮೇಯಲು ಹೋಗುತಿದ್ದ ಆಕಳುಗಳನ್ನು ಕೊಂದು ಮಾಂಸ ಮತ್ತು ಚರ್ಮಗಳನ್ನು ಮಾರುತ್ತಿರುವರೆಂದು ತಿಳಿದುಬಂದಿದ್ದು, ಪೋಲೀಸರು ಸಂಬಂಧಪಟ್ಟ ದುರಾತ್ಮರ ಪತ್ತೆ ನಡೆಸುತ್ತಿರುವರು.

ಈ ಕೇಂದ್ರದಿಂದ ಹಿಂದೀ ರಾಷ್ಟ್ರಭಾಷಾ ಪರೀಕ್ಷೆಗೆ ಕೂತಿದ್ದ ಶ್ರೀಮತಿ ಯಂ. ತಾರಾಮತಿಯೆಂಬವರು ದಕ್ಷಿಣ ಭಾರತದಲ್ಲಿ ದ್ವಿತೀಯ ಸ್ಥಾನ ಪಡೆದು ಉತ್ತೀರ್ಣರಾಗಿರುವರು.

ಬೆಳ್ಳಾರೆ

ಹಳ್ಳಿಗಳಲ್ಲಿನ ಹಸುಗೆ ಪದ್ಧತಿಯನ್ನು ಸುಧಾರಿಸಬೇಕೆಂದು ವಿನಂತಿಸುವ ಒಂದು ಮನವಿಯನ್ನು ಇಲ್ಲಿಯ ಬಳಿಯ ಏಳು ಗ್ರಾಮಗಳ ವರ್ಗದಾರರಿಂದ ಸಹಿಮಾಡಲ್ಪಟ್ಟ ಒಂದು ಮನವಿಯನ್ನು ಮಾನ್ಯ ಕಲೆಕ್ಟರರಿಗೆ ಕಳುಹಿಸಲಾಗಿದೆ. ಮಿಗಿತ್ತಾಯದ ಅಕ್ಕಿ ಬತ್ತವನ್ನು ಒಪ್ಪಿಸುವ ಅವಧಿಯನ್ನು ಮುಂದರಿಸಬೇಕೆಂದೂ, ಹಳ್ಳಿಗಳಲ್ಲಿ ತಿಂಗಳಿಗೊಮ್ಮೆ ಹಂಚುವ ಹಸುಗೆ ಕ್ರಮವೊಂದನ್ನು ಜ್ಯಾರಿಗೆ ತರಬೇಕಾಗಿಯೂ ಅದರಲ್ಲಿ ಕೇಳಿಕೊಳ್ಳಲಾಗಿದೆ.

ಪುತ್ತೂರು

ಸೆಂಟ್ರಲ್ ರೆವಿನ್ಯೂ ಬೋರ್ಡು ಆಫೀಸಿನ ಅಧಿಕಾರಿಗಳೊಬ್ಬರು ಇಲ್ಲಿಗೆ ಬಂದಿದ್ದು ಅಡಿಕೆ ಬೇಸಾಯಗಾರರ ಸಂಘದ ಪ್ರತಿನಿಧಿಗಳೊಡನೆ ಸದ್ರಿ ವ್ಯವಸಾಯದ ಕುರಿತು ಚರ್ಚೆ, ಪರಿಶೀಲನೆ ನಡಿಸಿದ್ದರು.

ತಾ: ೧—೪—೪೪ರ ಮೊದಲು ಸಿಪ್ಪೆಸಮೇತವಾಗಿ ವ್ಯಾಪಾರಿಗಳಿಂದ ಪಡಕೊಂಡಾಗಿದ್ದರೆ, ಅವನ್ನು ಆ ತಾರೀಕಿನ ಮೊದಲು ವಿಕ್ರಯವಾದುವುಗಳೆಂದು ಪರಿಗಣಿಸಲ್ಪಡುವುವು ಮತ್ತು ಅವು ಸುಂಕ ನಿಯಮದ ಹೊರಗಾಗುವವೆಂದು ಅಧಿಕಾರಿಗಳು ಒಪ್ಪಿರುವರಂತೆ.

ಸದ್ಯದ ವಿದ್ಯಮಾನಗಳು

ನಾರ್ವೆ ಬಳಿ ೪೫೦೦೦ ಟನ್ ಭಾರವನ್ನು ಹೊರುವ ಜರ್ಮನರ ಯುದ್ಧನಾವೆಯೊಂದು ಬ್ರಿಟಿಷ ನೌಕಾಪಡೆಯಿಂದ ಮುಳುಗಿಸಲ್ಪಟ್ಟಿತು. ಜರ್ಮನಿಯ ನೌಕಾಪಡೆಯು ಬರಿದಾಗುತ್ತಾ ಬರುತ್ತಿದೆ.

ಚರ್ಚಿಲ್ಲರು ಫ್ರಾನ್ಸಿಗೆ ತೆರಳಿದ್ದರು. ಅವರೊಡನೆ ಅವರ ಧರ್ಮಪತ್ನಿಯರು, ಬ್ರಿಟಿಷ ಬಹಿರ್ ವ್ಯವಹಾರ ಖಾತಾ ಕಾರ್ಯದರ್ಶಿಗಳಾದ ಎಂತೊನಿ ಏಡನ್ನರು ತೆರಳಿದ್ದರು. ಫ್ರೆಂಚರ ಪರವಾಗಿ ಡಿಗೋಲೆಯವರು, ಕೆಲವು ಕೋರಿಕೆಗಳನ್ನು ಮುಂದೆ ಹಾಕಿದ್ದರು, ಈ ಕುರಿತು ಮಾತುಕತೆಗಳು ನಡೆದು ಜರ್ಮನಿಯ ಆಕ್ರಮಣದಲ್ಲಿ ಫ್ರೆಂಚರಿಗೂ ಅವಕಾಶವಿರಬೇಕೆಂದು ನಿರ್ಣಯಗಳಾಗಿವೆ. ಫ್ರಾನ್ಸಿಗೆ ಮಿತ್ರರೊಡನೆ ಮಾನ್ಯಸ್ಥಾನವನ್ನು ದೊರಕಿಸಿಕೊಳ್ಳುವುದು ಡಿಗೋಲೆಯವರ ಧ್ಯೇಯವಿರುತ್ತದೆ.

ಹಿಂದೂದೇಶದ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿವಾರಿಸುವರೆ, ಯಾವತ್ತೂ ಪಕ್ಷದವರಲ್ಲದ ಮಹಾ ಪ್ರಭೃತಿಗಳಿರುವ ಸಮಿತಿಯೊಂದು ರಚನೆಯಾಗಬಹುದೆಂದು ನಿರೀಕ್ಷೆಗಳಿವೆ.

ವ್ಯಾಪಾರಸ್ಥರಿಂದ ವಸೂಲು ಮಾಡಿದ 'ಎಕ್ಸೆಸ್ ಪ್ರಾಫಿಟ್' ಅಧಿಕ ಲಾಭದ ಮೇಲೆ ಹೊರಿಸಿದ ಕಂದಾಯದಿಂದ ೫೦ ಲಕ್ಷ ರೂ.ಗಳನ್ನು ಬಡಬಗ್ಗರಿಗೆ ಉಪಕಿಮನ ದೊರಕಿಸಿಕೊಡುವ ಬಗ್ಗೆ ವಿನಿಯೋಗಿಸಬೇಕಾಗಿ ನಿಜಾಮರ ಸರಕಾರದ ನಿರ್ಣಯವಾಗಿರುತ್ತದೆ.

ಐಕ್ಯ ಸಾಧನೆಗಾಗಿ ರಾಷ್ಟ್ರೀಯ ಮುಸ್ಲಿಮರು ಹೊಸತೊಂದು ಉಪಾಯವನ್ನು ಹೂಡುವವರಿದ್ದಾರೆ. ಇವರು ಮುಂದೆ ಹಾಕಿದ ಸಲಹೆಗಳಿಗೆ ಮನ್ನಣೆ ದೊರಕಬಹುದೆಂದು ನಿರೀಕ್ಷೆಯಿದೆ.

ಜಗತ್ತಿನ ೫೧ ರಾಷ್ಟ್ರಗಳ ವ್ಯಾಪಾರಿಗಳ ಪ್ರತಿನಿಧಿಗಳು ಭಾಗವಹಿಸಿ ಅಂತರಾಷ್ಟ್ರೀಯ ವ್ಯಾಪಾರಿ ಪರಿಷತ್ತು ಜರಗಿತು. ಹಿಂದೂದೇಶದಿಂದಲೂ ಪ್ರತಿನಿಧಿಗಳು ಈ ಪರಿಷತ್ತಿಗೆ ತೆರಳಿದ್ದರು. ಈ ಪರಿಷತ್ತು ಸರಕಾರಗಳ ಅಧೀನ ನಡೆದುದಿಲ್ಲ. ವ್ಯಾಪಾರೀ ಪ್ರಪಂಚದಲ್ಲಿ ಉಂಟಾಗಬಹುದಾದ ತಿಕ್ಕಾಟ,—ಇತ್ಯಾದಿಗಳನ್ನು ನಿವಾರಿಸುವ ಕುರಿತು, ಇಲ್ಲಿ ಅನೇಕ ಸೂಚನೆಗಳು ಆಗಿವೆ.

ಹಿಂದೂದೇಶ ಔದ್ಯೋಗಿಕರಣವು ರಾಷ್ಟ್ರೀಯ ಸರಕಾರದ ಅಧೀನದಲ್ಲಿ ಯೋಜಿಸಲ್ಪಡುವುದು ಅಗತ್ಯವಿದೆ. ಸದ್ಯ ಆ ಕುರಿತು ಹೊರೆಡಿಸಲಾದ ಯೋಜನೆಯು ಶ್ರೀಮಂತರಿಗೆ ಲಾಭ ಮಾಡಿಕೊಡುವಂತಹುದು, ಅದರಿಂದ ಹಿಂದೂದೇಶದ ದರಿದ್ರರ ಸಮಸ್ಯೆಯು ಹೆಚ್ಚಿನ ಮಟ್ಟಿಗೆ ಸುಧಾರಿಸಲ್ಪಡುವದಾಗಿಲ್ಲ,—ಎಂಬುದಾಗಿ ಅನೇಕ ತಜ್ಞರ ಅಭಿಪ್ರಾಯವಿದೆ.

ಸಿಂಧದಲ್ಲಿ ಪಾಶ್ಚಾತ್ಯ ಜಮೀನ್ದಾರರೊಬ್ಬರು ಸರಕಾರದ ಮಂತ್ರಿಗಳಾಗಿರುವರು. ಅಲ್ಲಿನ ಸಕ್ಕರ್ ಪ್ರದೇಶದಲ್ಲಿ ಹಿಡುವಳಿಗಳನ್ನು ಪಡೆದ ಮಿ| ರೋಜರ್ ಥೊಮ್ಸನ್ನರು, ಈ ಮಂತ್ರಿಗಳು. ಆಫ್ರಿಕಾ ಅಸ್ಟ್ರೇಲಿಯಾ ಇತ್ಯಾದಿ ಕಡೆಗಳಲ್ಲಿ ಭಾರತೀಯರು ಭೂಮಿಯನ್ನು ಪಡಕೊಳ್ಳದ ಹಾಗೆ ಬಿಳಿಯರ ಶಾಸನಗಳಿದ್ದರೂ ಹಿಂದೂದೇಶದಲ್ಲಿ ಪಾಶ್ಚಾತ್ಯರಿಗೆ ಭೂಮ್ಯಾಲಿಕರಾಗಲು ಯಾವತ್ತು ಅಡ್ಡಿಗಳು ಇರುವುದಿಲ್ಲ!

ಕಾಸರಗೋಡು

ತಹಶೀಲ್ದಾರ್ ಶ್ರೀ| ಎಸ್. ಯು: ಪರುಶುರಾಮಸ್ವಾಯ್ಯರ ಅಧ್ಯಕ್ಷತೆಯಲ್ಲಿ ಆಹಾರ ಉತ್ಪನ್ನ ಸಮಿತಿಯೊಂದನ್ನು ನಿರ್ಮಿಸಲಾಗಿದೆ.

ಧರ್ಮಸ್ಥಳ

ಎಂದಿನಂತೆ ಇಲ್ಲಿ ದೀಪೋತ್ಸವಗಳು ಯಥಾಸಾಂಗವಾಗಿ ನಡೆದುವು.

ಧರ್ಮಸಮ್ಮೇಳನವೂ ಯಶಸ್ವಿಯಾಗಿ ಜರುಗಿತು. ಜಿಲ್ಲೆಯ ಅನೇಕ ಸಾಹಿತಿಗಳು ಸೇರಿದ್ದರು. ಪ್ರಯಾಣ ಸಂಕಷ್ಟಗಳಿದ್ದರೂ ಭಕ್ತಜನರು ಹೆಚ್ಚು ಸಂಖ್ಯೆಯಲ್ಲಿ ಸೇರಿದ್ದರು.

ಸಮ್ಮೇಳನದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿದ್ವಾನ್ ಶಾಂತಿರಾಜ ಶಾಸ್ತ್ರಿ ಮತ್ತಿತರರ ಬೋಧಪರ ಭಾಷಣಗಳಾದುವು.

ಭಾರತ ಆಫ್ರಿಕ ಯುದ್ಧ

(ಹಿಂದಿನ ಸಂಚಿಕೆಯಿಂದ)

ಗಳಲ್ಲವೆಂಬುದನ್ನು ನಮಗೆ ತೋರಿಸಿಕೊಡು ... ಬಡಿದು ... ನಮ್ಮ ಭಾವನೆಗಳಿಂದ ಏನೇನೂ ಪ್ರಯೋಜನವಿಲ್ಲ. ಸಂಯುಕ್ತ ರಾಷ್ಟ್ರಗಳಲ್ಲಿ ನಮ್ಮ ಸ್ಥಾನವು 'ನೀರು ತರುವ ಮತ್ತು ಮರ ಕಡಿಯುವ' ... ಯುದ್ಧ ಪ್ರಯತ್ನವು ನಮಗೆ ಬೇಕಾಗಿಲ್ಲ. ಬಿಳಿಯರ ಹಿತ ಪಾಲಿಸುವ ಪಕ್ಕತೆ ನಮಗೆ ಸರ್ವಥಾ ಬೇಕಿಲ್ಲ.

ನಮಗೆ ಸ್ವಾತಂತ್ರ್ಯವಿಲ್ಲವೆಂದು ಹೇಳಿ ನಾವು ಎಲ್ಲಾ ತರದ ಅಪಮಾನಗಳನ್ನು ಸಹಿಸಬೇಕೆ? ಹೆಸರಿಗೆ ನಾವು ಪ್ರತೀಕಾರ ಕೈಕೊಂಡು ಪ್ರಯೋಜನವಿಲ್ಲ.

ಭಾರತವು ಸಂಯುಕ್ತ ರಾಷ್ಟ್ರಗಳ ಯುದ್ಧ ಕ್ಷೇತ್ರವಾಗಿದೆ. ಇಂದು ಸಾರ್ವಭೌಮ್ಯ ಸರಕಾರದವರು ನಮ್ಮ ಮನವಿಗಳನ್ನು ತಿರಸ್ಕರಿಸಿದರೆ ನಾವು ಅವರಿಗೆ ಯಾವ ರೀತಿಯಲ್ಲಿಯೂ ಯುದ್ಧ ಸಹಾಯ ಕೊಡುವುದಿಲ್ಲವೆನ್ನೋಣ. ಈ ಪ್ರಯತ್ನದಲ್ಲಿ ಭಾರತೀಯರಾದ ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಗುವಿನ ಬೆಂಬಲ ಸಿಗುವುದೆಂದು ನಾನು ಭರವಸೆಕೊಡುತ್ತೇನೆ.

ಭೂಲಾಭಾಯಿ ದೇಸಾಯಿ: (ಕಾಂಗ್ರೆಸ್ ಪಕ್ಷ) ವ್ಯಾಪಾರದಮಟ್ಟಿಗೆ ಆಫ್ರಿಕವೇ ಹೆಚ್ಚಾಗಿ ನಮ್ಮ ದೇಶದ ಮೇಲೆ ಹೊಂದಿಕೊಂಡಿರಬೇಕಾಗುತ್ತದೆ. ನಮ್ಮ ಇಚ್ಛೆಗೆ ವಿರೋಧವಾಗಿ ನೀವು ಯುದ್ಧ ಪ್ರಾರಂಭಿಸಿದಿರಿ ಎಂದು ನಾವು ಹೇಳಿದಾಗ "ಅದು ನಿಮ್ಮ ರಕ್ಷಣೆಗಾಗಿಯೇ" ಎಂದು ಹೇಳಲ್ಪಟ್ಟಿತು. ಇಂದು ಆಫ್ರಿಕದಲ್ಲಿ ನೆಲೆನಿಂತ ಭಾರತೀಯರನ್ನು ಸಂಕಷ್ಟಕ್ಕೆ ತಳ್ಳಿದ ರಕ್ಷಣೆ ನಮಗೆ ಸಿಕ್ಕಿದೆ

...ಹೀಗೆ ಜೀವನದ ಜನಾಂಗದವರ ... ಎರಡೂ ಬಿಳಿಯರಲ್ಲಿ ಸುಳಿದಾಡುವುದಾದರೆ ಮುಂದೆಂದಿಗೂ ಜಗತ್ತಿಗೆ ಶಾಂತಿ ದೊರೆಯಲಾರದು. ... ನಿಚರೆಂಬ ಈ ಭಾವನೆಯು ಹೋಗಬೇಕು. ಎಲ್ಲಾ ಜನಾಂಗಗಳೂ ಸ್ವತಂತ್ರವಾಗಬೇಕು. ಇನ್ನು ಮುಂದೆ ಯುದ್ಧಾನಂತರದ ಪುನಾರಚನೆಯು ಆ ಮಂತ್ರವು ಈ ಎಸೆಂಬ್ಲಿಯ ಆವರಣದಲ್ಲಿ ಘೋಷಿಸಲ್ಪಡದಿದ್ದರೆ, ಈ ವರ್ಣದ್ವೇಷದ ಮೇಲೆ ಯಾವ ಪುನರ್ರಚನೆಯೂ ಸಾಧ್ಯವಿಲ್ಲ!

ಆಫ್ರಿಕದಲ್ಲಿ ಹಿಂದೀಯರ ಸಂಕಷ್ಟಗಳನ್ನು ನಿವಾರಿಸಲು ಪ್ರಯತ್ನಪಟ್ಟವರೆಂದರೆ ಮಹಾತ್ಮಾ ಗಾಂಧಿಯವರು ಮಾತ್ರ. ಅವರು ತಮ್ಮ ಪ್ರಯತ್ನದಲ್ಲಿ ಹೆಚ್ಚುಮಟ್ಟಿಗೆ ಯಶಸ್ವಿಯಾದಗಿದ್ದರು

ಹುಸೇನ್ ಭಾ ಲಾಲಜೀ. ಆಹಾರ ದೊರಕಿಸುವ ಮತ್ತು ಮನೆ ಕಟ್ಟುವ ತೊಂದರೆಗಳಿಗಾಗಿ ಹಿಂದೀಯರ ಮೇಲೆ ಈ ಕಾನೂನು ಜಾರಿಮಾಡಿರುತ್ತದೆಂದು ಅಲ್ಲಿನ ಸರಕಾರದವರು ಹೇಳಿದ್ದು ಶುದ್ಧ ಸುಳ್ಳೆನಿಸ ಕಾರಣವರ್ಷಕ್ಕೆ ೫೦೦ ಸಾವಿರ ಖಂಡಿ ಆಹಾರ ಪದಾರ್ಥಗಳನ್ನು ಹೊರಕ್ಕೆ ಕಳುಹಿಸುವ ಆಫ್ರಿಕದಲ್ಲಿ ಅಲ್ಲಿ ಪ್ರತಿ ವರ್ಷ ಬರುವ ೪ ಸಾವಿರ ಭಾರತೀಯರಿಗೆ ಆಹಾರ ಸಿಗಲಿಕ್ಕಿಲ್ಲವೆಂಬುದು ತೀರಾ ಅಬದ್ಧವಾದುದು

ಆಫ್ರಿಕದಲ್ಲಿರುವ ೨ ಲಕ್ಷ ಹಿಂದೀಯರನ್ನು ನಾವು ಹಿಂದಕ್ಕೆ ಕರೆಯೋಣ ನಮ್ಮ ದೇಶದಲ್ಲಿ ಈಗ ೭ ಲಕ್ಷ ಪರದೇಶಿಗಳೂ, ೨ ಲಕ್ಷ ಯುದ್ಧ ಕೈದಿಗಳಿರುವಾಗ ೨ ಲಕ್ಷ ನಮ್ಮ ಬಂಧುಗಳು ನಮಗೆ ಹೆಚ್ಚಲ್ಲ

ಬ್ರಿಟಿಷ್ ಸಾಮ್ರಾಜ್ಯದೊಳಗೇ ನಡೆಯುತ್ತಿರುವ ಈ ಹಿಟ್ಲರ್ ಧೋರಣೆಯನ್ನು ಮೊದಲು ನಾಶಮಾಡಬೇಕು

ಮಹಾತ್ಮ

(ರವೀಂದ್ರನಾಥ ಠಾಕೂರ್)

ರಾಜಕೀಯ ರಂಗದಲ್ಲಿ ಸಾಮಾನ್ಯ ಜನರಿಗಿಂತ ... ಶಕ್ತಿಯುಳ್ಳ ... ಕರ್ತರು ಯಾವಾಗಲೂ ಉದಯಿಸುತ್ತಾರೆ. ಅಂಥವರಲ್ಲಿ ಒಂದು ತರದ ದಿವ್ಯ ಶಕ್ತಿಯು ಇರುತ್ತದೆ. ಪಾಶವೀ ಶಕ್ತಿಗಿಂತಲೂ ಅದರ ಸಾಮರ್ಥ್ಯ ಹೆಚ್ಚು. ಮಾನವನ ಆಶೆ, ಅಂಜಿಕೆ, ಬಣ್ಣ ಹೆಮ್ಮೆ ಮೊದಲಾದವುಗಳ ಉಪಯೋಗವನ್ನು ಅವರು ಧಾರಾಳವಾಗಿ ಮಾಡಿಕೊಳ್ಳುತ್ತಾರೆ ಆದರೆ ಮಹಾತ್ಮ ಗಾಂಧಿಯವರು ಹಿಂದೀ ರಾಜಕೀಯ ರಂಗದಲ್ಲಿ ಉದಯಿಸಿ ಸ್ವಾತಂತ್ರ್ಯ ಮಾರ್ಗ ತೋರಿಸಿದಾಗ ಅವರಲ್ಲಿ ಇಂಥ ಯಾವ ಶಕ್ತಿಯು ಇದ್ದಿಲ್ಲ ಒತ್ತಾಯ ಮಾಡುವ ಅಧಿಕಾರವು ಸಹ ಅವರಲ್ಲಿರಲಿಲ್ಲ ಆದರೆ ಅವರ ವ್ಯಕ್ತಿತ್ವದ ವರ್ಚಸ್ಸು ಸಂಗೀತ ಸೌಂದರ್ಯಗಳಂತೆ ಅವರ್ಣನೀಯವಿತ್ತು ಆತ್ಮತ್ಯಾಗವೆಂಬ ಕಾರಂಜಿಯಿಂದ ಅದು ಹುಮ್ಮಿ ಬರುವುದರಿಂದ, ಅವರ ಪ್ರಭಾವವು ವಿಶೇಷವಾಗಿತ್ತು

ಮಹಾತ್ಮಾ ಗಾಂಧಿಯವರ ಯಶಸ್ಸಿನ ಗುಟ್ಟು, ಅವರ ಆಧ್ಯಾತ್ಮಿಕ ಶಕ್ತಿ ಹಾಗೂ ಅನಂತ ಸ್ವಾರ್ಥತ್ಯಾಗ ಇವುಗಳಲ್ಲಿದೆ ಸಾರ್ವಜನಿಕ ಕಾರ್ಯಕರ್ತರನೇಕರು ಸ್ವಾರ್ಥತ್ಯಾಗ ತ್ಯಾಗ ಮಾಡುತ್ತಾರೆ ಬಹಳ ಒಪ್ಪಿಕೊಡುವ ಬಂಡವಲು ಅದು ಎಂದು ತಿಳಿಯತ್ತಾರೆ ಆದರೆ ಮಹಾತ್ಮರ ಮಾರ್ಗವೇ ಬೇರೆ ಗಂಭೀರ್ಯದಲ್ಲಿ ಅವರು ಸಕಲರನ್ನೂ ಮೀರುತ್ತಾರೆ ತ್ಯಾಗವೇ ಅವರ ಜೀವನ ಅವರು ತ್ಯಾಗದ ಪ್ರತ್ಯಕ್ಷ ಮೂರ್ತಿ

ಅಧಿಕಾರದ ಮೇಲೆ ಅವರಿಗೆ ಅಭಿಲಾಷೆ ಇಲ್ಲ, ಉನ್ನತ ಸ್ಥಾನಮಾನ ಪತ್ರಗಳು ಬೇಡ ಹೆಸರು ಕೀರ್ತಿಗಳಂತೂ ಮೊದಲೆ ಬೇಕಾಗಿಲ್ಲ ಅಖಿಲ ಭರತಖಂಡದ ಸಿಂಹಾಸನವನ್ನು ಅವರಿಗೆ ಅರ್ಪಿಸಿದರೂ ಅದನ್ನವರು ಸ್ವೀಕರಿಸುತ್ತಾರೆ ಆದರೆ ಅದರ ವಜ್ರ-ವೈಡೂರ್ಯಗಳನ್ನು ಮಾರಿ ಬಡವರಲ್ಲಿ ಹಂಚಿಬಿಡುವರು

ಅವರ ಆತ್ಮವು ಪರರ ಸೇವೆ ಗೈಯಲು ಯಾವಾಗಲೂ ಹಾತೊರೆಯುತ್ತದೆ, ಮರುಳಿ ಏನನ್ನೂ ಕೃತಜ್ಞತೆಯನ್ನು ಸಹ ಬಯಸುವುದಿಲ್ಲ

ರಾಜರು ಮಹಾರಾಜರು, ತೋಪು ತುಪಾಕಿಗಳು, ತರಂಗವಾಸ ತಕ್ಕಗಳು ಅಪಮಾನ ಆರೋಪಗಳು ಅದೇಕೆ ಯಮನ ಪಾಶ ಸಹ ಅವರ ಆತ್ಮವನ್ನು ಎದೆಗುಂದಿಸುವುದಿಲ್ಲ

ಅವರದು ಉದಾರ ಜೀವನ. ನನ್ನ ಕುತ್ತಿಗೆಗೆ ಯಾರಾದರೂ ಉರಲು ಹಾಕಿದರೆ ಸಹಾಯಕ್ಕಾಗಿ ನಾನು ಕೂಗುತ್ತೇನೆ. ಆದರೆ ಗಾಂಧೀಜಿಯವರಿಗೆ ಉರುಲು ಹಾಕಿದರೆ ಅವರ ಕುಟ ಎರಡಾಗುವುದಿಲ್ಲವೆಂದು ನನಗೆ ವಿಶ್ವಾಸವಿದೆ. ಉರುಲು ಹಾಕುವವರನ್ನು ಕಂಡು ಅವರು ನಗಬಹುದು, ಮತ್ತು ಅವರು ಸಾಯಬೇಕಿದ್ದರೆ ಸ್ವಸಂತೋಷದಿಂದ ಪ್ರಾಣತ್ಯಾಗ ಮಾಡುವುದರಲ್ಲಿ ಸಂಶಯವಿಲ್ಲ

ಅವರ ಜೀವನದಲ್ಲಿ ತೋರಿಬರುವ ಸರಳತೆ ಹಸುಮಗುವಿನಂತಿದೆ, ಸತ್ಯಪ್ರತಿಜ್ಞೆ ಅಚಲವಿದೆ; ಮಾನವ ಕೋಟಿಯ ಮೇಲಿನ ಪ್ರೇಮವಂತೂ ಅಸದೃಶವಿದೆ. ಕ್ರಿಸ್ತನ ಜೀವನವೆ ಅವರಲ್ಲಿದೆ.

ಪ್ರಪಂಚದ ಭಾವೀ ಜೀವನ ನಿರ್ಮಾಣ ಕಾರ್ಯದಲ್ಲಿ ಈ ಮಹಾನುಭಾವನು ಪ್ರಮುಖ ಪಾತ್ರವಹಿಸುವದರಲ್ಲಿ ಸಂದೇಹವಿಲ್ಲವೇ ಇಲ್ಲ

ಅಧ್ಯಾತ್ಮ ಜೀವನದಲ್ಲಿ ವಿಶ್ವಾಸವನ್ನು ಹಿಂದುಸ್ಥಾನವು ಕಳೆದುಕೊಂಡಿಲ್ಲವೆಂದು ಜಗತ್ತಿಗೆ ತೋರಿಸಲು ಮಹಾತ್ಮರು ಕಾರಣರಾದುದಕ್ಕೆ ನಾವೆಲ್ಲರೂ ಅವರಿಗೆ ಅತ್ಯಂತ ಋಣಿಯಾಗಿರುವೆವು

ಅವರು ಒಂದ ದಿವ್ಯ ಜ್ಯೋತಿ, ಸರ್ವ ಸೃಷ್ಟಿಕರ್ತ ಮಹಾತ್ಮ, ಸಕಲ ಜನರ ಹೃದಯ ಸಿಂಹಾಸನದಲ್ಲಿ ವಿರಾಜಿಸುತ್ತಿರುವ ಮಹಾಪುರುಷ, ಅಂತಜ್ಞಾನ ಮತ್ತು ಪ್ರೇಮಗಳಲ್ಲಿ ಪ್ರಕಟವಾಗುವ ಮಹಾವ ಹಿಮ ಅವರನ್ನು ಅರಿತವರು ಅವರೇ ಸರಿ

ಸರ್ ರಾಜಾ ಅಲಿ (ಮುಸ್ಲಿಂ ಲೀಗ್) ಇದಕ್ಕೂ ಬ್ರಿಟನರೇ ಕಾರಣ ಎಂದು ತಿಳಿದಿದೆ ಆಫ್ರಿಕದಮಟ್ಟಿಗೆ ಹಕ್ಕಿಗಿಂತಲೂ ಶಕ್ತಿಯೇ ಬಲವೆಂದು ಗೊತ್ತಾಗುತ್ತದೆ

೧೯೨೬ರಲ್ಲಿ ಸರಕಾರದ ಚುನಾವಣೆಯಲ್ಲಿ ಭಾರತೀಯರಿಗೆ ಇದ್ದ ಹಕ್ಕನ್ನು ರದ್ದುಗೊಳಿಸಿ, ಅದನ್ನು ಬರೀ ಮುನ್ಸಿಪಲ್ ಚುನಾವಣೆ ಮಟ್ಟಿಗೆ ಇಳಿಸಲಾಯಿತು. ೧೯೩೯ರಲ್ಲಿ ಅದನ್ನೂ ಕಡಿಯಲಾಯಿತು. ನಂತರ ಇನ್ನೂ ಕಠಿಣ ಕಾನೂನುಗಳು ಮಾಡಲ್ಪಟ್ಟವು.

ಅವಳು ಒಳ್ಳೆ ಹಾರುವವಳು

ಗುರುತು ತಪ್ಪಿದ ಹಾಸ್ಯ

ನಮ್ಮ ದೇಶದಲ್ಲಿ ಆಳಿದ ಮೂರು ವ್ಹಾಯ್ ರಾಯ್‌ಗಳು (ಲಾರ್ಡ್ ರಿಪನ್, ಡಫರಿನ್ ಮತ್ತು ಲೆಂಡ್ಸ್‌ಡೌನ್) ಸೈನ್ಯ ಕಾರ್ಯದರ್ಶಿಗಳಾಗಿದ್ದ ಲಾರ್ಡ್ ವಿಲಿಯಮ್ ಬೆರಿಸ್‌ಫರ್ಡ್ ಎಂಬವರು ದೊಡ್ಡ ಅಶ್ವಪರೀಕ್ಷಕರು. ಒಳ್ಳೆ ಓಡುವ ಕುದುರೆಗಳನ್ನು ಎಂದರೆ ಅವರು ಸ್ವತಃ ಕೊಂಡುಕೊಳ್ಳುವರು

ಒಂದುಸಲ ಕಲ್ಕತ್ತದ ಜಾನ್ ರಾಲಿ ಎಂಬ ಕುದುರೆ ಪೋಷಕರು, ಅವರ ಪರೀಕ್ಷೆಗಾಗಿ ಒಂದು ಹೆಣ್ಣ ಕುದುರೆಯನ್ನು ಕಳುಹಿಸಿದರು ಲಾರ್ಡ್ ವಿಲಿಯಮ್ ಅವರು ಅದನ್ನು ಕೊಂಡ ಕೊಳ್ಳಲು ನಿರ್ಧರಿಸಿದರು

ಅಂದು ಸಾಯಂಕಾಲ ಜಾನ್ ರಾಲಿಯವರಂತೇ ಕಾಣುವ ಓರ್ವ ಗೃಹಸ್ಥರು ತನ್ನ ಸುಂದರ ಪತ್ನಿಯೊಂದಿಗೆ ತಿರುಗಾಡಲಿಕ್ಕೆ ಬಂದವರು ಲಾರ್ಡ್ ವಿಲಿಯಮ್ ಬಂಗಲೆ ಎದುರಿನಿಂದ ಹಾದ ಹೋಗುತ್ತಿದ್ದರು ರಾಲಿಯ ವರೆಂದೇ ತಿಳಿದು ವಿಲಿಯಮ್‌ರು ಅವರನ್ನುದ್ದೇಶಿಸಿ 'ಅವಳ (ಹೆಣ್ಣು ಕುದುರೆ) ಚಲೋದಾಗಿ ನೆಗೆಯುವವಳು' ಎಂದು ಹೇಳಿದರಂತೆ

ತನ್ನ ಹೆಂಡತಿಯ ವಿಷಯ ಲಾರ್ಡ್‌ರು ಹೀಗೆ ಟೀಕಿಸುತ್ತಿರುವರೆಂದು ತಿಳಿದು ಆ ಗೃಹಸ್ಥರು "ನೀವು ಶುದ್ಧ ಬಚ್ಚಾ ಗಳಯ್ಯಾ" ಎಂದರಂತೆ. ತನ್ನ ಬಳಿ ಕುದುರೆ ಕಳುಹಿಸಿಯೂ ಜಾನ್ ರಾಲಿಯು ಕುದುರೆ ವಿಷಯ ಹೇಳಿದ ಶ್ಲಾಘನೆಗಾಗಿ ತನಗೆ ಬೈಯುತ್ತಿರುವುದನ್ನು ಕೇಳಿ ವಿಲಿಯಮ್ ಅವರು ರಾಲಿಗೆ ಹುಚ್ಚುಹಿಡಿದಿರಬೇಕೆಂದು ತಿಳಿದುಕೊಂಡರಂತೆ. ತಪ್ಪು ಗುರುತಿನ ಒಂದು ವಿನೋದದ ಘಟನೆಇದು.

ಯುದ್ಧೋತ್ತರ ದಿನಗಳಿಗಾಗಿ

ಹಣ ಕೂಡಿಡಿ

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯ ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು

(1) ನಿಮ್ಮ ಕೂಡೆ ವಸ್ತುಗಳ ಅತ್ಯಧಿಕ ಸಂಚಯವಿದ್ದಲ್ಲಿ ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ

(2) ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು.

(3) ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಪರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಾಧ್ಯವಾಗಬಹುದು.

(4) ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಡಿ ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವಿಯೋಜನೆಗಳನ್ನು ಕಲ್ಪಿಸಬಹುದು

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ ಇಲ್ಲವಾದರೆ ಪ್ರೇರಣೆಗಳಿಗೆ ಅಥವಾ ಸಮಾಜದ ಒತ್ತರಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಜನಾಂಗಸಭೆ ಎಂತಹದಿರಬೇಕು?

ಶಾಸ್ತ್ರಿಗಳ ಶಾಂತಿಯೋಜನೆ

ಜನರು ಅಂತರಾಷ್ಟ್ರೀಯ ದೃಷ್ಟಿ ತಾಳಬೇಕು

"ಶೀಘ್ರ"ವಾಗಿ 'ಹೊಡೆಯುವ' ಶಕ್ತಿ ಇಲ್ಲದುದರಿಂದ 1919ರಲ್ಲಿ ಸ್ಥಾಪಿತವಾದ ಜನಾಂಗ ಸಭೆಯು ನಪುಂಸಕತ್ವ ತಾಳಬೇಕಾಯಿತು.

"ಡಂಬಾರ್ಟನ್ ಓಕ್ಸ್ ಮಂತ್ರಸಭೆಯಲ್ಲಿ ಪರ್ಯಾಲೋಚಿಸಲ್ಪಟ್ಟ ಜನಾಂಗ ಸಮಿತಿಯ ಅವಸ್ಥೆಯೂ ಅದೇಯಾಗುವುದು. ಕಾರಣ ಶಾಂತಿಭಂಗಮಾಡುವ ದಬ್ಬಾಳಿಕೆಗಾರರನ್ನು ದಂಡಿಸಲು ಅದು ತನ್ನ ಶಕ್ತಿಯ ಸಂಗ್ರಹಕ್ಕಾಗಿ ಇತರ ಶಕ್ತ ರಾಷ್ಟ್ರಗಳ ಸೈನ್ಯಪಡೆಗಳ ಮೇಲೆ ಹೊಂದಿಕೊಂಡಿರಬೇಕಾಗುತ್ತದೆ."

ಹೀಗೆಂದು ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಮದ್ರಾಸಿನಲ್ಲಿ ಒಂದು ಭಾಷಣದಲ್ಲಿ ತಿಳಿಸಿದರು.

"ಇಲ್ಲಿಯೂ ಒಂದು ದೊಡ್ಡ ತಪ್ಪನ್ನು ಮಾಡಲಾಗಿದೆ ಯುದ್ಧಪ್ರಿಯ ಮತ್ತು ಶಾಂತಿಪ್ರಿಯವೆಂದು ಜನಾಂಗಗಳಲ್ಲಿ ಎರಡು ಭೇದಗಳನ್ನು ಮಾಡಿಡಲಾಗಿದೆ. ಇದು ಶುದ್ಧ ತಪ್ಪು.

"ಒಂದು ಕಾಲದಲ್ಲಿ ಜಪಾನು ಶಾಂತಿಪ್ರಿಯ ಜನಾಂಗವೆಂದೆಣಿಸಲಾಗಿತ್ತು. ಇತ್ತೀಚೆಗಿನ ತನಕ ರಶ್ಯವು ಯುದ್ಧಪ್ರಿಯ ಕ್ರಾಂತಿಕಾರ ಜನಾಂಗವೆಂದು ಪರಿಗಣಿಸಲ್ಪಡುತಿತ್ತು. ಈಗ ಆ ಭಾವನೆ ಸರೀ ವಿರೋಧವಾಗಿದೆ ಇನ್ನು ಪುನಃ ಈ ಭಾವನೆಯು ಬದಲಾಗಲು ಐದು ವರ್ಷಗಿಂತಲೂ ಹೆಚ್ಚು ಸಮಯ ಹಿಡಿಯಲಿಕ್ಕಿಲ್ಲ."

ಜನಾಂಗಗಳನ್ನು ನಿಶಸ್ತ್ರ ಮಾಡಬೇಕು

ಈಗ ನಡೆಯುತ್ತಿರುವುದು ಒಂದು ದೊಡ್ಡ ಕಣ್ಣುಕಟ್ಟು ವಿದ್ಯೆ ಎಂಬರ್ಥದಲ್ಲಿ ಮಾತನಾಡುತ್ತಾ ಮಾನ್ಯ ಶಾಸ್ತ್ರಿಯವರು ಹೀಗೆಂದರು:

ವಿಶ್ವಮುಖಂಡರ ಮಾತುಕತೆಯಲ್ಲಿ ಭೂಷಣಕ್ಕಾಗಿ ಮಾತ್ರ ಚೀನಕ್ಕೆ ಸ್ಥಾನ ಕೊಡಲ್ಪಟ್ಟಿತ್ತು. ಆದರೆ ರಶ್ಯ ಮಾತ್ರ ಯಾರ ಮಾತನ್ನೂ ಕೇಳುವುದಿಲ್ಲ ತನಗೆ ಸರಿ ಕಂಡಂತೆ ವರ್ತಿಸುವುದೇ ತನ್ನ ಇಷ್ಟವೆಂದು ಅದು ತೋರಿಸಿದೆ. [ರಷ್ಯವು ಪೋಲೆಂಡನ್ನು ಬಿಟ್ಟುಕೊಡುವ ವಿಷಯವನ್ನೂ ಮಿತ್ರರ ಶತ್ರುವಾದ ಜಪಾನಿನ ಮೇಲೆ ಯುದ್ಧಸಾರದೆ ಇದ್ದ ವಿಷಯವನ್ನೂ ಇಲ್ಲಿ ನಿದರ್ಶನವಾಗಿ ತೆಗೆದುಕೊಳ್ಳಬಹುದು]

ಇಂಗ್ಲಿಷ್ ಭಾಷೆಯ ಬಂಧುಗಳಾದ ಬ್ರಿಟನ್ ಅಮೆರಿಕಗಳು ಇಂದು ಮಿತ್ರರಾಗಿದ್ದಹಾಗೆ ಇನ್ನೂ ಮುಂದೆಯೂ ಮಿತ್ರರಾಗಿರುವರೆಂದು ತಿಳಕೊಂಡಿರುವುದು ಸರಿಯಲ್ಲ. ದೊಡ್ಡ ದೊಡ್ಡ ಜನಾಂಗಗಳಲ್ಲಿ ಯಾವಾಗಲೂ ಪರಸ್ಪರ ವೈರವೈಷಮ್ಯಗಳು ಉಂಟಾಗುತ್ತಲೇ ಇರುತ್ತವೆ.

ಅನೇಕ ತರದ ಯಂತ್ರಗಳು ಕಂಡುಹಿಡಿಯಲ್ಪಟ್ಟಿರುವಂತೆ ಅವರು ರಾಜಿಪಂಚಾಯಿತಿಯ ಒಂದು 'ಯಂತ್ರ'ವನ್ನೂ ಸಂಶೋಧಿಸಲಿಚ್ಛಿಸಬಹುದು ಅದಾದರೂ ಬಲವಾಗಿಯೂ, ನಿಷ್ಪಕ್ಷಪಾತ ದೃಷ್ಟಿಯುಳ್ಳದ್ದೂ ಮತ್ತು ತ್ವರೆಯಾಗಿ ಕೆಲಸ ಮಾಡುವಂತೆಹದಿರಬೇಕೆಂದು ನಮ್ಮಿಚ್ಛೆ.

ಇನ್ನೂ ಇತರ ಅನೇಕ ಚಿಕ್ಕ ಚಿಕ್ಕ ಜನಾಂಗಗಳಿವೆ; ಇವು ಮುಖ್ಯವಾದ ಐದು (ಬ್ರಿಟನ್, ಅಮೆರಿಕಾ, ರಷ್ಯ, ಚೀನಾ, ಜರ್ಮನಿ) ದೊಡ್ಡ ಜನಾಂಗಗಳನ್ನು ಆಶ್ರಯಿಸಿಯಿರಬೇಕಾಗುತ್ತದೆ. ಆದರೆ ಅವು ಎಂದು ಯಾರೊಟ್ಟಿಗೆ ಮೈತ್ರಿ, ವೈಷಮ್ಯಗಳನ್ನು ತಾಳಬಹುದೆಂದು ಹೇಳಬರುವುದಿಲ್ಲ.

ಮುಂದೆ ರಚಿಸಲ್ಪಡುವ ವಿಶ್ವ ಶಾಂತಿ ಭದ್ರತೆಯ ಸಮಿತಿಗೆ ಬಲವಾಗಿ 'ಹೊಡೆಯುವ' ಶಕ್ತಿ ಬರಬೇಕಾದರೆ ಜಗತ್ತಿನ ಎಲ್ಲಾ ಜನಾಂಗಗಳೂ ನಿಶಸ್ತ್ರಗೊಳಿಸಲ್ಪಡಬೇಕು.

ಸ್ವಾರ್ಥಹಿತತ್ಯಾಗ ಮಾಡಬೇಕು!

ವಿಶ್ವ ಶಾಂತಿ ಇರಬೇಕಾದುದು ಅತ್ಯಾವಶ್ಯಕ ಆದರೆ ಈಗ ಮಾತುಕತೆ ನಡೆಸುವ ವಿಶ್ವ ಮುಖಂಡರು ತುಂಬಾ ಕೋಪ, ರಾಗ, ದ್ವೇಷಗಳಿಂದ ತುಂಬಿದ ವ್ಯಕ್ತಿಗಳಿರುವರೆಂದು ತೋರುತ್ತದೆ ನಾವೇ (ಮಿತ್ರರು) ನಿರಪರಾಧಿಗಳು, ಮತ್ತು ನೀತಿವರ್ತನೆಯುವರೆಂಬುದು ತಪ್ಪು.

ಕೊಲೆ ಪಾತಕರಿಗಾಗಿ ಬೇಟೆ ನಡೆಸುವುದು ತಪ್ಪುಕಾರ್ಯ ಜಗತ್ತಿನಲ್ಲಿ ಕೊಲೆಗೆಡುಕರು ಇದ್ದೇ ಇರುವರು ಈ ಉದ್ದೇಶಗಳನ್ನಿಟ್ಟುಕಂಡರೆ ವೈಷಮ್ಯವು ಹೆಚ್ಚಿ ಮುಂದಿನ ಶಾಂತಿಗೆ ಭಂಗಬಂದೇ ಬರುವುದು.

ಜರ್ಮನಿಗೆ ಶಿಷ್ಟಾಚಾರದ ಪಾಠಕಲಿಸುವ ಪ್ರಯತ್ನಕ್ಕಿಂತ ಕಾರ್ಯರೂಪವಾಗಿ ಮಿತ್ರರಾಷ್ಟ್ರಗಳೇ ನಿಶಸ್ತ್ರರಾಗಿ ಆದರ್ಶ ಕಲ್ಪಿಸಿಕೊಡುವುದು ಒಳಿತು ಇದರಿಂದ ಜಗತ್ತಿನ ರಾಷ್ಟ್ರಗಳ ಮೇಲೆ ಸತ್ಪರಿಣಾಮವಾಗಿ ಶಾಂತಿಯು ಚಿರವಾಗಿ ಬಾಳುವುದು

ಸದ್ಯದಲ್ಲೇ ಗೆಲ್ಲಲಿರುವ ರಾಷ್ಟ್ರಗಳಲ್ಲಿ ಯಾವೊಂದುತರದ ಸೌಹಾರ್ದದ ಚಿಹ್ನೆಗಳೂ ಕಂಡುಬರುವುದಿಲ್ಲ ಆದರ ಮುಖಂಡರುಗಳಲ್ಲಿ ಉತ್ಪನ್ನವಾದ ಪಾಶವೀ ಮನೋವಿಕಾರಗಳನ್ನು ನೋಡುವಾಗ ಅವು ಯಾವ ಶಾಂತಿ ಸಮಾಧಾನೆಯತ್ನಕ್ಕೂ ಸಹಕಾರಿಯಾಗುವಂತಹದೆಂದು ತೋರುವುದಿಲ್ಲ

ಇಡೀ ವಿಶ್ವವೇ ಒಂದು ಸಂಸಾರವೆಂದು ತಿಳಿದು, ಅವರು ತಮ್ಮ ಧೋರಣೆಯನ್ನು ತಿದ್ದಿಕೊಳ್ಳಬೇಕು ದುರ್ಬಲ ಜನಾಂಗಗಳನ್ನು ರಕ್ಷಿಸುವುದು ತಮ್ಮ ಕರ್ತವ್ಯವೆಂದು (ಸ್ವಸ್ವಾರ್ಥಕಲ್ಲ) ತಿಳಿದು ವರ್ತಿಸಿ ಜಗತ್ತಿನ ಜನಾಂಗಗಳಲ್ಲಿ ಭರವಸೆಯನ್ನುಂಟುಮಾಡಲು ಪ್ರಯತ್ನಿಸಿದರೆ ಬಹಳ ಚೆನ್ನಾಗಿತ್ತು

ಭಾರತದ ಸ್ಥಾನ

ನಮ್ಮಲ್ಲಿ ಪ್ರತಿಯೊಬ್ಬನೂ ಜಗತ್ತಿನ ನಾಗರೀಕ ಸದಸ್ಯನೆಂದು ಭಾವಿಸಬೇಕು. ಎಲ್ಲರೂ ದೇಶಪ್ರೇಮದಂತೆ ವಿಶ್ವಪ್ರೇಮವನ್ನೂ ಬೆಳೆಸಬೇಕು ನಮ್ಮ ಸಂಕಷ್ಟಗಳನ್ನು ವಿಶ್ವ ಜನತೆಯ ಪರಿಸ್ಥಿತಿಗನುರೂಪವಾಗಿ ದೃಷ್ಟಿಸಬೇಕು. ಕೆಲವುವೇಳೆ ನಾವು ನಮ್ಮ ಸ್ವಂತ ದೇಶದಹಿತಗಳನ್ನಾದರೂ ಲಕ್ಷಿಸಬಾರದು ವಿಶ್ವಹಿತಕ್ಕಾಗಿ ನಾವು ಪ್ರಯತ್ನಿಸಬೇಕು.

ನಾವು ಅಂತರರಾಷ್ಟ್ರೀಯಮನೋಭಾವವನ್ನು ತಾಳಬೇಕು. ಜಗತ್ತಿನ ಅನೇಕ ಕೇಂದ್ರಗಳಲ್ಲಿ ಬಲವಾದ, ವಿಶಾಲ ಮನೋಭಾವನೆಯ ಮತ್ತು ಸಕಲ ಜನಾಂಗಿಕರಿಂದ ನಿರ್ಮಿಸಲ್ಪಟ್ಟ ಸಂಸ್ಥೆಗಳಿರಬೇಕು. ಇವುಗಳ ಮೂಲಕ ಅಂತರಾಷ್ಟ್ರೀಯ ಮನೋಭಾವ ಪ್ರಚಾರವಾಗಬೇಕು.

ಸಿಹಿ ಸುದ್ದಿ ಸಂಗ್ರಹ

ತೂಗಾಡುವ ಲೋಹದುಪಕರಣದ ಬದಲಿಗೆ ಒಂದು ತರದ ಸ್ಫಟಿಕದ ಕಲ್ಲುಗಳ ಮೇಲೆ ಚಲಿಸುವ ಸಾಧನವನ್ನು ಉಪಯೋಗಿಸಿದರೆ ಗಡಿಯಾರಗಳು ಈಗಿನದಗಿಂತಲೂ ಸರಿಯಾಗಿ ಸಮಯ ಸೂಚಿಸುತ್ತವೆಯೆಂದು ಕಂಡುಹಿಡಿಯಲಾಗಿದೆ. ತೂಗಾಡುವ ಸಾಧನವಿದ್ದಾಗ ಗ್ರೀನ್‌ವಿಚ್ಚಿನ ಗಡಿಯಾರಗಳು ಮೂರುತಿಂಗಳಿಗೆ ೧ ಸೆಕುಂಡು ಹಿಂದೆಬೀಳುತಿದ್ದವಂತೆ. ಈಗ ಸ್ಫಟಿಕಕಲ್ಲಿನ ಹೊಸ ಉಪಕರಣದಿಂದ ೫॥ ವರ್ಷಕೊಮ್ಮೆ ೧ ಸೆಕುಂಡು ಕಮ್ಮಿಯಾಗುತ್ತದೆ.

* * *

ಫಿನ್‌ಲೆಂಡಿನಲ್ಲಿ ೧೮೨೬ರ ಲಾಗಾಯ್ತು ಇದುತನಕ ಒಬ್ಬನನ್ನೂ ಮರಣದಂಡನೆಗೆ ಗುರಿಮಾಡಿಸಲಾಗಲಿಲ್ಲ (ಸೈನ್ಯ ನಿಯಮ ತಪ್ಪಿದವರ ವಿಚಾರ ಬಿಟ್ಟರೆ)

* * *

ಕನ್ನ ಹೊಡೆಯುವ ಕಳ್ಳರ ಜೀವನವನ್ನು ಅಭ್ಯಾಸಿಸಿದವರೊಬ್ಬರು 'ಈ ಕಳ್ಳರು' ಹೆಚ್ಚು ಆಯುಸ್ಸುಳ್ಳವರಾಗುತ್ತಾರೆ ಎಂದು ಕಂಡುಹಿಡಿದಿದ್ದಾರೆ

* * *

ಜಗತ್ತಿನಲ್ಲಿ ಪ್ರತಿ ೧೧ ಸಾವಿರ ದಂಪತಿಗಳಲ್ಲಿ ೧ ಜೊತೆ ಮಾತ್ರ ೬೦ ವರ್ಷಗಳ ತನಕದ ದಾಂಪತ್ಯ ಜೀವನ ನಡೆಸಲು ಶಕ್ಯರಾಗುತ್ತಾರೆ

* * *

ನರ್ಮದಾ ನದೀ ತೀರದ ಮಂಡ್ಲಾ ಎಂಬಲ್ಲಿ ಒಂದು 'ಲಕ್ಷ ಚಂಡಿಕಾ ಯಜ್ಞ'ವು ನಡೆಯುತ್ತದೆ. ೧೦೪ ದಿವಸದ ಈ ಯಜ್ಞಕ್ಕೆ ಸುಮಾರು ೭ ಲಕ್ಷ ರೂಪಾಯಿ ಖರ್ಚು ತಗಲುತ್ತದೆ. ವಿಶ್ವಶಾಂತಿಗಾಗಿ ಇದು ನಡೆಸಲ್ಪಡುತ್ತದೆ ಹಿಂದೆ ಪಾಂಡವರು ಇದನ್ನು ಮಾಡಿದ್ದರಂತೆ ಮೌನ ತಾಳಿದ ಒಬ್ಬ ಸಾಧುಗಳು ಇದನ್ನು ಪ್ರಾರಂಭಿಸಿದರು

* * *

ಒಂದು ರಾತ್ತಲ್ ಭಾರವುಳ್ಳ ಜೇಡರ ಬಲೆಯನ್ನು ಒಟ್ಟು ಮಾಡಬೇಕಾದರೆ ೨೭ ಸಾವಿರ ಜೇಡರ ಹುಳುಗಳನ್ನು ಕೆಲಸಕ್ಕೆ ಹಿಡಿಯಬೇಕಾದೀತು

* * *

ಶೌರ್ಯಕ್ಕಾಗಿ ವಿಕ್ಟೋರಿಯಾ ಕ್ರಾಸ್ ಎಂಬ ಯುದ್ಧ ಪದಕಗಳನ್ನು ಪಡೆದ ಆಸ್ಟ್ರೇಲಿಯದ ೬೦ ಸೇನಾಧಿಕಾರಿಗಳಿಗೆ ಧರ್ಮಾರ್ಥ ಪ್ರಯಾಣಮಾಡಲಾಗುವ 'ಸೀಜನ್ ಟಿಕೇಟು'ಗಳನ್ನು ಕೊಡುವ ಯೋಜನೆಯಾಗಬಹುದಂತೆ

* * *

ವಿದ್ಯುಚ್ಛಕ್ತಿಯ ಸ್ಪರ್ಶದಿಂದ ಅಮೇರಿಕದ ಸಂಯುಕ್ತರಾಷ್ಟ್ರದಲ್ಲಿ ಪ್ರತಿ ವರ್ಷ ಸುಮಾರು ೧೫೦೦ ಜನರು ಸಾವಿಗೆ ತುತ್ತಾಗುತ್ತಾರೆ.

* * *

ಬಾಂಬು ಮತ್ತು ಫಿರಂಗಿಗಳ ಶಬ್ದದಿಂದ ಮೋಡಗಳಲ್ಲಿ ಕಂಪನವುಂಟಾಗಿ ಮಳೆ ಬರುತ್ತದೆಂದೂ, ಮಿತ್ರ ದಳಗಳು ಯುರೋಪಿನ ಮುತ್ತಿಗೆ ಪ್ರಾರಂಭಿಸಿದಾಗ ಮಳೆಬಂದು ಸ್ವಲ್ಪ ತೊಂದರೆಯುಂಟಾಗಲಿಕ್ಕೆ ಇದೇ ಕಾರಣವೆಂತಲೂ ಕೆಲವು ವಿಜ್ಞಾನಿಗಳ ಅಭಿಪ್ರಾಯ. ಮಿತ್ರ ಫಿರಂಗಿಗಳು ಗೋಣಗುಟ್ಟುವ ಮೊದಲೇ ಅಲ್ಲಿ ಮಳೆ ಇತ್ತೆಂದೂ ಬೇರೆ ಕೆಲವರ ಅಭಿಪ್ರಾಯ.

* * *

ಅಮೇರಿಕನ್ ಮತ್ತು ಬ್ರಿಟಿಷ್ ರಾಜ್ಯಾಂಗ ಪದ್ಧತಿಯ ಒಂದು ಶ್ಲಾಘನೀಯ ಗುಣಲಕ್ಷಣವೆಂದರೆ ಅವುಗಳ ನಾಗರೀಕರಿಂದ ಆಳಲ್ಪಡುವ ಪದ್ಧತಿ ವಿಶೇಷ ಇಂದು ಮಿತ್ರಸೈನ್ಯಗಳ ಮುಖ್ಯಾಧಿಕಾರತ್ವದಲ್ಲಿ (ಚರ್ಚಿಲ್, ರೂಸ್‌ವೆಲ್ಟ್) ನಾಗರೀಕ ಮುಖಂಡರಿರುವುದು ಸ್ತುತ್ಯ ಇದೇ ನಾಗರಿಕ ಆಡಳಿತ ನಿರ್ವಹಣಕ್ರಮವನ್ನು ಅಂತರಾಷ್ಟ್ರೀಯ ವ್ಯವಹಾರಕ್ಕೂ ಅನ್ವಯಿಸಿದರೆ ಲೋಕದಲ್ಲಿ ಶಾಂತಿಯು ಶಾಶ್ವತವಾಗಿ ನೆಲೆನಂತಾಗುತ್ತದೆ.

ಧೀರ ಪುರುಷ ವೀರ ಜವಾಹರ್

(೧ನೇ ಪುಟದಿಂದ)

-ಗಳಿವೆಯಾದರೂ ಅಂತ್ಯದಲ್ಲಿ ಜವಾಹರರ ಸೂಚನೆಯೇ ಸಿಂಧು" ಹೀಗೆ ಹೇಳಿ ಮಹಾತ್ಮರು ಅವರನ್ನು ಒಲಿಸಿಕೊಂಡಿದ್ದಾರೆ.

ಮಣ್ಣಿನಿಂದ ಮನುಷ್ಯರನ್ನೂ, ಹುಲ್ಲಿನಿಂದ ಬೃಹದ್ವ್ಯಕ್ತಿಗಳನ್ನೂ ಉಂಟುಮಾಡಬಲ್ಲ ಮಹಾತ್ಮರು ಜವಾಹರರನ್ನು ವಶಪಡಿಸಿಕೊಂಡದ್ದು ಭಾರತಕ್ಕೆ ಒಂದು ಶುಭ ಚಿಹ್ನೆ ಅವರು ಒತ್ತೊಟ್ಟಿಗೆ ಒಂದೇ ಧ್ಯೇಯಕ್ಕಾಗಿ ಇಂದು ಸಾಧಿಸುತ್ತಾರೆ. ಬೇದಗಳನ್ನೂ ತಿದ್ದಿ, ತಿದ್ದಿದ ಭೇದಗಳನ್ನು ಒಪ್ಪಿ ತರುಣ ನೆಹರುಗಳೂ ವೃದ್ಧ ಗಾಂಧಿಯವರೂ ಐಕ್ಯಮತ್ಯದಲ್ಲಿದ್ದಾರೆ. ಭದ್ರವಾಗಿಯೂ ವಿಶಾಲವಾಗಿಯೂ ಇರುವ ಬಯಲಲ್ಲಿ ಮೆಲ್ಲಗೆ ಆದರೆ ಮಹಾ ಶಕ್ತಿಯಿಂದ ಹರಿಯುವ ಗಾಂಧಿ ಎಂಬ ಗಂಗಾನದಿಗೆ, ರಭಸದಿಂದಲೂ ಬೋರ್ಗರೆಯುತ್ತಲೂ, ಭರದಿಂದ ಉಕ್ಕಿರಿಯುವ ಜವಾಹರರೆಂಬ ಯಮುನಾ ನದಿಯು ಕೂಡಿಕೊಂಡು ಎರಡೂ ಹರಿಯುತ್ತದೆ ಒಬ್ಬರು ಸೌಮ್ಯವಾದ ಅಹಿಂಸಾತ್ಮಕ ನೀರಿನಿಂದಲೂ, ಇನ್ನೊಬ್ಬರು ಭಯಂಕರ ಹಾನಿಕಾರಕ ಶಕ್ತಿಯ ನೊರೆ ನೀರಿನಿಂದಲೂ ತುಂಬಿದ್ದರೂ ಒತ್ತಟ್ಟಿಗೆ ಹರಿದು ಗುರಿ ಮುಟ್ಟುತ್ತವೆ

ಗಾಂಧಿಯವರು ಶಾಂತ ತಂಬೆಲರಾದರೆ, ಜವಾಹರರು ಬಿರುಗಾಳಿ ಮಹಾತ್ಮರು ಚಂದ್ರನಂತಿದ್ದರೆ ಸೂರ್ಯ ಪ್ರಭಾವದವರು ನೆಹರು ಪಟ್ಟಾಭಿ ಸೀತಾರಾಮಯ್ಯನವರು ಹೀಗೆನ್ನುತ್ತಾರೆ "ಅವರು ತಮ್ಮೊಳಗೆ ಎರಡು ತರದ ವಿರೋಧ ಶಕ್ತಿಗಳನ್ನು ಮಿಲನ ಮಾಡಿಕೊಂಡಿದ್ದಾರೆ. ವಿಜ್ಞಾನದೊಂದಿಗೆ ತತ್ವಜ್ಞಾನ, ಭೌತಿಕ ಶಕ್ತಿಯೊಂದಿಗೆ ಆತ್ಮ, ಶಕ್ತಿ, 'ಹಿಂಸೆಯೊಂದಿಗೆ 'ಅಹಿಂಸೆ' (ಹೀಗೆ ಹೇಳಬಹುದೆ?) ಹೀಗೆ ಒಂದರೊಳಗೊಂದು ಸಂಯುಕ್ತವಾಗಿವೆ"

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ

ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ

ದೊರಕುವ ಸ್ಥಳ.-ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

ಸೀಸದಿಂದ ಬಂಗಾರ ತೆಗೆಯಬಹುದು

ಕೆಲವು ಹಾಸ್ಯಮಯ ಶೋಧಗಳು

ಮಡಿಕು ಯಂತ್ರ

ಬೆಂಗಿಯಲ್ಲಿ ತಾಮ್ರ ನಾಣ್ಯ ಸುಟ್ಟು ಬಂಗಾರ ಮಾಡುವ ಅದ್ಭುತ ಶಕ್ತಿಯು ಕೆಲ ಸಾಧು, ಬೈರಾಗಿಗಳ ಕುರಿತು ನಾವು ಕೇಳಿದ್ದೇವೆ. ಮನುಷ್ಯ ಅಗಾಧ ಬುದ್ಧಿ ಶಕ್ತಿಯನ್ನು ವಿಚಿತ್ರ ಸಂಶೋಧನಾ ಕ್ಷೇತ್ರದಲ್ಲಿ ಉಪಯೋಗಿಸಿ ತಾವು ಕಂಡು ಹಿಡಿದ ಶೋಧಗಳನ್ನು ಸರಕಾರ ಮೂಲಕ 'ರಿಜಿಸ್ಟರ್' ಮಾಡಿದ ನಿದರ್ಶನಗಳು ಇಂಗ್ಲೆಂಡಿನ ಸರಕಾರ ಕಛೇರಿಯ ಕೆಲವು ದಾಖಲೆಗಳಲ್ಲಿ ಸಿಕ್ಕಿವೆ.

ಈ ಇಂಗ್ಲಿಷ್ ವಿಜ್ಞಾನಿಗಳು ಕಂಡು ಹಿಡಿದ ಕೆಲವು ಪ್ರಯೋಜನಕ್ಕೆ ಬಾರದ ಮತ್ತು ದ್ರಾವಿಡ ಪ್ರಾಣಾಯಾಮದಂತಿರುವ ಶೋಧಗಳ ವಿವರ ಕೆಳಗಿದೆ:

ಸಮುದ್ರದಲ್ಲಿ ಮುಳುಗಿದ ಹಡಗಗಳನ್ನು ನೀರನ್ನು ಗಟ್ಟಿ ಮಾಡುವುದರ ಮೂಲಕ ಅಪಾಯವಿಲ್ಲದಂತೆ ಮೇಲಕ್ಕೆತ್ತುವ ಒಂದು ಏರ್ಪಾಡು.

ಬೇಕಾದಾಗ ಕೋಳಿಗಳು ಮೊಟ್ಟೆ ಇಡುವಂತೆ ಮಾಡುವ ಒಂದು ಉಪಾಯ.

ಯುದ್ಧಕಾಲದಲ್ಲಿ ಚಾ, ಕಾಫಿಗಳು ಸಿಗದಿದ್ದರೆ ಅವುಗಳನ್ನು ಕೃತಕವಾಗಿ ರಾಸಾಯನಿಕ ದ್ರವಗಳಿಂದ ತಯಾರಿಸುವುದು, ಇದಕ್ಕೆ ಎಸೀಡುಗಳೂ, ವಿಷ ಉಪ್ಪುಗಳೂ ಬೇಕಾಗುತ್ತವೆ.

ಸುಳ್ಳು ಸಂಶೋಧಕ ಯಂತ್ರ

ಸಮುದ್ರ ನೀರಿನಿಂದ ಬಂಗಾರ ತೆಗೆಯುವ ಒಂದು ವಿಧಾನವೂ ರಿಜಿಸ್ಟರ್ ಆಗಿತ್ತು.

ಮಾತ್ರವಲ್ಲ ಕೆಲ ದಿನ ಗೋಧಿಯನ್ನು ತೊಟ್ಟಿಯ ಹಾಕಿದರೆ ಅದರಲ್ಲಿ ಕೆಳುವಾದ ಬಂಗಾರದ ಪದರುಗಳುತ್ಪನ್ನವಾಗುವುದನ್ನು ಶೋಧಿಸಿ ಚಿನ್ನ ಪಡೆಯುವ ಒಂದು ರೀತಿಯೂ ಇತ್ತು.

ಕೆಲಸ ಮಾಡುವಾಗ ಚುರುಟು, ಬೀಡಿ, ಸಿಗರೇಟುಗಳನ್ನು ಹಿಡಿದು ಕೊಳ್ಳುವ ಒಂದು ಉಪಕರಣ-ಇದನ್ನು ತಲೆಗೆ ಜೋಡಿಸಬೇಕು.

ಪ್ರಯಾಣಿಕರು ಬೆನ್ನು ಅಲ್ಲಾಡಿಸಿದರೆ ಚಲಿಸುವ ಒಂದು ಮೋಟಾರು ಯಂತ್ರ

ಭಾರವಾದ ಸಾಮಾನೊಂದನ್ನು ಹಿಂದಕ್ಕೂ ಮುಂದಕ್ಕೂ ಎಳೆಯುವುದರ ಮೂಲಕ ಯಂತ್ರ ಚಲಾವಣೆಯಾಗುವ ಒಂದು ಮೋಟಾರು' ಈಗಿನ ಕಾಲದಲ್ಲಿ ತುಂಬಾ ಸಹಾಯವಾಗುತಿತ್ತು'

ಹೊಸ ಬಂದೂಕು

ರಿಜಿಸ್ಟರ್ ಮಾಡಲ್ಪಟ್ಟ ಇತರ ವಿಚಿತ್ರ ಶೋಧಗಳು

ಊಟ ಮಾಡುವಾಗ ಬೆವರು ತೋಳಿನಿಂದ ಬೆರಳುಗಳಿಗೆ ಇಳಿಯದಂತೆ ಮಾಡುವ ಒಂದು ನಂಜು ಉಂಗುರ-ಇದನ್ನು ಕೈಗಂಟಿನ ಸುತ್ತ ಕಟ್ಟಿಕೊಳ್ಳುವುದು. ಬೆವರು ಸುರಿದಷ್ಟಕ್ಕೆ ಅದು ಹೀರಿಕೊಳ್ಳುವುದು.

ಕಟು ಔಷಧಗಳನ್ನು ರೋಗಿಗಳಿಗೆ ಕೊಡುವಾಗ ರುಚಿಕರವಾಗುವಂತಾಗುವ ಕಲ್ಲುಸಕ್ಕರೆಯಿಂದ ತಯಾರಿಸಿದ ಚಮಚಗಳನ್ನು ಒಬ್ಬನು ತಯಾರಿಸಿದ್ದನು.

ಗೊರಕೆ ಹೊಡೆಯುವವನನ್ನು ಎಬ್ಬಿಸುವ ಒಂದು ಇಲೆಕ್ಟ್ರಿಕ್ ಉಪಕರಣ.

ಆರೋಗ್ಯವಂತ ಸ್ತ್ರೀಯರ ತಲೆಕೂದಲನ್ನು ಬೇಯಿಸಿ ತೆಗೆದ ಒಂದು ರಸ: ಸಂಶೋಧಕನು ಇದರ ಬೆಲೆ ಸುಮಾರು 20 ರೂ. ಎಂದು ಹಾಕಿದ್ದನು.

1718ರಲ್ಲಿ ಓರ್ವ ಯಂತ್ರ ಶಿಲ್ಪಿಯು ತಾನು ತಯಾರಿಸಿದ ಒಂದು ತರದ ಬಂದೂಕನ್ನು ರಿಜಿಸ್ಟರ್ ಮಾಡಿದ್ದಾನೆ. ಇದು 'ರಿಜಿಸ್ಟರ್ ದಾಖಲೆ'ಯಲ್ಲಿ ಮೊದಲನೆಯದೆಂದೆನಿಸಿಯದೆ. ಇದರಿಂದ ಎರಡು ತರದ ಗುಂಡುಗಳನ್ನು ಹಾರಿಸಬಹುದು ಚೌಕಾಕೃತಿಯ ಗುಂಡುಗಳನ್ನು ಮುಸಲ್ಮಾನರಾದ ತುರ್ಕರ ಮೇಲೂ, ಉರುಟಾಕೃತಿಯವುಗಳನ್ನು ಕ್ರೈಸ್ತ ಜನಾಂಗಿಕರ ಮೇಲೂ ಹಾರಿಸಲಿಕ್ಕಾಗುತಿತ್ತು

ಚಂದ್ರಲೋಕಕ್ಕೆ ಪ್ರಯಾಣ

ವಿಜ್ಞಾನಿಗಳ ಬೃಹತ್ಸಾಧನೆ

80 ಸಾವಿರ ಮಣ ಭಾರದ ಆಕಾಶನಾವೆ

ದ್ರವೀಭೂತಗೊಳಿಸಿದ ಅಮ್ಲಜನಕ (ಒಕ್ಸಿಜನ್)ವನ್ನು ಉರಿಸಿ ಅದರ ಸ್ಫೋಟ ಶಕ್ತಿಯಿಂದ ಮೇಲಕ್ಕೆ ಒಯ್ಯಲ್ಪಡುವ ಆಕಾಶಬಾಣ ಪ್ರಯೋಗಗಳನ್ನು ಖಗೋಳ ವಿಜ್ಞಾನಿಗಳು, ರಾಸಾಯನಿಕ, ಮತ್ತು ಯಂತ್ರಶಿಲ್ಪ ವಿಜ್ಞಾನಿಗಳ ಸಹಾಯದಿಂದ ಮಾಡುತ್ತಿರುವರು

ಸದ್ಯದಲ್ಲೇ ಚಂದ್ರಲೋಕದಲ್ಲಿ ಇಳಿಯಲು ಸಾಧ್ಯವಾಗಬಹುದೆಂದು ಅವರ ಆಳವಾದ ವಿಶ್ವಾಸ ಆಗಲೇ ೬೦ ಮೈಲು ಎತ್ತರಕ್ಕೆ ಮುಟ್ಟಿ ಇಳಿಯುವ ಪ್ರಥಮ ಪ್ರಯೋಗಗಳಾಗುತ್ತಿವೆ

ಒಂದು ಕಾಲದಲ್ಲಿ ರೆಕ್ಕೆ ಬಾಂಬು ತಯಾರಿಸಿದ ಜರ್ಮನ್ ಯಂತ್ರನಿಪುಣ ಹರ್ಮನ್ ಒಬೆರ್ತನ ಸಹಾಯಕನಾಗಿದ್ದ ವಿಲಿಯಮ್ ಲೇ ಎಂಬವರು ಈ ನವೀನ ಪ್ರಯೋಗಗಳ ಕುರಿತು ಕೆಲವು ಸ್ವಾರಸ್ಯವಾದ ಅನುಭವಗಳನ್ನು ಬರೆದಿದ್ದಾರೆ

ಚಂದ್ರಮಂಡಳಕ್ಕೆ ಮುಟ್ಟಲು ೨೪೦ ಸಾವಿರ ಮೈಲುಗಳಿವೆ ಈಗ ರಚಿಸಲಾಗುವ ೮೦ ಸಾವಿರ ಮಣ ಭಾರವುಳ್ಳ ನಾವೆಯು ೪೪ ಗಂಟೆಗಳಲ್ಲಿ ಅಲ್ಲಿ ಮುಟ್ಟಬಹುದು ಭೂಲೋಕಕ್ಕೂ ಚಂದ್ರಲೋಕಕ್ಕೂ ನಡುವಿರುವ ವಾಯುರಹಿತ ಪ್ರದೇಶದಲ್ಲಿ ಈ ನಾವೆಯು ಗಂಟೆಗೆ ೨೦ ಸಾವಿರ ಮೈಲು ವೇಗದಲ್ಲಿ ಚಲಿಸುವುದು.

ಭೂಲೋಕದ ವಾತಾವರಣ ಮೇರೆಗಳನ್ನು ದಾಟುವಲ್ಲಿ ಆಕರ್ಷಣ ಶಕ್ತಿಯ ಪ್ರದೇಶವಿದೆ ಇಲ್ಲಿ ಮುಟ್ಟಿದ ವಸ್ತುಗಳು ಭೂಮಿಯ ಕಡೆಗೆ ಬಲವಾಗಿ ಎಳೆಯಲ್ಪಡುತ್ತವೆ ಈ ಆಕರ್ಷಣಶಕ್ತಿಯನ್ನು ದಾಟಬೇಕಾದರೆ ಆಗಗನ ನಾವೆಯು ವೇಗ ಗಂಟೆಗೆ ೨೫ ಸಾವಿರ ಮೈಲುಗಳಷ್ಟು ಇರಬೇಕು.

ಈ ಆಕಾಶ ಹಡಗದಲ್ಲಿ ಮೂರು ವಿಜ್ಞಾನಿಗಳು ಕುಳಿತುಕೊಳ್ಳುವರು. ಸೂರ್ಯನ ಉಜ್ವಲ ಕಿರಣಗಳನ್ನೂ, ಚಂದ್ರಲೋಕದ ಮರಗಟ್ಟಿಸುವ ಚಳಿಯನ್ನೂ ತಡೆಯಲು, ವಿಶೇಷತರದ ಉಡುಪು, ರಕ್ಷಣಾಕವಚಗಳನ್ನೂ ಧರಿಸಲಾಗುವುದು.

ಚಂದ್ರಪ್ರದೇಶಕ್ಕೆ ಮುಟ್ಟಿದೊಡನೆ ನಾವೆಯು ತನ್ನ ಹಿಂಬಾಗದ ಮೇಲೆ ಬಾಟ್ಲಿಯಂತೆ ನಿಲ್ಲುವುದು. ಆಮೇಲೆ ಒಳಗಿನ ವಿಜ್ಞಾನಿಗಳು ಭದ್ರವಾದ ನೀರುಕವಚದಿಂದ ಆವೃತ್ತರಾಗಿ ಚಂದ್ರನ ನೆಲದ ಮೇಲೆ ಇಳಿದು ಅಲ್ಲಿನ ವಿಚಿತ್ರಗಳನ್ನು ಪರೀಕ್ಷಿಸುವರು.

ಹಿಂತಿರುಗಿ ಬರುವಾಗ ಪುನಃ ಸ್ಫೋಟಕಾರಿ ಆಮ್ಲಗಳನ್ನು ಉರಿಸಿ ಭೂಮಿಗೆ ಬರಲಾಗುವುದು ಇಲ್ಲಿ ಮಾತ್ರ ವಿಜ್ಞಾನಿಗಳು ಆಕಾಶಕೊಡೆಗಳ ಮೂಲಕ ಕೆಳಗೆ ಹಾರುವರು.

ಈ ಕಾರ್ಯದಲ್ಲಿ ತತ್ಪರರಾಗಿದ್ದ ಖಗೋಳ ಶಾಸ್ತ್ರಿಗಳು ಗಂಭೀರ ಪ್ರಶಾಂತತೆಯಿಂದ ತಮ್ಮ ಶೋಧಗಳನ್ನೂ, ಯಂತ್ರ ನಿರ್ಮಾಣವನ್ನೂ ಮಾಡುತ್ತಿರುವರೆಂದು ಹೇಳಲ್ಪಟ್ಟಿದೆ.

ಸ್ವೀಕಾರ ಮತ್ತು ವಿಮರ್ಶೆ

ಶೂದ್ರಮುನಿ. ಸಿ ಕೆ ನಾಗರಾಜರಾವ್, ಪ್ರಕಾಶಕರು ಶರತ್ ಏಜನ್ಸೀಸ್, ಬೆಂಗಳೂರು ನಗರ, ಬೆಲೆ ಆರಾಣೆ

ಎರಡು ದೃಶ್ಯಗಳ ಏಕಾಂಕ ನಾಟಕ ಕೃತಾಯುಗದಲ್ಲಿ "ಶೂದ್ರರಿಗೆ ತಪಸ್ಸಿಗೆ ಅಧಿಕಾರವಿಲ್ಲವೆಂಬ ಹೇಳಿಕೆಗೆ ಅನುಸಾರವಾಗಿ ಶಂಭೂಕನ ತಪಸ್ಸು ಧರ್ಮವಿರುದ್ಧವೆಂದು ದೇವಋಷಿ ನಾರದರು, ರಾಜಪುರೋಹಿತರು, ಮೊದಲಾದವರು ಸಲಹೆ ಮಾಡಿದ ಮೇಲೆ ಅಯೋಧ್ಯಾಪತಿ ರಾಮಚಂದ್ರನು ಶಂಭೂಕನ ಶಿರಸ್ಸನ್ನು ಕಡಿದು ಹಾಕುತ್ತಾನೆ ಎಂಬ ರಾಮಾಯಣ ಉತ್ತರಾಕಾಂಡದ ಒಂದು ಸನ್ನಿವೇಶವು ಸ್ವಲ್ಪ ಬದಲಾವಣೆಯಾಗಿ ಇಲ್ಲಿ ಚಿತ್ರಿಸಲಾಗಿದೆ ಹಿಂದೂ ಧರ್ಮದ ಚತುರ್ವರ್ಣಗಳ ಕುರಿತು ಹಿಂದೂಗಳಲ್ಲಿ ತಪ್ಪು ತಿಳುವಳಿಕೆ ಹರಡಿದ ಈ ದಿವಸಗಳಲ್ಲಿ ಅದನ್ನು ನಿವಾರಿಸಿ, ಅದರ ಸ್ಥಳದಲ್ಲಿ ಸರಿಯಾದ ಜ್ಞಾನವನ್ನು ಮಾಡಿಕೊಡುವರೆ ಪ್ರಚಂಡ ಪ್ರಚಾರದ ಅವಶ್ಯವಿದೆ ಎಳೆಮಕ್ಕಳ ಶಾಲೆಗಳಲ್ಲಿ ಈ ಪ್ರಚಾರ ನಡೆಯಬೇಕು ಈ ಕಾರ್ಯಕ್ಕೆ ಈ ಗ್ರಂಥವು ತುಂಬಾ ಉಪಕಾರಿಯಾಗುವುದೆಂದು ನಮ್ಮ ಅಭಿಪ್ರಾಯ. ಭಾಷೆಯು ಸರಳವಿದೆ ಮಾತುಗಳು ಅರ್ಥಗರ್ಭಿತವಿವೆ. ಎಲ್ಲಾ ಶಾಲೆಗಳು ಕರಿಸಿಕೊಳ್ಳಬೇಕಾದ ಪುಸ್ತಕ

ಸಂಗಮ: ಸಿ ಕೆ ನಾಗರಾಜರಾವ್, ಪ್ರಕಾಶಕರು ಶರತ್ ಏಜನ್ಸಿ ಬೆಂಗಳೂರು ನಗರ, ಬೆಲೆ ಹನ್ನೆರಡಾಣೆ ಈ ಗ್ರಂಥವು ಸಂಗಮ, ಹರಿವ ನೀರು, ಕಡಳು, ಸುಮಿತ್ರ ಹೀಗೆ ನಾಲ್ಕು ಕಥೆಗಳ ಸಂಗ್ರಹ ಕಥೆಗಳು ಒಳ್ಳೆ ಸ್ವಾರಸ್ಯವಿವೆ. ನಮ್ಮ ಜೀವಮಾನದಲ್ಲಿ ನಮ್ಮ ಸುತ್ತಲೂ ನಡೆಯುವ ಕೆಲವು ಸನ್ನಿವೇಶಗಳ ಮೇಲೆ ಈ ಕಥೆಗಳು ಕಟ್ಟಲಾಗಿವೆ. ಕಥೆಗಳಲ್ಲಿ ನಮ್ಮ ಹೆಣ್ಣು ಮಕ್ಕಳಿಗೆ ಅನ್ಯಾಯಸುವಂತವುಗಳು ಹೆಣ್ಣುಮಕ್ಕಳಿಗೆ ಸಮಾಜದಲ್ಲಿ ಯಾವ ಸ್ಥಾನ ದೊರಕಬೇಕು, ಹೆಣ್ಣು ಮಕ್ಕಳ ಕುರಿತು,-ಇರುವ ಹೀನಭಾವನೆಯು ಹೋಗಬೇಕು, ಹೆಣ್ಣು ತನ್ನ ಮೌನದಿಂದ, ಶಾಂತತೆಯಿಂದ, ಸರಿಯದು ಸೌಹಾರ್ದತೆಯಿಂದ ಹುಟ್ಟಿಸಿ, ಎಲ್ಲವನ್ನೂ ಒಂದುಗೂಡಿಸುವಂತಾಗಬೇಕು ಎಂಬ ಈ ಕಥೆಗಳ ಉದ್ದಿಶ್ಯಸಾಧನೆಯು ಅವುಗಳಲ್ಲಿ ಯುಕ್ತರೀತಿಯಲ್ಲಿ ನಡೆದಿದೆಯಾಗಿ ಹೇಳಬಹುದು ಕಥೆಗಳು-ಓದುಗರಲ್ಲಿ ಮೇಲಿನ ಸಮಸ್ಯೆಗಳ ಕುರಿತು ವಿವೇಚನಾತರಂಗಗಳನ್ನು ಹೊರಡಿಸುತ್ತವೆ ಗ್ರಹಿಸು ಓದಬೇಕಾದ ಕಥೆಗಳು

ಗೋದಿ

ನಮ್ಮ ಜಿಲ್ಲೆಯಲ್ಲಿ ಹಂಚಲು ೧೩೩೧೧೧ ಗೋಣಿ ಗೋದಿಯು ತಯಾರಿವೆ ಪ್ರಾಂತ್ಯ ಜನರು ಕಡ್ಡಾಯವಾಗಿ ಗೋದಿಯನ್ನುಪಯೋಗಿಸುವಂತೆ ಸರಕಾರವು ಚಳವಳನಡೆಸಲು ಪ್ರಯತ್ನಪಡುತ್ತದೆ. ಬೆಣ್ಣೆ ತುಪ್ಪದೊಂದಿಗೆ ತಿಂದರೆ ಮಾತ್ರ ಗೋದಿಯು ದೇಹಕ್ಕೆ ಉತ್ತಮವಾಗಿದ್ದರೂ, ಅದರಿಂದ ಕಂಡದಮೇಲೆ ಸುಟ್ಟು ಮಾಡುವ ರೊಟ್ಟಿಗಳು ಒಳ್ಳೇ ಆಹಾರವಿರುತ್ತದೆಂದು ಒಂದು ಖ್ಯಾತಿ

ಅಖಂಡ ಹಿಂದೂಸ್ಥಾನ

ದೇಶೀಯ ರಾಜರ ಧೋರಣೆ

ಅದನ್ನು ಬದಲಿಸಬೇಕು.

(ಅದರಿಂದ ಪ್ರಜಾಪ್ರಭುತ್ವ ತತ್ವಗಳಿಗನುಸಾರವಾಗಿ ದೇಶೀಯ ರಾಜರು ತಮ್ಮ ಧೋರಣೆಯನ್ನು ಬದಲಿಸಿದ್ದರೆ ಅಖಂಡತೆ ಸಂಭವಿಸಬಹುದು” ಹೀಗೆಂದು ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಮದ್ರಾಸಿನಲ್ಲಿ ಒಂದು ಭಾಷಣ ಕೊಟ್ಟಾಗ ಹೇಳಿದರು.

“ಉತ್ತರ ಮತ್ತು ಪಶ್ಚಿಮ ಭಾರತದ ಕೆಲವು ಪ್ರದೇಶಗಳು ಪ್ರತ್ಯೇಕವಾದರೂ ದೇಶೀಯ ಸಂಸ್ಥಾನಗಳು ಬ್ರಿಟಿಷ್ ಇಂಡಿಯಾದೊಡನೆ ಸಹಕರಿಸಿ ಅಖಿಲ ಭಾರತದ ಅಖಂಡತೆಯನ್ನು ಕಾಪಾಡಬಹುದು.

“೧೯೩೫ರಲ್ಲಿ ಜಾರಿಗೆ ಬಂದ ಪ್ರಾಂತೀಕ ಸ್ವಾಯತ್ತತೆಯ ಪದ್ಧತಿಯು ಬ್ರಿಟಿಷ್ ಇಂಡಿಯಾದ ಪ್ರಜೆಗಳಿಗೆ ಮಾತ್ರ ಸ್ವಲ್ಪ ಮಟ್ಟಿನ ಸ್ವಾತಂತ್ರ್ಯ ಕೊಟ್ಟಿತಲ್ಲದೆ, ದೇಶಿ ಸಂಸ್ಥಾನಗಳ ಪ್ರಜೆಗಳಿಗೆ ಅದರಲ್ಲಿ ಬಿಡುಗಡೆ ದಾರಿ ಇರಲಿಲ್ಲ.”

ಸಂಸ್ಥಾನಗಳ ಹೆಚ್ಚಿನ ಭಾಗಗಳು ಬಿಟ್ಟು ಹೋದರೆ ಪಾಕಿಸ್ತಾನ್ ಯೋಜನೆದಾರರು ತಮ್ಮ ಪಕ್ಷ ಧೋರಣೆಯನ್ನು ಬದಲಿಸುವವರಾಗಲು ಶಕ್ಯವಿದೆ— ಅಲ್ಲ. ಇನ್ನು ಮುಂದೆ ಹಾಗಾಗುವುದು ಸಂಭವವಿಲ್ಲ.

“ದೇಶಿ ಸಂಸ್ಥಾನಗಳು ನಿರತವಾಗಿ ಬ್ರಿಟಿಷ್ ದಂಡುಗಳ ರಕ್ಷಣೆಯಲ್ಲಿರುವುದು ಸರಿಯಲ್ಲ. ಅವರು ತಮ್ಮ ಸ್ವಂತ ಇಲ್ಲವೆ ಅಖಂಡ ಭಾರತದ ಕೇಂದ್ರ ಸೈನ್ಯದ ಮೇಲೆ ಹೊಂದಿಕೊಂಡಿರಬಹುದು.”

ಸರ್ ಅಲ್ಲಾಡಿಯವರ ಭಾಷಣದ ಬೇರೆ ಕೆಲವು ವಿಶೇಷ ವಿಷಯಗಳು ಹೀಗಿದ್ದುವು:

ದೇಶಿ ರಾಜರುಗಳ ಒಂದು ಸಂಘವಾಗಿದೆ. ಆದರೆ ಇದರಿಂದ ಸಮಸ್ತ ಭಾರತದ ಐಕ್ಯತೆಗೆ ಸಹಾಯವಾಗಲಿಲ್ಲ.

ದೇಶಿ ರಾಜರು ತಮ್ಮ ಸ್ಥಾನಮಾನಗಳಿಗಿಂತ ಅಖಂಡ ಭಾರತದ ಐಕ್ಯತೆಯು ಪ್ರಾಮುಖ್ಯವೆಂದು ತಿಳಿಯಬೇಕು. ಅವರು ಆ ಐಕ್ಯತೆಗಾಗಿ ಉತ್ಸಾಹದಿಂದ ಸಾಧಿಸಬೇಕು. ಪ್ರಜಾಪ್ರತಿನಿಧಿ ಪದ್ಧತಿಯನ್ನು ಅವರು ಅನುಸರಿಸಬೇಕು.

ಭಾರತವು ತುಂಡುತುಂಡಗಳಾಗಿ ವಿಭಾಗಿಸಲ್ಪಟ್ಟರೆ ಇಡೀ ಜನಾಂಗದ ವ್ಯವಹಾರ ಪ್ರಗತಿಗಳಿಗೆ ಅದರಿಂದ ದೊಡ್ಡ ಹಾನಿ ಸಂಭವಿಸುತ್ತದೆ.

ಬ್ರಿಟಿಷ್ ಇಂಡಿಯಾದ ಮತ್ತು ದೇಶಿ ರು ತಮ್ಮ ಪಕ್ಷ ಧೋರಣೆಯನ್ನು ಬದಲಿಸುವವರಾಗಲು ಶಕ್ಯವಿದೆ—

ಬ್ರಿಟಿಷ್ ಆಡಳಿತಗಾರರು ಸ್ವಾತಂತ್ರ್ಯ ಕೊಡುತ್ತೇವೆ ಎಂದು ಹೇಳುವುದು ಬರಿ ಬಾಯಿ ಮಾತು ಎಂದುಕೊಂಡು ಭರವಸೆ ತಾಳದೆ ಇದ್ದ ನಮ್ಮ ರಾಜಕೀಯ ಮುಖಂಡರು ಸುಮ್ಮನಿರಬಾರದು. ಕೊಟ್ಟ ಮಾತನ್ನು ತಪ್ಪದೆ ನಡೆಸುವಂತೆ ಮಾಡಲು ನಾವು ಪ್ರಯತ್ನಿಸಬೇಕು.

ಬ್ರಿಟಿಷರು ಏನು ಮಾಡಬೇಕು?

ದೇಶಿ ದಿವಾನರ ಅಭಿಮತ

ಕಾಶ್ಮೀರದ ದಿವಾನರಾಗಿದ್ದ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಅದೇ ಸಭೆಯಲ್ಲಿ ಅಧ್ಯಕ್ಷ ಭಾಷಣ ಕೊಡುತ್ತಾ ಹೀಗೆಂದರು:—

ದೇಶೀಯ ರಾಜರ ಮೇಲೆ ಬ್ರಿಟಿಷ್ ಸರಕಾರಕ್ಕೆ ಸಂಪೂರ್ಣ ಅಧಿಕಾರವಿದೆ. ಸಂಸ್ಥಾನಗಳೊಂದಿಗೆ ಅವರಿಗಿರುವ ಒಪ್ಪಂದ ಕರಾರುಗಳನ್ನು ಅಖಂಡ ಹಿಂದೂಸ್ಥಾನದ ದೃಷ್ಟಿಯಿಂದ ಸುಧಾರಿಸಿಕೊಳ್ಳಲು ಸಾಧ್ಯವಿದೆ.

ಗಾಂಧಿ ಜಿನ್ನರು ಪಾಕಿಸ್ಥಾನ ಮಾತುಕತೆ ನಡೆಸುವಾಗ ದೇಶಿ ಸಂಸ್ಥಾನ ಪ್ರಜೆಗಳ ಹಕ್ಕು ಸ್ವಾತಂತ್ರ್ಯಗಳ ಕುರಿತು ಗಮನಿಸದಿದ್ದುದು ಖೇದ ವಿಷಯವೆನ್ನಬೇಕು. ದೇಶದೊಳಗಿನ ರಾಜಕೀಯ ಪಕ್ಷಗಳು ಒಮ್ಮತದ ನಿರ್ಣಯಕ್ಕೆ ಬಂದು ಒಂದು ಸರ್ವಸಮ್ಮತವಾದ ರಾಜ್ಯಾಂಗ ಪದ್ಧತಿಗೆ ಒಪ್ಪಿದರೆ ಮಾತ್ರವೆಂಬ ಶರ್ತದ ಮೇಲೆ ಬ್ರಿಟಿಷರು ನಮಗೆ ಸ್ವಾತಂತ್ರ್ಯ ಕೊಡಬಹುದೆಂದು ಒಪ್ಪುತ್ತಾರೆ.

ಇದು ತನಕ ರಾಜಕೀಯ ಪಕ್ಷಗಳು ಯಾವುದೊಂದು ತರದ ಒಪ್ಪಂದಕ್ಕೆ ಬರ

ಈಗ ಬ್ರಿಟಿಷರು ತಮ್ಮ ಸ್ವಂತ ರಚನೆಯ ಒಂದು ಆಡಳಿತ ಕ್ರಮವನ್ನು ಘೋಷಿಸಬೇಕು. ನಾವು ಭಾರತೀಯರು—ನಮ್ಮೊಳಗೆ ಅದೆಷ್ಟು ವ್ಯತ್ಯಾಸ ಭೇದಗಳಿದ್ದರೂ—ಅದನ್ನು ನಿರ್ವಹಿಸಲು ಪ್ರಯತ್ನ ಮಾಡುತ್ತೇವೆ.

ನಾವು ನಮ್ಮೊಳಗೆ ಜಗಳವಾಡಿಯಾದರೂ ನಮ್ಮ ದೇಶದ ಸುಧಾರಣೆ ಮಾಡಲು ಪ್ರಯತ್ನಿಸುವೆವು. ಅದರಿಂದಲೇ ನಾವು ತೃಪ್ತಿಪಡೆಯುತ್ತೇವೆ.

ಸರ್ ಸ್ಟಾಫರ್ಡ್ ಕ್ರಿಪ್ಸರು ಇನ್ನೂ ಸ್ವಲ್ಪ ಹೆಚ್ಚು ಸಮಯ ಇಲ್ಲಿರುತ್ತಿದ್ದರೆ ಖಂಡಿತವಾಗಿಯೂ ದೇಶಿ ರಾಜರು ಅಖಿಲ ಭಾರತ ರಾಜ್ಯಾಂಗ ಮಂಡಳಕ್ಕೆ ಸೇರುತಿದ್ದರು. ಅದರಲ್ಲಿ ಯಾವ ಕುಂದುಗಳಿದ್ದರೂ ತಾನದಕ್ಕೆ ಒಪ್ಪುವೆನೆಂದು ಕಾಶ್ಮೀರದ ಮಹಾರಾಜರು ಕ್ರಿಪ್ಸರು ಬರುವ ಮೊದಲೇ ಘೋಷಿಸಿದ್ದರು.

ಬ್ರಿಟಿಷ್ ಸರಕಾರವು ದೇಶಿರಾಜರು ಈ ಅಖಿಲಭಾರತ ರಾಜ್ಯಾಂಗ ರಚನೆಗೆ ಒಪ್ಪುವಂತೆ ಒತ್ತಾಯ ಮಾಡಿದರೆ ಮಾತ್ರ ಅವರಿಗೆ ನಿಜವಾದ ಹಿತದೃಷ್ಟಿ ಇದೆ ಎಂದು ವ್ಯಕ್ತವಾಗುತ್ತದೆ.

ತಮ್ಮಲ್ಲಿ ಇಷ್ಟು ಪ್ರಭಾವವಿದ್ದರೂ ಬ್ರಿಟಿಷ್ ರಾಜಕೀಯ ಮುಖಂಡರು ಅದನ್ನು ಉಪಯೋಗಿಸದಿದ್ದರೆ ಅವರು ನಿಜವಾಗಿ ಕೊಟ್ಟ ಭಾಷೆ ಇಟ್ಟುಕೊಳ್ಳುವವರಲ್ಲವೆಂದು ಸ್ಪಷ್ಟವಾಗುತ್ತದೆ.

ಕ್ರಿಪ್ಸ್ ಯೋಜನೆಯನ್ನು ಈಗಲಾದರೂ ಅವರು ಜಾರಿಗೆ ತಂದು ದೇಶದ ಐಕ್ಯತೆಯನ್ನು ಸಾಧಿಸಬಹುದು.

ಆಹಾರ ಮತ್ತು ಕೃಷಿ ಸುಧಾರಣೆ

ಒಂದು ಅಂತರಾಷ್ಟ್ರೀಯ ಸಮಿತಿ

ಭಾರತವೂ ಭಾಗವಹಿಸುವುದು

ನಾಲ್ವತ್ತನಾಲ್ಕು ಜನಾಂಗಗಳ ಪ್ರತಿನಿಧಿಗಳಿಂದ ಅವಶ್ಯವೆಂದು ಸಾರಲ್ಪಟ್ಟ ಒಂದು ಅಂತರಾಷ್ಟ್ರೀಯ ಕೃಷಿ ಮತ್ತು ಆಹಾರ ಸಂಬಂಧ ಯೋಜನೆಯನ್ನು ಮಿತ್ರ ಜನಾಂಗದ ಸರಕಾರಗಳು ಸದ್ಯದಲ್ಲೇ ಸ್ವೀಕರಿಸಲಿರುವವು.

ಇಂಡಿಯಾ ಸರಕಾರದವರೂ ಅದರಲ್ಲಿ ಭಾಗವಹಿಸಿ ಅದರ ಸೂಚನೆಗಳನ್ನು ಅನುಸರಿಸುವರೆಂದು ತಿಳಿದುಬಂದಿದೆ. ಆ ಯೋಜನೆಯು ಹೀಗಿದೆ:—

(1) ಜಗತ್ತಿನ ಜನರಿಗೆ ಸತ್ವಭರಿತವಾದ ಆಹಾರ ಪದಾರ್ಥಗಳನ್ನು ಪೂರೈಸುವುದು. ಮತ್ತು ಅವರ ಜೀವನ ಮಟ್ಟವನ್ನು ಏರಿಸುವುದು.

(2) ಆಹಾರ ಮತ್ತು ಕೃಷಿ ಉತ್ಪತ್ತಿಯ ಪದಾರ್ಥಗಳನ್ನು ಎಲ್ಲರಿಗೂ ಯೋಗ್ಯವಸ್ಥೆಯ ಮೂಲಕ ಸಿಕ್ಕುವಂತೇರ್ಪಡಿಸುವುದು.

(3) ಹಳ್ಳಿ ಜನರ ಪರಿಸ್ಥಿತಿಯನ್ನು ಸುಧಾರಿಸುವುದು.

(4) ಇದರ ಮೂಲಕ ಜಗತ್ತಿನ ಬಡತನವನ್ನು ಸುಧಾರಿಸಲು ಪ್ರಯತ್ನಿಸಲಾಗುವುದು.

ಇಪ್ಪತ್ತು ಜನಾಂಗಗಳು ಸಮ್ಮತಿಪಟ್ಟ ಕೂಡಲೇ ಈ ಸಮಿತಿಯ ಧ್ಯೇಯ ಧೋರಣೆಗಳು ಕಾರ್ಯರೂಪಕ್ಕೆ ತರಲ್ಪಡುವವು.

ಕೃಷಿ ಸಂಬಂಧವಾದ ವಸ್ತುಗಳ ಉತ್ಪತ್ತಿ, ಮಾರಾಟ, ಪೂರೈಕೆಗಳ ವಿಷಯ ಮೇಲ್ಕಂಡ ಸಮಿತಿಯು ಸಹಾಯ ಮಾಡುವುದು. ಮೀನುಗಾರಿಕೆ, ಕಾಡು ಉತ್ಪತ್ತಿಗಳ ವಿಚಾರದಲ್ಲೂ ಯೋಗ್ಯ ಸುಧಾರಣೆ ಅಭಿವೃದ್ಧಿ ಮಾರ್ಗಗಳನ್ನು ಸಂಶೋಧಿಸಲಾಗುವುದು.

ಜಗತ್ತಿನ ಶಾಂತಿಗಾಗಿ ಪ್ರಯತ್ನಿಸುವ ಪ್ರತಿಯೊಂದು ಅಂತರಾಷ್ಟ್ರೀಯ ಸಂಸ್ಥೆಯೊಡನೆ ಈ ಸಮಿತಿಯು ಸಹಕರಿಸಿ ಕೆಲಸ ಮಾಡುವುದು.

ಅಂದಾಜು ಖರ್ಚು

ಈ ಸಮಿತಿಯನ್ನು ಸ್ಥಾಪಿಸಲು ಪ್ರಥಮದಲ್ಲಿ 1 ಕೋಟಿ ರೂಪಾಯಿಗಳ ಮೂಲಧನ ಬೇಕು. ನಂತರದ ನಾಲ್ಕು ವರ್ಷಗಳಲ್ಲಿ ಪುನಃ 1 ಕೋಟಿ ರೂಪಾಯಿ ಬೇಕಾಗುವುದು. ಪ್ರಾರಂಭದ ಹಣದ ಹೆಚ್ಚಿನ ಅಂಶವನ್ನು ಬ್ರಿಟನ್, ಅಮೆರಿಕಾ ರಷ್ಯಾಗಳು ವಹಿಸುವವು. ಚೀನಾ, ಭಾರತ ಮೊದಲಾದುವುಗಳೂ ಸ್ವಲ್ಪ ಸ್ವಲ್ಪ ಅಂಶವನ್ನು ತೆರುವವು.

ವಿಶ್ವಸಮಿತಿಯೊಂದು ಇಷ್ಟು ಕಮ್ಮಿ ಖರ್ಚಿಗೆ ಕಾರಣವೆಂದರೆ ಅದು ತನ್ನ ಸದಸ್ಯ ಜನಾಂಗಗಳು ಕೈಗೊಳ್ಳುವ ಯೋಜನೆಗೆ ಸಲಹೆ ಸಹಾಯಗಳನ್ನು ಮಾತ್ರ ನೀಡುವ ಮಾರ್ಗದರ್ಶಿ ಸಂಸ್ಥೆಯಾಗಿರುವುದರಿಂದಾಗಿದೆ.

ಕೃಷಿ ಆಹಾರ ಸಂಬಂಧ ವಿಚಾರಗಳಲ್ಲಿ ತಜ್ಞರಾದವರನ್ನೂ ಅದು ಕೆಲಸಕ್ಕಿಟ್ಟುಕೊಂಡು ಅವರ ಮೂಲಕ ಪ್ರತಿಯೊಂದು ಸದಸ್ಯ ಜನಾಂಗದ ಪರಿಸ್ಥಿತಿಯನ್ನು ಸುಧಾರಿಸುವ ಏರ್ಪಾಡುಗಳ ಕುರಿತು ಸಲಹೆ ಕೊಟ್ಟು ಕಾರ್ಯದ ಏರ್ಪಾಡುಗಳನ್ನು ಪರಿಶೀಲಿಸುತ್ತಲಿರುವುದು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವುದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಬ್ಬೇರಧ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, The Joint Booking Office,

MANGALORE. KODIALBAIL.

THE BANK OF MANGALORE, Ltd.,
MANGALORE

Interest on Fixed Deposits

It is notified for the information of Depositors, that interest on all Fixed Deposits received from this date will be paid every half year instead of quarterly as hitherto; those received prior to this date will also be paid accordingly with effect from 1-1-1945.

Office of the Bank, Mangalore, 30th Oct. 1944. } By Order H. S. KAMATH, *Manager*.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಬಿಳಿ ಕುಷ್ಠ, ಉಷ್ಣದ, ಗುಳ್ಳೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಮುಂಬಯಿ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ... ಕಂಪೆನಿಯಲ್ಲಿ ದೊರೆಯುವುದು.

FOREMOST.

In insurance service since 1910, we are proud of our achievements for over 30 years. With a net-work of Branches all over South India and a field organisation assisted by men and women of ability and ambition it shall be our endeavour to extend widely the advantages of Life Assurance to every one who seek it.

Agency opportunities available on liberal terms

KOCHIKAR BROTHERS LTD.

CENTRAL OFFICE-UDIPI, S. K.

Chief Agents for South India including Indian States

The Bombay Life Assurance Co., Ltd.,

P. B. 337- 30, MOUNT ROAD, MADRAS.

Other Offices at:

BOMBAY BANGALORE CALICUT MADURA MANGALORE TRIVANDRUM

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 24—11—1944 [ಸಂಚಿಕೆ 46]

ಮಾನವ ಪ್ರೇಮಿ ಗಾಂಧೀ

[ಲೇಖಕ – ಎಫ್ ಆರ್ ಮೋರಸ್]

ಭವಿಷ್ಯತ್ತು, ಗಾಂಧೀಜಿಯವರ ಸ್ಥಾನವನ್ನು ನಿರ್ಣಯಿಸುವಾಗ, ಅವರನ್ನು ರಾಜಕಾರಣಿಯೆನ್ನುವುದಕ್ಕಿಂತಲೂ ಹೆಚ್ಚಾಗಿ ಮಾನವ ಪ್ರೇಮಿಯೆಂದು ಗೌರವಿಸಬಹುದು. ಲೌಕಿಕವನ್ನೂ ಆಧ್ಯಾತ್ಮಿಕವನ್ನೂ ಅವರಷ್ಟು ಚೆನ್ನಾಗಿ ಸಂಗಮಗೊಳಿಸಿದವರು ಆಧುನಿಕ ಕಾಲದಲ್ಲಿ ಬೇರೊಬ್ಬರಿಲ್ಲ. ಲೌಕಿಕದಲ್ಲಿ ಅವರು ನ್ಯಾಯ ಮತ್ತು ಸ್ವಾತಂತ್ರ್ಯವೆಂಬೀ ಎರಡು ಶುಭ ತತ್ವಗಳನ್ನು ಪಶ್ಚಿಮದಿಂದ ಸ್ವೀಕರಿಸಿದ್ದಾರೆ ಆದರೆ ಅವೆರಡಕ್ಕೂ ಅವರು ಕೊಟ್ಟಿರುವ ನವಚೇತನ ಅವಶ್ಯವಾಗಿ ಪೌರ್ವಾತ್ಯ ಸ್ವರೂಪದ್ದು. ಗಾಂಧೀಜಿಗೆ ನ್ಯಾಯವೆಂದರೆ ಪತಿತರ ಉದ್ಧಾರದಲ್ಲಿ ನಿಷ್ಠೆ, ಹಿಂದೂಸ್ಥಾನದಲ್ಲಿ ಬ್ರಿಟಿಷರ ರಾಜ್ಯಭಾರದ ಮೇಲೆ ಅವರ ಮೊದಲನೆಯ ಆಕ್ಷೇಪವಾದರೂ ಅದು ಬಡವನನ್ನು ಅಧೋಗತಿಗಿಳಿಸಿದೆ, ಎಂಬುದೆ. ಅಂತೆಯೇ ಅಸ್ಪೃಶ್ಯರನ್ನು ಉದ್ಧರಿಸಿದರೇನೆ ಹಿಂದೂ ಧರ್ಮ ಪರಿಶುದ್ಧವಾಗುವುದೆಂದೂ ಅವರು ಸಾರುತ್ತಾರೆ ಇನ್ನು ಸ್ವಾತಂತ್ರ್ಯದಲ್ಲಿ ಹಕ್ಕಿನ ಪ್ರಮಾಣಕ್ಕಿಂತ ಕರ್ತವ್ಯ ಹೆಚ್ಚೆಂದು ಅನಿಸುತ್ತದೆ, ಅವರ ಕೋಶದಲ್ಲಿ ದೇಶಾಭಿಮಾನವೂ ಸಾರ್ವಜನಿಕ ಕರ್ತವ್ಯವೂ ಪರ್ಯಾಯವಾಚಿಗಳು

ದೇಶಾಭಿಮಾನಕ್ಕೆ ಈ ಅರ್ಥವನ್ನು ಹಚ್ಚುವುದರಿಂದಲೇ ಗಾಂಧೀಜಿಯ ರಾಜಕೀಯದಲ್ಲಿ ಧರ್ಮದ ಬಣ್ಣ ಎದ್ದು ಕಾಣುತ್ತದೆ "ನನ್ನ ಮಟ್ಟಿಗೆ ಧರ್ಮದಿಂದ ಬೇರೆಯಾದ ರಾಜಕೀಯವಿಲ್ಲ" ಎಂದು ಅವರು ಹಲವು ವರ್ಷಗಳ ಹಿಂದೆ ಹೇಳಿದ್ದರು ಪಾಶ್ಚಿಮಾತ್ಯ ವಿಚಾರ ಧಾರೆಗೆ ಈ ಮಾತು ವಿಲಕ್ಷಣವಾಗಿ ತೋರಿತು ಆದರೆ ಗಾಂಧೀಜಿಗೆ ಧರ್ಮದಿಂದ ರಾಜಕೀಯವನ್ನು ಬೇರ್ಪಡಿಸುವದೇ ಸಾಧ್ಯವಿಲ್ಲ ಅವೆರಡೂ ಮಾನವಸೇವೆಯ ಒಂದೇ ಆದರ್ಶವನ್ನು ಇಟ್ಟುಕೊಂಡವುಗಳೆಂದು ಅವರ ಹೇಳಿಕೆ. ಗಾಂಧೀಜಿಯ ಅಭಿಪ್ರಾಯದಲ್ಲಿ ರಾಜಕೀಯ ಧುರೀಣನೂ ಧಾರ್ಮಿಕ ಭಕ್ತನೂ ಮಾನವನ ಮಂಗಳಕ್ಕಾಗಿ ದುಡಿಯುವವರು, ಮತ್ತು ಅವರು ವಹಿಸುವ ಪಾತ್ರಗಳು ಹಿತರೂಪವಾದವು. ಪಾಶ್ಚಿಮಾತ್ಯ ರಾಜಕಾರಣದಲ್ಲಿ ನೀತಿಯು ಬರಗಾಲವಾಗಲಿಕ್ಕೆ ಅಲ್ಲಿ ರಾಜಕೀಯವನ್ನು ಧರ್ಮದಿಂದ ವಿಂಗಡಿಸಲು ಹವಣಿಸಿದ್ದೇ ಕಾರಣವೆಂದು ಅವರ ವಾದ. ಇದಕ್ಕೆ ವಿರುದ್ಧವಾಗಿ, ಧರ್ಮವನ್ನೂ ರಾಜಕೀಯವನ್ನೂ ಕಲಸುವುದರಿಂದಾಗುವ ಅನರ್ಥಗಳಿಗೆ ಹಿಂದೂಸ್ಥಾನವೆ ಸಾಕ್ಷಿಯೆಂದು ಪಾಶ್ಚಿಮಾತ್ಯರು ಹೇಳಬಹುದು. ತಮ್ಮ ಜನರನ್ನು ತಮ್ಮ ನೈತಿಕ ಮಟ್ಟಕ್ಕೆ ಏರಿಸಬೇಕೆಂದು ಗಾಂಧೀಜಿ ಪ್ರಯತ್ನಿಸುತ್ತಾರೆ ಈ ವಿಷಯದಲ್ಲಿ ಅವರು ಮಾನವನ ಸಾಧುತ್ವದಲ್ಲಿ ಇರಿಸುವ ವಿಶ್ವಾಸ ಅತಿರೇಕದ್ದು ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ಆದರೂ ಜಾತೀಯತಾವಾದಿಗಳು ರಾಜಕೀಯದಲ್ಲಿ ಧರ್ಮವನ್ನು ತುರುಕುವುದಕ್ಕೂ ದೇಶದ ರಾಜಕೀಯ ಜೀವನದಲ್ಲಿ ನೈತಿಕ ತತ್ವವು ಸೇರಿರಬೇಕೆಂದು ಗಾಂಧೀಜಿ ಆಶಿಸುವುದಕ್ಕೂ ಹಗಲಿರುಳ ಅಂತರವುಂಟು. ಅವರು ನಿಷ್ಠಾವಂತರಾದ ಹಿಂದೂ ಎಂಬುದು ನಿಜ ಆದರೆ ಧರ್ಮಕ್ಕೆ ಅವರು ಮಾಡುವ ಅರ್ಥ ನೀತಿಯ ಬುನಾದಿಯಲ್ಲಿ ಬೇರು ಬಿಟ್ಟಿದೆ ಆದರಿಂದ ಅವರ ಧರ್ಮ ಸಾಧಾರಣ ಧಾರ್ಮಿಕ ನಂಬಿಕೆಗಳ ಕಟ್ಟಿಗೆ ಒಳಗಾದುದಲ್ಲ ಇತರ ಮತಗಳ ಬಗ್ಗೆ ಅವರ ನಡವಳಿ ಸಹನಾತ್ಮಕವಾದುದಷ್ಟೆ ಅಲ್ಲ, ಗೌರವಪೂರ್ಣವಾದುದು. ಕ್ರಿಸ್ತನ ಜೀವನ ಅಹಿಂಸಾ ತತ್ವದ ಅಗ್ನಿ ಪರೀಕ್ಷೆಯೆಂದು ಅವರು ಅರ್ಥಮಾಡುತ್ತಾರೆ ಪತ್ನಿಯ ಅಂತ್ಯಕ್ರಿಯೆಯ ಸಮಯ ಮಹಾತ್ಮರು ತಮ್ಮ ಮೆಚ್ಚುಗೆಯ 'ಕರುಣಾಳು ಬಾ ಬೆಳಕೆ' ಎಂಬ ಕ್ರಿಶ್ಚಿಯನ್ ಕೀರ್ತನೆಯನ್ನು ಮೀರಾಬೇನರಿಂದ ಹಾಡಿಸಿದರು ಅವರು ಕುರಾಣವನ್ನು ಓದಿದ್ದಾರೆ, ಇಸ್ಲಾಮಿನ ನಿರಾಡಂಬರ ಸರಳತನ, ಅದರ ಬಂಧುಭಾವ ಎಷ್ಟು ಬಾರಿ ಅವರ ಹಾರ್ದಿಕ ಪ್ರಶಂಸೆಗೆ ಪಾತ್ರವಾದುದುಂಟು "ಧರ್ಮವೆಂದರೇನೆಂಬ ಬಗೆಗೆ ನನ್ನ ಮತವನ್ನು ವಿವರಿಸುವೆ ಎಲ್ಲ ಧರ್ಮಗಳಿಗಿಂತಲೂ ಹಿಂದೂ ಧರ್ಮವೇ ಮೇಲೆಂದು ನನ್ನ ಅವಿಚಲ ವಿಶ್ವಾಸವಿದ್ದರೂ ನನ್ನ ಧರ್ಮ ಶಬ್ದಕ್ಕೆ ಹಿಂದೂ ಧರ್ಮ ಎಂಬ ಅರ್ಥವನ್ನು ಮಾಡಬಾರದು. ನಾನು ಹೇಳುವ ಧರ್ಮ ಹಿಂದೂ ಧರ್ಮಕ್ಕೆ ಅತೀತವಾದ್ದುದು. ಅದು ನಮ್ಮನ್ನು ಆಂತರಿಕ ಸತ್ಯಕ್ಕೆ ಬಿಡಿಸಬಾರದಂತೆ ಬಿಗಿಯುವಂಥದು. ಅದು ಸದಾ ಪಾವನವಾದುದು ಮಾನವ ಸ್ವಭಾವದಲ್ಲಿ ಶಾಶ್ವತವಾಗಿ ಪ್ರತಿಷ್ಠಿತವಾಗಿರುವ ಈ ಗುಣ ಯಾವಾಗಲೂ ಪೂರ್ಣತೆಗಾಗಿ ಹವಣಿಸುತ್ತಿರುವುದು. ಅದಕ್ಕೆ ಎರಡು ತೊಡರು ಪೀಡೆ ಯಾತನೆ ಲೆಕ್ಕವಿಲ್ಲ. ಆತ್ಮನಿಗೆ ಕರ್ತನಲ್ಲಿ ತನ್ನ ಐಕ್ಯದ ಅನುಭವವಾಗುವವರೆಗೆ ಈ ಅಶಾಂತಿ ಆರುವಂತಿಲ್ಲ" ಎಂದು ಅವರೊಮ್ಮೆ ಹೇಳಿದ್ದರು ಈ ವಿಚಾರ ಮಾನವ ಬುದ್ಧಿಯಷ್ಟೆ ಪ್ರಾಚೀನವಾದುದು ಪ್ರಾಚೀನ ಋಷಿಗಳಂತೆ ಗಾಂಧೀಜಿಯವರೂ ಧರ್ಮವೆಂದರೆ ಆತ್ಮಜ್ಞಾನವೆಂದೂ ಸೇವೆ, ಸಾಧನೆ, ತ್ಯಾಗಗಳ ಮುಖಾಂತರ ಮಾನವನ ವ್ಯಕ್ತಿತ್ವ ತನ್ನ ಅಭಿವ್ಯಕ್ತಿಗಾಗಿ ನಡೆಸಿರುವ ಹೆಣಗಾಟವೆಂದು ಭಾವಿಸುವರು. "ಸಾಮಾಜಿಕ, ರಾಜಕೀಯ ಮತ್ತು ಶುದ್ಧ ಧಾರ್ಮಿಕ ಕರ್ಮಗಳನ್ನು ಬೇರೆ ಬೇರೆ ಇನ್ನೊಂದಕ್ಕೆ ಸೋಂಕದಂತೆ ಇರಿಸಿ ಪ್ರದು ಸಂಭ್ಯವಲ್ಲ ಮಾನವ ಸೇವೆಯಿಲ್ಲದ ಇತರ ಧರ್ಮ ನನಗರಿಯದ ಎಂದು ಅವರು ಬರೆದಿದ್ದಾರೆ

ಗಾಂಧೀಜಿಯ ಕಾರ್ಯಗಳನ್ನು ಈ ದೃಷ್ಟಿಕೋನದಿಂದ ನಿರೀಕ್ಷಿಸಿದರೇನೆ ವಿವಿಧ ಸಮಸ್ಯೆಗಳನ್ನು ಅವರು ಎದುರಿಸುವ ರೀತಿ ಅರ್ಥವಾಗುವುದು. ರಾಜಕೀಯವೆಂದರೇನು ಎಂದು ಜನಸಾಮಾನ್ಯರನ್ನು ಕೇಳಿದರೆ 'ಸರಕಾರ ನಡೆಸುವ ಕಲೆ' ಅಥವಾ "ಶಾಸನ ಕಲೆ" ಎಂದು ಉತ್ತರ ಬಂದೀತು ಅರ್ಥಶಾಸ್ತ್ರವೆಂದರೆ ಬೇಡಿಕೆ ಪೂರೈಕೆಗಳ ವಿಶಿಷ್ಟ ನಿಯಮಗಳಿಗೆ, ಚಿನ್ನದ ಮಟ್ಟಕ್ಕೆ ಮತ್ತು ವಿನಿಮಯ ನಿಯಮಗಳಿಗೆ ಸಂಬಂಧಿಸಿದ ಏನೋ ಎಂಬ ಮಸಕು ಮಸಕಾದ ಕಲ್ಪನೆ ಅವರಿಗಿರುತ್ತದೆ. ರಾಜಕೀಯ ಮತ್ತು ಆರ್ಥಿಕ ವಿಷಯಗಳ ಮೇಲೆ ಗಾಂಧೀಜಿಯ ವಿಚಾರಗಳು ಮೂಲಭೂತವಾಗಿರುವುದರಿಂದಲೆ ಅವು ಪ್ರೌಢವಲ್ಲವೆಂದು ಎನಿಸುವ ಸಂಭವವಿದೆ. ಮನುಷ್ಯನು ಊಟಮಾಡಬೇಕು—ಇದು ಗಾಂಧೀಜಿಗೆ ಅರ್ಥಶಾಸ್ತ್ರದ ಮೂಲ ತತ್ವ ಅಭಾವದ ನಿವಾರಣೆಯೇ ಅವರ ಮತದ ಮೊದಲನೆ ಸೂತ್ರ ಬಡತನದಿಂದೊದಗುವ ಅಧಃಪಾತದಿಂದ ತಮ್ಮ ಬಡ ದೇಶ ಬಾಂಧವರನ್ನು ಉಳಿಸಲು ಅವರು ತಮ್ಮ ಜೀವಮಾನದಲ್ಲೆಲ್ಲಾ ಎಡೆಬಿಡದೆ ದುಡಿದದು ಕಂಡು ಬರುತ್ತದೆ. ೧೯೨೨ರಲ್ಲಿ ಗಾಂಧೀಜಿಯ ಮೇಲೆ ಮೊದಲನೆ ರಾಜಕೀಯ ಪ್ರಕರಣ ನಡೆಯಿತು. ಆಗ ಮಾಡಿದ ಹೃದಯಸ್ಪರ್ಶಿಯಾದ ಭಾಷಣದಲ್ಲಿ ಅವರು ಬಡ ಒಕ್ಕಲಿಗನ ದುಮ್ಮಾನಗಳಿಗೆ ಅಲಕ್ಷ್ಯ ತೋರಿದಕ್ಕಾಗಿ ಬ್ರಿಟಿಷ್ ಸರಕಾರವನ್ನಷ್ಟೇ ಅಷ್ಟೇ ಪಟ್ಟಣದ ನಿವಾಸಿಗಳನ್ನೂ ದೂರಿಕೊಂಡಿದ್ದಾರೆ "ಹಳ್ಳಿಗಳಲ್ಲಿನ ಅರ್ಧೋಪವಾಸಿ ಜನರು ಬರಬರುತ್ತಾ ನಿರ್ಜೀವರಾಗುತ್ತಿದ್ದಾರೆಂದು, ನಗರವಾಸಿಗಳಿಗೇನು ಗೊತ್ತು ... ಎಂದ ಕುತರ್ಕವಾಗಲಿ, ಅಂಕೆಸಂಖ್ಯೆಗಳ ಗಾರುಡಿಯಾಗಲಿ, ಹಳ್ಳಿಗಳಲ್ಲಿ ಬಟ್ಟಬಯಲಿಗೆ ಕಾಣುತ್ತಿರುವ ಸಜೀವ ಅಸ್ಥಿಪಂಜರಗಳು ಕೊಡುವ ಸಾಕ್ಷ್ಯವನ್ನು ಅಲ್ಲಗಳೆಯಲಾರವು. ಮಾನವ್ಯದ ಮೇಲೆ ಇಂಥಾ ಅಭೂತಪೂರ್ವ ಅತ್ಯಾಚಾರ ನಡೆದುದಕ್ಕೆ ದೇವರೆಂಬವನೊಬ್ಬನಿದ್ದರೆ ಅವನ ಮುಂದೆ ಇಂಗ್ಲೆಂಡು ಮಾತ್ರವಲ್ಲ, ಹಿಂದೂಸ್ಥಾನದ ಪಟ್ಟಣವಾಸಿಗಳೂ ಉತ್ತರ ಕೊಡಬೇಕಾಗುವುದು. ಇಪ್ಪತ್ತು ವರ್ಷಗಳ ನಂತರ ಬಂದ ಬಂಗಾಲದ ಬರಗಾಲ ಈ ಆರೋಪದ ಭಯಾನಕ ಸತ್ಯತೆಯನ್ನು ಸಿದ್ಧಮಾಡಿ ತೋರಿಸಿತು

ಗಾಂಧೀಜಿಗೂ ಅವರ ಮುಂಚೆ ಆಗಿಹೋದ ರಾಜಕಾರಣಿಗಳಿಗೂ ಇರುವ ಭೇದ ಇದೇ. ಗಾಂಧೀಜಿ ಜನತೆಯನ್ನು ಬಿಟ್ಟು ಬೇರೆಯಾಗಿ ಯಾವಾಗಲೂ ಎಣಿಸುವುದಿಲ್ಲ "ನಿಮ್ಮ ಈ ಸೇವೆಗೆ ಧ್ಯೇಯದ ಮೇಲಿನ ಪ್ರೀತಿ ಕಾರಣವೋ ಅಥವಾ ಜನತೆಯ ಮೇಲಿನ ಪ್ರೀತಿಯೇ?" ಎಂದೊಬ್ಬ ಇಂಗ್ಲಿಷ್ ಗೆಳೆಯರು ಈ ಜನನಾಯಕರನ್ನು ಕೇಳಿದರಂತೆ "ಜನತೆಯ ಮೇಲಿನ ಮಮತೆಯೇ ಕಾರಣವೆಂದು ಅವರು ನಿಸ್ಸಂಶಯದಿಂದ ಹೇಳಿದರು ಜನತೆಯ ಸೇವೆಯಿಂದ ಭಿನ್ನವಾದ ಧ್ಯೇಯದ ಕಲ್ಪನೆ ಸೇವೆ ಎಂದು ಗಾಂಧೀಜಿಯವರು ಹೇಳಿದರು' ಎಂದು ಆ ಗೆಳೆಯರು ಬರೆದಿದ್ದಾರೆ ಆಕೌಪೀನ, ಆ ನಿರಾಡಂಬರ ಜೀವನವು ಗಾಂಧೀಜಿಯ ಜೀವನವನ್ನು ಜನಜೀವನದಲ್ಲಿ ಬೆರಸಿ ಬೇಸಿಗೆ ಹೊಯ್ದಿವೆ, ಮಾತ್ರವಲ್ಲ ಅವರ ನೈತಿಕ ಪ್ರಭಾವವನ್ನು ಜನರ ಮೇಲೆ ಅಚ್ಚೊತ್ತಿವೆ ವಿಶ್ವಕುಟುಂಬಿಯ "ಸರ್ವಸಂಪನ್ನನಾಗಿದ್ದೂ ಏನನ್ನು ಮುಟ್ಟದ" ಈ ಸುಖ ಎಲ್ಲರಿಗೂ ಸಿಗುವ ಪುಣ್ಯವಲ್ಲ ಆದರೆ ಈ ನಿರಾಡಂಬರ ಜೀವನದ ಹಿಂದೆ ಒಂದು ದೊಡ್ಡ ಜೀವನ ಮೀಮಾಂಸೆಯೇ ಹೆಣೆದಿದೆ. ಗಾಂಧೀಜಿಯ ಸ್ವದೇಶಿಯೂ, ಖಾದಿಯೂ ಆ ತತ್ವಜ್ಞಾನದ ಆರ್ಥಿಕ ಅಂಗಗಳು

ಹಿಂದೂಸ್ಥಾನದ ಸಾಮಾಜಿಕ ಪದ್ಧತಿಯಲ್ಲಿ ಮೊದಲಿಂದಲೂ ಬೇರುಬಿಟ್ಟಿದ್ದ "ಸ್ವಯಂಪೂರ್ಣತೆ"ಯ ತತ್ವವನ್ನೆ ಮಹಾತ್ಮರು ತಮ್ಮ "ಸ್ವದೇಶಿ" ಚಳವಳಿಯ ಅಡಿಗಟ್ಟಾಗಿ ಇಟ್ಟುಕೊಂಡಿರುವರು. "ಸ್ವ

(೯ನೇ ಪುಟಕ್ಕೆ ಮುಂದುವರಿದಿದೆ)

ಕರುಣಾಳುಗಳು

(ಹದಿನಂಟನೆ ಶತಮಾನದ ಇಂಗ್ಲೆಂಡಿನ ಸಮಾಜ ಜೀವನವನ್ನು ಚಿತ್ರಿಸಿ ಉಜ್ವಲ ಕಾದಂಬರಿಕಾರನಾದ ಚಾರ್ಲ್ಸ್ ಡಿಕನ್ಸನ [illegible] ಎಂಬ ಕಾದಂಬರಿಯಲ್ಲಿ ಬರುವ ನಿರುದ್ಯೋಗಿ ಶ್ರೀಮಂತರು ಆತ್ಮತೃಪ್ತಿಗಾಗಿ ನಡೆಸುವ ಒಂದು ಅನಾಥಾಲಯದ ವಿಷಯವನ್ನು ಆಧಾರವಿಟ್ಟು ಈ ಕೆಳಗಿನ ದೃಶ್ಯವನ್ನು ಬರೆಯಲಾಗಿದೆ.)

[illegible] ವಯಸ್ಸನ್ನು [illegible] ಹಾಸು ಅವನ ತಂದೆ ಅವನು ಹುಟ್ಟಿದ ಕೆಲವೇ ತಿಂಗಳ ಮುಂಚೆ [illegible] ರೋಗದಿಂದ ತೀರಿಹೋಗಿದ್ದನು. ತೀರದ ತರ ಕಡೆಯುವ ಕಲ್ಲಿನಮೇಲೆ ಬಿದ್ದು ಅವನ ತಾಯಿ ವಾತ ಹಿಡಿದು ಕೆಲವು ತಿಂಗಳು ನರಳಿ ಆಸ್ಪತ್ರೆಯಲ್ಲಿ ಗತಿಸಿದಳು. ಸಾಯುವ ಕೊಡಲ್ಲು ಸಂಪತ್ತುಮಾರನು ಸಿರಿವಂತನಾಗುವುದನ್ನು ನೋಡಬೇಕೆಂದು ಆ ಪುಣ್ಯಾತ್ಮಳಿಗೆ ಒಂದುಹಿರಿಯಾಸೆ ಇತ್ತು. ಆದರೆ ಬಡತನದ ಪೆಡಂಭೂತವು ಅವಳನ್ನು ಅಷ್ಟು ಬೇಗನೆ ಬಲಿತೆಗೆದುಕೊಳ್ಳುವುದೆಂದು ಅವಳು ನೆನೆಸಿದ್ದಿಲ್ಲ. ಈ ಜಗತ್ತಿನಲ್ಲಿ ನೆನೆಸದಿದ್ದದೇ ಆಗುವುದು ತಾನೆ?

ಸಂಪತ್ತುಮಾರನಿಗೆ ದೇವರೇ ಗತಿ! ತಾಯಿ ಕೆಲಸಮಾಡಿದ ಮನೆಯವರು ಶ್ರೀಮಂತರಾದರೂ ಆ ನಿರ್ಗತಿಕನನ್ನು ಸಾಕಬೇಕೆಂದು ಹರಿಕೆಹೇಳಿಕೊಂಡಿದ್ದಾರೆಯೇ? ಆದರೂ ಯಾವ ದೇವರು ಅವನಿಗೆ ಕರುಣೆಕೊಟ್ಟನೋ! ಆ ಊರಿನ ಬಿಟ್ಟಿ ಬಂಬ್ರಾಯರನ್ನು ಕರೆದು "ಈ ಹುಡುಗನಿಗೆ ಆ ಅನಾಥಾಲಯಕ್ಕೆ ಸೇರಿಸಿರಿ, ಏನಾದರೂ ಕೈಗಾರಿಕೆ ಕಲಿತರೆ ಮುಂದೆ ಹೊಟ್ಟೆ ತುಂಬಿಸಿಕೊಂಡಾನು" ಎಂದರು.

ಬಂಬ್ರಾಯರು ಅನಾಥಾಲಯದ ಚಾಲಕರು. ಅವರ ಬೈಯುವ ಬಾಯಿಗೂ, ಪೋಕರಿ ಬುದ್ಧಿಗೂ ಹೆದರಿ ಅನಾಥಾಲಯದ ಕಾರ್ಯಕಾರಿ ಮಂಡಳಿಯವರು ಬಂಬ್ರಾಯನಿಗೆ 'ಆಲಯ' ನಡೆಸುವ ಹೊಣೆಗಾರಿಕೆಕೊಟ್ಟು, ತಿಂಗಳಿಗೆ ಸ್ವಲ್ಪ ಕವಳ ಸಿಕ್ಕುವಂತೆಮಾಡಿದ್ದರು. "ಆದರೆ ಬಂಬ್ರಾಯರು ತಮ್ಮ ಸ್ವಂತ ಚತುರತೆಯಿಂದ ಅನಾಥಾಲಯದ ಖರ್ಚಿನಲ್ಲಿ ಒಂದಂಶ ಬಗಲಿಗೆಹಾಕದೆ ಬಿಡುವಸದ್ಗೃಹಸ್ಥರಲ್ಲ.

ಬಾಲಕ ರೆಡ್ಡಿಗೆ ಅವನ ಹೊಸ ಆಲಯಕ್ಕೆ ತಳಲಾಯಿತು. ಬಂದಕೂಡಲೇ ತುಂಬಾ ಹಸಿದಿರುವ ಆತನಿಗೆ ಎರಡು ಚೂರು ರೊಟ್ಟಿಗಳನ್ನೂ ಕೊಡಲಾಯಿತು. ರೆಡ್ಡಿ ಎರಡನೆ ಚೂರು ತಿನ್ನುತಿದ್ದಾಗಲೇ ಬಂಬ್ರಾರಾಯರು ಅವನ ಬಳಿಗೆಬಂದು "ರೆಡ್ಡಿ, ಆಡಳಿತ ಬೋರ್ಡಿನೆದುರು ಪರೀಕ್ಷೆ ಕೊಡಬೇಕು. ಅವರು ಪಾಸ್ ಮಾಡಿದರೆ ನಿನಗಿಲ್ಲಿ ಆಶ್ರಯದೊರೆಯುತ್ತದೆ" ಎಂದರು.

ರೆಡ್ಡಿಗೆ ಇದೊಂದೂ ಅರ್ಥವಾಗಲಿಲ್ಲ. ಅವನು ಒಂದು ಸಾರಿ ಕಣ್ಣುಕೆರಳಿಸಿ ಅಡಗುಲಜ್ಜಿಯ ಮುಖ ನೋಡಿದ. ಅಳಬೇಕೊ ನಗಬೇಕೋ ಅವನಿಗೆ ತಿಳಿಯಲಿಲ್ಲ. ಯಾವದೊಂದು ವಿಚಾರ ವಿನಿಯಯಮಾಡಲಿಕ್ಕೂ ಅವನಿಗೆ ಪುರುಸೊತ್ತಿಲ್ಲ. ಅಷ್ಟರೊಳಗೆ ಠಣ್ಣನೆ ತಲೆಮೇಲೆ ಒಂದೇಟು ಬಿತ್ತು. ಅರ್ಧ ಹಸಿವಿನ ತಲೆಗರ್ರನೇ ಮಿಂಚಿದಂತಾಗಿ ಮಳೆರೂಪದಲ್ಲಿ ಪಳ್ಳನೆ ನೀರು ಕಣ್ಣುಗಳಿಂದ ಇಳಿಯಿತು. ಬಂಬ್ರಾಯರ ಹಿಂದೆ ಮುಡಚಿ ಹಿಡಿದಕೈಯಲ್ಲಿನ ಬೆತ್ತದ ಲೋಹ ಬಿರಡೆಯಿಂದ ಬಿದ್ದ ಏಟದು. ಅಯ್ಯೋ ಪಾಪ! ಇನ್ನೊಂದು ದೊಪ್ಪನೆ ಬೆನ್ನಿಗೆ ಬಿತ್ತು. ಕೂಡಲೇ ಹೊರಟ ರೆಡ್ಡಿ ಕಣ್ಣು ಒರಸಲಿಕ್ಕೆ ಬಿಡುವಿಲ್ಲ. ಅಂದು ಆಡಳಿತ ಬೋರ್ಡಿನ ಮೀಟಿಂಗು. ರೆಡ್ಡಿಯನ್ನು ಆ ವಿಶಾಲ ಕೋಣೆಗೆ ತರಲಾಯಿತು. ತಾನು ಎರಡು ದಿನಹೋದ ಮುನ್ಸಿಪಲ್ ಶಾಲೆಯಲ್ಲಿ ರೆಡ್ಡಿ ಒಂದು ಬೋರ್ಡನ್ನು ನೋಡಿದ್ದ. ಅಂತಹ ಯಾವ ಹಲಗೆಯನ್ನೂ ಅವನು ನಿಂತ ಸಭಾಗೃಹದಲ್ಲಿ ಕಂಡುಬಾರದ್ದರಿಂದ ಅವನಿಗೆ ಇನ್ನೂ ಆಶ್ಚರ್ಯ ಹುಟ್ಟಿತು.

ಬೋರ್ಡಿನ ಬೈಠಕಿಗೆ ಅಲ್ಲಿ ದೊಡ್ಡದೊಂದು ಮೇಜು ಇತ್ತು. ಮೇಜ ಸುತ್ತಲೂ ಅರ್ಧವೃತ್ತಾಕೃತಿಯ ಎಂಟತ್ತು ಮಂದಿ, ಅರ್ಧ ಮುದಿ ವ್ಯಕ್ತಿಗಳು ಆಸೀನರಾಗಿದ್ದರು. ಗುಡಾಣಾಕೃತಿಯ ಕೆಂಪು ಮುಖದ ಪುರುಷನೊಬ್ಬನು ಮಧ್ಯದ ಖುರ್ಚಿಯಲ್ಲಿ ಮಂಡಿಸಿದ್ದನು.

"ಬೋರ್ಡು ಮಂಡಳಿಕ್ಕೆ ವಂದಿಸು" ಎಂದರು ಬಂಬ್ರಾಯರು. ರೆಡ್ಡಿ ಮೇಜಿಗೆ ನಮಸ್ಕಾರಮಾಡಿದ.

"ನಿನ್ನ ಹೆಸರೇನೊ, ಹುಡುಗ" ಕೆಂಪು ಮುಖದ ವ್ಯಕ್ತಿ ಕೇಳಿತು.

ಅವನ ಕರ್ಕಶ ಧ್ವನಿಗೆ ರೆಡ್ಡಿ ಮೈದೆಗದ. ಮೈ ನಡುಗಲೂ ಆರಂಭವಾಯಿತು. ಕೂಡಲೇ ಬಂಬ್ರಾಯರ ಬೆತ್ತ ಠಣ್ಣನೆ ಕೆಲಸಮಾಡಿತು. ಈ ಸಲವೂ ಏಟು ಜೋರಾಗಿದ್ದುದರಿಂದ ರೆಡ್ಡಿ ಪ್ರಶ್ನೆಗೆ ಉತ್ತರಕೊಡುವ ಬದಲು ಗಟ್ಟಿಯಾಗಿ ಅತ್ತುಬಿಟ್ಟ. ಬಿಳಿ ಮುಂಡಾಸಿನ ಸದಸ್ಯನೊಬ್ಬನು ಅವನನ್ನು 'ಥೂ ಹುಚ್ಚಾ' ಎಂದ. ಯಾವ ಹೆದರಿಕೆಯೂ ಇಲ್ಲವೆಂದು ಸೂಚಿಸುವ ಬೈ ಇದು.

ಪುನಃ ಕೆಂಪು ಮೋರೆಯ ಅಧ್ಯಕ್ಷ ಮಾತನಾಡಿದ- "ಇಲ್ಲಿ ಕೇಳು ಹುಡುಗ. ನೀನು ನಿರ್ಗತಿಕ ನಿದ್ದಿ ಎಂದು ನಿನಗೆ ತಿಳಿದಿದೆ ಎಂದು ಭಾವಿಸುತ್ತೇನೆ."

ರೆಡ್ಡಿಗೆ ಅರ್ಥವಾಗಲಿಲ್ಲ. "ಏನು, ಸ್ವಾಮಿ ಅದು?" ಎಂದ ರೆಡ್ಡಿ. ಬಿಳಿ ಮುಂಡಾಸಿನವನಿಗೆ ಕೋಪ ಬಂದು- "ನನಗೆ ಮೊದಲೇ ಗೊತ್ತಿತ್ತು, ಈ ಹುಡುಗ ಥೇಟ ಹುಚ್ಚ"

'ಶೂ' ಎಂದು ಹೇಳುತ್ತಾ ಅಧ್ಯಕ್ಷ "ನೋಡು ನಿನಗೆ ತಂದೆ ತಾಯಿ ಯಾರೂ ಇಲ್ಲ, ಅಲ್ಲವೇ?" ಎಂದು ಕೇಳಿದ. ಉತ್ತರವಾಗಿ ರೆಡ್ಡಿ "ಹೌದು ಸ್ವಾಮಿ" ಎಂದ ಅಳುತ್ತಾ. "ಯಾಕೆ ಅಳುತ್ತೀಯಾ ಸುಮ್ಮನೆ" ಎಂದು ಬಿಳಿ ಮುಂಡಾಸಿನ ಕೋಪಿಷ್ಠ ಕೇಳಿದ.

ನಿಜವಾಗಿಯೂ ಏಳು ವರ್ಷದ ಇಷ್ಟು "ದೊಡ್ಡ" ಹುಡುಗ ಅಳುವುದೆಂದರೆ ಅರ್ಥವಿಲ್ಲವೆ? ಬಂಬ್ರಾಯರ ಚಿಕ್ಕ ಕಬ್ಬಿಣ ಗುಂಡಿನ ಒಂದೇಟು ಬಿಳಿ ಮುಂಡಾಸಿನ ಮೇಲೆ ಬಿದ್ದರೂ ನೋವಾಗುತಿತ್ತು, ಇರಲಿ.

ಇಷ್ಟರಲ್ಲಿ ಇನ್ನೊಬ್ಬ ಕರುಣಾಳು ಅಡಿತಗಾರ ಬಾಯ್ದೆಬಿಡ ತೊಡಗಿದ. "ನೀನು ನಿನಗಾಗಿಯೂ, ನಿನ್ನನ್ನು ಸಾಕಿ 'ಸಲಹುವವರಿಗಾಗಿಯೂ' ದಿನಾಲೂ ಪ್ರಾರ್ಥಿಸುವಿ ಎಂದು ನಾನು ಆಶಿಸುತ್ತೇನೆ."

ಹೊಟ್ಟೆಗಿಲ್ಲದ ಬಾಲಕ ಪ್ರಾರ್ಥನೆ ಏನು ಮಾಡಿಯಾನು? ಅವನಿಗೆ ಅದನ್ನು ಕಲಿಸಿದವರಾದರೂ ಯಾರಿದ್ದಾರೆ? ಅಂತೂ ಗದ್ಗದ ಸ್ವರದಿಂದ 'ಹೌದು ಸ್ವಾಮಿ' ಎಂದ ರೆಡ್ಡಿ. ಕೊನೆಗೆ ಅಧ್ಯಕ್ಷ ಹುಡುಗನನ್ನು ಪಾಸ್ ಮಾಡಿ 'ಒಳ್ಳೇದು, ನೀನು ಇಲ್ಲಿಗೆ ಬಂದದ್ದು ಸರಿಯಾಗಿ ವಿದ್ಯಾವಂತನಾಗಲಿಕ್ಕೂ ಮತ್ತಾವುದಾದರೂ ಒಂದು ಕೈಗಾರಿಕೆ ಕಲಿಯಲಿಕ್ಕೆ ಅಲ್ಲವೆ? ಆದುದರಿಂದ ನಾಳೆಯಿಂದ ಬೆಳಿಗ್ಗೆ ಆರು ಘಂಟೆಗೆ ಎದ್ದು ತೆಂಗಿನ ಸಿಪ್ಪೆ ಜಜ್ಜಲು ಪ್ರಾರಂಭಿಸಬೇಕು. ಹುರಿಹಗ್ಗ ತಯಾರಿಯ ಕೆಲಸಬಿಗಾಗಿ." ವಿದ್ಯಾವಂತನಾಗಲಿಕ್ಕೂ ಕೈಗಾರಿಕೆ ಕಲಿಯಲೂ ತೆಂಗಿನ ತೊಗಟು ಜಜ್ಜುವ ಕಾರ್ಯಕ್ರಮ! ರೆಡ್ಡಿ ಬೆತ್ತದ ಏಟಿಗೆ ಪುನಃ 'ಬೋರ್ಡಿಗೆ' ವಂದಿಸಿದ ಮೇಲೆ ಬಂಬ್ರಾಯರು ಅವನಿಗೆ ಸಿದಿ ಸಬಿಟ್ಟರು. ರೆಡ್ಡಿ ಬೇಗನೆ ಹೊರಟು ಗಟ್ಟಿಯಾದ ನೆಲದ ಮೇಲೆ ಹಾಸಿದ ಒಂದು ಹುಲ್ಲು ಚಾಪೆಯ ಮೇಲೆ ಗೇಣುದ್ದ ನುಸಿಗಳ ಕೊಳ್ಳೆಯಾಗಿ ಸ್ವಸ್ಥ ಮಲಗಿದ. ಹಾ! ವಿಧಿಯೇ ಮಾನವನ ಕರುಣೆಯು ಅದೆಷ್ಟು ವ್ಯರ್ಥ.

ಅನಾಥಾಲಯದ ಕಾರ್ಯಕರ್ತರುಗಳು ತುಂಬಾ ವಿವೇಕಿಗಳು. ಬಡ ಜನರ ದುರ್ಬಲತೆಗಳೆಲ್ಲ ಅವರಿಗೆ ಚೆನ್ನಾಗಿ ತಿಳಿದಿವೆ. ಅದಕ್ಕಾಗಿ ಕಾಲಿಪೋಲಿ ಹುಡುಗರು, ಗತಿಗೋತ್ರ ಇಲ್ಲದವಷ್ಟು ಅನಾಥಾಲಯವನ್ನು ಆಟದ ಮನೆ ಎಂದು ತಿಳಕೊಂಡು ಮತ್ತೆ ಹೊಟ್ಟೆನ ಕಪ್ಪು ತೊಳೆಯಲಿಕ್ಕೆ ಹೋಗುತ್ತಾರೆ. ಇದನ್ನು ನಿಲ್ಲಿಸಬೇಕು. ಹಣದ ದುರ್ವ್ಯಯ. ಅದನ್ನು ತಡೆಗಟ್ಟಲೇಬೇಕು ಎಂದು ನಿರ್ಧರಿಸಿದರು. ಅಂದಿನಿಂದ ಅನಾಥಾಲಯದ ಕಾನೂನುಗಳೇ ಹೊಸದಾದವು. ಅನಾಥ ಬಾಲಕರು ಮಾರ್ಗದಲ್ಲಿ ಬಿದ್ದು ಬೇಗ ಸಾಯುವ ಬದಲಿಗೆ ಇಂಥ ಆಲಯದೊಳಗೆ ಬಂದು ಮೆಲ್ಲಗೆ ಮೃತ್ಯುವನ್ನು ಆಲಿಂಗಿಸುವಂತಾಗಬೇಕು. ರೇಶನ್ ಕ್ರಮವು ಜಾರಿಗೆ ಬಂತು. ದಿನಕ್ಕೆ ಮೂರು ಸಲ ಗಂಜಿ ಊಟ. ವಾರಕ್ಕೆ ಎರಡುಸಲ ಕಷಾಯ. ವಾರಕ್ಕೆ ಒಂದು ಚಪಾತಿ. ಬಂಬ್ರಾಯರಿಗೆ ಲಾಭವಾದರೂ ಮಕ್ಕಳಿಗೆ ಸರಿ ಹೊಟ್ಟೆಯಾಗಬಾರದು.

ಇಷ್ಟೇ ಅಲ್ಲ. ಈ ದೀನ ರಕ್ಷಕರು ಸಮಸ್ಯೆಯ ಮೂಲಕ್ಕೇ ಕೊಡಲಿಹಾಕಿದರು. ಊರಲ್ಲಿ ಬಡ ದಂಪತಿಗಳು ವಿವಾಹ ವಿಚ್ಛೇದನ ಮಾಡಿಕೊಳ್ಳುವುದು ಒಳ್ಳೇದೆಂದೂ ಸಾರತೊಡಗಿದರು. ಬ್ರಹ್ಮಚರ್ಯದ ಅಮೋಘ ಶಕ್ತಿಯನ್ನು ಜನತೆಗೆ ತಿಳಿಸಲು ಪ್ರಯತ್ನಪಟ್ಟರು....

ಇತ್ತ ಅನಾಥಾಲಯದ ಹೊಸ ಕಾನೂನು ಆತಂಕವಿಲ್ಲದೆ ನಡೆಯಿತು. ಮೊದಲಿನ ಎರಡು ಮೂರು ತಿಂಗಳಲ್ಲಿ ಮಾತ್ರ ಸ್ವಲ್ಪ ಖರ್ಚು ಹೆಚ್ಚಾಯಿತು. ಕಾರಣ ಅನೇಕ ಮರಣಗಳು ಸಂಭವಿಸಿ ಅಕ್ಕಿ ಅಂಗಡಿಯವನಿಗಿಂತ ಸ್ಮಶಾನಗಾರನ ಬಿಲ್ಲೇ ಹೆಚ್ಚಾಯಿತು.......

ಊಟ ಬಡಿಸುವ ನಮೂನೆಯೂ ಸಾರಸ್ಯವಾಗಿದೆ. ಒಬ್ಬ ಅಡಿಗೆ ಮಾವ ಇದ್ದಾನೆ- ಸಾಧಾರಣ ಒಂದು ಡಜನ್ ಹುಡುಗರ ಖರ್ಚು ಒಬ್ಬನಿಗೆ. ಗಂಜಿಬಂದ ಕೂಡಲೇ ಹುಡುಗರು ತಮ್ಮ ಬಟ್ಟಲು ಹಿಡಿದುಕೊಂಡು ಅವನ ಬಳಿಗೆ ಬ[illegible] ಬೇಕು. ಎರಡು ಸೌಟು ಗಂಜಿ. ಮಕ್ಕ[illegible]ಲ್ಲವೇ? ಆ ಹಾಳು ಹಸಿವೆಗೆ ಒಂದೆ[illegible] ಗುಟುಕಿನಲ್ಲಿ ಅದನ್ನು ಮುಗಿಸಿ ಪುನ[illegible] ಗುಡಾಣಾಕೃತಿ ಆಶಾದಾಯಕ ದೃಷ್ಟಿಯಿಂ[illegible] ನೋಡುತ್ತಾರೆ. ಎಲ್ಲಿಯಾದರೂ ಸಿಕ್ಕಿಬಿದ್ದ ಅನ್ನದ ಕಾಳು ಬೆರಳುಗಳೆಡೆಯಲ್ಲಿ ಸಿಕ್ಕಿ[illegible]ದೆಯೊ ಎಂದು ಕೈಯನ್ನು ನೆಕ್ಕಿ, ಕ್ರಮೇಣ ಬಟ್ಟಲನ್ನು ಹೊರಗೂ ಒಳಗೂ ಚೆನ್ನಾ[illegible] ನಾಲಗೆಯಿಂದ 'ಪಾಲಿಶ್' ಮಾಡಿಬಿಡ[illegible]ತ್ತಾರೆ. ಅದನ್ನು ಪುನಃ ತೊಳೆಯುವ ಕೆ[illegible]ಸವೇ ಇಲ್ಲ.

ಹೀಗಾಗಿ ಅಲ್ಲಿನ ಮಕ್ಕಳು ಬೆಳೆಯುತ್ತಿ[illegible]ವೆಂಬ ಹೆದರಿಕೆಯೂ ಇಲ್ಲ, ಬೆಳೆದಹಾ[illegible] ಬಟ್ಟೆಬರೆಗಳೂ ಬೇಕಾಗಿಲ್ಲ- ಹಾಕಿದ್ದೆ[illegible] ದೊಡ್ಡದಾಗಿ ಕಾಣಿಸಹತ್ತಿತು. ಹುಡುಗರ[illegible] ಗೊಣಗುಟ್ಟ ತೊಡಗಿದರು. ಬೆಣ್ಣೆರೊಟ್ಟಿ[illegible] ಅಂಗಡಿಯಲ್ಲಿ ತಿಂದು ಬೆಳೆದ ಒಬ್ಬ[illegible] ಹುಡುಗ ತನ್ನ ಪಕ್ಕದವನಿಗೆ ಎಚ್ಚರಿ[illegible] ಕೊಟ್ಟ- ಹಸಿವಿನಿಂದ ಹುಚ್ಚು ರಾತ್ರೆ ಪಾಸ[illegible] ಅವನನ್ನು ನುಂಗಿಬಿಡುವ ಸಂದಂಭ[illegible] ಬಂದರೂ ಬರಬಹುದು.....

ಅಂತೂ ಒಬ್ಬನು ಹೆಚ್ಚು ಗಂಜಿ ಕೇ[illegible] ಬೇಕು. ಚೀಟು ಹಾಕಿದಾಗ ರೆಡ್ಡಿಗೇ [illegible] ಜವಾಬುದಾರಿಕೆ ಬಂತು. ಅಂದು ರಾ[illegible] ಗಂಜಿ ಸಮಯದಲ್ಲಿ ಅವನು ಹೆಚ್ಚು ಪ್ರಮಾಣಕೇಳಬೇಕು.

ಬಟ್ಟಲುಗಳು ಪಾಲಿಶ್ ಆದವು[illegible] ಎಲ್ಲರೂ ರೆಡ್ಡಿಯನ್ನೆ ನೋಡಿದರು. ಕಣ್ಣು ಸನ್ನೆಮಾಡಿದರು. ಒಪ್ಪಿಕೊಂಡ ಕೆಲಸ[illegible] ವಿಶ್ವಾಸಘಾತಮಾಡುವುದೇ? ರೆಡ್ಡಿ ಎದ್ದ[illegible] ಬಟ್ಟಲು ಹಿಡಕೊಂಡು ಮಾಮನ ಬಳಿ[illegible] ಹೋಗಿ "ಮಾಮಾ ನನಗೆ ಇನ್ನೂ ಸ್ವಲ್ಪ ಹೆಚ್ಚು ಗಂಜಿಬೇಕು." "ಏನೂ, ಇನ್ನೂ ಹೆಚ್ಚೇ!" ಮಾಮನು ಮೂರ್ಛೆ ಬ[illegible]ದಂತೆ ನಟಿಸಿದ. ಪ್ರಹ್ಲಾದನ ಮುಂದೆ ನಿಂ[illegible] ಹಿರಣ್ಯಕಶಿಪುವೊ ಎಂಬಂತೆ ಅವ[illegible] ವಿಕಾರ ಕಂಗೊಳಿಸಿತು. ಹಿಡಿದು ಕಂಕ[illegible]ಳಲ್ಲಿ ಬಿಗಿದು ಒದ್ದಾಡುವ ಆ ಅರೆಹೊಟ್ಟೆ[illegible]ಯ ಅಸ್ಥಿಪಂಜರವನ್ನು ಬಂಬ್ರಾಯ[illegible] ಬಳಿಗೆ ಒಯ್ದು. "ಇವನಿಗೆ ಹೆಚ್ಚು ಗಂ[illegible] ಬೇಕಂತೆ. ಏನು ಅಭಿಲಾಷೆ? ಧರ್ಮ[illegible] ಊಟ ಬಿಗಿಯೋಣ ಎಂದು." ಬಂಬ್ರಾಯರ ಬೆತ್ತ ಇದ್ದೇ ಇದೆಯಲ್ಲ. ಒಂದೇಟಿ[illegible] ರೆಡ್ಡಿಯ ಗಂಜಿ ಎಲ್ಲ ಕರಗಿತು.

ಅಂದು ಪುನಃ ಬೋರ್ಡು ಮೀಟಿಂಗ್ ಇತ್ತು. ರೆಡ್ಡಿ ಅಲ್ಲಿಗೆ ತರಲ್ಪಟ್ಟ- ಮಾ[illegible] ಕಾಳಿಗೆ ಬಲಿ ಒಯ್ಯುವ ಕುರಿಮರಿಯಂತೆ. ಬಂಬ್ರಾಯರೆಂದರು "ರೆಡ್ಡಿ, ಈ ರೆಡ್ಡಿ ಇವ ಹೆಚ್ಚು ಗಂಜಿ ಕೇಳಿದ, ಸ್ವಾಮಿ, ಹೆಚ್ಚು ಕೇಳಿದ."

"ಹೆಚ್ಚು ಗಂಜಿಯೇ" ಸದಸ್ಯರೆಲ್ಲರೂ ಅವಕ್ಕಾದರು.

"ಏನು ಸೊಕ್ಕು" "ಏನು ಗರ್ವ" "ನೀ[illegible]ವಾಗಿ ಕೇಳಿದನೆ?"

"ಹೌದು ಸ್ವಾಮಿ, ದೇವರಾಣೆ ಹೌದು"

"ಈ ಹುಡುಗ ಸಾಯಲಿಕ್ಕೆ ಹೊರ[illegible]ಟ್ಟಾನೆ. ಅಂಗಡಿ ಹಲಗೆಮೇಲೆ ಬೀ[illegible] ಬಯಸುತ್ತಾನೆ" ಎಂದರು ಬಿಳಿ ಮುಂಡಾಸಿನವರು.....

ಮರುದಿನ ವರ್ತಮಾನ ಪತ್ರದಲ್ಲಿ ಒಂದು ಜಾಹೀರಾತು. "ಬೇಕಾಗಿದ್ದಾರೆ. ಒಬ್ಬ ಏಳು ವರ್ಷದ ಹುಡುಗನನ್ನು ಮನೆಕೆಲಸಕ್ಕೆ ಕೊಂಡೊಯ್ಯುವವರು- ಬೇಕಾಗಿದ್ದಾರೆ. ಒಯ್ಯುವವರಿಗೆ ರೂಪಾ[illegible] ೨೦ ಬಹುಮಾನ ಕೊಡಲಾಗುವುದು."

—ವಿನಯ[illegible]

ಹಿಂದೂ ಧರ್ಮದ ಶ್ರೇಷ್ಠತೆ

ತ್ರಿವಾಂಕೂರ್ ದಿವಾನರ ಭಾಷಣ

ಎಲ್ಲಾ ಮತಗಳೂ ಅದರಲ್ಲಿವೆ

ಹಿಂದೂಧರ್ಮವನ್ನು ಜಗತ್ತಿನ ದೃಷ್ಟಿಯಲ್ಲಿ ಕೀಳ್ಗುಗಾಣಿಸುವ ಕೆಲವು ಸ್ವಾರ್ಥಸಾಧಕರ ಪ್ರಯತ್ನಗಳನ್ನು ಖಂಡಿಸುತ್ತಾ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ಹಿಂದೂ ಧರ್ಮದಪರವಾಗಿ ಸ್ಫೂರ್ತಿದಾಯಕ ಪ್ರತಿಪಾದನೆಮಾಡಿದ ಭಾಷಣವೊಂದು ಪ್ರಕಟವಾಗಿದೆ. "ತ್ರಿವಾಂಕೂರಿನಲ್ಲಿ ದೇವಾಲಯಗಳನ್ನು ಅಸ್ಪೃಶ್ಯರಿಗೆ ತೆರೆದಿಡುವಂತೆಮಾಡಿ ಅಲ್ಲಿನತರುಣ ರಾಜರೂ ಅವರ ಮಾತೃಶ್ರೀಯವರೂ ಒಂದು ದೊಡ್ಡ ಸಾಮಾಜಿಕ ಸುಧಾರಣೆಮಾಡಿದ್ದು ಮಾತ್ರವಲ್ಲ, ಪವಿತ್ರವೆಂದೆನಿಸಲ್ಪಟ್ಟ ಹಿಂದೂಧರ್ಮದ ಪುನರುದ್ಧಾರದ ಉದ್ದೇಶವೂ ಅವರಲ್ಲಿದೆ" ಹೀಗೆಂದು ದಿವಾನ್ ಅಯ್ಯರರು ತಿಳಿಸುವವರಾದರು.

ಅಹಿಂಸೆಯೇ ಹಿಂದೂ ತತ್ವ

ತಿರುವಾಂಕೂರಿನ ಮಹಾರಾಜರು ಇತ್ತೀಚೆಗೆ ತಮ್ಮರಾಜ್ಯದಿಂದ ಮರಣಶಿಕ್ಷೆ ವಿಧಿಸುವ ಪದ್ಧತಿಯನ್ನು ತೆಗೆದುಹಾಕಿರುವರೆಂದೂ ಶ್ರೀ ಅಯ್ಯರರ ಭಾಷಣದಿಂದ ತಿಳಿದುಬರುತ್ತದೆ. "ಇದೀ ಆಸ್ಯಖಂಡದಲ್ಲೇ ಇದೊಂದು ದೊಡ್ಡ ಆದರ್ಶ. ಇದರಿಂದ ಅಹಿಂಸೆಯೇ ಆಧಾರಸ್ತಂಭದಂತಿರುವ ಹಿಂದೂಧರ್ಮದ ಮೂಲತತ್ವವನ್ನು ಮನ್ನಿಸಿದಂತಾಯಿತು."

ಸರ್ವವ್ಯಾಪಿ ಹಿಂದೂಧರ್ಮ

ಸರ್. ಸಿ. ಪಿ. ಯವರು ನಿರೂಪಿಸಿದ ಕೆಲವು ಮುಖ್ಯ ವಿಚಾರಗಳು:

ನಿಜವಾದ ಹಿಂದೂಧರ್ಮಿಯನೊಬ್ಬನು ನಿಜವಾದ ಕ್ರೈಸ್ತನೂ, ಮುಸಲ್ಮಾನನೂ ಆಗಿರುತ್ತಾನೆ.

ಹಿಂದೂಧರ್ಮ ತತ್ವಗಳಿಗೂ ಇತರ ಮತೀಯ ವಿಚಾರಗಳಿಗೂ ಯಾವತರದ ವಿಶೇಷ ಭೇದಗಳಿಲ್ಲ. ಎಲ್ಲಾ ಮತದ ತತ್ವಗಳೂ ಹಿಂದೂಧರ್ಮದಲ್ಲಿ ಬೋಧಿಸಲ್ಪಟ್ಟಿರುತ್ತವೆ.

ಆದುದರಿಂದ ನೀತಿದೃಷ್ಟಿಯಿಂದ ಯೋಚಿಸಿದರೆ ಹಿಂದೂಧರ್ಮಾನುಯಾಯಿಯಾದವನೊಬ್ಬನು ಇತರ ಮತಗಳಿಗೆ ಮತಾಂತರಗೊಳ್ಳಬೇಕಾದ ಆವಶ್ಯಕತೆ ಇರುವುದಿಲ್ಲ.

ಮತಾಂತರದ ಹಕ್ಕು

ಕ್ರೈಸ್ತ ಮತ್ತು ಮಹಮ್ಮದೀಯ ಧರ್ಮಗಳು ಬಲಾತ್ಕಾರದ ಮತಾಂತರಗೊಳಿಸುವ ಧ್ಯೇಯಗಳುಳ್ಳವೆಂದು ನಂಬಲ್ಪಟ್ಟಿದೆ. ಅವರ ಮತಾಂತರ ಸಾಧನೆಗೆ ಆತಂಕ ತರುವವರು ದೇವರ ವಿರುದ್ಧ ಅನ್ಯಾಯಮಾಡಿದಂತಾಗುತ್ತದೆಂಬ ಭಾವನೆಯೂ ಕೆಲವರಲ್ಲಿ ಇರಬಹುದು.

ಮನುಷ್ಯನ ಉಜ್ವಲವಾದ ಭಾವನಾ ಬುದ್ಧಿಗೆ ಮನವಿಮಾಡಿ ಒಬ್ಬನು ಇನ್ನೊಬ್ಬನನ್ನು ತನ್ನ ಆಚಾರ ವಿಚಾರಗಳಿಗೆ ಪರಿವರ್ತನೆಗೊಳಿಸಲು ಪ್ರಯತ್ನಮಾಡಲು ಹಕ್ಕುಳ್ಳವನಿರಬೇಕೆಂದು ನಾನು ಒಪ್ಪುತ್ತೇನೆ.

ಆದರೆ ತಮ್ಮ ಸ್ವಂತ ಹಿತಸಾಧನೆಗಾಗಿ ಮತ್ತು ತಮ್ಮ ಜಾತಿಯವರ ಅಂಕೆಸಂಖ್ಯೆಗಳನ್ನು ಹೆಚ್ಚಿಸಬೇಕಾಗುತ್ತಿರುವುದನ್ನು ಕೋರಿಸಿಕೊಡುವ ಉದ್ದೇಶದಿಂದ ಅಶಿಕ್ಷಿತ ಜನತೆಯನ್ನು ಗುಂಪುಗುಂಪಾಗಿ ಮತಾಂತರಗೊಳಿಸುವುದು ಸರ್ವಥಾ ನ್ಯಾಯವಾದುದಲ್ಲ.

ಈ ತರದ ಭಾರಿ ಮತಾಂತರವನ್ನು ಜಗತ್ತಿನಲ್ಲಿ ಶ್ರೇಷ್ಠ ಜ್ಞಾನಿಗಳೆನಿಸಿದ್ದವರು ಖಂಡಿಸುವರು.

ಒಬ್ಬನು ತಾನು ಹುಟ್ಟಿಬೆಳೆದ ಧರ್ಮವನ್ನು ಬಿಟ್ಟು ಪರಮತವನ್ನವಲಂಬಿಸುವುದು ಒಂದು ದೊಡ್ಡ ಮತ್ತು ಗಹನವಾದ ಹೊಣೆಗಾರಿಕೆಯ ಕೆಲಸ.

ನಿಜವಾದ ಆತ್ಮ ಸ್ಫೂರ್ತಿಬಂದಾಗ ಯಾರಾದರೂ ಈ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಬೇಕಾದುದಿಲ್ಲ. ಆದರೆ ಸುಲಭವಾಗಿ ತೆಗೆದುಹಾಕಲ್ಪಡುವಂತಹ ಜವಾಬುದಾರಿಕೆ ಇದಲ್ಲ.

ನನ್ನ ಸ್ವಂತ ವಿಶ್ವಾಸ

ಹಿಂದೂಧರ್ಮಾವಲಂಬಿಯಾದವನೊಬ್ಬನು ಮತಾಂತರಗೊಳಿಸಲ್ಪಟ್ಟರೆ, ಹಿಂದೂಧರ್ಮ ತತ್ವಗಳ ಅಮರತ್ವವನ್ನೂ ಹಿಂದೂಜೀವನನೀತಿಗಳನ್ನೂ ಶ್ರದ್ಧಾಪೂರ್ವಕವಾಗಿ ನಂಬಿಬರುವನೊಬ್ಬನು ಆ ಮತಾಂತರಗೊಳಿಸಲ್ಪಟ್ಟವನನ್ನು ಮರುಮತಾಂತರಗೊಳಿಸಲು ಹಕ್ಕುಳ್ಳವನಿರುವನೆಂದು ನಾನು ನಂಬುತ್ತೇನೆ. ಇದು ನನ್ನ ವಿಶ್ವಾಸ. ಮತಾಂತರಗೊಳಿಸಲ್ಪಟ್ಟವನು ಯಾವರೀತಿಯಲ್ಲಿ ಹಾಗೆ ಮಾಡಲ್ಪಟ್ಟನೋ ಅದೇರೀತಿನೀತಿಗಳನ್ನು ಅವನನ್ನು ಮರುಮತಾಂತರಗೊಳಿಸುವಾಗಲೂ ಅನುಸರಿಸಬಹುದು.

ಜನರ ಕರ್ತವ್ಯ

ಮತಪ್ರಚಾರಕ್ಕಾಗಿ ಜನರು ಸರಕಾರದ ಸಹಾಯದ ಮೇಲೆಯೇ ಹೊಂದಿಕೊಂಡಿರಬಾರದು. ಸರಕಾರಗಳು ಎಲ್ಲಾ ಜನತೆಗೂ ನಿಷ್ಪಕ್ಷಪಾತ ದೃಷ್ಟಿಯಿಂದ ನ್ಯಾಯತೀರ್ಪುಕೊಡುವಂತಹ ಸಂಸ್ಥೆಗಳು.

ಆದುದರಿಂದ ತಮ್ಮ ಮತದಿಂದ ಪರಮತಕ್ಕೆ ಒತ್ತಾಯಮೂಲಕ ಮತಾಂತರಗೊಳಿಸಲ್ಪಟ್ಟವರನ್ನು ಮರುಮತಾಂತರಗೊಳಿಸಲು ಇಚ್ಛೆಪಟ್ಟರೆ ಅವರು ಅದಕ್ಕಾಗಿ ತಮ್ಮ ತನುಮನಧನಗಳಿಂದ ಸೇವೆ ಸಲ್ಲಿಸುವವರಾಗಬೇಕು.

ಈ ಸಂಸ್ಥಾನದ ಹಿಂದೂಗಳಿಗೆ ಮರುಮತಾಂತರದ ಕೆಲಸವನ್ನು ಮುಂದುವರಿಸಲು ಧನಸಹಾಯಬೇಕಾಗಿದ್ದರೆ ಅವರು ಅದನ್ನು ಹಿಂದೂಗಳಿಂದಲೇ ಕೇಳಬೇಕು. ಹೀಗೆಮಾಡುವುದೆಂದರೆ ಇತರ ಮತಗಳಿಗೆ ವಿರೋಧಕಾರ್ಯ ಮಾಡಿದ್ದಾಗುವುದಿಲ್ಲ.

ಅಪಪ್ರಚಾರ ಸುಳ್ಳು

ತಿರುವಾಂಕೂರಿನಲ್ಲಿ ಇತರ ಮತದವರಿಗೆ ತೊಂದರೆಕೊಡಲಾಗುತ್ತಿದೆ ಎಂಬ ಅಪಪ್ರಚಾರವು ನಡೆಯುತ್ತಿದೆ. ಇದು ತೀರಾ ಸುಳ್ಳು.

ಮುಸಲ್ಮಾನರ ಹಿತಗಳನ್ನು ತಿರುವಾಂಕೂರಿನ ದಿವಾನರಾಗಿರುವ ನಾನು ದಯೆದಾಕ್ಷಿಣ್ಯವಿಲ್ಲದೆ ಹಾಳುಮಾಡುತ್ತೇನೆಂದು ಒಂದು ಮುಸ್ಲಿಂ ಪತ್ರಿಕೆಯು ಅಗ್ರಲೇಖ ಬರೆದಿದೆ. ನಾನು ಪಾಕಿಸ್ಥಾನಕ್ಕೆ ವಿರೋಧಿಯಂತೆ.

"ಪಾಕಿಸ್ಥಾನವೆಂಬುದಿದು ಒಂದು ರಾಜಕೀಯ ಸಮಸ್ಯೆ ಅಲ್ಲದೆ ಮತವಿಚಾರದ ಪ್ರಶ್ನೆ ಅಲ್ಲ. ಪಾಕಿಸ್ಥಾನವೆಂಬುದು ಬರೀ ಒಂದು ಭ್ರಮೆ, ಅದು ಚಿರಕಾಲ ಬಾಳುವಂತಹದಲ್ಲ. ಅದೊಂದು ಕೃತಕ ಘೋಷಣೆಯಾಗಿರುತ್ತದೆ ಎಂದು ನನ್ನ ಅಭಿಪ್ರಾಯ ಹೌದು. ಅಂತಹ ರಾಜಕೀಯ ಸಮಸ್ಯೆಗೆ ನಾನು ನಿಜವಾಗಿಯೂ ವಿರೋಧ ಸೂಚಿಸಿದ್ದೇನೆ. ಆದರೆ ಇಸ್ಲಾಮಿನಂತಹ ಮತವಿಚಾರವೇ ಬೇರೆ.

ಇಂಗ್ಲೆಂಡಿನಲ್ಲಿ ಪ್ರಚಾರ

ಬ್ರಿಟನಿನಲ್ಲಿ ಕೆಲವು ಪತ್ರಿಕೆಗಳು ನನ್ನನ್ನು ಕ್ರೈಸ್ತ ವಿರೋಧಿ ಎಂದು ಸಂಬೋಧಿಸಿದ ನಿದರ್ಶನಗಳು ನನ್ನ ಗಮನಕ್ಕೆ ಬಂದಿದೆ. ಕಲ್ಕತ್ತದ ಒಂದು ಕ್ರೈಸ್ತ ಪತ್ರಿಕೆಯೂ ಅದೇರೀತಿ ಬರೆದಿದೆ.

ಈ ಸುಳ್ಳು ಪ್ರಚಾರದ ಪತ್ರಿಕೆಗಳಿಂದ ನಾನು ಕ್ಷಮಾಪಣೆಯನ್ನು ಕೊಡುವಂತೆ ಕೇಳಿದ್ದೇನೆ. ಕಾರಣ ಅವುಗಳು ತಪ್ಪು ತಿಳುವಳಿಕೆಯಿಂದ ಉಲ್ಲೇಖಿಸಲ್ಪಟ್ಟವೂ ಮತ್ತು ಮತೀಯ ಕ್ರೋಧರಾಗವಿಕಾರಗಳಿಂದ ಬರೆಯಲ್ಪಟ್ಟವೂ ಆಗಿರುತ್ತವೆ.

ನಿಜಸ್ಥಿತಿ

ನಾನು ಬರೆದ "ವಿಶ್ವಧರ್ಮ ತತ್ವಗಳು" ಎಂಬ ಪುಸ್ತಕವನ್ನು ನಮ್ಮ ಸಂಸ್ಥಾನದ (ತಿರುವಾಂಕೂರಿನ) ಶಾಲೆಗಳಲ್ಲಿ ಕಡ್ಡಾಯವಾಗಿ ಕಲಿಸಬೇಕಾದ ಆಜ್ಞೆಯನ್ನು ನನ್ನ ಜವಾಬುದಾರಿಕೆಯಲ್ಲಿರುವ ಸರಕಾರವು ಹೊರಡಿಸಿದೆ ಎಂದು ಪತ್ರಿಕೆಗಳು ಸಾರುತ್ತವೆ. ಇದು ಸುಳ್ಳಾಗಿರುತ್ತದೆ.

ತಿರುವಾಂಕೂರಿನಲ್ಲಿ ಯಾವ ಮತಸ್ಥರಿಗೂ ಯಾವತರದ ನಿರ್ಬಂಧಗಳೂ ಹಾಕಲ್ಪಟ್ಟಿರುವುದಿಲ್ಲ. ಇತ್ತೀಚೆಗೆ ಎಂಟನೆ ಹೆನ್ರಿ ಇಂಗ್ಲೆಂಡಿನಲ್ಲಿ ಕೂಡಾ ಕೆಥೋಲಿಕ್ ಕ್ರೈಸ್ತರ ಮೇಲೆ ಕ್ರೂರವಾದ ಶಾಸನಗಳನ್ನು ಜಾರಿಮಾಡಿದ್ದರು. ಆದರೆ ಅಂತಹದೇನೂ ತಿರುವಾಂಕೂರಿನಲ್ಲಿಲ್ಲ. ಬೌದ್ಧ ಮತಪ್ರಚಾರವಾದ ಕಾಲದಿಂದ ಇದು ತನಕ ಹಿಂದೂಧರ್ಮಿಯರು ಯಾವಪ್ರಾಂತದವರ ಮೇಲೂ ವಿರೋಧ ಭಾವನೆ ತಾಳಿಲ್ಲ. ಪವಿತ್ರ ಹಿಂದೂಧರ್ಮಾಭಿಮಾನಿಗಳು ಮುಂದೆಯೂ ಹಾಗೆ ಮಾಡುವುದಿಲ್ಲವೆಂದು ನನ್ನ ಹಾರೈಕೆ.

ಇಂದು ತಿರುವಾಂಕೂರಿನ ಪ್ರಜಾಪ್ರತಿನಿಧಿಸಭೆಯಲ್ಲಿ ಸ್ವತಂತ್ರವಾಗಿರುವ ದೊಡ್ಡ ಪಕ್ಷವೆಂದರೆ ಕ್ರೈಸ್ತಮತದ ಪ್ರತಿನಿಧಿಗಳಿರುತ್ತದೆಂಬುದನ್ನು ಯಾರೂ ಮರೆಯಬಾರದು.

ಸಾರ್ವಜನಿಕ ಮತಾಂತರ ನಿಲ್ಲಬೇಕು

ಭಾಷಣಾಂತ್ಯದಲ್ಲಿ ಸರ್. ರಾಮಸ್ವಾಮಿಯವರು ಹೀಗೆಂದರು: ತಾವು ಮಾಡಿದಂತೆ ಇತರರೂ ಧರ್ಮಪ್ರಚಾರ, ಮತಾಂತರಗಳನ್ನು ಮಾಡುವುದನ್ನು ತಡೆಯುವುದು ಯಾವ ಮಹಾ ಮತವು ಖಂಡನ ಇಲ್ಲವೆ ಧರ್ಮಗುರುವಿನ ಕೆಲಸವಲ್ಲ. ಮತಾಂತರಗೊಳಿಸುವ ಒಂದು ಧರ್ಮವಿದ್ದರೆ ಹಿಂದೂಧರ್ಮವು ಮರುಮತಾಂತರಗೊಳಿಸುವ ಒಂದು ಧರ್ಮವಿರುತ್ತದೆಂದು ಎಲ್ಲರೂ ತಿಳಿಯಬೇಕು. ಸ್ವಂತ ಇಚ್ಛೆಯಿಂದ ಯಾರಾದರೂ ವೈಯಕ್ತಿಕವಾಗಿ ಮತಾಂತರಹೊಂದುವುದಕ್ಕೆ ಆಕ್ಷೇಪವಿಲ್ಲ. ಆದರೆ ಇಂತಹ ಒತ್ತಾಯದ ಮತಾಂತರ ಕಾರ್ಯವನ್ನು ಹಿಂದೂಗಳಾದವರು ಮರುಮತಾಂತರಗೊಳಿಸುವುದರ ಮೂಲಕ ಎದುರಿಸಲೇಬೇಕು. ಅದು ಅವರ ನೀತಿ ಬದ್ಧವಾದ ಕರ್ತವ್ಯವಿರುತ್ತದೆ.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st July, 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,39,556- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,065 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39,895- 5- 4
7. Other liabilities and undisbursed profits	3,62,459- 2- 5		
Total	1,14,27,102-10-11	Total	1,14,27,102-10-11

ಪ್ರಚಲಿತ ಸಮಾಚಾರಗಳು

[illegible] ಆದರೆ ಅದನ್ನ [illegible] ಕೆಲಸವು ತೀವ್ರವಾಗಿ ನಡೆದು ಬಿಟ್ಟಿತು. [illegible] ಶದ ಎಣ್ಣೆ ಸಂಪತ್ತು ಅಪಾರವಾದುದೆಂದು ಹಿಂದೆ [illegible] ರಕದ ಎಣ್ಣೆ ಬಾವಿಗಳು ಈಗ ಬಂದಾಗಿವೆ ಎಂದು ವಾರ್ತೆಯಿದೆ. ಆದುದರಿಂದಲೆ ಅದು ಪರ್ಷಿಯಾದ ಎಣ್ಣೆ ಪ್ರದೇಶಗಳ ಮೇಲೆ ದೃಷ್ಟಿ ಹೊರಳಿಸುತ್ತಿರುವುದು. ಬ್ರಿಟಿಷ ಸಾಮ್ರಾಜ್ಯದ ಅಧಾರಗಳಲ್ಲಿ ಎಣ್ಣೆಯೂ ಒಂದು. ರಷ್ಯಾದೇಶದ ಪ್ರಗತಿ ನಡೆದುದು ಈ ಎಣ್ಣೆಯ ಉಪಯೋಗದಿಂದಲೆ.

ಹಿಂದೂಸ್ಥಾನದ ಔದ್ಯೋಗೀಕರಣದ ಬಗ್ಗೆ ನಿರೂಪಿಸಲ್ಪಟ್ಟ "ಮುಂಬ್ಬಾ ಯೋಜನೆ"ಯ ಕುರಿತು ದೀರ್ಘ ಚರ್ಚೆಯು ನಡೆಯಿತು —ಕೇಂದ್ರ ಎಸೆಂಬ್ಲಿಯಲ್ಲಿ. "ಮುಂಬ್ಬಾ ಯೋಜನೆ"ಯಲ್ಲಿ ಹಲವು ದೋಷಗಳಿವೆಯೆಂದು ವಾದಿಸಲಾಯಿತು. ಈ ಯೋಜನೆಯು ಸ್ವೀಕೃತವಾಗಬಾರದೆಂದು ಮುಸ್ಲಿಮ ಲೀಗಿನಿಂದ ಮಂಡಿಸಲಾದ ಠರಾವು, ಆ ಕುರಿತು ಪರ್ಯಾಲೋಚಿಸಲು ಒಂದು ಸಮಿತಿ ರಚನೆಯಾಗಬೇಕೆಂದು ಕಾಂಗ್ರೆಸ್ಸಿನ ತಿದ್ದುಪಡಿಯೊಡನೆ, ವಿಭಜನೆಯಿಲ್ಲದೆನೆ ಮಂಜೂರಾಯಿತು. ಕಾಂಗ್ರೆಸ್ ಮುಸ್ಲಿಂ ಲೀಗಿನ ಐಕ್ಯದ ಎದುರು ಈ ಯೋಜನೆಯನ್ನು ಮಂಜೂರು ಮಾಡುವ ಕುರಿತು ಸರಕಾರವು ದಾರಿಕಾಣದಾಯಿತು.

ಯುದ್ಧೋತ್ತರದಲ್ಲಿ ಹಿಂದೂದೇಶದ ಸಾಂಪತ್ತಿಕ ಉದ್ಧಾರದ ಬಗ್ಗೆ ಯಾವತ್ತು ಯೋಜನೆಗಳು ಯಶಸ್ವಿಯಾಗಿ ನಡೆಯಬೇಕಾದರೆ-ರಾಷ್ಟ್ರೀಯ ಸರಕಾರದ ಸ್ಥಾಪನೆಯಾಗಲೇ ಬೇಕೆಂದೂ, ಸಾಂಪತ್ತಿಕ ಧೋರಣದಿಂದ ಹಿಂದೂದೇಶದಲ್ಲಿ ಸ್ವತಂತ್ರ ಸರಕಾರದ ಸ್ಥಾಪನೆಯ ಸಮಸ್ಯೆಯನ್ನು ಬದಿಗಿರಿಸುವುದು ಸರಿಯಲ್ಲವೆಂದೂ 'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯು ಅಭಿಪ್ರಾಯಪಿರುತ್ತದೆ.

ಹಿಂದೂದೇಶದ ಜನರ ಜೀವನದ ಮಟ್ಟವು ಏರಿಸಲ್ಪಡುವಂತೆ, ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಹಿಂದೂದೇಶಕ್ಕೆ, ಯಶಸ್ವಿ ತರದಲ್ಲಿ ಔದ್ಯೋಗೀಕರಿಸಲ್ಪಟ್ಟ ಮತ್ತು ಪ್ರಬಲವಾದ ದೇಶಗಳ ಸಹಕಾರವೂ, ಅವುಗಳೊಡನೆ ಸಮಾನತೆಯು ದೊರಕಬೇಕೆಂದೂ, ಈ ತನಕ ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಹಿಂದೂದೇಶವು ಯಾವತ್ತು ಪ್ರತಿಫಲಗಳಿಲ್ಲದೆ, ಇತರ ದೇಶಗಳಿಗಾಗಿ ಹೆಚ್ಚಿನ ಹೊರೆಯನ್ನು ಹೊರಬೇಕಾಗಿರುವ ಪದ್ಧತಿಯು ಹೋಗಬೇಕೆಂದೂ ಕೋರಿ ಅಮೆರಿಕಾದ ನಗರದಲ್ಲಿ ಅಂತರಾಷ್ಟ್ರೀಯ ವ್ಯಾಪಾರಿ ಪರಿಷತ್ತಿನಲ್ಲಿ, ಹಿಂದೀಯ ವ್ಯಾಪಾರಿ ಪ್ರಾತಿನಿಧ್ಯ ಮಂಡಳದ ಸೆರ್. ಸಿ. ಬಿ. ಮೆಹತಾರವರು ೫೨ ರಾಷ್ಟ್ರಗಳ ಪ್ರತಿನಿಧಿಗಳ ಎದುರು ಭಾಷಣವಿತ್ತರು.

ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಹಿಂದೀಯ ಹಡಗುಗಳು ಅತ್ಯಂತ ಉಪಯುಕ್ತವಾಗಿವೆ. ಯುದ್ಧೋತ್ತರದ ವ್ಯಾಪಾರದಲ್ಲಿ ವ್ಯಾಪಾರಿ ಹಡಗುಗಳು ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗುವವು. ಹಿಂದೂದೇಶದಲ್ಲಿ ಹಡಗಗಳನ್ನು ಕಟ್ಟುವ ಕೈಗಾರಿಕೆಯ ಸ್ಥಾಪನೆಯ ಕುರಿತು ಅವಕಾಶ ಅನುಕೂಲವಿದ್ದರೂ, ಆ ಕುರಿತು ಸರಕಾರದ ನಿರ್ಲಕ್ಷ್ಯವೂ ಹೋಗಬೇಕು. ಹಿಂದೂದೇಶದಲ್ಲಿ ಹಡಗು ಕಟ್ಟುವ ಕೈಗಾರಿಕೆಯು ಸ್ಥಾಪನೆಯಾಗುವಂತೆ, ಹಿಂದೂ ದೇಶಕ್ಕೆ ಅಮೆರಿಕಾ, ಬ್ರಿಟನು ಇತ್ಯಾದಿ ಮಹಾರಾಷ್ಟ್ರಗಳ ಸಹಕಾರ, ಸಹಾನುಭೂತಿ ಅವಶ್ಯವಿದೆ-ಎಂಬ ಅಭಿಪ್ರಾಯವನ್ನು ಅಂತರಾಷ್ಟ್ರೀಯ ವ್ಯಾಪಾರಿ ಪ್ರತಿನಿಧಿಗಳಿಗೆ ಹಿಂದೀಯ ವ್ಯಾಪಾರಿ ಪ್ರಾತಿನಿಧ್ಯ ಮಂಡಳದವರು ಬಿತ್ತರಿಸಿದರು.

ಜಗತ್ತಿನ ಉದ್ಧಾರವಾಗಬೇಕಾದರೆ ಕೈಗಾರಿಕೆ, ವ್ಯಾಪಾರ ಇತ್ಯಾದಿಗಳು ಖಾಸಗಿ ಕೈಗಳಲ್ಲಿ ನಡೆಯುವುದರಲ್ಲಿ ಉತ್ತಮವಿದೆ ಎಂದು ಅಭಿಪ್ರಾಯವಿದ್ದ ಠರಾವು ಮೇಲಿನ ವ್ಯಾಪಾರಿ ಪರಿಷತ್ತಿನಲ್ಲಿ ಸ್ವೀಕೃತವಾಯಿತಂತೆ.

ಹಿಂದೀಯ ರಾಷ್ಟ್ರೀಯ ಪರಿಷತ್ತೊಂದನ್ನು ಲಂಡನಿನಲ್ಲಿ ಜರಗಿಸುವ ಕುರಿತು ಯತ್ನಗಳು ನಡೆಯುತ್ತಿವೆ. ಈ ಪರಿಷತ್ತಿನಲ್ಲಿ ಇಂಗ್ಲಾಂಡಿನಲ್ಲಿರುವ ಎಲ್ಲಾ ಹಿಂದೀಯ ಸಂಘಗಳು ಭಾಗವಹಿಸುವಂತೆ ನಿರ್ಧರಿಸಲಾಗಿದೆ. ಅಲ್ಲೀಗ, ಇಂಡಿಯಾ ಲೀಗ್, ಕಾಂಗ್ರೆಸ್ಸಿಗರ ಸಂಘ, ಠಾಗೋರ್ ಸಂಘ, ಹಿಂದೀಯ ಮುಸ್ಲಿಸ್, ಮತ್ತು ಹಿಂದೀಯ ಕೆಲಸಗಾರರ ಸಂಘ, ಹೀಗೆ ಅನೇಕ ಸಂಘಗಳು ಇವೆ. ಬ್ರಿಟನಿನಲ್ಲಿರುವ ಹಿಂದೀಯರ ಸಮಸ್ಯೆ, ಹಿಂದೂದೇಶದ ರಾಜಕೀಯ ಸಮಸ್ಯೆ "ಕ್ವಿಟ್ ಇಂಡಿಯಾ" ಠರಾವು, ಪಾಕಿಸ್ತಾನ-ಇವೆ ಮೊದಲಾದ ವಿಚಾರಗಳ ಕುರಿತು ಈ ಪರಿಷತ್ತಿನಲ್ಲಿ ಪ್ರಸ್ತಾಪಿಸಲಾಗುವುದಂತೆ. ಈ ಪರಿಷತ್ತಿಗೆ ಸಾಧಾರಣ ೧೦೦ ಮಂದಿ ಡೆಲಿಗೇಟರು ಬರಬಹುದೆಂದು ನಿರೀಕ್ಷಿಸಲಾಗಿದೆ.

ಹಿಂದೂದೇಶಕ್ಕೆ ಈ ಜಗತ್ತಿನಲ್ಲಿ ಒಂದು ಮನ್ನಣೆಯ ಸ್ಥಾನವನ್ನು ದೊರಕಿಸಿಕೊಳ್ಳಲು, ಈ ಯತ್ನಗಳೆಲ್ಲಾ ನಡೆಯುತ್ತಿವೆ. ನಿದ್ರಾವಶರಾದವರನ್ನು ಎಚ್ಚರಿಸುವುದು ಸುಲಭ. ಆದರೆ ನಿದ್ರೆಯನ್ನು ನಟಿಸಿ ಕಣ್ಣು ಮುಚ್ಚಿ ಬಿದ್ದವರನ್ನು ಎಚ್ಚರಿಸುವುದು ಕಷ್ಟ. ಹಿಂದೂದೇಶದ ಸಮಸ್ಯೆಯ ಕುರಿತು ಚರ್ಚಿಲ ತಂಡವನ್ನು ಎಚ್ಚರಿಸುವುದು ಇಷ್ಟೆ ಕಷ್ಟವೆನಿಸುತ್ತದೆ.

ಮೃತ್ಯುವು ಜಗತ್ತಿನಲ್ಲೆಲ್ಲಾ ತಾಂಡವನೃತ್ಯವನ್ನಾಡುತ್ತಿದ್ದರೂ ಪ್ರಜಾಪ್ರಭುತ್ವ ನೀತಿಯನ್ನು ನಿಷ್ಠೆಯಿಂದ ಎತ್ತಿ ಹಿಡಿಯುವಂತೆ ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲಿ ಬುದ್ಧಿ ವಿವೇಚನೆಯು ಇನ್ನೂ ಆಗಿಲ್ಲ.

ಇಜಿಪ್ತದಲ್ಲಿ ಬ್ರಿಟಿಷ ರಾಯಭಾರಿಗಳ ಕೊಲೆಯು ಕೆಲವು ದಿನಗಳ ಹಿಂದೆ ನಡೆಯುತ್ತಷ್ಟೆ. ಈ ಕೊಲೆಯು ನಡೆಯಿಸಿದವರು ಕೆಲವು ಯಹೂದಿ ತರುಣರು. ಕೊಲೆಗೊಂಡ ಲಾರ್ಡರು ಮಧ್ಯಪೂರ್ವದಲ್ಲಿ ಯಹೂದಿಯರ ಹಿತಗಳಿಗೆ ವಿರೋಧಿಗಳಾಗಿರುವರು ಎಂಬ ಭಾವನೆಯಿಂದ ಭ್ರಾಂತರಾಗಿ ಆ ಯಹೂದಿ ತರುಣರು ಆ ಕೃತ್ಯವನ್ನು ನಡೆಯಿಸಿದರೆಂದು ಈಗ ತಿಳಿದುಬಂದಿದೆ.

ಯಹೂದಿಯರು ಜರ್ಮನಿಯಿಂದ ಹೊರತಳ್ಳಲ್ಪಟ್ಟರು. ನಾಜೀ ಪ್ರೇತವು ಅವರನ್ನು ಹೋದೆಡೆಗಳೆಲ್ಲಾ ಬೆನ್ನಟ್ಟಿ ಹೋಗುತ್ತಿತ್ತು. ಅಂತಹ ಯಹೂದಿಯರಿಗೆ ಸ್ಥಿರವಾದ ಬಿಡಾರವನ್ನು ಮಾಡಿಕೊಡಲು ಬ್ರಿಟನು ತುಂಬಾ ಸಹಾನುಭೂತಿಯನ್ನು ತೋರಿಸಿತು. ಪೆಲೆಸ್ತೀನದಲ್ಲಿ ಯಹೂದಿಯರಿಗೆ ಅವಕಾಶಮಾಡಿ ಕೊಡಲಾಯಿತು. ಆದರೂ ಯಹೂದಿಯರು ಕೆಲವರು ತೃಪ್ತಪಟ್ಟಂತೆ ತೋರುವುದಿಲ್ಲ.

ಅವರ ಈ ವರ್ತನದಿಂದ ಬ್ರಿಟಿಷ ಪ್ರಧಾನ ಚರ್ಚಿಲರು ಕುಪಿತರಾಗಿರುವರು. ಯಹೂದಿಯರ ಹಿತದ ಕುರಿತು ತಾವು ಈ ತನಕ ಕೈಗೊಂಡ ಧೋರಣವನ್ನು ಬದಲಾಯಿಸಬೇಕಾಗಿ ಬರಬಹುದು ಈ ತರದ ಭಯಾನಕ ಕೃತ್ಯಗಳಿಂದ, ಎಂದು ಚರ್ಚಿಲರ ಎಚ್ಚರಿಕೆ ಹೊರಡಿರುವುದು.

ಪೆಲೆಸ್ತೀನದಲ್ಲೀಗ ಬಾರಿ ಚಟುವಟಿಕೆಗಳು ನಡೆಯುತ್ತಿವೆ. ಭಯಾನಕ ಕೃತ್ಯಗಳನ್ನು ಗುಪ್ತವಾಗಿ ನಡೆಯಿಸಲ್ಪಡುವ ಸಂಸ್ಥೆಗಳ ಸದಸ್ಯರೆಂಬ ಸಂಶಯಕ್ಕೆ ಒಳಗಾದ ಅನೇಕ ಮಂದಿಗಳ ದಸ್ತಗಿರಿಯು ಆಗಿರುತ್ತದೆ. ಈ ಕಾರ್ಯದಲ್ಲಿ ಯಹೂದಿ ಸಂಘದ ಅಧ್ಯಕ್ಷರ ಸಹಕಾರವು ಒದಗಿರುತ್ತದೆ.

ಪಶ್ಚಿಮ ಯುರೋಪದ ಕುರಿತು ಬ್ರಿಟಿಷ ಯೋಜನೆಯೊಂದು ಸಿದ್ಧವಾಗಿದೆಯಂತೆ. ಪಶ್ಚಿಮ ಯುರೋಪದ ಎಲ್ಲಾ ರಾಷ್ಟ್ರಗಳನ್ನು ಒಂದು ಫೆಡರೇಶನಿನಲ್ಲಿ (ಸಂಯುಕ್ತ ಯೋಜನೆ) ಒಟ್ಟುಗೂಡಿಸಿ, ಬ್ರಿಟನಿಗೂ ಈ ರಾಷ್ಟ್ರಗಳಿಗೂ ಎಲ್ಲಾ ವಿಚಾರಗಳಲ್ಲಿ ಕೂಡಿಬರುವ ಸಂಭಂಧಗಳು ಉಂಟಾಗುವಂತೆ ಸಾಧಿಸುವುದೆ, ಈ ಯೋಜನೆಯ ಉದ್ದಿಶ್ಯವಂತೆ. ಪ್ಯಾರಿಸಿಗೆ ತೆರಳಿದ ಚರ್ಚಿಲರು, ಫ್ರಾನ್ಸಿನ ಡಿಗೋಲೆಯೊಡನೆ ಈ ಪ್ರಸ್ತಾಪವೆತ್ತಿರುವರೆಂದು ತಿಳಿದು ಬಂದಿದೆ.

ಆದರೆ ತಮಗೆ ಸಮಾನತೆಯ ಸ್ಥಾನವು ಬೇಕು. ಅಮೆರಿಕಾ ಬ್ರಿಟನುಗಳ ಹಿತಸಾಧನೆಯ ಒಪ್ಪಂದಗಳಲ್ಲಿ ತಮಗೆ ಸೇರಲು ಇಚ್ಛೆಯಿಲ್ಲ-ಎಂಬುದಾಗಿ ಈ ರಾಷ್ಟ್ರಗಳು, ಮುಖ್ಯವಾಗಿ ಫ್ರಾನ್ಸ್ ವ್ಯಕ್ತಮಾಡಿದೆ ಎಂದು ತಿಳಿದುಬಂದಿದೆ.

ಫ್ರಾನ್ಸನ್ನು ಜರ್ಮನಿಯ ಶೃಂಖಲೆಗಳಿಂದ ವಿಮುಕ್ತಗೊಳಿಸಿದ ನಂತರ ಪ್ರಥಮ ಬಾರಿಗೆ ಪೆರಿಸ್ ನಗರಕ್ಕೆ ತೆರಳಿದ ಬಾರತೀಯ ಪತ್ರಿಕಾ ಪ್ರತಿನಿಧಿಗಳೊಬ್ಬರ ವರದಿಯೊಂದು ಪ್ರಕಟವಾಗಿರುತ್ತದೆ. ಜರ್ಮನರ ಭಯಾನಕ ಕೃತ್ಯಗಳಿಗೆ ಬಳಗಾದ ಫ್ರಾನ್ಸಿನ ಸ್ಥಿತಿಯು ಅತಿ ಚಿಂತಾಜನಕವಿದೆ ಎಂದು ಇದರಿಂದ ತಿಳಿಯಬೇಕಾಗಿದೆ. ಈ ವರದಿಯ ಕೆಲ ಅಭಿಪ್ರಾಯಗಳು ಹೀಗಿವೆ.

'ಯುದ್ಧದ ಮೊದಲು' ಬೆಡಗಿನ ದೃಷ್ಯಗಳಿಂದ ಕೂಡಿದ ಪೆರಿಸ್ ನಗರವು ಇಂದು ಪೂರ್ಣ ಲಯವಾದ ಸ್ಥಿತಿಯಲ್ಲಿ ಕಾಣಿಸುತ್ತಿದೆ. ಹಿಂದಿನ ವಿಷಯಸುಖಸಾಧನೆಯ ಸ್ಥಳಗಳು ಇಂದು ಪೂರ್ಣ ನಶಿಸಿಹೋಗಿವೆ. ಹಿಂದೆ, ಪೆರಿಸ್ ನಗರದ ಪ್ರತಿಯೊಂದು ಬೀದಿಗೆ ಒಂದು ಸಿನೆಮಗೃಹ ಇದ್ದುದು, ಈಗ ಒಂದೆ ಒಂದು ಸಿನೆಮಾ ಗೃಹವು ತೆರೆಯಲ್ಪಟ್ಟಿಲ್ಲ.

ಆಹಾರದ ಅಭಾವವು ಅತ್ಯಂತ ಕಠಿಣವಿದೆ. ಅಂಗಡಿಗಳಲ್ಲಿ ಆಹಾರಸಾಮಗ್ರಿಗಳ ಶೇಖರವು ಅತಿ ಕಡಿಮೆಯಿದೆ. ಆಹಾರ ಸಾಮಗ್ರಿಗಳನ್ನು ಪಡೆದುಕೊಳ್ಳುವರೆ ಜನರು ಸಾಲು ಸಾಲಾಗಿ ನಿಂತು ಬಹಳ ದೀರ್ಘಸಮಯ ಪರಿಶ್ರಮಿಸುತ್ತಿರುವ ದೃಶ್ಯಗಳು ತುಂಬಾ ಕಾಣಸಿಗುತ್ತಿವೆ. ನಮ್ಮ ದೇಶದಲ್ಲಿದ್ದಂತೆ,-ಕಳ್ಳಸಂತೆಯ ವ್ಯಾಪಾರಿಗಳು ಅಲ್ಲಿ ಕಡಿಮೆಯಿಲ್ಲ. ಒಂದು ರಾತಲು ಬೆಣ್ಣೆಯ ಕ್ರಯ ರೂ. ೩೫; ೧ ರಾತಲು ಚಾ ಸೊಪ್ಪಿನ ದರ ರೂ. ೭೦; ಒಂದು ಊಟದ ಕ್ರಯ ರೂ. ೧೪; ಸಂಚಾರ ಸೌಕರ್ಯಗಳು ಸರಿಯಾಗಿಲ್ಲದುದರಿಂದ. ಈ ತರದ ಪರಿಸ್ಥಿತಿಯು ಉಂಟಾಗಲು ಕಾರಣವಂತೆ. ಮುಂಚೆ ೭ ತಾಸಿಗಳೊಳಗೆ ಪೂರೈಸಲು ಆಗುವ ಪ್ರವಾಸಗಳ್ಯಲು ಈಗ ಅಲ್ಲಿ ಒಂದು ವಾರದ ಸಮಯ ತಗಲುತ್ತದಂತೆ.

ಜರ್ಮನ್ ಆಕ್ರಮದ ದುಷ್ಪರಿಣಾಮವಾಗಿ ಜನರು ಮಹಾ ಸಂಕಷ್ಟಗಳನ್ನು ಅನುಭವಿಸಬೇಕಾಗಿ ಬಂದದೆ. ಎಲ್ಲೆಲ್ಲೂ ಕ್ಷಾಮ, ರೋಗರುಜೆಗಳ ಹಾವಳಿಯು ನಡೆಯುತ್ತಿದೆ. ಈ ಕಾರಣದಿಂದ ಹೆಚ್ಚಿನ ಜನರು ಧೃತಿಕೆಟ್ಟಿರುವರು. ಅಲ್ಲಿನ ಜನರ ರಸಭಾವಗಳೆಲ್ಲಾ ಇಂಗಿ ಹೋಗಿ ಅವರು ವಿಚಾರಹೀನರಾಗಿರುತ್ತಾರೆ.

ಫ್ರಾನ್ಸಿನ ಭವಿಷ್ಯದ ಕುರಿತು-ಕೊಮ್ಯುನಿಸ್ಟ ಪಂಗಡವೆ ಈಗ ಬಲವಂತಾಗಿ ಇದೆ. ಎಡಪಕ್ಷದವರ ಪ್ರಭಾವವು ದಿನೆ ದಿನೆ ವೃದ್ಧಿಯಾಗುತ್ತಿದೆ. ಕೊಮುನಿಸ್ಟ ಪಕ್ಷವು ಅಧಿಕಾರ ಪಡೆಯಬಹುದೆಂದು ಬಲವಾದ ನಂಬಿಕೆಗಳಿವೆ.

ಜನರಲ್ ಡಿಗೋಲೆಯವರಿಗೆ ಜನಾಧಾರ ತುಂಬಾ ಇದೆ "ಚರ್ಚಿಲ್ಲರು ಬ್ರಿಟಿಷರ ನಾಯಕರು ಹೇಗೊ ಹಾಗೆನೆ ಡಿಗೋಲೆಯವರು ನಮ್ಮ ನಾಯಕರುಗು" ಎಂಬುದು ಪ್ರೆಂಚ ಜನರ ಭಾವನೆಯಾಗಿರುತ್ತದೆ.

ಫ್ರಾನ್ಸನ್ನು ವಿಮುಕ್ತಗೊಳಿಸುವುದರಲ್ಲಿ ಗುಪ್ತವಾಗಿ ಕಾರ್ಯಿಸುವ ಪಂಗಡಗಳನೇಕವಿದ್ದರೂ, ಅವುಗಳಲ್ಲಿ ಕೊಮುನಿಸ್ಟರೆ ನಾಯಕತ್ವವನ್ನು ವಹಿಸಿ ಕಾರ್ಯವು ಸಾಗುತ್ತಿದೆ. ದೇಶಕ್ಕೆ ಒದಗಿದ ಮಹಾಕಷ್ಟದ ಎದುರು, ಶ್ರೀಮಂತ, ಮಜೂರ, ರೈತ, ಸಣ್ಣ ವ್ಯಾಪಾರಿ, ಕೆಥೊಲಿಕ್, ಪ್ರೊಟೆಸ್ಟಾಂಟ್ ಇತ್ಯಾದಿ ಸಂಗಡಗಳು ವಿಲೀನಗೊಂಡು ಕಾರ್ಯಸಾಧನೆ ನಡೆಯುತ್ತಿದೆ. ದೇಶದಪುನರ್ರಚನೆಯ ಕುರಿತು ಎಲ್ಲರೂ ಒಳ್ಳೆ ಹುರುಪನ್ನೂ ಚೇತನವನ್ನೂ ತೋರಿಸುತ್ತಿರುವರು.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಯಾಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ಸೂ— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ವೈದಕೀಯ ಸಂಶೋಧನದ ಅವಶ್ಯಕತೆ

ಗಾಂಧೀ ವೈದ್ಯರ ಸಲಹೆ

ಆಯುರ್ವೇದಕ್ಕೆ ಮಹತ್ವ

ಮಹಾತ್ಮಾ ಗಾಂಧಿಯವರ ಆಪ್ತ ವೈದ್ಯರೂ, ಸ್ನೇಹಿತರೂ, ಮತ್ತು ಅಖಿಲ ಭಾರತ ಖ್ಯಾತಿಯ ವೈದ್ಯ ವಿಜ್ಞಾನಿಗಳಾದ ಡಾ। ಜೀವರಾಜ್ ಮೆಹತಾ ಅವರು ಮದ್ರಾಸಿನಲ್ಲಿ ಅಖಿಳಭಾರತ ವೈದ್ಯಾಭ್ಯಾಸಗಾರರ (ಡಾಕ್ಟರರುಗಳ) ಸಂಘವನ್ನು ಉದ್ಘಾಟನೆ ಮಾಡಿದರು.

ಈ ಸಮಾರಂಭದಲ್ಲಿ ಡಾ। ಮೆಹತಾರವರು ಭಾರತದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಅಪಾರವಾದ ಸಂಶೋಧನ ಅಭ್ಯಾಸ, ಪರಿಶ್ರಮಗಳು ನಡೆಯಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಇದಕ್ಕಾಗಿ ಆಗಲೇ ಅನೇಕ ಸಂಸ್ಥೆಗಳೂ ಪ್ರಯತ್ನಿಸುತ್ತಿವೆ.

"ಈ ಸಂಸ್ಥೆಗಳ ಮೂಲಕ ನಾವು ವಿಶಾಲವಾದ ವೈದ್ಯಕೀಯ ಜ್ಞಾನಾನುಭವನ್ನು ಗಳಿಸಿಕೊಳ್ಳುವುದು ಮಾತ್ರವಲ್ಲ, ನಮ್ಮ ಸ್ವಂತ ಶ್ರಮದಿಂದ ನಮ್ಮ ಉದ್ಯಮದಲ್ಲಿ ಪರಿಶ್ರಮ ನಡೆಸಿ ಪರಿಶೋಧನೆಗಳ ಮೂಲಕ ಅಂಥಾ ಜ್ಞಾನವನ್ನು ಹೆಚ್ಚಿನ ಅಭಿವೃದ್ಧಿಗೊಳಿಸಿ ಮಾನವ ಜನಾಂಗದ ಸೇವೆಗೆ ಅದನ್ನು ಸವಿಸಬೇಕು" ಹೀಗೆಂದು ವೈದ್ಯ ಉದ್ಯಮದ ಉನ್ನತ ಉದ್ದೇಶವನ್ನು ಸಂಕ್ಷೇಪಿಸಿದರು

ಔಷಧಿಗಳ ಮಹತ್ವ

ಡಾ। ಜೀವರಾಜ್ ನಾರಾಯಣ ಮೆಹತಾ ಅವರ ಭಾಷಣದಲ್ಲಿ ಕೊಟ್ಟ ಸೂಚನೆ, ಸಲಹೆಗಳು ಈ ಕೆಳಗೆ ಸಂಕ್ಷೇಪವಾಗಿ ಸಂಗ್ರಹಿಸಲಾಗಿದೆ.

ಸರಕಾರವು ಯುದ್ಧಾನಂತರದ ಕೈಗಾರಿಕೆ, ವಿಜ್ಞಾನಗಳ ಅಭಿವೃದ್ಧಿ ಜೀರ್ಣೋದ್ಧಾರಗಳಿಗಾಗಿ ಅಪಾರ ಹಣವನ್ನು ವ್ಯಯಿಸಲು ಸಿದ್ಧತೆಯನ್ನು ತೋರಿಸಿದೆ ಆ ಹಣದಲ್ಲಿ ಒಂದು ಯೋಗ್ಯ ಅಂಶವು ವೈದ್ಯಕೀಯ ಅಭ್ಯಾಸದ ಪ್ರಗತಿ ಪರಿಶೋಧನೆಗಳಿಗೆ ಉಪಯೋಗಿಸಬೇಕು

ಹಣವನ್ನು ಶೇಖರಿಸುವುದಕಿಂತಲೂ ಅದನ್ನು ಯೋಗ್ಯವಾದ ರೀತಿಯಲ್ಲಿ ಸಿರ್ವಹಿಸುವುದು ಮುಖ್ಯವಾದ ವಿಚಾರ ಇಂಗ್ಲಂಡಿನ ಸರಕಾರವು ವೈದ್ಯಕೀಯ ಸಂಶೋಧನೆಗಾಗಿ ಬಹಳ ಹಣವನ್ನು ಅಲ್ಲಿನ ರಾಷ್ಟ್ರೀಯ ವೈದಕೀಯ ಸಂಪಕ್ಕೆ ಒಪ್ಪಿಸಿದೆ ಅವರು ಆ ಹಣದ ಸತ್ಪ್ರಯೋಜನವನ್ನು ಮಾಡುತ್ತಿರುವರು.

ಭಾರತದಲ್ಲಿಯೂ ವೈದ್ಯಕೀಯ ಪರಿಶ್ರಮಕ್ಕೆ ಉಪಯೋಗಿಸಲ್ಪಡುವ ಸ್ವಲ್ಪ ಹಣಸಂಗ್ರಹವಿದೆ. ಆದರೆ ಅದು ಹೆಚ್ಚಾಗಿ ಸರಕಾರಿ ಸಂಶೋಧನಾ ಮಂದಿರಗಳಿಗಾಗಿ ಉಪಯೋಗಿಸಲ್ಪಡುವುದು ಈ ಸರಕಾರಿ ಸಂಶೋಧನಾ ಮಂದಿರಗಳಿಂದ ದೇಶದ ಮೆಡಿಕಲ್ (ವೈದ್ಯಕೀಯ) ಕಾಲೇಜುಗಳಿಗೂ, ಶಾಲೆಗಳಿಗೂ ಹೆಚ್ಚಿನ ಯಾವ ಉಪಯೋಗವಾಗುವುದಿಲ್ಲ

ಪಾಶ್ಚಾತ್ಯ ದೇಶಗಳಲ್ಲಿ ಪ್ರತಿಯೊಂದು ವೈದ್ಯಕೀಯ ಶಿಕ್ಷಣಾಲಯದಲ್ಲಿ ಒಂದೊಂದು ಪರಿಶೋಧನಾಲಯವಿದೆ ಆದರೆ ಭಾರತದಲ್ಲಿ ಅನೇಕ ವೈದ್ಯಕೀಯ ಕಾಲೇಜುಗಳಿದ್ದರೂ ಅವುಗಳಲ್ಲಿ ಒಂದೆರಡರಲ್ಲಿ ಮಾತ್ರ ಪರಿಶೋಧನಾ ಮಂದಿರಗಳು ಇವೆ ಉಳಿದವು ಬರೀ ಶಿಕ್ಷಣ, ಪ್ರತ್ಯಕ್ಷಾನುಭವ ಮಾತ್ರ ಕೊಡುವ ಸಂಸ್ಥೆಗಳು. ಅಲ್ಲಿ ದೊರಕಿದ ಅನುಭವವನ್ನು ಪ್ರಗತಿಪಡಿಸಲು ಯೋಗ್ಯ ವಿದ್ಯಾರ್ಥಿಗಳು ಸಂಶೋಧನೆಯಲ್ಲಿ ಶ್ರಮವಹಿಸಬೇಕಾದ್ದರೆ ಅದಕ್ಕೆ ತಕ್ಕ ಏರ್ಪಾಡು ಇಲ್ಲ

ಡಾಕ್ಟರರ ಕರ್ತವ್ಯ

ನಗರ, ಪಟ್ಟಣಗಳಲ್ಲಿ ಆದಾಯದಾಯಕವಾಗಿ ವೈದ್ಯಾಭ್ಯಾಸ ಮಾಡುವ 'ಡಾಕ್ಟರು'ಗಳೆಲ್ಲ ತಮ್ಮ ಉದ್ಯಮದ ಜ್ಞಾನವು ಇನ್ನೂ ಹೆಚ್ಚು ಬೆಳೆಯುವಂತಾಗಲಿಕ್ಕೆ ಯೋಗ್ಯ ಧನಸಹಾಯ ಮಾಡಬೇಕು: ಅವರು ತಮ್ಮಲ್ಲಿ ಶುಶ್ರೂಸೆ ಪಡೆಯುವ ಶ್ರೀಮಂತರಿಂದ ಧನವನ್ನು ಶೇಖರಿಸಬೇಕು

ಯುದ್ಧದಿಂದಾಗಿ ಈಗ ವೈದಕೀಯ ಶಾಸ್ತ್ರ ಜ್ಞಾನಾನುಭವವು ಜಗತ್ತಿನಲ್ಲಿ ತುಂಬಾ ಬೆಳೆದಿದೆ. ಹೊಸದಾಗಿ ರೋಗ ಕಾರಣಗಳನ್ನೂ, ಅವುಗಳಿಗೆ ಯೋಗ್ಯ ಔಷಧಿಗಳನ್ನೂ, ನಿವಾರಣೋಪಾಯಗಳನ್ನೂ ಕಂಡು ಹಿಡಿಯಲಾಗಿದೆ. ಅದನ್ನು ಇನ್ನೂ ಹೆಚ್ಚಿನ ಅಭಿವೃದ್ಧಿಗೆ ತರಲು, ತರುಣ ವೈದ್ಯರನ್ನು ಪ್ರೋತ್ಸಾಹಿಸಲು ವೈದ್ಯ ಸಂಘಗಳು ಪ್ರಯತ್ನಿಸಬೇಕು.

ಶಿಕ್ಷಣ ಸರಳವಾಗಬೇಕು

ಈಗಿನ ವೈದಕೀಯ ಕಾಲೇಜುಗಳಲ್ಲಿ ಕೊಡಲ್ಪಡುವ ಶಿಕ್ಷಣದಲ್ಲಿ ಹೆಚ್ಚಿನ ಅಂಶವು ಅನಾವಶ್ಯಕವಾದುದೂ, ನಿರುಪಯೋಗಿಯಾದುದೂ ಆಗಿದೆ ನಿಜವಾದ ವೈದ್ಯಕೀಯ ಅಭ್ಯಾಸಕ್ಕೆ ಇದರಿಂದ ಯಾವದೊಂದು ತರದ ಪ್ರಯೋಜನವಾಗುವುದಿಲ್ಲ

ಈಗ ದೇಶದಲ್ಲಿ ಒಂದು ತರದ ಪ್ರತ್ಯೇಕ ಅವಯವದ, ಇಲ್ಲವೆ ರೋಗದ ಚಿಕಿತ್ಸಾಕ್ರಮದಲ್ಲಿ ವಿಶಿಷ್ಟ ಅಭ್ಯಾಸ ಮಾಡಿದ ವೈದ್ಯರು ಬೇಕೆಂಬ ಕೂಗು ಎದ್ದಿದೆ ಇದರಲ್ಲಿ ಯಾವ ತರದ ಅರ್ಥವಿಲ್ಲ ಕಣ್ಣು ರೋಗದಲ್ಲಿ ನುರಿತವರು, ಕಿವಿ, ಮೂಗು, ಕಂಠನಾಳ ರೋಗಗಳಲ್ಲಿ ಹೆಚ್ಚಿನ ಪರಿಶ್ರಮ ತೆಗೆದುಕೊಂಡು ಕಲಿತವರು ಮತ್ತು ಶಸ್ತ್ರ ಚಿಕಿತ್ಸೆಯಲ್ಲಿ ಪ್ರವೀಣತೆಯನ್ನು ಪಡೆದವರು, ಹೆಂಗಸರ ವ್ಯಾಧಿಗಳಲ್ಲಿ, ಹೆರುವಿಕೆಯಲ್ಲಿ 'ಸ್ಪೆಶಲ್ಯಾಸ್' ಮಾಡಿದವರು ಬೇಕು ಆದರೆ ಹಾಗೆ ಸ್ಪೆಶಲ್ಯಾಸ್' ಮಾಡಿಯೇ ಒರ್ವ ವೈದ್ಯನು ಜನತೆಗೆ ಸೇವೆ ಮಾಡಬೇಕೆಂದಿಲ್ಲ

ವೈದ್ಯನಾದವನಿಗೆ ಶರೀರ ಶಾಸ್ತ್ರದ, ರೋಗ ಲಕ್ಷಣದ, ಮತ್ತು ನಿವಾರಣೆಯ ಪ್ರಾಮುಖ್ಯ ಜ್ಞಾನ ಹೆಚ್ಚಾಗಿ ಸಿಕ್ಕಬೇಕು ಒರ್ವ ವೈದ್ಯನ ಕೆಲಸದ ಶೇಕಡಾ ೮೫ರಷ್ಟು ಕೆಲಸವು ಔಷಧಕ್ಕೆ ಸಂಬಂಧಪಟ್ಟದ್ದಿರುತ್ತದೆ ಉಳಿದ ಕಣ್ಣು, ಕಿವಿ, ಮೂಗು ರೋಗಗಳ ವಿಶಿಷ್ಟ ಜ್ಞಾನವು ವೈದ್ಯನಿಗೆ ಶೇಕಡಾ ೧೫ರಷ್ಟು ಮಾತ್ರ ಪ್ರಯೋಜನಕ್ಕೆ ಬೀಳುವುದು

ಈಗ ಕಾಲೇಜುಗಳಲ್ಲಿ ವೈದ್ಯ ಶಾಸ್ತ್ರದ ಮೂಲ ಶಿಕ್ಷಣಕ್ಕೆ ಮೊದಲ ಎರಡು ವರ್ಷಗಳನ್ನು ತೆಗೆಯುತ್ತಾರೆ ನಂತರ ಮೂರು ವರುಷಗಳಲ್ಲಿ ರೋಗಿಗಳನ್ನು ಪ್ರತ್ಯಕ್ಷವಾಗಿ ಗುಣಮಾಡುವ ಆಸ್ಪತ್ರೆ ಶಿಕ್ಷಣವನ್ನು ಕೊಡುತ್ತಾರೆ ಈ ಮೂರು ವರ್ಷಗಳಲ್ಲಿ ಬರೀ ಮೂರನೇ ಒಂದಂಶದಷ್ಟು ಸಮಯ ಮಾತ್ರ ಔಷಧಿಗಳ ಜ್ಞಾನಕ್ಕಾಗಿ ವಿನಿಯೋಗಿಸುತ್ತಾರೆ ಹೀಗಾಗಬಾರದು. ಹೆಚ್ಚು ಸಮಯವು ಔಷಧಿಗಳ ಸರಿಯಾದ ಅನುಭವಕ್ಕಾಗಿ ಕಳೆಯಬೇಕು

ಹೀಗೆ ವೈದಕೀಯ ಶಿಕ್ಷಣವು ಸಂಪೂರ್ಣ ತಲೆಕೆಳಗಾಗಿದೆ. ದೇಶದಲ್ಲಿನ ವೈದ್ಯಕೀಯ ಸಂಘಗಳು ಹಾನಿಕಾರಕವಾದ ಈಗಿನ ಈ ಅಭ್ಯಾಸ ಪದ್ಧತಿಯನ್ನು ಬದಲಿಸಬೇಕು.

ರೋಗಿ ಪರೀಕ್ಷೆ, ಶುಶ್ರೂಷೆ, ಔಷದಿ ಕ್ರಮ ಕಲಿಸಲು ಪೂರ್ಣ ಸಮಯದ ಶಿಕ್ಷಕರು ಬೇಕು

ಈಗ ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಶಾಸ್ತ್ರಾಭ್ಯಾಸವನ್ನು ಕಲಿಸಲು ಸಾಮಾನ್ಯ ಶಾಲೆಗಳಲ್ಲಿರುವಂತೆ ಕೆಲವೇ ಗಂಟೆಗಳ ಶಿಕ್ಷಣ ಕೊಡುವ ಪ್ರೊಫೆಸರರಿರುತ್ತಾರೆ ಪ್ರತ್ಯಕ್ಷ ಅನುಭವವನ್ನು ಅವರಿಗೆ ಸರಕಾರಿ ಇಲ್ಲವೆ ಖಾಸಗಿ ಆಸ್ಪತ್ರೆಗಳಲ್ಲಿ ನೇಮಿಸಲ್ಪಡುವ ಗೌರವ ವೈದ್ಯರಿಂದ ಕೊಡಲ್ಪಡುವುದು

ವೈದ್ಯವಿದ್ಯಾರ್ಥಿಗಳಿಗೆ ಕೊಡಲ್ಪಡುವ ಜ್ಞಾನವು ಉಪಯುಕ್ತವಾಗಬೇಕಾದರೆ ಅವರೊಂದಿಗೆ ಸದಾ ಕೆಲಸಮಾಡಿ ತೋರಿಸುವ, ಪ್ರಯೋಗ ಮೂಲಕ ತಿಳಿಸುವ ನಿಪುಣ ಮತ್ತು ಅನುಭವಸ್ಥ ವೈದ್ಯಕೀಯ ಶಾಸ್ತ್ರಿಗಳನ್ನು ನೇಮಿಸಬೇಕು

ಲಂಡನಿನ ವೈದ್ಯಕೀಯ ಕಾಲೇಜಿನಲ್ಲಿ ಈ ಕ್ರಮವು ಅನುಸರಿಸಲ್ಪಡುವುದು. ಮತ್ತದರಿಂದ ಹೆಚ್ಚಿನ ಪ್ರಯೋಜನವಿದೆ ಎಂದೂ ತಿಳಿದು ಬಂದಿರುತ್ತದೆ

ಈಗ ಬೊಂಬಾಯಿಯ ಮೆಡಿಕಲ್ ಕಾಲೇಜುಗಳಲ್ಲಿ ಇಂತಹ ಒಂದು ಪದ್ಧತಿಯನ್ನು ಚಿಕ್ಕ ರೂಪದಲ್ಲಿ ಅರ್ಧಮನಸ್ಸಿನಿಂದೆ ಎಂಬಂತೆ ಜಾರಿಗೆ ತಂದಿರಲಾಗಿದೆ

ಬೊಂಬಾಯಿಯ ... ಪಟ್ಟಿ ಹೇಳುವುದಾದರೆ ಅಲ್ಲಿನ ಶಿಕ್ಷಣ ಪದ್ಧತಿಯೂ, ಪರೀಕ್ಷಾ ಪದ್ಧತಿಯೂ ಯಾವ ಪ್ರಯೋಜನದ್ದಿರುವುದಿಲ್ಲ ಸರಿಯಾದ ಆಡಳಿತ ವ್ಯವಸ್ಥೆ ಕ್ರಮಗಳು ಅಲ್ಲಿರದಿರುವುದರಿಂದ ಪಕ್ಷಪಾತದಿಂದ ಪ್ರವೀಣರಲ್ಲದವರನ್ನು ತೇರ್ಗಡೆ ಮಾಡುವ ಹಾನಿಕಾರಕ ಪರಿಣಾಮಗಳು ಉಂಟಾಗಿವೆ

ಇದರಿಂದ ನಿಜವಾದ ವೈದ್ಯಕೀಯ ಅಭ್ಯಾಸ ಜ್ಞಾನವು ಪ್ರಗತಿ ಹೊಂದಲಾರದು

ಎಲ್. ಎಂ ಪಿ ಶಿಕ್ಷಣ

ಮದ್ರಾಸ್ ಮೆಡಿಕಲ್ ಕಾಲೇಜಿನ ಆಶ್ರಯದಲ್ಲಿ ಕೆಲವು ವರ್ಷಗಳ ಹಿಂದೆ ಎಂ ಬಿ ಬಿ ಎಸ್ ಮತ್ತು ಎಲ್. ಎಂ ಪಿ ಎಂಬ ಮುಖ್ಯವಾದ ಎರಡು ತರದ ವೈದ್ಯಾಭ್ಯಾಸಗಳು ಕಲಿಸಲ್ಪಡುತ್ತಿದ್ದವು ಈಗ ಎಂ ಬಿ ಬಿ ಎಸ್ ಕ್ರಮವನ್ನು ಮಾತ್ರ ಇಟ್ಟು ಎಲ್ ಎಂ ಪಿ. ಪದ್ಧತಿಯನ್ನು ರದ್ದು ಮಾಡಿರುವುದು ಸ್ತುತ್ಯ ಕಾರಣ ಅದರಿಂದ ವೈದ್ಯಾಭ್ಯಾಸಕ್ಕೆ ಹೆಚ್ಚಿನ ಸಹಾಯವಾಗುವುದಿಲ್ಲ.

ಆದರೆ ಬೊಂಬಾಯಿಯಲ್ಲಿ ಅದನ್ನು ಇನ್ನೂ ಜಾರಿಯಲ್ಲಿಟ್ಟಿರುವುದು ಖೇದಾಸ್ಪದ ವಿಚಾರ. ಇದರಿಂದ ವೈದಕೀಯ ವಿದ್ಯಾರ್ಥಿಗೆ ಸಂಪೂರ್ಣವಾದ ಔಷಧ ಜ್ಞಾನವಾಗಲಿ, ಶಸ್ತ್ರ ಚಿಕಿತ್ಸೆ ಅನುಭವವಾಗಲಿ ದೊರಕುವುದಿಲ್ಲ

ಆಯುರ್ವೇದ

ಪಾಶ್ಚಾತ್ಯ ಪದ್ಧತಿಯ ಇಂಜೆಕ್ಷನ್, ಶಸ್ತ್ರ ಚಿಕಿತ್ಸಾಕ್ರಮಗಳು ನಮ್ಮ ಬಡ ಜನತೆಗೆ ತುಂಬಾ ಖರ್ಚಿನವು. ಆದುದರಿಂದ 'ಡಾಕ್ಟರು ಶಿಕ್ಷಣ' ದಲ್ಲಿ ಆಯುರ್ವೇದದ ಸರಳ ಔಷಧಿಕ್ರಮವನ್ನೂ, ಚಿಕಿತ್ಸಾಪದ್ಧತಿಯನ್ನೂ ಕಲಿಸುವಂತಾಗಬೇಕು

ನಾವು ತುಂಬಾ ಹಿಂದೆ ಇದ್ದೇವೆ

ವೈದ್ಯವಿಜ್ಞಾನದ ಮಟ್ಟಿಗೆ ಇತರ ದೇಶಗಳಿಗಿಂತ ನಾವು ತುಂಬಾ ಹಿಂದೆ ಇದ್ದೇವೆ ನಮ್ಮವರ ಔಷಧಿ ಸಂಬಂಧವಾದ ಜ್ಞಾನವನ್ನು ಅಲಕ್ಷಮಾಡಿದ್ದು ತುಂಬಾ ಕಸಿಕರದ ವಿಷಯ ಐದು ವರುಷ ಕಲಿತ ಮೇಲೆ ವಿದ್ಯಾರ್ಥಿಗಳಿಗೆ ಅನುಭವಪೂರ್ಣ ಜ್ಞಾನಕೊಡಲು ಕೆಲವು ವಿಶ್ವವಿದ್ಯಾಲಯಗಳಲ್ಲಿ ಪ್ರಯತ್ನಿಸಲಾಗಿದೆ. ಇಲ್ಲಿ ಯಾವುದಾದರೊಂದು ಪ್ರತ್ಯೇಕ ವಿಷಯವು ಸವಿಸ್ತಾರವಾಗಿ ಕಲಿಸಲ್ಪಡುವುದು ಔಷಧಿ ಸಂಬಂಧವಾದ ವಿಶಿಷ್ಟ ಜ್ಞಾನವನ್ನು ಸಂಪಾದಿಸಿ ವಿದ್ಯಾರ್ಥಿಗಳು ತಮ್ಮ ಕ್ಷೇತ್ರದಲ್ಲಿ ತಜ್ಞರಾಗಲಿಕ್ಕೆ ಸಹಾಯ ಮಾಡಲು ಇಂತಹ ವೈದ್ಯಸಂಘಗಳು ಸಹಕರಿಸಿ ಪ್ರೋತ್ಸಾಹಿಸಬೇಕು

WANTED

Manager for our Insurance Deepartment Fixed Salary on quota business A most suitabl job for retired men having influence Apply in person to The Union Life Assurance Co Ltd (Bombay) Organizing Office car street Mangalore'

ಮಾಲಿನ್
ಟಿ
ಮೊದಲೇ ಜೀರ್ಣಿಸಲ್ಪಟ್ಟ
ಶಕ್ತಿವರ್ಧಕ ಆಹಾರಪಾನೀಯ
ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ
ಶಿಫಾರಸು ಮಾಡಲ್ಪಟ್ಟಿದೆ
ದೊರಕುವ ಸ್ಥಳ - ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

ಸ್ವದೇಶಾಭಿಮಾನಿ

ತಾರೀಖು 24—11—1944

ಸತ್ವ ಪರೀಕ್ಷೆ

ಅಧ್ಯಕ್ಷ ರೂಸವೆಲ್ಟರ ಸ್ವಂತ ಪ್ರತಿನಿಧಿಯಾಗಿ ಭಾರತಕ್ಕೆ ಕಳುಹಿಸಲ್ಪಟ್ಟ ಮಿ. ವಿಲಿಯಂ ಫಿಲಿಪ್ಸರ ಖಾಸಗಿ ಪತ್ರವು ಕೆಲವು ವಾರಗಳ ಹಿಂದೆ ಪ್ರಕಟವಾಗಿತ್ತು. ಅದರಲ್ಲಿ ಅವರು ತಮ್ಮ ಅಧ್ಯಕ್ಷರಿಗೆ ಭಾರತದ ರಾಜಕೀಯ ಬಿಕ್ಕಟ್ಟಿನ ಕುರಿತು ಪರಿಸ್ಥಿತಿಯನ್ನು ತಿಳಿಸಿದ್ದರು.

ಇತ್ತೀಚೆಗೆ ಇನ್ನೊಂದು ಪತ್ರವು ಪ್ರಕಟವಾಗಿದೆ. ಇದರಲ್ಲಿ ಭಾರತೀಯ ಪ್ರಶ್ನೆಯನ್ನು ಪರಿಹರಿಸುವ ವಿಧಾನವನ್ನು ಸೂಚಿಸಲಾಗಿದೆ. ಭಾರತೀಯರು ಬ್ರಿಟಿಷರ ವಾಗ್ದಾನದಲ್ಲಿ ಯಾಕೆ ಭರವಸೆಯುಳ್ಳವರಾಗಿಲ್ಲವೆಂದು ತಿಳಿಸಿ "ಮಿತ್ರ ಮುಖಂಡರು ಸೇರಿ ಬಂದು ಇತ್ಯರ್ಥವನ್ನು ಮಾಡಲು ಈಗ ಸಾಧ್ಯವಿದೆ" ಎಂದಿದ್ದಾರೆ.

ಅವರ ಸೂಚನೆ ಪ್ರಕಾರ ಇಂಗ್ಲೆಂಡಿನ ಅರಸರೂ, ಅಧ್ಯಕ್ಷ ರೂಸವೆಲ್ಟರೂ, ರಷ್ಯದ ಸ್ಟೆಲಿನರೂ ಮತ್ತು ಚೀನದ ಚಿಯಾಂಗರೂ ಒಂದು ಪರಿಷತ್ತಿನಲ್ಲಿ ಸೇರಿ; ಇಂಗ್ಲಿಷ ಅರಸರಿಂದ ಭಾರತ ಜನರಿಗೆ ಒಂದು ನಿರ್ದಿಷ್ಟ ಅವಧಿಯೊಳಗೆ ಅಧಿಕಾರ ಬಿಟ್ಟುಕೊಡುವುದಾಗಿ ಹೊಸದಾಗಿ ಭರವಸೆಕೊಡಿಸಬೇಕು.

ಇದರಿಂದ ಈಗಿನ ಬಿಕ್ಕಟ್ಟನ್ನು ಬಿಡಿಸಬಹುದೆಂದು ಫಿಲಿಪ್ಸರ ಅಭಿಪ್ರಾಯ. ಬ್ರಿಟನು ಇದಕ್ಕೆ ಅಡ್ಡಿತೆಗೆಯಲು ಉಪಾಯವಿಲ್ಲ; ಕಾರಣ ಯುದ್ಧಾನಂತರದ ಭಾರತಕ್ಕೆ ಸ್ವಾತಂತ್ರ್ಯಕೊಡುವುದು ಅವರ ಉದ್ದೇಶವಿದೆ ಎಂದು ಸಾರಲಾಗಿದೆ.

ಫಿಲಿಪ್ಸರ ಸೂಚನೆಗಳು ಪ್ರಯೋಗಯೋಗ್ಯವಾದವುಗಳು. ಇಂದಿನ ಬಿಕ್ಕಟ್ಟಿಗೆ ಭಾರತ ಜನರಿಗೆ ಬ್ರಿಟಿಷರ ಮಾತಿನ ಮೇಲೆ ಭರವಸೆ ಇಲ್ಲದಿದ್ದುದೇ ಕಾರಣವಾಗಿರುವುದರಿಂದ, ಮಿತ್ರರಾಷ್ಟ್ರ ಮುಖಂಡರು ಈ ವಾಗ್ದಾನವನ್ನು ಬ್ರಿಟಿಷರು ನಿಜವಾಗಿ ಈಡೇರಿಸುವಂತೆ ಒತ್ತಾಯ ಮಾಡಬೇಕು, ಹಾಗಾದರೆ ಭಾರತದೊಳಗಿನ ಎಲ್ಲಾ ಪಕ್ಷದವರೂ ಒಟ್ಟುಸೇರಿ ಹೆಚ್ಚಿನ ಆಸಕ್ತಿಯಿಂದ ಯುದ್ಧನಿರ್ವಹಣದಲ್ಲಿ ಭಾಗವಹಿಸದಿರಲಿಕ್ಕಿಲ್ಲ.

ತಾವು ಈಡೇರಿಸುವುದಾಗಿ, ಮಿತ್ರರೆಲ್ಲರೂ ಭರವಸೆಕೊಡುವುದು ಪ್ರಾಮುಖ್ಯ ವಿಷಯ. ಫಿಲಿಪ್ಸರ ಪತ್ರವು ಬ್ರಿಟಿಷರ ಉದ್ದೇಶದ ಸತ್ವಪರೀಕ್ಷೆಮಾಡುವಂತಹದಿದೆ. ಅಂತಹ ಕಠಿಣ ಪರೀಕ್ಷೆಯನ್ನು ಉತ್ತರದಿಂದ ಉದ್ಭವಿಸಬಹುದಾದ ತೊಂದರೆಗಳನ್ನು ಎದುರಿಸಲು ಧೈರ್ಯವಿಲ್ಲದೆ ಬ್ರಿಟಿಷ ಅಡಳಿತಗಾರರು ಫಿಲಿಪ್ಸರನ್ನು 'ಬೇಡವಾದ ವ್ಯಕ್ತಿ' ಯಾಗಿಮಾಡುವರೆಂದು ಅನೇಕರು ಊಹಿಸುತ್ತಾರೆ.

ಯುದ್ಧಾಕ್ಷರ ಮಾಲೆ

ಈ ಯುದ್ಧದಲ್ಲಿ ಇಂಗ್ಲಿಷ ಅಕ್ಷರಮಾಲೆಯ ಒಂದೊಂದು ಅಕ್ಷರಕ್ಕೂ ಒಂದೊಂದು ಅರ್ಥವಿದೆ ಎನ್ನಬಹುದು. 'ವಿ' ಎಂ[illegible] ಗೆ 'ವಿ' ಎಂದರೆ ವಿಜಯ [illegible] 'ಬಿ' ಎಂದರೆ ಬ್ರಿಟನ್, 'ಯು' ಎಂದರೆ ಯು.ಎಸ್.ಎ., 'ಜಿ' ಎಂದರೆ ಜರ್ಮನರನ್ನು ದಂಡಿಸುವ ರಾಷ್ಟ್ರಗಳು ಸಂಯುಕ್ತವಾಗಿ ಯು.ಎಸ್.ಎಸ್.ಆರ್. ರಾಷ್ಟ್ರಗಳೆಂದಾಗಿದೆ.

ಮಿತ್ರರು ಯುರೋಪನ್ನು ಮುತ್ತಿದ ದಿನವು 'ಡಿ' ದಿನವೆಂದೆನ್ನಲಾಗಿದೆ. ನಾಜಿಗಳನ್ನು ಧ್ವಂಸಮಾಡುವ ಸಂಕೇತಾಕ್ಷರವಾಗಿದೆ ಇದು.

ನಾಜೀಗಳೂ ಸಂಕೇತಾಕ್ಷರಗಳನ್ನಿಟ್ಟುಕೊಳ್ಳದೆ ಇಲ್ಲ. ಅದನ್ನು ಅವರು ತಮ್ಮ ಗುಪ್ತಾಸ್ತ್ರಗಳಿಗೆ ಹೆಸರಾಗಿ ನಾಮಕರಣಮಾಡಿದ್ದಾರೆ.

ರೆಕ್ಕೆ ಬಾಂಬುಗಳಿಗೆ ಜರ್ಮನರು 'ವಿ' ಎಂದು ಕರೆಯುತ್ತಾರೆ. ಈಗ 'ವಿ2' ಎಂಬ ಹೊಸ ಅಸ್ತ್ರವನ್ನು ಅವರು ಪ್ರಯೋಗಿಸುತ್ತಿದ್ದಾರೆ. ಇವು ರೆಕ್ಕೆಬಾಂಬಿಗಿಂತ ಹೆಚ್ಚು ಶಕ್ತಿಯುಳ್ಳದ್ದಾಗಿವೆ ಎಂದು ಸಾರಲಾಗಿದೆ. ಇವುಗಳ ವೇಗವು ಗಂಟೆಗೆ ೩೦೦೦ ಮೈಲಿಗೂ ಮಿಗುವುದಂತೆ—ಶಬ್ದದ ವೇಗಕ್ಕಿಂತಲೂ ಹೆಚ್ಚಾಯಿತು.

ಇಷ್ಟಾದರೂ ಇಂಗ್ಲೆಂಡಿನ ನಾಗರೀಕರಲ್ಲಿ ಈ ಅಸ್ತ್ರಗಳು ಹೆದರಿಕೆ ಹುಟ್ಟಿಸುವ ಹಾಗಿಲ್ಲ. ಅವುಗಳಿಂದ ಕಿರುಕುಳತೊಂದರೆ ಮಾತ್ರವಾಗಿರುತ್ತದೆ. ಈ 'ವಿ' ಅಸ್ತ್ರಗಳಿಂದ ಜರ್ಮನರು ಇನ್ನೂ ಯುದ್ಧಗೆಲ್ಲುವ ಹಾಗಿಲ್ಲ. ಅವು ಜರ್ಮನ್ ವೈಜ್ಞಾನಿಕ ಪ್ರತಿಭೆಯ ಕುರುಹುಗಳಿರಬಹುದು. ವಿಚಿತ್ರವೆಂದರೆ ನಾಜಿಗಳು ರಷ್ಯದಮೇಲೆ ಇದನ್ನು ಉಪಯೋಗಿಸದಿದ್ದುದು. ಅಂತೂ ಎಲ್ಲಾ ಅಸ್ತ್ರಗಳಿಂದಲೂ ಜರ್ಮನಿಗೆ ಯುದ್ಧಗೆಲ್ಲಲು ಸಾಧ್ಯವಿಲ್ಲವೆಂಬುದು ಇಂದಿನ ಮಿತ್ರ ಪಡೆಗಳ ಪ್ರಗತಿಯಿಂದ ತಿಳಿದುಬರುತ್ತದೆ.

'ಖಿಸ್' ಎಂಬ ಅಕ್ಷರವನ್ನು ನಾವು ಕಲ್ಪಿಸಿ ನಾಜಿಗಳಿಗೆ ಸೋಲು ಖಂಡಿತವೆಂದು ತಿಳಿಯಬಹುದು.

ಪರ್ಶಿಯಾದಲ್ಲಿ ಗಲಾಟೆ

ಪರ್ಶಿಯಾದಲ್ಲಿ ಒಂದು ಹೊಸ ಸಮಸ್ಯೆ ಉದ್ಭೂತವಾಗಿದೆ.

ರಷ್ಯಕ್ಕೆ ಪೆಟ್ರೋಲಿಯಂ ಎಣ್ಣೆ ಗನಿಗಳ ಸೌಕರ್ಯವನ್ನುಕೊಡಲು ನಿರಾಕರಿಸಿದ ಅಲ್ಲಿನ ಮಂತ್ರಿಮಂಡಳವು ರಾಜಿನಾಮೆ ಇತ್ತಿದೆ. ರಷ್ಯನರು ಅದರ ಮೇಲೆಹಾಕಿದ ರಾಜಕೀಯ ಒತ್ತಡವೇ ಇದಕ್ಕೆ ಕಾರಣವೆಂದೆನ್ನಲಾಗಿದೆ. ಇದುತನಕ ಅಲ್ಲಿ ಬೇರೊಂದು ಮಂತ್ರಿಮಂಡಳ ರಚನೆಯಾದ ಸುದ್ದಿ ಬಂದಿಲ್ಲ. ಅಲ್ಲಿ ಯಾರು ಪ್ರಧಾನಿಗಳಾಗಿಬಂದರೂ ಹೊರಗಿನವರಿಗೆ ತಮ್ಮ ದೇಶ ಸಂಪತ್ತನ್ನು 'ಸುಲಿಗೆ' ಮಾಡಲು ಬಿಡಬಾರದೆಂಬ ನಿರ್ಧಾರವಿದೆಯಾಗಿ ಸ್ಪಷ್ಟ ತಿಳಿದುಬರುತ್ತದೆ.

ಪರ್ಶಿಯದ ಎಣ್ಣೆ ಬಾವಿಗಳ ಮೇಲೆ ಕಣ್ಣು ರಷ್ಯಕ್ಕೆ ಮಾತ್ರವಲ್ಲ, ಅಮೇರಿಕಾ ಮತ್ತು ಬ್ರಿಟನುಗಳೂ ಅದನ್ನು ಆಶೆಯಿಂದ ನೋಡುತ್ತಿದ್ದಾರೆ ಎಂಬುದು ಸರ್ವವಿಧಿತವಾಗಿದೆ.

ಸ್ವತಂತ್ರ ಪರ್ಶಿಯವನ್ನು ವಶಪಡಿಸಲು ಮೂರು ಶಕ್ತಿರಾಷ್ಟ್ರಗಳೂ ಪ್ರಯತ್ನಿಸುತ್ತವೆ. ಕೌತುಕದ ಸಂಗತಿಯೆಂದರೆ ಈ ಮೂರು ರಾಷ್ಟ್ರಗಳೂ ಆ ಚಿಕ್ಕ ರಾಷ್ಟ್ರದ ಸ್ವಾತಂತ್ರ್ಯರಕ್ಷಣೆಗೆ ಪ್ರತಿಜ್ಞೆಮಾಡಿದವರು.

ವಿವಿಧ ಯುದ್ಧರಂಗಗಳಿಂದ

ಪಶ್ಚಿಮರಂಗದಲ್ಲಿ ಮಿತ್ರರ ಕೆಳಗಿನ ಆಕ್ರಮಣದ ಪದ್ಧತಿಯ ಚಟುವಟಿಕೆಗಳು [illegible] ಕಾಣುತ್ತಿವೆ. ಎಂಟವರ್ಪ ಬಂದರವನ್ನು ಹಿಡಿದು ಅದನ್ನು ಪೂರ್ತಿಕೆಯ ಹಾದಿಯನ್ನಾಗಿ ಮಾಡಿ, ಯುದ್ಧಶಸ್ತ್ರ ಸಾಮಾನು ಇತ್ಯಾದಿಗಳನ್ನು ಈ ಹಾದಿಯಾಗಿ ಧಾರಾಳವಾಗಿ ಒದಗಿಸಿಕೊಳ್ಳುವ, ಜರ್ಮನಿಯ ಪತನದ ಕಾರ್ಯ ಸಾಧಿಸುವುದೇ ಮಿತ್ರರ ಸದ್ಯದ ಉದ್ದೇಶ್ಯವಿರುತ್ತದೆ.

ಮೇಲಿನ ಈ ಕಾರ್ಯ ಸಾಧನೆಯಲ್ಲಿ ಮಿತ್ರರಿಗೆ ಯಶಸ್ಸು ದೊರಕುತ್ತಾ ಇದೆ. ಎಂಟವರ್ಪ ಬಂದರವು ಮಿತ್ರರ ಕೈಗಳಿಗೆ ಬರುವ ಸಂಭವಗಳು ಹೆಚ್ಚಿವೆ ಎಂದು ತಿಳಿಯಬೇಕು. ಎಂಟವರ್ಪ ಬಂದರವು ಮಿತ್ರರ ವಶವಾದರೆ, ಜರ್ಮನಿಯ ರ್ಯಾನ್‌ಲೆಂಡನ್ನು ಹಿಡಿಯುವರೆಗೆ ತಮ್ಮ ಬಲವನ್ನು ವೃದ್ಧಿಕರಿಸಲು ಸಾಧ್ಯವಾಗುವುದು.

ಆಚ್ಯಾನನ್ನು ಹಿಡಿದು ಮುಂದೆ ಸಾಗಿದ ಜನರಲ್ ಹೊಜ್ಜರ ದಳವು ಜರ್ಮನಿಯೊಳಗೆ ೧೪ ಮೈಲು ದೂರಕ್ಕೆ ನಡೆದಿರುತ್ತದೆ. ಮೆಟ್ಜ ಪ್ರದೇಶವನ್ನು ಅಮೇರಿಕನ್ ಸೈನಿಕರು ಪೂರ್ಣ ಆಕ್ರಮಿಸಿ ಬಿಟ್ಟಿರುವರು. ಸ್ವಿಸ್ ಗಡಿಯ ಸಮೀಪ ಫ್ರೆಂಚ್ ದಂಡು ಒಂದು, ಬೆಲ್ಫರ್ಟ ಸಂದನ್ನು ಹಾದು ಮುಂದೆ ನಡೆದು, ಬೆಲ್ಫರ್ಟ ನಗರವನ್ನು ಹಿಡಿದು, ಅಲ್ಲಿಂದ ಮುಂದೆ ಸಾಗುತ್ತಿರುವುದು. ಅದು ನಿರಾಂತಕವಾಗಿ ಮುಂದೆ ಸಾಗಿಬಿಟ್ಟರೆಂದರೆ ಹಿಟ್ಲರನ ನಾಜಿ ಪಕ್ಷದ ಹುಟ್ಟೂರಾದ ಮ್ಯುನಿಕ್ ನಗರವು ಫ್ರೆಂಚ್ ಸೇನೆಯಿಂದ ಸದ್ಯದಲ್ಲಿ ಮುತ್ತಲ್ಪಡಬಹುದು.

ಒಟ್ಟಿನಲ್ಲಿ ಪಶ್ಚಿಮ ರಂಗವು ಚೇತನಗೊಂಡಿದೆ. ಮಿತ್ರರು ಜರ್ಮನಿಯ ಬಲವಾದ ತಡೆಯ ಎದುರು ಮೆಲ್ಲಮೆಲ್ಲನೆ ಮುಂದೆ ಸಾಗುತ್ತಿರುವರು.

ಪೂರ್ವರಂಗದಿಂದ ಹೋರಾಟದ ವಾರ್ತೆಗಳು ವಿಶೇಷವಾಗಿಲ್ಲ. ಆದರೆ ಮಧ್ಯ ಪೋಲೆಂಡದಲ್ಲಿ ರಷ್ಯನರು ಈ ಮೊದಲು ನಿಲ್ಲಿಸಿಬಿಟ್ಟ ತಮ್ಮ ಚಟುವಟಿಕೆಗಳನ್ನು ಮತ್ತೊಮ್ಮೆ ಪ್ರಾರಂಭಿಸಿರುವರು. ಮಧ್ಯ ಪೋಲೆಂಡದಲ್ಲಿ ಕೆಂಪು ಸೇನೆಯ ಮಹಾಸಂಗ್ರಹವು ಆಗುತ್ತಿದೆ. ಪೋಲೆಂಡವನ್ನು ಪೂರ್ಣ ಆಕ್ರಮಿಸಿ, ಜರ್ಮನಿಯ ಒಳನಡೆದು ಬರ್ಲಿನ್ ಕಡೆ ಸಾಗುವುದೆ, ಪೂರ್ವರಂಗದ ಕೆಂಪು ಸೇನೆಯ ಧ್ಯೇಯವಿರುತ್ತದೆ. ಹಂಗೇರಿಯಲ್ಲಿ ಅರ್ಧಾಂಶಕ್ಕಿಂತ ಹೆಚ್ಚಿನ ಪ್ರದೇಶವು ಕೆಂಪು ಸೇನೆಯಿಂದ ಆಕ್ರಮಿತವಾಗಿದೆ. ಸದ್ಯದಲ್ಲಿ ಹಂಗೇರಿಯ ರಾಜಧಾನಿಯಾದ ಬುಡಾಪೆಸ್ಟಿನೊಳಗೆ ಕೆಂಪುಸೇನೆಯು ಪ್ರವೇಶವಾಗಬಹುದು. ಬುಡಾಪೆಸ್ಟಿನ ನಂತರ ಕೆಂಪು ಸೇನೆಯು ಮುಂದುವರಿದು ಜೆಕೊಸ್ಲೊವಕಿಯದಲ್ಲಿ ಪ್ರವೇಶಿಸಿದ ಪ್ರೆಂಗಿನ ಕಡೆ ಧಾವಿಸುತ್ತಿರುವ ತನ್ನ ಇನ್ನೊಂದು ಅಂಗದೊಡನೆ ಕೂಡಿ, ಜರ್ಮನಿಯ ರಾಜಧಾನಿ ಬರ್ಲಿನ್ ನಗರ ಕಡೆ, ಮುನ್ನಡೆಯುವ ಕಾರ್ಯವನ್ನು ಕೈಕೊಳ್ಳಬಹುದು.

ಬರ್ಲಿನ್ ನಗರವು, ಆರ್ನ್ಹೆಮ್ಮದಿಂದ, ೩೧೭ ಮೈಲು ದೂರದಲ್ಲೂ, ವಾರ್ಸೊದಿಂದ ೩೨೫ ಮೈಲು ದೂರದಲ್ಲೂ, ಬುಡಾಪೆಸ್ಟಿನಿಂದ ೪೫೦ ಮೈಲು ದೂರದಲ್ಲೂ, ಇಟಲಿಯ ಬೊಲೊಗ್ನಾದಿಂದ ೫೩೪ ದೂರದಲ್ಲೂ ಇದೆ. ಈ ಎಲ್ಲಾ ಕಡೆಗಳಿಂದ, ಮಿತ್ರ ಸೇನೆಗಳು ಭದ್ರವಾದ

(೮ನೇ ಪುಟಕ್ಕೆ ಮುಂದುವರಿದಿದೆ)

ನಿಮ್ಮ ಆರೋಗ್ಯವನ್ನು ಅಭಿವೃದ್ಧಿಗೊಳಿಸಬಾರದೇಕೆ?

ಪ್ರತಿದಿನ ರಾತ್ರಿ ಎರಡು ಬೈಲ್‌ಬೀನ್ಸು ಗಳನ್ನು ಸೇವಿಸುವ 'ಸುವರ್ಣ ನಿಯಮ' ವನ್ನು ಅನುಸರಿಸಿದರೆ ನೀವು ಆರೋಗ್ಯ, ಸುಖವಂತರಾಗಿ, ಸುಂದರ ಶರೀರರಾಗಿ, ದೃಢಕಾಯರಾಗಿ ಇರಬಹುದು. ಬೈಲ್ ಬೀನ್ಸು ಶುದ್ಧ ವನಸ್ಪತಿಯಿಂದ ತಯಾರಿಸಿದ್ದು. ಶರೀರಾಂಗಗಳನ್ನು ಸರಿಗೊಳಿಸಿ, ರಕ್ತವನ್ನು ಶುದ್ಧಿಗೊಳಿಸಿ, ದಿನನಿತ್ಯವೂ ಅಶುದ್ಧ ಆಹಾರವನ್ನು ಹೊರಹಾಕುವವು. ಹೀಗೆ ನಿಮ್ಮ ಆರೋಗ್ಯವನ್ನು ಉತ್ತಮಗೊಳಿಸಿ ವರ್ಣವನ್ನು ಚಂದಗೊಳಿಸಿ ನಿಮ್ಮನ್ನು ಆಕರ್ಷಕರಾಗಿಯೂ, ನವಯುವಕರನ್ನಾಗಿಯೂ ಯೋಗ್ಯರಾಗಿಯೂ ಮಾಡುವವು.





ಬೈಲ್‌ಬೀನ್ಸು ನಿಮ್ಮ ಆರೋಗ್ಯ ಮತ್ತು ಶರೀರವನ್ನು ಉತ್ತಮಗೊಳಿಸುವುದು.

BILE BEANS

ಜಿಲ್ಲಾ ಸಮಾಚಾರಗಳು

ಮಂಗಳೂರು

ಗೋದಿ ರಾಗಿ ಪಡೆಯಲೇ ಬೇಕು

ಲೆಕ್ಟ್ರ ಟನರ್ ಉಪಯೋಗಿಸುವುದೇನಂದರೆ— ತಾ. 19-11-44ರಿಂದ ಈ ಜಿಲ್ಲೆಯ ರೇಶನಿಂಗ್ ಸರಹದ್ದುಗಳ ಒಳಗೆ ಗೋದಿ ಮತ್ತು ರಾಗಿ ರೇಶನ್ ಪದಾರ್ಥಗಳಾಗಿ ರೇಶನ್ ಅಂಗಡಿಗಳಲ್ಲಿ ಮಾತ್ರ ಮಾರಬಹುದು. ಪ್ರತಿ ರೇಶನ್ ಕಾರ್ಡು ಪಡಕೊಂಡವನು ಶಾಶ್ವತ ರೇಶನ್ ನ ¼ನೇ ಗೋದಿಯನ್ನೂ ¼ನೇ ಅಂಶ ಗೋದಿ ಅ ರಾಗಿಯನ್ನೂ ಪಡಕೊಳ್ಳಲೇ ಬೇಕು. ಉಳಿದ ½ ಅಂಶ ಮಾತ್ರ ಅಕ್ಕಿ ಸಿಕ್ಕುವುದು. ಅಂದರೆ ರೇಶನಿನ ½ಅಂಶಕ್ಕಿಂತ ಹೆಚ್ಚು ಅಕ್ಕಿ ಸಿಕ್ಕಲಾರದು. ಮತ್ತು ½ನೇ ಅಂಶ ಗೋದಿ ಯಾ ಗೋದಿ ವ ರಾಗಿ ಪಡಕೊಂಡ ವಿನಹ ಅಕ್ಕಿ ಸಿಕ್ಕಲಿಕ್ಕಿಲ್ಲ. ಆದರೆ ಅಕ್ಕಿ ಕಡಿಮೆ ಮಾಡಿ ಅಷ್ಟೇ ಪರಿಮಾಣದ ಗೋದಿ ಯಾ ರಾಗಿ ಪಡಕೊಳ್ಳಬಹುದು.

ಈ ವರ್ತಾವಿಯಿಂದ ಗೋದಿಯನ್ನೇ ಉಪಯೋಗಿಸುವವರಿಗೆ ಪೂರಾ ರೇಶನ್ ಕೂಡಾ ಗೋದಿಯಲ್ಲೇ ಪಡಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ.

ಪರ್ಮಿಟಿನ ಮೇಲೆ ತಮ್ಮ ಸ್ವಂತ ಅಕ್ಕಿಯನ್ನು ರೇಶನ್ ಸರಹದ್ದುಗಳ ಒಳಗೆ ತರಿಸುವ ಭೂಸ್ವಾಮ್ಯಾಲಿಕರಿಗೆ ಭತ್ತವನ್ನು ಬೆಳಸುವ ಭೂಸ್ವಾಲಿಕರು ಕೂಡಾ ಮೇಲೆ ಕಾಣಿಸಿದ ಪ್ರಕಾರ ¼ನೇ ಅಂಶ ಗೋದಿಯನ್ನು ಉಳಿದ ¼ನೇ ಅಂಶ ಗೋದಿ ಯಾ ರಾಗಿಯನ್ನು ಪಡಕೊಳ್ಳಲೇ ಬೇಕು.

ಯಚ್. ಸುಂದರರಾವ್
ರೇಶನಿಂಗ್ ಆಫೀಸರ್.

ಅಕ್ಕಿ ಬತ್ತ ತಲಪಿಸುವ ಅವಧಿ ಮುಂದರಿಸಿದೆ

ಇತ್ತೀಚೆಗಿನ ಭಾರಿ ಮಳೆಯ ದೆಸೆಯಿಂದಾಗಿ ಬತ್ತವನ್ನು ಕೊಯ್ಯುವ, ಒಣಗಿಸುವ ಮತ್ತು ಅಕ್ಕಿಯಾಗಿ ಮಾಡುವ ಕೆಲಸಕ್ಕೆ ಸ್ವಲ್ಪ ತೊಂದರೆಯಾಗಿರುತ್ತದೆಂಬ ವಿಷಯವು ಕಲೆಕ್ಟರರ ಅವಗಾಹನೆಗೆ ಬಂದಿರುತ್ತದೆ.

ಆದುದರಿಂದ ಬತ್ತವನ್ನು ಡಿಪೋಗಳಿಗೆ ಒಪ್ಪಿಸುವ ಅವಧಿಯನ್ನು ತಾ. 31-11-44ಕ್ಕೆ ಮುಂದುವರಿಸಿದೆ. ಅದೇ ಪ್ರಕಾರ ಅಕ್ಕಿಯನ್ನು ತಲುಪಿಸದೇಕಾದ ಅವಧಿಯನ್ನೂ ತಾ. 15-12-44ರ ತನಕ ಮುಂದರಿಸಲಾಗಿದೆ.

ತಹಶೀಲ್ದಾರ್, ಡೇ. ತಹಶೀಲ್ದಾರ; ಮತ್ತು ಗ್ರೈನ್ ಪರ್ಚೆಸಿಂಗ್ ಆಫೀಸರರುಗಳು ಈ ವಿಷಯವನ್ನು ತಮ್ಮ ಪ್ರದೇಶಗಳಲ್ಲಿ ವಿಶಾಲವಾಗಿ ಪ್ರಚಾರಿಸತಕ್ಕದ್ದಾಗಿ ಮಾನ್ಯ ಕಲೆಕ್ಟರರಿಂದ ಸದೇಶಿಸಲಾಗಿದೆ.

ಮುನ್ಸಿಪಲ್ ಸಭೆ

ತಾ. 20ನೇ ಸೋಮವಾರ ಸಂಜೆ ಮುನ್ಸಿಪಲ್ ಸಭೆ ಸೇರಿತ್ತು. ನಗರಕ್ಕೆ ಸಂಬಂಧಪಟ್ಟ ಈ ಕೆಳಗಿನ ವಿಷಯುಗಳು ಅಂದಿನ ಸಭೆಯಲ್ಲಿ ತೀದುಬಂದವು:

ಮಾರ್ಗಕ್ಕೆ ನೀರು

ಪ್ರಾಂತಿಕ ಮೋಟರ್ ಟ್ರಾನ್ಸ್‌ಪೋರ್ಟ್ ಕಂಟ್ರೋಲರರು ನಮ್ಮ ಮುನ್ಸಿಪಾಲಿಟಿಗೆ ಈ ತಿಂಗಳಲ್ಲಿ ಎರಡು ಫೋರ್ಡ್ ಲಾರಿಗಳನ್ನು ಮಂಜೂರುಮಾಡಿರುವರು.

ಇದ್ದಲು ಗೇಸಿನಿಂದ ನಡೆಸಲ್ಪಡಲು ಫೋರ್ಡ್ ಲಾರಿಗಳು ತಕ್ಕವಲ್ಲವೆಂದು ಅವುಗಳನ್ನು ಪೆಟ್ರೋಲಿನಿಂದ ನಡೆಸಲು ಅನುಕೂಲಿಸುವಂತೆ ಮಾಡಬೇಕು ಇಲ್ಲವೆ ಶವರ್ಲೆಟ್ ಲಾರಿಗಳನ್ನು ಅವುಗಳ ಬದಲಿಗೆ ಕೊಡಬೇಕೆಂದು ಮೇಲಧಿಕಾರಿಗಳಿಗೆ ಬರೆಕೊಳ್ಳುವಂತೆ ನಿರ್ಣಯವಾಯಿತು. ಈ ಲಾರಿಗಳು ಮಾರ್ಗಗಳಿಗೆ ನೀರು ಹಾಕಲು ಉಪಯೋಗಿಸುವಂತಾದರೆ ಅತ್ಯುತ್ತಮವಾಗುತ್ತೆಂದು ನಾಗರಿಕರ ಅಪೇಕ್ಷೆ.

ಸಿಡುಬು ಹಾವಳಿ

ನಗರದಲ್ಲಿ ಇದು ತನಕ ಸುಮಾರು ೪೦ ಮಂದಿಗೆ ಸಿಡುಬು ತಗಲಿದ್ದು ಅವರಲ್ಲಿ ಸುಮಾರು ೯ ಮಂದಿಗಳು ಮೃತಪಟ್ಟಿರುವರೆಂದು ತಿಳಿದುಬಂತು. ಎಂಟು ಸಾವಿರ ಮಂದಿಗೂ ಮಿಕ್ಕ ಜನರಿಗೆ ಸಿಡುಬು ಪ್ರತಿಬಂಧಕ ದಾಕನ್ನು ಹಾಕಲಾಗಿದೆ.

ಶವ ದಹನದ ಖರ್ಚು

ಇದು ತನಕ ನಗರದ ಹಿಂದೂ ಶವ ದಹನದ ಸಂತೆಕೆಗಾಗಿ ಶವವೊಂದಕ್ಕೆ ರೂ. ೨ರಂತೆ ಮುನ್ಸಿಪಾಲಿಟಿಯವರು ಕೊಡುತ್ತಿದ್ದರು. ಸ್ಥಳೀಯ ವೆಂಕಟ್ರಮಣ ದೇವಳ ಕಡೆಯಿಂದ ಅರ್ಜಿಮಾಡಿಕೊಂಡ ಪ್ರಕಾರ ಈ ಮೊತ್ತೆಗೆಯನ್ನು ರೂ. ೪ಕ್ಕೆ ಏರಿಸಲಾಯಿತು.

ಮಾರ್ಕೆಟು ವ್ಯಾಪಾರ ಸುಂಕ

ಇದೇ ಬರುವ ದಶಂಬರ ತಾ. ೧ರಿಂದ ಮುನ್ಸಿಪಲ್ ಮಾರ್ಕೆಟುಗಳಿಗೆ ಮಾರಲು ತರಲ್ಪಡುವ ಹೊರೆಯೊಂದಕ್ಕೆ ೬ ಪೈಯಂತೆ ಸುಂಕ ವಸೂಲು ಮಾಡಲಾಗುವುದು. ಇದು ತನಕ ಅದು ೩ ಪೈ ಮಾತ್ರವಿತ್ತು.

ಬಿಜೈಯಲ್ಲಿ ಒಂದೇ ಶಾಲೆ

ಬಿಜೈಯಲ್ಲಿ ಮುನ್ಸಿಪಾಲಿಟಿಯ ಒಂದು ಹುಡುಗರ ಮತ್ತೊಂದು ಹುಡುಗಿಯರ ಹೀಗೆ ಎರಡು ಶಾಲೆಗಳಿದ್ದುವು. ಇವೆರಡೂ ಸಮೀಪದಲ್ಲೇ ಇರುವುದರಿಂದ ಎರಡು ಪ್ರತ್ಯೇಕ ಶಾಲೆಗಳ ಆವಶ್ಯಕತೆಯಿಲ್ಲವೆಂದೂ ಅವುಗಳ ಬದಲಿಗೆ ಒಂದೇ ಶಾಲೆ ಮಾಡಿದರೆ ಖರ್ಚು ಕಮ್ಮಿಯಾಗುವುದೆಂದೂ ತಂದ ಠರಾವು ಸ್ವೀಕರಿಸಲ್ಪಟ್ಟಿತು.

ಸಾರವತ್ತಾದ ಪ್ರದೇಶ

ನಗರದ ಮಲ ಕಲ್ಮಶಗಳನ್ನು ಹೂತಿಡುತಿದ್ದ ಸುಮಾರು ನಾಲ್ಕೈದು ಎಕ್ರೆ ಸ್ಥಳವು ಯಾರಿಗಾದರೂ ಗೇಣಿಗೆ ಬೇಕಾದಲ್ಲಿ ಅದನ್ನು ಕೊಡಬಹುದೆಂದು ನಗರ ಸಭೆಯಲ್ಲಿ ನಿರ್ಣಯವಾಯಿತು.

ಹಂಪನಕಟ್ಟೆಯ ಹೊಸ ಹೋಟೇಲಿನ ಬಳಿಯಲ್ಲಿನ ಕೊಳೆ ಕಲ್ಮಶ ತೆಗೆಯಲು ಪ್ರತ್ಯೇಕ ತೋಟಿಯನ್ನು ನೇಮಿಸಬೇಕೆಂದಾಯಿತು. ಹಿಂದಿನ ಸಭೆಗಳಲ್ಲಿ ಈ ಕುರಿತು ವಾದವಿವಾದಗಳು ನಡೆದಿದ್ದುವು.

ರೋಗನಿವಾರಣೆ

ನಗರದಲ್ಲಿನ ಜನರ ಮತ್ತು ಪ್ರಾಣಿಗಳಿಗೆ ತಗಲಬಹುದಾದ ರೋಗನಿವಾರಣೆಗಾಗಿ ಕೈಕೊಳ್ಳಬೇಕಾದ ಕಾರ್ಯಕ್ರಮ ಸೂಚಿಸುವ ಕೆಲವು ಉಪನಿಬಂಧನೆಗಳನ್ನು ಸೆನಿಟೇಶನ್ ಕಮಿಟಿಗೆ ಪರಿಶೀಲನೆಗಾಗಿ ಒಪ್ಪಿಸಲಾಯಿತು.

ಜಡ್ಜರು ಹೊಕ್ಕಿ ಆಡಿದರು

ಮೈದಾನಿನಲ್ಲಿ ಮುನ್ಸಿಪಾಲಿಟಿಯವರು ಸೆಂಟ್ರಲ್ ಮೈದಾನಿನಲ್ಲಿ ಹೊಕ್ಕಿ ಆಟಕ್ಕಾಗಿಯೇ ತಯಾರಿಸಿದ ಕ್ರೀಡಾಸ್ಥಳದ ಆರಂಭೋತ್ಸವವು ತಾ. ೨೦ರಂದು ಜರಗಿಸಲ್ಪಟ್ಟಿತು.

ಅಂದು ಜಿಲ್ಲಾ ಸೆಶ್ಯನ್ಸ್ ಜಡ್ಜ್ ಶ್ರೀ ಕೋಮನ್ ಅವರು ತಮ್ಮೊಂದು ಟೀಮಿನೊಂದಿಗೂ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರು ತಮ್ಮೊಂದು ಟೀಮಿನೊಂದಿಗೂ ಆಟಸ್ಥಳಕ್ಕೆ ಇಳಿದು ಸ್ವಲ್ಪ ಹೊತ್ತು ಆಟವಾಡಿ ಆರಂಭೋತ್ಸವ ನಡೆಸಿದರು.

ಈ ಸ್ಥಳಕ್ಕೆ "ಜೆ. ಎಂ. ಫೆರ್ನಾಂಡೀಸ್ ಹೊಕ್ಕಿ ಗ್ರೌಂಡ್" ಎಂದು ನಾಮಕರಣ ಮಾಡಬೇಕೆಂದು ಮುನ್ಸಿಪಲ್ ಕೌನ್ಸಿಲಿಗೆ ಅರ್ಜಿ ಮಾಡಲಾಗಿದ್ದು ಮೊನ್ನೆಯ ಸಭೆಯಲ್ಲಿ ಅದು ಸಾಧ್ಯವಿಲ್ಲವೆಂದು ತೆಗೆದು ಹಾಕಿದ್ದರು.

ಹೆಂಗಸರ ಅನೀತಿ ವ್ಯಾಪಾರಕ್ಕೆ ಶಿಕ್ಷೆ

ಮೈದಾನಿನ ಬಳಿಯ ಲೇಡಿ ಗೋಶನ್ ಹೆಂಗಸರ ಆಸ್ಪತ್ರೆಯ ಹಿಂದಿನ ಓಣಿಯಲ್ಲಿ ವಾಸಿಸುತಿದ್ದ ಲಕ್ಷ್ಮಿ ಮತ್ತು ರೋಹಿಣಿ ಎಂಬೀರ್ವ ಮಹಿಳೆಯವರು ವ್ಯಭಿಚಾರಕ್ಕೆ ಸಮ್ಬಂಧಪಟ್ಟ ಅನೀತಿ ವ್ಯವಹಾರಕ್ಕೆ ಪ್ರಯತ್ನಿಸಿದುದಕ್ಕಾಗಿ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ವಿಚಾರಣೆಯಾಗಿ ತಲಾ ೨ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿರುವರು.

ಕುದುರೆಗಾಡಿ ಬಾಡಿಗೆ

ನಗರದಲ್ಲಿ ಜಟ್ಕಾ ಗಾಡಿ ಬಾಡಿಗೆ ನಿಯಂತ್ರಣವು ಈ ತಿಂಗಳ ಮೊದಲನೆ ವಾರದಿಂದ ಜಾರಿಗೆ ಬಂದಿರುತ್ತದೆ. ಕಳೆದ ೧೯೪೩ನೇ ಜುಲೈ ತಿಂಗಳ ಹಿಂದೆ ಜಾರಿಯಲ್ಲಿ ಇದ್ದ ದರಕ್ಕೆ ೫೦ ಶೇಕಡಾ ಹೆಚ್ಚನ್ನು ಸೇರಿಸಿ ಈಗಿನ ದರಗಳು ನಿರ್ಧರಿಸಲ್ಪಟ್ಟಿವೆ. ನಿರ್ಧರಿತ ಬಾಡಿಗೆಯ ಪಟ್ಟಿಯನ್ನು ಗಾಡಿಯಲ್ಲಿ ತೂಗಹಾಕಬೇಕು. ಅದರಲ್ಲಿ ಸೂಚಿಸಿದಕ್ಕಿಂತ ಹೆಚ್ಚು ಬಾಡಿಗೆ ಪಡೆಯಬಾರದು. ಈ ನಿಯಮಗಳನ್ನು ಉಲ್ಲಂಘಿಸಿದವರ ಕುರಿತು ಪೋಲಿಸ್ ಸುಪರಿಂಟೆಂಡೆಂಟರಿಗೆ ತಿಳಿಸಬೇಕೆಂದೂ, ಅಂಥವರನ್ನು ದಂಡನೆಗೆ ಗುರಿಮಾಡಲಾಗುವುದೆಂದೂ ಪೋಲಿಸ್ ಖಾತೆಯ ಒಂದು ಪ್ರಕಟನೆ ತಿಳಿಸುತ್ತದೆ.

ವಿವೇಕಾನಂದ ಸಭೆ

ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಮೇಲ್ಕಂಡ ಸಂಸ್ಥೆಯ ಆಶ್ರಯದಲ್ಲಿ ಗೀತಾ ಜಯಂತ್ಯುತ್ಸವವು ತಾ. ೨೬ ಆದಿತ್ಯವಾರ ಜರಗಿಸಲ್ಪಡುವುದು. ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈ ಅವರು ಅಧ್ಯಕ್ಷರು. ಡಾ. ಕೇಶವಪೈ, ವಿದ್ವಾನ್ ಕೃಷ್ಣ ಭಟ್ ಇವರುಗಳ ಭಾಷಣಗಳಿವೆ.

ಅಪರಾಧಕ್ಕಾಗಿ

ತಿಂಗಳ ಖರ್ಚಿಗೆ ಹೆಚ್ಚಾದ ಅಕ್ಕಿ ಇದ್ದೂ ರೇಶನ್ ಪಡೆದ ಮಣ್ಣಗುಡ್ಡೆಯ ಮುಕ್ತ ಎಂಬಾಕೆಗೆ ೧೨೫ ರೂ. ಜುಲ್ಮಾನೆ ಆಗಿದೆ.

ಚಿಮಿಣಿ ಎಣ್ಣೆ ವ್ಯಾಪಾರದ ಕಾನೂನು ಮುರಿದಕ್ಕೆ ಮಗ್ಗಾ ಊರಿನ ಶ್ರೀ ನಾರಾಯಣ ನಾಯ್ಕರಿಗೆ ೪೦೦ ರೂ. ಜುಲ್ಮಾನೆ ಇಲ್ಲವೆ 4 ತಿಂಗಳ ಕಠಿಣ ಸಜೆ ಆಗಿದೆ,

ರೂ. ೨೦-೪-೬ರಷ್ಟು ಚಿಲ್ಲರೆ ನಾಣ್ಯ ದೊರಕಿದ ಪದವಿನ ಶ್ರೀನಿವಾಸ ಕಮ್ತಿ ಎಂಬವರಿಗೆ ರೂ. ೧೦೦ ಜುಲ್ಮಾನೆ.

ತೋಟಗಾರಿಕೆ ಸ್ಪರ್ಧೆ

ತಾ. ೧೬ರಲ್ಲಿ ನಡೆದ ತೋಟಗಾರಿಕೆ ಸ್ಪರ್ಧೆಯಲ್ಲಿ ಗವರ್ನಮೆಂಟ್ ಕಾಲೇಜಿಗೆ ಪ್ರಥಮ, ಸೈಂಟ್ ಎಗ್ನೆಸ್ ಕಾಲೇಜಿಗೆ ದ್ವಿತೀಯ ಬಹುಮಾನಗಳು ದೊರಕಿವೆ.

ವ್ಯಕ್ತಿಗಳಲ್ಲಿ ಶ್ರೀಮತಿ ಎಂ. ವೆಂಕಟೇಶ ಪೈ, ಮಿಸೆಸ್ ಡಿಕ್ಸನ್ ಮತ್ತು ಕೆಂಬೆಲ್ ಇವರಿಗೆ ಮೊದಲ ಮೂರು ಬಹುಮಾನಗಳು ದೊರಕಿವೆ. ಶ್ರೀಮತಿ ಶಾಂಬವಿ ಆರ್. ಪ್ರಭು ಇವರಿಗೆ ತರಕಾರಿ ಬೆಳೆಸುವಿಕೆಯಲ್ಲಿ ಪ್ರಥಮ ಬಹುಮಾನ ಕೊಡಲಾಗಿದೆ.

ಮೂಡಬಿದ್ರೆ

ಇಲ್ಲಿಯ ಮಾರ್ಕೆಟಿ ಎದುರಿನ ಶ್ರೀ. ಬಿ. ಗೋಪಾಲ ಪೈ ಮತ್ತು ಮಾಧವ ಪೈ ಎಂಬೀರ್ವರು ಆಹಾರ ವಸ್ತುಗಳಿಗೆ ಸಂಬಂಧಿಸಿದ ಕಾನೂನು ಮುರಿದಕ್ಕೆ ಕುಂದಾಪುರ ಜ್ಯಾಂಟ್ ಮೆಜಿಸ್ಟ್ರೇಟರು ಪ್ರತಿಯೊಬ್ಬರಿಗೆ ಒಂದೊಂದು ಸಾವಿರ ರೂ. ಜುಲ್ಮಾನೆ ವಿಧಿಸಿದ್ದರು. ಇವರ ಅಪೀಲು ಜಿಲ್ಲಾ ಕೋರ್ಟಿಗೆ ಹೋದಾಗಲೂ ಅಲ್ಲಿ ಅದು ಕಾಯಂ ಮಾಡಲ್ಪಟ್ಟಿತು.

ಕಾಸರಗೋಡು

ಔಷಧ ಕಾನೂನು ಮುರಿದಕ್ಕೆ ೪ ತಿಂಗಳ ಕಠಿಣ ಸಜೆಗೂ ರೂ. ೨೦೦ ಜುಲ್ಮಾನೆಗೂ ಒಳಗಾದ ಶ್ರೀ ರಾಮಪ್ಪ ಎಂಬವರಿಗೆ ಜಿಲ್ಲಾ ಜಡ್ಜರು ಅಪೀಲಿನಲ್ಲಿ ಅನುಭವಿಸಿದ ಸಜೆ ಸಾಕೆಂದು ಜುಲ್ಮಾನೆ ಕಾಯಂ ಮಾಡಿದರು.

ಬೆಂಕಿಪೆಟ್ಟಿಗೆಗೆ ೩೦೦ ರೂ.

ಅಬ್ದುಲ್ ಮತ್ತು ಮಹಮ್ಮದ್ ಎಂಬಿಬ್ಬರು ಲಕ್ಷ್ಯೆಯ ಬೆಂಕಿಪೆಟ್ಟಿಗೆಯನ್ನು ೧ ಆಣೆಗೆ ಮಾರಿದರು. ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಪ್ರತಿಯೊಬ್ಬರಿಗೆ ರೂ. ೩೦೦ ಜುಲ್ಮಾನೆ ಮಾಡಿದರು. ಆದರೆ ಜಿಲ್ಲಾ ಜಡ್ಜರಲ್ಲಿ ಅಪೀಲಾಗಿ ಒಬ್ಬರಿಗೆ ರೂ. ೭೫ ಇನ್ನೊಬ್ಬರಿಗೆ ರೂ. ೫೦ ಇಷ್ಟಕ್ಕೆ ಇಳಿಸಲಾಯಿತು.

ವಿವಿಧ ಸುದ್ದಿ ಸಾರ

ಅಹಮ್ಮದಾಬಾದಿನ ಓರ್ವ ಕಾರ್ಯಕರ್ತರಿಗೆ ಬರೆದ ಪತ್ರದಲ್ಲಿ ಗಾಂಧೀಜಿಯವರು "ಅಹಮ್ಮದಾಬಾದಿನಲ್ಲಿ ಹಿಂದೂ ಮುಸ್ಲಿಮರು ಬಂಧುಗಳಂತೆ ವಾಸಿಸಿಕೊಂಡಿರಬೇಕು, ಅಸ್ಪೃಶ್ಯತೆಯು ಅಲ್ಲಿಂದ ದೂರವಾಗಬೇಕು, ಮದ್ಯಪಾನವನ್ನು ನಿರ್ಮೂಲಿಸಬೇಕು, ಶ್ರೀಮಂತ ಬಡವರೊಳಗೆ ವೈಷಮ್ಯವಿರದಂತಾಗಬೇಕು, ಅಹಮ್ಮದಾಬಾದಿಗಳು ಖಾದಿಧಾರಿಗಳಾಗಬೇಕು. ಇಷ್ಟಾದರೆ ನಾನು ಧನ್ಯನು, ನೀವೂ ಧನ್ಯರು: ಭಾರತಕ್ಕೆ ಒಂದು ಆದರ್ಶ ಕಲ್ಪಿಸಿರಿ" ಹೀಗೆಂದು ಬರೆದಿರುವರು.

* * *

ಈಗಿನ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ಯಾವ ಪಕ್ಷಕ್ಕೂ ಸೇರಿರದ ಒಂದು ಸಮಿತಿಯನ್ನು ಸರ್ ಟೆಜ್ ಬಹದೂರ್ ಸಪ್ರೂಗಳು ಚುನಾಯಿಸಲಿರುವರು. ರಾಜಕೀಯ ಮತ್ತು ಜಾತೀಯ ಪ್ರಶ್ನೆಗಳನ್ನು ಈ ಸಮಿತಿಯವರು ನ್ಯಾಯ ಶಾಸ್ತ್ರ ಮತ್ತು ವಿಜ್ಞಾನಿಕ ದೃಷ್ಟಿಯಿಂದ ವಿಮರ್ಶಿಸಿ ಒಂದು ಇತ್ಯರ್ಥ ಮಾಡಲು ಪ್ರಯತ್ನಿಸುವರು. ಗಾಂಧೀಜಿಯ ಮತ್ತು ಸರಕಾರದ ಸಮ್ಮತಿಯು ಈ ಯೋಜನೆಗೆ ಇದೆಯಾಗಿ ತಿಳಿದುಬರುತ್ತದೆ.

WANTED

"Salesman to travell & work Canara, & Mysore State for Pharmaceutical Preparations. Experienced men need apply.

Sterling Agency House.
Car-Street, Mangalore.

ನಿಮ್ಮ ಕಾಲುಗಳಿಗೆ ಗಾಯವಾಗಿ ಕುಂಟಾಗದಂತೆ ನೋಡಿರಿ.

ಜಾಂಬಕ್ ನೋವನ್ನು ಇಂದ್ರಜಾಲದಂತೆ ಗುಣಪಡಿಸುವುದು.

ಬಾವು, ನೋವು, ಗಾಯ, ತುರಿಕಜ್ಜಿ, ಕಾಲುನೋವು ಮೊದಲಾದವುಗಳಿಗೆ ಜಾಂಬಕ್ ಎಂಥಾ ಅದ್ಭುತ ಔಷಧಿಯೆಂದು ತಿಳಿದರೆ ನೀವು ಆಶ್ಚರ್ಯಪಡುವಿರಿ! ನೀವು ಮಾಡತಕ್ಕದ್ದೇನೆಂದರೆ, ಜಾಂಬಕನ್ನು ನೋವಿದ್ದಲ್ಲಿಗೆ ಸವರುವುದು, ಮತ್ತು ಅದರ ಮೇಲೆ ವಸ್ತ್ರ ಸುತ್ತುವುದು. ಜಾಂಬಕಿನಲ್ಲಿರುವ ಶುದ್ಧ ವನೌಷಧಿ ಸತ್ವವು ಚರ್ಮದಲ್ಲಿ ಕೂಡಲೇ ಹೀರಲ್ಪಡುವುದು ಹೀಗೆ ನೋವು ಮತ್ತು ಬಾವು ಬೇಗನೇ ಕಡಿಮೆಯಾಗುತ್ತದೆ. ಜಾಂಬಕ್ ಕಲೆ ಉಳಿಯದಂತೆ ಗುಣಕೊಡುವುದು.

ಯಾವಾಗಲೂ ಜಾಂಬುಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿಗಳ ಕೊಬ್ಬು ವಿರಹಿತವಾದುದು.

ವಿವಿಧ ಯುದ್ಧರಂಗಗಳಿಂದ

(೧ನೇ ಪುಟದಿಂದ)

ಜೆಟ್ಟಿಗಳನ್ನೂ ...... ಮಾಡಿ ...... ಗುತ್ತಿರು ವರು. ...... ಭಾವದಿಂದ ಮನಸ್ಥೈ ಕಟ್ಟು ...... ದ ಧೈರ್ಯ ...... ಅಡಚಣೆಗಳು ಆಗದ ಹಾಗೆ, ಆದರೆ ನ್ಯಾಯವನ್ನು ಮುರಿದಿಕ್ಕುವ ಖಂಡಿತ ಧ್ಯೇಯ ದಿಂದ ಮಿತ್ರರು ...... ಕಾರ್ಯವನ್ನು ನೆರವೇರಿಸುತ್ತಿರುವರು.

ಫಿಲಿಪ್ಪೈನ್ ದ್ವೀಪಗಳನ್ನು ರಕ್ಷಿಸಿಕೊಳ್ಳಬೇಕೆಂದು ಜಪಾನಿಯರು ಹಟತೊಟ್ಟಂತೆ ಕಾಣುತ್ತದೆ. ಅಲ್ಲಿ ಅವರಿಗೆ ಅನೇಕ ಹಡಗುಗಳು ...... ವಿಮಾನಗಳ ನಷ್ಟವಾಗಿದ್ದರೂ, ಫಿಲಿಪ್ಪೈನುಗಳನ್ನು ಉಳಿಸಿಕೊಳ್ಳುವರೆ ಹೋರಾಡುತ್ತಿರುವ ತಮ್ಮ ಪಡೆಗಳಿಗೆ ಬೇಕಾದ ಶಸ್ತ್ರ, ಆಹಾರ ಇತ್ಯಾದಿಗಳನ್ನು ಧಾರಾಳವಾಗಿ ಪೂರೈಸುತ್ತಿರುವರು. ಈ ಕಾರಣದಿಂದ ಜನರಲ್ ಮೆಕ್ ಆರ್ಥರರ ದಂಡುಗಳಿಗೆ ಕೆಲವು ಕಡೆಗಳಲ್ಲಿ ಸ್ವಲ್ಪ ಹಿಮ್ಮೆಟ್ಟಬೇಕಾದ ಪರಿಸ್ಥಿತಿಯು ಉಂಟಾಗಿರುವುದು. ಆದರೆ ಅಮೇರಿಕದ ಮಹಾ ಬಲದ ಎದುರು ಜಪಾನಿಯರು ಎಷ್ಟು ದಿನ ಹೋರಾಡಬಲ್ಲರೆಂದು ನೋಡಲಿದೆ. ಜಪಾನನ್ನು ಸೋಲಿಸುವ ಕಾರ್ಯವು ಅತಿ ಸುಲಭವಿರದೆಂದು ಅಮೇರಿಕನ್ ತಜ್ಞರ ಅಭಿಪ್ರಾಯವು. ಶಾಂತಸಾಗರದ ಹೋರಾಟದಲ್ಲಿ ಜಪಾನಿಗೆ ಅನೇಕ ನಷ್ಟಗಳಾಗಿದ್ದರೂ, ಅವು ಮಿತ್ರರಿಗೆ ವಿಜಯ ದೊರಕಿಸಿಕೊಡುತ್ತವೆಂದಲ್ಲವೆಂದು ಅವರ ಅಭಿಪ್ರಾಯವು.

ದಕ್ಷಿಣ ಚೀನಾದಲ್ಲಿ ಜಪಾನಿಯರು ತುಂಬಾ ಮುನ್ನಡೆದಿರುವರು. ಇಂಡೋ ಚೀನಾ, ಥೈಲೆಂಡ್ ಮತ್ತು ಮಲಯಾ ಪ್ರದೇಶಗಳಲ್ಲಿ ಸಂಚಾರದ ಉತ್ತಮ ಅನುಕೂಲಗಳನ್ನು ಪಡೆಯುವುದು ಅವರ ಉದ್ದೇಶವಿದ್ದಂತೆ ಕಾಣುತ್ತದೆ. ಕಾರಣ ಅಮೆರಿಕನ್ನರು ತಮ್ಮ ಮಹತ್ತಾದ ನೌಕಾಬಲದಿಂದ, ಶಾಂತಸಾಗರದ ಜಲಮಾರ್ಗದ ಮೇಲೆ ತಮ್ಮ ಹತೋಟಿಯನ್ನು ಕಸಕೊಂಡರೆ, ಸಿಂಗಾಪುರ, ಜಾವಾ, ಬೋರ್ನಿಯೊ, ಇತ್ಯಾದಿ ಸ್ಥಳಗಳನ್ನು ರಕ್ಷಿಸಿಕೊಳ್ಳುವರೆ ಈ ನೆಲಮಾರ್ಗವು ಅವರಿಗೆ ಅತ್ಯಂತ ಅನುಕೂಲದ್ದು ಮಾತ್ರವಲ್ಲ—ಅತ್ಯಂತ ಮಹತ್ವದವುಗಳು. ತಮ್ಮ ಸ್ವದೇಶದ ಮೇಲೆ ಮತ್ತು ಮೆಂಚೂರಿಯಾದ ಮೇಲೆ ಹಲ್ಲೆಗಳನ್ನು ನಡೆಯಿಸುತ್ತಿರುವ ಅಮೆರಿಕನ್ ವಿಮಾನ ಪಡೆಗಳ ನಿಲ್ದಾಣಗಳಿದ್ದ ಸ್ಥಳಗಳು ಈ ಪ್ರದೇಶದಲ್ಲಿದ್ದವುಗಳು, ಈಗ ಜಪಾನಿಯರ ಕೈವಶವಾಗಿವೆ. ಈ ಪ್ರದೇಶದಿಂದ ಜಪಾನಿಯರನ್ನು ಹೊಡೆದು ಹೊರ ಓಡಿಸಲು, ಚಿಯಾಂಗರು ಹೆಚ್ಚಿನ ಪರಿಶ್ರಮ ವಹಿಸಿ ಹೋರಾಡುವುದು ಅತಿ ಅವಶ್ಯವಿದೆ ಎಂದು ಮಿತ್ರಪಕ್ಷದ ಅಭಿಪ್ರಾಯವು.

ಚಿಯಾಂಗರಿಗೂ ಚೀನಾದೇಶದ ಕೊಮ್ಯುನಿಷ್ಟರಿಗೂ ಇದ್ದ ಬೇಧಗಳು ನಿವಾರಣೆಯಾದರೆ ಜಪಾನಿಯರನ್ನು ಸದೆಬಡೆಯುವ ಕಾರ್ಯದಲ್ಲಿ ಅವರಿಗೆ ತುಂಬಾ ಸಹಾಯವಾಗಬಹುದು. ಈ ಕುರಿತು ಮಾತುಕತೆಗಳು ನಡೆದುವಾದರೂ ಚಿಯಾಂಗರೂ ಕೊಮ್ಯುನಿಷ್ಟರೂ ಒಂದು ನಿರ್ಣಿತ್ತ ಒಪ್ಪಂದಕ್ಕೆ ಬರಲಿಲ್ಲವೆಂದು ತಿಳಿದುಬಂದಿದೆ. ಕೊಮ್ಯುನಿಷ್ಟ ಬೆಂಬಲವು ಚಿಯಾಂಗರಿಗೆ ದೊರೆತರೆ ಆಗ ಮೆಂಚೂರಿಯಾದಲ್ಲಿ ತಳವೂರಿದ ಜಪಾನೀಯರಿಗೆ ಒಳ್ಳೇ ಬುದ್ಧಿ ಪಾಠ ಮಾಡಲು ಅನುಕೂಲವಾಗುವುದು.

ಚಿಯಾಂಗರಿಗೆ ಹೀಗೆ ಅನೇಕ ತೊಂದರೆಗಳು ಎದುರುನೋಡುತ್ತಿದ್ದರೂ ಜಪಾನಿಯರನ್ನು ತಡೆದು, ಅವರನ್ನು ತನ್ನ ದೇಶದಿಂದ ಹೊಡೆದೋಡಿಸುವ ಕಾರ್ಯವನ್ನು ಅವರು ಅಮೆರಿಕನರ ಸಹಕಾರದಿಂದ ಒಳ್ಳೆ ಹುರುಪಿನಿಂದ ನಡೆಯಿಸುತ್ತಿರುವರು. ಇಂಥಾ ಪರಿಸ್ಥಿತಿಯಲ್ಲಿ ಅವರು ಚೀನಾದಲ್ಲಿ ಹೋರಾಡುವ ಅಮೆರಿಕನ್ ಸೇನಾಪತಿ ಸ್ಟಿಲ್‌ವೆಲ್ಲರ ಬೆದರಿಕೆಗಳಿಗೆ ಮಣಿಯದೆ ದೃಢ ಹೃದಯವಂತರಾಗಿ ವರ್ತಿಸಿದರು. ಇದೇ ಸ್ಫೂರ್ತಿಯಿಂದ ಅವರೀಗ ಜಪಾನೀಯರನ್ನು ಎದುರಿಸುತಿರುವರೆಂದು ಊಹಿಸಲಾಗಿದೆ.

ಅವರಿಗೆ ಮಿತ್ರರ ಬೆಂಬಲವಿದೆ. ಚೀನಾ ಯುದ್ಧರಂಗಕ್ಕೆ ಬೇಕಾದ ಪೆಟ್ರೋಲಿಯಮ್ ಎಣ್ಣೆ ಕಳುಹಿಸಿಕೊಡುವರೆ ನಾಳಮಾರ್ಗದ ರಚನೆಯ ಕೆಲಸ ಸಾಗುತ್ತಿದೆ. ಈ ನಾಳಮಾರ್ಗವು ನಾಲ್ಕು ಕೊಳಗಳ ಸಾಲಾಗಿದ್ದು—೧೮೦೦ ಮೈಲು ಉದ್ದಕ್ಕೆ ಸಾಗುವುದು. ಈ ನಾಳಮಾರ್ಗವು ಕಲ್ಕತ್ತೆಯಿಂದ ಪ್ರಾರಂಭವಾಗಿ, ಉತ್ತರ ಬರ್ಮಾ ಪ್ರದೇಶವನ್ನು ಹಾದು ಹೋಗಿ ಚೀನಾ ದೇಶದ ಒಂದು ಪ್ರಾಮುಖ್ಯ ಪ್ರದೇಶವನ್ನು ಸೇರುವುದು. ಈಗಾಗಲೆ ಈ ನಾಳಮಾರ್ಗದ ೮೦೦ ಮೈಲುಗಳ ಕೆಲಸವು ತೀರಿರುತ್ತದೆ. ಈ ನಾಳಮಾರ್ಗ ಬೇಗನೆ ಪೂರ್ಣವಾಗಿ, ಸದ್ಯದಲ್ಲೆ ಇಂಜನುಗಳ ಶಕ್ತಿಯ ಮೂಲಕ ಕಲ್ಕತ್ತೆಯಿಂದ ಪೆಟ್ರೋಲಿಯಮ್ ಇತ್ಯಾದಿ ಯುದ್ಧೋಪಯೋಗದ ಖನಿಜ ಎಣ್ಣೆಗಳು, ಈ ಕೊಳವೆಗಳಿಂದ ಕಲ್ಕತ್ತೆಯಿಂದ ಚೀನಾಕ್ಕೆ ಹಾಯಿಸಲಾಗುವುದು.

ಇದಲ್ಲದೆ ಇತರ ಅಖಂಡ ಸಾಮಾನುಗಳನ್ನು ಪೂರೈಸುವರೆ ಮೋಟಾರು ವಾಹನಗಳ ರಸ್ತೆಯೂ ಕೂಡ ಈಗ ಸಿದ್ಧವಾಗಿರುತ್ತದೆ. ಗಗನ ಮೂಲಕವೂ ಸಾಮಾನುಗಳನ್ನು ಒಯ್ಯುವ ವ್ಯವಸ್ಥೆ ಮಾಡಲಾಗಿದೆ. ಈ ತರದಲ್ಲಿ ಸಹಾಯ ದೊರಕಿ ಚೀನಿಯರು, ಜಪಾನಿಯರ ಎದುರು ಹೋರಾಡಲು ಇನ್ನಷ್ಟು ಬಲವಂತರಾಗಬಹುದು.

ಕೊಮುನಿಷ್ಟರಿಗೂ– ಚಿಯಾಂಗರಿಗೂ ಒಪ್ಪಂದವಾದರೆ, ಚೀನಾದ ಪರವಾಗಿ, ಪ್ರಸಿದ್ಧ ಕೊಮುನಿಷ್ಟ ಸೈನಿಕರು ಹೋರಾಡುವರಲ್ಲದೆ, ಉತ್ತರ ಚೀನದಲ್ಲಿ ಜಪಾನಿಯರ ಯುದ್ಧಯತ್ನಗಳನ್ನು ಮಾಡುವ ಕೈಗಾರಿಕೆಗಳು ನಡೆಯುವ ಉತ್ತರ ಚೀನಾ ಪ್ರದೇಶದ ನಾಡುಗಳಲ್ಲಿ ಮತ್ತು ಮಂಚೂರಿಯದ ಮೇಲೆ ಹಲ್ಲೆ ನಡೆಯಿಸಲು ಅತ್ಯಂತ ಸಮೀಪದ ಠಾಣ್ಯಗಳನು ಸ್ಥಾಪಿಸಲು ಅಮೇರಿಕನ್ ವಿಮಾನ ಬಲಕ್ಕೆ ಆಸ್ಪದ ದೊರಕಬಹುದು.

ಉತ್ತರ ಬರ್ಮದಲ್ಲಿ ಮಿತ್ರರಿಗೆ ಅನೇಕ ಕಾರ್ಯ ಸಿದ್ಧಿಗಳು ದೊರಕಿವೆ. ಅತ್ಯಂತ ಉಪಯೋಗದ ಪ್ರಾಮುಖ್ಯವಾದ ಅನೇಕ ಸ್ಥಳಗಳು ಮಿತ್ರರಿಂದ ಹಿಡಿಯಲಾಗಿವೆ.

The AIRMAN

and his watch!

ವೈಮಾನಿಕರಿಗೆ ಸರಿಯಾದ ಕ್ರಮದಲ್ಲಿ ಸಮಯವ ಸೂಚಿಸುವ, ಹೆಚ್ಚು ಬಾಳಿಕೆಯ, ಚಂದವಾದ ಮತ್ತು ಕೈಗೆ ಭದ್ರವಾಗಿ ಕಟ್ಟುವಂತಹ ಗಡಿಯಾರಗಳು ಅವಶ್ಯ. ವೆಸ್ಟ್ ಎಂಡ್ ವಾಚುಗಳು ವೈಮಾನಿಕರಿಂದ ಹೊಗಳಲ್ಪಟ್ಟ, ಭರವಸೆಯ ಮತ್ತು ತೃಪ್ತಿಕೊಡುವಂತಹವುಗಳು ಆಗಿವೆ.

ಓರ್ವ ವಿಮಾನ ಅಧಿಕಾರಿ ಬರೆಯುತ್ತಾರೆ:—ನನ್ನ ಭಾರತೀಯ ಸ್ನೇಹಿತನೊಬ್ಬನು ನಿಮ ಕಂಪೆನಿಯ ವಾಚನ್ನು ಕೊಂಡು ಕೊಟ್ಟ. ಅದು ಈಗಲೂ ಸರಿಯಾಗಿ ಚಲಿಸುತ್ತದೆ.

ಸಿಲ್ವಡಾರ್—ಹೊಸ ಆಕೃತಿ

ನಿಕ್ಕಲ್ ಚೆಲ್ಸಿ, ರೇಡಿಯಂ ಡಾಯಲಿನದು ರೂ. 57

ಇತ್ತೀಚಿನ ಕಾಗದ ನಿಯಂತ್ರಣದ ಹುಕುಂಮಿನಿಂದಾಗಿ ಕೆಟಲಾಗುಗಳನ್ನು ಕಳುಹಿಸಿ ಕೊಡಲಾಗುವುದಿಲ್ಲ.

ವೆಸ್ಟ್ ಎಂಡ್ ವಾಚು ಕಂಪೆನಿ, ಬೊಂಬಾಯಿ ಮತ್ತು ಕಲ್ಕತ್ತ

WEST END WATCH Co

BOMBAY — CALCUTTA

ಬರ್ಮಾಕ್ಕೆ ಸಾಮಂತ ಸ್ವರಾಜ್ಯ

ಬ್ರಿಟಿಷ್-ಬರ್ಮಾ ಹಿತೈಷಿಗಳ ಯೋಜನೆ

ವ್ಯಾಪಾರಿಗಳಿಗೆ ನಷ್ಟ ಪರಿಹಾರ

ಬರ್ಮಾಕ್ಕೆ ಸಂಪೂರ್ಣ ಆಡಳಿತಾಧಿಕಾರವನ್ನೂ, ಸಾಮಂತ ರಾಜ್ಯಗಳ ಸರಿ ಸಮಾನಸ್ಥಾನವನ್ನೂ ಕೊಡುವ ಒಂದು ಯೋಜನೆನಕಾಶೆಯನ್ನು ಬ್ರಿಟಿಷ್ ಸಾಂಪ್ರದಾಯಪಕ್ಷದವರಾದ ಟೋರಿಗಳು ಕೆಲವರು ತಯಾರಿಸಿರುವರು.

ಈ 'ನಕಾಶೆ' ಪ್ರಕಾರ ಬರ್ಮವನ್ನು ಜಪಾನರಿಂದ ವಶಮಾಡಲ್ಪಟ್ಟ ಕೂಡಲೇ ಆರುವರ್ಷದ ಪುನಃರ್ರಚನೆಯ ಕಾರ್ಯಕ್ರಮಕ್ಕೆ ಒಳಪಡಿಸಲಾಗುವುದು. ನಂತರ ಕೂಡಲೇ ಅದರ ಆಡಳಿತವನ್ನು ಪ್ರಜಾ ಪ್ರತಿನಿಧಿಗಳಿಗೆ ಬಿಟ್ಟುಕೊಡುವುದು. ಆರು ವರ್ಷದ ಕಾಲದಲ್ಲಿ ಅಲ್ಲಿನ ಗವರ್ನರರು ಕೆಲ ಜನಪ್ರಿಯ ಮುಖಂಡರ ಸಹಾಯದಿಂದ ಪುನಃರ್ರಚನೆಯ ಕೆಲಸವನ್ನು ಸಂಪೂರ್ಣಗೊಳಿಸಬೇಕು.

ರಕ್ಷಣೆ ಮತ್ತು ವಿದೇಶಾಂಗ ವ್ಯವಹಾರವನ್ನು ಕುರಿತು ಬರ್ಮವು ಸಾರ್ವಭೌಮ್ಯಸರಕಾರದೊಡನೆ ಒಂದು ಒಪ್ಪಂದ ಮಾಡಿ ಅದನ್ನು ಬ್ರಿಟಿಷರಿಗೇ ವಹಿಸಿಕೊಡಬೇಕು.

ಬ್ರಿಟಿಷ್ ಸಂಸ್ಥೆಗಳಿಗೆ ನಷ್ಟ ಧನ

ಮೇಲೆ ತಿಳಿಸಿದ ಯೋಜನೆಯ ಮೇರೆಗೆ ಬರ್ಮಾದಲ್ಲಿದ್ದು ಈಗಿನ ಯುದ್ಧದಲ್ಲಿ ನಷ್ಟಹೊಂದಿದ ಬ್ರಿಟಿಷ್ ವ್ಯಾಪಾರಿಸಂಸ್ಥೆಗಳಿಗೆಲ್ಲ ಯೋಗ್ಯ ನಷ್ಟ ಪರಿಹಾರ ಧನವನ್ನು ಕೊಡಲಾಗುವುದು.

ಬರ್ಮಾದಲ್ಲೇ ಇದ್ದ ತನ್ನ ಕಾರ್ಖಾನೆಗಳನ್ನು ಪುನಃ ಪ್ರಾರಂಭಿಸುವವರೆಗೆ ಸಂಪೂರ್ಣ ಯುದ್ಧ ನಷ್ಟವನ್ನು ಕೊಡಲಾಗುವುದು.

ಬರ್ಮೀಯರು ಬ್ರಿಟಿಷರ ವ್ಯಾಪಾರಕ್ಕೆ ತಕ್ಕುದಾದ ಭದ್ರತೆಯನ್ನು ಕೊಡಬೇಕಾದ ಒಂದು ಒಪ್ಪಂದವಮಾಡಿಕೊಳ್ಳಬೇಕು.

ಅಂತರೀಕ ಶಾಂತಿರಕ್ಷಣೆಯು ಸಂಪೂರ್ಣವಾಗಿ ಬರ್ಮಾಸರಕಾರಕ್ಕೇ ವಹಿಸಲಾಗುವುದು. ಹೊರಪ್ರದೇಶದ ಕುರಿತು ಬ್ರಿಟಿಷರು ನೋಡಿಕೊಳ್ಳುವರು.

ಬ್ರಿಟಿಷ್ ಪತ್ರಿಕಾಭಿಪ್ರಾಯ

ಈ ಬರ್ಮಾ ಯೋಜನೆಯ ಕುರಿತು ನ್ಯೂಸ್ಟೇಟ್ಸ್‌ಮೆನ್ ಎಂಡ್ ನೇಶನ್ ಎಂಬ ಆಂಗ್ಲ ಪತ್ರಿಕೆಯೊಂದು ಹೀಗೆ ಅಭಿಪ್ರಾಯ ಸೂಚಿಸಿದೆ:

'ಬ್ರಿಟಿಷ್ ವ್ಯಾಪಾರ ಸಂಸ್ಥೆಗಳಿಗೆ ಯುದ್ಧದಿಂದಲೂ ಶತ್ರುಗಳಿಂದಲೂ ಆದ ನಷ್ಟವನ್ನು ಮುಂದಿನ ಸಾಮಂತ ಬರ್ಮಾವು ಕೊಡಬೇಕೆಂದರೆ ಬರ್ಮೀಯರಿಗಿಂತ ಸೌಮ್ಯ ಸ್ವಭಾವದ ಜನರು ಕೂಡಾ ಒಪ್ಪಲಿಕ್ಕಿಲ್ಲ. ಸಾಮಂತ ಸ್ವರಾಜ್ಯಕೊಡುವಾಗ ಬರ್ಮಾದ ಕೆಲವು ಭಾಗಗಳನ್ನು ಬಿಟ್ಟುಬಿಡಬೇಕೆಂದರೆ ಅವರು ಕೇಳಲಿಕ್ಕಿಲ್ಲ. ಕ್ರಿಪ್ಸ್ ಕೊಡುಗೆಗಿಂತ ಕಡಿಮೆಯಾದುದನ್ನೂ ಅವರು ಒಪ್ಪಲಾರರು.

ಸ್ಟೆಲಿನರು ಚೀನಾದ ಕೊಮ್ಯುನಿಸ್ಟರನ್ನು ಪ್ರೇರೇಪಿಸಲಾರರೆ,—ಚಿಯಾಂಗರಿಗೆ ಕೊಮ್ಯುನಿಸ್ಟರ ಸಹಾಯ ಸಹಕಾರ್ಯವನ್ನು ದೊರಕಿಸಿಕೊಡಲಾರರೆ?

ಮಾನವಪ್ರೇಮಿ ಗಾಂಧೀಜಿ

(ಗತ ಸಂಚಿಕೆಯಿಂದ)

ದೇಶೀಯ ಸೂತ್ರವನ್ನು ೧೯೧೯ರಲ್ಲಿ ಮದ್ರಾಸಿನ ಒಂದು ಮಿಶನರಿ ಸಭೆಯಲ್ಲಿ ಕೊಟ್ಟದನ್ನು ಇಲ್ಲಿ ಎತ್ತಬಹುದು. "ಅವಿಶದಲ್ಲಿ ದೊರಕುವ ಸೌಕರ್ಯಗಳನ್ನೇ ಬಳಸಿಕೊಂಡು ದೂರದಿಂದ ಬರುವವುಗಳನ್ನು ವರ್ಜ್ಯಮಾಡಿ ಬಿಡುವುದು" ಸ್ವದೇಶಿಯೆಂದು ಅವರು ವ್ಯಾಖ್ಯಾನ ಮಾಡಿದ್ದರು. ತನ್ನ ಆಶ್ರಮ ಜೀವನದ ಉದ್ದೇಶಗಳನ್ನು ವಿವರಿಸುವಾಗ ಬೇರೊಂದು ಇದೇ ಸೂತ್ರವನ್ನು ಅವರು ಹೆಚ್ಚು ವಿಶದವಾಗಿ ಬಣ್ಣಿಸಿದ್ದಾರೆ. "ಆದುದರಿಂದ ಯಾವದಾದರೂ ಒಂದು ವಸ್ತು ಹಿಂದೂಸ್ಥಾನದಲ್ಲಿ ಸಿಗದೆ ಹೋದರೆ ಅದು ಇಲ್ಲದೆ ವಹಿಸಾಗಿಸಲು ಪ್ರಯತ್ನಮಾಡಬೇಕು. ಹೀಗೆ ಮಾಡಿದರೆ ಹಲವಾರು ವಸ್ತುಗಳಿಲ್ಲದೆ ನಾವು ಸಾಗಬೇಕಾಗುವುದು. ಆದರೆ ನಮ್ಮಲ್ಲಿ ಅನುಕೂಲವಾದ ಮನೋಭೂಮಿಕೆ ಒಮ್ಮೆ ಉಂಟಾಯಿತೆಂದರೆ ನಮ್ಮ ಹೆಗಲಿನ ಭಾರ ಎಷ್ಟೂ ಇಳಿದಂತಾಗುವುದೆಂದು ನನ್ನ ವಿಶ್ವಾಸ . . . ಸ್ವದೇಶಿ ವ್ರತವನ್ನು ಸ್ವೀಕರಿಸಿದರೆ ಮನಸ್ಸು ಹೆಚ್ಚು ಹಗುರವಾಗುವುದನ್ನು ನೀವೇ ಅನುಭವದಿಂದ ತಿಳಿಯುವಿರಿ." ಸಾರಾಂಶವೆಂದರೆ, ಸರಳ ಜೀವನವೇ ಸ್ವದೇಶಿ ವ್ರತ. ಯಾರೊ ಒಬ್ಬರು ಹೇಳಿರುವಂತೆ "ಆಂತರಿಕ ಸುಧಾರಣೆ"ಯೆಂಬ ಗಾಂಧೀಜಿಯ ರೀತಿಗೆ ಸ್ವದೇಶಿಯೇ ಅತ್ಯುತ್ತಮ ಉದಾಹರಣೆ.

ಎಲ್ಲರಿಗೂ ಎಲ್ಲ ದೊರಕಿಸುವ ಉಪಾಯ ಸ್ವದೇಶಿ. ಖಾದಿಯು ಸ್ವರಾಜ್ಯದ ಹಾದಿಯೆಂದು ಎಷ್ಟೋ ಸಲ ಗಾಂಧೀಜಿ ಹೇಳಿದುಂಟು. ಬಟ್ಟೆ ಕೈಗಾರಿಕೆ ಬಲದಿಂದಲೇ ಹಿಂದೂಸ್ಥಾನದ ಮೇಲೆ ಬ್ರಿಟಿಷರ ಅಧಿಕಾರ ನಡೆದಿದೆಯೆಂದೂ ಇಂಗ್ಲಂಡಿನಿಂದ ಬಟ್ಟೆ ತರಿಸುವುದನ್ನು ನಿಲ್ಲಿಸಿ ದೇಶೀಯ ಉತ್ಪಾದನೆಗಳಿಗೆ ಪ್ರೋತ್ಸಾಹವಿತ್ತರೆ ವರ್ಷ ವರ್ಷ ಹೊರಗೆ ಹರಿದು ಹೋಗುತ್ತಿರುವ, ೩೦–೬೦ ಕೋಟಿ ರೂಪಾಯಿಗಳನ್ನು ಉಳಿಸಿಕೊಳ್ಳಬಹುದೆಂದೂ "ಈ ಪ್ರಕಾರ ಹಣವನ್ನು ಉಳಿಸುವುದರಲ್ಲಿ ನಾವು ಯಶಸ್ವಿಗಳಾದರೆ ಇದೊಂದೆ ಪ್ರಯತ್ನದಿಂದ ನಾವು ಸ್ವರಾಜ್ಯವನ್ನು ಸಂಪಾದಿಸಬಲ್ಲೆವು" ಎಂದೂ ಹಿಂದೆ ಅವರು ಪದೆ ಪದೆ ಉಪದೇಶಿಸಿದ್ದರು. ಇಂದು ಉತ್ಪನ್ನವಾಗುವ ಪರಿಸ್ಥಿತಿಯನ್ನು ಅವಲೋಕಿಸಿದರೆ ಗಾಂಧೀಜಿಯ ಈ ವಿಧಾನ ಅತಿಶಯೋಕ್ತಿಯಾಗಿತ್ತೆಂದು ತೋರದಿರದು. ಆದರೆ "ಸ್ವದೇಶಿ"ಯ ಮೂಲ ತತ್ವ, ಶಿಸ್ತು ಮತ್ತು ತ್ಯಾಗ ಬುದ್ಧಿಯೆಂದು ಮರೆಯಕೂಡದು. ಆ ತತ್ವಕ್ಕೆ ಪೂರ್ಣ ಅಂಟಿಕೊಂಡರೆ ಹಿಂದೂಸ್ಥಾನಕ್ಕೆ ಎದುರಿಸಬಾರದ ಶಕ್ತಿ ಮೈಗೂಡುವುದು. ಚರಕದಿಂದ ಸ್ವದೇಶಿ ಅದರ ಮೂಲಕ ಒಕ್ಕಲಿಗನ ಉತ್ಪನ್ನದ ಹೆಚ್ಚಳ. ಹೀಗೆ ಅವನನ್ನು ನಿರುದ್ಯೋಗ ಮತ್ತು ಬಡತನದಿಂದ ಪಾರುಮಾಡಬಹುದೆಂದು ಗಾಂಧೀಜಿಯ ನಂಬಿಕೆ. ಚರಖಾವನ್ನು ಒಕ್ಕಲಿಗನಿಗೆ ವಿರಾಮ ಕಾಲದ ಉಪವೃತ್ತಿಯಾಗಿ ಸೂಚಿಸಲಾಗಿದೆ; ಅದನ್ನು ಮುಖ್ಯ ಉದ್ಯೋಗವಾಗಿ ಮಾಡುವ ಉದ್ದೇಶವಿಲ್ಲ. ಆದುದರಿಂದ ಬಂಕೆವಲಗಾರರಿಗೆ ಕೂಲಿಗಾರರ ಕೊರತೆಯನ್ನು ಅದು ಉಂಟುಮಾಡಲಾರದು. "ಹಿಂದೂಸ್ಥಾನದಲ್ಲಿ ಕೋಟ್ಯಂತರ ಜನರು ಅರ್ಧ ನಿರುದ್ಯೋಗಿಗಳಿದ್ದಾರೆ. ಚರಖಾ ತತ್ವಕ್ಕೆ ಇದೆ ತಳಹದಿ. ಒಂದು ವೇಳೆ ಇಂಥ ಅರ್ಧ ನಿರುದ್ಯೋಗಿಗಳು ಹಿಂದೂಸ್ಥಾನದಲ್ಲಿ ಇರದೆ ಹೋಗಿದ್ದರೆ ಚರಖಾಕ್ಕೆ ಅವಕಾಶವಿರುತ್ತಿದ್ದಿಲ್ಲವೆಂದು ಒಪ್ಪಲು ನಾನು ಸಿದ್ಧನಿದ್ದೇನೆ" ಎಂದು ಅವರು ಹಲವು ವರ್ಷಗಳ ಹಿಂದೆಯೇ ಸ್ಪಷ್ಟಮಾಡಿದ್ದಾರೆ.

ಯಂತ್ರಗಳನ್ನು ಕುರಿತು ಗಾಂಧೀಜಿಯ ವಿರೋಧಕ್ಕೂ ಅವರ ಮಾನವ ಪ್ರೇಮವೇ ಕಾರಣ. ಅವರ ಉಪದೇಶಗಳಲ್ಲೆಲ್ಲ ಅತ್ಯಂತ ಅಪಾರ್ಥಕ್ಕೆ ಗುರಿಯಾದುದೆಂದರೆ, ಯಂತ್ರ ವಿಷಯಕವಾದ ಅವರ ಮತ. ಎಲ್ಲ ಬಗೆಯ ಯಂತ್ರಗಳಿಗೂ ಅವರು ವಿರೋಧಿಯೆಂದು ಹೇಳಿದರೆ ಅದು ಕೇವಲ ಸುಳ್ಳು. ಯಾವ ಯಂತ್ರಗಳಿಂದ ಮನುಷ್ಯನ ದುಡಿಮೆಯ ಅವಶ್ಯಕತೆಯನ್ನು ಕಡಿಮೆಮಾಡಿ ನಿರುದ್ಯೋಗವನ್ನು ಬೆಳಿಸಲಾಗುವುದೊ ಅಂಥವುಗಳನ್ನು ಮಾತ್ರ ಅವರು ಸಮಾಜ ವಿರೋಧಿಗಳೆಂದು ಪರಿಗಣಿಸುವರು. ೧೯೦೮ರಲ್ಲಿ ಬರೆದ "ಹಿಂದ್ ಸ್ವರಾಜ್ಯ" ಪುಸ್ತಕದಲ್ಲಿ ಗಾಂಧೀಜಿ ಈ ಮಾತನ್ನು ಚೆನ್ನಾಗಿಯೆ ತಿಳಿ ಹೇಳಿದ್ದಾರೆ. ಎಲ್ಲಾ ಯಂತ್ರೋಪಕರಣಕ್ಕೂ ನೀವು ವಿರೋಧಿಯೆ? ಎಂದು ಯಾರೋ ಒಬ್ಬರು ಒಮ್ಮೆ ಅವರನ್ನು ಕೇಳಿದರು. ಗಾಂಧೀಜಿಯ ಉತ್ತರ "ನನ್ನ ದೇಹವೇ ಒಂದು ಅತ್ಯಂತ ಸೂಕ್ಷ್ಮವಾದ ಯಂತ್ರ. ಇದನ್ನು ಅರಿತೂ ನಾನು ಹೇಗೆ ತಾನೆ ಎಲ್ಲ ಯಂತ್ರಗಳನ್ನು ವಿರೋಧಿಸಬಲ್ಲೆ? ವಾಸ್ತವಿಕವಾಗಿ ಚರಖಾ ಕೂಡ ಒಂದು ಯಂತ್ರ. ಹಲ್ಲು ಕಡ್ಡಿಯೂ ಹಾಗೆಯೆ. ನನ್ನ ವಿರೋಧ ಯಂತ್ರಕ್ಕಲ್ಲ, ಯಂತ್ರಾಂಧತೆಗೆ. ದುಡಿಮೆ ಉಳಿಸುವ ಯಂತ್ರಗಳಿಗೆ ಜನ ಹುಚ್ಚು ಗಟ್ಟಿ ಹೋಗಿದೆ. ಹೀಗೆ ದುಡಿಮೆ ಉಳಿಸಿ, ಉಳಿಸಿ, ಸಾವಿರಗಟ್ಟಳೆ ಜನ ಉದ್ಯೋಗವಿಲ್ಲದೆ ದಾರಿಯಲ್ಲಿ ಬಿದ್ದು ಉಪವಾಸ ಸಾಯುವವರೆಗೂ ಸರಿ. ದುಡಿಮೆ ಉಳಿಸುವುದು ನನಗೂ ಪ್ರಿಯವೆ; ಆದರೆ ಮಾನವ ಜಾತಿಯ ಒಂದು ಸ್ವಲ್ಪ ಅಂಶಕಲ್ಲ, ಇಡೀ ಮಾನವ ಜಾತಿಗೇ ಅದರ ಪ್ರಯೋಜನ ಸಿಗಲಿ. ಕೆಲವೇ ಜನರ ಕೈಗಳಲ್ಲಿ ಸಂಪತ್ತು ಕೂಡ ಬಾರದು, ಎಲ್ಲರ ಕೈಗೂ ಸೇರಬೇಕು ಎಂದೂ ನಾನು ಹೇಳುವುದು. ಇಂದು ಯಂತ್ರಗಳು ಮಾನವ ಕೋಟಿಯ ಮೇಲೆ ಸವಾರಿಮಾಡಲು ಕೆಲವರಿಗೆ ಅನುಕೂಲವೊದಗಿಸಿವೆ. ಇದರ ಹಿಂದಿರುವ ಪ್ರಚೋದನೆ ಔದಾರ್ಯವಲ್ಲ. ದುರಭಿಲಾಷೆ ಈ ವ್ಯವಸ್ಥೆ ವಿರುದ್ಧ ನಾನು ಹೋರಾಡುತ್ತಿದ್ದೇನೆ. ಏನೆ ಆದರು ಮಾನವನ ನಮಗೆ ಪರಿಶು ಧ್ಯೇಯ; ಮಾನವನ ಅಂಗಗಳನ್ನು ಕುಂಗಿಸುವ ಯಂತ್ರಗಳು ನಮಗೇಕೆ"

ಔದ್ಯೋಗೀಕರಣದ ವಿಷಯದಲ್ಲಿ ಗಾಂಧೀಜಿಯ ವಿಚಾರದಲ್ಲಿ ಇತ್ತೀಚೆಗೆ ಬದಲಿಸಿದೆಯೆ? ಹೌದು, ಹಾಗೆ ತೋರುತ್ತದೆ. ಆದರೆ ಅದು ಬದಲಿಸಿದೆಯೆನ್ನುವುದಕ್ಕಿಂತಲೂ ಚೆನ್ನಾಗಿ ಬಲಿತಿದೆಯೆನ್ನುವುದು ಹೆಚ್ಚು ಸರಿಯಾಗಬಹುದು. ಏಕೆಂದರೆ ಅದರ ನೆಲೆ ಇದ್ದಂತೇ ಇದೆ. ನಿರುದ್ಯೋಗವನ್ನು ಹೆಚ್ಚಿಸುವ ಯಂತ್ರಗಳಿಗೆ ಅವರು ಇಂದಿಗೂ ವಿರೋದಿಗಳೇ. ಬಹುಜನರನ್ನು ವಂಚಿಸಿ ಕೆಲಜನರ ಕೈಯಲ್ಲಿ ಸಂಪತ್ತಿನ ಸಂಚಯವಾಗಬಾರದೆಂಬ ಅವರ ತತ್ವವು ಯಥಾಪ್ರಕಾರ ಉಳಿದಿದೆ. "ಗಾಂಧೀಯೊಡನೆ ಒಂದುವಾರ" ಎಂಬ ಪುಸ್ತಕದಲ್ಲಿ ಲೂಯೀಫಿಶರರು ತಮಗೂ, ಗಾಂಧೀಜಿಯರಿಗೂ ಜೂನ್, ತಾ ೬, ೧೯೪೨ನೇ ನಡೆದ ಸಂವಾದವೊಂದನ್ನು ಉಲ್ಲೇಖಿಸಿದ್ದಾರೆ, ದೇಶದ ಸಂಪತ್ತು ಕೇಂದ್ರಿಕೃತವಾಗಬಾರದು, ಸರ್ವತ್ರ ಹಬ್ಬಿರಬೇಕು ಎಂಬ ತಮ್ಮ ಮಮತೆಯ ತತ್ವವನ್ನು ಫಿಶರರಿಗೆ ವಿವರಿಸುತ್ತಾ ರಾಷ್ಟ್ರದ ಸೊತ್ತನ್ನೆಲ್ಲಾ ಅದರ ೭ ಲಕ್ಷ ಹಳ್ಳಿಗಳಲ್ಲಿ ಹಂಚಬೇಕೆಂದು ಗಾಂಧೀಜಿ ಹೇಳಿದ ರೀತಿ. ಈ ಹಳ್ಳಿಗರು "ಇಂಗ್ಲೆಂಡಿನ ಇಂಪೀರಿಯಲ್ ಬ್ಯಾಂಕಿನಿಂದ ಬಂದ ಡಾಲರು (ಹಣ)ಗಳನ್ನು ಏನುಮಾಡಬಲ್ಲರು?" ಫಿಶರರ ಪ್ರಶ್ನೆ ಗಾಂಧೀಜಿಯ ಮರುತ್ತರ ಹೀಗಿತ್ತು. "ಇಷ್ಟಂತೂ ಆಗುವುದು. ಇಂದು ಪಾಲುಗಾರರಿಗೆ ಯಾವ ಲಾಭವೂ ಬರುತ್ತ ಇಲ್ಲ. ಎಲ್ಲವನ್ನೂ ಮಧ್ಯಸ್ಥರೇ ಕಬಳಿಸಿ ಬಿಡುತ್ತಾರೆ. ತಮ್ಮ ಡಾಲರುಗಳಿಗೆ ತಾನೆ ಯಜಮಾನರಾದರೆ ಒಕ್ಕಲಿಗರು ತಮಗೆ ಸರಿತೋರಿದ ರೀತಿ ಅದನ್ನು ಬಳಿಸುವರು" "ಒಕ್ಕಲಿಗರೆನಪ್ಪ ಹಣವನ್ನು ಹುಗಿದಿಡುವರು." ಲೂಯಿಫಿಶರರು ನಡುವೆ ಬಾಯಿ ಹಾಕಿದರು. "ಹಾಗೇನು ಮಾಡಲಾರರು, ಅವರು ಆ ಹಣವನ್ನು ಮರಳಿ ಬ್ಯಾಂಕಿಗೆ,–ತಮ್ಮದೆ ಆದ ಬ್ಯಾಂಕಿಗೆ–ಒಯ್ದು ತಮಗೆ ಸರಿತೋರಿದ ಕೆಲಸಕ್ಕೆ ತಮ್ಮದೇ ಆದೇಶದಂತೆ ಅದನ್ನು ಬಳಸುವರು ಆಗ ಅವತು ಪವನಚಕ್ಕಿ (Windmill)ಗಳನ್ನು ನಿರ್ಮಿಸಬಹುದು, ಅಥವಾ ವಿದ್ಯುತ್ತನ್ನು ಉತ್ಪಾದನ ಮಾಡಬಹುದು. ಒಂದು ಕೇಂದ್ರ ಸರಕಾರವೇನೂ ರೂಪಿತವಾಗಬಹುದು. ಆದರೆ ಅದು ಜನತೆಯ ಇಚ್ಛೆಯ ತಳಹದಿ ಮೇಲೆ ನಿಂತು ಜನತೆಯ ಇಚ್ಛೆಯನ್ನೇ ಅನುಸರಿಸಿ ಕೆಲಸಮಾಡುವುದು" "ಹೀಗ ಕೇಂದ್ರ ಸರಕಾರ, ಹೆಚ್ಚು ಉದ್ಯೋಗಗಳನ್ನು ಬೆಳಸಿ, ದೇಶವನ್ನು ಔದ್ಯೋಗಿಕ ಪದ್ಧತಿಯಿಂದ ವಿಕಾಸಗೊಳಿಸಬಹುದು" ಎಂದು ಫಿಶರರು ಪೂರೈಸಿದರು.

ಇದಕ್ಕೆ ನೇರವಾಗಿ ಮಹಾತ್ಮರು ಯಾವ ಉತ್ತರವನ್ನೂ ಕೊಡಲಿಲ್ಲ. ಫಿಶರರು ಅಷ್ಟಕ್ಕೆ ಬಿಡಲಿಲ್ಲ; ಮರುದಿನ ಮತ್ತೆ ಇದೇ ಮಾತನ್ನು ಎತ್ತಿದರು. ಗಾಂಧೀಜಿ ಸ್ವಲ್ಪ ಅಸಹನೆಯಿಂದ ಅಂದದ್ದು, "ತೀವ್ರವಾದ ಔದ್ಯೋಗೀಕರಣ ಮಾಡಬೇಕಾಗುವುದು, ಎಂಬೀ ಮಾತನ್ನು ನನ್ನ ಬಾಯಿಂದಲೇ ಒಪ್ಪಿಸಬೇಕೆಂದು ನಿಮ್ಮ ಹಟವಲ್ಲವೆ? ಆದರೆ ಅಂಥ ಒಪ್ಪಿಗೆಯನ್ನು ನನ್ನ ಬಾಯಿಂದ ಉದುರಿಸಲಾರಿರಿ. ಬ್ರಿಟಿಷರ ಆಳಿಕೆಯಿಂದ ಪಾರಾಗುವುದು ನಮ್ಮ ಮೊದಲನೆ ಗುರಿ. ಆ ಮೇಲೆ ನಾವು ಹೊರಗಿನಿಂದ ಯಾವದೊಂದು ಆತಂಕವಿಲ್ಲದೆ ಹಿಂದುಸ್ಥಾನಕ್ಕೆ ಏನು ಅವಶ್ಯವೊ ಅದನ್ನು ಮಾಡಲು ಸಮರ್ಥರಾಗುವೆವು"

ಎಷ್ಟೊ ವಿಷಯಗಳಲ್ಲಿ ಗಾಂಧೀಜಿಯ ಭಾವನೆಗಳು ಅವಿಚಲವೂ ನಿರ್ದಿಷ್ಟವೂ ಇವೆಯೆಂದು ಎಲ್ಲರಿಗೂ ಗೊತ್ತು. ಆದರೆ ಹಿಂದೂಸ್ಥಾನದ ಔದ್ಯೋಗೀಕರಣವನ್ನು ಕುರಿತು ಹಿಂದೆ ಎಷ್ಟೇ ಪೂರ್ವಗ್ರಹಯುಕ್ತರಾಗಿದ್ದಿರಬಹುದಾದರೂ ಪೂರ್ಣ ಸಹಿಷ್ಣುಗಳಾಗಿರುವರೆಂದೂ ಮೇಲಿನ ಸಂವಾದದಿಂದ ಸ್ಪಷ್ಟವಾಗುತ್ತದೆ. ತಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕುವ ಮುಂದೆ ಅದು ತನಗೆ ಯಾವುದು ಹಿತಕರವೊ ಅದನ್ನು ಮಾಡಲಿ, ಅದರಲ್ಲಿ ಅವರಿಗೆ ಅಸಂತೃಪ್ತಿಯಿಲ್ಲ. ಹಿಂದೀ ಉದ್ಯೋಗ ಕೈಗಾರಿಕೆಗಳಿಗೆ ರಕ್ಷಣೆಕೊಡಲು ವಿದೇಶಿ ವಸ್ತುಗಳಿಗೆ ಹೆಚ್ಚಿನ ಸುಂಕ ಹಾಕುವುದಕ್ಕೆ ಗಾಂಧೀಜಿಯ ಬೆಂಬಲವುಂಟೆಂದು ಅನೇಕರಿಗೆ ಗೊತ್ತಿಲ್ಲ. ಅಸಹಿಷ್ಣುವಾದ ಔದ್ಯೋಗಿಕರಣ ವಿರೋಧಿಯಾದವನು ಸರ್ವಥಾ ಈ ಕ್ರಮಕ್ಕೆ ಒಪ್ಪಿಗೆ ಕೊಡುತಿದ್ದಿಲ್ಲ. ಸಾರಾಂಶವಿಷ್ಟೆ: ಜನತೆಯ ಆರ್ಥಿಕ ಮತ್ತು ಸಾಮಾಜಿಕ ಆವಶ್ಯಕತೆಗಳಿಗೆ ವ್ಯತಿರಿಕ್ತವಾಗದಂತೆ ಯಂತ್ರಗಳನ್ನಾಗಲಿ ವಿಜ್ಞಾನದ ಶೋಧಗಳನ್ನಾಗಲಿ ಬಳಸುವುದಾದರೆ ಅಪಕ್ಕೆ ಗಾಂಧೀಜಿ ಆಕ್ಷೇಪಿಸಲಾರರು. ಹೆಚ್ಚು ಜನರಿಗೆ ಉದ್ಯೋಗವನ್ನೊದಗಿಸುವ ಮತ್ತು ಜನಸಾಮಾನ್ಯಕ್ಕೆ ಹಿತಕರವಾಗಿರುವ ಔದ್ಯೋಗಿಕ ಉಪಕ್ರಮಗಳನ್ನು ಅವರು ಸ್ವಾಗತಿಸಬಹುದು. ೧೯೩೮ರಲ್ಲಿ ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ನೇಮಿಸಲಾದ ಕಾಂಗ್ರೆಸ್ಸಿನ "ರಾಷ್ಟ್ರೀಯ ಯೋಜನಾ ಸಮಿತಿಯ' ಕಾರ್ಯರಂಗದಲ್ಲಿ ಉದ್ದಾಮ ಉದ್ಯೋಗಗಳ ವಿಕಾಸವೂ ಒಂದಾಗಿತ್ತು ಎಂದ ಬಳಿಕ ಕಾಂಗ್ರೆಸು ಆರ್ಥಿಕ ವಿಷಯದಲ್ಲಿ ಅವ್ಯವಹಾರವಾದಿಯಲ್ಲವೆಂದು ಸಿದ್ಧವಾಗುವುದಲ್ಲವೆ?

(ಗಾಂಧೀಜಿ)

'ಸತೀಶ'

ಆಧುನಿಕ ತಾಯಂದಿರು ತಮ್ಮ ಮಕ್ಕಳನ್ನು ಸ್ವಂತ ಆರೈಕೆಯಿಂದ ಬಳಸದಿರುವುದು ಅಪ್ರಾಕೃತಿಕವೆಂದೂ ಆದರಿಂದ ಮಕ್ಕಳು ದೊಡ್ಡವರಾದ ಮೇಲೆ ಅವರಲ್ಲಿ ಸಹಜವಾದ ಮಾನವಪ್ರೇಮದ ಗುಣಶೀಲಗಳು ಉಂಟಾಗುವುದಿಲ್ಲವೆಂದು ಅಮೇರಿಕದ ಶಿಶುಶಾಸ್ತ್ರತಜ್ಞೆಯೋರ್ವಳ ಅಭಿಪ್ರಾಯ. ಕೃತಕ ಹಾಲು, ದಾದಿಗಳ ಮೂಲಕ ಪೋಷಣೆ ಇವು ಕೂಡದೆಂದು ಅವಳ ಸೂಚನೆ.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BANDER Mangalore.

ವಿಶ್ವ ವಾಣಿಜ್ಯ ವ್ಯವಹಾರ ಪರಿಷತ್ತು

ಭಾರತಕ್ಕೆ ಅಂತರ್ರಾಷ್ಟ್ರೀಯ ಸಹಾಯ

ಬ್ರಿಟಿಷರ ಪಕ್ಷಪಾತ-ಧೋರಣೆ

ಜಗತ್ತಿನ ಇತಿಹಾಸದಲ್ಲಿ ಪ್ರಥಮ ದೊರುವ ವಿಶ್ವವಾಣಿಜ್ಯ ವ್ಯವಹಾರ ಪರಿಷತ್ತೊಂದು ನ್ಯೂಯಾರ್ಕಿನ ಬಳಿ ರ್ರ್ಯಾಯಲ್ಲಿ ಸೇರಿ, ಅಂತರ್ರಾಷ್ಟ್ರೀಯ ವ್ಯಾಪಾರ, ಕೈಗಾರಿಕೆ, ಉದ್ಯಮಗಳ ಸಂಬಂಧ ಕುರಿತು ಪರ್ಯಾಲೋಚನೆಗಳು ನಡೆದುವು.

ಐವತ್ತೆರಡು ಜನಾಂಗಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದ್ದರು. ಭಾರತದ ವ್ಯಾಪಾರಿ ಉದ್ಯಮದ-ಪರವಾಗಿ ಬೊಂಬಾಯಿಯ ಪ್ರಖ್ಯಾತ ವಾಣಿಜ್ಯ ಮುಖಂಡರಾದ ಸರ್ ಚುನಿಲಾಲ್ ಮೆಹತಾ ಅವರು ಪ್ರಾತಿನಿಧ್ಯ ವಹಿಸಿ ಹಾಜರಿದ್ದರು.

ಪರಿಷತ್ತಿಗೆ ಯಾವ ಜನಾಂಗದ ಸರಕಾರದಿಂದ ಅಧಿಕಾರಯುಕ್ತವಾದ ಪ್ರತಿನಿಧಿಗಳು ಕಳುಹಿಸಲ್ಪಡಲಿಲ್ಲವಾದರೂ ಅದರ ಇತ್ಯರ್ಥ ಯೋಜನೆಗಳನ್ನು ಎಲ್ಲಾ ಸರಕಾರದವರೂ ಅಮೂಲ್ಯ ಸಲಹೆಗಳಾಗಿ ಸ್ವೀಕರಿಸುವುದರಲ್ಲಿ ಸಂಶಯವಿಲ್ಲ.

ಗೊತ್ತುಗುರಿಗಳು

ಬೇರೆ ಬೇರೆ ಜನಾಂಗಗಳ ವಾಣಿಜ್ಯ ಧೋರಣೆಗಳನ್ನೂ, ಆರ್ಥಿಕ ಯೋಜನೆಗಳನ್ನೂ (ಹಣಕಾಸಿನ ಪರಸ್ಪರ ಮೌಲ್ಯವನ್ನು ನಿಶ್ಚಯಿಸುವ) ಮತ್ತು ವಾಣಿಜ್ಯ ವಸ್ತುಗಳ ಸಾಗಿಸುವಿಕೆಯ ಏರ್ಪಾಡನ್ನೂ ಕುರಿತು ಸರ್ವರಿಗೂ ಅನುಕೂಲವಾದ ಒಂದು ಯೋಜನೆಯನ್ನು ರೂಪುಗೊಳಿಸುವುದು ಈ ಪರಿಷತ್ತಿನ ಆದ್ಯ ಉದ್ದೇಶ. ಮಾತ್ರವಲ್ಲ ಒಂದು ಜನಾಂಗದ ಪರದೇಶದಲ್ಲಿ ವ್ಯಯಿಸಲ್ಪಟ್ಟ ಬಂಡವಾಳದ ರಕ್ಷಣೆ, ಅದನ್ನು ವಿಕಾಸಗೊಳಿಸುವ ಯೋಜನೆ, ಕಚ್ಚಾ ಪದಾರ್ಥಗಳ ಹಂಚುವಿಕೆ, ಆಹಾರ ವಸ್ತುಗಳ ಪೂರೈಕೆ, ಮುಂತಾದ ಇತರ ವಿಷಯಗಳೂ ಪರಿಷತ್ತಿನ ಪರಿಶೀಲನೆಗೆ ನಿಂತ ವಿಚಾರಗಳು.

ರಾಜಕೀಯ ಮತ್ತು ಆರ್ಥಿಕ ವಿಚಾರಗಳಲ್ಲಿ ತುಂಬಾ ಹಿಂದೆ ಬಿದ್ದಿರುವ ಭಾರತವು ಈ ವಾಣಿಜ್ಯ ಉದ್ಯಮ ಚರ್ಚೆಯಲ್ಲಿ ಬ್ರಿಟನ್, ಅಮೇರಿಕಾಗಳಂತಹ ಕೈಗಾರಿಕೆಯಲ್ಲಿ ಮುಂದುವರಿದ ಜನಾಂಗಗಳೊಂದಿಗೆ ಸಮಾನ ರೀತಿಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಮೋಟಾರಿನೊಂದಿಗೆ ಎತ್ತಿನ ಗಾಡಿ ಓಡಿದಂತೆ ಇದರ ಪರಿಣಾಮವಾಗುವುದು.

ಭಾರತಕ್ಕೆ ಎಲ್ಲರ ಸಹಾಯಬೇಕು

ನಾಲ್ಕನೇ ಸಲ ಅಧ್ಯಕ್ಷರಾದ ರೂಸ್‌ವೆಲ್ಟರು "ವ್ಯಾಪಾರ, ಉದ್ಯೋಗೀಕರಣದ ವಿಷಯದಲ್ಲಿ ಮುಂದಿನ ಪುನೀರ್ರಚನೆಯಲ್ಲಿ ಎಲ್ಲರಿಗೂ, ಎಲ್ಲಾ ದೇಶಗಳಲ್ಲೂ ಸಮಾನವಾದ ಸವಲತ್ತುಗಳನ್ನು ಕೊಡಲಾಗುವುದು" ಎಂದಿರುವರು. ಇದು ಸಂಭವಿಸಿದರೆ ಭಾರತಕ್ಕೆ ಹಾನಿಯುಂಟು. ಕಾರಣ ಕೈಗಾರಿಕೆಯಲ್ಲಿ ಬಹಳ ಮುಂದುವರಿಯದ ದೇಶಗಳು ತಮ್ಮ ಶ್ರೇಷ್ಠ ತರಗತಿಯ ವಸ್ತು ಉಪಕರಣಗಳನ್ನು ತಂದು ತುಂಬಿ, ಸಹಜವಾದ ವಾಣಿಜ್ಯ ಸ್ಪರ್ಧೆಯನ್ನು ಪ್ರಾರಂಭಿಸುತ್ತವೆ.

ಈ ಸಂದರ್ಭದಲ್ಲಿ ಕೈಗಾರಿಕೆ, ಮತ್ತು ಇತರ ಅಂತರ್ರಾಷ್ಟ್ರೀಯ ಉದ್ಯಮ, ಉದ್ಯೋಗಗಳ ಮಟ್ಟಿಗೆ ಇನ್ನೂ ತುಂಬಾ ಹಿಂದುಳಿದ ಭಾರತವು ಆ ದೇಶಗಳೊಡನೆ ಪ್ರತಿಸ್ಪರ್ಧಿಸಲಾರದು. ಈ ಸ್ಪರ್ಧೆಯಲ್ಲಿ ತನ್ನ ಕೈಗಾರಿಕೆಯನ್ನು ವಿಕಾಸಗೊಳಿಸಬೇಕೆಂಬ ಭಾರತೀಯರ ಉದ್ದೇಶವು ಭಂಗವಾಗಿ ನಮ್ಮ ದೇಶವು ಪರರಾಷ್ಟ್ರಗಳ ವಸ್ತು ಮಾರಾಟದ ಮಾರ್ಕೆಟ್ಟಾಗಿ ನಮ್ಮ ಜನತೆಯ ಮಟ್ಟಿಗೆ ಯಾವ ಆರ್ಥಿಕ ಇಳಿವೆ ವಾಣಿಜ್ಯ ಪ್ರಗತಿಯೂ ಉಂಟಾಗದಂತಾಗುತ್ತದೆ.

ಆದುದರಿಂದ ಕೈಗಾರಿಕೆ, ವಾಣಿಜ್ಯ ವ್ಯವಹಾರಗಳಲ್ಲಿ ದೊಡ್ಡದೆನಿಸಿದ ಜನಾಂಗಗಳು ಆ ಪ್ರತ್ಯೇಕ ಕ್ಷೇತ್ರದಲ್ಲಿ ಚಿಕ್ಕದೆನಿಸುವ ಜನಾಂಗಗಳಿಗೆ ಉತ್ತೇಜನ ಕೊಡಬೇಕೆಂದು ಪರಿಷತ್ತಿನ ಭಾರತ ಪ್ರತಿನಿಧಿಗಳಾದ ಸರ್ ಚುನಿಲಾಲರು ಸೂಚಿಸಿದರು.

"ಇಂದು ಭಾರತದಂತಹ ದೇಶಗಳು ಕೈಗಾರಿಕೆ, ಮತ್ತಿತರ ಉದ್ಯಮಗಳಲ್ಲಿ ಹಿಂದುಳಿಯಲು ಕಾರಣ ಆ ದೇಶಗಳಲ್ಲಿ ಖನಿಜ ಸಂಪತ್ತಿಗಿರುವ ಕೊರತೆಯಿಂದಲ್ಲ. ಖನಿಜ ಪದಾರ್ಥಗಳು ನಮ್ಮ ದೇಶದಲ್ಲಿ ಅಪಾರ ಪರಿಮಾಣದಲ್ಲಿ ದೊರಕುತ್ತವೆ. ರಾಜಕೀಯವಾಗಿ ಹೊರ ಆಡಳಿತೆಗೆ ಒಳಪಟ್ಟು, ಹೊರಗಿನವರ ಹಿತಸಾಧನೆಗಾಗಿ ಅವು ಉಪಯೋಗಿಸುವಂತಾದುದರಿಂದ ಇಂದು ಈ ದೇಶಗಳು ಹಿಂದೆ ಉಳಿಯಬೇಕಾಯಿತೆಂಬ" ವಿಷಯವನ್ನು ಎಲ್ಲಾ ಜನಾಂಗಗಳ ಗಮನಕ್ಕೆ ತರಲಾಯಿತು. ಚತುರ ಕೆಲಸಗಾರರನ್ನೂ, ಶ್ರೇಷ್ಠ ಯಂತ್ರೋಪಕರಣಗಳನ್ನೂ ತಯಾರಿಸುವ ಅನುಕೂಲತೆಗಳು ದೊರಕದಿದ್ದುದರಿಂದ ಇಂದು ಇತರ ದೇಶಗಳಂತೆ ಮುಂದುವರಿಯಲು ಸಾಧ್ಯವಾಗಲಿಲ್ಲ.

ವಾಣಿಜ್ಯ ಸಂಬಂಧದಲ್ಲಿ ಮುಂದುವರಿದ ಮತ್ತು ಹಿಂದುಳಿದ ದೇಶಗಳಲ್ಲಿ ಯಾವ ನಿಜವಾದ ಭೇದವಿಲ್ಲವೆಂದು ತಿಳಕೊಂಡಿರುವುದು ತಪ್ಪು. ಹೊಸ ಯಂತ್ರೋಪಕರಣಗಳನ್ನು ಸ್ಥಾಪಿಸಿ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಿದ ಕೂಡಲೇ ಒಂದು ದೇಶದ ನಿರುದ್ಯೋಗವು ಕಮ್ಮಿಯಾಗುತ್ತದೆ. ಜನತೆಯ ಆದಾಯವು ಹೆಚ್ಚಿ ಬಡತನದ ಪ್ರಶ್ನೆಯು ಬಹುಮಟ್ಟಿಗೆ ಸುಧಾರಿಸುತ್ತದೆ. ಮುಂದೆ ಹೀಗೆ ಸ್ಥಾಪಿಸಲ್ಪಟ್ಟ ಕೈಗಾರಿಕೆಗಳು ಸಂಪೂರ್ಣವಾಗಿ ಅಭಿವೃದ್ಧಿ ಹೊಂದುವ ತನಕ ಹೊರಗಿನವರ ಸ್ಪರ್ಧೆ ಇರಕೂಡದು.

ಸ್ಪರ್ಧೆ ನಿಯಂತ್ರಣ ಸಮಿತಿ

ದೇಶ ದೇಶದೊಳಗೆ ವಾಣಿಜ್ಯ ವಸ್ತುಗಳ ಬೆಲೆಗಳು ಸ್ಪರ್ಧಾ ರೂಪವನ್ನು ತಾಳದಂತೆ ನೋಡಿಕೊಳ್ಳುವ ಕೆಲವು ಸಂಯುಕ್ತ ಸಮಿತಿ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿರುತ್ತವೆ. ಇವುಗಳ ಕುರಿತು ವಿಶ್ವ ವಾಣಿಜ್ಯ ವ್ಯವಹಾರ ಪರಿಷತ್ತಿನಲ್ಲಿ ಭಾರತ ಪ್ರತಿನಿಧಿಗಳಲ್ಲಿ ಒಬ್ಬರಾದ ಮಿ। ಅಬ್ದುರ್ ರಹಿಮಾನ್ ಸಿದ್ದಿಕಿ ಅವರು ಹೀಗೆಂದರು: ಇಂತಹ ಸ್ಪರ್ಧೆ ನಿಯಂತ್ರಣ ಸಂಸ್ಥೆಯವರು ಸ್ಪರ್ಧೆಯಾಗದಂತೆ ನೋಡಿಕೊಂಡಿರುವುದು ಯಥಾಯೋಗ್ಯವಾದುದು. ಆದರೆ ಈಗಿನ ಪರಿಸ್ಥಿತಿಯಲ್ಲಿ ಹಿಂದುಳಿದ ದೇಶಗಳಿಗೆ ಇದರಿಂದ ಹಾನಿಯಾಗಿ, ಮುಂದುವರಿದ ದೇಶಗಳಿಗೆ ಹೆಚ್ಚು ಅನುಕೂಲತೆ ದೊರಕುವಂತಾಗುತ್ತದೆ. ಮುಂದುವರಿದ ದೇಶಗಳಲ್ಲಿ ತಯಾರಾದ ವಸ್ತುಗಳು ಚಲ್ಲೋದಿದ್ದು ಶ್ರೇಷ್ಠ ತರಗತಿಯವಿರುತ್ತವೆ. ಹಿಂದುಳಿದ ದೇಶಗಳಲ್ಲಿ ತಯಾರಾದವುಗಳು ಅನೇಕ ಕಾರಣಗಳಿಂದ ಅಷ್ಟೊಂದು ಸಮಾನ ಶ್ರೇಷ್ಠತೆಯವು ಇರಲಾರವು. ಇವೆರಡು ತರದವುಗಳಿಗೆ ಒಂದೇ ಬೆಲೆ ಮಾಡಿದಾಗ ಕಮ್ಮಿ ಶ್ರೇಷ್ಠತೆಯವುಗಳಿಗಿಂತ ಹೆಚ್ಚು ಶ್ರೇಷ್ಠತೆಯವುಗಳೇ ಮಾರಾಟವಾಗುತ್ತವೆ. ಹೀಗಾಗಿ ಕಮ್ಮಿ ಶ್ರೇಷ್ಠತೆಯ ವಸ್ತುಗಳನ್ನು ತಯಾರಿಸುವ ದೇಶದ ಕೈಗಾರಿಕೆಯು ನಷ್ಟ ಹೊಂದುವುದರ ಮೂಲಕ ನಾಶವಾಗಬಹುದು. ಆದುದರಿಂದ ಆಯಾ ದೇಶದ ವಿಶೇಷ ಪರಿಸ್ಥಿತಿಗಳನ್ನು ಗಮನಿಸಿ ಜಗತ್ತಿನ ಎಲ್ಲಾ ಕೈಗಾರಿಕೆಗಳೂ ಸಮಾನ ಸ್ಥಿತಿಗೆ ಬರುವಂತಾಗಿ ಒಂದು ದೇಶದಿಂದ ಇನ್ನೊಂದಕ್ಕೆ ಹಾನಿಯಾಗದ ತರದಲ್ಲಿ ಬೆಲೆ ಸ್ಪರ್ಧೆಯನ್ನು ಮಿತಗೊಳಿಸಬೇಕು.

ಸರ್ ಚುನಿಲಾಲರ ಭಾಷಣ

ಭಾರತ ಪ್ರತಿನಿಧಿಗಳ ನಾಯಕರಾದ ಸರ್ ಚುನಿಲಾಲರು ಹೀಗೆಂದಿರುವರು: ಪ್ರತಿಯೊಂದು ದೇಶಕ್ಕೆ ಸಮಾನವಾದ ವ್ಯಾಪಾರ ಹಕ್ಕುಗಳಿರಬೇಕು. ಜನಾಂಗಗಳೊಳಗೆ ಪರಸ್ಪರ ಸೌಹಾರ್ದತೆಗಳಿರಬೇಕು. ಆದರೆ ಭಾರತದ ಮಟ್ಟಿಗೆ ವಾಣಿಜ್ಯ ಒಪ್ಪಂದಗಳಾಗುವಾಗ ಹಿಂದುಳಿದಿರುವ ಅದರ ಕೈಗಾರಿಕೆಗಳಿಗೆ ಯೋಗ್ಯ ರಕ್ಷಣೆ ಕೊಡಬೇಕು. ಭಾರತವು ಕೈಗಾರಿಕೆಯಲ್ಲಿ ಪ್ರಗತಿ ಹೊಂದ ಬಯಸುತ್ತದೆ. ಎಲ್ಲಾ ಜನಾಂಗಗಳೂ ಅದಕ್ಕೆ ಸಹಾಯ ಮಾಡಬೇಕು.

ಮುಂದುವರಿಯುತ್ತಾ ಚುನಿಲಾಲ್ ಮೆಹತಾ ಅವರು ಹೀಗೆಂದರು: ಭಾರತ, ಚೀನಾ, ಮತ್ತಿತರ ಆಸ್ಯದ ದೇಶಗಳು ಕೈಗಾರಿಕೆಯ ಮಟ್ಟಿಗೆ ಹಿಂದುಳಿದಿವೆ. ಈ ದೇಶದ ಜನತೆಯ ಜೀವನ ಮಟ್ಟವನ್ನು ಏರಿಸಬೇಕು. ಶ್ರೀಮಂತ ಒಂದು ದೇಶವು ಬಡ ದೇಶವೊಂದರೊಡನೆ ಸ್ಪರ್ಧಿಸಿದರೆ ಅಭಿವೃದ್ಧಿಗೆ ಹಾನಿ ಸಂಭವಿಸುತ್ತದೆ.

ಮಿತ್ರ ರಾಷ್ಟ್ರಗಳಿಗೆ ಭಾರತವು ಪೂರೈಸಿದ ಯುದ್ಧೋಪಕರಣ ಮತ್ತಿತರ ವಸ್ತುಗಳಿಂದ ಭಾರತಕ್ಕೆ ಇಂದು ಬ್ರಿಟನ್ ೧೦೦೦ ಮಿಲಿಯ ಪವನು ಕೊಡುವುದಿದೆ. ಇಲ್ಲಿಯ ಜನರ ಜೀವನ ಮಟ್ಟವು ಕಮ್ಮಿಯಿದ್ದುದರಿಂದ ಬಹಳ ಕಷ್ಟ ಮಜೂರಿಯಲ್ಲಿ ಬ್ರಿಟನಿನ ಸಾಲ ಇಷ್ಟರಲ್ಲೇ ನಿಂತಿತು. ಮಜೂರಿ ಸ್ವಲ್ಪ ಹೆಚ್ಚಿಸುತಿದ್ದರೆ ೩೦೦೦ ಮಿಲಿಯ ಪವನಿ ಸಾಲವಾಗುತಿತ್ತು.

ಮುಂದಿನ ಧೋರಣೆ

ಬ್ರಿಟನ್ನು ಭಾರತಕ್ಕೆ ತೆರಬೇಕಾಗಿರುವ ಈ ಸಾಲವನ್ನು ಹೆಚ್ಚು ಬೆಲೆಯ ತನ್ನ ಕೈಗಾರಿಕೆ ವಸ್ತುಗಳನ್ನು ಇಲ್ಲಿ ಕಳುಹಿಸುವುದರ ಸಲ್ಲಿಸಲು ಯೋಚಿಸುತ್ತದೆಂದು ಮೂಲಕ ತಿಳಿದುಬರುತ್ತದೆ. ಭಾರತದಲ್ಲಿ ದೊಡ್ಡ ಕೈಗಾರಿಕೆಗಳು ಸ್ಥಾಪನೆ ಮಾಡಬೇಕೆಂಬ ಯೋಜನೆಯನ್ನು ಬ್ರಿಟನ್ನಿನ ಕೈಗಾರಿಕೆ ಸಂಸ್ಥೆಯವರು ಸಂದೇಹ ದೃಷ್ಟಿಯಿಂದ ನೋಡುತ್ತಾರೆ. ಕಾರಣ ಇಲ್ಲಿ ಶ್ರೇಷ್ಠತರಗತಿಯ ವಸ್ತುಗಳು ತಯಾರಾದರೆ ಬ್ರಿಟನ್ನಿನಿಂದ ಹೆಚ್ಚು ಬೆಲೆಯ ವಸ್ತುಗಳನ್ನು ಕೊಂಡು ಸಾಲತೀರಿಸಿಕೊಳ್ಳಲಿಕ್ಕಾಗುವುದಿಲ್ಲ.

ಸದ್ಯದಲ್ಲೇ ಭಾರತದಿಂದ ಕೈಗಾರಿಕೆ ಪ್ರತಿನಿಧಿಗಳ ಒಂದು ಸಮಿತಿಯು ಇಂಗ್ಲೆಂಡಿನ ಪ್ರವಾಸಕ್ಕೆ ತೆರಳಲಿರುವುದು. ನ್ಯೂಯೋರ್ಕಿನ ರ್ರ್ಯಾ ಪರಿಷತ್ತಿನಲ್ಲಿ ವಾಣಿಜ್ಯ ಸಂಬಂಧ ನಡೆದ ಸೂಚನೆಗಳನ್ನು ಈ ಕೈಗಾರಿಕೆ ಪ್ರತಿನಿಧಿಗಳು ಗಮನಕ್ಕೆ ತೆಗೆದುಕೊಳ್ಳುವರು. ಮತ್ತು ನಮ್ಮ ದೇಶದ ಉದ್ಯೋಗೀಕರಣಕ್ಕೆ ಬೇಕಾದ ಅನುಕೂಲತೆಗಳನ್ನು ಪರ್ಯಾಲೋಚಿಸುವರೆಂದು ತಿಳಿದುಬಂದಿದೆ.

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ

ಯುದ್ಧವು ತೀವ್ರ ಕೊನೆಗೊಂಡು ಧೋರಣೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು.

(1) ನಿಮ್ಮ ಕೂಡೆ ವಸ್ತುಗಳ ಅತ್ಯಧಿಕ ಸಂಚಯವಿದ್ದಲ್ಲಿ ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ. ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ.

(2) ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ. ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು.

(3) ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಪರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಾಧ್ಯವಾಗಬಹುದು.

(4) ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವಿಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ. ಇಲ್ಲವಾದರೆ ಪ್ರೇರಣೆಗಳಿಗೆ ಅಥವಾ ಸಮಾಜದ ಒತ್ತರಗಳಿಗೆ ಬಳಗಾಗುವ ಪ್ರಸಂಗ ಒದಗಬಹುದು

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ವಿಶ್ವಪರಿಷತ್ತಿಗೆ ಗಾಂಧೀ ನೆಹರು?

ಬಣ್ಣದ ಹೆಮ್ಮೆ ಅಳಿಯಬೇಕು

ಪ್ರತೀಕಾರಕ್ಕೆ ಶಾಸ್ತ್ರಿಗಳ ಸಮ್ಮತ

ಆಫ್ರಿಕದ ಭಾರತೀಯರ ಸಮಸ್ಯೆಗಳ ಕುರಿತು ಯೋಗ್ಯ ಸಲಹೆ ಕೊಡಲರ್ಹರೆಂದೆನಿಸಲ್ಪಟ್ಟವರಲ್ಲಿ ರ್ಯಾಟ್ ಆನರೆಬಲ್ ಶ್ರೀನಿವಾಸ ಶಾಸ್ತ್ರಿಗಳೂ ಒಬ್ಬರು. ಹಿಂದೆ ಭಾರತ ಸರಕಾರದ ಪರವಾಗಿ ಆಫ್ರಿಕದಲ್ಲಿ ಪ್ರಾತಿನಿಧ್ಯಾಧಿಕಾರದಿಂದ ಅವರು ಆ ಖಂಡದಲ್ಲಿ ಕೆಲಸ ಮಾಡಿದ್ದರು.

ಮೊನ್ನೆ ಎಸೆಂಬ್ಲಿಯಲ್ಲಿ ಭಾರತೀಯರಿಗೆ ಆಫ್ರಿಕದಲ್ಲಾದ ಅನ್ಯಾಯಗಳಿಗಾಗಿ ಆಫ್ರಿಕನ್ನರ ವಿರುದ್ಧ ಪ್ರತೀಕಾರ ಕಾನೂನು ಕೈಕೊಳ್ಳಲು ನಿರ್ಧರಿಸಿದ್ದರ ಕುರಿತು ಶಾಸ್ತ್ರಿಗಳು 'ಸರಕಾರದ ಈ ಅಪರೂಪ ಸ್ಫೂರ್ತಿಯನ್ನು' ಶ್ಲಾಘಿಸಿ ಒಂದು ಭಾಷಣ ಕೊಟ್ಟರು—ಮುದ್ರಾಸಿನಲ್ಲಿ.

"ಆಫ್ರಿಕದ ಬಿಳಿಯರು ವರ್ಣ ಜನಾಂಗದವರಿಗೆ ಪ್ರತ್ಯೇಕ ಸ್ಥಳ, ಪ್ರತ್ಯೇಕ ವಸತಿ, ಪ್ರತ್ಯೇಕ ರೈಲು, ಹೊಟೇಲುಗಳನ್ನು ಮಾಡಲು ಇಷ್ಟಪಡುತ್ತಾರೆ ಅವರಿಗೇ ಪ್ರತ್ಯೇಕ ನ್ಯಾಯ ನಿಯಮಗಳನ್ನು ಸೃಷ್ಟಿಸಿದರೂ ಅವರಿಗೆ ಸಮ್ಮತಿ" ಹೀಗೆಂದರು ಶಾಸ್ತ್ರಿಗಳು

ಮತ್ತೂ ಮುಂದರಿದು ಮಾನ್ಯ ಶಾಸ್ತ್ರಿಗಳು "ನಾವು ಸ್ವಾತಂತ್ರ್ಯಕ್ಕೆ, ಪ್ರಜಾಪ್ರಭುತ್ವಕ್ಕೆ, ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಯುದ್ಧ ಮಾಡುತ್ತಿದ್ದೇವೆ ಬ್ರಿಟಿಷ್ ಸಾರ್ವಭೌಮತ್ವವು ತನಗಾಗಿ ನಮ್ಮ ಜನರನ್ನು ತನ್ನ ಸೈನ್ಯದೊಳಗೆ ಸೇರಿಸುತ್ತಾರೆ ಆದರೆ ನಾವು ಎಷ್ಟು ಅವರಿಗೆ ಸಹಾಯ ಮಾಡಿದರೂ ಈ ಬಣ್ಣದ ಹೆಮ್ಮೆ ಹೋಗುತ್ತ ಹಾಗೆ ಕಾಣುವುದಿಲ್ಲ" ಎಂದರು

ಶಾಂತಿ ಪರಿಷತ್ತಿಗೆ ಭಾರತೀಯರು

ತಮ್ಮ ಭಾಷಣದಲ್ಲಿ ಶಾಸ್ತ್ರಿಗಳು ಸೂಚಿಸಿದ ಕೆಲವು ಸೂಚನೆಗಳು ಹೀಗಿವೆ

ನಾನು ಬಹಳ ಸಮಯದಿಂದ 'ಬೊಬ್ಬೆ' ಹೊಡೆಯುತ್ತಿದ್ದೇನೆ— ಗಾಂಧೀ ನೆಹರುಗಳನ್ನು ಶಾಂತಿ ಪರಿಷತ್ತಿಗೆ ಕಳುಹಿಸಿಕೊಡಬೇಕೆಂದು. ನಮ್ಮ ಕಡೆಯಿಂದ ಅವರಂಥವರು ಜನಾಂಗ ಸಭೆಗಳ ಮುಂದೆ ನಿಂತು ಹೆಣಗಾಡದಿದ್ದರೆ ಈ ವರ್ಣದ್ವೇಷವನ್ನು ಅಳಿದು ಬಿಡಲು ಸಾಧ್ಯವಿಲ್ಲ. ಗಾಂಧೀಜಿ ತಮ್ಮ ನೈತಿಕ ಶಕ್ತಿಯಿಂದಲ್ಲೂ ಜವಾಹರರು ತಮ್ಮ ಅಂತರಾಷ್ಟ್ರೀಯ ಖ್ಯಾತಿಯ ಪ್ರಭಾವದಿಂದಲೂ ಜಗತ್ತಿನ ಇತರ ಮುಖಂಡರೊಡನೆ ಈ ವರ್ಣದ್ವೇಷದ ನಾಶಕ್ಕಾಗಿ ಸಾಧಿಸಬಹುದು

ನಮ್ಮ ದುರಾದೃಷ್ಟವೆಂಬಂತೆ ಇಲ್ಲಿನ ಪರಿಸ್ಥಿತಿಯು ಚಿಂತಾಜನಕವೆಂಬಂತಿದೆ

ಭಾರತೀಯ-ನಿಗ್ರೋ ಐಕ್ಯ

ಆಫ್ರಿಕದ ಬಿಳಿಯರ ಈ ವರ್ತನೆಯು ಭಾರತೀಯ ವಿರೋಧವಾಗಿ ಮಾತ್ರವಲ್ಲ. ಅದು ಅಲ್ಲಿನ ನಮ್ಮ ನಿಗ್ರೋಗಳಿಗೂ ಅನ್ವಯಿಸುವಂತಹ ವರ್ತನೆ ದಕ್ಷಿಣ ಆಫ್ರಿಕದ ಪ್ರಧಾನ ಸ್ಮಟ್ಸರು ಹೇಳಿದಂತೆ ಕೇಳುವವರು ಚರ್ಚಿಲ್ಲರು ಚರ್ಚಿಲ್ಲರು ಸೂಚಿಸಿದಂತೆ ಮಾಡುವವರು ಸ್ಮಟ್ಸರು ಅವರವರಿಗೆ ಸರಿಯಾದ ಗಂಟುಬೀಳುತ್ತದೆ ಅದೇಪ್ರಕಾರ ವ್ಯಾಟ್‌ಹೋಲಿನ (ಬಿಳಿಭವನ) ಪಾರ್ಲಿಮೆಂಟಿಗೂ ದಿಲ್ಲಿಯ 'ಕಪ್ಪು ಕಛೇರಿಗೂ (ವ್ಯಾಸ್ ರಾಯ್ ಸರಕಾರ) ಬಹಳ ನೆಂಟಸ್ತಿಕೆ ಒಬ್ಬರು ಇನ್ನೊಬ್ಬರನ್ನು ಬಿಟ್ಟು ಇಲ್ಲ

ಇದಕ್ಕಾಗಿ ಭಾರತೀಯರೂ ಆಫ್ರಿಕದ ಬೆಂಟೂ ಭಾಷೆಯ ನಿಗ್ರೋಜನರೂ ಒಟ್ಟು ಸೇರಿ ತಮ್ಮ ಹಿತಸಾಧನೆಮಾಡಲು ಪ್ರಯತ್ನಮಾಡಬೇಕು

ಪ್ರಜಾಪ್ರಭುತ್ವವಾದಿಗಳಾದ ಕೆಲವು ಬ್ರಿಟಿಷರು ಆಫ್ರಿಕಕ್ಕೆಹೋಗಿ ಅಲ್ಲಿನ ಸ್ಮಟ್ಸರಿಗೆ ಸರಿಯಾದ ವರ್ತನೆಯನ್ನು ಕಲಿಸಿದರೆ ಒಳ್ಳೇದಿತ್ತು

ಸಿಹಿ ಸುದ್ದಿ ಸಂಗ್ರಹ

ಮದುವೆಯಾಗದ ತರುಣಿಗೆ ಹುಟ್ಟಿದ ಮಕ್ಕಳನ್ನು ಸಾಕುವ ಉದ್ಯಮದವರು ಇಂಗ್ಲೆಂಡಿನಲ್ಲಿ ತುಂಬಾ ಮಂದಿ ಇದ್ದಾರೆ. ಅವಿವಾಹಿತ ತಾಯಿಂದಿರಿಂದ ಇವರು ಮಗುವಿನ ಪೋಷಣೆಗೆ ೧೦೦ ಪವನು ಪಡಕೊಂಡು ೫೦ ಪವನಿಗೆ ಇನ್ನೊಬ್ಬರಿಗೆ ಕೊಟ್ಟು ಲಾಭಪಡೆಯುವವರೂ ಇದ್ದಾರೆ.

* * *

ಒಂದೇ ಹೆಸರನ್ನು ಇಟ್ಟುಕೊಂಡರೆ ಕೆಟ್ಟ ಗ್ರಹಗಳು ತಮಗೆ ತೊಂದರೆಕೊಡುತ್ತವೆಂಬ ಮೂಢ ನಂಬಿಕೆ ಅಮೇರಿಕದ ನಿಗ್ರೋ ಸೈನಿಕರಲ್ಲಿದೆಯಂತೆ. ಅದಕ್ಕಾಗಿ ಕೆಲವರು ತಮ್ಮ ಹೆಸರುಗಳನ್ನು ಪದೆಪದೇ ಬದಲಾಯಿಸಿ ಸೈನ್ಯಾಧಿಕಾರಿಗಳಿಗೆ ಗಡಿಬಿಡಿಯಲ್ಲಿ ಹಾಕುತ್ತಾರಂತೆ

* * *

ಇಂಗ್ಲಿಷ್ ಮಕ್ಕಳಿಗೆ ಜೀವಂತ ಕೋಳಿಮರಿಗಳೊಂದಿಗೆ ಆಟವಾಡುವುದೆಂದರೆ ಬಲು ಇಷ್ಟವಂತೆ ಮಿಡ್‌ಲೆಂಡ್ ಪ್ರದೇಶದ ಒಂದು ಊರಲ್ಲಿ ವಾರಕ್ಕೆ ೧೦ ಸಾವಿರ ಕೋಳಿಮರಿಗಳು ಆಟದ ವಸ್ತುಗಳಂತೆ ಮಾರಾಟವಾಗುತ್ತವೆ

* * *

ನಮ್ಮ ದೇಶದ ಪೋಸ್ಟ್ ಆಫೀಸುಗಳಲ್ಲಿ ಹಕ್ಕುದಾರರಿಲ್ಲದ ೪। ಕೋಟಿ ರೂಪಾಯಿಗಳು ಇವೆಯಂತೆ ಅದನ್ನು ಸೇವಿಂಗ್ಸ್ ಬೇಂಕಿನಲ್ಲೂ, ಸರಕಾರ ಖಜಾನೆಗಳಲ್ಲೂ ಠೇವಣಾತಿ ಇಡಲಾಗಿದೆ ಬಾಧ್ಯಸ್ಥರು ಕೇಳಿದಕೂಡಲೇ ಅದನ್ನು ಕೊಡಲಾಗುವುದು

* * *

ಸೊಲ್ಲಾಪುರದಿಂದ ಶೈವಯಾತ್ರಾಸ್ಥಳವಾದ ಚಿತ್ರಕಲಾದುರ್ಗಕ್ಕಿರುವ ೪೫೦ ಮೈಲುದೂರದ ಪ್ರಯಾಣವನ್ನು ಒರ್ವ ವೀರಶೈವ ಭಕ್ತರು ದಂಡನಮಸ್ಕಾರ ಮೂಲಕ ಮಾಡಲು ನಿರ್ಧರಿಸಿ ಆಗಲೇ ಹೊರಟಿರುವರ.

* * *

ದ ಆಫ್ರಿಕದಲ್ಲಿರುವಾಗ ಮಹಾತ್ಮಾ ಗಾಂಧಿಯವರು ಇಂಡಿಯನ್ ಒಪಿನಿಯನ್ ಎಂಬ ಪತ್ರಿಕೆ ನಡೆಸುತ್ತಿದ್ದರು. ಅದಕ್ಕೆ ಸ್ವಂತ ಛಾಪಖಾನೆ ಇತ್ತು. ಅಲ್ಲಿ ಈಗಿನ ಬಾಪೂಗಳು ಅಚ್ಚುಮೊಳೆ ಜೋಡಿಸುವ, ಛಾಪೆಮಾಡುವ ಮತ್ತು ಯಂತ್ರ ತಿರುಗಿಸುವ ಕೆಲಸ ಕಲಿತಿದ್ದರು.

* * *

ಮೋಹನ್ ಚಂದ್ರಗುಹಾ ಎಂಬ ಚಿಟಗಾಂಗಿನ ವಕೀಲರು ಕೋರ್ಟಿನಲ್ಲಿ ತನ್ನ ಮಗನಿಗೆ ಬೈದರೆಂದು ಮಗನು (ಅವನೂ ವಕೀಲ) ತಂದೆಮೇಲೆ ದಾವೆಮಾಡಿದ. ಜಡ್ಜರು ಬೈದ ತಂದೆಗೆ ೫೦ ರೂ. ಜುಲ್ಮಾನೆ ಮಾಡಿ ಅವನ ವರ್ತನೆಯನ್ನು ಕಟುವಾಗಿ ಟೀಕಿಸಿದರು.

* * *

ಒಂದು ಶತಮಾನದ ಹಿಂದೆ ಇಂಗ್ಲೆಂಡಿನಲ್ಲಿ ಹೆಂಡತಿಯರನ್ನು ಮಾರುವ ಪದ್ಧತಿಯೊಂದು ಬಹಳವಾಗಿ ಹರಡಿತ್ತು. ಪೊಂಟಿಪ್ರೆಕ್ಟ್ ಎಂಬಲ್ಲಿ ಒಬ್ಬನು ತನ್ನ ಹೆಂಡತಿಯನ್ನು ಸುಮಾರು ೫॥ ರೂಪಾಯಿಗೆ ಹರಾಜುಹಾಕಿದ ದಾಖಲೆ ಇದೆ. ಬಿಲ್ಸ್‌ಫರ್ಡ್ ಎಂಬಲ್ಲಿ ಒಬ್ಬನು ತನ್ನ ಪತ್ನಿಯನ್ನು ಬರೀ ೨। ಶಿಲಿಂಗಿಗೆ (೨ ರೂ) ಮಾರಿದ ಮಾರಿದಲ್ಲಿ ಹೆಚ್ಚುಬೆಲೆ ಬಂದದ್ದು ೨೨೫ ರೂ.

* * *

ಪರ್ಶಿಯಾದ ಒಬ್ಬ ಅರಸನಕಾಲದಲ್ಲಿ ಕ್ಷಾಮ ಬಂದಿತ್ತು ಜನರು ಆಹಾರ ವಸ್ತುಗಳನ್ನು ದಾಸ್ತಾನುಮಾಡಿ ಇಟ್ಟರೆ, ಇಲ್ಲವೆ ಕಳ್ಳಸಂತೆ ಮಾಡಿದರೆ ಕುದಿಯುವ ಎಣ್ಣೆಯಲ್ಲಿ ಮುಳುಗಿಸಲ್ಪಡುವರೆಂದು ರಾಜಾಜ್ಞೆ ಹೊರಡಿಸಲಾಯಿತು. ಅಂದಿನಿಂದ ಅಲ್ಲಿನ 'ರೇಶನಿಂಗ್ ವ್ಯವಸ್ಥೆಗೆ ಯಾವ ತೊಂದರೆಯಾಗಲಿಲ್ಲವಂತೆ

* * *

ನ್ಯೂಯೋರ್ಕ್ ಬಳಿ ಲೂಸಿಯನ್ ಕಾರ್ ಎಂಬ ಕವಿತಾಪ್ರಿಯ ವಿದ್ಯಾರ್ಥಿ ಇದ್ದ ತೋಟದಲ್ಲಿ ಕವಿತೆ ಓದುವಿಕೆಯಲ್ಲಿ ಮಗ್ನನಾಗಿದ್ದಾಗ ಅವನ ಒಬ್ಬ ಪ್ರೊಪೆಸರು ತೊಂದರೆಕೊಟ್ಟನೆಂದು ಕಾರನು ಅವನನ್ನು ಕೊಂದು ಹಡ್ಸನ್ ನದಿಯಲ್ಲಿ ಹಾಕಿದನು ಮರುದಿನ ಕೋರ್ಟಿಗೆ ಹೋಗಿ ಕೊಲೆಗಾರ ತಾನೆಂದು ಹಾಜರಾಗಿ ಕೊಲೆ ವಿಚಾರಣೆ ಪ್ರಾರಂಭವಾಗುವತನಕ ಕವಿತೆ ಓದುತ್ತಾ ಕೂತನಂತೆ

* * *

ಲಂಡನಿನಲ್ಲಿ ರೆಕ್ಕೆ ಬಾಂಬು ಸ್ಫೋಟದಿಂದ ರೋಸಿಕ್ರೆಂಪ್ಸನ್ ಎಂಬ ೧೩ವರ್ಷ ಸ್ಕೌಟ್ ಬಾಲಕನ ಕಣ್ಣುಗಳು ಕುರುಡಾದವು ಅವನಿಗೆ ಶ್ರೇಷ್ಠ ಸ್ಕೌಟ್ ಬಹುಮಾನ ದೊರಕಿದೆ. ಮಾತ್ರವಲ್ಲ ಪೆನಿಸಿಲಿನ್ ಎಂಬ ಹೊಸ ಔಷಧಿಯಿಂದ ಒಂದು ಕಣ್ಣು ಸರಿಮಾಡಲಾಗಿದೆ

* * *

ಭಾರತದಲ್ಲಿನ ಇಂಗ್ಲ ಭಾಷಾ ಪತ್ರಿಕೆಗಳಲ್ಲಿ ಮದ್ರಾಸಿನ ಹಿಂದೂ ಪತ್ರಿಕೆಯು ಪ್ರಥಮ ಶ್ರೇಣಿಯಲ್ಲಿದೆ ಅದರ ಸಂಪಾದಕ ಶ್ರೀನಿವಾಸನರು ಮೊನ್ನೆ ವ್ಯಾಸ್ ರಾಯರಿಗೆ ಬೇಟಿಯಾದಾಗ ಮಾನ್ಯ ವೇವೆಲ್ಲರು 'ನಿಮ್ಮ ಪತ್ರಿಕೆ ಯಾವಭಾಷೆಯಲ್ಲಿ ಪ್ರಕಟವಾಗುತ್ತದೆ' ಎಂದು ಕೇಳಿದರೆಂದು ಸುದ್ದಿ

* * *

ತಿರುವಾಂಕೂರಿನ ಹೈಕೋರ್ಟ್ ನ್ಯಾಯಾಧೀಶರು ಸಾರ್ವಜನಿಕ ಸೇವೆಯ ಆದರ್ಶ ಕಲ್ಪಿಸಿದರು ಕೆಲವು ದಿನಗಳ ಹಿಂದೆ ತ್ರಿವೇಂಡರಮ್ ರಾಜಧಾನಿಯಲ್ಲಿ ಅವರು ಸ್ವತಃ ಕಸಬರಿಕೆಹಿಡಿದು ನಗರದ ಕಲ್ಮಶಪ್ರದೇಶಗಳನ್ನು ಗುಡಿಸಿ "ಕಲ್ಮಶ ನಿವಾರಣ" ಚಳವಳ ಪ್ರಾರಂಭಿಸಿದರು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.
ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

THE BANK OF MANGALORE, Ltd.,
MANGALORE

Interest on Fixed Deposits

It is notified for the information of Depositors, that interest on all Fixed Deposits received from this date will be paid every half year instead of quarterly as hitherto, those received prior to this date will also be paid accordingly with effect from 1-1-1945

Office of the Bank, Mangalore, 30th Oct. 1944. By Order H. S. KAMATH, *Manager*.

(Regd)

ಅಮೃತಾಂಜನ

ತಲೆನೋವು, ಶರೀರದ ನೋವು, ಉಳುಕು, ತುರಿಗೆ, ಹಲ್ಲುನೋವು, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ... ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

FOREMOST

In insurance service since 1910, we are proud of our achievements for over 30 year. With a net-work of Branches all over South India and a field organisation assisted by men and women of ability and ambition it shall be our endeavour to extend widely the advantages of Life Assurance to every one who seek it.

Agency opportunities available on liberal terms

KOCHIKAR BROTHERS LTD.

CENTRAL OFFICE—UDIPI, S. K.

Agents for South India including Indian States

The Bombay Life Assurance Co., Ltd.,

P. B. 337- 30, MOUNT ROAD, MADRAS.

Other Offices at:

BOMBAY BANGALORE CALICUT MADURA MANGALORE TRIVANDRUM

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 40] ತಾರೀಕು 1—12—1944 . [ಸಂಚಿಕೆ 48]

ಮಾನವ ಪ್ರೇಮಿ ಗಾಂಧೀ

[ಲೇಖಕ – ಎಫ್ ಆರ್. ಮೋರಿಸ್]

(ಕಳೆದ ಸಂಚಿಕೆಯಿಂದ)

ಜನಸಾಮಾನ್ಯರ ಪ್ರೇಮಿಯೆ ಗಾಂಧೀಜಿಯು ಪ್ರೀತಿ ಅವರ ರಾಜಕೀಯ ಉಪದೇಶಗಳಲ್ಲಿ ಇನ್ನಷ್ಟು ಉಜ್ವಲವಾಗಿ ಬೆಳಗುತ್ತದೆ. ಅವರ ಅಹಿಂಸಾತತ್ವದಲ್ಲಿ ಕ್ರಿಸ್ತ ಧರ್ಮದ ಎರಡು ಪ್ರಮುಖ ತತ್ವಗಳು ಅಡಕವಾಗಿವೆ. ಕೆಡುಕಿಗೆ ಪ್ರತಿಯಾಗಿ ಒಳಿತು ಮಾಡೆಂಬ ಬೋಧೆಯೊಂದು, ಭೂಮಿ ಸಾತ್ವಿಕರ ಸೊತ್ತೆಂಬ ಆಶ್ವಾಸನ ಇನ್ನೊಂದು. ಬಲಾತ್ಕಾರದ ಬದಲು ನೈತಿಕ ಶಕ್ತಿಯನ್ನು ಉಪಯೋಗಿಸುವ ವಿಷಯ ಹೊಸ ಆವಿಷ್ಕಾರವೇನು ಅಲ್ಲ. ಆದರೆ ರಾಜಕೀಯ ಮತ್ತು ಸಾಮಾಜಿಕ ಪುನರುಜ್ಜೀವನಕ್ಕೆ ಅದನ್ನು ಬಳಸಿದ ಕೀರ್ತಿ ಗಾಂಧೀಜಿಗೇ ಮೀಸಲು. ಗಾಂಧೀಜಿ ಟಾಲ್‌ಸ್ಟಾಯಿಯ ಶಿಷ್ಯರು ತಾವು ಎಂದುಕೊಳ್ಳುತ್ತಾರೆ. ದಕ್ಷಿಣ ಆಫ್ರಿಕೆಯಲ್ಲಿ ತಾವು ನಡೆಸಿದ ಪ್ರಥಮ ಸತ್ಯಾಗ್ರಹ ಪ್ರಯೋಗಗಳನ್ನು ಟಾಲ್‌ಸ್ಟಾಯಿಗೆ ಬರೆದು ಕಳಿಸಿಯೂ ಇದ್ದರು. ಟಾಲ್‌ಸ್ಟಾಯಿ ಅವರಿಗೆ ಬರೆದ ಉತ್ತರ ಭವಿಷ್ಯತ್ತನ್ನು ಸರಿಯಾಗಿಯೆ ಮನಗಂಡಿತ್ತು. "ಆದುದರಿಂದ ಟ್ರಾನ್ಸ್‌ವಾಲದಲ್ಲಿ ನೀವು ನಡೆಸಿರುವ ಚಟುವಟಿಕೆ, ಜಗತ್ತಿನ ಈ ತುದಿಯಲ್ಲಿರುವ ನಮಗೆ ಅರಿತಷ್ಟು ಮಟ್ಟಿಗೆ, ಜಗತ್ತಿನಲ್ಲಿ ಈಗ ನಡೆದಿರುವ ಕಾರ್ಯಗಳೆಲ್ಲೆಲ್ಲ ಅತ್ಯಂತ ಅವಶ್ಯಕವೂ ಪ್ರಾಮುಖ್ಯವೂ ಆಗಿದೆಯೆಂಬಲ್ಲಿ ಸಂಶಯವಿಲ್ಲ. ಇದರಲ್ಲಿ ಕ್ರೈಸ್ತ ರಾಷ್ಟ್ರಗಳಷ್ಟೇ ಅಲ್ಲ, ಸಮಸ್ತ ಜಗತ್ತೇ ಅಪರಿಹಾರ್ಯವಾಗಿ ಭಾಗವಹಿಸಲೇ ಬೇಕಾಗುವುದು.' ರಾಜಕೀಯ ಹೋರಾಟದ ತಂತ್ರದಲ್ಲಿ ಗಾಂಧೀಜಿಯ ಹೆಸರು ಅಮರವಾಗಿ ಉಳಿಯುವುದು ನಿಸ್ಸಂಶಯ. ಎಡ್ವರ್ಡ ಥಾಮ್ಸನ್ನರು ಹೇಳುವಂತೆ, "ತಮ್ಮ ಯುಗದ ಮೇಲೆ ತಮ್ಮ ವಿಚಾರದ ಮುದ್ರೆಯನ್ನು ಒತ್ತಿ ಹೋದ ಕೆಲವೇ ಜನರಲ್ಲಿ ಗಾಂಧೀಜಿಯೂ ಒಬ್ಬರಾಗುವರು. ಆ ವಿಚಾರವೆ ಅಹಿಂಸೆ."

ಅಹಿಂಸೆಯ ವ್ಯಾವಹಾರಿಕ ಅವತಾರವೇ ಸತ್ಯಾಗ್ರಹ. ಹಿಂದುಸ್ತಾನದ ಪರಿಸ್ಥಿತಿ ಮತ್ತು—ಈ ಮಾತು ವಾದಗ್ರಸ್ತವೇ ಆಗಿದೆ—ಹಿಂದೀ ಜನರ ಸ್ವಭಾವಕ್ಕೆ ಗಾಂಧೀಜಿ ಹುಡುಕಿ ತೆಗೆದ ಈ ಸತ್ಯಾಗ್ರಹಾಯುಧ ಬಹಳ ಅನುರೂಪವಾದುದು. "ಅಹಿಂಸಾ ಪರಮೋ ಧರ್ಮಃ" ಎಂದು ಮಹಾಭಾರತ ಅಪ್ಪಣೆ ಕೊಡಿಸುತ್ತದೆ.

ಸತ್ಯಾಗ್ರಹಾಯುಧವನ್ನು ವಿರೋಧಿಯ ಮೇಲೆ ಪ್ರಯೋಗಿಸುವ ಮುನ್ನ ಶಾಂತಿವಾದಿ ಮಾಡಬೇಕಾದ ಒಂದು ಕರ್ತವ್ಯವುಂಟು. ಅವನು ವಿರೋಧಿಯ ಮನವೊಲಿಸಿ ದಾರಿಗೆ ಹಚ್ಚಲು ಪ್ರಯತ್ನಿಸಬೇಕಾಗುವುದು. ಜರ್ಮನಿಯ ಮತ್ತು ಜಪಾನಿನ ಹಿಂಸಾತ್ಮಕ ಮಹತ್ವಾಕಾಂಕ್ಷೆಗಳಿಗೆ ಗಾಂಧೀಜಿ ಬಹಿರಂಗವಾಗಿ ವಿರೋಧ ತೋರಿಸಿದ್ದಾರೆ. ಆ ಎರಡು ರಾಷ್ಟ್ರಗಳಿಗೂ ಅವರು ಶಾಂತಿಯ ವಿನಂತಿಗಳನ್ನೂ ಮಾಡಿಕೊಂಡರು. ಯುದ್ಧ ಆರಂಭವಾದೊಡನೆ ಅವರು ಹಿಟ್ಲರನಿಗೆ ತಾವು ಉದ್ದೇಶಿಸಿದ ಪತ್ರವನ್ನು "ಹರಿಜನ" ಪತ್ರಿಕೆಯಲ್ಲಿ ಈ ಒದನುಡಿಯೊಡನೆ ಪುನರ್ಮುದ್ರಿಸಿದರು—"ಕಾರಣ, ನಾನೀಗ ಹಿಂದುಸ್ತಾನದ ವಿಮೋಚನೆಯನ್ನು ಅನುಲಕ್ಷಿಸುತ್ತಿಲ್ಲ. ಅದು ಬಂದೇ ಬರುವುದು. ಆದರೆ ಇಂಗ್ಲಂಡ್ ಮತ್ತು ಫ್ರಾನ್ಸ ಸೋತರೆ, ಅಥವಾ ಜರ್ಮನಿಯನ್ನು ಸೋಲಿಸಿ ಹಾಳುಗೆಡವಿ ಹಣ್ಣು ಮಾಡಿದರೆ ಆಗ ನಮ್ಮ ವಿಮೋಚನೆಗೆ ಏನು ಬೆಲೆ?" ಹಿಂದಿನ ಯುದ್ಧದ ಸಮಯವೂ ಗಾಂಧೀಜಿ ಇದೇ ಮನೋಭಾವವನ್ನು ಪ್ರದರ್ಶಿಸಿದ್ದರು. "ಹಿಂದುಸ್ತಾನದ ಹಿತಕ್ಕಾಗಿ ನಾನು ಇಂಗ್ಲಂಡನ್ನಾಗಲಿ-ಜರ್ಮನಿಯನ್ನಾಗಲಿ ನೋಯಿಸಲಾರೆ" ಎಂದ ಆಗ ಅವರು ಆಡಿದ ಮಾತು ಸುಪ್ರಸಿದ್ಧವಿದೆ. ಮಾನವ್ಯಕ್ಕೆ ಶಾಂತಿವಾದಿ ರಾಷ್ಟ್ರೀಯ ಮೇರೆಗಳನ್ನು ಹಾಕುವುದಿಲ್ಲ. "ಜಪಾನಿನೊಡನೆ ಶಾಂತಿಗಾಗಿ ಮಾತುಕತೆ ಬೆಳೆಸುವ ಇಚ್ಛೆಯನ್ನು ಅವರು ವ್ಯಕ್ತಗೊಳಿಸಿದ"ರೆಂದು ಸರಕಾರ ಗಾಂಧೀಜಿಯ ಮೇಲೆ ಆರೋಪ ಹೊರಿಸಿದೆ. ಆದರೆ ಇದರಲ್ಲಿ ಅವರು ತಮ್ಮ ತತ್ವಕ್ಕೆ ವ್ಯತಿರಿಕ್ತವಾದುದೇನನ್ನೂ ಮಾಡಿದಂತಾಗಲಿಲ್ಲ. ಈ ಕಾಲದ ಶಾಂತಿವಾದಿಗಳ ಪಟ್ಟಿಯಲ್ಲಿ ಐನ್‌ಸ್ಟೀನ್, ಬರ್ಟ್ರಂಡ್ ರಸೆಲ್ ಮುಂತಾದ ಮಹಾ ಹೆಸರುಗಳು ಬರುತ್ತವೆ. ಆದರೆ ಕೊನೆಯವರೆಗೂ ತಮ್ಮ ಶಾಂತಿವಾದಿ ತತ್ವಕ್ಕೆ ಗಟ್ಟಿಯಾಗಿ ಅಂಟಿಕೊಂಡವರು ಗಾಂಧೀಜಿಯೊಬ್ಬರೆ. ಜೀವದ ಹಂಗುದೊರೆದು ಸಶಸ್ತ್ರ ಹೋರಾಟದಲ್ಲಿ ಮಗ್ನವಾಗಿರುವ ಇಂದಿನ ಜಗತ್ತು ಈ ಶಾಂತಿಪ್ರವಾದಿಯ ಸೂಳ್ನುಡಿಗಳಿಗೆ ವಿಮುಖವಾಗಿದೆ. ವಿಶಾಲ ಪ್ರಮಾಣದಲ್ಲಿ ಅಹಿಂಸೆ ಫಲಕಾರಿಯಾಗುವುದೆಂಬ ಮಾತು ಇನ್ನೂ ಸಿದ್ಧಾಂತವಾಗಿಲ್ಲ. ಆದರೆ ಅಧಿಕಾರದಿಂದ ಹೇಗೋ ಹಾಗೆಯೆ ಹಿಂಸೆಯಿಂದ ಮಾನವನ ಅಂತರಂಗ ಹೊಲೆಗೆಡುತ್ತದೆ, ಪಶುಸದೃಶವಾಗುತ್ತದೆ, ಇದನ್ನು ಅಲ್ಲಗಳೆಯುವಂತಿಲ್ಲ. ಎಂದಾದರೊಂದು ದಿನ, ಯುದ್ಧದಿಂದ ಬೇಸತ್ತ ಜಗತ್ತು ಅಹಿಂಸೆಯ ಪ್ರಶಾಂತ, ಗಂಭೀರ, ವಿವೇಕಪೂರ್ಣ ಧ್ವನಿಗೆ ಕಿವಿಗೊಟ್ಟೇ ತೀರುವುದು.

ಅಹಿಂಸೆ ಆದವಾ ಹಿಂಸಾಪರಿತ್ಯಾಗವಿದು ನಕಾರಾತ್ಮಕ ಉಪಾಯವೆಂದು ತೋರೀತು. ಆದರೆ ಗಾಂಧೀಜಿಗೆ ಅದರಲ್ಲಿ ಯುದ್ಧದಷ್ಟು ಅರ್ದ ಕಾಣುತ್ತದೆ. ಇನ್ನೊಬ್ಬನ ರಕ್ತ ಸುರಿಸಲಾರೆನೆಂಬ ದೃಢ ನಿರ್ಧಾರವಿಷ್ಟೇ ಅಲ್ಲ, ವಿರೋಧಿಯನ್ನು ವಿವೇಕಕ್ಕೆ ತರಲು ತಾನು ಸಂಕಟ ಅನುಭವಿಸುವ ಇಚ್ಛೆಯೂ ಅಹಿಂಸೆಯಲ್ಲಿ ಅಡಕವಾಗಿದೆ. ಸತ್ಯಾಗ್ರಹದ ಬಲ ದುರ್ಬಲರ ಆಯುಧವಲ್ಲ, ಸಬಲರದು. ಕಷ್ಟಾನುಭೋಗದಿಂದ ಎದುರಾಳಿಯ ಮನ ಕರಗಿಸಬಹುದೆಂಬ ಮಾನವೀ ವಿಶ್ವಾಸವೇ ಸತ್ಯಾಗ್ರಹದ ಆಧಾರ. "ಸಭೆಗಳು, ಪ್ರದರ್ಶನಗಳು ನಮಗೆ ವಿಜಯವನ್ನು ದೊರಕಿಸಲಾರವು. ಸದ್ದಿಲ್ಲದ ಕಷ್ಟಸಹನೆಯೊಂದೇ ವಿಜಯದ ಹಾದಿ," ಎಂದೂ "ಸತ್ಯಾಗ್ರಹವೆಂದರೆ ಸತ್ಯಕ್ಕಾಗಿ ತಪಸ್ಯೆ," ಎಂದೂ ಗಾಂಧೀಜಿ ಹೇಳಿದ್ದಾರೆ.

ಸತ್ಯಾಗ್ರಹವೂ ನಿಷ್ಕ್ರಿಯ ಪ್ರತಿಭಟನೆಯೂ ಒಂದೇ ಎಂದು ಹಲವರ ತಪ್ಪಾಗಿ ಭಾವಿಸಿರುವರು. ಆದರೆ ಈ ಎರಡರ ನಡುವೆ ಸ್ಫುಟವಾದ ಅಂತರವಿದೆ. ತನ್ನ ವಿರೋಧಿಯನ್ನು ಪ್ರೀತಿಸಬೇಕಾದ್ದು ಸತ್ಯಾಗ್ರಹಿಯ ಕರ್ತವ್ಯ. ಆದರೆ ನಿಷ್ಕ್ರಿಯ ಪ್ರತಿಭಟನೆಯಲ್ಲಿ ಇದು ಕರ್ತವ್ಯವೆಂಬ ನಿಯಮವಿಲ್ಲ. ಆದರಿಂದಲೇ ಗಾಂಧೀಜಿ "ನಿಷ್ಕ್ರಿಯ ಪ್ರತಿಭಟನೆಯಲ್ಲಿ ದ್ವೇಷದ ಅಂಗವಿರಬಹುದು. ಇದು ಎಂದಾದರೊಮ್ಮೆ ಹಿಂಸೆಯಲ್ಲಿ ಪರ್ಯವಸಾನಗೊಳ್ಳಬಲ್ಲದು,' ಎನ್ನುವರು. ಎಲ್ಲ ನೋವನ್ನು ತಾನೇ ಸಹಿಸಿಕೊಂಡು ಆ ಮೂಲಕ ಶತ್ರುವನ್ನು ನಿರುಪಾಯ್ನನನ್ನಾಗಿ ಮಾಡುವುದು ಸತ್ಯಾಗ್ರಹಿಯ ಹಾದಿ. ಒಂದು ಮಾತಿನಲ್ಲಿ, ನಿಷ್ಕ್ರಿಯ ಪ್ರತಿಭಟನೆ ದುರ್ಬಲರ ಆಯುಧವಾದರೆ ಸತ್ಯಾಗ್ರಹ ಬಲಿಷ್ಠರ ಅಸ್ತ್ರ.

ಪ್ರತಿಹಿಂಸೆಯ ವಿಚಾರವೇ ಇಲ್ಲದೆ ಎಲ್ಲ ಹಿಂಸೆಯನ್ನು ನುಂಗಿಕೊಳ್ಳುವ ಮೂಲಕ ಅನ್ಯಾಯಗಾರನನ್ನು ಲಜ್ಜಿತನನ್ನಾಗಿ ಮಾಡಿ ನ್ಯಾಯದತ್ತ ಹೊರಳಿಸುವುದೇ ಸತ್ಯಾಗ್ರಹಿಯ ಉದ್ದೇಶ. ವಿರೋಧಿಯನ್ನು ಅವನು ದೈಹಿಕವಾಗಿ ಬಲಾತ್ಕಾರ ಮಾಡುವುದಿಲ್ಲ, ಬದಲಿಗೆ ಅವನ ನೆಲೆಕಟ್ಟನ್ನೇ ಸಡಿಲಿಸಿ ಬಿಡುತ್ತಾನೆ. ಉಪವಾಸದ ಪ್ರಯೋಗವಾದರೂ ಇದೇ ದೃಷ್ಟಿಯಿಂದ ನಡೆಯುವುದು. ಉಪವಾಸಾಸ್ತ್ರವೂ ಗಾಂಧೀಜಿಯ ನವೀನ ಶೋಧವಲ್ಲ, ವೈಯಕ್ತಿಕ ಉದ್ದೇಶಕ್ಕಾಗಿ ಹಿಂದಿನಿಂದ ಪ್ರಚಾರದಲ್ಲಿದ್ದ ಆ ಆಯುಧವನ್ನು ರಾಜಕೀಯ ಪ್ರಯೋಜನಗಳಿಗಾಗಿ ಪ್ರಯೋಗಿಸುವವರಲ್ಲಿ ಮಾತ್ರ ಇವರೇ ಮೊದಲಿಗರು. ಬಿಳಿ ಜನರು ಇಲ್ಲಿ ಬಂದ ಮೊದಲ ದಿನಗಳಲ್ಲಿ ಸಾಲಗಾರನ ಬಾಗಿಲಲ್ಲಿ ಸಾಲಕೊಟ್ಟವನು 'ಧರಣ' ಕೂಡುತ್ತಿದ್ದ ದೃಶ್ಯಗಳು ಹೇರಳವಾಗಿ ಕಾಣಸಿಗುತ್ತಿದ್ದವು. ೧೯೪೩ರ ಫೆಬ್ರವರಿಯಲ್ಲಿ ಗಾಂಧೀಜಿ "ಯಥಾಶಕ್ತಿ ಉಪವಾಸ"ವನ್ನು ಕೈಕೊಂಡಾಗ ಪಾಶ್ಚಿಮಾತ್ಯರಿಗೆ ಬಹಳ ಸಂತಾಪವಾಗಿರಬಹುದು, ಗಲಿಬಿಲಿಯೂ ಆಗಿರಬಹುದು, ಆದರೆ ಹಿಂದುಸ್ತಾನದ ಜನರಿಗೆ ಮಾತ್ರ ಅದು ಸರಳವಾಗಿ ಅರ್ಥವಾಗಿತ್ತು. ವಾಸ್ತವವಾಗಿ, ಆಗ ಮಹಾತ್ಮರು ಬ್ರಿಟಿಷ ಸರಕಾರದ ಹೊಸ್ತಿಲ ಮುಂದೆ "ಧರಣ ಕೂತಿದ್ದರು." ತಮ್ಮ ವಿರೋಧಿಯಲ್ಲಿ ಪಶ್ಚಾತ್ತಾಪ ಉಂಟು ಮಾಡಬೇಕೆಂದು ಅವರು ಹವಣಿಸುತ್ತಿದ್ದರು. ಆ ಉಪವಾಸದಿಂದ ಯಾವ ವ್ಯವಹಾರಿಕ ಪ್ರಯೋಜನವೂ ಆಗಲಿಲ್ಲ, ನಿಜ. ಆದರೆ ಹಿಂದೀಯರ ದೃಷ್ಟಿಯಲ್ಲಿ ಅದೊಂದು ದೊಡ್ಡ ನೈತಿಕ ವಿಜಯವೇ ಸರಿ.

ಸ್ವದೇಶಿಯಲ್ಲಿ ಹೇಗೋ ಹಾಗೆಯೆ ಸತ್ಯಾಗ್ರಹದ ತಂತ್ರದಲ್ಲಿಯೂ 'ಆಂತರಿಕ ಸುಧಾರಣೆ'ಯೇ ಮೂಲತತ್ವ. ಅಹಿಂಸೆ ದುರ್ಬಲರ ಆಯುಧವಲ್ಲ, ಬಲಿಷ್ಠರದು, ಎಂದ ಮೇಲೆ ಅದನ್ನು ಉಪಯೋಗಿಸುವವನು ಅಸಾಮಾನ್ಯ ನಿಷ್ಠೆಯಿಂದ ಸಾಧನೆ ಮಾಡಬೇಕಾಗುವುದು. ಆಂತರಿಕ ದೌರ್ಬಲ್ಯದಿಂದಲ್ಲ, ಆಂತರಿಕ ಶಕ್ತಿಸಂಚಾರದಿಂದ ಅಹಿಂಸೆಯ ಪ್ರಯೋಗಕ್ಕೆ ಸತ್ಯಾಗ್ರಹಿ ಇಳಿಯುತ್ತಾನೆ. ಸ್ವತಃಕ್ಕೆ ಹೊರತು ಮತ್ತಾರಿಗೂ ದೈಹಿಕ ಪೀಡೆಯನ್ನು ಉಂಟುಮಾಡುವುದಿಲ್ಲವೆಂಬುದು ಸತ್ಯಾಗ್ರಹದ ಗುಣವಿಶೇಷ.

ತಾತ್ವಿಕ ಪ್ರಯೋಗಗಳಿಂದ ಗಾಂಧೀಜಿಯ ರಾಜಕಾರಣ ಕಿಕ್ಕಿರಿದು ಹೋಗಿದೆ. ಆದರೆ ಅವರ ಸಾಮಾಜಿಕ ಸೇವೆಯ ಮಾತು ಹಾಗಲ್ಲ. ಅದರಲ್ಲಿ ಅವರು ಯಾವಾಗಲೂ ವ್ಯಾವಹಾರಿಕ ಮಾರ್ಗ

(೯ನೇ ಪುಟಕ್ಕೆ ಮುಂದುವರಿದಿದೆ)

ಡಾರ್ಜಿಲಿಂಗ್ ಬೆಟ್ಟ!

— ದ್ವಿಜ್ವಕರ —

'ಒಂದು ಬಗೆಯಲ್ಲಿ ನೋಡಿದರೆ ನಗೆಯಲ್ಲ ಹುಚ್ಚಾಟ. ತಾನೆ ಹುಚ್ಚಾಗುವುದು ಅಥವಾ ಇನ್ನೊಬ್ಬರನ್ನು ಹುಚ್ಚು ಮಾಡುವುದು ಇದೇ ನಗೆಯ ನಡತೆ. ಒಬ್ಬರ ಹುಚ್ಚುಗೇಡು ನೋಡಿ ಇನ್ನೊಬ್ಬರು ಜಾಣರಾಗುವರು. ನಗೆಯು ಆ ತಿಳುವಳಿಕೆಯು ತರಂಗ ತರಂಗ....'

ದ. ರಾ. ಬೇಂದ್ರೆಯವರು.

'ನಮಸ್ಕಾರ!
ನನ್ನ ... ಮಗ್ಗುಲಲ್ಲಿ ಬೇರಾರೊಡ ನೆಯೂ ಹೆಚ್ಚು ಮಾತಾಡುವ ಹವ್ಯಾಸಕ್ಕೆ ನಾನು ಹೋಗುವದಿಲ್ಲ. ಮಾತಾಡಿಸಿದರೂ ಒಂದೆರಡು ಮಾತಿನಲ್ಲಿ ಮುಗಿಯುತ್ತಿ ನನ್ನ ವಿಚಾರದಲ್ಲಿಯೇ ತಲ್ಲೀನನಾಗುವದು ನನಗೆ ಅಭ್ಯಾಸವಾಗಿ ಹೋಗಿದೆ. ನನ್ನ ನಡೆಯಲ್ಲಿ ಮಾತ್ರ ವಿಚಿತ್ರವಾಗಿ, ನಾನು ಬೇಕಿಲ್ಲದ ಕ್ಷಕಿರತದ ಹೆಚ್ಚಿಗೆಯೇ ಮಾತಾಡುವದುಂಟು. ಈ ಸ್ವಭಾವ ಭಿನ್ನತೆಯು ಹೇಗೆ ಬಂತೆಂಬುದನ್ನು ನಾನು ಸುಲಭದಲ್ಲಿ ತಿಳಿಸಲಾರೆ. ಇರಲಿ.

ಆಗ ನಾನು ಇದ್ದುದು ಊರ ಮೈದಾನದಲ್ಲಿ; ಕುಳಿತಿದ್ದುದು ಒಂದು ಶಿಲಾಸನದ ಮೇಲೆ; ಕೇಳುತ್ತಿದ್ದುದು ಇಂಪಾದ ರೇಡಿಯೋ ಗೀತವೊಂದನ್ನು. ಆ ಶಿಲಾಸನದಲ್ಲಿ ನಾನೊಬ್ಬನೇ ಇರಲಿಲ್ಲ; ನನ್ನಂತೆಯೇ ಮತ್ತೋರ್ವನೂ ಆ ಗಾನವನ್ನು ಆಲೈಸುತ್ತಿದ್ದನು. ಆ ಜನ ಈ ಊರಿಗೆ ಹೊಸಬನಿರಬೇಕೆಂದು ಅವನ ಉಡುಪು ತೊಡುಪುಗಳಿಂದ ನಿರ್ಧರಿಸಿದೆ. ಆದರೆ ಸಂಗೀತದ ಏರಿಳಿತದೊಡನೆ ಅವನ ದೇಹವೂ ಮೇಲಕ್ಕೆ ಕೆಳಕ್ಕೆ ಮಾಲುತ್ತಿತ್ತು. ಒಮ್ಮೆ ಏಳುವನು; ಗೀತದ ಸ್ವರವು ತೀರ ಕನಿಷ್ಠವಾಗುವಾಗ ಬಗ್ಗಿ ಮುದುಡಿಕೊಂಡು ಕುಳಿತುಕೊಳ್ಳುವನು. ರಾಗವು ಉಚ್ಚ ಸ್ವರದಲ್ಲಿ ಹಾಡಲ್ಪಡುತ್ತಿರುವಾಗ ಚಟ್ಟನೆ ಹುಲ್ಲಿಯಂತೆ ನೆಗೆದು ನೀಟಾಗಿ ಕೈಕಾಲುಗಳನ್ನು ಝಾಡಿಸಿ ಕುತ್ತಿಗೆಯನ್ನು ಮೇಲಕ್ಕೆತ್ತಿ ಅವನು ಮಾಡುವ ವಿವಿಧ ಅಂಗವಿನ್ಯಾಸವನ್ನು ನೋಡಿ ಸಂಗೀತದ ಸುಧೆಯನ್ನು ತಾನೊಬ್ಬನೆ ಯಾರಿಗೂ ಬಿಡದೆ ಕುಡಿಯುತ್ತಿರುವನೋ ಎಂದು ಭಾವಿಸುವಂತಾಯಿತು. ಖಂಡಿತವಾಗಿ ನಮ್ಮೂರಿನ ಜನವಲ್ಲ—ಯಾವುದೋ ಪರವೂರಿನ ನಿವಾಸಿಯಿರಬಹುದೆಂದು ತರ್ಕಿಸಿದೆ. ಇವನು ಆಗಾಗ ಮಾಡುವ ಈ ಚೇಷ್ಟೆಗಳನ್ನು ನೋಡಿ ಇವನಿಗೆಲ್ಲಾದರೂ ಉನ್ಮಾದದ ಸೋಂಕಿರಬಹುದೆಂದು ನಡುಕ ಹುಟ್ಟಿ ಆ ಶಿಲಾಸನವನ್ನು ಬಿಟ್ಟು ಬೇರೊಂದು ಶಿಲಾಸನದಲ್ಲಿ ಕುಳಿತುಕೊಂಡು ಕಣ್ಣು ಮುಚ್ಚಿ ಕಿವಿಗಿಂಪಾದ ಗಾನವನ್ನು ಆಲೈಸುತಿದ್ದೆ.

'ನಮಸ್ಕಾರ! ನೀವು ಮಲಬಾರಿನವರೋ?'

ಬೇರಾರಿಗೋ ಕೇಳಿರಬಹುದೆಂದು ಸೊಲ್ಲೆತ್ತಲಿಲ್ಲ. ಕಣ್ಣನ್ನೂ ತೆರೆಯಲಿಲ್ಲ.

'ಓ, ಇವರೇ—ನೀವು ಮಲಬಾರಿನವರೋ?'

ಪುನಃ ನನ್ನ ಕಡೆ ಗಟ್ಟಿಯಾಗಿ ಮುಗುಚಿಬಿದ್ದ ಆ ಪ್ರಶ್ನೆ ಕೇಳಿ ಮೆಲ್ಲನೆ ಮುಚ್ಚಿದ ಕಣ್ಣನ್ನು ಅರೆತೆರೆದೆನು. ತೆರೆದು ನೋಡುವುದೇನನ್ನು? ತರತರದ ಹಾವಭಾವಗಳನ್ನು ಮಾಡುತ್ತ ಗೀತವನ್ನು ಕೇಳುತ್ತಿದ್ದ ಆ ಆಸಾಮಿಯು ನಾನು ಕುಳಿತಿದ್ದಲ್ಲಿ ಬಂದು ನನ್ನನ್ನೇ ನೋಡಿ ಕೇಳುತ್ತಿದ್ದನಾ ಪ್ರಶ್ನೆ. ಅವನ ಪ್ರಶ್ನೆಗೆ ಉತ್ತರ ಕೊಡಲು ಮನಸ್ಸು ಒಡಂಬಡಲಿಲ್ಲ. ತೆರೆದ ಕಣ್ಣನ್ನು ಕೂಡಲೇ ಮುಚ್ಚಿ ಏನೂ ತಿಳಿಯದವನಂತೆ ನಟಿಸಿದೆನು.

'ಅಲ್ಲಾಂದ್ರೆ—ಓ, ಓ, ಇ-ವ-ರೇ, ನೀ-ವು ಮ-ಲ-ಬಾ-ರಿ-ನ-ವ-ರೋ?' ಎಂದು ಮತ್ತಷ್ಟು ಗಟ್ಟಿಯಾಗಿ ಕಿವಿಗೆ ಹತ್ತಿರವಾಗಿ ಕೇಳಿದಾಗ ನನ್ನ ಕಿವಿ ಕಿವುಡಾದಂತಾಯಿತು. ನಾನು ಮಲಬಾರಿನವನಿರಬಹುದು, ಇವನಿಗೇಕೆ ಆ ಸುದ್ದಿ? ಸಿಟ್ಟು ಬಂದರೂ ತಡೆದುಕೊಂಡು 'ಅಲ್ಲ'ವೆಂದು ಹಲ್ಲು ಕಚ್ಚಿಯೇ ನುಡಿದೆನು.

'ಜಮಾಲಗಡದವರೋ?'

'ಅಲ್ಲ.'

'ಹಾಗಿದ್ದರೆ ಖಂಡಿತವಾಗಿ ಸುಲ್ತಾನಪುರದವರಿರಬೇಕು!'

'ಅಲ್ಲ!'

'ಓಹೋ, ತಿಳಿಯಿತು—ಸೋಲಾಪುರದವರಿದ್ದೀರಿ!'

'ಅಲ್ಲಾಂದ್ರೆ'—

'ಮತ್ತೆ, ಪೂನಾ ಅತ್ತಕಡೆಯಿಂದ ಬಂದವರೇನೋ?' ಹಾಳಾಯಿತು—ನಾನಾಗ ತಲೆಯ ಮೇಲೇರಿಸಿದ್ದ ಟೊಪ್ಪಿಗೆಯ ದೆಸೆಯಿಂದಲೇ ಮಲಬಾರಿನವರ ಹಾಗೋ ಜಮಾಲಗಡದವರ ಹಾಗೋ ಇಲ್ಲವೆ ಪೂನಾ ಅತ್ತಕಡೆಯಿಂದ ಬಂದವರ ಹಾಗೋ ತೋರುತ್ತಿರಬೇಕೆಂದು ನೆನಸಿ ಅದನ್ನು ಕೆಳಗಿಳಿಸಿದೆನು.

'ನಾನು ಪೂನಾ ಅತ್ತಕಡೆಯಿಂದ ಬಂದವನಲ್ಲ'ವೆಂದು ಉತ್ತರವಿತ್ತೆನು.

'ಹಾಗಾದರೆ — ತಿಳಿಯಿತು. ನಿಮ್ಮ ಆ ಟೊಪ್ಪಿಗೆಯೇ ನನ್ನನ್ನು ಮೋಸಗೊಳಿಸಲು ಕಾರಣ. ನಿಜವಾಗಿಯೂ ನೀವು ಡಾಕ್ಟ್ರದವರಿರಬೇಕು! ಏನು, ಯಾವಾಗ ಬಂದಿರಿ, ಕ್ಷೇಮವೇ, ಸೌಖ್ಯವೇ?' ಎಂದು ಒಮ್ಮಿಂದೊಮ್ಮೆಲೇ ಪ್ರಶ್ನೆಗಳ ಸುರಿಮಳೆ ಸುರಿದನು.

ನನ್ನ ತಲೆ ಹಾಳಾಗಿ ಹೋಯಿತು. ಸುಳ್ಳು ಹೇಳಿದರೂ 'ಚಿಂತಿಲ್ಲ ನಾನು ಡಾರ್ಜಿಲಿಂಗ್ ಬೆಟ್ಟದ ಚಾತೋಟದವನು' ಎಂದು ಕರ್ಕಶವಾಗಿ ಮರುನುಡಿದು ಇವನ ಕಾಟ ತಪ್ಪಿಸಲು ಬೇರೊಂದು ಕಡೆ ಹೋಗಿ ಕುಳಿತೆನು. ಆದರೆ ಅಲ್ಲಿಯೂ ಬಿಡಲಿಲ್ಲ ನನ್ನನ್ನು ಈ ಆಸಾಮಿ. ಬೆನ್ನ ಹಿಂದೆಯೇ ಬಂದು 'ಡಾರ್ಜಿಲಿಂಗ್ ಬೆಟ್ಟದಲ್ಲಿ ನಾನು ಬಹುಕಾಲ ಇದ್ದೆ' ಎಂದು ಮತ್ತೊಮ್ಮೆ 'ವೀಣೆ' ಬಾರಿಸಿದನು. ಹೆಗಲಮೇಲೆ ಹೊತ್ತುಕೊಂಡ ಮುದುಕನನ್ನು ಕೆಳಗಿಳಿಸಲಾರದ ಸಿಂದಬಾದ ನಾವಿಕನ ಗತಿಯಾಯಿತು! ಈ ಆಸಾಮಿ ನನಗೇಕೆ ಗಂಟುಬಿದ್ದ? ಓರೆಕಣ್ಣಿನಲ್ಲಿ ನೋಡಿ ಅವನು ೩೦—೩೫ ವರ್ಷ ವಯಸ್ಸಿನವರಿರಬಹುದೆಂದು ತರ್ಕಿಸಿದೆನು. ಕೊಂಚದಪ್ಪಾಳು—ಎಣ್ಣೆ ಕಪ್ಪು—ಗುಂಗುರು ಕೂದಲು—ಪಿಳಿಪಿಳಿ ಕಣ್ಣುಗಳು—ಕೊಕ್ಕರೆಯ ಮೂಗು—ಎಂದು ಮುಂತಾಗಿ ಅವನನ್ನು ವರ್ಣಿಸಿದರೆ ನೀವು ನಂಬಲಿಕ್ಕಿಲ್ಲ. ವಾಸ್ತವದಲ್ಲಿ ಅವನ ರೂಪವು ಹಾಗೆಯೇ ಇದ್ದರೂ ಬಿಳಿ ಅಚ್ಚುಕಟ್ಟಾದ ಪೋಷಾಕನ್ನು ಧರಿಸಿದ್ದನು:

'ನೀವು ಮಾತಾಡುವುದು ಸ್ವಲ್ಪ ಕಡಿಮೆಯೆ? ನಾನು ಹುಟ್ಟಿದುದು ಸಿಮ್ಲಾದಲ್ಲಾದರೂ ಇರುತಿದ್ದುದು ಡಾರ್ಜಿಲಿಂಗದಲ್ಲಿ!'

'ಓಹೋ—ನೀವು ಉತ್ತರ ಹಿಂದುಸ್ಥಾನದವರೋ? ಕಣ್ಣಾನೂರಿನವರೆಂದು ನಾನು ಭಾವಿಸಿದ್ದೆ!'

'ದಕ್ಷಿಣ ಹಿಂದುಸ್ಥಾನದವರು ಎತ್ತರದಲ್ಲಿ ಉತ್ತರದವರಿಗಿಂತ ಕಡಮೆ—ನೋಡಿದಿರಾ—ನಾನೆಷ್ಟು ಎತ್ತರವಾಗಿದ್ದೇನೆ?' ಎಂದು ಬೆಟ್ಟದ ಕಾಲ್ಬೆರಳನ್ನು ನೆಲಕ್ಕೂರಿ ನಿಂತಾಗ ನಿಜಕ್ಕೂ ಈ ಜನಕ್ಕೆ ಹುಚ್ಚು ಹಿಡಿದಿದೆಯೆಂದು ತೋರಿತು.

'ಡಾರ್ಜಿಲಿಂಗ್ ಬೆಟ್ಟದಲ್ಲಿ ಬೆಳೆಯುವಷ್ಟು ಮೂಲಿಕೆಗಳು ಬೇರೆಲ್ಲೂ ಬೆಳೆಯುವುದಿಲ್ಲ—ನಿಮಗೆ ಗೊತ್ತೋ?'

'ನನಗೆ ಗೊತ್ತಿಲ್ಲ! ಹಿಡಿದ ಹುಚ್ಚು ಬಿಡಿಸಲಿಕ್ಕೆ ನಿಮ್ಮೊಡನೆ ಮೂಲಿಕೆಯಿದೆಯೇನು?'

'ಏನಿದ್ದೀತೆ? ಇಲ್ಲಿ ಇವೆ—ಆ ದಿವ್ಯಾಪಧಗಳು!' ಎಂದು ಹೇಳುತ್ತ ತನ್ನ ಸನಿಯದಲ್ಲಿದ್ದ ಚೀಲದೊಳಗಿಂದ ನಾಲ್ಕಾರು ಒಣ ಬೇರುಗಳನ್ನು ಹೊರದೆಗೆದನು. ಇವನ ಹತ್ತಿರ ಮಾತಾಡಿದುದೇ ತಪ್ಪಾಯಿತು. ಇವನ ಕಾಟ ತಪ್ಪಿಸಲು ನಾನು ಡಾರ್ಜಿಲಿಂಗ ಬೆಟ್ಟದವನೆಂದು ಹೇಳಿದರೆ ತಾನೂ ಅಲ್ಲಿಂದಲೇ ಬಂದವನೆಂದು ಹೇಳುತ್ತಾನೆ! ಇವನ ಹುಚ್ಚು ಬಿಡಿಸಲು ಮೂಲಿಕೆಗಳಿವೆಯೋ ಎಂದು ಕೇಳುವಾಗ ಅವುಗಳೂ ಇವೆಯೆಂದು ಹೇಳುತ್ತಾನೆ!

'ಈ ಮೂಲಿಕೆಗಳು ಯಾವ ಹುಚ್ಚನ್ನು ಬಿಡಿಸುತ್ತವೆ
ನೀವು ಸ್ವಂತ ಪ್ರಯೋಗಿಸಿದ್ದೀರೋ?'

'ಹೂಂ, ದಿನಾಲೂ ಎರಡೆರಡು ಬಾರಿ ಅರೆದು ಸೇವಿಸಿದರೂ ಮತ್ತೂ ತೆಗೆದುಕೊಳ್ಳೋಣವೆಂದು ಅನಿಸುತ್ತದೆ!'

'ಎರಡು ಬಾರಿ ಸಾಲದು—ನಾಲ್ಕು ಇಲ್ಲವೆ ಆರು ಬಾರಿ ಸೇವಿಸಿ—ಬರುತ್ತೇನೆ—ಡಾರ್ಜಿಲಿಂಗ ಬೆಟ್ಟದವರೇ!' ಎಂದು ಇನ್ನು ಅವನ ಬಳಿ ಹೆಚ್ಚು ಹೊತ್ತು ಕುಳಿತರೆ ನನಗೂ 'ಡಾರ್ಜಿಲಿಂಗಬೆಟ್ಟ' ತೋರೀತೆಂದು ಹೆದರಿಕೊಂಡು ಬೇಗ ಬೇಗನೆ ರಸ್ತೆಗಿಳಿದೆನು.

'ಅವನು ಓ-ಇ-ವ-ರೇ ಬಾ-ದೆ, ನಾನೂ ಬಂದೆ!' ಎಂದೆನ್ನುತ್ತಾ ಓಡುತ್ತ ನನ್ನ ಬಳಿಬಂದಾಗ ಏನೆನ್ನಬೇಕು? ಏನಾದರು ನೆಪಮಾಡಿ ಇವನ ಕಣ್ಣು ತಪ್ಪಿಸಬೇಕು! ಹೇಗೆ—ಅಡ್ಡ ಹೋದರೆ ಇವನು ಕಾಡ ಅಡ್ಡ ಬಂದು ಹಿಂಬಾಲಿಸುತ್ತಾನೆ—ರಸ್ತೆಯಲ್ಲಿದ್ದವರಿಗೆಲ್ಲಾ ಅನಿಸಿರಬೇಕು ಯಾರೋ ಒಬ್ಬ ಪಠಾಣನು ಸಾಲಗಾರನನ್ನು ಹಿಂಬಾಲಿಸುತ್ತಾನೆಂದು. ನೋಡಲಿಕ್ಕೂ ಪಠಾಣರಂತೆಯೇ ಅವನ ಉಡುಪು. ಏನು ಮಾಡುವುದೆಂದು ತಿಳಿಯದೆ ನೆತ್ತಿ ಸಿಡಿಯಬಾರಂಭಿಸಿತು. ಇವನ ಮೂಲಿಕೆಗಳು ಉಪಯೋಗಕ್ಕೆ ಬಿದ್ದರೂ ಬೀಳಬಹುದೆಂದು ಯೋಚಿಸುತ್ತ 'ನಿಮ್ಮೊಡನೆ ತಲೆಸಿಡಿತಕ್ಕೇನಾದರೂ ಮೂಲಿಕೆಗಳಿವೆಯೇ?' ಎಂದು ಕೇಳಿದೆನು.

'ಓಹೋ ತೆಗೆದುಕೊಳ್ಳಿ—' ಎಂದು ಒಂದು ಸಣ್ಣ ಬೇರಿನ ತುಂಡನ್ನು ಕೈಗಿರಿಸುತ್ತ—'ಬೇರೆಯವರಿಗಾದರೆ ಎಂಟಾಣೆ ಬೆಲೆ ಹೇಳುತಿದ್ದೆ. ನೀವು ನಮ್ಮೂರಿನವರಾದುದರಿಂದ ಒಂಭಾಣೆ ಕೊಟ್ಟರೆ ಸಾಕು' ಎಂದು ಒಂದು ಮೂಲಿಕೆಯನ್ನು ಜಗಿಯುತ್ತ ನುಡಿದನು.

ಇವನು ನನ್ನನ್ನು ತೊಲಗಿ ಹೋದರೆ ಸಾಕೆಂತ ಹೇಳಿ ನನ್ನ ಹಣದ ಚೀಲ ತೆರೆದು ಒಂದಾಣೆಯ ಬದಲಿಗೆ ಎರಡಾಣೆಯ ಪಾವಲಿಯನ್ನು ಕೊಟ್ಟು 'ಒಂದಾಣೆಯ ಬೇರನ್ನು ನೀವೇ ತಿಂದುಬಿಡಿ—ಕೊಂಚ ಸುಗ್ರಾದೀತು' ಎಂತ ಹೇಳಿದೆನು. ಆ ದಿನವೇ ಸಂಬಳ ದೊರಕಿತ್ತು—ಹೊಸ ಹೊಸ ನೋಟುಗಳೂ ಮಿಂಚುವ ನಾಣ್ಯಗಳೂ ಚೀಲದಲ್ಲಿದ್ದುವು. ಕಾಸಿನ ಚೀಲ ಕಾಸಿನೆದುರಿಗೂ ಬಿಚ್ಚಬಾರದೆಂದು ನಮ್ಮ ಅಜ್ಜ ಒಮ್ಮೆ ಹೇಳಿದ ನೆನಪು. ದುಡ್ಡಿನ ಚೀಲ ಬಿಚ್ಚುವಾಗ ಅವನ ಕಣ್ಣಾಲಿಗಳು ಹೊರಕ್ಕೆ ಬಂದಂತಾದುವು. ಅದನ್ನು ಹೆರವರಿಗೆ ತೋರಿಸಾವುದು ತಪ್ಪಾದರೂ ನಾನು ಗಂಡಸಲ್ಲವೇ? ಏನಾಗಲಾರದೆಂದು ನನ್ನ ದಾರಿ ಹಿಡಿದೆನು.

'ನೀವು ನನಗೆ ಕೊಂಚ ಈ ಊರಿನ ಪೇಟೆಯನ್ನು ತೋರಿಸುವಿರಾ?' ಎಂದು ಹೇಳಿ ಮತ್ತೂ ನನ್ನನ್ನು ನೆರಳಿನಂತೆ ಹಿಂಬಾಲಿಸಿದಾಗ ಮತ್ತೆ ಆರಂಭವಾಯಿತು ತಲೆಶೂಲೆ! ಸರಿ ಮತ್ತೇನು—'ಮಾಡಿದುಣ್ಣೋ ಮಹಾರಾಯ'ವೆನ್ನುವಂತೆ ಅವನು ಕೊಟ್ಟ ಮೂಲಿಕೆಯನ್ನು ಜಗಿಯುತ್ತ ಜಗಿಯುತ್ತ ಅದರ ರಸವನ್ನು ಹೀರಿದೆನು. ಬರಬರುತ್ತಾ ಕಾಲಿನ ಶಕ್ತಿಯು ಉಡುಗಿಹೋಗಿ ನಿತ್ರಾಣ ಬಂದು ಆಯಾಸ ಹೆಚ್ಚಿತು. ದಣುವಾರಿಸಲೆಂದು ಕತ್ತಲಾದುದರಿಂದ ಬಳಿಯ ಗೋಡೆಗೆ ಒರಗಿದೆನು. ಎಚ್ಚತ್ತು ಇರಬೇಕೆಂದು ಎಷ್ಟು ಪ್ರಯತ್ನಿಸಿದರೂ ಕೈಸಾಗಲಿಲ್ಲ—ಕಣ್ಣು ಕತ್ತಲೆ ಕವಿಯಿತು....

* * *

ಪುನಃ ಎಚ್ಚರವಾಗುವಾಗ ಸುಮಾರು ಮಧ್ಯರಾತ್ರಿ ಯಾಗಬಹುದು—ಕಣ್ಣು ತಿವಿದರೂ ಕಣ್ಣಿಗೆ ಕಾಣಿಸದು ಹಾದಿ. ನಾನೆಲ್ಲಿದ್ದೇನೆಂದು ಒಮ್ಮೆಗೇ ತಿಳಿಯಲಿಲ್ಲ. ಕ್ರಮೇಣ ತಿಳಿವು ಬಂದ ಹಾಗೆಲ್ಲಾ ಮುಸ್ಸಂಜೆಯ ಆ 'ಡಾರ್ಜಿಲಿಂಗ್ ಬೆಟ್ಟದ ಆಸಾಮಿಯು' ನೆನಪು ಬಂತು. ಫಕ್ಕನೆ ಕೈಯನ್ನು ಕಾಸಿನ ಚೀಲದ ಬಳಿ ಸರಿಸಿದಾಗ—ಏನು ಪ್ರಮಾದ—ಕಾಸಿನ ಚೀಲವೆ ಕಾಣೆಯಾಗಿತ್ತು! ನನ್ನ ಟೊಪ್ಪಿಗೆ ಮುಂತಾದುವೆಲ್ಲಾ ಹಾಗೆಯೇ ಇದ್ದುವು. ವಾಚಕ ಮಹಾಶಯ, ನನಗೆ ಆಗ 'ಹಿಮಾಚ್ಛಾದಿತ ಡಾರ್ಜಿಲಿಂಗ್ ಬೆಟ್ಟಗಳು' ತೋರುತಿದ್ದುವು!....

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

OS 184/1933 ಕ್ರಮ ಅಮ್ಲುಜ್ಯಾರಿ ನಂಬ್ರ 262/1944

ಅರ್ಜಿದಾರಳು....... **ಕೃಷ್ಣಮ್ಮ ಶೆಟ್ಟಿ**

ಎದ್ರಿರು ಪ್ರತಿವಾದಿರು 1 ನಾಗಯ್ಯ ಶೇರಿಗಾರ 2ನೇ ಪ್ರತಿವಾದಿ ಮಂಜಯ್ಯ ಶೇರಿಗಾರ ಪೌತಿ 3 ಸುಬ್ಬಯ್ಯ ಶೇರಿಗಾರ ೪ 2ನೇ ವಾದಿ ಮಂಜಯ್ಯ ಶೆಟ್ಟಿ.

1ನೇ ಪ್ರತಿವಾದಿ ನಾಗಯ್ಯ ಶೇರಿಗಾರರಿಗೆ ಮತ್ತು 3ನೇ ಪ್ರತಿವಾದಿ ಸುಬ್ಬಯ್ಯ ಶೇರಿಗಾರರಿಗೆ ಸಹಾ ಅರ್ಜಿದಾರಳು ನಡೆಸಿದ ಮೇಲ್ಕಂಡ ಕ್ರಮ ನಂಬ್ರ 262/1944ನೇ ಅಮ್ಲುಜ್ಯಾರಿಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಸಿರುವ ಸ್ಥಿರಾಸ್ತಿಗಳ ಮೂಲಗೇಣಿ ಹಕ್ಕನ್ನು ಏಲಂ ಮಾಡಲ್ಪಡಬೇಕೆಂದು ಹಾಜರುಪಡಿಸಿದ ಸ್ಥಿರಾಸ್ತಿ ಇಸ್ತಿಹಾರಿನ ಷರತು ನಿರ್ಣಯಿಸುವರೆ ಮೇಲ್ಕಂಡ ಕೋರ್ಟಿನಲ್ಲಿ ತಾ. 11—12—1944ನೇ ದಿವಸ ತಸ್ತಿಗೆ ಸಹಾ ನಿಶ್ಚಯಿಸಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪಗಳು ಇದ್ದಲ್ಲಿ ಆ ದಿವಸ ಕೋರ್ಟಿನವರು ಕರದಾಗ್ಗೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳಬೇಕೆಂದು ನಿಮಗೆ ಈ ಮೂಲಕ ತಿಳುಹಿಸೋಣಾಗುತ್ತದೆ.

K. Narayana Kamath
ಅರ್ಜಿದಾರನ ಕಡೆ ವಕೀಲ

ಕೋರ್ಟು ಹುಕುಂ ಪ್ರಕಾರ
ತಾ. 20—11—1944

ಸಪ್ರೂ ಸಮಿತಿಯ ಸಂಧಾನ ಯತ್ನ

ಬಿಕ್ಕಟ್ಟನ್ನು ಬಿಡಿಸಲು ಹೊಸ ಯೋಜನೆ

ಭಾರತ ಹಿತೈಷಿಗಳೆಲ್ಲರ ಬೆಂಬಲ

ಕಳೆದ ನವೆಂಬರ್ ತಿಂಗಳ ಪ್ರಾರಂಭದಲ್ಲಿ ಸರ್ ತೇಜ್‌ಬಹದ್ದೂರ್ ಸಪ್ರೂ ಅವರು ವಾರ್ಧಾಕ್ಕೆ ಹೋಗಿ ಮಹಾತ್ಮಾಜೀಯವರನ್ನು ಒಂದು ಮಹತ್ವದ ವಿಷಯದ ಕುರಿತಾಗಿ ಭೇಟಿ ಮಾಡಿದರು. ದೇಶದಲ್ಲಿನ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯು ಅಪಾಯಕಾರಕ ರೂಪವನ್ನು ತಾಳಿರುವುದನ್ನು ಕಂಡು ಅದನ್ನು ತೃಪ್ತಿಕರವಾಗಿ ಇತ್ಯರ್ಥಿಸಲು ತಮಗಿರುವ ಉತ್ಸಾಹವನ್ನು ಸೂಚಿಸಿ ಸರ್ ಸಪ್ರೂ ಅವರು ಮಹಾತ್ಮರ ಮನೋಗತವನ್ನು ತಿಳಿದುಕೊಳ್ಳುವ ಸಲುವಾಗಿ ಅತ್ತ ತೆರಳಿದ್ದರು.

ನಿರ್ದಿಷ್ಟವಾದ ಯಾವದೊಂದು ಪಕ್ಷಕ್ಕೂ ಸೇರಿರದ ಸ್ವತಂತ್ರವಾಗಿರುವಂತಹ ರಾಜಕೀಯ, ವಿಧಾಯಕ ತಜ್ಞರನ್ನು ಸೇರಿಸಿ ಒಂದು ಸಮಿತಿಯನ್ನು ರಚಿಸುವುದರ ಮೂಲಕ ದೇಶದಲ್ಲಿ ಆಂತರೀಕ ಪಕ್ಷ ಕಲಹವನ್ನು ಕೊನೆಗಾಣಿಸಿ, ಅವರೊಳಗೆ ಸ್ನೇಹ, ಐಕ್ಯತೆಗಳನ್ನು ಉಂಟು ಮಾಡಬೇಕೆಂಬುದೇ ಆ ಪ್ರಖ್ಯಾತ ನ್ಯಾಯಶಾಸ್ತ್ರ ಧುರೀಣ ಸಪ್ರೂಗಳ ಹತ್ತ್ಪೂರ್ವಕ ಇಚ್ಛೆ.

ಗಾಂಧೀಜೀಯ ಸಮ್ಮತ

ಸಪ್ರೂರವರ ಯೋಜನೆಯನ್ನು ಕೇಳಿದ ಕೂಡಲೇ ಮಹಾತ್ಮರು "ನಾನು ನಿಮ್ಮೊಂದಿಗೆ ಸಂಕೋಚವಿಲ್ಲದೆ ಸಹಕರಿಸುತ್ತೇನೆ. ನೀವು ಇಚ್ಛೆಪಟ್ಟಾಗ ನನ್ನನ್ನು ಕರೆಯಿರಿ, ನಿಮಗೆ ಬೇಕಾದ ರೀತಿಯಲ್ಲಿ ನನ್ನನ್ನು ಪ್ರಶ್ನಿಸಿರಿ, ನಿಮಗೆ ಬೇಕಾದ ಸಹಾಯವನ್ನು ಕೊಡಲು ಸಿದ್ಧನಿದ್ದೇನೆ" ಹೀಗೆಂದು ಭರವಸೆ ಕೊಡುವವರಾದರು

ದೇಶದ ಅಧ್ಯ ಮುಂದಾಳುವಿನಿಂದ ಮನಃಪೂರ್ವಕವಾದ ಈ ಭರವಸೆಯನ್ನು ಪಡೆದಂದಿನಿಂದ ಉತ್ತೇಜನಗೊಂಡ ಸರ್ ಸಪ್ರೂರವರು ಕೆಲವು ದಿವಸಗಳನಂತರ ಡಿಲ್ಲಿಯಲ್ಲಿ ಸೇರಿದ ನಾನ್ ಪಾರ್ಟಿ (ಯಾವ ಪಕ್ಷಕ್ಕೂ ಸೇರಿರದವರು) ಲೀಡರ್ಸ್ ಸಭೆಯಲ್ಲಿ ತಮ್ಮ ಯೋಜನೆಯನ್ನು ಪರ್ಯಾಲೋಚಿಸಿದಾಗ ಅಲ್ಲಿಯೂ ಉತ್ಸಾಹಪೂರ್ಣವಾದ ಬೆಂಬಲವು ಅವರಿಗೆ ದೊರೆಯಿತು

ದೇಶ ಧುರೀಣರ ಬೆಂಬಲ

ಇದುತನಕ ಇತ್ಯರ್ಥಗಳನ್ನು ಮಾಡಲು ಪ್ರಯತ್ನಪಟ್ಟ ಯೋಜನೆಗಳನ್ನು ವಿರೋಧಿಸಿದ ಅನೇಕ ಧುರೀಣರು ಈ ಸಪ್ರೂ ಯೋಜನೆಗೆ ಸಮ್ಮತಿಯಿತ್ತಿರುವುದು ಒಂದು ಆಶಾದಾಯಕ ಚಿಹ್ನೆಯಾಗಿ ತೆಗೆದು ಕೊಳ್ಳಬಹುದು.

ಮಧ್ಯವರ್ತಿ ಸರಕಾರದ ಅನೇಕ ಸದಸ್ಯರೂ ಇದಕ್ಕೆ ಒಪ್ಪಿಗೆಯನ್ನೂ, ಸಹಕಾರವನ್ನೂ ಸೂಚಿಸಿದ್ದು ಶುಭಸೂಚಿಯಾಗಿದೆ. ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ಸರ್ ಮಹಮ್ಮದ್ ಉಸ್ಮಾನರು "ಸರಕಾರವು ಸಪ್ರೂ ಸಮಿತಿಯ ಕಾರ್ಯಕಲಾಪಗಳಿಗೆ, ಸಹಾನುಭೂತಿ ತೋರಿಸಬಯಸುತ್ತದೆ. ಅವರಿಗೆ ಬೇಕಾಗಬಹುದಾದ ಎಲ್ಲಾ ವಿವರ, ಅಂಕೆಸಂಖ್ಯೆಗಳನ್ನು ಬೇಕಾದಲ್ಲಿ ಕೊಡಲು ಸಿದ್ಧರಿದ್ದೇವೆ." ಎಂದು ಹೇಳಿರುವುದು ನಿಜವಾಗಿ ಸಪ್ರೂಗಳ ಪ್ರಯತ್ನಗಳಿಗೆ ಯಶಸ್ಸು ತಾರದಿರದು.

ಸರಕಾರದ ಇನ್ನೊಬ್ಬ ಸದಸ್ಯರೂ, ಹರಿಜನರ ಮತ್ತು ಹಿಂದುಳಿದ ವರ್ಗದವರ ಹಿತೈಷಿಗಳೆಂದು ಹೇಳಿ ಕೊಳ್ಳುವವರೂ ಆಗಿದ್ದು ಇದುತನಕ ಬಹಳವಾಗಿ ವಿರೋಧಭಾವವನ್ನೇ ಎಂಬಂತೆ ತಾಳಿಕೊಂಡಿದ್ದ ಡಾ। ಅಂಬೇಡಕರರಿಂದ ತಮಗೆ ಯೋಗ್ಯ ಸಹಕಾರ ಸಹಾಯ ದೊರೆಕಬಹುದೆಂದು ಸಪ್ರೂಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜಿನ್ನರ ಧೋರಣೆ ಏನು?

ಪಾಕಿಸ್ತಾನದ ಪ್ರಶ್ನೆಯು ಪಕ್ಷಾತೀತರ ಸಮಿತಿಯಲ್ಲಿ ಪ್ರಧಾನವಾಗಿ ಚರ್ಚಿಸಲ್ಪಡುವ ವಿಷಯಗಳಲ್ಲಿ ಒಂದಾಗಿರಬಹುದಾದ್ದರಿಂದ ಮುಸ್ಲಿಂ ಮುಖಂಡರ ಸಹಕಾರವನ್ನು ಅವರು ನಿರೀಕ್ಷಿಸುತ್ತಿದ್ದಾರೆ. ಅಂತೆಯೇ ಸದ್ಯದಲ್ಲಿ ಸರ್ ತೇಜಬಹದ್ದೂರರು ಬ್ಯಾರಿಸ್ಟರ್ ಜಿನ್ನಾರವರನ್ನೂ ಕಾಣಲಿರುವರು.

ಸಪ್ರೂ ಸಮಿತಿಯ ನಿರ್ಣಯ ಸೂಚನೆಗಳನ್ನು ಸ್ವೀಕರಿಸಲೂ ತ್ಯಜಿಸಲೂ ಯಾವ ಪಕ್ಷದವರಿಗೂ ಸಂಪೂರ್ಣ ಸ್ವತಂತ್ರತೆ ಇರುವುದು. ಯಾರು ಒಪ್ಪಿದರೂ ಒಪ್ಪದಿದ್ದರೂ ಸಮಿತಿಯು ಪ್ರಯತ್ನಗಳನ್ನು ನಿಲ್ಲಿಸಲಾರದು— ಹೀಗೆಂದು ಸಪ್ರೂರವರು ತಿಳಿಸಿದ್ದಾರೆ.

ಅಖಂಡ ಹಿಂದೂಸ್ಥಾನವನ್ನು 'ತಮ್ಮ ಗುರಿಯಾಗಿ ಸ್ವೀಕರಿಸಿ ಅದರ ಸ್ಥಾಪನೆಗಾಗಿ ಪ್ರಯತ್ನಿಸುವ ಹಿಂದಿನ ಕಾಂಗ್ರೆಸ್ ಮಂತ್ರಿಗಳಾಗಿದ್ದ ಶ್ರೀ। ಕೆ ಎಂ ಮುನ್ಷಿಗಳೂ ಸಪ್ರೂ ಯೋಜನೆಗೆ ತಮ್ಮ ಬೆಂಬಲವಿತ್ತಿದ್ದಾರೆ ದೇಶದಲ್ಲಿನ ಪ್ರಭಾವ ಶಾಲಿ ಪತ್ರಿಕೆಗಳು ಸಂಧಾನ ಪ್ರಯತ್ನಗಳನ್ನು ಏಕಕಂಠದಿಂದೆಂಬಂತೆ ಹರಸಿರುತ್ತವೆ

ಸಂಧಾನವು ಸಾಧ್ಯವೆ?

ಸರಕಾರದ ಧೋರಣೆ ಹೇಗೂ ಇರಲಿ, ಬಿಕ್ಕಟ್ಟನ್ನು ಪರಿಹರಿಸಬೇಕಾದದ್ದು ಭಾರತೀಯ ಮುಖಂಡರೆಲ್ಲರ ಕರ್ತವ್ಯವಿರುತ್ತದೆ ನಾಳೆ ಒಂದು ವೇಳೆಗ ಬ್ರಿಟಿಷರು ಇಲ್ಲಿಂದ ಹೊರಹೋದರೆ ಆಂತರೀಕ ಆಡಳಿತದ ಹೊಣೆಗಾರಿಕೆಯನ್ನು "ನಾವೆ ಮಾಡಿಕೊಳ್ಳಬೇಕಾಗುತ್ತದಲ್ಲವೆ?" ಎಂದು ಹಲವರ ಪ್ರಶ್ನೆ ಆದುದರಿಂದಲೇ ಇಂತಹ ಪ್ರಯತ್ನಗಳನ್ನು ದೇಶ ಹಿತೈಷಿಗಳೆಲ್ಲರೂ ಯಶಸ್ವಿಗೊಳಿಸಬೇಕಾದುದು ಅತ್ಯಾವಶ್ಯಕ

ಒಂದು ದೇಶದಲ್ಲಿ ಅಲ್ಪಸಂಖ್ಯಾಕರ ಪ್ರಶ್ನೆಯು ತೃಪ್ತಿಕರವಾಗಿ ಇತ್ಯರ್ಥಿಸಬೇಕೆಂಬುದನ್ನು ಕಳೆದ ಮತ್ತು ಇಂದಿನ ಯುದ್ಧಗಳಿಂದ ಮುಂದಟ್ಟಾಗುತ್ತದೆ ಒಂದು ದೇಶದಲ್ಲಿನ ಅಲ್ಪಸಂಖ್ಯಾಕರನೊಂದುಕೊಂಡಿದ್ದರೆ ಆ ದೇಶದ ಶಕ್ತಿಯು ನಿರ್ಬಲವಾಗುವುದರಲ್ಲಿ ಸಂದೇಹವಿಲ್ಲ ಆದುದರಿಂದ ಎಲ್ಲಾ ಪಕ್ಷದವರೂ ಒಟ್ಟು ಸೇರಬೇಕಾದದು ಪ್ರಾಮುಖ್ಯದ ವಿಷಯ.

ಎಲ್ಲಾ ಜಾತಿ ಪಕ್ಷ, ಪಂಗಡದವರೂ ಸ್ನೇಹಭಾವದಲ್ಲಿ, ಐಕ್ಯತೆಯಲ್ಲಿ ಇರಲು ನಿರ್ಧರಿಸಬೇಕು. ಹಾಗಾದರೆ ಮಾತ್ರ ಸಪ್ರೂ ಸಮಿತಿಯ ಯೋಜನೆಯು ಯಶಸ್ವಿಯಾಗಬಲ್ಲದೆಂದು ಹೆಚ್ಚಿನವರ ಅಭಿಪ್ರಾಯ. "ಎಲ್ಲಾ ಜಾತಿ, ರಾಜಕೀಯ ಪಕ್ಷಗಳ ಮುಖಂಡರು ಪಕ್ಷಾತೀತರ ಈ ಸತ್ಪ್ರಯತ್ನಗಳಿಗೆ ಸಹಾಯಮಾಡುವುದು ಧರ್ಮವಿರುತ್ತದೆ." ಎಂದು ಒಂದು ಪತ್ರಿಕೆಯು ಬರೆಯುತ್ತದೆ.

ತಾವು ಹೇಳಿದಂತೆ ಆಗಬೇಕೆಂದು ಹಟವಾದಿತನದ ಧೋರಣೆಯವರು ಇತರರ ಯೋಜನೆಗಳ ಕಡೆಗೆ ಗಮನ ಕೊಡದಿದ್ದುದರಿಂದಲೇ ಇಂದು ಅನೇಕ ಪ್ರಯತ್ನಗಳು ನಿಷ್ಫಲವಾದುವೆಂದೂ, ಅಂಥವರು ಒಂದು ಸಲ ಇತರರ ಯೋಜನಾವಳಿಗಳನ್ನು ಧೈರ್ಯದಿಂದಲೂ, ನಿರ್ವಿವಾದ ಭಾವದಿಂದಲೂ ಪರಿಶೀಲಿಸುವವರಾದರೆಂದರೆ ಅವರ ಮನಸ್ಸಿನಲ್ಲಿರುವ ಅವಿಶ್ವಾಸ ಭಯಗಳು ಮಾಯವಾಗುವುದರಲ್ಲಿ ಸಂಶಯವಿಲ್ಲವೆಂದು ಒಂದು ಆಂಗ್ಲ ಪತ್ರಿಕೆ ಬರೆದಿದೆ

ಯೋಜನೆಯ ಸಾರಾಂಶ

ಸರ್ ಸಪ್ರೂ ಅವರಿಂದ ಸ್ಥಾಪಿಸಲ್ಪಡುವ ಈ ಐಕ್ಯ ಸಂಧಾನ ಪ್ರಯತ್ನದ ಸಮಿಯಲ್ಲಿ ಎಂತಹ ಸದಸ್ಯರಿರಬೇಕೆಂದು ಮಹಾತ್ಮಾ ಗಾಂಧಿಜೀಯವರೇ ಪ್ರತ್ಯೇಕವಾಗಿ ಸೂಚಿಸಿದ್ದಾರೆ ಅದರ ಸದಸ್ಯರು ಹೆಚ್ಚಾಗಿ ರಾಜ್ಯಾಂಗ ವಿಧಾಯಕ ಪದ್ಧತಿಗಳನ್ನು ಚೆನ್ನಾಗಿ ಅಭ್ಯಾಸಿಸಿದ್ದರೂ, ಅವುಗಳ ನಿರ್ವಹಣದಲ್ಲಿ ಅನುಭವವಿದ್ದವರೂ ಆಗಿರಬೇಕು ಮಾತ್ರವಲ್ಲ ಅವರು ಇದುತನಕ ಯಾವ ನಿರ್ದಿಷ್ಟವಾದ ರಾಜಕೀಯ ಪಕ್ಷದ ಪರವಾಗಿ ಒಲಿದಿರುವವರು ಇಲ್ಲವೇ ಅದಕ್ಕೆ ವಿರೋಧ ಸೂಚಿಸಿದವರೂ ಇರಬಾರದೆಂಬುದೇ ಗಾಂಧಿಜೀಯ ಇಚ್ಛೆ ಅದೇ ಪ್ರಕಾರವಾದರೂ ಸರ್ ಸಪ್ರೂಗಳೂ ತಮ್ಮ ಈ ಸಮಿತಿಯನ್ನು ಚುನಾಯಿಸುವರು.

ತಮ್ಮ ಸಮಿತಿಯು ರಾಜಕೀಯ ಸಮಸ್ಯೆಯ ಪರಿಹಾರೋಪಾಯವನ್ನು ಮಾತ್ರ ನಿರ್ಮಿಸುವಂತಹದಲ್ಲ, ತಾವು ಸಂಧಾನಗಾರರ ಪಾತ್ರವನ್ನು ವಹಿಸಲು ಪ್ರಯತ್ನಿಸುತ್ತೇವೆ ಎಂದು ಸಪ್ರೂ ಅವರು ತಿಳಿಸಿರುವುದು ಸ್ತುತ್ಯವೆಂದು ಅಭಿಪ್ರಾಯಪಡಲಾಗಿದೆ

ಈ ಸಪ್ರೂ ಸಂಧಾನ ಸಮಿತಿಯವರು ನ್ಯಾಯಶಾಸ್ತ್ರ ಪ್ರವೀಣರೂ ಇರುವರು. ತಮ್ಮ ಸ್ವಂತ ರಾಜಕೀಯ ಅಭಿಪ್ರಾಯಗಳೇನಿದ್ದರೂ ಅವರು ಅದನ್ನು ಬದಿಗಿರಿಸಿ, ದೇಶದ ಸಮಾಜ ಸುಧಾರಣೆ, ಆಡಳಿತ ವ್ಯವಸ್ಥೆ ಮತ್ತು ರಾಜಕೀಯ ಏರ್ಪಾಡುಗಳನ್ನು ಯಾರಿಗೂ ಯಾವ ತರದ ಅನ್ಯಾಯವಾಗದಂತೆ ಅವರು ಇತ್ಯರ್ಥಿಸುವರೆಂದು ನಿರೀಕ್ಷಿಸಿ ದೇಶದಲ್ಲೆಲ್ಲ ಹಾರೈಸಲಾಗಿದೆ:

"ಈ ಸಮಿತಿಯು ಗಾಳಿಗೋಪುರಗಳನ್ನು ಕಟ್ಟುವಂತಹುದಲ್ಲ ಪ್ರತಿಯೊಂದು ಜಾತಿ, ಪಕ್ಷದವರ ಅಭಿಪ್ರಾಯಗಳನ್ನು ತಿಳಿದು ಎಲ್ಲರಿಗೂ ಒಪ್ಪಲು ಸಾಧ್ಯವಾಗುವಂತಹ ಏರ್ಪಾಡೊಂದನ್ನು ತಯಾರಿಸುವುದು ನಮ್ಮ ಆಶೆ" ಎಂದು ಸರ್ ತೇಜಬಹದ್ದೂರರು ಎಂದಿರುವುದು ಗಮನಿಸಬೇಕಾದ ಮಾತುಗಳು

ಸರಕಾರಕ್ಕೆ ಸುಸಂದರ್ಭ

ಕಳೆದ ಫೆಬ್ರವರಿಯಲ್ಲಿ ವೈಸ್‌ರಾಯ್ ವೇವೆಲ್ಲರು ಎಸೆಂಬ್ಲಿಯ ಪ್ರಾರಂಭ ಭಾಷಣದಲ್ಲಿ "ಭಾರತೀಯರೇ ತಮ್ಮದೊಂದು ಯೋಜನೆಯನ್ನು ತಯಾರಿಸಿದರೆ ಬಹಳ ಚೆನ್ನಾಗಿತ್ತು" ಎಂದು ಹೇಳಿದ್ದರು. ಇದಕ್ಕೆ ಸರ್ ಸಪ್ರೂಗಳು ತಮಗೆ ಸರಕಾರದ ಸಹಕಾರವು ಬೇಕೆಂದಾಗ "ಅದು ಸಿಗುವುದು" ಎಂದು ತಿಳಿದು ಬಂತು ಸಪ್ರೂರವರು ಇನ್ನೊಂದು ಗಹನ ವಿಚಾರದ ಕುರಿತೂ ಸೂಚಿಸಿದ್ದರು. ಅದೆಂದರೆ ಮುಖಂಡರ ಬಿಡುಗಡೆ

"ಮುಖಂಡರ ಬಿಡುಗಡೆಯ ಕುರಿತು ಇನ್ನೂ ಸರಕಾರವು ಸರಿಯಾಗಿ ಯೋಚಿಸಲಿರುವುದು ಸರಿಯಾದುದಲ್ಲ ಸಪ್ರೂ ಸಮಿತಿಯಂತಹ ಪ್ರಯತ್ನಗಳಿಗೆ ಅವರಿಂದ ತುಂಬಾ ಸಹಾಯವಾಗಲಿದೆ' ಎಂದು ಹಿಂದೂ ಪತ್ರಿಕೆಯು ಬರೆಯುತ್ತದೆ ಅದು ಹೀಗೂ ಬರೆದಿದೆ ಸರಕಾರದವರು ನಿಜವಾಗಿ ಒಂದು ಇತ್ಯರ್ಥವಾಗಲಿಚ್ಛಿಸುವರಾದರೆ ದೇಶದ ಮುಖಂಡರನ್ನು ಈಗಲೇ ಬಿಟ್ಟುಬಿಡಬೇಕು. ಅಲ್ಪಸಂಖ್ಯಾಕ ಮತ್ತು ಜಾತೀಯ ಪ್ರಶ್ನೆಗಳನ್ನು ಪರಿಹರಿಸುವ ಯೋಜನೆಗಳನ್ನೂ ಸ್ವೀಕರಿಸಲು ತಾವು ಸಿದ್ಧವಿರುವೆವಾಗಿಯೂ ಮತ್ತು ಆಡಳಿತ ಜವಾಬುದಾರಿಕೆಯನ್ನು ಆದಷ್ಟು ಬೇಗನೇ ಭಾರತೀಯರಿಗೇ ಬಿಟ್ಟು ಬಿಡಲು ತಯಾರಿರುವೆವಾಗಿಯೂ ಸಾರಬೇಕು.

ಸಪ್ರೂ ಸಮಿತಿ ಸದಸ್ಯರು

ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಸರ್ ಮೊರಿಸ್ ಗ್ವಾಯರರು ಈ ಸಂಧಾನ ಸಮಿತಿಯಲ್ಲಿರುವರೆಂದು ಸುದ್ದಿಯಿದೆ. ಮಾತ್ರವಲ್ಲ, ಸರ್ ಬೆನೆಗಲ್ ನರ್ಸಿಂಗ್ ರಾವ್ (ಕಲ್ಕತ್ತ ಹೈಕೋರ್ಟ್ ಜಡ್ಜರು), ಸರ್ ಗೋಪಾಲ ಸ್ವಾಮಿ ಐಯ್ಯಂಗಾರ್ (ಕಾಶ್ಮೀರಿನ ಮಾಜಿ ದಿವಾನರು) ಸರ್ ಮಿರ್ಜಾ ಇಸ್ಮಾಯೀಲ್, (ಮೈಸೂರಿನ ಮಾಜಿ ಮತ್ತು ಈಗಿನ ಜೈಪುರದ ದಿವಾನರು) ಬೆನಾರಿಸ್ ವಿಶ್ವವಿದ್ಯಾಲಯದ ಸರ್ ರಾಧಾಕೃಷ್ಣನ್, ಪ್ರಖ್ಯಾತ ರಾಜ್ಯಾಂಗ ಕ್ರಮದ ನ್ಯಾಯನೀತಿ ತಜ್ಞರೆನಿಸಿದ ಎಂ. ಆರ್. ಜಯಕರ್, ಡಾ। ಜಾಕೀರ್ ಹುಸೇನ್ (ಶಿಕ್ಷಣ ತಜ್ಞರು) ಇವರುಗಳೂ ನೇಮಿಸಲ್ಪಡಬಹುದೆಂದು ಊಹಾಪೋಹಗಳಿವೆ.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore.

ಪ್ರಚಲಿತ ಸಮಾಚಾರಗಳು

[illegible] ಕಾಲವನ್ನು ಉಗ್ಗಡಿಸುತ್ತಿದೆ. ಆದರೆ [illegible] ಅನುಕೂಲತೆಗಳನ್ನು ಇನ್ನೂ ಹೆಚ್ಚಿಸುವ ಉಪಾಯಗಳನ್ನು ಕಲಿಸುತ್ತಿದೆ. ರಾಷ್ಟ್ರದ ಕಲ್ಯಾಣವು ಜ್ಞಾನಾರ್ಜನೆಯ ಮೇಲೆ ಹೊಂದಿಕೊಂಡಿರುವುದೆಂಬ ದೃಢವಾದ ವಿಶ್ವಾಸವಿದ್ದುದರಿಂದಲೆ, ಅಮೆರಿಕದ ಸರಕಾರವು ಈ ತರದ ಧೋರಣವನ್ನು ಕೈಗೊಳ್ಳಲು ಕಾರಣವು.

ಅಮೆರಿಕದ, ಬ್ರಿಟನಿನ, ರಷ್ಯಾದ,– ಪಾಶ್ಚಾತ್ಯದ ಇತರ ರಾಷ್ಟ್ರಗಳ ಪ್ರಗತಿಯ ಕಾರಣವೆ ವಿದ್ಯೆಯೆನ್ನಬೇಕು. ಹಿಂದೂದೇಶವು ಈ ತನಕ ಹಿಂದುಳಿಯುತ್ತಾದರೂ, ವಿದ್ಯಾಭ್ಯಾಸದ ಕೊರತೆಯಿಂದಲೆ ಹಿಂದೂದೇಶವನ್ನು ಪೀಡಿಸುತ್ತಿರುವ ತೊಂದರೆಗಳ ನಿವಾರಣೆಗೆ ವಿದ್ಯಾಪ್ರಚಾರವೇ ಶ್ರೇಷ್ಠ ಉಪಾಯವು.

ಈ ಕಾರಣದಿಂದಲೆ ಗಾಂಧೀಜಿಯವರು "ಮೂಲ ಶಿಕ್ಷಣ" ಯೋಜನೆಯೊಂದನ್ನು ತನ್ನ ರಚನಾತ್ಮಕ ಕಾರ್ಯಕ್ರಮದಲ್ಲಿ ಸೇರಿಸಿರುವರು. ಈ ಮೂಲ ಶಿಕ್ಷಣ ಯೋಜನೆಗೆ ಅತ್ಯಂತ ಮಹತ್ವದ ಸ್ಥಾನವನ್ನು ಕೊಟ್ಟಿರುವರು. ಕಸ್ತೂರಬಾ ನಿಧಿಯು ಮೂಲ ಶಿಕ್ಷಣ ಪ್ರಚಾರದಲ್ಲೂ ವ್ಯಯವಾಗುವಂತೆ ಕಲ್ಪಿಸಿರುವರು.

ಹಿಂದೂದೇಶದ ಪ್ರತಿಯೊಂದು ಹಳ್ಳಿಯಲ್ಲಿ "ಮೂಲ ಶಿಕ್ಷಣ"ದ ಕಾರ್ಯಕಲಾಪಗಳು ನಡೆದು, ಹಿಂದೂದೇಶದ ಹಳ್ಳಿಗಳು ಹುರುಪು ಪಡೆದು ಪ್ರಗತಿ ಹೊಂದಬೇಕೆಂದು ಗಾಂಧೀಜಿಯ ಇಚ್ಛೆಯಿರುತ್ತದೆ.

ಹಳ್ಳಿಗಳ ಪ್ರಗತಿಯೊಡನೆ ತಾಲೂಕುಗಳ ಪ್ರಗತಿ ಅದರಿಂದ ಜಿಲ್ಲೆಗಳ ಪ್ರಗತಿ, ಅದರೊಡನೆ ಪ್ರಾಂತ್ಯದ ಪ್ರಗತಿ; ಅದರೊಡನೆ ಸಮಗ್ರ ಹಿಂದೂದೇಶದ ಪ್ರಗತಿಯಾಗುವುದೆಂದು, ಗಾಂಧೀಜಿ ಮತ್ತು ಅವರ ಅನುಯಾಯಿಗಳ ಅಭಿಪ್ರಾಯವಿರುತ್ತದೆ.

ಹಿಂದೂದೇಶದ ರಾಜಕೀಯ ಸುಧಾರಣೆಯು ಕೂಡ, ಹೀಗೆನೆ ಹಳ್ಳಿಗಳಿಂದಲೆ ಪ್ರಾರಂಭವಾಗಬೇಕೆಂದೂ, ಅವರ ಮತವಿರುತ್ತದೆ.

ಸಂಯುಕ್ತ ಅಮೆರಿಕದ ಸಾಗುವಳಿ ಕ್ಷೇತ್ರದಲ್ಲಿ ಆಕಳುಗಳ ಸಾಕುವಿಕೆ, ಔದ್ಯೋಗಿಕ ಕ್ಷೇತ್ರ ಇತ್ಯಾದಿಗಳಲ್ಲಿ ಸಹಕಾರಿ ಸಂಘಗಳು ಬಹಳ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಸಹಕಾರಿ ಸೂತ್ರಗಳ ಮಹತ್ವ ಮತ್ತು ಉಪಯುಕ್ತತೆಯ ಕುರಿತು ಅನೇಕ ಉತ್ತಮ ನಿದರ್ಶನಗಳನ್ನು ಅಮೆರಿಕದಲ್ಲಿ ಕಾಣಬಹುದು.—ಉದ್ಯೋಗ ಮತ್ತು ವ್ಯಾಪಾರಿ ಕ್ಷೇತ್ರಗಳಲ್ಲಿ ಮಾತ್ರವಲ್ಲ, ವೈದ್ಯಕೀಯ ಕ್ಷೇತ್ರಗಳಲ್ಲೂ ಅಲ್ಲಿಂದ ಈಗ ವಿದ್ಯಾಕ್ಷೇತ್ರಕ್ಕೂ, ಸಹಕಾರ ಸೂತ್ರಗಳನ್ನು ಬಳಕೆಗೆ ತರಲಾಗುತ್ತಿವೆ.

ಹಿಂದು ಹಳ್ಳಿಯ ಜನರು, ಯಾ ವ್ಯಾಪಾರ ಯಾ ದಂದೆಯನ್ನು ನಡೆಸುವವರು, ಪರಸ್ಪರ ಸಹಕಾರದಿಂದ ಮಾಡಿದ್ದು ಪ್ರಯೋಜನ ಪಡೆಯುವುದೆ ಸಹಕಾರಿ ಸಂಘಗಳ ಉದ್ದೇಶ್ಯವು.

ಹಿಂದೂದೇಶಗಳ ಹಳ್ಳಿಗಳ ಸಾಂಪತ್ತಿಕ ಸ್ಥಿತಿ ಉದ್ಧರಣೆಗೆ ಸಹಕಾರಿ ಸೂತ್ರವು ಶ್ರೇಷ್ಠ ಉಪಾಯವು. ಹಣದ ಅಭಾವದ ಕೊರತೆಯಿಂದ ಹಿಂದುಳಿದ ನಮ್ಮ ವಿದ್ಯಾಕ್ಷೇತ್ರದಲ್ಲಿ ವಿದ್ಯಾಪ್ರಚಾರ ಸಹಕಾರಿ ಸಂಘಗಳನ್ನು ಸ್ಥಾಪಿಸುವುದರಿಂದ ಕೊರತೆಯನ್ನು ಸುಲಭದಲ್ಲಿ ನೀಗಿಸಲು ಆಗಬಹುದು. ನಮ್ಮ ಜಿಲ್ಲೆಯಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಸೆಕೆಂಡರಿ ಶಾಲೆಗಳಲ್ಲಿ ಕೆಲವನ್ನು ಈ ತರದಲ್ಲಿ ನಡೆಯಿಸಲು ಯತ್ನಿಸಬಹುದು.

ಅಂತರ್ರಾಷ್ಟ್ರೀಯ ಸಂಸ್ಕೃತಿಯ ಪ್ರದರ್ಶನವೊಂದು ಮುಂಬೈಯಲ್ಲಿ ಸದ್ಯದಲ್ಲೆ ಜರಗಲಿದೆ. ಈ ಪ್ರದರ್ಶನವು ೧೯೪೫ರ ಜನವರಿ ೧೯ರಂದು ಪ್ರಾರಂಭವಾಗಿ ಫೆಬ್ರವರಿ ೩ರ ವರೆಗೆ ನಡೆಯುವುದು. ಈ ಪ್ರದರ್ಶನದಲ್ಲಿ ಜಗತ್ತಿನ ೧೬ ರಾಷ್ಟ್ರಗಳು ಭಾಗವಹಿಸಲಿದ್ದಾವೆಂದು ಇಷ್ಟರ ತನಕ ಗೊತ್ತಾಗಿದೆ. ಈ ರಾಷ್ಟ್ರಗಳು ಯಾವುವೆಂದರೆ, ಚೀನಾ, ಬೆಲ್ಜಿಯಮ್, ಜೆಕೊಸ್ಲೋವೇಕಿಯಾ, ಡೆನ್ಮಾರ್ಕ್, ಇಜಿಪ್ಟ, ಫ್ರಾನ್ಸು, ಗ್ರೀಸ್, ಬ್ರಿಟನ್, ಹಿಂದೂದೇಶ, ಇರಾಣ, ನೆತರ್ಲೆಂಡ್, ಪೋಲೆಂಡ್, ಸ್ವೀಡನ್, ಸ್ವಿಜ್ಜರ್ಲೆಂಡ್, ಮತ್ತು ಸಂಯುಕ್ತ ಅಮೆರಿಕಾ. ಇನ್ನೂ ಕೆಲವು ರಾಷ್ಟ್ರಗಳು ಈ ಪ್ರದರ್ಶನದಲ್ಲಿ ಕೂಡಬಹುದೆಂದು ನಿರೀಕ್ಷೆಯಿದೆ. ಆಯಾಯ ರಾಷ್ಟ್ರಗಳ ಸಂಸ್ಕೃತಿಯ ಕುರಿತು ಪುಸ್ತಕಗಳು, ಕಲೆಗಳೂ, ಚಿತ್ರ, ಚಲಚಿತ್ರಗಳು, ಸಂಗೀತ ಇತ್ಯಾದಿಗಳು ಪ್ರದರ್ಶಿಸುವ ಕಾರ್ಯಕ್ರಮಗಳು ಈ ಸಮಾರಂಭದ ದಿನಗಳಲ್ಲಿ ನಡೆಯಿಸಲಾಗುವುವು.

ವರ್ಣದ ಹತ್ತಿಯನ್ನು ಗಿಡಗಳಿಂದ ಪಡೆಯುವ ಉಪಾಯಗಳು ಕಂಡುಹಿಡಿಯಲಾಗಿದೆ. ಈ ವಿಚಾರದಲ್ಲಿ ಸೋವಿಯಟ್ ರಷ್ಯದಲ್ಲಿ ಬಹಳ ಸಂಶೋಧನೆಯು ನಡೆದಿರುವುದಾಗಿ ತಿಳಿದುಬಂದಿದೆ. ಸದ್ಯಕ್ಕೆ ಕಂದು, ಹಸುರು, ಮತ್ತು ನೀಲ ಬಣ್ಣದ ಹತ್ತಿಯನ್ನು ಕೊಡುವ ಗಿಡಗಳ ಉಪಾಯಗಳು ಕಂಡುಹಿಡಿಯಲಾಗಿವೆ. ಮುಂದಕ್ಕೆ ಹತ್ತಿ ನೂಲಿಗೆ ಬಣ್ಣ ಬಳಸಬೇಕಾಗಿಲ್ಲ,–ವಸ್ತ್ರಕ್ಕೆ ಬೇಕಾದ ವರ್ಣವನ್ನು ಹತ್ತಿಯ ಗಿಡದಿಂದಲೆ ಪಡೆಯುವ ಸೌಲಭ್ಯವು ದೊರಕಬಹುದು. ವಿಜ್ಞಾನಿಗಳ ಸಂಶೋಧನೆಯಿಂದ,–ನೈಸರ್ಗವನ್ನು ಮಾನವನ ಸೇವೆಗಾಗಿ ಬಳಕೆಗೆ ತರಬಹುದೆಂದು, ಇದು ಇನ್ನೊಂದು ನಿದರ್ಶನವು.

ಯುದ್ಧೋತ್ತರದ ಜಗತ್ತಿನ ಕುರಿತು ಬಹಳ ಮಾತುಗಳು ಈಗ ಹೊರಡುತ್ತಿವೆ. ವಿಶ್ವ ಬಾಂಧವ್ಯವನ್ನು ಬೆಳೆಯಿಸುವ ಆದರ್ಶಗಳು ಅನೇಕ ಪ್ರಕಟವಾಗುತ್ತಿವೆ. ಮುಂದಕ್ಕೆ ಯುದ್ಧಗಳೆ ಉಂಟಾಗದಂತೆ ಮಾಡುವ ಯೋಜನೆಗಳ ಕುರಿತು ಲೇಖನಮಾಲೆಗಳು ಹೊರಡುತ್ತಿವೆ. ಆದರೆ ಇವುಗಳೆಲ್ಲಾ ಬರೆ ಲೇಖಗಳೇ, ಆದರ್ಶಗಳೇ, ಬರೆ ಮಾತುಗಳೇ ಹೊರತು, ಯುದ್ಧೋತ್ತರದಲ್ಲಿ ಜಗತ್ತು ಸುಧಾರಣೆಯಾಗದು ಎಂಬ ಸಂದೇಹಗಳುಂಟಾಗ ಹತ್ತಿವೆ–ಸಂಯುಕ್ತ ರಾಷ್ಟ್ರಗಳ ಸದ್ಯದ ಧೋರಣದಿಂದ.

"ಜಗತ್ತಿನಲ್ಲಿ ಶಾಂತಿಯು ನೆಲೆನಿಲ್ಲಬೇಕಾದರೆ,–ಈ ಜಗತ್ತಿನಲ್ಲಿ ಪ್ರತಿಯೊಬ್ಬನಿಗೂ ಧರ್ಮ, ವಾಕ್, ಇತ್ಯಾದಿ ಸ್ವಾತಂತ್ರ್ಯಗಳು ಇರಲೇಬೇಕು. ಇಂದು ಕೋಟಿಗಟ್ಟಲೆಯಲ್ಲಿ ಜನರು ಸಾಮ್ರಾಜ್ಯಶಾಹಿ ಪ್ರಭುತ್ವದ ಅಧೀನದಲ್ಲಿ ಪ್ರಜೆಗಳಾಗಿರುವರು. ನಮಗೆ ವಿಜಯ ದೊರಕಿದ ಮೇಲೂ ಈ ಜಗತ್ತಿನ ಅರ್ಧಾಂಶ ಜನರು ಗುಲಾಮರು, ಅರ್ಧಾಂಶ ಸ್ವತಂತ್ರ ಪ್ರಜೆಗಳಾಗಿರುವುದಾದರೆ, ಜಾಗತಿಕ ಶಾಂತಿಯನ್ನು ಸ್ಥಾಪಿಸಲು, ಅದನ್ನು ಚಿರವಾಗ ಉಳಿಸಲು ಹೇಗೆ ತಾನೆ ಸಾಧ್ಯವಾಗಬಹುದು.

"ಸಂಯುಕ್ತ ರಾಷ್ಟ್ರಗಳ ವಿಜಯದಿಂದ ತಮಗೇನು ಫಲವಿದೆ ಎಂದು ಏಸ್ಯಾಖಂಡದ ಜನರು ಎದುರು ನೋಡುತ್ತಿರುವರು. ನಮ್ಮ ಇತ್ಯರ್ಥಗಳಿಂದಲೆ ನಮ್ಮ ಸತ್ವ ಪರೀಕ್ಷೆಯಾಗುವ ಏಸ್ಯಾಖಂಡದ ವಿಶಾಲ ಪ್ರದೇಶಗಳಲ್ಲಿ ಹುಟ್ಟಿದ, ದಿನೇ ದಿನೇ ಬೆಳೆಯುತ್ತಿರುವ ರಾಷ್ಟ್ರೀಯ ಪ್ರವೃತ್ತಿಗೆ ಒಳ್ಳೇ ರಚನಾತ್ಮಕ ಹಾದಿಯನ್ನು ನಾವು ಕಲ್ಪಿಸಿಕೊಡದೆ ಹೋದರೆ ಆಗ ಪರಿಣಾಮಗಳು ಕೆಡಬಹುದು—ಕ್ಷೋಭೆಯುಂಟಾಗಬಹುದು ಸ್ವಾತಂತ್ರ್ಯ ಪಡೆಯಬೇಕಾಗಿ ಮಾಡಿದ ಈ ಜನರ ನಿರ್ಧಿಷ್ಟ ಸಂಕಲ್ಪವನ್ನು ನಾವು ಎಷ್ಟಕ್ಕೂ ಹಾಳುಗೆಡಹಬಾರದು.

ಇವುಗಳು ೧೯೪೧ರಿಂದ ೪೩ರ ತನಕ ಸಂಯುಕ್ತ ಅಮೆರಿಕದ ಸರಕಾರದ ಅಂಡರ್ ಸೆಕ್ರೆಟರಿ (ಕಾರ್ಯದರ್ಶಿ)ಗಳಾಗಿದ್ದ ಮಿ। ಸಮ್ನರ್ ವೆಲ್ಲೆಸ್‌ರು ಹಿಂದೆ ಆಡಿದ ಮಾತುಗಳು. ಆದರೆ ಈಗ ಅವರು ಬೇರೆ ಅಭಿಪ್ರಾಯಪಟ್ಟಂತೆ ಕಾಣುತ್ತದೆ. ವಲಸೆ ರಾಷ್ಟ್ರಗಳ ಕುರಿತು ಪ್ರಭುತ್ವ ರಾಷ್ಟ್ರಗಳಿಗೆ ದೊಡ್ಡ ಹೊಣೆಗಾರಿಕೆಯಿದೆ, ವಲಸೆ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದು ಸ್ವತಂತ್ರವಾಗಿ ಸರಕಾರ ತನ್ನು ನಡೆಸಲು ಅತರ [illegible] ಆಗಬೇಕಾಗಿದೆ, ಅಂತರ್ರಾಷ್ಟ್ರೀಯ ಟ್ರಸ್ಟಿ ಮಂಡಳಿಯ ನೇತೃತ್ವದಲ್ಲಿ ಈ ವಲಸೆ ರಾಷ್ಟ್ರಗಳ ಬಿಡುಗಡೆಯು ನಡೆಯಬೇಕು, ಇತ್ಯಾದಿ ಸೂಚನೆಗಳಿರುವ "ಇತ್ಯರ್ಥ ಸಮಯ" ಎಂಬ ನಾಮಾಂಕಿತದ ಪುಸ್ತಕ ಪ್ರಸಿದ್ಧಿಸಿರುವರು. ಹಿಂದೂದೇಶ [illegible] "ಅಂತರ್ರಾಷ್ಟ್ರೀಯ ಟ್ರಸ್ಟಿ ಮಂಡಳಿ"ದ ನೇತೃತ್ವದಲ್ಲಿ ಬ್ರಿಟಿಷರ ಅಧೀನದಲ್ಲಿ ನಡೆಯುವಂತೆ, ಈ ಪುಸ್ತಕದಲ್ಲಿ ಸೂಚಿಸಿರುವರು. ಹೀಗೆ ಸಂಯುಕ್ತ ರಾಷ್ಟ್ರದ ಇತರ ಅನೇಕ ಮುತ್ಸದ್ದಿಗಳು ಯುದ್ಧೋತ್ತರ ಜಗತ್ತಿನ ಕುರಿತ ಅಭಿಪ್ರಾಯಗಳನ್ನೂ, ಪುಸ್ತಕಗಳನ್ನೂ ಹೊರಡಿಸಿರುವರು. ಇವುಗಳಲ್ಲಿ ಹೆಳ್ಳನವುಗಳಲ್ಲಿ ಹಿಂದೂದೇಶದ ಸ್ವಾತಂತ್ರ್ಯಕ್ಕೆ ಮಹತ್ವವೇ ಕೊಡಲಾಗಲಿಲ್ಲ.

"ಅಂತರ್ರಾಷ್ಟ್ರೀಯ ಟ್ರಸ್ಟಿ ಮಂಡಳಿ ಮುಂತಾದ ಹೆಸರುಗಳ ಮುಸುಕುಗಳಲ್ಲಿ ವಲಸೆ ರಾಷ್ಟ್ರಗಳನ್ನು ತಮ್ಮ ಸ್ವಪ್ರಯೋಜನಕ್ಕಾಗಿ ಇಟ್ಟುಕೊಳ್ಳುವ ಸಾಮ್ರಾಜ್ಯಶಾಹಿ ಇಚ್ಛೆಯು ಇವುಗಳಲ್ಲಿ ಪ್ರತಿಬಿಂಬಿತವಾಗಿದೆ.

ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡಲು ನಾವು ಸಿದ್ಧರಿದ್ದೇವೆ. ಆದರೆ ಮೊದಲು ಭಾರತೀಯರು ತಮ್ಮ ಮನೆ ಸುವ್ಯವಸ್ಥೆಗೊಳಿಸಬೇಕು ಎಂದು ಹೇಳಲಾಯಿತು. ನಂತರ ಜಾತಿ ವೈವಿಧ್ಯತೆಯನ್ನು ಮುಂದೆ ಹಾಕಲಾಯಿತು, ನಂತರ ಅಲ್ಪ ಸಂಖ್ಯಾಕರ ಸಮಸ್ಯೆ–ಹೀಗೆ ದಿನಗಳು ಕಳೆದಂತೆ ಸಮಸ್ಯೆಗಳು ಸಮಸ್ಯೆಗಳನ್ನು ಅನ್ವಯಿಸುತ್ತಾ ಹೊರ ಬರುತ್ತಿವೆ.

ಸಂಕ್ಷಿಪ್ತದಲ್ಲಿ, ಈ ಮೇಲಿನ ಧೋರಣೆಯು ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವ ಕುರಿತು ಬ್ರಿಟಿಷರ ಅನಾಸಕ್ತಿಯನ್ನು ಸೂಚಿಸುತ್ತಿರುವುದು.

ಪ್ರಜಾಪ್ರಭುತ್ವ ವಾದದ ಹುಟ್ಟೂರಾದ ಸಂಯುಕ್ತ ಅಮೆರಿಕವು ಈ ಯುದ್ಧದಲ್ಲಿ ದುಮುಕಿದ ದಿನ,– ಹಿಂದೂದೇಶ ಮೊದಲಾದ ಏಸ್ಯಖಂಡದ ವಲಸೆ ರಾಷ್ಟ್ರಗಳು ತಮಗೆ ಸ್ವಾತಂತ್ರ್ಯ ದೊರಕುವ ಕುರಿತು ಮಹಾ ಆಶಯಗಳನ್ನು ಹೊಂದಿದವು.

ಆದರೆ ರೂಸ್‌ವೆಲ್ಟರು "ಜಾಗತಿಕ ಶಾಂತಿ; ಯುದ್ಧೋತ್ತರ ಜಗತ್ತು" "ಯುದ್ಧೋತ್ತರದಲ್ಲಿ ಜರ್ಮನ್ ರಾಷ್ಟ್ರದ ಬಿಂಕು ಧೋರಣ" ಮೊದಲಾದ ವಿಷಯಗಳ ಮೇಲೆ ರಸವತ್ತಾದ ಭಾಷಣಗಳನ್ನು ಮಾಡುತ್ತಿದ್ದರೂ, ಪ್ರಜಾಪ್ರಭುತ್ವವಾದ ರಕ್ಷಣೆಯಾಗಿ ಜಾಗತಿಕ ಶಾಂತಿ ದೊರಕಬೇಕಾದರೆ, ತನ್ನನ್ನೆ ಅಧ್ಯಕ್ಷನಾಗಿ ಚುನಾಯಿಸಬೇಕಾಗಿ ಕೇಳಿಕೊಂಡು, ಅಧ್ಯಕ್ಷ ಪದವಿಗೆ ನಾಲ್ಕನೆ ಭಾರಿಗೆ ಚುನಾಯಿತರಾದರೂ, ಅವರು ಏಸ್ಯಾಖಂಡದ ವಲಸೆ ರಾಷ್ಟ್ರಗಳ ಸ್ವಾತಂತ್ರ್ಯ ಸಮಸ್ಯೆಯ ಕುರಿತು ಲಕ್ಷ್ಯ ತೋರಿಸಿದುದು ಕಂಡುಬರುವುದಿಲ್ಲ.

"ಯುದ್ಧೋತ್ತರ ಜಗತ್ತಿನ ಸುವ್ಯವಸ್ಥೆ; ಜಾಗತೀಕ ಶಾಂತಿ" ಇವುಗಳೆಲ್ಲಾ ಸಂಯುಕ್ತ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸುವಂತಹುದು, ಏಸ್ಯಾಖಂಡದ ವಲಸೆ ರಾಷ್ಟ್ರಗಳಿಗಲ್ಲ, ಅವುಗಳು ತಮ್ಮ ಒಡೆಯರ ಅಧೀನದಲ್ಲಿದ್ದು ಅವರು ಕೊಟ್ಟುದಕಲ್ಲಿ ತೃಪ್ತರಾಗಿ ಇರಬೇಕೆಂಬುದೆ ಸಂಯುಕ್ತ ರಾಷ್ಟ್ರಗಳ ಮನವಿರಬಹುದೆ?

ಈ ಸಮಸ್ಯೆಯ ಕುರಿತು ಇತ್ಯರ್ಥವು ಬೇಗನೆ ಆಗಬೇಡವೆ?

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ,ತರಾವರಿ ನಮೂನೆಯ ದಾಗಿನೆಗಳ ಭಂಡಾರ
"ಕಲ್ಯಾಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

೭೦ ಕೋಟಿ ರೂಪಾಯಿ ಮಾರ್ಗಗಳು
ಮದ್ರಾಸ್ ಪ್ರಾಂತ್ಯದಲ್ಲಿ ಹೊಸ ರಸ್ತೆಗಳು
ಜಿಲ್ಲೆಗಳಲ್ಲಿ ರೈಲು ಸೌಕರ್ಯವಿಲ್ಲ

ಮದ್ರಾಸ್ ಸರಕಾರದವರು ಪ್ರಾಂತ್ಯದ ವ್ಯಾಪಾರ ಸಾಗಿಸುವಿಕೆಯನ್ನು ವಿಶಾಲಗೊಳಿಸುವ ಉದ್ದೇಶದಿಂದ ಮಾರ್ಗ ರಚನಾ ತಜ್ಞರೊಬ್ಬರನ್ನು ಒಂದು ಯೋಜನೆ ತಯಾರಿಕೆಗಾಗಿ ನೇಮಿಸಿದ್ದರು. ಈ ತಜ್ಞರು ಪ್ರಾಂತ್ಯದ ಮುಂದಿನ ಜನಸಂಚಾರ, ವಾಣಿಜ್ಯ ಅಭಿವೃದ್ಧಿಯನ್ನು ಮನಸ್ಸಿನಲ್ಲಿಟ್ಟು ಒಂದು ಮಾರ್ಗ ಯೋಜನೆಯ ಏರ್ಪಾಡು ವರದಿಯನ್ನು ಪ್ರಕಟಿಸಿರುವರು.

ಈಗ ಮಾರ್ಗಗಳ ಪರಿಸ್ಥಿತಿ

ಮದ್ರಾಸ್ ಪ್ರಾಂತ್ಯದಲ್ಲಿ ಈಗ ವಾಹನ ಸೌಕರ್ಯಗಳಿಗೆ ಯೋಗ್ಯವೆನಿಸಿದ ೩೬ ಸಾವಿರ ಮೈಲು ಒಟ್ಟು ಉದ್ದ ಉದ್ದವಿರುವ ಮಾರ್ಗಗಳಿವೆ. ಆದರೆ ಇವುಗಳಿಂದ ಪ್ರಾಂತ್ಯದ ಹೆಚ್ಚು ಹಳ್ಳಿಗಳಿಗೆ ಯಾವ ಪ್ರಯೋಜನ ಸಿಗುವಂತೆ ಇಲ್ಲ. ಕಾರಣ ಅನೇಕಾನೇಕ ಹಳ್ಳಿಗಳು ಜನಸಂಚಾರದ ಮಾರ್ಗಗಳಿಂದ ತುಂಬಾ ದೂರವಾಗಿರುತ್ತವೆ.

ಇಡೀ ವರ್ಷದಲ್ಲಿ ಈಗಿನ ಮಾರ್ಗಗಳು ಚಲನೆಗೆ ಯೋಗ್ಯವಾದಂತವುಗಳಾಗಿಲ್ಲ. ಮಳೆಗಾಲದಲ್ಲಿ ಕೆಸರು ನೀರಿನಿಂದ ತುಂಬಿದಾಗ ವಾಹನ ಚಲಾವಣೆಗೆ ಅಯೋಗ್ಯವಾಗುತ್ತವೆ. ಜನರಿಗೂ ಇವರಿಂದ ಹೆಚ್ಚಿನ ಪ್ರಯೋಜನ ದೊರೆಯದಂತಿದೆ.

ಹೊಸ ಏರ್ಪಾಡೇನು?

ಮಾರ್ಗತಜ್ಞರು ಒಪ್ಪಿಸಿದ ವರದಿಯಲ್ಲಿ ಒಂದು ಹತ್ತು ವರ್ಷದ ಮಾರ್ಗ ರಚನಾ ಯೋಜನೆಯು ಸೂಚಿಸಲ್ಪಟ್ಟಿವೆ. ಆ ಅವಧಿಯಲ್ಲಿ ೫೦ ಸಾವಿರ ಹೊಸ ಮಾರ್ಗಗಳು ರಚಿಸಲ್ಪಡುವವು. ಇವುಗಳಲ್ಲಿ ೧೩ ಸಾವಿರ ಮಾರ್ಗಗಳು ಹಳ್ಳಿಗಳಿಗೆ ತಲುಪುವಂತಹುಗಳಾಗಿರುವುವು. ಇವುಗಳಲ್ಲಿ ೩೫ ವಿಶಾಲವೂ ಉದ್ದವಾಗಿಯೂ ಇರುವ ರಾಷ್ಟ್ರೀಯ ರಾಜರಸ್ತೆಗಳು.

ಪ್ರಾಂತ್ಯದ ರಸ್ತೆಗಳನ್ನು ನಾಲ್ಕು ಪ್ರಾಮುಖ್ಯ ಮಾರ್ಗಗಳಾಗಿ ವಿಂಗಡಿಸಲಾಗುತ್ತದೆ.

(೧) ಇಡೀ ದೇಶದ ವಾಹನ ಚಲನೆಗೆ ಉಪಯುಕ್ತವಾಗುವ ರಾಜ ರಸ್ತೆಗಳು.

(೨) ಪ್ರಾಂತೀಕ ರಾಜ ರಸ್ತೆಗಳು—ಇವು ಪ್ರಾಂತ್ಯದ ಪ್ರಧಾನ ವಹಿವಾಟು ಪ್ರದೇಶಗಳನ್ನು ಜೋಡಿಸುವಂತವುಗಳು.

(೩) ಪ್ರಾಮುಖ್ಯ ಜಿಲ್ಲಾ ಹೆದ್ದಾರಿಗಳು—ಇವು ಪ್ರತಿ ಜಿಲ್ಲೆಯೊಳಗಿನ ಪ್ರಾಮುಖ್ಯ ಸ್ಥಳಗಳನ್ನು ಜೋಡಿಸುವಂತಹುಗಳಾಗಿರುತ್ತವೆ.

(೪) ಹಳ್ಳಿ ಗ್ರಾಮ ರಸ್ತೆಗಳು—ಇವು ಮುಖ್ಯವಾಗಿ ಹಳ್ಳಿ ವ್ಯಾಪಾರ ಚಲಾವಣೆಗೆ ಸಂಬಂಧಿಸಿದುವುಗಳು.

ಪ್ರಾಂತ್ಯ ಮತ್ತು ಜಿಲ್ಲಾ ಹೆದ್ದಾರಿಗಳು ವರ್ಷವೆಲ್ಲ ಚಲಾವಣೆಗೆ ಯೋಗ್ಯವಿರುವಂತಹುಗಳೇ ಆಗುತ್ತವೆ.

ಯೋಜನೆಗಾರರು ಹಳ್ಳಿ ರಸ್ತೆಗಳಿಗೆ ವಿಶೇಷ ಗಮನ ಕೊಡಬೇಕಾಗಿ ಸೂಚಿಸಿದ್ದಾರೆ.

ಕಲ್ಲಿನ ಮಾರ್ಗಗಳೆ?

ಈಗಿನ ಯೋಜನೆಯು ತಕ್ಕಮಟ್ಟಿಗೆ ಸುಧಾರಿತ ರೀತಿಯದಿರುವುದಾದರೂ ಅದು ಅತ್ಯಂತ ಶ್ಲಾಘನೀಯವೆಂದೆನಿಸುವಂತಹದಲ್ಲವೆಂದು ಮದ್ರಾಸಿನ ಒಂದು ಪತ್ರಿಕೆಯು ಅಭಿಪ್ರಾಯ ಪಡುತ್ತದೆ. ಅದಕ್ಕೆ ಕಾರಣಗಳು: ರಸ್ತೆ ವರದಿಯಲ್ಲಿ ಹಳ್ಳಿ ಮಾರ್ಗಗಳು ಮಳೆ, ನೆರೆಗಳ ಕಾಲದಲ್ಲಿ ಉಪಯೋಗಿಸಲ್ಪಡುವಂತಹುಗಳಾಗಿರುವುದಿಲ್ಲವೆಂದು ತಿಳಿಸಲಾಗಿದೆ.

ಹಳ್ಳಿ ಮಾರ್ಗಗಳು ವರ್ಷದಲ್ಲೆಲ್ಲಾ ಸಮಯದಲ್ಲಿ ಚಲನೆಗೆ ಯೋಗ್ಯವಾಗಿಲ್ಲದಿದ್ದರೆ, ಪ್ರಾಂತ್ಯ ಮತ್ತು ಜಿಲ್ಲಾ ಹೆದ್ದಾರಿಗಳಿಂದ ಪ್ರಯೋಜನವಿಲ್ಲ.

ಈ ಯೋಜನೆಯಲ್ಲಿನ ಮಾರ್ಗಗಳು ಬರಿ ಚೂರು ಕಲ್ಲುಗಳಿಂದ ರಚಿಸಲ್ಪಡುತ್ತವೆ ಎಂದು ತಿಳಿಸಲಾಗಿದೆ.

ಯುದ್ಧಾನಂತರ ವ್ಯಾಪಾರ ಕೈಗಾರಿಕೆಗಳು ಅಭಿವೃದ್ಧಿಯಾಗುವುದು ಹೌದೆಂದಾದರೆ ಕಲ್ಲಿನ ಮಾರ್ಗಗಳಿಗಿಂತ ಡಾಮಾರು ಮಾರ್ಗಗಳೇ ಹೆಚ್ಚಾಗಿ ಬೇಕಾದಾವು. ಕಾರಣ ಮುಂದೆಯೂ ಎತ್ತಿನ ಗಾಡಿಗಳಿಗೆ ಕಬ್ಬಿಣ ಸಲಾಕೆಯ ಚಕ್ರಗಳೇ ಇರುತ್ತವೆಂದು ಹೇಳಬರುವುದಿಲ್ಲ. ಸಾಗಿಸುವಿಕೆಯು ತ್ವರಿಯಾಗಬೇಕಾದರೆ ರಬ್ಬರಿನ ಟಾಯರು ಚಕ್ರಗಳು ಉಪಯೋಗಕ್ಕೆ ಬರಬಹುದು. ಆಗಲೇ ಡಾಮರು ಮಾರ್ಗಗಳಿರುವ ಪಟ್ಟಣಗಳಲ್ಲಿ ಇವು ಬಹು ಸಂಖ್ಯೆಯಲ್ಲಿ ಉಪಯೋಗಿಸಲ್ಪಡುತ್ತವೆ.

ರೈಲು ಮಾರ್ಗವಿಲ್ಲ

ಅನೇಕ ಜಿಲ್ಲೆಗಳಿಂದ ರೈಲು ಮಾರ್ಗ ಮುಂದುವರಿಸುವಿಕೆಗಾಗಿ ಸರಕಾರಕ್ಕೆ ವಿನಂತಿಗಳು ಹೋಗಿದ್ದುವು. ಅದು ಸಾಧ್ಯವಿಲ್ಲವೆಂದೂ ಸರಕಾರದವರು ನಿರಾಕರಿಸಿರುವರು.

ರೈಲು ಮಾರ್ಗಗಳ ಬದಲಿಗೆ ಮೋಟಾರು ಸರ್ವಿಸುಗಳು ಹೆಚ್ಚಬಹುದೆಂದು ಯೋಜನೆಗಾರರು ನಿರೀಕ್ಷಿಸಿ ಅವುಗಳ ದೃಷ್ಟಿಯಿಂದ ತಮ್ಮ ಯೋಜನೆಯನ್ನು ಕಲ್ಪಿಸಿರುವರು. ಹೀಗಾದರೂ ಕಲ್ಲಿನ ಮಾರ್ಗಗಳು ಮೋಟಾರು ವಾಹನಗಳಿಗೂ ಯೋಗ್ಯವಾದುವುಗಳಲ್ಲವಾಗಿರುತ್ತವೆ.

ಆದುದರಿಂದ ಹಳ್ಳಿಗಳಲ್ಲೂ ಉತ್ತಮ ತರಗತಿಯ ಮಾರ್ಗಗಳನ್ನು ಹಾಕಬೇಕು. ಹೆದ್ದಾರಿಗಳು ಆದಷ್ಟು ಕಡೆಗಳಲ್ಲಿ ಡಾರಿನಿಂದ ಮುಚ್ಚಿದವಿರಬೇಕು. ಮಾರ್ಗಗಳೆಲ್ಲವೂ ವರ್ಷದ ಯಾವ ಕಾಲದಲ್ಲೂ ಚಲಾವಣೆಗೆ ಅಯೋಗ್ಯವಾದವುಗಳಿರಬಾರದು—ಹೀಗೆಂದು ಬೇರೆ ಕೆಲವು ತಜ್ಞರ ಅಭಿಪ್ರಾಯವಿದೆ.

ಬ್ರಿಟಿಷರಿಂಗೆ ಭಾರತೀಯರ ಹೆದರಿಕೆ ಇದೆ
ಬ್ರಿಟನಿನ ದ್ವಿಮುಖಿ ಧೋರಣೆ
ಭಾರತದಿಂದ ವಿಶ್ವಶಾಂತಿ ಭಂಗ

ಅಮೇರಿಕದ ಜನರು ಭಾರತದ ವಿಚಾರವಾಗಿ ಹೆಚ್ಚೆಚ್ಚು ಅಭಿರುಚಿ ತಾಳುತ್ತಿರುವ ನಿದರ್ಶನವೆಂಬಂತೆ ಕಳೆದ ವಾರ ಅಮೇರಿಕನ್ ರೇಡಿಯೋ ಸಂಸ್ಥೆಗಳವರು ದೇಶ ವಿಶಾಲವಾಗಿ ಭಾರತ ಪ್ರಶ್ನೆಯನ್ನು ಚರ್ಚಿಸುವ ಒಂದು ಕಾರ್ಯಕ್ರಮವನ್ನು ಪ್ರಸರಿಸಿದರು.

ಬ್ರಿಟಿಷ್ ರಾಯಭಾರಿ ಕಛೇರಿಯ ಸರ್ ಫ್ರೆಡ್ರಿಕ್ ಪರ್ಸ್, ಅಮೇರಿಕದಲ್ಲಿ ಸಮತಾವಾದಿ ಪಕ್ಷದ ಮುಖಂಡರಾಗಿರುವ ಎಸ್. ಎಂ. ಅಹಮದ್ ಇವರೂ ಇತರ ಪ್ರಖ್ಯಾತ ಅಮೇರಿಕನ್ ಪ್ರತಿನಿಧಿಗಳೊಡನೆ ಭಾರತ ಚರ್ಚೆಯಲ್ಲಿ ಭಾಗವಹಿಸಿದರು.

ಒಳಗೆ ಸಮತಾವಾದಿ ಹೊರಗೆ ಸಾಮ್ರಾಜ್ಯವಾದಿ—ಬ್ರಿಟನ್ನು

ಮೇಲೆ ಹೇಳಿದ ಚರ್ಚೆಯ ಸಾರಾಂಶವು ಈ ಕೆಳಗಿನಂತಿದೆ:

ಮಿ। ಅಹಮ್ಮದ್: ಎಷ್ಟರ ತನಕ ಹಿಂದೂ ಕಾಂಗ್ರೆಸ್ ಪಾರ್ಟಿ (?) ಮುಸಲ್ಮಾನರ ಮತ್ತಿತರ ಅಲ್ಪ ಸಂಖ್ಯಾಕರ ಕಡೆಗೆ ಅಲಕ್ಷವನ್ನು ತೋರಿಸುತ್ತದೋ ಅದುತನಕ ಭಾರತವು ಸ್ವತಂತ್ರವಾಗಲಾರದು. ಬ್ರಿಟಿಷರು ತಮ್ಮ ಬಂಡವಾಳವನ್ನು ಅಲ್ಲಿಂದ ಸಾಗಿಸುತ್ತಿರುವರು (?) ಯುದ್ಧ ಕೈಗಾರಿಕೆಯಿಂದ ಇಂದು ಬ್ರಿಟಿಷರೇ ಭಾರತಕ್ಕೆ ಸಾಲ ಬಾಕಿಮಾಡಿದ್ದಾರೆ. ಆದುದರಿಂದ ಈಗಿನ ಬಿಕ್ಕಟ್ಟಿನಿಂದ ಅವರ 'ನಿದ್ರೆ' ಭಂಗವಾಗಲಾರದು. "ಹಿಂದೂ ಬ್ರಾಹ್ಮಣರು ಮತ್ತು ಮೇಲ್ಜಾತಿಯ ಹಿಂದುಗಳು ಬ್ರಿಟಿಷರ ಸಹಾಯದಿಂದ ಭಾರತದ ಸ್ವಾತಂತ್ರ್ಯವನ್ನು ತಡೆದಿಟ್ಟಿದ್ದಾರೆ.

ಮಿ। ಥೋಮಸ್: ಭಾರತದಲ್ಲಿ ಪಕ್ಷ ಕಲಹವಿದ್ದರೂ ಎಲ್ಲರೂ ಸ್ವಾತಂತ್ರ್ಯ ಪ್ರಶ್ನೆಯಮಟ್ಟಿಗೆ ಒಂದೇ ಆಗಿರುವರು. ಮಿಲಿಯಗಟ್ಟಲೆಯಲ್ಲಿ ಭಾರತೀಯರನ್ನು ಬರ್ಮಾ ಯುದ್ಧದಲ್ಲಿ ಉಪಯೋಗಿಸದಿದ್ದುದು ಬ್ರಿಟಿಷರು ಭಾರತೀಯರ ವಿಚಾರವಾಗಿ ಅದೆಷ್ಟು ಹೆದರಿಕೆಯುಳ್ಳವರಿದ್ದಾರೆ ಎಂಬ ವಿಷಯವು ತಿಳಿಯುತ್ತದೆ.

ಮಿ। ಸೆಲ್ಲರ್: ಸಿಂಹದ (ಹಿಟ್ಲರನ?) ಬಾಲವನ್ನು ಎಳೆಯುವುದು, ಅದರ ಕೇಸರವನ್ನು ಹಿಚುಕುವುದು ಸೊಂಟಾ ಸುಲಭದ ಕೆಲಸವಾದರೂ ಭಾರತವು ಬ್ರಿಟಿಷರ ಹೆಸರಿಗೆ ಒಂದು ಕಲಂಕ ತರುವಂತಿದೆ. ಬ್ರಿಟಿಷರು ತಮ್ಮ ದೇಶದಲ್ಲಿ ಮಾತ್ರ ಸಮತಾವಾದಿಗಳು. ಆದರೆ ವಿದೇಶದಲ್ಲಿ ಅವರು ಸಾಮ್ರಾಜ್ಯವಾದಿಗಳೇ ಆಗಿ ಉಳಿದಿದ್ದಾರೆ.

ಸರ್ ಫ್ರೆಡ್ರಿಕ್ ಪರ್ಸ್: ಎಷ್ಟು ಬೇಗ 'ಸಾಧ್ಯವೋ' ಅಷ್ಟು ಬೇಗ ಭಾರತಕ್ಕೆ ಸ್ವಾತಂತ್ರ್ಯ ಕೊಡುವುದು ಬ್ರಿಟಿಷರು ಪ್ರತಿಜ್ಞೆ ತೆಗೆದುಕೊಂಡಿದ್ದಾರೆ. ಆದರೆ ಮೊದಲು ಈ ಯುದ್ಧವು ಮುಗಿಯಬೇಕು.

ಮಿ। ಥೋಮಸರು: (ಪುನಃ) ಈ ಸಾಮ್ರಾಜ್ಯವಾದವು ಭಾರತವನ್ನು ಹಿಂದೆ ತಡೆದಿಟ್ಟಿದೆ ಮಾತ್ರವಲ್ಲ ಜಗತ್ತಿನ ಶಾಂತಿಗೆ ಭಂಗ ತಂದಿದೆ.

ಮಿ। ಸೆಲ್ಲರರು ಇನ್ನೊಂದು ಭಾಷಣದಲ್ಲಿ "ದಬ್ಬಾಳಿಕೆಯನ್ನು ನಿರ್ಮೂಲಿಸುವ ಅಧ್ಯಕ್ಷ ರೂಸವೆಲ್ಟರು ತಮ್ಮ ತತ್ವವನ್ನು ಭಾರತಕ್ಕೆ ಅನ್ವಯಿಸಬೇಕು" ಎಂದಿರುವರು. "ಅಲ್ಪ ಸಂಖ್ಯಾಕರ ಪ್ರಶ್ನೆಯು ಅಮೇರಿಕದಲ್ಲಿದ್ದಷ್ಟು ಹೆಚ್ಚಾಗಿ ಭಾರತದಲ್ಲಿಲ್ಲ. ಭಾರತದಲ್ಲಿರುವುದಕ್ಕಿಂತ ಹೆಚ್ಚು ಭಾಷೆಯವರು ಇಲ್ಲಿದ್ದರೂ ಅವರ ವಿಚಾರವಾಗಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗಿದೆ. ಅಂದ ಮೇಲೆ ಭಾರತದಲ್ಲಿ ಅದು ಹೆಚ್ಚು ಕಷ್ಟವಿರಲಾರದು."

1944
ಮೈಸೂರು ದಸರಾ ಪ್ರದರ್ಶನದಲ್ಲಿ
ಸುವರ್ಣಪದಕ ಪಡೆದ
ಮಂಗಳೂರು ನಾಮಾಂಕಿತ
ನಸ್ಯ
ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.
ಕರ್ನಾಟಿಕ ಸ್ನಫ್ ಎಂಡ್ ಬೀಡಿ ವರ್ಕ್ಸ್
ರಥಬೀದಿ—ಮಂಗಳೂರು
ನಮ್ಮ ಇತರ ವಿಶೇಷ ವ್ಯಾಪಾರಿಕೆಗಳ
ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ
ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು
ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು
CUTICURA SOAP

ಸ್ವದೇಶಾಭಿಮಾನಿ

ತಾರೀಕು 1—12—1944

ಮಾತೃ ಭಾಷೆಯಲ್ಲಿ ಉಚ್ಚ ಶಿಕ್ಷಣ

ಈಗಿನ ಕಾಲೇಜ್ ಶಿಕ್ಷಣದ ಕುಂದು ಕೊರತೆಗಳನ್ನು ವಿವರಿಸುತ್ತಾ ಮಾಜಿ ಕಾಂಗ್ರೆಸ್ ಪ್ರಧಾನರಾದ ಶ್ರೀ. ಸಿ. ರಾಜಗೋಪಾಲಾಚಾರ್ಯರು "ಕನಿಷ್ಠ ಪಕ್ಷ ಪಕ್ಷವಲ್ಲಿ ಹೈಸ್ಕೂಲು ಕಾಲೇಜು ಶಿಕ್ಷಣವು ಕಡ್ಡಾಯವಾಗಿ ಮಾತೃ ಭಾಷೆಯಲ್ಲಿ ಕಲಿಸಲ್ಪಟ್ಟರೆ ವಿದ್ಯಾರ್ಥಿಗಳ ಜ್ಞಾನ ಬೆಳವಣಿಗೆಗೆ ತುಂಬಾ ಸಹಾಯಕವಾಗುತ್ತದೆ" ಎಂದು ನಾಗಪುರ ವಿಶ್ವವಿದ್ಯಾಲಯದ ಪದವಿದಾನ ಸಮಾರಂಭ ಭಾಷಣದಲ್ಲಿ ಹೇಳಿದರು.

"ಸಾರ್ಜೆಂಟ್ ಸಾಹೇಬರು ತಮ್ಮ ಶಿಕ್ಷಣಯೋಜನೆಯಲ್ಲಿ ಈಗಿನ ವಿಶ್ವವಿದ್ಯಾಲಯ ಶಿಕ್ಷಣ ಧೋರಣೆಯು ದೇಶದ ಔದ್ಯೋಗಿಕ ಪರಿಸ್ಥಿತಿಯ ದಾವಾಶಯಕ್ಕೆ ಸಿಕ್ಕಿರುವುದರಿಂದ ನಿರುದ್ಯೋಗ ಹೆಚ್ಚಿದೆ" ಎಂದು ಹೇಳಿದ್ದಾರೆ. ನಿರುದ್ಯೋಗಕ್ಕೆ ದೇಶದ ಇಂದಿನ ರಾಜಕೀಯ ಮತ್ತು ಆರ್ಥಿಕ ದುರವಸ್ಥೆಗಳೇ ಕಾರಣವಲ್ಲದೆ ವಿಶ್ವವಿದ್ಯಾಲಯಗಳಲ್ಲ.

"ಸರಕಾರದ ಕಛೇರಿಗಳಲ್ಲಿನ ಕೆಲವು ಲಾಭದಾಯಕ ಉದ್ಯೋಗ ಸ್ಥಾನಗಳನ್ನು ಹಿಡಿಯುವುದಕ್ಕಾಗಿ ಅನುಕೂಲಸ್ಥರು ಕೆಲವರು ಕಾಲೇಜ್ ಪದವಿಗಳಿಗಾಗಿ ಪ್ರಯತ್ನಿಸುತ್ತಾರೆ, ಆದರೆ ಸರಕಾರವು ನೂರರಲ್ಲಿ ೩೦ ಪದವಿಧರರಿಗೆ ಮಾತ್ರ ಉದ್ಯೋಗ ಕೊಡುವುದು. ಅದರಲ್ಲೂ ಜಾತೀವಾರು ಕ್ರಮದಲ್ಲಿ ಅದು ಕೊಡಲ್ಪಡುವುದರಿಂದ ಆ ಸ್ಥಾನಗಳಲ್ಲಿ ಬರುವವರು ನಿಜವಾದ ಸಾಮರ್ಥ್ಯ ಯೋಗ್ಯತೆಯವರಿರುವುದಿಲ್ಲ. ಮಿಕ್ಕುಳಿದ ಶೇಕಡಾ ೭೦ ಮಂದಿಗಳು ಈ ಉದ್ಯೋಗ ಸ್ಪರ್ಧೆಯಲ್ಲಿ ಅಪಯಶಸ್ವಿಗಳಾಗಿ ನಿರಾಶೆಗೊಂಡು ಹೈಸ್ಕೂಲ್ ಪಾಸಾದವನಿಗೆ ಯೋಗ್ಯವಾದ ಸ್ಥಾನಗಳಲ್ಲಿ ಕೆಲಸಕ್ಕೆ ಸೇರುತ್ತಾರೆ. ಇದರಿಂದ ಹೈಸ್ಕೂಲು ಶಿಕ್ಷಣ ಮುಗಿಸಿದವರಿಗೆ ಕೆಲಸದ ಸಂದರ್ಭಗಳೇ ಇಲ್ಲದಂತಾಗಿ ಈ ಶಿಕ್ಷಿತ ನಿರುದ್ಯೋಗ ಹೆಚ್ಚಿದೆ.

"ತಾವು ಬರೇ ಹೈಸ್ಕೂಲಿನಷ್ಟೇ ಕಲಿತರೆ ತಮಗೆ ಕೆಲಸ ಸಿಗಲಾರದೆಂದು ಒಂದು 'ಡಿಗ್ರಿ' ಪಡೆಯುವ ಸಲುವಾಗಿ ತರುಣರು ಕಷ್ಟದಿಂದಾದರೂ ಕಲಿಯುತ್ತಾರೆ. ಆದರೆ ಡಿಗ್ರಿದಾರರಿಗೆ ಪ್ರತಿಯೋರ್ವನಿಗೆ ಕೆಲಸ ಸಿಗುವ ಹಾಗಿಲ್ಲ. ಆದುದರಿಂದ ಇದು ಯಶಸ್ಸಿನ ಭರವಸೆಯಿಲ್ಲದ ಒಂದು 'ಜುಗಾರಿ' ಆಟವೆಂತಲೂ ಹೇಳಬಹುದು. ಈ ಜೂಜಿನಲ್ಲಿ ಪಾರಿತೋಷಕ ಪಡೆಯುವವರಿಗಿಂತ ಸೋಲುವವರೇ ಹೆಚ್ಚು." ಹೀಗೆಂದು ರಾಜಾಜಿಯವರು ಸಂಕ್ಷೇಪವಾಗಿ ಪದವೀಧರರ ಪರಿಸ್ಥಿತಿಯನ್ನು ವಿವರಿಸಿದರು.

ಇನ್ನೊಂದು ಕಡೆಯಲ್ಲಿ ಅವರು ಹೀಗೆಂದರು:—ಉಚ್ಚ ಕಾಲೇಜ್ ಶಿಕ್ಷಣ ಪಡೆದವರು ಸಮಾಜದಲ್ಲಿ ಜ್ಞಾನ ಜಾಗೃತಿ ಮಾಡಬೇಕು. ಪ್ರಜಾಪ್ರಭುತ್ವ ತತ್ವಗಳನ್ನು ಪಸರಿಸಬೇಕು. ವಿರೋಧಿಗಳ ಅಭಿಪ್ರಾಯಕ್ಕೆ ಮನ್ನಣೆಯು ಕೊಡುವ ಭಾವವನ್ನು ಬೆಳೆಸಬೇಕು." ನಮ್ಮ ತರುಣರು ರಾಜಾಜಿಯ ಈ ಸಲಹೆಯನ್ನು ನೆರವೇರಿಸಲು ಪ್ರಯತ್ನಪಡಬೇಕು.

ರಾಜಾಜಿಯವರು ಶಿಕ್ಷಣಕ್ಕೆ ಸಂಬಂಧಪಟ್ಟ ಕೆಲವು ಅಂಕೆಸಂಖ್ಯೆಗಳನ್ನು ಕೊಟ್ಟಿರುವರು:

ನಮ್ಮ ದೇಶದಲ್ಲಿ ಹೈಸ್ಕೂಲ್ ಪಾಸಾದ ಪ್ರತಿ ೩ ವಿದ್ಯಾರ್ಥಿಗಳಲ್ಲಿ ಒಬ್ಬನು ಕಾಲೇಜಿಗೆ ಸೇರುತ್ತಾನೆ. ಆದರೆ ಶಿಕ್ಷಣ ವಿಚಾರದಲ್ಲಿ ಬಹಳ ಮುಂದುವರಿದ ದೇಶಗಳೆನಿಸಿದ ಬ್ರಿಟನ್ ಜರ್ಮನಿಗಳಲ್ಲಿ ಹೈಸ್ಕೂಲ್ ಪಾಸಾದ ೭ ಮಂದಿಯಲ್ಲಿ ಒಬ್ಬನು ಮಾತ್ರ ಕಾಲೇಜಿಗೆ ಸೇರುವನು. ಇಲ್ಲಿ ಉದ್ಯೋಗ ದೃಷ್ಟಿಯಿಂದ ಈ ಕಾಲೇಜ್ ನುಗ್ಗುವಿಕೆ ಉಂಟಾಗುತ್ತದೆ. ಆದರೆ ಆ ದೇಶಗಳಲ್ಲಿ ವೈಜ್ಞಾನಿಕ ಜ್ಞಾನ ಪ್ರಾಪ್ತಿಗಾಗಿ ಮಾತ್ರ ವಿಶ್ವವಿದ್ಯಾಲಯಗಳಿಗೆ ಹೋಗುವರು.

ಇಷ್ಟಾದರೂ ನಮ್ಮ ದೇಶದಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಪಡೆದವರು ಕಡಿಮೆ. ಜರ್ಮನಿಯಲ್ಲಿ ಪ್ರತಿ ೬೯೦ ಜನರಲ್ಲಿ ಒಬ್ಬ, ಇಂಗ್ಲೆಂಡಿನಲ್ಲಿ ೮೩೭ರಲ್ಲಿ ಒಬ್ಬ, ಅಮೇರಿಕದಲ್ಲಿ ೨೨೫ರಲ್ಲಿ ಒಬ್ಬ, ರಶ್ಯದಲ್ಲಿ ೩೦೦ರಲ್ಲಿ ಒಬ್ಬನಂತೆ ಕಾಲೇಜ್ ಶಿಕ್ಷಣ ಪಡೆದವರಿದ್ದಾರೆ. ಆದರೆ ನಮ್ಮ ದೇಶದಲ್ಲಿ ೨೨೦೬ರಲ್ಲಿ ಒಬ್ಬ ಮಾತ್ರ ಡಿಗ್ರಿದಾರನಿರುತ್ತಾನೆ.

ನಮ್ಮ ವಿಶ್ವವಿದ್ಯಾಲಯಗಳ ಕಾರ್ಯಕ್ರಮವು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಒಂದಾಗಬೇಕು. ಈ ನಿರುದ್ಯೋಗ, ಈ ಸ್ಪರ್ಧೆ, ವೈಯಕ್ತಿಕ ಸುಳಿಗೆಗಳು ಇಲ್ಲಬೇಕು. ಹೀಗಾದರೆ ಮಾತ್ರ ವಿಶ್ವವಿದ್ಯಾಲಯಗಳ ಅಮೋಘ ಕರ್ತವ್ಯವು ಪೂರ್ಣ ಫಲಿಸಿದಂತಾಗುತ್ತದೆ.

ವಿವಿಧ ಯುದ್ಧರಂಗಗಳಿಂದ

ಮಿತ್ರರು ತಾವು ನಿಯೋಜಿಸಿದ ಚಳಿಗಾಲದ ಮಹಾ ಅಭಿಯೋಗವನ್ನು ಈಗಲೆ ಪ್ರಾರಂಭಿಸಿರುವರು. ಹಾಲೆಂಡ್ ಮತ್ತು ಫ್ರಾನ್ಸ್ ಪ್ರದೇಶಗಳಿಂದ ಮಿತ್ರರ ದಂಡುಗಳೀಗ ಜರ್ಮನ್ ಪ್ರದೇಶದ ಮೇಲೆ ಹೋರಾಡುತ್ತಿರುವವು. ಸ್ವಿಸ್‌ಗಡಿಯಿಂದ ಮೊದಲಾಗಿ ಹಾಲೆಂಡ್ ಗಡಿಯವರೆಗೂ ೫೦೦ ಮೈಲು ಉದ್ದದಲ್ಲಿ ಮಿತ್ರರ ೬ ಪಡೆಗಳು ವೈರಿಯೊಡನೆ ಸ್ಪರ್ಧೆ ನಡೆದು ಆತನೊಡನೆ ಹೋರಾಡುತ್ತಾ ಮುಂದುವರಿಯುತ್ತಿರುವರು. ಪಶ್ಚಿಮ ರಂಗದ ಅನೇಕ ಪ್ರಮುಖ ಕ್ಷೇತ್ರಗಳೂ, ನಗರಗಳೂ ಮಿತ್ರರಿಂದ ಆಕ್ರಮಿಸಲ್ಪಟ್ಟಿವೆ. ಇವುಗಳಲ್ಲಿ ಮುಖ್ಯವಾದವುಗಳು ಬೆಲ್ಫರ್ಟ್, ಮೆಲೌಸ್, ಸ್ಟ್ರಾಸ್‌ಭರ್ಗ, ಮೆಟ್ಜ್ ಮತ್ತು ಸೆರ್ಬರ್ಗ. ಪುನರ್‌ರಚನೆಯಾದ ಫ್ರೆಂಚು ದಂಡುಗಳು ಶ್ಲಾಘನೀಯ ಕಾರ್ಯಸಿದ್ಧಿಯನ್ನು ಪಡೆದಿವೆ—ಎಲೆಸ ಮತ್ತು ಸ್ವಿಸ್ ಗಡಿಪ್ರದೇಶಗಳಲ್ಲಿ. ಒಟ್ಟಿನಲ್ಲಿ ಪಶ್ಚಿಮರಂಗದಲ್ಲಿ ಎಲ್ಲಾ ಕಡೆಗಳಿಂದ ಜರ್ಮನರು ರ್‍ಹೈನ್ ನದಿಯ ಕಡೆಗೆ ತಳ್ಳಲ್ಪಡುತ್ತಿದ್ದಾರೆ. ವೈರಿಯು ತನ್ನ ರಕ್ಷಣಾ ಏರ್ಪಾಡುಗಳನ್ನು ಇನ್ನೂ ಉತ್ತಮಪಡಿಸಲು ಅವಕಾಶ ದೊರಕದಂತೆ ಮಾಡುವ ಉದ್ದೇಶದಿಂದ, ಮಿತ್ರರು ಆತನಿಗೆ ಬಲವಾದ ಪೆಟ್ಟನ್ನು ಈಗಲೆ ಕೊಟ್ಟಿರುವರು.

ಮಿತ್ರರಿಗೆ ಹವಾಸ್ಥಿತಿಯಿಂದ, ಗುಡ್ಡ ಬೆಟ್ಟಗಳಿಂದ, ನದಿ ಕಾಡುಗಳಿಂದ, ಕಷ್ಟ ತೊಂದರೆಗಳು ವಿಶೇಷವಿದ್ದರೂ, ದೊಡ್ಡ ಸಿಡಿಗುಂಡುಗಳ ಅವರ ಸಂಗ್ರಹವು ಸ್ವಲ್ಪ ಕಡಿಮೆಯಿದ್ದರೂ, ಇವನ್ನೆಲ್ಲಾ ಲಕ್ಷ್ಯಸದೆ, ಕಾಲವಿಳಂಬವಾದರೆ ತಮ್ಮ ಕಾರ್ಯವಾಗದು, ವೈರಿಯು ಬೆನ್ನು ಮುರಿಯಲು ಇದೇ ಅನುಕೂಲ ಸಮಯವೆಂದು ಅವರು ಅಭಿಪ್ರಾಯ ಪಟ್ಟವರಾಗಿ, ಚಳಿಗಾಲದಲ್ಲಿ ವಿಶ್ರಮಿಸದೆ ಹೋರಾಟವನ್ನು ಮುಂದುವರಿಸಿರುವರು. ಆದರೆ ಮಿತ್ರರಿಗೆ ಸಿಗ್‌ಫ್ರಿಡ್ ಕೋಟೆಗಳ, ಬಲವಾದ ತಡೆಯೂ, ಅದಕ್ಕೆ ಸಮಾನಾಂತರವಾಗಿ ಹರಿಯುವ ರ್‍ಹೈನ್ ನದಿಯ ಆತಂಕ ಇವು ಮಹಾ ಪ್ರಯಾಸಗಳನ್ನು ತಂದೊಡ್ಡಬಹುದು. ಆದರೆ ಮಿತ್ರರ ಚೇತನವನ್ನೂ, ನಿರ್ಧಾರವನ್ನು ಕಂಡರೆ ಅವರು ಯಾವತ್ತೂ ತಂದ ಪರಿಶ್ರಮ ಪ್ರಯಾಸಗಳಿಗೆ ಬೇಕಾದ ಸಿದ್ಧತೆಗಳನ್ನು ಮಾಡಿಯೇ ಮುನ್ನಡೆದರಬೇಕೆಂದು ತಿಳಿಯಬೇಕಾಗಿದೆ.

ಮಿತ್ರರ ಈ ತರದ ಒತ್ತಡದ ಎದುರು ಜರ್ಮನರು ಹಿಂದೆ ಸರಿಯುತ್ತಿರುವರು. ಕೆಲವು ಕಡೆಗಳಲ್ಲಿ ಅವರು ರ್‍ಹೈನ್ ನದಿಯನ್ನು ದಾಟಿ, ಆಚೆದಡವನ್ನು ಸೇರಿರುವರೆಂದು ವರದಿಗಳಾಗಿವೆ. ರ್‍ಹೈನ್‌ನದಿಯ ಮೇಲೆ ೨೫ ಸಂಕಗಳಿವೆ. ಇವುಗಳನ್ನು ಭದ್ರವಾಗಿ ರಕ್ಷಿಸಲ್ಪಡುವ ಜರ್ಮನ್ ವ್ಯವಸ್ಥೆಗಳಿವೆ. ಈ ಸಂಕಗಳು ಜರ್ಮನರಿಂದ ಕೆಡವಲ್ಪಡಬಹುದು. ಅವು ಕೆಡವಲ್ಪಟ್ಟರೂ ರ್‍ಹೈನ್ ನದಿಯನ್ನು ದಾಟಲು ಮಿತ್ರರೊಡನೆ ಸಕಲಉಪಾಯ ಸಲಕರಣೆಯಿರುವವು. ಎತ್ತರವಾದ ಪರ್ವತಗಳು, ಆಳವಾದ ನದಿಗಳು ದಟ್ಟವಾದ ಅರಣ್ಯಗಳು ಮಹಾ ಸಾಗರಗಳು, ಆಧುನಿಕ ಯುದ್ಧ ಕ್ರಮಗಳಿಗೆ ಇಡೇ ಅಲ್ಲವೆಂಬುದು, ರಷ್ಯಾರಂಗದಲ್ಲಿ, ಆಫ್ರಿಕಾ ಪ್ರದೇಶದಲ್ಲಿ ನಂತರ ಇಟಲಿಯಲ್ಲಿ ನಡೆದ ಹೋರಾಟದಿಂದ ವಿಶದವಾಗಿದೆ. ರ್‍ಹೈನ್ ನದಿಯು ದಾಟಲ್ಪಟ್ಟ ಮೇಲೆ ಮಿತ್ರರ ಅಭಿಯೋಗಕ್ಕೆ ಹೆಚ್ಚಿನ ತಡೆಗಳು ದೊರಕವು. ನಂತರ ಜರ್ಮನಿಯನ್ನು ಆಕ್ರಮಿಸುವ ಕೆಲಸವು ಅತ್ಯಂತ ಸುಲಭವೆನಿಸಬಹುದು.

ಆದರೆ ಜರ್ಮನರು ಧೃತಿಗೆಟ್ಟಂತೆ ಕಾಣುವುದಿಲ್ಲ. ತಮ್ಮ ತಡೆಯ ಬಲವನ್ನು ವೃದ್ಧಿಕರಿಸಲು ಅವರು ಪರಿಶ್ರಮಿಸುತ್ತಿರುವರು. ಕಾಲವಕಾಶವನ್ನು ದೊರಕಿಸಿಕೊಂಡು, ಜರ್ಮನಿಯೊಳಗೆ ಕೊಮುನಿಷ್ಟ ಪ್ರಭಾವವನ್ನು ಬೆಳೆಯಿಸಿ, ಆ ಮೂಲಕ ಜರ್ಮನ್ ರಾಷ್ಟ್ರ ರಕ್ಷಣೆಗಯ್ಯುವುದೆ, ಅವರ ಸದ್ಯದ ಯುದ್ಧ ನೀತಿಯಾಗಿರಬಹುದೆಂದು ತಜ್ಞರ ಅಭಿಪ್ರಾಯವು. ೧೯೧೪—೧೮ ಯುದ್ಧದಲ್ಲಿ ಮೊಳೆತ ಕಮ್ಯುನಿಷ್ಟ ಸಸಿಯು, ಈ ಎರಡನೆ ಮಹಾಯುದ್ಧದಿಂದ ಪುಷ್ಟಿಹೊಂದಬಹುದು. ಈ ಬಗ್ಗೆ ನಿದರ್ಶನಗಳು, ವಿಮುಕ್ತಗೊಳಿಸಲ್ಪಟ್ಟ ಫ್ರಾನ್ಸ್, ಬೆಲ್ಜಿಯಮ್ ಕಡೆಗಳಲ್ಲಿ ಈಗಲೆ ಕಾಣಿಸಿಕೊಂಡಿವೆ. ಇನ್ನು ಜರ್ಮನಿಯು ಕೊಮ್ಯುನಿಸ್ಟಾಗಿ ಮಾರ್ಪಡುವುದಾದರೆ ಒಂದನೆ ಯುದ್ಧದ ದೆಸೆಯಿಂದ ಹುಟ್ಟಿದ ಕೊಮ್ಯುನಿಷ್ಟವಾದವು ಎರಡನೆ ಯುದ್ಧದ ದೆಸೆಯಿಂದ ಬೆಳೆದಂತಾಗುವುದು.

ಚಳಿಗಾಲದ ಅಭಿಯೋಗದ ಬಗ್ಗೆ ಕೆಂಪು ಸೇನೆಯ ಸಿದ್ಧತೆಗಳೆಲ್ಲಾ ಪೂರ್ಣವಾಗಿದ್ದು, ಅದೀಗ ಜರ್ಮನಿಯ ಕಡೆ ಮುಂದುವರಿಯುತ್ತಿದೆ. ಮಧ್ಯ ಪೋಲೆಂಡದಲ್ಲಿ ಅವರ ಚಟುವಟಿಕೆಗಳು ಪ್ರಾರಂಭವಾಗಿವೆ. ಹಂಗೇರಿಯಲ್ಲಿ ಸ್ಥಿತಿಯು ಕೆಂಪು ಸೇನೆಗೆ ಅನುಕೂಲವೆಯಿದ್ದು, ಅವರು ಆಸ್ಟ್ರಿಯವನ್ನು ಸದ್ಯದಲ್ಲೆ ಆಕ್ರಮಿಸಬಹುದೆಂದು ಮಿಲಿಟರಿ ಪ್ರವೀಣರ ಅಭಿಪ್ರಾಯವಿರುತ್ತದೆ. ಪೂರ್ವರಂಗದಲ್ಲೆಲ್ಲಾ ಕೆಂಪುಸೇನೆಯು ಚೇತನಗೊಂಡಿದೆ,—ಈ ಕಡೆಗಳಿಂದ ವಿಜಯ ವಾರ್ತೆಗಳನ್ನು ನಾವು ನಿರೀಕ್ಷಿಸಬಹುದು.

ಪಶ್ಚಿಮರಂಗದಿಂದ ಡೆಮೊಕ್ರೆಟಿಕ್ ಮಿತ್ರರು ಜರ್ಮನಿಯನ್ನು ಆಕ್ರಮಿಸಿ ಮುನ್ನಡೆಯುತ್ತಿರುವಾಗ, ಪೂರ್ವರಂಗದಿಂದ ಕೊಮ್ಯುನಿಷ್ಟ ರಷ್ಯವು ಜರ್ಮನಿಯ ಒಳಗೆ ಮುನ್ನಡೆಯುತ್ತಿರುತ್ತದೆ. ಡೆಮಾಕ್ರೆಟ್—ಕೊಮ್ಯುನಿಷ್ಟ ಬಲವ ಜರ್ಮನಿಯ ರಾಜಧಾನಿ ಬರ್ಲಿನ ನಗರದಲ್ಲಾಗಬಹುದು. ಜರ್ಮನಿಯ ಆಕ್ರಮಣದ ಬಗ್ಗೆ ಮಿತ್ರರು ಒಪ್ಪಿಗೆಯ ನಿರ್ಧಾರಗಳಿಗೆ ಬಂದಿರುವರಾಗಿಯೂ, ಆ ಕುರಿತು ಯೋಜನೆಯೊಂದು ಸಿದ್ಧವಾಗಿದೆ ಎಂದು ತಿಳಿದುಬಂದಿದೆ.

ಹತಾಶ ಪುರುಷನ ಕೊನೆಯ ಯತ್ನಗಳಂತೆ ಜರ್ಮನಿಯಿಂದ ವಿ. 2 ಎಂಬ ಕ್ರೂರತರದ ಲಯಾತ್ಮಕ ಶಸ್ತ್ರಗಳು ಹೊರಡುತ್ತಿವೆಯಾದರೂ ಅದರಿಂದ ಇಂಗ್ಲಾಂಡಿನ ಕೆಲವು ಪ್ರದೇಶಗಳ ಮೇಲೆ ಹಾವಳಿ ನಡೆಯುತ್ತಿದೆಯಾದರೂ,—ಇವುಗಳು ಬಹಳ ದೀರ್ಘ ಸಮಯ ನಡೆಯಲಾರವು ಎಂದು ತಿಳಿಯಬೇಕಾಗಿದೆ. ಒಂದಾನೊಂದು ದಿನ ಮಾನವ ಅಭ್ಯುದಯವನ್ನು ಸಾಧಿಸುವ ಕಾರ್ಯದಲ್ಲಿ ನಿರತರಾದ ಪ್ರಸಿದ್ಧ ಜರ್ಮನ ವಿಜ್ಞಾನಿಗಳು, ಈಗ ಲಯಾತ್ಮಕ ಕಾರ್ಯಗಳನ್ನು ನಡೆಯಿಸುವ ಕುರಿತು ಹಗಲಿರುಳು ದುಡಿಯುತ್ತಿರುವರು.

ಶಾಂತಸಾಗರದಲ್ಲಿ—ಜಪಾನಿ ದ್ವೀಪಗಳ ಮೇಲೆ ಮಿತ್ರರ ವಾಯುಬಲದ ಹೊಡೆತವು ವೃದ್ಧಿಯಾಗುತ್ತಿದೆ. ಮಹಾಲಯಕಾರಿ, ಮತ್ತು ದೀರ್ಘ ಸಮಯ ಹಾರಾಡಬಲ್ಲ, ಅಮೇರಿಕನ್ ವಿಮಾನ ಬಲದ 'ಹಾರುವ ಕೋಟೆ'ಗಳು, ಜಪಾನಿನ ರಾಜಧಾನಿಯಾದ ಟೋಕಿಯೋ ಪಟ್ಟಣದ ಮೇಲೂ, ಜಪಾನಿನ ವಿಮಾನ ಸಿದ್ಧಪಡಿಸುವ ದೇಶಗಳ ಮೇಲೂ, ಬಾಂಬಿನ ಸುರಿಮಳೆ ಕರೆದಿವೆ. ಅಮೇರಿಕನ್ ಬಾಂಬುಗಳಿಂದ ಟೋಕಿಯೊ ನಗರದ ಅನೇಕ ಕಟ್ಟಡಗಳು, ಇತ್ಯಾದಿ ಧ್ವಂಸವಾಗಿವೆ ಮಾತ್ರವಲ್ಲ. ಅವುಗಳು ಅಗ್ನಿಗೆ ಆಹುತಿಯಾಗುತ್ತಿವೆ. ಈ ಪರಿಸ್ಥಿತಿಯು ಒದಗದಂತೆ ಜಪಾನಿಯರಿಂದ ನಡೆಯಿಸಲ್ಪಟ್ಟ ಯತ್ನಗಳು ನಿಷ್ಫಲವಾಗಿವೆ.

ಆದರೆ ಉತ್ತರದಲ್ಲಿ ಮಂಚೂರಿಯಾದಿಂದ ದಕ್ಷಿಣದಲ್ಲಿ ಹಾಂಗ್‌ಕಾಂಗಿನ ವರೆಗಿನ ಚೀನಾದ ಪ್ರದೇಶ ಕರಾವಳಿಯು ಯಾವತ್ತು ಕಡಿತಗಳಿಲ್ಲದೆ, ಜಪಾನಿಯರ ವಶವಾಗಿದೆ. ಈ ಕಾರಣದಿಂದ ಇಂಡೊಚೀನಾ, ಥೈಲೆಂಡ್, ಸಿಂಗಾಪುರ, ಮಲಯಾ, ಸುಮಾತ್ರಾ, ಜಾವಾ, ಇತ್ಯಾದಿ ಪ್ರದೇಶಗಳನ್ನು ರಕ್ಷಿಸಿಕೊಳ್ಳಲು ಜಪಾನಿಗೆ ಅನುಕೂಲ. ಅತಿ ಭದ್ರವಾದ ಅಡಿಗಟ್ಟು ದೊರಕಿ ದಕ್ಷಿಣ ಚೀನವನ್ನು ರಕ್ಷಿಸಿಕೊಳ್ಳಲು ಚೀನಿಯರು ಬಹಳ ಪ್ರಯಾಸಗೊಂಡಿದ್ದರೂ,—ಯಾವತ್ತೂ ಫಲವನ್ನು ಪಡೆಯದೆ ಹಿಂದೆ ಸರಿಯಬೇಕಾಯಿತು.

ಆದರೆ ಚಿಯಾಂಗರು ಮಿತ್ರರ ಸಹಕಾರದ ಸಹಾನುಭೂತಿಯಿಂದ ಜಪಾನನ್ನು ವಿರೋಧಿಸಲು ಮಹಾಯತ್ನಗಳನ್ನು ಮಾಡುತ್ತಿರುವರು. ಉತ್ತರ ಬರ್ಮವು ಮಿತ್ರರಿಂದ ಆಕ್ರಮಿಸಲ್ಪಟ್ಟು, ಆದರಿಂದ ಬರ್ಮ ರಸ್ತೆಯ ಹಿಡಿತವು ದೊರಕಿ, ಚೀನಾಕ್ಕೆ ಬೇಕಾದ ಸಹಾಯವನ್ನು ಕಳುಹಿಸುವ ಸೌಲಭ್ಯವು ಸದ್ಯದಲ್ಲೆ ದೊರಕಬಹುದು. ಆದರೆ ಜಪಾನಿಯರನ್ನು ಓಡಿಸುವ ಯತ್ನಗಳನ್ನು ಮಾಡುವರೆ ಚೀನಿಯರಿಗೆ—ಚಿಯಾಂಗರಿಗೆ ಅನೇಕ ಅನಾನುಕೂಲತೆಗಳು ಇವೆಯಾಗಿ ತಿಳಿದುಬಂದಿದೆ. ಆದರೆ ತಮ್ಮನ್ನು ಪೀಡಿಸುವ ಈ ಜಪಾನಿ ರೋಗ ಚಟವನ್ನು ನಿವಾರಿಸಿಕೊಳ್ಳಲು ಅವರು ಅವಿಶ್ರಾಂತವಾಗಿ ದುಡಿಯುತ್ತಿರುವರು.

ಚೀನಾವನ್ನು ಇಬ್ಭಾಗಿಸುವ ಜಪಾನಿಯರ ಕಾರ್ಯವು [illegible]ಯಾಗಿರುವುದು. ಭದ್ರವಾದ ಕೋಟೆ ಕೊತ್ತಳಗಳಿರುವ ಚೀನಾದ ಕರಾವಳಿ ಪ್ರದೇಶವು ಅವರ ಕೈಗಳಿಗೆ ಸೇರಿರುವುದು. ಮಂಚೂರಿಯಾದಿಂದ ಹಾಂಗ್‌ಕಾಂಗ್ ಕಡೆಗೆ ಬೇಕಾದ ಯುದ್ಧ ಸಾಮಗ್ರಿ ಇತ್ಯಾದಿಗಳನ್ನು ಪೂರೈಸಲು, ಅವರಿಗೆ ಅನುಕೂಲವಾದ ನೆಲಮಾರ್ಗವು ದೊರೆತಿರುವುದು. ಹೀಗೆ ಅನೇಕ ಅನುಕೂಲತೆಗಳಿಂದ ಕೂಡಿದ ಜಪಾನನ್ನು ಪೂರ್ಣ ಸೋಲಿಸಲು ೬ ವರ್ಷಗಳ ಸಮಯ ಬೇಕಾಗುವುದೆಂದು ಓರ್ವ ಪ್ರವೀಣರು ಅಭಿಪ್ರಾಯಪಡುತ್ತಿರುವರು. ಆದರೆ ರಶ್ಯವು ಮನಸ್ಸು ಮಾಡಿ, ಆಸ್ಯಪ್ರದೇಶದಲ್ಲಿ ಮಂಚೂರಿಯದ ಕಡೆಯಲ್ಲಿ ಜಪಾನಿಯರಿಗೆ ವಿರೋಧವಾಗಿ ಯುದ್ಧ ಹೂಡಿದರೆ, ಆಗ ಎರಡೆ ವರ್ಷಗಳಲ್ಲಿ ಜಪಾನನ್ನು ಸೋಲಿಸಬಹುದೆಂದು ಇದೆ ತಜ್ಞರ ಅಭಿಪ್ರಾಯವಿರುತ್ತದೆ.

ಜರ್ಮನಿಯನ್ನು ತನ್ನ ದೇಶದಿಂದ ಹೊರದೋಡಿಸುವ ಕಾರ್ಯವು ತನಗಿರುವುದರಿಂದ, ಕೆಂಪು ನಾಯ

(೧೧ನೇ ಪುಟಕ್ಕೆ ಮುಂದುವರಿದಿದೆ)

ಜಿಲ್ಲಾ ಸಮಾಚಾರಗಳು

ಮಂಗಳೂರು

ಕಲೆಕ್ಟರರ ಪ್ರಕಟಣೆ
ಅಕ್ಕಿ ಬತ್ತ ಕೊಡುವ ಎಚ್ಚರಿಕೆ

"ಇಷ್ಟರೊಳಗೆ ಇಡೀ ಜಿಲ್ಲೆಯ ಬೆಳೆ ಕಟಾವಿನ ಕೆಲಸವು ಮುಗಿದಿರುವುದರಿಂದ ಆಯಾ ತಹಶೀಲ್ದಾರರು ಕೃಷಿವ್ಯವಸಾಯಗಾರರಿಂದ ಅವರು ತಲುಪಿಸಬೇಕಾದ ಮಾಮೂಲಿನ ಬೆಳೆ ಪಾಲನ್ನು ಪಡೆಕೊಳ್ಳಬೇಕು ಎಂದು ತಿಳಿದುಕೊಳ್ಳಲಾಗುತ್ತದೆ. ಏಕೆಂದರೆ ಬೆಳೆ ಕಟಾವಾದ ಇಲ್ಲವೆ ಆ ಕುರಿತು ಕಲೆಕ್ಟರರ ಆಜ್ಞೆಯು ಪ್ರಕಟಿಸಲ್ಪಟ್ಟ ೧೪ ದಿನದೊಳಗಾಗಿ ಆ ವಿವರಗಳನ್ನು ತಲುಪಿಸಬೇಕಾಗಿ ಹುಕುಂ ಹೊರಡಿಸಲಾಗಿತ್ತು. ಇದು ಅತ್ಯಂತ ಪ್ರಾಮುಖ್ಯವಾದ ವಿಷಯ.

ತಪ್ಪಿತಸ್ಥರಿಗೆ ಶಿಕ್ಷೆ

ಇಷ್ಟರೊಳಗೆ ಜಮೀನ್ದಾರರೂ, ಒಕ್ಕಲುಗಳೂ ತಮ್ಮ ಬೆಳೆ ವಿವರದ ಪಟ್ಟಿಗಳನ್ನು ತಲುಪಿಸದಿದ್ದಲ್ಲಿ ಎಲ್ಲಾ ಹಳ್ಳಿಗಳಿಗೂ ಎಚ್ಚರಿಕೆ ಕೊಟ್ಟ ಮೇಲೆ ಅವರನ್ನು ಶಿಕ್ಷೆ ವಿಚಾರಣೆಗೆ ಒಳಪಡಿಸುವ ಕೆಲಸವನ್ನು ಕೈಕೊಳ್ಳಲಾಗುವುದು. ಆಯಾ ಪ್ರದೇಶದ ತಹಶೀಲ್ದಾರರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಯಾವದೊಂದು ತರದ ಅಸಡ್ಡೆ ಅಲಕ್ಷ್ಯತೋರಿಸಿದ್ದು ವ್ಯಕ್ತವಾದಲ್ಲಿ ಆಹರಿಂದ ಮುಖ್ಯ ಆಹಾರ ಶೇಖರಿಸುವಿಕೆಗೆ ತುಂಬಾ ಧಕ್ಕೆ ಇರುವುದರಿಂದ–ಅವರನ್ನೂ ಕಠಿಣ ವ್ಯವಹಾರಕ್ಕೆ ಗುರಿಮಾಡಲಾಗುವುದು.

ಅಕ್ಕಿ ಅವಧಿ

ಬತ್ತ ಮತ್ತು ಅಕ್ಕಿಯ ಮೊದಲನೇ ಕರೆತನ್ನು ತಲುಪಿಸುವ ಅವಧಿಯನ್ನು ಆಗಲೇ ೩೦.೧೧.೪೪ ರಿಂದ ೧೫–೧೨–೪೪ಕ್ಕೆ ಮುಂದುವರಿಸಲಾಗಿದೆ. ರೈತರಿಗೆ ಈ ಅವಧಿಯ ಅನುಕೂಲತೆ ಸಂಪೂರ್ಣ ಪಡೆಯಬಿಡಬಹುದು. ಆದರೆ ಬತ್ತವನ್ನು ತಾ. ೧–೧೨–೧೯೪೪ರ ನಂತರ ಯಾವ ಅಕ್ಕಿ ಬತ್ತ ಸ್ವೀಕರಿಸುವ ಕೇಂದ್ರದಲ್ಲಿ ಸ್ವೀಕರಿಸಬಾರದು. ಈ ತಾರೀಕಿನ ನಂತರದ ತಲುಪಿಸುವಿಕೆಗಳು ಬರೀ ಅಕ್ಕಿ ರೂಪದಲ್ಲಿ ಮಾತ್ರವಿರಬೇಕು. ಇದು ಗಮನಿಸಬೇಕಾದ ಮುಖ್ಯ ವಿಷಯ.

ವಿಶೇಷ ಸಂದರ್ಭಗಳಲ್ಲಿ

ಸುಳ್ಯ, ಕಾಸರಗೋಡು, ಹೊಸದುರ್ಗಗಳಿಗೆ ಸಂಬಂಧಿಸಿದ ಕೆಲವು ಹಳ್ಳಿ ಪ್ರದೇಶಗಳಲ್ಲಿ ಗೇಣಿಯನ್ನು ಬತ್ತರೂಪದಲ್ಲೇ ಪಡೆಯುವ ಪದ್ಧತಿಯಿರುವಲ್ಲಿ ಮಾತ್ರ ಬತ್ತವನ್ನೇ ತೆಗೆದುಕೊಳ್ಳಲಾಗುವುದು—ಅಕ್ಕಿಯನ್ನೇ ಕೊಡಬೇಕೆಂಬ ಒತ್ತಾಯವಿಲ್ಲ. ಇಂತಹ ವಿಶೇಷ ಪದ್ಧತಿ ಕ್ರಮವಿರುವ ಜಿಲ್ಲೆಯ ಇತರ ಭಾಗಗಳಲ್ಲೂ ಇದೇ ಅಕ್ಕಿ ಒತ್ತಾಯವಿಲ್ಲದೆ ಬತ್ತ ಪಡೆಯುವ ಧೋರಣೆಯು ಒಂದು ಸ್ಪೆಶಲ್ ಸಂದರ್ಭವೆಂಬುದಾಗಿ ತಿಳಿದು ಅನ್ವಯಿಸಲಾಗುವುದು.

ಅವಧಿ ತಪ್ಪಿದ ಅಕ್ಕಿ ಬೆಲೆ

"ಪುನಃ ತಿಳಿಯಪಡಿಸುವುದೇನೆಂದರೆ–ಅವಧಿ ಹೆಚ್ಚಿಸಿದ ಸಮಯದಲ್ಲಿ ಕೊಡಲ್ಪಟ್ಟ ಅಕ್ಕಿ ಬತ್ತಗಳಿಗೆ ಹಿಂದೆ ನಿರ್ಧರಿಸಿದ ಬೆಲೆಯೇ ಕೊಡಲಾಗುವುದು (ಈ ಅವಧಿಯಲ್ಲಿ ಬತ್ತಕ್ಕೆ ಆಣೆಲ, ಅಕ್ಕಿಗೆ ರೂ೧. ಕಡಿಮೆಮಾಡಿ ಕೊಡಲಾಗುವುದಿಲ್ಲ.)

"ಆದರೆ ಮುಂದುವರಿಸಿದ ಅವಧಿ ನಂತರ ತಲುಪಿಸಲಾಗುವ ಬತ್ತ, ಅಕ್ಕಿಗಳಿಗೆ ಮುಡಿಯಲ್ಲಿ ಕ್ರಮವಾಗಿ ಆಣೆಲ. ಮತ್ತು ರೂ. ೧ ಕಡಿಮೆ ಬೆಲೆ ಕೊಡಲಾಗುವುದು."

ಎಲ್ಲಾ ಕಡೆಯಲ್ಲೂ ಒಂದೇ ಬೆಲೆ

"ಪ್ರಾಂತ್ಯ ಸರಕಾರ ಆಹಾರ ಖಾತೆಯ ಹುಕುಂ ಮತ್ತು ಜಿಲ್ಲಾ ಫುಡ್ ಕೌನ್ಸಿಲ್ ನಿರ್ಣಯ ಪ್ರಕಾರ ಎಲ್ಲಾ ಅಕ್ಕಿ ಬತ್ತ ಸ್ವೀಕಾರ ಡಿಪೋಗಳಲ್ಲಿ ಕೊಡಲ್ಪಡುವ ಅಕ್ಕಿ ಬತ್ತಗಳಿಗೆ ತಾಲೂಕು ಕೇಂದ್ರದಲ್ಲಿ ಕೊಡಲಾಗುವ ಬೆಲೆಯನ್ನೇ ಕೊಡಲಾಗುವುದು. ಅಂದರೆ ತಾಲೂಕು ಮುಖ್ಯ ಪಟ್ಟದಲ್ಲಿ ಬೇರೆ ಬೇರೆ ತರದ ಅಕ್ಕಿಗಳಿಗೆ ಯಾವ ಬೆಲೆ ಕೊಡಲಾಗುವುದೊ ಅದೇ ಬೆಲೆ ಎಲ್ಲಾ ಹಳ್ಳಿಯಲ್ಲಿನ (ಎಸ್. ಕೆ. ಪಿ. ಸಿ.) ಅಕ್ಕಿ ಬತ್ತ ಸ್ವೀಕಾರ ಡಿಪೋಗಳಲ್ಲೂ ಕೊಡಲಾಗುವುದು. ಈ ಹುಕುಂ ತಾ. ೧–೧೨–೪೪ರಿಂದ ಜ್ಯಾರಿಗೆ ಬರುತ್ತದೆ.

ಇದರ ಮುಂಚೆ ಹಳ್ಳಿ ಡಿಪೋಗಳಲ್ಲಿ ಮುಡಿಗೆ ಸ್ವಲ್ಪ ಕಮ್ಮಿ—ಅಂದರೆ ತಾಲೂಕು ಪಟ್ಟಗಳಲ್ಲಿ ಕೊಡುತ್ತಿರುವುದಕ್ಕಿಂತ ಕಡಿಮೆ–ಬೆಲೆ ಕೊಡಲಾಗುತಿತ್ತು. ಸದ್ರಿ ಎಸ್. ಕೆ. ಪಿ. ಸಿ. ಹೋಲ್ ಸೇಲ್ ಸ್ಟೋರ್ಸಿನ ಅಧಿಕಾರಿಗಳು ತಮ್ಮ ಕೈಕೆಳಗಿನ ಸಂಸ್ಥೆಗಳಿಗೆಲ್ಲಾ ಜರೂರು ಈ ವಿಷಯ ತಿಳಿಸಬೇಕು.

ಸರಿಯಾಗಿ ಪ್ರಚಾರವಾಗಲಿಲ್ಲ
ಫುಡ್ ಕೌನ್ಸಿಲಿನ ನಿರ್ಣಯಗಳು

ದಕ್ಷಿಣ ಕನ್ನಡ ಜಿಲ್ಲಾ ಫುಡ್ ಕೌನ್ಸಿಲು ಕಲೆಕ್ಟರರ ಆಫೀಸಿನಲ್ಲಿ ತಾ. ೨೦–೧೧–೧೯೪೪ರಲ್ಲಿ ಸೇರಿತ್ತು. ಅದರಲ್ಲಿ ನಿರ್ಣಯಿಸಿದ, ಸೂಚಿಸಿದ ವಿಷಯಗಳ ಕುರಿತು ಕಲೆಕ್ಟರರ ಬಂದು ಪ್ರಕಟಣೆಯಲ್ಲಿ ಈ ಕೆಳಗಿನ ವಿಚಾರಗಳಿವೆ:

ಆಹಾರ ಶೇಖರಿಸುವ ಕೆಲಸವು ಭರದಿಂದ ಸಾಗುತ್ತಿದೆ. ಹೊರಗಿನಿಂದ ಇನ್ನೂ ಆಹಾರ ಪದಾರ್ಥಗಳು ಬರಲಿವೆ. ಜಮೀನ್ದಾರರು ಎಲ್ಲಾ ಸಮಯದಲ್ಲಿನ ತಮ್ಮ ಗೇಣಿಯಲ್ಲಿನ ಮಿಗಿತಾಯದ ಅಂಶವನ್ನು ತಲುಪಿಸಬೇಕಾದುದರ ಅವಶ್ಯಕತೆಯ ಸರಕಾರದ ಹುಕುಮನ್ನು ಕಲೆಕ್ಟರರು ತಿಳಿಸಿದರು.

ಪುನಃ ಪ್ರಕಟಣೆ

ಒಂದಕ್ಕಿಂತ ಹೆಚ್ಚು ಹಳ್ಳಿಗಳಿಂದ ಗೇಣಿ ಪಡೆಯುವವರು, ಕೃಷಿ ಪ್ರದೇಶದ ಮ್ಹಾಲಿಕರು ತಾಲೂಕು ಕಛೇರಿಗೆ ಬೇರೆ ಬೇರೆ ಹಳ್ಳಿಗಳಲ್ಲಿರುವ ತಮ್ಮ ಆಸ್ತಿ, ಅದರ ವಿಶಾಲತೆ, ಉತ್ಪತ್ತಿ, ಒಕ್ಕಲುಗಳ ಹೆಸರು, ಮುಂತಾದ ವಿವರಗಳನ್ನು ಕೊಡಬೇಕೆಂದು ತಿಳಿಸುವ ಕಲೆಕ್ಟರರ ಪ್ರಕಟಣೆಯು ಹೆಚ್ಚಿನ ಜನರಿಗೆ ಇನ್ನೂ ಸರಿಯಾಗಿ ತಿಳಿಯುವಂತಾಗಿಲ್ಲ ಎಂಬ ವಿಷಯವನ್ನು ಕೌನ್ಸಿಲಿನವರು ಕಲೆಕ್ಟರರಿಗೆ ತಿಳಿಸಿದರು. ಕಲೆಕ್ಟರರು ಆ ಪ್ರಕಟಣೆಯನ್ನು ಪುನಃ ವಿಸ್ತಾರವಾಗಿ ಪ್ರಕಟಿಸುವಂತೆ ರೆವಿನ್ಯೂ ಆಫೀಸರರುಗಳಿಗೆ ಅದನ್ನು ಪುನಃ–ಮುಖ್ಯವಾಗಿ ಹಳ್ಳಿ ಪ್ರದೇಶಗಳಲ್ಲಿ–ಪ್ರಕಟಿಸುವಂತೆ ತಿಳಿಸುವುದಾಗಿ ಒಪ್ಪಿಕೊಂಡರು.

ಮೇಲೆ ಕಾಣಿಸಿದ ಬತ್ತ ಅಕ್ಕಿ ಅವಧಿಯ ವಿಚಾರವನ್ನು ಕಲೆಕ್ಟರರು ವಿವರಿಸಿದಾಗ, ಕೌನ್ಸಿಲು ಸಮ್ಮತಿ ಪಟ್ಟಿತು.

ತರಾವರಿ ಅಕ್ಕಿ, ರಾಗಿ ಬೆಲೆ

ಸರಕಾರದ ರೆವಿನ್ಯೂ ಬೋರ್ಡಿನವರು ಒಂದನೇ ಎರಡನೇ ತರಗತಿಯ ಅಕ್ಕಿ ರಾಗಿಗಳ ಬೆಲೆಯನ್ನು ನಿರ್ಧರಿಸಿದ ಬೆಲೆಯ ಕುರಿತು ಕಲೆಕ್ಟರರು ಕೌನ್ಸಿಲಿನ ಅಭಿಪ್ರಾಯ ಕೇಳಿದರು. ಅಂದರೆ ಅಕ್ಕಿ ರಾಗಿಗಳಿಗೆ ಅವುಗಳ ಉತ್ಪತ್ತಿ ಸ್ಥಳದಲ್ಲೇ ಎಷ್ಟು ಬೆಲೆ ಕೊಡಬೇಕೆಂಬ ವಿಷಯದ ಕುರಿತು ಈ ಅಭಿಪ್ರಾಯ ಕೇಳಲಾಯಿತು. ಅದಕ್ಕೆ ಒಂದು ಪ್ರತ್ಯೇಕ ಸಮಿತಿಯು ರಚಿಸಲ್ಪಟ್ಟಿತ್ತು.

ಗೇಣಿಯನ್ನು ಅಕ್ಕಿ ರೂಪದಲ್ಲೇ ಹೆಚ್ಚಾಗಿ ಕೊಡುವ ಪದ್ಧತಿಯುಳ್ಳ ಈ ಜಿಲ್ಲೆಯಲ್ಲಿ ಬೇರೆ ಬೇರೆ ಹಳ್ಳಿಗಳಿಗೆ ಪ್ರತ್ಯೇಕ ಕೇಂದ್ರ ಸ್ಥಳಗಳಿಲ್ಲದಿರುವುದರಿಂದ ಮತ್ತು ರೆವಿನ್ಯೂ ಬೋರ್ಡಿನವರು ನಿರ್ಧರಿಸಿದ ಈ ಸ್ಥಳೀಕ ಬೆಲೆಯೂ ಇಲ್ಲಿ ಜ್ಯಾರಿಯಲ್ಲಿದ್ದ ಬೆಲೆಯೂ ಹೆಚ್ಚು ಕಡಿಮೆ ಒಂದೇ ಇರುವುದರಿಂದ ಎಲ್ಲಾ ಕಡೆಗಳಲ್ಲೂ ಅದೇ ಬೆಲೆ ನಿರ್ಧರಿಸುವುದು ಸರಿ ಎಂದಾಯಿತು. (ಈ ಆಧಾರದ ಮೇಲೆ ಮೇಲಿನ ಪ್ರಕಟಣೆ ಹೊರಡಿಸಿದೆ.)

ಗೋಧಿ–ಜಿಲ್ಲಾ ರೇಶನ್ ವಿವರ

ತಾ. ೧೯ರಿಂದ ಗೋಧಿ ರಾಗಿ ಅಂಶವಾಗಿ ವಿತರಣೆಮಾಡುವ ಮತ್ತು ಇಡೀ ಜಿಲ್ಲೆಯಲ್ಲಿ ಅಶಾಸ್ತ್ರೀಯ ರೇಶನನ್ನು ಜ್ಯಾರಿ ಮಾಡುವ ಸರಕಾರದ ಸೂಚನೆಯನ್ನು ಕೌನ್ಸಿಲಿಗೆ ತಿಳಿಸಲಾಯಿತು.

ಗೇಣಸು ನಿರ್ಬಂಧ

"ಗೆಣಸು ಜಿಲ್ಲೆಯಿಂದ ಹೊರಹೋಗಬಿಡಬಾರದು. ಆದರೆ ಹೆಚ್ಚಿನ ಅಂಶ ಇದ್ದಲ್ಲಿ ಮಾತ್ರ ವಿಶೇಷ ಅನುಮತಿ ಪಡೆವುದರ ಮೂಲಕ ಕಳುಹಿಸುವುದಕ್ಕೆ ಪರ್ಮಿಟು ಕೊಡಬಹುದು" ಎಂಬ ಸರಕಾರದ ಆಜ್ಞೆಯನ್ನು ಕಲೆಕ್ಟರರು ತಿಳಿಸಿದರು.

ಹೆಚ್ಚು ಆಹಾರ ಬೆಳೆ

ಜಿಲ್ಲೆಯಲ್ಲಿ ಆಹಾರ ವಸ್ತುಗಳನ್ನು ಹೆಚ್ಚಾಗಿ ಬೆಳೆಸಲು ಪ್ರಯತ್ನಗಳು ಮಾಡಲಾಗಿವೆ. ನಿಷ್ಪ್ರಯೋಜಕವಾಗಿ ಹಾಳುಬಿದ್ದಿರುವ ಬಯಲು ಪ್ರದೇಶಗಳನ್ನು ಸ್ವಾಧೀನ ಮಾಡಿಕೊಳ್ಳುವಂತೆ ರೆವಿನ್ಯೂ ಡಿವಿಜನಲ್ ಆಫೀಸರರಿಗೆ ಆದೇಶಿಸಲಾಗಿದೆ. ಇವುಗಳನ್ನು ಹೀಗೆ ಕೃಷಿ ಸಾಗುವಳಿ ಮಾಡಬಹುದೆಂದು ಫುಡ್ ಕೌನ್ಸಿಲಿನಲ್ಲಿ ಚರ್ಚೆಯಾಯಿತು. ಸದ್ಯಕ್ಕೇ ಸರಕಾರದಿಂದ ಸ್ವಾಧೀನಪಡಿಸಲ್ಪಡುವ ಕೆರೆ ಸಾಗುವಳಿ ಸಂಬಂಧಿಯ ಕಾರ್ಯಕ್ರಮವನ್ನು ನಿರೀಕ್ಷಿಸಲಾಗಿದೆ.

ನಿಧನ

ಜಿಲ್ಲೆಯಲ್ಲಿ ತಮ್ಮ ನಾಗಸ್ವರದ ವಾದನ ಸವಿಯಿಂದ ಜನರ ಮೆಚ್ಚುಗೆಗೂ ಪ್ರಶಂಸೆಗೂ ಪಾತ್ರರಾಗಿದ್ದ ಸ್ಥಳೀಯ ವೆಂಕಟ್ರಮಣ ದೇವಸ್ಥಾನ ಮೇಳದ ಪ್ರಧಾನ ವಾದ್ಯಗಾರರಾಗಿದ್ದ ಶ್ರೀ ಅಣ್ಣು ಸೇರಿಗಾರರು ಸಿಡುಬು ರೋಗಕ್ಕೆ ತುತ್ತಾಗಿ ನಿಧನ ಹೊಂದಿದರೆಂದು ತಿಳಿಸಲು ವಿಷಾಧಿಸುತ್ತೇವೆ. ಈ ತರುಣ ವಾದ್ಯಗಾರರು ತಮ್ಮ ಕಲೆಯಲ್ಲಿ ತುಂಬಾ ನಿಪುಣತೆ ಪಡೆದಿದ್ದು ಜಿಲ್ಲೆಯಲ್ಲಿನ ನಾಗಸ್ವರ ಬಾರಿಸುವವರಲ್ಲಿ ಪ್ರಥಮ ಶ್ರೇಣಿಯವರೆಂದೆನಿಸಿದ್ದರು.

ನಾಟ್ಯ ಸಂಘ

ಸಿದ್ಧಾಪುರದ ಪ್ರಸಿದ್ಧ ಜಯಕರ್ನಾಟಕ ನಾಟ್ಯ ಸಂಘದವರು 'ಚಿತ್ರಾಂಗದಾ' ನಾಟಕದಿಂದ ತಮ್ಮ ಪ್ರದರ್ಶನಗಳನ್ನು ಪ್ರಾರಂಭಿಸಿ ಜನಾಕರ್ಷಣೆ ಪಡೆದಿರುವರು.

ಪತ್ರಿಕಾಕರ್ತ ವಕೀಲರು

ಬೊಂಬಾಯಿಯ 'ಫೋರಂ' ಪತ್ರಿಕೆ ಸಂಪಾದಕರೂ, ಪ್ರಖ್ಯಾತ ವಕೀಲರೂ ಮತ್ತು ನಮ್ಮ ಜಿಲ್ಲೆಯವರೂ ಆದ ಶ್ರೀ ಜೋಕಿಂ ಆಳ್ವ ಅವರು ಇಲ್ಲಿಗೂ ಉಡ್ಪಿಗೂ ಬಂದಿದ್ದು ಪತ್ರಿಕಾ ಉದ್ಯಮಿಗಳಿಂದ ಸನ್ಮಾನಿಸಲ್ಪಟ್ಟರು. ಶ್ರೀಯುತರು ಭೂಲಾಭಾಯಿ ದೇಸಾಯಿಯವರಲ್ಲಿ ತರಬೇತು ಹೊಂದಿದವರು.

ಕರ್ನಾಟಕಕ್ಕೆ ಮಹಾತ್ಮರ ಸಂದೇಶ

ನಮ್ಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ. ಡಿ. ಅಧಿಕಾರಿಗಳು ಇತ್ತೀಚೆಗೆ ವಾರ್ಧಾದಲ್ಲಿ ಮಹಾತ್ಮರನ್ನು ಕಂಡು ರಚನಾತ್ಮಕ ಕಾರ್ಯಕ್ರಮದ ಕುರಿತು ಮಾತುಕತೆ ನಡೆಸಿದರು. ಮಹಾತ್ಮರು "ವಿಧಾಯಕ ಕಾರ್ಯಕ್ರಮದ ವಿವರವನ್ನು ಬೊಂಬಾಯಿ ಕಾಂಗ್ರೆಸಿಗರ ಸಂದೇಶದಲ್ಲಿ ಕೊಟ್ಟಿದ್ದೇನೆ. ಅದರ ಪ್ರಕಾರ ರಚನಾತ್ಮಕ ಕಾರ್ಯವಾಗಲಿ. ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಸೇರಿಸುವುದು ಈಗ ಆವಶ್ಯವಿಲ್ಲ. ಅದರ ಬದಲಿಗೆ ರಚನಾತ್ಮಕ ಕಾರ್ಯಸಾಗಲಿ. ಕರ್ನಾಟಕದವರೆಲ್ಲರೂ ಕಾರ್ಯಪ್ರವರ್ತರಾಗಲಿ. ಇದೇ ನನ್ನ ಸಂದೇಶ" ಎಂದು ತಿಳಿಸಿದರು.

ಜಿಲ್ಲಾ ಬೋರ್ಡಿನ ಆದಾಯ ವೆಚ್ಚ

ಕಳೆದ ತಾ. ೨೮ರಲ್ಲಿ ಜಿಲ್ಲಾ ಬೋರ್ಡು ಬಜೆಟ್ ಅಧಿವೇಶನವು ಸೇರಿತ್ತು. ಅಂದು ೧೯೪೪–೪೫ ಆಯವ್ಯಯದ ಅಂದಾಜು ಪಟ್ಟಿಯು ಚರ್ಚಿಸಲ್ಪಟ್ಟಿತು. ಈ ವರ್ಷ ಬೋರ್ಡಿಗೆ ಸುಮಾರು ೮,೨೦,೮೩೦ ರೂ. ಆಯವೂ ರೂ. ೭,೯೦,೯೩೦ ವ್ಯಯವೂ ಆಗಬಹುದೆಂದು ಅಂದಾಜು ಹಾಕಲಾಗಿದೆ. ಇದರಿಂದ ರೂ. ೩೯,೯೦೦೦ ಉಳಿತಾಯವಾಗುತ್ತವಾದರೂ ಹಿಂದಿನ ವರ್ಷಗಳಿಂದ 'ನಷ್ಟದಿಂದಲೇ ಮುಂದುವರಿಯುತಲಿದ್ದ ಬೋರ್ಡಿನ ಆಡಳಿತವು ಈಗಿನ ಲಾಭದಿಂದ ಹೆಚ್ಚು ಅನುಕೂಲತೆ ಹೊಂದುವ ಹಾಗಿಲ್ಲ.

ಕಡವುಗಳಿಗೆ ಈ ಸಲ ಸುಂಕ ಹೆಚ್ಚಿಸಲಾಗುವುದು.

ಜಿಲ್ಲೆಯಲ್ಲಿ ಬೋರ್ಡಿನವರೇ ಬಸ್ಸು ಸರ್ವಿಸು ನಡೆಸುವಂತಾಗಬೇಕೆಂಬ ಸೂಚನೆಯನ್ನು ಸರಕಾರಕ್ಕೆ ಕಳುಹಿಸಲಾಗಿದೆ ಎಂದು ತಿಳಿದು ಬರುತ್ತದೆ.

"ಮಾರ್ಗಗಳಲ್ಲಿ ಸಾಲುಮರಗಳನ್ನು ನೆಡಲು ಮೊದಲು ರೂ. ೧೦೦ ಮತ್ತೆ ೫ ವರ್ಷಗಳ ತನಕ ರೂ. ೫೦ರ ಪ್ರಕಾರ ಕೊಡಬೇಕೆಂದಾಯಿತು.

ದ. ಕನ್ನಡಕ್ಕೆ ಕನ್ನಡ

ಕಳೆದೆರಡು ಬೋರ್ಡು ಸಭೆಗಳ ಚರ್ಚೆಗಳಲ್ಲಿ ಭಾಷಾ ಪ್ರಶ್ನೆಯೇ ಬಹಳವಾಗಿ ಚರ್ಚಿಸಲ್ಪಟ್ಟಿತು. ತುಳುನಾಡಾದರಿಂದ ತುಳುವಾಗಬೇಕೆಂದೂ, ಕರ್ನಾಟಕದಲ್ಲಿ ಕೂಡಿರುವುದರಿಂದ ಕನ್ನಡವಾಗಬೇಕೆಂದೂ, ಎರಡು ಭಾಷೆಗಳೂ ತಿಳಿಯದವರಿಗಾಗಿ ಇಂಗ್ಲಿಷಿನಲ್ಲಾಗಬೇಕೆಂದೂ ನಾನಾವಿಧವಾದ ಸೂಚನೆಗಳಾಗಿವೆಯಾದರೂ ಅಧ್ಯಕ್ಷರು ತಮ್ಮ ವಿವರಣೆಗಳನ್ನು ಇಂಗ್ಲಿಷ್ ಕನ್ನಡ ಗಳೆರಡರಲ್ಲೂ ಮಾಡಿದರು.

ರೇಶನ್ ಶಿಕ್ಷೆ

ಸರಿಯಾದ ಲೆಕ್ಕಪತ್ರ ವಿಡದಿದ್ದಕ್ಕೆ ಕೃಷ್ಣಭವನದ ಶ್ರೀ. ಎಸ್. ವೆಂಕಟರಮಣ ಭಟ್ ಅವರಿಗೆ ೨ ತಿಂಗಳ ಸಾದಾ ಸಜೆ.

ತಾಜಮಹಾಲಿನ ಶ್ರೀ. ಉಡ್ಪಿ ಗೋಪಾಲಕೃಷ್ಣ ಶಾನುಭಾಗರು ರೇಶನ್ ಲೆಕ್ಕ ಇಡದಕ್ಕೆ ಮತ್ತು ದಾಸ್ತಾನಿಟ್ಟ ಪದಾರ್ಥಗಳ ಬಗ್ಗೆ "ಡಿಕ್ಲರೇಶನ್" ಕೊಡಲಿಲ್ಲವೆಂಬ ೨ ಆರೋಪಗಳಿಗಾಗಿ ೨ ತಿಂಗಳ ಸಾದಾ ಸಜೆಗೂ, ೨೦೦ ರೂ. ಜುಲ್ಮಾನೆಗೂ ಒಳಗಾಗಿರುವರು.

ಅನೀತಿ ವ್ಯಾಪಾರ

ನಗರದಲ್ಲಿ ಅನೀತಿ ವ್ಯಭಿಚಾರ ವ್ಯಾಪಾರವು ಹೆಚ್ಚಾಗುತಿದ್ದು ಆ ಸಂಬಂಧ ಜಾಡ್ಯಗಳೂ ಹೆಚ್ಚುತ್ತಿರುವುದರಿಂದ ಅಧಿಕಾರಿಗಳು ಬಲವಾದ ಕೈಯಿಂದ ಅದನ್ನು ತಡೆಗಟ್ಟಲು ನಿರ್ಧರಿಸಿರುವುದಾಗಿ ತಿಳಿದುಬರುತ್ತದೆ. ಆಗಲೇ ಅನೇಕರನ್ನು ಹಿಡಿಯಲಾಗಿದೆ. ಕೆಲವರನ್ನು ಶಿಕ್ಷೆಗೆ ಗುರಿಮಾಡಿರುವರು.

ಬದಿಯಡ್ಕ

ಇಲ್ಲಿನ ಬಸ್ಸ್ ಆಫೀಸಿನ ಬಳಿ ಒಬ್ಬ ಬ್ರಾಹ್ಮಣ ತರುಣನು ಕಳೆದ ತಾ. ೨೪ರ ರಾತ್ರೆ ಸಮಯದಲ್ಲಿ ಬಹಳ ಉಗ್ರವಾಗಿ ಖೂನಿ ಮಾಡಲ್ಪಟ್ಟಿರುವನೆಂದು ತಿಳಿದುಬರುತ್ತದೆ. ಆರೋಪಿಗಳೆದ್ದು ಇನ್ನೂ ಪತ್ತೆಯಾಗಲಿಲ್ಲ. ತರುಣನು ಹೊಟ್ಟೆಗೆ ತಿವಿಯಲ್ಪಟ್ಟುದರಿಂದ ಒಳಗಿನ ಅವಯವಗಳು ಹೊರಗೆ ಕಾಣುವಷ್ಟು ವಿಷಮಾವಸ್ಥೆಗೆ ತಂದೊಡ್ಡಿದಂತೆ.

ಸುಳ್ಯ

ಬರುವ ಜನವರಿ ೯, ೧೦, ೧೧ ತಾರೀಕುಗಳಲ್ಲಿ ಇಲ್ಲಿನ ಸಹಕಾರಿ ಕಟ್ಟಡದಲ್ಲಿ ವ್ಯವಸಾಯ ಮತ್ತು ಆರೋಗ್ಯ ಸಂಬಂಧ ಪ್ರದರ್ಶನವೊಂದು ಜರಗುವುದು. ಇದಕ್ಕೆ ವಸ್ತು ಕಳುಹಿಸುವವರು ತಾ. ೭–೧–೪೫ರೊಳಗೆ ಕಳುಹಿಸಬೇಕು.

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ

ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.

ದೊರಕುವ ಸ್ಥಳ:- ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

1945 1945

ಆಫೀಸು ಕೇಲೆಂಡರುಗಳು

ಮಾರಾಟಕ್ಕೆ ಸಿದ್ಧವಾಗಿವೆ

ಬೆಲೆ ೧ಕ್ಕೆ 0-4-0

ವ್ಯಾಪಾರಿಗಳಿಗೆ ಯೋಗ್ಯ ಕಮಿಷನು ಕೊಡಲಾಗುವುದು

ಶಾರದಾ ಪ್ರೆಸ್ ರಥಬೀದಿ ಮಂಗಳೂರು

[illegible] ಇದರ ಅಚಲ [illegible] ಕಾರಣ ಮೃಗರಾಜನು [illegible] ಮೇಲೆ ಕಾಣುವ ಇದರ ದೇಹ ಭಾಗವನ್ನು ಸುರಕ್ಷಿತವಾಗಿ ತಿಂದು ಬಿಡು [illegible]

ಸರಕಾರವು ಜನಪ್ರಿಯ ಮುಖಂಡ[ರನ್ನು] ಸೆರೆಮನೆಯಲ್ಲಿಟ್ಟು "ಅದು ನಮ್ಮ [ಕೆ]ಲಸವಲ್ಲ. ಪ್ರಾಂತ್ಯ ಸರಕಾರಗಳ [ಕರ್ತ]ವ್ಯ ಮತ್ತು ಹೊಣೆಗಾರಿಕೆ" ಎಂದು [ಈ] ಮುಖಂಡರ ಬಿಡುಗಡೆಯ ಪ್ರಶ್ನೆಯನ್ನೇ ಮೂಲೆಗೆ ತಳ್ಳುತ್ತದೆ.

ಪ್ರಾಂತ್ಯ ಸರಕಾರದ ಹೇಳಿಕೆ ಬೇರೆ!

ಸಿಂಧ್ ಪ್ರಾಂತ್ಯ ಪ್ರಧಾನ ಹಿದಾಯಿತುಲ್ಲರಿಗೆ ಮುಖಂಡರ ಬಿಡುಗಡೆಯ ಯೋಚನೆ ಏನು ಎಂದು ಕೇಳಿದಾಗ "ಅದು ಅಖಿಲಭಾರತಕ್ಕೆ ಸಂಬಂಧಪಟ್ಟ ಧೋರಣೆ, ಪ್ರಾಂತ್ಯ ಸರಕಾರಗಳು ಆ ಕುರಿತು ಏನೂ ಮಾಡುವ ಹಾಗಿಲ್ಲ" ಎಂದಿದ್ದಾರೆ.

"ಕೇಂದ್ರ ಸರಕಾರದವರೂ ಪ್ರಾಂತ್ಯಕ್ಕೂ, ಪ್ರಾಂತ್ಯ ಸರಕಾರದವರು ಕೇಂದ್ರಕ್ಕೂ ಬೆರಳು ತೋರಿಸಿದರೆ ಸೆರೆಮನೆಯಲ್ಲಿ ನ್ಯಾಯ ಅನ್ಯಾಯ ವಿಚಾರಣೆಯಿಲ್ಲದೆ ಕೊಳೆಯುವವರ ಗತಿಯೇನು? ನಾಗರಿಕ ಸರಕಾರಗಳಿಗೆ ಹೇಳಿದ ಯೋಗ್ಯ ಧೋರಣವಿದೇನು?" ಹೀಗೆಂದು ಕೆಲ ಪತ್ರಿಕೆಗಳು ಪ್ರಶ್ನಿಸುತ್ತವೆ.

ಕೇಂದ್ರ ಸರಕಾರದಲ್ಲಿ ಹೊಸದಾಗಿ ಆಂತರಿಕ ಆಡಳಿತ ಖಾತೆಯ ಮಂತ್ರಿ

ಉಷ್ಟ್ರಪಕ್ಷಿ ಧೋರಣೆ

ಕೇಂದ್ರ ಸರಕಾರದ ವಿಚಿತ್ರ ಧೋರಣೆ

ಮುಖಂಡರ ಬಿಡುಗಡೆಯಾಗಬೇಕು

ಹೀಗೆಂದು ಜಗತ್ತೇ ಸಾರುತ್ತದೆ.

ಗಳಾದ ಸರ್ ಜೇಮ್ಸ್ ಮುಡಿ ಅವರು ಎಸೆಂಬ್ಲಿಯ ಚರ್ಚೆಗೆ ಉತ್ತರ ಕೊಡುವಾಗ "ಪ್ರಾಂತ್ಯಗಳ ಜೈಲುಗಳಲ್ಲಿರುವ ಕೈದಿಗಳನ್ನು ನೋಡುವುದು ಅಲ್ಲಿನ ಸರಕಾರದ ಕೆಲಸ." ಎಂದರು.

ಈ ಕುರಿತು ಹಿಂದೂ ಪತ್ರಿಕೆಯು ಒಂದು ಅಗ್ರ ಲೇಖದಲ್ಲಿ "ಜನತೆಯ ಮೆಚ್ಚುಗೆಯ ಮುಖಂಡರನ್ನು ಲೆಕ್ಕವಿಲ್ಲದಷ್ಟು ಕಾಲ ಬಂಧನದಲ್ಲಿರಿಸುವುದು ನಾಗರೀಕ ಹಕ್ಕು ಸ್ವಾತಂತ್ರ್ಯದ ತತ್ವಕ್ಕೆ ಕೊಡಲಿ ಹಾಕಿದಂತೆಯೇ ಸರಿ. ಜೈಲಿನಲ್ಲಿರಿಸಿಯೂ ಅಲ್ಲಿ ಕೂಡಾ ಈ ಮುಖಂಡರಿಗೆ ಯೋಗ್ಯ ಸವಲತ್ತುಗಳನ್ನು ಕೊಡದಿರುವುದರಿಂದ ಜನತೆಯಲ್ಲಿ ದ್ವೇಷರಾಗಗಳು ಹೆಚ್ಚಾಗುವಂತೆ ಮಾಡಿದ ಹಾಗಾಗುತ್ತದೆ. ಈ ರಾಜಕೀಯ ಕೈದಿಗಳಿಗೆ ಆಹಾರ, ಸಂಬಂಧಿಕರ ಸಂದರ್ಶನ, ಪತ್ರವ್ಯವಹಾರ ಮೊದಲಾದ ಅತ್ಯಾವಶ್ಯಕ ವಿಷಯಗಳಲ್ಲಿ ಸಂಕುಚಿತ ಮನೋಭಾವದ ನಿರ್ಬಂಧಗಳನ್ನು ಹಾಕಿದ್ದು ಸರ್ವದಾ ಅನ್ಯಾಯವೇ ಸರಿ" ಹೀಗೆಂಬರ್ಥದಲ್ಲಿ ಕಡುವಾಗಿ ಟೀಕಿಸಿದೆ.

ನೆಹರುಗಳಷ್ಟು ಯೋಗ್ಯರಿಲ್ಲ

ಇಂದು ಇಡೀ ಜಗತ್ತೆ ಕಾಂಗ್ರೆಸ್ ಮುಖಂಡರ ಬಿಡುಗಡೆಗೆ 'ಬೆಂಬಲ' ಕೊಟ್ಟು ಸಾರುತ್ತಿದೆ ಎಂದು ಜವಾಹರಲಾಲ ನೆಹರುಗಳ ಜನ್ಮದಿನದಂದು ಜಗತ್ತಿನ ನಾನಾ ಕಡೆಯಿಂದ ಪ್ರಭಾವ ಶಾಲಿ ಪುರುಷರು ಕಳುಹಿಸಿದ ಸಂದೇಶಗಳಿಂದ ತಿಳಿದು ಬರುತ್ತದೆ.

"ನೆಹರುಗಳಂತಹವರು ಇಂದು ಸೆರೆಮನೆಯಲ್ಲಿದ್ದಾರೆಂದ ಮಾತ್ರಕ್ಕೆ ಬ್ರಿಟಿಷ್ ಆಡಳಿತದ ಮಹಿಮೆ ತಿಳಿಯಬಹುದು. ವಿವೇಕದಲ್ಲೂ, ವ್ಯಕ್ತಿತ್ವ ಪ್ರಭಾವದಲ್ಲೂ ಅವರ ಎದುರಿಗೆ ಚಿಕ್ಕದಾಗಿ ಕಾಣಬಹುದಾದ ರಾಜಕೀಯ ತಜ್ಞರು ಅವರನ್ನು ಸೆರೆಮನೆಯಲ್ಲಿಟ್ಟಿದ್ದು ತುಂಬಾ ಹಾಸ್ಯಾಸ್ಪದ ವಿಚಾರ. ನೆಹರುಗಾಗಿ ಭಾರತವು ಹೆಮ್ಮೆಪಡುವುದು ಸಹಜವಾದುದು. ಬ್ರಿಟಿಷ್ ಜನರು ತಮ್ಮ ಮುಖಂಡರಿಗಾಗಿ ಲಜ್ಜೆಪಟ್ಟುಕೊಳ್ಳಬೇಕು, ಕಾರಣ ಈ ಸಾಮ್ರಾಜ್ಯವಾದಿ ತತ್ವದ ಒಂದು ಹೇಯ ಲಕ್ಷಣವೆಂದರೆ ಅದರಲ್ಲಿ 'ಚಿಕ್ಕ' ಮನುಷ್ಯರಿಗೆ ಸಿಕ್ಕುವ ಅಧಿಕಾರ". ಹೀಗೆಂದು ಲಂಡನ್ನಿನ ಮಿ। ಫೆನ್ನರ್ ಬ್ರೋಕ್‌ವೇ ಅವರು ಬರೆದಿದ್ದಾರೆ.

"ನಮ್ಮ ಕಾಲದ ಇತಿಹಾಸದಲ್ಲಿ ನೆಹರುಗಳಷ್ಟು ಘನಸ್ಥ ವ್ಯಕ್ತಿಗಳೇ ವಿರಳ. ಇಂದು ಅವರು ಭಾರತದ ಪ್ರಧಾನ ಮಂತ್ರಿಗಳಾಗಿರಬೇಕಿತ್ತು. ಅದರ ಬದಲು ಅವರು ಬಂಧೀಖಾನೆಯ ಸದಸ್ಯರಾಗಿದ್ದಾರೆ"—ಹೀಗೆ ಹೆರೋಲ್ಡ್ ಲಾಸ್ಕಿ ಎಂಬ ಬ್ರಿಟಿಷ್ ಸಮತಾವಾದಿಗಳೊಬ್ಬರು ಹೇಳಿದ್ದಾರೆ.

ಪ್ರಸಿದ್ಧ ಇತಿಹಾಸಕಾರರಾದ ಪ್ರೊ। ಥಾಮ್ಸನ್ ಅವರು "ನನ್ನ ಪ್ರಿಯ ಸ್ನೇಹಿತ ಜವಾಹರನ ಕುರಿತು ಏನು ಹೇಳಬೇಕೆಂದು ತೋರುವುದಿಲ್ಲ. ಆದರೆ ದೇವರು ಒಬ್ಬ ಮಹಾತ್ಮನಿಗೆ ಹೇಳಿದ "ಓ! ಮಾನವಾ ಹೆದರಬೇಡ, ನಿನಗೆ ಶಾಂತಿ ಇರಲಿ, ಶಕ್ತಿವಂತನಾಗಿರು, ಅಂತ್ಯದಲ್ಲಿ ನೀನು ನಿನ್ನ ದೇವರನ್ನು (ಧ್ಯೇಯ) ಮುಟ್ಟುವೆ." ಎಂಬೀ ಮಾತುಗಗಳನ್ನು ನೆನಪು ಮಾಡಬಯಸುತ್ತೇನೆ." ಎಂದು ಹೇಳಿದ್ದಾರೆ.

[illegible] ನೆಹರು ಮಾತ್ರ ಅವರನ್ನು ಬಿಡಲು [illegible] ಸಮಯವೆಂದು [illegible] ಅವರೆಂದಿದ್ದಾರೆ. [illegible] ಜವಾಹರರೇ, ನಿಮಗೂ ನಿಮ್ಮ ಸಾಧಿಸುವ ಶಕ್ತಿಗಳಿಗೂ ನನ್ನ ಹೃತ್ಪೂರ್ವಕ ವಂದನೆಗಳು" ಎಂದಿರುವರು.

ಪುನಃ ಹಿಂದೂ ಪತ್ರಿಕೆಯು ಹೀಗೆ ಬರೆದಿದೆ: ಅಮೇರಿಕದ ಪಿ. ಎಂ. ಎಂಬ ಪತ್ರಿಕೆಯೊಂದು "ಶುದ್ಧ ಫೆಸಿಸ್ಟ ತತ್ವಾನುಯಾಯಿಯೂ, ಹಿಟ್ಲರ್ ಪ್ರೇಮಿಯೂ ಆದ ಸರ್ ಒಸ್ವಾಲ್ಡ್ ಮೊಸ್ಲೆ ಕಿಪ್ಪನ್ ರಾಮ್ಸೆಯಂತಹವರನ್ನು ಆರೋಗ್ಯ ಕಾರಣಗಳ ಮೇಲೆ ಬಂಧ ಮುಕ್ತಗೊಳಿಸಿದ ಬ್ರಿಟಿಷ್ ಸರಕಾರದವರು ನೆಹರುಗಳಂತ ಬದ್ಧ ಫೆಸಿಸ್ಟ ವಿರೋಧಿಗಳನ್ನು ಬಂಧನದಲ್ಲಿರಿಸಿದ್ದು ವಿಚಿತ್ರ"ವೆಂದಿದೆ. "ಇಂಗ್ಲೆಂಡಿನಲ್ಲಿ ಅನೇಕ ಮಹನೀಯರು ಈ ಕುರಿತು ಒತ್ತಾಯಪೂರ್ವಕ ತಿಳಿಸಿದ್ದರೂ, ಪಾರ್ಲಿಮೆಂಟು ತನ್ನ ಜವಾಬ್ದಾರಿಯನ್ನು ಡಿಲ್ಲಿ ಸರಕಾರದ ಮೇಲೂ, ಡಿಲ್ಲಿ ಸರಕಾರವು ಪ್ರಾಂತ್ಯಗಳ ಮೇಲೂ ಹಾಕುವುದು ಉಷ್ಟ್ರಪಕ್ಷಿಯ ಧೋರಣೆಯಂತೆ ಅಪಾಯಕಾರಿಯಾದುದು."

(೬ನೇ ಪುಟದಿಂದ)

ಸ್ಟೇಲಿನರು ಆಸ್ಯಖಂಡದ ಈ ಪ್ರದೇಶಗಳಲ್ಲಿ ತಾಟಸ್ಥ ಧೋರಣವನ್ನೇ ಈ ತನಕ ವಹಿಸಿದ್ದರು. ಆದರೆ ಯುರೋಪದ ಸಂದಿಗ್ಧವು ಈಗ ಬಹುಮಟ್ಟಿಗೆ ಪರಿಹಾರವಾದುದರಿಂದ, ಆತನು ರಶ್ಯಕ್ಕೆ ಹಿಂದೆ ಜಪಾನಿಯರ ಕೈಗಳಿಂದ ದೊರಕಿದ ಅಪಮಾನಗಳ ಸೇಡನ್ನು ತೀರಿಸಿಕೊಳ್ಳಲು ಪ್ರವೃತ್ತಿಸಬಹುದೆಂದು ನಿರೀಕ್ಷೆಯಿದೆ.

ರಶ್ಯದ ಕುರಿತು ಮಹಾ ಭಯವಿದ್ದುದರಿಂದ ಮಂಚೂರಿಯದಲ್ಲಿ ಜಪಾನಿಯರು ತಮ್ಮ ಅತ್ಯುತ್ತಮ ಸೈನ್ಯ ಸಂಗ್ರಹವನ್ನು ಇಟ್ಟಿದ್ದರು. ಈಗಲೂ ಅದು ಅಲ್ಲಿಯಿದೆ. ಆಸ್ಯಾಕಡೆಯ ತಮ್ಮ ಅಭ್ಯುದಯಕ್ಕೆ ಜಪಾನು ಮಹಾ ಅಡ್ಡಿಯು ಎಂದು ಸ್ಟೇಲಿನರು ತಿಳಿದುದರಿಂದ, ಹಿಟ್ಲರನ ಸೊಕ್ಕು ಮುರಿಯುವ ಕಾರ್ಯ ನಡೆಯುತ್ತಿದ್ದಾಗ್ಯೂ, ಅವರು ಆಸ್ಯಾ ಖಂಡದ ಕ್ಷೇತ್ರಗಳಲ್ಲಿ, ಬೇಕಾದ ಸಿದ್ಧತೆಗಳನ್ನು ಮಾಡಿರುವರು. ವಿಮಾನಗಳು, ಟೆಂಕುಗಳು, ಸೇನೆಪಡೆಗಳು, ಇತ್ಯಾದಿಗಳು ದಾರಳ ಸಂಖ್ಯೆಯಲ್ಲಿ ಇತ್ತ ಕಡೆಗೆ ಕಳುಹಿಸಲಾಗಿವೆ. ಫಿಲಿಪ್ಪಾನ್ ಕದನದಲ್ಲಿ ಜಪಾನಿಯರ ನೌಕಾಬಲವು ಅತಿರೇಖ ನಷ್ಟವಾದುದರಿಂದ ಇದೊಂದು ಜಪಾನಿಯರಿಗೆ ಮಹಾ ಕೊರತೆಯಾಗಿ ಪರಿಣಮಿಸಿದುದರಿಂದ, ಇದೇ ತಕ್ಕ ಸಮಯವೆಂದು ಸ್ಟೇಲಿನರು ಆಸ್ಯಾಖಂಡದ ತಮ್ಮ ಸೇನೆಗೆ ಜಪಾನಿನ ಮಂಚೂರಿಯಾದ ಮೇಲೆ ಅಭಿಯೋಗಿಸಲು ಆಜ್ಞೆಯನ್ನೀಯಬಹುದು. ಆಗ ಮಂಚೂರಿಯದ ಜಪಾನೀಯ ಅಡಿಗಟ್ಟಿಗೆ ದಕ್ಕೆಯಾಗುವುದು. ವ್ಲಾಡಿವಾಸ್ಟೋಕಿನಿಂದ ಜಪಾನ್ ದೇಶದ ವಾಯು ಮೂಲಕ ಅಭಿಯೋಗ ಪ್ರಾರಂಭವಾಗಬಹುದು. ಅಮೇರಿಕದಿಂದ ಅಲಸ್ಕಾ ಮಾರ್ಗವಾಗಿ ಕಮ್ಚಟ್ಕಾವಾಗಿ, ಉತ್ತರದಿಂದ ಜಪಾನಿನ ಮೇಲೆ ಮುತ್ತಿಗೆ ಹಾಕಲು, ಅಮೇರಿಕದ ದಂಡುಗಳಿಗೆ ಬರಲು ಅವಕಾಶ ದೊರೆಕಬಹುದು.

ಸ್ಟೆಲಿನನ ಆಜ್ಞೆಯು ಯಾವಾಗ ಹೊರಡುವುದೆಂದು ನೋಡಬೇಕು.

ಚೈತನ್ಯ ಮತ್ತು ಸೌಂದರ್ಯಯುತರಾಗಿರಬಾರದೇಕೆ?

ಸೌಂದರ್ಯವು ಚರ್ಮದ ಚೆಲುವು ಮಾತ್ರವಲ್ಲ; ಆ ಶುಭ್ರ ಕಣ್ಣುಗಳು ಆ ಸುಂದರ ಶರೀರ ಸೌಂದರ್ಯ ಇವು ಶರೀರದ ಆಂತರಿಕ ನೈರ್ಮಲ್ಯದಿಂದ ದೊರಕುತ್ತವೆ. ಆದ್ದರಿಂದ ಪ್ರತಿರಾತ್ರಿ ಎರಡು ಬೈಲ್‌ಬೀನ್ಸು ಮಾತ್ರೆಗಳನ್ನು ಸೇವಿಸುವ ಸುವರ್ಣ ನಿಯಮವನ್ನು ಅನುಸರಿಸಿರಿ. ಬೈಲ್‌ಬೀನ್ಸು ಶುದ್ಧ ವನಸ್ಪತಿಯದು. ಅವು ಅವಯವಗಳನ್ನು ಸರಿಯಾಗಿಟ್ಟು, ರಕ್ತವನ್ನು ಶುದ್ಧಗೊಳಿಸಿ, ದಿನನಿತ್ಯವೂ ಅಶುದ್ಧ ಆಹಾರವನ್ನು ಹೊರಹಾಕುವವು. ಇದರಿಂದ ಸೌಂದರ್ಯ ಶೋಭೆ ಮನೋಹರತೆಗಳುಂಟಾಗುವವು.





ಬೈಲ್‌ಬೀನ್ಸು ನಿಮ್ಮನ್ನು ಆರೋಗ್ಯ ಸುಖ ಮತ್ತು ಯೋಗ್ಯತೆಯುಳ್ಳವರಾಗಿ ಮಾಡುವುದು.

BILE BEANS

ನಗರದಲ್ಲಿ ನಾಗರೀಕ ಸೌಕರ್ಯ

ಮುನ್ಸಿಪಾಲಿಟಿಗಳ ಕರ್ತವ್ಯ

ಮದ್ರಾಸ್ ನಗರಾಧ್ಯಕ್ಷರ ಆದರ್ಶ

ಕಳೆದವಾರ ಮದ್ರಾಸಿನ ನಗರ ಸಭೆಯ ಅಧ್ಯಕ್ಷರಾಗಿದ್ದ ಡಾ। ಸಯ್ಯದ್ ನಿಯಮತುಲ್ಲಾ ಅವರು ತಮ್ಮ ಒಂದು ವರ್ಷದ ಅವಧಿ ಪದವಿಯನ್ನು ಮುಗಿಸಿ ಹೊಸತಾಗಿ ಚುನಾಯಿತರಾದ ಶ್ರೀ ಎಂ. ರಾಧಾ ಕೃಷ್ಣನ್ ಪಿಳ್ಳೆಯವರಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟರು.

ಮಾಜೀ ಮೇಯರರಾದ ಡಾ। ನಿಯಮತುಲ್ಲಾ ಅವರು ತಮ್ಮ ಅವಧಿಯಲ್ಲಿ ನಾಗರೀಕ ಸೌಕರ್ಯ ಸುಧಾರಣೆಗಾಗಿ ತುಂಬಾ ಶ್ರಮವಹಿಸಿದ್ದರು. ಕ್ಷಯ ರೋಗ, ಕುಷ್ಠ ರೋಗ ಚಿಕಿತ್ಸಾಲಯವೊಂದನ್ನು ಅವರು ಗವರ್ನರರಿಂದ ಉದ್ಘಾಟನೆಗೊಳಿಸಿ ಅಲ್ಲಿನ ನಾಗರೀಕರ ಮನ್ನಣೆಗೆ ಪಾತ್ರರಾಗಿದ್ದಾರೆ. ಮದ್ರಾಸ್ ನಗರದಲ್ಲೆಲ್ಲ ಇಂತಹ ೨೦ ಚಿಕಿತ್ಸಾಭವನಗಳನ್ನು ತೆರೆಯುವ ಯೋಜನೆಯನ್ನು ಮಾಡಿಟ್ಟಿರುವರು.

ಈಗಿನ ಹೊಸ ಮೇಯರರು ಕಾಂಗ್ರೆಸ್ಸಿಗರು. ಅಲ್ಲಿನ ನಾಗರೀಕ ಮುಖಂಡ ನಗರ ಪ್ರತಿನಿಧಿಗಳೆಲ್ಲರ ಬೆಂಬಲವು ಇವರಿಗೆ ಸಿಗುದೆಂಬುವದರಲ್ಲಿ ಸಂದೇಹವಿಲ್ಲ. ನಗರ ಸಭೆಯ ಕಮಿಶನರರಾದ ಶ್ರೀ ಶೆಣೈ ಅವರು ನಗರ ಜನತೆಯಲ್ಲಿ ಚೊಕ್ಕ ವಾಸಸ್ಥಳಗಳನ್ನು ನಿರ್ಮಿಸುವಂತೆ ತುಂಬಾ ಪ್ರಚಾರ ಮಾಡುತ್ತಲಿದ್ದಾರೆ. ಹೊಸ ಮೇಯರರು ಆರೋಗ್ಯ ವಿಷಯಕವಾದ ವಿಚಾರಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕಾಗಿ ಮದ್ರಾಸಿನ ಪ್ರಜೆಗಳ ಹಾರೈಕೆ ಇದೆ.

ಅಲ್ಲಿನ ಒಂದು ಪ್ರಭಾವ ಶಾಲೀ ಪತ್ರಿಕೆಯು ಈ ಕುರಿತು ಹೀಗೆ ಬರೆಯುತ್ತದೆ:

ನಾಗರೀಕರಿಗೆ ಆರೋಗ್ಯದಾಯಕ ಜೀವನ ನಡೆಸುವ ಸೌಕರ್ಯಗಳನ್ನು [illegible]ಗಿಸಿಕೊಡುವುದೇ ನಗರಸಭೆಯವರ [ಕರ್ತ]ವ್ಯವಿರುತ್ತದೆ.

ರೋಗವನ್ನು ನಿವಾರಿಸುವ ಪ್ರಯತ್ನಕ್ಕಿಂತ ರೋಗರುಜೆಯನ್ನು ತಡೆಗಟ್ಟುವ ಪ್ರಯತ್ನಗಳು ಹೆಚ್ಚಾಗಬೇಕು. ನಾ[ನಾ] ಸ್ಥಳಗಳೂ ಕೊಳಕು ಪ್ರದೇಶಗಳನ್ನು ಶುದ್ಧವಿಡುವಿಕೆ, ಮುಂತಾದವುಗಳ ಕಡೆ ನಗರ ಸಭಾ ಪ್ರತಿನಿಧಿಗಳು ಯಶಸ್ವಿಯಾಗಿ ಮಾಡಿದರೇನೇ ಅವರ ಕರ್ತವ್ಯ ಪಾಲನೆಯು ಸಾರ್ಥಕವೆನಿಸುವುದು.

ಮಾನವ ಪ್ರೇಮಿ ಗಾಂಧೀಜಿ

(೧ನೇ ಪುಟದಿಂದ)

ವನ್ನೇ ಅವಲಂಬಿಸಿದ್ದು ಕಾಣುತ್ತದೆ. ರೋಗಿಗಳ ಆರೈಕೆ ಮಾಡುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೂ ದುರ್ದಮ್ಯವಾದ ಅಭಿಲಾಷೆ. ತಾವು ಚಿಕ್ಕವರಾಗಿದ್ದಾಗ ತಮ್ಮ ತಂದೆಯವರಿಗೆ ಎಷ್ಟೋ ಶುಶ್ರೂಷೆ ಮಾಡಿದ್ದನ್ನು ಅವರು ಬಣ್ಣಿಸಿದ್ದಾರೆ. ಮುಂದೆ ಅವರು ಆಸ್ಪತ್ರೆಗಳಲ್ಲಿ ಚಿಕಿತ್ಸಾಪಥಕಗಳಲ್ಲಿ ಸ್ವಯಂಸೇವಕರಾಗಿ ದುಡಿದದ್ದುಂಟು. ತಮ್ಮ ಕೊನೆಯ ಮಗುವಿನ ಜನನಕಾಲದಲ್ಲಿ ಹೊರಗಿನ ಸಹಾಯವಿಲ್ಲದೇ ಸಾಗಿಸಿದ ಬಗೆಯನ್ನು ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ ಬಣ್ಣಿಸಿದ್ದಾರೆ. ಅನಾರೋಗ್ಯಕರ ಮತ್ತು ಹೊಲಸಾದ ವಾತಾವರಣದಲ್ಲಿ ಬಾಳುತ್ತಿರುವುದಕ್ಕಾಗಿ ಎಷ್ಟೋ ಸಲ ಅವರು ತಮ್ಮ ದೇಶದ ಜನರಿಗೆ ಅಂದದ್ದುಂಟು. ೧೮೯೭ರಲ್ಲಿಯೇ ಅವರು ದರ್ಬಾನದ ಹಿಂದೀಯರಲ್ಲಿ ನೈರ್ಮಲ್ಯದ ಪ್ರಚಾರ ಕೈಕೊಂಡದ್ದನ್ನು ಕಾಣುತ್ತೇವೆ. ನೈರ್ಮಲ್ಯದಲ್ಲಿ ಗಾಂಧೀಜಿಯ ಶ್ರದ್ಧೆ ಇಂದಿಗೂ ಅಚ್ಚಳಿಯದೆ ನಿಂತಿದೆ. ಇದರ ಮಹತ್ವವನ್ನು ಪ್ರದರ್ಶಿಸುವುದಕ್ಕಾಗಿ ಅವರು ಪಾಯಖಾನೆಗಳನ್ನು ನಿರ್ಮಲಗೊಳಿಸುವಂತ ಕೆಲಸಗಳಿಗೆ ಕೂಡ ಹೇಸಿಲ್ಲ. ಅವರ ಸ್ವಭಾವದಲ್ಲಿ ಹೇಸಿಕೊಳ್ಳುವ ಪ್ರವೃತ್ತಿ ಲೇಶ ಮಾತ್ರವೂ ಸಿಗಲಾರದು.

ಇಂದು ಎಲ್ಲರೂ ಪ್ರಜಾತಂತ್ರ-ಪ್ರಜಾತಂತ್ರವೆಂದು ಜಗಿದಾಡುವವರೆ. ಆದರೆ ಹಲವು ರಾಜಕಾರಣಿಗಳದು ಈ ವಿಷಯದಲ್ಲಿ ಮಾತೆತ್ತಲೊ ಕೃತಿಯೆತ್ತಲೊ! ಈ ಅಸ್ವಾಭಾವಿಕ ಪರಿಸ್ಥಿತಿಯಲ್ಲಿ, ಗಾಂಧೀಜಿಯ ರಾಜಕೀಯ ಸಂಘಟನಾ ಪದ್ಧತಿಯನ್ನು ಪ್ರತಿವಾದಿಗಳು ಚೆನ್ನಾಗಿ ಅಭ್ಯಾಸ ಮಾಡಿದರೆ ಒಳಿತಾಗುತಿತ್ತು. ತಮ್ಮ ಸಾಂಪ್ರದಾಯಿಕ ಉಡುಗೆ-ತೊಡುಗೆಯನ್ನು ಅವರು ಕಿತ್ತೊಗೆದಾಗ ಅದರ ಜೋಡಿ ಎಷ್ಟೋ ರೂಢ ಅಭಿಪ್ರಾಯಗಳನ್ನೂ ಬಿಟ್ಟುಕೊಟ್ಟರು. ವೈಷ್ಣವ ಧರ್ಮದ ವಿಶಾಲ ಮಾನವೀಯ ವಾತಾವರಣದಲ್ಲಿ ಹುಟ್ಟಿ ಬೆಳೆದ ಗಾಂಧೀಜಿ ಅನೇಕ ವಿಷಯದಲ್ಲಿ ಸಂಪ್ರದಾಯನಿಷ್ಠೆಗೆ ಗಟ್ಟಿಯಾಗಿ ಅಂಟಿಕೊಂಡಿದ್ದಾರೆ. ಆದರೆ ಶುದ್ಧ ಸುಧಾರಣಾವಾದವೂ ಅವರ ಹೃದಯದಲ್ಲಿ ಪ್ರಬಲವಾದ ಸ್ಥಾನವನ್ನು ಗಳಿಸಿದೆ. ಈ ದ್ವಂದ್ವ, ಈ ವೈರಾಗ್ಯ-ಕುಂಟತನಗಳ ಸಮಾವೇಶ, ಅವರನ್ನು ಸುಧಾರಕ ಸನಾತನಿಯಾಗಿ ಮಾಡಿದೆ. ಅವರ ದೇಶಬಾಂಧವರಿಗೆ ಮಹಾತ್ಮರು ಇಷ್ಟು ಪ್ರಿಯರಾಗಲು ಇದೇ ಮೂಲಕಾರಣ. ಅವರ ಕಾಯದೆ ಅಧ್ಯಯನ ಆದುದು ಇಂಗ್ಲಂಡಿನಲ್ಲಿ. ಆದರೆ ಪಾಶ್ಚಿಮಾತ್ಯ ಶಿಕ್ಷಣದ ಸಾಮಾನ್ಯ ಗುಣದೋಷಗಳು ಅವರಲ್ಲಿ ಬೇರೂರಿಲ್ಲ. ಆಧುನಿಕ ರಾಜಕೀಯ ಮತ್ತು ಆರ್ಥಿಕ ವಿಷಯಗಳಲ್ಲಿ ಅವರಿಗೆ ಪ್ರೌಢಿಮೆಯಿಲ್ಲ. ವಿವೇಕಗಳೆಲ್ಲಾ ಗುತ್ತಿರುವ ರಾಜಕೀಯ ಸ್ಥಿತ್ಯಂತರಗಳಲ್ಲಿ ತಮ್ಮ ಅಜ್ಞಾನವನ್ನು ಅವರು ಹಲವಾರು ಸಲ ಅಂದು ತೋರಿಸಿದ್ದಾರೆ. ಆದರೆ ಹಿಂದೀ ರೈತನ ಅಂತರಂಗವನ್ನು ಅವರಷ್ಟು ಆದ್ಯಂತವಾಗಿ ಓದಿದವನು, ಅವನಲ್ಲಿ ಅಷ್ಟು ಅನುಕಂಪೆಯುಳ್ಳವನು ಬೇರೊಬ್ಬ ಆಗಲಾರ. ಹಿಂದೀ ರೈತನಿಗೂ ಗಾಂಧೀಜಿಗೂ ಒಂದು ಸಮಾನ ಧರ್ಮವಿದೆ. ಅವನಂತೆ ಇವರಿಗೂ ಬಹುಶಃ ಲೌಕಿಕ ವಿಚಾರಕ್ಕಿಂತಲೂ ಹೆಚ್ಚಾಗಿ ನೈಸರ್ಗಿಕ ಪ್ರೇರಣೆಯೇ ಪ್ರಚೋದಕ. ಅವರ "ಅಂತರ್ವಾಣಿ"ಯೆಂದರೆ ಈ ಸ್ವಾಭಾವಿಕ ಆವೇಗವಲ್ಲದೆ ಬೇರಲ್ಲ. ಈ ಆವೇಗಗಳಿಗೆ ಲೌಕಿಕ ಸ್ವರೂಪವೀಯಲು ಮಹಾತ್ಮರು ತಮ್ಮ ಲೇಖಗಳಲ್ಲಿ ಪ್ರಯತ್ನಿಸುತ್ತಾರೆ. ಬುದ್ಧಿಗಿಂತ ಭಾವನೆ, ತರ್ಕಕ್ಕಿಂತ ಪ್ರೇರಣೆ ಪ್ರಕೃತಿಯಲ್ಲಿರುವುದು ಒಡೆದು ಕಾಣುತ್ತದೆ. ಮೂಲ ತತ್ವಗಳಿಗೆ ಗಟ್ಟಿಯಾಗಿ ಅಂಟಿಕೊಂಡಿರುವ ಮಹಾತ್ಮರು ಏನೋ ವೇದಾಂತಿಯಂತೆ ತೋರಬಹುದು. ವಾಸ್ತವಿಕವಾಗಿ, ಸದ್ಯದ ಪ್ರಯೋಜನಕ್ಕಾಗಿ ಸಂದರ್ಭಗಳನ್ನು ಕ್ಷಿಪ್ರವಾಗಿ ಉಪಯೋಗಿಸುವದಕ್ಕಿಂತಲೂ ಪರಮೋದ್ದೇಶವನ್ನು ಸಾವಕಾಶವಾಗಿ ಸಾಧಿಸುವುದರಲ್ಲಿ ಅವರಿಗೆ ಆಸಕ್ತಿ ಹೆಚ್ಚು. ರಾಜಕೀಯ ಸಂಧಾನದಲ್ಲಿ ಗಾಂಧೀಜಿಯ ದೌರ್ಬಲ್ಯಕ್ಕೆ ಕಾರಣ ಇದೇ. ಎರಡನೆಯ ದುಂಡು ಮೇಜಿನ ಪರಿಷತ್ತಿನಲ್ಲಿ ಅವರು ಕೊಟ್ಟ ಭಾಷಣದಿಂದ ಆಧುನಿಕ ರಾಜಕಾರಣದ ತಂತ್ರಕ್ಕಿಂತಲೂ ಧ್ಯೇಯದ ಕಡೆಗೇ ಅವರ ಒಲವು ಅಧಿಕವೆಂದು ಸ್ಪಷ್ಟವಾಗುತ್ತದೆ.

ಗ್ರೀಸಿನ ನಗರ ರಾಜ್ಯಪದ್ಧತಿಗೆ ಪ್ಲೇಟೋನೇ ಪಿತಾಮಹನೆಂದು ಹೇಳುವದುಂಟು. ಗಾಂಧೀಜಿಯವರು ಹಿಂದುಸ್ಥಾನದ ಪ್ರತಿಹಳ್ಳಿಯೂ ಒಂದು ರಾಜ್ಯವಾಗಬೇಕೆಂದೂ ಇಂಥ ೭ ಲಕ್ಷ ಹಳ್ಳಿಗಳನ್ನು ಜನತೆಯ ಇಚ್ಛೆಗನುಸಾರ ಒಂದು ರಾಷ್ಟ್ರವಾಗಿ ಕಟ್ಟಬೇಕೆಂದೂ ಆ ಹಳ್ಳಿಗಳಲ್ಲಿ ಪ್ರತಿ ಒಂದಕ್ಕೆ ಮತಾಧಿಕಾರ ಬೇಕೆಂದೂ ಹೇಳುವರು. ಇದನ್ನು ವಿವರಿಸುತ್ತ ಅವರು ಲುಯಿ ಫಿಶರರಿಗೆ ಅಂದದ್ದು, "ಆಗ, ಒಟ್ಟು ೭ ಲಕ್ಷ ಮತಗಳಾಗುವವು, ೪೦ ಕೋಟಿಯಲ್ಲ. ಅರ್ಥಾತ್ ಪ್ರತಿ ಹಳ್ಳಿಗೂ ಒಂದು ಮತ ದೊರಕುವುದು, ಏನ್ನಿರಿ. ಹಳ್ಳಿಗಳು ಜಿಲ್ಲಾ ಆಡಳಿತಗಳನ್ನು, ಜಿಲ್ಲೆಗಳು ಪ್ರಾಂತಿಕ ಆಡಳಿತಗಳನ್ನು ಮತ್ತು ಅವು ರಾಷ್ಟ್ರದ ಪ್ರಮುಖ ನಾಯಕನಾದ ಅಧ್ಯಕ್ಷನನ್ನು ಆರಿಸುವವು."

"ಅದು ಬಹಳ ಮಟ್ಟಿಗೆ ಸೋವಿಯಟ್ ರಾಜ್ಯಪದ್ಧತಿಯನ್ನು ಹೋಲುತ್ತದೆ," ಫಿಶರರ ಸೂಚನೆ.

"ಹೀಗೇನು? ನನಗೆ ತಿಳಿದಿರಲಿಲ್ಲ. ಇರಲೊಲ್ಲದೇಕೆ?" ಎಂದರು ಗಾಂಧೀಜಿ.

ಸಾಮಾಜಿಕ ಸುಧಾರಣಾರಂಗದಲ್ಲಿ ಗಾಂಧೀಜಿ ನಡೆಸಿದ ಕೆಲಸಕ್ಕೆ ಅವರಲ್ಲಿರುವ ಪ್ರಗತಿ ಪರತೆ, ಸಾಂಪ್ರದಾಯಿಕತೆ ಇವೆರಡರಿಂದಲೂ ಸ್ಫೂರ್ತಿಲಾಭವಾಗಿದೆ. "ನಾನು ನಖಶಿಖಾಂತ ಸುಧಾರಕ. ಆದರೆ ಸುಧಾರಣೆಯ ಆವೇಶದ ಭರದಲ್ಲಿ ಹಿಂದೂತ್ವದ ಮೂಲ ತತ್ವಗಳನ್ನು ತಿರಸ್ಕರಿಸಲು ನಾನು ಸರ್ವಥಾ ಸಿದ್ಧನಾಗಿಲ್ಲ," ಎಂದು ಅವರು ಪ್ರತಿಜ್ಞೆ ಮಾಡುವರು. ಎಲ್ಲ ಮಾನವರು ಸಮಾನರು, ಇದು ಗಾಂಧೀಜಿಯ ಧರ್ಮದ ಮೂಲತತ್ವ. ಅಸ್ಪೃಶ್ಯತೆಯು ಹಿಂದೂ ಸಾಮಾಜಿಕ ಪದ್ಧತಿಗೆ ಅಂಟಿಕೊಂಡ ಕಲಂಕವೆಂದಿಷ್ಟೇ ಅಲ್ಲ, ಮಾನವ ಜಾತಿಯ ಮೇಲಿನ ಅತ್ಯಾಚಾರವೆಂದು ಅವರು ಅವಿಚಲವಾಗಿ ನಂಬುವರು. ಅಸ್ಪೃಶ್ಯತೆಗೆ ಹಿಂದೂ ಶಾಸ್ತ್ರಗಳಲ್ಲಿ ಆಧಾರವೇ ಇಲ್ಲವೆಂದು ಅವರು ವಾದಿಸುವರು. ಜಾತೀಯ ಪದ್ಧತಿಯಿಂದಾಗುವ ಅನ್ಯಾಯಗಳನ್ನು ಮೇಲಿಂದ ಮೇಲೆ ಖಂಡಿಸುವರಾದರೂ ಅವರು ಆ ಪದ್ಧತಿಯನ್ನು ಬುಡಮೇಲು ಮಾಡಲು ಮಾತ್ರ ಒಪ್ಪುವುದಿಲ್ಲ. ಅವರ ಅಭಿಪ್ರಾಯದ ಮೇರೆಗೆ, ವರ್ಣಾಶ್ರಮ ಪದ್ಧತಿಯಲ್ಲಿ "ವಿವಿಧ ವರ್ಣಗಳ ಕರ್ತವ್ಯಗಳು ಹೇಳಲ್ಪಟ್ಟಿವೆ ಹೊರತು ಹಕ್ಕುಗಳಲ್ಲ. . . . ಪರಮಾತ್ಮನ ಸೃಷ್ಟಿಯ ಸೇವೆಗಾಗಿ ಎಲ್ಲ ಮಾನವರ ಜನ್ಮವಾಗುತ್ತದೆ. ಬ್ರಾಹ್ಮಣನು ಜ್ಞಾನದಿಂದ, ಕ್ಷತ್ರಿಯ ಪರಿತ್ರಾಣಶಕ್ತಿಯಿಂದ, ವೈಶ್ಯ ವ್ಯಾಪಾರ ವಿಚಕ್ಷಣತೆಯಿಂದ, ಶೂದ್ರ ದೈಹಿಕ ಶ್ರಮದಿಂದ ತನ್ನ ಕರ್ತವ್ಯವನ್ನು ಪೂರೈಸತಕ್ಕದ್ದು. ಬ್ರಾಹ್ಮಣನು ದೇಹಶ್ರಮ ಮಾಡುವ ಅಥವಾ ತನ್ನನ್ನೂ ಇತರರನ್ನೂ ರಕ್ಷಿಸುವ ಕರ್ತವ್ಯದಿಂದ ವಿಮುಕ್ತನೆಂದು ಇದರ ಅರ್ಥವಲ್ಲ. . . . ಅದೇ ಪ್ರಕಾರ ತನಗೆ ಬೇಕೆನಿಸುವ ಜ್ಞಾನವನ್ನು ಸಂಗ್ರಹಿಸಲು ಶೂದ್ರನಿಗೆ ಯಾವ ಆತಂಕವೂ ಇಲ್ಲ." ಸ್ಥಾನಗೌರವವು ಕರ್ತವ್ಯಗಳನ್ನು ಹೊರಿಸುವುದು, ಹಕ್ಕುಗಳನ್ನು ಕೊಡುವದಿಲ್ಲ—ಎಂದು ಅವರು ಒತ್ತಿ ಹೇಳುತ್ತಾರೆ. ಆದರೆ ಮಹಾತ್ಮರ ಈ ದರ್ಶನಕ್ಕೂ ಈಗ ದೇಶದಲ್ಲಿ ಪ್ರಚುರವಾಗಿರುವ ಆಚಾರಕ್ಕೂ ಬಹಳ ವ್ಯತ್ಯಾಸವುಂಟು. ಜಾತೀಯ ಪದ್ಧತಿಯನ್ನು ಪೂರ್ಣ ನಿರ್ನಾಮ ಮಾಡುವುದೇ ಅಸ್ಪೃಶ್ಯತಾ ನಿವಾರಣೆಯ ನಿಶ್ಚಿತವಾದ ಹಾದಿಯಲ್ಲವೆ?

ಆದರೂ ಸೇವಾಧರ್ಮವೇ ಗಾಂಧೀಜಿಯ ಜೀವದ ಗಂಟು. ಇಂದು ಅವರನ್ನು ಜಗತ್ತು ಸ್ವಾರ್ಥ ತ್ಯಾಗಕ್ಕಾಗಿ ಗೌರವಿಸುತ್ತದೆ, ಮುಂದಾದರೂ ಅದರಿಂದಲೇ ಅವರ ಹೆಸರು ಅಮರವಾಗುವುದು. ಯೋಗಿಗಳನ್ನು ಅರಿತುಕೊಳ್ಳುವುದು ಕಷ್ಟ. ಪಾಶ್ಚಿಮಾತ್ಯರಿಗೆ ಗಾಂಧೀಜಿಯ ಮನೋವ್ಯಾಪಾರ ಒಂದು ಸಮಸ್ಯೆಯಾಗಿ ತೋರುತ್ತದೆ. ಆದರೆ ವ್ಯವಹಾರಿಕ ವೇದಾಂತಿಯಾದ ಮಹಾತ್ಮರಂಥವರನ್ನು ಅರ್ಥಮಾಡಿಕೊಳ್ಳುವುದು ಚಿನ್ನಾಟದ ಮಾತಲ್ಲ. ಈ ಕೃಶ, ದುರ್ಬಲ ಪ್ರಾಣಿಗೆ ದೈಹಿಕ ಧೈರ್ಯವೂ ಬೇಕಾದಷ್ಟಿದೆಯೆಂದು ದಕ್ಷಿಣ ಆಫ್ರಿಕೆಯಲ್ಲಿ ಅವರ ಚಟುವಟಿಕೆಗಳು ಸಿದ್ಧಮಾಡಿವೆ. ತಮ್ಮ ನೈತಿಕ ಧೈರ್ಯದ ಪರಿಚಯವನ್ನೂ ಹತ್ತು ಹಲವು ಬಾರಿ ಕೊಟ್ಟಿದ್ದಾರೆ. ಅವರು ಸಂಪಾದಿಸಿ ಕೊಟ್ಟ ವ್ಯವಹಾರಿಕ ಪ್ರಯೋಜನದ ಮಾತು ಹೇಗೇ ಇರಲಿ, ಜನತೆಯ ಹೃದಯದಲ್ಲಿ ಯಾವ ಚೈತನ್ಯವನ್ನು ತುಂಬಲು ಅವರು ಹೆಣಗಿದರೋ ಅದಕ್ಕಾಗಿ ಅವರ ನೆನಹು ಚಿರಕಾಲ ಬಾಳುವುದರಲ್ಲಿ ಸಂಶಯವಿಲ್ಲ. ಜಗತ್ತಿನ ಅನೇಕ ವಿಭೂತಿಗಳ ಹೆಸರುಗಳು ಮಾನವ ಬಾಂಧವ್ಯದ ಮತ್ತು ಸೌಹಾರ್ದದ ವಿನಾಶದೊಡನೆ ಹೆಣೆದುಕೊಂಡಿವೆ. ಗಾಂಧೀಜಿ ಮಾತ್ರ ಜನತೆಯ ಹೃದಯವನ್ನು ಪ್ರವೇಶಿಸಿ ಅದರಲ್ಲಿ ಮಾನವ ಪ್ರೇಮವನ್ನು ಬೆಳೆಸಿದ್ದಾರೆ, ಬೆಳೆಸುವರು. ಇದೇ ಇಂದಿನ ನಾಗರಿಕತೆಗೆ ಅವರು ಒಪ್ಪಿಸಿದ ಮುಡಿಪು, ಇದರಿಂದಲೇ ಅವರ ಅಮರತೆಯ ಸೊಬಗು.

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು.

(1) ನಿಮ್ಮ ಕೂಡೆ ಮಾಲುಗಳ ಅತ್ಯಧಿಕ ಸಂಚಯವಿದ್ದಲ್ಲಿ ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ. ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ.

(2) ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ, ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು.

(3) ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಪರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು.

(4) ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವಿಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ. ಇಲ್ಲವಾದರೆ ಪ್ರೇರಣೆಗಳಿಗೆ ಅಥವಾ ಸಮಾಜದ ಒತ್ತರಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ವಿಮಾನ, ಹಡಗ ಮೂಲಕ ಟಪಾಲು ಕೊಂಡೊಯ್ಯುವ ಏರ್ಪಾಡುಗಳಾಗಿದ್ದರೂ ನಮ್ಮ ದೇಶದಲ್ಲಿ ಈಗಲೂ ೮೪೦೦೦ ಮೈಲುಗಳಷ್ಟು ಪ್ರದೇಶದಲ್ಲಿ ಓಡುವ ಟಪಾಲು ಜವಾನರಿದ್ದಾರೆ. ೧೪೭ ಸಾವಿರ ಮೈಲುಗಳಷ್ಟು ಒಟ್ಟು ದೂರಗಳಿಗೆ ಟಪಾಲು ದೋಣಿಗಳಲ್ಲಿ ಒಯ್ಯಲಾಗುತ್ತದೆ.

ಅಮೆರಿಕದಲ್ಲಿ ಬ್ರಿಟಿಷರ ತಪ್ಪು

ಭಾರತ ಪ್ರಶ್ನೆಗೆ ಮಿತ್ರ ಪಂಚಾಯತು

ದೇಶಿರಾಜರ ಆತಂಕ ಸುಳ್ಳು

ಭಾರತೀಯರ [illegible] ಎಂದು ಸುಳ್ಳು ಪ್ರಚಾರ ನಡೆಯುವ [illegible] ಇಂಡಿಯಾ [illegible] ವಿಶ್ವವಿದ್ಯಾಲಯದ [illegible] ಸಮಾರಂಭ ಭಾಷಣದಲ್ಲಿ [illegible] ಪ್ರಚುರಿಸುವ ಕೆಲವು ಅಮೂಲ್ಯ ಸಲಹೆಗಳನ್ನು ಕೊಟ್ಟಿರುವರು. ಅವುಗಳಲ್ಲಿನ [illegible] ಲಾಗಿದೆ.

ಭಾರತ ಸಮೇತವಾಗಿ ಎಲ್ಲಾ ವಸಾಹತು ದೇಶಗಳಲ್ಲಿ ಸ್ವತಂತ್ರಾಡಳಿತ ಪದ್ಧತಿಯನ್ನು ಸ್ಥಾಪಿಸುವುದು ಬ್ರಿಟಿಷಸರಕಾರದ ಮನೋಭಿಷ್ಟವೆಂದು ಸಾರುತಿದ್ದಾರೆ. ಮತ್ತು ಕೆನಡದಲ್ಲಿ ಹ್ಯಾ ಕಮಿಶನರರಾಗಿರುವ ಮಿ. ಮಾಲ್ಕೋಮ್ ಮೆಕ್ಡೋನಾಲ್ಡರು ಭಾರತದಲ್ಲಿ ರಾಜಕೀಯ ಪ್ರಗತಿಗೆ ತಡೆಯಾದುದು ಭಾರತೀಯರಿಂದಲೇ ಇರುತ್ತದೆ. ಅಲ್ಲಿ ಹಿಂದೂ ಮುಸ್ಲಿಂ ಮತ್ತು ದೇಶೀಯ ಸಂಸ್ಥಾನರಾಜರುಗಳಲ್ಲಿ ಪರಸ್ಪರ ತಿಕ್ಕಾಟವಿದ್ದುದರಿಂದಲೇ ಆ ದೇಶ (ಭಾರತ) ದಲ್ಲಿ ಯಾವುದೂ ಸಾಧ್ಯವಾಗಲಿಲ್ಲ' ಹೀಗೆಂದು ಒಂದು ಲೇಖನ ಪ್ರಕಟಿಸಿರುವರು.

ಬ್ರಿಟಿಷರು ನಿಜವಾಗಿ ಭಾರತದ ಹಿತ ಬಯಸುವವರಾದರೆ ಕೂಡಲೇ ಮಿತ್ರ ರಾಷ್ಟ್ರಗಳಿಗೂ ಎಲ್ಲಾ ಪಕ್ಷಗಳಿಗೂ ಸಮ್ಮತವಿರುವ ಒಂದು ಅಂತರಾಷ್ಟ್ರೀಯ ಸಂಧಾನ ತೀರ್ಪುಕೊಡುವ ಸಮಿತಿ ಸ್ಥಾಪನೆಯಾಗಲಿ. ಅವರು ಮಾಡಿದ ಇತ್ಯರ್ಥಗಳಿಗೆ ಎಲ್ಲರೂ ಒಪ್ಪಬೇಕು.

ಮಹಾ ಭಾರತದ ನಿದರ್ಶನ

ದ್ರೋಣಾಚಾರ್ಯರನ್ನು ಕೊಲ್ಲಲು ಶ್ರೀಕೃಷ್ಣನು ಒಂದು ವಿಧಾನವನ್ನು ಕಂಡುಹಿಡಿದನು. ಧರ್ಮರಾಯನಿಂದ 'ಅಶ್ವತ್ಥಾಮೋ ಹತಃ ಕುಂಜರ' (ಅಶ್ವತ್ಥಾಮವೆಂಬ ಆನೆ ಮಡಿಯಿತು) ಎಂಬ ಮಾತುಗಳನ್ನು ಉಚ್ಚರಿಸಿದನು. ಸತ್ಯಶೀಲನಾದ ಧರ್ಮರಾಯನು ಹೇಳಿದ್ದು-ಅಶ್ವತ್ಥಾಮನೆಂಬ ಆನೆ ಮರಣಪಟ್ಟಿತೆಂದು. ಆದರೆ ಕೊನೆಯ ಆನೆಯೆಂಬ ಶಬ್ದವು ದ್ರೋಣಾಚಾರ್ಯರ ಕಿವಿಗೆ ಬೀಳದಂತೆ ಮಾಡಲು ಶ್ರೀಕೃಷ್ಣನು ಗಟ್ಟಿಯಾಗಿ ಶಂಖನಾದ ಮಾಡಿದನು. ಮಗನೇ ಸತ್ತಿರಬೇಕೆಂದು ದ್ರೋಣನು ಶಸ್ತ್ರಗಳನ್ನಿಟ್ಟು ದೇಹತ್ಯಾಗ ಮಾಡುವವನಾದನು.

ಆದರೆ ಆಗ ನಿಜವಾಗಿ ಅಶ್ವತ್ಥಾಮನು ಮಡಿದಿರಲಿಲ್ಲ. ಧರ್ಮರಾಯನು ಸುಳ್ಳು ಹೇಳಿದ್ದಾನೊ? ಅದೂ ಇಲ್ಲ. ಆದರೆ ದ್ರೋಣನಲ್ಲಿ ಆ ನಂಬಿಕೆ ಹೇಗೆಬಂತು. ಕೃಷ್ಣನು ಯುಧಿಷ್ಠಿರನ ವಾಕ್ಯ ಮುಗಿಯುವುದರೊಳಗೆ ಮಾಡಿದ ಶಂಖ ಧ್ವನಿಯೇ ಈ ಎಲ್ಲ ಅನರ್ಥಕ್ಕೆ ಕಾರಣವಾಯಿತು.

ತಮ್ಮ ಪ್ರಚಾರವೆಂಬ ಶಂಖಧ್ವನಿಯಿಂದ ನಮ್ಮ ನಿಜವಾದ ಪರಿಸ್ಥಿತಿಯನ್ನು ಅಮೇರಿಕದವರಿಗೂ ಅವರ ನಿಜವಾದ ಅಭಿಪ್ರಾಯ ಇಚ್ಛೆಗಳನ್ನು ನಮಗೂ ಸರಿಯಾಗಿ ತಿಳಿಯದಂತೆ ಮಾಡುವುದೇ ಈ ಪ್ರಚಾರ ಚಳವಳದ ಉದ್ದೇಶ. ಅದುದರಿಂದ ನಾವು ಈ ಶಂಖಧ್ವನಿಗೆ ಮೋಸ ಹೋಗಬಾರದು.

ದೇಶಿ ರಾಜರ ಪ್ರಶ್ನೆ

ಅಖಿಲ ಭಾರತದ ಪ್ರಶ್ನೆ ಬಂದಾಗ ಸಾರ್ವಭೌಮ ಸರಕಾರದವರು ತಮಗೂ ದೇಶಿಯ ರಾಜರ ಒಳಗೂ ಇರುವ ಕರಾರು ಒಪ್ಪಂದಗಳನ್ನು ಎದುರಿಗೆ ತಂದು ಅವುಗಳನ್ನು ಮನ್ನಿಸುವ ಪವಿತ್ರ ಕರ್ತವ್ಯದ ತಮ್ಮ ಇಚ್ಛೆಯನ್ನು ಪ್ರದರ್ಶಿಸುತ್ತಾರೆ.

ಹಿಂದಿನ ವ್ಯಾಸ್‌ರಾಯರುಗಳು ಇಲ್ಲಿಯ ದೇಶಿ ರಾಜರ ಕುರಿತು ಹೇಗೆ ವರ್ತಿಸಿದರೆಂಬುದರ ಕುರಿತು ಔಂಧ್, ಜಾನ್ಸಿ, ಸತಾರಾ, ನಾಗ್ಪುರ್ ಈ ಸಂಸ್ಥಾನಗಳಲ್ಲಿದ್ದ ದೇಶಿರಾಜರ ಇತಿಹಾಸದಲ್ಲಿ ಸರಿಯಾಗಿ ವರ್ಣಿಸಿದ್ದನ್ನು ನಾವು ಓದಿದ್ದೇವೆ.

ಬ್ರಿಟಿಷರು ಮನಸ್ಸು ಮಾಡಿದರೆ ದೇಶಿರಾಜರ ಕಡೆಯಿಂದ ಯಾವುದೊಂದು ತರದ ಆಕ್ಷೇಪ ಬರಲಾರದೆಂದು ಖಂಡಿತವಾಗಿ ಹೇಳಬಹುದು. ಕೆಲವು ಸಂಸ್ಥಾನಗಳಲ್ಲಿ ಆಗಲೇ ಪ್ರಜಾಭಿಪ್ರಾಯಕ್ಕೆ ಮನ್ನಣೆಕೊಡುವ ಸರಕಾರ ಪದ್ಧತಿಯನ್ನು ಸ್ಥಾಪಿಸಿ ಆದರ್ಶ ಕಲ್ಪಿಸಲಾಗಿದೆ.

ದೇಶಿರಾಜರು ತಮ್ಮ ಒಪ್ಪಂದಗಳಿಗೆ ಬ್ರಿಟಿಷ್ ಸರಕಾರದವರು ಮನ್ನಣೆಕೊಡಬೇಕೆಂದು ಕೇಳುತ್ತಾರೆಯೇ ವಿನಹ ತಾವು ತಮ್ಮ ಸ್ವಂತ ಪ್ರಜೆಗಳ ಕಡೆಗೆ ತೋರಿಸಬೇಕಾದ ಕರ್ತವ್ಯವನ್ನು ಅವರು ತೃಪ್ತಿಕರವಾಗಿ ಪೂರೈಸಲು ಪ್ರಯತ್ನಿಸುವುದಿಲ್ಲ. ದೇಶಿರಾಜರು ನಿರತವಾಗಿ ನಿರಂಕುಶ ಪ್ರಭುತ್ವವಾದಿಗಳಾಗಿ ಮೆರೆಯಲು ಸಾಧ್ಯವಾಗಲಾರದು.

ದೇಶಿರಾಜರು ತಮ್ಮ ಒಪ್ಪಂದ ಕರಾರುಗಳ ನೆಪದಿಂದ ಬ್ರಿಟಿಷ್ ಸರಕಾರದೊಂದಿಗೆ ಸಹಕರಿಸಿ ದೇಶದ ರಾಷ್ಟ್ರೀಯ ಚಳವಳದ ಭಾವನೆಯನ್ನು ವಿರೋಧಿಸಲು ಪ್ರಯತ್ನಿಸುತ್ತಾರೆ. ದೇಶಿಸಂಸ್ಥಾನಗಳ ಮತ್ತು ಬ್ರಿಟಿಷ್ ಇಂಡಿಯಾದ ಜನರೊಳಗೆ ಯಾವ ಹೆಚ್ಚಿನ ಸಾಂಸ್ಕೃತಿಕ, ಭಾಷಾ ಮತ್ತು ಆಚಾರ ವಿಚಾರ ಭೇದಗಳಿಲ್ಲ.

ಪಾಕಿಸ್ತಾನ್ ಪ್ರಕರಣ

ಜಗತ್ತಿನ ಎಲ್ಲಾ ದೇಶಗಳಲ್ಲೂ ಅಲ್ಪಸಂಖ್ಯಾಕರ ವಿಷಯವಾಗಿ ತೃಪ್ತಿಕರವಾದ ಇತ್ಯರ್ಥವನ್ನು ಮಾಡಲಾಗಿದೆ. ಭಾರತದಲ್ಲೂ ಅದೇ ಪ್ರಕಾರವಾಗಿ ಯಾಕೆ ಮಾಡಬಾರದು? ಆದರೆ ಎಷ್ಟು ದೊಡ್ಡ ಅಲ್ಪ ಸಂಖ್ಯಾಕರ ಪಕ್ಷವಾಗಲೀ ದೇಶದ ಬಹುಸಂಖ್ಯಾಕರ ನ್ಯಾಯವಾದ ಆಶೆ ಆಶಯಗಳನ್ನು ಅದು ತಡೆದಿರುವಷ್ಟು ಶಕ್ತಿಯುಳ್ಳದ್ದಾಗಬಾರದು.

ಇಲ್ಲಿಯ ಬಹು ಸಂಖ್ಯಾಕರು ಅಲ್ಪಸಂಖ್ಯಾಕರ ಯಾವ ನ್ಯಾಯವಾದ ಸ್ಥಾನಮಾನಗಳನ್ನು ಅಲ್ಲಗಳೆದಿಲ್ಲ. ಪ್ರತಿಯೊಂದು ಅಲ್ಪ ಸಂಖ್ಯಾಕರಿಗೆ ನಾಗರೀಕ ಪ್ರಪಂಚದ ಪ್ರತಿಯೊಂದು ಸೌಕರ್ಯವನ್ನು ಒದಗಿಸಿಕೊಡಲು ಇಲ್ಲಿಯ ಬಹು ಸಂಖ್ಯಾಕರು ಒಪ್ಪಿರುವರು.

ನಾನು ಹಿಂದೂ ಮುಸ್ಲಿಂ ಒಪ್ಪಂದಕ್ಕಾಗಿ ಪ್ರಯತ್ನಿಸಿದವನು. ನನ್ನ ಯೋಜನೆಗೆ ದೇಶದ ಆಧ್ಯ ನಾಯಕನ ಬೆಂಬಲವು ದೊರಕಿದೆ. ಆ ನನ್ನ ಯೋಜನೆಯು ಸಾರ್ವಜನಿಕರ ಮುಂದೆ ಬಹಿರಂಗವಾಗಿ ಇಡಲ್ಪಟ್ಟಿದೆ. ಅದನ್ನು ಎಲ್ಲರೂ ಟೀಕಿಸಿ ವಿಮರ್ಶೆ ಮಾಡಿ ಯೋಗ್ಯ ಸಲಹೆಕೊಡಬಹುದು.

ಯಾರ ಸ್ಥಾನಮಾನಕ್ಕೂ ಕುಂದು ಬರದಂತಹ, ಯಾವ ಜನರಿಗೂ ಸಂಕಷ್ಟಮಯವೆಂದೆನಿಸುವಂತಹದನ್ನು ನಾವು ಮಾಡಬಾರದು. ಆಯಾ ಪ್ರಾಂತ್ಯದ ಬಹುಸಂಖ್ಯಾಕರನ್ನು ಆಡಳಿತದಲ್ಲಿ ಅಧಿಕಾರವಿರುವಂತೆ ಯೋಚಿಸುವುದು ನ್ಯಾಯವಾದುದಾಗಿದೆ. ಇದೇ ಶರ್ತವನ್ನು ನಾವು ಜಿನ್ನರಿಗೂ ಒಪ್ಪಿಸಲು ಪ್ರಯತ್ನಿಸಿದ್ದು. ಆದರೆ ಅವರು ಅದಕ್ಕೆ ಒಪ್ಪದಾದರು.

ಮುಸ್ಲಿಂ ಮುಖಂಡರ ದೊಡ್ಡ ತಪ್ಪು

ನನ್ನ ಅಭಿಪ್ರಾಯದಲ್ಲಿ ಮುಸ್ಲಿಂ ಮುಖಂಡರು ತಾವು ಸ್ವಂತ ಸಾರಿದ ಧೋರಣೆಯನ್ನು ಅನುಸರಿಸಲು ಸಮರ್ಥರಾಗದ್ದು ಅವರ ದೊಡ್ಡ ಅಶಕ್ತಿಯೆನ್ನಬೇಕು.

ಮುಸ್ಲಿಂ ಲೀಗಿಗೆ ಯಾವುದೊಂದು ತರದ ಇತ್ಯರ್ಥವೂ ಬೇಕಾಗಿಲ್ಲ. ನಿರಂತರವಾಗಿ ಆತಂಕ ತರ್ಕಗಳನ್ನು ತಂದೊಡ್ಡುವುದೇ ಅದಕ್ಕೆ ಹೆಚ್ಚು ಪ್ರಿಯವೆಂದು ತೋರುತ್ತದೆ. ಪ್ರತ್ಯೇಕ ಪ್ರಾಂತ್ಯವೊಂದರ ಆಡಳಿತವನ್ನು ವಹಿಸುವ ಜವಾಬುದಾರಿಕೆಯನ್ನು ಒಪ್ಪುವ ಬದಲು ಅವರು ಅದನ್ನು ನಿರಾಕರಿಸುವುದರಲ್ಲಿ ಹೆಚ್ಚು ಗಮನ ಕೊಟ್ಟರು. ಯಾವುದನ್ನಾದರೂ ಕೇಳುವಾಗ ಅವರಿಗೆ ಹೆಚ್ಚು ಧೈರ್ಯಸ್ಥೈರ್ಯಗಳಿವೆ. ಆದರೆ ಅದು ಕೊಡಲ್ಪಡುವಾಗ ಅದನ್ನು ಸ್ವೀಕರಿಸುವಷ್ಟು ಧೈರ್ಯ ಅವರಲ್ಲಿಲ್ಲ.

ಮುಸ್ಲಿಂ ಲೀಗು ಪ್ರಜಾಪ್ರಭುತ್ವ ಪದ್ಧತಿಯನ್ನು ಸ್ಥಾಪಿಸಲು ಸಹಾಯವಾಗುವ ಬದಲು ಅದನ್ನು ವಿರೋಧಿಸಲು ತನ್ನ ಪೂರ್ಣ ಶಕ್ತಿಯಿಂದ ನಿರ್ಧರಿಸಿ ಇದರಿಂದ ಪಾಕಿಸ್ತಾನ್ ಯೋಜನೆಗೆ ಮುಸ್ಲಿಂ ಲೀಗೇ ಕೊಡಲಿ ಹಾಕಿಕೊಂಡಿದೆ.

ಮುಸಲ್ಮಾನೇತರ ಪ್ರಾಂತ್ಯಗಳ ಪ್ರದೇಶಗಳನ್ನು ಸೇರಿಸಿಕೊಳ್ಳದೆ ಪಾಕಿಸ್ತಾನವು ಸಾಧ್ಯವಿಲ್ಲವೆಂದು ಲೀಗಿನ ಅಭಿಪ್ರಾಯವೆಂದಾದರೆ ಭಾರತವನ್ನು ವಿಚ್ಛೇದನಗೊಳಿಸಲಾಗುವುದಿಲ್ಲವೆಂಬುದಕ್ಕೆ ಅದೇ ದೊಡ್ಡ ನಿದರ್ಶನವಾಗುತ್ತದೆ. ಅಖಂಡ ಹಿಂದೂಸ್ಥಾನ ತತ್ವಕ್ಕೇ ಇದರಿಂದ ಸಮರ್ಥನೆಮಾಡಿದಂತಾಗುತ್ತದೆ. ನಿಜವಾಗಿಯೂ ಈ ವಿಷಯದ ಮೇಲೇ ಗಾಂಧಿ ಜಿನ್ನಾ ಮಾತುಕತೆಗಳು ಮುರಿದವು.

ಮುಸಲ್ಮಾನರು ಅಖಿಲ ಭಾರತ ಆಡಳಿತಕ್ಕೆ ಸೇರಿದ ಇಲ್ಲವೆ ಸೇರಿರದ, ಸ್ವತಂತ್ರವಾದ ಇಲ್ಲವೇ ಪ್ರತ್ಯೇಕವಾದ ಯಾವ ರೀತಿಯಲ್ಲಿ ಬೇಕಾದರು ಸರಿಯೇ ಅವರು ಇಚ್ಛೆಪಟ್ಟಂತೆ ಇರಬಹುದು. ಆದರೆ ಅದಕ್ಕೆ ನಾವು ಹೇಳಿದ ಶರ್ತವೆಂದರೆ ಇದು: ನಿಮ್ಮ ಪ್ರಾಂತ್ಯದಲ್ಲಿನ ಬಹುಸಂಖ್ಯಾಕ ಪ್ರತ್ಯೇಕ ಆಡಳಿತ ಪ್ರದೇಶದವರಿಗೆ ಅಧಿಕಾರ ಕೊಡಬೇಕೆಂದು.

ನಾವು ಸುಮ್ಮನಿರಬಾರದು

ಸುಮ್ಮನೆ ಕೂತುಕೊಂಡರೆ, ತನ್ನಷ್ಟಕ್ಕೆ ಇಂದ್ರಜಾಲದೋಪಾದಿ ನಮ್ಮ ಸಂಕಷ್ಟಗಳು ಸುಧಾರಿಸುತ್ತವೆ ಎಂಬುದು ತಪ್ಪು ಭಾವನೆ. ನಾವು ಯೋಗ್ಯ ಸಂಧರ್ಭಗಳನ್ನು ಹಿಡಿದು ಮುಂದುವರಿಯಬೇಕು. ಗುಲಾಮಗಿರಿಯಿಂದ ನಮ್ಮಲ್ಲಿ ಅನೇಕ ತರದ 'ಜಾಡ್ಯ'ಗಳು ಉಂಟಾಗಿವೆ. ಆದರೆ ಅಧಿಕಾರ ಹಿಡಿಯುವುದರಿಂದ ನಾವದನ್ನು ಸುಧಾರಿಸಬಹುದು.

ರಚನಾತ್ಮಕ ಕಾರ್ಯಕ್ರಮದ ಸರಿಯಾದ ಧೋರಣೆಯೆಂದರೆ ಸರಕಾರದ ಯಂತ್ರವನ್ನು ಹಿಡಿಯುವುದು. ನಾನು ಹೇಳಿದ ಯೋಜನೆಯು ಉದ್ದವೂ ಸಂಕಷ್ಟಮಯವೂ ಇರಬಹುದು. ಆದರೆ ನಮ್ಮ ಕ್ರಾಂತಿಕಾರಕ ಚಳವಳದ ಧೋರಣೆಯನ್ನು ಬಿಡದೆ, ಹತ್ಪೂರ್ವಕವಾಗಿ, ಪರಸ್ಪರ ನಂಬಿಕೆಯಿಂದ ಅಪನಂಬಿಕಸ್ಥರಲ್ಲಿ ನಂಬಿಕೆಯನ್ನು ಹುಟ್ಟಿಸಿ ಕಾರ್ಯಸಾಧನೆ ಮಾಡಬೇಕಾದುದು ನಮ್ಮ ಕರ್ತವ್ಯವಿದೆ.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st July, 1944.

CAPITAL AND LIABILITIES	Rs. As. Ps.	PROPERTY AND ASSETS	Rs. As. Ps.
1. Paid up Capital	14,39,556- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,–065 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39,895- 5- 4
7. Other liabilities and undisbursed profits	3,62,459- 2- 6		
Total	1,14,27,102-10-11	Total	1,14,27,102-10-11

ಸಿಹಿ ಸುದ್ದಿ ಸಂಗ್ರಹ

ನಮ್ಮ ದೇಶದ ಟಪ್ಪಾಲು ಕಛೇರಿಯಿಂದ ಒಂದು ವರ್ಷಕ್ಕೆ ಸುಮಾರು ೧೫೦ ಕೋಟಿ ಕಾಗದ ಪಾರ್ಸೆಲುಗಳು ಬಟವಾಡೆ ಮಾಡಲ್ಪಡುತ್ತವೆ. ಟಪ್ಪಾಲು ಹಂಚುವಿಕೆಯ ವಿಷಯದಲ್ಲಿ ಬರುವ ದೂರುಗಳು ಒಂದು ಲಕ್ಷದಲ್ಲಿ ಒಂದು.

* * *

ಇತರ ವಾಹನಗಳ ಮೂಲಕ ಟಪ್ಪಾಲು ಒಯ್ಯಲ್ಪಡುವ ಮೈಲು ದೂರ: ಎತ್ತಿನ ಗಾಡಿ ೪೫೦೦; ರೈಲ್ವೇ ೩೮೦೦೦; ಮೋಟಾರು ೨೭೦೦೦; ಹಡಗುಗಳು ೩೦೦; ವಿಮಾನ ಮೂಲಕ ೧೬೮೦೦೦;

ಕಳೆದ ವರ್ಷ ೨॥ ಕೋಟಿ ಟೆಲಿಗ್ರಾಮುಗಳು ನಿರ್ವಹಿಸಲ್ಪಟ್ಟಿವೆ. ನಮ್ಮ ದೇಶದಲ್ಲಿ ಸುಮಾರು ೧೦೮ ಸಾವಿರ ಟೆಲಿಫೋನುಗಳಿವೆ. ಹೊರದೇಶ ಒಳದೇಶದ ಅತೀ ದೂರದ ಕೇಂದ್ರಗಳಿಗೆ ದಿನಕ್ಕೆ ೧೧ ಸಾವಿರ ಕರೆಗಳು ಕಳುಹಿಸಲ್ಪಡುತ್ತವೆ.

* * *

ಬಟಾಟೆ, ಮತ್ತು ಟೊಮೆಟೊ ಗಿಡಗಳು ಹೊಗೆಸೊಪ್ಪಿನ ಗಿಡದ ಜಾತಿಗೆ ಸೇರಿದವುಗಳು.

* * *

ಕ್ರಿಸ್ತ ಪೂರ್ವ ಒಂದು ಸಾವಿರ ವರ್ಷಗಳ ಹಿಂದೆ ಚೀನದಲ್ಲಿ ಆಳುತಿದ್ದ ಚೌ ಎಂಬ ವಂಶದ ಅರಸರು ತಮ್ಮ ರಾಜಧಾನಿಯಲ್ಲಿ ಜಗತ್ತಿನಲ್ಲಿ ಮೊದಲಿನ ಮೃಗಾಲಯ (ಜೂ)ವನ್ನು ಸ್ಥಾಪಿಸಿದ್ದರು. ಈಗಿನವುಗಳಂತೆ ವಿಚಿತ್ರ ಮೃಗಗಳು ಅದರಲ್ಲಿ ಸಾಕಲ್ಪಡುತಿದ್ದುವು.

* * *

ಜಗತ್ತಿನಲ್ಲಿ ಅತೀ ಸಣ್ಣ ಸೈನ್ಯ ದಳವುಳ್ಳ ರಾಜ್ಯವು ಫ್ರಾನ್ಸ್ ಇಟೆಲಿ ಗಡಿಯ ನಡುವೆ ಇರುವ ಮೊನಾಕೊ ಎಂಬುದು. ಇದರ ಸೈನ್ಯ ಸಂಖ್ಯೆ ಒಟ್ಟು ೧೬೭.

ಹಿಟ್ಲರನು ಹಿಡಿದಿರುವ ಲಕ್ಸಮ್‌ಬರ್ಗ್ ಎಂಬ ಚಿಕ್ಕ ರಾಜ್ಯದ ಸೈನ್ಯ ೩೩೫. ಇಟೆಲಿಯಲ್ಲಿರುವ ಸೇನ್ ಮೆರಿನೊ ಎಂಬ ರಾಜ್ಯದ ಸೈನ್ಯ ಶಾಂತಕಾಲದಲ್ಲಿ ಬರೀ ೬೦.

* * *

ನಾವು ಸಾಮಾನ್ಯವಾಗಿ ಕಾಣುವ ಮನೆಗೋಡೆಯ ಮೇಲಿನ ಹಲ್ಲಿಯ ಜಾತಿಯು ೧೬೦೦ ಬೇರೆ ಬೇರೆ ಜೀವಿಗಳಿವೆ. ಮೊಸಳೆ ಹಲ್ಲಿಯ ಜಾತಿಗೆ ಸೇರಿದ್ದು.

* * *

ಕ್ರಿಸ್ತಪೂರ್ವ ಅಲೆಕ್ಸಾಂಡ್ರಿಯಾದಲ್ಲಿನ ಸಾರ್ವಜನಿಕ ಪುಸ್ತಕ ಸಂಗ್ರಹಾಲಯದಲ್ಲಿ ೪ ಲಕ್ಷಕ್ಕೆ ಬರಹ ಗ್ರಂಥಗಳಿದ್ದುವು. ಲಂಡನ್ ಲ್ಯಾಬ್ರೆರಿಯಲ್ಲಿ ೫೦ ಮೈಲು ಉದ್ದಕ್ಕೆ ಇಡಬಹುದಾದಷ್ಟು ಪುಸ್ತಕಗಳಿವೆ.

* * *

ನಾಗಪುರದ ರೈಲ್ವೇ ಸ್ಟೇಶನಿನಲ್ಲಿಳಿದಾಗ ಓರ್ವ ಹಿಂದೂ ಸಂಘಟನನು ಕಪ್ಪುಪತಾಕೆ ಹಿಡಿದು ಅವರಿಳಿಯುವಲ್ಲಿ ನಿಂತಿದ್ದನು. "ನನಗೆ ಸ್ವೀಕರಿಸಲು ಬಂದುದಕ್ಕೆ ತುಂಬಾ ಆಭಾರಿಯಾಗಿದ್ದೇನೆ" ಎಂದರು ರಾಜಾಜಿ. ರಾಜಾಜಿಯನ್ನು ವಿಶ್ವವಿದ್ಯಾಲಯದ ಪದವೀದಾನ ಸಮಾರಂಭಕ್ಕೆ ಆಹ್ವಾನಿಸಬಾರದಾಗಿ ಕೆಲ ಹಿಂದೂ ಸಂಘದವರ ಉದ್ದೇಶವಿತ್ತು. ಇದನ್ನು ತಿಳಿದ ಚಕ್ರವರ್ತಿ ಆಚಾರ್ಯರು "ನಿಮ್ಮ ಉದ್ದೇಶಗಳು ಸರಿಯಾಗಿದ್ದರೆ, ನಿಮಗೆ ಇತರರ ಹೆದರಿಕೆ ಏನು?" ಎಂದು ತಮ್ಮ ಭಾಷಣದಲ್ಲಿ ಕೇಳಿದರು.

* * *

ಕೆಲವು ದಿನಗಳ ಹಿಂದೆ ಪಾಂಡುಚೇರಿಯ ತಮ್ಮ ಆಶ್ರಮದಲ್ಲಿ ಶ್ರೀ ಅರಬಿಂದೂ (ಅರವಿಂದ ಘೋಶ್) ಅವರು ಸುಮಾರು ಒಂದು ಸಾವಿರ ಪ್ರೇಕ್ಷಕರಿಗೆ ದರ್ಶನಕೊಟ್ಟರು. ಅಂದು ಅವರು ಅಧ್ಯಾತ್ಮ ಸಾಧನೆಯಲ್ಲಿ ಜಯಶೀಲರಾದ ೧೬ನೇ ವರ್ಧಂತ್ಯುತ್ಸವ. ಈ ಸಾಧನೆಯಿಂದ ಅವರಿಗೆ ನವ ಜ್ಞಾನ ಜ್ಯೋತಿಯೊಂದು ಪ್ರಕಾಶವಾಗಿರುತ್ತದೆ. ರೈಪುರಿನ ಲಾರ್ಡ್ ಮತ್ತು ಲೇಡಿ ಸಿನ್ಹಾ, ಸಿ. ಸಿ. ದತ್ ಐ. ಸಿ. ಎಸ್ ಇವರಲ್ಲದೆ ಅನೇಕ ಅಧ್ಯಕ್ಷ ಮಹನೀಯರು ಹಾಜರಿದ್ದರು.

* * *

ತೆಂಗಿನ ಕೊಬ್ಬರಿಯನ್ನು ಹೆಚ್ಚು ಬೆಲೆಗೆ ಮಾರಿದ ಕರಾಚಿಯ ಒಂದು ಮಿಲ್ಲಿನವರಿಗೆ—ಮಿಲ್ಲು ಜನರಿಗೆ—೭೦ ಸಾವಿರ ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ.

* * *

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿದ್ದು ೧೯೪೨ರ ಆಗಸ್ಟ್ ಗಲಭೆಯಲ್ಲಿ ಬಂಧಿಸಲ್ಪಟ್ಟು, ಕೆಲವು ವಾರಗಳ ಹಿಂದೆ ಬಿಡುಗಡೆಮಾಡಲ್ಪಟ್ಟ ಡಾ। ಸೆಯದ್ ಮಹಮ್ಮದ್ ಅವರು ಜೈಲು ಖಾನೆಯಿಂದ ಹೊರಬರುವಾಗ ಬಲಾತ್ಕಾರವಾಗಿ ಜಡ್ತಿ ಮಾಡಲ್ಪಟ್ಟರೆಂಬ ಸುದ್ದಿಯನ್ನು ಎಸೆಂಬ್ಲಿಯಲ್ಲಿ ಸರಕಾರ ಸದಸ್ಯರು ಅಲ್ಲಗಳೆದಿದ್ದರು. ಇದುತನಕ ಆ ವಿಷಯದಲ್ಲಿ ಪ್ರಸ್ತಾಪವೆತ್ತದೆ ಸುಮ್ಮನಿದ್ದ ಡಾ। ಮಹಮ್ಮದರು "ಅವರ ಮಟ್ಟಿಗೆ ಅದು ಸುಳ್ಳು. ಆದರೆ ಬಲಾತ್ಕಾರವಾಗಿ ಜೈಲಿನ ಬಾಗಿಲಿನ ಹೊರಬಂದ ಮೇಲೂ ನನ್ನನ್ನು ಜಡ್ತಿ ಮಾಡಿದ ವಿಷಯ ಮಾತ್ರ ನಿಜವಾದುದು" ಎಂದಿರುವರು.

* * *

ಪ್ರಖ್ಯಾತ ಸಮತಾವಾದಿ ಜಯಪ್ರಕಾಶ ನಾರಾಯಣರ ಪರವಾಗಿ ವಾದಿಸಲು ಇಂಗ್ಲೆಂಡಿನಿಂದ ಪ್ರಖ್ಯಾತ ವಕೀಲರನ್ನು ತರಿಸಲು ಅವರ ಸ್ನೇಹಿತರು ಪ್ರಯತ್ನಿಸುವರು.

* * *

"ದೇಶದ ಮುಖಂಡರು ಬಂಧಿಖಾನೆಯಲ್ಲಿ ಕೊಳೆಯುತ್ತಿರುವಾಗ, ದೇಶವು ಆಹಾರ ದುರವಸ್ಥೆಯಿಂದ ನರಳುವಾಗ ನಾನು ಆರೋಗ್ಯಕ್ಕಾಗಿಯೂ, ನನ್ನ ಎರಡು ಹೆಣ್ಣು ಮಕ್ಕಳನ್ನು ನೋಡುವುದಕ್ಕಾಗಿಯೂ ನಾನು ಇಂದು ಅಮೇರಿಕಕ್ಕೆ ಹೊರಟಿದ್ದೇನೆ. ಆದರೆ ನಮ್ಮ ದೇಶದಲ್ಲಿ ಸತ್ಯಕ್ಕೂ, ನ್ಯಾಯಕ್ಕೂ ಕೊನೆಗೆ ವಿಜಯಸಿಗುವುದೆಂಬ ಅಖಂಡ ಭರವಸೆಯು ನನ್ನಲ್ಲಿದೆ." ಹೀಗೆಂದು ವಿಜಯಲಕ್ಷ್ಮಿ ಪಂಡಿತರು ತಿಳಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಬೇಗ ಸಿಕ್ಕಲಿ

ಬ್ರಿಟಿಷ್ ಉಪಮಂತ್ರಿಗಳ ಉಪದೇಶ

ಇವರು ನೆಹರು ಸ್ನೇಹಿತರು.

ಒಂದು ತಿಂಗಳ ಹಿಂದೆ ಬ್ರಿಟಿಷ್ ಮಂತ್ರಿ ಮಂಡಳದ ಭಾರತ ಶಾಖೆಯ ಉಪಮಂತ್ರಿಗಳಾಗಿ ಚರ್ಚಿಲ್ಲರಿಂದ ನೇಮಿಸಲ್ಪಟ್ಟ ಅರ್ಲ್ ಆಫ್ ಲಿಸ್ಟೊವೆಲ್ ಅವರು "ಭಾರತೀಯರು ತಮ್ಮ ಸ್ವಂತ ಸರಕಾರ ಚುನಾಯಿಸುವುದರಲ್ಲಿ ನನಗೆ ತುಂಬಾ ವಿಶ್ವಾಸವಿದೆ" ಎಂದು ಒಂದು ವೃತ್ತ ಪತ್ರಿಕಾ ಸಂದರ್ಶನದಲ್ಲಿ ತಿಳಿಸಿದರು.

"ಭಾರತದಲ್ಲಿ ರಾಜ್ಯಾಂಗ ಸುಧಾರಣೆ ಮಾಡಬೇಕೆಂಬುದನ್ನು ನಾವು (ಬ್ರಿಟಿಷರು) ಇದುತನಕ ಹೇಳಿ ಬಂದಿದ್ದೇವೆ. ತಮ್ಮ ಸ್ವಂತ ಆಡಳಿತವನ್ನು ರಚಿಸಿ ನಿರ್ವಹಿಸುವುದು ಭಾರತೀಯರ ಹಕ್ಕಿನ ವಿಷಯವಾಗಿದೆ. ಭಾರತ ಬ್ರಿಟನಿನೊಳಗಿನ ಸ್ನೇಹಕ್ಕೆ ಕುಂದುಬಾರದಂತೆ ಅವರಿಗೆ ಆ ಹಕ್ಕನ್ನು ಬಿಟ್ಟುಕೊಡುವುದರಲ್ಲಿ ಹೆಚ್ಚು ವಿಳಂಬ ಮಾಡಬಾರದು" ಹೀಗೆಂದು ಲಿಸ್ಟೊವೆಲ್ ಉಪ ಮಂತ್ರಿಗಳು ತಿಳಿಸಿದರು.

ಲಿಸ್ಟೊವೆಲ್ಲರು ವಿದ್ಯಾರ್ಥಿಗಳಾಗಿದ್ದಾಗ ಒಬ್ಬ ಸಮತಾವಾದಿಗಳಾಗಿದ್ದರು. ಮಜೂರ ವರ್ಗದವರಿಗೆ ಜೀವ ಸೌಕರ್ಯಗಳು ಸಿಕ್ಕುವಂತೆ ಮಾಡುವುದೇ ಅವರ ಈಗಿನ ಜೀವನ ಧ್ಯೇಯ. ಅನೇಕ ಸಾರಿ ಅವರು ಬ್ರಿಟಿಷ್ ಸರಕಾರಕ್ಕೆ ವಿರೋಧ ಸೂಚಿಸಿದ್ದಾರೆ.

ನೆಹರು ಸ್ನೇಹ

ಹಿಂದೆ ಒಂದುಸಲ ಪಂಡಿತ್ ಜವಾಹರಲಾಲರನ್ನು ಉಪಮಂತ್ರಿ ಲಿಸ್ಟೊವೆಲ್ಲರು ಬಹಳ ಶ್ಲಾಘಿಸಿ ಅವರ ದೇಶಪ್ರೇಮ, ಅಂತರ್ರಾಷ್ಟ್ರೀಯ ಪ್ರತೀತಿ, ಲೇಖನ ಸಾಮರ್ಥ್ಯಗಳ ಕುರಿತು ತುಂಬಾ ಪ್ರಶಂಸಿಸಿರುವರು.

೧೯೩೭ರಲ್ಲಿ ಜಪಾನು ಚೀನವನ್ನು ಮುತ್ತಿದಾಗ ಇಂಗ್ಲೆಂಡಿನ ಮಜೂರರು ಜಪಾನಕ್ಕೆ ಕರಡು ಕಬ್ಬಿಣವನ್ನು ಕಳುಹಿಸಲು ನಿರಾಕರಿಸಿದ್ದರು. ಚೀನಕ್ಕೆ ಸಹಾಯಕೊಡಲು ರಚಿಸಲ್ಪಟ್ಟ ಸಮಿತಿಯಲ್ಲಿ ಲಿಸ್ಟೊವೆಲ್ಲಿನ ಅರ್ಲರು ಸದಸ್ಯರಾಗಿದ್ದರು.

ಈ ಸಂದರ್ಭದಲ್ಲಿ ಲಿಸ್ಟೊವೆಲ್ಲರು ಚೀನಕ್ಕೆ ಸಹಾಯ ಕಳುಹಿಸಬೇಕೆಂದು ಭಾಷಣಗಳನ್ನು ಕೊಟ್ಟಿದ್ದರು. ಅವರು ಹಾಜರಿದ್ದ ಒಂದು ಸಭೆಯಲ್ಲಿ ಪಂಡಿತ್ ಜವಾಹರಲಾಲ ನೆಹರುಗಳು (ಆಗ ಪಂಡಿತಜೀಯರು ತಮ್ಮ ಮಗಳು ಇಂದಿರಳನ್ನು ಕಾಣಲು ಇಂಗ್ಲೆಂಡಿಗೆ ಹೋಗಿದ್ದರು.) ಚೀನಕ್ಕೆ ಕಳುಹಿಸಲ್ಪಡುವ ವೈದ್ಯಕೀಯ ಸಹಾಯಕ್ಕಾಗಿ ವಿನಂತಿಮಾಡುವ ಒಂದು ಭಾಷಣವನ್ನು ಮಾಡಿದ್ದರು.

ಪರಿಸ್ಥಿತಿಯು ಸುಧಾರಿಸಿದರೆ ಲಿಸ್ಟೊವೆಲ್ ಸಾಹೇಬರು ಭಾರತಕ್ಕೆ ಭೇಟಿ ಕೊಡಬಹುದೆಂದು ಹೇಳಿದರು. "ಬ್ರಿಟಿಷರು ಯುದ್ಧ ಗೊಂದಲದಲ್ಲಿದ್ದರೂ ಇಲ್ಲಿನ ಹೆಚ್ಚಿನ ಜನರೆಲ್ಲ ಭಾರತಕ್ಕೆ ಸ್ವಾತಂತ್ರ್ಯ ಕೊಡುವುದಕ್ಕೆ ನೂರಕ್ಕೆ ನೂರೆಂಬಂತೆ ಇಚ್ಛೆಯುಳ್ಳವರಿದ್ದಾರೆ." ಹೀಗೆಂದು ಅವರು ಕೊನೆಯಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸುವವರಾದರು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟ್ಯಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

THE BANK OF MANGALORE Ltd.,
MANGALORE.

Interest on Fixed Deposits.

It is notified for the information of Depositors that interest on all Fixed Deposits received from this date will be paid every half year instead of quarterly as hitherto; those received prior to this date will also be paid accordingly with effect from 1-1-1945

Office of the Bank, Mangalore, 30th Oct. 1944.

By Order
H. S. KAMATH, *Manager*

[illegible]

ಕಜ್ಜಿ, ತುರಿಕೆ, ತುರಿಚಿಕ್ಕೆ, ಹುಳುಕಡ್ಡಿ, ಸಿಕ್ಕೆ, ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

FOREMOST

In insurance service since 1910, we are proud of our achievements for over 30 year. With a net-work of Branches all over South India and a field organisation assisted by men and women of ability and ambition it shall be our endeavour to extend widely the advantages of Life Assurance to every one who seek it.

Agency opportunities available on liberal terms

KOCHIKAR BROTHERS LTD.

CENTRAL OFFICE-UDIPI, S. K.

Chief Agents for South India including Indian States

The Bombay Life Assurance Co., Ltd.,

P. B. 337- 30, MOUNT ROAD, MADRAS.

Other Offices at:

BOMBAY BANGALORE CALICUT MADURA MANGALORE TRIVANDRUM

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 8—12—1944 [ಸಂಚಿಕೆ 48]

ಹಿಂದುಸ್ತಾನದ ಜೀವಾಳ

[ಲೇಖಕ — ಜವಾಹರಲಾಲ ನೆಹರು]

ಬಡ ಪ್ರಕೃತಿಯ ಈ ಪುಟ್ಟ ಮನುಷ್ಯನಲ್ಲಿ ಬಲಾಢ್ಯ ಶಕ್ತಿಗಳಿಗೂ ಮಣಿಯದ ಬಂಡೆಗಲ್ಲಿನಂಥ ಒಂದು ಉಕ್ಕಿನ ಸತ್ವವು ಇರುತ್ತದೆ ಅವರ ಮುಖಮುದ್ರೆ ಮನೋವೇಧಕವಾಗಿದ್ದರೂ ಅವರು ಕೌಪೀನ ಧರಿಸಿ ಮೈಮೇಲೆ ಏನೂ ಹೊತ್ತುಕೊಂಡಿರದಿದ್ದರೂ ಅವರನ್ನು ನೋಡಿದ ಕೂಡಲೆ ಅವರ ಮುಂದೆ ತಲೆಬಾಗಿಸುವಂಥ ಒಂದು ಬಗೆಯ ರಾಜಠೀವಿಯು ಇಲ್ಲವೆ ದೊಡ್ಡಸ್ತನವು ಅವರಲ್ಲಿದೆ ತಿಳಿದು ಮತ್ತು ಬೇಕೆಂತಲೆ ಅವರು ವಿನೀತ ಮತ್ತು ವಿನಮ್ರರಾಗಿದ್ದರೂ ಅವರೊಳ್ಳೆ ಶಕ್ತಿಸಂಪನ್ನ ಹಾಗೂ ಅಧಿಕಾರವಂತರಾಗಿರುವರು ಈ ಮಾತಿನ ಅರಿವು ಅವರಿಗಿದ್ದುದರಿಂದ, ಪ್ರಸಂಗ ವಿಶೇಷಗಳಲ್ಲಿ ಅವರು ಅಪ್ಪಣೆಗಳನ್ನು ಕೊಡುವರು ಮತ್ತು ಅವುಗಳಂತೆ ನಡೆಯಹಚ್ಚುವರು ಅವರ ಪ್ರಶಾಂತ ಮತ್ತು ವಿಶಾಲವಾದ ನೇತ್ರಗಳು ಎರಡನೆಯುವರನ್ನು ತಮ್ಮೆಡೆಗೆ ಆಕರ್ಷಿಸಿಕೊಳ್ಳುವುವು, ತಿಳಿಯಾದ ಮತ್ತು ಸ್ಪಷ್ಟವಾದ ಅವರ ಮಾತುಗಳು ಎರಡನೆಯುವರ ಹೃದಯಗಳನ್ನು ಹೊಕ್ಕು ಅವರಲ್ಲಿ ಭಾವನೆಗಳನ್ನು ಹುಟ್ಟಿಸುವುವು ಸಭೆಯಲ್ಲಿ ಒಬ್ಬನೇ ಇರಲಿ ಸಾವಿರ ಜನರಿರಲಿ, ಅವರೆಲ್ಲ ಇವರ ಭಾಷಣದಿಂದ ಆಕರ್ಷಿಸಲ್ಪಟ್ಟವರಾಗಿ ಅವರೊಡನೆ ತಾದಾತ್ಮ್ಯವನ್ನು ಹೊಂದುವರು ಬದ್ಧಿಯನ್ನುದ್ದೇಶಿಸಿ ಅವರು ಮಾತಾಡಿದರೂ ಬುದ್ಧಿಗೂ ಈ ಭಾವನೆಗೂ ಯಾವದೇ ಬಗೆಯ ಸಂಬಂಧವಿಲ್ಲ ವಿಚಾರ ಮತ್ತು ವಿವೇಕಕ್ಕೆ ಗೌಣ ಸ್ಥಾನವಿದೆ

ಎರಡನೆಯುವರನ್ನು ಈ ರೀತಿ ಆಕರ್ಷಿಸಿಕೊಳ್ಳುವ ಶಕ್ತಿಯು ಯಾವದೇ ಬಗೆಯ ವಾಕ್ಚಾತುರ್ಯ ಇಲ್ಲವೆ ಸವಿಮಾತುಗಳಿಂದ ಬರಲಾರದು ಅವರ ಮಾತು ಯಾವಾಗಲೂ ಸರಳ ಮತ್ತು ಮುದ್ದೆಗೆ ಸರಿಯಾದುದು. ಅನವಶ್ಯಕ ಶಬ್ದವನ್ನು ಅವರು ಕ್ವಚಿತ್ತಾಗಿ ಉಪಯೋಗಿಸುವರು ಅವರ ಅತ್ಯಂತಿಕ ನಿಷ್ಠೆ ಮತ್ತು ವ್ಯಕ್ತಿತ್ವವು ಮಾನವನ ಮನಸ್ಸನ್ನು ಹಿಡಿಯುವುವು ಅವರಲ್ಲಿ ಪ್ರಚಂಡ ಅಂತರಿಕ ಶಕ್ತಿಯು ಝುಳಿಯಿಡುವುದೆನಿಸುವುದು ಕದಾಚಿತ್ ಅವರ ಬಗ್ಗೆ ಉಂಟಾದ ಒಂದು ಬಗೆಯ ಪರಂಪರೆಯಿಂದಲೂ ಅನುಕೂಲವಾದ ವಾತಾವರಣವುಂಟಾಗಿರಬಹುದು ಈ ಪರಂಪರೆ ಗೊತ್ತಿಲ್ಲದ ಮತ್ತು ಸುತ್ತಲಿನ ವಾತಾವರಣದ ಅರಿವಿಲ್ಲದ ಪರಕೀಯನು ಕದಾಚಿತ್ ಅಷ್ಟು ಆಳವಾಗಿ ಆಕರ್ಷಿಸಲ್ಪಡಲಾರನು. ಎರಡನೆಯುವರ ಮನವೊಲಿಸುವ ಇಲ್ಲವೆ ಶತ್ರುಗಳನ್ನು ನಿಶ್ಶಸ್ತ್ರಗೊಳಿಸುವ ಶಕ್ತಿಯು ಗಾಂಧೀಜಿಯವರ ವೈಶಿಷ್ಟ್ಯವು

ಗಾಂಧೀಜಿಯವರು ಸೃಷ್ಟಿಸೌಂದರ್ಯವನ್ನು ಬಣ್ಣಿಸುತ್ತಿದ್ದರೂ ಕಲೆಯಿಲ್ಲಾಗಲಿ ಮನುಷ್ಯನಿರ್ಮಿತ ಕೃತಿಗಳಲ್ಲಾಗಲಿ ಅವರಿಗಷ್ಟೊಂದು ಆಸ್ಥೆಯಿಲ್ಲ ತಾಜಮಹಾಲವೆಂದರೆ ಒತ್ತಾಯದಿಂದ ಮಾಡಿಸಲ್ಪಟ್ಟ ಪರಿಶ್ರಮದ ಪ್ರತೀಕ ಮಾತ್ರ ಅದಕ್ಕೂ ಹೆಚ್ಚಿನದೇನೂ ಅಲ್ಲೆಂದು ಅವರ ಅಭಿಪ್ರಾಯ ಅವರಲ್ಲಿ ಆಘ್ರಾಣಿಸುವ ಶಕ್ತಿಯೂ ಕಡಿಮೆ ಆದರೂ ಅವರು ತಮಗೆ ಸರಿದೋರಿದ ರೀತಿಯಲ್ಲಿ ತಮ್ಮ ಜೀವನ ಮಾರ್ಗವನ್ನು ಹಾಕಿಕೊಂಡಿದ್ದಾರೆ ಒಂದು ಬಗೆಯ ರಸಾತ್ಮಕ ಜೀವನವನ್ನು ಅವರು ಸಾಗಿಸುತ್ತಿರುವರು ಅವರ ಪ್ರತಿಯೊಂದು ಅಭಿನಯವು ಅರ್ಥಪೂರ್ಣವಾಗಿದ್ದು ಅದರಲ್ಲಿ ಕೃತ್ರಿಮವಾದುದೇನೂ ಇರುವುದಿಲ್ಲ ದುರ್ದೈವದಿಂದ ನಮ್ಮ ಮಧ್ಯಮವರ್ಗದ ಜನನಲ್ಲಿರುವಂತಹ ಅಸಭ್ಯತೆ, ನೀರಸತೆ ಮೊದಲಾದವುಗಳು ಅವರಲ್ಲಿರುವುದಿಲ್ಲ ಅಂತಃಶಾಂತಿಯ ಅನುಭವ ಪಡೆದ ಅವರು ಎರಡನೆಯುವರಲ್ಲಿಯೂ ಅದನ್ನು ಬೀರುತಿರುವರು ಜೀವನದ ಕಷ್ಟಮಯ ಮಾರ್ಗವನ್ನು ಒಳ್ಳೆ ಗಟ್ಟಿ ಮತ್ತು ಅವಿಚಲ ಧೈರ್ಯದಿಂದ ಕ್ರಮಿಸುತಿರುವರು

ಗಾಂಧೀಜಿಯವರು ಅಹಿಂಸೆ, ಅಹಿಂಸಾತ್ಮಕ ಅಸಹಕಾರವನ್ನು ತಮ್ಮಲ್ಲಿದ್ದ ಪ್ರಚಂಡವಾದ ವಾಕ್ಚಾತುರ್ಯ ಮತ್ತು ಮನವೊಲಿಸುವ ಶಕ್ತಿಯಿಂದ ಪ್ರತಿಪಾದಿಸಿದರು ಅವರ ಭಾಷೆ ಸರಳ ಮತ್ತು ಅಲಂಕಾರರಹಿತವಾಗಿದ್ದರೂ ಅವರ ಮಾತು ಮತ್ತು ಮುಖಮುದ್ರೆ ಪ್ರಶಾಂತ ಮತ್ತು ಸ್ಪಷ್ಟವಾಗಿದ್ದವು. ಯಾವದೇ ಬಗೆಯಿಂದ ಭಾವನಾತ್ಮಕವಾಗಿರಲಿಲ್ಲ ಆದರೆ ಅದರಲ್ಲಿ ಒಂದು ಬಗೆಯ ಕೆಚ್ಚಿದ್ದಿತು, ಅವರಾಡಿದ ಮಾತುಗಳು ನಮ್ಮ ಮನಸ್ಸು ಮತ್ತು ಹೃದಯದ ಅಂತರಾಳವನ್ನು ಹೊಕ್ಕು ಅಲ್ಲೊಂದು ಬಗೆಯ ಕೆಚ್ಚನ್ನುಂಟುಮಾಡಿದವು ಅವರು ತೋರಿಸಿದ ಮಾರ್ಗವು ಕಠಿಣ ಮತ್ತು ಕಷ್ಟದ್ದಾಗಿದ್ದಿತು. ಆದರೆ ಅದೊಳ್ಳೆ ಶೂರರ ಮಾರ್ಗವು, ಸ್ವಾತಂತ್ರ್ಯಕ್ಕೆ ಮುಟ್ಟಿಸುವ ಮಾರ್ಗವೆಂದು ತೋರಿತು.

ಜನತೆಯನ್ನು ಈ ರೀತಿ ಆಕರ್ಷಿಸುತಿರುವ ಮನೋವೇಧಕ ಗಾಂಧೀಜಿಯವರು ಎಂಥ ಆಶ್ಚರ್ಯಕಾರಕ ಮನುಷ್ಯರಾಗಿರುವರು! ಅವರ ಬರಹ ಮತ್ತು ಮಾತುಗಳಿಂದ ಅವರ ಬಗ್ಗೆ ಅಷ್ಟೊಂದು ಜ್ಞಾನವಾಗದೆ ಅವರ ವ್ಯಕ್ತಿತ್ವವನ್ನು ತಿಳಿಯಲಿಕ್ಕೂ ಅಷ್ಟೊಂದು ಸಹಾಯಕವಾಗದು ಹಿಂದುಸ್ಥಾನಕ್ಕೆ ಅವರು ಸಲ್ಲಿಸಿದ ಸೇವೆ ಅಪಾರವಾಗಿದೆ ಹಿಂದುಸ್ಥಾನದಲ್ಲಿ ಅವರು ಧೈರ್ಯ ಮತ್ತು ಪೌರುಷವನ್ನು ತುಂಬಿದರು ಶಕ್ತಿ ಮತ್ತು ಸಹನಶೀಲತೆಗಳನ್ನುಂಟುಮಾಡಿದರು ಧ್ಯೇಯದ ಸಲುವಾಗಿ ಒಳ್ಳೆ ವಿನಮ್ರತೆಯುಳ್ಳ ಮತ್ತು ಅಭಿಮಾನದಿಂದ ಮಾಡಿದ ತ್ಯಾಗವು ಶಾಂತ ಒಳ್ಳೆ ಗಟ್ಟಿಮುಟ್ಟಾದ ತಳಹದಿಯು. ಧೈರ್ಯವಿಲ್ಲದಿದ್ದರೆ ನೀತಿಯುಳ್ಳ ಧರ್ಮವಿಲ್ಲ ಪ್ರೇಮವಿಲ್ಲ ಎಂದು ಅವರ ಹೇಳಿದ್ದರು "ಅಂಜುಬುರುಕನು ಸತ್ಯ ಮತ್ತು ಪ್ರೇಮ ಮಾರ್ಗವನ್ನು ಕ್ರಮಿಸಲಾರನು." ಹಿಂಸೆಯ ಬಗ್ಗೆ ಅಷ್ಟೊಂದು ಜಿಗುಪ್ಸೆಯನ್ನು ತೋರಿದರೂ ಹೇಡಿತನವು ಹಿಂಸೆಗಿಂತ ಹೇಯವಾದುದೆಂದು" ಹೇಳಿದವರು ಅವರು "ಕಾರ್ಯಮಾಡಬಯಸುವವನಿಗೆ ಶಿಸ್ತು ಅತ್ಯಾವಶ್ಯ ಸ್ವಾರ್ಥತ್ಯಾಗ, ಶಿಸ್ತು ಮತ್ತು ಆತ್ಮಸಂಯಮನವಿಲ್ಲದೆ ಯಾವದೇ ಬಗೆಯ ಮೋಕ್ಷ ಇಲ್ಲವೆ ಭವಿಷ್ಯತ್ತು ಇರುವುದಿಲ್ಲ ಶಿಸ್ತಿಲ್ಲದ ಸ್ವಾರ್ಥತ್ಯಾಗವು ನಿರರ್ಥಕವು" ಅವರ ಶಬ್ದಗಳು ಮತ್ತು ವಾಕ್ಯಗಳು ಕದಾಚಿತ್ ತಪ್ಪಿಸಿಸಬಹುದು, ಆದರೆ ಆ ಶಬ್ದಗಳ ಹಿಂದೆ ಒಂದು ಬಗೆಯ ಶಕ್ತಿಯಿದೆ ಈ ಪುಟ್ಟ ಮನುಷ್ಯನು ಕಾರ್ಯಧುರಂಧರನೆಂಬುದು ಹಿಂದುಸ್ತಾನಕ್ಕೆ ಗೊತ್ತಿದೆ

ಹಿಂದುಸ್ತಾನದ ಪ್ರತಿಬಿಂಬವನ್ನು ಅವರಲ್ಲಿ ಅಸಾಧಾರಣ ಪ್ರಮಾಣದಲ್ಲಿ ಕಾಣಬಹುದು ಆ ಹಳೆಯ ಮತ್ತು ಕಷ್ಟಕ್ಲೇಡಾದ ಭೂಮಿಯ ಜೀವಾಳವನ್ನೆ ಪ್ರದರ್ಶಿಸುವ ಪ್ರತಿನಿಧಿಗಳವರು ಹಿಂದುಸ್ತಾನವೆಂದರೆ ಅವರೆಂದು ಹೇಳಬಹುದು. ಅವರ ಪರಾಜಯಗಳು ಹಿಂದುಸ್ತಾನದ ಪರಾಜಯಗಳು ಅವರನ್ನಲಕ್ಷಿಸುವದು ವೈಯಕ್ತಿಕ ದೃಷ್ಟಿಯಿಂದ ಅಷ್ಟೊಂದು ಮಹತ್ವದ್ದಾಗದಿದ್ದರೂ ಅದು ರಾಷ್ಟ್ರಕ್ಕೆ ಅಪಮಾನಕಾರಕವು. ಮತ್ತು ಈ ಬಗೆಯ ಚಲ್ಲಾಟವನ್ನು ನಡೆಸಿದ ವಾಯಿಸರಾಯ ಮೊದಲಾದವರು ಎಂಥ ಘಾತಕವಾದ ಬೆಳೆಯನ್ನು ತಾವು ಬಿತ್ತುತ್ತಿರುವರೆಂಬುದನ್ನರಿಯರು. ಗೋಲಮೇಜಿನ ಪರಿಷತ್ತನ್ನು ಮುಗಿಸಿಕೊಂಡು ಮರಳಿ ಬರುವಾಗ ಪೋಪರು ಅವರ ಭೇಟಿ ತೆಗೆದುಕೊಳ್ಳಲು ನಿರಾಕರಿಸಿದದನ್ನು ಕೇಳಿದ ಕೂಡಲೆ ನನಗೊಳ್ಳೆ ಚಿತ ಕೆಸಿಸಿದ್ದು ನನ್ನ ನೆನಪಿನಲ್ಲಿದೆ

ಗಾಂಧಿಜಿಯವರನ್ನು ಪ್ರತ್ಯಕ್ಷವಾಗಿ ನೋಡದೆ ಕೇವಲ ಅವರ ಬರಹಗಳನ್ನು ಓದಿದವರು ಅವರೊಬ್ಬ ಧಾರ್ಮಿಕ ಮನಸ್ಥಿತಿಯವರು, "ಕಷ್ಟ ಬಟ್ಟೆಗಳನ್ನು ಧರಿಸಿ ಸಂಚರಿಸುತಿರುವ ಧರ್ಮಗುರುಗಳಂತೆ" ಇರಬಹುದು ಎಂಬ ಕಲ್ಪನಾಗುವದು ಆದರೆ ಅವರು ಆ ಬಗೆಯ ಧಾರ್ಮಿಕ ಗುರುಗಳ ಮಾದರಿಯವರಿರುವುದಿಲ್ಲ ಅವರ ಮುದಹಾಸ್ಯವು ಮೋಹಕ ಅವರ ನಗೆ ಆಕರ್ಷಕವಾಗಿದೆ ಅವರನ್ನು ನೋಡಿದ ಕೂಡಲೆ ಎಂಥವನಾದರೂ ಸಂತುಷ್ಟನಾಗುವನು. ಬಾಲಕರಲ್ಲಿರುವ ಒಂದು ಬಗೆಯ ಮುಗ್ಧ ಮನೋಹರತೆ ಅವರಲ್ಲಿರುವದು. ಅವರು ಕೋಣೆಯನ್ನು ಪ್ರವೇಶಿಸಿದ ಕೂಡಲೆ ತಮ್ಮೊಡನೆ ಹೊಸ ಬೆಳಕನ್ನೆ ತರುವರು ಅವರಿರುವ ಇಡೀ ವಾತಾವರಣವೆ ಉಲ್ಲಸಿತವಾಗುವದು

ಅವರು ಹಿಂದುಸ್ತಾನದಲ್ಲಿಯ ಒಕ್ಕಲಿಕ ಜನಸಮೂಹದ ಪ್ರತಿನಿಧಿಗಳು ಇಷ್ಟೇ ಅಲ್ಲ ಒಂದು ಬಗೆಯಿಂದ ಅವಕ್ಕೂ ಹೆಚ್ಚಿಗಿರುವರು ಏಕೆಂದರೆ ಆ ಕೋಟಿಗಟ್ಲೆ ಜನಸಾಮಾನ್ಯರ ಮೂರ್ತಿಮಂತ ಪ್ರತೀಕರಾಗಿರುವರು. ಅವರು ಆವರು ಸಾಮಾನ್ಯ ಒಕ್ಕಲಿಗರಲ್ಲೆಂಬುದು ನಿಜ ತೀವ್ರವಾದ ಬುದ್ಧಿ ಮತ್ತು ಸದಭಿರುಚಿ, ಸದ್ಭಾವನೆ, ದೂರದೃಷ್ಟಿ, ಅತ್ಯಂತ ದಯಾಪರತೆ ಇವೆಲ್ಲ ಅವರಲ್ಲಿದ್ದರೂ ಎಲ್ಲ ಬಗೆಯ ಭಾವನೆ ಮತ್ತು ಕಾಮವಾಸನೆಗಳನ್ನು ಹತ್ತಿಕ್ಕಿ, ವಿಶುದ್ಧಗೊಳಿಸಿದ ಅಧ್ಯಾತ್ಮಮಾರ್ಗಕ್ಕೆ ಹತ್ತಿದ ಸನ್ಯಾಸಿಯಂತಿರುವರು ಅವರು ಅವರೊಬ್ಬ ಪ್ರಚಂಡ ವ್ಯಕ್ತಿ ಸೂಜಿಗಲ್ಲಿನಂತೆ ಜನತೆಯನ್ನು ತಮ್ಮ ಕಡೆಗೆ ಆಕರ್ಷಿಸಿಕೊಳ್ಳುತ್ತಿರುವರು ಭೀಕರವಾದ ಮೋಹ, ಆಸೆಗಳನ್ನು ದೂರೀಕರಿಸುತಿರುವರು ಇವೆಲ್ಲ ಒಕ್ಕಲಿಗರಿಗೆ ತೀರ ಸರಿಹೋಗದಂಥ ಗುಣಗಳಾಗಿವೆ ಹೀಗಿದ್ದರೂ ಅವರೊಳ್ಳೆ ಒಕ್ಕಲಿಗರು, ವ್ಯವಹಾರದಲ್ಲೆಲ್ಲ ಅವರ ದೃಷ್ಟಿ ಒಕ್ಕಲಿಗನ ದೃಷ್ಟಿಯಾಗಿರುವದು ಜೀವನದ ಹಲವು ವಿಷಯುಗಳಲ್ಲಿ ಒಕ್ಕಲಿಗರಂತೆ ಇವರೂ ಅಂಧರಾಗಿರುವರು ~~ಆದರೆ ಹಿಂದು~~ ಸ್ತಾನವು ಒಕ್ಕಲಿಗರ ಹಿಂದುಸ್ತಾನವು

(೯ನೇ ಪುಟಕ್ಕೆ ಮುಂದುವರಿದಿದೆ)

REEL-20

SWADESHABHIMANI

CONTD. FROM:

5, JUNE - 1942

TO

1 DECEMBER 1944

D.V.
3.4.80

CONTD IN NEXT REEL

MICROFILMED BY

NEHRU MEMORIAL MUSEUM AND LIBRARY

TEEN MURTI HOUSE
NEW DELHI